

ಪ್ರಧಾನ ಸಂಪಾದಕರು

ಡಾ. ಬಿ.ಎಸ್. ಪ್ರಣತಾರ್ತಿಹರನ್ ತಮ್ಮ ಪಿಎಚ್.ಡಿ. ಪದವಿಯನ್ನು (ಸಂಕೇತಿ ಒಂದು ಅಧ್ಯಯನ:1993) ಪಡೆದಮೇಲೆ ಸಂಕೇತಿ ಸಮುದಾಯದ ಬಗೆಗಿನ ಅಧ್ಯಯನವನ್ನು ಮುಂದುವರೆಸಿದರು. ತಾವು ಕಲೆಹಾಕಿದ ಅಪಾರ ಮಾಹಿತಿಯನ್ನು ವಿಂಗಡಿಸಿ, ಪರಿಷ್ಕರಿಸಿ, ವಿಮರ್ಶಿಸಿ ಪ್ರಕಟಿಸಿದರು. ಅವರು ಪಿಎಚ್.ಡಿ. ಅಧ್ಯಯನಕ್ಕಾಗಿ ಪ್ರಾರಂಭಿಸಿದಾಗ ಇದ್ದ ಒಂದೆರಡು ನೂರು ಪುಟಗಳ ಆಕರ ಮಾಹಿತಿಯನ್ನು ಈ ವರೆಗೆ 10 ಸಾವಿರ ಪುಟಗಳಿಗೆ ವಿಸ್ತರಿಸಿದ್ದಾರೆ. ಈ ಯೋಜನೆಯ 12 ಸಂಪುಟಗಳು ಪ್ರಕಟವಾಗಿವೆ, 8 ಸಂಪುಟಗಳು ಮುದ್ರಣಗೊಳ್ಳುತ್ತಿವೆ. 1983ರಲ್ಲಿ ಅವರು ಪ್ರಾರಂಭಿಸಿದ ಈ ಅಧ್ಯಯನವು ಇಂದಿಗೂ ಮುಂದು-ವರಿದಿದೆ. ಆಳವಾದ ಮತ್ತು ವಿಸ್ತಾರವಾದ ಅಧ್ಯಯನ, ಅನುಭವಗಳಿಗೆ ದಕ್ಕುವ ಕಾಣ್ಕೆಯಿಂದಾಗಿ (Vision) ಸಂಕೇತಿ ಅಧ್ಯಯನಕ್ಕೆ ವೈವಿಧ್ಯಪೂರ್ಣ ಆಯಾಮ ದೊರೆತಿದೆ.



Thanks Anima shree

Anima Anandkumar is currently a principal scientist at Amazon Web Services and a Bren professor at Caltech CMS department. Her research interests are in the areas of large-scale machine learning, non-convex optimization and high-dimensional statistics. In particular, she has been spearheading the development and analysis of tensor algorithms. She is the recipient of several awards such as the Alfred. P. Sloan Fellowship, Microsoft Faculty Fellowship, Google research award, ARO and AFOSR Young Investigator Awards, NSF Career Award, Early Career Excellence in Research Award at UCI, Best Thesis Award from the ACM Sigmetrics society, IBM Fran Allen PhD fellowship, and several best paper awards. She has been featured in a number of forums such as the yourstory, Quora ML session, Huffington post, Forbes, O'Reilly media, and so on. She received her B.Tech in Electrical Engineering from IIT Madras in 2004 and her PhD from Cornell University in 2009. She was a postdoctoral researcher at MIT from 2009 to 2010, an assistant professor at U.C. Irvine between 2010 and 2016, and a visiting researcher at Microsoft Research New England in 2012 and 2014.

ಸಂಕೇತಿ ಅಧ್ಯಯನ ಮಾಲೆ
ಪ್ರಧಾನ ಸಂಪಾದಕ
ಡಾ.ಬಿ.ಎಸ್. ಪ್ರಣತಾರ್ತಿಹರನ್



ಸಂಕೇತಿ: ಒಂದು ಅಧ್ಯಯನ

(ಸಂಸ್ಕೃತಿ-ಸಮೀಕ್ಷೆ)

ಡಾ.ಬಿ.ಎಸ್. ಪ್ರಣತಾರ್ತಿಹರನ್

ಸಮುದಾಯ ಅಧ್ಯಯನ ಕೇಂದ್ರ ಚಾರಿಟಬಲ್ ಟ್ರಸ್ಟ್ (ರಿ)
೩೦೫೫, ೪ನೇ ಅಡ್ಡರಸ್ತೆ, ಗೋಕುಲಂ ಪಾರ್ಕ್ ರಸ್ತೆ,
ಗೋಕುಲಂ, ಮೈಸೂರು - ೫೭೦ ೦೦೨

sanketi E-lib-1 Web : 6-6-2018

ಸಂಕೇತಿ ಅಧ್ಯಯನ ಯೋಜನೆ

ಸಂಪುಟ ೧

ಅಧ್ಯಕ್ಷರು ಮತ್ತು ಪ್ರಾಯೋಜಕರು

ಡಾ.ರಾಮನಾಥಪುರ ಎಸ್. ಚಂದ್ರಶೇಖರಮೂರ್ತಿ
ಯು.ಎಸ್.ಎ.

ನಿರ್ದೇಶಕರು

ಶ್ರೀ ನಟೇಶ್ ಮಗ್ಗೆ
ಯು.ಎಸ್.ಎ.

Sanketi: Ondu Adhyayana a Ph.D. Thesis by Dr. B. S. Pranatartiharan. Published by **Samudaya Adhyayana Kendra (R),** 3059, 4th 'A' Cross, Gokulam Park Road, Gokulam, Mysore - 570 002.

Pages : XX + 374
First Edition : 2003

Rs.500

ಸಂಕೇತಿ : ಒಂದು ಅಧ್ಯಯನ (ಪಿಎಚ್.ಡಿ. ನಿಬಂಧ).

ಲೇಖಕರು : ಡಾ.ಬಿ.ಎಸ್. ಪ್ರಣತಾರ್ತಿಹರನ್

ಮುದ್ರಣ : ೨೦೦೩

ಪ್ರಕಾಶಕರು : ಸಮುದಾಯ ಅಧ್ಯಯನ ಕೇಂದ್ರ
೩೦೫೯, ೪ನೇ ಅಡ್ಡರಸ್ತೆ,
ಗೋಕುಲಂ ಪಾರ್ಕ್ ರಸ್ತೆ, ಗೋಕುಲಂ
ಮೈಸೂರು - ೫೭೦ ೦೦೨

ಬೆಲೆ : ರೂ.೫೦೦

ಮುದ್ರಣ : ಲಕ್ಷ್ಮಿ ಮುದ್ರಣಾಲಯ
೧೧೭/೨, ೫ನೇ ಮುಖ್ಯರಸ್ತೆ, ಚಾಮರಾಜಪೇಟೆ
ಬೆಂಗಳೂರು - ೫೬೦ ೦೧೮

ಅರ್ಪಣೆ

ಸಮಸ್ತ ಸಂಕೇತಿಬಂಧುಗಳಿಗೆ

ಸಂಕೇತಿ ಅಧ್ಯಯನ

ಸಾಧ್ವೀಮಣಿಯಾದ ಶ್ರೀನಾಚಾರಮ್ಮನ ನೇತೃತ್ವದಲ್ಲಿ ಸಂಕೇತಿ ಸಮುದಾಯದ ಮಹಾವಲಸೆ ಶಾಪತ್ತೂರಿನಿಂದ ಕರ್ನಾಟಕಕ್ಕೆ ನಡೆದುದು ೯೦೦ ವರ್ಷಗಳ ಹಿಂದೆ. ಅದರ ನೆನಪಿಗಾಗಿ ಶ್ರೀನಾಚಾರಮ್ಮ ನವಶತಮಾನೋತ್ಸವ ನಡೆಯುತ್ತಿದೆ. ಸಂಕೇತಿ ಸಮುದಾಯದ ಬಗೆಗೆ ಈವರೆಗೆ ಲಭ್ಯವಾಗಿರುವ ಅಪಾರ ಮಾಹಿತಿಯನ್ನು ಈ ಸಂದರ್ಭದಲ್ಲಿ ಪ್ರಕಟಿಸಲಾಗುತ್ತಿದೆ. ಈ ಸಂಪುಟಸರಣಿಯು ಸಂಶೋಧನೆ, ದಾಖಲೀಕರಣ, ಕ್ರೋಡೀಕರಣದ ಸ್ವರೂಪದ್ದಾಗಿದೆ. ಈ ಸರಣಿಯನ್ನು 'ಸಂಕೇತಿ ಅಧ್ಯಯನ' ಎಂದು ಕರೆಯಲಾಗಿದೆ. ಅಮೇರಿಕದಲ್ಲಿ ನೆಲೆಸಿರುವ **ಡಾ.ಆರ್.ಎಸ್.ಚಂದ್ರಶೇಖರಮೂರ್ತಿ** ಅವರು ಅಧ್ಯಕ್ಷರಾಗಿ ಹಾಗೂ ಶ್ರೀ **ನಟೇಶ್ ಮಗ್ಗೆ** ಅವರು ನಿರ್ದೇಶಕರಾಗಿ ಈ ಯೋಜನೆಯನ್ನು ಮುನ್ನಡೆಸುತ್ತಿದ್ದಾರೆ. ಅವರಿಗೂ, ಪ್ರಕಟಣ ಸಮಿತಿಯ ಇತರ ಸದಸ್ಯರಿಗೂ, ಗ್ರಂಥಕರ್ತರಿಗೂ, ಸಂಬಂಧಿಸಿದ ಸಮಸ್ತರಿಗೂ ಸಮುದಾಯ ಅಧ್ಯಯನ ಕೇಂದ್ರವು ಆಭಾರಿಯಾಗಿದೆ.

ಜ್ಞಾನಗಂಗೆಗೆ ದಂಡೆಗಳಿಲ್ಲ; ಮೈಲಿಗೆಯಂತೂ ಇಲ್ಲವೇ ಇಲ್ಲ. ಅದನ್ನು ಹಿಡಿದಿಡಲು ಮಾತ್ರ ತೆರೆದ ಮನದ ಜಟಾಜೂಟಧರರಾಗಲೇಬೇಕು ನಾವು. ಪುನೀತರಾಗಲು ಇರುವ ಬೆಳಕಿನ ಮಾರ್ಗ ಅದು.

ನಮ್ಮನ್ನು ನಾವು ತಿಳಿದರೆ ವಿಕಾಸಶೀಲತೆಗೆ ಬಾಗಿಲು ತೆರೆದಂತೆ. ವಿಕಾಸವೆಂದರೆ ಮಾನವರಾಗುವುದು, ಉದಾತ್ತರಾಗುವುದು, ಆತ್ಮಗುಣಸಂಪನ್ನರಾಗುವುದು.

ನಿರ್ಗುಣಕ್ಕೆ ಅಚಲ ಶಾಂತಿ ಇದ್ದರೆ ಸಗುಣಕ್ಕೆ ವೈವಿಧ್ಯದ ಕಾಂತಿ ಉಂಟು. ಜಗತ್ತು ಸಂಜೀವನವೆನಿಸಿರುವುದು ಚೇತನಾಚೇತನದ ಈ ಬಹುಕಿರಣದಿಂದ. ಈ ಬಹುತ್ವದ ಗರ್ಭದಲ್ಲಿ ಏಕಾತ್ಮತೆಯ ಅಗ್ನಿಯು ಪ್ರಖರವಾದರೆ ಸಾರ್ಥಕ್ಯ.

'ಸಂಕೇತಿ' ಎಂಬುದು ಇಲ್ಲಿ ಅಧ್ಯಯನ ಘಟಕ. ಸಮಗ್ರತೆಯಲ್ಲಿ ಅದು ಮಾನವೀಯತೆಯ ಅನುಸಂಧಾನ. 'ಸಂಕೇತಿ ಅಧ್ಯಯನ'ದ ಸಂಪುಟಸರಣಿಯು ವಿವೇಕಾನುಸಂಧಾನದ ಮುಕ್ತಪಥವಾಗಿ ಬರುತ್ತಿದೆ. ಅದರ ನಡಿಗೆಯಲ್ಲಿ ವಾಸ್ತವದ ವಿವರವಿದೆ. ಅಂತರಂಗದಲ್ಲಿ ಆದರ್ಶದ ಹುಡುಕಾಟವಿದೆ.

ಒಂದು ಪುಟ್ಟ ಸಮುದಾಯದ ದೀರ್ಘಕಾಲೀನ ತುಡಿತಗಳನ್ನು ಮಾಧ್ಯಮವಾಗಿ ಮಾಡಿಕೊಂಡು ವಿಶ್ವಪಥವನ್ನು ಹುಡುಕಿಕೊಳ್ಳುವ ಸಾಧನವಾಗಿ ಈ ಸಂಪುಟಸರಣಿ ಪ್ರಕಾಶಗೊಳ್ಳುತ್ತಿದೆ.

ಮೈಸೂರು
ಮಕರ ಸಂಕ್ರಾಂತಿ
೧೫-೦೧-೦೩

ಪ್ರಣತಾರ್ತಿಹರನ್
ಪ್ರಧಾನ ಸಂಪಾದಕ

ಅರಿಕೆ

ಸಂಕೇತಿ ಸಮುದಾಯದ ಬಗೆಗೇ ಅಧ್ಯಯನ ಮಾಡುವುದೆಂದು ಅಂತಿಮವಾಗಿ ನಿರ್ಧರಿಸಿಕೊಂಡಾಗ ಖ್ಯಾತ ಜಾನಪದ ವಿದ್ವಾಂಸ ಡಾ.ಅಂಬಳಿಕೆ ಹಿರಿಯಣ್ಣ ಅವರು ಮಾರ್ಗದರ್ಶಕರಾಗಲು ಕೃಪೆ ಇಟ್ಟು ಒಪ್ಪಿದರು. ಅವರು ಜಾನಪದ ಪ್ರಪಂಚದ ಅಂತರಂಗವನ್ನು ತೆರೆದಿಟ್ಟು ಸಂಕೇತಿ ಸಮುದಾಯದ ಸಮಗ್ರ ಅಧ್ಯಯನಕ್ಕೆ ನನ್ನ ಮನೋಧರ್ಮವನ್ನು ಒಗ್ಗಿಸಿದರು. ಎಲ್ಲ ಹಂತಗಳಲ್ಲೂ ನೆರವಿಗೆ ನಿಂತರು; ಸಂಶೋಧನೆಗೆ ಮುಕ್ತ ಮಾರ್ಗವನ್ನು ಕಲ್ಪಿಸಿಕೊಟ್ಟರು; ಉದ್ದಕ್ಕೂ ಪ್ರಚೋದಕ ಶಕ್ತಿಯಾಗಿ ನಿಂತು ಚಾಲನೆ ನೀಡಿದರು. ಸಂಕೇತಿಗಳ ಯಾವ ಉಪವಿಭಾಗದ ದತ್ತಾಂಶವೂ ಮುಕ್ಕಾಗಬಾರದು ಮತ್ತು ವಿಕೃತಗೊಳ್ಳಬಾರದು ಎಂಬ ನನ್ನ ಪ್ರಾರ್ಥನೆಯ ಮೇರೆಗೆ ಪ್ರೊ. ಜಿ. ಅಶ್ವತ್ಥನಾರಾಯಣ, ಡಾ. ಸತ್ಯನಾರಾಯಣ ಶಾಸ್ತ್ರಿ, ಪ್ರೊ. ಎಲ್.ಎಂ.ಎಲ್. ಶಾಸ್ತ್ರಿ, ಶ್ರೀಮತಿ ಅನಂತಲಕ್ಷ್ಮಿ ಎಂ.ಆರ್., ಡಾ. ಎಂ. ಎಲ್. ಲಲಿತಮ್ಮ, ಪ್ರೊ. ಆರ್.ಕೆ. ಶ್ರೀಕಂಠಕುಮಾರಸ್ವಾಮಿ, ಡಾ. ಆರ್.ಆರ್. ಕುಲಕರ್ಣಿ, ಡಾ. ಆರ್. ರಾಮಕೃಷ್ಣ ಅವರು ಆಂಶಿಕವಾಗಿ ಇಲ್ಲವೆ ಪೂರ್ಣವಾಗಿ ನಿಬಂಧವನ್ನು ಗಮನಿಸಿ ಸೂಕ್ತ ಸಲಹೆಗಳನ್ನು ಕೊಟ್ಟರು, ಒಳ್ಳೆಯ ಅಂಶಗಳ ಬಗೆಗೆ ಮೆಚ್ಚಿ ಉತ್ತೇಜಿಸಿದರು, ನೆರವು ನೀಡಿದರು. ಪ್ರೊ. ಜಿ. ಅಶ್ವತ್ಥನಾರಾಯಣ ಅವರಂತೂ ನಿಬಂಧದ ಬೆರಳಚ್ಚು ಪ್ರತಿ ಸಿದ್ಧವಾಗುವವರೆಗೂ ನಿರಂತರವಾಗಿ ಅಪಾರ ವಾತ್ಸಲ್ಯದಿಂದ ನೋಡಿಕೊಂಡರು.

ಅಂತಿಮವಾಗಿ ಸಿದ್ಧಪಡಿಸಿ ಇಟ್ಟ ನಿಬಂಧವೂ ಸಾವಿರ ಪುಟಗಳ ಗಜಗಾತ್ರದ್ದಾಗಿತ್ತು. ಹಬ್ಬಗಳು, ಸಂಸ್ಕಾರಗಳ ಬಗೆಗೆ ಈಗಾಗಲೇ ಅಚ್ಚಾಗಿ ಬಂದಿದ್ದ ಪುಸ್ತಕಗಳ ಕೇವಲ ಉಲ್ಲೇಖ ಮಾಡಿ ವಿಶೇಷಗಳನ್ನಷ್ಟೇ ಗುರುತಿಸುವ ಮೂಲಕ ಅದರ ಗಾತ್ರವನ್ನು ಕೊಂಚ ಕುಗ್ಗಿಸಿದ್ದಾಯಿತು. ವಕ್ತೃಗಳ ಚರ್ಚೆ, ಮರುಚರ್ಚೆ, ಮುಂದುವರಿದ ಚರ್ಚೆಗಳನ್ನೆಲ್ಲ 'ಆಧಾರ'ವಾಗಿ ಕೊಟ್ಟು ಸಮರ್ಥಿಸುವ ಕ್ರಮಕ್ಕೆ ಬದಲು ತೀರ್ಮಾನಗಳನ್ನು ಕೊಟ್ಟು ಸಂಕ್ಷೇಪಿಸಿದ್ದಾಯಿತು. ಶಾಸನ, ಐತಿಹ್ಯ, ಪಹಣಿ, ಗೋತ್ರಸಂಬಂಧ, ಕೋರ್ಟು ಕಛೇರಿಗಳ ವ್ಯವಹಾರದ ಉಲ್ಲೇಖಗಳನ್ನೆಲ್ಲ ಬಳಸಿ ಒಂದೊಂದು ಸಣ್ಣ ವಿಷಯವನ್ನೂ ಚರ್ಚಿಸುತ್ತ ಸಾಗುವ ವಿಧಾನವನ್ನು ಬದಲಿಸಿದ್ದಾಯಿತು. ಹತ್ತಾರು ಹೇಳಿಕೆಗಳ ಇಲ್ಲವೆ ನಿದರ್ಶನಗಳ ಇಲ್ಲವೆ ಆಧಾರಗಳ ಪಟ್ಟಿಗಳನ್ನು ಬಹುವಾಗಿ ಅಡಕಗೊಳಿಸಿದ್ದಾಯಿತು. ಬಹಳಷ್ಟು ವಿವರಗಳಿಗೆ ಪಟ್ಟಿಕೆಗಳ ಆಕೃತಿ ಕೊಡಲಾಯಿತು. ಪ್ರೊ. ಅಂಬಳಿಕೆ ಅವರು ತಾಳ್ಮೆಯಿಂದ ನಿಬಂಧದ ಗತಿಯನ್ನು ನಿರ್ದೇಶಿಸಿದ್ದರ ಮೇಲೆ ಮತ್ತೆ ಮೂರು ಪುನರ್ನಿರೂಪಣೆಗಳಾದುವು. ಮೂಲಪಾಠ್ಯ ಮುನ್ನೂರು ಪುಟಕ್ಕೆ ಇಳಿದು ಪರಿಶಿಷ್ಟವು ಇನ್ನೂರು ಪುಟಗಳಲ್ಲಿ ಅಡಕವಾಯಿತು. ೧೯೯೩ರಲ್ಲಿ ಮೈಸೂರು ವಿಶ್ವವಿದ್ಯಾನಿಲಯಕ್ಕೆ ಒಪ್ಪಿಸಿದ ಈ ನಿಬಂಧಕ್ಕೆ ಅದೇ ವರ್ಷ ಪಿಎಚ್.ಡಿ., ಪದವಿ ಲಭ್ಯವಾಯಿತು. ಪರಿಣತರಾದ ಡಾ.ಎ.ಶ್ರೀಕೃಷ್ಣಭಟ್ ಅವರೂ ಡಾ.ಎಂ.ರಾಮ ಅವರೂ ಒಳ್ಳೆಯ ಅಭಿಪ್ರಾಯಗಳನ್ನು ನೀಡಿದ್ದರು.

ಈ ನಿಬಂಧವನ್ನು ಮುದ್ರಿಸುವ ಪ್ರಸ್ತಾಪ ಬಂದಾಗ ವಿಸ್ತೃತ ಸಂಶೋಧನೆ ಮಾಡಿ ವಿಷಯದ ತುದಿ ಮುಟ್ಟಿಸಿದ ಅನಂತರವೇ ಪ್ರಕಟಿಸಬೇಕೆಂದು ನಿಶ್ಚಯಿಸಿಕೊಂಡೆ. ಸದಾ ವಾತ್ಸಲ್ಯದಿಂದ ನೋಡಿಕೊಳ್ಳುವ ಪ್ರೊ. ಜಿ. ಅಶ್ವತ್ಥನಾರಾಯಣ ಅವರ ಆಗ್ರಹವೂ ಅದೇ ಆಗಿತ್ತು. ಸಂಶೋಧನೆಯನ್ನು ಮುಂದುವರಿಸಿ ವಿಸ್ತೃತ ಮಾಹಿತಿಯನ್ನು ಯೋಜನಾಬದ್ಧವಾಗಿ ವಿಂಗಡಿಸಿಕೊಂಡು ಆಧಾರ ಪಾಠ್ಯಗಳನ್ನು ಪುಸ್ತಕ ರೂಪದಲ್ಲಿ ಪ್ರಕಟಿಸುತ್ತ ಬಂದೆ. ಹೀಗೂ ಮತ್ತೆ ಹತ್ತು ವರ್ಷ ಕಳೆಯಿತು, ಹತ್ತು ಪುಸ್ತಕಗಳನ್ನು ಪ್ರಕಟಿಸಿದ್ದಾಯಿತು. ಆಗಮಾತ್ರ, ಈ 'ಒಂದು ಹಂತ'ದ ನಿಬಂಧ ನಿಸ್ಸಂಶಯವಾಗಿ ಸುಭದ್ರ ಚೌಕಟ್ಟನ್ನು ಒದಗಿಸಿಕೊಟ್ಟಿದೆ ಎಂಬುದು ನನಗೇ ಮನದಟ್ಟಾಯಿತು. ಇನ್ನೂ ಇಷ್ಟು ವರ್ಷ ಇಷ್ಟೇ ತೀವ್ರವಾಗಿ ತೊಡಗಿಸಿಕೊಂಡರೂ 'ತುದಿಮುಟ್ಟಿಸುವುದು' ಅಸಾಧ್ಯವೆನ್ನುವುದು ಖಚಿತವಾಯಿತು. ಯಾವ ನಿಬಂಧವೂ ಯಾವ ವಿಷಯವನ್ನೂ ತುದಿಮುಟ್ಟಿಸಿರಲಾರದು ಎಂಬುದು ಸ್ಪಷ್ಟವಾಯಿತು. ಮೊದಲ ಬಾರಿಗೆ ಒಂದು ಸಮುದಾಯದ ಬಗೆಗಿನ ಸಮಗ್ರ ಮಾಹಿತಿಗೆ ಶಿಸ್ತುಬದ್ಧ ಸಂಯೋಜನೆ ದೊರಕಿಸಿಕೊಡುವುದು ತನ್ನಷ್ಟಕ್ಕೇ ಒಂದು ಸಾಧನೆಯಾಗುತ್ತದೆ. ಸಂಬಂಧಿಸಿದ ಹಾಗೂ ಸಂಬಂಧಿಸದ ನೂರಾರು ಸಮುದಾಯಗಳ ಬಗೆಗಿನ ಅಪಾರ ಮಾಹಿತಿ ಲಭ್ಯವಾದ ಹೊತ್ತು ಸಮಗ್ರತೆಯ ದಾರಿ

ಸುಮುಖವಾಗುತ್ತದೆ. ಎಲ್ಲವೂ ಒಂದೊಂದು ಹಂತದ ಸಾಧನೆಗಳೇ ಸರಿ. ಇದು ಮತ್ತೂ ಸ್ಪಷ್ಟವಾಯಿತು. ಈವರೆಗೆ ಮಾಡಿರುವ ಇಪ್ಪತ್ತು ವರ್ಷಗಳ ಸಂಶೋಧನೆಯನಂತರ ಈ ವಿಷಯಕ್ಕೆ ಸಂಬಂಧಿಸಿದಂತೆ ನನಗೇ ವಿಶೇಷವಾಗಿ ಲಭ್ಯವಾಗಿರುವ ಹೊಳಹು ಎಂದರೆ ಯಾವ ಯಾವ ದಿಕ್ಕಿನಲ್ಲಿ ಸಂಶೋಧನೆಗೆ ಅವಕಾಶವಿದೆ ಎಂಬ ತಿಳಿವು ಮಾತ್ರ. ಈಗಾಗಲೇ ಸಂಗ್ರಹವಾಗಿರುವ ಮಾಹಿತಿಯನ್ನು ಪೂರ್ಣವಾಗಿ ಪ್ರಕಟಿಸುವುದು ಮುಂದಣ ಸಂಶೋಧನೆಯ ಸಾಧ್ಯತೆಗಳನ್ನೂ ಗತಿಯನ್ನೂ ಕ್ಷಿಪ್ರಗೊಳಿಸುವ ಮೊದಲ ಹೆಜ್ಜೆಯಾಗಬಹುದು ಎನಿಸಿತು. ಅದರಿಂದಾಗಿ ಪ್ರಸ್ತುತ ನಿಬಂಧವು ಯಥಾವತ್ತಾಗಿ ಪ್ರಕಟಣೆಗೆ ಅಣಿಗೊಂಡಿತು.

ನಿಬಂಧವು ೧೯೯೩ರಲ್ಲಿಯೇ ಪ್ರಕಟಗೊಂಡರೂ, ಮುದ್ರಣಗೊಳ್ಳದುದರ ಅಪಪರಿಣಾಮಗಳೂ ಇದ್ದವು. ಈಗಾಗಲೇ ಸಿದ್ಧವಾದ ಮಾಹಿತಿಯ ಅರಿವಿಲ್ಲದ ಹಲವು ಕುತೂಹಲಿಗಳು ಸಮುದಾಯದ ಬಗೆಗಿನ ಕೆಲವು ಸಮಸ್ಯೆಗಳನ್ನು ತಮತಮಗೆ ತೋಚಿದಂತೆ ವಿಶ್ಲೇಷಿಸುವುದನ್ನು ಮುಂದುವರಿಸಿದ್ದರು. ಸಂಶೋಧನೆಯ ಪ್ರಾಮಾಣಿಕ ಕಾಳಜಿ ಇದ್ದ ದೂರದ ಊರುಗಳ ಹಲವರಿಗೆ ಪರಾಮರ್ಶೆಗೆ ಈ ನಿಬಂಧ ಸುಲಭವಾಗಿ ಸಿಗುವಂತಿರಲಿಲ್ಲ. ಹತ್ತಿರದ ಕೆಲವರು ಇದರ ಸದ್ಬಳಕೆ ಮಾಡಿಕೊಂಡರೂ ತಮ್ಮ ಬಳಿ ಈ ನಿಬಂಧದ ಒಂದು ಪ್ರತಿ ಇರಬೇಕೆಂಬ ನ್ಯಾಯವಾದ ಆಗ್ರಹವನ್ನು ಮುಂದಿಡುತ್ತಿದ್ದರು.

ಈಗ ಈ ನಿಬಂಧವು ೧೯೯೩ರ ದಾಖಲೆಯಾಗಿಯೇ ಹೊರಬರುತ್ತಿದೆ. ಆದರೂ, ಮುದ್ರಣಗೊಳ್ಳುತ್ತಿರುವ ಈ ನಿಬಂಧವು ವಿಶ್ವವಿದ್ಯಾನಿಲಯಕ್ಕೆ ಒಪ್ಪಿಸಿದ ನಿಬಂಧದ ಸ್ವರೂಪದಲ್ಲಿಯೇ ಇಲ್ಲ. ಓದುಗರಿಗೆ ಸರಳವಾಗುವಂತೆ ಅದರ ಶರೀರವನ್ನು ಅಣಿಗೊಳಿಸಲಾಗಿದೆ. ಛಾಯಾಚಿತ್ರಗಳನ್ನು ಪಠ್ಯದ ನಡುವೆ ಆಯಾ ವಿಷಯಕ್ಕೆ ಹೊಂದಿಕೊಂಡಂತೆಯೇ ಜೋಡಿಸಲಾಗಿದೆ. ಅಡಿಟಿಪ್ಪಣಿಗಳನ್ನು ಆಯಾ ಪುಟಗಳಲ್ಲಿಯೇ ಅಳವಡಿಸಲಾಗಿದೆ. ಬೆರಳಚ್ಚಿನ ಹಲವು ದೋಷಗಳನ್ನು ಸರಿಪಡಿಸಲಾಗಿದೆ. ಸಹಜವಾಗಿಯೇ ಪದಸೂಚಿಯನ್ನು ಪುನಃ ರೂಪಿಸಲಾಗಿದೆ. 'ವಿಶೇಷಪದಗಳ ಅರ್ಥ'ವನ್ನು ವಿಸ್ತರಿಸಲಾಗಿದೆ. ಹೆಚ್ಚಿನ ನಕ್ಷೆಗಳನ್ನು ಸೇರಿಸಲಾಗಿದೆ. ಕಾರಣಾಂತರದಿಂದ ಛಾಯಾಚಿತ್ರಗಳಲ್ಲಿ ಮರುಜೋಡಣೆಯಾಗಿದೆ. 'ಗ್ರಂಥಋಣ' ಹಾಗೂ 'ವಕ್ತೃವಿವರ'ದ ಅನುಬಂಧಗಳನ್ನು ಕೈಬಿಡಲಾಗಿದೆ; ನೇರವಾಗಿ ಸಂಬಂಧಿಸಿದ ಉಲ್ಲೇಖಗಳಿಗೆ ಹೊಂದಿಕೊಂಡು ಅತ್ಯಗತ್ಯವಾದಷ್ಟು ಮಾತ್ರ ಅಡಿಟಿಪ್ಪಣಿಯಲ್ಲಿ ಸೇರಿದೆ. ಮಾಹಿತಿಗೆ ಪ್ರಧಾನ ಆಧಾರಗಳಾದ ಸಹಸ್ರಾರು ವಕ್ತೃಗಳ ವಿವರದ ಬಗೆಗಿನ ಅನುಬಂಧವು ಈ ಬಗೆಯ ನಿಬಂಧಗಳ ಅತ್ಯಗತ್ಯ ಭಾಗವೆಂಬುದು ಯುಕ್ತವಾದುದು. ಈಗ ಆಗಿರುವುದು ಮುದ್ರಣಾನುಕೂಲ. ಉದ್ಧೃತವಾದ ಹಲವು ಹೇಳಿಕೆಗಳು ಸಾರ್ವತ್ರಿಕವೂ ಸರ್ವಸಮ್ಮತವೂ ಆದ ಮಾತುಗಳಾದುದರಿಂದ ಯಾವ ನಿರ್ದಿಷ್ಟ ವಕ್ತೃವಿನ ಹೆಸರನ್ನೂ ಅವುಗಳಿಗೆ ಸಂಬಂಧಿಸಿದಂತೆ ನಮೂದಿಸಿಲ್ಲ. ಪರಿಣತರು ಸೂಚಿಸಿದ್ದ ಈ ವಿಧದ ಇತರ ತಿದ್ದುಪಡಿಗಳನ್ನೂ ಅಳವಡಿಸಿಕೊಳ್ಳಲಾಗಿದೆ.

ಈ ನಿಬಂಧದ ರೂಪರೇಖೆಯನ್ನು ಸೂಚಿಸಿ, ಪ್ರಾರಂಭಿಕ ಮಾಹಿತಿ ನೀಡಿ, ಸಂಗ್ರಹವಾದ ವಿಸ್ತೃತ ಮಾಹಿತಿಯ ಬಗೆಗೆ ಚರ್ಚಿಸಿ ಮುನ್ನಡೆಯ ಹೊಳಹುಗಳನ್ನು ನೀಡಿದವರು ನನ್ನ ಪೂಜ್ಯ ತಂದೆತಾಯಿಯರಾದ ವಿದ್ವಾನ್ ಬಿ.ಎಸ್. ಸುಬ್ಬರಾಯಶಾಸ್ತ್ರೀ, ಪಾರ್ವತಮ್ಮ ಅವರು.

ವಿದ್ವಾಂಸರೂ ಆತ್ಮೀಯರೂ ಆದ ಶ್ರೀ ಎನ್. ಎಸ್. ಶಾರದಾ ಪ್ರಸಾದ್ ಅವರು ಈ ಗ್ರಂಥದ ಪ್ರಕಟಣೆಯಲ್ಲಿ ಶ್ರದ್ಧೆಯಿಂದ ನೆರವಾಗಿ ಅದರ ಸ್ವರೂಪವನ್ನು ಓದುಗರಿಗೆ ಹತ್ತಿರವಾಗುವಂತೆ ಸುಧಾರಿಸಲು ಸಹಾಯ ಮಾಡಿದ್ದಾರೆ. ಡಾ. ಬಿ.ಎಸ್. ನರಹರಿ, ಡಾ. ವಿಜಯಾ ಹರನ್, ಶ್ರೀಮತಿ ಬಿ.ಎಸ್. ನಾಗರತ್ನ ಶಂಕರಮೂರ್ತಿ ಅವರೂ ಕರಡನ್ನು ತಿದ್ದಿ ಸೂಕ್ತ ಸಲಹೆಗಳನ್ನು ನೀಡಿದ್ದಾರೆ. ನನ್ನ ಪೂಜ್ಯಗುರುಗಳಾದ ಡಾ.ಕೆ. ಅನಂತರಾಮು ಅವರ ಹಾಗೂ ವಿದ್ವಾಂಸಮಿತ್ರರಾದ ಡಾ.ಟಿ.ವಿ.ಸತ್ಯನಾರಾಯಣ ಅವರ ಸಲಹೆಯನ್ನೂ ಈ ಸಂಬಂಧದಲ್ಲಿ ಪಡೆದಿದ್ದೇನೆ. ಕು. ಉಮಾ ಅವರು ಅಕ್ಷರ ಜೋಡಣೆಯ ಶ್ರಮದಾಯಕ ಕೆಲಸವನ್ನು ಅಚ್ಚುಕಟ್ಟಾಗಿಯೂ, ಶ್ರದ್ಧೆಯಿಂದಲೂ ಮಾಡಿಕೊಟ್ಟಿದ್ದಾರೆ. ಮಗಳು ಚಿ.ಶರ್ವಾಣಿ ಹರನ್ ತನ್ನ ಪಾಡಿಗೆ ತಾನು ಓದಿಕೊಂಡು ನನಗೆ ಸಮಯದಾನ ಮಾಡಿ ಸಹಕರಿಸಿದ್ದಾಳೆ. ಪತ್ನಿ ಡಾ. ವಿಜಯಾ ಹರನ್ ಶಬ್ದಸೂಚಿಯನ್ನು ಸಿದ್ಧಪಡಿಸುವ ಶ್ರಮದಾಯಕ ಕೆಲಸವನ್ನು ನಿರ್ವಹಿಸಿಕೊಟ್ಟಿದ್ದಾರೆ. ಬೆಂಗಳೂರಿನ ಲಕ್ಷ್ಮೀ ಪ್ರಿಂಟರ್ಸ್ ಅವರು ಅಂದವಾಗಿಯೂ ಶೀಘ್ರವಾಗಿಯೂ

ಮುದ್ರಿಸಿಕೊಟ್ಟಿದ್ದಾರೆ. ಹಲವು ಸಹೃದಯರು ನಾನಾ ರೀತಿ ಸಹಕರಿಸಿದ್ದರಿಂದಲೇ ಈ ಕೃತಿ ಸಿದ್ಧವಾಗಿದೆ.

ಕಳೆದ ಇಪ್ಪತ್ತು ವರ್ಷಗಳಿಂದ ನನ್ನ ಸಂಶೋಧನೆ ಸುಮುಖವಾಗಿ ಸಾಗಿದೆ; ಅದು ಈವರೆಗೆ ನಾನು ಸೇವೆ ಸಲ್ಲಿಸಿದ ವಿದ್ಯಾಲಯಗಳ ಪ್ರಾಚಾರ್ಯರು ಹಾಗೂ ಸಹೋದ್ಯೋಗಿ ಮಿತ್ರರ ಸಹಕಾರದಿಂದ ಮಾತ್ರ ಸಾಧ್ಯವಾಗಿದೆ. ಅಧ್ಯಯನ, ಅಧ್ಯಾಪನ ಮತ್ತು ಸಂಶೋಧನೆ ಒಬ್ಬ ಅಧ್ಯಾಪಕನ ಕರ್ತವ್ಯದ ಅವಿಭಾಜ್ಯ ಅಂಗಗಳೆಂದು ಹೇಳಿ, ಪ್ರೋತ್ಸಾಹಿಸಿ ಸದಾ ಉದಾರವಾಗಿ ಸಹಕರಿಸಿದ ಪ್ರಾಚಾರ್ಯರಾದ ಪ್ರೊ.ಶ್ರೀನಿವಾಸರಾವ್ ಹೇಜಿಬ್, ಪ್ರೊ.ಕೆ. ಶ್ರೀಹರಿ ಹಾಗೂ ಪ್ರೊ.ಎನ್.ಎನ್. ಪುಟ್ಟಸ್ವಾಮಿ ಅವರನ್ನು ಕೃತಜ್ಞತೆಯಿಂದ ನೆನೆಯುತ್ತೇನೆ.

ಈ ನಿಬಂಧವನ್ನು ವಿಶ್ವವಿದ್ಯಾನಿಲಯಕ್ಕೆ ಒಪ್ಪಿಸಿದ್ದು ೧೯೯೩ರಲ್ಲಿ. ಅದು ಇಪ್ಪತ್ತನೆಯ ಶತಮಾನ. ಇದೀಗ ಅದು ಇಪ್ಪತ್ತೊಂದನೆಯ ಶತಮಾನದಲ್ಲಿ ಮುದ್ರಣವಾಗುತ್ತಿದೆ. ಓದುಗರು, ಇದು ಇಪ್ಪತ್ತನೆಯ ಶತಮಾನದಲ್ಲಿ ಸಿದ್ಧವಾದ ಕೃತಿ ಎಂಬುದನ್ನು ಅಗತ್ಯವಾಗಿ ಮನಸ್ಸಿನಲ್ಲಿಡಬೇಕು. ಆ ಸಂಬಂಧದಲ್ಲಿಯೂ ನಿಬಂಧವನ್ನು ಯಥಾವತ್ತಾಗಿ ಉಳಿಸಿಕೊಳ್ಳಲಾಗಿದೆ ಎಂಬುದನ್ನು ಪ್ರತ್ಯೇಕವಾಗಿ ಸೂಚಿಸಬಯಸುತ್ತೇನೆ.

ಈ ನಿಬಂಧವನ್ನು ಸಿದ್ಧಪಡಿಸುವಾಗ ಕೇಂದ್ರದಲ್ಲಿದ್ದುದು ಇಪ್ಪತ್ತನೆಯ ಶತಮಾನದ ಸ್ವಾತಂತ್ರ್ಯಪೂರ್ವ ಸಮಾಜದ ಸಾಂಪ್ರದಾಯಿಕ ಬದುಕಿನ ಸಂದರ್ಭದ ಚಿತ್ರ. ಅಲ್ಲಿಂದ ಮುಂದೆ ಹೊಸ ಶಿಕ್ಷಣ, ನಗರೀಕರಣ, ಉದ್ಯೋಗ ವಲಸೆ, ಜಾಗತೀಕರಣ, ಸಾರ್ವತ್ರೀಕರಣದ ಪರಿಣಾಮವಾಗಿ ಹಲವು ಸ್ಥಿತ್ಯಂತರಗಳು ಸಂಭವಿಸಿವೆ. ಈ ಸ್ಥಿತ್ಯಂತರದ ಅಧ್ಯಯನವೇ ಬೇರೆಯ ಸ್ವರೂಪವನ್ನು ತಳೆಯಬಹುದು. ಸಹಸ್ರಾರು ವರ್ಷಗಳ ಪಾರಂಪರಿಕ ಬದುಕಿನ ಕೊನೆಯ ಕೊಂಡಿಯ ಚಿತ್ರಣವಾಗಿ ಈ ನಿಬಂಧ ಬಂದಿದೆ. ಸಂಕೇತಿಗಳಲ್ಲಿಯೇ ಇರುವ ವಿವಿಧ ಪ್ರಾದೇಶಿಕ ಗುಂಪುಗಳ ಬಗೆಗಿನ ತೌಲನಿಕ ಅಧ್ಯಯನಕ್ಕೂ ಅವಕಾಶವಿದೆ. ಅನ್ಯ ಬ್ರಾಹ್ಮಣ ಸಮುದಾಯಗಳ ಹಲವು ರೀತಿಯ ತೌಲನಿಕ ಅಧ್ಯಯನಕ್ಕೆ ಅವಕಾಶವಿದೆ. ಎಲ್ಲ ಸಂಕೇತಿ ಪಂಗಡಗಳ ಬಗೆಗೂ ಮಾಹಿತಿಯನ್ನು ಸಂಗ್ರಹಿಸಿದ್ದರೂ ಒಂದು ಸಾಮಾನ್ಯ ಚೌಕಟ್ಟನ್ನು ನಿರ್ವಹಿಸುವ ಮಟ್ಟಿಗೆ ಅವನ್ನು ಇಲ್ಲಿ ಬಳಸಿಕೊಳ್ಳಲಾಗಿದೆ (ಇಲ್ಲಿ ಬಳಕೆಗೊಳ್ಳದೆ ಉಳಿದಿರುವ ಮಾಹಿತಿಯೂ ಇದೆ). ಎಂ. ಕೇಶವಯ್ಯನವರು ಇಂಥದೊಂದು ಚೌಕಟ್ಟನ್ನು ನಿರ್ವಹಿಸಿದ ಸುಮಾರು ಆರು ದಶಕಗಳ ಅನಂತರ ಆ ಮಾದರಿಯ ವಿಸ್ತೃತ ಚೌಕಟ್ಟೊಂದು ಇಲ್ಲಿ ಲಭ್ಯವಾಗಿದೆ. ಹೆಚ್ಚಿನ ಸಂಶೋಧನೆ ಮತ್ತು ದಾಖಲೀಕರಣವು ಈ ಸಮುದಾಯದ ಬಗೆಗಿನ ತಿಳಿವಿನ ಆಯಾಮವನ್ನು ಸುಲಭವಾಗಿ ವಿಸ್ತರಿಸುವುದು ಸಾಧ್ಯ. ಬ್ರಾಹ್ಮಣ ಸಮುದಾಯವೊಂದನ್ನು ಕುರಿತಂತೆ ಕನ್ನಡದಲ್ಲಿ ಸಿದ್ಧವಾದ ಮೊದಲ ನಿಬಂಧ ಇದು; ಅದೇ ಒಂದು ಹೆಗ್ಗಳಿಕೆಯಾಗದು. ಆದರೆ ಅದು ಪಡೆದುಕೊಳ್ಳುತ್ತಿರುವ ವಿಸ್ತಾರವು ಗಮನಾರ್ಹವಾಗಿದೆ.

ಇದೀಗ ಸಮುದಾಯ ಅಧ್ಯಯನ ಕೇಂದ್ರವು 'ಸಂಕೇತಿ ಅಧ್ಯಯನ' ಸಂಪುಟ ಸರಣಿಯನ್ನು ಪ್ರಕಾಶನಪಡಿಸಲು ಮುಂದಾಗಿದೆ. ಈ ಸರಣಿಯ ಮೊದಲ ಸಂಪುಟವಾಗಿ 'ಸಂಕೇತಿ: ಒಂದು ಅಧ್ಯಯನ' ಎಂಬ ಹೆಸರಿನಲ್ಲಿ ಈ ಮಹಾಪ್ರಬಂಧವು ಬೆಳಕು ಕಾಣುತ್ತಿದೆ. ಇದು ಸಾಧ್ಯವಾಗಿರುವುದು ಅಮೇರಿಕದಲ್ಲಿ ನೆಲೆಸಿರುವ ಡಾ. ಆರ್. ಎಸ್. ಚಂದ್ರಶೇಖರಮೂರ್ತಿ ಅವರ ಅಧ್ಯಕ್ಷತೆಯಲ್ಲಿ ಹಾಗೂ ಶ್ರೀ ನಟೇಶ್ ಮಗ್ಗೆ ಅವರ ನಿರ್ದೇಶನದಲ್ಲಿ ಈ ಸಾಹಸಕ್ಕೆ ಕೈಹಾಕಿರುವ 'ಸಂಕೇತಿ ಅಧ್ಯಯನ' ಪ್ರಕಟಣ ಸಮಿತಿಯಿಂದ. ಪ್ರಕಟಣ ಸಮಿತಿಗೂ, ಸಮುದಾಯ ಅಧ್ಯಯನ ಕೇಂದ್ರದ ಗೌರವಾಧ್ಯಕ್ಷರಾದ ಶ್ರೀ ಬಿ. ಎನ್. ವಿ. ಸುಬ್ರಹ್ಮಣ್ಯಂ ಮತ್ತು ಕೇಂದ್ರದ ಬಳಗಕ್ಕೂ, ಪ್ರಕಟಣ ಸಮಿತಿಗೆ ವಿಶೇಷ ಸಹಕಾರ ನೀಡಿದ ಗೆಳೆಯ ಶ್ರೀ ಬಿ.ವಿ. ವೆಂಕಟನಾರಾಯಣ ಅವರಿಗೂ, ನಿಬಂಧವನ್ನು ಸಿದ್ಧಪಡಿಸಲು ನಾನಾ ರೀತಿಯಲ್ಲಿ ನೆರವಾಗಿರುವ ಸಮಸ್ತರಿಗೂ ಆಭಾರಿಯಾಗಿದ್ದೇನೆ. ಈ ನಿಬಂಧಕ್ಕೆ ಅವಕಾಶ ಇತ್ತಿರುವ ಮೈಸೂರು ವಿಶ್ವವಿದ್ಯಾನಿಲಯಕ್ಕೂ ನಾನು ಕೃತಜ್ಞ. ಈ ಕೃತಿಯನ್ನು ಸಮಸ್ತ ಸಂಕೇತಿ ಬಂಧುಗಳಿಗೂ ಕೃತಜ್ಞತಾಪೂರ್ವಕವಾಗಿ ಸಮರ್ಪಿಸುತ್ತಿದ್ದೇನೆ.

ಮಕರ ಸಂಕ್ರಾಂತಿ
ಮೈಸೂರು
15-01-03

ಪ್ರಣತಾರ್ತಿಹರನ್

ಪರಿವಿಡಿ

ಚಿತ್ರಗಳು

೨. ಪಟ್ಟಿಗಳು 285

ಸಾಂಕೇತಿ
ಒಂದು ಅಧ್ಯಯನ
(ಸಂಸ್ಕೃತಿ-ಸಮೀಕ್ಷೆ)

ಅಧ್ಯಾಯ : ಒಂದು

ಪೀಠಿಕೆ

೧. ಅಧ್ಯಯನದ ಸ್ವರೂಪ ಮತ್ತು ವ್ಯಾಪ್ತಿ

ಅ. ಅಧ್ಯಯನದ ಅಗತ್ಯ : ಮಾನವಸಮಾಜವ್ಯವಸ್ಥೆಯ ಸಮಗ್ರ ಅಧ್ಯಯನದ ದೃಷ್ಟಿಯಿಂದ, ಒಟ್ಟು ಮಾನವ ಸಂಸ್ಕೃತಿಯನ್ನು ಅದರ ಸಮಗ್ರ ಹಿನ್ನೆಲೆಯಲ್ಲಿ ತಿಳಿಯುವ ದೃಷ್ಟಿಯಿಂದ, ಒಂದೊಂದು ಸಮಾಜವನ್ನೂ ಬಿಡಿಬಿಡಿಯಾಗಿ ಅಧ್ಯಯನ ಮಾಡಬೇಕಾದ ಅಗತ್ಯ ಈಗ ಬಹಳವಿದೆ. ಮಾನವ ಮತ್ತು ಅವನ ಸಂಸ್ಕೃತಿಯನ್ನು ಕುರಿತು ಅಭ್ಯಸಿಸುವ ಎಲ್ಲ ಮಾನವಿಕವಿಜ್ಞಾನಗಳೂ ಇಂದು ತಮ್ಮತಮ್ಮ ದೃಷ್ಟಿಯಲ್ಲಿ ವಿವಿಧ ಸಮಾಜಗಳ ಅಧ್ಯಯನವನ್ನು ಕೈಗೊಂಡು, ಅವು ರೂಢಿಸಿಕೊಂಡಿರುವ ಸಂಸ್ಕೃತಿ ಮತ್ತು ಸಾಮಾಜಿಕ ವ್ಯವಸ್ಥೆಗಳ ವೈಶಿಷ್ಟ್ಯವನ್ನು ಗುರುತಿಸುತ್ತಿವೆ. ಭಿನ್ನ ಸಮಾಜಗಳ ನಡುವಿನ ಸಂಬಂಧ, ಸಂಘಟನಾವ್ಯವಸ್ಥೆ, ವೈವಿಧ್ಯಪೂರ್ಣವಾದ ಜೀವನದ ಮಹತ್ತ್ವವನ್ನು ತಿಳಿಸಿಕೊಡುವುದರ ಜೊತೆಗೆ, ಅವು ಈ ಸಮಾಜಗಳು ಎದುರಿಸುತ್ತಿರುವ ಸಮಸ್ಯೆಗಳಿಗೆ ಸೂಕ್ತ ಪರಿಹಾರೋಪಾಯಗಳನ್ನೂ ಸೂಚಿಸುತ್ತಿವೆ.

ಸಮಾನ ಗುಣಸ್ವಭಾವಗಳುಳ್ಳ ಹಲವಾರು ಸಮಾಜಗಳು ಕೂಡಿ ಬಾಳುವೆ ಮಾಡುವ ನಮ್ಮ ಸಂಕೀರ್ಣ ಸಾಮಾಜಿಕ ವ್ಯವಸ್ಥೆಯಲ್ಲಿ, ಒಂದೊಂದು ಸಮಾಜವೂ ತನಗೇ ವಿಶಿಷ್ಟವಾದ ಸಂಸ್ಕೃತಿಯನ್ನು ಉಳಿಸಿಕೊಂಡು ಬಂದಿರುವುದೂ ಉಂಟು. ಮೇಲುನೋಟಕ್ಕೆ ಬೇರೆಬೇರೆ ಸಂಸ್ಕೃತಿಗಳ ವೈಶಿಷ್ಟ್ಯ ಒಟ್ಟಾರೆಯಾಗಿ ಒಂದೇ ಬಗೆಯಾಗಿ ಕಂಡರೂ, ಆ ವೈಲಕ್ಷಣ್ಯಗಳು ಸಾಂಸ್ಕೃತಿಕ ಘಟಕದಲ್ಲಿ ವಹಿಸುವ ಪಾತ್ರದ ದೃಷ್ಟಿಯಿಂದ ನೋಡಿದರೆ, ಅವುಗಳ ಕಾರ್ಯಚಟುವಟಿಕೆಯ ವೈವಿಧ್ಯದ ಪರಿಚಯವಾಗುತ್ತದೆ.

ತಮ್ಮದೇ ಆದ ಭಾಷೆ, ವೃತ್ತಿ ಮತ್ತು ಸಾಹಿತ್ಯವನ್ನು ಹೊಂದಿರುವ ಸಂಕೇತಿಗಳ ಜೀವನ ಮತ್ತು ಸಂಸ್ಕೃತಿ ವಿಶಿಷ್ಟವಾದುದು. ಕೈಗಾರಿಕೀಕರಣ, ನಗರೀಕರಣದ ಪ್ರಭಾವದಿಂದಾಗಿ ತಮ್ಮ ಮೂಲಸಂಸ್ಕೃತಿಯ ವೈಶಿಷ್ಟ್ಯಗಳನ್ನು ತೀವ್ರವಾಗಿ ಸಾಮಾನ್ಯೀಕರಣಕ್ಕೆ ಒಡ್ಡಿಕೊಳ್ಳುತ್ತಿರುವ ಈ ಸಮುದಾಯದ ಜೀವನ ಮತ್ತು ಸಂಸ್ಕೃತಿಯ ಬಗೆಗಿನ ಸಂಶೋಧನೆ, ಈಗ ತೀರ ಅಗತ್ಯದ ಕೆಲಸವಾಗಿದೆ.

ಆ. ಸಾಮಾಜಿಕ ಸ್ಥಿತ್ಯಂತರದ ಸಂಧಿಕಾಲದಲ್ಲಿ ಮೊದಲಬಾರಿಗೆ ಸಮಗ್ರ ಅಧ್ಯಯನ : ಈ ನಿಟ್ಟಿನಲ್ಲಿ ಗಮನಿಸಬೇಕಾದ ಸಂಗತಿಯೊಂದಿದೆ. ಮುಖ್ಯವಾಗಿ, ಹತ್ತೊಂಬತ್ತನೆಯ ಶತಮಾನದ ಉತ್ತರಾರ್ಧದಲ್ಲಿಯೇ ಜಾನಪದ ಸಂಗ್ರಹಕಾರ್ಯವು ಕರ್ನಾಟಕದಲ್ಲಿ ಪ್ರಾರಂಭವಾದರೂ, ಸಮಗ್ರ ಜಾನಪದದ ದೃಷ್ಟಿಯಿಂದ ಗಮನಾರ್ಹವಾದ ಕೃತಿ ಬಂದುದು ೧೯೨೪ರಲ್ಲಿ. ಜಾನಪದ ಅಧ್ಯಯನದ ದೃಷ್ಟಿಯಿಂದ ಮಹತ್ತ್ವದ ಕೃತಿ ಎಂದು ವಿದ್ವಾಂಸರಿಂದ ಗುರುತಿಸಲ್ಪಟ್ಟ, ನಡಿಕೇರಿಯಂಡ ಚಿಣ್ಣಪ್ಪ ಅವರ ಈ 'ಪಟ್ಟೋಲೆ ಪಳಮೆ' ೧೯೭೫ರಲ್ಲಿ ಮತ್ತೆ ಮುದ್ರಣಗೊಳ್ಳುವ ವೇಳೆಗೂ, ಕನ್ನಡದಲ್ಲಿ ಸಮಗ್ರ ಜಾನಪದದ ಶಾಸ್ತ್ರೀಯ ಅಧ್ಯಯನದ ತಹತಹ ಉಳಿದೇ ಇತ್ತು.[1] ಕಳೆದ ಎರಡು ದಶಕಗಳಲ್ಲಿ ಸಂಶೋಧಕರ ಗಮನ ಇತ್ತ ಹರಿದಿದೆ. ಮೈಸೂರು ವಿಶ್ವವಿದ್ಯಾನಿಲಯವು ಸ್ನಾತಕೋತ್ತರ ಜಾನಪದ ಅಧ್ಯಯನದ ವ್ಯವಸ್ಥೆ ಮಾಡಿದ ಕಾಲದೊಂದಿಗೆ, ಕರ್ನಾಟಕದ ಜಾನಪದ ಸಂಶೋಧನೆಯ ಇತಿಹಾಸವು ಪ್ರಖರವಾಗಿ ತಳಕು ಹಾಕಿಕೊಂಡಿದೆ. ವಿಶ್ವವಿದ್ಯಾನಿಲಯದ ಇಂಥದೊಂದು ಪ್ರಯತ್ನವೇ, ಬದಲಾಗುತ್ತಿರುವ ಸಾಮಾಜಿಕಪರಿಸ್ಥಿತಿಯ ಹಿನ್ನೆಲೆಯಲ್ಲಿ ತೆಗೆದುಕೊಂಡ ತುರ್ತು ಕ್ರಮವಾಗಿತ್ತು. ಎಲ್ಲ ಸಂಶೋಧಕರೂ ಇಂಥದೊಂದು ಅಧ್ಯಯನವನ್ನು ಅರ್ಧ ಶತಮಾನದಷ್ಟು ಹಿಂದೆ ಕೈಗೊಂಡಿದ್ದರೆ ಆಗಬಹುದಾಗಿದ್ದ ಪ್ರಯೋಜನವನ್ನು ಕುರಿತು ತೀವ್ರವಾಗಿ ಚಿಂತಿಸಿದವರೇ.

---

1 *ಪಟ್ಟೋಲೆ ಪಳಮೆ, ಚಿಣ್ಣಪ್ಪ*, ನಡಿಕೇರಿಯಂಡ, (ಎ.ಮು); ಮುನ್ನುಡಿ, ಹಾಮಾನಾ; ಕ.ಅ.ಸಂ., ಮೈ.ವಿ.ವಿ; ೧೯೭೫, ಪು.V

ಚಿಣ್ಣಪ್ಪನವರು **ಪಟ್ಕೋಲೆ ಪಳಮೆ** ಗ್ರಂಥವನ್ನು ಪ್ರಕಟಿಸಿದ ಕೆಲವೇ ವರ್ಷಗಳಲ್ಲಿ ಎಂ.ಕೇಶವಯ್ಯನವರು ಪ್ರಕಟಿಸಿದ ಸಂಕೇತಿಗಳನ್ನು ಕುರಿತ ಗ್ರಂಥವು[2] ಚಿರಂತನ ದಾಖಲೆಯಾಗಿರುವುದು, ಅಂಥ ಕಾಲಗರ್ಭದಲ್ಲಿ ಹುಟ್ಟಿ ಬಂದುದರಿಂದ. ಆದರೆ ಸಂಕೇತಿಗಳ ಸಮಗ್ರ ಜಾನಪದದ ಶಾಸ್ತ್ರೀಯ ಅಧ್ಯಯನವು, ಕೇಶವಯ್ಯನವರ ಗ್ರಂಥವು ಪ್ರಕಟಗೊಂಡ ಅರ್ಧಶತಮಾನದನಂತರ, ಮೊದಲಬಾರಿಗೆ ಈಗ ನಡೆದಿದೆ. ಸಂಕೇತಿ ಸಮುದಾಯದ ಆಧುನಿಕ ಸಾಮಾಜಿಕ ಪರಿವರ್ತನೆಯನ್ನು ಸುಮಾರು ೧೯೨೦ರ ವೇಳೆಗೆ ಗುರುತಿಸಬಹುದಾದರೂ, ಅದು ತೀವ್ರತೆಯನ್ನು ಪಡೆದದ್ದು ೧೯೭೦ರನಂತರ. ಆದುದರಿಂದ, ಪ್ರಸ್ತುತ ಲೇಖಕನಿಗೆ ಈ ಪರಿವರ್ತನಯುಗದ ವಿವಿಧ ಹಂತಗಳ ಪ್ರತ್ಯಕ್ಷ ಅನುಭವವಿದೆ. ಪಾರಂಪರಿಕ ವಿದ್ಯೆಯನ್ನೂ ಸಂಸ್ಕಾರವನ್ನೂ ಹೊಂದಿ ಸಾಂಪ್ರದಾಯಿಕವಾಗಿ ಬದುಕಿ ಬಾಳುತ್ತಿರುವ ಹಿರಿಯ ವಕ್ತೃಗಳ ಸಹಯೋಗವಿದೆ. ಪಾರಂಪರಿಕ ಬದುಕು ತನ್ನ ವ್ಯಾಪಕತೆಯನ್ನೂ ತೀವ್ರತೆಯನ್ನೂ ವೇಗವಾಗಿ ಕಳೆದುಕೊಳ್ಳುತ್ತಿರುವ ಸಂಧಿಕಾಲದಲ್ಲಿ ಈ ಅಧ್ಯಯನ ನಡೆದಿದೆ.

ಇ. 'ಸಂಕೇತಿ' ಸಮುದಾಯ : ಆದಿಶಂಕರಾಚಾರ್ಯರ ಅನುಯಾಯಿಗಳಾದ ಸ್ಮಾರ್ತಬ್ರಾಹ್ಮಣರ ನೂರಾರು ಉಪಜಾತಿಗಳಲ್ಲಿ 'ಸಂಕೇತಿ' ಎಂಬುದೂ ಒಂದು. ಅವರ ಈಗಿನ ಒಟ್ಟು ಜನಸಂಖ್ಯೆ ಸುಮಾರು ಇಪ್ಪತ್ತೈದು ಸಾವಿರ. ಅದರಲ್ಲಿ ಈಗ ಸುಮಾರು ಇಪ್ಪತ್ತಮೂರು ಸಾವಿರ ಜನ ಕರ್ನಾಟಕದಲ್ಲಿಯೇ ವಾಸವಾಗಿದ್ದಾರೆ. ತಮಿಳುನಾಡು ಮತ್ತು ಕೇರಳದಲ್ಲಿ ಈಗ ನೆಲೆಸಿರುವವರು ಕೇವಲ ಎರಡು ಸಾವಿರ ಜನ. ತಮಿಳುನಾಡಿನಿಂದ ವಲಸೆ ಹೋದವರಾದುದರಿಂದಲೇ ಕರ್ನಾಟಕ ಮತ್ತು ಕೇರಳದ ಸಂಕೇತಿಗಳ ಮಾತೃಭಾಷೆಯೂ ತಮಿಳು. ಇವರು ಪಾರಂಪರಿಕವಾಗಿ ಚದುರಿದುದು ತಿರುನೆಲ್‌ವೇಲಿ, ಕನ್ಯಾಕುಮಾರಿ, ತಿರುವನಂತಪುರಂ, ಹಾಸನ, ಮೈಸೂರು, ಮಂಡ್ಯ, ಶಿವಮೊಗ್ಗ, ಚಿಕ್ಕಮಗಳೂರು ಜಿಲ್ಲೆಗಳಲ್ಲಿ. ಈಗ ಬೆಂಗಳೂರು ಮತ್ತು ಮದರಾಸು ನಗರಗಳಲ್ಲಿ ದಟ್ಟವಾಗಿ ನೆಲೆಸಿರುವ ಇವರು ಜಗತ್ತಿನಾದ್ಯಂತ ಹರಡಿಕೊಂಡಿದ್ದಾರೆ. ಕರ್ನಾಟಕಕ್ಕೆ ಬಂದಾಗ ಮೊದಲು ನೆಲೆಸಿದುದು ಬಳ್ಳಾರಿ ಜಿಲ್ಲೆಯಲ್ಲಾದರೂ, ಕಾಲಕ್ರಮದಲ್ಲಿ ಆ ನೆಲೆಗಳನ್ನು ಪೂರ್ಣವಾಗಿ ತೊರೆದುದರಿಂದ, ಉತ್ತರ ಕರ್ನಾಟಕದಲ್ಲಿ ಇಂದು ಪಾರಂಪರಿಕ ಸಂಕೇತಿ ನೆಲೆಗಳಿಲ್ಲ. ವೈದಿಕತೆ ಮತ್ತು ವ್ಯವಸಾಯದ ಸಮನ್ವಯವನ್ನು ಸಾಧಿಸಿರುವ ಅಪರೂಪದ ಬ್ರಾಹ್ಮಣಸಮುದಾಯಗಳಲ್ಲಿ ಸಂಕೇತಿಗಳದೂ ಒಂದು. ವೇದ, ತೋಟಗಾರಿಕೆ, ಸಂಗೀತ, ಛಲ ಮತ್ತು ಪರಿಶ್ರಮ ಅವರ ಪಂಚಲಕ್ಷಣ. ಹೆಣೆದುಕೊಂಡ ಬಂಧುತ್ವ ಮತ್ತು ಉಚ್ಚಸ್ವರದ ಮಾತುಗಾರಿಕೆಯ ಮೂಲಕ ಆತ್ಮೀಯತೆಯ ಅಭಿವ್ಯಕ್ತಿ ಅವರ ರೀತಿ. ದೃಢಕಾಯ, ಅನುಷ್ಠಾನಪರತೆ, ಜೀವನೋತ್ಸಾಹ ಎದ್ದು ಕಾಣುವ ಇತರ ಸಂಗತಿಗಳು.

ಈ. ಅಧ್ಯಯನದ ವಿಧಾನ : ಪ್ರಸ್ತುತ ಅಧ್ಯಯನದ ಸಂದರ್ಭದಲ್ಲಿ ಸಂಕೇತಿಗಳು ದಟ್ಟವಾಗಿ ಇಲ್ಲವೆ ಪಾರಂಪರಿಕವಾಗಿ ನೆಲೆಸಿರುವ ಪ್ರತಿ ನೆಲೆಯಲ್ಲಿ ಕ್ಷೇತ್ರಕಾರ್ಯ ನಡೆಸಿದೆ. ಪ್ರತಿ ವಿಷಯವಿಭಾಗದಲ್ಲಿ ನಿಷ್ಣಾತರಾದ ವೈವಿಧ್ಯಪೂರ್ಣ ವಕ್ತೃಗಳನ್ನು ಸಂದರ್ಶಿಸಿದೆ. ಶಾಸನಗಳು, ದಾನ ಮತ್ತು ಕ್ರಯಪತ್ರಗಳು, ವಂಶಚರಿತ್ರೆ, ವಂಶವೃಕ್ಷಗಳನ್ನು ಬಳಸಿಕೊಳ್ಳುವುದರೊಂದಿಗೆ ಜನ, ಜೀವನ ಮತ್ತು ಸ್ಥಳ ಸನ್ನಿವೇಶಗಳ ಪ್ರತ್ಯಕ್ಷ ಪರಿಚಯವನ್ನು ಮಾಡಿಕೊಂಡಿದೆ. ಈ ದೃಷ್ಟಿಯಿಂದ, ಇದೊಂದು ಆಳ ಅಧ್ಯಯನ (ಇನ್‌ಟೆನ್ಸೀವ್ ಸ್ಟಡಿ).

ಸಂಕೇತಿಗಳು ಈಗ ಹೆಚ್ಚಾಗಿ ಮೈಸೂರು, ಬೆಂಗಳೂರು, ಹಾಸನ, ತಿರುವನಂತಪುರಂ, ತಿರುನೆಲ್‌ವೇಲಿ, ಮದ್ರಾಸ್ ಪಟ್ಟಣಗಳಲ್ಲಿ ಕೇಂದ್ರೀಕರಣಗೊಳ್ಳುತ್ತಿದ್ದಾರೆ. ಹೊರರಾಜ್ಯಗಳಿಗೂ ಹೊರದೇಶಗಳಿಗೂ ಚದುರಿದ್ದಾರೆ. ಪಾರಂಪರಿಕ ನೆಲೆಗಳನ್ನು ತೊರೆದು ಆದ ನಗರೀಕರಣವು ದಕ್ಷಿಣದಲ್ಲಿ ವೇಗವಾಗಿಯೂ, ವ್ಯಾಪಕವಾಗಿಯೂ ನಡೆದಿದೆ. ಪ್ರಕೃತ ಅಧ್ಯಯನದಲ್ಲಿ ಕರ್ನಾಟಕವನ್ನು ಮೂಲ ಮಾಹಿತಿಕೇಂದ್ರವಾಗಿ ಮಾಡಿಕೊಂಡಿರುವುದಕ್ಕೆ, ಗಾತ್ರ ಮತ್ತು ಸಂಕೇತಿಗಳ ಮೂಲ ಸಾಂಸ್ಕೃತಿಕ ಪರಂಪರೆ - ಎರಡು ದೃಷ್ಟಿಯಿಂದಲೂ ಅದು ಹೆಚ್ಚು ಸತ್ತ್ವಪೂರ್ಣವಾಗಿರುವುದೇ ಕಾರಣವಾಗಿದೆ.

ಪ್ರಕೃತ ಅಧ್ಯಯನವನ್ನು ಆರಂಭಿಸುವುದಕ್ಕೆ ಪೂರ್ವಭಾವಿಯಾಗಿ ಹತ್ತುಸಾವಿರ ಪುಟಗಳಷ್ಟು ಪಾರಂಪರಿಕ ಗೀತೆಗಳು, ಮುನ್ನೂರು ಪುಟಗಳಷ್ಟು ಕತೆ, ಗಾದೆ, ಒಗಟುಗಳು ಹಾಗೂ ಮುನ್ನೂರು ವಂಶಚರಿತ್ರೆಗಳನ್ನು ಸಂಗ್ರಹಿಸಿಕೊಳ್ಳಲಾಯಿತು. ಅಧ್ಯಯನದ

2 *Life of Nacharamma (History of Her Migration), Keshavaiah.M*; Sri Panchacharya Electric Press, Mysore; 1936.

ವೈವಿಧ್ಯಪೂರ್ಣ ವಸ್ತುಕ್ಷೇತ್ರಗಳಿಗೆ ಸಂಬಂಧಿಸಿದಂತೆ, ಆಕರಗ್ರಂಥಗಳನ್ನು ಅಧ್ಯಯನ ಮಾಡಿ ಪ್ರಶ್ನಾವಳಿಯನ್ನು ಸಿದ್ಧಪಡಿಸಿಕೊಳ್ಳಲಾಯಿತು. ವಕ್ತೃಸಂದರ್ಶನ, ಪತ್ರವ್ಯವಹಾರ ಮತ್ತು ಕೆಲವು ವಕ್ತೃಮಾಹಿತಿಗಳ ಖಚಿತತೆಗೆ ಗ್ರಂಥಾವಲೋಕನದ ಪೂರಕ ಪ್ರಕ್ರಿಯೆ ನಿರಂತರವಾಗಿ ಸಾಗಿತು. ಹಾಗೆಯೇ, ವಿಭಿನ್ನ ವಕ್ತೃಗಳಿಂದ ಸಂಕೀರ್ಣಸ್ವರೂಪದ ಮಾಹಿತಿ ದೊರೆತಾಗ ವಿಷಯವನ್ನು ಅಸಂದಿಗ್ಧಗೊಳಿಸಿಕೊಳ್ಳಲು ಕೆಲವು ವಕ್ತೃಗಳಲ್ಲಿ ಮತ್ತೆಮತ್ತೆ ಚರ್ಚಿಸಲಾಯಿತು. ಮೂಲಭೂತವಾಗಿ ಕ್ಷೇತ್ರಕಾರ್ಯವಿಧಾನದಿಂದಲೇ ನಡೆಸಿರುವ ಈ ಸಂಶೋಧನೆಯಲ್ಲಿ ಸಮುದಾಯದ ವಿವಿಧ ಉಪಪಂಗಡಗಳ ಪ್ರಾತಿನಿಧಿಕ ವಿದ್ವಾಂಸರ ಸಲಹೆ, ಸೂಚನೆ, ನಿರ್ದೇಶನ ದೊರೆತುದರಿಂದ ಸಮಗ್ರತೆಯನ್ನು ಸಾಧಿಸುವ ಯತ್ನಕ್ಕೆ ನೆರವಾಯಿತು; ವಿವಿಧ ಉಪಪಂಗಡಗಳಿಗೆ ಸಮಾನ ಗಮನ ಕೊಡುವುದೂ ಸಾಧ್ಯವಾಯಿತು. ನಿರ್ದಿಷ್ಟ ಸಮುದಾಯದಿಂದಲೇ ಬಂದ ಸಂಶೋಧಕನಿಗೆ ಆ ವಸ್ತುವಿನ ಬಗೆಗೆ ಹೆಚ್ಚು ಹಿಡಿತವಿರುವಂತೆಯೇ, ಅತಿ ಪರಿಚಯವು ದೌರ್ಬಲ್ಯವಾಗುವ ಸಾಧ್ಯತೆಯೂ ಇದೆ. ವಸ್ತುಸ್ಥಿತಿಯ ಯಾವ ಮಗ್ಗುಲೂ ಲೋಪಗೊಳ್ಳಲಾರದೆಂಬ ಉದ್ದೇಶದಿಂದ ಸಮುದಾಯದ ಹಾಗೂ ಇತರ ಬ್ರಾಹ್ಮಣ, ಬ್ರಾಹ್ಮಣೇತರ ವಿದ್ವಾಂಸರ[3] ಪ್ರತಿಕ್ರಿಯೆ ಪರಿಶೀಲನೆಗಳ ಬೆಳಕಿನಲ್ಲಿ ನಿಬಂಧವನ್ನು ಸಿದ್ಧಪಡಿಸಿದೆ. ಸಂಗ್ರಹಗೊಂಡ ಅಪಾರ ಮಾಹಿತಿಯ ಪರಿಷ್ಕರಣ ಮತ್ತು ವಿಶ್ಲೇಷಣೆಗೆ ಸಹಾಯಕವಾಗಿ, ಎಲ್ಲ ಲಭ್ಯ ಆಕರಗಳನ್ನೂ ದುಡಿಸಿಕೊಂಡಿದೆ.

ಉ. ಅಧ್ಯಯನದ ವ್ಯಾಪ್ತಿ : ಕನ್ನಡದಲ್ಲಿ ಮೊದಮೊದಲು ಬಂದ ಇಂಥ ಅಧ್ಯಯನಗಳಲ್ಲಿ, 'ಸಂಸ್ಕೃತಿ', 'ಜಾತಿ', 'ಈವರೆಗಿನ ಜಾನಪದ ಅಧ್ಯಯನದ ಇತಿಹಾಸ', 'ಪ್ರಯೋಜನ' - ಇಂಥ ಹಿನ್ನೆಲೆಗಳನ್ನು ಖಚಿತಪಡಿಸಿಕೊಳ್ಳಬೇಕಾದ ಅಗತ್ಯವಿತ್ತು.[4] ಈಗ, ಅಂಥ ವಿವರಗಳ ಪುನರಾವರ್ತನೆಯನ್ನು ತಪ್ಪಿಸಿ ನೇರವಾಗಿ ಸಂಕೇತಿಗಳಿಗೆ ಸಂಬಂಧಿಸಿದ ಸಂಗತಿಗಳಿಗೆ ಸೀಮಿತಗೊಳಿಸಿಕೊಳ್ಳುವುದು ಯುಕ್ತವೆಂದು ಭಾವಿಸಿದೆ.

ಕರ್ನಾಟಕದ ಸಂಕೇತಿಗಳು ದಕ್ಷಿಣದ ಶೆಂಕೋಟ್ಟೈನಿಂದ ವಲಸೆ ಬಂದವರಾದುದರಿಂದ ಅಂಥ ವಲಸೆಯ ಕಾರಣ, ರೀತಿ, ಕಾಲ; ಕರ್ನಾಟಕದಲ್ಲಿ ಅವರ ಮೊದಲ ನೆಲೆಗಳು, ಅನಂತರದ ಮರುವಲಸೆಗಳು - ಈ ನಿಬಂಧದಲ್ಲಿ ಎರಡು ಅಧ್ಯಾಯಗಳಲ್ಲಿ ವಿಸ್ತಾರವಾದ

3 ಅ) *ಶ್ರೀಮತಿ ಅನಂತಲಕ್ಷ್ಮಿ ಎಂ.ಆರ್.*, ೪೫, ಪದವಿ, ವಕೀಲರು, ರಾಜಕಾರಿಣಿ, ಸಮಾಜಸೇವಕಿ, ಕೌಶಿಕ ಸಂಕೇತಿ, ಮೂಲ: ಮತ್ತೂರು ಹೊಸಹಳ್ಳಿ. ವಾಸ: ಶಿವಮೊಗ್ಗ.

ಆ) *ಪ್ರೊ.ಜಿ.ಅಶ್ವತ್ಥನಾರಾಯಣ*, ೫೦, ಪದವಿ, ಪ್ರಾಧ್ಯಾಪಕರು, ಸರ್ಕಾರಿ ವಿಜ್ಞಾನ ಕಾಲೇಜು, ಸಂಕೇತಿಯೇತರ ಬ್ರಾಹ್ಮಣರು, ಬೆಂಗಳೂರು.

ಇ) *ಪ್ರೊ.ಆರ್.ಕೆ.ಶ್ರೀಕಂಠಕುಮಾರಸ್ವಾಮಿ*, ೭೦, ಪದವಿ, ಸಂಸ್ಕೃತ ವೇದಶಾಸ್ತ್ರ ವಿದ್ವಾಂಸ, ವಿಜ್ಞಾನಿ, ಬೆಟ್ಟದಪುರ ಸಂಕೇತಿ, ಮೂಲ: ರುದ್ರಪಟ್ಟಣ, ವಾಸ: ಭದ್ರಾವತಿ.

ಈ) *ಡಾ.ಆರ್.ಆರ್.ಕುಲಕರ್ಣಿ*, ೫೦, ಪದವಿ, ಉಪಪ್ರಾಧ್ಯಾಪಕ, ಸಹ್ಯಾದ್ರಿ ಕಲಾ ಕಾಲೇಜು, ಶಿವಮೊಗ್ಗ, ಸಂಕೇತಿಯೇತರ ಬ್ರಾಹ್ಮಣರು, ಮೂಲ: ಧಾರವಾಡ.

ಉ) *ಡಾ.ಆರ್.ರಾಮಕೃಷ್ಣ*, ೪೦, ಪದವಿ, ಭಾಷಾಶಾಸ್ತ್ರಜ್ಞ, ಅಧ್ಯಾಪಕ, ಮಾನಸಗಂಗೋತ್ರಿ, ಮೈಸೂರು.

ಊ) *ಡಾ.ಎಂ.ಎಲ್.ಲಲಿತಮ್ಮ*, ೪೫, ಪದವಿ, ವೈದ್ಯೆ, ಉಪಪ್ರಾಧ್ಯಾಪಕಿ, ಸರ್ಕಾರಿ ಕಲಾ ಕಾಲೇಜು,ಬೆಂಗಳೂರು, ಕೌಶಿಕ ಸಂಕೇತಿ, ಮೂಲ: ಮೊಸಳೆ ಗ್ರಾಮ, ಹಾಸನ ತಾಲ್ಲೂಕು.

ಋ) *ಪ್ರೊ.ಎಲ್.ಎಂ.ಎಲ್.ಶಾಸ್ತ್ರಿ*, ೫೫, ಪದವಿ, ಉಪಪ್ರಾಧ್ಯಾಪಕ, ಡಿ.ವಿ.ಎಸ್ ಕಾಲೇಜು, ಶಿವಮೊಗ್ಗ, ಲಿಂಗದಹಳ್ಳಿ ಸಂಕೇತಿ, ಮೂಲ: ಲಿಂಗದಹಳ್ಳಿ, ತರೀಕೆರೆ ತಾಲ್ಲೂಕು.

ೠ) *ಡಾ.ಸತ್ಯನಾರಾಯಣಶಾಸ್ತ್ರಿ*, ೪೫, ಪದವಿ, ಭಾರತೀಯ ವಿದ್ಯಾಭವನ, ಲಂಡನ್, ಕೌಶಿಕ ಸಂಕೇತಿ, ಮೂಲ: ಮತ್ತೂರು ಹೊಸಹಳ್ಳಿ.

4 ಈ ಸಂಬಂಧದ ವಿವರಗಳಿಗೆ ನೋಡಿ:

ಅ) *ಮಲೆನಾಡಿನ ಒಕ್ಕಲಿಗರು ಮತ್ತು ಅವರ ಜಾನಪದ*, ಪಿಎಚ್.ಡಿ., ನಿಬಂಧ (ಅಪ್ರಕಟಿತ; ಮೈ.ವಿ.ವಿ.,ಮೈಸೂರು), *ಡಾ.ಹಿರಿಯಣ್ಣ* ಎ., ೧೯೮೨, ಪು.೧-೩೭, ಪು.೧೨೭-೧೪೮.

ಆ) *ಗೊಂಡರು: ಒಂದು ಸಾಂಸ್ಕೃತಿಕ ಅಧ್ಯಯನ*, ಪಿಎಚ್.ಡಿ., ನಿಬಂಧ (ಅಪ್ರಕಟಿತ; ಮೈ.ವಿ.ವಿ., ಮೈಸೂರು), *ಸೈಯದ್ ಜಮೀರುಲ್ಲಾ ಷರೀಫ್*, ೧೯೮೭, ಪು.೪-೮.

ಇ) *ಕನ್ನಡ ಜನಪದ ಗೀತೆಗಳ ಸಾಂಸ್ಕೃತಿಕ ಅಧ್ಯಯನ*, ಪಿಎಚ್.ಡಿ., ನಿಬಂಧ (ಅಪ್ರಕಟಿತ; ಮೈ.ವಿ.ವಿ., ಮೈಸೂರು), *ಡಾ.ನಂ.ತಪಸ್ವೀಕುಮಾರ್*, ೧೯೭೫, ಪು.೫೦-೩೫೩.

ಪರಿಶೀಲನೆಗೆ ಒಳಗಾಗಿವೆ. ಪೂರ್ಣವಾಗಿ ಸಂಕೇತಿ ಸಮುದಾಯಕ್ಕೇ ವಿಶಿಷ್ಟವಾದ ಭಾಗ ಇದು. ಸಂಕೇತಿಗಳನ್ನು ಕುರಿತ ಮುಂದುವರಿದ ಸಾಂಸ್ಕೃತಿಕ ಅಧ್ಯಯನಕ್ಕೆ ಇದು ಸಮರ್ಥ ಹಿನ್ನೆಲೆಯನ್ನೂ ಒದಗಿಸುತ್ತದೆ. ಉಳಿದ ನಾಲ್ಕು ಅಧ್ಯಾಯಗಳಲ್ಲಿ - ಸಂಕೇತಿಗಳ ವೃತ್ತಿ ಮತ್ತು ಆರ್ಥಿಕತೆ, ಆಹಾರ, ಉಡುಗೆ-ತೊಡುಗೆಗಳು; ಕುಟುಂಬ ಮತ್ತು ಸಾಮಾಜಿಕ ವ್ಯವಸ್ಥೆ, ಷೋಡಶ ಸಂಸ್ಕಾರಗಳು; ದೈವ ಮತ್ತು ಧರ್ಮ, ಹಬ್ಬಗಳು, ವಿಧಿ-ನಿಷೇಧಗಳು; ಭಾಷೆ, ಸಾಹಿತ್ಯ ಇತ್ಯಾದಿ ವಿಚಾರಗಳನ್ನು ಪ್ರಸ್ತಾಪ ಮಾಡಲಾಗಿದೆ. ಇವೆಲ್ಲವೂ ಪ್ರತ್ಯೇಕ ನಿಬಂಧಗಳಿಗೆ ಆಕರವಾಗಬಹುದಾದುವೇ. ಸಂಕೇತಿಗಳ ಸಾಂಸ್ಕೃತಿಕ ವೈಶಿಷ್ಟ್ಯವನ್ನು ಗುರುತಿಸುವುದನ್ನೇ ಪ್ರಧಾನ ಆಶಯವಾಗಿ ಇಟ್ಟುಕೊಂಡು, ಈ ಎಲ್ಲ ವೈವಿಧ್ಯಪೂರ್ಣ ಕ್ಷೇತ್ರಗಳನ್ನು ಅವಲೋಕಿಸಿದೆ. ಈ ಎಲ್ಲ ಕ್ಷೇತ್ರಗಳು, ಸಮುದಾಯದ ಬಹುಪಾಲು ವಿಶ್ವಸಾಮಾನ್ಯಗಳ ಅನುಸರಣೆಯ ನಿದರ್ಶನಗಳನ್ನೂ ಒದಗಿಸುತ್ತವೆ.

ಹಬ್ಬಗಳು, ಷೋಡಶಸಂಸ್ಕಾರಗಳು ಮತ್ತು ಭಾಷೆಯನ್ನು ಹೊರತುಪಡಿಸಿ ಉಳಿದ ವಿಚಾರಗಳು ಈ ನಿಬಂಧದಲ್ಲಿ ಮೊದಲ ಬಾರಿಗೆ ವಿಸ್ತಾರವಾದ ಅವಗಾಹನೆಗೆ ಒಳಗಾಗಿವೆ. ಇತರೆಡೆಗಳಲ್ಲಿ ಈಗಾಗಲೇ ಪ್ರಕಟಗೊಂಡಿರುವ ಹಬ್ಬ ಮತ್ತು ಷೋಡಶ ಸಂಸ್ಕಾರಗಳನ್ನು ಕುರಿತ ವಿವರಣಾತ್ಮಕ ಬರಹಗಳು; ಗಾದೆ, ಒಗಟು, ಹಾಡುಗಳು - ಪ್ರಸ್ತುತ ನಿಬಂಧದ ವಿಶ್ಲೇಷಣೆಗೆ ಆಕರಗಳಾಗಿ ಬಳಕೆಗೊಂಡಿವೆ. ಆ ಕಾರಣದಿಂದಾಗಿ ವಿವರಣಾತ್ಮಕ ನಿರೂಪಣೆಗಳನ್ನೂ, ಉಲ್ಲೇಖಗಳನ್ನೂ ಇಲ್ಲಿ ಹ್ರಸ್ವಗೊಳಿಸಿದೆ. ಸಂಕೇತಿಗಳ ಸಾಂಸ್ಕೃತಿಕ ಅನನ್ಯತೆಯನ್ನು ಪ್ರಕಟಿಸಲು ಅಗತ್ಯವಾದಷ್ಟು ವಿವರಗಳನ್ನು ಮಾತ್ರ, ಭಾಷೆಯನ್ನು ಕುರಿತಂತೆ ನಿರೂಪಿಸಿದೆ. ಆದರೆ ಆ ವಿವರಗಳೂ ಮೊದಲ ಬಾರಿಗೆ ಇಲ್ಲಿ ಕಾಣಿಸಿಕೊಂಡಿವೆ.

ಮುಂಬರುವ, ಇತರ ಸಮುದಾಯಗಳ ಸಮಗ್ರ ಸಾಂಸ್ಕೃತಿಕ ಅಧ್ಯಯನಗಳ ಹಿನ್ನೆಲೆಯಲ್ಲಿ, ಸಂಕೇತಿಗಳ ವೈಶಿಷ್ಟ್ಯಗಳು ಮತ್ತಷ್ಟು ಖಚಿತಗೊಳ್ಳಬಹುದಾಗಿದೆ. ಸಂಕೇತಿ ಮತ್ತು ಇತರ ಬ್ರಾಹ್ಮಣ ಸಮುದಾಯಗಳು; ದಕ್ಷಿಣದ ಸಂಕೇತಿಗಳು ಮತ್ತು ಕರ್ನಾಟಕದ ಸಂಕೇತಿಗಳು - ಮೊದಲಾದ ಇತರ ಪ್ರಮುಖ ಉಪಪಂಗಡಗಳ ತೌಲನಿಕ ಅಧ್ಯಯನಗಳ ಅಗತ್ಯ ಮತ್ತು ಸಾಧ್ಯತೆಗಳ ಹಿನ್ನೆಲೆಯಲ್ಲಿ, ಪ್ರಸ್ತುತ ನಿಬಂಧವು ತನ್ನ ವಿಶಾಲಹರಹಿನ ವಸ್ತುವನ್ನು ಯಾವ ವ್ಯಾಪ್ತಿಯಲ್ಲಿ ನಿರ್ವಹಿಸಿದೆ ಎಂಬುದೂ ವಿದಿತವಾಗುತ್ತದೆ. ಕನ್ನಡದಲ್ಲಿ, ಬ್ರಾಹ್ಮಣರ ಉಪಸಮುದಾಯವೊಂದನ್ನು ಕುರಿತ ಮೊದಲ ಸಮಗ್ರ ಅಧ್ಯಯನವೂ ಇದಾಗಿದೆ.

೨. 'ಸಂಕೇತಿ' ಸಮುದಾಯದ ಅಧ್ಯಯನದ ಇತಿಹಾಸ

ಒಂದು ಸಮುದಾಯವಾಗಿ ಸಂಕೇತಿಗಳ ಸಮಗ್ರ ಶಾಸ್ತ್ರೀಯ ಅಧ್ಯಯನವು[5] ಈವರೆಗೆ ನಡೆದಿಲ್ಲ. ಆದರೂ ಈವರೆಗೆ ನಡೆದ ಅಲ್ಪಸ್ವಲ್ಪ ಅಧ್ಯಯನದಲ್ಲಿ ಆಂಗ್ಲ ವಿದ್ಯಾಭ್ಯಾಸ ಮತ್ತು ನಗರೀಕರಣದಿಂದ ಆದ ಸಾಮಾಜಿಕ ಪರಿವರ್ತನೆಯ ಸಂಧಿಕಾಲದಲ್ಲಿ ನಡೆದ ವ್ಯಾಪಕ ಅಧ್ಯಯನದ ದೃಷ್ಟಿಯಿಂದ, ಇಂದಿಗೂ ಪ್ರಮುಖ ಆಕರ ಗ್ರಂಥಗಳಾಗಿ ಉಲ್ಲೇಖನೀಯವಾದವು, ಎಂ.ಕೇಶವಯ್ಯನವರು ಬರೆದ Life of Nacharamma (History of Her Migration) ಎಂಬ ಇಂಗ್ಲಿಷ್ ಗ್ರಂಥ (೧೯೩೬) ಹಾಗೂ ೧೯೩೮ರಲ್ಲಿ ಪ್ರಕಟವಾದ ಅದರ ಕನ್ನಡ ಆವೃತ್ತಿ ಮಾತ್ರ.[6] ಅಂಥ ಅಧ್ಯಯನದ ಮೊದಲ ಪ್ರಯತ್ನವೂ ಕೇಶವಯ್ಯನವರದೇ ಆಗಿದೆ. ಆದುದರಿಂದಲೇ, ಈ ಗ್ರಂಥಗಳ ಬಗೆಗೆ ವಿಸ್ತಾರವಾದ ಅವಲೋಕನವನ್ನು ಮೊದಲಿಗೆ ಮಾಡಿದೆ.

ಅ. ಎಂ.ಕೇಶವಯ್ಯ : ನಾಚಾರಮ್ಮ : ಮೌಲಿಕ ಆಕರ : ಸಮುದಾಯವು ಪಾರಂಪರಿಕ ವೈದಿಕಜೀವನದಿಂದ ಲೌಕಿಕತೆಯ ಕಡೆಗೆ ಪರಿವರ್ತನೆಗೊಳ್ಳತೊಡಗಿದ ಕಾಲವನ್ನು ಕ್ರಿ.ಶ. ಸುಮಾರು ೧೯೨೦ರಿಂದ ಗುರುತಿಸಬಹುದು. ವೈದಿಕ ಅಧ್ಯಯನ ವಿಧಾನವು

[5] ಜನಸಮುದಾಯಗಳ ಅಧ್ಯಯನಗಳು ಮತ್ತು ಕನ್ನಡದಲ್ಲಿ ಈ ಸಂಬಂಧದಲ್ಲಿ ನಡೆದಿರುವ ಅಧ್ಯಯನದ ಇತಿಹಾಸಕ್ಕೆ - ನೋಡಿ:

ಅ) *ಮಲೆನಾಡಿನ ಒಕ್ಕಲಿಗರು ಮತ್ತು ಅವರ ಜಾನಪದ,* ಪು.೩೮-೬೫

ಆ) *ಗೊಂಡರು: ಒಂದು ಸಾಂಸ್ಕೃತಿಕ ಅಧ್ಯಯನ,* ಪು.೯-೧೨

ಇ) *ದಕ್ಷಿಣ ಕನ್ನಡ ಜಿಲ್ಲೆಯ ಭೈರರು (ಸಾಹಿತ್ಯಿಕ-ಸಾಂಸ್ಕೃತಿಕ ಅಧ್ಯಯನ),* ಪಿಎಚ್.ಡಿ. ಪ್ರಬಂಧ, (ಡಾ) *ಪಾಂಡುರಂಗ ಡಿ.ಆರ್.,* ರಾಷ್ಟ್ರಕವಿ ಗೋವಿಂದ ಪೈ ಸಂಶೋಧನ ಕೇಂದ್ರ, ಉಡುಪಿ, ೧೯೯೦, ಪು.೧೨-೧೬.

[6] *ಶ್ರೀ ನಾಚಾರಮ್ಮನ ಜೀವನಚರಿತ್ರೆ (ಆಕೆಯ ಪ್ರವಾಸ); ಕೇಶವಯ್ಯ ಎಂ.,* ಶ್ರೀನಿವಾಸ್ ಎಲೆಕ್ಟ್ರಿಕ್ ಪ್ರೆಸ್, ಮೈಸೂರು.

ಗ್ರಂಥವನ್ನಾಧರಿಸದೆ ಪೂರ್ಣವಾಗಿ ಕಂಠಸ್ಥ ಪರಂಪರೆಯಿಂದ ಮುಂದುವರಿದುದು; ಚತು ತಪ್ಪದೆ ಪಾರಂಪರಿಕ ವಿದ್ಯೆಯನ್ನು ಯಥಾವತ್ತಾಗಿ ಉಳಿಸಿಕೊಂಡುದು; ವ್ಯವಸಾಯ ಒಂದನ್ನು ಬಿಟ್ಟರೆ ಪೂರ್ಣವಾಗಿ ವಿದ್ಯೆ, ಅನುಷ್ಠಾನಗಳಿಗೇ ತನ್ನನ್ನು ಮೀಸಲಿಟ್ಟುಕೊಂಡುದು - ಇಂಥ ಸನ್ನಿವೇಶದ ಗರ್ಭದಲ್ಲಿಯೇ ಪಾರಂಪರಿಕವಾಗಿ ಬಂದ ಐತಿಹ್ಯಗಳು, ಹೆಚ್ಚಿನ ಚರಿತ್ರಾಂಶಗಳನ್ನು ಬಹುಪಾಲು ನಿಖರವಾಗಿ ಹೊಂದಿರುವ ಸಾಧ್ಯತೆ ದೊಡ್ಡದು.[7] ಈ ದೃಷ್ಟಿಯಿಂದ ವೈದಿಕಬಾಹುಳ್ಯ ಮತ್ತು ದಟ್ಟ ಪಾರಂಪರಿಕ ಜೀವನದ ನಡುವೆ ಆದ ಕೇಶವಯ್ಯನವರ ಅಧ್ಯಯನವು ಹೆಚ್ಚು ಮೌಲಿಕವಾದುದು. ಇಂದಿಗೂ ದಕ್ಕುವ ಈ ಮೌಖಿಕ ಪರಂಪರೆಯು, ಕೇಶವಯ್ಯನವರಿಗೆ ಅರ್ಧಶತಮಾನದ ಹಿಂದೆ ವಿಪುಲವಾಗಿ ದೊರೆಯುವ ಅವಕಾಶವಿತ್ತು. ಅಲ್ಲದೆ, ಕೇಶವಯ್ಯನವರಿಗೆ, ವಕ್ತೃಗಳ ಬಳಿಯೇ ಇರುತ್ತಿದ್ದ ತಾಮ್ರಶಾಸನಗಳು ಮತ್ತಿತರ ಮೂಲದಾಖಲೆಗಳು ಸುಲಭವಾಗಿ ಲಭ್ಯವಾಗುತ್ತಿದ್ದವು.[8] ಅವರ ಗ್ರಂಥವು ಹೆಚ್ಚು ಉಪಯುಕ್ತವಾಗಿರಲು ಮತ್ತೊಂದು ಕಾರಣವೆಂದರೆ, ಅವರು ಕರ್ನಾಟಕ ಮತ್ತು ತಮಿಳುನಾಡಿನಲ್ಲಿ ನಡೆಸಿದ ವ್ಯಾಪಕ ಕ್ಷೇತ್ರಕಾರ್ಯ.[9]

ಕ್ಷೇತ್ರಕಾರ್ಯವು ಈಗಿನ ಜಾನಪದ ಅಧ್ಯಯನದ ಸಂದರ್ಭದಲ್ಲಿ ನಡೆಯುವಷ್ಟು ಶಾಸ್ತ್ರೀಯವಾಗಿಯೂ, ವ್ಯಾಪ್ತವಾಗಿಯೂ, ವೈವಿಧ್ಯಪೂರ್ಣವಾಗಿಯೂ ನಡೆಯದಿದ್ದರೂ, ಕೇಶವಯ್ಯನವರು ಮಾಡಿರುವ ಯತ್ನವು, ಶ್ರದ್ಧೆ, ಕುತೂಹಲ, ಯೋಜನಾಬದ್ಧತೆ, ಶ್ರಮಸಹಿಷ್ಣುತೆ ಮೊದಲಾದ ದೃಷ್ಟಿಯಿಂದ ಗಟ್ಟಿಯಾದುದು. ಆದುದರಿಂದಲೇ ಅವರು ಒದಗಿಸಿರುವ ಮಾಹಿತಿಗಳು ಮೌಲಿಕವಾಗಿಯೂ ಇವೆ. ಮರು ಅವಲೋಕನ ಮತ್ತು ಪುನರಾವರ್ತಿತ ನಿರಂತರತೆಯ ಲಕ್ಷಣವನ್ನು ಅವರ ಕ್ಷೇತ್ರಕಾರ್ಯದಲ್ಲಿ ಕಾಣಬಹುದು.[10] 'ಪೂವಾಡಿಪಾನೆ' ವ್ರತವನ್ನು ತಮ್ಮ ಅಧ್ಯಯನಕ್ಕಾಗಿಯೇ ಮಾಡಿಸಿ, ಗಮನಿಸಿ, ಅದರ ವಿವರಗಳನ್ನು ದಾಖಲಿಸಿರುವ ರೀತಿಯಲ್ಲಿ ಅವರ ಶ್ರದ್ಧೆ ಮತ್ತು ಶೋಧಗುಣ ವ್ಯಕ್ತವಾಗುತ್ತದೆ.[11]

ಲೇಖಕರೇ ಹೇಳಿರುವಂತೆ, ಅವರ ಉದ್ದೇಶವು - 1) ನಾಚಾರಮ್ಮನ ವಿಷಯದಲ್ಲಿ ಅರಿವು, ಗೌರವಾದರ, ಪೂಜ್ಯಭಾವವನ್ನು ಹುಟ್ಟಿಸುವುದು 2) ಕರ್ನಾಟಕ ಮತ್ತು ತಮಿಳುನಾಡಿನ ಸಂಕೇತಿಗಳಿಗೆ ಚಾರಿತ್ರಿಕ ಅರಿವು ಉಂಟುಮಾಡಿ ಅವರಲ್ಲಿ ಭ್ರಾತೃತ್ವಪ್ರಜ್ಞೆಯನ್ನು ಜಾಗೃತಗೊಳಿಸುವುದು. ಈ ಬಗೆಗೆ ತಮ್ಮ ಬರಹದ ಪ್ರಯತ್ನ ಒಂದು ಸಂಶೋಧನೆಯ ಕಾರ್ಯ ಎಂಬ ಪ್ರಜ್ಞೆ ಕೂಡ ಅವರಿಗೆ ಇರದುದು ಈ ಹೇಳಿಕೆಗಳ ಸಂದರ್ಭದಲ್ಲಿಯೇ ವ್ಯಕ್ತವಾಗುತ್ತದೆ.

---

7 *ನೀಲಗುಂದ ತಾಮ್ರಶಾಸನ, ಎಪಿಗ್ರಾಫಿಯಾ ಇಂಡಿಕಾ. ವಾ.XII*, ನಂ.೧೯, ನೀಲಗುಂದ ಪ್ಲೇಟ್ಸ್ ಆಫ್ ವಿಕ್ರಮಾದಿತ್ಯ VI, ೧೯೬೨, ಪು.೧೪೨-೧೪೫.
ಶಾಂತಿಗ್ರಾಮದ ಕೇಶವ ದೇವಾಲಯದ ಶಾಸನ (ಮೈಸೂರು ಗೆಜೆಟಿಯರ್, ಸಂ.೫, ಹಯವದನರಾವ್ ಸಿ., ೧೯೩೦, ಪುಟ.೬೮೦).
ಮತ್ತೂರು ತಾಮ್ರಶಾಸನ (ಇಸಿ ಶಿವಮೊಗ್ಗ ೨೬-ಶಿವಮೊಗ್ಗ ತಾಲ್ಲೂಕು ಅದೇ ಹೋಬಳಿ ಮತ್ತೂರು ಅಗ್ರಹಾರದಲ್ಲಿ ಪಟೇಲ್ ತಿರುಮಲಾವಧಾನಿಗಳಲ್ಲಿ ಇದ್ದ ತಾಮ್ರಶಾಸನ)- ಇವುಗಳ ವಿವರಗಳು ಸಂಕೇತಿಗಳ ಮೌಖಿಕ ಪರಂಪರೆಗೆ ಸಂವಾದಿಯಾಗಿರುವುದು ಇವರ ಮೌಖಿಕ ಪರಂಪರೆಯ ನಿಖರತೆ ಮತ್ತು ಚಾರಿತ್ರಿಕ ಮೌಲ್ಯಕ್ಕೆ ನೀಡಬಹುದಾದ ಕೆಲವು ನಿದರ್ಶನಗಳಾಗಿವೆ.

8 ಇನಾಂ ಅಬಾಲಿಷನ್, ಟೆನೆನ್ಸಿ ಆಕ್ಟ್ ಮತ್ತು ನಗರೀಕರಣದ ಪರಿಣಾಮದಿಂದಾಗಿ, ಇಂದು ಈ ದಾಖಲೆಗಳು ಅಷ್ಟೇ ಸುಲಭವಾಗಿ ಲಭ್ಯವಾಗುವುದಿಲ್ಲ. ಕೇಶವಯ್ಯನವರು ತಮ್ಮ ಗ್ರಂಥದಲ್ಲಿ ಈ ದಾಖಲೆಗಳ ಬಗೆಗೆ ಹೆಚ್ಚಿನ ಮಾಹಿತಿಗಳನ್ನೊದಗಿಸಿದ್ದರೆ, ಅವರ ಗ್ರಂಥದ ಮೌಲ್ಯ ಇನ್ನೂ ಹೆಚ್ಚುತ್ತಿತ್ತು. ಅವರು ವಾರಸುದಾರರಿಗೆ ಹಿಂದಿರುಗಿಸಿದ ಮತ್ತೂರಿನ ತಾಮ್ರಶಾಸನವು ಈಗ ಶಿವಮೊಗ್ಗೆಯ ಪ್ರಾಚ್ಯವಸ್ತು ಇಲಾಖೆಯಲ್ಲಿದೆ. ಮರಿತಮ್ಮನಹಳ್ಳಿಯ ತಾಮ್ರಶಾಸನವು ಪಂಜುಗಳ್ಳರ ಕಾಟ ಅಥವಾ ದಾಯಾದಿ ಕಲಹದಿಂದ ನಷ್ಟವಾಗಿದೆ; ಮುದಲಾಪುರ, ಪೂಮಗಾಮೆ, ಕೃಷ್ಣಾಪುರ, ಹಂದನಹಾಲಿನ ತಾಮ್ರಶಾಸನಗಳ ಸುಳಿಹು ದೊರೆತಿಲ್ಲ; ಆದರೆ ಈ ಸಂಬಂಧದ ಇತರ ದಾಖಲೆಗಳಿವೆ.

9 ಕೇಶವಯ್ಯನವರು ವಕ್ತೃ ವಿವರಗಳನ್ನು ಶಾಸ್ತ್ರೀಯವಾಗಿ ಒದಗಿಸಿಲ್ಲ. ಆದರೆ ಗ್ರಂಥದಲ್ಲಿ ಅದರ ವಿವರಗಳು ದೊರೆಯುತ್ತವೆ. ಪ್ರಸ್ತುತ ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಅವರ ಕ್ಷೇತ್ರಕಾರ್ಯದ ವಿವರಗಳ ಪರಿಚಯವಾಯಿತು. ಪ್ರಕೃತ ಅಧ್ಯಯನಕ್ಕೆ ದೊರೆತ ಅನೇಕ ವಕ್ತೃಗಳು ಕೇಶವಯ್ಯನವರ ವಕ್ತೃಗಳ ವಂಶಸ್ಥರು.

10 *ಶ್ರೀ ನಾಚಾರಮ್ಮನ ಜೀವನಚರಿತ್ರೆ (ಆಕೆಯ ಪ್ರವಾಸ)*, ಪು.೩೯.

11 *Life of Nacharammma (History of Her Migration)*, p.75.

ಅವರ ಈ ಎರಡು ಗ್ರಂಥಗಳು (ಇಂಗ್ಲಿಷ್ ಮತ್ತು ಕನ್ನಡ) ಒಂದು ಇನ್ನೊಂದರ ಅನುವಾದವಲ್ಲ. ನಿರೂಪಣಾ ಕ್ರಮ ಮತ್ತು ವಿಷಯ ಸಂಗ್ರಹ ಒಂದೇ ಆದರೂ, ಎರಡೂ ಸ್ವತಂತ್ರವಾದ ಬರೆವಣಿಗೆಗಳು. ಇವೆರಡರ ಪ್ರಕಟಣೆಯ ನಡುವೆ ಎರಡು ವರ್ಷಗಳ ಅಂತರವಿದ್ದರೂ, ಕನ್ನಡ ಆವೃತ್ತಿಯಲ್ಲಿ ಯಾವ ಗಮನಾರ್ಹ ಸೇರ್ಪಡೆಯೂ ಕಾಣಿಸುವುದಿಲ್ಲ. ಬದಲಿಗೆ, ಮೊದಲು ಪ್ರಕಟವಾದ ಇಂಗ್ಲಿಷ್ ಆವೃತ್ತಿಯಲ್ಲಿ ಕೆಲವು ಸಂಗತಿಗಳಲ್ಲಿ ಹೆಚ್ಚಿನ ಸ್ಪಷ್ಟತೆ ಇದೆ. ಅಥೆನಿಯಂ ಉದ್ಧರಣ ಮತ್ತು ಮುಖ್ಯ ವ್ಯಕ್ತಿಗಳ ಹೆಚ್ಚಿನ ಪರಿಚಯ ಕೂಡ ಕನ್ನಡ ಆವೃತ್ತಿಯಲ್ಲಿ ಬಿಟ್ಟುಹೋಗಿದೆ.

ಈ ಗ್ರಂಥಗಳ ಸ್ವರೂಪವು ಅವರ ಉದ್ದೇಶಕ್ಕೆ ಅನುಗುಣವಾದುದು ಎನ್ನಬಹುದು.

1) ಕೇಶವಯ್ಯನವರು ತಮ್ಮ ಗ್ರಂಥದ ಬಹುಭಾಗವನ್ನು, ಕೆಲವು ವ್ಯಾಖ್ಯಾನ, ವಿವರಗಳಿಗಾಗಿ ವಿನಿಯೋಗಿಸಿದ್ದಾರೆ. ಚರಿತ್ರೆ ಎಂದರೇನು; ಚರಿತ್ರೆಯ ಪಾಶ್ಚಾತ್ಯ ಮತ್ತು ಪೌರ್ವಾತ್ಯ ದೃಷ್ಟಿ; ಹದಿನಾಲ್ಕನೆಯ ಶತಮಾನದ ಚಾರಿತ್ರಿಕ ಸ್ಥಿತಿಗತಿ; ಭಾರತದ ಪೂರ್ವಚರಿತ್ರೆ; ವಿಜಯನಗರ ಸಾಮ್ರಾಜ್ಯದ ಉದಯ ... ಮೊದಲಾದ ಉಪಶೀರ್ಷಿಕೆಗಳಲ್ಲಿ ಈ ವಿವರವು ಸಾಗುತ್ತದೆ. ಒಂದು ನಿರ್ದಿಷ್ಟ ಜನಸಮುದಾಯಕ್ಕೆ ಬರೆದ, ಪತ್ರರೂಪದ ಆತ್ಮೀಯ ಉಪನ್ಯಾಸದ ಲಕ್ಷಣವನ್ನು ಹೊಂದಿರುವ ಈ ಗ್ರಂಥದ ಉದ್ದೇಶಕ್ಕೆ ಇದು ಅನುಗುಣವಾಗಿದೆ ಎಂದು ಇದನ್ನು ಸಮರ್ಥಿಸುವಾಗಲೂ, ಲೇಖಕರಿಗೇ ಅದರ ಅನಗತ್ಯ ವಿಸ್ತಾರದ ಅರಿವಿರುವುದನ್ನು ಗಮನಿಸಬಹುದು.[12]

2) ಗ್ರಂಥದಲ್ಲಿ ಸಂಶೋಧಕ ಗುಣಗಳಿದ್ದರೂ, ಜನಸಮುದಾಯದಲ್ಲಿ ಅಭಿಮಾನ, ಐಕ್ಯವನ್ನುಂಟುಮಾಡುವ ಅವರ ಪ್ರಯತ್ನದಿಂದಾಗಿ ಭಾವುಕತೆ ಮತ್ತು ಆವೇಶಗಳು ಸಹಜವಾಗಿ ಇಣಿಕಿವೆ.

3) ಜ್ಯೋತಿಷ್ಮತೀತೈಲದ ಸಿಂಧುತ್ವದ ಬಗೆಗಿನ ಆಧುನಿಕ ತಿಳಿವಳಿಕೆ ಹೇಗಿದ್ದರೂ, ಜ್ಯೋತಿಷ್ಮತೀಕಲ್ಪ, ರಸರತ್ನಸಮುಚ್ಚಯಗಳಿಂದಲೂ ನಿಘಂಟುಗಳಿಂದಲೂ ಹೆಚ್ಚಿನ ವಿವರಗಳನ್ನೊದಗಿಸಿರುವುದು ಅವರ ಅಧ್ಯಯನ, ಪರಿಶ್ರಮಗಳಿಗೆ ಸಾಕ್ಷಿಯಾಗಿದೆ.

4) ತಮಗೂ ಹಿಂದೆ ಸಂಕೇತಿಗಳ ಬಗೆಗೆ ಆನುಷಂಗಿಕವಾಗಿ ಪ್ರಕಟವಾಗಿದ್ದ ಸಂಗತಿಗಳನ್ನು ಒಂದೆಡೆ ಕೂಡಿಸಿಕೊಟ್ಟಿರುವದು ಈ ಗ್ರಂಥದ ಮುಖ್ಯ ಅಂಶಗಳಲ್ಲೊಂದು. ಲಿಂಡ್ಸೆಯ ಜನಗಣತಿಯ ವರದಿಯಿಂದ ಮೊದಲುಗೊಂಡು (೧೮೨೧) ಬಂದ ಅನೇಕ ಆಕರಗಳಲ್ಲಿ ಸಂಕೇತಿಗಳ ಗುಣ, ಸ್ವಭಾವ, ವಿದ್ಯೆ, ದುಡಿಮೆ, ಉಪಪಂಗಡಗಳು, ಭಾಷೆ, ಮೂಲನೆಲೆ, ವಲಸೆಯ ಕಾರಣ, ಕಾಲ, ಜನಸಂಖ್ಯೆ ... ಇವುಗಳನ್ನು ಕುರಿತ ಅತಿ ಸಂಕ್ಷಿಪ್ತ ಉಲ್ಲೇಖಗಳಿವೆ. ಕೇಶವಯ್ಯನವರಿಗೂ ಹಿಂದಿನ, ಈ ಆಕರಗಳಲ್ಲಿನ[13] ಬಹುಪಾಲು ಸಂಗತಿಗಳು ಪುನರಾವರ್ತನೆಗಳು. ಅವರು ಈ ವರದಿಗಳ ಬಹುಪಾಲು ಅಂಶಗಳೊಡನೆ ಸಹಮತ ಹೊಂದಿದ್ದಾರೆ. ಬೆಟ್ಟದಪುರ, ಕೌಶಿಕ ಮೊದಲಾದ ಪಂಗಡಗಳ ಆಚಾರ ಸಂಪ್ರದಾಯಗಳ ಬಗೆಗೆ ಯಾವ ಉಲ್ಲೇಖವನ್ನೂ ಹಿಂದಿನವರಂತೆ ಕೇಶವಯ್ಯನವರೂ ಮಾಡುವುದಿಲ್ಲ.

ಇಷ್ಟರ ನಡುವೆ, ಕೇಶವಯ್ಯನವರ ಕಾಣಿಕೆ ಯಾರೂ ಉಪೇಕ್ಷಿಸಲಾಗದಂಥದು: ಸಂಕೇತಿಗಳ ವಲಸೆಯ ಕಾರಣ, ಮಾರ್ಗ, ಕಾಲ, ಸಂಖ್ಯೆ, ರೀತಿ, ಕಷ್ಟ ಅವರ ಗಮನವನ್ನು ಸೆಳೆದಿವೆ. ಏಳುನೂರು-ಎಂಟುನೂರು (ಕೌಶಿಕ ಸಂಕೇತಿ), ಮುನ್ನೂರು (ಬೆಟ್ಟದಪುರ ಸಂಕೇತಿ), ನೂರೈವತ್ತು (ಹಿರಿಯಂಗಳ ಸಂಕೇತಿ), ಅರವತ್ತು (ಮಲೆನಾಡು ಸಂಕೇತಿ) ಕುಟುಂಬಗಳು ನಾಲ್ಕು ತಂಡಗಳಲ್ಲಿ ಸುಮಾರು ಹದಿನಾಲ್ಕನೆಯ ಶತಮಾನದ ಮಧ್ಯಭಾಗದ ಹೊತ್ತಿಗೆ ಬಂದವೆಂಬುದು ಅವರ ಹೊಸ ತೀರ್ಮಾನ. ನಾಚಾರಮ್ಮನೇ ವಲಸೆಯ ಪ್ರೇರಕಳೆಂಬುದನ್ನು ಅವರು ಒಪ್ಪಿ, ಆಕೆಗೆ ದೇವತೆಯ ಸ್ಥಾನವನ್ನೇ ಕಲ್ಪಿಸಿದ್ದಾರೆ. ನಾಚಾರಮ್ಮನ ಪೂಜ್ಯತೆಯ ಬಗ್ಗೆ ಬಿ.ಎಲ್.ರೈಸರೂ ಉಲ್ಲೇಖಿಸಿದ್ದಾರೆ. ಆದರೆ ಕೇಶವಯ್ಯನವರು ನಿರೂಪಿಸುವ ನಾಚಾರಮ್ಮನ ಐತಿಹ್ಯವು ಉಳಿದೆಲ್ಲ ವಿಷಯಗಳಲ್ಲಿ ರೈಸರ ಐತಿಹ್ಯಕ್ಕೆ

12 ಪೂರ್ವೋಕ್ತ: ಪು.೩೮ (ಗ್ರಂಥದ ೯೯ ಪುಟಗಳಲ್ಲಿ ಸುಮಾರು ೩೫ ಪುಟಗಳು ಇಂಥ ವಿವರಗಳಿಂದ ಕೂಡಿವೆ.)

13 ಅದೇ: ಪು.೩-೮.

ಸಮಾನವಾಗಿದ್ದರೂ, ಶಾಪದ ವಿವರದಲ್ಲಿ ಭಿನ್ನವಾಗಿದೆ. ಉಳಿದೆಲ್ಲರಲ್ಲಿನ ವಿವರಗಳಿಗಿಂತ ಹೆಚ್ಚಿನ ಮಾಹಿತಿ ದೊರೆಯುವುದು ಕೇಶವಯ್ಯನವರಲ್ಲಿಯೇ. ಆದರೆ ಅವರ ಅಧ್ಯಯನದ ವ್ಯಾಪ್ತಿಯೇ ಬಹಳ ಮಿತವಾದುದಾಗಿದೆ. ಇಷ್ಟಾದರೂ, ಗುಣ ಮತ್ತು ಗಾತ್ರಗಳೆರಡರ ದೃಷ್ಟಿಯಿಂದಲೂ ಕೇಶವಯ್ಯನವರ ಕೃತಿಗಳು ಇಂದಿಗೂ ಬಹುಮೌಲಿಕವಾಗಿ ಉಳಿದಿವೆ.

ಆ. ಅಲಭ್ಯ ಮತ್ತು ಅಸಮಗ್ರ ದಾಖಲೆಗಳು : ಕೆಲವು ಆನುಷಂಗಿಕ ವಸ್ತುಗಳನ್ನು ಇಲ್ಲಿ ಗುರುತಿಸಬಹುದು: ಕೇಶವಯ್ಯನವರ ಸಮಕಾಲೀನರೇ ಆಗಿದ್ದ ಗಂಧದಕೋಠಿ ನರಸಿಂಹಯ್ಯ ಅವರು ಬರೆದಿದ್ದ, ಸಂಕೇತಿಗಳನ್ನು ಕುರಿತ ಪುಸ್ತಕವು ಕೂಡ, ಕ್ಷೇತ್ರಕಾರ್ಯವನ್ನು ವ್ಯಾಪಕವಾಗಿ ಆಧರಿಸಿತ್ತು ಎಂಬುದು ಅದರ ಹಸ್ತಪ್ರತಿಯನ್ನು ಅವಲೋಕಿಸಿದ್ದವರ[14] ಅಭಿಪ್ರಾಯವಾಗಿದೆ. ಗಾತ್ರದ ದೃಷ್ಟಿಯಿಂದಲೂ ದೊಡ್ಡದಾಗಿದ್ದ ಆ ಪುಸ್ತಕವು ಮುದ್ರಣಗೊಳ್ಳಲಿಲ್ಲ ಮತ್ತು, ಹಸ್ತಪ್ರತಿಯೂ ನಷ್ಟವಾಗಿರುವುದರಿಂದ ಅದರ ಸ್ವರೂಪವೂ ಈಗ ತಿಳಿಯುವಂತಿಲ್ಲ. ಸಂಕೇತಿಗಳ ವಲಸೆಯ ವಿವರ, ನಾಚಾರಮ್ಮನ ವಿವರವಾದ ಚರಿತ್ರೆ ಮತ್ತು ಕೆಲವು ಐತಿಹ್ಯಗಳೂ ಅದರಲ್ಲಿ ಸೇರಿದ್ದವೆಂದು ವಕ್ತೃಗಳಿಂದಲೇ ತಿಳಿದುಬರುತ್ತದೆ. ದಕ್ಷಿಣದ ತಮಿಳು ಪಂಡಿತ ಮತ್ತು ಹರಿಕಥಾ ವಿದ್ವಾಂಸ ಇ.ವಿ.ನಾರಾಯಣ ಭಾಗವತರ್ ಎಂಬುವವರು ಬರೆದ 'ಸಂಕೇತಿ ಜಾತಿ' ಎಂಬ ಮುದ್ರಿತ ಪುಸ್ತಕವೂ ಈಗ ಅಲಭ್ಯವಾಗಿದೆ.

ಅಗ್ರಹಾರದ ಹೆಬ್ಬಾರವರ ವಂಶಚರಿತ್ರೆ ಕೂಡ, ಹಸ್ತಪ್ರತಿಯ ರೂಪದಲ್ಲಿದ್ದುದು, ಸುಮಾರು ಇಪ್ಪತ್ತೈದು ವರ್ಷಗಳ ಹಿಂದೆ ನಷ್ಟವಾಗಿದೆ. ಮೂರು ತಲೆಮಾರುಗಳ ಹಿಂದೆ ಬರೆದಿಟ್ಟಿದ್ದ ಅದರಲ್ಲಿನ ಸಂಗತಿಗಳನ್ನು, ಆ ವಂಶಸ್ಥರಿಂದ[15] ಸಂಗ್ರಹಿಸುವುದು ಸಾಧ್ಯವಾಯಿತು. ಅದು ಮುಖ್ಯವಾಗಿ ಆ ವಂಶದವರ ಅಧಿಕಾರ, ಸಂಪತ್ತು, ವಲಸೆ ಮತ್ತು ಅದೆಲ್ಲಕ್ಕಿಂತ ಹೆಚ್ಚಾಗಿ ಜ್ಯೋತಿಷ ವಿದ್ಯಾನೈಪುಣ್ಯವನ್ನು ತಿಳಿಸುವಂಥದು. ಗೆದ್ದಲು ಹಿಡಿದು ಈಚೆಗೆ ನಷ್ಟವಾದ ಹಾನಗಲ್ಲಿನ ಮೇಣಗಬಟಗಳಲ್ಲಿ,[16] ಮರಿತಮ್ಮನಹಳ್ಳಿಯಿಂದ ಹಾನಗಲ್ಲಿಗೆ ವಲಸೆ ಬಂದ ಕಾಲ, ಅಲ್ಲಿ ಈಗಲೂ ಇರುವ ತೊಟ್ಟಿಮನೆಯನ್ನು ಕಟ್ಟಿದ ರೀತಿ ಮೊದಲಾದ ವಿವರಗಳಿದ್ದವು. ಹೊಳೇನರಸೀಪುರದ ಪಾಳೆಯಗಾರರಲ್ಲಿ ಮಂತ್ರಿಗಳೂ ಸೇನಾಧಿಪತಿಗಳೂ ಆಗಿದ್ದರೆಂದು ಹೇಳಲಾಗುವ ಸಂಕೇತಿಗಳ ವಂಶಸ್ಥರ ಮನೆಗಳಲ್ಲಿ ಹಾಗೂ ಹೈದರ್, ಟಿಪ್ಪು, ಮೈಸೂರು ಒಡೆಯರಲ್ಲಿ ಸೇವೆಸಲ್ಲಿಸುತ್ತಿದ್ದವರ ವಂಶಸ್ಥರ ಮನೆಗಳಲ್ಲಿ ಕತ್ತಿ ಗುರಾಣಿ ಮೊದಲಾದ ಆಯುಧಗಳೂ ಸೇರಿದಂತೆ ಕೆಲವು ದಾಖಲೆಗಳು ನೋಡಲು ದೊರೆತವು.

ಇ. ಆಧುನಿಕಕಾಲದ-ಬಿಡಿ ಪ್ರಯತ್ನಗಳು : ಆಧುನಿಕಕಾಲದ ಪ್ರಯತ್ನಗಳಲ್ಲಿ ಸಂಶೋಧನೆಯ ದೃಷ್ಟಿಯಿಂದ ಮುಖ್ಯವಾದಂಥವು ಭಾಷಾಶಾಸ್ತ್ರಕ್ಕೆ ಸಂಬಂಧಿಸಿದವು. ಎಚ್.ಎಸ್.ಅನಂತನಾರಾಯಣ, ಕೆ.ಕೆಂಪೇಗೌಡ, ಕೆ.ನಾಗರಾಜ, ಸಿ.ಎಸ್.ರಾಮಚಂದ್ರ, ಕಿಕ್ಕೇರಿ ನಾರಾಯಣ, ಚಿ.ನಾ.ಕೇಶವಮೂರ್ತಿ ಅವರ ಲೇಖನಗಳು ಸಂಕೇತಿ ಭಾಷೆಗೆ ಸಂಬಂಧಿಸಿದಂತೆ ಬಂದಿವೆ. ಅವೆಲ್ಲವೂ, ಸಂಕೇತಿ ಭಾಷೆಯ ಅಧ್ಯಯನವನ್ನು ವಿವಿಧ ಆಯಾಮಗಳಿಂದ ಮಾಡಿವೆ. ಮೈಸೂರು ವಿಶ್ವವಿದ್ಯಾನಿಲಯಕ್ಕೆ ಒಪ್ಪಿಸಿದ ಎರಡು ಕಿರುಪ್ರಬಂಧಗಳೂ (ಡಿಸರ್ಟೇಷನ್ಸ್) ಈ ಸಂಬಂಧದಲ್ಲಿ ಇವೆ. ಆದರೆ ಸಂಕೇತಿ ಭಾಷೆಯ ಪ್ರಾದೇಶಿಕ ಭಿನ್ನತೆಗಳನ್ನು ಗಮನಕ್ಕೆ ತಂದುಕೊಂಡು ಮಾಡಬಹುದಾದ ಸಮಗ್ರ ಅಧ್ಯಯನಕ್ಕೆ ಅವಕಾಶವಿದ್ದೇ ಇದೆ.

ಸಂಕೇತಿಗಳ ಬಳಕೆಯ ಜನಪದಗೀತೆಗಳೂ, ಗಾದೆಗಳೂ ಪ್ರಕಟಗೊಂಡಿದ್ದರೂ, ಹಾಡುಗಳ ಬಗೆಗಾಗಲಿ ಅವರ ಜನಪದ ಸಾಹಿತ್ಯದ

---

14 *ನಾರಣಪ್ಪ ಬಿ.ಎಸ್*, ೯೦, ನಿವೃತ್ತ ಅಧ್ಯಾಪಕರು, ಬೆಂಗಳೂರು.
ಕೇಶವ (ಗೋವಿಂದ) ಉಪಾಧ್ಯಾಯ, ೭೫, ಪುರೋಹಿತರು, ಬಸವಪಟ್ಟಣ, ಹಾಸನ ಜಿಲ್ಲೆ.
ಗುಂಡೂರಾಮಯ್ಯ, ೭೦, ವ್ಯವಸಾಯಗಾರರು, ಮೊಸಳೆ, ಹಾಸನ ಜಿಲ್ಲೆ.
ವೈ.ಎನ್.ಲಕ್ಷ್ಮೀನಾರಾಯಣ (ನರಸಿಂಹಯ್ಯನವರ ಮಗ), ೭೦, ನಿವೃತ್ತ ಅಭಿಯಂತರು, ಬೆಂಗಳೂರು.
ವೆಂಕಟಲಕ್ಷ್ಮಮ್ಮ, ೮೦, ಗೃಹಿಣಿ, ಎಳ್ಳೇಶಪುರ, ಹಾಸನ ಜಿಲ್ಲೆ.
ಕೃಷ್ಣಪ್ಪ, ೮೯, ಮಾಜಿ ಶಾನುಭೋಗರು, ಅಗ್ರಹಾರ, ಅರಕಲಗೂಡು ತಾಲ್ಲೂಕು, ಹಾಸನ ಜಿಲ್ಲೆ.

15 *ಕೃಷ್ಣಪ್ಪ*, ೮೯, ಮಾಜಿ ಶಾನುಭೋಗರು, ಅಗ್ರಹಾರ, ಅರಕಲಗೂಡು ತಾಲ್ಲೂಕು, ಹಾಸನ ಜಿಲ್ಲೆ.

16 *ನಾರಾಯಣರಾವ್ (ಗುಂಡಪ್ಪ)*, ೮೦, ಜಮೀನುದಾರರು, ಹಾನಗಲ್ಲು, ಅರಕಲಗೂಡು ತಾಲ್ಲೂಕು, ಹಾಸನ ಜಿಲ್ಲೆ.

ಬಗೆಗೆ ಒಟ್ಟಾಗಿಯಾಗಲಿ ಅಧ್ಯಯನಗಳು ನಡೆದಿಲ್ಲ.

ಸಮುದಾಯದ ಬಗೆಗಿನ ಇತರ ಸಂಶೋಧನ ಲೇಖನಗಳಲ್ಲಿ, ತೀರ್ಮಾನಗಳ ದೃಷ್ಟಿಯಿಂದ ಎರಡು ಮುಖ್ಯವಾದವು 1) ಎಚ್.ಆರ್.ಕೃಷ್ಣಮೂರ್ತಿ ಅವರು, "ಸಂಕೇತಿ ಇತಿಹಾಸದ ಮೇಲೆ ಹೊಸ ಬೆಳಕು" ಎಂಬ ತಮ್ಮ ಲೇಖನದಲ್ಲಿ ಸಂಕೇತಿಗಳ ವಲಸೆಯ ಕಾಲವು ಸುಮಾರು ಹದಿನಾಲ್ಕನೆಯ ಶತಮಾನದ ಮಧ್ಯಭಾಗವೆಂದು ಎಂ.ಕೇಶವಯ್ಯನವರು ಮಾಡಿರುವ ತೀರ್ಮಾನವನ್ನು ಪರಿಷ್ಕರಿಸಿ, ಆ ಕಾಲವನ್ನು ಕ್ರಿ.ಶ.೧೧೨೦ ಎಂದು ನಿರ್ಣಯಿಸಿದ್ದಾರೆ.[17] 2) ಕೆ.ಎಸ್.ಕೇಶವಮೂರ್ತಿ ಅವರು, "ಸಂಕೇತಿಗಳು ಯಾರು?" ಎಂಬ ತಮ್ಮ ಲೇಖನದಲ್ಲಿ ಸಂಕೇತಿ ಪದದ ನಿಷ್ಪತ್ತಿಯು 'ಸಂಕೇತಂ' ವ್ಯವಸ್ಥೆಯಲ್ಲಿದೆ ಎಂಬ ಗಂಭೀರ ಚರ್ಚೆ ಮಾಡಿದ್ದಾರೆ.[18]

ಪುಸ್ತಕರೂಪದಲ್ಲಿ ಬಂದ ಪ್ರಚಾರ ಗ್ರಂಥಮಾಲೆಯೊಂದರಲ್ಲಿನ, ಎರಡು ಲೇಖನಗಳನ್ನು[19] ಇಲ್ಲಿ ಗಮನಿಸುವುದು ಯುಕ್ತವಾದುದು. 'ಜಾಗೃತಿ' ಎಂಬ ಶಿರೋನಾಮೆಯಲ್ಲಿ ಬರೆದ ಸಾಮಾಜಿಕ ವಿಮರ್ಶೆ ಅವುಗಳಲ್ಲಿ ಒಂದು. 1) ಶೈಕ್ಷಣಿಕ ಮತ್ತು ಆರ್ಥಿಕ ಸಮಸ್ಯೆಗಳು - ಕಾರಣ ಮತ್ತು ಪರಿಹಾರೋಪಾಯ. 2) ವೈವಾಹಿಕ ಸಮಸ್ಯೆಗಳು - ಸರಳ ವಿವಾಹ ಪದ್ಧತಿ (ಸಾಮೂಹಿಕ ಉಪನಯನ, ವಿವಾಹ) ವಿಚಿತ್ರ ವ್ಯವಹಾರಗಳು, ನಿವಾರಣೋಪಾಯ. 3) ಅಂತರ್ಜಾತೀಯ ವಿವಾಹ. 4) ಸಗೋತ್ರವಿವಾಹ - ಈ ವಿವರಗಳೇ, ಲೇಖನದ ವ್ಯಾಪ್ತಿ ಮತ್ತು ಧೋರಣೆಯ ರೂಪರೇಖೆಯನ್ನೊದಗಿಸುತ್ತವೆ. ಇಲ್ಲಿನ ಅಭಿಪ್ರಾಯಗಳು ಮತ್ತು ಧೋರಣೆಯ ಬಗ್ಗೆ ಮತಭೇದಗಳಿರಬಹುದಾದರೂ, ಈ ಲೇಖನವು ಸಮುದಾಯದ ಆಚರಣೆಗಳ ಪರಿಚಯವನ್ನೂ, ಅದರ ಸುಧಾರಣೆಯ ಕಳಕಳಿಯನ್ನೂ ಮೆರೆಯುತ್ತದೆ ಎಂಬುದು ಮುಖ್ಯವಾಗಿದೆ. ಇಲ್ಲಿನ ಮತ್ತೊಂದು ಲೇಖನವು ಸಂಕೇತಿಗಳ ಐತಿಹಾಸಿಕ ಸಮೀಕ್ಷೆಯನ್ನು, 'ಮೂಲ ನಿವಾಸಸ್ಥಾನ', 'ಸಂಕೇತಿ ಶಬ್ದ ನಿಷ್ಪತ್ತಿ', 'ಪಂಗಡಗಳು', 'ಇತರ ಅಭಿಪ್ರಾಯಗಳು' ಎಂಬ ಉಪಶೀರ್ಷಿಕೆಗಳಲ್ಲಿ ಮಾಡುವಂಥದು. ಒಂದು ಸಮುದಾಯದ ಐತಿಹಾಸಿಕ ಸಮೀಕ್ಷೆ ಮಾಡಹೊರಟಾಗ, ಗ್ರಂಥಗಳ, ಕ್ಷೇತ್ರಕಾರ್ಯದ, ಪ್ರತ್ಯಕ್ಷ ಪರಿಚಯದ, ಆಧಾರವಿಲ್ಲದ ಅಭಿಪ್ರಾಯಗಳು ಹೇಗೆ ಕೇವಲ ಕಲ್ಪನೆಗಳೂ ಕುತರ್ಕಗಳೂ ಆಗಿಬಿಡುತ್ತವೆಂಬುದಕ್ಕೆ, ಈ ಲೇಖನ ಸಾಕ್ಷಿಯಾಗಿದೆ. ಒಂದು ಸಮುದಾಯದ ಮುಖ್ಯ ನೆಲೆಗಳಾದ ಹಳ್ಳಿಗಳಲ್ಲಿನ ಗಾಢ ಜೀವನಾನುಭವವಿಲ್ಲದೆ ಪಟ್ಟಣಗಳಲ್ಲಿಯೇ ಕುಳಿತು ವ್ಯಕ್ತಪಡಿಸುವ ಅಭಿಪ್ರಾಯಗಳು ವಾಸ್ತವತೆಗೆ ಘೋರ ಅಪಚಾರ ಮಾಡುತ್ತವೆ. ಇಂಥ ಅಪಚಾರವೇ ಈ ಲೇಖನದ ತರ್ಕ ಮತ್ತು ಧೋರಣೆಗಳಲ್ಲಿ ಉದ್ದಕ್ಕೂ ವ್ಯಕ್ತವಾಗುವಂಥದು.

ಈ. ಪತ್ರಿಕೆಗಳು : 'ಬೆಟ್ಟದಪುರ ಸಂಕೇತಿವಾಣಿ', 'ಸಂಕೇತಿ ಸತ್ಯಕಾಮ' ಎಂಬ, ಸಂಕೇತಿಗಳನ್ನೇ ಉದ್ದೇಶಿಸಿದ ತ್ರೈಮಾಸಿಕ, ಮಾಸಿಕ ಪತ್ರಿಕೆಗಳು; ಬೆಟ್ಟದಪುರ ಸಂಕೇತಿವಾರ್ತಾ, ಬೆಟ್ಟದಪುರ ಹಾಗೂ ಕೌಶಿಕ ಸಂಕೇತಿ ಸಂಘಗಳು ಆಗಾಗ ಪ್ರಕಟಿಸಿದ ಸ್ಮರಣಸಂಚಿಕೆಗಳು; ಕನ್ನಡ, ತಮಿಳು, ಇಂಗ್ಲಿಷ್ ಪತ್ರಿಕೆಗಳಲ್ಲಿ ಪ್ರಕಟವಾದ ಇತರ ಬಿಡಿ ಲೇಖನಗಳು, ಸಂಕೇತಿ ಸಮುದಾಯದ ಪರಿಚಯಕ್ಕೆ ನೆರವಾಗಿವೆ. ಇವುಗಳಲ್ಲಿ,

1) ಸಮುದಾಯದ ಸಂಘಟನೆಗೆ ಪೋಷಕವಾದ ಲೇಖನಗಳು.
2) ಅಭಿಮಾನಪ್ರದ ವ್ಯಕ್ತಿಚಿತ್ರಗಳು.
3) ಐತಿಹ್ಯಗಳು; ಸಮುದಾಯದ ಇತಿಹಾಸದ ಪರಿಚಯಾತ್ಮಕ ಲೇಖನಗಳು.
4) ಜನಾಭಿಪ್ರಾಯ, ಪ್ರತಿಕ್ರಿಯೆಗಳು.

---

[17] *ಸಂಕೇತಿ ಸತ್ಯಕಾಮ*, ಮಾರ್ಚ್-ಏಪ್ರಿಲ್, ಸಂಪುಟ-೨, ಸಂಚಿಕೆ ೫-೬, ಸಂ.ರಾಜಾರಾಮಮೂರ್ತಿ; ೧೯೭೬, ಪು.೧೭-೨೩.

[18] *ಸಂಕೇತಿ ಸತ್ಯಕಾಮ*, ಸಂಪುಟ-೧, ಸಂಚಿಕೆ ೨-೩,ಸಂ.ರಾಜಾರಾಮಮೂರ್ತಿ; ೧೯೭೮, ಪು.೧೫-೧೭.

[19] *ಪ್ರಚಾರ ಗ್ರಂಥಮಾಲೆ-೪, 'ಜಾಗೃತಿ', ನಾಗಲಕ್ಷ್ಮಮ್ಮ*, ಪು.೧೯-೩೨, ಸಂಕೇತಿ ಐತಿಹಾಸಿಕ ಸಮೀಕ್ಷೆ, ಶ್ರೀಕಂಠಯ್ಯ ಬಿ.ಎನ್., ಪು.೩೩-೪೮; ಸಂಕೇತಿ ಸಾಂಸ್ಕೃತಿಕ ಪ್ರಕಾಶನ, ಜಯನಗರ, ಬೆಂಗಳೂರು, ೧೯೮೦.

5) ಸಮುದಾಯದ ವಿಶಿಷ್ಟ ಜನಜೀವನದಿಂದ ಆರಿಸಿಕೊಂಡ ವಸ್ತುವಿನ ಸುತ್ತ ಹೆಣೆದ ಚಿಕಿತ್ಸಕ ಕಥೆಗಳು.
6) ಮುಂದಿನ ಬೆಳವಣಿಗೆಯ ಸಲಹೆ ಸೂಚನೆಗಳು.
7) ಜನಜೀವನದ ಪರಿಚಯ.
8) ಧಾರ್ಮಿಕ ಜೀವನ ಪರಂಪರೆಯ ಪರಿಚಯ; ಮಂತ್ರಗಳು ಸೇರಿವೆ.

ಆಗಾಗ ಸಂಶೋಧನಾತ್ಮಕ ಲೇಖನಗಳೂ ಬಂದಿವೆ.

ಊ. ಪರಿಚಯಾತ್ಮಕ ಪ್ರಯತ್ನ : ಸಂಕೇತಿಗಳ ಸಂಪ್ರದಾಯ, ಇತಿಹಾಸ, ವಿಧಿ-ನಿಷೇಧ ಮತ್ತು ಭಾಷೆಯ ವಿವರಣಾತ್ಮಕ ಪರಿಚಯ ನೀಡುವ ಉದ್ದೇಶದಿಂದ ಹೊರಟ ಸಿ.ಎಸ್.ರಾಮಚಂದ್ರ ಅವರ ಕೃತಿ ಈಚಿನದು. ಸಂಸ್ಕೃತಿ ಮತ್ತು ಭಾಷೆಗೆ ಒತ್ತುಕೊಟ್ಟ ಈ ಗ್ರಂಥವು[20] ಸಂಕೇತಿ ಜಾನಪದದ ಎಲ್ಲ ಮುಖಗಳನ್ನೂ ಪರಿಚಯಿಸುವುದಿಲ್ಲ ಎಂಬುದು ಸ್ಪಷ್ಟವಿದೆ. ಸ್ವತಃ ಭಾಷಾಶಾಸ್ತ್ರಜ್ಞರಾದ ರಾಮಚಂದ್ರ ಅವರು, ಸಂಕೇತಿ ಭಾಷೆಯು ಕನ್ನಡದ ಸಾಮಾಜಿಕ ಉಪಭಾಷೆ ಎಂದು ಮೊದಲಬಾರಿಗೆ ಹೇಳಿದ್ದಾರೆ. 'ಸಂಕೇತಿ' ಗಾದೆಗಳು, ವಿಧಿ-ನಿಷೇಧಗಳು, ಹಾಡುಗಳು, ಕುಲದೈವ, ಹಬ್ಬ, ಜಾತ್ರೆಗಳು ಮೊದಲಬಾರಿ ಇಲ್ಲಿ ನಿರೂಪಣೆಗೊಂಡಿವೆ. ಉಳಿದ ಸಾಂಸ್ಕೃತಿಕ ಸಂಗತಿಗಳು ಬೇರೆಡೆ ಅಲ್ಲಲ್ಲಿ ದಾಖಲಾಗಿದ್ದರೂ, ಅವನ್ನು ಕ್ರಮಬದ್ಧವಾಗಿ ಮತ್ತು ವಿಸ್ತಾರವಾಗಿ ವಿವರಿಸುವ ಯತ್ನವನ್ನು ಇಲ್ಲಿ ಮಾಡಲಾಗಿದೆ. 'ಸಂಕೇತಿ' ಪದದ ವ್ಯುತ್ಪತ್ತಿ ಮತ್ತು ಅರ್ಥ, ಅಂಥ ಒಂದು ವಿಶೇಷ ಪ್ರಯತ್ನ. ಶಾಸ್ತ್ರೀಯ ವಿವೇಚನೆಯ ಸಂದರ್ಭದಲ್ಲಿ 'ಜನಾಂಗ' ಎಂಬ ಮಾತು 'ರೇಸ್' ಎಂಬ ಪದಕ್ಕೆ ಸಂವಾದಿಯಾಗಿ ಬಳಕೆಯಾಗುತ್ತಿದ್ದರೂ, ಲೇಖಕರು 'ಕಮ್ಯುನಿಟಿ' ಎಂಬ ಅರ್ಥದಲ್ಲಿ ಅದನ್ನು ಬಳಸಿಕೊಂಡಿದ್ದಾರೆ. "ಸಂಕೇತಿಗಳು ಕೊಡಗಿನ ಮಾರ್ಗವಾಗಿ ಕರ್ನಾಟಕವನ್ನು ಪ್ರವೇಶಿದರು"; "ಇವರು ಶೈವ ಸ್ಮಾರ್ತ ದ್ರಾವಿಡರು" - ಇಂಥ ಒಂದೆರಡು (ಚರ್ಚಾಸ್ಪದ) ಸಂಗತಿಗಳು ಮೊದಲಬಾರಿಗೆ ಇಲ್ಲಿ ಕಾಣಿಸಿಕೊಂಡಿವೆ. "ಸಮಗ್ರ ಸಂಕೇತಿಗಳ ಬದುಕನ್ನು ಮತ್ತು ಭಾಷೆಯನ್ನು ಒಳಗೊಂಡಂತೆ, ವಿಶೇಷವಾಗಿ ಕೌಶಿಕ ಸಂಕೇತಿಗಳ ಸಂಪ್ರದಾಯ ಮತ್ತು ಭಾಷೆಯನ್ನು ಇಲ್ಲಿ ಗಮನಿಸಿದೆ" ಎಂದಿದ್ದರೂ "ಸಮಗ್ರ" ಸಂಕೇತಿಗಳ ಬಗೆಗಿನ ಸಾಂಸ್ಕೃತಿಕ ಅಧ್ಯಯನಕ್ಕೆ ಇಲ್ಲಿ ಸಾಕ್ಷಿ ದೊರೆಯುವುದಿಲ್ಲ. ಅಲ್ಲಿನ ಏಕವಕ್ತೃವಿನ ಸ್ಖಲಿತನಿರೂಪಣೆಗೆ ಸಾಕ್ಷಿಯಾಗಿ ಲೇಖಕರು ಒಬ್ಬ ವಕ್ತೃವನ್ನಷ್ಟೇ ಸ್ಮರಿಸಿದ್ದಾರೆ. ಅಸ್ಪಷ್ಟ ಮತ್ತು ಸಂದಿಗ್ಧ ಶೈಲಿಗೂ ಇದು ಪೂರಕವಾಗಿದೆ. ಸಾಕಷ್ಟು ಕ್ಷೇತ್ರಕಾರ್ಯವಿಲ್ಲದೆ, ಸುಲಭಲಭ್ಯ ದತ್ತಾಂಶಗಳ ಆಧಾರದಿಂದಲೇ ಮಾಡುವ ವಿಶ್ಲೇಷಣೆಯು ಹೇಗೆ ದಾರಿತಪ್ಪಿಸುವುದೆನ್ನುವುದಕ್ಕೆ, ಕುಲದೈವದ ಬಗೆಗಿನ ಲೇಖನವು ನಿಚ್ಚಳಸಾಕ್ಷಿಯಾಗಿದೆ. ಇಷ್ಟರ ನಡುವೆಯೂ ಅದರಲ್ಲಿಯ ಹಲವು ಮೊದಲ ಪ್ರಯತ್ನಗಳಿಂದಾಗಿ, ಆ ಗ್ರಂಥವು ಗಮನಾರ್ಹವಾಗಿದೆ.

ಈವರೆಗಿನ ಅವಲೋಕನವು, ಸಂಕೇತಿ ಸಮುದಾಯದ ಬಗೆಗೆ ಇಲ್ಲಿಯವರೆಗೆ ನಡೆದಿರುವ ಸಂಶೋಧನೆಯು ಎಷ್ಟು ಪರಿಮಿತವಾದುದು ಎಂಬುದನ್ನು ಸ್ಪಷ್ಟಪಡಿಸುತ್ತದೆ. ಆದಕಾರಣ ಸಮುದಾಯದ ಸಂಸ್ಕೃತಿಯ ಅನನ್ಯತೆಯನ್ನು ವಿವಿಧ ಆಯಾಮಗಳಿಂದ ಗುರುತಿಸುವ ಪ್ರಯತ್ನವನ್ನು ಈ ನಿಬಂಧದಲ್ಲಿ ಮಾಡಲಾಗಿದೆ.

---

20 *ಸಂಕೇತಿ: ಜನಾಂಗ, ಸಂಸ್ಕೃತಿ ಮತ್ತು ಭಾಷೆ: ಚೈತ್ರಪಲ್ಲವಿ*, ಕುವೆಂಪುನಗರ, ಮೈಸೂರು, ೧೯೯೧.

ಅಧ್ಯಾಯ : ಎರಡು

ಸಂಕೇತಿಗಳ ಮೂಲ ಮತ್ತು ಪರಂಪರೆ

ಸಂಕೇತಿಗಳ ಸಾಂಸ್ಕೃತಿಕ ವಿವರಗಳನ್ನು ಅವಲೋಕಿಸುವುದಕ್ಕೆ ಸಮರ್ಥ ಪೂರ್ವಪೀಠಿಕೆಯಾಗಿ ಮತ್ತು ಸಂಕೇತಿಗಳ ಸಾಂಸ್ಕೃತಿಕ ವೈಶಿಷ್ಟ್ಯದ ಒಂದು ಭಾಗವೇ ಆಗಿ, ಕೆಲವು ಅಗತ್ಯ ಮಾಹಿತಿಗಳನ್ನು ಕೊಡುವುದು ಇಲ್ಲಿನ ಉದ್ದೇಶ. ಇಡೀ ಬ್ರಾಹ್ಮಣಸಮುದಾಯದಲ್ಲಿ 'ಸಂಕೇತಿ' ಉಪಜಾತಿಯ ಸ್ಥಾನ, ಸಂಕೇತಿಗಳಲ್ಲಿಯೇ ಇರುವ ಉಪಪಂಗಡಗಳು, 'ಸಂಕೇತಿ' ಪದದ ವ್ಯುತ್ಪತ್ತಿ, ತಮಿಳುನಾಡಿನಲ್ಲಿ ನೆಲೆಸುವುದಕ್ಕೂ ಮೊದಲಿನ ಅವರ ಸಾಧ್ಯನೆಲೆಗಳು, ತಮಿಳುನಾಡಿನಿಂದ ಕರ್ನಾಟಕ ಮತ್ತು ಕೇರಳಕ್ಕೆ ಆದ ಐತಿಹಾಸಿಕ ವಲಸೆಗಳು - ಈ ಎಲ್ಲ ವಿವರಗಳು ಈ ಅಧ್ಯಾಯದಲ್ಲಿ ವಿಶ್ಲೇಷಣೆಗೆ ಒಳಗಾಗುತ್ತವೆ. ಇವು ತಮ್ಮಷ್ಟಕ್ಕೇ ಈ ಸಮುದಾಯದ ಭೌಗೋಳಿಕ ಸನ್ನಿವೇಶವನ್ನೂ ಚಿತ್ರಿಸುತ್ತವೆ. ಈ ಸಮುದಾಯದ ಬದುಕನ್ನು ರೂಪಿಸಿರುವ ಪ್ರೇರಕಶಕ್ತಿಯಾಗಿ ಕೂಡ ಇವು ಬೆಳಕು ಚೆಲ್ಲುತ್ತವೆ.

೧. ಪೂರ್ವ ಪರಿಚಯ

ಅ. 'ದ್ರಾವಿಡ' ಶಬ್ದದ ಬಳಕೆಯ ಸಂದರ್ಭ :

ಸಂಕೇತಿ ಸಮುದಾಯವು 'ದ್ರಾವಿಡ' ಶಬ್ದವನ್ನು ಬಳಸುವ ಸಂದರ್ಭವನ್ನು ಇಲ್ಲಿ ವಿವರಿಸಿದೆ.

1. 'ದ್ರಾವಿಡ' ಶಬ್ದ : ತಮಿಳುದೇಶದ 'ಅಯ್ಯರ್'ಗಳನ್ನು ಕುರಿತಂತೆ : ಕ್ರಿ.ಶ.೧೮೯೧ರ ಮೈಸೂರು ಖಾನೇಷುಮಾರಿಯ ವರದಿಯಲ್ಲಿ, ಸಂಕೇತಿಗಳು ಕೆಲವರಾದರೂ ತಮ್ಮನ್ನು 'ದ್ರಾವಿಡ'ರೆಂದು ದಾಖಲಿಸಿಕೊಂಡಿರಬಹುದೆಂಬ ಅನುಮಾನವು ವ್ಯಕ್ತವಾಗಿದೆ. ಕ್ರಿ.ಶ.೧೯೮೦ರಲ್ಲಿ ಪ್ರಕಟವಾದ ಪ್ರಚಾರ ಗ್ರಂಥಮಾಲೆಯೊಂದರ ನಾಲ್ಕನೆಯ ಸಂಪುಟದ ಲೇಖನದಲ್ಲಿ, ಸಂಕೇತಿಗಳು ದ್ರಾವಿಡ (ಜನಾಂಗದವ)ರೆಂದೇ ಸಾಧಿಸುವ ಪ್ರಯತ್ನವಿದೆ.[1] ತೀರ ಈಚೆಗೆ ಕೂಡ (೧೯೯೧) ಸಿ.ಎಸ್.ರಾಮಚಂದ್ರ ಅವರೂ ಸಂಕೇತಿಗಳನ್ನು 'ದ್ರಾವಿಡ'ರೆಂದೇ ಗುರುತಿಸಿದ್ದಾರೆ. 'ಆರ್ಯ' ಮತ್ತು 'ದ್ರಾವಿಡ' ಶಬ್ದಗಳು ಭಾಷಾಪಂಗಡಗಳಿಗೆ ಸಂಬಂಧಿಸಿದವು. ಆದರೆ ಅನೇಕ ವೇಳೆ ಅವು ಜನಾಂಗ ಎಂಬ ಅರ್ಥದಲ್ಲಿ ಬಳಕೆಯಾಗುವುದುಂಟು. 'ಆರ್ಯ' ಮತ್ತು 'ದ್ರಾವಿಡ'ರನ್ನು ಕುರಿತ ಚರ್ಚೆ ಈ ನಿಬಂಧದ ವ್ಯಾಪ್ತಿಯಲ್ಲಿ ಬರುವಂಥದಲ್ಲ. ಆದರೆ, ಈಗ ಕನ್ನಡಿಗರೆಂದೇ ದಾಖಲಿಸುತ್ತ ಬಂದಿರುವ ಕರ್ನಾಟಕದ ಸಂಕೇತಿಗಳು 'ದ್ರಾವಿಡ' ಶಬ್ದವನ್ನು ಬಳಸುವ ಸಂದರ್ಭವನ್ನು ಇಲ್ಲಿ ಸೂಚಿಸಬಹುದಾಗಿದೆ. ಕನ್ನಡ ಮತ್ತು ತಮಿಳುಗಳೆರಡೂ ಪಂಚದ್ರಾವಿಡ ಭಾಷೆಗಳಲ್ಲಿ ಸೇರುತ್ತವೆಂಬ ಸಂಗತಿಯ

---

1 *ಸಂಕೇತಿ ಐತಿಹಾಸಿಕ ಸಮೀಕ್ಷೆ*, ಪು.೩೩-೩೪.

ಹಿನ್ನೆಲೆಯಲ್ಲಿ, ಸಂಕೇತಿಗಳು ಭಾಷೆ ಮತ್ತು ಪ್ರಾದೇಶಿಕತೆಯ ದೃಷ್ಟಿಯಿಂದ ತಮ್ಮನ್ನು 'ದ್ರಾವಿಡ'ರೆಂದು ಗುರುತಿಸಿಕೊಂಡರೆ ಸಹಜವಾಗಿಯೇ ಕಾಣಿಸಬಹುದು. ಆದರೆ, ಅವರು ಈ ಪದವನ್ನು ಬಳಸುವುದು ತಮಿಳು ದೇಶದ 'ಅಯ್ಯರ್'ಗಳನ್ನು ಸೂಚಿಸಲು (ದ್ರಾವಿಡ್ಕ: ದ್ರವಿಡ ದೇಶದಲ್ಲಿ ನೆಲೆಸಿದವರು). ಕಾಲಕ್ರಮದಲ್ಲಿ ಕರ್ನಾಟಕಕ್ಕೆ ವಲಸೆ ಬಂದು ನಿಂತ ಇತರ ಅಯ್ಯರ್‌ಗಳಿಗೂ ಇದೇ ನಿರ್ದೇಶವಾಚಕವು ಬಳಕೆಯಾಗುತ್ತಿದೆ. ಅನೇಕ ಶತಮಾನಗಳ ಹಿಂದೆ ತಮಿಳುನಾಡಿನಿಂದ ಕರ್ನಾಟಕಕ್ಕೆ ವಲಸೆ ಬಂದ ಸಂಕೇತಿಗಳಲ್ಲಿ ಮೊದಲು ಬಂದ ತಂಡದವರನ್ನು, ಕೆಲವು ವರ್ಷಗಳ ಅನಂತರದಲ್ಲಿ ಬಂದ ತಂಡದವರು, 'ಕಣಿವೆ ಮೇಲ್ತ್ತೇವ್‌ಗೆ' (ಕಣಿವೆಯ ಮೇಲಿನವರು) ಎಂದು ಕರೆದುದು[2] ಇಂಥ ಸಂಬೋಧನೆಗಳ ಅರ್ಥಮಿತಿಯನ್ನು ಸೂಚಿಸುತ್ತದೆ. ಸ್ವತಃ ತಮಿಳುನಾಡಿನಲ್ಲಿಯಾಗಲೀ ಕೇರಳದಲ್ಲಿಯಾಗಲೀ ಇರುವ ಸಂಕೇತಿಗಳಲ್ಲಿಯೂ, 'ಆರ್ಯ', 'ದ್ರಾವಿಡ' ವಾಚಕಗಳು ಯಾವ ಸಂದರ್ಭದಲ್ಲಿಯೂ, ತಮ್ಮ ಕುರಿತಾಗಿ ಬಳಕೆಯಾಗುವುದಿಲ್ಲ. ಆದರೆ ಇಂದಿಗೂ, ಕರ್ನಾಟಕದ ಸಂಕೇತಿಗಳು, 'ಸಪ್ತಪದಿ'ಯ ಸಂದರ್ಭದಲ್ಲಿ ಉಡುವ ಸಾಂಪ್ರದಾಯಿಕ ಸೀರೆಯ ಮಾದರಿಯನ್ನು 'ದ್ರಾವಿಡ ಚೀರಾ' (ದ್ರಾವಿಡ ಸೀರೆ: ದ್ರವಿಡ ದೇಶದ ಮಾದರಿ) ಎಂದೇ ಗುರುತಿಸಿಕೊಳ್ಳುತ್ತಾರೆ. ಇಲ್ಲೆಲ್ಲಾ, 'ದ್ರಾವಿಡ' ಶಬ್ದವು, ತಮಿಳು ಭಾಷಾ ದೇಶಕ್ಕೆ ಹೊಂದಿ ಬಳಕೆಯಾಗಿರುವುದೇ ಕಾಣಿಸುತ್ತದೆ. ತಾವು ತಮಿಳುನಾಡಿನಿಂದ ವಲಸೆ ಬಂದವರಾದರೂ, ಇಂದಿಗೂ ಮನೆಯಲ್ಲಿ (ಅಪಭ್ರಂಶವಾದ) ತಮಿಳನ್ನೇ ಮಾತನಾಡುವವರಾದರೂ, ಕರ್ನಾಟಕದ ಸಂಕೇತಿಗಳು ತಮ್ಮನ್ನು ಕನ್ನಡನಾಡಿನೊಂದಿಗೆ ಗುರುತಿಸಿಕೊಂಡು ತಮಿಳುತನವನ್ನು ಪರಕೀಯವಾಗಿ ಭಾವಿಸುವ ಪ್ರವೃತ್ತಿಯೂ ಗಮನಾರ್ಹವಾದುದು. ಕೇರಳದಲ್ಲಿ ಅದನ್ನೇ 'ತಮಿಳ್ ಪಡವೈ' ಎನ್ನುವಾಗ ಕೂಡ, ಕರ್ನಾಟಕದ ಸಂಕೇತಿಗಳ ಗಾಢ ಕನ್ನಡೀಕರಣ ಪ್ರಕ್ರಿಯೆಗೆ ಸಮಾನಾಂತರವಾಗಿ, ಕೇರಳದ ಸಂಕೇತಿಗಳಲ್ಲಿಯೂ ಬೆಳೆದ ಪ್ರಾಂತೀಕರಣವನ್ನು ಗುರುತಿಸಬಹುದು.

2. ತಮಿಳು ಭಾಷೆ ಮತ್ತು ದೇಶ ಸೂಚಿಯಾಗಿ 'ದ್ರಾವಿಡ' ಶಬ್ದ : 'ದ್ರಾವಿಡ' ಶಬ್ದವನ್ನು ಜನಾಂಗವಾಚಕವಾಗಿ ಬಳಸಿರುವ ಬಿ.ಎನ್.ಶ್ರೀಕಂಠಯ್ಯನವರ ಅಭಿಪ್ರಾಯಗಳು, ತಪ್ಪು ಆಧಾರಗಳಿಂದ ಕೂಡಿವೆ.[3] ಯಾವ ಪ್ರಾಂತದಲ್ಲೂ ಸಂಕೇತಿಗಳು ಆಗಮ ದೀಕ್ಷಿತರಲ್ಲ; ಆಗಮಿಕ ದೇವಾಲಯಗಳ ಅರ್ಚಕರಲ್ಲ; ಆಗಮ ವಿಧಿಯಂತೆ ಪೂಜೆ ಮಾಡುವುದಿಲ್ಲ. 'ಕಲಾವರ್' ಪದದ ಬಳಕೆಯೂ ಅವರನ್ನು ಕುರಿತಂತೆ ಇಲ್ಲ. ಬದಲಿಗೆ, ಅವರ ಪೂಜಾಕ್ರಮವೂ ಸೇರಿದಂತೆ ಎಲ್ಲ ಆಚರಣೆಗಳೂ ವೈದಿಕ ಮಾರ್ಗದವು. ಗುರುತಿಸಬಹುದಾದವು ಅವೈದಿಕ ಪ್ರಭಾವಗಳನ್ನು ಮಾತ್ರ.[4] ಮೂರ್ತಿ ಪೂಜೆಯ ಆರಂಭಕಾಲ ಕೂಡ ಚರ್ಚಾಸ್ಪದವಾದುದು.

---

2 ಕೌಶಿಕ ಮತ್ತು ಬೆಟ್ಟದಪುರ ಸಂಕೇತಿಗಳು ಪರಸ್ಪರ ಸಮೀಪ ಸಂಪರ್ಕದಲ್ಲಿ ಬದುಕಿದ ಮಧ್ಯದೇಶದಲ್ಲಿ ಇಂಥ ಬಳಕೆ ಇತ್ತು. ಬೆಟ್ಟದಪುರ ಸಂಕೇತಿಗಳು ಕೌಶಿಕಸಂಕೇತಿಗಳನ್ನು ಕುರಿತು ಈ ಮಾತು ಬಳಸುತ್ತಿದ್ದರು.

3 "...... ಮೂರ್ತಿಪೂಜಾಕ್ರಮ ಅವ(ಆರ್ಯ)ರಲ್ಲಿರಲಿಲ್ಲ. ಮೂರ್ತಿಪೂಜೆ ಭರತಖಂಡದ ಪೂರ್ವನಿವಾಸಿಗಳ ಪದ್ಧತಿ. ಇದಕ್ಕೆ ಆಗಮಗಳೇ ಪ್ರಧಾನ ಆಧಾರ. ವಿಂಧ್ಯೋತ್ತರ ವೇದಗಳು ಪ್ರಚಲಿತವಾಗಿದ್ದಂತೆ ದಕ್ಷಿಣದಲ್ಲಿ ಆಗಮಗಳು ಪ್ರಸಿದ್ಧವಾಗಿದ್ದವು. ಶೈವ, ಪಾಶುಪತ, ವೈಖಾನಸ ಮುಂತಾದ ಆಗಮಗಳು ವೇದಗಳಷ್ಟೇ ಪ್ರಾಚೀನವಾದವುಗಳು. ಈ ಆಗಮಗಳಲ್ಲಿ ವರ್ಣಿತವಾಗಿರುವ ಮೂರ್ತಿಪೂಜಾ ವಿಧಾನಗಳೇ ಇಂದಿಗೂ ನಮ್ಮಲ್ಲಿ ಆಚರಣೆಯಲ್ಲಿವೆ ... (ಆದುದರಿಂದ ಸಂಕೇತಿಗಳು ದ್ರಾವಿಡರು)

ಸಂಕೇತಿ ಐತಿಹಾಸಿಕ ಸಮೀಕ್ಷೆ, ಪು.೩೩.

4 "... ವೇದಧರ್ಮಕ್ಕೆ ವಿರುದ್ಧವಾದ ಶಿವ ಮತ್ತು ಉಮಾ, ವಿಷ್ಣು ಮತ್ತು ಶ್ರೀಯರ ಪೂಜೆ ಮುಂತಾದ ಬ್ರಾಹ್ಮಣ ಹಿಂದೂಧರ್ಮದಲ್ಲಿನ ಕೆಲವು ಮೂಲಾಚರಣೆಗಳು ಹಾಗೂ ಅನುಭಾವ ಮತ್ತು ಯೋಗತತ್ವದ ವಿಚಾರ, ಆಚರಣೆ ಇವೆಲ್ಲಾ ಭಾರತದಲ್ಲಿ ನೆಲೆಸಿದ ದ್ರಾವಿಡಭಾಷೆಯ ಮೆಡಿಟರೇನಿಯನರಿಂದ ಬಂದಿರುವಂತೆ ತೋರುತ್ತದೆ....

"..... ಶಿವ ಮೂಲತಃ ಆರ್ಯರ ದೇವಾಲಯಗಳ ಚೌಕಟ್ಟಿನೊಳಗೆ ಇರಲಿಲ್ಲ. ಭಾರತದಲ್ಲಿ ಶಿವ ಮತ್ತು ಉಮಾ ಒಂದು ಕಡೆ, ವಿಷ್ಣು ಮತ್ತು ಶ್ರೀ ಇನ್ನೊಂದು ಕಡೆ, ಹೀಗೆ ಜೋಡಿರೂಪದಲ್ಲಿ ಇರುವುದಕ್ಕಿಂತಲೂ ಮೂಲ ಅಸ್ತಿತ್ವದ ವಿಶಾಲವಾದ ಅಥವಾ ಹೆಚ್ಚು ಗಂಭೀರವಾದ ಕಲ್ಪನೆ ಬೇರೆ ಯಾವುದೇ ಧರ್ಮ ಅಥವಾ ಪುರಾಣಸಾಹಿತ್ಯದ ವ್ಯವಸ್ಥೆಯಲ್ಲಿರುವಂತೆ ನನ್ನ ಬುದ್ಧಿಗೆ ತಿಳಿದುಬಂದಿಲ್ಲ. ಈ ಕಲ್ಪನೆಗಳು ಆರ್ಯ ಮತ್ತು ಆರ್ಯೇತರರ ಸಹಸೃಷ್ಟಿ ...."

ಯುಗಯಾತ್ರೀ ಭಾರತೀಯ ಸಂಸ್ಕೃತಿ, ಸಂಪುಟ-೧, ಪ್ರ.ಸಂ.ಡಾ.ಕೆ.ವಿ.ಪುಟ್ಟಪ್ಪ; ವಿಭಿನ್ನ ಭಾಷಾ ಸಂಸ್ಕೃತಿ ವರ್ಗಗಳ ಕಾಣಿಕೆ, ಸುನೀತಕುಮಾರ ಚಟರ್ಜಿ, ಅನು: ಹಂಪನಾ; ಪ್ರಸಾರಾಂಗ, ಮೈಸೂರು; ೧೯೭೦, ಪು.೫೯-೬೧.

ಅದಕ್ಕೆ ಹೊಂದಿಕೊಂಡಂತೆಯೇ ಗಮನಿಸಬಹುದಾದ ಕೆಲವು ಸಂಗತಿಗಳು: ನಂಬೂದಿರಿ ಬ್ರಾಹ್ಮಣರು ಉತ್ತರದಿಂದ ಬಂದ ಆರ್ಯರು ಎಂಬ ವಾದ;[5] ಸಂಕೇತಿಗಳೇ ನಂಬೂದಿರಿಗಳಾದುದು ಎಂಬ ಸಂಗತಿ;[6] ನಂಬೂದಿರಿ ಬ್ರಾಹ್ಮಣರಾದ ಆದಿ ಶಂಕರಾಚಾರ್ಯರು ತಮ್ಮನ್ನು 'ದ್ರವಿಡ ಶಿಶು' ಎಂದು ಕರೆದುಕೊಂಡಿರುವುದು.[7] ಸಂಕೇತಿಗಳ ಸಾಂಸ್ಕೃತಿಕ ಸಂದರ್ಭದಲ್ಲಿ, 'ದ್ರಾವಿಡ' ಶಬ್ದವು, ತಮಿಳು ಭಾಷೆ ಮತ್ತು ದೇಶಸೂಚಿಯಾಗಿಯೇ ಬಳಕೆಗೊಂಡಿರುವುದನ್ನು ಇದು ಸ್ಪಷ್ಟಪಡಿಸುತ್ತದೆ.

ಆ. ಉತ್ತರದಿಂದ ದಕ್ಷಿಣಕ್ಕೆ ವಲಸೆ :

ಸಂಕೇತಿಗಳು ಉತ್ತರಭಾರತದಿಂದ ದಕ್ಷಿಣಕ್ಕೆ ವಲಸೆ ಬಂದವರೆಂಬುದಕ್ಕೆ ಇರುವ ಸಾಂಸ್ಕೃತಿಕ ಆಧಾರಗಳನ್ನು ಇಲ್ಲಿ ಪರಿಶೀಲಿಸಬಹುದು:

1) ದಕ್ಷಿಣದ ಪಾಂಡ್ಯ ರಾಜನೊಬ್ಬನು ತಾನು ಆಚರಿಸಬಯಸಿದ ಯಾಗಕ್ಕಾಗಿ, ಗಂಗಾನದಿಯ ಆಚೆಯ ದಡದಿಂದ ಯೋಗ್ಯ ಋತ್ವಿಕರನ್ನು ಕರೆಸಿಕೊಂಡನೆಂಬ ಪ್ರಚಲಿತ ಐತಿಹ್ಯವು,[8] 'ವಡಮ', 'ಬೃಹಚ್ಚರಣ' ಮೊದಲಾದ ಪಂಗಡಗಳನ್ನು ನಿರ್ದಿಷ್ಟವಾಗಿ ಹೆಸರಿಸುತ್ತದೆ. ಆದರೆ 'ಸಂಕೇತಿ' ಎಂಬ ಪಂಗಡವನ್ನು ಅದು ನಿರ್ದಿಷ್ಟವಾಗಿ ಹೆಸರಿಸುವುದಿಲ್ಲ. 'ಸಂಕೇತಿ'ಯಂತೆಯೇ, 'ಮಾಂಗುಡಿ' ಮೊದಲಾದ ಸ್ಥಳನಾಮಾಧಾರಿತ ಜಾತಿವಾಚಕಗಳು ಹಲವು ಇವೆ. ಇವೆಲ್ಲವೂ 'ಅಯ್ಯರ್' ಎಂಬ ವಿಶಾಲ ವೇದಿಕೆಯಲ್ಲಿ ನಿಲ್ಲುವಂಥವೇ. ಅವೆಲ್ಲವೂ ಈ ಐತಿಹ್ಯದಲ್ಲಿ ಪರೋಕ್ಷವಾಗಿ ಸೇರಿಯೇ ಇವೆ. ಆದರೆ, ಅದಷ್ಟೇ, ಸಂಕೇತಿಗಳೂ ಆ ಐತಿಹ್ಯದಲ್ಲಿ ಬಲವಾಗಿ ಸೇರುವಂತೆ ಮಾಡಲಾರದು.

2) ಸಂಕೇತಿಗಳಲ್ಲಿ, ಬಹುಸಂಖ್ಯಾತರಾಗಿರುವವರು ಆಪಸ್ತಂಬೀಯರು ಮತ್ತು ಬೋಧಾಯನರು (ಶೇಕಡ ತೊಂಬತ್ತು). ಈ ಇಬ್ಬರು ಸೂತ್ರಕಾರರ ಮೂಲನೆಲೆಯ ಬಗೆಗೂ ವಿದ್ವಾಂಸರಲ್ಲಿ ಭಿನ್ನಾಭಿಪ್ರಾಯಗಳಿವೆ. ಡಾ.ಬ್ಯೂಲರ್ ಮತ್ತು ಡಾ.ಪಿ.ವಿ.ಕಾಣೆಯವರ ಅಭಿಪ್ರಾಯದಂತೆ ಅವರ ಮೂಲ ನೆಲೆಯು ಆಂಧ್ರದೇಶವೆಂದೇ ಆದರೂ, ಸಂಕೇತಿಗಳ ದಕ್ಷಿಣಾಭಿಮುಖವಾದ ವಲಸೆಯನ್ನೇ ಅದು ಸಮರ್ಥಿಸುತ್ತದೆ. ಡಾ.ರಾಮಗೋಪಾಲರು, ಡಾ.ಬ್ಯೂಲರ್ ಮತ್ತು ಡಾ.ಪಿ.ವಿ.ಕಾಣೆಯವರ ಅಭಿಪ್ರಾಯಗಳನ್ನು ಸಾಧಾರವಾಗಿ ಅಪ್ರಸ್ತುತಗೊಳಿಸಿ ಅವರ ಮೂಲ ನೆಲೆ ಉತ್ತರ ಭಾರತವೇ ಎಂದು ಸಾಧಿಸಿದ್ದಾರೆ.[9] ಅದನ್ನು ಒಪ್ಪುವುದಾದರೆ, ಈ ಸೂತ್ರಕಾರರು

5 ಪೂರ್ವೋಕ್ತ. 'ಭಾರತ ಜನಾಂಗಗಳು ಮತ್ತು ಅವುಗಳ ಚಲನವಲನಗಳು', ಶಶಾಂಕಶೇಖರ ಸರ್ಕಾರ್, ಅನು: ಸಿ.ಜಿ.ಪುರುಷೋತ್ತಮ್; ಸಂಪುಟ-೧, ೧೯೭೦, ಪು.೧೩, ೧೭, ೧೮.

6 *Castes and tribes of Southern India,* Vol 5, Thurston E & Rangachari K; Government Press, Madras, 1909, pp.154-155

7 *ಸೌಂದರ್ಯ ಲಹರೀ,* ಆದಿಶಂಕರಾಚಾರ್ಯ, ಶ್ಲೋಕ ೭೫.

8 ಅ) ಪಾಂಡ್ಯರಾಜನೊಬ್ಬನು ಯಜ್ಞ ಮಾಡಬೇಕಾಯಿತು. ಗಂಗಾನದಿಯ ಆಚೆಯದಡದಲ್ಲಿ ಬ್ರಾಹ್ಮಣರಿದ್ದರು. ಈಚೆಯ ದಡದಲ್ಲಿ ನಿಂತು ಕೂಗಿ ಆಹ್ವಾನಿಸಿದ. ತುಂಬು ಪ್ರವಾಹ. ಮೊದಲ ಗುಂಪು ನದಿಯ ಮೇಲೆ ನಡೆದು ಬಂತು; ಹೆಜ್ಜೆಯೂ ಮುಳುಗಲಿಲ್ಲ. ಅವರು ಬೃಹಚ್ಚರಣರು. ಅವರನ್ನು ಹಿಂಬಾಲಿಸಿ ಬಂದವರ ಹೆಜ್ಜೆ ಮುಳುಗಿತು; ಅವರು ವಡಮರು. ಅನಂತರ ಬಂದವರು ಸೊಂಟದುದ್ದ ಮುಳುಗಿ ಹೇಗೋ ಈಜಿ ಬಂದರು; ಅವರು ಅಷ್ಟಸಹಸ್ರಂ ಮೊದಲಾದವರು.

ರಂಗನಾಥಶಾಸ್ತ್ರೀ, ೭೦, ನಿವೃತ್ತ ಅಧ್ಯಾಪಕರು, ಕೊಳ್ಳೇಗಾಲ.

ಆ) 'ವಡಮ' ಎಂಬ ಶಬ್ದವೇ ಉತ್ತರದಿಂದ ಬಂದವರು ಎಂಬುದನ್ನು ಸೂಚಿಸುತ್ತದೆ. 'ಬೃಹಚ್ಚರಣ' ಎಂಬುದೂ ವಲಸೆಯನ್ನೇ ಸೂಚಿಸುವ ಪದ.

ನೋಡಿ: *A History of South India* (from pre-historic times to the fall of Vijayanagar) 2nd Ed.Nilakanta Sastri K.A.; Oxford University Press, 1966, p.78, 79.

The Mysore tribes and castes, Diwan Bahadur Ananthakrishna Iyer L.K. & Nanjundayya H.V.; Mysore University, Mysore, 1928-36, p.309.

9 *India of Vedic Kalpasutras,* Ramgopal, National Publishing House, Delhi, 1959, pp.51-101.

ಮತ್ತು ಅವರ ಅನುಯಾಯಿಗಳು ಕ್ರಿ.ಶ.ಎರಡು ಸಾವಿರದ ಐನೂರು ವರ್ಷಗಳ ಹಿಂದೆ ಉತ್ತರಭಾರತದ ನಿವಾಸಿಗಳಾಗಿದ್ದರೆಂಬ ವಾದವು ಬಲಗೊಳ್ಳುತ್ತದೆ. ದೂರಪ್ರಾಂತಗಳಿಗೆ ಸಾಮೂಹಿಕ ವಲಸೆಗಳು ಹಿಂದೆ ಅಸಾಮಾನ್ಯ ಸಂಗತಿಗಳಾಗಿರಲಿಲ್ಲ. ಅದು ಹೇಗಿದ್ದರೂ, ದಕ್ಷಿಣ ಭಾರತದ ಈ ಸೂತ್ರಾನುಯಾಯಿಗಳೆಲ್ಲರೂ ಹೀಗೆ ವಲಸೆ ಬಂದವರೇ ಎಂದು ಹೇಳಲು ಆಧಾರಗಳಿಲ್ಲವಾಗಿದೆ.

3) ಸಂಕೇತಿಗಳ ಸಂಧ್ಯಾವಂದನೆಯ ಉಪಸ್ಥಾನ ಭಾಗದ ಪ್ರಾರ್ಥನೆ ಹೀಗಿದೆ :

ನರ್ಮದಾಯೈ ನಮಃ ಪ್ರಾತಃ ನರ್ಮದಾಯೈ ನಮೋ ನಿಶಿ |
ನಮೋಽಸ್ತು ನರ್ಮದೇ ತುಭ್ಯಂ ತ್ರಾಹಿ ಮಾಂ ವಿಷಸರ್ಪತಃ ||

ಸಂಕೇತಿಗಳು, ಬಹಳ ಸರ್ಪಕಾಟವಿದ್ದ ನರ್ಮದಾ ನದಿಯ ತೀರದಲ್ಲಿದ್ದವರೆಂದೂ, ಅದರಿಂದಾಗಿಯೇ, ಅವರಲ್ಲಿ ಮಾತ್ರ ಈ ಪ್ರಾರ್ಥನೆ ಇದೆಯೆಂದೂ, ಕಂಚಿಯ ಪರಮಾಚಾರ್ಯರು ವ್ಯಾಖ್ಯಾನಿಸಿದ್ದರೆಂಬ ಸಂಗತಿಯನ್ನು, ವಕ್ತೃವೊಬ್ಬರು ನನ್ನ ಗಮನಕ್ಕೆ ತಂದರು.[10] ಭಾರತಾದ್ಯಂತ ಇರುವ ಎಲ್ಲ ಬ್ರಾಹ್ಮಣ ಸಮುದಾಯಗಳ ಬಗೆಗೆ ಕ್ಷೇತ್ರಕಾರ್ಯ ನಡೆದಿಲ್ಲದ ಸ್ಥಿತಿಯಲ್ಲಿ ಇಂಥ ತೌಲನಿಕ ಅಭಿಪ್ರಾಯವನ್ನು ನೇರವಾಗಿ ಸ್ವೀಕರಿಸಲಾಗದಿದ್ದರೂ, ನರ್ಮದಾತೀರದಲ್ಲಿದ್ದವರ ಪ್ರಾರ್ಥನೆ ಇದಾಗಬಹುದೆಂಬ ಮಾತನ್ನು ಒಪ್ಪಬಹುದಾಗಿದೆ. ಆದರೆ, ಉತ್ತರಾಭಿಮುಖವಾಗಿ ಮಾಡುವ ಈ ಪ್ರಾರ್ಥನೆಯೂ, ಸಂಕೇತಿಗಳು ನರ್ಮದೆಯ ದಕ್ಷಿಣ ವಾಸಿಗಳಾಗಿರಬೇಕೆಂಬುದನ್ನೇ ಸೂಚಿಸುತ್ತದೆ. ಸಂಕಲ್ಪಮಂತ್ರಗಳು ತಮ್ಮ ನೆಲೆಯ ಸನ್ನಿವೇಶವನ್ನನುಸರಿಸಿ ಸುಧಾರಣೆಗೊಳ್ಳುವ ಸಂಗತಿಯ ಹಿನ್ನೆಲೆಯಲ್ಲಿ,[11] ಸಂಕೇತಿಗಳು ಎಂದೆಂದೂ ನರ್ಮದೆಯ ದಕ್ಷಿಣಕ್ಕೇ ಇದ್ದರೆಂಬ ವಾದವು ನಿಲ್ಲುವುದಿಲ್ಲ. ಅಲ್ಲದೆ, ಸಂಕೇತಿಗಳು ನರ್ಮದೆಯ ಉತ್ತರಕ್ಕೂ ಎಂದಾದರೊಮ್ಮೆ ಇದ್ದ ಸೂಚನೆಯನ್ನು, ಗಂಗಾಯಮುನೆಯರ ಮಧ್ಯೆ ವಾಸಿಸುವವರು ಪುಣ್ಯವಂತರೆಂದು ಸಾರಿಕೊಳ್ಳುವ, ಅವರ ಬಳಕೆಯ ಸಂಧ್ಯಾವಂದನೆಯ ಮಂತ್ರಗಳೇ[12] ನೀಡುತ್ತವೆ.

4) ಸಂಕೇತಿಗಳಲ್ಲಿರುವ ಮೌಖಿಕ ಪರಂಪರೆಯು, ಅವರ ಪೂರ್ವಪರಂಪರೆಯ ಗೋವಿಂದ ಭಗವತ್ಪಾದರು ಗೋದಾವರೀ ನದಿಯ ತೀರದಲ್ಲಿದ್ದುದನ್ನೂ, ಆದಿ ಶಂಕರರಿಗೆ ವಿದ್ಯಾಬೋಧೆ ಮಾಡಿದುದನ್ನೂ ತಿಳಿಸುತ್ತದೆ.[13] ಇದಕ್ಕೆ ಬಲವಾದ ಸಾಂಸ್ಕೃತಿಕ

---

10 *ರಂಗನಾಥಶಾಸ್ತ್ರೀ,* ಕೊಳ್ಳೇಗಾಲ.

11 ಅ) ತಿರುವನಂತಪುರದಲ್ಲಿ 'ಮನಮಾಲಾ ಮಹಾನದ್ಯಾಂ' ಎಂದೂ, ತಿರುನೆಲ್‌ವೇಲಿಯಲ್ಲಿ 'ತಾಮ್ರಪರ್ಣೀತೀರೇ' ಎಂದೂ, ಕರ್ನಾಟಕದಲ್ಲಿ 'ಕಾವೇರೀತೀರೇ' 'ತುಂಗಭದ್ರಾತೀರೇ' ಎಂದೂ ಸಂಕಲ್ಪ ಬದಲಾಗುತ್ತದೆ. 'ಗೋದಾವರೀತೀರೇ', 'ನರ್ಮದಾತೀರೇ' ಎಂಬ ಪ್ರಯೋಗವು ಈಗ ಸಂಕೇತಿಗಳಲ್ಲಿ ಉಳಿದಿಲ್ಲದಿರುವುದು ಸಕಾರಣವಾಗಿದೆ. ಕೆಲವರು ಈಗಲೂ 'ಗೋದಾವರೀತೀರೇ' ಎಂದು (ಅಪರೂಪವಾಗಿ) ಬಳಸುತ್ತಿರುವುದು ಇತ್ತೀಚಿನ ಅನ್ಯಪ್ರಭಾವ ಇಲ್ಲವೆ ಪುಸ್ತಕಗಳ ಪ್ರಭಾವ ಎಂಬುದು ಹಿರಿಯರ ವಿವರಣೆ.

ಆ) ಇದು ಸಂಧ್ಯಾವಂದನೆಯಲ್ಲಿ ಅತ್ಯಗತ್ಯವಲ್ಲದ, ಯಾವಾಗಲೋ ಇತ್ತೀಚೆಗೆ ಸೇರಿಸಿಕೊಂಡಿರುವ ಶ್ಲೋಕವೆಂಬುದು ಆರ್.ಕೆ.ಶ್ರೀಕಂಠಕುಮಾರಸ್ವಾಮಿ (೭೦, ನಿವೃತ್ತ ಪ್ರಾಧ್ಯಾಪಕರು, ಐಐಟಿ, ಮದರಾಸು) ಅವರ ಅಭಿಪ್ರಾಯ. ತಾವು ಕಾಶೀಯಾತ್ರೆ ಮಾಡಿದ ಸಂದರ್ಭದಲ್ಲಿ ದಿಗ್ವಂದನೆ ಮಾಡುವಾಗ ಈ ಶ್ಲೋಕವನ್ನು ದಕ್ಷಿಣಾಭಿಮುಖವಾಗಿಯೇ ಮಾಡಿದುದಾಗಿ ಅವರು ಹೇಳುವುದು ಸಹಜವಿವರಣೆ. ಇದು ಮೇಲಿನ ಮಾತನ್ನೇ ಸಮರ್ಥಿಸುತ್ತದೆ. ಅಲ್ಲದೆ, ಪ್ರಕೃತದ ಒಂದು ಧಾರ್ಮಿಕ ಆಚರಣೆಯು ಸಂಕೇತಿಗಳ ಒಂದು ಕಾಲದ ಆವಾಸಸ್ಥಾನದ ಸಮರ್ಥಸೂಚಿ ಎಂಬ ಅಂಶವನ್ನಷ್ಟೇ ನಿಬಂಧದಲ್ಲಿ ಬಳಸಿಕೊಂಡಿದೆ.

12 ಅ) ನಮೋ ಗಂಗಾಯಮುನಯೋರ್ಮಧ್ಯೇ ಯೇ ವಸಂತಿ ...
ನಮೋ ಗಂಗಾಯಮುನಯೋರ್ಮುನಿಭ್ಯಶ್ಚ ನಮಃ ...
- ಯಜುರಾರಣ್ಯಕ, ದ್ವಿತೀಯ ಪ್ರಶ್ನ, ೨:೨೦-೨೪
ಈ ಮಂತ್ರವು ಸಂಧ್ಯಾವಂದನೆಯ ವೇಳೆ ಕೆಲವೆಡೆ ವಿಶೇಷವಾಗಿ ಬಳಕೆಯಾಗುತ್ತದೆ.

ಆ) ಯಜುರ್ವೇದಕ್ಕೆ **ಸಾರಸ್ವತವಿದ್ಯೆ** ಎಂದೂ ಹೆಸರು. ಯಜುರ್ವೇದಿಗಳು ಸರಸ್ವತೀ ನದಿಯ ತೀರದಲ್ಲಿದ್ದುದನ್ನೇ ಅದು ಸ್ಥಾಪಿಸುತ್ತದೆ.
ವೇ.ಶ್ರೀನಿವಾಸಾವಧಾನಿ ಎಂ.ಟಿ., ೮೦, ವೇದ ಶಾಸ್ತ್ರ ಸಂಸ್ಕೃತ ವಿದ್ವಾಂಸರು, ವೈದಿಕ, ಕೃಷಿಕ, ಮತ್ತೂರು, ಶಿವಮೊಗ್ಗ ಜಿಲ್ಲೆ.

13 *ಬೆಟ್ಟದಪುರ ಸಂಕೇತಿ ವಾಣಿ,* ದೀಪಾವಳಿ ಸಂಚಿಕೆ, 'ಸಂಕೇತಿ ಮತ್ತು ಪರಂಪರೆ', ಶ್ರೀಕಂಠಮೂರ್ತಿ ಎಚ್.ಎಲ್., ೧೯೭೮, ಪು.೩-೬.

ಆಧಾರವೂ ಇದೆ. ಪರಸ್ಪರ ಸಂಪರ್ಕವನ್ನೇ ಕಳೆದುಕೊಂಡು ದ್ವೀಪಗಳಂತೆ ಇದ್ದ ಬೆಟ್ಟದಪುರ, ಕೌಶಿಕ, ಲಿಂಗದಹಳ್ಳಿ, ಮತ್ತೂರು, ತಮಿಳುನಾಡು, ಕೇರಳ - ಎಲ್ಲೆಡೆಯೂ, ಇವರಿಗೆ, ಶೃಂಗೇರಿ ಮಠಕ್ಕೆ ಗುರುದಕ್ಷಿಣೆ ನೀಡುವುದರಿಂದ ವಿನಾಯಿತಿ ಉಂಟು. ಇದು ಹಿಂದಿನಿಂದಲೂ ಒಂದೇ ರೀತಿಯಲ್ಲಿ ರೂಢಿಯಲ್ಲಿದೆ. "ಸಂಕೇತಿಗಳಿಗೆ ಮಠವೂ ಇಲ್ಲ, ಕುಲದೈವವೂ ಇಲ್ಲ" ಎಂಬುದು ಕರ್ನಾಟಕದಂತೆಯೇ ದಕ್ಷಿಣದಲ್ಲಿಯೂ ಇರುವ ಪ್ರಚಲಿತೋಕ್ತಿಯಾಗಿದೆ.

ಈ ಗುರುದಕ್ಷಿಣಾ ವಿನಾಯಿತಿಗೆ ಸಂಬಂಧಿಸಿದಂತೆ ಅನೇಕ ಇತರ ಐತಿಹ್ಯಗಳೂ ತಳಕುಗೊಂಡಿವೆ :

0.1 ಕೌಶಿಕಸಂಕೇತಿಗಳು ಶೃಂಗೇರಿ ಜಗದ್ಗುರುಗಳಿಗೆ ವಿದ್ಯಾಗುರುಗಳಾಗಿದ್ದುದು.

0.2 ವಾಕ್ಯಾರ್ಥ ಸಂದರ್ಭವೊಂದರಲ್ಲಿ ದೇಶದ ದಿಗ್ಗಜ ಪ್ರತಿವಾದಿಗಳನ್ನು ಕೌಶಿಕ ಸಂಕೇತಿಯೊಬ್ಬರು ಸೋಲಿಸಿ ಮಠದ ಮಾನ ಉಳಿಸಿದುದು.

0.3 ಶೃಂಗೇರಿ ಪೀಠಕ್ಕೆ ಸಂಕೇತಿಯೊಬ್ಬರು ಗುರುಗಳಾಗಿದ್ದುದು.

0.4 ಶೃಂಗೇರಿಶ್ರೀಗಳ ಅಡ್ಡಪಲ್ಲಕ್ಕಿ ಉತ್ಸವಕ್ಕೆ ಅನ್ಯಮತೀಯರಿಂದ ಅಡ್ಡಿ ಬಂದಾಗ, ಕೌಶಿಕ ಸಂಕೇತಿಗಳು ಬಲಪ್ರಯೋಗದಿಂದ ಅದನ್ನು ನಿವಾರಿಸಿದ್ದು ಇತ್ಯಾದಿ.

ಇವುಗಳಲ್ಲಿ ಬಹುಪಾಲು ಸಂಗತಿಗಳು ಸಂಬಂಧಿಸಿದುದು ಮಧ್ಯದೇಶದ ಕೌಶಿಕ ಸಂಕೇತಿಗಳಿಗೆ. ಈ ಪ್ರಸಂಗಗಳು ಕೌಶಿಕ ಮೊದಲಾದ ಮೇಲೆ ಹೇಳಿದ ನೆಲೆಗಳೆಲ್ಲವೂ ಸಮುದಾಯದ ಒಂದೊಂದು ದೂರದೂರದ ದ್ವೀಪಗಳಂತಿದ್ದು ಪರಸ್ಪರ ಸಂಪರ್ಕವನ್ನೇ ಹೊಂದಿಲ್ಲದ ಸಂದರ್ಭದಲ್ಲಿ ನಡೆದಂಥವು. ಕೇವಲ ಆರು-ಎಂಟು ದಶಕಗಳಿಂದೀಚೆಗೆ ಕ್ರಮಕ್ರಮವಾಗಿ ಈ ಅನೇಕ ಪಂಗಡಗಳ ಪರಸ್ಪರ ಪರಿಚಯವಾಗತೊಡಗಿತು. ಅವರೆಲ್ಲರೂ ತೀರ ಇತ್ತೀಚಿನವರೆಗೆ ಭಿನ್ನಜಾತಿಗಳಂತೆಯೇ ಬಾಳುತ್ತಿದ್ದರು. ಈಗಲೂ ಕೆಲವು ಪಂಗಡಗಳು ಪರಸ್ಪರವಾಗಿ ಅಂಥ ಭಾವನೆಯನ್ನೇ ಮುಂದುವರಿಸಿಕೊಂಡಿವೆ. ಆದುದರಿಂದ, ಶೃಂಗೇರಿಪೀಠವು ಇತ್ತೀಚಿನ ಶತಮಾನಗಳಲ್ಲಿ ಕಲ್ಪಿಸಿರಬಹುದಾದ ಗರುದಕ್ಷಿಣಾವಿನಾಯಿತಿಯ ವಿಶೇಷಮನ್ನಣೆ ಸಂಕೇತಿಗಳೆಲ್ಲರಿಗೆ ಸಮಾನವಾಗಿ ಅನ್ವಯವಾಗಿ ಸ್ವೀಕೃತವಾಗುವುದು ಸಂಭವವಲ್ಲ. ಇವುಗಳಲ್ಲಿ ಬಹುಪಾಲು ಕೇವಲ ಸುಮಾರು ಒಂದು ಶತಮಾನದ ಕಾಲಾವಧಿಯಲ್ಲಿ ನಡೆದಿರುವುದು ಹಾಗೂ ಈ ಘಟನೆಗಳಿಗೆ ಸಂಬಂಧಿಸಿದ ವ್ಯಕ್ತಿ, ಸ್ಥಳಗಳ ನೆನಪು ಹಚ್ಚಹಸುರಾಗಿ ಇಂದಿಗೂ ಉಳಿದಿರುವುದೂ - ಇಂಥ ಸಾಧ್ಯತೆಯನ್ನು ಮತ್ತಷ್ಟು ಮಸಕುಗೊಳಿಸುತ್ತದೆ.

ಶೃಂಗೇರಿ ಪೀಠದ ಗುರುಗಳಿಗೆ ಈವರೆಗೆ ವಿದ್ಯಾದಾನ ಮಾಡಿರುವವರು ಕೇವಲ ಸಂಕೇತಿಗಳೇ ಅಲ್ಲ. ಶೃಂಗೇರಿಪೀಠಕ್ಕೆ ಸಂಕೇತಿಯೊಬ್ಬರು ಅಧಿಪತಿಗಳಾಗಿದ್ದರೆಂಬುದು ಮೌಖಿಕ ಪರಂಪರೆಯಲ್ಲಿದೆ. ವಿಜಯನಗರ ಸಾಮ್ರಾಜ್ಯ ಸ್ಥಾಪನಾಚಾರ್ಯರಾದ ವಿದ್ಯಾರಣ್ಯರು ಸಂಕೇತಿ ಪರಂಪರೆಯವರೆಂದು ಸಾರುವ ದಟ್ಟ ಮೌಖಿಕ ಪರಂಪರೆಯೂ ದಕ್ಷಿಣದಲ್ಲಿಯೂ ವ್ಯಾಪಕವಾಗಿ ಉಳಿದಿದೆ.[14] ಆದರೆ ಶೃಂಗೇರಿ ಪೀಠಕ್ಕೆ ಇತರ ಪಂಗಡಗಳಿಂದಲೇ ಮೂವತ್ತಕ್ಕೂ ಹೆಚ್ಚು ಅಧಿಪತಿಗಳು ಈವರೆಗೆ ಬಂದಿದ್ದಾರೆ. ಸಂಕೇತಿಗಳಿಗೆ ಮಾತ್ರ ಈ ರಿಯಾಯಿತಿ ದೊರೆಯಿತೆನ್ನುವುದಕ್ಕೆ ಕಾರಣಗಳಿಲ್ಲ. ವಾಕ್ಯಾರ್ಥಗಳೂ ಮಠದ ದೀರ್ಘ ಇತಿಹಾಸದಲ್ಲಿ ಗೌಣವಾದಂಥವು. ನಾಲ್ಕನೆಯ ಕಾರಣವಂತೂ ತೀರ ಬಾಲಿಶವಾದದ್ದು. ಗೋವಿಂದಭಗವತ್ಪಾದರು ಆದಿಶಂಕರರಿಗೆ ಗುರುಗಳಾಗಿದ್ದುದರಿಂದ ಆದಿಶಂಕರರೇ ಈ ಸಮುದಾಯಕ್ಕೆ ಗುರುಕಾಣಿಕೆಯಿಂದ ವಿನಾಯಿತಿ ಕೊಟ್ಟರೆಂಬ ಐತಿಹ್ಯವು ಹೆಚ್ಚು ನಂಬಲರ್ಹವಾದುದು ಈ ಕಾರಣದಿಂದಲೇ. ಉಳಿದ ಐತಿಹ್ಯಗಳೂ ಸತ್ಯ ಘಟನೆಗಳೇ ಆದರೂ, ಸಂಕೇತಿಗಳ ವಿಭಿನ್ನ ಗುಂಪುಗಳು ವಿಭಿನ್ನ ಜಾತಿಗಳಂತೆ ಬಾಳುತ್ತಿದ್ದ ಕಾಲದಲ್ಲಿ ಇವು ನಡೆದುದರಿಂದ,

---

[14] ದಕ್ಷಿಣದಲ್ಲಿ ಗಾಢವಾಗಿ ವ್ಯಾಪಕತೆ ಪಡೆದಿರುವ ಮೌಖಿಕ ಪರಂಪರೆಯು ವಿದ್ಯಾರಣ್ಯರನ್ನು ಸಂಕೇತಿ ಸಮುದಾಯಕ್ಕೆ ಸೇರಿದವರೆಂದು ಗುರುತಿಸುತ್ತದೆ. ಶೃಂಗೇರಿ ಪೀಠಾಧಿಪತಿಗಳೆಲ್ಲರೂ ತಪೋನಿಷ್ಠರು. ವಿದ್ಯಾರಣ್ಯರದು ಸಾಮ್ರಾಜ್ಯಸ್ಥಾಪನೆಯ ವಿಶಿಷ್ಟಪಾತ್ರ. ದಕ್ಷಿಣದಲ್ಲಿ ದಳವಾಯಿ ರಾಮೈಯ್ಯನು ತಿರುವಾಂಕೂರು ಸಾಮ್ರಾಜ್ಯಸ್ಥಾಪನೆಯ ಕಾರಣಪುರುಷನಾದಂತೆ ಹಂಪೆಯಲ್ಲಿ ವಿದ್ಯಾರಣ್ಯರು ವಿಜಯನಗರ ಸ್ಥಾಪನಾಚಾರ್ಯರಾದರು. ಸಂಕೇತಿ ಸಮುದಾಯದ ಬ್ರಹ್ಮಕ್ಷತ್ರಿಯತೆ ಪ್ರಸಿದ್ಧವಾದುದು. ಭಾರತದ ರಾಜಕೀಯದ ವಿಷಮಸ್ಥಿತಿಯಲ್ಲಿ ವಿದ್ಯಾತೀರ್ಥರು ವಿದ್ಯಾರಣ್ಯರನ್ನು ಈ ಮಹತ್ತ್ವದ ಕೆಲಸಕ್ಕೆ ನಿಯುಕ್ತಿಗೊಳಿಸಿದುದರ ಹಿಂದೆ ಇರುವ ಬ್ರಹ್ಮಕ್ಷಾತ್ರದ ಈ ವಿಶಿಷ್ಟ ಲಕ್ಷಣವು ಗಮನಾರ್ಹವಾದುದು.

ಗುರುದಕ್ಷಿಣಾ ವಿನಾಯಿತಿಯಂಥ ಸರ್ವಸಾಮಾನ್ಯ ಸಂಪ್ರದಾಯವನ್ನು ಅವು ಸಮರ್ಥಿಸಲಾರವಾಗುತ್ತವೆ. ಸಂಕೇತಿಗಳ ಪೂರ್ವನೆಲೆಗಳಲ್ಲಿ ಗೋದಾವರೀತೀರವೂ ಒಂದೆಂಬುದು ಇದರಿಂದ ಪುಷ್ಟಿಗೊಳ್ಳುತ್ತದೆ.

ಮೇಲಿನ ವಾದಗಳಲ್ಲಿ, ಮೊದಲ ಎರಡು, ಸಂಕೇತಿಗಳು ಉತ್ತರದಿಂದ ದಕ್ಷಿಣಕ್ಕೆ ಬಂದವರೆಂಬ ಸಂಗತಿಯನ್ನು ದೃಢಪಡಿಸಲು ಸಮರ್ಥವಾಗಿಲ್ಲವಾದರೂ, ಮುಂದಿನ ವಾದಗಳು ಅದನ್ನು ಪುಷ್ಟಿಗೊಳಿಸುವುದರಿಂದಾಗಿ, ಅರ್ಥಪೂರ್ಣವಾಗುತ್ತವೆ. ಅಖಂಡ ಭಾರತವನ್ನು ಸಾಂಸ್ಕೃತಿಕವಾಗಿ ಆತ್ಮೀಕರಿಸಿಕೊಳ್ಳುವ ಎಲ್ಲೆಡೆಯ ಬ್ರಾಹ್ಮಣರ ಪಾರಂಪರಿಕ (ಸಂಕಲ್ಪ ಮೊದಲಾದ)[15] ಮಂತ್ರಗಳೇ ಸಂಕೇತಿಗಳಲ್ಲಿಯೂ ಪ್ರಚಲಿತವಾಗಿವೆ. ಆದರೆ, ಸಂಕೇತಿಗಳಲ್ಲಿ ಉಳಿದು ಬಂದಿರುವ ಮೌಖಿಕ ಪರಂಪರೆಯು ಕ್ರಮವಾಗಿ ಗಂಗೆ, ನರ್ಮದೆ, ಗೋದಾವರೀ ನದಿಗಳ ತೀರಗಳು ಕಾಲ ಕಾಲಕ್ಕೆ ಅವರ ಪೂರ್ವಸ್ಥಾನವಾಗಿದ್ದುದನ್ನು ಸಮರ್ಥಿಸುತ್ತವೆ.

ಇ. ತಮಿಳುನಾಡಿನಲ್ಲಿ ನೆಲೆಸಿದ ಕಾಲ :

ಸಂಕೇತಿಗಳು ಉತ್ತರದಿಂದ ದಕ್ಷಿಣಕ್ಕೆ ವಲಸೆ ಬಂದವರೆಂಬುದನ್ನು ಸಮರ್ಥಿಸುವ ಪುರಾವೆಗಳೇ ಅವರು ತಮಿಳುನಾಡಿನಲ್ಲಿ ನೆಲೆ ನಿಂತ ಕಾಲವನ್ನು ನಿರ್ಧರಿಸಲೂ ಆಧಾರಗಳಾಗಿವೆ. ಆದರೆ ನಿಖರವಾದ ಇತರ ಯಾವ ಆಧಾರಗಳೂ ಇಲ್ಲದುದರಿಂದ ಲಭ್ಯ, ಮಿತ, ಸಾಂಸ್ಕೃತಿಕ ಆಧಾರಗಳ ಮೇಲೆಯೇ ಈ ಕಾಲವನ್ನೂ ಗ್ರಹಿಸಬೇಕಾಗಿದೆ.

1. ಬುದ್ಧಪೂರ್ವ ಯುಗದಲ್ಲಿ ತಮಿಳುನಾಡಿನಲ್ಲಿ ಬ್ರಾಹ್ಮಣರು : ವಡಮರು ಔತ್ತರೇಯರು ಎಂಬುದನ್ನು ಆ ಪದವೇ ಸೂಚಿಸುತ್ತದಾದರೂ, ಅದರ ವ್ಯಾಪ್ತಿಯು ನಿಖರವಾಗುವುದಿಲ್ಲ. ಆದರೆ, ಈ ಸಂದಿಗ್ಧತೆಯನ್ನು, ತಮಿಳುನಾಡಿನಲ್ಲಿ 'ವಡವರ್' ಮತ್ತು 'ವಡುಕರ್' ಎಂಬ ಎರಡು ಪದಗಳನ್ನು ಬಳಸುವ ಮೂಲಕ ಪರಿಹರಿಸಿಕೊಂಡಿದ್ದಾರೆ. ತಮಿಳು ಗಡಿಯ ಉತ್ತರಕ್ಕೆ ತಕ್ಷಣ ಸಿಗುವವರು 'ವಡುಕರ್'; ಔತ್ತರೇಯ ಆರ್ಯರು 'ವಡವರ್.' ತಮಿಳು ಸಾಹಿತ್ಯದಲ್ಲಿ 'ಆರ್ಯ', 'ವಡವರ್', 'ಬ್ರಾಹ್ಮಣ' - ಎಂಬ ಪದಗಳು, ಪರ್ಯಾಯವಾಗಿ ಬಳಕೆಯಾಗಿರುವುದನ್ನು ಕಾಣಬಹುದು.[16] ಉಳಿದೆಲ್ಲ ಬ್ರಾಹ್ಮಣರಂತೆ ಸಂಕೇತಿಗಳೂ ಉತ್ತರದಿಂದ ಬಂದವರೆಂಬುದನ್ನೇ ಈ ಸಂಗತಿಯೂ ಸ್ಪಷ್ಟಪಡಿಸುತ್ತದೆ.

ಮಹಾಕಾವ್ಯಗಳು ಮತ್ತು ಪುರಾಣಗಳಲ್ಲಿ ಉಲ್ಲೇಖವಾಗಿರುವಂತೆ, ಅಗಸ್ತ್ಯರೊಡನೆಯೇ ಬ್ರಾಹ್ಮಣರು ತಮಿಳುದೇಶಕ್ಕೆ ಬಂದರೆಂಬ ಪರಂಪರಾಗತ ಅರಿವನ್ನು, ಪ್ರಾಚೀನ ತಮಿಳು ಸಾಹಿತ್ಯವೂ ಖಚಿತಪಡಿಸುತ್ತದೆ. ಕ್ರಿಸ್ತಶಕದ ಪ್ರಾರಂಭಿಕ ತಮಿಳುಸಾಹಿತ್ಯದಲ್ಲಿ ಕಾಣುವ ಬ್ರಾಹ್ಮಣಮತದ ಲಕ್ಷಣವು ಬುದ್ಧಪೂರ್ವಯುಗದ್ದು ಎಂಬ ಅಭಿಮತವೂ ಇದೆ.[17] ಇಂಥ ಆಧಾರಗಳ ಮೇಲೆಯೇ, ತಮಿಳುನಾಡಿನಲ್ಲಿ ಕ್ರಿ.ಪೂ.ಸಾವಿರದ ವೇಳೆಗೇ ಬ್ರಾಹ್ಮಣರಿದ್ದರೆಂದೂ ದಕ್ಷಿಣಕ್ಕೆ ಆರ್ಯರ ವಲಸೆಯು ಮೌರ್ಯಸಾಮ್ರಾಜ್ಯ ಸ್ಥಾಪನೆಯಾಗುವವರೆಗೂ ನಿಯತವಾಗಿ ಮುಂದುವರಿಯಿತೆಂದೂ, ಅಭಿಪ್ರಾಯಪಡಲಾಗಿದೆ.[18]

2. ತಮಿಳುನಾಡಿನಲ್ಲಿ ಸಂಕೇತಿಗಳು ನೆಲೆಸಿದ ಕಾಲ : ಗೋದಾವರೀತೀರದಲ್ಲಿ ಆದಿಶಂಕರರಿಗೆ ವಿದ್ಯಾಬೋಧೆಮಾಡಿದ

---

15 ಅ) ಗಂಗೇ ಚ ಯಮುನೇ ಚೈವ ಗೋದಾವರಿ ಸರಸ್ವತಿ |
ನರ್ಮದೇ ಸಿಂಧು ಕಾವೇರಿ ಜಲೇsಸ್ಮಿನ್ ಸನ್ನಿಧಿಂ ಕುರು||
ಆ) .... ಭಾರತವರ್ಷೇ ಭರತಖಂಡೇ ..... ಇತ್ಯಾದಿ.

16 *Some contributions of South India to Indian culture* (Calcutta University Readership Lectures), Prof. Krishnaswami Aiyangar S., Calcutta University, Calcutta, 1942 (First Edition), p 1.

17 ಅದೇ : ಪು.೪೮-೫೧.

18 A *A History of South India* (from pre-historic times to the fall of Vijayanagar) p.70.
B. *A Survey of Indian history,* Panikkar K.M., Asia Publishing House, 1957, p.2.

ಗೋವಿಂದಭಗವತ್ಪಾದರ ಪರಂಪರೆಯವರೇ ಸಂಕೇತಿಗಳು ಎಂಬ ವಾದವನ್ನು ಒಪ್ಪುವುದಾದರೆ, ಸಂಕೇತಿಗಳು ತಮಿಳುನಾಡಿಗೆ ಬಂದ ಕಾಲವು ಆದಿಶಂಕರರ ಕಾಲ (ಸುಮಾರು ಕ್ರಿ.ಶ.ಎಂಟನೆಯ ಶತಮಾನ) ಇಲ್ಲವೇ ಆದಿಶಂಕರಾನಂತರದ ಕಾಲವೇ ಆಗಬೇಕಾಗುತ್ತದೆ. ಕ್ರಿ.ಶ. ಹನ್ನೊಂದನೆಯ ಶತಮಾನದ ಕೊನೆಗೆ ತಮಿಳುನಾಡಿನಿಂದ ಕರ್ನಾಟಕಕ್ಕೆ ಆದ ಸಂಕೇತಿಗಳ ದೊಡ್ಡಪ್ರಮಾಣದ ವಲಸೆಯ ಹಿನ್ನೆಲೆಯಲ್ಲಿ, ಅದು ಆದಿಶಂಕರರ ಕಾಲಕ್ಕಿಂತ ತೀರ ಈಚಿನದೂ ಆಗಿರುವುದು ಸಾಧ್ಯವಿಲ್ಲ. ತಮಿಳುನಾಡಿನ ಇತರ ಸ್ಮಾರ್ತ ಬ್ರಾಹ್ಮಣರ ಸಾಂಸ್ಕೃತಿಕ ಮುಖ್ಯವಾಹಿನಿಯಲ್ಲಿ ಸಂಕೇತಿಗಳು ಒಂದಾಗಿರುವುದರಿಂದ, ಆ ವಿವಿಧ ಪಂಗಡಗಳ ವಲಸೆಯ ಕಾಲದಲ್ಲಿಯೂ ಹೆಚ್ಚಿನ ಅಂತರವನ್ನು ನಿರೀಕ್ಷಿಸಲಾಗದು. ಆದಿಶಂಕರರ ಕಾಲವೂ ಚರ್ಚಾಸ್ಪದವೇ ಆಗಿದೆ ಎಂಬುದೂ ಗಮನಿಸಬೇಕಾದ ಸಂಗತಿ.

ಉತ್ತರದಿಂದ ತಮಿಳುನಾಡಿಗೆ ಸಂಕೇತಿಗಳು ವಲಸೆ ಬಂದ ಕಾಲವನ್ನು ನಿರ್ಧರಿಸುವ ಇತರ ಯಾವ ಆಧಾರಗಳೂ ಇಲ್ಲವಾದುದರಿಂದ, ಈ ಸಂಬಂಧದಲ್ಲಿ ನಿಖರವಾದ ನಿರ್ಣಯವು ಸಾಧ್ಯವಿಲ್ಲವಾಗಿದೆ. ಆದರೆ, ಅದು, ಕ್ರಿ.ಶ.೧೦೮೭ಕ್ಕಿಂತ (ಸಂಕೇತಿಗಳ ಕರ್ನಾಟಕ ವಲಸೆಯ ಕಾಲ) ಹಲವು ಶತಮಾನಗಳ ಮೊದಲೇ ಆಗಿರಬೇಕಾದುದು, ಕರ್ನಾಟಕಕ್ಕೆ ಬಂದ ವಲಸಿಗರ ಸಂಖ್ಯಾಬಾಹುಳ್ಯದ ಹಿನ್ನೆಲೆಯಲ್ಲಿ ಸಂಭಾವ್ಯವೆನಿಸುತ್ತದೆ.

ಈ. ಬ್ರಾಹ್ಮಣರು : ಉಪಪಂಗಡಗಳು ಮತ್ತು ಸಂಕೇತಿಗಳು :

ವೇದವು ಅಪೌರುಷೇಯವೆಂದು ನಂಬಿ, ತಮ್ಮೆಲ್ಲ ಧಾರ್ಮಿಕ ಆಚರಣೆಗಳಿಗೂ ವೇದವನ್ನಾಧರಿಸಿ ನಡೆದುಕೊಳ್ಳುವುದು ವೈದಿಕರ ಪದ್ಧತಿ. ಅವರ ಪಾಲಿಗೆ ವೇದಗಳು ಸ್ವತಃಪ್ರಮಾಣಗಳು; ಪರಮಾಧಾರಗಳು. ಷಟ್ಕರ್ಮನಿರತರೂ, ಬ್ರಹ್ಮಚರ್ಯಾದಿ ಚತುರಾಶ್ರಮಗಳಲ್ಲಿ ಜೀವಿಸುವವರೂ, ದೈನಂದಿನ ಪಂಚಮಹಾಯಜ್ಞಗಳನ್ನು ಮಾಡುವವರೂ, ಷೋಡಶ ಸಂಸ್ಕಾರಗಳಿಗೆ ಒಳಗಾಗುವವರೂ, ಧರ್ಮಶಾಸ್ತ್ರಗಳಿಗೆ ಬದ್ಧರಾಗಿ ಇಡೀ ಬದುಕನ್ನು ಬಾಳುವವರೂ, ಬ್ರಾಹ್ಮಣರು. ಚಾತುರ್ವರ್ಣ್ಯ ಎಂಬುದು ಭಾರತದ ಜಾತಿಪದ್ಧತಿಯ ವಿಶಾಲ ಚೌಕಟ್ಟು; ಒಂದೊಂದು ವರ್ಣವೂ ಶಾಖೋಪಶಾಖೆಗಳಾಗಿ ಒಡೆದು ಸಂಕೀರ್ಣವಾದ ಜಾತಿಜಾಲವಾಗಿ ಪರಿಣಾಮಗೊಂಡಿರುವುದು ಭಾರತದ ಸಾಮಾಜಿಕ ರಚನೆಯ ವಿಶೇಷ ಲಕ್ಷಣ. ತಮ್ಮ ಶಕ್ತಿ, ಸಾಮರ್ಥ್ಯ, ಅಭಿರುಚಿ, ಪ್ರತಿಫಲಗಳನ್ನು ಗಣಿಸಿ ಆರಿಸಿಕೊಂಡ ಕಸಬುಗಳು ಏಕಸ್ವಾಮ್ಯಕ್ಕೊಳಪಟ್ಟುದೇ, ಭಾರತದ ಎಲ್ಲ ಜಾತಿಗಳ ಹಿಂದಿನ ಕಥೆ ಎಂಬ ಹರ್ಬರ್ಟ್ ರೈಸ್ಲಿಯ ಮಾತು ಈಗ ಸಾರ್ವತ್ರಿಕ ಮನ್ನಣೆ ಪಡೆದಿದೆ. ಷಟ್ಕರ್ಮವು ಬ್ರಾಹ್ಮಣರ ಜೀವನದ ಅವಿಭಾಜ್ಯ ಅಂಗ. ನೆಲೆಸಿದ ಪ್ರದೇಶ, ಆಡುವ ಭಾಷೆ, ಆಳ್ವಿಕೆ, ತತ್ತ್ವಭೇದ - ಇವೆಲ್ಲವೂ ಬ್ರಾಹ್ಮಣರಲ್ಲಿ ಮತ್ತಷ್ಟು ಪಂಗಡ, ಉಪಪಂಗಡಗಳನ್ನು ಸೃಷ್ಟಿಸಿವೆ. 'ವಂಶಶುದ್ಧಿ'ಯೂ ಅದರ ಒಂದು ಪ್ರಮುಖ ಕಾರಣವೆಂಬುದನ್ನು ಮರೆಯುವಂತಿಲ್ಲ. ಪ್ರತಿ ಉಪಪಂಗಡಕ್ಕೂ ತನ್ನದೇ ಆದ ವಿಶಿಷ್ಟ ಸಂಪ್ರದಾಯ, ಐತಿಹ್ಯ, ಆಚಾರವಿರುತ್ತದೆ.

ಬ್ರಾಹ್ಮಣರ ಪಂಗಡ, ಉಪಪಂಗಡಗಳಲ್ಲಿ ಸಂಕೇತಿಗಳ ಸ್ಥಾನವನ್ನು ಗುರುತಿಸುವುದಕ್ಕಾಗಿ, ಡಾ.ವಿಲ್ಸನ್ ಅವರ ಪಟ್ಟಿಯನ್ನು ಗಮನಿಸಬಹುದು (ಪಟ್ಟಿ 1 ಪು.285). ಅಲ್ಲಿ ಹೇಳಿದ ದ್ರಾವಿಡ ಬ್ರಾಹ್ಮಣರ ಉಪಪಂಗಡಗಳಲ್ಲಿ ಸ್ಮಾರ್ತರ ಉಪವಿಭಾಗಗಳನ್ನು ಇಲ್ಲಿ ಕೊಟ್ಟಿದೆ:

ದ್ರಾವಿಡ ಬ್ರಾಹ್ಮಣರು : ಸ್ಮಾರ್ತ

1) ವಡಮ: ವಡದೇಶತು ವಡಮ; ಚೋಳದೇಶತು ವಡಮ.
2) ಬೃಹಚ್ಚರಣ: ಮಾಂಗುಡಿ; ಸತ್ಯಮಂಗಲಂ ಇತ್ಯಾದಿ.
3) ವಾದ್ಯಮನ್: (ಮಾಧ್ಯಮನ್)
4) ಅಷ್ಟಸಹಸ್ರಂ;
5) ಕನಿಯಾಲ್ (ಕಣಿಯಾನ್)
6) ಸಂಕೇತಿ : ಕೌಶಿಕ (ಹಾಸನಸೀಮೆ, ಮತ್ತೂರು, ಮಧ್ಯದೇಶ, ದಕ್ಷಿಣದೇಶ)
   ಬೆಟ್ಟದಪುರ; ಲಿಂಗದಹಳ್ಳಿ (ಬಸವಾನಿ, ಬೀರೂರು); ದಕ್ಷಿಣ (ತಮಿಳುನಾಡು, ಕೇರಳ)

೨. ಸಮುದಾಯದ ರಚನೆ

ಅ. 'ಸಂಕೇತಿ' : ಪದವ್ಯುತ್ಪತ್ತಿ :

ಮಳಹ್‌ತ್ಣ್ಣೆ, ಕಣ್ಣಮಾಣಿಕ್ಕಂ, ಮಾಂಗುಡಿ, ಸತ್ಯಮಂಗಲಂ, ಮುಕ್ಕಾಣಿಯಾರ್ ಮೊದಲಾದ ಸ್ಥಳವಾಚಕಗಳನ್ನಾಧರಿಸಿದ ಉಪಜಾತಿಗಳು ಸೃಷ್ಟಿಯಾದಂತೆಯೇ, ಶೆಂಕೋಟ್ಟೈನಲ್ಲಿ ನೆಲೆಸಿದವರು 'ಸಂಕೇತಿ' ಎನಿಸಿದರೆಂಬುದು ಆನುಷಂಗಿಕವಾಗಿ ಸಿದ್ಧವಾದ ಸಂಗತಿ. ಈ ಅನ್ವರ್ಥನಾಮವನ್ನು ವಿಶ್ಲೇಷಿಸುವ ಹಲವು ಪ್ರಯತ್ನಗಳು ನಡೆದಿದ್ದು, ಅವುಗಳಲ್ಲಿ ಕೆಲವಾದರೂ ಅವಗಾಹನೆಗೆ ಅರ್ಹವಾಗಿವೆ. ಕೆಲವು ವಿಶ್ಲೇಷಣೆಗಳು ಮೇಲುನೋಟಕ್ಕೇ ಕಪೋಲಕಲ್ಪಿತಗಳಂತೆ ಕಂಡರೂ, ಅವು ಸಮುದಾಯದ ಚಿಂತನವಿಧಾನದ ಪರಿಚಯವನ್ನೂ ಮಾಡಿಕೊಡುವುದರಿಂದ ಅವನ್ನೂ ಇಲ್ಲಿ ಕ್ರೋಡೀಕರಿಸಿದೆ:

1) ಶೆಂಕೈ ಆದಿ : ತಮಿಳುನಾಡಿನ ಕ್ಷೇತ್ರಕಾರ್ಯದ ಸಂದರ್ಭದಲ್ಲಿ, 'ಶೆಂಕೋಟ್ಟೈ' ಆಧರಿಸಿದ ಪದವ್ಯುತ್ಪತ್ತಿಗೆ ಸಾರ್ವತ್ರಿಕವಾದ ಸಮರ್ಥನೆ ದೊರೆಯಿತು. ಅಲ್ಲಿ ಆಗಿರುವ ವಲಸೆಗಳ ಸ್ವರೂಪವೂ ಈ ವಾದವನ್ನು ಸಮರ್ಥಿಸುತ್ತದೆ.

ತಮಿಳುನಾಡಿನಲ್ಲಿ ಕುಂಭಕೋಣಮ್ ⟶ ಮುಗವ್, ಕೊಯಮತ್ತೂರು ⟶ ಕೋವೈ, ತಂಜಾವೂರು ⟶ ತಂಜೈ, ಶೆಂಕೋಟ್ಟೈ ⟶ ಶೆಂ(ಕೈ)ಗೈ - ಹೀಗೆ ಸ್ಥಳನಾಮಗಳನ್ನು ಸಂಗ್ರಹಿಸಿ ಹೇಳುವ ಪದ್ಧತಿ ಇದೆ. ಶೆಂಕೋಟ್ಟೈ ಪ್ರದೇಶದವರನ್ನು ಇತರರು 'ಶೆಂಕೈ ಆದಿ' (ಶೆಂಕೋಟ್ಟೈ ಮೂಲದವರು, ಶೆಂಕೋಟ್ಟೈ ಪ್ರದೇಶದಿಂದ ಬಂದವರು) ಎಂದು ಗುರುತಿಸುತ್ತಿದ್ದುದು, ಶೆಂಕೈ ಆದಿ ⟶ ಶೆಂಕೆಯ್ ಆದಿ ⟶ ಶೆಂಕಯೇದಿ ⟶ ಸೆಂಕಯೇದಿ ⟶ ಸೆಂಕಯೇತಿ⟶ಸೆಂಕೇತಿ ⟶ ಸಂಕೇತಿ ಎಂದು ಪರಿವರ್ತನೆ ಹೊಂದಿದೆ. ಕ-ಗ-ಚ-ಶ-ಸ- ಕಾರಗಳ ತಮಿಳು ಉಚ್ಚಾರಣಾ ರೀತಿಯು ಈ ವ್ಯುತ್ಪತ್ತಿಯನ್ನು ಮತ್ತಷ್ಟು ಸಹಜವಾಗಿಸುತ್ತದೆ. ಮುಖ್ಯವಾಗಿ ಶೆಂಕೋಟ್ಟೈ ಜನರಿಗೆ (ಈಗಿನ) ಕೇರಳದೊಂದಿಗೆ ವಿಶೇಷವಾದ ಸಂಪರ್ಕವಿತ್ತು. ಇದಕ್ಕೆ ಪೂರಕವಾಗಿ ತಿರುನೆಲ್‌ವೇಲಿ ಮೂಲದ ಸುಂದರಕೃಷ್ಣನ್ ಅವರ ಅನುಭವವಿದೆ. ಅವರು ವಡಮರು. ಅವರ ಪೂರ್ವಿಕರು ಪರವೂರ್ (ಪರೂರ್)ಗೆ ವಲಸೆ ಹೋಗಿದ್ದರು. ಮುತ್ತಾತನ ಕಾಲದಲ್ಲಿ ತಮ್ಮ ತಿರುನೆಲ್‌ವೇಲಿಗೆ ಮರಳಿದರು. ಆದರೆ ಅವರಿಗೆ 'ಸಂಕೇತಿ' ಎಂಬ ಹೆಸರು ಬರಲಿಲ್ಲ. ಏಕೆಂದರೆ ಅವರು ಶೆಂಕೋಟ್ಟೈ ಭಾಗದಿಂದ ವಲಸೆ ಹೋಗಿರಲಿಲ್ಲ.[19]

2) ಸಂಕೇತಂ : ಸಂಕೇತಿಗಳ ಮೂಲ ಮತ್ತು ವಲಸೆಗೆ ಸಂಬಂಧಿಸಿದಂತೆ ಸಂಶೋಧನೆಯಲ್ಲಿ ತೊಡಗಿದ ಕೆ.ಎಸ್.ಕೇಶವಮೂರ್ತಿ ಅವರು ಬರೆದಿರುವ "ಸಂಕೇತಿಗಳು ಯಾರು?" ಎಂಬ ಲೇಖನದಲ್ಲಿ 'ಸಂಕೇತಂ'ಗಳಲ್ಲಿ ವಾಸಿಸುತ್ತಿದ್ದವರು ಸಂಕೇತಿಗಳು ಎಂಬ ನಿರ್ಧಾರಕ್ಕೆ ಬಂದಿದ್ದಾರೆ. 'ಕೇರಳದಲ್ಲಿ ದೇವಾಲಯಗಳನ್ನು ಆಶ್ರಯಿಸಿ ಬ್ರಾಹ್ಮಣರ ಗ್ರಾಮಗಳು ಇರುತ್ತಿದ್ದವು. ಪೂರ್ತಿಯಾಗಿ ಒಂದೇ ಬುಡಕಟ್ಟಿಗೆ ಸೇರಿದ ಬ್ರಾಹ್ಮಣರೇ ಇದ್ದ ಗ್ರಾಮಗಳೂ ಇದ್ದವು. ಪ್ರೊ.ಕೆ.ವಿ.ಕೃಷ್ಣ ಅಯ್ಯರ್‌ರವರು ಇವುಗಳನ್ನು "The temple states and the village republics of Brahmins" ಎಂದಿದ್ದಾರೆ. ಇಂತಹ ಸ್ವಯಂ ಆಡಳಿತಾಧಿಕಾರವಿದ್ದ ಗ್ರಾಮಗಳಿಗೆ ಅಲ್ಲಿಯ ದೇವಾಲಯದ ದೇವರೇ ಒಡೆಯನೆಂದು ಪರಿಗಣಿಸಲ್ಪಟ್ಟು, ಆಡಳಿತವೂ ಸಹ ಅಂತಹ ದೇವರ ಹೆಸರಿನಲ್ಲೇ ನಡೆಸಲ್ಪಡುತ್ತಿತ್ತು. ಹೀಗೆ ಒಂದು ದೇವಾಲಯದ ದೇವರ ಅಧೀನಕ್ಕೆ ಒಳಪಟ್ಟ ಬ್ರಾಹ್ಮಣ ಗ್ರಾಮಕ್ಕೆ, 'ಸಂಕೇತಂ' ಎಂದು ಹೆಸರಿತ್ತು. ಇಂತಹ ಸಂಕೇತಂಗಳನ್ನು ಹೆಸರಿಸುವಾಗ, ಅದು ಯಾವ ದೇವಾಲಯ ಅಥವಾ ಗ್ರಾಮಕ್ಕೆ ಒಳಪಟ್ಟಿತ್ತೋ ಅದರ ಹೆಸರಿನೊಡನೆ ಸೇರಿಸಿ ಹೇಳಲಾಗುತ್ತಿತ್ತು. ಇಂತಹ ಸಂಕೇತಂಗಳ ಬಗ್ಗೆ ಪ್ರೊ.ಕೆ.ವಿ.ಕೃಷ್ಣ ಅಯ್ಯರ್‌ರವರು ಹೀಗೆ ಹೇಳುತ್ತಾರೆ "A Sanketham was a Brahmin territory adjoining a temple with God as its head having all self governing powers including tax collection." ಇಂತಹ ಸಂಕೇತಂಗಳಲ್ಲಿದ್ದ ಬ್ರಾಹ್ಮಣರೆಲ್ಲಾ ತಮಿಳು ಮಾತನಾಡುವವರಾಗಿದ್ದು,

---

[19] *ಸುಂದರ ಕೃಷ್ಣನ್,* ೫೫, ಸಹಾಯಕ ನಿಲಯ ಅಭಿಯಂತರು, ಆಕಾಶವಾಣಿ, ಮೈಸೂರು ಅವರೊಡನೆ ಮೈಸೂರಿನಲ್ಲಿ ೮.೪.೮೮ರಲ್ಲಿ ನಡೆಸಿದ ಸಂದರ್ಶನದಿಂದ

ದೇವಸ್ಥಾನದ ಸೇವೆಯಲ್ಲಿ ನಿರತರಾಗಿರುತ್ತಿದ್ದುದರಿಂದ, ಎಲ್ಲರೂ ವೇದಾಧ್ಯಯನ ಸಂಪನ್ನರೇ ಆಗಿದ್ದರು. ... ಇಂತಹ ಸಂಕೇತಂಗಳಲ್ಲಿ ವಾಸಿಸುತ್ತಿದ್ದವರು ಅಲ್ಲಿಯ 'ಸಂಕೇತಿ'ಗಳೆಂದು ಕರೆಯಲ್ಪಡುತ್ತಿದ್ದರು ... ಇಂತಹ ಸಂಕೇತಂಗಳ ಹೊರಗೂ ವಾಸಿಸುತ್ತಿದ್ದ ತಮಿಳು ಬ್ರಾಹ್ಮಣರನ್ನು 'ಅಯ್ಯರ್'ಗಳೆಂದೇ ಕರೆಯುವುದು ರೂಢಿಯಾಗಿ ಮುಂದುವರೆದಿತ್ತು ... - ಇದು ಅವರ ವಾದದ ತಿರುಳು.

ಇದು ಮೇಲುನೋಟಕ್ಕೆ ಸರಳ ಹಾಗೂ ಸಹಜ ವ್ಯುತ್ಪತ್ತಿಯಂತೆ ತೋರುತ್ತದೆ. ಡಾ.ಕೆ.ಕೃಷ್ಣಮೂರ್ತಿ ಅವರ ಅನುಭವವೂ[20] ಇದಕ್ಕೆ ಪೂರಕವಾದುದೇ ಆಗಿದೆ.

ಈ ವಾದಕ್ಕೆ ಆಕ್ಷೇಪಗಳಿವೆ:

0.1 ಸಂಕೇತಿಗಳು ಎಂದೂ ಯಾವುದೇ ದೇವಾಲಯದ ಅರ್ಚಕರಾಗಿರಲಿಲ್ಲ (ನಂಬೂದಿರಿ, ಎಂಬ್ರಾಂದಿರಿ, ಪಟ್ಟರ್‌ಗಳು ಅರ್ಚಕರಾಗಿರುವುದು ಸಂಪ್ರದಾಯ). ಅಷ್ಟಾವಧಾನ, ವೇದಪಾರಾಯಣ ಮೊದಲಾದ ಆನುಷಂಗಿಕ ವೈದಿಕ ಸೇವೆಗಳಲ್ಲಿ ಮಾತ್ರ ಭಾಗಿಯಾಗುತ್ತಿದ್ದವರು ಅವರು. ಇಂಥ ಸೇವೆಗಾಗಿ ಇತರ ಬ್ರಾಹ್ಮಣರೂ ಇರುತ್ತಿದ್ದರು. ಇತರ ಸೇವೆಗಳಿಗಾಗಿ ಬ್ರಾಹ್ಮಣೇತರರೂ ಇರುತ್ತಿದ್ದರು. ಶೆಂಕೋಟ್ಟೈ, ತಿರುವನಂತಪುರಂ, ಶುಚೀಂದ್ರಂ, ಕನ್ಯಾಕುಮಾರಿ ಮೊದಲಾದ ದೇವಸ್ಥಾನಗಳ ಸುತ್ತ ಇದ್ದ ಸಂಕೇತಿಗಳ ಬೀದಿಗಳನ್ನು ಈಗಲೂ ಗುರುತಿಸಬಹುದು. ಪರಂಪರೆಯಾಗಿ ಉಳಿದುಬಂದ ಇತರ ಬ್ರಾಹ್ಮಣ ಪಂಗಡಗಳನ್ನೂ ಕಾಣಬಹುದು.

0.2 'ಸಂಕೇತಂ'ಗಳು ಪೂರ್ಣವಾಗಿ ಸಂಕೇತಿಗಳಿಗೇ ಸಂಬಂಧಿಸಿದ್ದರೆ, ಆಯಾ 'ಸಂಕೇತಂ'ನ ಹೆಸರು ಹೊತ್ತ ಸಂಕೇತಿ ಕುಲಗಳೋ ಉಪಜಾತಿಗಳೋ ಉಂಟಾಗುವುದು ಸಹಜ ಪ್ರಕ್ರಿಯೆ. ಆದರೆ, ಕೇರಳ ಮತ್ತು ತಮಿಳುನಾಡಿನ ಸಂಕೇತಿಗಳು ದೂರದೂರ ಚದುರಿದವರಾದರೂ, ಅಂಥದು ಸಂಭವಿಸಿಲ್ಲ.

0.3 ಕರ್ನಾಟಕದಲ್ಲಿ, ಸಂಕೇತಿಗಳು ಇತರ ಬ್ರಾಹ್ಮಣರೊಂದಿಗೆ ನೆಲೆಸಿದ ಗ್ರಾಮಗಳಿರುವಂತೆಯೇ, ಪೂರ್ಣವಾಗಿ ಸಂಕೇತಿ ಬ್ರಾಹ್ಮಣರು ಮಾತ್ರ ಇದ್ದ ಗ್ರಾಮಗಳ ನಿದರ್ಶನಗಳೂ ಇವೆ. ಯಾರೂ ತಮ್ಮನ್ನು ಆಯಾ ದೇವಾಲಯ ಇಲ್ಲವೆ ಗ್ರಾಮಗಳೊಂದಿಗೆ ಗುರುತಿಸಿಕೊಳ್ಳಲಿಲ್ಲ. ಬದಲಿಗೆ, (ಶೆಂಕೋಟ್ಟೈನಲ್ಲಿ ಆದಂತೆ) ತಮ್ಮ ಪ್ರಧಾನ ಕೇಂದ್ರದೊಂದಿಗೆ ಗುರುತಿಸಿಕೊಂಡರು. ಸಂಕೇತಿಗಳ ಪ್ರಾಚೀನ ನೆಲೆಗಳಲ್ಲಿ ಒಂದಾದ ಬಸವಾನಿಯ ಸಂಕೇತಿಗಳು, 'ಮಲೆನಾಡು ಸಂಕೇತಿ'ಗಳು ಎನಿಸಿದರು; ದೇವಸ್ಥಾನದ ಸೇವೆಗೆಂದೇ ಹೋದವರಾದರೂ, ಅಲ್ಲಿನ ದೇವಾಲಯ ಇಲ್ಲವೆ ಗ್ರಾಮದ ಹೆಸರಿನಿಂದಲೂ ಗುರುತಿಸಲ್ಪಡಲಿಲ್ಲ.

0.4 'ಸಂಕೇತಂ', ಸಂಕೇತಿಗಳ ವಿಶಿಷ್ಟ ಪರಂಪರೆಗೆ ಸಂಬಂಧಿಸಿದ್ದುದಾಗಿದ್ದರೆ, ಈಗಿನಂತೆ, ಅದರ ನೆನಪು ಸಾರ್ವತ್ರಿಕವಾಗಿ ಅಳಿಸಿಹೋಗುವುದು ಅಸಂಭವವೆಂದೇ ಹೇಳಬೇಕಾಗುತ್ತದೆ.

ಈ ವಾದದ ಸಂದರ್ಭದಲ್ಲಿ ಕೇಶವಮೂರ್ತಿ ಅವರು ಮತ್ತೆ ಕೆಲವು ಸಮರ್ಥನೆಗಳನ್ನು ಕೊಟ್ಟಿದ್ದಾರೆ. ಅವಕ್ಕೂ ಆಕ್ಷೇಪಗಳಿವೆ :

0.5 'ಸಭಾ'ದ ವ್ಯವಸ್ಥೆ ಸಂಕೇತಿಗಳಿಗೆ ಮೀಸಲಾದುದಲ್ಲ. ತಮಿಳುನಾಡಿನ ಎಲ್ಲಾ ವರ್ಗದ ಎಲ್ಲಾ ಬ್ರಾಹ್ಮಣರ ಅಗ್ರಹಾರಗಳಲ್ಲಿದ್ದ ವ್ಯವಸ್ಥೆ ಅದು. ದಕ್ಷಿಣದ ಸಂಕೇತಿಗಳಲ್ಲಿ ಈಗ ಸಂಸ್ಕಾರಾಂಗವಾಗಿ ನಡೆಯುವ ಸಭೆ, ಸಭಾತಾಂಬೂಲಗಳು, ಕರ್ನಾಟಕಕ್ಕೆ ಹೋಲಿಸಿದರೆ ಗೌಣವೇ ಆಗಿವೆ; ಅಲ್ಲಿನ ಇತರ ಬ್ರಾಹ್ಮಣರೊಡನೆ ಹೋಲಿಸಿದಾಗಲೂ ಇದು ಸತ್ಯ.

0.6 ಸಂಕೇತಂನ ಯಜಮಾನರ ಗೌರವಾನ್ವಿತ ಪತ್ನಿ 'ನಾಯತ್ತ್‌ತ್ತಿಯಾರ್' ಮತ್ತು 'ನಾಚಾರಮ್ಮ' ಅಥವಾ 'ನಾಚ್ಚ್ಯಾರಮ್ಮ' ರೂಪಾಂತರ ಪದಗಳಾಗಲಾರವು. ಅಲ್ಲದೆ, ಎಲ್ಲ ಸಂಕೇತಂಗಳ ಯಜಮಾನರು ಸಂಕೇತಿಗಳೇ ಆಗಿರುತ್ತಿರಲು ಸಾಧ್ಯವಿಲ್ಲ. ಐತಿಹ್ಯಗಳೆಲ್ಲವೂ ಹೇಳುವುದು (ನಾಚಾರಮ್ಮನ) ಬಡಕುಟುಂಬದ ಬಗೆಗೆ. ಒಂದು ವೇಳೆ ಒಬ್ಬ ನಾಯತ್ತ್‌ಯಾರೇ 'ನಾಚಾರಮ್ಮ' ನಾಗಿದ್ದರೂ, ಅದು ತನ್ನಷ್ಟಕ್ಕೇ 'ಸಂಕೇತಂ' ವಾದಕ್ಕೆ ಪುಷ್ಟಿ ನೀಡಲಾರದು.

---

20 *ಸ್ಮರಣ ಸಂಚಿಕೆ,* ಬೆಟ್ಟದಪುರ ಸಂಕೇತಿ ಸಂಘ, ಬಸವನಗುಡಿ, ಬೆಂಗಳೂರು, ೧೯೮೮.

ಈ ವಾದಕ್ಕೆ ಪೋಷಕವಾದ ಅಂಶಗಳೂ ಗಟ್ಟಿಯಾದುವಲ್ಲ:

0.7 "ಸಂಕೇತಿ ಎಂಬುದು ಜಾತಿಯ ಹೆಸರಲ್ಲ; ಬ್ರಾಹ್ಮಣರಲ್ಲಿ ಅತಿಶ್ರೇಷ್ಠ ವೇದಶಾಸ್ತ್ರ ವಿದ್ವಾಂಸರನ್ನು 'ಸಂಕೇತಿ' ಎನ್ನುತ್ತಾರೆ."[21] ಎಂಬ ಸಂಗತಿಯು, 'ಸಂಕೇತಂ'ನಿಂದ 'ಸಂಕೇತಿ' ನಿಷ್ಪನ್ನವಾಯಿತು ಎಂದು ವಾದಿಸುವವರಿಗೆ ಸಹಾಯಕವಾಗಿದೆ. ಆದರೆ ಅದು ತನ್ನಷ್ಟಕ್ಕೇ ಅಸಂದಿಗ್ಧ ಸಮರ್ಥನೆಯಾಗಿಲ್ಲ.

ಸಿ.ಎಸ್.ರಾಮಚಂದ್ರ ಮತ್ತು ಚಿ.ನಾ.ಕೇಶವಮೂರ್ತಿ ಅವರುಗಳು ಕ್ರಮವಾಗಿ 'ಸಾಂಖ್ಯಾರ್ತಿ', 'ಸಾಂಖ್ಯಾರ್ತಿಗಳ್' ಎಂಬ ಮೂಲದಿಂದ 'ಸಂಕೇತಿ' ಪದದ ವ್ಯುತ್ಪತ್ತಿಯನ್ನು ಸಾಧಿಸುವ ಪ್ರಯತ್ನ[22] ಮಾಡಿದರೂ, 'ಶಂಕೋಟೆಜನ', 'ಶಂಕೋಟ್ಟೈ ಜನರು' ಎಂಬ ಮೂಲಗಳಿಂದಲೂ ಅದನ್ನು ಸಾಧಿಸುವ ಪ್ರಯತ್ನಗಳನ್ನು ಮಾಡಿದ್ದಾರೆ. ಕೇಶವಮೂರ್ತಿಗಳಂತೂ, ಎರಡನೆಯದನ್ನೇ ಹೆಚ್ಚು ಯುಕ್ತವೆಂದು ಪರಿಗಣಿಸಿದ್ದಾರೆ. 'ಸಾಂಖ್ಯಾರ್ತಿ' ಎಂದರೆ ಮೇಧಾವಿಗಳು ಎಂಬುದು ಈ ಲೇಖಕರು ಭಾವಿಸಿದ ಅರ್ಥ. ಒಂದು ಶತಮಾನದ ಹಿಂದೆ ಇದ್ದ ಹಾಸನ ಜಿಲ್ಲೆಯ ಕಟ್ಟೆಪುರ ಎಂಬ ಗ್ರಾಮದ ಸುಂದರಶಾಸ್ತ್ರಿ ಎಂಬ ವಿದ್ವಾಂಸರು 'ಸಂಖ್ಯೇತಿ' ಎಂದರೆ ಎಲ್ಲ ಸಂಖ್ಯೆಯಿಂದ (ಜಾತಿ) ಮೇಲ್ಪಟ್ಟವರು; ಆದ್ದರಿಂದ 'ಸಂಕೇತಿ' ಎನಿಸಿದರು ಎಂದು ಹೇಳುತ್ತಿದ್ದುದನ್ನು ಹಲವು ವಕ್ತೃಗಳು ಸ್ಮರಿಸುತ್ತಾರೆ. ಕಟ್ಟೆಪುರವು ದೇಶವಿಖ್ಯಾತವಾಗಿದ್ದ ವಿದ್ವಾಂಸರ ಗಣ್ಯ ಅಗ್ರಹಾರವಾಗಿತ್ತು. ಅಲ್ಲಿನ ಜನ ಆಗ ಹಾಗೆ ಹೇಳಿಕೊಂಡಿದ್ದರೆ ಆಶ್ಚರ್ಯವಿಲ್ಲ. ಆದರೆ ಸಂಸ್ಕೃತ ಮತ್ತು ಕನ್ನಡದಲ್ಲಿ 'ಅರ್ತಿ' ಎಂಬುದಕ್ಕೆ ಕ್ರಮವಾಗಿ ಸಂಕಷ್ಟ, ಪ್ರೀತಿ ಎಂಬ ಅರ್ಥಗಳಿವೆ. ತಮಿಳು ಸನ್ನಿವೇಶದಿಂದ ಹೊರತಾದ ಪದವ್ಯುತ್ಪತ್ತಿಯು ಸಮಗ್ರತೆಯನ್ನು ಪಡೆಯುವುದಿಲ್ಲ.

ಸಿ.ಎಸ್.ರಾಮಚಂದ್ರ ಅವರು ಮಂಡಿಸಿದ ಇತರ ವ್ಯುತ್ಪತ್ತಿಗಳು ಹೀಗಿವೆ:

ಸಂಖ್ಯಾರ್ಥಿ	:	ಸಂಖ್ಯಾ = ಸಂಖ್ಯಾಶಾಸ್ತ್ರ, ತರ್ಕ, ಜ್ಯೋತಿಷ್ಯ
		ಅರ್ಥಿ = ಗೌರವಸೂಚಕ ಪ್ರತ್ಯಯ
ಸಾಂಖ್ಯಾತಿಗಳ್	:	ಸಾಂಖ್ಯಾ=ಸಾಂಖ್ಯಮತದ ಅನುಯಾಯಿ
		ತಿಗಳ = ನೆತ್ತಿಯ ಮೇಲೆ ಕೂದಲಿಲ್ಲದವ
ತೆಂಕಾಶಿ	:	ತೆಂಕ=ದಕ್ಷಿಣ ಕಾಶೀ=ಪತಿವ್ರತೆ
		=ದಕ್ಷಿಣದಿಂದ ಸ್ತ್ರೀ ನೇತೃತ್ವದಲ್ಲಿ ಬಂದವರು.

ಸಂಕೇತಿಗಳು ಸಾಂಖ್ಯ ಮತಾನುಯಾಯಿಗಳಲ್ಲ, ಆರು ದರ್ಶನಗಳಲ್ಲಿ ಅವರಿಗೆ ಹೆಚ್ಚು ಹತ್ತಿರವಾದುದು ಉತ್ತರಮೀಮಾಂಸೆ. 'ತೆಂಕಾಸಿ' ಖ್ಯಾತವಾಗಿರುವುದೇ (ಇತರ ಅನೇಕ ದಕ್ಷಿಣಭಾರತದ ತೀರ್ಥಕ್ಷೇತ್ರಗಳಂತೆ) 'ದಕ್ಷಿಣಕಾಶಿ' ಎಂದು. ಉಳಿದವು ದೂರಾನ್ವಯಗಳು.

ಸಂಕೇತಿಗಳಲ್ಲಿ ಬಹುಸಂಖ್ಯಾತರು ಶ್ರೇಷ್ಠ ವಿದ್ವಾಂಸರಾಗಿರುತ್ತಿದ್ದರು ಎಂಬುದು ವಂಶವೃಕ್ಷಗಳಿಂದಲೂ ತಿಳಿದುಬರುತ್ತದೆ. ಆದರೆ, ಸಂಕೇತಿಗಳಲ್ಲಿ ಮಾತ್ರ ಶ್ರೇಷ್ಠವಿದ್ವಾಂಸರು ಇರುತ್ತಿದ್ದರು ಎಂದು ಹೇಳಲಾಗದು. ಆದರೂ, 'ಚಿತ್ಪಾವನ್', 'ಕುಲೀನ್' ಮೊದಲಾದ ಗುಣವಾಚಕಗಳೇ ಜಾತಿವಾಚಕಗಳೂ ಆಗಿರುವ ನಿದರ್ಶನಗಳೂ ನಮ್ಮ ಮುಂದಿವೆ ಎಂಬುದನ್ನು ಮರೆಯುವಂತಿಲ್ಲ. 'ಸಂಕೇತಿ' ಪದಕ್ಕೆ ಮಾತ್ರ ಅಂಥ ವ್ಯುತ್ಪತ್ತಿ ಇರುವುದಿಲ್ಲ.

ಆದರೆ, ಕೇಶವಯ್ಯನವರು ಸುಮಾರು ಐವತ್ತೈದು ವರ್ಷಗಳ ಹಿಂದೆಯೇ ಕರ್ನಾಟಕ, ಕೇರಳ ಮತ್ತು ತಮಿಳುನಾಡಿನಲ್ಲಿ ಕ್ಷೇತ್ರಕಾರ್ಯ

---

21 ಖ್ಯಾತ ವಯೊಲಿನ್ ವಾದಕ *ಪರೂರ್ ಎಂ.ಎಸ್. ಗೋಪಾಲಕೃಷ್ಣನ್* ಅವರೊಂದಿಗೆ ಕೆ.ಎಸ್.ಕೇಶವಮೂರ್ತಿ ಅವರು ದಿ.೬.೬.೮೦ರಲ್ಲಿ ನಡೆಸಿದ ಸಂದರ್ಶನದ ಅವರ ಟಿಪ್ಪಣಿ.

22 ಅ) *ಮಾನವಿಕ ಕರ್ನಾಟಕ ಸಂಪುಟ-೧೬,* ಸಂಚಿಕೆ-೧. ಸಂಕೇತಿ ಭಾಷೆ ಮತ್ತು ಜನಾಂಗ, ಸಿ.ಎಸ್.ರಾಮಚಂದ್ರ, ಮೈ.ವಿ.ವಿ., ೧೯೮೫, ಪು.೧೩,೧೪.

ಆ) *ಸ್ಮೃತಿ ಸಂಪುಟ,* 'ಸಂಕೇತಿ ಭಾಷೆ', ಚಿ.ನಾ.ಕೇಶವಮೂರ್ತಿ, ಕೌಶಿಕ ಸಂಕೇತಿ ಸಂಘ, ಜಯನಗರ, ಮೈಸೂರು, ೧೯೭೭.

ಮಾಡಿ ತಲುಪಿರುವ ನಿರ್ಣಯವೂ, 'ಶೆಂಕೋಟ್ಟೈ' ವಾದವನ್ನೇ ಎತ್ತಿಹಿಡಿಯುತ್ತದೆ (೧೯೩೮, ಪು.೯, ೧೦). ಅಲ್ಲದೆ, ಇತರ ಯಾವ ವ್ಯುತ್ಪತ್ತಿಯೂ ಅವರ ಗಮನಕ್ಕೆ ಬಂದಂತೆ ಕಾಣುವುದಿಲ್ಲ. ಈಗಲೂ, (ಕರ್ನಾಟಕದಲ್ಲಿ ಮಾತ್ರ) ನೂರಾರು ವಕ್ತೃಗಳಲ್ಲಿ 'ಸಾಂಖ್ಯಾರ್ತಿಗಳ್' ವ್ಯುತ್ಪತ್ತಿಯನ್ನೂ ವ್ಯಕ್ತಪಡಿಸಿದವರು ಕೆಲವರು ಮಾತ್ರ. ಕೇಶವಯ್ಯನವರ ಗ್ರಂಥದ ಪ್ರಭಾವದಿಂದಾಗಿ ಎಲ್ಲರೂ ಶೆಂಕೋಟ್ಟೈ ವಾದವನ್ನು ನೆನಪಿನಲ್ಲಿ ಉಳಿಸಿಕೊಂಡು ಉಳಿದುವನ್ನು ಮರೆತಿರಬಹುದಾದ ಸಾಧ್ಯತೆ ಇಲ್ಲದಿಲ್ಲ. ಹಾಗೆಯೇ, 'ಸಂಕೇತಂ' 'ಸಾಂಖ್ಯಾರ್ತಿಗಳ್' ... ಎಂಬ ಪ್ರಚಲಿತ ವ್ಯುತ್ಪತ್ತಿಗಳಿದ್ದಿದ್ದರೆ, ಅವು ಕೇಶವಯ್ಯನವರ ಗಮನಕ್ಕೆ ಬಾರದಿರುತ್ತಿರಲೂ ಇಲ್ಲ.

0.8 'ಸಂಕೇತಂ' ಎಂಬುದಕ್ಕೆ ಮಲೆಯಾಳಂನಲ್ಲಿ 'ಸಮೂಹ' ಎಂಬ ಅರ್ಥವಿದೆ. ಕರ್ನಾಟಕದಲ್ಲಿ ಅನೇಕ ವಕ್ತೃಗಳು 'ಸಂಘಮಾಶೇರಿಂದ್ ಸಂಕೇತಿ' (ಸಂಘವಾಗಿ ಸೇರಿದ್ದು ಸಂಕೇತಿ) ಎಂದು ಹೇಳಿದುದಕ್ಕೆ ಇದು ಸಮಾನವಾಗಿದೆ. ಅಯ್‌ಕುಡಿ ಗ್ರಾಮದ ವಕ್ತೃಗಳು, ಸಂಕೇತಿಗಳ ಬಹುಸಂಖ್ಯೆಯ ಕುಟುಂಬಗಳು ಒಂದೇ ಗ್ರಾಮದಲ್ಲಿ ಜೀವಿಸುತ್ತಿದ್ದ ನೆಲೆಗಳು ಎಂಬ ಅರ್ಥದಲ್ಲಿ ಕೆಲವು 'ಸಂಕೇತಂ'ಗಳನ್ನು ಗುರುತಿಸಿದರು - ಅದು ಅವರಿಗೆ ಮೀಸಲಾದ ಪದ ಎಂಬ ಅರ್ಥದಲ್ಲಲ್ಲ, ನಿಘಂಟಿನ ಅರ್ಥ ಎಂಬ ಹಿನ್ನೆಲೆಯಲ್ಲಿ.

ಅಷ್ಟಗ್ರಾಮ, ಪಂಚಗ್ರಾಮ ಕೂಟಗಳು ಸಂಕೇತಿ ನೆಲೆಗಳಲ್ಲಿವೆ. ಒಂದೇ ಗ್ರಾಮದಲ್ಲಿ ಬಹುಸಂಖ್ಯಾತರಾಗಿ ಇಲ್ಲವೆ ಪೂರ್ಣವಾಗಿ ಸಂಕೇತಿಗಳೇ ಇದ್ದು, ಗಾಢವಾದ ಸಹಕಾರತತ್ವವನ್ನು ಪಾಲಿಸುತ್ತಿದ್ದುದಿದೆ. ಇಡೀ ಉಪಪಂಗಡಗಳು ಪರಸ್ಪರ ಬಂಧುತ್ವದಿಂದ ಗಾಢವಾಗಿ ಹೆಣೆದುಕೊಂಡಿರುವುದನ್ನೂ ಇಲ್ಲಿ ಕಾಣಬಹುದು. ಈ ಯಾವ ಲಕ್ಷಣಗಳೂ ಸಂಕೇತಿಗಳಿಗೇ ವಿಶಿಷ್ಟವಾದುವಲ್ಲ. ಹೀಗೆ 'ಸಂಘ'ವಾಗಿ ಸೇರಿ ಸಾಧಿಸಿದ ಯಾವ ವಿಶೇಷವೂ, ಯಾವ ಎಡೆಯ ಸಂಕೇತಿಗಳಲ್ಲಿಯೂ ಕಾಣಿಸುವುದಿಲ್ಲ. ಕರ್ನಾಟಕದಷ್ಟು ದೂರದ ನೆಲೆಯೊಂದಕ್ಕೆ ವಲಸೆ ಬಂದ ದೊಡ್ಡ ಪ್ರಮಾಣದ ವಲಸಿಗರು, ಉಳಿವಿಗಾಗಿ ಎದುರಿಸಬೇಕಾಗಿದ್ದ ಸವಾಲುಗಳ ಹಿನ್ನೆಲೆಯಲ್ಲಿ ಹೆಚ್ಚಿನ ಸಮೂಹತತ್ತ್ವವನ್ನೂ ಒಗ್ಗಟ್ಟನ್ನೂ ತಾದಾತ್ಮ್ಯಭಾವವನ್ನೂ ಹೊಂದಿದ್ದರು. ಆದರೆ ಈ ಲಕ್ಷಣವು ಉಪಜಾತಿಯೊಂದರ ಹೆಸರಿಗೆ ಕಾರಣವಾಗುವ ಸಮಗ್ರತೆಯನ್ನು ಪ್ರದರ್ಶಿಸಲಾರದು. ಆದುದರಿಂದಲೇ, ಸಮೂಹ ಎಂಬ ಅರ್ಥದಲ್ಲಿ ಬಳಸಿದಾಗಲೂ, ಈ ಪದವು ಸಂಕೇತಿಗಳಿಗೇ ಮೀಸಲಾದ ಪಾರಿಭಾಷಿಕಪದವಾಗಲಿಲ್ಲ.

3. ಇತರ ವಾದಗಳು : ಗಂಭೀರ ಚರ್ಚೆಗೆ ಅರ್ಹವಲ್ಲದ ಇನ್ನು ಕೆಲವು ವ್ಯುತ್ಪತ್ತಿಗಳನ್ನು ಹೀಗೆ ಸಂಗ್ರಹಿಸಬಹುದು :

0.1 ನಾಚಾರಮ್ಮನ ಶಾಪಪ್ರಸಂಗದ ಅನಂತರ ಕರ್ನಾಟಕಕ್ಕೆ ವಲಸೆ ಬಂದವರು, 'ಒಟ್ಟಾಗಿ' ಇರಬೇಕೆಂದು ದೃಢ ನಿರ್ಧಾರ ಮಾಡಿಕೊಂಡರು.

0.2 ಸಕಲ ಭಾಷೆಗಳೂ ಇದರಲ್ಲಿ ಇವೆಯೆಂದೇ, ಈ ನುಡಿಗೆ 'ಸಂಕೇತಿ' ಎಂದು ಹೆಸರಾಯಿತು.

0.3 ಸಂಕೇತಿಗಳಾಡುವ ಭಾಷೆ, ಕರ್ನಾಟಕದವರಿಗೆ ಸಂಕೇತದಂತೆ ಕಾಣಿಸುತ್ತಿತ್ತು.

0.4 ಬೇರೆಯವರಿಗೆ ಅರ್ಥವಾಗಬಾರದೆಂದು, ಇವರು ಸಂಕೇತ ಭಾಷೆಯಲ್ಲಿ ಮಾತಾಡುತ್ತಿದ್ದರು.

0.5 ಸಂಕೇತಿಗಳು ಶೆಂಕೋಟ್ಟೈನಿಂದ ಬಂದಾಗ 'ಎಲ್ಲಿ ಹೋಗೋಣ?' ಎಂದು ಸಂಕೇತ ಮಾಡಿಕೊಂಡರು.
'ನಾವು ಬೆಟ್ಟದಪುರಕ್ಕೆ' 'ನಾವು ಕೌಶಿಕಕ್ಕೆ' - ಹೀಗೆ ಸಂಕೇತ ಮಾಡಿಕೊಂಡಿದ್ದರಿಂದ 'ಸಂಕೇತಿ' ಎನಿಸಿದರು.
- ಇವೆಲ್ಲವೂ ಸಂಕೇತಿಗಳು ಕರ್ನಾಟಕಕ್ಕೆ ಬರುವ ಮೊದಲೇ ಅವರಿಗೆ ಆ ಹೆಸರಿತ್ತು ಎಂಬುದನ್ನು ಮರೆತ ಉದ್ಗಾರಗಳು.

0.6 ಸಂಗೀತಂ ⟶ ಸಂಕೇತಿ ಎಂಬ ವ್ಯುತ್ಪತ್ತಿ ಬಹುವ್ಯಾಪಕವಾಗಿ ಪ್ರಚಾರದಲ್ಲಿರುವಂಥದು. ಸಂಕೇತಿಗಳು ಸಾರಾಸಗಟಾಗಿ ಸಂಗೀತ ಸಂಸ್ಕಾರವುಳ್ಳವರು ಎಂಬುದು ಅದಕ್ಕೆ ಆಧಾರ. "ಸಾಮಾನ್ಯವಾಗಿ ಸಂಕೇತಿಗಳೆಲ್ಲರ ಮನೆಗಳಲ್ಲಿಯೂ ಸಂಗೀತದ ಸಂಸ್ಕಾರವಿದ್ದು ಅಲ್ಲೊಂದು ಸಂಗೀತದ ವಾತಾವರಣವಿರುತ್ತದೆ. ಅದು ಅವರ ಎಲ್ಲ ನೆಲೆ, ಉಪಪಂಗಡಗಳಿಗೂ ಸಮಾನವಾಗಿ ಅನ್ವಯಿಸುವ ಮಾತು. ಆದುದರಿಂದ ಈ ಲಕ್ಷಣಕ್ಕೆ ಕನಿಷ್ಠ ಒಂದು ಸಾವಿರ ವರ್ಷಗಳ ಪ್ರಾಚೀನತೆ ಇದೆ." ಇದು ಈ ವಾದದ ಸಾರ. ಸಂಗೀತ ಮತ್ತು ನೃತ್ಯಕ್ಕೆ ವೈದಿಕ ಪ್ರಪಂಚದಲ್ಲಿ ಗೌರವ ದೊರೆತ ಇತಿಹಾಸಕ್ಕೆ ಒಂದು ಶತಮಾನದಷ್ಟೂ

ಪ್ರಾಚೀನತೆಯಿಲ್ಲ. ವೇದಗಳಲ್ಲಿ ನೈಪುಣ್ಯ ಸಾಧಿಸಿದ ಸಂಕೇತಿಗಳಲ್ಲಿ ಸಾಮವೇದಿಗಳು ಬಹು ಅಲ್ಪಸಂಖ್ಯಾತರು. ವೇದಗಳ ಜೊತೆಗೆ ಸಂಗೀತದಲ್ಲೂ ಸಮಾನ ಆಸಕ್ತಿ ಇರುವ ಪರಂಪರೆಯು ಒಂದು ವಿಲಕ್ಷಣ ಸಂಗತಿಯಾಗುತ್ತದೆ. ವಾಸ್ತವವಾಗಿ ಸಂಕೇತಿ ಸಮುದಾಯದ ಮೂಲಭೂತ ವಿಶಿಷ್ಟ ಲಕ್ಷಣವೆಂದರೆ ಛಲ ಮತ್ತು ಅದಕ್ಕೆ ಹೊಂದಿಕೊಂಡ ಶ್ರಮ, ತಾದಾತ್ಮ್ಯ, ಸಾಧನೆ. ವೇದಶಾಸ್ತ್ರಗಳಲ್ಲಿ ನೆಟ್ಟಿದ್ದ ಛಲವು ಸಂಗೀತಕ್ಕೆ ಮಾನ್ಯತೆ ಬರತೊಡಗಿದಾಗ ಅದಕ್ಕೆ, ನೃತ್ಯಕ್ಕೆ ಮಾನ್ಯತೆ ದೊರೆಯತೊಡಗಿದಾಗ ಅದಕ್ಕೆ, ತಂತ್ರಜ್ಞಾನಕ್ಕೆ ಮಾನ್ಯತೆ ದೊರೆಯತೊಡಗಿದಾಗ ಅದಕ್ಕೆ ಒಲಿಯುತ್ತ ಬಂದಿದೆ. ಹಾಗಾಗಿ 'ಸಂಗೀತ'ದಿಂದಲೇ 'ಸಂಕೇತಿ' ಪದದ ವ್ಯುತ್ಪತ್ತಿಯನ್ನು ಸಾಧಿಸಲು ಆಧಾರ ಸಾಲದಾಗಿದೆ.

'ಸಂಕೇತ ಭಾಷೆ'ಯ ಬಗೆಗೆ ಇನ್ನೂ ಹೆಚ್ಚಿನ ಸಮರ್ಥನೆ ಇಲ್ಲಿದೆ, "ಇಂದು ಜನತೆಯ ನಿತ್ಯ ವ್ಯವಹಾರದಿಂದ ಸಂಬಂಧ ಕಡಿದುಹೋದಂತಿರುವ ಸಂಸ್ಕೃತವನ್ನು ನೋಡಿದರೆ ಎಂದಾದರೂ ಇದು ಜನಸಾಮಾನ್ಯಕ್ಕೆ ಗೊತ್ತಾಗುತ್ತಿತ್ತೇ ಎಂಬ ಸಂಶಯ ತಲೆದೋರುವುದು ಸಹಜ. ವಿದ್ವಾಂಸರು ತಮ್ಮ ತಮ್ಮೊಳಗೆ ವ್ಯವಹರಿಸುತ್ತಿದ್ದ ಸಂಕೇತ ಭಾಷೆಯಿದೆಂದು ಕೆಲವರು ಈಗಲೂ ಅಭಿಪ್ರಾಯಪಡುತ್ತಾರೆ. ಇಂದು ಅತ್ಯಲ್ಪ ಸಂಖ್ಯೆಯವರಲ್ಲಿ ಹೇಗೆ ಈ ಭಾಷೆ ಉಳಿದಿದೆಯೋ ಹಾಗೆಯೇ ಹಿಂದೂ ಇದು ಕೆಲವರ ಸ್ವತ್ತಾಗಿತ್ತೇ ವಿನಾ ವ್ಯಾವಹಾರಿಕ ದೆಸೆಯಲ್ಲಿರಲಿಲ್ಲವೆಂದು ಕೆಲವರು ಹೇಳುತ್ತಾರೆ." ವಿದ್ವಾಂಸರಾದ ಎನ್.ಎಸ್.ಅನಂತರಂಗಾಚಾರ್ ಅವರ ಈ ಅಭಿಪ್ರಾಯವು[23] ಚಿಂತನೆಗೆ ಅರ್ಹವಾದುದೇ ಹೌದು. ಅದರಲ್ಲಿ ಸತ್ಯವಿದೆಯೆಂದು ಸಾಧಿಸುವವರೂ ಅದನ್ನು ಕೇವಲ ಸಂಕೇತಿ ಸಮುದಾಯಕ್ಕೆ ಅನ್ವಯಿಸಲಾರರು. ಅಲ್ಲದೆ 'ಸಂಕೇತಿ' ಎಂಬುದು ಕರ್ನಾಟಕದಲ್ಲಿ ಬಂದ ಹೆಸರಲ್ಲ.

0.7 ನಿಘಂಟಿನ ಅರ್ಥಗಳನ್ನೆಲ್ಲಾ ಆರೋಪಿಸಿ ನಿಷ್ಪತ್ತಿ ಸಾಧಿಸುವ ಮತ್ತೊಂದು ಯತ್ನವೂ ನಡೆದಿದೆ.[24]

೦.೦.೧ ಕೇತ = ವಿದ್ವಾಂಸರು; ಸಂಕೇತಿ = ವಿದ್ವಾಂಸರಿಂದ ಕೂಡಿರುವ ಗುಂಪು.

೦.೦.೨ ಕೇತಿತ = ಆಹ್ವಾನಿತರಾಗಿದ್ದರು; ಸಂಕೇತಿ = ವಿದ್ವನ್ಮಹಾಸಭೆಗಳಲ್ಲಿ ಸ್ಥಾಯೀ ಆಹ್ವಾನಿತರಾಗಿದ್ದರು.

೦.೦.೩ ಕೇತ = ವರಾಹಿ ಗುಂಪಿಗೆ ಸೇರಿದ ಒಂದು ಶಕ್ತಿದೇವತೆ

ಸಂಕೇತಿ = ವರಾಹಿ ಉಪಾಸಕರಾಗಿದ್ದಿರಬಹುದು. ಅವರು ಗೂಟನಾಮ ಧರಿಸುತ್ತಾರೆ. ಗೂಟ=ವರಾಹ

ಲೇಖಕರು, ಈ ಮೂರೂ ಅರ್ಥಗಳನ್ನು ಅನ್ವಯಿಸಿ, ವ್ಯುತ್ಪತ್ತಿಯ ಮೂರು ಸಾಧ್ಯತೆಗಳನ್ನೂ ಹೇಳಿದ್ದಾರೆ. ನಿಘಂಟಿನ ಅರ್ಥಗಳಲ್ಲೆಲ್ಲಾ ವ್ಯುತ್ಪತ್ತಿಯನ್ನು ಹುಡುಕುವ ಸಾಹಸವು ದಾರಿತಪ್ಪಿಸುತ್ತದೆನ್ನುವುದಕ್ಕೆ, ಸಮುದಾಯವು ವರಾಹೀ ಗುಂಪಿಗೆ ಸೇರಿದ ಶಕ್ತಿದೇವತೆಯ ಉಪಾಸಕರಾಗಿದ್ದಿರಬಹುದೆಂದು ಕಲ್ಪಿಸಹೊರಟಿರುವುದು ಒಂದು ಸಾಕ್ಷಿ. ಹೀಗೆ ಹೊರಟಾಗ, ಗೂಟದಂತೆ ಎಳೆಯುವ 'ಗೂಟೀನಾಮ' ಎಂಬ ಗ್ರಾಮ್ಯ ಪದವೊಂದಕ್ಕೆ ಕೂಡ, ಜಟಿಲಾರ್ಥವನ್ನು ಆರೋಪಿಸಬೇಕಾಗುತ್ತದೆ. ಅಲ್ಲದೆ, ಸಂಕೇತಿಗಳು 'ಗೂಟೀನಾಮ' ಎಂಬ ಪದವನ್ನು ಸ್ವೀಕರಿಸಿರುವುದು ಕನ್ನಡಿಗರಿಂದ.

'ಶೆಂಗೈಆದಿ' ⟶ 'ಸಂಕೇತಿ' ಎಂಬ ಸ್ಥಳವಾಚಕ ಮೂಲದ ಪದವ್ಯುತ್ಪತ್ತಿಗೆ ಸಮಾನ ನಿದರ್ಶನಗಳಿದ್ದು, ಅದೊಂದೇ ಸಹಜವೂ ತಾರ್ಕಿಕವೂ ಆಗಿರುವುದು ಈ ಎಲ್ಲ ವಿವರಗಳ ಹಿನ್ನೆಲೆಯಲ್ಲಿ ಸ್ಪಷ್ಟವಾಗುತ್ತದೆ. 'ಸಂಕೇತಂ' ವ್ಯುತ್ಪತ್ತಿಯು ಗಂಭೀರವಾಗಿ ಕಂಡರೂ ಅದು ನಿರ್ದುಷ್ಟವಲ್ಲ; ಉಳಿದವು ವೈಯಕ್ತಿಕ ಲಹರಿಗಳು ಮಾತ್ರ.

---

23 *ವೈದಿಕ ಸಾಹಿತ್ಯ ಚರಿತ್ರೆ,* ಎನ್.ಎಸ್.ಅನಂತರಂಗಾಚಾರ್, ೧೯೬೮, ಪು.೨೧.

24 *ಸಂಕೇತಿ ಐತಿಹಾಸಿಕ ಸಮೀಕ್ಷೆ,* ಪು.೩೫-೩೬.

ಆ. 'ಸಂಕೇತಿ' : ಉಪಪಂಗಡಗಳು ಮತ್ತು ಅವುಗಳ ಪರಸ್ಪರ ಸಂಪರ್ಕ:

ಸಮಗ್ರವಾಗಿ ಸಂಕೇತಿ ಸಮುದಾಯದ ಹರಹು, ಅದರ ಉಪವಿಭಾಗಗಳು ಹಾಗೂ ಪರಸ್ಪರ ಸಂಬಂಧದ ಸ್ವರೂಪವನ್ನು ಇಲ್ಲಿ ಚರ್ಚಿಸಬಹುದು:

1. ವೈದಿಕ-ಲೌಕಿಕ : ಬ್ರಾಹ್ಮಣರ ಎಲ್ಲ ಸಮುದಾಯಗಳಲ್ಲಾದಂತೆ, ಸಂಕೇತಿಗಳಲ್ಲಿಯೂ, ಜನ್ಮತಃ ಮಾತ್ರ 'ಬ್ರಾಹ್ಮಣ'ರೆನಿಸಿ ವೇದಾಧ್ಯಯನ, ಅನುಷ್ಠಾನಗಳಿಂದ ದೂರ ಉಳಿದವರು 'ಲೌಕಿಕ'ರೆನಿಸಿದರು. ಹೀಗೆ ಷಟ್ಕರ್ಮದೂರರಾದವರ ವೃತ್ತಿಗಳು ಸಾರ್ವತ್ರಿಕ ಸ್ವರೂಪದವು. ಈಗ ಬ್ರಾಹ್ಮಣ ಸಮುದಾಯದಲ್ಲಿ ಸಾಮಾನ್ಯವಾಗಿ ಮತ್ತು ಸಂಕೇತಿಗಳಲ್ಲಿ ನಿರ್ದಿಷ್ಟವಾಗಿ, ಉಳಿದಿರುವುದು ವೈದಿಕರ ಒಂದು ಸಣ್ಣ ಗುಂಪು ಮಾತ್ರ. ಮತ್ತೂರು ಅಗ್ರಹಾರವು ಮಾತ್ರ ವೈದಿಕ ಪುನರುಜ್ಜೀವನದ ಲಕ್ಷಣವನ್ನು ಹೊಂದಿದೆ. ಆಧುನಿಕವಿದ್ಯೆ ಮತ್ತು ನೌಕರಿಯಮೇಲಿನ ಮೋಹವನ್ನು ಅದುಮಿ, ಉಳಿದ ಬ್ರಾಹ್ಮಣರಿಗಿಂತ ಹೆಚ್ಚುಕಾಲ ವೈದಿಕಪರಂಪರೆಗೆ ಅಂಟಿಕೊಂಡಿದ್ದುದು ಸಂಕೇತಿಗಳ ವೈಶಿಷ್ಟ್ಯವೆನ್ನುವುದು ಸರ್ವೇಕ್ಷಣದಿಂದ ಖಚಿತಗೊಂಡಿದೆ. ಲೌಕಿಕತೆ ಮತ್ತು ವೈದಿಕತೆ ಪರಸ್ಪರ ನಮ್ಯವಾದವು. ಅವೆರಡೂ ಪ್ರತ್ಯೇಕ ಉಪಪಂಗಡಗಳಲ್ಲದಿದ್ದರೂ, ಆ ಎರಡು ಜೀವನವಿಧಾನಗಳ ನಡುವಣ ಸಂಘರ್ಷಕ್ಕೆ, ಪ್ರಸ್ತುತ (ಕರ್ನಾಟಕದ) ಸಂಕೇತಿ ಸಮುದಾಯದಲ್ಲಿ ದಟ್ಟ ನಿದರ್ಶನವಿದ್ದು, ಸಮಾಜವಿಜ್ಞಾನಿಗಳ ಅಧ್ಯಯನಕ್ಕೆ ಒಳ್ಳೆಯ ಆಕರವಾಗಬಹುದಾಗಿದೆ. ಸಂಕೇತಿಗಳು ಆಂಗ್ಲಶಿಕ್ಷಣ ಮತ್ತು ನೌಕರಿಗೆ ಪ್ರವೇಶಿಸತೊಡಗಿದುದು ಈ ಶತಮಾನದ ಪ್ರಾರಂಭದ ದಶಕಗಳಲ್ಲಾದರೂ ಸ್ವಾತಂತ್ರ್ಯೋತ್ತರ ಭಾರತದಲ್ಲಿ ವೈದಿಕರು ಮತ್ತು ಲೌಕಿಕರ ನಡುವಿನ ಕಂದರವು ದೊಡ್ಡದಾಗಿ ಅನೇಕ ಗ್ರಾಮಗಳಲ್ಲಿ 'ಬಣ'ಗಳಾದ ನಿದರ್ಶನಗಳಿವೆ. ಆ 'ಬಣ'ಗಳ ನಡುವಿನ ಶೀತಲ ಸಮರದ ವಿವರಗಳು ಜಾತಿವ್ಯವಸ್ಥೆಗಿಂತ ಹೆಚ್ಚು ದಿಗಿಲು ಹುಟ್ಟಿಸುತ್ತವೆ. ಇಪ್ಪತ್ತನೆಯ ಶತಮಾನದ ಆದಿಮ ದಶಕಗಳಲ್ಲಿ ಸಮುದ್ರಯಾನಿಗಳಿಗೆ ಬಿದ್ದ ಬಹಿಷ್ಕಾರದ ಸಂದರ್ಭವು ವೈದಿಕರ ಪರವಾದುದಾಗಿತ್ತು; ಕೊನೆಯ ದಶಕಗಳು ಲೌಕಿಕರ ಪರವಾದುವಾಗಿವೆ. ಇದು ಸಮುದಾಯದ ರಚನೆಯಲ್ಲಾದ ಗಮನಾರ್ಹ ಬದಲಾವಣೆ.

2. ಕರ್ನಾಟಕ - 'ದಕ್ಷಿಣ' : ಸಂಪರ್ಕ : ಕರ್ನಾಟಕಕ್ಕೆ ವಲಸೆಗಳು ನಡೆದಂತೆಯೇ, (ಈಗಿನ) ಕೇರಳಕ್ಕೂ ಶೆಂಕೋಟ್ಟೈನಿಂದ ವಲಸೆಗಳು ನಡೆದಿವೆ. ಹೀಗೆ ವಲಸೆಹೋದವರು ಬಾಹ್ಯವ್ಯವಹಾರಭಾಷೆಯಾಗಿ ಮಲೆಯಾಳಂ ಭಾಷೆಯನ್ನೇ ಮೈಗೂಡಿಸಿಕೊಂಡಿದ್ದಾರೆ. ಆದರೂ ಅಲ್ಲಿನ ಸಂಕೇತಿಗಳಲ್ಲಿ ಯಾವ ಉಪಪಂಗಡಗಳೂ ನಿರ್ಮಾಣವಾಗದುದಕ್ಕೆ, ಮೊದಲಿದ್ದ ವ್ಯವಸ್ಥೆಗೆ ಭಂಗತಾರದ ಮರುವಲಸೆಗಳಾದುದೇ ಕಾರಣವಾಗಿದೆ. ಪ್ರಾಂತವಿಂಗಡಣೆಯ ದೃಷ್ಟಿಯಿಂದ, ತಿರುನೆಲ್‌ವೇಲಿ, ಕನ್ಯಾಕುಮಾರಿ, ತ್ರಿವೇಂದ್ರಂ ಬೇರೆಯಾದರೂ, ಸಾಂಸ್ಕೃತಿಕವಾಗಿ ಆ ಸಮುದಾಯವು ಪರಸ್ಪರ ಹೆಣೆದುಕೊಂಡೇ ಉಳಿದಿದೆ. ಕರ್ನಾಟಕಕ್ಕೆ ಆದ ಮಹಾವಲಸೆಯನಂತರ ಅಲ್ಲಿ ಉಳಿದ ಕುಟುಂಬಗಳ ಸಂಖ್ಯಾಪ್ರಮಾಣವೂ ಸಣ್ಣದು.

ದೂರದ ಕರ್ನಾಟಕದ ಹೊಸನೆಲೆಗೆ ವಲಸೆಬಂದ ಸಂಕೇತಿಗಳಿಗೆ, ಬದುಕಿ ಉಳಿಯಲು (Survival), ಸಾಮೂಹಿಕತ್ವ ಎಲ್ಲ ದೃಷ್ಟಿಯಿಂದಲೂ ಅಗತ್ಯವಾಗಿತ್ತು. ದೊಡ್ಡ ಸಂಖ್ಯೆಯಲ್ಲಿದ್ದ ಅವರು, ಕರ್ನಾಟಕದಲ್ಲಿಯೇ ದೂರದೂರದ ಆಶ್ರಯಗಳಲ್ಲಿ ಚದುರುವುದೂ ಅನಿವಾರ್ಯವಾಗಿತ್ತು. ಅಂಥ ಪ್ರಧಾನ ಆಶ್ರಯಗಳು, ಒಕ್ಕೂಟ ವ್ಯವಸ್ಥೆಯಿಂದಾಗಿ ಸ್ವಾವಲಂಬಿಗಳಾದವು. ಸಂಪರ್ಕಸಾಧನಗಳ ಅಭಾವದಿಂದಾಗಿಯೂ ಪರಸ್ಪರ ಸಂಪರ್ಕ ಕಡಿದುಬಿತ್ತು. ಅವೆಲ್ಲವೂ ಪ್ರತ್ಯೇಕ ಉಪಪಂಗಡಗಳೇ ಆದವು. ಅದು ಸಾಂಸ್ಕೃತಿಕ ಘಟಕಗಳು ರೂಪುಗೊಳ್ಳುವ ಸಾಮಾನ್ಯ ರೀತಿಯೇ ಹೌದು. "ಭಾರತದಂಥ ವಿಶಾಲ ದೇಶದಲ್ಲಿ, ಆಂತರಿಕ ಸಂವಹನ ವ್ಯವಸ್ಥೆಯೂ ಬಾಲ್ಯಾವಸ್ಥೆಯಲ್ಲಿಯೇ ಉಳಿದಿದ್ದು, ಅದರಿಂದಾದ ಜನಗಳ ಪೃಥಕ್ಕರಣವು ಬಂಗಾಳ, ಕಾಶ್ಮೀರ, ಗುಜರಾತ್, ತಮಿಳುನಾಡು ಮೊದಲಾದ ಪ್ರತ್ಯೇಕ ಸಾಂಸ್ಕೃತಿಕ ಪ್ರದೇಶಗಳು ರೂಪುಗೊಳ್ಳಲು ಅನುವು ಮಾಡಿದೆ. ಇಂಥ ಸಾಂಸ್ಕೃತಿಕ ಪ್ರದೇಶಗಳ ವಿಕಾಸವು ದೇಶದ ಚರಿತ್ರೆ, ಭೌಗೋಳಿಕ ಲಕ್ಷಣ ಮತ್ತು ಪರಸ್ಪರ ಸಂಪರ್ಕಸಾಧ್ಯತೆಯ ರಾಹಿತ್ಯದ ಪರಿಣಾಮವಾಗಿದೆ. ಒಮ್ಮೆ ಒಂದು ಸಾಂಸ್ಕೃತಿಕ ಪ್ರದೇಶವು ವಿಕಾಸವಾಗಿ ಪಕ್ವವಾಯಿತೆಂದರೆ, ಮುಂದೆ, ಒಮ್ಮೆ ಇತರ ಸಾಂಸ್ಕೃತಿಕ ಪ್ರದೇಶಗಳ ಪ್ರಭಾವಕ್ಕೆ ಈಡಾದಾಗಲೂ, ಅದರ ಮೂಲಭೂತಶೀಲಗಳು ಹಾಗೆಯೇ ಮುಂದುವರಿಯುತ್ತವೆ ..."[25] ಕರ್ನಾಟಕದ ಅಕ್ಕಪಕ್ಕದ ಜಿಲ್ಲೆಗಳ ಬೆಳವಣಿಗೆಯೇ ಹೀಗಿರುವಾಗ,

[25] *India: Cultural patterns and processes,* Ed. by Noble (Allen G.), & Dutt (Ashok K); The Culture of India in spatial respective, Indica, Dutt (Ashok K) & Noble (Allen G.), Colorado, USA, 1982, p.3.

ದೂರದ ಶೆಂಕೋಟ್ಟೈನ ಸಂಕೇತಿಗಳ ಸಂಪರ್ಕವು ಪೂರ್ಣವಾಗಿ ಅಳಿಸಿಹೋದುದು ಸಹಜವಾಗಿತ್ತು. ನಾಚಾರಮ್ಮನ ಶಾಪಪ್ರಸಂಗವೂ ಅಂಥ ಸಂಪರ್ಕವು ಪೂರ್ಣವಾಗಿ ಕಡಿದುಬೀಳಲು ಪ್ರೇರಕವಾಯಿತು.

3. ಕರ್ನಾಟಕದಲ್ಲಿ ಸಂಕೇತಿಗಳು : ಉಪಪಂಗಡಗಳು : ಕರ್ನಾಟಕದ ಸಂಕೇತಿಗಳ ವಿವಿಧ ಉಪಪಂಗಡಗಳು ಕಾಲಕಾಲಕ್ಕೆ ದಾಖಲಾದ ರೀತಿ ಇದು.[26]

೧೮೭೧ರ ಮೈಸೂರು ಖಾನೇಷುಮಾರಿ ವರದಿ	ಕೌಶಿಕ ಸಂಕೇತಿ	ಬೆಟ್ಟದಪುರ ಸಂಕೇತಿ		
೧೮೯೧ರ ಮೈಸೂರು ಖಾನೇಷುಮಾರಿ ವರದಿ	ಕೌಶಿಕ ಸಂಕೇತಿ ಕೌಶಿಕ	ಬೆಟ್ಟದಪುರ ಸಂಕೇತಿ ಬೆಟ್ಟದಪುರ	ಹಾಸನ, ಮೈಸೂರು, ಕಡೂರು, ಶಿವಮೊಗ್ಗ ಜಿಲ್ಲೆಗಳಲ್ಲಿ ಸಂಕೇತಿಗಳು ನೆಲೆಸಿದ್ದುದನ್ನು ತಿಳಿಸುತ್ತದೆ.	
ಅನಂತಕೃಷ್ಣ ಅಯ್ಯರ್ ಎಲ್.ಕೆ. (೧೯೨೮-೩೬)	--"--	--"--	ಕಡೂರು ಜಿಲ್ಲೆ ಮಲೆನಾಡು ಸಂಕೇತಿ	ಆಗಿನ ಹಾಸನ ಜಿಲ್ಲೆಯ ಹಿರಿಯಂಗಳ. ಹಿರಿಯಂಗಳ ಸಂಕೇತಿ
ಕೇಶವಯ್ಯ ಎಂ. (೧೯೩೬)	--"--	--"--	ಬೀರೂರು ಹಿರಿಯಂಗಳ ಸಂಕೇತಿ	ಲಿಂಗದಹಳ್ಳಿ ಮಲೆನಾಡು ಸಂಕೇತಿ
ಪ್ರೊ.ಎಚ್.ಎಸ್.ಅನಂತನಾರಾಯಣ (೧೯೭೭)	--"--	--"--	ಮತ್ತೂರು ಮಲೆನಾಡು ಸಂಕೇತಿ	ಬೀರೂರು ಲಿಂಗದಹಳ್ಳಿ ಸಂಕೇತಿ

ವಿ.ಸೂ.: ಕಡೂರು ಜಿಲ್ಲೆ (ರೂಪುಗೊಂಡದ್ದು ೧೮೬೩ರಲ್ಲಿ)ಯಲ್ಲಿ ಲಿಂಗದಹಳ್ಳಿ ಇತ್ತು (ಚಿಕ್ಕಮಗಳೂರು ಜಿಲ್ಲೆ ಎಂದು ಹೆಸರಾದುದು ೧೯೪೭ರಲ್ಲಿ). ಹಿರಿಯಂಗಳ ಮತ್ತು ಬೀರೂರು ಸಮೀಪದ ಗ್ರಾಮಗಳು.

ಇದರಿಂದ ಸ್ಪಷ್ಟವಾಗುವುದೆಂದರೆ, ಆಯಾ ಪ್ರಧಾನನೆಲೆಗಳನ್ನಾಧರಿಸಿ, ಕೌಶಿಕ:ಕೌಶಿಕ ಸಂಕೇತಿ; ಬೆಟ್ಟದಪುರ:ಬೆಟ್ಟದಪುರ ಸಂಕೇತಿ; ಹಿರಿಯಂಗಳ (ಬೀರೂರು):ಹಿರಿಯಂಗಳ ಸಂಕೇತಿ; ಲಿಂಗದಹಳ್ಳಿ (ಕಡೂರು ಜಿಲ್ಲೆ):ಮಲೆನಾಡು ಸಂಕೇತಿ - ಎಂದು ಹೆಸರುಗೊಂಡ ಉಪಜಾತಿಗಳಾಗಿರುವುದು.

ಬೆಟ್ಟದಪುರ ಸಂಕೇತಿಗಳು ಬುದ್ಧಿಜೀವಿಗಳು. ಆದುದರಿಂದ 'ಬೋಧಪುರ'ವು 'ಬೆಟ್ಟದಪುರ' ಆಯಿತು. ಕೌಶಿಕ ಸಂಕೇತಿಗಳು ಕೃಷಿಕರು. 'ಕೃಷಿಕ'ವು 'ಕೌಶಿಕ' ಆಯಿತು ಎಂಬುದು ಬಿ.ಎನ್.ಶ್ರೀಕಂಠಯ್ಯ ಎಂಬುವವರ ಕಲ್ಪನೆ.[27]

0.1 ಒತ್ತಕ್ಷರವು ಸರಳಗೊಳ್ಳುವುದು, ದೀರ್ಘಸ್ವರವು ಹ್ರಸ್ವವಾಗುವುದು ನಿಷ್ಪತ್ತಿನಿಯಮ. ಅದರಂತೆ ಬೋಧಪುರ ⟶ ಬೋಧ್‌ಪುರ ⟶ ಬಾದ್‌ಪುರ ⟶ ಬಾತ್‌ಪುರ ⟶ ಬಾಪ್‌ರ ಎಂದೂ ಕೃಷಿಕ ⟶ ಕೃಷ್‌ಕ ⟶ ಖುಷ್‌ಕ ⟶ ರಿಷ್‌ಕ ⟶ ರಿಸ್‌ಕ - ಎಂದೂ ಆಗಬಹುದು.

---

[26] A *Life of Nacharamma* (History of Her Migration), pp.44, 52, 53.

B *ಸ್ಮರಣ ಸಂಚಿಕೆ,* ಎಚ್.ಎಸ್.ಅನಂತನಾರಾಯಣ, ಬೆಟ್ಟದಪುರ ಸಂಕೇತಿ ಸಂಘ, ಬಸವನಗುಡಿ, ಬೆಂಗಳೂರು, ೧೯೮೮.

[27] *ಸಂಕೇತಿ ಐತಿಹಾಸಿಕ ಸಮೀಕ್ಷೆ,* ಪು.೩೬-೪೦.

0.2 ಬೆಟ್ಟದಪುರ, ಕೌಶಿಕ ಎರಡೂ ಪುರಾಣಪ್ರಸಿದ್ಧವಾಗಿದ್ದವು. ಕೌಶಿಕಮುನಿಯು ತಪಸ್ಸು ಮಾಡಿದ ಜಾಗವಾದದ್ದರಿಂದ ಆ ಗ್ರಾಮವು 'ಕೌಶಿಕ' ಎಂಬ ಹೆಸರು ಪಡೆಯಿತು. ಅದು ಆ ಪಂಚಲಿಂಗಕ್ಷೇತ್ರದ ಐತಿಹ್ಯ. ಬೆಟ್ಟವಿರುವುದರಿಂದ 'ಸಿದ್ಧಾದ್ರಿ' ಕ್ಷೇತ್ರವು ಬೆಟ್ಟದಿಂದಲೇ ಗುರುತಿಸಲ್ಪಟ್ಟು 'ಬೆಟ್ಟದಪುರ'ವಾಯಿತು. ಅದಾಗಲೇ ಹೆಸರು ಹೊಂದಿದ್ದ ನೆಲೆಗಳಲ್ಲಿಯೇ ಸಂಕೇತಿಗಳು ನೆಲೆಸಿದರು.

0.3 ಇಬ್ಬರೂ ತೋಟಗಳನ್ನು ಬೆಳೆಸಿದರು; ಇಬ್ಬರೂ ವೇದ, ಶಾಸ್ತ್ರ, ಸಂಗೀತದಲ್ಲಿ ನಿಪುಣರಾದರು.

0.4 ನಗರಗಳನ್ನು ಸೇರಿದ ಎಲ್ಲ ಸಂಕೇತಿಗಳ ಭಾಷೆ, ಉಚ್ಚಾರಗಳು ನಯಗೊಂಡಿವೆ. ಮೊದಲು ನಗರೀಕರಣವಾದುದು ಬೆಟ್ಟದಪುರ ಸಂಕೇತಿಗಳಲ್ಲಿ.

0.5 ಕರ್ನಾಟಕದಲ್ಲಿಯೂ ಹೆಮ್ಮಿಗೆ, ಮೂಗೂರು ... ಮೊದಲಾದ ಸ್ಥಳವಾಚಕಗಳಿಗೆ ಹೊಂದಿಕೊಂಡ ಜಾತಿವಾಚಕಗಳಿವೆ.

ಎಚ್.ಎಸ್.ಅನಂತನಾರಾಯಣ ಅವರು, ಮೊದಲಬಾರಿಗೆ, ಮತ್ತೂರು ಸಂಕೇತಿಗಳನ್ನು 'ಮಲೆನಾಡು ಸಂಕೇತಿ' ಎಂದು ಕರೆದಿದ್ದಾರೆ. ಅಲ್ಲದೆ, ಅವರು ಲಿಂಗದಹಳ್ಳಿ ಮತ್ತು ಬೀರೂರಿನ (ಹಿರಿಯಂಗಳ) ಸಂಕೇತಿಗಳನ್ನು ಒಟ್ಟಾಗಿ, 'ಲಿಂಗದಹಳ್ಳಿ ಸಂಕೇತಿ' ಎಂದೇ ಹೆಸರಿಸಿದ್ದಾರೆ. ಸಂಕೇತಿಗಳೆಲ್ಲರೂ ಮಲೆನಾಡಿನ ಸೆರಗಿನಲ್ಲಿಯೇ ಜೀವಿಸುವವರಾದುದರಿಂದ (ನಕ್ಷೆ 1, ಪು..259) ಯಾರೂ 'ಮಲೆನಾಡು ಸಂಕೇತಿ'ಗಳಾಗರು. ಬಸವಾನಿ (ತೀರ್ಥಹಳ್ಳಿ ತಾಲ್ಲೂಕು)ಯವರಿಗೆ ಮಾತ್ರ ಈ ಪದವು ಅನ್ವರ್ಥವಾಗಿದೆ. ಲಿಂಗದಹಳ್ಳಿಗೆ ಬಂದು ನೆಲೆಸಿದವರು ಅವರೇ ಆದುದರಿಂದ, ಅಲ್ಲಿನವರು 'ಮಲೆನಾಡು ಸಂಕೇತಿ'ಗಳೆಂದೇ ಕರೆಯಲ್ಪಟ್ಟರು. ಕಾಲಕ್ರಮದಲ್ಲಿ ಕ್ಷೀಣಗೊಂಡ ಹಿರಿಯಂಗಳದ ಗುಂಪು ಲಿಂಗದಹಳ್ಳಿಯಲ್ಲಿ ಬೆರೆತುಹೋದುದರಿಂದ, 'ಹಿರಿಯಂಗಳ'ವನ್ನಾಧರಿಸಿದ ಜಾತಿವಾಚಕವು ಹಿಂದೆಸರಿದು, ಅವರೆಲ್ಲರೂ ಒಟ್ಟಾಗಿ 'ಮಲೆನಾಡು ಸಂಕೇತಿ' ಎಂದೇ ಗುರುತಿಸಲ್ಪಟ್ಟರು. ಮುಂದೆ, ಸಹಜವಾಗಿಯೇ, 'ಮಲೆನಾಡು' ತನ್ನ ಮಹತ್ತ್ವವನ್ನು ಕಳೆದುಕೊಂಡು, 'ಲಿಂಗದಹಳ್ಳಿ' ಎಂಬ ಸ್ಥಳನಾಮವೇ ಪ್ರಧಾನವಾಯಿತು.

4. ಕರ್ನಾಟಕದ ಸಂಕೇತಿಗಳು : ಪರಸ್ಪರ ಸಂಪರ್ಕ : ಸಂಪರ್ಕದ ದೃಷ್ಟಿಯಿಂದ, ಉಳಿದ ಸಂಕೇತಿಗಳಿಗೆ ಮತ್ತೂರು ಅಲ್ಪಪರಿಚಯದ್ದೂ, ಲಿಂಗದಹಳ್ಳಿಯು ಅಪರಿಚಯದ್ದೂ ಆಗಿದ್ದವು. ಹಾಗಾಗಿ, 'ಮಲೆನಾಡು ಸಂಕೇತಿ' ಎಂಬ ಹೆಸರು ಆ ಇಬ್ಬರಿಗೂ ಆಗಾಗ ಬಳಕೆಯಾಗಿರುವ ಗೊಂದಲವೂ ವಿಸ್ತಾರವಾಗಿಯೇ ಕಾಣಿಸಿಕೊಂಡಿದೆ. ಖಾನೇಷುಮಾರಿ ವರದಿಗಳು ಉಳಿದೆಡೆಗಳಲ್ಲಿ ನೆಲೆಸಿದ್ದ ಸಂಕೇತಿಗಳನ್ನು ಗುರುತಿಸಿದ್ದರೂ, ಕೌಶಿಕ ಮತ್ತು ಬೆಟ್ಟದಪುರದ ಸಂಕೇತಿಗಳನ್ನು ಮಾತ್ರ ಹೆಸರಿಸಿ, ಅವರ ನಡುವಣ ವ್ಯತ್ಯಾಸಗಳನ್ನು ಗುರುತಿಸಿವೆ. ಆದರೆ ಆವೇಳೆಗೇ ಲಿಂಗದಹಳ್ಳಿಯ ಸಂಕೇತಿಗಳು ಪ್ರತ್ಯೇಕ ಉಪಪಂಗಡದ ಅಸ್ತಿತ್ತ್ವವನ್ನು ಪಡೆದಿದ್ದುದು ಸ್ಪಷ್ಟವಿದೆ.

ಮತ್ತೂರು ಮೊದಲಿನಿಂದಲೂ ಕೌಶಿಕ ಸಂಕೇತಿಗಳಲ್ಲಿ ಒಂದಾಗಿ ಪರಿಗಣಿಸಲ್ಪಟ್ಟಿರುವುದಕ್ಕೆ, ಆ ಮೂಲದಿಂದ ಆದ ವಲಸಿಗರೇ ಅಲ್ಲಿ ನೆಲೆಸಿರುವುದೇ ಕಾರಣವಾಗಿದೆ. ಆದರೆ, ಸಂಪರ್ಕದೂರದಿಂದಾಗಿ ಅದೊಂದು ಪ್ರತ್ಯೇಕ ಗುಂಪಾಗಿಯೇ ಬೆಳೆಯಿತು. ಅದೊಂದು ಉಪಪಂಗಡದ ಸ್ಥಾನವನ್ನು ಪಡೆಯದಿದ್ದರೂ, 'ಮತ್ತೂರ್‍ತ್ತೇವಾ' (ಮತ್ತೂರಿನವರು) ಎಂಬ ಉಲ್ಲೇಖಗಳು, 'ಅಂಚೀಮ ಇಂಚೀಮಾ' (ಆಸೀಮೆ ಈಸೀಮೆ) ಎಂಬ ಬಳಕೆ, ಸಂಪರ್ಕದ ಕೊರತೆಯು ಮುಂದುವರಿದಿದ್ದರೆ ಅದೊಂದು ಪ್ರತ್ಯೇಕ ಉಪಪಂಗಡವಾಗುತ್ತಿತ್ತೆಂಬುದರ ಸೂಚನೆಯನ್ನು ಕೊಡುತ್ತವೆ. ಹಾಸನದ ಸುತ್ತಣ **'ಹಾಸನಸೀಮೆ'**ಯಿಂದ ದಕ್ಷಿಣಕ್ಕೆ ಹೇಮಾವತೀ-ಕಾವೇರೀ ನದಿಗಳ ನಡುವಣ ಕೌಶಿಕ ಸಂಕೇತಿಗಳು **'ಮಧ್ಯದೇಶತ್ತೇವಾ'** (ಮಧ್ಯದೇಶದವರು), ಕಾವೇರಿಯ ದಕ್ಷಿಣಕ್ಕಿರುವ ಕೌಶಿಕ ಸಂಕೇತಿಗಳು **'ದಕ್ಷಿಣದೇಶ'**ದವರು ಎನಿಸಿದಾಗಲೂ, ಕೌಶಿಕದ ಮೂಲಭಾಗಕ್ಕಿಂತ ಆದ ಪ್ರತ್ಯೇಕತೆಯ ಅಂಥ ಸೂಚನೆಯೊಂದು ಇದೆ. ಆದರೆ, ಸಂಪರ್ಕ ಸಾಧ್ಯತೆಗಳು ಹೆಚ್ಚು ಸುಸ್ಥಿತಿಯಲ್ಲಿದ್ದುದರಿಂದಲೂ, ಅವುಗಳ ತರಂಗಿತ ಮರುವಲಸೆಗಳು ಪರಸ್ಪರ ಹೆಣೆದುಕೊಂಡುದರಿಂದಲೂ, ಈ ಪದಗಳು ಪ್ರಾಂತವಾಚಕಗಳಾಗಿ ಮಾತ್ರ ಉಳಿದುಕೊಂಡಿವೆ. ತಮಿಳುನಾಡು ಮತ್ತು ಕೇರಳದಲ್ಲಿರುವ ಸಂಕೇತಿಗಳನ್ನು, ಈ ನಿಬಂಧದಲ್ಲಿ, ('ದಕ್ಷಿಣದೇಶ'ದವರಿಗಿಂತ ಭಿನ್ನವಾಗಿ) 'ದಕ್ಷಿಣದವರು' ಎಂದು ಹೆಸರಿಸಿದೆ. **'ದಕ್ಷಿಣದ'**ವರಿಗೆ ಸಾಂಪ್ರದಾಯಿಕವಾಗಿ ಬಳಸುವ

'ದ್ರಾವಿಡದೇಶತ್ತೇವಾ' (ದ್ರಾವಿಡದೇಶದವರು) ಎಂಬ ಮಾತು, ಕರ್ನಾಟಕದ ಸಂಕೇತಿಗಳಿಂದ ಅವರು ಬೇರೆಯಾಗಿ ಉಳಿದಿರುವುದನ್ನು ಸ್ಪಷ್ಟವಾಗಿ ಹೇಳುತ್ತದೆ (ನಕ್ಷೆ 2 ಪು.260).

ಹಾಸನ-ಮತ್ತೂರು, ಹಾಸನ-ಹಿರಿಯಂಗಳ, ಮತ್ತೂರು-ಲಿಂಗದಹಳ್ಳಿ ಈ ಭಾಗಗಳ ನಡುವಣ ಕ್ಷೀಣಸಂಪರ್ಕಗಳ ನಿದರ್ಶನಗಳು - ಸುಮಾರು ಒಂದು ಶತಮಾನದ ಹಿಂದೆಯೇ ಸಿಗುತ್ತವೆ. ಆದರೆ ಅವು ಗಾಢವಾದದ್ದು, ಸಂಪರ್ಕಸಾಧನಗಳು ಹೆಚ್ಚಿದ ಅರ್ಧಶತಮಾನದಿಂದ ಈಚೆಗೆ. ಮಧ್ಯದೇಶ-ಮತ್ತೂರಿನ ಸಂಪರ್ಕದ ಇತಿಹಾಸವೇ ಅರ್ಧಶತಮಾನದ್ದು. ಹೆಸರಿನಿಂದ ಕೂಡ ಅಪರಿಚಿತವಾಗಿದ್ದ ಲಿಂಗದಹಳ್ಳಿಯ ಸಂಪರ್ಕವು ಮಧ್ಯದೇಶಕ್ಕಾದುದು ಒಂದೆರಡು ದಶಕಗಳಿಂದ. ಅನೇಕ ವಕ್ತೃಗಳು 'ಲಿಂಗದಹಳ್ಳಿಯ ಬ್ರಾಹ್ಮಣರು' ಎಂದಷ್ಟೇ ಉಲ್ಲೇಖಿಸಿರುವುದು ಆ ಹಳ್ಳಿಯು ಉಳಿದ (ಮುಖ್ಯವಾಗಿ ಮಧ್ಯದೇಶ, ದಕ್ಷಿಣದೇಶದ) ಸಂಕೇತಿಗಳಿಗೆ ಎಷ್ಟು ಅಪರಿಚಿತವಾಗಿತ್ತು ಎಂಬುದನ್ನೇ ತೋರಿಸುತ್ತದೆ. ಅದಾಗಲೇ ಗಾಢವಾದ ಪ್ರತ್ಯೇಕತೆಯನ್ನು ಬೆಳೆಸಿಕೊಂಡಿದ್ದ ಲಿಂಗದಹಳ್ಳಿ-ಮತ್ತೂರು ಸಂಕೇತಿಗಳು ಹಾಗೂ ಕೌಶಿಕ-ಬೆಟ್ಟದಪುರ ಸಂಕೇತಿಗಳು ಸಮೀಪವರ್ತಿಗಳಾಗಿ ಬಾಳತೊಡಗಿದನಂತರವೂ ಅವರಲ್ಲಿ ತಾದಾತ್ಮ್ಯವು ಸಾಧ್ಯವಾಗಿಲ್ಲದುದು, ಜಾತಿನಿರ್ಮಾಣ ಪ್ರಕ್ರಿಯೆಯ ಒಂದು ಮುಖ.

5. ಹಿರಿಯಂಗಳ (ಕೊಡಗು) ಸಂಕೇತಿ : ಬೆಟ್ಟದಪುರ ಸಂಕೇತಿಗಳಲ್ಲಿನ ಎರಡು ಬಹಿಷ್ಕೃತ ಕುಲಗಳಲ್ಲಿ ಒಂದು 'ಹಿರಿಯಂಗಳ' ಎಂಬ ಹೆಸರು ಹೊತ್ತಿರುವುದು ತುಸು ಗೊಂದಲವನ್ನುಂಟುಮಾಡುತ್ತದೆ. ಕೊಡಗಿನ ವೀರರಾಜನ ಸೈನಿಕರು ಒಂದು ಕಾಳಗದ ವೇಳೆ ರುದ್ರಪಟ್ಟಣದ (ಕೆಲವು ಪಾಠಗಳಲ್ಲಿ ಬೆಟ್ಟದಪುರದ) ಎಲ್ಲ ಜಾತಿಗಳ ಅನೇಕ ಹೆಂಗಸರನ್ನು ಹೊತ್ತೊಯ್ದರು. ಅವರು 'ವರುಣ' ಎನಿಸಿದರು. ಒಬ್ಬ ವಿಧವೆ ತನ್ನ ಕುಲಪುರೋಹಿತನಿಗೆ ತನ್ನ ಮನೆಯ ಸಮಾರಂಭದ ಸಂದರ್ಭದಲ್ಲಿ ಉಚಿತ ಗೌರವ ತೋರಿಸಲಿಲ್ಲವೆಂದು ಬಹಿಷ್ಕೃತರಾದರು. ಅವರು 'ಹಿರಿಯಂಗಳ' ಎನಿಸಿದರು. ಅಲ್ಲದೆ 'ವರುಣ', 'ಹಿರಿಯಂಗಳ', 'ಕೊಡಗು' ಎಂಬ ಪದಗಳೆಲ್ಲಾ ಕೊಡಗಿನ ಆಕ್ರಮಣಕ್ಕೆ ಸಂಬಂಧಿಸಿದ ಬಹಿಷ್ಕೃತರಿಗೇ ಅನ್ವಯವಾಗುವುದೂ ಉಂಟು.

ಲಿಂಗದಹಳ್ಳಿ, ಬೀರೂರು (ಹಿರಿಯಂಗಳ), ಬೆಟ್ಟದಪುರ ಸಂಕೇತಿಗಳ ನಡುವೆ ಮೇಲುನೋಟಕ್ಕೆ ಕಾಣುವ ಕೆಲವು ಭಾಷಿಕ ಮತ್ತು ಸಾಂಸ್ಕೃತಿಕ ಸಾಮ್ಯಗಳಿವೆ. ಈ ಗುಂಪುಗಳು ಕರ್ನಾಟಕದ ಒಂದು ಸಾಮಾನ್ಯ ಮೂಲನೆಲೆಯಿಂದಲೇ ಚದುರಿದ್ದಾರೆನ್ನಲೂ ಆಧಾರಗಳಿವೆ. ಆದರೆ,

0.1 ಬಹಿಷ್ಕೃತ ಕುಟುಂಬಗಳು ಕೆಲವೇ ಇದ್ದು, ಅವುಗಳನ್ನು ಈಗಲೂ ಬೆಟ್ಟದಪುರದವರು ನಿಖರವಾಗಿ ಗುರುತಿಸುತ್ತಾರೆ.

0.2 ಈ ಬಹಿಷ್ಕೃತರು ಎಲ್ಲಿಗೂ ವಲಸೆಹೋಗಿಲ್ಲ.

0.3 ಬೆಟ್ಟದಪುರ, ಲಿಂಗದಹಳ್ಳಿ, ಬೀರೂರು (ಹಿರಿಯಂಗಳ) ಮತ್ತೂರು - ಇಲ್ಲೆಲ್ಲೂ, ಬಹಿಷ್ಕೃತರನ್ನು ಹಿರಿಯಂಗಳಕ್ಕೆ (ಬೀರೂರು) ಸಂಬಂಧಪಡಿಸುವ ಮೌಖಿಕ ಪರಂಪರೆ ಇಲ್ಲ.

0.4 'ಹಿರಿಯಂಗಳ' ಎಂಬ ಬಹಿಷ್ಕೃತ ಗುಂಪೊಂದು ಉಂಟಾದುದು ಕೇವಲ ಒಂದು ಶತಮಾನದ ಹಿಂದೆ. ಈ ಅವಧಿಯಲ್ಲಿ ಬೀರೂರು (ಹಿರಿಯಂಗಳ), ಹಾಸನ ಮತ್ತು ಮತ್ತೂರು ಭಾಗದೊಡನೆ ಸಂಪರ್ಕ ಹೊಂದಿತ್ತು. ಮೌಖಿಕ ಪರಂಪರೆಯು ಗೋಜಲುಗೊಳ್ಳುವಂಥ ದೊಡ್ಡ ಅವಧಿಯೂ ಅದಲ್ಲ. ಆದುದರಿಂದ, ಈ ಬಹಿಷ್ಕೃತ ಗುಂಪಿಗೂ, ಬೀರೂರು ಬಳಿಯ ಹಿರಿಯಂಗಳಕ್ಕೂ, ಸಂಬಂಧ ಕಲ್ಪಿಸಲು ಯಾವ ಆಧಾರವೂ ಇಲ್ಲವಾಗಿದೆ.

6. ಜಾತಿ-ಪ್ರಕ್ರಿಯೆ : ಸಂಕೇತಿಗಳಲ್ಲಿಯೂ, ಭಾರತದ ಎಲ್ಲೆಡೆಗಳಂತೆಯೇ, ಸಮುದ್ರಯಾನೀ ಬಹಿಷ್ಕೃತರು ಪ್ರತ್ಯೇಕ ಉಪಜಾತಿಯಾಗಿ ಬೆಳೆಯಬಹುದಾಗಿದ್ದ ಸಾಧ್ಯತೆಯು ತಪ್ಪಿ, ಅವರ ವಿದ್ಯೆ, ಅಧಿಕಾರ, ಸಾಮಾಜಿಕ ಅಂತಸ್ತುಗಳ ಕಾರಣದಿಂದ ಪ್ರಧಾನ ಜಾತಿಯಲ್ಲಿಯೇ ಲೀನರಾದರೆನ್ನುವುದು, ಜಾತಿನಿರ್ಮಾಣ ಪ್ರಕ್ರಿಯೆಯ ಇನ್ನೊಂದು ಮುಖವಾಗಿದೆ.

ಎಲ್ಲ ಸಮುದಾಯಗಳಲ್ಲಿಯೂ ಕಂಡುಬರುವಂತೆ ಸಂಕೇತಿಗಳಲ್ಲಿಯೂ ಹಲವಾರು ಉಪಜಾತಿಗಳನ್ನು ಸ್ಥಾನಿಕನೆಲೆಗಳಲ್ಲಿ ಗುರುತಿಸಬಹುದಾಗಿದೆ. ಈಗ ಇರುವಂತೆ ಕೌಶಿಕ ಸಂಕೇತಿ, ಬೆಟ್ಟದಪುರ ಸಂಕೇತಿ (ವರುಣ ಮತ್ತು ಹಿರಿಯಂಗಳ ಸೇರಿ), ಲಿಂಗದಹಳ್ಳಿ

(ಮಲೆನಾಡು) ಸಂಕೇತಿ, ದಕ್ಷಿಣ ಸಂಕೇತಿ (ಕೇರಳ, ತಮಿಳುನಾಡು) - ಇದು ಸಂಕೇತಿಗಳ ಜಾತಿರಚನೆಯ ಸ್ವರೂಪವಾಗಿದೆ.

ಮೇಲೆ ಕಾಣಿಸಿದಂತೆ ಬ್ರಾಹ್ಮಣರ ಒಂದು ಪುಟ್ಟ ಸಮುದಾಯವು ನಾನಾ ಕಾರಣಗಳಿಂದ ಸಣ್ಣಸಣ್ಣ ಗುಂಪುಗಳಾಗಿ ಛಿದ್ರವಾಗಿ ಪ್ರತ್ಯೇಕತೆಯನ್ನು ಬೆಳೆಸಿಕೊಂಡ ಈ ಬಗೆಯು, ಜಾತಿ ನಿರ್ಮಾಣದ ಮೂಲಸ್ವರೂಪದ ನಿಚ್ಚಳ ಪ್ರತಿಬಿಂಬವಾಗಿ ಉಳಿದಿದೆ. ಮುಖ್ಯವಾಗಿ, ಇತ್ತೀಚಿನ ವಿಪುಲ ಸಂಪರ್ಕಸಾಧನಗಳು ಈ ಎಲ್ಲ ಗುಂಪುಗಳನ್ನು ಮತ್ತೆ ಕೂಡಿಸುತ್ತಿರುವುದು ಕಾಣಿಸುತ್ತದೆ. ಈ ಪ್ರಕ್ರಿಯೆಗೆ ಮುಖ್ಯ ಪ್ರೇರಕಶಕ್ತಿಯಾಗಿರುವುದು ಆಧುನಿಕ ಶಿಕ್ಷಣವೇ. ಸಂಕೇತಿಗಳು ತಮ್ಮ ಶಿಕ್ಷಣದಲ್ಲಿನ ಪರಿಣಾಮಗಳನ್ನು ಮತ್ತು ನಂಬಿಕೆಗಳನ್ನು ಗಾಢವಾಗಿ ಸ್ವೀಕರಿಸುವವರಾದುದರಿಂದಲೇ, ಸಂಪ್ರದಾಯವಾದಿಗಳು ಮತ್ತು ಆಧುನಿಕರ ನಡುವಣ ವೈಚಾರಿಕ ಸಂಘರ್ಷವೂ ತೀವ್ರವಾಗಿದೆ. ಸಂಪ್ರದಾಯವಾದಿಗಳ ಪರಂಪರಾಗತವಾದ ಅತಿನಿಷ್ಠ ಜೀವನವಿಧಾನದ ಜಾಗದಲ್ಲಿ, ಆಧುನಿಕತೆಗೆ ತನ್ನನ್ನು ಪೂರ್ಣವಾಗಿ ಒಪ್ಪಿಸಿಕೊಂಡ ತಲೆಮಾರು ಉದಯವಾಗುತ್ತಿದೆ.

ಒಟ್ಟಿನಲ್ಲಿ ಪರಸ್ಪರ ಸಂಪರ್ಕರಾಹಿತ್ಯ ಮತ್ತು ಶ್ರೇಷ್ಠತೆಯ ಕಲ್ಪನೆಯು ಸಂಕೇತಿ ಸಮುದಾಯದ ವಿಘಟನೆಯ (ವಿವಿಧ ಅವಸ್ಥೆಗಳ ಹಿನ್ನೆಲೆಯಲ್ಲಿ) ಪ್ರೇರಕಶಕ್ತಿಯಾಗಿ ಕೆಲಸಮಾಡಿರುವುದು ಕಾಣಿಸುತ್ತದೆ. ಆಧುನಿಕ ಶಿಕ್ಷಣವು ಸಾಮಾನ್ಯವಾಗಿ ಅದರ ಸಂಘಟನೆಗೆ ಪ್ರೇರಕವಾದರೂ, ಸಾಂಪ್ರದಾಯಿಕತೆಗೆ ಮುಖಾಮುಖಿಯಾದಾಗ ಆಂತರಿಕ ಸಂಘರ್ಷವನ್ನೂ ಉಂಟುಮಾಡಿದೆ. ಪುಟ್ಟ ಸಮುದಾಯವಾದರೂ, ಜಾತಿಪ್ರಕ್ರಿಯೆಯ ಜಾಗತಿಕ ಲಕ್ಷಣಗಳಿಗೂ ಇದು ಕನ್ನಡಿಯಾಗಿರುವುದು ಮುಖ್ಯ ಸಂಗತಿಯಾಗುತ್ತದೆ.

೩. ಸಂಕೇತಿಗಳ ಐತಿಹಾಸಿಕ ವಲಸೆ

ಈ ಅಧ್ಯಾಯದ ಮೊದಲ ಎರಡು ಉಪಶೀರ್ಷಿಕೆಗಳಲ್ಲಿ ಕೆಲವು ಪರಿಚಯಾತ್ಮಕ ವಿಶ್ಲೇಷಣೆಗಳನ್ನು ನೋಡಿದೆವು. ಇಲ್ಲಿ ಸಂಕೇತಿಗಳ ಹಿನ್ನೆಲೆಗೆ ಸಂಬಂಧಿಸಿದ ಕೆಲವು ಮುಖ್ಯ ಸಮಸ್ಯೆಗಳನ್ನು ಚರ್ಚಿಸುವ ಉದ್ದೇಶವಿದೆ.

ಅ. ಕಾಲ :

1. ಕರ್ನಾಟಕಕ್ಕೆ - (ಕ್ರಿ.ಶ.೧೦೮೭ ರಿಂದ ಕ್ರಿ.ಶ.೧೧೨೫ರವರೆಗೆ ತರಂಗಿತ ವಲಸೆ) : ಸಂಕೇತಿಗಳ ವಲಸೆಯು ಕರ್ನಾಟಕದಿಂದ ತಮಿಳುನಾಡಿಗೆ ನಡೆಯಿತೇ ಅಥವಾ ತಮಿಳುನಾಡಿನಿಂದ ಕರ್ನಾಟಕಕ್ಕೆ ನಡೆಯಿತೇ ಎಂಬುದು ನಿಜವಾಗಿ ಒಂದು ಸಮಸ್ಯೆಯಲ್ಲವಾದರೂ ಆ ಬಗೆಗಿನ ಅಭಿಪ್ರಾಯಗಳನ್ನೂ ಗಮನಿಸಬೇಕಾದುದು ಅಗತ್ಯ. ಮುಖ್ಯವಾಗಿ ದಕ್ಷಿಣದಲ್ಲಿ ವ್ಯಕ್ತವಾದ ಪ್ರತಿಕ್ರಿಯೆಗಳಲ್ಲಿ ಎರಡೂ ಸೇರಿವೆ. ತಮಿಳುನಾಡಿನಲ್ಲಿ ಹೇಗೋ ಹಾಗೆಯೇ ಕೇರಳದಲ್ಲಿ, ಅದಕ್ಕಿಂತ ಮುಖ್ಯವಾಗಿ ಕರ್ನಾಟಕದಲ್ಲಿ ನೆಲೆಸಿರುವ ಸಂಕೇತಿಗಳ ಮಾತೃಭಾಷೆ ತಮಿಳು. ಕರ್ನಾಟಕದಿಂದ ತಮಿಳುನಾಡಿಗೆ ವಲಸೆ ಹೋದ ಇತರ ಬ್ರಾಹ್ಮಣರ ನಿದರ್ಶನಗಳಿದ್ದು ಅವರು ಕನ್ನಡವನ್ನೇ ಮಾತೃಭಾಷೆಯಾಗಿ ಉಳಿಸಿಕೊಂಡಿರುವುದು ಕಂಡಿದೆ. ಸಂಕೇತಿಗಳು ಕರ್ನಾಟಕದಿಂದಲೇ ತಮಿಳುನಾಡಿಗೆ ವಲಸೆ ಹೋದವರಾಗಿದ್ದರೆ ಅದಕ್ಕಿಂತ ಭಿನ್ನವಾದ ವಿದ್ಯಮಾನ ಕಾಣುತ್ತಿರಲಿಲ್ಲ. ಅಲ್ಲದೆ ಕರ್ನಾಟಕದಲ್ಲೇ ಇರುವ ಸಂಕೇತಿಗಳು ತಮಿಳುಭಾಷೆಯನ್ನು ಆಡುತ್ತಿರಲಿಲ್ಲ. ಕೇರಳದ ಗಡಿಭಾಗವಾದ ಶೆಂಕೋಟ್ಟೈನಿಂದ ಬಾರದವರಾಗಿದ್ದರೆ ಅವರ ಭಾಷೆಯಲ್ಲಿ ಮಲೆಯಾಳಾಂಶಗಳೂ ಇರುತ್ತಿರಲಿಲ್ಲ. ಆದರೂ ದಕ್ಷಿಣದಲ್ಲಿ, ಉಪೇಕ್ಷಿಸಲಾಗದಂತೆ ಅಲ್ಲಲ್ಲಿ ವ್ಯಕ್ತವಾಗುತ್ತಿರುವ ಪ್ರತ್ಯಭಿಪ್ರಾಯಗಳಲ್ಲಿ ತರ್ಕಾಂಶವಿದೆ. ಗಂಗಾ ಯಮುನಾ ನರ್ಮದಾ ನದಿಗಳ ತಟದಿಂದ ಶೆಂಕೋಟ್ಟೈ ಪ್ರಾಂತಕ್ಕೆ ಆದ ಸಂಕೇತಿಗಳ ಪೂರ್ವವಲಸೆಯು ಕರ್ನಾಟಕದ ಮೂಲಕವೇ ನಡೆದಿರಬೇಕು; ಕನ್ನಡವು ಮಾತೃಭಾಷೆಯಾಗಿ ಸ್ವೀಕಾರವಾಗದಷ್ಟು ಕ್ಷಿಪ್ರವಾಗಿ ಕರ್ನಾಟಕವನ್ನು ಅವರು ದಾಟಿರಬೇಕು. ಲಭ್ಯ ಮಿತ ಆಧಾರಗಳ ಸನ್ನಿವೇಶದಲ್ಲಿ ಅನುಭವಗಮ್ಯ ವಸ್ತುಸ್ಥಿತಿಯಿಂದ ಹೊರಡುವ ಇಂಥ ಸರಳ ತೀರ್ಮಾನದೊಂದಿಗೆ ನಮಗೆ ಮುಖ್ಯವಾದ ಮಹಾವಲಸೆಯ ಬಗೆಗೆ ವಿವೇಚಿಸಬಹುದು. ಸಂಕೇತಿಗಳ ಐತಿಹಾಸಿಕ ಹೊರವಲಸೆಯು ಶೆಂಕೋಟ್ಟೈ ಪ್ರಾಂತದಿಂದ ಪ್ರಾರಂಭವಾಯಿತು. ಕರ್ನಾಟಕಕ್ಕೆ ಆದ ಮಹಾವಲಸೆಯ ಬಗೆಗೆ ಅನೇಕ ನಿಚ್ಚಳ ಆಧಾರಗಳು ದೊರೆಯುತ್ತಿರುವುದರಿಂದ ಮೊದಲು ಅದನ್ನು ಪರಿಶೀಲಿಸಬಹುದು.

ಜನಸಮುದಾಯಗಳ ಅಧ್ಯಯನದಲ್ಲಿ ಆಸಕ್ತರಾದವರು, ಕರ್ನಾಟಕಕ್ಕೆ ಬಂದ ತಮಿಳು ಬ್ರಾಹ್ಮಣರಲ್ಲಿ (ಸುಮಾರು ಒಂಬತ್ತು

ಶತಮಾನಗಳ ಹಿಂದೆ ಬಂದ) ಸಂಕೇತಿಗಳೇ ಮೊದಲಿಗರು ಎಂಬ ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದಾರೆ. ೧೮೭೧ ಮತ್ತು ೧೮೯೩ರ ಖಾನೇಷುಮಾರಿ ವರದಿಗಳಿಂದಲೂ, ಫರ್ಸ್ಟನರ ವರದಿಗಳಿಂದಲೂ ಅದು ಸ್ಪಷ್ಟವಾಗುತ್ತದೆ. ಸಂಕೇತಿಗಳು ಆಡುವ ತಮಿಳು ಕನ್ನಡೀಕರಣಗೊಂಡಿರುವ ಪ್ರಮಾಣವು, ಭಾಷೆಗಳ ಅಧ್ಯಯನದಲ್ಲಿ ಆಸಕ್ತರಾದವರೂ ಮೇಲಿನ ಅಭಿಪ್ರಾಯವನ್ನೇ ಮುಂದುವರಿಸಿಕೊಂಡು ಬರುವಂತೆ ಮಾಡಿದೆ. ಭಾಷಾಶಾಸ್ತ್ರಜ್ಞರಾದ ಪ್ರೊ.ಎಚ್.ಎಸ್.ಅನಂತನಾರಾಯಣ ಅವರೂ ತಮ್ಮ "ಸಂಕೇತಿ ಡಯಲೆಕ್ಟ್" ಎಂಬ ಲೇಖನದಲ್ಲಿ[28] ಅದಕ್ಕೆ ಪೂರಕವಾದ ನಿಲುವು ಹೊಂದಿರುವುದು ಕಾಣುತ್ತದೆ. ಇವರು ತಮಿಳುನಾಡಿನ ಸಂಕೇತಿಗಳೊಂದಿಗೆ ತಮ್ಮ ಸಂಬಂಧಗಳನ್ನು ಪೂರ್ಣವಾಗಿ ಕಳಚಿಕೊಳ್ಳುವಷ್ಟು ಪ್ರಾಚೀನ ವಲಸಿಗರಾಗಿದ್ದಾರೆ ಎಂಬುದೂ ಗಮನಿಸಬೇಕಾದ ಅಂಶವಾಗಿದೆ.

0.1 ನೀಲಗುಂದಕ್ಕೆ : ನೀಲಗುಂದ ತಾಮ್ರಶಾಸನವು (ಕ್ರಿ.ಶ.೧೦೮೭ ಮತ್ತು ಕ್ರಿ.ಶ.೧೧೨೩), ತಮಿಳುನಾಡಿನಿಂದ ವಲಸೆಬಂದ, ವಿವಿಧ ಗೋತ್ರಗಳಿಗೆ ಸೇರಿದ, ವಿವಿಧ ವೇದಶಾಖೆಗಳಲ್ಲಿ ಪ್ರಕಾಂಡ ಪಂಡಿತರಾದ, ಮುನ್ನೂರು ಬ್ರಾಹ್ಮಣರಿಗೆ ಮೊದಲು, ಅದೇ ಬ್ರಾಹ್ಮಣರಿಗೆ ಅನಂತರ, ಕೆಲವು ಗ್ರಾಮಗಳು ಆರನೆಯ ವಿಕ್ರಮಾದಿತ್ಯನಿಂದ ದತ್ತಿಯಾಗಿ ಕೊಡಲ್ಪಟ್ಟುದನ್ನು ಸಾರುತ್ತದೆ.

೦.೦.೧ ಈ ಬ್ರಾಹ್ಮಣರಿಗೆ, ಕ್ರಿ.ಶ.೧೦೮೭ರಲ್ಲಿ, ಪ(ಬ)ಲತಪಾಂಡ್ಯನೆಂಬ (ವಿಕ್ರಮಾದಿತ್ಯನ) ಸಾಮಂತ ರಾಜನು ನೆರವಿಗೆ ಬಂದನು. ಕ್ರಿ.ಶ.೧೧೨೩ರಲ್ಲಿ ಅವರ ನೆರವಿಗೆ ಬಂದವನು ಪ(ಬ)ಲತಪಾಂಡ್ಯನ ಮೊಮ್ಮಗನಾದ ರಾಯಪಾಂಡ್ಯ. ಈ 'ಪಾಂಡ್ಯ' ಸಂಬಂಧವು ಪಾಂಡ್ಯರಾಜ್ಯದಿಂದ ವಲಸೆ ಬಂದ ಸಂಕೇತಿಗಳನ್ನು ಸೂಚಿಸುತ್ತದಲ್ಲದೆ, ಇದೊಂದು ವ್ಯವಸ್ಥಿತ ವಲಸೆ ಎಂಬುದನ್ನೂ ಹೇಳುತ್ತದೆ. ವಿಕ್ರಮಾದಿತ್ಯನ (ಚೋಳಾಧೀನವಾಗಿದ್ದ) ಪಾಂಡ್ಯರಾಜ್ಯ ದಿಗ್ವಿಜಯವು ಕಲ್ಪಿಸಿದ ಸಂಪರ್ಕವೂ ಈ ವಲಸೆಯ ಪ್ರೇರಕಶಕ್ತಿಯಾಗಿರುವಂತಿದೆ.

೦.೦.೨ ಸಂಕೇತಿಗಳ ವಲಸೆಯಲ್ಲಿ ಮುನ್ನೂರು, ಇನ್ನೂರು, ನೂರೈವತ್ತು - ಈ ಸಂಖ್ಯೆಗಳಿಗೆ ಮಹತ್ತ್ವವಿದೆ. ವ್ಯಾಪಕ ಮೌಖಿಕ ಪರಂಪರೆಯು, ಈ ಸಂಖ್ಯೆಯ ಒಕ್ಕಲುಗಳು ತಂಡತಂಡವಾಗಿ ವಲಸೆಬಂದುದನ್ನು ಸ್ಮರಣೆಯಲ್ಲಿಟ್ಟಿದೆ.

೦.೦.೩ ದಕ್ಷಿಣದಲ್ಲಿ ವ್ಯಾಪಕವಾಗಿ ಬಳಕೆಯಲ್ಲಿರುವ ಆಂಡಪಿಳ್ಳೈಭಟ್ಟಅತಿರಾತ್ರಯಾಜಿಯ ಗೃಹ್ಯಸೂತ್ರಗಳ ಪ್ರಯೋಗವೃತ್ತಿಯನ್ನು ಸಂಕೇತಿಗಳು ಸ್ವಲ್ಪ ಭಿನ್ನಸ್ವರೂಪದಲ್ಲಿ (ಸ್ಟ್ರಕ್ಚರ್) ಬಳಸುವುದನ್ನು ಕಾಣಬಹುದಾಗಿದೆ. ಕರ್ನಾಟಕದ ಸಂಕೇತಿಗಳ ಗೃಹ್ಯಪ್ರಯೋಗದಲ್ಲಿ ಪ್ರಯೋಗವಾಕ್ಯ ಮತ್ತು ಅದಕ್ಕೆ ಸಂಬಂಧಿಸಿದ ಮಂತ್ರದ ಮೊದಲ ಪಂಕ್ತಿಗಳು ಸೇರಿಕೊಂಡೇ ಸಾಗುವುದರಿಂದ ನೆನಪಿನಲ್ಲಿಡಲು ಮತ್ತು ಪೌರೋಹಿತ್ಯ ಮಾಡಿಸಲು ಬಹಳ ಅನುಕೂಲವಿದೆ. ಇದು ಅವರ ಸಾಂಪ್ರದಾಯಿಕ ರೀತಿ. ಆದರೆ ಇಪ್ಪತ್ತನೆಯ ಶತಮಾನದ ಪ್ರಾರಂಭದ ದಶಕಗಳ ಹೊತ್ತಿಗೆ ಮೈಸೂರು ಮಹಾರಾಜರ ಸಂಸ್ಕೃತಪಾಠಶಾಲೆಯಲ್ಲಿ ಅಧ್ಯಯನ ಮಾಡಿ ಗೃಹ್ಯಪ್ರಯೋಗ ಪರೀಕ್ಷೆಗೆ ಕೂರುವ ಪರಿಪಾಠ ಪ್ರಾರಂಭವಾದಾಗ ಸಂಕೇತಿಗಳೂ ಆಂಡಪಿಳ್ಳೈಯ ಪ್ರಯೋಗವನ್ನೇ ಅಭ್ಯಸಿಸುವುದು ಅನಿವಾರ್ಯವಾಯಿತು. ಈ ಕುರಿತ ಪರೀಕ್ಷೆ ನಡೆಸಲು ಬರುತ್ತಿದ್ದ ವಿದ್ವಾಂಸರೂ ತಮಿಳುನಾಡಿನವರು. ಇಷ್ಟಾದರೂ ಬಳಕೆಗೆ ಸಂಕೇತಿಗಳು ಈಗಲೂ ಬಳಸುವುದು ತಮಗೆ ಬಂದ ಸಾಂಪ್ರದಾಯಿಕ ಪ್ರಯೋಗವನ್ನೇ ಎಂಬುದು ಗಮನಾರ್ಹವಾದುದು. ಅತಿರಾತ್ರಯಾಜಿಯ ಕಾಲದ (ಸುಮಾರು ಕ್ರಿ.ಶ.೧೧೬೦)[29] ಅನಂತರವೂ ಸಂಕೇತಿಗಳು ಶೆಂಕೋಟ್ಟೈನಲ್ಲಿ ಉಳಿದಿದ್ದರೆ, ಉಳಿದವರೆಲ್ಲರೂ ಬಳಸುವ ಪ್ರಸಿದ್ಧ ಪ್ರಯೋಗವೊಂದನ್ನು ಬಿಟ್ಟು ಬೇರೊಂದನ್ನು ಬಳಸುವ ಸಂಭವವಿರಲಿಲ್ಲ.

೦.೦.೪ ಮಲೆಯಾಳಂ ತನ್ನ ಪ್ರತ್ಯೇಕತೆಯನ್ನು ಸಾಧಿಸತೊಡಗಿದುದು ಹತ್ತನೆಯ ಶತಮಾನದನಂತರ. ಸಂಕೇತಿ ಭಾಷೆಯಲ್ಲಿರುವ ಮಲೆಯಾಳದ ಭಾಷಾಂಶಗಳಿಗೆ, ಅವರು (ಈಗಿನ) ಮಲೆಯಾಳ ರಾಜ್ಯದ ಗಡಿಯಲ್ಲಿದ್ದುದೇ ಕಾರಣವಾಗಿದೆ. ಆದರೆ, ಸ್ವತಂತ್ರ ಅಸ್ತಿತ್ವವನ್ನು ಪಡೆದನಂತರದ ಮಲೆಯಾಳಂ ಭಾಷಾಬೆಳವಣಿಗೆಯ ಲಕ್ಷಣಗಳು ಸಂಕೇತಿಗಳ ಭಾಷೆಯಲ್ಲಿ

[28] *ಸ್ಮೃತಿ ಸಂಪುಟ,* Sanketi Dialect, ಕೌಶಿಕ ಸಂಕೇತಿ ವಿದ್ಯಾರ್ಥಿ ನಿಲಯ, ಜಯನಗರ, ಮೈಸೂರು, ೧೯೭೭.

[29] ಶಾಸನವೊಂದರ ಆಧಾರದಿಂದ ಈ ಕಾಲನಿರ್ಧಾರ ಮಾಡಿದೆ. ನೋಡಿ: The Pandyan kingdom (from the earliest times to the sixteenth century), Nilakanta Sastri K.A., London, 1929, pp.125-126.

ಕಾಣುವುದಿಲ್ಲವೆಂಬುದನ್ನೂ ಪ್ರೊ.ಎಚ್.ಎಸ್.ಅನಂತನಾರಾಯಣ ಅವರು ತಮ್ಮ "ಸಂಕೇತಿ ಡಯಲೆಕ್ಟ್" ಎಂಬ ಲೇಖನದಲ್ಲಿ ಗುರುತಿಸಿದ್ದಾರೆ. ಹನ್ನೊಂದನೆಯ ಶತಮಾನದನಂತರವೂ (ಕರ್ನಾಟಕಕ್ಕೆ ಬಂದ) ಸಂಕೇತಿಗಳು ಶೆಂಕೋಟ್ಟೈನಲ್ಲಿ ಉಳಿದಿದ್ದುದಾದರೆ, ಭಾಷಾಪ್ರವೃತ್ತಿಯು ಭಿನ್ನವಾಗುತ್ತಿತ್ತೆನ್ನಲು ಅವಕಾಶವಿದೆ. ಇವೆಲ್ಲವೂ ಕ್ರಿ.ಶ.೧೦೮೭ರ ವೇಳೆಗೆ ನೀಲಗುಂದಕ್ಕೆ ಸಂಕೇತಿಗಳ ಮೊದಲ ತಂಡದ ವಲಸೆಯು ಆದುದನ್ನು ಸಮರ್ಥಿಸುತ್ತವೆ.

ಕ್ರಿ.ಶ.೧೧೨೩ ರಲ್ಲಿಯೂ ಸಂಕೇತಿಗಳು ಆ ನೆಲೆಯಲ್ಲಿದ್ದುದೂ ನೀಲಗುಂದದ ಶಾಸನದಿಂದಲೇ ತಿಳಿಯುತ್ತದೆ.

0.2 ಶಾಂತಿಗ್ರಾಮಕ್ಕೆ : ತಮ್ಮವರು ತಿರುನೆಲ್‌ವೇಲಿಯಿಂದ ವಲಸೆ ಬರುವಾಗ ತಮ್ಮ ಇಷ್ಟದೈವದ ವಿಗ್ರಹವನ್ನು ಬಿಟ್ಟಿರಲಾರದೆ ತಿಪ್ಪಯ್ಯನ ನೇತೃತ್ವದಲ್ಲಿ ಮಡಿಯಲ್ಲಿ ತಲೆಯಮೇಲಿಟ್ಟುಕೊಂಡು ನಡೆದುತಂದರೆಂಬ, ಸಂಕೇತಿಗಳ ವ್ಯಾಪಕ ಐತಿಹ್ಯವನ್ನು, ಹಾಸನ ತಾಲ್ಲೂಕು ಶಾಂತಿಗ್ರಾಮದ ಕೇಶವದೇವಾಲಯದ ಬಲಗಲ್ಲಿನ (ಮುಕ್ಕಾದ) ಶಾಸನವೂ ಸಮರ್ಥಿಸುತ್ತದೆ.[30] ಉತ್ಸವಮೂರ್ತಿಯನ್ನು ತಿರುನೆಲ್‌ವೇಲಿ ಜಿಲ್ಲೆಯಿಂದ ತಂದುದನ್ನೂ 'ತಿಪ್ಪಯ್ಯ'ನೇ ಆ ವಿಗ್ರಹದ ದಾನಿ ಎಂಬುದನ್ನೂ ಶಾಸನವು ಸಮರ್ಥಿಸುತ್ತದೆ ಎಂಬುದು ಸಂಕೇತಿಗಳ ಮೌಖಿಕ ಪರಂಪರೆ ಎಷ್ಟು ಖಚಿತವಾದುದು ಎಂಬುದಕ್ಕೂ ಸಾಕ್ಷಿಯಾಗಿದೆ. 'ತಿಮ್ಮಪ್ಪಯ್ಯ' ಮತ್ತು 'ತಿಪ್ಪಯ್ಯ' ಎಂಬುವು, ಸಂಕೇತಿಗಳಲ್ಲಿ ವ್ಯಾಪಕವಾಗಿ ಇಂದಿನವರೆಗೂ ಪರಂಪರೆಯಾಗಿ ಬಳಕೆಯಲ್ಲಿರುವ ಪ್ರಸಿದ್ಧ ಹೆಸರುಗಳೂ ಹೌದು.[31] ಇಂದಿಗೂ ಆ ವಂಶಸ್ಥರು ಶಾಂತಿಗ್ರಾಮದ ಕೇಶವದೇವರ ಜಾತ್ರೆಗೆ ಪ್ರತಿವರ್ಷ ಹೋಗುವ ರೂಢಿ ಇಟ್ಟುಕೊಂಡಿದ್ದಾರೆ. ಶಾಂತಿಗ್ರಾಮವು (ಕರ್ನಾಟಕದ) ಸಂಕೇತಿಗಳ ಪ್ರಾರಂಭಿಕ ನೆಲೆಗಳಲ್ಲಿ ಒಂದಾದುದರಿಂದ, ತಿಪ್ಪಯ್ಯನವರು ದಾನಮಾಡಿದ ಕಾಲವನ್ನು - ಶಾಂತಿಗ್ರಾಮದಲ್ಲಿದ್ದ ದೇವಸ್ಥಾನಗಳ ಜೀರ್ಣೋದ್ಧಾರ ಕಾರ್ಯವನ್ನು ಶಾಂತಲೆಯು ಕ್ರಿ.ಶ.ಸುಮಾರು ೧೯೫೩ರಿಂದ ಪ್ರಾರಂಭಿಸಿದಳೆಂಬುದನ್ನೂ ಅದೇ ಊರಿನ ಶಾಸನದಂತೆ ವಿಷ್ಣುವರ್ಧನನು ಶಾಂತಲೆಗೆ ಈ ಗ್ರಾಮವನ್ನು ಕೊಟ್ಟುದು ಕ್ರಿ.ಶ.೧೧೨೩ರಲ್ಲಿ ಎಂಬುದನ್ನೂ ಗಮನದಲ್ಲಿಟ್ಟುಕೊಂಡು[32]-ಆ ಗ್ರಾಮವು 'ವೃತ್ತಿ'ಯಾಗಿ ದೊರೆತ ಕಾಲವೆಂದೇ (ಸುಮಾರು ಕ್ರಿ.ಶ.೧೧೨೨) ಇಟ್ಟುಕೊಳ್ಳಬಹುದು. ಅದಕ್ಕೆ ಇತರ ಆಧಾರಗಳೂ ಇವೆ:

೦.೦.೧ ಶಾಂತಿಗ್ರಾಮದ ಮತ್ತೊಂದು ಶಾಸನವು,[33] ಈ 'ಗ್ರಾಮ'ದ ವೃತ್ತಿಗಳು ಅನೇಕ ಶ್ರೀವೈಷ್ಣವರಿಗೂ, ಅದಕ್ಕಿಂತ ಹೆಚ್ಚಿನ ಸಂಖ್ಯೆಯ ಸ್ಮಾರ್ತರಿಗೂ ಕ್ರಿ.ಶ.೧೧೨೨ರಲ್ಲಿ ದೊರೆತುದನ್ನು ಹೇಳುತ್ತದೆ. ಹೀಗೆ ದೊರೆತ ವೃತ್ತಿಗಳು ಸಂಕೇತಿ ಹೆಬ್ಬಾರವ ಮನೆತನಗಳಿಗೆ ವಿಶೇಷವಾಗಿ ದೊರೆತವು; ಆ ಮನೆತನಗಳು ಶ್ರೀವೈಷ್ಣವ ಮತವನ್ನವಲಂಬಿಸಿದುವು ಎಂಬುದು ಐತಿಹ್ಯ. ಈ ಹೆಬ್ಬಾರವರಿಂದಲೇ ಆ ಪಂಗಡಕ್ಕೆ 'ಹೆಬ್ಬಾರ ಶ್ರೀವೈಷ್ಣವ' ಎಂಬ ಹೆಸರಾದುದೂ ಮೈಸೂರು ಗೆಜೆಟಿಯರ್‌ನಲ್ಲಿ[34] ದಾಖಲಾಗಿದೆ. ".... ಹೆಬ್ಬಾರವರು ತಮಿಳುನಾಡಿನಿಂದ ಕರ್ನಾಟಕಕ್ಕೆ ವಲಸೆ ಬಂದು ಐದು ವಿವಿಧ ಹಳ್ಳಿಗಳಲ್ಲಿ ನೆಲೆನಿಂತವರ ವಂಶಿಕರು; ಆ ಹಳ್ಳಿಗಳು 'ಪಂಚಗ್ರಾಮ' ಎಂದೂ ಹೆಸರಾದುವು .... 'ಗ್ರಾಮ'ದಲ್ಲಿನೆಲೆನಿಂತವರು ಈ 'ಹೆಬ್ಬಾರವ' ಪದನಾಮ ಪಡೆದಂತೆ ತೋರುತ್ತದೆ, ಅದೇ ಪದನಾಮವು ಅವರ ಸಂಪರ್ಕದ ಕಾರಣದಿಂದ ಎಲ್ಲ ಪಂಚಗ್ರಾಮಗಳವರಿಗೂ ವಿಸ್ತರಿಸಿದೆ ..." ಹೆಬ್ಬಾರ ಶ್ರೀವೈಷ್ಣವರು ನೆಲೆಸಿದ ಐದು ಗ್ರಾಮಗಳೆಂದರೆ ಹಾಸನ ಜಿಲ್ಲೆಯ (ಶಾಂತಿ) ಗ್ರಾಮ, ತುಮಕೂರು ಜಿಲ್ಲೆಯ ಕಡಬ, ಬೆಂಗಳೂರು ಜಿಲ್ಲೆಯ ಮಾಲೂರು, ಮೈಸೂರು ಜಿಲ್ಲೆಯ ಹಂಗಲ, ಹಾಸನ ಜಿಲ್ಲೆಯ ಬೇಲೂರು. [ಸಾಲಗಾಮೆ

---

30 *Mysore Gazetteer,* Vol.5, Hayavadana Rao (C), p.980.

31 ಉತ್ಸವಮೂರ್ತಿಯನ್ನು ತಿರುನೆಲ್‌ವೇಲಿಯಿಂದ ಶಾಂತಿಗ್ರಾಮಕ್ಕೆ ತಲೆಯ ಮೇಲೆ ಹೊತ್ತುಕೊಂಡು ಬಿಜಯಮಾಡಿಸಿದ ವೈದಿಕ ತಿಪ್ಪಯ್ಯನವರ ಹೆಸರು ಮೌಖಿಕ ಪರಂಪರೆಯಲ್ಲಿದೆ. ತಿಪ್ಪೂರಿನ ಅರಸರಲ್ಲಿ ಮಂತ್ರಿಯಾಗಿದ್ದ ತಿಮ್ಮಪ್ಪಯ್ಯ ಹಾಗೂ ಮೈಸೂರು ಅರಮನೆ ಬಕ್ಷಿ ತಿಪ್ಪಯ್ಯನವರು ಇತಿಹಾಸ ಪ್ರಸಿದ್ಧರು. ಮೈಸೂರು ಮಹಾರಾಜರ ಸಂಸ್ಕೃತ ಪಾಠಶಾಲೆಯಲ್ಲಿ ಇಪ್ಪತ್ತನೆಯ ಶತಮಾನದ ಆದಿಮ ದಶಕಗಳಲ್ಲಿ ಪ್ರಾಧ್ಯಾಪಕರಾಗಿದ್ದವರು 'ವೈದಿಕಸಾರ್ವಭೌಮ' ಎನಿಸಿದ ತಿಪ್ಪಯ್ಯನವರು.

32 ಅ) *Mysore Gazetteer,* Vol.5, Hayavadana Rao (C), p.981.

ಆ) *ಇ.ಸಿ., ಸಂಪುಟ.೫,* ಭಾಗ ೧, ಹಾಸನ ೧೧೬.

33 ಇ.ಸಿ.೧೬೭ (V ಹಾ ೧೧೬) ಶಾಂತಿಗ್ರಾಮ, ಕ್ರಿ.ಶ.೧೧೨೨, ಧರ್ಮೇಶ್ವರ ದೇವಾಲಯದ ದಕ್ಷಿಣದಲ್ಲಿರುವ ಶಾಸನ.

34 *Mysore Gazetteer,* Vol.1, Hayavadana Rao (C), 1927, pp.224-225.

ಕೇಶವ ಮತ್ತು ಕೌಶಿಕದ ಕೇಶವ ದೇವರನ್ನು ಮನೆದೇವರಾಗಿ ಉಳ್ಳ ಸಾಲಗಾಮೆ ಮತ್ತು (ಅರಕಲಗೂಡು ತಾಲೂಕಿನ) ಬಿಜಾಪುರದ ಕೆಲವು ಪ್ರಸಿದ್ಧ ಸಂಕೇತಿ ಹೆಬ್ಬಾರವ ಮನೆತನಗಳು ಈಗಲೂ ಮುಂದುವರಿದಿವೆ.] ಇದರಿಂದಲೂ, ಕ್ರಿ.ಶ.೧೧೨೩ಕ್ಕೆ ಮುನ್ನವೇ ಸಂಕೇತಿಗಳು ಈ ಭಾಗಕ್ಕೆ ವಲಸೆಬಂದಿರುವುದು ಸ್ಪಷ್ಟವಾಗುತ್ತದೆ.

೦.೦.೨ ಸಂಕೇತಿಗಳ ವಲಸೆಯ ಸಂದರ್ಭದಲ್ಲಿ ಹೆಮ್ಮಿಗೆಯಲ್ಲಿ ಆದ ಮತಾಂತರಕ್ಕೆ, ಕರ್ನಾಟಕದ ಸಂಕೇತಿಗಳಲ್ಲಿ ಮಾತ್ರ ವಿವಾಹ ಸಂದರ್ಭದಲ್ಲಿ ನಡೆಯುವ 'ಕೋಡಂಗಿ-ಸಭೆ' ಒಂದು ಸಾಂಸ್ಕೃತಿಕ ಪುರಾವೆಯಾಗಿದೆ. ಶ್ರೀವೈಷ್ಣವರಾಗಿ ಮತಾಂತರಹೊಂದಿದ ತಮ್ಮ ಬಂಧುಗಳನ್ನು ಪರಿಹಾಸ್ಯ ಮಾಡುವ ಈ ಕಾರ್ಯಕ್ರಮವು, ಮೂಲತಮಿಳಿನ ಅನುಕರಣೆಯಲ್ಲಿಯೇ ನಡೆಯುತ್ತದೆ. ಅದ್ವೈತ ಮತ್ತು ವಿಶಿಷ್ಟಾದ್ವೈತಗಳ ತಾತ್ವಿಕ ಚರ್ಚೆ ಗಂಭೀರವಾಗಿ ನಡೆದು ಅದ್ವೈತಿಯೇ ಗೆಲ್ಲುವ ಅಣಕವು, ಸೋದರಮಾವ ಮತ್ತು ವರನನ್ನು ಪ್ರಧಾನಪಾತ್ರಗಳಾಗಿ ಹೊಂದಿರುತ್ತದೆ. ಉಭಯಸಂಕೇತಿಗಳಲ್ಲಿಯೂ ಈ ಪ್ರಹಸನವು ಸಮಾನವಾಗಿ ನಡೆಯುವುದರಿಂದ ವಿವಿಧ ತಂಡಗಳು ಹೆಚ್ಚಿನ ಕಾಲದ ಅಂತರದಲ್ಲಿ ಬಂದಿರಲಾರವು ಎಂದೂ ಹೇಳಬಹುದಾಗಿದೆ. ಅಲ್ಲದೆ, ಹೆಮ್ಮಿಗೆಯ ಮತಾಂತರ ಪ್ರಸಂಗವು ಶ್ರೀ ರಾಮಾನುಜರ ಸಮಕಾಲ ಇಲ್ಲವೆ ಅನಂತರವೇ ಆಗಿರಬೇಕಾಗುತ್ತದೆ.

ಕ್ರಿ.ಶ.೧೦೯೮ರ ವೇಳೆಗೇ ರಾಮಾನುಜರು ಕರ್ನಾಟಕಕ್ಕೆ ಬಂದರೆಂಬ ಸಾಂಪ್ರದಾಯಿಕ ಅಭಿಪ್ರಾಯವನ್ನು, ಸಾಕಷ್ಟು ಪ್ರಚಾರ, ಪ್ರಖ್ಯಾತಿ, ಪ್ರಭಾವಗಳನಂತರವೇ ವಿಷ್ಣುವರ್ಧನನು ಅವರಿಂದ ಆಕರ್ಷಿತನಾದನೆಂಬ ದೃಷ್ಟಿಯಿಂದ ಒಪ್ಪಬಹುದು. ರಾಜನೇ ಒಂದು ಮತಕ್ಕೆ ಒಲಿದಾಗ ಮತ್ತು ವಿಶೇಷವಾಗಿ ಪ್ರೋತ್ಸಾಹಿಸಿದಾಗ, ಮತಾಂತರಪರವಾದ ಗಾಳಿಬೀಸುವುದು ಸಹಜವೇ. ವಿಷ್ಣುವರ್ಧನನು ಶ್ರೀವೈಷ್ಣವ ಮತವನ್ನು ಸ್ವೀಕರಿಸಿದ ಕಾಲದ ಬಗೆಗೆ ಇತಿಹಾಸಕಾರರಲ್ಲಿ ಅಭಿಪ್ರಾಯ ಭೇದವಿದೆ. ಕ್ರಿ.ಶ.೧೧೧೩ ರಿಂದ ಕ್ರಿ.ಶ.೧೧೧೬-೧೧೧೭ ರವರೆಗೆ ಈ ಕಾಲದ ವಿಸ್ತಾರವಿದೆ. ಆದರೆ ಸಂಕೇತಿಗಳ ವಲಸೆಯ ಕಾಲಕ್ಕೆ ಸಂಬಂಧಿಸಿದಂತೆ ಇದು ಅಮುಖ್ಯವಾದುದು; ಆದರೆ ಅವನು ಮತಾಂತರವಾದನಂತರ ಆದ ಪರಿಣಾಮಗಳ ದೃಷ್ಟಿಯಿಂದ ಮುಖ್ಯವಾದುದು. ಮತಾಂತರಗೊಂಡ ಮೇಲೆ ವಿಷ್ಣುವರ್ಧನನು ಮಾಡಿದ ಮೊದಲ ಕೆಲಸ, ತಲಕಾಡಿನ ಚೋಳರನ್ನು ಸದೆಬಡಿದುದು; ತಲಕಾಡು, ಬೇಲೂರು ಮೊದಲಾದ ಕಡೆಗಳಲ್ಲಿ ವಿಷ್ಣುದೇವಾಲಯಗಳನ್ನು ಕಟ್ಟಿಸಿ ದತ್ತಿಗಳನ್ನು ಬಿಟ್ಟುದು. ಮತಾಂತರಿಗಳಿಗೆ ದತ್ತಿಸೌಲಭ್ಯಗಳನ್ನೊದಗಿಸಿಕೊಡುತ್ತಿದ್ದ ಶ್ರೀವೈಷ್ಣವಮತಪ್ರಚಾರಕರು ಕ್ರಿಯಾಶೀಲರಾಗಿದ್ದ ಕಾಲವೂ ಅದಾಗಿತ್ತು. "..... ಅವನ (ವಿಷ್ಣುವರ್ಧನನ) ಆಳ್ವಿಕೆಯಲ್ಲಿ ವೈಷ್ಣವಮತ ನಿಧಾನವಾಗಿ ಪ್ರಸಾರವಾಗುತ್ತಲೂ ಇತ್ತು. ಅವನ ಮತ್ತು ಅವನನಂತರದ ಹೊಯ್ಸಳರಾಜನ ಕಾಲದಲ್ಲಿ ತೊಣ್ಣೂರಿನಲ್ಲಿ ರಾಮಾನುಜ ಸೇವಕನೆಂದು ವರ್ಣಿತನಾದ ತಿರುವರಂಗದಾಸನ್ ಎಂಬಾತನೊಬ್ಬನು ಸೇನಾಧಿಪತಿಗಳಿಂದಲೂ ಇತರರಿಂದಲೂ ದೇವಾಲಯಗಳಿಗೆ ಉಂಬಳಿಗಳನ್ನು ಗಳಿಸುವುದರಲ್ಲಿ ತನ್ನನ್ನು ತೀವ್ರವಾಗಿ ತೊಡಗಿಸಿಕೊಂಡಿದ್ದನು...." ಎಂಬುದು ಅಂಥ ಒಂದು ನಿದರ್ಶನ ಮಾತ್ರ.[35] ದೂರದ ಪ್ರಾಂತವೊಂದಕ್ಕೆ ಬಂದ ವಲಸಿಗರಲ್ಲಿ ಹಲವರು ಇಂಥ ಆಕರ್ಷಣೆಗೆ ಒಳಗಾದುದಕ್ಕೆ, ಹೆಮ್ಮಿಗೆಯು ಅವರಿಗೆ ದತ್ತಿಯಾಗಿ ದೊರೆತುದೂ ಒಂದು ನಿದರ್ಶನವಾಗಿದೆ. ಹೆಮ್ಮಿಗೆಯು ಕಾಲಕಾಲಕ್ಕೆ ದತ್ತಿ ಗ್ರಾಮವಾಗಿ ವಿತರಣೆಯಾಗಿರುವ ಇತಿಹಾಸವನ್ನು ನೋಡಿದರೆ ಅದು ಫಲವತ್ತಾಗಿಯೂ ಸುರಕ್ಷಿತವಾಗಿಯೂ ಇದ್ದ ನೆಮ್ಮದಿಯ ನಾಡೆಂಬುದು ವಿದಿತವಾಗುತ್ತದೆ. ಕಾವೇರೀತೀರದ ಈ ಗ್ರಾಮವಂತೂ ಅನುಷ್ಠಾನಪರರಿಗೆ ಹೇಳಿಮಾಡಿಸಿದಂತಿದೆ. ಕ್ರಿ.ಶ.೧೪೭೦ರಲ್ಲಿ ಗಿರಿ-ಮಾಧವಪುರದ ಅಲಾಲದೀಕ್ಷಿತರ ಮಗ ವರದಭಟ್ಟರಿಗೆ ಈ ಗ್ರಾಮವು ಹರಿಹರ-ರಾಜೇಂದ್ರಪುರ ಎಂಬ ಹೆಸರಿನಲ್ಲಿ ಎರಡನೆಯ ಹರಿಹರನಿಂದ ದತ್ತವಾಗಿದೆ. ಶಕ ವರ್ಷ ೧೪೪೮ರಲ್ಲಿ (ಕ್ರಿ.ಶ.೧೫೨೬) ಇನಾಂ ಆಗಿ ಹಿರಿಯಮಾಧವಪುರದ ತಿಮ್ಮಣ್ಣ ಉಪಾಧ್ಯಾಯರ ಮಗ ಲಕ್ಷ್ಮೀಕಾಂತಭಟ್ಟರಿಗೆ ಅದೇ ಗ್ರಾಮ ಬಂದಿದೆ. ಹಯವದನರಾಯರೂ ಹೆಮ್ಮಿಗೆಯವರ ಪೂರ್ವಿಕರಿಗೆ ಆ ಗ್ರಾಮವು ಇನಾಂತಿಯಾಗಿ ಬಂದುದನ್ನು ಉಲ್ಲೇಖಿಸುತ್ತಾರೆ. ಕನ್ನಡ ವಿಷಯ ವಿಶ್ವಕೋಶವು ಹೆಮ್ಮಿಗೆಯು ಮತ್ತೆ ಮತ್ತೆ ಅಗ್ರಹಾರವಾಗಿ ಕೊಡಲ್ಪಟ್ಟ ದೀರ್ಘ ಪೂರ್ವೇತಿಹಾಸವನ್ನೇ ಕೊಟ್ಟಿದೆ. ಹೆಮ್ಮಿಗೆಯು ಇಂಥ ಆಕರ್ಷಣೆಯ ನೆಲೆಯಾದುದರಿಂದ,[36] ಬಹುದೂರದಿಂದ ವಲಸೆ ಬಂದು ಕಂಗೆಟ್ಟಿದ್ದ ಸಂಕೇತಿ ಸಮುದಾಯದ ಕೆಲವರು, ಅದರ ಆಸೆಗಾಗಿ ಮತಾಂತರಗೊಂಡರು

[35] ಪೂರ್ವೋಕ್ತ : ಸಂಪುಟ-೨, ಭಾಗ-೨, ಪು.೧೩೨೩-೧೩೫೩.

ಎಂಬುದು ಸಹಜಪ್ರಕ್ರಿಯೆಯಾಗಿದೆ. ಆದ್ದರಿಂದ ಕ್ರಿ.ಶ.೧೯೯ರಿಂದ ಕ್ರಿ.ಶ.೧೧೨೩ರ ನಡುವಣ ಅವಧಿಯಲ್ಲಿ ಹೆಮ್ಮಿಗೆ ಪ್ರಸಂಗವು ಸಂಭವಿಸಿದೆ ಎನ್ನಬಹುದಾಗಿದೆ.

೦.೦.೩ ಕರ್ನಾಟಕದಲ್ಲಿ, (ಕೇವಲ) ಸಂಕೇತಿಗಳ ಪ್ರಾರಂಭಿಕನೆಲೆಗಳಲ್ಲಿ ಒಂದಾದ ಅನುಗವಳ್ಳಿಯಲ್ಲಿ ದೊರೆತ ಒಂದು ಶಾಸನವು,[37] ಹದಿನಾಲ್ಕನೆಯ ಶತಮಾನದ ಹೊತ್ತಿಗೆ ಸಂಕೇತಿಗಳು ಹಾಸನಜಿಲ್ಲೆಯ ಅನೇಕ ಹಳ್ಳಿಗಳಲ್ಲಿ ಹರಡಿ ಸಾಕಷ್ಟು ಸಂಖ್ಯೆಯಲ್ಲಿದ್ದುದನ್ನೂ ಘೋಷಿಸುತ್ತದೆ. ಕಂಬರಾಮಾಯಣದ ವಾಚಕನು ಧರ್ಮಪ್ರಚಾರದ ಉದ್ದೇಶದಿಂದಲೇ ಅನುಗವಳ್ಳಿಗೆ ಭೇಟಿನೀಡಿದ್ದನೆಂಬ ಸಂಗತಿಯೂ, ಅನೇಕ ಸಂಕೇತಿಗಳು ಶ್ರೀವೈಷ್ಣವರಾಗಿ ಮತಾಂತರ ಹೊಂದಿದ ನಿದರ್ಶನಗಳ ಹಿನ್ನೆಲೆಯಲ್ಲಿ ಗಮನಾರ್ಹ ಸಂಗತಿಯಾಗಿದೆ.

೦.೦.೪ ಈ ಸಂಬಂಧದಲ್ಲಿ ಸಂಶೋಧನೆ ನಡೆಸಿರುವ ಎಚ್.ಆರ್.ಕೃಷ್ಣಮೂರ್ತಿಯವರು, "ಸಂಕೇತಿ ಇತಿಹಾಸದ ಮೇಲೆ ಹೊಸಬೆಳಕು" ಎಂಬ ತಮ್ಮ ಲೇಖನದಲ್ಲಿ ಕೌಶಿಕಕ್ಕೆ ಸಂಕೇತಿಗಳು ವಲಸೆಬಂದಕಾಲ ಕ್ರಿ.ಶ.೧೧೨೦ ಎಂದು ಸಾಧಾರವಾಗಿ ನಿರ್ಣಯಿಸಿದ್ದಾರೆ. ದೇವನೂರಿನ ಶಿಲಾಶಾಸನಗಳ ಮತ್ತು ಕ್ಷೇತ್ರಕಾರ್ಯ ಆಧಾರದಿಂದ, ಆ ಪ್ರದೇಶದ ಸಂಕೇತಿಗಳಲ್ಲಿ ಮಾತ್ರ ಇರುವ ನಿತುಂದಿಲಗೋತ್ರದವನೇ ಆದ ಕುಮಾರದೇವನೇ ಸಿದ್ಧೇಶ್ವರ ದೇವಾಲಯವನ್ನು (ಕ್ರಿ.ಶ.೧೨೩೭) ಕಟ್ಟಿಸಿದನೆಂಬ ನಿರ್ಣಯಕ್ಕೆ ಅವರು ಬಂದಿದ್ದಾರೆ. ನಿತುಂದಿಲರು ತೋಳಪ್ಪರ್ ಸಂಪ್ರದಾಯದಂತೆ ಕೃಷ್ಣಜಯಂತಿಯನ್ನಾಚರಿಸುವರೆಂಬ ಸಂಗತಿಯ ಆಧಾರದಮೇಲೆ, ಕುಮಾರದೇವನ ಮಗನ ಹೆಸರು 'ದೋಳಜೀಯ' ಎಂಬುದಾಗಿದೆ ಎಂಬ ಅಂಶವನ್ನು ಪೂರಕವಾಗಿ ಕೊಟ್ಟಿದ್ದಾರೆ. ಸಂಕೇತಿಗಳ ಮೂಲನೆಲೆಗಳಲ್ಲಿ ಒಂದಾದ ನೇರಲಿಗೆಯಲ್ಲಿ ನೆಲೆಸಿದ್ದ ಸಂಕೇತಿಗಳಿಗೆ ಹೊಯ್ಸಳ ವೀರಬಲ್ಲಾಳನು (ಕ್ರಿ.ಶ.೧೧೭೬-೧೨೨೬) ದತ್ತಿಕೊಟ್ಟ ತಾಮ್ರಶಾಸನದ ಸಂಗತಿಯನ್ನೂ ಪ್ರಸ್ತಾಪಿಸಿದ್ದಾರೆ. ಜಗನ್ನಾಥವಿಜಯವೆಂಬ ಕನ್ನಡ ಚಂಪೂಕಾವ್ಯವನ್ನು ಬರೆದ ರುದ್ರಭಟ್ಟನೇ ಈ ಕುಮಾರದೇವನು ಎಂಬ ಅವರ ನಿರ್ಧಾರಕ್ಕೆ ಆಧಾರಗಳು ಸಾಲವಾದರೂ, ಕೌಶಿಕಕ್ಕೆ ಸಂಕೇತಿಗಳ ವಲಸೆಯಕಾಲಕ್ಕೆ ಸಂಬಂಧಿಸಿದಂತೆ ಕ್ರಿ.ಶ.೧೧೨೦ ಎಂದು ಅವರು ತಲುಪಿರುವ ನಿರ್ಣಯಕ್ಕೆ, ವಿಷ್ಣುವರ್ಧನನ ಸಾಮ್ರಾಜ್ಯದ ವಿಸ್ತಾರವನ್ನೂ ಆಧಾರಮಾಡಿಕೊಂಡಿರುವುದು ಸಮರ್ಪಕವಾಗಿದೆ.

೦.೦.೫ ವಿಷ್ಣುವರ್ಧನನ ಕಾಲದಲ್ಲಿಯೇ (ಕ್ರಿ.ಶ.೧೧೧೩-೧೧೪೧) ದೇವಸ್ಥಾನಗಳು ನಿರ್ಮಾಣವಾದ ಎಡೆಗಳಾದ ದೊಡ್ಡಗದ್ದವಳ್ಳಿ, ಬೇಲೂರು, ಗ್ರಾಮ, ಮೊಸಳೆ, ಹಳೆಬೀಡು ಮತ್ತು ಆ ಸುತ್ತಮುತ್ತಣ ಹಳ್ಳಿಗಳೆಲ್ಲವೂ, ಮೂಲ ಸಂಕೇತಿನೆಲೆಗಳಾಗಿರುವುದು ಕಾಕತಾಳೀಯವಲ್ಲ. ರಾಜಾಶ್ರಯವು ಅವುಗಳಿಗೆ ಹೊಂದಿಕೊಂಡೇ ಇದ್ದುದು ಮರೆಯಬಾರದ ಸಂಗತಿ. ಹೊಯ್ಸಳರ ರಾಜಾಶ್ರಯವು ಸಾರ್ವತ್ರಿಕ ಚಳವಳಿಯ ರೂಪದ್ದೇ ಆಗಿತ್ತೆಂಬುದರಿಂದ ಅದು ಹೆಚ್ಚಿನ ಮಹತ್ತ್ವ ಪಡೆಯುತ್ತದೆ.[38] ಈ ಪ್ರಾಥಮಿಕ ನೆಲೆಗಳ ಭೌಗೋಳಿಕವಿಸ್ತಾರ ಮತ್ತು ದೇವಾಲಯಗಳು, ವಿನಯಾದಿತ್ಯನ ಕೊನೆಯಕಾಲ ಮತ್ತು ವಿಷ್ಣುವರ್ಧನನ ಪ್ರಾಥಮಿಕಹಂತದ ಪರಿಮಿತಿಯಲ್ಲಿಯೇ ಬರುವಂಥವು (ನಕ್ಷೆ 3, ಪು.261) ಎಂಬ ಸಂಗತಿಯೂ, ಸಂಕೇತಿಗಳ ಮೂರನೆಯ ತಂಡದ ವಲಸೆಯು ವಿಷ್ಣುವರ್ಧನನಿಗೆ ಹೊಂದಿಕೊಂಡಂತೆ ನಡೆದಿರುವುದನ್ನೇ ಸಮರ್ಥಿಸುತ್ತದೆ. ಆದುದರಿಂದ, ಸಂಕೇತಿಗಳು ಕೌಶಿಕ ಕೇಂದ್ರಕ್ಕೆ ವಲಸೆಬಂದ ಕಾಲವನ್ನು ಕ್ರಿ.ಶ.೧೧೨೦ ಎಂದು ನಿಖರವಾಗಿ ಹೇಳಬಹುದು.

---

36 ಅ) ಇ ಸಿ ೨೫೬ (೧೧೧ ತಿನ ೧೩೪), ತಾಮ್ರಶಾಸನ

ಆ) ಶ್ರೀ ನಾಚಾರಮ್ಮನ ಜೀವನಚರಿತ್ರೆ (ಆಕೆಯ ಪ್ರವಾಸ), ಪು.೨೭.

ಇ) ಇ ಸಿ ೨೪೮ (೧೧೧ ತಿನ ೪೯)

ಈ) *Mysore Gazetteer,* Vol.6, p.225.

ಉ) *ಕರ್ನಾಟಕ : ಕನ್ನಡ ವಿಷಯ ವಿಶ್ವಕೋಶ,* ೧೯೭೯, ಪು.೧೬೧೨.

37 ನೋಡಿ: *Mysore Gazetteer,* Vol.2, Part 3, Hayavadana Rao (C), 1927, p.1501.

38 *The Hoysalas - A Medieval Indian royal family,* Derrett (J. Duncan, M.) , Oxford University Press, 1957, p.33, 34.

0.3 ನಿರಂತರ ತರಂಗಿತ ವಲಸೆಗಳು : ಇದುವರೆಗಿನ ಪ್ರಸ್ತಾಪಿತ ಆಧಾರಗಳಿಂದ ಕರ್ನಾಟಕಕ್ಕೆ ಆದ ಸಂಕೇತಿಗಳ ವಲಸೆಗಳು ಕ್ರಿ.ಶ.೧೦೮೭ ಮತ್ತು ಕ್ರಿ.ಶ.೧೧೨೩ರ ನಡುವೆ ಆದುದು ಎಂಬ ಅಂಶ ಸ್ಪಷ್ಟವಾಗುತ್ತದೆ. ಈ ಅವಧಿಯು, ಚಾಲುಕ್ಯರು ಎಷ್ಟು ಇಳಿಮುಖರಾಗಿದ್ದರೋ ತದ್ವಿರುದ್ಧವಾಗಿ ಅದಕ್ಕಿಂತಲೂ ಹೆಚ್ಚಾಗಿ ಹೊಯ್ಸಳರು ಬಲಿಷ್ಠರಾದ ಕಾಲ. ಬಳ್ಳಾರಿಜಿಲ್ಲೆಯ ಹರಪನಹಳ್ಳಿ ತಾಲ್ಲೂಕಿಗೆ ಹೋಲಿಸಿದರೆ, ಹಾಸನವು ಹೆಚ್ಚು ಫಲವತ್ತಾದ ಭಾಗವೂ ಆಗಿತ್ತು. ಆದರೆ, ತಮ್ಮ ಪಾಂಡ್ಯವ್ಯವಸ್ಥಿತ ಗುರಿಯೊಂದನ್ನು ಬಿಟ್ಟು ಅನಿರೀಕ್ಷಿತವಾಗಿ ಲಭ್ಯವಾದ ಹೊಸನೆಲೆಯೊಂದಕ್ಕೆ ಈ ತಂಡವು ತೆರಳಿದುದಕ್ಕೆ, ಮನ್ನಯಬೊಪ್ಪಯನು ಗಂಡರಾದಿತ್ಯನ ಹೊಳಲುವಿನಲ್ಲಿ ಮಾಡಿದ ಭಯಂಕರ ಬ್ರಹ್ಮಹತ್ಯೆಗಳು ಮತ್ತು ಆಸ್ತಿನಾಶದ ಭೀತಿಯೆ ಕಾರಣವಾಗಿದೆ[39] ಎಂದು ಯೋಚಿಸಲು ಇಲ್ಲಿ ಅವಕಾಶವಿದೆ. ಅದು ನಿಜವಾದರೆ, ನೀಲಗುಂದಕ್ಕೆ ಆದ ಕೊನೆಯ ವಲಸೆಯು ಈ ಘಟನೆಗೆ ಮುನ್ನ, ಅಂದರೆ ಕ್ರಿ.ಶ.೧೧೦೨ಕ್ಕೆ ಮೊದಲು ನಡೆದಿರಬೇಕಾಗುತ್ತದೆ. ಆದರೆ, ವಿಕ್ರಮಾದಿತ್ಯನು ಎರಡನೆಯಬಾರಿ ದತ್ತಿಕೊಟ್ಟುದು ಕ್ರಿ.ಶ.೧೧೨೩ ಎಂಬುದರಿಂದಾಗಿ, ಕ್ರಿ.ಶ.೧೦೮೭ ಮತ್ತು ಕ್ರಿ.ಶ.೧೧೨೩ರ ನಡುವಿನ ಅವಧಿಯಲ್ಲಿ ನಿರಂತರವಾದ ತರಂಗಿತ ವಲಸೆಗಳು ನೀಲಗುಂದ ಮತ್ತು ಕೌಶಿಕದ ಪ್ರಧಾನ ನೆಲೆಗಳಿಗೆ ಆದವು ಎಂಬುದೇ, ವಲಸೆಗಳ ಪ್ರವೃತ್ತಿಗೆ[40] ಅನುಗುಣವಾದ ವಿವರಣೆಯಾಗುತ್ತದೆ.

2. ಕೇರಳ-ತಮಿಳುನಾಡುಗಳಲ್ಲಿ ಆದ ಸಮಕಾಲೀನ ವಲಸೆ : ದಳವಾಯಿರಾಮೈಯ್ಯನ ಪ್ರಸಂಗದಿಂದ ಖಚಿತವಾಗಿ ತಿಳಿದುಬರುವ ಸಂಗತಿ ಎಂದರೆ, ತಿರುವಾಂಕೂರು ಸಂಸ್ಥಾನದಲ್ಲಿ ಸಂಕೇತಿಗಳು ಆಸ್ಥಾನ ವಿದ್ವಾಂಸರಾಗಿ ಆಶ್ರಯ ಹೊಂದುವ ಪರಂಪರೆ, ಅದಕ್ಕೂ ಹಿಂದಿನಿಂದಲೂ (ಕ್ರಿ.ಶ.೧೭೫೬) ಇತ್ತು ಎಂಬುದು. ತಿರುವಾಂಕೂರು ಪ್ರಭುಗಳಿಂದ (ದಳವಾಯಿರಾಮೈಯ್ಯನ ಅನಂತರ) ದೊರೆತ ದತ್ತಿಗಳಿಗೂ, ವೃತ್ತಿಗಳಿಗೂ, ನಿದರ್ಶನಗಳಿವೆ. ಆಶ್ರಾಮಂ, ಕರಿಮಾಣಿಕ್ಯಪುರಂ, ಮಹಾದಾನಪುರಂ ಮೊದಲಾದುವು ಹಾಗೆ ದೊರೆತಂಥವು. ಆದರೆ, ಹೀಗೆ ವಲಸೆಹೋದ ಸಂಕೇತಿಗಳ ಸಂಖ್ಯೆ ದೊಡ್ಡದಲ್ಲ. ಇವುಗಳ ಜೊತೆಗೆ ಸಾರ್ವತ್ರಿಕ ಸ್ವರೂಪದ ವಲಸೆಗಳೂ ಹಿಂದಿನಿಂದ ನಡೆದೇ ಇವೆ. "... ಮುನ್ನಿನ ಕಾಲದಲ್ಲಿ ಕೊಚಿನ್ ರಾಜ್ಯಕ್ಕೆ ವಲಸೆಬಂದು ನೆಲೆನಿಂತ ಎರಡನೆ ವಿಭಾಗದ ದ್ರಾವಿಡ ಬ್ರಾಹ್ಮಣರಲ್ಲಿ ತಮಿಳುಬ್ರಾಹ್ಮಣರು ಸೇರಿದ್ದಾರೆ... ಮುಖ್ಯವಾಗಿ ಚೋಳ ಮತ್ತು ಪಾಂಡ್ಯ ರಾಜ್ಯಗಳಿಂದ ಕೊಚಿನ್ ರಾಜ್ಯಕ್ಕೆ ಆದ ಅವರ ಮೊದಲ ವಲಸೆಯು ಪ್ರಾಚೀನ ಮೌಖಿಕ ಪರಂಪರೆಯೊಂದರಂತೆ, ದಕ್ಷಿಣ ಮಲಬಾರಿನ ಪನ್ನಿಯೂರ್ ದೇವಾಲಯಗಳ ವಿನಾಶ ಮತ್ತು ಅದನ್ನನುಸರಿಸಿ ಬಂದ ಶತಮಾನಗಳ ಕಾಲಾವಧಿಯಷ್ಟು ಹಿಂದಕ್ಕೆ ಹೋಗುತ್ತದೆ..."[41]

ಅಲ್ಲಿ ಈಗ ಸಾಕಷ್ಟು ದೊಡ್ಡ ಸಂಖ್ಯೆಯಲ್ಲಿರುವ ಸಂಕೇತಿಗಳಲ್ಲಿ, ಬಹುಪಾಲು ಕುಟುಂಬಗಳು ನೌಕರಿಗಾಗಿ ವಲಸೆ ಹೋದುದು, ಕಳೆದ ಒಂದು ಶತಮಾನದೊಳಗಿನ ಇತಿಹಾಸ. ಅದು ಆದುದು ಸಿ.ಪಿ.ರಾಮಸ್ವಾಮಿ ಅಯ್ಯರ್ ಎಂಬ ಮಂತ್ರಿ ಹಾಗೂ ಅದೇ ಹೆಸರಿನ ಶಿಕ್ಷಣಾಧಿಕಾರಿಗಳ ಕಾಲದಲ್ಲಿ.

ಶೆಂಕೋಟ್ಟೈ ಪ್ರಾಂತದಲ್ಲಿ ಪೌರೋಹಿತ್ಯ, ವೈದಿಕಸೇವೆ, ಮತ್ತು ವ್ಯವಸಾಯದ ಆಕರಗಳ ಕೊರತೆ ಬಿದ್ದಂತೆ, ತಿರುವನಂತಪುರಂ, ಕನ್ಯಾಕುಮಾರಿ, ಶುಚೀಂದ್ರಂ, ಎರಚ್ಚಕೊಳಂ, ತಿರುನೆಲ್‌ವೇಲಿ ಮೊದಲಾದ ಭಾಗಗಳಿಗೆ ನಿರಂತರವಾಗಿ ಕಾಲಕಾಲಕ್ಕೆ ವಲಸೆಗಳು ನಡೆದಿವೆ.

---

39 *MAR*.1919, Appendix 13, 1918 No.214.

40 ವಲಸೆ ಅಲೆಅಲೆಯಾಗಿ ಸಾಗುವಂಥದು. ಯಾರಿಗೂ ನಿರ್ದಿಷ್ಟ ಗುರಿಯಾಗಲಿ, ಸ್ಥಳಜ್ಞಾನವಾಗಲಿ ಇರುವುದಿಲ್ಲ. ಅಲ್ಲದೆ, ಒಬ್ಬನ ಮಾತಲ್ಲ, ಒಂದು ದಿನಕ್ಕಾಗಿ ಹೋಗಿಬರುವ ವಿಷಯವಲ್ಲ. ಮುಂದಿನ ಜಾಗ ಇಲ್ಲಿಗಿಂತ ಉತ್ತಮ ಎಂದು ಖಾತರಿ ಆದ ಹೊರತು ಗುಂಪು ಚಲಿಸುವುದಿಲ್ಲ. ಕೆಲವರು ಶೀಘ್ರಗಾಮಿಗಳಾಗಿರುತ್ತಾರೆ. ಸಹಜವಾಗಿಯೇ ಹೆದರಿಕೆ, ನಿಧಾನ ಕೆಲವರ ಸ್ವಭಾವ. ಮುಂದಿನ ಸುದ್ದಿ ತರಬಲ್ಲ ಸಾಹಸಿಗರ ಸ್ಥಳಾಂತರದ ಅನಂತರ ಇವರು ಚಲಿಸುತ್ತಾರೆ. ಕಷ್ಟನಷ್ಟ, ರೋಗ, ಮರಣ ಮೊದಲಾದ ನಾನಾ ಕಾರಣಗಳಿಂದ ಕೆಲವರು ಕೆಲವು ತಲೆಮಾರುಗಳೇ ಒಂದೆಡೆ ನಿಲ್ಲಬಹುದು .... (ಸುಂದರಕೃಷ್ಣನ್: ದಿ ೮.೮.೮೮ರ ಸಂದರ್ಶನದಿಂದ)

41 *The Cochin tribes and castes*, 2 Vols, Ananthakrishna Iyer L.K., Government Press, Madras, 1909-1912, p.288.

ತಮಿಳುನಾಡು ಮತ್ತು ಕೇರಳದ ವಿವಿಧ ಭಾಗಗಳಿಗೆ ಹರಡಿಕೊಂಡವರು, ಕರ್ನಾಟಕದ ಮಹಾವಲಸೆಗೆ ಹೊಂದಿಕೊಂಡಂತೆಯೇ ವಲಸೆಹೋದವರು ಎಂಬುದಕ್ಕೆ ಆಧಾರವಿಲ್ಲ. ಬದಲಿಗೆ, ಅಂಥ ವಲಸೆಯು ನಾಚಾರಮ್ಮನ ಆದೇಶಕ್ಕೆ ಅನುಗುಣವಾದುದಲ್ಲ (ಆಕೆಯ ಆದೇಶವಿದ್ದುದು ಉತ್ತರಾಭಿಮುಖವಾಗಿ ತನ್ನೊಡನೆ ಹೊರಡುವುದಕ್ಕೆ). ನಾಚಾರಮ್ಮನ ಆದೇಶಕ್ಕೆ ಅನುಗುಣವಾಗಿ 'ಗಂಡೀಸೀರೆ' ಉಡುವ ಪದ್ಧತಿ ಅಲ್ಲಿಲ್ಲ; ಶಾಪಪರಿಹಾರಕ್ಕಾಗಿ 'ಪೂವಾಡಿಪಾನೆ' ಆಚರಣೆಯಲ್ಲಿರುವುದು ಅಲ್ಲಿಯೇ. ಆದುದರಿಂದ, ಅಲ್ಲಿ ನಡೆದ ವಲಸೆಗಳ ಕಾರಣವು ಬೇರೆಯಾದಂತೆ, ಕಾಲವೂ ಭಿನ್ನವಾಗಿದೆ. ಅದು ನಿರ್ದಿಷ್ಟಕಾಲದಲ್ಲಿ ಸಾಮೂಹಿಕವಾಗಿ ನಡೆದ ವಲಸೆಯಾಗಿರದೆ, ಶತಮಾನಗಳ ಕಾಲ ನಿರಂತರವಾಗಿ ನಡೆದ ಪ್ರಕ್ರಿಯೆಯಾಗಿದೆ.

ಆ. ಸಂಕೇತಿಗಳ ಐತಿಹಾಸಿಕ ವಲಸೆಯ ಹಿನ್ನೆಲೆ :

ಕರ್ನಾಟಕಕ್ಕೆ ಆದ ಸಂಕೇತಿಗಳ ಮಹಾವಲಸೆಗೆ ನಾಚಾರಮ್ಮನ ಶಾಪಪ್ರಸಂಗವನ್ನು ಕಾರಣವಾಗಿ ಹೇಳುವುದು ಸಾರ್ವತ್ರಿಕವಾದ ಮೌಖಿಕ ಪರಂಪರೆಯಾದರೂ, ಇತರ ಕಾರಣಗಳೂ ಅದರೊಂದಿಗೆ ಜೋಡಿಸಲ್ಪಟ್ಟಿರುವುದನ್ನು ಕಾಣಬಹುದು. ಆ ಕುರಿತ ಲೇಖಕರಲ್ಲಿಯೂ ಈ ಪ್ರವೃತ್ತಿ ಬೆಳೆದಿದೆ. ಈ ಮಹಾವಲಸೆಯ ಕಾಲವನ್ನು ಶಾಸನಗಳು ಖಚಿತಪಡಿಸುತ್ತಿರುವುದರಿಂದಾಗಿ, ವಲಸೆಯ ಅನೇಕ ಕಾರಣಗಳು ತಮ್ಮಷ್ಟಕ್ಕೇ ಅಸಂಗತವಾಗುತ್ತವೆ. ಆದರೂ, ಖಚಿತತೆಗಾಗಿ, ಪ್ರಚಲಿತವಿರುವ ಎಲ್ಲ ಕಾರಣಗಳನ್ನೂ ಇಲ್ಲಿ ಸಂಕ್ಷಿಪ್ತವಾಗಿ ಅವಲೋಕಿಸಿದೆ:

1. ಕ್ಷಾಮಸನ್ನಿವೇಶಗಳು : ಭೀಕರ ಕ್ಷಾಮಗಳ ದೆಸೆಯಿಂದ ಆದ ವಲಸೆಗಳು ಭಾರತದ ಇತಿಹಾಸದಲ್ಲಿ ಅಪರೂಪವಲ್ಲ. (ಈಗಿನ ಮಧುರೈ, ರಾಮ್ನಾಡ್, ತಿರುನೆಲ್‌ವೇಲಿಜಿಲ್ಲೆಗಳನ್ನೊಳಗೊಂಡ) 'ಮಧುರೈ ಪ್ರಾಂತ'ದ ಕ್ಷಾಮದ ಭೀಕರತೆಯೂ ಪ್ರಸಿದ್ಧವಾದುದು. 'ವೈಗೈ,' ಒಣನದಿಯೆಂದೇ ಹೆಸರಾದುದು. ದೇಶವನ್ನೇ ನಡುಗಿಸಿದ ಭೀಕರ ಕ್ಷಾಮಗಳ ನಿದರ್ಶನಗಳೂ ಇವೆ. ಇದು, ಈ ವಾದದ ಸಮರ್ಥನೆ. ಇದಕ್ಕೆ ಐತಿಹಾಸಿಕ ಆಧಾರಗಳೂ ಇವೆ. ಎಲ್ಲಕ್ಕಿಂತ ಮುಖ್ಯವಾಗಿ ದಖನ್ ಪ್ರಸ್ಥಭೂಮಿಯ ಬಹುಭಾಗವನ್ನು ಕಾಡಿದ ಕ್ರಿ.ಶ.೧೩೭೭-೧೪೦೪ರ ಅವಧಿಯ ಕ್ಷಾಮವು ಇತಿಹಾಸದಲ್ಲಿ ವಿಶೇಷವಾಗಿ ಉಲ್ಲೇಖಗೊಂಡಿದೆ. ಆದರೆ ಸಂಕೇತಿಗಳು ನೆಲೆಸಿದ್ದ ಶೆಂಕೋಟ್ಟೈ ಭಾಗವು ಕ್ಷಾಮಗಳಿಗೆ ಹೆಸರಾಗದುದಕ್ಕೆ ವಿಶೇಷ ಕಾರಣಗಳಿವೆ.

0.1 ತಿರುನೆಲ್‌ವೇಲಿ ಜಿಲ್ಲೆಯ ಶೆಂಕೋಟ್ಟೈ, ಪಶ್ಚಿಮಘಟ್ಟಗಳ ಪೂರ್ವಸೆರಗಿನ ಒಂದು ಭಾಗ. ಸಂಕೇತಿಗಳ ಮೂಲನೆಲೆಗಳೆಲ್ಲವೂ ಇದ್ದುದು ತುಂಬಿ ಹರಿಯುವ ತಾಮ್ರಪರ್ಣಿ ಮೊದಲಾದ ನದಿಗಳ ದಂಡೆಯಲ್ಲಿ; 'ವೈಗೈ' ದಂಡೆಯಲ್ಲಲ್ಲ. ಉದಾಹರಣೆಗೆ ತಿರುನೆಲ್‌ವೇಲಿ, ಕಾರಡೈಕುರುಚಿ, ಅಂಬಾಸಮುದ್ರಂಗಳು ತಾಮ್ರಪರ್ಣಿ ನದಿಯ ತಟದಲ್ಲಿ; ಶೆಂಕೋಟ್ಟೈ ಹರಿಹರ ನದಿಯ ತಟದಲ್ಲಿ; ತೆಂಕಾಸಿ ಚಿತ್ರಾನದಿಯ ತಟದಲ್ಲಿ; ಅಯ್‌ಕುಡಿ, ಶಾಂಬವರ್‌ವಡಹರೈ ಹನುಮಾನ್ ನದಿಯ ತಟದಲ್ಲಿ; ಆಳ್ವಾರ್‌ಕುರುಚಿ (ಶಾಪತ್ತೂರ್) ಗಡನಾನದಿ ಹಾಗೂ ರಾಮನದಿಗಳ ತಟದಲ್ಲಿವೆ.

0.2 ಅರಣ್ಯನಾಶದಿಂದಾಗಿ ಮಳೆಯು ಕಡಿಮೆಯಾಗಿರುವ ಇಂದಿನ ದಿನಗಳಲ್ಲಿಯೂ ಕ್ಷಾಮದ ಸೋಂಕು ಈ ಭಾಗವನ್ನು ಎಂದೂ ಕಾಡಿಲ್ಲ. ಆದಕಾರಣ ಇಲ್ಲಿಂದ ನಡೆದ ವಲಸೆಗಳಿಗೆ ಕ್ಷಾಮವು ಕಾರಣವಲ್ಲ.
ಕ್ಷಾಮದ ಕಾರಣವನ್ನು ಹೇಳುವವರು ಎದುರಿಸಬೇಕಾದ ಇತರ ಆಕ್ಷೇಪಗಳೂ ಇವೆ:

0.3 ಸೀಮಿತಪ್ರಮಾಣದ ಕ್ಷಾಮಗಳು ಬಂದಾಗ, ಜನರು ದೂರದ ನೀಲಗುಂದದವರೆಗೆ ವಲಸೆಹೋಗಬೇಕಾದ ಪ್ರಮೇಯವಿರಲಿಲ್ಲ. ಏಕೆಂದರೆ ಸನಿಹದ ಫಲವತ್ತಾದ ಪರಿಚಿತ ನೆಲೆಗಳಲ್ಲಿಯೇ ಅವರು ಕ್ಷಾಮದ ವಿರುದ್ಧ ಆಶ್ರಯಪಡೆಯಬಹುದಿತ್ತು.

0.4 ದೇಶವ್ಯಾಪೀ ಕ್ಷಾಮಗಳ ಸಂದರ್ಭದಲ್ಲಿ, ಒಂದು ಕ್ಷಾಮಪೀಡಿತ ಪ್ರದೇಶದಿಂದ ಮತ್ತೊಂದು ಕ್ಷಾಮಪೀಡಿತ ಪ್ರದೇಶಕ್ಕೆ ವಲಸೆಹೋಗುವುದನ್ನು ನಿರೀಕ್ಷಿಸಲಾಗದು.

0.5 ಕೆಲವಕ್ಕಗಳು ಸುಮಾರು ಮುನ್ನೂರು ವರ್ಷಗಳ ಹಿಂದೆ ರಾಮ್ನಾಡ್‌ನಿಂದ ಕರ್ನಾಟಕಕ್ಕೆ ಆದುದೆಂದು ಹೇಳುವ ವಲಸೆಯು, ಸಂಕೇತಿಗಳು ಇಲ್ಲಿ ಬಂದ ಹಲವು ಶತಮಾನಗಳನಂತರ ಆಗಿರಬಹುದಾದುದು. ಮೇಲಾಗಿ ರಾಮ್ನಾಡ್ ಸಂಕೇತಿಗಳ

ಮೂಲನೆಲೆಯಲ್ಲ.

0.6 ಕ್ಷಾಮದ ಕಾರಣವೊಂದಿದ್ದುದಾದರೆ, ಅದು ಸಂಕೇತಿಗಳಿಗೆ ಮಾತ್ರ ಅನ್ವಯಿಸುತ್ತದೆನ್ನುವುದು ಅತಾರ್ಕಿಕವಾಗುತ್ತದೆ. ಆ ಭಾಗದಲ್ಲಿ ಅಂಥ ಸಮಾನಾಂತರ ನಿದರ್ಶನಗಳಿಲ್ಲ.

2. ಯಾಗ, ವೇದಭಾಷ್ಯ : ವಿಜಯನಗರದ ಬುಕ್ಕನ ಕಾಲದಲ್ಲಿ ಸಾಯಣರ ನೇತೃತ್ವದಲ್ಲಿ ನಡೆದ ವೇದಭಾಷ್ಯರಚನಾಕಾರ್ಯಕ್ಕಾಗಿಯೂ ನಿಪುಣವಿದ್ವಾಂಸರಿಗಾಗಿ ಶೋಧ ನಡೆದುದಕ್ಕೆ ಆಧಾರವಿದೆ. ತಮಿಳುನಾಡಿನಲ್ಲಿಯೂ ವ್ಯಾಪಕವಾಗಿ ಪ್ರಚಲಿತವಾಗಿರುವ ಮೌಖಿಕಪರಂಪರೆಯು ವಿದ್ಯಾರಣ್ಯರನ್ನು ಸಂಕೇತಿಪರಂಪರೆಯವರೆಂದು ಹೇಳುತ್ತದೆ. ಮತ್ತೊಂದು ಅಭಿಪ್ರಾಯವು, ಯಾಗಮಾಡುವುದಕ್ಕಾಗಿ ಮೈಸೂರು ಅರಸರೇ ಸಂಕೇತಿಪಂಡಿತರನ್ನು ಆಹ್ವಾನಿಸಿದರೆನ್ನುತ್ತದೆ. ಸಾಕಷ್ಟು ಪ್ರಚಾರದಲ್ಲಿರುವ ಈ ಸಂಗತಿಯನ್ನು ಕುರಿತು ಕೆ.ಎಸ್.ಕೇಶವಮೂರ್ತಿ (೬೮, ನಿವೃತ್ತ ಬಿ.ಡಿ.ಓ., ಮೈಸೂರು) ಅವರು ಆರ್ಕಿಯಲಾಜಿಕಲ್ ಸರ್ವೆ ಆಫ್ ಇಂಡಿಯದ ಸೌತ್‌ಜೋನ್‌ನ ಚೀಫ್ ಎಪಿಗ್ರಾಫಿಸ್ಟ್ ಎಂ.ಎಸ್.ಕೃಷ್ಣನ್ ಅವರೊಂದಿಗೆ ನಡೆಸಿದ ಸಂದರ್ಶನವು ಅವರ ದಿನಚರಿಯಲ್ಲಿ ಇಂಗ್ಲಿಷ್ ಭಾಷೆಯಲ್ಲಿ ದಾಖಲಾಗಿದೆ. "ಸಾಮಾನ್ಯವಾಗಿ ದೇಶಾದ್ಯಂತ ಬ್ರಾಹ್ಮಣರ ಸಂಚಲನೆಯು, ಆಳುವವರಿಂದ ಪುರೋಹಿತರು ಇಲ್ಲವೆ ಪಂಡಿತರಿಗೆ ದೊರೆಯುತ್ತಿದ್ದ ಆಹ್ವಾನಗಳನ್ನನುಸರಿಸಿ ಆಗುತ್ತಿತ್ತು. ಸಂಕೇತಿಗಳು ಇಂಥ ಸಂಚಲನೆಯ ಭಾಗವಾಗಿಯೇ, ಅಲ್ಲಿನ ಅರಸರ ಆಹ್ವಾನದ ಮೇಲೆ ಬಂದಿರಬಹುದು. ಇಂಥ ಸಂಚಲನೆಯು ಯಾವಾಗಲೂ ಪುಟ್ಟಸಂಖ್ಯೆಯಲ್ಲಿರುತ್ತಿತ್ತು." ಇದು ಕೇಶವಮೂರ್ತಿ ಅವರ ಟಿಪ್ಪಣಿಯ ಮುಖ್ಯಭಾಗ. ಮತ್ತೂರು ಸಂಸ್ಕೃತ ಗ್ರಾಮವೆಂದು ಘೋಷಣೆಗೊಂಡಮೇಲೆ ವಾರ್ತಾಪತ್ರಿಕೆಗಳು ಈ ವಿಷಯದಲ್ಲಿ ಆಸಕ್ತಿತೋರಿ ಮತ್ತೂರಿನ ಕೆಲವು ವಕ್ತೃಗಳ ಹೇಳಿಕೆಗಳ ಆಧಾರದ ಮೇಲೆ ಮೈಸೂರು ಅರಸರ ಆಹ್ವಾನದ ಮೇಲೆ ಯಜ್ಞಯಾಗಗಳ ಸಲುವಾಗಿಯೇ ಸಂಕೇತಿಗಳು ಕನ್ನಡನಾಡಿಗೆ ವಲಸೆ ಬಂದರೆಂದು ಬರೆದುವು. ಇದನ್ನು ಸಮರ್ಥಿಸುವ ಆಧಾರಗಳು ಲಭ್ಯವಾಗಿಲ್ಲ. ವೇದಭಾಷ್ಯಗಳನ್ನು ಬರೆಯಲಾಗಲೀ, ಯಾಗಮಾಡಲಾಗಲೀ ಅಗತ್ಯವೆನಿಸುವ ವೈದಿಕರ ಸಂಖ್ಯೆ ಮತ್ತು ವಾಸ್ತವವಾಗಿ ಆಗಿರುವ ವಲಸೆಯ ಪ್ರಮಾಣದ ನಡುವೆ ಅಗಾಧವಾದ ಅಂತರವಿರುವುದು ಕಾಣಿಸುತ್ತದೆ. ಅಲ್ಲದೆ, ಮೇಲಿನ ಕಾರಣಕ್ಕಾಗಿ ಬಂದ ಪಂಡಿತರು ವ್ಯವಸಾಯಕೇಂದ್ರಿತ ಬದುಕಿಗಾಗಿ ಹೋರಾಟ ಮಾಡಬೇಕಾದ ಅಗತ್ಯಬೀಳುತ್ತಿರಲಿಲ್ಲ. ಆದುದರಿಂದ ಅಂಥ ಸಂಗತಿಗಳನ್ನು ಈ ಮಹಾವಲಸೆಗೆ ಸಂಬಂಧಿಸುವುದು ಸೂಕ್ತವಲ್ಲ.

3. ರಾಜಕೀಯ ಕಾರಣ : ಸಂಕೇತಿಗಳ ಐತಿಹಾಸಿಕ ವಲಸೆಗೆ ಕೊಟ್ಟಿರುವ ಕಾರಣಗಳಲ್ಲಿ ರಾಜಕೀಯ ಕಾರಣವೂ ಪ್ರಮುಖವಾದುದಾಗಿದೆ. ಆ ವಾದಗಳನ್ನು ಇಲ್ಲಿ ನೋಡಬಹುದು:

0.1 ಪಂಟಾಲಂವಾದ : ಇ.ಜಿ.ಹ್ಯಾಚ್‌ನ 'ಇಮೇಜಸ್ ಆಫ್ ಮ್ಯಾನ್' ಎಂಬ ಪುಸ್ತಕದಲ್ಲಿ ಬಂದ ಶೆಂಕೋಟ್ಟೈ ಮೂಲದ 'ಪಂಟಾಲಂ' ಅರಸರ ವಿವರಗಳನ್ನಾಧರಿಸಿ, ಕೆ.ಎಸ್.ಕೇಶವಮೂರ್ತಿಯವರು, ಶೆಂಕೋಟ್ಟೈನಿಂದ ಪಾಂಡ್ಯ ಅರಸನೊಡನೆ ಬಂದಿರಬಹುದಾದ ಸಂಕೇತಿಗಳು ಪಂಟಾಲಂನ ಸಂಕೇತಂಗಳಲ್ಲಿ ನೆಲೆಸಿದ್ದಿರಬಹುದೆಂದೂ, ಅದು ಹಾಳಾದಾಗ ಉತ್ತರಾಭಿಮುಖವಾಗಿ ಚಲಿಸಿ ಕರ್ನಾಟಕಕ್ಕೆ ಬಂದಿರಬಹುದೆಂದೂ ಊಹೆ ಮಾಡಿದ್ದಾರೆ. ಅವರು (ಇಂಗ್ಲಿಷ್‌ನಲ್ಲಿ) ಮಾಡಿಕೊಂಡಿರುವ ಟಿಪ್ಪಣಿ ಇದು, "ಪಾಂಡ್ಯ ಅರಸನ ಮಾಂಡಲಿಕನಾದ ಪಂಟಾಲಂ ರಾಜನು ಕ್ರಿ.ಶ.೯೬೪ರಲ್ಲಿ ತಿರುವನಂತಪುರಕ್ಕೆ ವಲಸೆಗೊಂಡನು. ಎರಡು ಶತಮಾನಗಳನಂತರ, ಈ ವಂಶಕ್ಕೆ ಸುಮಾರು ಒಂಬೈನೂರು ಚದರ ಮೈಲಿಗಳಷ್ಟು ಜಮೀನು ಬಳುವಳಿಯಾಗಿ ಸಿಕ್ಕಿತು; ಮತ್ತು ಈ ವಂಶವೇ ಪಂಟಾಲಂ ಭಾಗವನ್ನು ಆಳಿತು. ಪಂಟಾಲಂ ರಾಜನಿಂದ ಸಲ್ಲಬೇಕಾಗಿದ್ದ ಸಾಲಗಳಿಗೆ ಬದಲಾಗಿ, ತಿರುವಾಂಕೂರು ರಾಜನಾದ ಮಾರ್ತಾಂಡವರ್ಮನೇ ಆ ಮಂಡಲವನ್ನು ತನ್ನ ನಿಯಂತ್ರಣಕ್ಕೆ ತೆಗೆದುಕೊಂಡು, ಅವನಿಗೆ ಪಿಂಚಣಿ ಕೊಟ್ಟನು.... ಈಗ ಅಕ್ಷರಶಃ ಭೂಮಿ ಮತ್ತು ಆಸ್ತಿಯಿಂದ ವಂಚಿತವಾಗಿರುವ ಒಂದು ಕಾಲದ ಪಂಟಾಲಂ ರಾಜಮನೆತನವು, ತನ್ನ ವಂಶವು ಪಾಂಡ್ಯವಂಶೋದ್ಭವವಾದುದೆಂದೂ, ಮುಖ್ಯವಾಗಿ ಶೆಂಕೋಟ್ಟೈ ಭಾಗದಲ್ಲಿದ್ದ ತಾತ್ಕಾಲಿಕವಾದ ಪುಟ್ಟ ರಾಜ್ಯದಿಂದ ವಲಸೆ ಬಂದುದೆಂದೂ ಹೇಳಿಕೊಳ್ಳುತ್ತದೆ..."

೦.೦.೧ ಪಾಂಡ್ಯಅರಸನೊಡನೆ ಯಾವುದೇ ಬ್ರಾಹ್ಮಣರು ಪಂಟಾಲಂಗೆ ಬಂದು ನೆಲೆಸಿದುದಕ್ಕೆ ಆಧಾರಗಳಿಲ್ಲ.

೦.೦.೨ ಪಂಟಾಲಂನಿಂದ ವಲಸೆಹೊರಟವರು ತಮ್ಮ ಮೂಲಪ್ರಾಂತಕ್ಕೆ ಹಿಂದಿರುಗುವುದು ಸಹಜವಾದುದು. ಅದನ್ನು ಬಿಟ್ಟು ಕರ್ನಾಟಕಕ್ಕೆ ಬರಲು ಇದ್ದ ಕಾರಣವು ಇಲ್ಲಿ ಸಮರ್ಥನೆಗೊಂಡಿಲ್ಲ.

೦.೦.೩ ಹನ್ನೆರಡನೆಯ ಶತಮಾನದಲ್ಲಿ ಆದ ಪಂಟಾಲಂ ರಾಜ್ಯವು ಅನೇಕ ಕಾಲದನಂತರವೇ ತಿರುವಾಂಕೂರು ಸಂಸ್ಥಾನಕ್ಕೆ ಒಳಪಡುತ್ತದೆ. ಆ ಕಾಲಕ್ಕೂ ಮೊದಲೇ ಸಂಕೇತಿಗಳು ಕರ್ನಾಟಕಕ್ಕೆ ಬಂದುದಾಗಿತ್ತು.

೦.೦.೪ ಸಂಕೇತಿಗಳ ಆಶ್ರಯದಾತರಾದ ತಿರುವಾಂಕೂರು ಅರಸರ ಅಧೀನಕ್ಕೇ ಪಂಟಾಲಂ ರಾಜ್ಯವು ಒಳಪಟ್ಟರೆ, ಅದು ಅನುಕೂಲಕರವಾದುದೇ. ಆದುದರಿಂದ ಈ ವಾದವು ಸಮರ್ಥನೀಯವಲ್ಲ.

0.2 ಮುಸ್ಲಿಂ ಆಕ್ರಮಣ : ತಮಿಳುನಾಡಿನ ಮಧುರೆಯ ಮೇಲಿನ ಮುಸ್ಲಿಮರ ವಿನಾಶಕಾರೀ ಆಕ್ರಮಣಗಳು, ಅದೇ ವೇಳೆಯಲ್ಲಿ ಹಿಂದೂ ಪುನರುತ್ಥಾನದ ಕಾರ್ಯಕೈಗೆತ್ತಿಕೊಂಡಿದ್ದ ವಿಜಯನಗರದತ್ತ ಸಂಕೇತಿಗಳು ವಲಸೆಬೆಳೆಸಲು ಮುಖ್ಯ ಕಾರಣವಾದುವು ಎಂಬ ಮಾತೊಂದು ಬಳಕೆಯಲ್ಲಿದೆ. ಆದರೆ ಇದರ ಸತ್ಯಾಸತ್ಯತೆಯನ್ನು ಪರಿಶೀಲಿಸುವುದು ಅಗತ್ಯ.

ಮಧುರೈ ಪ್ರಾಂತದಲ್ಲಿ ಮುಸ್ಲಿಮರು ನಡೆಸಿದ ವಿಧ್ವಂಸಕ ಕೃತ್ಯಗಳ ವಿವರಗಳು ವಿಪುಲವಾಗಿ ದೊರೆಯುತ್ತವೆ. ಮಧುರಾವಿಜಯಂ, ಕೋಯಿಲೊಳಹು, ರಾಮಾಭ್ಯುದಯಂ, ಸಾಲುವಾಭ್ಯುದಯಂ, ಜೈಮಿನಿಭಾರತಮು, ವರಾಹಪುರಾಣಂ ಮತ್ತು ಪಾಂಡ್ಯನ್ ಕ್ರಾನಿಕಲ್‌ಗಳು ಮುಸಲ್ಮಾನ ಆಕ್ರಮಣದ ದಟ್ಟಚಿತ್ರ ಕೊಡುವ ಹಳೆಯ ಗ್ರಂಥಗಳು. ಅವುಗಳ ಆಯ್ದ ಭಾಗಗಳು ಆಗಾಗ ಉದ್ಧೃತವಾಗಿವೆ. ಕೃಷ್ಣಾನದಿಯ ದಕ್ಷಿಣದ ಪ್ರಾಂತಗಳನ್ನು ಬಲಿಷ್ಠವಾಗಿ ಸಂಘಟಿಸುವ ಕಾರ್ಯ, ಹಿಂದೂ ರಕ್ಷಣೆಯು ತುರ್ತು ಅಗತ್ಯವಾಗಿದ್ದ ಸಂದರ್ಭದಲ್ಲಿ ಕಂಪರಾಯನು ಕೃಷ್ಣೆಯಿಂದ ರಾಮೇಶ್ವರದವರೆಗಿನ ಪ್ರಾಂತವನ್ನು ಒಂದಾಗಿ ಜೋಡಿಸಿದ್ದು, ಮುಸ್ಲಿಂ ಆಕ್ರಮಣಕಾರರ ಬರ್ಬರತೆಯಿಂದ ಹಿಂದೂಗಳನ್ನು ರಕ್ಷಿಸಿದ ದೃಷ್ಟಿಯಿಂದಲೂ ಐತಿಹಾಸಿಕ ಮಹತ್ತ್ವದ್ದು. ಕ್ರಿ.ಶ.೧೩೭೦ರಲ್ಲಿ ಶ್ರೀರಂಗದಿಂದ ಆರು ಮೈಲು ಉತ್ತರದ ಸಮಯಾವರಂನ (ಕಣ್ಣನೂರ್) ಮುಸಲ್ಮಾನರ ಗೌರ್ನರನ್ನು ಜಯಿಸಿದ್ದು, ಮಧುರೆಯನ್ನು ಮುಕ್ತಗೊಳಿಸಿದ್ದು, ಈ ದೃಷ್ಟಿಯಿಂದ ಅತಿಮುಖ್ಯ ಸಂಗತಿಗಳು.

ಮುಸ್ಲಿಂ ಆಕ್ರಮಣದ ಸಂದರ್ಭದಲ್ಲಿ ಮಧುರೈ ಪ್ರಾಂತದಿಂದ ವಿಗ್ರಹಗಳನ್ನು ರಹಸ್ಯವಾಗಿ ಸಾಗಿಸಿದ್ದಕ್ಕೆ ಪ್ರಖ್ಯಾತ ನಿದರ್ಶನಗಳಿವೆ. ಹದಿಮೂರನೆಯ ಶತಮಾನದಲ್ಲಿ ಪಿಳ್ಳೈ ಲೋಕಾಚಾರ್ಯರು ಶ್ರೀರಂಗಂನ ರಂಗನಾಥನ ವಿಗ್ರಹದೊಂದಿಗೆ ತಲೆಮರೆಸಿಕೊಂಡುದು, ವೇದಾಂತದೇಶಿಕರು ಮಧುರೆಯ ವಿಗ್ರಹವನ್ನು ಒಯ್ದು ರಕ್ಷಿಸಿದ್ದು ಅಂಥ ಕೆಲವು ಸಂದರ್ಭಗಳು. ಅದೇ ರೀತಿ ಸಂಕೇತಿಗಳ ವಲಸೆಯ ಸಂದರ್ಭದಲ್ಲಿಯೂ ವಿಗ್ರಹಗಳನ್ನು ತಮ್ಮೊಡನೆ ತಂದ ನಿದರ್ಶನಗಳಿವೆ. ತಿಪ್ಪಯ್ಯನವರು ತಿರುನೆಲ್‌ವೇಲಿಯಿಂದ ತಂದು ಶಾಂತಿಗ್ರಾಮದ ಕೇಶವದೇವಾಯಲಕ್ಕೆ ದಾನಮಾಡಿದ ಲೋಹದ ಉತ್ಸವಮೂರ್ತಿ, ವಲಸಿಗರೊಂದಿಗೇ ಚಲಿಸಿದ ಕೌಶಿಕದ ದೇವಾಲಯದ ನರಸಿಂಹವಿಗ್ರಹ, ವರಾಹನಾಥನ ಕಲ್ಲಹಳ್ಳಿಯ ವರಾಹನಾಥನ ವಿಗ್ರಹ-ಇವುಗಳನ್ನು ಇಲ್ಲಿ ನಿದರ್ಶಿಸಬಹುದು.

ಮೇಲುನೋಟಕ್ಕೆ ಸಮರ್ಥನೀಯ ಪುರಾವೆಗಳಂತೆ ಕಾಣುವ ಈ ಅಂಶಗಳಿಗೆ ಪ್ರತಿಬಂಧಕಗಳೂ ಇವೆ.

೦.೦.೧ ಎಲ್ಲ ವಿಧ್ವಂಸಗಳೂ ಪಾಂಡ್ಯದೇಶದಲ್ಲಿ ಮುಸಲ್ಮಾನರ ಆಳ್ವಿಕೆಯ ಸುಮಾರು ಅರ್ಧ ಶತಮಾನದ ಅವಧಿಯಲ್ಲಿ ನಡೆದಂಥವು (ಕ್ರಿ.ಶ.೧೩೧೦-೧೩೫೮). ವಿಜಯನಗರದ ಸ್ಥಾಪನೆ ಕ್ರಿ.ಶ.೧೩೩೬ರಲ್ಲಿ ಆದರೂ ಕ್ರಿ.ಶ.೧೩೪೬ರಲ್ಲಿ ಹೊಯ್ಸಳ ವಿರೂಪಾಕ್ಷಬಲ್ಲಾಳನ ಮರಣಾನಂತರವೇ ಅವರಿಗೆ ರಾಜಕೀಯ ಔನ್ನತ್ಯ ದೊರೆತುದು. ಮೊದಲ ಸ್ವಲ್ಪ ಕಾಲವು ರಾಜ್ಯವನ್ನು ಸ್ಥಿರಗೊಳಿಸುವುದರಲ್ಲಿಯೇ ಕಳೆಯಿತು. ಸಾಯಣ ಮಾಧವರ ನೇತೃತ್ವದಲ್ಲಿ ವೇದಭಾಷ್ಯಗಳ ಯೋಜನೆ ಕಾರ್ಯಗತಗೊಳ್ಳುವ ವೇಳೆಗೆ (ಕ್ರಿ.ಶ.ಸುಮಾರು ೧೩೬೦) ವಿಜಯನಗರ ಸಂಸ್ಥಾನವು ಸಾಂಸ್ಕೃತಿಕವಾಗಿ ಕ್ರಿಯಾಶೀಲವಾಗತೊಡಗಿತ್ತೆನ್ನಬಹುದು. ಆದರೆ, ಮಧುರೆಯ ಸುಲ್ತಾನನನ್ನು ಕಂಪಣನು ಕೊಂದದ್ದು ಕ್ರಿ.ಶ.೧೩೭೧ರಲ್ಲಿಯಾದರೂ, ಅಲ್ಲಾಉದ್ದೀನ್ ಸಿಕಂದರ್ ಕ್ರಿ.ಶ.೧೩೭೭ರ ವರೆಗೆ ಅಲ್ಲಲ್ಲಿ ತಲೆಮರೆಸಿಕೊಂಡು ಇರುತ್ತಲೇಇದ್ದ. ಕ್ರಿ.ಶ.೧೩೭೪ರಲ್ಲಿ ಕಂಪಣನು ನಿಧನನಾದ ಬಳಿಕ ದಂಗೆಎದ್ದವರಲ್ಲಿ ಪಾಂಡ್ಯರೂ ಸೇರಿದ್ದರು. ವಿಜಯನಗರಕ್ಕೆ ಸಮಾನಾಂತರವಾಗಿ ಕ್ರಿ.ಶ.೧೩೪೭ರ ಹೊತ್ತಿಗೇ ತಲೆ ಎತ್ತಿದ್ದ ಬಹಮನಿ ಸಂಸ್ಥಾನದೊಂದಿಗೆ ನಿರಂತರವಾಗಿ ಭಯಂಕರ ಯುದ್ಧಗಳು ನಡೆದೇ ಇರುತ್ತಿದ್ದವು. ಇಂಥ ಗೊಂದಲದ

ಪರಿಸ್ಥಿತಿಯಲ್ಲಿ, ವಿಜಯನಗರದ ಭವಿಷ್ಯವನ್ನೂ ಖಚಿತವಾಗಿ ನಂಬಲಾಗದ ಮನಸ್ಥಿತಿಯಲ್ಲಿ, ಸಹಸ್ರಾರು ಕುಟುಂಬಗಳ ಮಹಾವಲಸೆ ನಡೆಯಿತೆಂದು ಹೇಳುವುದು ಕಷ್ಟವಾಗುತ್ತದೆ.

೦.೦.೨ ಇಲ್ಲಿಯೂ ಏಳುವ ಸಮಸ್ಯೆ ಎಂದರೆ, ಇಂಥ ಮಹಾವಲಸೆಗೆ ಕಾರಣವಾಗಬಹುದಾಗಿದ್ದ ವಿಷಮಪರಿಸ್ಥಿತಿಯೊಂದು ಇದ್ದುದೇ ಆದರೆ, ಅದು ಸಂಕೇತಿಗಳ ವಲಸೆಯನ್ನು ಮಾತ್ರ ಅನಿವಾರ್ಯಗೊಳಿಸಿತೆ ಎಂಬುದು. ಹಾಗೆ ಹೇಳಲು ಆಧಾರಗಳಿಲ್ಲ.

೦.೦.೩ ಸಂಕೇತಿಗಳಲ್ಲಿರುವ ಮೌಖಿಕಪರಂಪರೆಯು, ವಿಗ್ರಹವಲಸೆಯು ಅದನ್ನು ಮುಸ್ಲಿಮರಿಂದ ರಕ್ಷಿಸುವುದಕ್ಕಾಗಿ ಆದುದು ಎಂದು ಹೇಳುವುದಿಲ್ಲ. ತನ್ನ ಇಷ್ಟದೇವತೆಯ ಮೇಲಿನ ಅಭಿಮಾನದಿಂದ 'ಉಡಮಾಟಾದೆ ಚುಮಂದ್‌ಹ್‌ಂಣ್ ವಂನ್ನ' (ಬಿಟ್ಟಿರಲಾರದೆ ಹೊತ್ತುಕೊಂಡು ಬಂದರು) ಎನ್ನುತ್ತದೆ. ಕರ್ನಾಟಕದೊಳಗೇ ಅಂಥ 'ಅಭಿಮಾನದ ವಿಗ್ರಹವಲಸೆಗಳ' ಇತರ ನಿದರ್ಶನಗಳೂ ಇವೆ. ನರಸಿಂಹನ ಒಕ್ಕಲಿನವರು ಆ ವಿಗ್ರಹದೊಂದಿಗೆ ಕಣಗಾಲ್ ಸಮೀಪದ ಊರೊಂದಕ್ಕೆ ವಲಸೆಹೋಗಿ ನೆಲೆಸಿದರು; ಅಲ್ಲಿ ಏಳಿಗೆಯಾಗಲಿಲ್ಲವೆಂದು ಮತ್ತೆ ಆ ವಿಗ್ರಹದೊಡನೆ ಕೌಶಿಕಕ್ಕೆ ಹೋದರು. ಕಲ್ಕೆರೆಯು ಮುಳುಗಡೆಯಾದಾಗ ತಾವು ಪೂಜಿಸುತ್ತಿದ್ದ ಗಣಪತಿಯ ವಿಗ್ರಹವನ್ನು ಭಕ್ತರು ತಮ್ಮೊಡನೆ ಒಯ್ದರು, ಚಿಲಕುಂದದ ಕೊಳದ ಬಳಿ ಪ್ರತಿಷ್ಠಾಪಿಸಿದರು; ಆ ಕಟ್ಟಡ ಕುಸಿಯತೊಡಗಿದಾಗ ಊರೊಳಗಿನ ರಾಮಮಂದಿರದಲ್ಲಿ ಪ್ರತಿಷ್ಠಾಪಿಸಿದರು. ಇವೆಲ್ಲ ಸೂಚಿಸುವುದು ವಿಗ್ರಹವಲಸೆಗೆ ಅವುಗಳ ಮೇಲಿನ ಮಮತೆಯೇ ಕಾರಣವೆಂಬುದನ್ನು.

೦.೦.೪ ಸಂಕೇತಿಗಳ ಸಹಸ್ರಾರುಜನರ ವಲಸೆಯಾಗಲೀ, ಅವರು ತಂದ ವಿಗ್ರಹಗಳ ವಲಸೆಯಾಗಲೀ, ರಹಸ್ಯವಾಗಿ ನಡೆದುದಲ್ಲ; ಪ್ರಖ್ಯಾತವಾಗಿದ್ದ ಕಾವೇರೀಕಣಿವೆಯ ರಾಜಪಥದಲ್ಲಿ ನಡೆದುದು.

೦.೦.೫ ಮುಖ್ಯವಾಗಿ, ವಿಜಯನಗರಸಾಮ್ರಾಜ್ಯಸ್ಥಾಪನೆಗೂ ಮೊದಲೇ ಸಂಕೇತಿಗಳು ಕರ್ನಾಟಕದಲ್ಲಿದ್ದುದನ್ನು ಶಾಸನಗಳು ಸಮರ್ಥಿಸುತ್ತವೆ. ಸಂಕೇತಿಗಳ ಮಹಾವಲಸೆ ನಡೆದುದು ಮುಸ್ಲಿಮರ ಪ್ರವೇಶಕ್ಕೂ ಮೊದಲು ಎಂಬುದು ಅಲ್ಲಿ ಸ್ಪಷ್ಟವಿದೆ.

0.3 ವಿಜಯನಗರದ ಆಹ್ವಾನ : ವಿಜಯನಗರದ ಅರಸರಿಂದ ದತ್ತಿಗಳು ದೊರೆತುದು 'ಅದಾಗಲೇ ಅಲ್ಲಿ ನೆಲೆಸಿದ್ದ ಸಂಕೇತಿಗಳಿಗೆ' ಎಂಬುದನ್ನು ಮೌಖಿಕ ಪರಂಪರೆಯೂ ತನ್ನ ಐತಿಹ್ಯಗಳಲ್ಲಿ ಉಳಿಸಿಕೊಂಡು ಬಂದಿದೆ. ಪಾಪನಾಶಿನೀ ನದಿಯ ದಡದಲ್ಲಿ ಸೇರಿದ್ದ ಸಂಕೇತಿಗಳ ಸಭೆಯು ವಿಜಯನಗರದ ಅರಸರ ಆಹ್ವಾನವನ್ನು ಪರಿಶೀಲಿಸಿತೆಂದು ಕೇಶವಯ್ಯನವರು ಹೇಳಿದರೂ, ಅದರ ನಿರ್ಣಯದ ಬಗೆಗೆ ತಿಳಿಸುವುದಿಲ್ಲ. ವಲಸೆಗೆ ಅಂಥ ಆಹ್ವಾನವು ಪ್ರೇರಕವಾಯಿತು ಎಂಬ ಖಚಿತ ನಿಲುವೂ ಅವರದಲ್ಲ.[42] ಆದುದರಿಂದ ವಿಜಯನಗರ ಸಾಮ್ರಾಜ್ಯಸ್ಥಾಪನೆಯ ಆಶಯವೇ ಹಿಂದೂಧರ್ಮದ ರಕ್ಷಣೆ ಮತ್ತು ಪುನರುತ್ಥಾನವಾಗಿದ್ದುದರಿಂದ, ಆ ಅರಸರು ಭಾರತದ ಎಲ್ಲೆಡೆಯ ನಿಷ್ಠಾವಂತರೂ ವಿದ್ವಾಂಸರೂ ಆದ ವೈದಿಕರಿಗೆ ಆಹ್ವಾನಿಸಿ ಆಶ್ರಯಕೊಟ್ಟರೆಂಬ ಸಂಗತಿಗೆ ಆಧಾರವಿದ್ದರೂ, ಸಂಕೇತಿಗಳೂ ಕರ್ನಾಟಕಕ್ಕೆ ಈ ಮೊದಲೇ (ವಿಜಯನಗರ ಸ್ಥಾಪನೆಗೆ ಮೊದಲು) ಬಂದು ನೆಲೆಸಿದ್ದರಿಂದ ಈ ಐತಿಹಾಸಿಕ ವಲಸೆಗೆ ವಿಜಯನಗರ ಅರಸರ ಆಹ್ವಾನ ಕಾರಣವಾಗಿರಲಾರದು. ವಲಸಿಗರ ಅಪಾರ ಸಂಖ್ಯೆಯೂ ಇದಕ್ಕೆ ತಾಳೆಯಾಗುವುದಿಲ್ಲ.

0.4 ರಾಜಕೀಯ ಸನ್ನಿವೇಶ : ಖಾನೇಷುಮಾರಿ ವರದಿ ಮತ್ತು ಅದನ್ನಾಧರಿಸಿದ ಇ.ಥರ್ಸ್ಟನರ ವಿವರಗಳಲ್ಲಿ, ವಲಸೆಗೆ ಸಮಕಾಲೀನ ರಾಜಕೀಯ ಸನ್ನಿವೇಶವನ್ನೂ ಕಾರಣವಾಗಿ ಕೊಡಲಾಗಿದೆ.

ಸಂಕೇತಿಗಳ ಮಹಾವಲಸೆಯು ನಡೆದುದು ಹನ್ನೊಂದನೆಯ ಶತಮಾನದ ಎರಡು ಬಲಿಷ್ಠ ಸಾಮ್ರಾಜ್ಯಗಳ ನಡುವೆ. ಪಾಂಡ್ಯರಾಜ್ಯವನ್ನು ವಶಪಡಿಸಿಕೊಂಡಿದ್ದ ಚೋಳರೂ ವೈದಿಕಮತಪೋಷಕರೇ ಆಗಿದ್ದುದರಿಂದ, ಸ್ಮಾರ್ತರಾದ ಸಂಕೇತಿಗಳು ತಮ್ಮ ನೆಲೆಯನ್ನು ಬಿಡಲು ಇದ್ದುದು ರಾಜಕೀಯ ಕಾರಣವಲ್ಲ; ಆದರೆ, ಭದ್ರತೆ ಮತ್ತು ಪೋಷಣೆಯ ದೃಷ್ಟಿಯಿಂದ ಅವರಿಗೆ ಸೂಕ್ತವಾಗಿದ್ದ ಗುರಿ,

---

[42] *ಶ್ರೀ ನಾಚಾರಮ್ಮನ ಚರಿತ್ರೆ* (ಆಕೆಯ ಪ್ರವಾಸ), ಪು.೯-೧೦.

ತ್ರಿಭುವನವಿಕ್ರಮಾದಿತ್ಯನ ಆಶ್ರಯವಾಗಿತ್ತು. ವಿಕ್ರಮಾದಿತ್ಯನು ಮೊದಲು ಚೋಳಕುಲೋತ್ತುಂಗನನ್ನು ಜಯಿಸಿ ಪಾಂಡ್ಯ ರಾಜ್ಯವನ್ನು ತನ್ನ ವಶಕ್ಕೆ ಸೇರಿಸಿಕೊಂಡಿದ್ದುದರಿಂದ, ಆತನ ರಾಜ್ಯಕ್ಕೆ ವಲಸೆಯ ಒಂದು ಸಾಧ್ಯತೆ ಉಂಟಾಯಿತು (ನಕ್ಷೆ 4, ಪು. 262). Gratifier of all the hosts Brahmins[43] ಎಂದು ಕೂಡ ಕೀರ್ತಿತನಾಗಿದ್ದವನು ಅವನು. ಪ(ಬ)ಲತಪಾಂಡ್ಯನ ಕೋರಿಕೆಯಂತೆ ಸಂಕೇತಿಗಳಿಗೆ ದೊರೆತ ಆಶ್ರಯವು, ಅದೊಂದು ನಿರ್ದಿಷ್ಟಗುರಿಉಳ್ಳ ಪೂರ್ವಯೋಜಿತ ಸ್ನೇಹಪೂರ್ಣವಲಸೆ ಎಂಬುದನ್ನೇ ಸೂಚಿಸುತ್ತದೆ. ಆದುದರಿಂದ, ಈ ದೊಡ್ಡಪ್ರಮಾಣದ ವಲಸೆಯು, ದೂರದ ನೀಲಗುಂದಕ್ಕೆ ನಡೆದುದರ ಹಿಂದಣ ಪ್ರೇರಣೆ ಉತ್ತಮಾಶ್ರಯವೇ ಎನ್ನಬೇಕು; ಆದರೆ, ಅನುಕೂಲಕರವಾಗಿದ್ದ ತಿರುವನಂತಪುರವೂ ಸೇರಿದಂತೆ ರಾಜಕೀಯ ಸುಸ್ಥಿರತೆಯಿದ್ದ ತನ್ನ ನೆಲೆಯನ್ನು ತೊರೆಯಲು ರಾಜಕೀಯೇತರವಾದ ಪ್ರಬಲಕಾರಣವೊಂದು ಇರಲೇಬೇಕೆನ್ನುವುದು ತರ್ಕಸಮ್ಮತವಾದುದು. ಏಕೆಂದರೆ ಪಾಂಡ್ಯರಾಜ್ಯ ಮತ್ತು ತಿರುವಾಂಕೂರು ಸಂಸ್ಥಾನದ ಗಡಿಯಭಾಗದಲ್ಲಿದ್ದ ಸಂಕೇತಿಗಳು ರಾಜಕೀಯ ಎಲ್ಲೆಯ ದೃಷ್ಟಿಯಿಂದ ಆಗಾಗ ಭಿನ್ನ ಆಳ್ವಿಕೆಗೆ ಸೇರುತ್ತಿದ್ದರೂ, ಸಾಂಸ್ಕೃತಿಕವಾಗಿ ಎರಡೂ ರಾಜಾಶ್ರಯಗಳಿಗೆ ಹೊಂದಿಕೊಂಡಿದ್ದರು.

4. ನಾಚಾರಮ್ಮನ ಪ್ರಸಂಗ : ಸಂಕೇತಿಗಳ ಮಹಾವಲಸೆಗೆ ಸಂಬಂಧಿಸಿದಂತೆ ವ್ಯಾಪಕವಾಗಿ ಪ್ರಚಲಿತವಾಗಿರುವ ಪರಂಪರಾಗತ ಐತಿಹ್ಯವೆಂದರೆ ನಾಚಾರಮ್ಮನ ಪ್ರಸಂಗ. ಅರ್ಧಶತಮಾನಕ್ಕೂ ಹಿಂದೆ ಮೊದಲಬಾರಿಗೆ ಸಂಶೋಧನೆ ನಡೆಸಿದ ಕೇಶವಯ್ಯನವರ ಗ್ರಂಥದ ಹೆಸರೇ 'ಶ್ರೀ ನಾಚಾರಮ್ಮನ ಜೀವನ ಚರಿತ್ರೆ (ಆಕೆಯ ಪ್ರವಾಸ)'. ಆ ಗ್ರಂಥವು ಪ್ರಧಾನವಾಗಿ ಗಮನಿಸುವುದೇ ಈ ಪ್ರಸಂಗವನ್ನು. ಇದು ಖಾನೇಷುಮಾರಿ ವರದಿಯಲ್ಲಿಯೂ, ಕ್ರಿ.ಶ.೧೮೭೧ರಷ್ಟು ಹಿಂದೆಯೇ ದಾಖಲಾಗಿದೆ. ಎಲ್.ಕೆ.ಅನಂತಕೃಷ್ಣ ಅಯ್ಯರ್ ಅವರೂ ಸಂಕೇತಿಗಳ ಮಹಾಪ್ರವಾಸಕ್ಕೆ ಕಾರಣವಾಗಿ ಈ ಪ್ರಸಂಗವನ್ನೇ ಉಲ್ಲೇಖಿಸಿದ್ದಾರೆ. ಇತರ ಕಾರಣಗಳನ್ನು ಕಲ್ಪಿಸುವವರೂ ಈ ಪ್ರಸಂಗವನ್ನು ಉಲ್ಲೇಖಿಸದೆ ಇರುವುದಿಲ್ಲ. ಕೇಶವಯ್ಯನವರು ಇವೆಲ್ಲವನ್ನೂ ಗಮನಿಸಿ, ವಿಪುಲ ಕ್ಷೇತ್ರಕಾರ್ಯಮಾಡಿ, ಇದನ್ನು ವಿಸ್ತಾರವಾಗಿ ದಾಖಲಿಸಿದ್ದಾರೆ. ಸಂಕೇತಿ ಸಮುದಾಯದ ಸಂದರ್ಭದಲ್ಲಿ ಬಹುಮುಖ್ಯ ಸಂಗತಿಯಾದುದರಿಂದ ಆ ಪ್ರಸಂಗದ ಪರಿಚಯಕ್ಕಾಗಿ ಎಂ.ಕೇಶವಯ್ಯನವರ ಪಾಠವನ್ನೇ ಇಲ್ಲಿ ಪೂರ್ಣವಾಗಿ ಉದ್ಧರಿಸಿದೆ.

"ದಕ್ಷಿಣದೇಶದಲ್ಲಿ ತೆಂಕಾಶಿ ಮತ್ತು ಅಂಬಾಸಮುದ್ರ ಎಂಬ ರೈಲ್ವೆ ಸ್ಟೇಷನ್ನುಗಳ ನಡುವೆ ಇರುವ ಅಷವಾರ್ ಕುರುಚಿ* ಎಂಬ ಪ್ರಸಿದ್ಧವಾದ ಒಂದು ಬ್ರಾಹ್ಮಣರ ಅಗ್ರಹಾರವಿತ್ತು. ಅದರಲ್ಲಿ ಒಂದು ಪುಟ್ಟಸಂಸಾರ. ಒಬ್ಬ ಬ್ರಾಹ್ಮಣ, ಆತನ ಹೆಂಡತಿ, ಒಬ್ಬನೇ ಮಗ, ಈ ಮೂವರೇ ಈ ಸಂಸಾರದಲ್ಲಿದ್ದವರು. ಅವರು ಬಹು ದೈವಭಕ್ತರೂ ಸದಾಚಾರಿಗಳೂ ಆದ ವೈದಿಕರಾಗಿದ್ದರು. ಇವರು ತೀರ ಬಡವರು. ಅದೇ ಅಗ್ರಹಾರದಲ್ಲಿ ನೆರೆಹೊರೆಯಲ್ಲಿದ್ದ ಇತರ ಬ್ರಾಹ್ಮಣ ಕುಟುಂಬದವರೂ ಇವರಂತೆಯೇ ದರಿದ್ರರಾಗಿದ್ದರೂ ಈ ಪುಟ್ಟ ಸಂಸಾರದವರು ಹುಟ್ಟುದರಿದ್ರರಾದುದರಿಂದ ಇವರನ್ನು ಉದಾಸೀನದಿಂದಲೂ, ತಿರಸ್ಕಾರ ದೃಷ್ಟಿಯಿಂದಲೂ ಕಾಣುತ್ತಿದ್ದರು. ಈ ಅವಮಾನವು ಅವರ ಹೃದಯವನ್ನು ಚುಚ್ಚಿತು. ಈ ತಿರಸ್ಕಾರವನ್ನು ನೋಡಿ ಸಹಿಸಲಾರದ ಅವರು ಬಡತನದಿಂದ ಪಾರಾಗಲು ನಿಶ್ಚಯಿಸಿದರು. ತಮ್ಮ ಆಪ್ತಸ್ನೇಹಿತನೊಬ್ಬನ ಸಹಾಯದಿಂದ ಶಾಸ್ತ್ರೋಕ್ತವಾಗಿ ಜ್ಯೋತಿಷ್ಮತೀ ತೈಲವನ್ನು ತಯಾರಿಸಲು ನಿರ್ಣಯಿಸಿದರು. ಕನ್ನಡದಲ್ಲಿ ಇದಕ್ಕೆ ಗಂಗುಂಡಿಎಣ್ಣೆ ಎಂದು ಹೆಸರು. ಕಲ್ಪದಂತೆ ಅದನ್ನು ತಯಾರಿಸಿ ಮೂವರು ಪಾನಮಾಡಿದರೆ ಒಬ್ಬನು ಸಾಯುವನು; ಇನ್ನೊಬ್ಬನು ಹುಚ್ಚನಾಗುವನು; ಮತ್ತೊಬ್ಬನು ಜ್ಞಾನಿಯಾಗುವನು; ಎಂದಿದ್ದ ಅದರ ಪ್ರಭಾವವನ್ನು ಅವರು ದೃಢವಾಗಿ ನಂಬಿದರು. ಅದರಂತೆಯೇ ಶಾಸ್ತ್ರವಿಧಿಯಂತೆ ಬೆಂಕಿಯಲ್ಲಿ ಹವನ ಹೋಮಗಳನ್ನೆಲ್ಲಾ ಮಾಡಿ ದೇವತೆಗಳಿಗೆ ತಮ್ಮ ಪ್ರಾರ್ಥನೆಯನ್ನು ಸಲ್ಲಿಸಿ ಮಂತ್ರಪರಿಶುದ್ಧವಾದ ಆ ತೈಲವನ್ನು ಅವರು ಪಾನಮಾಡಿದರು. ಅದರ ಮಹಿಮೆಯು ಇವರು ಅಪೇಕ್ಷಿಸಿದಂತಾಗದೆ ತನ್ನ ದಾರಿಯನ್ನೇ ಎಂದರೆ ದೈವವಿಲಾಸವನ್ನೇ ಅನುಸರಿಸಿತು. ಅವರ ಪ್ರೀತಿಪಾತ್ರನಾದ ಮಗನು ತಕ್ಷಣವೇ

---

43 ಇ ಸಿ., ಶಿಕಾರಿಪುರ ೯೯ ಕ್ರಿ.ಶ.೧೧೧೩.

* ತಮಿಳುನಾಡಿನ ತಿರುನೆಲ್‌ವೇಲಿ ಜಿಲ್ಲೆಯ ಒಂದು ಊರು; ಈಗ ಅದನ್ನು 'ಆಳ್ವಾರ್ ಕುರುಚಿ' ಎಂದು ಕರೆಯುತ್ತಾರೆ. 'ಶಾಪತ್ತೂರು' ಅದರ ಒಂದು ಭಾಗ.

ಮೃತನಾದನು; ತಂದೆಯಾದವನಿಗೆ ಹುಚ್ಚುಹಿಡಿಯಿತು; ತಾಯಿಗೆ ದೇಹದಲ್ಲಿ ಆದ್ಯಂತವೂ ಉರಿಯೆದ್ದು ವೇದನೆಯನ್ನು ಸಹಿಸಲಾರದೆ ಸಮೀಪದಲ್ಲಿದ್ದ ಒಂದು ಭಾವಿಗೆ ಬಿದ್ದಳು (ಚಿತ್ರ 1). ಮರುದಿನ ಪ್ರಾತಃಕಾಲ ನೆರೆಹೊರೆಯವರು ಈ ಬ್ರಾಹ್ಮಣನ ಮನೆ ಬಾಗಿಲೇ ತೆರೆಯದಿರುವುದನ್ನು ಕಂಡು ಸಂದೇಹಪಟ್ಟು ಬಾಗಿಲಲ್ಲಿ ಕೂಗಿದರು; ಉತ್ತರವಿಲ್ಲ. ಜೀವಂತರಾದವರ ಸುಳಿವೇ ಕಾಣಲಿಲ್ಲ. ಸಂದೇಹದಿಂದ ಅವರು ಬಾಗಿಲೊಡೆದು ಒಳಹೊಕ್ಕು ನೋಡಲಾಗಿ ಒಂದುಕಡೆ ಸತ್ತುಬಿದ್ದಿದ್ದ ಮಗನ ಶವವೂ ಮತ್ತೊಂದೆಡೆಯಲ್ಲಿ ಹವನ ಹೋಮಗಳ ಚಿಹ್ನೆಗಳೂ ಕಂಡುಬಂದವು. ವಿಚಾರಮಾಡಲಾಗಿ ತಂದೆಯು ಹುಚ್ಚನಂತೆ ಕೂಗುತ್ತಾ ಓಡಿಹೋಗುತ್ತಿದ್ದನೆಂದು ತಿಳಿದುಬಂದಿತು. ಹೆಂಗಸಿನಗತಿಯೇನಾಯಿತೆಂದು ಅವರು ಹುಡುಕಲು ಹೊರಟರು. ನಾಚಾರಮ್ಮನ ತಂದೆಯೂ ಇತರ ನೆಂಟರೂ ತಮ್ಮ ಶೋಕಭರದಲ್ಲಿ "ಕುತ್ರನಾಚಾರುಯಾತಾಸಿ" ಎಂದು ಕೂಗಿಕೊಳ್ಳುತ್ತಿರಲು "ಕೂಪಸ್ಥಾಹಂ" ಎಂಬ ಸಂಸ್ಕೃತವಾಕ್ಯವು ಕೇಳಿಬಂದಿತು. ಬಾವಿಯ ಸುತ್ತಲೂ ಜನರು ಗುಂಪು ಸೇರಿ ಆಕೆಯನ್ನು ಮೇಲಕ್ಕೆತ್ತಿ ಅವಳ ಪ್ರಾಣವನ್ನುಳಿಸಿದರು. ಮೇಲಕ್ಕೆ ಬಂದ ಕೂಡಲೇ ಅವಳ ಮುಖದಲ್ಲಿ ಎಂದಿಲ್ಲದ ಒಂದು ತೇಜಸ್ಸೂ ಪಾಂಡಿತ್ಯ ಪ್ರಭೆಯೂ ಕಾಣಬಂತು. ಆಕೆಯು ಅಲ್ಲಿ ಸೇರಿದ್ದ ಪಂಡಿತರನ್ನು ಶಾಸ್ತ್ರವಿಚಾರಕ್ಕೆ ಕರೆದಳು. ಆಕೆಯ ಒಂದೆರಡು ವಾಕ್ಯಗಳಿಂದಲೇ ಅವಳಿಗೆ ಯಾವುದೋ ದೈವಾನುಗ್ರಹದಿಂದ ಈ ಅಸಾಧಾರಣವಾದ ಪಾಂಡಿತ್ಯವು ಬಂದಿರುವುದೆಂದರಿತ ಅಲ್ಲಿದ್ದ ಪಂಡಿತರು ವಾದ ಮಾಡಲು ಪ್ರಾರಂಭಿಸಿದರೆ ತಮಗೆ ಸೋಲು ಖಂಡಿತವೆಂದು ನಿಶ್ಚಯಮಾಡಿಕೊಂಡು ಮಗನ ಉತ್ತರಕ್ರಿಯೆಯು ಪೂರೈಸುವವರಿವಿಗೂ ವಾದಮಾಡಲಾಗದೆಂದು ಸೂಚಿಸಿದರು. ಅದಕ್ಕವಳೂ ಸಮ್ಮತಿಸಿದಳು. ಶಾಸ್ತ್ರಚರ್ಚೆಯನ್ನು ಅಂದೇನೋ ಮುಂದುವರಿಸಿದುದಾಯಿತು. ಒಂದಲ್ಲದಿದ್ದರೊಂದುದಿನ ಅದು ನಡೆಯಲೇಬೇಕಲ್ಲವೇ? ಅದು ನಡೆದರೆ ಪಂಡಿತರಿಗೆ ಪರಾಜಯವು ಸಿದ್ಧ. ಆದುದರಿಂದ ಕೆಲವು ವಿದ್ವಾಂಸರೂ ಇತರರೂ ಸೇರಿ ಒಂದಲ್ಲದಿದ್ದರೊಂದು ವಿಧದಲ್ಲಿ ಈಕೆಗೆ ಬಹಿರಂಗವಾಗಿ ಅಪಮಾನಮಾಡಿ ಅದರಿಂದ ತಾವು ಈ ಸಂಕಟದಿಂದ ಪಾರಾಗಬೇಕೆಂದು ಯೋಚಿಸಿ ಒಂದು ತಂತ್ರವನ್ನು ಹೂಡಿದರು.



1 ಶಾಪತ್ತೂರಿನ (ಅಷವಾರ್ ಕುರುಚಿ) ಶ್ರೀಶೈಲನಾಥಪತಿ ದೇವಾಲಯದ ಬಲಭಾಗದ ನೆಲಬಾವಿ. ನಾಚಾರಮ್ಮನು ಬಿದ್ದುದೆಂದು ಪ್ರತೀತಿ ಇರುವ ಈ ಬಾವಿಗೆ ಕಟ್ಟೆ ಕಟ್ಟಿದ್ದು ಸು.೧೯೬೦ರಲ್ಲಿ.

ತದನುಸಾರವಾಗಿ ಅವರು ಆಕೆಗೆ ಒಂದು ಸೀರೆಯನ್ನು ಬಹುಮಾನವಾಗಿ ಕೊಟ್ಟರು. ಮಗನ ಉತ್ತರಕ್ರಿಯೆಯೆಲ್ಲಾ ನಡೆದಮೇಲೆ ವೈಕುಂಠ ಸಮಾರಾಧನೆಯ ದಿನ ಕರೆದಿರುವ ಅತಿಥಿ ಸತ್ಕಾರ ಸಮಯದಲ್ಲಿ ಎಂದರೆ ಊಟದವೇಳೆಯಲ್ಲಿ ಸಂಪ್ರದಾಯದಂತೆ ಆಕೆಯೇ ಬಡಿಸಬೇಕೆಂದೂ, ಆಗ ಇವರು ಕೊಟ್ಟಿರುವ ಹೊಸ ಸೀರೆಯನ್ನೇ ಉಡಬೇಕೆಂದೂ ಸೂಚಿಸಿದರು. ಅದಕ್ಕವಳೊಪ್ಪಿಕೊಂಡು ಬಡಿಸುತ್ತಿದ್ದಾಗ ಕುಂಕುಮದಲ್ಲೂ ಬಳಪದಕಲ್ಲಿನ ಪುಡಿಯಲ್ಲೂ ತೋಯಿಸಿದ್ದ ಆ ಸೀರೆಯು ಅಕಸ್ಮಾತ್ತಾಗಿ ಜಾರಿಬಿದ್ದಿತು. ಅದರಿಂದ ಆಕೆಗೆ ಅಪಮಾನವೂ, ದುಃಖವೂ ಆಗ್ರಹವೂ ಉಂಟಾಯಿತು. ಒಡನೆಯೇ ಇದರ ರಹಸ್ಯವೆಲ್ಲಾ ಅವಳಿಗೆ ಹೊಳೆಯಿತು. ಅಸೂಯಾಪರರಾದ ಕ್ಷುದ್ರಜನರ ತಂತ್ರವೆಂದು ತಿಳಿದುಕೊಂಡಳು. ಈ ಅಕೃತ್ಯದಿಂದ ಕೋಪಗೊಂಡು ಉತ್ತರಕ್ಷಣದಲ್ಲಿಯೇ ಈ ರೀತಿಯಾಗಿ ಅವರಿಗೆ ಶಾಪವಿತ್ತಳು :

ಅಲ್ಪಾಯುರನಪತ್ಯೋ ವಾ ದರಿದ್ರೋ ವಾ ಭವಿಷ್ಯಸಿ |
ಕಲಹೋ ವಾ ಜಾಯತೇ ||

"ನನಗೆ ಅವಮಾನ ಮಾಡಿರುವುದರಿಂದ ನಿಮ್ಮಲ್ಲಿ ಪ್ರತಿಯೊಬ್ಬನೂ ಅಲ್ಪಾಯುವಾಗಲೀ
ಸಂತಾನಹೀನನಾಗಲೀ ಅಥವಾ ದರಿದ್ರನಾಗಲೀ ಆಗುವನು. ಅಲ್ಲದೆ ನಿಮ್ಮಲ್ಲಿ ಪರಸ್ಪರ ಕಲಹವು ತಪ್ಪುವುದಿಲ್ಲ"

ಕೋಪಪರವಶಳಾದ ನಾಚಾರಮ್ಮನು ಮೃತರಾದವರನ್ನೂ ಸಹ ಎಚ್ಚರಗೊಳಿಸುವಂಥ ದಾರುಣವಾದ ಧ್ವನಿಯಿಂದ ಮೇಲೆ ತಿಳಿಸಿರುವ ಮಾತನ್ನು ಎಚ್ಚರಿಸಿದಳೋ ಆಗ ಅಲ್ಲಿದ್ದವರ ಸ್ಥಿತಿಯನ್ನು ಏನೆಂದು ಹೇಳೋಣ! ಮಹಾಸಭೆಯನ್ನೇ ಒಂದು ವಿಧವಾದ ಭಯವು ಆವರಿಸಿತು. ಇದನ್ನು ಯೋಚಿಸುತ್ತಾ ಕುಳಿತಿದ್ದ ಗಂಡಸರು ಗಡಗಡನೆ ನಡುಗಿದರು. ಸ್ತ್ರೀಯರ ಮತ್ತು ಶಿಶುಗಳ ರೋದನಧ್ವನಿಯು ಕರ್ಣಭೇದಿತವಾಗಿತ್ತು. ಇದಕ್ಕೆಲ್ಲಾ ಕಾರಣಭೂತರಾದ ಅಪರಾಧಿಗಳು ತಮ್ಮ ತಮ್ಮ ಅಂತಃಕರಣದಲ್ಲೇ ತೀವ್ರವಾದ ಯಾತನೆಯನ್ನು ಅನುಭವಿಸಿದರು. ಅಪಮಾನ ಪಶ್ಚಾತ್ತಾಪಗಳಿಂದ ತಲೆ ಬಗ್ಗಿಸಿದರು. ಈ ಶಾಪವಿನ್ನೂ ಅವರ ಕಿವಿಯಲ್ಲೇ ಧ್ವನಿಮಾಡುತ್ತಿದ್ದುದರಿಂದ ಎಲ್ಲರ ಮುಖದಲ್ಲೂ ನಿರಾಶೆಯ ಚಿಹ್ನೆಗಳೇ ಕಾಣಬಂದವು. ಕೂಡಲೇ ಅವರೆಲ್ಲರೂ ನಾಚಾರಮ್ಮನು ಅರ್ಧನಗ್ನಳಾದ, ದರಿದ್ರಬ್ರಾಹ್ಮಣನ ಪತ್ನಿಯಲ್ಲದೆ ದೈವಾನುಗ್ರಹವನ್ನು ಹೊಂದಿರುವ ದೇವಿಯ ಅಂಶವೆಂದರಿತರು. ದುಃಖಿತರಾಗಿ ಅವಳ ಕಾಲಿಗೆ ಬಿದ್ದು, "ತಾಯಿಯೇ, ಅವಿವೇಕಿಗಳಾದ ಕೆಲವರು ಮಾಡಿದ ತಂತ್ರಕ್ಕಾಗಿ ಎಲ್ಲರನ್ನೂ ಶಿಕ್ಷಿಸಬೇಡ, ಇದು ಅವಿವೇಕಿಗಳೂ ಬುದ್ಧಿಶೂನ್ಯರೂ ಆದ ಕೆಲವರ ಕಾರ್ಯ, ಎಲ್ಲರ ಅಪರಾಧಗಳನ್ನೂ ಕ್ಷಮಿಸು; ನಾವೆಲ್ಲರೂ ಅನುಯಾಯಿಗಳು, ನಮ್ಮಲ್ಲಿ ಪುತ್ರವಾತ್ಸಲ್ಯವನ್ನಿಡು. ನೀನೇ ನಮ್ಮ ತಾಯಿ, ನಮ್ಮ ಗುರು, ನಮ್ಮ ಕುಲದೈವ; ನಿನಗೆ ನಾವೆಲ್ಲಾ ಶರಣಾಗತರಾಗಿದ್ದೇವೆ; ಸನ್ಮಾನಗಳನ್ನು ನಮಗೆ ತೋರಿಸು; ನೀನು ಸಾಮಾನ್ಯಳಾದ ಸ್ತ್ರೀಯಲ್ಲ. ನಮ್ಮನ್ನು ಕ್ಷಮಿಸಿ ಕಾಪಾಡು" ಎಂದು ಮೊರೆಯಿಟ್ಟರು. ಅವರು ಈ ರೀತಿಯಾಗಿ ಪ್ರಾರ್ಥಿಸಲು ಅವಳ ಹೃದಯವು ಕರಗಿತು. ಕಣ್ಣಿನಲ್ಲಿ ನೀರು ಹರಿಯಲಾರಂಭವಾಯಿತು. ಇದು ಸಹಜವಾದದ್ದು; ರಕ್ಷಿಸೆಂದು ಮೊರೆಯಿಡುತ್ತಿರುವವರ ಆರ್ತಧ್ವನಿ, ಶೋಕಪೂರ್ಣವಾದ ದೃಶ್ಯ ಇಂಥ ಸನ್ನಿವೇಶದಲ್ಲಿ ಕಲ್ಲಾದರೂ ಕರಗತಕ್ಕದ್ದೇ. ಆ ಅಬಲೆಯು ತನ್ನ ಕಂಬನಿಗಳನ್ನು ತಡೆದು ಅಲ್ಲಿದ್ದವರನ್ನು ಸಂಬೋಧಿಸಿ "ಸಹೋದರರೇ, ಪುನಃ ಪುನಃ ಒತ್ತಿ ಹೇಳುವೆನು. ನೀವೆಲ್ಲರೂ ನನ್ನ ಪ್ರೀತಿಪಾತ್ರರು, ನಿಮಗೆ ನನ್ನಲ್ಲಿಷ್ಟೊಂದು ಪ್ರೀತಿಯಿದೆಯೆಂದೂ ನಿಮ್ಮ ಅಂತಃ ಕರಣವು ಇಷ್ಟು ಶುದ್ಧವಾಗಿದೆಯೆಂದೂ ನನಗೀಗ ತಿಳಿಯಿತು; ವಿವೇಕವಿಲ್ಲದೆ ದುಷ್ಕಾರ್ಯವನ್ನು ಮಾಡಿದರೂ ನಿಮ್ಮ ದುಷ್ಕಾರ್ಯಕ್ಕಾಗಿ ನೀವು ಪಶ್ಚಾತ್ತಾಪ ಪಡುತ್ತಿರುವುದನ್ನು ಕಂಡು ನಿಮ್ಮ ಹೃದಯವು ಪರಿಶುದ್ಧವಾಗಿದೆಯೆಂದು ನಂಬಿರುವೆನು, ನನ್ನ ಬಾಯಿಂದ ಹೊರಬಿದ್ದ ಮಾತುಗಳು ಕೇವಲ ದೈವೇಚ್ಛೆಯಿಂದ ಅದುವೇ ವಿನಾ ಮನುಷ್ಯಪ್ರಯತ್ನದಿಂದಲ್ಲ, ಈಶ್ವರೇಚ್ಛೆಯನ್ನು ಮೀರಲು ಯಾರಿಂದಲೂ ಸಾಧ್ಯವಿಲ್ಲವಷ್ಟೆ. ಆದುದರಿಂದ ಈ ಸ್ಥಳದಲ್ಲಿರಲು ನನಗೂ ಇಷ್ಟವಿಲ್ಲ, ಇಗೋ ಇದೇ ಕ್ಷಣದಲ್ಲಿ ನಾನಿಲ್ಲಿಂದ ಹೊರಡುವವಳಾಗಿದ್ದೇನೆ; ನಂದನವನದಂತೆ ಸುಂದರವಾದೀ ಪ್ರದೇಶವು ಕೆಲವು ಕಾಲದೊಳಗಾಗಿಯೇ ಮರುಭೂಮಿಯಾಗುವುದು. ಇದು ಖಂಡಿತ, ಆದುದರಿಂದ ಯಾರಿಗೆ ಇಷ್ಟವುಂಟೋ ಅವರೆಲ್ಲಾ ನನ್ನೊಂದಿಗೆ ಬರಲು ಯಾವ ಅಡ್ಡಿಯೂ ಇಲ್ಲ, ಇದೋ ನಾನು ಹೊರಟೆ" ಎಂದು ಹೇಳಿ ಅಲ್ಲಿಂದ ಹೊರಟಳು. ಹೊರಹೊರಟು "ನೀವೆಲ್ಲರೂ ಇನ್ನು ಮುಂದೆ ಈ ರೀತಿಯಾಗಿ ಸೀರೆಯನ್ನುಡಬೇಕು" ಎಂದು ಹೆಂಗಸರಿಗೆ ಬುದ್ಧಿವಾದ ಹೇಳಿದಳು (ಚಿತ್ರ 2). ಅನುಭವಪೂರ್ಣವಾದ ಅವಳ ಮಾತನ್ನು ಅಲ್ಲಿದ್ದ ಹೆಂಗಸರೆಲ್ಲಾ ಅನುಮೋದಿಸಿದರು.



2 ಗಂಡೀಸೀರೆ ಉಟ್ಟ ಗೃಹಿಣಿ

ಮರುಮಾತಿಲ್ಲದೆ ಉತ್ತರಕ್ಷಣವೇ ಆಕೆಯು ಆ ಸ್ಥಲವನ್ನು ಬಿಟ್ಟಳು. ಅಂದಿನಿಂದಲೂ ಆ ಅಗ್ರಹಾರವನ್ನು ತಮಿಳುಭಾಷೆಯಲ್ಲಿ ಶಾಪತ್ತೂರ್ (ಶಾಪತೆ ಊರು) ಎಂದು ಕರೆಯುವರು. ಒಂದಾನೊಂದು ಕಾಲದಲ್ಲಿ ಸರ್ವಸಮೃದ್ಧವಾಗಿದ್ದ ಆ ಅಗ್ರಹಾರವು ಈಗ ಹಾಳುಗೋಡೆಗಳ ಊರಾಗಿದೆ. ಆಕೆಯು ಹೊರಟ ಕೂಡಲೇ ಆಕೆಯ ಪಾಂಡಿತ್ಯವನ್ನೂ ಮಾಹಾತ್ಮ್ಯವನ್ನೂ ಅರಿತ ಅನೇಕರು ಅವಳು ತಮ್ಮನ್ನೆಲ್ಲಿಗೆ ಕರೆದುಕೊಂಡು ಹೋದರೂ ಅದೇ ತಮ್ಮ ಊರಾಗುವುದೆಂದು ನಂಬಿದರು. ಅವಳ ಆಜ್ಞಾನುಸಾರವಾಗಿ ಸುಮಾರು ಏಳನೂರು ಅಥವಾ ಎಂಟನೂರು ಸಂಸಾರದವರು ಮಕ್ಕಳು ಮರಿಗಳೊಡನೆ ಅವಳನ್ನು ಹಿಂಬಾಲಿಸಿದರು. ಈ ಪ್ರಸಂಗವೊಂದು

ಮಾತ್ರ ನಮ್ಮ ಭಾರತದ ಇತಿಹಾಸದಲ್ಲಿ ಮಹತ್ವಪೂರ್ಣವಾದುದೆನ್ನಬಹುದು. ದರಿದ್ರಬ್ರಾಹ್ಮಣನ ಹೆಂಡತಿಯೊಬ್ಬಳು ಏಳನೂರು ಸಂಸಾರಗಳನ್ನು ತನ್ನ ಹಿಂದೆ ಕರೆದುಕೊಂಡು ಹೊರಟಳೆಂದರೆ ಆಶ್ಚರ್ಯಕರವಲ್ಲವೇ? ತಮ್ಮ ವಾಸಸ್ಥಾನವನ್ನೂ, ಮನೆಮಠಗಳನ್ನೂ ತ್ಯಜಿಸಿ ಕಾಣದ ಕೇಳದ ಸ್ಥಳಕ್ಕೆ ಹೆಂಗಸಿನ ನೇತೃತ್ವದಲ್ಲಿ ಹೊರಡುವುದೆಂದರೆ ಸಾಮಾನ್ಯ ವಿಚಾರವಲ್ಲ. ಜಾತಿ, ಮತ, ಧರ್ಮ ಇದೇ ತಮ್ಮ ಜೀವನದ ಆದರ್ಶವೆಂದು ತಿಳಿದಿದ್ದ ವೈದಿಕ ಬ್ರಾಹ್ಮಣರು ಹೆಂಗಸಿನ ಆಜ್ಞಾನುವರ್ತಿಗಳಾಗಿರುವುದೆಂದರೆ ಆಶ್ಚರ್ಯವೇ ಸರಿ. ಭರತಖಂಡದ ಇತಿಹಾಸದಲ್ಲೇ ಇದೊಂದು ಅಪೂರ್ವ ಘಟನೆ. ಈ ಘಟನೆಯಿಂದ ನಾವೆಲ್ಲರೂ ಹೆಮ್ಮೆಪಡಬೇಕಾಗಿದೆ."[44]

ನಾಚಾರಮ್ಮನ ಪ್ರಸಂಗದ ಸಿಂಧುತ್ವವನ್ನು ಈಗ ಪರೀಕ್ಷೆಗೆ ಒಳಪಡಿಸಬಹುದು :

0.1 ನಾಚಾರಮ್ಮನನ್ನು ಕುರಿತ ಐತಿಹ್ಯದ ಅನೇಕ ಪಾಠಗಳಿವೆ. ಸುಮಾರು ಕ್ರಿ.ಶ.೧೯೩೦ರ ವೇಳೆಗೆ ಕರ್ನಾಟಕ ಮತ್ತು ತಮಿಳುನಾಡುಗಳೆರಡರಲ್ಲೂ ವ್ಯಾಪಕ ಕ್ಷೇತ್ರಕಾರ್ಯ ನಡೆಸಿದ ಎಂ.ಕೇಶವಯ್ಯನವರು ಕಂಡ ಸಂಗತಿ ಎಂದರೆ, ನಾಚಾರಮ್ಮನನ್ನು ಕುರಿತ ಈ ಮೌಖಿಕ ಪರಂಪರೆಯು ಎಲ್ಲೆಡೆಯೂ (ಒಂದೆರಡು ಸಣ್ಣ ಅಂಶಗಳನ್ನು ಬಿಟ್ಟರೆ) ಚತು ತಪ್ಪದೆ ಒಂದೇ ಆಗಿರುವುದು.[45] ಪ್ರಸ್ತುತ ಈ ಲೇಖಕನ ಕ್ಷೇತ್ರಕಾರ್ಯದ ಸಂದರ್ಭದಲ್ಲಿಯೂ ಇದೇ ಅನುಭವವಾಗಿದೆ. ಎರಡು ದೂರದೂರದ ಪ್ರಾಂತಗಳ, ಪರಸ್ಪರ ಸಂಪರ್ಕವನ್ನೇ ಶತಮಾನಗಳಿಂದ ಕಳೆದುಕೊಂಡ ಸಮುದಾಯಗಳಲ್ಲಿ ಸಿಗುವ ಐತಿಹ್ಯವು ಸಮಾನವಾಗಿರುವುದು ಗೌಣ ಸಂಗತಿಯಾಗಲಾರದು.

ಮೇಲ್ಕಂಡ ಪ್ರಸಂಗಕ್ಕೆ ಸಂಬಂಧಿಸಿದಂತೆ ಇರುವ ಸಮಾನಾಂಶಗಳನ್ನು ಹೀಗೆ ಗುರುತಿಸಬಹುದು :

* ತಂದೆ, ತಾಯಿ, ಮಗ ಇದ್ದ ಬಡಕುಟುಂಬವೊಂದು, ಬಡತನ ಮತ್ತು ತಿರಸ್ಕಾರದಿಂದ ಪಾರಾಗಲು ಜ್ಯೋತಿಷ್ಮತೀ ತೈಲದ ಪಾನ ಮಾಡಿದುದು.
* ಮಗನು ಸತ್ತು, ತಂದೆ ಹುಚ್ಚನಾಗಿ, ತಾಯಿ(ನಾಚಾರಮ್ಮ) ಜ್ಞಾನಿಯಾದುದು.
* ನಾಚಾರಮ್ಮನು ತೈಲಪಾನದಿಂದಾದ ಉರಿಯನ್ನು ತಾಳಲಾರದೆ ಬಾವಿಗೆ ಬಿದ್ದುದು.
* ಜ್ಞಾನಿಯಾದ ಆಕೆಯ ತೇಜಸ್ಸಿನಿಂದ ಅಪ್ರತಿಭರಾದ ಪಂಡಿತರು, 'ವಾಗ್ವಾದ'ದಲ್ಲಿ ತೇಜೋಭಂಗವಾಗುವುದನ್ನು ತಪ್ಪಿಸಿಕೊಳ್ಳಲು, ಆಕೆಗೆ ಅಪಮಾನಮಾಡಿ ಓಡಿಸಲೆತ್ನಿಸಿದುದು.
* 'ಅಭಿಚಾರ' ಮಾಡುವಾಗ (ಪಂಡಿತರು ಉಡಲುಕೊಟ್ಟಿದ್ದ ಸೀರೆಗೆ ಬಳಪದಕಲ್ಲಿನ ಪುಡಿಯನ್ನು ಸವರಿದ್ದುದರಿಂದ) ಜಾರಿದ ಸೀರೆಯನ್ನು (ಈಗಿನ ಗಂಡೀಸೀರೆಯಂತೆ) ಗಂಟುಕಟ್ಟಿ ಬಿಗಿದುಕೊಂಡುದು.
* ಆ ಪಂಡಿತರಿಗೆ ಶಾಪಕೊಟ್ಟುದು. ಹಿರಿಯರ ಕ್ಷಮಾಯಾಚನೆ. ಇಷ್ಟವುಳ್ಳವರು ತನ್ನನ್ನು ಹಿಂಬಾಲಿಸುವಂತೆ ಆದೇಶ. ಇನ್ನುಮುಂದೆ ಹೆಂಗಸರು ತನ್ನಂತೆಯೇ ಸೀರೆ ಉಡಲೆಂದು ಆದೇಶ. ಕರ್ನಾಟಕಕ್ಕೆ ವಲಸೆ.
* ಹಾಳಾದ ಅಗ್ರಹಾರವು (ಶಾಪತೆಊರು) 'ಶಾಪತ್ತೂರು' ಎನಿಸಿದುದು. ಅಲ್ಲಿ ಉಳಿದವರೂ ಕಾಲಕ್ರಮದಲ್ಲಿ ಚದುರಿದುದು.

ಇದರ ಅರ್ಥ ಈ ಐತಿಹ್ಯಕ್ಕೆ ಪಾಠಾಂತರಗಳೇ ಇಲ್ಲವೆಂದಲ್ಲ.

0.0.1 ಎಲ್ಲ ಪಾಠಗಳೂ, ನಾಚಾರಮ್ಮನು ತೈಲಪಾನದ ಉರಿಯನ್ನು ತಾಳಲಾರದೆ ಬಾವಿಗೆ ಜಿಗಿದಳು ಎಂದು ಹೇಳಿದರೆ, ಕಡೆಯಂನ (ತಿರುನೆಲ್‌ವೇಲಿ ಜಿಲ್ಲೆ) ಪ್ರೊ.ಶ್ರೀನಿವಾಸನ್ ಕೊಟ್ಟ ಪಾಠದಲ್ಲಿ, ಪಂಡಿತರೇ ಆಕೆಯನ್ನು ಬಾವಿಗೆ ನೂಕಿದರು ಎಂದಿದೆ. ತೈಲಪಾನದಿಂದ ಉರಿಯುಂಟಾಗುವ ಮತ್ತು ಅದರ ಪರಿಹಾರಕ್ಕಾಗಿ ಬಾವಿಗೆ ಜಿಗಿಯುವ ಸಮಾನ ಸನ್ನಿವೇಶವು ಕನ್ನಡದ ಕಂತಿ ಎಂಬ ಕವಯಿತ್ರಿಯ ಬಗೆಗೂ ಬರುತ್ತದೆ. ಪಾನಮಾಡಿದ ಕೂಡಲೇ ಆಗುವ ಉರಿಯ ಪರಿಣಾಮದಿಂದಾಗಿಯೂ,

44 *ಶ್ರೀ ನಾಚಾರಮ್ಮನ ಜೀವನ ಚರಿತ್ರೆ (ಆಕೆಯ ಪ್ರವಾಸ)* ಪು.೧೦-೧೧, ೨೪-೨೬.

45 ಅದೇ, ಪು.೩೦, ೩೯.

ಪಾನಮಾಡಿದಷ್ಟರಿಂದಲೇ ಯಾರೂ ಜ್ಞಾನಿಯಾಗರು ಎಂಬುದರಿಂದಲೂ, ನಾಚಾರಮ್ಮನೇ ಬಾವಿಗೆ ಜಿಗಿದಳು ಎಂಬುದನ್ನು ಒಪ್ಪಬಹುದು.

0.0.2 ಎಲ್ಲ ಪಾಠಗಳೂ ಪಂಡಿತರು ಆಕೆಗೆ ಅಪಮಾನ ಮಾಡಲೆಂದು ನುಣುಪಾದ ಸೀರೆಯೊಂದನ್ನು ಉಡಲೆಂದು ಕೊಟ್ಟರು ಎಂದರೆ, ಎರಚ್ಚಕೊಳಂನ ಪಾಠದಲ್ಲಿ ಕೆಟ್ಟ ಮಾತುಗಳಿಂದ ಬೈದರು ಎಂದಿದೆ. 'ಗಂಡೀಸೀರೆ'ಯ ಸಾಂಸ್ಕೃತಿಕ ಪುರಾವೆಯು ನುಣುಪುಸೀರೆಯ ಪಾಠವನ್ನೇ ಸಮರ್ಥಿಸುತ್ತದೆ.

0.0.3 ಶಾಪದ ಸಂದರ್ಭದಲ್ಲಿ 'ಚಂಡಾಲರಾಗಿ' ಎಂದು ಶಪಿಸಿದುದು ರೈಸರ ಪಾಠವಾದರೆ, ಕೇಶವಯ್ಯನವರ ಪಾಠದಲ್ಲಿ 'ಸಂತಾನಹೀನರೂ, ದರಿದ್ರರೂ, ಕಲಹಿಗಳೂ ಆಗಿ' ಎಂದಿದೆ. ಶಾಪತ್ತೂರು ನಾಶವಾಗಿರುವುದು ಪ್ರತ್ಯಕ್ಷವಾಗಿ ಇಂದಿಗೂ ಕಾಣುತ್ತಿದೆ. ಆದುದರಿಂದ ಮೂಲ ಆಶಯಕ್ಕೆ ಭಂಗಬಂದಿಲ್ಲ.


0.0.4 ದಕ್ಷಿಣದಲ್ಲಿ ದೊರೆಯುವ ವಿವಿಧ ಪಾಠಗಳಲ್ಲಿ

* ನಾಚಾರಮ್ಮನಿಗೆ ಉಡಲು ತೆಳುಸೀರೆ ಕೊಟ್ಟು ಅಪಮಾನಿಸಿದರು.
* 'ನಾವು (ಪುರುಷರು) ಮಾಡೋದು ನೀವು ಮಾಡಕ್ಕಾಗುತ್ತ?' ಎಂದು ಅವಾಚ್ಯವಾಗಿ ಛೇಡಿಸಿದರು.
* ಊಟಕ್ಕೆ ಬಡಿಸುವಾಗ ಪಂಕ್ತಿಭೇದ ಮಾಡಿ ನಾಚಾರಮ್ಮನನ್ನು ಅಲಕ್ಷಿಸಿದರು.
* "ನೀವು ಉದ್ಧಾರ ಆಗಲ್ಲ" ಎಂದು ಶಪಿಸಿದರು


ಇಂಥ ಭೇದಗಳಿವೆ. ಒಟ್ಟಾಗಿ ದೊರೆಯುವ ಭೇದಗಳು ಇಷ್ಟೇ ಅಲ್ಲ. ಆದರೆ ಒಂಬತ್ತು ಶತಮಾನಗಳ ದೀರ್ಘ ಅವಧಿಯಲ್ಲಿ ದೂರದೂರ ಚದುರಿದ ನಾಡುಗಳಲ್ಲಿ ಪ್ರಚಲಿತವಾಗಿ ಉಳಿದುಬಂದ ಐತಿಹ್ಯವೊಂದಕ್ಕೆ ಇರಬೇಕಾದ ಪಾಠಾಂತರಗಳ ಬೃಹತ್ ಪ್ರಮಾಣದ ಸಾಧ್ಯತೆಗೆ ಹೋಲಿಸಿದರೆ ಇದು ಗೌಣ. ಇದು ಹೀಗಿರುವುದಕ್ಕೆ ಕಾರಣವು ನಾಚಾರಮ್ಮನ ಪ್ರಸಂಗಕ್ಕೆ ಈ ಸಮುದಾಯದಲ್ಲಿದ್ದ ಪ್ರಾಮುಖ್ಯ ಮತ್ತು ಸಂಕೇತಿಗಳ ಮೌಖಿಕ ಪರಂಪರೆಯ ನಿಖರತೆಯೇ ಕಾರಣ.

0.2 ನಾಚಾರಮ್ಮನನ್ನು ಅನುಸರಿಸಿ ಬಂದ ಕರ್ನಾಟಕದ ಸಂಕೇತಿಗಳಲ್ಲಿ (ಮಾತ್ರ) 'ಆಕೆಯ ಆದೇಶದಂತೆ' 'ಗಂಡೀಸೀರೆ' ಉಡುವ ಸಂಪ್ರದಾಯವಿದೆ. ಇತರ ಯಾವ ಬ್ರಾಹ್ಮಣ ಪಂಗಡಗಳಲ್ಲಿಯೂ ಈ ಕ್ರಮದ ಸೀರೆ ಇರುವುದಿಲ್ಲ. ಮೊದಲಿದ್ದ ತಮಿಳುಮಾದರಿಯ ಸಾಂಪ್ರದಾಯಿಕ ಸೀರೆಯನ್ನು ಮುಂದೆ ಒಂದು ಹಂತದಲ್ಲಿ ಬದಲಿಸಿಕೊಂಡರೆಂಬುದನ್ನೇ, ವಿವಾಹದವೇಳೆಮಾತ್ರ ಕಡ್ಡಾಯ (ಪಳೆಯುಳಿಕೆ) ಆಗಿ ರೂಢಿಯಲ್ಲಿರುವ 'ದ್ರಾವಿಡಚೀರಾ' ಪದ್ಧತಿಯು ಖಚಿತಪಡಿಸುತ್ತದೆ (ಇಂಥ ಸಾಂಸ್ಕೃತಿಕ ಪಳೆಯುಳಿಕೆಗಳು ಶ್ರಾದ್ಧ, 'ಕೋಡಂಗಿ ಸಭೆ'ಗಳಲ್ಲಿ ಬಳಸುವ ಮೂಲತಮಿಳಿನ ಮಾತುಗಳಲ್ಲಿಯೂ ಕಾಣುತ್ತವೆ).

0.3 ಕರ್ನಾಟಕದ ಸಂಕೇತಿಗಳ ವಂಶವೃಕ್ಷಗಳಲ್ಲಿ ನಾಚಾರಮ್ಮನ ಹೆಸರು ನಿಯತವಾಗಿ ಕಾಣಿಸಿಕೊಳ್ಳುತ್ತದೆ. ಅದು ಈ ಸಮುದಾಯವು



3 'ನಾಚಾರಮ್ಮನ ತುರುಬು': ಮಂಗಳವಾರ ಹಾಕುವ ರಂಗೋಲಿ



4 'ನಾಚಾರಮ್ಮ': ಶುಕ್ರವಾರ ಹಾಕುವ ರಂಗೋಲಿ

ತನ್ನ ನೇತಾರಳಿಗೆ ಗೌರವಸಲ್ಲಿಸುತ್ತ ಬಂದ ಕುರುಹು.

0.4 'ನಾಚಾರಮ್ಮನ ತುರುಬು' ಮತ್ತು 'ನಾಚಾರಮ್ಮ' ಎಂಬ ರಂಗೋಲಿಗಳೂ ಕರ್ನಾಟಕದ ಸಂಕೇತಿಗಳಲ್ಲಿ ರೂಢಿಯಲ್ಲಿವೆ (ಚಿತ್ರ 3, 4).

0.5 ಕರ್ನಾಟಕದ ಸಂಕೇತಿಗಳ ಮೊದಲ ಪ್ರಮುಖ ನೆಲೆಗಳಲ್ಲಿ ಒಂದಾದ ಕೌಶಿಕದ ಲಕ್ಷ್ಮೀಕೇಶವಸ್ವಾಮಿಯ ರಥೋತ್ಸವಕ್ಕೆ ಮೊದಲು ಮತ್ತು ಅನಂತರ ಮೊರಬಾಗಿನ ಕೊಡುವುದು ನಾಚಾರಮ್ಮನ ಹೆಸರಿನಲ್ಲಿ. ಇತರೆಡೆಗಳಿಗೆ ಚದುರಿದರೂ, ಆ ದಿನ ಪಾನಕ ನೀರುಮಜ್ಜಿಗೆ ವಿತರಿಸುವುದು ಮತ್ತು ಜಲಾಶಯಕ್ಕೆ ಮೊರಬಾಗಿನ ಬಿಡುವುದು ನಾಚಾರಮ್ಮನ ಹೆಸರಿನಲ್ಲಿಯೇ ಎಂಬ ಅಭಿಪ್ರಾಯವೂ ಇದೆ.

0.6 ಮತ್ತೊಂದು ಸಾಂಸ್ಕೃತಿಕ ಪುರಾವೆ ಇದು : ಹೆಂಗಸರು ಸಂಜೆ ಮನೆಯಲ್ಲಿ ದೀಪಹಚ್ಚಿ ಮಾಡುವ ಪ್ರಾರ್ಥನೆ ಹೀಗಿದೆ:

ದೀಪಜ್ಯೋತಿಃ ಪರಬ್ರಹ್ಮ ದೀಪಜ್ಯೋತಿಃ ಪರಾಯಣೀ |



5 ಶಾಪತ್ತೂರು: ಪಾಳುಬಿದ್ದ ಅಗ್ರಹಾರದ ನಡುವೆ ಉಸಿರು ಹಿಡಿದು ನಿಂತ ದೇವಾಲಯ

ದೀಪಂ ದಾಸ್ಯಾಮಿ ತೇ ದೇವೀ ಸಂಧ್ಯಾಜ್ಯೋತಿಃ ನಮೋಸ್ತು ತೇ ||
ಸಂಜೆ ಸಂಜೆ | ಸಾವಿರ ಸಂಜೆ | ಉತ್ತುಂನಂಥ | ಬತ್ತಿ ಹಾಕ್ದೆ |
ಎಳೆನೀರ್ನಂಥ | ಎಣ್ಣೆ ಹಾಕ್ದೆ | ಸೂರ್ಯ ಚಂದ್ರರಂಥ | ದೀಪ ಹಚ್ದೆ|
ಸಂದೀ(ಲ್)ನಾಚಾರಮ್ಮಾ | ಉಳ್ಳಕ್‌ವಾ|

'ನಾಚಾರಮ್ಮ' ಎಂಬ ಪದವನ್ನು 'ಲಕ್ಷ್ಮೀ' ಎಂಬ ದೇವತೆಯ ಹೆಸರಿಗೆ ಪರ್ಯಾಯವಾಗಿ ಬಳಸುವ ರೂಢಿ ಶ್ರೀವೈಷ್ಣವರಲ್ಲಿರುವುದರಿಂದ, ಮೇಲಿನ ಮೂರು ಸಾಕ್ಷ್ಯಗಳಿಗೆ (0.4, 0.5, 0.6) ಆಕ್ಷೇಪ ಬರುವುದು ಸಾಧ್ಯ. ಆ ಸಂದರ್ಭಗಳೂ, ದೇವತೆಯಾದ ಲಕ್ಷ್ಮಿಗೆ ಆರೋಪಿಸಬಹುದಾದಂಥವೇ. ಆದರೆ, ಸಂಕೇತಿಗಳು ದೇವತೆಯಾದ 'ಲಕ್ಷ್ಮಿ'ಗೆ ಪರ್ಯಾಯವಾಗಿ 'ನಾಚಾರಮ್ಮ' ಎಂಬ ಹೆಸರನ್ನು ಬಳಸುವುದಿಲ್ಲ; ಬದಲಿಗೆ, ತಮ್ಮ ನಾಯಕಿಯ ಗೌರವಾರ್ಥವಾಗಿಯೇ ಮಕ್ಕಳಿಗೆ ಆ ಹೆಸರು ಇಟ್ಟಿದ್ದಾರೆ. 'ಗಂಡೀಸೀರೆ' ಉಟ್ಟಿದ್ದಾರೆ. ಆದುದರಿಂದ ಇಲ್ಲಿ ಸಂಕೇತಿಗಳ ಉದ್ದೇಶವು ಸ್ಪಷ್ಟವಿದೆ. ಇಷ್ಟಾದರೂ, '0.5'ಕ್ಕೆ ಸಾಕಷ್ಟು ವಕ್ತೃಗಳ ಪುಷ್ಟಿ ದೊರೆತಿಲ್ಲ. '0.6' ಅನ್ಯ ಪ್ರಭಾವದಿಂದಲೇ 'ಲಕ್ಷ್ಮಿ' ಎಂಬ ಅರ್ಥದಲ್ಲಿಯೇ ಬಳಕೆಗೆ ಬಂದಿರುವುದು (ಸಂದರ್ಭದ ಬಲದಿಂದ) ಹೆಚ್ಚು ಸಂಭಾವ್ಯ. ಆದರೂ ಸಂಕೇತಿಗಳ ಮನಸ್ಸನ್ನು ತಮ್ಮ ನಾಯಕಿಯಾದ ನಾಚಾರಮ್ಮನೇ ವ್ಯಾಪಿಸಿದ್ದಾಳೆ ಎಂಬ ಹಿನ್ನೆಲೆಯಲ್ಲಿ ಇವಕ್ಕೆ ಪ್ರಾಮುಖ್ಯವಿದೆ. ಉಳಿದ ಪ್ರಬಲ ಸಾಕ್ಷ್ಯಗಳೂ 'ನಾಯಕಿ' ನಾಚಾರಮ್ಮನ ಪರವಾಗಿಯೇ ಇವೆ.



6 ಶಾಪತ್ತೂರು (ಆಳ್ವಾರ್ ಕುರುಚಿ): ಪಾಳೂರಿನ ತಳಪಾಯಗಳು ಕುರುಚಲು ಕಾಡಿನಲ್ಲಿ ಮುಚ್ಚಿಹೋಗಿವೆ. ಅಲ್ಲಿನ ಪ್ರಾಚೀನ ದೇವಾಲಯಗಳೆಲ್ಲ ಇರುವುದು ಇಂಥ ಪಾಳುಗಳಲ್ಲಿಯೇ

ಇಲ್ಲಿ ಮತ್ತೆ ಕೆಲವು ನಿಚ್ಚಳ ಸಾಕ್ಷ್ಯಗಳನ್ನು ನೋಡಬಹುದು:

0.7 ತೆಂಕಾಸಿ ಮತ್ತು ಅಂಬಾಸಮುದ್ರಂ ನಡುವೆ ಇರುವ



7 ಶಾಪತ್ತೂರಿನ ಶ್ರೀ ವಹ್ನಿನಾಥೇಶ್ವರರ್ ದೇವಾಲಯದ ಹೊರನೋಟ

ಆಳ್ವಾರ್‌ಕುರುಚಿಗೆ ಹೊಂದಿಕೊಂಡಂತೆ ಇರುವ ನಾಚಾರಮ್ಮನ ಪ್ರಸಂಗ ನಡೆದ ಸ್ಥಳಕ್ಕೆ 'ಶಾಪತ್ತೂರ್' ಎಂಬ ಅನ್ವರ್ಥನಾಮವೇ ಇಂದಿಗೂ ಉಳಿದುಕೊಂಡು ಬಂದಿದೆ.

ವಹ್ನಿನಾಥೇಶ್ವರರ್ (ಐಲಾಂ 'ಗ್ರಾಮ'), ಶ್ರೀಶೈಲನಾಥಪತಿ (ಶಾಪತ್ತೂರ್), ನರಸಿಂಗನಾಥಸ್ವಾಮಿ (ಮತ್ತೊಂದು 'ಗ್ರಾಮ') - ಹೀಗೆ, ಪ್ರತಿ ಶಿವಾಲಯಕ್ಕೆ ಹೊಂದಿಕೊಂಡಂತೆ ಇದ್ದ ಗ್ರಾಮಗಳ ಸಮುಚ್ಚಯವೊಂದರ ಸರ್ವನಾಶದ ಕುರುಹು, ಕುರುಚಲು ಕಾಡಿನಲ್ಲಿ ಮುಚ್ಚಿಕೊಂಡಿರುವುದು ಈಗಲೂ ಕಾಣುತ್ತದೆ (ಚಿತ್ರ 5, 6). ಕೇಶವಯ್ಯನವರು ಕ್ಷೇತ್ರಕಾರ್ಯ ಮಾಡಿದ ಸಂದರ್ಭದಲ್ಲಿ ಪಾಳುಗೋಡೆಗಳ ಕುರುಹು ಇದ್ದುದನ್ನು ದಾಖಲಿಸಿದ್ದಾರೆ. ಪಾಳು ತಳಪಾಯಗಳು ಈಗಲೂ ಅಲ್ಲಲ್ಲಿ ಇವೆ. ತೀರ ಇತ್ತೀಚೆಗೆ ಅಂದರೆ ಒಂದೆರಡು ದಶಕಗಳ ಹಿಂದೆ, ಪರಮಕಲ್ಯಾಣಿ ವಿದ್ಯಾಲಯ ಮತ್ತು ವಿದ್ಯಾರ್ಥಿನಿಲಯಗಳು ಶಾಪತ್ತೂರಿನ ಪಾಳು ನಿವೇಶನಗಳ ಮೇಲೆ ಎದ್ದಿವೆ. ಈ ಕಟ್ಟಡಗಳನ್ನು ಕಟ್ಟಲು ತಳಪಾಯಕ್ಕಾಗಿ ಅಗೆದಾಗ ಶಾಪತ್ತೂರ್ ಗ್ರಾಮದ ಅವಶೇಷಗಳು ಅಲ್ಲಿ ದೊರೆತಿವೆ. ಐಲಾಂಗ್ರಾಮದಲ್ಲಿಯೂ ತೋಟಮಾಡಲು ಅಗೆದಾಗ ಅಂಥ ಅವಶೇಷಗಳು ದೊರೆತದ್ದಿದೆ. ಕೇವಲ ವರ್ಷಕ್ಕೊಮ್ಮೆ ಬಾಗಿಲು ತೆಗೆಯುತ್ತಿದ್ದ, ಪಾಳುಬಿದ್ದ ಶ್ರೀಶೈಲನಾಥಪತಿಯ (ಶಾಪತ್ತೂರು) ದೇವಸ್ಥಾನದ ಬಳಿಗೆ ಇತ್ತೀಚಿನವರೆಗೂ ಯಾರೂ ಸುಳಿಯುತ್ತಿರಲಿಲ್ಲ,



8 ಶಾಪತ್ತೂರು: ಶ್ರೀನರಸಿಂಗನಾಥ ಸ್ವಾಮಿ ದೇವಾಲಯದ ಒಳ ಆವರಣ

ಹಾಗೆ ಸುಳಿಯುವುದು ಸಾಧ್ಯವೂ ಇರಲಿಲ್ಲ. ವಿದ್ಯಾಲಯ ಸಮುಚ್ಚಯವು ತಲೆ ಎತ್ತುವವರೆಗೆ ಕಾಡುಕಂಟೆಗಳಲ್ಲಿ ಅದು ಮುಚ್ಚಿಹೋಗಿತ್ತು. ಪಾಳುಬಿದ್ದ ದೇವಾಲಯಗಳನ್ನು ಚಿತ್ರಗಳಲ್ಲಿ ಕಾಣಬಹುದು (ಚಿತ್ರ 7-10). ಜೀರ್ಣಗೊಂಡ ಆ ಭವ್ಯದೇವಾಲಯಗಳು, ಅದೊಂದು ದೊಡ್ಡ ಧಾರ್ಮಿಕಕೇಂದ್ರವಾಗಿದ್ದುದನ್ನು ಸ್ಪಷ್ಟವಾಗಿ ಸಾರುತ್ತವೆ. ಈ ಗ್ರಾಮಗಳ ಸರ್ವನಾಶದ ಬಗೆಗೆ ವಿವರಿಸುವ 'ದುರಂತ ಕತೆ'ಗಳೂ ಅಲ್ಲಿ ಉಳಿದಿವೆ. ಅವುಗಳಲ್ಲಿ ಕೆಲವು ತಾಂತ್ರಿಕವಾಗಿ ನಾಚಾರಮ್ಮನ ಪ್ರಸಂಗಕ್ಕಿಂತ ಭಿನ್ನವಾಗಿದ್ದರೂ, ದಟ್ಟವಾದ ದುರಂತದ ಛಾಯೆಯು ಇಂದಿಗೂ ಉಳಿದುಕೊಂಡಿದೆ. ನಾಚಾರಮ್ಮನು ಬಿದ್ದ ಬಾವಿ ಎಂದು ಹೇಳುವ, ಶ್ರೀಶೈಲನಾಥಪತಿಯ ದೇವಾಲಯದ



9 ಶಾಪತ್ತೂರು: ಶ್ರೀನರಸಿಂಗನಾಥಸ್ವಾಮಿ ದೇವಾಲಯ: ಕಡೆದ ಕಂಬಗಳು



10 ಶಾಪತ್ತೂರಿನ ಶ್ರೀಶೈಲನಾಥಪತಿ ದೇವಾಲಯದ ಮುಂಭಾಗದ ಪಾಳು ಮಂಟಪ

ಬಲಭಾಗದಲ್ಲಿರುವ ಪಾಳುನೆಲಬಾವಿಯ ಬಳಿಗೆ ಸುಳಿಯಲು, ಇಂದಿಗೂ ಜನರು ಅಂಜುವುದನ್ನು ಕಾಣಬಹುದು. ಆ ಬಾವಿಯಲ್ಲಿ ಆಗಾಗ ಆಗುತ್ತಿರುವ ದುರ್ಮರಣಗಳು ಈ ಪಾರಂಪರಿಕ ಭೀತಿಯನ್ನೂ ಹೆಚ್ಚಿಸಿವೆ. ಈ ಸಂಬಂಧದ ಐತಿಹ್ಯಗಳನ್ನು ಇಲ್ಲಿ ಅಗತ್ಯವಾಗಿ ಉಲ್ಲೇಖಿಸಬೇಕಾಗಿದೆ.

0.0.1 ಶಾಪತ್ತೂರಿನ ಸುತ್ತಣ ಭಾಗದಲ್ಲಿ ಈಗಲೂ ಎಂಟುದಿನಗಳಉತ್ಸವಗಳ ಅನಂತರ ಒಂಬತ್ತನೆಯ ದಿವಸ ರಥೋತ್ಸವ ನಡೆಯುತ್ತದೆ. ಶಾಪತ್ತೂರಿನ ಶ್ರೀಶೈಲನಾಥಪತಿ ದೇವಾಲಯದಲ್ಲಿಯೂ ಇದೇ ಕ್ರಮವಿತ್ತು. ಆದರೆ ಒಮ್ಮೆ ಆ ರಥವು ಏನು ಮಾಡಿದರೂ ಜಗ್ಗಲಿಲ್ಲ. ಎಲ್ಲರೂ ಶ್ರಮಗೊಂಡರು. ಎರಡು ದಿನಗಳ ಪ್ರಯತ್ನದನಂತರವೂ ರಥವು ಅಲುಗಲಿಲ್ಲ. ಇದರಿಂದ ಒಂಬತ್ತನೆಯ ದಿನದ ರಥೋತ್ಸವವೇ ನಡೆಯದಾಯಿತು. ಆಯಾಸದಿಂದ ಭಕ್ತಾದಿಗಳು ಮಲಗಿದರು. ಹನ್ನೊಂದನೆಯ ದಿನ ರಥವು ತಾನಾಗಿಯೇ ಸುತ್ತಿಬಂದು ನಿಂತಿತು. ಮಲಗಿದ ಭಕ್ತಾದಿಗಳ ಮೇಲೆ ರಥ ನುಗ್ಗಿದ್ದರಿಂದ ಸತ್ತರು, ಮನೆಗಳೂ ನಾಶವಾದುವು. ಈಗಲೂ ಈ ದೇವಾಲಯದಲ್ಲಿ ಮಾತ್ರ ಹನ್ನೊಂದನೆಯ ದಿನವೇ ರಥೋತ್ಸವ ನಡೆಯುವ ರೂಢಿ ಇದೆ.



11 ಶಾಪತ್ತೂರಿನ ಶ್ರೀಶೈಲನಾಥಪತಿಯ ರಥೋತ್ಸವದ ವೇಳೆ ಉಂಟಾದ ದುರಂತದಲ್ಲಿ ಮಡಿದವರ ಶವಗಳನ್ನು ತುಂಬಿದ ಬಾವಿಯ ಮೇಲೆ ಕಟ್ಟಿದ ಮಂಟಪ ಇದೆಂಬುದು ಪ್ರತೀತಿ. ರಥೋತ್ಸವಕ್ಕೆ ಬಳಸುವ ಸರಪಳಿ ಇಡುವ ಮಂಟಪ ಇದು



12 ಶಾಪತ್ತೂರು: ರಥ ಎಳೆಯುವ ಸರಪಳಿ ಮತ್ತು ಆ ಮಂಟಪದಲ್ಲಿ ಪ್ರತಿಷ್ಠಿತವಾದ ಅಭಿಮಾನ ದೇವತೆ

0.0.2 ಹೀಗೆ ಸತ್ತವರನ್ನೆಲ್ಲಾ ಒಂದು ಬಾವಿಯಲ್ಲಿ ಹಾಕಿ ಮುಚ್ಚಿ ಮೇಲೆ ಮಂಟಪವನ್ನು ಕಟ್ಟಿ ಸೊಡಲೆಮಾದನ್ (ಕಾವಲು ದೈವ) ವಿಗ್ರಹದ ಸ್ಥಾಪನೆ ಮಾಡಿದರು. ರಥೋತ್ಸವದ ಸರಪಣಿಯನ್ನು ಈಗಲೂ ಇಡುವುದು ಈ ಮಂಟಪದಲ್ಲಿಯೇ. ಸರಪಣಿಯನ್ನು

ತೆಗೆಯಬೇಕಾದಾಗ ಮೊದಲು ಈ ವಿಗ್ರಹಕ್ಕೆ ಪೊಂಗಲು ಬಲಿಹಾಕಿ ಅನಂತರವೇ ತೆಗೆಯುವ ಪದ್ಧತಿ ಅಂದಿನಿಂದ ಬೆಳೆದಿದೆ. (ಚಿತ್ರ 11, 12)



13 ಶಾಪತ್ತೂರಿನ ಹಾಳಾದ 'ಗ್ರಾಮಂ'ನ ನಿವೇಶನದಲ್ಲಿ ಬೆಳೆಸಿರುವ ತೋಟ

0.0.3 ಐಲಾಂಗ್ರಾಮದ ಬ್ರಾಹ್ಮಣರು ಅಲ್ಲಿನ ಸೊಡಲೆಮಾದನ್ ದೈವವನ್ನು (ಕಾವಲು ದೈವ) ಮಾನ್ಯ ಮಾಡುತ್ತಿರಲಿಲ್ಲ. ಈ ದೇವತೆಯ ಕ್ರೂರದೃಷ್ಟಿಬಿದ್ದು ಈ ಗ್ರಾಮವೇ ಸರ್ವನಾಶವಾಯಿತು. ಪಾಳಾದ ಈ ಗ್ರಾಮದ ಒಂದು ಭಾಗದಲ್ಲಿ ಈಗ ತೋಟವನ್ನು ಬೆಳೆಸಿದ್ದಾರೆ (ಚಿತ್ರ 13). ಈಗಲೂ ಈ ತೋಟವನ್ನು ಯಾರು ಕೊಂಡರೂ ಅವನತಿ ಹೊಂದುವುದು ಇಲ್ಲಿನವರ ಅನುಭವವಾಗಿದೆ.[46]



14 ಶಾಪತ್ತೂರು ಗ್ರಾಮ : ಒಂದು ಬೀದಿ

ಈಗಿನ ಆಳ್ವಾರ್‌ಕುರುಚಿಯ ಎರಡು 'ಗ್ರಾಮಂ'ಗಳಲ್ಲಿಯೂ (ಅವುಗಳಲ್ಲಿ ಒಂದನ್ನು ಶಾಪತೆ ಊರು ಎನ್ನುತ್ತಾರೆ.) ಇತರ ಸ್ಮಾರ್ತಬ್ರಾಹ್ಮಣರು ವಾಸವಾಗಿರುವರಾದರೂ, ಸಂಕೇತಿಗಳು ಬಹಳ ಕಾಲದಿಂದಲೂ ಅದರ ಸಂಪರ್ಕವನ್ನು ತೊರೆದಿದ್ದಾರೆ (ಚಿತ್ರ 14).



15 ಶಾಪತ್ತೂರು (ಆಳ್ವಾರ್ ಕುರುಚಿ): ಶಿವದೇವಾಲಯವು ಪರಿವರ್ತನೆ ಹೊಂದಿ ಆಗಿರುವ ನಾರಾಯಣ ದೇವಾಲಯ

ವಿಸ್ತಾರವಾದ ಪ್ರದೇಶದಲ್ಲಿ ನೆಲೆಗೊಂಡಿದ್ದ ಶಾಪತ್ತೂರು ಗ್ರಾಮಸಮುಚ್ಚಯವೊಂದರ ಅವಶೇಷದ ಮೇಲೆ, ಶ್ರೀವೈಷ್ಣವಮತಪ್ರಚಾರದ ಸಂದರ್ಭದಲ್ಲಿ ಬಂದ ಕುಲಶೇಖರ ಆಳ್ವಾರರ (ಸಮೀಪದ ಗ್ರಾಮವೊಂದರಲ್ಲಿ ಕುಲಶೇಖರಾಳ್ವಾರರ ಗುಡಿ ಇದೆ) ಹೆಸರಿನಲ್ಲಿ 'ಆಳ್ವಾರ್‌ಕುರುಚಿ' ಎಂಬ ಊರು ಎದ್ದುದಕ್ಕೆ, ಅಲ್ಲಿನ 'ನಾರಾಯಣ' ದೇವಾಲಯವೂ ಒಂದು ಸಾಂಸ್ಕೃತಿಕ ಪುರಾವೆಯಾಗಿದೆ (ಚಿತ್ರ 15). ನರಸಿಂಗನಾಥ

---

46 *ಪೊನ್ನಯ್ಯಪಿಳ್ಳೆ,* ೯೦, ವಿಲೇಜ್ ಮುನ್ಸಿಫ್ (ನಿವೃತ್ತ), ಆಳ್ವಾರ್‌ಕುರುಚಿ, ತಿರುನೆಲ್‌ವೇಲಿ ಜಿಲ್ಲೆ
ಚಿದಂಬರಂ, ೪೮, ವಿಲೇಜ್ ಮುನ್ಸಿಫ್, ಆಳ್ವಾರ್‌ಕುರುಚಿ, ತಿರುನೆಲ್‌ವೇಲಿ ಜಿಲ್ಲೆ.

ದೇವಾಲಯದ ಉತ್ತರ ರಥಬೀದಿಯಲ್ಲಿನ ಈ ಪುರಾತನ ದೇವಾಲಯದ ಪ್ರಧಾನದೇವತೆ ನಾರಾಯಣ. ಅದರ ಅಕ್ಕಪಕ್ಕದ ದೇವತೆಗಳು ವಿನಾಯಕ ಮತ್ತು ಸುಬ್ರಹ್ಮಣ್ಯ. ಈ ಉಪದೇವತೆಗಳು ಹೀಗೆ ಉಪಸ್ಥಿತರಿರುವುದು ಅಲ್ಲಿನ ಶಿವಾಲಯಗಳ ರೀತಿ. ಶಿವದೇವಾಲಯವು ನಾರಾಯಣದೇವಾಲಯವಾಗಿ ಪರಿವರ್ತನೆಗೊಂಡುದಕ್ಕೆ ದೇವತೆಗಳ ಈ ವಿಚಿತ್ರ ಸಂಗಮವು ಸಾಕ್ಷಿಯಾಗಿದೆ.

0.8 ನಾಚಾರಮ್ಮನ ಪ್ರಸಂಗಕ್ಕೆ, ಆಗ ಅಯ್‌ಕುಡಿ ಗ್ರಾಮದಲ್ಲಿದ್ದ ನಲವತ್ತು ಸಂಸಾರಗಳ ಮನೆತನವೇ ಕಾರಣವೆಂದು ಪ್ರಚಲಿತವಿದ್ದ ಸಂಗತಿಯನ್ನು, ಎಂ.ಕೇಶವಯ್ಯನವರು ದಾಖಲಿಸಿದ್ದಾರೆ. ಈ ಪಾಪ ಪರಿಹಾರಕ್ಕಾಗಿಯೇ ಆಚರಿಸುವ ವಿಶಿಷ್ಟವಾದ 'ಪೂವಾಡಿಪಾನೆ'[47] ಇಂದಿಗೂ ದಕ್ಷಿಣದ ಕೆಲವು ಸಂಕೇತಿಗಳ ವಾರ್ಷಿಕ ಆಚರಣೆಯಾಗಿದೆ.

0.9 ಪಾಂಡ್ಯದೇಶದಲ್ಲಿ, ಮನೆಯಲ್ಲಿ ಏನು ತೊಂದರೆ ಸಂಭವಿಸಿದಾಗಲೂ, 'ನಾಚಾರು ಶಾಪ'ದ ಮಹಿಮೆ ಎಂದು ನಿಟ್ಟುಸಿರು ಬಿಡುವ ಸಂಗತಿಯನ್ನು ಕೂಡ, ಎಂ.ಕೇಶವಯ್ಯನವರು ದಾಖಲಿಸಿದ್ದಾರೆ.[48] ಅವರು ಸಂಚಾರ ಮಾಡಿದಲ್ಲೆಲ್ಲಾ, ಈ ಶಾಪದಿಂದ ಮುಕ್ತರಾಗುವುದು ಹೇಗೆಂಬ ಚಿಂತೆ ಎಲ್ಲರನ್ನೂ ಕಾಡುತ್ತಿದ್ದುದನ್ನೂ ತಿಳಿಸಿದ್ದಾರೆ. ಈಗ, ವಿದ್ಯಾವಂತರೂ ಸ್ಥಿತಿವಂತರೂ ಆದ ಕೆಲವರಲ್ಲಿ ತಾತ್ತ್ವಿಕವಾಗಿ 'ಶಾಪ' ಭೀತಿಯನ್ನು ಮೆಟ್ಟಿನಿಲ್ಲುವ ಮನೋಭಾವ ಕಂಡುಬಂದರೂ ಬಹುಸಂಖ್ಯಾತರಲ್ಲಿ ಪಾಪಪ್ರಜ್ಞೆಯು ದಟ್ಟವಾಗಿ ಕಾಡುತ್ತಿರುವುದನ್ನು ಈಗಲೂ ಅದರ ವಿಭಿನ್ನ ಅಭಿವ್ಯಕ್ತಿಗಳಲ್ಲಿ ಕಾಣುವುದು ಕಷ್ಟವಲ್ಲ. ಅವು, ದಕ್ಷಿಣದ ಸಂಕೇತಿಗಳ ಪಾಪಪ್ರಜ್ಞೆಗೂ ಅದನ್ನಾಧರಿಸಿದ ಅವರ ಮನೋಧರ್ಮಕ್ಕೂ ಕನ್ನಡಿ ಹಿಡಿಯುವುದರಿಂದ ಮಾತ್ರವಲ್ಲ, ನಾಚಾರಮ್ಮನ ಪ್ರಸಂಗಕ್ಕೆ ಪುರಾವೆಯಾಗಿ ಬಲವಾದ ಜೀವಂತ ವಾಸ್ತವತೆಯನ್ನು ಇಲ್ಲಿ ಕಾಣಬಹುದು ಎಂಬುದಕ್ಕಾಗಿ ಕೆಲವನ್ನು ಇಲ್ಲಿ ನಿದರ್ಶಿಸಿದೆ.

0.0.1 ಕೂಟ್ಟಿವರರ ಪೋದು ಕಳಂಜ ಪೋಹುಂ (ಕೂಡಿಬರುವ ಕಾಲಕ್ಕೆ ವಿಪತ್ತು ಸಂಭವಿಸುತ್ತದೆ) ಎಂಬುದು ದಕ್ಷಿಣ ಸಂಕೇತಿಗಳು ನಾಚಾರಮ್ಮನ ಶಾಪದ ಹಿನ್ನೆಲೆಯಲ್ಲಿ ದಟ್ಟವಾಗಿ ಬಳಸುವ ಒಂದು ಗಾದೆ. ಎಲ್ಲವೂ ಸಂಸಾರದಲ್ಲಿ ಒಂದು ಸ್ಥಿತಿಗೆ ಬಂದಿತು ಎನ್ನುವ ವೇಳೆಗೆ, ಸಂಸಾರದಲ್ಲಿ ಒಂದು ಸಾವು ಅಥವಾ ಮಹಾನಷ್ಟ (ನಾಚಾರಮ್ಮನ ಶಾಪದಿಂದ) ಸಂಭವಿಸುತ್ತದೆ ಎಂಬುದು ಅವರ ಪ್ರಬಲ ನಂಬಿಕೆ. ನೌಕರಿಗೆ ಸೇರಿರುವವರೂ ಒಂದು ಹಂತಕ್ಕೆ ಮುಟ್ಟುತ್ತಲೇ ಕಷ್ಟ, ನಷ್ಟ, ಪತನ ಕಾಣುತ್ತಾರೆ ಎಂದು ಅವರು ನಂಬುತ್ತಾರೆ.

0.0.2 ದಕ್ಷಿಣವನ್ನು (ಶೆಂಕೋಟ್ಟೈ ಪ್ರಾಂತ) ಬಿಟ್ಟು ಉತ್ತರಕ್ಕೆ ವಲಸೆ ಹೋದವರು ತಮಗಿಂತ ಉತ್ತಮಸ್ಥಿತಿಯಲ್ಲಿದ್ದಾರೆ ಎಂಬುದು ಅವರ ಮತ್ತೊಂದು ನಂಬಿಕೆ. ಹೀಗೆ ಹೋದವರಲ್ಲಿಯೂ ಇತರೆಡೆಗೆ ಹೋದವರಿಗಿಂತ ಕರ್ನಾಟಕಕ್ಕೆ (ನಾಚಾರಮ್ಮನನ್ನನುಸರಿಸಿ) ಹೋದವರು ಉತ್ತಮಸ್ಥಿತಿಯಲ್ಲಿದ್ದಾರೆ ಎಂಬ ಭಾವನೆ ಅವರದು.

0.0.3 ಸಂಕೇತಿಗಳು ಸಂಕೇತಿಗಳೊಡನೆ ವಿವಾಹವಾಗಿ ಆದ ದಾಂಪತ್ಯಕ್ಕಿಂತ ಇತರ ಬ್ರಾಹ್ಮಣ ಪಂಗಡಗಳೊಂದಿಗೆ ಸಂಬಂಧ ಬೆಳಸಿ ಸಂಸಾರನಡೆಸುವವರು ಹೆಚ್ಚು ಸುಖಿಗಳಾಗಿರುತ್ತಾರೆ. ಏಕೆಂದರೆ ನಾಚಾರಮ್ಮನ ಶಾಪ ಅಂಥ ದಾಂಪತ್ಯಕ್ಕೆ ಅನ್ವಯಿಸುವುದಿಲ್ಲ ಎಂಬುದು ಅವರು ಮಾಡಿಕೊಂಡ ಶೋಧ.



16 ನಾಚಾರಮ್ಮನ ಶಾಪದಿಂದ ಮುಕ್ತಗೊಳ್ಳುವುದಕ್ಕಾಗಿ ಸಂಕೇತಿಗಳು ತಿರುನೆಲ್‌ವೇಲಿ ನಗರದಲ್ಲಿ ಕಟ್ಟಿಸಿರುವ ಸರಸ್ವತೀ ದೇವಾಲಯ

0.0.4 ತಮ್ಮ ಬಡತನ, ಅಲ್ಪಸಂಖ್ಯೆ, ನಾಚಾರುಶಾಪ ಇವು ಅವರಲ್ಲಿ ಆತ್ಮವಿಶ್ವಾಸವನ್ನು ಕೆಡಿಸಿರುವಂತೆಯೇ ಕೀಳರಿಮೆಯನ್ನು ಹೆಚ್ಚಿಸಿವೆ. ತಾವು 'ವಡಮ'ರಲ್ಲದಿದ್ದರೂ 'ಸಂಕೇತಿವಡಮ' ಎಂದು ಕರೆದುಕೊಂಡು ಗೌರವಾದರಗಳನ್ನು

47 *ಶ್ರೀ ನಾಚಾರಮ್ಮನ ಜೀವನ ಚರಿತ್ರೆ* (ಆಕೆಯ ಪ್ರವಾಸ), ಪು.೩೯-೪೦.

48 ಅದೇ. ಪು. ೪೧

ಗಳಿಸುವ ಅವರ ಯತ್ನದಲ್ಲಿಯೂ ಇದು ಕಾಣಿಸುತ್ತದೆ. ಈ ಎಲ್ಲ ವಿವರಗಳೂ ಅವರು ಎಷ್ಟು ಭ್ರಾಂತರಾಗಿದ್ದಾರೆ ಎಂಬುದನ್ನೇ ತೋರಿಸುತ್ತವೆ.

0.10 ನಿರಂತರವಾದ ಸಾಂಸಾರಿಕ ಕ್ಲೇಶಗಳಿಗೆ ಸರಸ್ವತಿಯ ಅವತಾರವಾದ ನಾಚಾರಮ್ಮನ ಶಾಪವೇ ಕಾರಣವೆಂದೂ, ಅದರ ಪರಿಹಾರಕ್ಕಾಗಿ ಸರಸ್ವತೀ ದೇವಾಲಯವನ್ನು ಕಟ್ಟಿಸಬೇಕೆಂದೂ, ಮಲೆಯಾಳೀ ಮಂತ್ರಗಾರನೊಬ್ಬನು ಕೊಟ್ಟ ಸಲಹೆಯಂತೆ, ಸುಮಾರು ಒಂದು ಶತಮಾನದ ಹಿಂದೆ ಕಟ್ಟಿಸಿದ ಸರಸ್ವತೀ ದೇವಾಲಯ ತಿರುನೆಲ್‌ವೇಲಿಯಲ್ಲಿದೆ (ಚಿತ್ರ 16, 17).



17 ಶ್ರೀ ಸರಸ್ವತೀ (ನಾಚಾರಮ್ಮ) ದೇವಾಲಯದ ಒಳನೋಟ : ತಿರುನೆಲ್‌ವೇಲಿ




18 ನಾಚಾರಮ್ಮನ ಶಾಪದಿಂದ ಪಾರಾಗಲೆಂದೇ ಅಯ್‌ಕುಡಿ ಗ್ರಾಮದಲ್ಲಿ ಕಟ್ಟಿಸಿದ ಕೋಮಲವಲ್ಲೀ ದೇವಾಲಯ

0.11 ತನ್ನ ಜನಸಮುದಾಯಕ್ಕೆ ಇರುವ ಶಾಪದ ಪರಿಹಾರಕ್ಕಾಗಿ ಕೋಮಲವಲ್ಲೀ ಅಮ್ಮನವರ ದೇವಾಲಯವನ್ನು ಕಟ್ಟಿಸಬೇಕೆಂದು ಸ್ವಪ್ನದಲ್ಲಿ ದೊರೆತ 'ಆದೇಶ'ಕ್ಕೆ ಅನುಗುಣವಾಗಿ ಕಟ್ಟಿಸಿರುವ ದೇವಾಲಯವನ್ನು ಅಯ್‌ಕುಡಿಯಲ್ಲಿ ಕಾಣಬಹುದು (ಚಿತ್ರ 18, 19).

0.12 ಈ ಎರಡೂ ನೆರವೇರಿಕೆಗಳ ಅನಂತರವೂ ತಮ್ಮ ಕಷ್ಟಗಳು ನಿವಾರಣೆಯಾಗಿಲ್ಲವೆಂದು ಭಾವಿಸುವ ಈ ಕುಲದವರು, ಈಗಲೂ ಶಾಪಪರಿಹಾರದ ನಿರಂತರ ಶೋಧದಲ್ಲಿರುವುದು ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಅನುಭವಕ್ಕೆ ಬಂದಿತು:

೦.೦.೧ ಬಾಲ್ಯದಲ್ಲಿಯೇ ಸಾಧಕನಾಗಿದ್ದ ಹದಿಮೂರು ವರ್ಷದ 'ಅಣ್ಣಾವಿಪಿಳ್ಳೈ' ಎಂಬ ಬ್ರಹ್ಮಚಾರಿಯು ತನ್ನ ತಪಸ್ಸಿನ ಫಲವಾಗಿ ಕುತ್ತಾಲಂನ ಅಂಬಾಳ್ ದೇವತೆಯಲ್ಲಿ ಐಕ್ಯನಾದನೆಂಬ ನಂಬಿಕೆಯನ್ನನುಸರಿಸಿ, ಅನೇಕರು ಅಲ್ಲಿನ ಅಮ್ಮನ್‌ಕೋವಿಲ್ ಸನ್ನಿಧಿಯಲ್ಲಿರುವ ಆತನ ಪ್ರತಿಮೆಗೆ ಪೂಜೆಸಲ್ಲಿಸುವುದು ಮತ್ತು ಆತನನ್ನು ಕುಲದೈವವಾಗಿ ಹೊಂದಿರುವುದು, ತಮ್ಮ ಸಂಕಷ್ಟಗಳ ನಿವಾರಣೆಗಾಗಿ ಮಾಡಿಕೊಂಡ ಮತ್ತೊಂದು ಶೋಧ.



19 ಶ್ರೀ ಕೋಮಲವಲ್ಲೀ ಅಮ್ಮನವರ ವಿಗ್ರಹ : ಅಯ್‌ಕುಡಿ

೦.೦.೨ ಇಂಥದೇ ಶೋಧವು 'ಯಜ್ಞನಾರಾಯಣ'ನ ಪೂಜೆಯಲ್ಲಿದೆ. ತಮ್ಮ ವಂಶದ ಯಜ್ಞನಾರಾಯಣನ್ ಎಂಬ ಪುಟ್ಟಬಾಲಕನು ಆಧ್ಯಾತ್ಮಿಕಶಕ್ತಿಯನ್ನು ಗಳಿಸಿದ್ದನೆಂದೂ, ಒಮ್ಮೆ ಗೆಳೆಯನೊಬ್ಬನೊಡನೆ ಹೋದವನು ಇದ್ದಕ್ಕಿದ್ದಂತೆ 'ಮಾಯ'ವಾದನೆಂದೂ, ಆ ವಂಶವನ್ನು ಸಂರಕ್ಷಿಸುವುದಾಗಿ ಆಕಾಶವಾಣಿ ನುಡಿದನೆಂದೂ ಆ ಕುಲದವರ ನಂಬಿಕೆಯಾಗಿದೆ. ಕೇವಲ ಆರು ತಲೆಮಾರುಗಳ ಹಿಂದೆ ನಡೆದ ಈ ಘಟನೆ, ಆತನನ್ನು ಕುಲದೈವದಂತೆ ಆರಾಧಿಸುವ ದಟ್ಟ ಸಾಂಸ್ಕೃತಿಕ ಪ್ರಕ್ರಿಯೆಯಾಗಿ ಬೆಳೆದಿದೆ.

ಈ ಸಂದರ್ಭಗಳು, ಆ ಜನರ ಪಾಪಪ್ರಜ್ಞೆಯ ಒತ್ತಡಕ್ಕೆ ಸಾಕ್ಷಿಯಾದಂತೆ, ವ್ಯಕ್ತಿಯನ್ನು ದೈವೀಕರಿಸುವ ಪ್ರವೃತ್ತಿಗೂ ಕನ್ನಡಿಯಂತಿರುವುದು ನಾಚಾರಮ್ಮನ ಪ್ರಸಂಗದ ವಾಸ್ತವಿಕತೆಯನ್ನು ಖಚಿತಪಡಿಸುತ್ತವೆ.

ಇಂಥ ಸಾಂಸ್ಕೃತಿಕ ವಾಸ್ತವಗಳು ನಾಚಾರಮ್ಮನ ಪ್ರಸಂಗವನ್ನು ಐತಿಹಾಸಿಕತೆಯತ್ತ ನೂಕುತ್ತವೆ. ಸಂಕೇತಿಗಳು (ಮಾತ್ರ) ಅಷ್ಟು ದೊಡ್ಡ ಸಂಖ್ಯೆಯಲ್ಲಿ ದೂರದೇಶವೊಂದಕ್ಕೆ ವಲಸೆಹೋದುದನ್ನು ಸಮರ್ಥವಾಗಿ ವಿವರಿಸುವುದೂ, ಇದರಿಂದ ಮಾತ್ರ ಸಾಧ್ಯವಾಗಿದೆ.

0.13 ನಾಚಾರಮ್ಮನ ಇತಿಹಾಸವು ನಿಚ್ಚಳವಾಗಲು, ಐತಿಹ್ಯಕ್ಕೆ ಸಹಜವಾಗಿ ಸೇರುವ ಕೆಲವು ಉತ್ಪ್ರೇಕ್ಷೆಗಳನ್ನು ನಿವಾರಿಸಿಕೊಳ್ಳುವುದು ಅಗತ್ಯವಾಗುತ್ತದೆ.

0.0.1 ಕಥೆಯಲ್ಲಿ ಹೇಳುವಂತೆ - ಜ್ಯೋತಿಷ್ಮತೀ ತೈಲವನ್ನು ಕುಡಿದ ಮೂವರಲ್ಲಿ ಒಬ್ಬನು ಸಾಯುತ್ತಾನೆ, ಒಬ್ಬನು ಹುಚ್ಚನಾಗುತ್ತಾನೆ, ಒಬ್ಬನು ಜ್ಞಾನಿಯಾಗುತ್ತಾನೆ - ಎನ್ನುವುದನ್ನು, 'ಸಾಧಾರಣವಾಗಿ ಮೂವರಲ್ಲೊಬ್ಬರ ಪ್ರಮಾಣದಲ್ಲಿ' ಇಂಥ ಪರಿಣಾಮಗಳಾಗುತ್ತವೆ ಎಂದಷ್ಟೇ ಇಟ್ಟುಕೊಳ್ಳಬಹುದು.

0.0.2 ತೈಲವನ್ನು ಬುದ್ಧಿಪ್ರಚೋದನೆಗಾಗಿ ಬಳಸುತ್ತಿದ್ದುದು ಆಯುರ್ವೇದೀಯ ಸತ್ಯ.[49] ಅದನ್ನು ಕುಡಿದಷ್ಟರಿಂದಲೇ ಯಾರೂ ಜ್ಞಾನಿಗಳಾಗರು.

0.0.3 ಜ್ಞಾನಿಗಳಾಗುವ ಪ್ರಯೋಜನವು ಆಕರ್ಷಕವಾದುದಾದರೂ, ಅದು ಮಾಡುವ ವಿಕೃತ ಪರಿಣಾಮಗಳ ಸಂದರ್ಭವೇ ಹೆಚ್ಚಾದುದರಿಂದಲೇ, ಅದು ಬಳಕೆಯಿಂದ ದೂರವಾಗಿರುವುದು ಸಾಧ್ಯ.

0.0.4 ಪುರುಷಪ್ರಧಾನ ಸಮಾಜದಲ್ಲಿ, ತಮ್ಮನ್ನು ಮೀರಿಸುವ ಹೆಂಗಸಿನ ಬಗೆಗೆ ಇಂಥ ವರ್ತನೆಗಳು ಸಹಜ ಪ್ರತಿಕ್ರಿಯೆಗಳಾಗುತ್ತವೆ.

0.0.5 'ಶಾಪ' ಸುಳ್ಳಾಗಿರಬಹುದು; ಆದರೆ ಅದರ ಮಾನಸಿಕಪರಿಣಾಮವು ಭ್ರಮೆಯನ್ನುಂಟುಮಾಡಬಹುದು. ಶಾಪಪ್ರಸಂಗವೇ ನಡೆಯದಿರಬಹುದು; ಆದರೆ ಪಾಪಪ್ರಜ್ಞೆ ಕಾಡಬಹುದು.

ಚರಿತ್ರೆಗೆ ಒಂಬತ್ತು ಶತಮಾನಗಳ ಮೌಖಿಕ ಪರಂಪರೆಯು ಮುಸುಕಿಸಿದ ಇಂಥ ಗೌಣ ವಿಕೃತಿಗಳನ್ನು ಪರಿಹರಿಸಿಕೊಂಡರೆ ಕರ್ನಾಟಕದ ಸಂಕೇತಿಗಳ ಮಹಾವಲಸೆಗೆ ನಾಚಾರಮ್ಮನ ಪ್ರಸಂಗವು ಸೂಚಿಸುವ ಒಂದು ದುರಂತವೇ ನಿಚ್ಚಳವಾಗುತ್ತದೆ.

ಇ. ವಲಸೆಯ ಮಾರ್ಗ

ಕರ್ನಾಟಕಕ್ಕೆ ಆದ ಮಹಾವಲಸೆಯು ನಿರ್ದಿಷ್ಟ ಗುರಿಹೊಂದಿದುದೂ, ವ್ಯವಸ್ಥಿತವಾದುದೂ ಆಗಿತ್ತೆಂಬುದರ ಹಿನ್ನೆಲೆಯಲ್ಲಿ, ವಲಸೆಯ ಮಾರ್ಗವು ರಾಜಪಥವೇ ಆಗಿತ್ತೆಂಬುದೂ ತಾರ್ಕಿಕವಾದುದು.

1. ಕೊಡಗು-ಮಾರ್ಗ : ಒಂದು ಅಭಿಪ್ರಾಯ : ಮುಸಲ್ಮಾನರ ಹಾವಳಿಯ ಕಾರಣದಿಂದ ವಲಸೆ ಸಂಭವಿಸಿತು ಎಂದು ತಿಳಿದವರಂತೂ, ಅವರು ದಟ್ಟವಾದ ಕಗ್ಗಾಡುಗಳ ಮೂಲಕ ಘಟ್ಟಗಳಮೇಲೆ ಸಾಗಿ ಕೊಡಗಿನಮೂಲಕ ಕರ್ನಾಟಕವನ್ನು ಪ್ರವೇಶಿಸಿದರು ಎಂದೇ

---

[49] ಪೂರ್ವೋಕ್ತ: ಪು.vii ಅಪೆಂಡಿಕ್ಸ್ ಎ

ಊಹಿಸುತ್ತಾರೆ. ಅವರ ಭಾಷೆಯಲ್ಲಿನ ಮಲೆಯಾಳಾಂಶಗಳಿಗೆ, ಮಲೆಯಾಳದೇಶದ ಮೂಲಕ ಹಾದುಬಂದುದೇ ಕಾರಣವೆಂದೂ ಭಾವಿಸುತ್ತಾರೆ. ಸಂಕೇತಿಗಳು ವಲಸೆ ಹೊರಡುವ ವೇಳೆಗೆ ಮಲೆಯಾಳಂಭಾಷೆಯು ಸ್ವತಂತ್ರ ಅಸ್ತಿತ್ವವನ್ನು ಪಡೆದಿರಲಿಲ್ಲ. ಅದಾಗಲೇ ರೂಪುಗೊಳ್ಳುತ್ತಿದ್ದ ಆ ಭಾಷೆಯ ಕುರುಹುಗಳು (ಈಗಿನ) ಮಲೆಯಾಳರಾಜ್ಯದ ಸೆರಗಿನಲ್ಲಿಯೇ ಇದ್ದ ಶೆಂಕೋಟ್ಟೈಭಾಷೆಯಲ್ಲಿ ಸಹಜವಾಗಿಯೇ ಸೇರಿದ್ದವು. ಅವರು ವಲಸೆಹೊರಟಕಾಲವು ನಿರಾತಂಕವಾದುದಾಗಿತ್ತು; ಗುರಿಯು ನಿರ್ದಿಷ್ಟವಾಗಿತ್ತು. ಆದುದರಿಂದ, ಹನ್ನೊಂದನೆಯ ಶತಮಾನದಲ್ಲಿ ಏಕಮೇವ ವಾಣಿಜ್ಯಮಾರ್ಗವಾಗಿದ್ದ[50] ಕಾವೇರೀತೀರವನ್ನನುಸರಿಸಿಯೇ ಸಾವಿರಾರು ಕುಟುಂಬಗಳು ವಲಸೆ ಹೊರಟವು; ಕರ್ನಾಟಕದಲ್ಲಿಯೂ, ಮೈಸೂರುಜಿಲ್ಲೆಯಲ್ಲಿಯೇ ದೊರೆಯಬಹುದಾಗಿದ್ದ ಫಲವತ್ತಾದ ಪ್ರದೇಶಗಳನ್ನು ಬಿಟ್ಟು ದೂರದ ನೀಲಗುಂದದವರೆಗೆ ಪ್ರಯಾಣ ಬೆಳೆಸಿದುವು ಎಂಬುದನ್ನು, ಈ ನಿರ್ದಿಷ್ಟ ಗುರಿಯೇ ವಿವರಿಸುತ್ತದೆ.

ಕೊಡವಸೀರೆ, ಕೊಡವಭಾಷೆಯ ಸಾಮಾನ್ಯಾಂಶಗಳು ಹಾಗೂ ಬೆಟ್ಟದಪುರವು ಒಂದು ಮುಖ್ಯ ಸಂಕೇತಿಕೇಂದ್ರವಾದುದರ ಹಿನ್ನೆಲೆಯಲ್ಲಿಯೂ, ಈ ವಲಸೆಯು ಕೊಡಗಿನ ಮೂಲಕವೇ ನಡೆದುದೆಂದು ಭಾವಿಸುವುದೂ ಇದೆ. 'ಗಂಡೀಸೀರೆ' ಮತ್ತು 'ಕೊಡವ ಸೀರೆ'ಗಳು ಭಿನ್ನಹಿನ್ನೆಲೆಯ ಐತಿಹಾಸಿಕ ಸಂಪ್ರದಾಯಗಳು; ಸಂಕೇತಿಗಳ ಭಾಷೆಯಲ್ಲಿ ಸೇರಿದಂತೆಯೇ, ಕೊಡವಭಾಷೆಯಲ್ಲಿಯೂ ಭೌಗೋಳಿಕ ಸ್ಥಿತಿಯಿಂದಾಗಿ ಮಲೆಯಾಳಾಂಶಗಳು ನೇರವಾಗಿ ಸೇರಿವೆ. ಮೊದಲ ವಲಸೆಗಳು ಆದುದು ನೀಲಗಂದ ಮತ್ತು ಶಾಂತಿಗ್ರಾಮಕ್ಕೆ ಎಂಬುದನ್ನು ಶಾಸನಗಳೂ ಸಮರ್ಥಿಸುತ್ತವೆ. ಒಗ್ಗಟ್ಟಿನಸೂತ್ರವನ್ನೇ ಹಿಡಿದುಹೊರಟ ವಲಸಿಗರು ವಿಭಿನ್ನ ಮಾರ್ಗಗಳಲ್ಲಿ ಕ್ರಮಿಸಿದರು ಎಂಬುದೂ ತರ್ಕಸಮ್ಮತವಲ್ಲ. ಆದುದರಿಂದ ಕೊಡಗಿನಮೂಲಕ ವಲಸೆ ನಡೆಯಿತೆನ್ನಲು ಸಮರ್ಥನೆ ಇರುವುದಿಲ್ಲ.

2. ಕಾವೇರೀ-ಪಥಕ್ಕೆ ಸಮರ್ಥನೆ : ಇತರ ಆಧಾರಗಳೂ ಕಾವೇರೀತೀರದ ಮಾರ್ಗದಲ್ಲಿ ವಲಸೆ ನಡೆದುದನ್ನೇ ಪೋಷಿಸುತ್ತವೆ.

0.1 ತಮಿಳುಸಾಹಿತ್ಯದಲ್ಲಿ ಬಂದ ಕಾವೇರೀಮಹಾತ್ಮೆಯ ವರ್ಣನೆಗಳು ಮತ್ತು ದಕ್ಷಿಣಗಂಗೆ ಎಂದು ಪೂಜಿಸಲ್ಪಡುತ್ತಿದ್ದ ಕಾವೇರಿಯ ಪಾತ್ರ, ತಮಿಳರಿಗೆ ಸುಪರಿಚಿತವಾಗಿದ್ದವು. ಪಾಂಡ್ಯ, ಪಲ್ಲವರ ಆಗಾಗಿನ ಗಡಿಯೂ ಕಾವೇರಿಯೇ ಆಗಿತ್ತು.

0.2 ಅಗಸ್ತ್ಯರು ಭಾಗಮಂಡಲದಿಂದ ಹೊರಟು ತಿರುನೆಲ್‌ವೇಲಿಗೆ ಸಾಗಿದುದು ಕಾವೇರೀಮಾರ್ಗನುಸಾರಿಯಾಗಿಯೇ[51] ಎಂಬುದನ್ನು ಈ ಪಥದಲ್ಲಿನ ಅಗಸ್ತ್ಯಾಶ್ರಮಗಳು ಪೋಷಿಸುತ್ತವೆ. ತಿರುನೆಲ್‌ವೇಲಿ ಜಿಲ್ಲೆಯಲ್ಲಿಯೇ ಅನೇಕ ಅಗಸ್ತ್ಯೇಶ್ವರ ದೇವಾಲಯಗಳಿವೆ. ಅವರ ಕೊನೆಯಆಶ್ರಮವೂ ಆ ಜಿಲ್ಲೆಯ 'ಪೊಡಿಯೂರ್‌ಬೆಟ್ಟ'ದಲ್ಲೇ ಇದೆ.

0.3 ಕಾವೇರಿಯು ಪುಣ್ಯಸ್ನಾನದ ಶ್ರದ್ಧಾಕೇಂದ್ರವಾದುದರಿಂದ ಒಂದು ಸುಪರಿಚಿತಮಾರ್ಗವು ಅದರ ದಡದಲ್ಲಿದ್ದುದು ಸಹಜವಾದುದು. ರಾಮಾನುಜರೂ ಆ ಪ್ರಖ್ಯಾತಪಥದ ಮೂಲಕವೇ ಕರ್ನಾಟಕವನ್ನು ಪ್ರವೇಶಿಸಿದರೆಂಬುದು,[52] ಅವರು ಬಂದಕಾಲವು ಸಂಕೇತಿಗಳ ವಲಸೆಯ ಕಾಲದೊಂದಿಗೇ ಹೊಂದಿಕೊಳ್ಳುವುದರಿಂದಲೂ ಮುಖ್ಯವಾಗುತ್ತದೆ.

0.4 ಇಡೀ ದಕ್ಷಿಣಭಾರತವು ಪರಸ್ಪರ ರಾಜಕೀಯ, ವ್ಯಾವಹಾರಿಕ ಸಂಪರ್ಕಗಳನ್ನು ಹೊಂದಿದ್ದುದು ಇಂಥ ಪಥಗಳ ಮೂಲಕವೇ. ಸೋಸಲೆ ವ್ಯಾಸರಾಯರ ಮಠದ ತಾಮ್ರಪತ್ರ ದತ್ತಿಗಳಲ್ಲಿ ಒಂದು ಮಧುರೆಯ ನಾಯಕನಿಂದ ದತ್ತವಾದುದು ಎಂಬುದನ್ನೂ ಇಲ್ಲಿ ಗಮನಿಸಬಹುದು.

0.5 ಇತರ ವಲಸೆಗಳು ಈ ಪಥದಲ್ಲಿ ಸಾಗಿದ ನಿದರ್ಶನಗಳೂ ಇವೆ.[53]

---

[50] *The Hoysalas - A Medieval Indian royal family,* p.6.

[51] *History of Ancient India,* Tripathi (Rama Shankar), Motilal Banarsidass, 1960, p.438.

[52] *The Hoysala dynasty,* Ed. Sheik Ali B., Prasaranga, University of Mysore, Mysore, 1972, p.306.

[53] ".... ಬೆಳ್ಳಾಳ ಒಕ್ಕಲಿಗರ ಮೂಲಸ್ಥಾನ ಗಂಗರ ರಾಜಧಾನಿಯಾಗಿದ್ದ ತಲಕಾಡು. ಅವರು ಶತಮಾನಗಳ ಹಿಂದೆ ತಮಿಳುನಾಡಿನಿಂದ ಕೊಳ್ಳೇಗಾಲದ ಮಾರ್ಗವಾಗಿ ಮೈಸೂರುರಾಜ್ಯಕ್ಕೆಬಂದು ನೆಲೆಸಿದ ತಮಿಳರೆಂಬ ಐತಿಹ್ಯವಿದೆ..."

ಕನ್ನಡಪ್ರಭ, ಜನನಾಡಿ, ನರಸಿಂಹಯ್ಯ ಕೆ.ಸಿ., ಏಪ್ರಿಲ್ ೨೨, ೧೯೮೮.

0.6 ಹನ್ನೊಂದನೆಯ ಶತಮಾನದಲ್ಲಿ ಈ ಕಾವೇರೀಕಣಿವೆಯ ಮಾರ್ಗವು ರಾಷ್ಟ್ರೀಯ ಪ್ರಾಮುಖ್ಯವನ್ನು ಪಡೆದಿತ್ತೆಂಬ ಡಂಕನ್ ಜೆ ಮತ್ತು ಡೆರೆಟ್ ಎಂ. ಅವರ ನಿರ್ಣಯವು ಗಂಭೀರವಾಗಿ ಪರಿಗಣಿಸಬಹುದಾದುದು.[54]

0.7 ಆ ಮಾರ್ಗವಾಗಿಯೇ ಬಂದ ಸಂಕೇತಿಗಳಲ್ಲಿ ಕೆಲವರು ಹೆಮ್ಮಿಗೆಯಲ್ಲಿ ಶ್ರೀವೈಷ್ಣವರಾಗಿ ಮತಾಂತರಗೊಂಡುದಕ್ಕೆ, ವಿವಾಹವೇಳೆಯ 'ಕೋಡಂಗಿಸಭೆ'ಯು ಪ್ರಬಲ ಸಾಂಸ್ಕೃತಿಕ ಪುರಾವೆಯಾಗಿ ಉಳಿದಿದೆ.[55]

ಆದುದರಿಂದ, ಎಂ.ಕೇಶವಯ್ಯನವರು ದಾಖಲಿಸಿರುವ ಮೌಖಿಕಪರಂಪರೆಗೆ ಸಮರ್ಥನೆ ಇದೆ. ಶೆಂಕೋಟ್ಟೈ → ಮಧುರೈ → ತಿರುಚಿನಾಪಳ್ಳಿ → ಈರೋಡ್ → ಸೇಲಂ → ಶಿವನಸಮುದ್ರ (ನಕ್ಷೆ 1 ಪು.259) - ಇದು ವಲಸೆಗೆ ಇದ್ದ ಒಂದು ಕಾರ್ಯಸಾಧ್ಯ ಮಾರ್ಗ ಎಂಬುದನ್ನು ಒಪ್ಪಬಹುದು.

ಈ. ಸಂಖ್ಯೆ :

1. ದಾಖಲೆಗಳು : ಮಹಾವಲಸೆಯ ಸಂದರ್ಭದಲ್ಲಿ ಕರ್ನಾಟಕಕ್ಕೆ ಬಂದ ಸಂಕೇತಿಗಳ ಸಂಖ್ಯೆಯನ್ನು ಕುರಿತಂತೆ ದೊರೆಯುವ ದಾಖಲೆಗಳು ಸಾಮಾನ್ಯವಾಗಿ ಸಾವಿರಕ್ಕೂ ಹೆಚ್ಚು ಕುಟುಂಬಗಳ ವಲಸೆಯನ್ನೇ ಹೇಳುತ್ತವೆ (ಪಟ್ಟಿ 2 ಪು.286). ಈಗಲೂ ನೇರವಾಗಿ ದೊರೆಯುವ ಮೌಖಿಕಪರಂಪರೆ, ಹೀಗೆ ವಲಸೆಬಂದವರ ಸಂಖ್ಯೆಯನ್ನು ಸಾವಿರದಿಂದ ಸಾವಿರದ ಇನ್ನೂರು ಕುಟುಂಬಗಳವರೆಗೆ ಹೇಳುತ್ತದೆ. ಐನೂರು, ಏಳುನೂರು ಕುಟುಂಬಗಳ ಸಂಖ್ಯೆಯನ್ನು ಬಹು ಅಲ್ಪಪ್ರಮಾಣದ ಪಾಠಗಳು ಹೇಳುತ್ತವೆ. ಇತ್ತೀಚಿನ ಜನಗಣತಿಯ ವರದಿಗಳು ಕಾಲಕಾಲದ ಜನಸಂಖ್ಯಾ ಹೆಚ್ಚಳವನ್ನು ಸೂಚಿಸುತ್ತವೆ (ಪಟ್ಟಿ 3 ಪು.287). ಅದರಂತೆ ಈಗಿನ ಕರ್ನಾಟಕದ ಸಂಕೇತಿಗಳ ಒಟ್ಟು ಜನಸಂಖ್ಯೆ ಸುಮಾರು ನಾಲ್ಕು ಸಾವಿರ ಕುಟುಂಬಗಳದ್ದಾಗಿದೆ.

2. ಸ್ಥೂಲ ಲೆಕ್ಕಾಚಾರ : ಬೀರೂರಿನ ಚಿದಂಬರ ಜೋಯಿಸರು ನಿಖರವಾಗಿ ಮಾಡಿರುವ ವರದಿಯನ್ನು ಬಿಟ್ಟರೆ, ಇಲ್ಲಿ ಕೊಟ್ಟ ಇತರ ವರದಿಗಳು ಬಹು ಸ್ಥೂಲವಾದವು ಎಂಬುದು ಸ್ಪಷ್ಟ. ಅದಕ್ಕೆ ಕಾರಣಗಳು ಹೀಗಿವೆ:

0.1 ಕ್ರಿ.ಶ.೧೮೯೧ರ ಖಾನೇಷುಮಾರಿ ವರದಿಯು ಕೊಡುವ ಸಂಖ್ಯೆಯು, 'ದ್ರಾವಿಡ'ರೆಂದೇ ಬಹುಸಂಖ್ಯಾತರು ದಾಖಲಿಸಿಕೊಂಡಿರುವುದನ್ನು ಸೂಚಿಸುತ್ತದೆ. ಪಟ್ಟಣವಲಸೆಗಳು ನಡೆದಿಲ್ಲದ ಆ ವೇಳೆಯ ಹಳ್ಳಿಗಳ ಜನಸಂಖ್ಯೆ ಹಿರಿಯರ ನೆನಪಿನಲ್ಲಿದ್ದು, ಅದು ಸುಮಾರು ಎರಡು ಸಾವಿರ ಕುಟುಂಬಗಳನ್ನು ಮೀರುತ್ತದೆ.

0.2 ಈ ಶತಮಾನದ ಪ್ರಾರಂಭದವರೆಗೆ ಇದ್ದವು ಬಹುಪಾಲು ಅವಿಭಕ್ತ ಕುಟುಂಗಳು; ಅರ್ಧಶತಮಾನದ ಹಿಂದೆ ನಗರೀಕರಣಕ್ಕೆ ಚಾಲನೆ ದೊರೆಯುತ್ತಿದ್ದುದರಿಂದ ವಿಭಕ್ತ ಕುಟುಂಬಗಳು ಹೆಚ್ಚಿದವು; ಈಗ ದೊರೆಯುವ ಕುಟುಂಬಗಳ ಸಂಖ್ಯೆ ಬಹುಪಾಲು ವಿಭಕ್ತ ಕುಟುಂಬಗಳದ್ದು. ಆದುದರಿಂದಲೂ, ಕಾಲಕಾಲದ ಜನಸಂಖ್ಯೆಯ ಬಗೆಗೆ ನಿಖರತೆ ಸಾಧ್ಯವಿಲ್ಲವಾಗಿದೆ.

0.3 ಬೆಟ್ಟದಪುರ ಮತ್ತು ಕೌಶಿಕ ಸಂಕೇತಿ ಸಂಘಗಳಲ್ಲಿ ದಾಖಲಾಗದೆ, ವಿಶ್ವಾದ್ಯಂತ ಹರಡಿರುವ ಕುಟುಂಬಗಳಿರುವುದರಿಂದ, ನಿಖರ ಅಂಕಿ ಅಂಶಗಳು ದೊರೆಯುತ್ತಿಲ್ಲ.

ಇಷ್ಟು ಮಿತಿಗಳ ನಡುವೆಯೂ, ದೊಡ್ಡಗಾತ್ರದ್ದಲ್ಲದ ಸಂಕೇತಿ ಸಮುದಾಯದ ಗಣತಿ ಸ್ಥೂಲವಾದರೂ, ಅದರ ಫಲಿತಾಂಶವು ನಿಖರವಾದ ಸಂಖ್ಯೆಗಿಂತ ಹೆಚ್ಚು ಭಿನ್ನವಾಗಲು ಸಾಧ್ಯವಿಲ್ಲ. ಈ ಮಿತಿಯಲ್ಲಿಯೇ ಕರ್ನಾಟಕದ ಸಂಕೇತಿ ಸಮುದಾಯದ ಈಗಿನ ಗಾತ್ರ ಸುಮಾರು ನಾಲ್ಕು ಸಾವಿರ (ವಿಭಕ್ತ) ಕುಟುಂಬದ್ದು. (ಕರ್ನಾಟಕದ ಸಂಕೇತಿಗಳ ಜನಸಂಖ್ಯೆ: ಸುಮಾರು ಇಪ್ಪತ್ತಮೂರು ಸಾವಿರ; ಸಂಕೇತಿಗಳ ಒಟ್ಟು ಸಂಖ್ಯೆ ಸುಮಾರು ಇಪ್ಪತ್ತೈದು ಸಾವಿರ).

[54] *The Hoysalas - A Medieval Indian royal family,* p.7

[55] 'ಕೋಡಂಗಿಸಭೆ'ಯ ವಿವರಕ್ಕೆ ನೋಡಿ: *ಶ್ರೀ ನಾಚಾರಮ್ಮನ ಜೀವನ ಚರಿತ್ರೆ* (ಆಕೆಯ ಪ್ರವಾಸ), ಪು.೨೭-೨೮.

3. ಶಾಸನಾಧಾರ : ನೀಲಗುಂದ ತಾಮ್ರಶಾಸನವು, ನೀಲಗುಂದಕ್ಕೆ ಮೂರುನೂರು ಕುಟುಂಬಗಳ ವಲಸೆಯನ್ನು ಖಚಿತಪಡಿಸುತ್ತದೆ. ಅದರ ಸಮಕಾಲದಲ್ಲಿಯೇ, ಶಾಂತಿಗ್ರಾಮ ಮೊದಲಾದ ಕೌಶಿಕಕೇಂದ್ರಿತ ನೆಲೆಗಳಿಗೂ ಮತ್ತಷ್ಟು ಸಂಕೇತಿಗಳು ವಲಸೆಬಂದುದು ಶಾಸನಗಳಿಂದ ಸ್ಪಷ್ಟವಾಗಿದೆ. ಆ ಸಮಯದ ಕೌಶಿಕಕೇಂದ್ರಿತ ಪ್ರಾಥಮಿಕನೆಲೆಗಳ ಸಂಖ್ಯೆ ಮತ್ತು ಹರಹಿನ ಹಿನ್ನೆಲೆಯಲ್ಲಿ, ದೊಡ್ಡಗಾತ್ರದ ವಲಸೆಯೇ ಅಲ್ಲಿಗೂ ನಡೆದಿರುವುದು ಸ್ಪಷ್ಟವಾಗುತ್ತದಾದರೂ, ಸಂಖ್ಯೆಯು ಖಚಿತವಾಗುವುದಿಲ್ಲ.

4. ಇತರ ಸಾಂಸ್ಕೃತಿಕ ಆಧಾರಗಳು : ಇತರ ಸಾಂಸ್ಕೃತಿಕ ಆಧಾರಗಳಿಂದ (ಪಟ್ಟಿ 4,5, ಪು.288-290) ವಲಸೆಯ ಕನಿಷ್ಠ ಕುಟುಂಬಸಂಖ್ಯೆಯ ಗಣನೆಮಾಡುವುದು ಸಾಧ್ಯ:

0.1 ಕರ್ನಾಟಕದ ಸಂಕೇತಿಗಳಲ್ಲಿರುವ ಪ್ರವರಗಳು ಇಪ್ಪತ್ತೊಂದು.

0.2 ಗೋತ್ರಗಳು: ಹನ್ನೊಂದು.

0.3 ಋಗ್ವೇದ:ಆಶ್ವಲಾಯನ; ಯಜುರ್ವೇದ: ಬೋಧಾಯನ, ಆಪಸ್ತಂಬ; ಸಾಮವೇದ: ದ್ರಾಹ್ಯಾಯಣ - ಹೀಗೆ ನಾಲ್ಕು ವಿಭಿನ್ನ ಸೂತ್ರಗಳಿಗೆ ಸೇರಿದವರಿದ್ದಾರೆ.

0.4 ನವವಾದಲ, ದಶಕುಂಡಲ, ಪಂಚನಿತುಂದಿಲ ಮತ್ತು ಎರಡು ಭಾರದ್ವಾಜೀ ಕವಲುಗಳಿವೆ.

0.5 ಕೌಶಿಕ ಸಂಕೇತಿಗಳಲ್ಲಿ:

ದಶಕುಂಡಲ : ಐಚನಹಳ್ಳಿ, ಪಿರಿಯಪಟ್ಟಣ, ಮೊಸಳೆ, ಆಶ್ವಲಾಯನ ಕುಂಡಲ; ಉಳಿದವು ನಶಿಸಿವೆ.

ನವವಾದಲ : ಅಗ್ರಹಾರ ೧, ಅಗ್ರಹಾರ ೨, ಮತ್ತೂರು, ಕೃಷ್ಣಾಪುರ, ತಬ್ಬಲಿವಾದಲ; ಉಳಿದವು ನಶಿಸಿವೆ.

0.6 ಬೆಟ್ಟದಪುರ ಸಂಕೇತಿಗಳಲ್ಲಿ: ಆತ್ರೇಯ-ಆರು, ಸಂಕೃತಿ-ಎರಡು, ಕೌಶಿಕ-ಐದು ಕವಲಗಳು ವಿಶೇಷವಾಗಿವೆ.

0.7 ಭಾರದ್ವಾಜಿಗಳ ಐದು ಕವಲುಗಳಲ್ಲಿ ಪ್ರವರೈಕ್ಯ ಇಲ್ಲದವು ಎರಡೇ ಆದರೂ, ಪ್ರವರೈಕ್ಯ ಇರುವ ಇತರ ಮೂರು ಕವಲುಗಳೂ ಮೂರು ಭಿನ್ನ ಮನೆತನಗಳನ್ನೇ ಸೂಚಿಸುತ್ತವೆ.

ಭಾರದ್ವಾಜಿಗಳಲ್ಲಿ ಪ್ರವರೈಕ್ಯವಿಲ್ಲದುದು ಗಾರ್ಗ್ಯಭಾರದ್ವಾಜ ಗೋತ್ರಕ್ಕೆ. ಉಳಿದ ಕವಲುಗಳೆಂದರೆ ನೇರಳಿಗೆ, ಬರಗೂರು, ಮೊಸಳೆ (ತಬ್ಬಲಿ).

0.8 ಈ ಪ್ರತಿಯೊಂದು ವಿಭಾಗದ ಒಂದಕ್ಕಿಂತ ಹೆಚ್ಚು ಕುಟುಂಬಗಳು ವಲಸೆಬಂದಿರುವುದೂ ಸಾಂಸ್ಕೃತಿಕ ಅಗತ್ಯವಾಗಿದೆ.

0.9 ಒಂದೇ ಕುಲದವರು ಕೌಶಿಕದ ಕೇಶವನನ್ನು ಬಿಟ್ಟು, ಇಲ್ಲವೆ ಅದರ ಜೊತೆಗೆ ಸುಬ್ರಹ್ಮಣ್ಯೇಶ್ವರನನ್ನು ಮನೆದೇವರಾಗಿ ಸ್ವೀಕರಿಸಿರುವ ಅಪವಾದ ಪ್ರಸಂಗಗಳನ್ನು ಬಿಟ್ಟರೆ, ಪ್ರತ್ಯೇಕ ಮನೆದೇವರುಗಳು ಪ್ರತ್ಯೇಕ ಮೂಲಕುಲಗಳನ್ನೇ ಸೂಚಿಸುತ್ತವೆ.

0.10 ಈ ಎಲ್ಲ ಪ್ರವೃತ್ತಿಗಳು ನೀಲಗುಂದ ಮತ್ತು ಕೌಶಿಕಕೇಂದ್ರಗಳೆರಡರಲ್ಲೂ ಸಮಾನಾಂತರವಾಗಿವೆ.

0.11 ಬೆಟ್ಟದಪುರ, ಲಿಂಗದಹಳ್ಳಿ, ಹಿರಿಯಂಗಳ, ಕೌಶಿಕ - ಹೀಗೆ ಆದ ನಾಲ್ಕು ವಿಭಿನ್ನ ಉಪಪಂಗಡಗಳೂ ಪ್ರತ್ಯೇಕ ಅಸ್ತಿತ್ವವನ್ನು ಸಾಧಿಸಲು ಸಾಧ್ಯವಾದುದು ಅವು ಭಿನ್ನವಂಶೀಯರ ಗುಂಪುಗಳಾದುದರಿಂದಲೇ ಎನ್ನುವುದೂ ಒಂದು ಕಾರಣವಾಗುತ್ತದೆ.

ಇಷ್ಟೊಂದು ಸೂಕ್ಷ್ಮ ಭಿನ್ನತೆಯುಳ್ಳ ವೈವಿಧ್ಯಪೂರ್ಣ ಸಂಸ್ಕೃತಿ ಘಟಕಗಳು, ಸಾವಿರ ಕುಟುಂಬಗಳ ಹರಹನ್ನು ಸಹಜವಾಗಿಸುತ್ತವೆ.

ಆದರೂ, ಒಂಬತ್ತು ಶತಮಾನಗಳ ಅವಧಿಯಲ್ಲಿ ಅದು ವೃದ್ಧಿಗೊಳ್ಳಬೇಕಾದ ಪ್ರಮಾಣವು ಪ್ರಸ್ತುತ ಸಂಕೇತಿ ಸಮುದಾಯದ ಅಲ್ಪ ಗಾತ್ರವನ್ನು ಅನುಮೋದಿಸುವುದಿಲ್ಲ ಎಂಬ ಸಮಸ್ಯೆಯು ಹಾಗೆಯೇ ಉಳಿಯುತ್ತದೆ.

5. ವಂಶಕ್ಷಯ ಪ್ರಮಾಣ - ಗಾತ್ರ ಸ್ಥಿರತೆ : ಮೇಲಿನ ಸಮಸ್ಯೆಯನ್ನು ಪರಿಹರಿಸಿಕೊಳ್ಳಲು ಸಮುದಾಯದಲ್ಲಿನ ವಂಶವೃದ್ಧಿ ಮತ್ತು ವಂಶಕ್ಷಯದ ಅವಲೋಕನವು ಅಗತ್ಯವಾಗುತ್ತದೆ.

ವಂಶವೃಕ್ಷಗಳಲ್ಲಿ ಆಧಾರ : ಸಮುದಾಯದ ಎಲ್ಲ ಉಪಪಂಗಡಗಳ ಎಲ್ಲ ಮುಖ್ಯ ನೆಲೆಗಳಿಂದ ಸಂಗ್ರಹಿಸಿದ ಮುನ್ನೂರು ವಂಶವೃಕ್ಷಗಳು ಪ್ರಕಟಿಸುವ ಕೆಲವು ಸರ್ವಸಾಧಾರಣ ಲಕ್ಷಣಗಳು ಇವು :

0.1 ಎಲ್ಲ ಮಕ್ಕಳೂ ಸಾಯುವಾಗ ಗುಂಡಪ್ಪ, ಗುಂಡಮ್ಮ, ತಿಪ್ಪಯ್ಯ, ತಿಪ್ಪಮ್ಮ ಎಂಬ ಹೆಸರುಗಳನ್ನಿಟ್ಟು, ಮಕ್ಕಳು ಬದುಕಿ ಉಳಿಯಲೆಂದು ಬಯಸಿದ ಹೇರಳ ಪ್ರಸಂಗಗಳು.

0.2 ಅನೇಕ ಗಂಡುಮಕ್ಕಳು ಹುಟ್ಟಿದಾಗಲೂ, ಒಂದೇ ಮಗು ಉಳಿದುದು.

0.3 ಪರಂಪರೆಯಾಗಿ ಒಂದೇ ಗಂಡುಸಂತಾನದ ವಂಶಗಳು.

0.4 ಅನೇಕ ಗಂಡುಮಕ್ಕಳು ಬದುಕಿ ಉಳಿದಾಗಲೂ ಒಬ್ಬನೇ ವಿವಾಹವಾಗಿ, ಉಳಿದವರು ಸಂನ್ಯಾಸ ಪಡೆದ ಪರಂಪರೆ.

0.5 ಕೇವಲ ಹೆಣ್ಣುಮಕ್ಕಳು ಇಲ್ಲವೆ ಬಹುಪಾಲು ಹೆಣ್ಣುಮಕ್ಕಳೇ ಹುಟ್ಟಿದುದು.

0.6 ಅವಿಭಕ್ತ ಕುಟುಂಬವು ತನ್ನ ಮುನ್ನೂರೈವತ್ತು ವರ್ಷಗಳ ಇತಿಹಾಸದಲ್ಲಿ ಕೇವಲ ಇಪ್ಪತ್ತು ವಿಭಕ್ತ ಕುಟುಂಬಗಳಾಗಿ ಬೆಳೆದಿರುವ ಪ್ರಾತಿನಿಧಿಕ ಅಂಶ.

0.7 'ದತ್ತು' ಪ್ರಸಂಗವು ಸಾಮಾನ್ಯವಾಗಿ ಎಲ್ಲ ವಂಶವೃಕ್ಷಗಳಲ್ಲಿಯೂ ಇರುವುದು.

0.8 ಮಕ್ಕಳಿಲ್ಲದೆ ದತ್ತು ಪಡೆಯುವುದು; ಕೇವಲ ಹೆಣ್ಣುಸಂತಾನದಿಂದಾಗಿ ದತ್ತು ಪಡೆದಿರುವುದು; ಹುಟ್ಟಿದ ಮಕ್ಕಳೆಲ್ಲಾ ಸತ್ತುದರಿಂದ ದತ್ತುಸ್ವೀಕಾರ.

0.9 ಪರಂಪರಾಗತವಾಗಿ 'ದತ್ತು' ಸಂತಾನದಿಂದಲೇ ಮುಂದುವರಿದ ವಂಶಗಳು.

0.10 ಆಸ್ತಿ ಇಲ್ಲದಾಗಲೋ, ಮನೆತನ ಸರಿಇಲ್ಲದುದರಿಂದಲೋ ದತ್ತುಸಿಗದೆ ಕ್ಷಯವಾದ ವಂಶಗಳು.

0.11 ಕುಟುಂಬನಷ್ಟ (Extinction); ವಂಶನಷ್ಟ; ಗೋತ್ರನಷ್ಟ. - ಇವೆಲ್ಲದರಿಂದಾಗಿ ಉಳಿದುಕೊಂಡ ಮುರುಕಲು ವಂಶಗಳು.

ಹೀಗೆ ವಂಶನಾಶವಾದಾಗ 'ಕರ್ಮ'ಗಳನ್ನು ಮಾಡಲು ಹಕ್ಕುದಾರರಾದ ಜ್ಞಾತಿಗಳನ್ನು ಹುಡುಕುವುದು ಜಿಜ್ಞಾಸೆಯ ಪ್ರಸಂಗಗಳಲ್ಲೊಂದು. ಹಾಗೆ ಸಿಕ್ಕ ಹಕ್ಕುದಾರರು ಕರ್ಮಗಳನ್ನು ಮಾಡಿದರೂ ಕ್ಷಯಗೊಂಡ ವಂಶದ ಸ್ವತ್ತು ತಮಗೆ ಬೇಡವೆಂದು ವರ್ಜಿಸುವುದು ರೂಢಿ.

0.12 ವಿಧುರರ ಬಹುವಿವಾಹಗಳು; ಬಾಲವಿಧವೆಯರು; ಪ್ರತಿ ಮನೆಯ ಬಹುವಿಧವೆಯರು ... ಇತ್ಯಾದಿ;

ಹೆಂಗಸರು ಹೆರಿಗೆಗೆಂದು ತವರಿಗೆ ಹೊರಟಾಗ ನಗವನ್ನು ಬಿಚ್ಚಿಕೊಂಡು ಕಳುಹಿಸುತ್ತಿದ್ದುದರ ಹಿಂದೆ ಸಾವಿನ ಸಂಭಾವ್ಯತೆಯ ಭೀತಿ (ಅರಿವು) ಕೆಲಸ ಮಾಡುತ್ತಿದ್ದುದನ್ನು ಅಲ್ಲಗಳೆಯಲಾಗದು. ಪುರುಷರು ಎರಡು-ನಾಲ್ಕು ವಿವಾಹವಾಗುತ್ತಿದ್ದುದು ಸಾಮಾನ್ಯವಾಗಿದ್ದ ದಿನಗಳು ಈ ಶತಮಾನದ ಮಧ್ಯಭಾಗದ ಹೊತ್ತಿಗೆ ಮರೆಯಾದಂತಿದೆ.

6. ವಂಶಕ್ಷಯದ ಕಾರಣಗಳು : ಈ ಗಾಢವಾದ ವಂಶಕ್ಷಯಕ್ಕೆ ಅನೇಕ ಕಾರಣಗಳಿವೆ:

0.1 ಜನಸಂಖ್ಯಾಶಾಸ್ತ್ರದ ದೃಷ್ಟಿಯಿಂದ ಮಾಡಬಹುದಾದ ಅಧ್ಯಯನಕ್ಕೆ, ಪರಿಮಿತ ಗೋತ್ರಗಳನ್ನೂ, ಕುಟುಂಬಗಳನ್ನೂ ಹೊಂದಿದ

ಲಿಂಗದಹಳ್ಳಿಯ (ಏಳುನೂರು ಜನರ ಗಾತ್ರದ) ಪುಟ್ಟಸಮುದಾಯದ ವೈವಾಹಿಕಸಂಬಂಧಗಳ ರಚನೆಯು ಒಳ್ಳೆಯ ಮೂಲವಸ್ತುವನ್ನೊದಗಿಸುತ್ತದೆ. ಇರುವ ಏಳೆಂಟು ಗೋತ್ರಗಳಲ್ಲಿ ಒಂದು, ಎರಡು, ಮೂರು, ನಾಲ್ಕು, ಐದು ಸಂಖ್ಯೆಯ (ವಿಭಕ್ತ) ಕುಟುಂಬಗಳಿವೆ ಎಂಬುದು, ಅನ್ಯಗೋತ್ರವಿವಾಹವೇ ಆಗಬೇಕಾದ ಸಂದರ್ಭದಲ್ಲಿ ಹೇಗೆ ಪರಿಮಿತಿಯನ್ನೊಡ್ಡುತ್ತದೆ ಎಂಬುದು ಗಮನಾರ್ಹವಾದದ್ದು. ವಿನಾಶದ ಅಂಚಿನಲ್ಲಿರುವುದನ್ನೂ ಈ ಗೋತ್ರಗಳು ತಮ್ಮ ಮಿತಸಂಖ್ಯೆಯ ಮೂಲಕ ಪ್ರಕಟಿಸಿಕೊಳ್ಳುತ್ತವೆ. ಬೀರೂರಿನ ಚಿದಂಬರ ಜೋಯಿಸರು ಆಗಾಗ ದಾಖಲಿಸಿರುವ ಲಿಂಗದಹಳ್ಳಿ ಸಂಕೇತಿಗಳ ಜನಗಣತಿಯನ್ನು ಇಲ್ಲಿ ಗಮನಿಸಬಹುದು. (ಪಟ್ಟಿ 6 ಪು.291)

ಈ ಪಟ್ಟಿಗಳಲ್ಲಿ ೧೨ ವರ್ಷಗಳ ಅವಧಿಯಲ್ಲಿ ಒಂದು ಕುಟುಂಬ ನಷ್ಟವಾಗಿರುವುದನ್ನು ಕಾಣಬಹುದು. ನೈಧ್ರುವಕಾಶ್ಯಪಗೋತ್ರವೇ ನಷ್ಟವಾಗಿದೆ. ೪೦ ಕುಟುಂಬಗಳ ಜನಸಂಖ್ಯೆ ೧೨ ವರ್ಷಗಳ ಅವಧಿಯಲ್ಲಿ ಸುಮಾರು ೧೦೦ ಹೆಚ್ಚಿದೆ.

ಜೋಯಿಸರ ಜನಗಣತಿಯಲ್ಲಿ, ಪ್ರತಿಕುಟುಂಬದಲ್ಲಿ ಆದ ಜನಸಂಖ್ಯೆಯ ಹೆಚ್ಚಳವು ಗೋತ್ರವಾರು ದಾಖಲಾಗಿದೆ. ಸಾಮಾನ್ಯವಾಗಿ ಪ್ರತಿಕುಟುಂಬವೂ ಸದಸ್ಯರ ಸಂಖ್ಯೆಯನ್ನು ಹೆಚ್ಚಿಸಿಕೊಂಡಿದ್ದರೂ, ಕುಟುಂಬವೇ ನಾಶವಾದ ನಿದರ್ಶನವೂ ಇಲ್ಲಿದೆ. ಕೌಶಿಕಗೋತ್ರದ ಜನಸಂಖ್ಯೆ ಕ್ರಿ.ಶ.೧೯೬೬ರಲ್ಲಿ ೭೫ ಇದ್ದುದು ಕ್ರಿ.ಶ.೧೯೯೦ರ ವೇಳೆಗೆ ೬೧ಕ್ಕೆ ಇಳಿದಿದೆ.

ವೈವಾಹಿಕ ಸಾಧ್ಯತೆಗಳ ದೃಷ್ಟಿಯಿಂದ, ಕೇವಲ ಒಂದು ಸಾವಿರ ಜನಸಂಖ್ಯಾ ಮಿತಿಯಲ್ಲಿರುವ ಮತ್ತೂರಿನ ಸ್ಥಿತಿ ಇದಕ್ಕಿಂತ ಭಿನ್ನವಾದುದಲ್ಲ. ಅಲ್ಲಿ ಭಾರದ್ವಾಜಿಗಳ ೧೦, ಲೋಹಿತಕೌಶಿಕರ ೬೦, ಕೌಶಿಕರ ೨, ಕೌಂಡಿನ್ಯರ ೪, ಲೋಹಿತರ ೧, ವತ್ಸರ ೩, ನಿತುಂದಿಲರ ೨೫, ವಾಧುಲಸ ೧, ವಾಧುಲಸ ೨, ವಾಧುಲಸ ೩ (ಒಟ್ಟು ವಾಧುಲಸ: ೮) ಕುಟುಂಬಗಳಿವೆ. ಸಂಕೃತಿ, ನೈಧ್ರುವಕಾಶ್ಯಪಗಳು ನಶಿಸಿವೆ. ಲೋಹಿತಕೌಶಿಕ (೬೦ ಕುಟುಂಬಗಳು), ನಿತುಂದಿಲ (೨೫ ಕುಟುಂಬಗಳು), ಭಾರದ್ವಾಜಿ (೧೮ ಕುಟುಂಬಗಳು)ಗಳ ದೊಡ್ಡ ಗುಂಪುಗಳನ್ನು ಬಿಟ್ಟರೆ, ಉಳಿದ ಗೋತ್ರಗಳೆಲ್ಲವೂ ಸೊರಗಿದಸಂಖ್ಯೆಯ ಕುಟುಂಬಗಳುಳ್ಳವು. ಲೋಹಿತರ ದೊಡ್ಡದೊಂದು ಶಾಖೆಯೇ ಇಲ್ಲಿ ನಷ್ಟವಾಗಿದೆ.

ಈ ವೈವಾಹಿಕ ಸಾಧ್ಯತೆಗಳ ಮಿತಿಯಿಂದಲಾಗಿಯೇ, ಲಿಂಗದಹಳ್ಳಿ ಹಾಗೂ ಮತ್ತೂರಿನಲ್ಲಿ ಮಾವನಮಗಳು, ಅಕ್ಕನ ಮಗಳು ಇತ್ಯಾದಿ ನಿಷಿದ್ಧ ಸಂಬಂಧಗಳಿಗೆ ಮುಕ್ತ ಅವಕಾಶವಾಗಿದೆ. ಸಂಬಂಧಗಳಲ್ಲಿಯೇ ಸಂಬಂಧಗಳು ಬೆಳೆಯುವ ಅನಿವಾರ್ಯವು ವಂಶಕ್ಷಯದ ಪ್ರಮಾಣವನ್ನು ಹೆಚ್ಚಿಸಿದೆ.

ತೌಲನಿಕವಾಗಿ ಬೆಟ್ಟದಪುರ ಮತ್ತು ಅದಕ್ಕಿಂತಲೂ ಕೌಶಿಕ ಸಂಕೇತಿಗಳ ಗುಂಪು ಸುಸ್ಥಿತಿಯಲ್ಲಿರುವಂತೆ ಕಂಡರೂ, ಅವೂ ಕ್ರಮವಾಗಿ ಐದು, ಹದಿನೈದು ಸಾವಿರ ಜನರ ಪುಟ್ಟ ಗುಂಪುಗಳೇ. ವೈವಾಹಿಕ ಸಾಧ್ಯತೆಗಳ ಮಿತಿಯಿಂದ ಅವೂ ಮುಕ್ತವಾಗಿಲ್ಲವೆಂಬುದು ಬೆಟ್ಟದಪುರಸಂಕೇತಿಗಳ ಶಠಮರ್ಷಣ (೩ ಕುಟುಂಬಗಳು), ಕಾಶ್ಯಪ (೨ ಕುಟುಂಬಗಳು), ಕೌಂಡಿನ್ಯ (೫ ಕುಟುಂಬಗಳು) - ಗೋತ್ರಮಿತಿ; ಹಾಗೂ ಕೌಶಿಕಸಂಕೇತಿಗಳಲ್ಲಾದ ಶಠಮರ್ಷಣ, ನೈಧ್ರುವಕಾಶ್ಯಪ, ಸಂಕೃತಿ ಗೋತ್ರಗಳ ನಷ್ಟ - ಇವುಗಳಿಂದ ಖಚಿತವಾಗುತ್ತದೆ. ಕೌಶಿಕ (೫ ಕುಟುಂಬಗಳು), ಹರಿತಸ (೧೩ ಕುಟುಂಬಗಳು), ಗರ್ಗ (೧೨ ಕುಟುಂಬಗಳು) - ಈ ಚಿತ್ರವು ಕೌಶಿಕಸಂಕೇತಿ ಗುಂಪಿನ ವಂಶಕ್ಷಯಸ್ಥಿತಿಯು ಉಳಿದವುಗಳಿಗಿಂತ ಭಿನ್ನವಾಗಿಲ್ಲ ಎಂಬುದನ್ನೇ ತೋರಿಸುತ್ತದೆ.

0.2 ಸಂಕೇತಿಗಳು ಕರ್ನಾಟಕಕ್ಕೆ ವಲಸೆಬಂದ ಪ್ರಾರಂಭದಲ್ಲಿಯೇ ಹೆಮ್ಮಿಗೆ, ರಾಮನಾಥಪುರ, ಕಣೆಯಾರ್, ಗೊರೂರು, ಶಾಂತಿಗ್ರಾಮಗಳಲ್ಲಾದ ಮತಾಂತರ ಪ್ರಸಂಗಗಳಿಂದ ಆದ ಕುಟುಂಬ ನಷ್ಟವು ದೊಡ್ಡ ಪ್ರಮಾಣದ್ದು. ರಾಮಾನುಜರ ಭಕ್ತಿ, ಪ್ರಪತ್ತಿಮಾರ್ಗವು ಸರಳವಾಗಿದ್ದುದರಿಂದಲೂ, ಸಮಾಜದಲ್ಲಿ ತೆರೆದ ಮನಸ್ಸು ಇದ್ದುದರಿಂದಲೂ, ರಾಜಾಶ್ರಯವು ದೊರೆತುದರಿಂದಲೂ ಅನೇಕ ಮತಾಂತರಗಳು ಶ್ರೀವೈಷ್ಣವ ಮತಕ್ಕಾದುವು. ಅವುಗಳಲ್ಲಿ ಮುಖ್ಯವಾದುವು ಹೆಮ್ಮಿಗೆ ಮತ್ತು

ಶಾಂತಿಗ್ರಾಮಗಳಲ್ಲಾದ ಮತಾಂತರಗಳು.[56] ಈ ಶತಮಾನದ ಅರುವತ್ತರ ದಶಕದಿಂದ ತೊಡಗಿ ಆಗುತ್ತಿರುವ ಅನ್ಯಜಾತಿ ವಿವಾಹಗಳು ಪ್ರಸ್ತುತ ಜನಸಂಖ್ಯೆಯ ಗಾತ್ರದ ಮೇಲೆ ಮಾಡುತ್ತಿರುವ ಪರಿಣಾಮವು ಗೌಣವಾದರೂ, ಹನ್ನೆರಡನೆಯ ಶತಮಾನದ ಆದಿಭಾಗದಲ್ಲಾದ ಈ ಮತಾಂತರಗಳು ಮುಂಬರುವ ದಿನಗಳ ಜನಸಂಪತ್ತಿನ ಮೂಲಆಕರದ ನಷ್ಟದ ದೃಷ್ಟಿಯಿಂದ ಅತಿ ಮುಖ್ಯವಾದವು.

0.3 ಹಾಸನ, ಮೈಸೂರು, ಚಿಕ್ಕಮಗಳೂರು, ಶಿವಮೊಗ್ಗ ಜಿಲ್ಲೆಗಳ ಅರೆಮಲೆನಾಡು ಪ್ರದೇಶಗಳ ಆಯ್ಕೆ ವ್ಯವಸಾಯದ ದೃಷ್ಟಿಯಿಂದ ಜಾಣ್ಮೆಯದಾದರೂ, ಅದು ಆರೋಗ್ಯದ ದೃಷ್ಟಿಯಿಂದ ಮಾರಕ ಪರಿಣಾಮಗಳನ್ನುಂಟುಮಾಡಿದೆ. ಮಲೆನಾಡಿನ ದಟ್ಟ ಅರಣ್ಯಗಳ ಅಪಾಯಕಾರೀ ಸೋಂಕುಗಳು, ಪರೋಪಜೀವಿಗಳು, ಮಲಿನಗೊಂಡ ನೀರು, ಗಿಡಮರ ಪ್ರಾಣಿಪಕ್ಷಿಗಳ ಕೊಳೆಯುವಿಕೆಯಿಂದಾದ ಸೋಂಕು ಮತ್ತು ದಾರ್ಢ್ಯತೆಯ (ವೈಟಾಲಿಟಿ) ಲೋಪ, ನೈರ್ಮಲ್ಯಹೀನತೆ, ವರ್ಷವಿಡೀ ಕಾಡುವ ಮಲೇರಿಯಾ, ನ್ಯುಮೋನಿಯಾ, ಲೈಂಗಿಕಾಸಕ್ತಿಯಲ್ಲಿ ನ್ಯೂನತೆ, ಅಕ್ಕಿಯೇ ಪ್ರಧಾನ ಆಹಾರವಾದುದರಿಂದ ಪೌಷ್ಟಿಕಾಂಶದ ನ್ಯೂನತೆ, ವೈದ್ಯಕೀಯ ಉಪಚಾರದ ಅಭಾವ; ಹೆರಿಗೆ, ಬಾಣಂತಿತನ ಕಾಲದ ಅವೈಜ್ಞಾನಿಕ ಉಪಚಾರಗಳು .. . . ಇತ್ಯಾದಿಗಳು ತೀವ್ರ ವಂಶಕ್ಷಯಕ್ಕೆ ಕಾರಣವಾಗಿವೆ.[57]

ಅದರಲ್ಲಿ, ಮಲೆನಾಡಿನ ಆರೋಗ್ಯಸ್ಥಿತಿಗಳ ವಿವರವಾದ ಅಧ್ಯಯನವು ದೊರಕಿಸಿದ ಕೆಲವು ತೀರ್ಮಾನಗಳು ಹೀಗಿವೆ:

೦.೦.೧ ಮಲೆನಾಡು ಜಿಲ್ಲೆಗಳ ವಾಸ್ತವವಾದ ಸಹಜ ಜನಸಂಖ್ಯೆ ಕುಸಿಯುತ್ತಿದೆ.

೦.೦.೨ ಮರಣಸಂಖ್ಯೆ ಜನನಸಂಖ್ಯೆಗಿಂತ ಹೆಚ್ಚಾದುದು ಈ ಜನಸಂಖ್ಯಾ ಕುಸಿತಕ್ಕೆ ಕಾರಣವಾಗಿದೆ.

೦.೦.೩ ಇತರ ಬಯಲುಸೀಮೆಯ ಜಿಲ್ಲೆಗಳಿಗೆ, ಮತ್ತು ಇಡೀ ರಾಜ್ಯದ ಸರಾಸರಿಗೆ ಹೋಲಿಸಿದರೆ ಮಲೆನಾಡು ಜಿಲ್ಲೆಗಳಲ್ಲಿ ಮರಣ ಸಂಖ್ಯೆ ಅತಿ ಹೆಚ್ಚು ಮತ್ತು ಜನನ ಸಂಖ್ಯೆ ಅತಿ ಕಡಿಮೆಯಾಗಿದೆ.

೦.೦.೪ ಮಲೇರಿಯ ಮತ್ತು ಜಲಮೂಲ ರೋಗಗಳೇ ಈ ಅಸಾಧಾರಣ ಮರಣ ಪ್ರಮಾಣಕ್ಕೆ ಕಾರಣವಾಗಿವೆ.[58]

0.4 ಈ ಶತಮಾನದ ಆದಿಭಾಗದಲ್ಲಿ ಅನೇಕ ವಂಶಗಳನ್ನೂ ಗ್ರಾಮಗಳನ್ನೂ ಇಡಿಯಾಗಿ ನಾಶಮಾಡಿದ ಪ್ಲೇಗ್, ಇನ್‌ಫ್ಲೂಯಂಜಾ ರೋಗಗಳ ಅನಾಹುತಗಳು ಪ್ರತ್ಯೇಕ ಉಲ್ಲೇಖಕ್ಕೆ ಅರ್ಹವಾಗಿವೆ. ಈ ಸಂಬಂಧದಲ್ಲಿ ಎರಡಾದರೂ ನಿದರ್ಶನಗಳನ್ನು ಉಲ್ಲೇಖಿಸಿದರೆ ಅದರ ತೀವ್ರತೆಯ ಅರಿವಾಗಬಹುದು:

0.0.1 ಕಟ್ಟೆಪುರ (ಹಾಸನ ಜಿಲ್ಲೆ) ಎಂಬ ಗ್ರಾಮದಲ್ಲಿದ್ದ ಮುವತ್ತು ಒಕ್ಕಲು ಇದೇ ಸಂದರ್ಭದಲ್ಲಿ ನಾಶವಾದುದು, ಇಡೀಗ್ರಾಮವು ನಾಶವಾದ ನಿದರ್ಶನಗಳಲ್ಲೊಂದು. 'ಹೆಣಹೊರಲು ಸಾಕಷ್ಟು ಜನರಿಲ್ಲದೆ ಗಾಡಿಯಲ್ಲಿ ಹೇರಿದ ಪ್ರಸಂಗಗಳೂ ಇವೆ. ಆ ಸುಮಾರು ಇಪ್ಪತ್ತು ವರ್ಷಗಳಲ್ಲಿ ಯಾರ ಮನೆಯಲ್ಲೂ ತೊಟ್ಟಿಲು ಕಟ್ಟಲಿಲ್ಲ'. ಜನಸಂಖ್ಯೆ ತೀವ್ರವಾಗಿ ಇಳಿದ ಕಾಲ ಇದು.

---

56 *ಶ್ರೀನಿವಾಸ ಅಯ್ಯಂಗಾರ್,* ೯೦, ವೈದಿಕ, ರಾಮನಾಥಪುರ.
ಡಾ.ನರಸಿಂಹ ಅಯ್ಯಂಗಾರ್, ೭೦, ವೈದ್ಯ, ಬಸವಪಟ್ಟಣ.
ವಿದ್ವಾನ್ ಜಿ.ಕೆ.ನರಸಿಂಹಾಚಾರ್, ೭೪, ಅಧ್ಯಾಪಕ (ನಿವೃತ್ತ), ಗೊರೂರು.
ವಿದ್ವಾನ್ ಬಿ.ಎಸ್.ಸುಬ್ಬರಾಯಶಾಸ್ತ್ರಿ, ೭೪, ಅಧ್ಯಾಪಕ (ನಿವೃತ್ತ), ಬಸವಪಟ್ಟಣ.

57 ಇದರ ವಿವರವಾದ ಮಾಹಿತಿಗಾಗಿ ನೋಡಿ: *Mysore Gazetteer,* Vol.1, pp.450-471.

58 ಅದೇ. ಪು.೪೫೧.

0.0.2 ಪ್ಲೇಗ್ ರೋಗ ಬರುವ ಮೊದಲು ಕೇವಲ ಮತ್ತೂರಿನಲ್ಲಿ ಆರುನೂರು ಜನರಿದ್ದುದು ಹನ್ನೆರಡು ವರ್ಷಗಳನಂತರ ಮತ್ತೂರು - ಹೊಸಹಳ್ಳಿಗಳೆರಡರಿಂದ ಕೇವಲ ನೂರೈವತ್ತಕ್ಕೆ ಇಳಿಯಿತು. 'ಆ ಹನ್ನೆರಡು ವರ್ಷಗಳಲ್ಲಿ ಯಾವ ಮನೆಯಲ್ಲೂ ತೊಟ್ಟಿಲು ಕಟ್ಟಲಿಲ್ಲ. ಪ್ರತಿಮನೆಯಲ್ಲಿ ಗಂಡು ಇಲ್ಲವೆ ಹೆಣ್ಣು ನಷ್ಟವಾಗಿತ್ತು'. ಹತ್ತೊಂಬತ್ತನೆಯ ಶತಮಾನದ ಮಧ್ಯಭಾಗ ಮತ್ತು ಇಪ್ಪತ್ತನೆಯ ಶತಮಾನದ ಮಧ್ಯಭಾಗದ ಜನಸಂಖ್ಯೆಯ ದೊಡ್ಡ ಅಂತರವು, ಈ ರೋಗಗಳಿಂದಲೇ ಆದ ವಂಶಕ್ಷಯದ ಪರಿಣಾಮವಾಗಿದೆ.

ವೈದ್ಯಕೀಯ ಸೌಲಭ್ಯಗಳನ್ನನುಸರಿಸಿ ಸಮುದಾಯದ ಜನಸಂಖ್ಯೆಯಲ್ಲಿ ಕಾಲಕಾಲಕ್ಕೆ ಆದ ಏರುಪೇರಿನ ಪಟ್ಟಿ ಇಲ್ಲಿದೆ:

ಕ್ರಮ ಸಂಖ್ಯೆ	ಕಾಲ	ಸಂತಾನ ಸಂಖ್ಯೆ	ಉಳಿಕೆ	ಜನನ-ಮರಣ ಪ್ರಮಾಣ	ಕಾರಣ
೧.	ಕ್ರಿ.ಶ.೧೯೨೦ಕ್ಕೆ ಹಿಂದೆ	೧೦-೧೫	೧,೨,೩ ಅಥವಾ ಎಲ್ಲವೂ ಸತ್ತಿವೆ.	ಜನನ ಹೆಚ್ಚು;ಮರಣ ಹೆಚ್ಚು. ಇವೆರಡರ ಪ್ರಮಾಣ ಸಮೀಪವಾದುದು	ವೈದ್ಯಕೀಯ ಕೊರತೆ
೨.	ಕ್ರಿ.ಶ.೧೯೨೦-೧೯೫೦	೮-೧೫	ಬಹುಪಾಲು ಉಳಿದಿವೆ.	ಜನನ ಹೆಚ್ಚು;ಮರಣ ಕಡಮೆ. ಜನಸಂಖ್ಯೆಯ ಹೆಚ್ಚಳ	ವೈದ್ಯಕೀಯ ಸೌಲಭ್ಯ
೩.	ಕ್ರಿ.ಶ.೧೯೫೦ರ ಅನಂತರ	೩, ೨, ೧	ಬಹುಪಾಲು ಉಳಿದಿವೆ.	ಜನನ ಕಡಮೆ;ಮರಣ ಕಡಮೆ. ಇವುಗಳ ಪ್ರಮಾಣ ಸಮೀಪವಾಗಿದೆ.	ವೈದ್ಯಕೀಯ ಸೌಲಭ್ಯ, ಕುಟುಂಬ ಯೋಜನೆ, ಆರ್ಥಿಕ ಒತ್ತಡ.

ವೈದ್ಯಕೀಯ ಸೌಲಭ್ಯವನ್ನನುಸರಿಸಿದ ಜನಸಂಖ್ಯೆಯ ಈ ಸ್ವರೂಪವು ಸಾರ್ವತ್ರಿಕವಾದುದೂ ಹೌದು.[59] ಸಂಕೇತಿಗಳ ವಂಶಕ್ಷಯದ ಲಕ್ಷಣಗಳನ್ನು ಇದೂ ಖಚಿತಗೊಳಿಸುತ್ತದೆ.

ಈ ಕಾರಣಗಳು ಸಂಕೇತಿಗಳಲ್ಲಾದ ವಂಶಕ್ಷಯವನ್ನು ಸಮರ್ಥವಾಗಿ ವಿವರಿಸುತ್ತವೆ. ಒಂಬತ್ತು ಶತಮಾನಗಳ ಅವಧಿಯಲ್ಲಿ ಕಾಣುವ ಜನಸಂಖ್ಯಾಸ್ಥಿರತೆಗೆ ಇದು ಆಧಾರವನ್ನೊದಗಿಸುತ್ತದೆ.

---

59 ನೋಡಿ:

ಅ) *ಕರ್ನಾಟಕ: ಕನ್ನಡ ವಿಷಯ ವಿಶ್ವಕೋಶ* (ಕರ್ನಾಟಕ ಹಾಗೂ ಭಾರತ ಜನಸಂಖ್ಯೆಯ ಬೆಳವಣಿಗೆ:೧೯೦೧-೧೯೭೧), ಕೋಷ್ಟಕ-೧, ೧೯೭೯, ಪು.೬೭೦.
(ಭಾರತದಲ್ಲಿ ಜನನ ಮತ್ತು ಮರಣದರಗಳು ೧೯೦೧-೧೯೭೧- ಸಾವಿರ ಜನಕ್ಕೆ)
ಕೋಷ್ಟಕ-೨, ಅದೇ. ಪು.೬೭೦.

ಆ) *The Coorgs and their origins,* Cariappa M.P & Cariappa (Ponnamma), Geetha Book House, Mysore, 1981, p.134.

7. ಇತರ ಆಧಾರಗಳು : ಸಂಕೇತಿಗಳ ಸಾವಿರಕ್ಕೂ ಮೀರಿದ ಕುಟುಂಬಗಳ ಮಹಾವಲಸೆಯನ್ನು ಪೋಷಿಸುವ ಇತರ ಆಧಾರಗಳೂ ಇವೆ:

0.1 ಜನಗಣತಿಯಲ್ಲಿ ಒಳವಲಸೆ : ಕ್ರಿ.ಶ.೧೯೨೧ರ ಜನಗಣತಿಯ ವರದಿಯು, ಆಗ ಮೈಸೂರು ರಾಜ್ಯದಲ್ಲಿದ್ದ ಮೂರು ಲಕ್ಷದ ಒಂಬತ್ತುಸಾವಿರದ ಎಂಟುನೂರೈವತ್ತು ಒಳವಲಸಿಗರಲ್ಲಿ ಎರಡು ಲಕ್ಷದ ಅರುವತ್ತೇಳು ಸಾವಿರದ ಇನ್ನೂರ ಎಪ್ಪತ್ತೆಂಟು ಮಂದಿ ತಮಿಳುನಾಡಿನಿಂದ ಬಂದವರೆಂಬುದನ್ನು ತಿಳಿಸುತ್ತದೆ. ಮುಂಬಯಿ, ಕೊಡಗು, ಮದರಾಸು ಪ್ರಾಂತಗಳಿಂದಲೇ ಬಂದ ಎರಡು ಲಕ್ಷದ ತೊಂಬತ್ತೇಳು ಸಾವಿರ ಮಂದಿಯಲ್ಲಿ, ಆ ರಾಜ್ಯಗಳ ಗಡಿಜಿಲ್ಲೆಗಳಿಂದಲೇ ಬಂದವರು ಎರಡು ಲಕ್ಷದ ಎಂಟುಸಾವಿರ ಜನ. ಒಟ್ಟು ಒಳವಲಸಿಗರ ಮೂರನೇ ಒಂದು ಭಾಗಕ್ಕಿಂತ ಹೆಚ್ಚಿನವರು ಬಂದುದು ತಮಿಳುನಾಡು ಮತ್ತು ಮುಂಬಯಿ ಪ್ರದೇಶಗಳ ಇತರ ಜಿಲ್ಲೆಗಳಿಂದ. ಇಷ್ಟು ಅಗಾಧ ಪ್ರಮಾಣದ ವಲಸೆಗಳು ಮದರಾಸು ಪ್ರಾಂತದಿಂದ ನಡೆಯುತ್ತಿದ್ದುದರ ಹಿನ್ನೆಲೆಯಲ್ಲಿ ಕೂಡ, ಸಂಕೇತಿಗಳ ವಲಸೆಯ ಗಾತ್ರವು ಅತಿಶಯವಾದುದೆನಿಸುವುದಿಲ್ಲ. ಈ ಸಮುದಾಯದ ಅಪಾರ ವಂಶಕ್ಷಯ ಮತ್ತು ಜನನ-ಮರಣ ಪ್ರಮಾಣದರಗಳ ಬಹುತೇಕ ಸಾಮೀಪ್ಯದ ಹಿನ್ನೆಲೆಯಲ್ಲಿ, ಸಾವಿರಕ್ಕೂ ಹೆಚ್ಚು ಕುಟುಂಬಗಳ ವಲಸೆಯು ಸಾಧಾರವಾದುದಾಗುತ್ತದೆ.

0.2 ಕೇರಳ ಮತ್ತು ತಮಿಳುನಾಡಿನಲ್ಲಿನ ಜನಸಂಖ್ಯೆ : ಕೇರಳ ಮತ್ತು ತಮಿಳುನಾಡಿನ ಜನಗಣತಿಯಲ್ಲಿಯೂ ಅಲ್ಲಿನ ಸಂಕೇತಿಗಳ ನಿಖರ ಜನಸಂಖ್ಯೆಯು ತಿಳಿಯುವುದಿಲ್ಲ. ಆದರೂ, ಪುರೋಹಿತರ ಮೌಖಿಕಗಣತಿಯಂತೆ, ಈ ಶತಮಾನದ ಆರಂಭದಲ್ಲಿ ಸುಮಾರು ಒಂದುಸಾವಿರದ ಐನೂರು ಕುಟುಂಬಗಳಿದ್ದವು. ಅದರ ವಿವರವೂ ಗಮನಾರ್ಹವಾದುದು :

ಅರಿವಿಕೆರ-೧೦೦, ಆವರಾಂಚೆರಿ-೧೦೦, ಶೆಂಕೋಟ್ಟೈ-೩೦೦ (ಅಯ್‌ಕುಡಿ, ಶಾಂಬವರ್‌ವಡಹರೈ, ಕೃಷ್ಣಾಪುರಂ, ಎಲತ್ತೂರ್, ಪುಲಿಯೂರ್ ಸೇರಿ), ಕಾರಡೈಕುರುಚಿ-೧೫, ಶುಚೀಂದ್ರಂ-೧೦೦, ಕನ್ಯಾಕುಮಾರಿ-೫೦, ಎರಚ್ಚಕೊಳಂ-೨೦, ನಾಗರಕೋಯಿಲ್-೩೦ ಕರಿಮಾಣಿಕ್ಯಪುರಂ-೧೨ ಇತ್ಯಾದಿ. ನಗರೀಕರಣದ ಪೂರ್ವಸ್ಥಿತಿಯ ಚಿತ್ರ ಇದಾದುದರಿಂದ, ಅದು ಸಮಗ್ರವಾದುದೂ ಹೌದು. ಆದರೆ, ಈಗ, ಈ ಕ್ಷೇತ್ರದಲ್ಲಿ ಆಸಕ್ತರಾದವರು ನಡೆಸಿರುವ ಖಾಸಗಿ ಗಣತಿಗಳಿಂದ, ದಕ್ಷಿಣದ ಸಂಕೇತಿಗಳ ಗಾತ್ರ ಸುಮಾರು ಇನ್ನೂರೈವತ್ತು ಕುಟುಂಬಗಳದ್ದು ಎಂದು ತಿಳಿದುಬರುತ್ತದೆ. ದಕ್ಷಿಣದಲ್ಲಿರುವುದೂ ಈಗ ಪುಟ್ಟ ಗುಂಪಾದುದರಿಂದ ಇಂಥ ಎಣಿಕೆ ಸಾಧ್ಯ. ನಾನಾ ಕಾರಣಗಳಿಂದ ಆಗುತ್ತಿರುವ ಅನ್ಯಪಂಗಡ ವಿವಾಹಗಳು ಇತ್ತೀಚಿನ ದಶಕಗಳ ವಿದ್ಯಮಾನವಾದುದರಿಂದ, ಈ ವಂಶಕ್ಷಯಕ್ಕೆ ಅದು ಕಾರಣವಲ್ಲ. ದೇಶದ ಜನಸಂಖ್ಯಾ ಇಳಿಕೆಯಮೇಲೆ ಪರಿಣಾಮಬೀರಿದ ಸರ್ವಸಾಮಾನ್ಯ ಕಾರಣಗಳೊಂದಿಗೆ, ಪುಟ್ಟಸಮುದಾಯದ ವೈವಾಹಿಕ ಸಾಧ್ಯತೆಗಳ ಮಿತಿಯು ದೊಡ್ಡ ಪ್ರಮಾಣದಲ್ಲಿ ಕೆಲಸಮಾಡಿದೆ ಎಂಬುದಕ್ಕೆ ಪ್ರತ್ಯಕ್ಷ ಸಾಕ್ಷಿಗಳಿವೆ. ಉದಾಹರಣೆಗೆ ವಾಧುಲಸ, ಆತ್ರೇಯ, ಗಾರ್ಗ್ಯ, ಹಾರೀತ ಮೊದಲಾದ ಗೋತ್ರಗಳು ನಷ್ಟವಾಗಿವೆ. ಅಂಗವೈಕಲ್ಯ ಮತ್ತು ಮನೋವೈಕಲ್ಯದ ನಿದರ್ಶನಗಳು ಎಲ್ಲೆಡೆಯ ಪುಟ್ಟ ಉಪಪಂಗಡಗಳ ಲಕ್ಷಣ. ಈಗಲೂ 'ದಕ್ಷಿಣ'ದಲ್ಲಿ ಅಕ್ಕನ ಮಗಳು, ಸೋದರಮಾವನ ಮಗಳು, ವಿವಾಹಕ್ಕೆ ನಿಷಿದ್ಧರು. ವಿವಾಹ ಸಾಧ್ಯತೆಯ ಇತರ ಮಿತಿಗಳಿಂದಲೂ ಅದು ತಪ್ಪಿಸಿಕೊಂಡಿಲ್ಲ. ಕರ್ನಾಟಕದಲ್ಲಿ ಹೆಚ್ಚಿನ ವಂಶಕ್ಷಯಕ್ಕೆ ವಿವಿಧ ಕಾರಣಗಳಿಂದಾಗಿ ತಮ್ಮನ್ನು ಒಡ್ಡಿಕೊಂಡು ಬಂದ ಸಂಕೇತಿಗಳ ಈಗಿನ ಸಂಖ್ಯೆಯು, ದಕ್ಷಿಣದ ಸಂಕೇತಿಗಳ ಸಂಖ್ಯೆಯ ಹದಿನೈದುಪಟ್ಟು ಹೆಚ್ಚಾಗಿರುವುದು, ನಾಚಾರಮ್ಮನೊಂದಿಗೆ ಕರ್ನಾಟಕಕ್ಕೆ ಹೊರಟವರ ಸಂಖ್ಯೆ ಅಲ್ಲಿಯೇ ಉಳಿದವರ ಸಂಖ್ಯೆಗಿಂತಲೂ ಗಣನೀಯವಾಗಿ ದೊಡ್ಡದೆಂಬುದನ್ನೇ ಖಚಿತಪಡಿಸುತ್ತದೆ.

ಆದುದರಿಂದ, ಕರ್ನಾಟಕಕ್ಕೆ ಬಂದ ವಲಸಿಗರ ಸಂಖ್ಯೆ ಸಾವಿರ ಒಕ್ಕಲಿಗಿಂತಲೂ ಹೆಚ್ಚಿನದು ಎಂಬುದು ತರ್ಕಸಮ್ಮತವಾಗುತ್ತದೆ. ಈಗಿನ ಸಂಕೇತಿಗಳ ಒಟ್ಟು ಜನಸಂಖ್ಯೆ : ಕರ್ನಾಟಕ-ಸುಮಾರು ಇಪ್ಪತ್ತಮೂರು ಸಾವಿರ; ದಕ್ಷಿಣ-ಸುಮಾರು ಎರಡುಸಾವಿರ; ಒಟ್ಟು ಇಪ್ಪತ್ತೈದುಸಾವಿರ ಎಂಬುದು, ಯಾವುದೇ ಅತಿಪುಟ್ಟಸಮುದಾಯವೂ ಒಂಬತ್ತು ಶತಮಾನಗಳ ದೀರ್ಘ ಅವಧಿಯಲ್ಲಿ ಆರೋಗ್ಯಕರವಾಗಿ ವೃದ್ಧಿಸಬಹುದಾದ ಸಂಖ್ಯೆಯಲ್ಲ ಎಂಬುದನ್ನೂ ಸ್ಪಷ್ಟಪಡಿಸುತ್ತದೆ.

ಈವರೆಗಿನ ಅವಲೋಕನದಿಂದ ತಿಳಿದುಬರುವುದೆಂದರೆ - ಕಾಲಕಾಲಕ್ಕೆ ಕ್ರಮವಾಗಿ ಗಂಗಾ, ನರ್ಮದಾ, ಗೋದಾವರೀ ನದಿಗಳ ತೀರದಲ್ಲಿ ನೆಲೆಸಿದ್ದು, ಆದಿಶಂಕರರ ಸಮೀಪಕಾಲದಲ್ಲಿ ತಮಿಳುನಾಡಿಗೆ ಬಂದು 'ಶೆಂಕೋಟ್ಟೈ' ಪ್ರದೇಶದಲ್ಲಿ ನೆಲೆಸಿದ ಸ್ಮಾರ್ತಬ್ರಾಹ್ಮಣರ ಒಂದು ಪುಟ್ಟಸಮುದಾಯವು ಸ್ಥಳನಾಮವನ್ನಾಧರಿಸಿ 'ಸಂಕೇತಿ ' ಎಂಬ ಹೆಸರು ಪಡೆಯಿತು. ಶೆಂಕೋಟ್ಟೈ ಪ್ರದೇಶದಿಂದ ನಾಚಾರಮ್ಮನ ಶಾಪಪ್ರಸಂಗವನ್ನನುಸರಿಸಿ ಹನ್ನೊಂದನೆಯ ಶತಮಾನದ ಕೊನೆಯ ಭಾಗದಲ್ಲಿ ಕಾವೇರೀಪಥವನ್ನನುಸರಿಸಿ ಆದ ಮಹಾವಲಸೆ ಮತ್ತು ಅದನ್ನನುಸರಿಸಿದ ಇತರ ತರಂಗಿತ ವಲಸೆಗಳಿಂದಾಗಿ ಈ ಸಮುದಾಯವು ವಿಶಾಲಹರಹಿನ ವಿಭಿನ್ನ ಪ್ರದೇಶಗಳಿಗೆ ಚದುರಿ ಸ್ಥಾನಿಕ ಉಪಪಂಗಡಗಳಾಗಿ ಒಡೆದು, ಪರಸ್ಪರ ಸಂಪರ್ಕವನ್ನೂ ಕಳೆದುಕೊಂಡಿತು. ಎಲ್ಲೆಡೆಯ ಸಂಕೇತಿಗಳ ಅತಿಪುಟ್ಟ ಜಾತಿಗುಂಪುಗಳ ಸೀಮಿತ ಮತ್ತು ಪ್ರತಿಕೂಲ ವಿವಾಹಸಾಧ್ಯತೆಗಳು ಮತ್ತಿತರ ಕಾರಣಗಳಿಂದಾಗಿ, ಅವರ ಜನಸಂಖ್ಯೆಯು ಬಹುತೇಕ ಸ್ಥಗಿತಗೊಂಡಿತು; ಕರ್ನಾಟಕಕ್ಕೆ ಬಂದ ಸಾವಿರಕ್ಕೂ ಹೆಚ್ಚು ಕುಟುಂಬಗಳ (ಸಂಕೇತಿ ಸಮುದಾಯದ ದೊಡ್ಡಭಾಗದ) ಕಥೆಯೂ ಇದೇ ಆಯಿತು. - ಈ ವಿವರಗಳು, ಸಂಕೇತಿ ಸಮುದಾಯದ ಐತಿಹಾಸಿಕ ಹಿನ್ನೆಲೆಯನ್ನೊದಗಿಸುವುದರೊಂದಿಗೆ, ತಮ್ಮಷ್ಟಕ್ಕೇ, ಸಮುದಾಯದ ಮನೋಧರ್ಮಕ್ಕೂ ಕನ್ನಡಿ ಹಿಡಿಯುತ್ತವೆ.

ಅಧ್ಯಾಯ : ಮೂರು

ಸಂಕೇತಿ ನೆಲೆಗಳು

ಸಂಕೇತಿಗಳ ವಲಸೆಯ ಲಭ್ಯ ಚರಿತ್ರೆ ಸುದೀರ್ಘವಾದುದು ಮತ್ತು ನಿರಂತರವಾದುದು. ಉತ್ತರದಿಂದ ದಕ್ಷಿಣಭಾರತಕ್ಕೆ ಆದ ವಲಸೆಯಲ್ಲಿ ಅವರ ವಿಶಿಷ್ಟ ಪಥವನ್ನು ಗುರುತಿಸಬಹುದಾದರೂ, ಆ ವಲಸೆಯೇ ಸಾರ್ವತ್ರಿಕ ಲಕ್ಷಣದ್ದು. ನಾಚಾರಮ್ಮನ ಪ್ರಸಂಗವನ್ನನುಸರಿಸಿ ಆದ ಐತಿಹಾಸಿಕ ವಲಸೆಯು ಸಂಕೇತಿಗಳಿಗೇ ವಿಶಿಷ್ಟವಾದುದು. ಆದರೆ ಅದು ಕೊನೆಯದಾಗಲಿಲ್ಲ; ಹಲವು ಶತಮಾನಗಳ ಕಾಲ ತರಂಗಿತವಲಸೆ, ಮರುವಲಸೆಗಳಾಗಿ ಮುಂದುವರಿಯಿತು. ಈ ಪರಿಚ್ಛೇದದಲ್ಲಿ ಈ ತರಂಗಿತ ವಲಸೆಗಳ ಬಗೆಗೆ ವಿವೇಚಿಸಿದೆ. ಅದಕ್ಕೆ ಹೊಂದಿಕೊಂಡಂತೆಯೇ ಸಂಕೇತಿಗಳ ನೆಲೆಗಳ ವೈಶಿಷ್ಟ್ಯವೂ ಪ್ರಕಟವಾಗಿದೆ. ವಿಭಿನ್ನ ನೆಲೆಗಳಲ್ಲಿ ಪ್ರಧಾನಹಂತಗಳಲ್ಲಿ ಹರಡಿಕೊಂಡ ಕಾಲಘಟ್ಟಗಳನ್ನು ಗುರುತಿಸುವುದೂ ಇಲ್ಲಿನ ಉದ್ದೇಶವಾಗಿದೆ. ಈಗಾಗಲೇ ಒದಗಿಸಿರುವ ಸಂಕೇತಿಗಳ ಹಿನ್ನೆಲೆಯೊಂದಿಗೆ ಇಲ್ಲಿನ ವಿವರಗಳೂ ಈ ಸಮುದಾಯದ ಮನೋಭಾವವನ್ನೂ ಸ್ಥಿತಿಗತಿಗಳನ್ನೂ ಅರ್ಥಮಾಡಿಕೊಳ್ಳಲು ನೆರವಾಗುತ್ತವೆ.

೧. ಸಂಕೇತಿಗಳ ಐತಿಹಾಸಿಕ ಮಹಾವಲಸೆಯನ್ನು ಅನುಸರಿಸಿ ನಡೆದ ಮರುವಲಸೆಗಳು : ಪ್ರವೃತ್ತಿ

ಕರ್ನಾಟಕದಲ್ಲಿ ಮೂಲತಃ ನೀಲಗುಂದ ಮತ್ತು ಕೌಶಿಕವನ್ನು ಕೇಂದ್ರವಾಗಿ ಇಟ್ಟುಕೊಂಡು ಕೆಲವೇ ಹಳ್ಳಿಗಳಲ್ಲಿ ನೆಲೆನಿಂತ ಸಂಕೇತಿಗಳು ಮುಂದಿನ ಕೆಲವು ಶತಮಾನಗಳಲ್ಲಿ ಶಿವಮೊಗ್ಗ ಜಿಲ್ಲೆಯ ಬಸವಾನಿಯಿಂದ ಹಿಡಿದು ಮೈಸೂರು ನಗರದ ಸಮೀಪದ ಪಾಲಹಳ್ಳಿಯವರೆಗಿನ ವಿಸ್ತಾರ ಪ್ರದೇಶದ ನೂರಾರು ಹಳ್ಳಿಗಳಿಗೆ ಹರಡಿಕೊಂಡರು (ಪಟ್ಟಿ 7 ಪು.292-303 ಮತ್ತು ನಕ್ಷೆ 5 ಪು.263-272). ಅದರ ಹಿಂದಿನ ಪ್ರೇರಣೆಗಳಲ್ಲಿ ಒಂದು ರಾಜಾಶ್ರಯ. ಯಾವುದೇ ಸಮುದಾಯವು ವಲಸೆಹೊರಡಲು ಕಾರಣಗಳೇನೇ ಇದ್ದರೂ, ದೂರದ ನಾಡೊಂದರಿಂದ ವಲಸೆಬಂದು ಒಂದುಕಡೆ ನೆಲೆನಿಲ್ಲುವಾಗ ಅವರ ಬಂಡವಾಳ ಮತ್ತು ಸಂಪಾದನೆ 'ಶೂನ್ಯ'ವಾಗಿರುತ್ತದೆ. 'ದಿಕ್ಕೆಟ್ಟ' ಸ್ಥಿತಿಯಿಂದ ನೆಲೆಗಟ್ಟನ್ನು ಕಾಣಬೇಕಾಗುತ್ತದೆ. ತಮ್ಮ ಅಸ್ತಿತ್ವ ಸ್ಥಾಪನೆಗೆ ಎಂತೆಂಥ ದಾರುಣ ಪರಿಸ್ಥಿತಿಗಳನ್ನು ಎದುರಿಸಬೇಕಾಗುತ್ತದೆ ಎಂಬುದನ್ನು ವರ್ಣಿಸಲಸಾಧ್ಯ. ಸಂಕೇತಿಸಮುದಾಯದ ಕಥೆಯೂ ಇದರಿಂದ ಬೇರೆಯಲ್ಲ ಎಂಬುದು ಅಧ್ಯಯನದಿಂದ ತಿಳಿದುಬರುವ ಸಂಗತಿಯಾಗಿದೆ.

ಹೊಯ್ಸಳ ಸಾಮ್ರಾಜ್ಯ, ವಿಜಯನಗರ ಮಹಾಸಾಮ್ರಾಜ್ಯ ಮತ್ತು ಮೈಸೂರು ಒಡೆಯರ ಪ್ರಧಾನ ಆಶ್ರಯದಂತೆಯೇ, ಅನೇಕ ಮಾಂಡಲಿಕರೂ, ಪಾಳೆಯಗಾರರೂ, ತುಂಡು ಪಾಳೆಯಪಟ್ಟುಗಳೂ ಸಂಕೇತಿಗಳಿಗೆ ಆಶ್ರಯವಿತ್ತಿರುವುದು ಅವರ ವಲಸೆಗಳ ಚರಿತ್ರೆಯೊಂದಿಗೆ ಹೊಂದಿಕೊಂಡ ಅಂಶ. ರಾಜವಂಶಗಳೇ ಅಲ್ಲದೆ ಊರ ಪಟೇಲರು, ಗೌಡರು, ಮಹಾಜನಗಳು ಮೊದಲಾದ ಗ್ರಾಮಮುಖ್ಯರು ಕೂಡ ಈ ಔದಾರ್ಯವನ್ನು ಮೆರೆದಿರುವುದೂ ಇಲ್ಲಿ ವ್ಯಕ್ತವಾಗುತ್ತದೆ. ಸತ್ಪಾತ್ರತೆಯೊಂದಿಗೆ ಹೊಂದಿಕೊಂಡು ಪ್ರಕಟವಾದ ಔದಾರ್ಯವೇ ಸಂಕೇತಿಗಳ ವಲಸೆಯ ಸಾಂಕೇತಿಕತೆಯೂ ಹೌದು. ಇದಕ್ಕೆ ಸಂಬಂಧಿಸಿದಂತೆ ನೆನಪಿಡಬೇಕಾದ ಅಂಶವೆಂದರೆ ಕೊಂಗಾಳ್ವರು, ಚೆಂಗಾಳ್ವರು, ಹೊಳೇನರಸೀಪುರದ ನಾಯಕರು, ಐಗೂರು ನಾಯಕರು, ಇಕ್ಕೇರಿ ಅರಸರು, ಬಸವಪಟ್ಟಣ (ಶಿವಮೊಗ್ಗ)



20 ದಳವಾಯಿ ರಾಮೈಯ್ಯ (ಮರಣ: ಕ್ರಿ.ಶ.1756)

ಪಾಳೆಯಗಾರರು ಇವರುಗಳ ಆಳ್ವಿಕೆಯಲ್ಲಿಯೂ ಸಂಕೇತಿಗಳು ಆಶ್ರಯ ಪಡೆದಿದ್ದುದು. ಹದಿಮೂರನೆಯ ಶತಮಾನದ ಅಂತ್ಯದವರೆಗೆ ವಂಶಪಾರಂಪರಿಕವಾದ ಬಹುತೇಕ ಸ್ವತಂತ್ರ ಸಾಮಂತ ಮನೆತನಗಳಿದ್ದವು. ಹದಿನಾಲ್ಕನೆಯ ಶತಮಾನದ ಆದಿಭಾಗದಲ್ಲಿ ಸಾಮ್ರಾಟನಿಗೆ ಸೈನ್ಯಸಹಾಯ ಒದಗಿಸಲು ಬದ್ಧವಾದ ಪಾಳೆಪಟ್ಟುಗಳು ಬಂದವು. ಹದಿನೈದು-ಹದಿನಾರನೆಯ ಶತಮಾನದಲ್ಲಿ ಪೊಗದಿಸಲ್ಲಿಸುತ್ತಾ ಸೇನೆಯ ನೆರವು ನೀಡಲು ಸನ್ನದ್ಧರಾಗಿರುತ್ತಿದ್ದ ಪಾಳೆಯಗಾರರು ಬಂದರು. 'ನಾಯಕ' ಅಂಕಿತದ ಇವರು ತಮ್ಮ ನಾಡಿನ ಮೇಲೆ ಸಂಪೂರ್ಣ ಹತೋಟಿ ಹೊಂದಿರುತ್ತಿದ್ದರು. ಹದಿನೇಳನೆಯ ಶತಮಾನದ ಮಧ್ಯದ ಹೊತ್ತಿಗೆ ಇವರೆಲ್ಲರೂ ಸ್ವತಂತ್ರರಾದರು. ಇಂಥ ಆಳ್ವಿಕೆಗಳ ಉದ್ದಕ್ಕೂ ಸಂಕೇತಿಗಳ ವಿದ್ಯೆ, ಅನುಷ್ಠಾನಗಳಿಂದ ಪ್ರಭಾವಿತರಾಗಿ ದತ್ತಿಗಳನ್ನು ಕೊಟ್ಟ ಪ್ರಸಂಗಗಳು ಅವರ ವಂಶಚರಿತ್ರೆಗಳಲ್ಲಿ ಕಾಣುತ್ತವೆ.

ದಕ್ಷಿಣದ ಸಂಕೇತಿಗಳಿಗೆ ತಿರುವಾಂಕೂರು ಅರಸರಿಂದ ದತ್ತಿಗಳು ಬಂದ ನೇರನಿದರ್ಶನಗಳಿವೆ. ಅರಿವಿಕೆರ, ಆವರಾಂಚೆರಿ, ಕರಿಮಾಣಿಕ್ಯಪುರಂ, ಆಶ್ರಾಮಂ, ಮಹಾದಾನಪುರಂ - ಹೀಗೆ ಅವುಗಳ ಪಟ್ಟಿ ಬೆಳೆಯುತ್ತದೆ. ಉದಾ. ಅರಿವಿಕೆರ, ಆವರಾಂಚೆರಿ ದಳವಾಯಿ ರಾಮೈಯ್ಯನ (ಚಿತ್ರ 20) ಕಾರಣದಿಂದ ದೊರಕಿದವು. ಮಹಾರಾಜರ ಮೈಮೇಲೆ ಕಾಣಿಸಿಕೊಂಡ ಕಪ್ಪುಚುಕ್ಕೆಗಳನ್ನು ತಮ್ಮ ಅನುಷ್ಠಾನದ ಪ್ರಭಾವದಿಂದ ಪರಿಹರಿಸಿಕೊಟ್ಟದ್ದರಿಂದ ದೊರೆತುದು ಕರಿಮಾಣಿಕ್ಯಪುರಂ. ಪಾಂಡ್ಯರಾಜ್ಯದ 'ಗ್ರಾಮ'ಗಳಲ್ಲಿಯೂ ಅವರು ಚದುರಿದ್ದರು.

ಎಲ್ಲೆಡೆಯ ಮರುವಲಸೆಗಳ ಮೂಲಭೂತ ಪ್ರೇರಣೆಯು ಜೀವನಾಧಾರವೇ ಆದರೂ, ಕರ್ನಾಟಕ ಮತ್ತು 'ದಕ್ಷಿಣ'ದ ಸಂಕೇತಿಗಳ ತರಂಗಿತ ನಿರಂತರ ಮರುವಲಸೆಗಳ ಸ್ವರೂಪವು ಅವರವರ ವಿಶಿಷ್ಟ, ಭಿನ್ನಸ್ಥಿತಿಗತಿಗಳಿಂದಾಗಿ ಒಂದೇ ಆಗಿರಲು ಸಾಧ್ಯವಿಲ್ಲ. ಎಲ್ಲೆಡೆಯ ಸಂಕೇತಿಗಳ ತರಂಗಿತ ಮರುವಲಸೆಗಳ ಲಕ್ಷಣ, ಪ್ರೇರಣೆ ಮತ್ತು ಪ್ರವೃತ್ತಿಗಳನ್ನು ಇಲ್ಲಿ ಅವಲೋಕಿಸಬಹುದು:

ಅ. ಕರ್ನಾಟಕದಲ್ಲಿ ಸಂಕೇತಿಗಳ ಮರುವಲಸೆಗಳು :

ಪ್ರಾರಂಭದಲ್ಲಿ ಸಂಕೇತಿಗಳು 'ಸರ್ವಮಾನ್ಯ'ಗಳು ದೊರೆತ ಸಂದರ್ಭಗಳಲ್ಲಿ, ದಿವಾನರಾಗಿಯೋ ದಂಡಾಧಿಕಾರಿಗಳಾಗಿಯೋ ನಿಯುಕ್ತರಾದಾಗ, ಇಲ್ಲವೆ ಹೊಸದೊಂದು ವ್ಯವಸಾಯಯೋಗ್ಯ ಸ್ಥಳವನ್ನು ಅನ್ವೇಷಿಸಿ ಸಿದ್ಧಗೊಳಿಸಿದಾಗ ವಿವಿಧ ಎಡೆಗಳಿಗೆ ಚದುರಿ ನೆಲೆನಿಂತರು. ಅನಂತರ, ಆ ಮರುವಲಸೆಗಳನ್ನು ಅನುಸರಿಸಿ ಬಂದ ಹಲವಾರು ವಲಸೆಗಳು ವಿಭಿನ್ನ ನೆಲೆಗಟ್ಟಿನಲ್ಲಿ ಆದವು. ಕರ್ನಾಟಕದ ಸಂಕೇತಿಗಳ ಈ ತರಂಗಿತ ಮರುವಲಸೆಗಳು ಆಂತರಿಕ ಸ್ವರೂಪದವು,ಕೌಟುಂಬಿಕ ಲಕ್ಷಣದವು ಎಂಬುದರಿಂದಾಗಿ ಅವುಗಳ ಸ್ವರೂಪವು ಭಿನ್ನವಾಗಿದೆ.

ಮುನ್ನೂರು ವಂಶವೃಕ್ಷಗಳ ಅಧ್ಯಯನದ ಫಲಿತಗಳನ್ನು ಇಲ್ಲಿ ಪಟ್ಟಿಮಾಡಿದೆ:

1. ಸಾಂಸ್ಕೃತಿಕ ಕಾರಣಗಳು: ಮರುವಲಸೆಯ ಕಾರಣವು 'ಸಂಪನ್ಮೂಲದ ದೃಷ್ಟಿಯಿಂದ ಜನಸಂಖ್ಯೆಯ ಒತ್ತಡ' ಎಂಬುದರಷ್ಟೇ, 'ಅನುಷ್ಠಾನಕ್ಕೆ' ನಿರಂತರ ಅಡ್ಡಿ ಉಂಟುಮಾಡುವಷ್ಟು ಜನಸಂದಣಿ ಎಂಬುದೂ ಮುಖ್ಯವಾದುದು. ಸಗೋತ್ರದವರ ಸಂಖ್ಯೆ ಹೆಚ್ಚಿದಾಗ ಆಶೌಚಗಳು ಅಧಿಕವಾಗಿ ನಿತ್ಯನೈಮಿತ್ತಿಕ ಕರ್ಮಗಳ ಅನುಷ್ಠಾನಕ್ಕೆ ಅಡ್ಡಿಯಾಗುತ್ತದೆ ಎಂಬುದನ್ನು ಇಲ್ಲಿ ನೆನೆಯಬಹುದು.

ಇಂಥ ಸಂದರ್ಭಗಳ ಸಾಮಾನ್ಯ ಪ್ರವೃತ್ತಿ ಎಂದರೆ, ಮೊದಲು ಒಬ್ಬರು ಇಲ್ಲವೆ ಅಣ್ಣತಮ್ಮಂದಿರಿಬ್ಬರು ಹೊಸನೆಲೆಯಲ್ಲಿ ಸ್ಥಾಪನೆಗೊಳ್ಳುವುದು; ಅನಂತರ ಅಗತ್ಯವಿದ್ದವರನ್ನು ಕರೆಸಿಕೊಳ್ಳುವುದು. ಸಹಬಾಳ್ವೆ, ಸಾಮಾಜಿಕ ಸುಭದ್ರತೆಯ ಅಗತ್ಯವನ್ನು ಪೂರೈಸುವಷ್ಟೇ ಸಾಂಸ್ಕೃತಿಕ ಅಗತ್ಯವೂ ಈ 'ಕರೆಸಿಕೊಳ್ಳುವಿಕೆ'ಯ ಮುಖ್ಯ ಪ್ರೇರಣೆಯಾಗುತ್ತದೆ.

ಈ ಸಂಬಂಧದ ಕೆಲವು ಸನ್ನಿವೇಶಗಳು:

0.1 ನಿಮಂತ್ರಣಕ್ಕೆ ಕನಿಷ್ಠ ಪಕ್ಷ ಭಿನ್ನಗೋತ್ರದ ಎರಡು ಅಥವಾ ಮೂರು ಕುಟುಂಬಗಳೇ ಬೇಕಾಗಿದ್ದವು. ಇತರ ಬ್ರಾಹ್ಮಣರು ಸಮೀಪದಲ್ಲಿರುತ್ತಿದ್ದರೂ ಸಾಂಸ್ಕೃತಿಕ ಆತ್ಮೀಯತೆಯಿಂದಾಗಿ ತಮ್ಮವರನ್ನೇ ಕರೆಸಿಕೊಂಡರು. ಆದುದರಿಂದ ಪ್ರತಿನೆಲೆಯೂ ವಿಭಿನ್ನಗೋತ್ರಜ್ಞರಿಂದ ಕೂಡಿತು. ಸನಿಹದ ನೆಲೆಗಳಲ್ಲಿ ತಮ್ಮವರಿದ್ದಾಗ ಮಾತ್ರ ಏಕಗೋತ್ರಗ್ರಾಮಗಳಿರುವುದು ಕಾರ್ಯಸಾಧ್ಯವಾಯಿತು. ಹಲವು ವಕ್ತೃಗಳು ಹೇಳುವಂತೆ "ತಮ್ಮವರೇ ಶ್ರಾದ್ಧಕ್ಕೆ ಆಗಬೇಕೆಂಬುದು ಸಾಂಸ್ಕೃತಿಕ ವೈಶಿಷ್ಟ್ಯವೇನೂ ಅಲ್ಲ. ಇತರ ಜನಾಂಗದ ಬ್ರಾಹ್ಮಣರು (ಎಷ್ಟೇ ವಿದ್ಯಾವಂತರಾಗಿರಲಿ) ಮಡಿಗೆ ಬರುವುದಿಲ್ಲವೆಂಬ ಒಂದು ಬೆಗೊಟ್ರಿಯೇ ಇದಕ್ಕೆ ಕಾರಣವೆಂದು ಹೇಳಬಹುದು. ಅದು ಎಲ್ಲಿಯವರೆಗೆ ಹೋಗಿದೆಯೆಂದರೆ ಬೆಟ್ಟದಪುರದವರಿಗೆ ಕೌಶಿಕದವರು ಮಡಿಯಲ್ಲ, ಕೌಶಿಕದವರಿಗೆ ಬೆಟ್ಟದಪುರದವರು ಮಡಿ ಅಲ್ಲ. ಇದೊಂದು ಅಜ್ಞಾನದ ವಿಜೃಂಭಣೆ ಎಂದು ಹೇಳದೆ ವಿಧಿಯಿಲ್ಲ."

0.2 ಇಂಥ ಆಮಂತ್ರಣಗಳನ್ನು 'ಮಡಿನೀರು ಹಾಕಲು', 'ಹವ್ಯಕವ್ಯಕ್ಕೆ', 'ಸ್ನಾನಕ್ಕೆ ನೀರು ಹಾಕಲು', 'ಆಶೌಚ ಬಂದಾಗ ಅತಿಥಿ ಸತ್ಕಾರಕ್ಕೆ ನೆರವಾಗಲು' ಇತ್ಯಾದಿ ಮಾತುಗಳಿಂದ ವರ್ಣಿಸುತ್ತಾರೆಂಬುದೇ, ಈ ಮರುವಲಸೆಗಳ ವಿವರಗಳು ಹೇಗೆ ಸಾಂಸ್ಕೃತಿಕ ಅಗತ್ಯಗಳೊಂದಿಗೆ ಹೆಣೆದುಕೊಂಡಿವೆ ಎಂಬುದನ್ನು ತೋರಿಸುತ್ತದೆ.

0.3 ಒಂದು ನೆಲೆಯಲ್ಲಿರುವ ಎರಡು ಕುಟುಂಬಗಳ ನಡುವಿನ ವೈಮನಸ್ಯದಿಂದಾಗಿ ಇಬ್ಬರೂ ಪ್ರತ್ಯೇಕವಾಗಿ ಕರೆಸಿಕೊಂಡುದರಿಂದಲೂ ಹಳ್ಳಿಗಳು ಬೆಳೆದಿವೆ.

0.4 ಪ್ರತಿನೆಲೆಯಲ್ಲಿ ಮೊದಲು ನೆಲೆಸಿದವರು 'ಪ್ರಧಾನಗೋತ್ರ'ದವರು ಎಂಬ ಸಂಜ್ಞೆಯಿಂದ ಗುರುತಿಸಿಕೊಳ್ಳುವಾಗ, ಇತರರನ್ನು 'ಕರೆಸಿಕೊಂಡವರೆಂಬ' ಮೇಲರಿಮೆಯೇನೂ ವ್ಯಕ್ತವಾಗುವುದಿಲ್ಲ. ಪ್ರತಿಹಳ್ಳಿಯೂ ಒಂದು ಬಹುಸಂಖ್ಯಾತ (ಪ್ರಧಾನ) ಗೋತ್ರದವರನ್ನು ಹೊಂದಿರುವುದು ಸಂಕೇತಿ ನೆಲೆಗಳ ಲಕ್ಷಣ. ಆದರೆ ಆಮಂತ್ರಕ-ಆಮಂತ್ರಿತರ ವಿವರಗಳು ನೆಲೆಗಳನ್ನನುಸರಿಸಿ ಭಿನ್ನವಾಗುತ್ತವೆ (ಪಟ್ಟಿ 8 ಪು.304).

2. **ಸಹಕಾರ ಮತ್ತು ಸಾಹಚರ್ಯ :** ಕರ್ನಾಟಕದ ಬ್ರಾಹ್ಮಣರೊಂದಿಗಿನ ಸಹಕಾರ ಮತ್ತು ಸಾಹಚರ್ಯವನ್ನು ವ್ಯಕ್ತಪಡಿಸುವ ಒಂದು ನಿದರ್ಶನವನ್ನು ಇಲ್ಲಿ ಕೊಟ್ಟಿದೆ.

ಆಮಂತ್ರಕರು	*ಕಾರಣಗಳು*	*ಆಮಂತ್ರಿತರು*
ನಿಟ್ಟೂರಿನ ಹೊಯ್ಸಳ ಕರ್ನಾಟಕ ಬ್ರಾಹ್ಮಣರು	ಪುರಾಣ ಹೇಳಲು	ಕೃಷ್ಣಾಪುರದ ಕೌಂಡಿನ್ಯ ಗೋತ್ರದ ಸಂಕೇತಿಗಳು
ಕುಪ್ಪಳ್ಳಿಯ 'ಲೋಹಿತ' ಗೋತ್ರದ ಸಂಕೇತಿಗಳು	ಪುರಾಣ ಹೇಳಲು ಮತ್ತು ಗೌರಿಪೂಜೆ ಮಾಡಿಸಲು	ಜಂಬೂರಿನ ಕರ್ನಾಟಕ ಬ್ರಾಹ್ಮಣರು

3. ಬೇಸಾಯಸಂಬಂಧೀ ಕಾರಣಗಳು: ವ್ಯವಸಾಯಕೇಂದ್ರಿತ ಬದುಕಿನ ಮರುವಲಸೆಯ ವಿವಿಧ ಸಂದರ್ಭಗಳು ಇವು :

0.1 ನೆಂಟಸ್ತಿಕೆಯ ಕಾರಣಕ್ಕೆ ಆಸ್ತಿಕೊಟ್ಟು ಕರೆಸಿಕೊಂಡುದು.

0.2 ಉತ್ತಮ ಜಮೀನಿನ ಅನ್ವೇಷಣೆಮಾಡಿಕೊಂಡು ಹೋದುದು.

0.3 ದರಖಾಸ್ತು ಜಮೀನು ದೊರೆತುದರಿಂದ ಹೋದುದು.

0.4 ಆಸ್ತಿ ಸಾಲದಾದಾಗ ಸುತ್ತಣ ಪ್ರದೇಶಗಳಿಗೆ ಹೋಗಿ ತೋಟಗಳನ್ನು ಬೆಳೆಸಿ ಮಕ್ಕಳನ್ನು ವಿವಿಧ ಎಡೆಗಳಲ್ಲಿ ನೆಲೆಗೊಳಿಸಿದುದು.

0.5 ಹೆಂಡತಿಯ ತವರಿನಲ್ಲಿ ಗಂಡುಸಂತಾನವಿಲ್ಲದುದರಿಂದ ಉಸ್ತುವಾರಿಗೆ ಹೋದುದು.

0.6 ಮನೆವಾಳ್ತನಕ್ಕೆ ಇರಿಸಿಕೊಂಡುದು, ಇತ್ಯಾದಿ.

4. **ಕೌಟುಂಬಿಕ ಅಸ್ತವ್ಯಸ್ತತೆ:** ಕೌಟುಂಬಿಕ ಅಸ್ತವ್ಯಸ್ತತೆಯಿಂದ ಮರುವಲಸೆಗಳಾದ ನಿದರ್ಶನಗಳು:

0.1 'ದತ್ತು' ಕೊಟ್ಟ ಮಕ್ಕಳು ತಾಯಿಯ ಮನೆಯಲ್ಲಿಯೇ ಉಳಿದುದರಿಂದ ಆದ ವಂಶಪಲ್ಲಟ.

0.2 ಅನಾಥರಾದ ಮಕ್ಕಳು ತಾಯಿಯ ತಂದೆ ಇಲ್ಲವೆ ತಾಯಿಯ ಸೋದರರ ಮನೆಯಲ್ಲಿ ಬೆಳೆದು ಉಳಿದುದರಿಂದ ಆದ ಸ್ಥಾನಪಲ್ಲಟ ಇತ್ಯಾದಿ.

5. **ಸಂಕಷ್ಟಗಳು ಒದಗಿದುದು:** ಸಂಕಷ್ಟಗಳ ಕಾರಣದಿಂದಲೂ ನೆಲೆಗಳ ಬದಲಾವಣೆಯಾಗಿದೆ. ಅದರ ಕೆಲವು ನಿದರ್ಶನಗಳು:

0.1 ಮುಸಲ್ಮಾನರ ವಿಧ್ವಂಸದಿಂದ ಆದ ಮರುವಲಸೆಯ ಅಪರೂಪದ ಸಂದರ್ಭವೂ ಮೌಖಿಕ ಪರಂಪರೆಯಲ್ಲಿ ದಾಖಲಾಗಿದೆ. ಮುಸಲ್ಮಾನರ ಹಾವಳಿಯಿಂದ ಆನೆಗೊಂದಿಯು ನಾಶವಾದಾಗ ಅಲ್ಲಿದ್ದ ಆಯಾಸ್ಯರು ಸೋಮನಹಳ್ಳಿಗೆ ವಲಸೆ ಬಂದರೆಂಬುದು ಒಂದು ಪಾಠ. ವಿದ್ಯಾರಣ್ಯರಿಂದ ಮೊದಲುಗೊಂಡು ಆನೆಗೊಂದಿ ಸಂಸ್ಥಾನದೊಂದಿಗೆ ಸಂಕೇತಿಗಳ ಸಂಪರ್ಕವಿರುವುದು ವಂಶಚರಿತ್ರೆಗಳಲ್ಲಿ ದಾಖಲಾಗಿದೆ.

0.2 ಯತಿಶಾಪಗ್ರಸ್ತರಾಗಿ ನೆಲೆಯನ್ನು ಬದಲಿಸಿದ ಅನೇಕ ಸಂದರ್ಭಗಳು.

0.3 ತೋಟಕ್ಕೆ ಎಟ್ಟೆ ಬಂದುದು, ಕೆರೆ ಒಣಗಿದುದು, ಒದೆನೀರಿನಿಂದ ಬಾಗಾಯಿತು ಕರಗಿದುದು.

0.4 ದಾಯಾದಿಕಲಹ, ದೆವ್ವದಕಾಟ, ಇತ್ಯಾದಿ.

6. **ಭಾವುಕತೆ:** ಭಾವುಕತೆಯನ್ನು ಪ್ರದರ್ಶಿಸುವ ಸಂದರ್ಭಗಳ ನಿದರ್ಶನಗಳು:

0.1 ಒಮ್ಮೆ ಆದ ವಲಸೆಯನಂತರ ತಾವು ಊರ್ಜಿತವಾಗದುದಕ್ಕೆ ಕುಲದೈವದ ಸನ್ನಿಧಿಯನ್ನು ಬಿಟ್ಟು ಬಂದುದೇ ಕಾರಣವೆಂದು ಭಾವಿಸಿ ಅಲ್ಲಿಗೇ ಮರಳಿದ ಭಕ್ತಿಭಾವದ ಪ್ರೇರಣೆ.


0.2 ತಮ್ಮ ಮೊದಲನೆಲೆಯನ್ನು ಬಿಡಬೇಕಾಗಿಬಂದಾಗ 'ಸಂಕೇತಿಗಳೇ ಇರುವ ನೆಲೆ', 'ನದಿಯ ತೀರ' ಎಂಬ ಕಾರಣಕ್ಕಾಗಿ ನಿರ್ದಿಷ್ಟ ಸ್ಥಳಗಳನ್ನು ಆಯ್ಕೆ ಮಾಡಿದುದು; ಸಂಕೇತಿಗಳು ಕಡಮೆಯಾಗುತ್ತಬಂದರೆಂಬ ಕಾರಣಕ್ಕಾಗಿಯೇ ತಾವಿದ್ದ ನೆಲೆಗಳನ್ನು ತೊರೆದುದು, ಇತ್ಯಾದಿ.

7. **ಅಲೆಮಾರಿತನ:** ಎಂಥ ಸಣ್ಣ ಕಾರಣಗಳೂ ಸಂಕೇತಿಗಳು ವಲಸೆ ಹೊರಡುವುದಕ್ಕೆ ಸಾಕಾಗುತ್ತವೆ: ಸುಲಭಕಾರಣಗಳಿಂದ ಇವರು ವಲಸೆಹೊರಟ ನಿದರ್ಶನಗಳಿಗೆ ಕೊರತೆ ಇಲ್ಲ. ಉದಾಹರಣೆಗೆ, ಮರುವಲಸೆ ಬಂದು ಹಳ್ಳಿಯೊಂದರಲ್ಲಿ ಇದ್ದಾಗ, ಮೊಲನುಗ್ಗಿದುದರಿಂದ ಆ ಹಳ್ಳಿಯ ಆಯ ಕೆಟ್ಟಿತೆಂದು ಮತ್ತೆ ವಲಸೆ ಹೊರಟರು. ಇನ್ನೊಮ್ಮೆ ತಾವು ಹೊರಟ ದಿಕ್ಕು 'ದಕ್ಷಿಣಾಭಿಮುಖ'ವಾಯಿತೆಂದು ಹೊಸ ನೆಲೆಯನ್ನೂ ತೊರೆದು ಮತ್ತೆ ಉತ್ತರಾಭಿಮುಖವಾಗಿ ಹೊರಟರು. ಇಷ್ಟು ಸುಲಭವಾಗಿ ಸಾಮೂಹಿಕವಾಗಿಯೂ ನೆಲೆ ಬದಲಿಸುವ ಈ ಸಮುದಾಯವು ವಲಸೆಗೆ ಹಿಂಜರಿಯುವ ಪ್ರವೃತ್ತಿಯದೆಂಬ ಎಂ.ಕೇಶವಯ್ಯನವರ ಮಾತನ್ನು[1] ಅಲ್ಲಗಳೆಯಬೇಕಾಗುತ್ತದೆ.

8. **ವಲಸೆಯ ತೀವ್ರತೆ:** ಸಂಕೇತಿಗಳ ವಲಸೆ, ಮರುವಲಸೆಗಳು ನಾನಾ ಕಾರಣಗಳಿಂದಾಗಿ ಕ್ಷಿಪ್ರವಾಗಿ ನಡೆದಿವೆ. ಅವರ ವಲಸೆಯ ತೀವ್ರತೆಯನ್ನು ಪ್ರತಿಪಾದಿಸುವ ಕೆಲವು ಸಾಕ್ಷ್ಯಗಳನ್ನು ಇಲ್ಲಿ ಒದಗಿಸಿದೆ.

[1] *Life of Nacharamma (History of Her Migration),* p.44.


0.1 ವಲಸೆಯ ತೀವ್ರತೆಗೆ ಹಾಸನದ ಶೀಗೋಳು ರಾಮಯ್ಯ (೯೦, ಕೃಷಿಕ) ಅವರು ಒದಗಿಸಿದ ವಂಶವೃಕ್ಷವೊಂದರಿಂದ ಆರಿಸಿದ ನಿದರ್ಶನ ಇಲ್ಲಿದೆ: ಇದು ಮುಳುಗಡೆಯಾದ ಊರೊಂದರ ತರಂಗಿತ ವಲಸೆ. ಇಲ್ಲಿನ ವಿವಿಧ ಕುಟುಂಬಗಳು ವಲಸೆಯ ವಿಭಿನ್ನ ಕವಲುಗಳನ್ನು ಪ್ರತಿನಿಧಿಸುತ್ತವೆ. ಅದರಲ್ಲಿನ ಒಂದು ಕುಟುಂಬವು ತೊಂಬತ್ತು ವರ್ಷಗಳ ಅವಧಿಯಲ್ಲಿ ಐದು ನೆಲೆಗಳಲ್ಲಿ ವ್ಯವಸಾಯವನ್ನೇ ಆಧರಿಸಿ ಬಾಳಿತು.



0.2 ಸುಮಾರು ಎರಡು ಶತಮಾನಗಳ ಅವಧಿಯಲ್ಲಿ ಐದು ತಲೆಮಾರುಗಳಲ್ಲಿ ಐದು ಊರುಗಳಲ್ಲಿ ನೆಲೆ ನಿಂತ ಕುಟುಂಬದ ನಿದರ್ಶನವು ಇತ್ತೀಚೆಗೆ ಕುಶಾಲನಗರದಲ್ಲಿ ನೆಲೆಸಿದ್ದ ಕೇಶವಮೂರ್ತಿ (೭೫, ಅರ್ಚಕ) ಅವರು ಒದಗಿಸಿದ ವಂಶವೃಕ್ಷದಲ್ಲಿದೆ.

ಭಾರದ್ವಾಜ ಗೋತ್ರದ ಒಂದು ಕುಟುಂಬ	ತಲೆಮಾರು-೧	ಕ್ರಿ.ಶ.೧೭೯೦	ಸೋಮನಹಳ್ಳಿ,	ಬೇಸಾಯ
	ತಲೆಮಾರು-೨	ಕ್ರಿ.ಶ.೧೮೨೦	ರುದ್ರಪಟ್ಟಣಕ್ಕೆ,	ಬೇಸಾಯ
	ತಲೆಮಾರು-೩	ಕ್ರಿ.ಶ.೧೮೫೦	ಕಟ್ಟೆಪುರಕ್ಕೆ,	ಬೇಸಾಯ
	ತಲೆಮಾರು-೪	ಕ್ರಿ.ಶ.೧೮೮೦	ಅದೇ	
	ತಲೆಮಾರು-೫	ಕ್ರಿ.ಶ.೧೯೧೦	ಅದೇ	
	ತಲೆಮಾರು-೬	ಕ್ರಿ.ಶ.೧೯೮೬	ಹನಸೋಗೆ,	ಪೌರೋಹಿತ್ಯ
	ತಲೆಮಾರು-೭	ಕ್ರಿ.ಶ.೧೯೯೦	ಕುಶಾಲನಗರ,	ಪೌರೋಹಿತ್ಯ

0.3 ಸುಮಾರು ಕ್ರಿ.ಶ.೧೮೦೦ರಿಂದ ಕ್ರಿ.ಶ.೧೯೫೦ರ ನಡುವೆ ಒಂದೇ ಕುಟುಂಬದ ಸುಮಾರು ನಾಲ್ಕು ತಲೆಮಾರುಗಳಲ್ಲಿ ಆದ ವಲಸೆಯ ವೈವಿಧ್ಯ ಇದು: ಹಾಸನದ ನಾಗರಾಜಭಾಗವತರು (೭೫,ಸಂಗೀತ ವಿದ್ವಾಂಸ) ಒದಗಿಸಿದ ವಂಶವೃಕ್ಷದ ಆಧಾರ :



0.4 ಅಪರೂಪವಲ್ಲದ ನಿರಂತರ ವಲಸೆಗಳ ನಿದರ್ಶನಗಳೇ ಹೆಚ್ಚು:

ಆಯಾಸ್ಯ : ಕನ್ನಂಬಾಡಿ → ಸೋಮನಹಳ್ಳಿ → ಆನಂದೂರು


ಆತ್ರೇಯ : ಕೆರಳಾಪುರ → ಶೀಗೋಳು → ಸಾಲಿಗ್ರಾಮ

ಆತ್ರೇಯ : ಹರವೆ → ಅಡುಗೂರು → ಕಣಗಾಲ್


ನಿತುಂದಿಲ : ಕಟ್ಟೆಪುರ → ಮಾದಾಪುರ → ರುದ್ರಪಟ್ಟಣ

9. **ವಲಸೆಗಳಿಂದಾಗಿ ನೆಲೆಗಳ ಗಾತ್ರದಲ್ಲಾದ ಏರುಪೇರು:** ಸಂಕೇತಿಗಳ ತೀವ್ರಸ್ವರೂಪದ ವಲಸೆಗಳಿಂದಾಗಿ ಅವರ ನೆಲೆಗಳ ಜನಸಂಖ್ಯೆಯಲ್ಲಿ ಆಗಾಗ ಏರುಪೇರುಗಳಾಗಿವೆ. ಕೆಲವು ನೆಲೆಗಳು ಪೂರ್ಣವಾಗಿ ಬರಿದಾಗಿವೆ. ಕೆಲವು ಮೈತುಂಬಿಕೊಂಡಿವೆ. ಮರುವಲಸೆಗಳು ಅವರ ನೆಲೆಗಳ ಸ್ವರೂಪವನ್ನು ಪರಿಣಾಮಿಸಿದ ಕೆಲವು ನಿದರ್ಶನಗಳನ್ನು ಇಲ್ಲಿ ಕೊಟ್ಟಿದೆ :

0.1 ದೊಡ್ಡ ನೆಲೆಗಳು ಮರುವಲಸೆಗಳಿಂದ ಆದ ರೀತಿ:




ಮಧ್ಯದೇಶದಲ್ಲಿ 'ಸಂಕೇತಂ' ಲಕ್ಷಣವನ್ನು ಇಂದಿಗೂ ದಟ್ಟವಾಗಿ ಉಳಿಸಿಕೊಂಡು ಮುಂದುವರಿಯುತ್ತಿರುವ ಬಸವಪಟ್ಟಣದ ನಿದರ್ಶನವು, ಮರುವಲಸೆಗಳಿಂದಾಗಿ ನೆಲೆಗಳು ದೊಡ್ಡದಾಗಿ ಬೆಳೆಯುವ ಲಕ್ಷಣವನ್ನು ದೊಡ್ಡ ಸ್ವರೂಪದಲ್ಲಿಯೇ ಪ್ರಕಟಿಸುತ್ತದೆ:



0.2 ಕೆಲವು ನೆಲೆಗಳು ವಲಸಿಗರನ್ನು ಆಕರ್ಷಿಸಿರುವಂತೆಯೇ ಹೊರವಲಸೆಗಳಿಗೂ ಎಡೆಮಾಡಿವೆ:





0.3 ನೀಲಗುಂದ, ಯಗಟಿ ಮೊದಲಾದ ಪ್ರಾಥಮಿಕ ನೆಲೆಗಳನ್ನು ಪೂರ್ಣವಾಗಿ ಎಂದೆಂದಿಗೂ ತೊರೆದ ಸಂಕೇತಿಗಳು ಕೌಶಿಕ ಮತ್ತು ಬೆಟ್ಟದಪುರಕ್ಕೆ ವಲಸೆಹೋದ ಸಂದರ್ಭಗಳಿವೆ.

10. **ನೌಕರಿ-ವಲಸೆಗಳು:** ಉದ್ಯೋಗವಲಸೆಯ ಮೊದಲ ಕೆಲವು ನಿದರ್ಶನಗಳು ದೊರೆಯುವುದು ಪಿರಿಯಪಟ್ಟಣ, ಹೊಸಹೊಳಲು, ತಿಪ್ಪೂರಿಗೆ ದಿವಾನರಾಗಿ ಹೋದವರಲ್ಲಿ. ದಂಡಾಧಿಕಾರಿಗಳು, ಹೆಬ್ಬಾರ, ಶಾನುಭೋಗ, ಪಟೇಲ, ಶೇಖ್‌ದಾರ, ಬಕ್ಷಿ, ಹರಿಕಾರ, ಪಶುಮೇಲ್ವಿಚಾರಕ, ಶಿರಸ್ತೇದಾರ, ಪಾರುಪತ್ತೇದಾರ, ಅಮಲ್ದಾರ, ಖಿಲ್ಲೇದಾರ, ಚೇಣಿಯವರು - ಇಂಥ ಹಲವಾರು ವೃತ್ತಿನಿರತ ವ್ಯಕ್ತಿಗಳಾಗಿ ಸೇವೆ ಸಲ್ಲಿಸಿದವರ ನಿದರ್ಶನಗಳು ಹಲವಾರು ಶತಮಾನಗಳಿಂದಲೂ ಅಲ್ಲಲ್ಲಿ ದೊರೆಯುತ್ತವೆ. ಆದರೆ ಅವರೆಲ್ಲರೂ ವ್ಯವಸಾಯಕೇಂದ್ರಿತ ಬದುಕಿಗೆ ಒಗ್ಗಿಕೊಂಡು ವೈದಿಕತೆಯನ್ನೂ ಬಿಡದೆ ಹಳ್ಳಿಗಳಲ್ಲಿದ್ದವರು ಇಲ್ಲವೆ ಹಳ್ಳಿಗಳ ನಿಕಟ ಸಂಪರ್ಕದಲ್ಲಿದ್ದವರು. ನಗರಗಳ ನೌಕರಿ ಕಳೆದ ಶತಮಾನದ ಕೊನೆಯಭಾಗದಲ್ಲಿ ತಡವಾಗಿಯಾದರೂ ಆಕರ್ಷಿಸಿದರೂ, ಅದು ನಗರಕೇಂದ್ರಿತ ಜೀವನಕ್ಕೆ ಜನಗಳನ್ನು ಪರಿವರ್ತಿಸತೊಡಗಿದ್ದು ಇಪ್ಪತ್ತನೆಯ ಶತಮಾನದ ಪ್ರಾರಂಭದ ದಶಕಗಳಲ್ಲಿ; ಸಮುದಾಯವು ತೀವ್ರವಾದ ನಗರೀಕರಣಕ್ಕೆ ಈಡಾದುದು ಇಪ್ಪತ್ತನೆಯ ಶತಮಾನದ ಮಧ್ಯಭಾಗದಲ್ಲಿ. ಜೋಡಿಗ್ರಾಮಗಳ ಸರ್ಕಾರೀಕರಣ, ಭೂಒಡೆತನ ಕಾಯಿದೆಗಳು ನಗರವಲಸೆಗಳ ಇನ್ನಿತರ ಪ್ರೇರಣೆಗಳು, ಅಲ್ಲಿಂದ ಮುಂದೆ ಜಾರಿಗೆಬಂದ ಉದ್ಯೋಗ ಮೀಸಲಾತಿಗಳು ಈ ಸಮುದಾಯಕ್ಕೆ ಅನುಕೂಲಕರವಲ್ಲದುದರಿಂದ ನಗರೀಕರಣವು ಪ್ರಾರಂಭಗೊಂಡ ಕೆಲವೇ ದಶಕಗಳಲ್ಲಿ ಅನೇಕ ಯುವಕರು ಹಳ್ಳಿಗಳಲ್ಲಿಯೇ ಉಳಿಯುವುದನ್ನು ಅನಿವಾರ್ಯಗೊಳಿಸಿತು. ಆದರೂ ಸೌಲಭ್ಯವಂಚಿತ ಹಳ್ಳಿಗಳು ನಗರವಲಸೆಗೆ ಪ್ರೇರಣೆಯನ್ನೊದಗಿಸುತ್ತಿರುವ ಸಂದರ್ಭವೂ ಇಲ್ಲದಿಲ್ಲ.

ಆ. ದಕ್ಷಿಣದಲ್ಲಿ ಸಂಕೇತಿಗಳ ಮರುವಲಸೆಗಳು:

ಕರ್ನಾಟಕದಲ್ಲಿ ನಡೆದ ಮಹಾವಲಸೆಗಳ ಸ್ವರೂಪ ಮತ್ತು ಲಕ್ಷಣಕ್ಕೆ ಹೋಲಿಸಿದರೆ 'ದಕ್ಷಿಣ'ದಲ್ಲಾದ ಮರುವಲಸೆಗಳು ಭಿನ್ನ ಪ್ರವೃತ್ತಿಯನ್ನು ಪ್ರಕಟಿಸುವುದು ಅವುಗಳ ಹಿಂದಿನ ಭಿನ್ನ ಪ್ರೇರಣೆಗಳಿಗೆ ಅನುಗುಣವಾದುದು. ಅವನ್ನಿಲ್ಲಿ ಗಮನಿಸಬಹುದು.

1. **ಸಾವಧಾನವಾದ ವಲಸೆಗಳು:** ದಕ್ಷಿಣದ ಸಂಕೇತಿಗಳ ಮರುವಲಸೆಗಳ ಮುಖ್ಯ ಪ್ರೇರಣೆಗಳು ಪೌರೋಹಿತ್ಯ, ದೇವಸ್ಥಾನಗಳಲ್ಲಿ ಕೈಂಕರ್ಯ ಮತ್ತು ವ್ಯವಸಾಯ. ಕಾಲಕ್ರಮದಲ್ಲಿ ಸಂಭವಿಸಿದ ಸಂಪನ್ಮೂಲಗಳ ಕೊರತೆಯು ನಿರಂತರವಾದ ಮತ್ತು ಸಾವಧಾನವಾದ ಮರುವಲಸೆಗಳಿಗೆ ಕಾರಣವಾಗಿರುವುದನ್ನು ಅಲ್ಲಿ ಗುರುತಿಸಬಹುದು. ಕ್ಷಾಮವೂ ಅವರ ಮರುವಲಸೆಗಳಿಗೆ ಕಾರಣವೆಂಬುದಕ್ಕೆ ಆಧಾರಗಳಿಲ್ಲ. ಜೀವನೋಪಾಯಕ್ಕಾಗಿ ವ್ಯವಸಾಯಕ್ಕೆ ನೇರವಾಗಿ ಮತ್ತು ತೀವ್ರವಾಗಿ ಒಡ್ಡಿಕೊಳ್ಳುವ ತುರ್ತು ಅವರಿಗಿರಲಿಲ್ಲ. ಪಾರಂಪರಿಕ ಬದುಕು ಬುಡಮೇಲಾದ ಸನ್ನಿವೇಶದಲ್ಲಿಯೂ ಅವರಿರಲಿಲ್ಲ. ಪೌರೋಹಿತ್ಯ ಮತ್ತು ದೇವಸ್ಥಾನಗಳ ಕೈಂಕರ್ಯಕ್ಕೆ ಅವರ ಜೀವನದ ಒತ್ತು ಇತ್ತು. ಆದುದರಿಂದ ಸಾರ್ವತ್ರಿಕವಾಗಿ ಒದಗಿಬಂದ ಪರೋಕ್ಷ ರಾಜಾಶ್ರಯದ ಕಾರಣದಿಂದ ಅನೇಕ

'ಗ್ರಾಮ'ಗಳಲ್ಲಿ ಹರಡಿಕೊಳ್ಳುವುದು ಅವರಿಗೆ ಸಾಧ್ಯವಾಯಿತು. ಈ ಶತಮಾನದ ಮೂರರ ದಶಕದಲ್ಲಿ ಆದ ಔದ್ಯೋಗಿಕ ನಗರವಲಸೆಗಳವರೆಗೆ, ಏಕಮುಖವಲಸೆಯಿಂದಾದ ಅವರ ಅನೇಕ ಮಧ್ಯಂತರ ನೆಲೆಗಳು ಪುಷ್ಟವಾಗಿದ್ದವು. ಅರಿವಿಕೆರದಲ್ಲಿ ೧೦೦, ಆವರಾಂಚೆರಿಯಲ್ಲಿ ೧೦೦, ಶೆಂಕೋಟ್ಟೈನಲ್ಲಿ ೩೦೦ ... ಹೀಗೆ ಕುಟುಂಬಗಳಿದ್ದ ಸಂಗತಿಯನ್ನು ಹಿಂದೆ ಉಲ್ಲೇಖಿಸಿದೆ. (ನಕ್ಷೆ 6 ಪು.273)

2. ಮುಕ್ತ ಮರುವಲಸೆಗಳು: ರಾಜಕೀಯವಾಗಿ ದಕ್ಷಿಣದ ಸಂಕೇತಿಗಳ ಮೂಲನೆಲೆಗಳು 'ಧರ್ಮರಾಜ್ಯ'ವಾದ ತಿರುವಾಂಕೂರು ಸಂಸ್ಥಾನ ಮತ್ತು ಪಾಂಡ್ಯರಾಜರ ಅಧೀನದಲ್ಲಿದ್ದುವಾದರೂ, ಅವರ ಮರುವಲಸೆಗಳು ಮುಕ್ತವಾಗಿ ನಡೆದವು.


ಅವರ ವಂಶಚರಿತ್ರೆಗಳನ್ನಾಧರಿಸಿದ ಮರುವಲಸೆಯ ಕೆಲವು ನಿದರ್ಶನಗಳು:

	ಮೊದಲ ನೆಲೆಗಳು		**ಮಧ್ಯಂತರ ನೆಲೆಗಳು**
0.1	ಅಯ್‌ಕುಡಿ (ಶೆಂಕೋಟ್ಟೈ ಸೀಮೆ)	→	ಶುಚೀಂದ್ರಂ
		→	ಕನ್ಯಾಕುಮಾರಿ
0.2	ಶಾಂಬವರ್ ವಡಹರೈ (ಶೆಂಕೋಟ್ಟೈ ಸೀಮೆ)	→	ವಡಕ್ ಗ್ರಾಮಂ
0.3	ಶೆಂಕೋಟ್ಟೈ ಗ್ರಾಮ	→	ತಿರುವನಂತಪುರಂ, ತಿರುನೆಲ್‌ವೇಲಿ, ಶುಚೀಂದ್ರಂ, ಕನ್ಯಾಕುಮಾರಿ
		→	ಕಾರಡೈಕುರುಚಿ
		→	ಅಂಬಾಸಮುದ್ರಂ
		→	ಪಾಪನ್‌ಕೊಳಂ
0.4	ಪಾವೂರ್	→	ಕಾರಡೈಕುರುಚಿ
	ಪಾವೂರ್	→	ತಿರುನೆಲ್‌ವೇಲಿ
	ತೆಂಕಾಸಿ (ಶೆಂಕೋಟ್ಟೈ ಸೀಮೆ)	→	ಕಾರಡೈಕುರುಚಿ
0.5	ಕಾರಡೈಕುರುಚಿ	→	ದರ್ಶನಂಕೋಪ್

3. **ವಲಸೆಗಳಲ್ಲಿ ತಳಮಳದ ಲಕ್ಷಣವಿಲ್ಲ:** ಕರ್ನಾಟಕದ ಸಂಕೇತಿಗಳ ಮರುವಲಸೆಯ ವಿಲಕ್ಷಣತೆಯಾಗಲಿ, ವೈಶಿಷ್ಟ್ಯವಾಗಲಿ, ಅಲೆಮಾರಿ ಪ್ರವೃತ್ತಿಯಾಗಲಿ ಇಲ್ಲಿ ಕಾಣುವುದಿಲ್ಲ. ಕರ್ನಾಟಕದ ಸಂಕೇತಿಗಳನ್ನು ಅಲೆಮಾರಿಗಳು ಎಂದೇ ಅನ್ಯಮತಿಯರಾದ ಹಾಸನದ ಜ್ವಾಲನಯ್ಯ (೬೫, ಖ್ಯಾತ ಸಾಮಾಜಿಕ) ಅವರು ಗುರುತಿಸಿದರೆಂಬುದನ್ನು ಇಲ್ಲಿ ವಿಶೇಷವಾಗಿ ಉಲ್ಲೇಖಿಸಬಹುದಾಗಿದೆ. ಅವರು ಸಂಕೇತಿಗಳನ್ನು ನಿಕಟವಾಗಿ ಬಲ್ಲವರು, ಆ ಸಮುದಾಯದ ಅಧ್ಯಯನದಲ್ಲಿ ಆಸಕ್ತಿ ತಳೆದವರು; ಸಂಕೇತಿಗಳೇ ಮರೆತಿದ್ದಾಗ, ಕೌಶಿಕದಲ್ಲಿ ನಾಚಾರಮ್ಮನ ಗುಡಿ ಇದ್ದುದನ್ನೂ ಆ ಮಂಟಪವು ಶಿಥಿಲವಾದಾಗ ವಿಗ್ರಹವನ್ನು ಪಕ್ಕದ ಲಕ್ಷ್ಮೀಕೇಶವಸ್ವಾಮಿಯ ದೇವಾಲಯದಲ್ಲಿ ಪ್ರತಿಷ್ಠಾಪಿಸಿದ್ದನ್ನೂ ಗುರುತಿಸಿದವರು; ಅದನ್ನು ಹಾಸನದಲ್ಲಿ ನಡೆದ ಸಂಕೇತಿ ಸಮುದಾಯದ ಸಭೆಯೊಂದರಲ್ಲಿ ಗಣ್ಯರೆದುರು ಘೋಷಿಸಿದವರು. ಅವರು ಗುರುತಿಸಿದ ಸಂಕೇತಿಗಳ ಅಲೆಮಾರೀ ಲಕ್ಷಣವು ಕರ್ನಾಟಕದಲ್ಲಿ ಆ ಸಮುದಾಯವು ಜೀವಿತಕ್ಕಾಗಿ ಮಾಡಿದ ಹೋರಾಟದ ಭಾಗವಾಗಿ ಕಾಣಿಸಿಕೊಂಡಿದೆ. ಕೇವಲ ಪಂಜುಗಳ್ಳರು ಹೆದರಿಸಿದುದರಿಂದಲೇ ಗ್ರಾಮವನ್ನು ತೊರೆದುದು, ಬಂಧುಗಳ ಆಶ್ರಯ ದೊರಕಿದುದರಿಂದ ಆದ ಮರುವಲಸೆ - ಇಂಥ ನಿದರ್ಶನಗಳು ದಕ್ಷಿಣದಲ್ಲಿಯೂ ಅಲ್ಲಲ್ಲಿ ದೊರೆಯುತ್ತವೆ. ತಿರುನೆಲ್‌ವೇಲಿಗೆ ಎಂಟು ಕಿ.ಮೀ. ದೂರದಲ್ಲಿದ್ದ ಕೋಟಕನಲ್ಲೂರ್‌ನಲ್ಲಿ ಎರಡು ಬೀದಿಗಳ ಭರ್ತಿ ಸಂಕೇತಿಗಳಿದ್ದುದನ್ನೂ, ಪಂಜುಗಳ್ಳರು ಹೆದರಿಸಿದುದರಿಂದ ಅವರೆಲ್ಲರೂ ಗ್ರಾಮವನ್ನು ತೊರೆದುದನ್ನೂ ತಿರುನೆಲ್‌ವೇಲಿ ಮೂಲದ ರಾಜಾಮಣಿಯವರೂ, ವಕೀಲ ಮೀನಾಕ್ಷಿ

ಸುಂದರಂ ಅವರೂ ಉಲ್ಲೇಖಿಸಿದ್ದಾರೆ. ಆದರೆ ಕರ್ನಾಟಕದ ಮರುವಲಸೆಗಳ ತೀವ್ರತೆ, ತಳಮಳವು ಪ್ರಕಟಪಡಿಸುವ ಜೀವನ ಹೋರಾಟವು ದಕ್ಷಿಣದ ಮರುವಲಸೆಗಳ ಲಕ್ಷಣವಲ್ಲ. (ಪಟ್ಟಿ 9 ಪು.305)

ದಕ್ಷಿಣದ ಏಕಮುಖ ಮರುವಲಸೆಗಳ ಹಂತಗಳು:



4. **ಪಾರಂಪರಿಕ ಸಾಂಸ್ಕೃತಿಕ ಜೀವಂತಿಕೆಯ ನೆಲೆಗಳು:** ನಗರೀಕರಣದ ತೀವ್ರತೆಯಿಂದಾಗಿ ದಕ್ಷಿಣದಲ್ಲಿಯೂ ಸಂಕೇತಿ ನೆಲೆಗಳು ಸೊರಗಿವೆ; ಅನೇಕ ನೆಲೆಗಳನ್ನು ಸಂಕೇತಿಗಳು ಪೂರ್ಣವಾಗಿ ತೊರೆದಿದ್ದಾರೆ; ಸಂಕೇತಿ ಪರಂಪರೆಯ ನಿರಂತರ ಲಕ್ಷಣಗಳನ್ನು ಉಳಿಸಿಕೊಳ್ಳಬಲ್ಲ ಪ್ರಾಚೀನ ಸಂಕೇತಿ ಕೇಂದ್ರಗಳು (ಸಂಕೇತಂ) ಅಲ್ಲಿ ಈಗ ಉಳಿದಿಲ್ಲ. ಆದರೆ ಪಾರಂಪರಿಕ ಸಾಂಸ್ಕೃತಿಕ ಜೀವಂತಿಕೆಯನ್ನು ಕರ್ನಾಟಕದ ನೆಲೆಗಳಲ್ಲಿ ಗುರುತಿಸಬಹುದಾಗಿದೆ.

ಒಟ್ಟಿನಲ್ಲಿ, ಜೀವನಾಧಾರಕ್ಕಾಗಿ ಮುಕ್ತವಾಗಿ ವಲಸೆಹೋಗುವುದು ಎಲ್ಲೆಡೆಯ ಸಂಕೇತಿಗಳ ಮೂಲಭೂತ ಲಕ್ಷಣವಾಗಿದೆ. ಹೊಸದಾಗಿ ಆಮೂಲಾಗ್ರವಾಗಿ ಬದುಕನ್ನು ಕಟ್ಟಿಕೊಳ್ಳುವ ತುರ್ತಿಗೆ ಒಡ್ಡಿಕೊಂಡ ಕರ್ನಾಟಕದ ಸಂಕೇತಿಗಳ ಮರುವಲಸೆಗಳಲ್ಲಿ ಕಾಣುವ ಸಂಕೀರ್ಣತೆ, ತೀವ್ರತೆ, ತಳಮಳವು ದಕ್ಷಿಣದಲ್ಲಿ ಕಾಣುವುದಿಲ್ಲ; ಕರ್ನಾಟಕದ ವ್ಯವಸಾಯಕೇಂದ್ರಿತ ಕ್ಷಿಪ್ರವಲಸೆಗಳಿಗೆ ಬದಲು ದಕ್ಷಿಣದಲ್ಲಾದುದು ದೇವಸ್ಥಾನಕೇಂದ್ರಿತ ನಿರಂತರ ಸಾವಧಾನವಲಸೆಗಳು. ನಗರೀಕರಣವು ಸಾಮಾನ್ಯಪ್ರವೃತ್ತಿಯಾದರೂ ಕರ್ನಾಟಕದಲ್ಲಿ ವ್ಯವಸಾಯದ ನಂಟು ಉಳಿದಿರುವುದರಿಂದಾಗಿಯೇ ಸಾಂಸ್ಕೃತಿಕ ಪರಂಪರೆಯ ನಿರಂತರತೆಯನ್ನು ಕಾಯ್ದುಕೊಂಡ ಸಂಕೇತಂಗಳನ್ನು ಈಗಲೂ ಅಲ್ಲಿ ಮಾತ್ರ ಕಾಣುವುದು ಸಾಧ್ಯವಾಗಿದೆ.

೨. ಸಂಕೇತಿ ನೆಲೆಗಳ ವಿಶಿಷ್ಟ ಲಕ್ಷಣಗಳು

ಮರುವಲಸೆಗಳು ಜೀವನಾಧಾರಕ್ಕಾಗಿಯೇ ಆಗುತ್ತಿದ್ದುವಾದರೂ, ಸಂಕೇತಿಗಳು ತಮ್ಮ ನೆಲೆಗಳ ಆಯ್ಕೆಯಲ್ಲಿ ವಿಶಿಷ್ಟವಿವೇಚನೆಯನ್ನು ಹೊಂದಿರುವುದು ಮೇಲುನೋಟಕ್ಕೇ ಕಾಣಿಸುತ್ತದೆ. ಈ ವಿವೇಚನೆಯಿಂದಾಗಿಯೇ ಅವರ ವಲಸೆಗಳ ಹಿಂದಿನ ಪ್ರೇರಣೆಗಳಲ್ಲಿ ಒಂದು, ಸುಧಾರಿತ ನೆಲೆಗಳ ಅನ್ವೇಷಣೆಯೂ ಆಗಿತ್ತು ಎನ್ನಬಹುದು. ಅವರ ನೆಲೆಗಳ ವಿಶಿಷ್ಟಲಕ್ಷಣಗಳನ್ನು ಗುರುತಿಸುವ ಪ್ರಯತ್ನವನ್ನು ಇಲ್ಲಿ ಮಾಡಿದೆ.

ಅ. ಸಂಕೇತಿ ನೆಲೆಗಳ ಲಕ್ಷಣಗಳು:

ಕರ್ನಾಟಕದಲ್ಲಿ ಸಂಕೇತಿಗಳು ಆರಿಸಿಕೊಂಡ ನೆಲೆಗಳ ಸಾಮಾನ್ಯಲಕ್ಷಣವನ್ನು, ಎಂ.ಕೇಶವಯ್ಯನವರು ಕೌಶಿಕದ ಬಗೆಗೆ ಹೇಳಿರುವ

ಮಾತುಗಳು ಸ್ಪಷ್ಟಪಡಿಸುತ್ತವೆ. "..... ಈ ಸ್ಥಳವನ್ನವರು ಯೋಗ್ಯವಾದುದೆಂದು ಚುನಾಯಿಸಲು ಅನೇಕ ಕಾರಣಗಳಿದ್ದವು. ಅದೊಂದು ಸಮೃದ್ಧವಾದ ಬ್ರಾಹ್ಮಣರ ಅಗ್ರಹಾರವಾಗಿದ್ದಿತು. ವಿಶ್ವಾಮಿತ್ರ ಮಹರ್ಷಿಯು ತಪಸ್ಸುಮಾಡಿ ಪವಿತ್ರವಾದುದೆಂದು ಪುರಾಣಪ್ರಸಿದ್ಧವಾಗಿತ್ತು. ಶ್ರೀಕೇಶವಸ್ವಾಮಿಯ ಪುರಾತನದೇವಾಲಯ; ದೊಡ್ಡದಾದ ಕೆರೆ; ಫಲವತ್ತಾದ ನೀರಾವರೀಪ್ರದೇಶ, ಹೇಮಾವತೀನದಿಗೆ ಸಮೀಪದ ಊರು, ಎಲ್ಲಕ್ಕಿಂತ ಹೆಚ್ಚಾಗಿ, ಪಟ್ಟಣದ ಗಜಿಬಿಜಿಯೂ ಸಡಗರವೂ ಇಲ್ಲದ ಏಕಾಂತಪ್ರದೇಶ .."[2] ಇದನ್ನು ಸಂಪೂರ್ಣವಾಗಿ ಸಮರ್ಥಿಸುವ ಮತ್ತೊಂದು ನಿದರ್ಶನವೆಂದರೆ, ಸಂಕೇತಿಗಳ ಇನ್ನೊಂದು ಪ್ರಧಾನ ಮೂಲನೆಲೆಯಾದ ಬೆಟ್ಟದಪುರವೇ. ವಾಮದೇವ ಮಹರ್ಷಿಗಳು ತಪಸ್ಸುಮಾಡಿದ 'ಸಿದ್ಧಾದ್ರಿ'ಯ ಮಲ್ಲಿಕಾರ್ಜುನ ಕ್ಷೇತ್ರವು ಕಾವೇರಿಗೆ ತುಸು ದೂರದಲ್ಲಿದ್ದು ಕೆರೆಗಳನ್ನೇ ಆಶ್ರಯಿಸಿತ್ತು. ಈ ಎರಡು ಸ್ಥಳಗಳೂ ಕೋಟೆಗಳುಳ್ಳವು; ಪಾಳೆಯಗಾರರ ಕೇಂದ್ರಗಳಾಗಿದ್ದಂಥವು. ಒಂದು ಪಂಚಲಿಂಗಕ್ಷೇತ್ರವಾದರೆ ಇನ್ನೊಂದು ಅಷ್ಟತೀರ್ಥಕ್ಷೇತ್ರ. ಒಂದಕ್ಕೆ ಹೊಯ್ಸಳರಾಜನೇ ಹತ್ತಿರದ ಅಧಿಪತಿಯಾಗಿದ್ದರೆ, ಮತ್ತೊಂದಕ್ಕೆ ಚೆಂಗಾಳ್ವರಾಯ.

ಸಂಕೇತಿಗಳು ತಮ್ಮ ನೆಲೆಗಳನ್ನು ಆಯ್ಕೆ ಮಾಡಿಕೊಳ್ಳುವಾಗ ಇಟ್ಟುಕೊಂಡ ಧೋರಣೆಗಳನ್ನು ಇಲ್ಲಿ ವಿಶ್ಲೇಷಿಸಬಹುದು:

1. **ಕೋಟೆಗಳು :** ಕೋಟೆಗಳಲ್ಲಿ ವಾಸಿಸುವುದರ ಹಿಂದಿನ ಪ್ರಧಾನ ಉದ್ದೇಶವು ರಕ್ಷಣೆಯೇ ಆಗಿತ್ತು. ಸಂಕೇತಿಗಳು ನೆಲೆಸಿದ ಅನೇಕ ಊರುಗಳು ಕೋಟೆ ಉಳ್ಳವು, ಅಥವಾ ಅದಕ್ಕೆ ಸಮೀಪದವು. ಸಮೀಪದ ಹಳ್ಳಿಗಳಲ್ಲಿ ನೆಲೆಸಿದ್ದವರು ಹಗಲಿನಲ್ಲಿ ತೋಟತುಡಿಕೆಗಳಲ್ಲಿ ದುಡಿದು ರಾತ್ರಿ ಪಂಜಿನಕಳ್ಳರ ಕಾಟದಿಂದ ತಪ್ಪಿಸಿಕೊಳ್ಳಲು ಕೋಟೆಗಳಲ್ಲಿ ತಂಗುತ್ತಿದ್ದ ನಿದರ್ಶನಗಳಿವೆ. ಹೊಳೇನರಸೀಪುರ, ಬೀರೂರು, ಲಿಂಗದಹಳ್ಳಿ, ಕೌಶಿಕ, ಕೃಷ್ಣಾಪುರ, ಪೂಮಗಾಮೆ ಇಂಥ ಹಲವೆಡೆಗಳಲ್ಲಿ ಇದ್ದ ಪ್ರವೃತ್ತಿ ಅದು. ಕೋಟೆಯ ಅವಲಂಬನವಿಲ್ಲದ ನೆಲೆಗಳು, ಅನಂತರದ ನಿರಾತಂಕದ ದಿನಗಳದ್ದೆನ್ನುವುದು ಸ್ಪಷ್ಟವಿದೆ. ಇದು ಸಾರ್ವತ್ರಿಕ ಪ್ರವೃತ್ತಿಯ ಒಂದು ಭಾಗವೇ ಆಗಿದೆ.

2. **ಪುಣ್ಯಕ್ಷೇತ್ರ:** ಕರ್ನಾಟಕದಲ್ಲಿ ಕೌಶಿಕ ಮತ್ತು ಬೆಟ್ಟದಪುರ ಪುರಾಣಕ್ಷೇತ್ರಗಳಾದರೂ ಅವು ಅಲ್ಲಿನ ಸಂಕೇತಿನೆಲೆಗಳ ಸಾಮಾನ್ಯಲಕ್ಷಣವಲ್ಲ. ಈ ಕ್ಷೇತ್ರಗಳ ಜೊತೆಗೆ ದಕ್ಷಿಣಕಾಶಿ ಎಂದು ಪ್ರಸಿದ್ಧವಾದ ರಾಮನಾಥಪುರದ ಅಪರೂಪದ ನಿದರ್ಶನವಿದೆ (ದಕ್ಷಿಣದ ತೆಂಕಾಸಿಯೂ ದಕ್ಷಿಣಕಾಶಿ ಎಂದು ಪ್ರಸಿದ್ಧವಾದುದೇ). ಮೊಸಳೆ, ಜಾವಗಲ್, ಹೊಸಹೊಳಲು ಮೊದಲಾದಕಡೆ ಪ್ರಖ್ಯಾತ ದೇವಾಲಯಗಳೂ ಇವೆ. ಆದರೆ ವ್ಯವಸಾಯಕೇಂದ್ರಿತ ಬದುಕಿನ ಈ ಸಮುದಾಯಕ್ಕೆ ಇವೆಲ್ಲವೂ ಧಾರ್ಮಿಕ ಅಗತ್ಯಗಳನ್ನು ಪೂರೈಸಿಕೊಳ್ಳುವ ಆನುಷಂಗಿಕ ಸಂದರ್ಭಗಳು ಮಾತ್ರ ಆಗಿದ್ದವು.

3. **ಜಲಾಶ್ರಯ:** ಕೌಶಿಕ ಮತ್ತು ಬೆಟ್ಟದಪುರದ ಸಂದರ್ಭಗಳಲ್ಲಿಯೂ ವ್ಯಕ್ತವಾಗುವಂತೆ ಸಂಕೇತಿಗಳ ಅನೇಕ ಪ್ರಾಥಮಿಕ ನೆಲೆಗಳು ನದಿಗಳಿಂದ ಹತ್ತಾರು ಮೈಲು ದೂರ ಇದ್ದಂಥವು. ಅವರ ಆದ್ಯತೆ, ಕೆರೆಗಳನ್ನಾಶ್ರಯಿಸಿ ಮಾಡಬೇಕಾಗಿದ್ದ ವ್ಯವಸಾಯವೇ ಆಗಿದ್ದುದರಿಂದ ಅದು ಅನಿವಾರ್ಯವಾಗಿತ್ತು. ಆದರೆ ನಿತ್ಯನದೀಸ್ನಾನ ಮತ್ತು ಪುಣ್ಯಕ್ಷೇತ್ರಸ್ನಾನವು ಅವರ ಅನುಷ್ಠಾನದ ಭಾಗವಾಗಿಯೇ ಇತ್ತು. ನದಿಗಳಿಂದ ಹತ್ತಾರು ಮೈಲು ದೂರದ ನೆಲೆಗಳಲ್ಲಿ ವಾಸಿಸುತ್ತಿದ್ದರೂ ಅದು ಸಾಧ್ಯವಾದುದು ಅವರ ಶ್ರಮಸಹಿಷ್ಣುತೆ ಮತ್ತು ಶ್ರದ್ಧೆಯಿಂದಲೇ ಎನ್ನಬೇಕು. ಮರಿತಮ್ಮನಹಳ್ಳಿಯ 'ಸರ್ವಶ್ರೇಷ್ಠರು' ಹೇಮಾವತಿಗೆ, ಬೆಳವಾಡಿಯ



21 ತಾಮ್ರಪರ್ಣಿ ನದಿಯ ಪಾತ್ರ (ಅಂಬಾಸಮುದ್ರಂ)

2 *ಶ್ರೀ ನಾಚಾರಮ್ಮನ ಜೀವನಚರಿತ್ರೆ* (ಆಕೆಯ ಪ್ರವಾಸ) ಪು.೨೮.



22 ತುಂಗಾನದಿಯ ಒಡನಾಟ (ಮತ್ತೂರು)

'ಅಂಧಕ'ರು ಕಾವೇರಿಗೆ ನಿತ್ಯಸ್ನಾನಕ್ಕೆ ಹಲವು ಮೈಲುಗಳು ನಡೆದು ಬರುತ್ತಿದ್ದ ಪ್ರಸಿದ್ಧ ಸಂಗತಿಗಳಿಂದ ತೊಡಗಿ ಕೌಶಿಕ, ಬೆಟ್ಟದಪುರಗಳ ಸರ್ವರೂ ಅಂಥ ಅನುಷ್ಠಾನಗಳನ್ನು ಇಟ್ಟುಕೊಂಡಿದ್ದುದನ್ನು ಇಲ್ಲಿ ಉಲ್ಲೇಖಿಸಬಹುದು. ಚಿಕ್ಕಮುಗ್ಗೆ, ಸೋಮನಹಳ್ಳಿಯಂಥ ದೂರದ ಹಳ್ಳಿಗಳಿಂದಲೂ ಗೋಗರ್ಭಸ್ನಾನಕ್ಕಾಗಿ ನಿತ್ಯವೂ ರಾಮನಾಥಪುರಕ್ಕೆ ಹತ್ತಾರು ಮೈಲು ನಡೆದುಬಂದ ಆಸ್ತಿಕರು ಅವರು. ಈ ಜನ, ಸೋಮನಹಳ್ಳಿಯಲ್ಲಿ ತೋಟದಲ್ಲಿ ಅಗತೆ ಮಾಡಿ ರಾತ್ರಿ ಬರಗೂರಿನ ಮನೆಗೆ ಹಿಂದಿರುಗುತ್ತಿದ್ದರು. ರಾಮನಾಥ'ಪುರ, ರುದ್ರಪಟ್ಟಣಗಳಿಂದ ಹೊಳೇನರಸೀಪುರ ಇಲ್ಲವೆ ಮೈಸೂರಿಗೆ ಮುವತ್ತರಿಂದ ಐವತ್ತು ಮೈಲು ನಡೆದು ಹೋಗಿ ರಾಜಕಾರ್ಯ ಮುಗಿಸಿ ರಾತ್ರಿಯ ಅಗ್ನಿಹೋತ್ರದ ವೇಳೆಗೆ ನಡಿಗೆಯಲ್ಲೇ ಮರಳುತ್ತಿದ್ದರು. ಅವರ ದೇಹದಾರ್ಢ್ಯದ ಈ ಅಳತೆಯಿಂದ ಅವರೆಲ್ಲ ನದೀ ತೀರಗಳನ್ನೇ ಆಶ್ರಯಿಸಿದರೆನ್ನಬೇಕು (ಚಿತ್ರ 21, 22, 23).



23 ಕಾವೇರಿಯ ತೀರ್ಥಸ್ನಾನ (ರಾಮನಾಥಪುರ)

4. **ತೃಣಜಲಸಮೃದ್ಧಿ:** ಸಂಕೇತಿ ನೆಲೆಗಳಿಗೆ ಸಂಬಂಧಿಸಿದಂತೆ ಎಲ್ಲ ವಕ್ತೃಗಳೂ ಸಮಾನವಾಗಿ ಬಳಸಿದ ಪದಗುಚ್ಛವೆಂದರೆ 'ತೃಣಜಲಸಮೃದ್ಧವಾದ' ಜಾಗಗಳನ್ನು ಆರಿಸಿದರೆಂಬುದು. ವ್ಯವಸಾಯ ಮತ್ತು ಪಶುಪಾಲನೆಯ ಅವರ ಜೀವನಕ್ರಮದ ಕಡೆಗೂ ಅದು ಗಮನಸೆಳೆಯುತ್ತದೆ. ಕೌಶಿಕದ 'ಲಕ್ಷಮರದ ಆಗ್ರ', ಬೆಟ್ಟದಪುರದ ನಾಲ್ಕುನೂರು ಎಕರೆಯ ಬಾಗಾಯಿತು ಪ್ರಸಿದ್ಧವಾದವು. ಕರ್ನಾಟಕದಲ್ಲಿ ಅವರು ನೆಲೆಸಿದ ಎಲ್ಲೆಡೆಗಳಲ್ಲಿ ಅಕ್ಷರಶಃ ಸಹಸ್ರಾರು ಎಕರೆ ತೋಟಗಳನ್ನು ಬೆಳೆಸಿದ್ದಾರೆ. ಸೋಮನಹಳ್ಳಿಯಿಂದ ವಲಸೆಹೊರಟವರು ದಾರಿಯುದ್ದಕ್ಕೂ ಈರುಳ್ಳಿಯನ್ನು ಊರಿ, ಬೇಗ ಚೆನ್ನಾಗಿ ಮೊಳೆತ ಜಾಗವನ್ನೇ (ಆನಂದೂರು) ಆರಿಸಿಕೊಂಡರೆಂಬುದರ ತಾಂತ್ರಿಕಮಹತ್ವ ಏನಾದರೂ ಇರಲಿ, ಅವರ ಲಕ್ಷ್ಯ ವ್ಯವಸಾಯಾನುಕೂಲವೇ ಆಗಿತ್ತೆಂಬುದು ಮುಖ್ಯವಾಗುತ್ತದೆ." . . . ಅವರು ವಾಸಮಾಡುವುದಕ್ಕೆ ಮೊದಲು ಬೆಂಗಾಡಾಗಿದ್ದ ಪ್ರದೇಶವೆಲ್ಲಾ ಕೆಲವು ಕಾಲದೊಳಗೆ ರಮ್ಯವಾದ ಕ್ಷೇತ್ರಗಳಾದವು. ಅವರು ನೆಲೆಸಿದ ಎಡೆಯಲ್ಲಿ ನೀರಿಗೆ ತೊಂದರೆ ಇದ್ದರೆ ಕೂಡಲೇ ಕೆರೆ, ಕೊಳಗಳನ್ನು ಕಟ್ಟಿಸಿರುತ್ತಾರೆ. ಅವರು ನಿರ್ಮಿಸಿರುವ ದೇವಾಲಯಗಳು, ಸತ್ರಗಳು, ಮಂಟಪಗಳು ಇವೆಲ್ಲಾ ಅವರು ಮಾಡಿರುವ ಸಮಾಜಸೇವೆಗೆ ನಿದರ್ಶನಗಳಾಗಿವೆ. ಅವರಿಗಿದ್ದ ದೇಹಶಕ್ತಿಯನ್ನೂ, ಸಹನಾಗುಣವನ್ನೂ ಕೇಳಿದರೆ ನಮಗದು ಕಥೆಯಾಗಿ ಕಾಣುವುದು . . . ."[3] ನೆಲೆಗಳ ಆಯ್ಕೆಗೆ ತಮ್ಮದೇ ಆದ ಕಾರಣಗಳಿದ್ದಂತೆ, ನೆಲೆಸಿದನಂತರ ಅವಕ್ಕೆ ತಮ್ಮತನದ ಛಾಪುಒತ್ತಿದುದನ್ನೂ ಈ ಮಾತುಗಳು ಧ್ವನಿಸುತ್ತವೆ.

5. **'ವೃತ್ತಿ'ಗಳು:** ಇನಾಂತಿಗಳೂ ಜಹಗೀರುಗಳೂ ದೊರೆತ ಸಂದರ್ಭಗಳಲ್ಲಿ ನದಿಯಿಂದ ದೂರವಾದ ಕೆಲವು ಕುಗ್ರಾಮಗಳಲ್ಲಿಯೂ

---

3 ಪೂರ್ವೋಕ್ತ : ಪು. ೩೪

ನೆಲೆಸಿದ ನಿದರ್ಶನಗಳಿವೆ. ಮುದಲಾಪುರ, ಕೃಷ್ಣಾಪುರ, ಪೂಮಗಾಮೆಯಂಥ ಪ್ರಸಿದ್ಧ ಸರ್ವಮಾನ್ಯಗ್ರಾಮಗಳು ಬ್ರಾಹ್ಮಣರ ಅಗ್ರಹಾರಗಳಾಗಲಿ, ಪುಣ್ಯಕ್ಷೇತ್ರಗಳಾಗಲಿ ಆಗಿರಲಿಲ್ಲ. ನದಿಗೂ ಬಹುದೂರವಿದ್ದ ಆ ನೆಲೆಗಳು ಪೂರ್ಣವಾಗಿ ಕೆರೆಗಳನ್ನೇ ಆಶ್ರಯಿಸಿದ್ದವು. ಸಂಪನ್ಮೂಲಗಳಾಗಿಯೇ ದೊರೆತ ಸಂದರ್ಭಗಳು ಅವು. ಕೆಲವು ದಿವಾನಪದವಿಗಳನ್ನೂ ಹೆಬ್ಬಾರಿಕೆಗಳನ್ನೂ ಬಿಟ್ಟರೆ ಅವರಿಗೆ ದೊರೆತ ಎಲ್ಲ 'ವೃತ್ತಿ'ಗಳೂ ಉಳುವವನಿಗೆ ಭೂಮಿ ದೊರಕಿದ ಸಾರ್ಥಕನಿದರ್ಶನಗಳೇ. ಜೀವನಾಧಾರದ ಒತ್ತಡವಿದ್ದ ಸಂದರ್ಭಗಳಲ್ಲಿ 'ಸರ್ವಮಾನ್ಯ'ಗಳನ್ನೂ 'ವೃತ್ತಿ'ಗಳನ್ನೂ ಮುಕ್ತಹಸ್ತದಿಂದ ಸ್ವೀಕರಿಸಿದಂತೆಯೇ, ಜೀವನಾಧಾರದ ಕನಿಷ್ಠ ಅಗತ್ಯಗಳು ಪೂರೈಸಿದ ಸಂದರ್ಭಗಳಲ್ಲಿ ಅವುಗಳನ್ನು ನಿರಾಕರಿಸಿದ ನಿದರ್ಶನಗಳೂ ಇವೆ. ವಿಜಯನಗರದ ಅರಸರಿಂದ ಬಂದ ಮತ್ತೂರು-ಹೊಸಹಳ್ಳಿ 'ಸರ್ವಮಾನ್ಯ'ವನ್ನು ಮೊದಲು ನಿರಾಕರಿಸಿದರೂ, ತ್ರ್ಯಂಬಕರಾಯನು ಜಾಣತನದಿಂದ 'ಷಟ್ಕರ್ಮಗಳಲ್ಲಿ ಒಂದು ಪರಿಗ್ರಹ; ಅದು ಲೋಪವಾದವನು ಬ್ರಾಹ್ಮಣನಲ್ಲ' ಎಂಬ ವಾದವನ್ನು ಮುಂದೊಡ್ಡಿದಾಗ ಮಣಿದು ಸ್ವೀಕರಿಸಬೇಕಾಯಿತೆಂಬುದು ಮತ್ತೂರಿನಲ್ಲಿ ಉಳಿದುಬಂದ ಮೌಖಿಕ ಪರಂಪರೆ. ರಾಮನಾಥಪುರದ ಚಿತ್ರಕವಿ ನೀಲಕಂಠಶಾಸ್ತ್ರಿ, ಮರಿತಮ್ಮನಹಳ್ಳಿಯ 'ಸರ್ವಶಿಷ್ಟ'ರು, ಸೋಮನಹಳ್ಳಿ ಹಾಗೂ ಅಗ್ರಹಾರದ ವೈದಿಕರು ಇವರೆಲ್ಲರಿಗೆ ಸಂಬಂಧಿಸಿದ ಇಂಥ ಪ್ರಸಿದ್ಧ ಐತಿಹ್ಯಗಳಿವೆ.

6. **ಹಳ್ಳಿಗಳು :** ವ್ಯವಸಾಯ ಮತ್ತು ಅನುಷ್ಠಾನ ಅವರ ಜೀವನದ ಪ್ರಮುಖ ಅಂಗಗಳೆಂಬ ಸಂಗತಿಯ ಹಿನ್ನೆಲೆಯಲ್ಲಿ, ಅವರ ನೆಲೆಗಳೆಲ್ಲವೂ ಹಳ್ಳಿಗಳೇ ಆಗಿದ್ದುದನ್ನು ಗಮನಿಸಬಹುದು. ಆಳುವವರ ಆಸ್ಥಾನಗಳ ಆಶ್ರಯ ದೊರೆತಾಗಲೂ ರಾಜಧಾನಿಗಳಲ್ಲೂ ಇದ್ದ ಗ್ರಾಮೀಣ ಲಕ್ಷಣಗಳಿಂದಾಗಿ ಅವರ ಅನುಷ್ಠಾನಗಳಿಗೂ ವ್ಯವಸಾಯದ ನಂಟಿಗೂ ಭಂಗ ಬರುತ್ತಿದ್ದ ಸಂದರ್ಭಗಳು ಕಡಮೆ. "ದೋರಸಮುದ್ರವು ಎರಡು ಅಥವಾ ಪ್ರಾಯಶಃ ಮೂರು ಕೆರೆಗಳ ನಡುವೆ ನೆಲೆಸಿತ್ತು ಎಂಬುದನ್ನು ನೆನೆದಾಗ, ಅಲ್ಲಿ ದಟ್ಟಣೆಗೊಂಡಿದ್ದ ಜನಸಂಖ್ಯೆಯು ನಿಶ್ಚಯವಾಗಿಯೂ ಅಂಥ ವಿಸ್ತಾರವಾದ ಸರಬರಾಯಿ ವ್ಯವಸ್ಥೆಯನ್ನಪೇಕ್ಷಿಸುವಷ್ಟು ದೊಡ್ಡದಾಗಿತ್ತು ಎಂಬುದು ಮನದಟ್ಟಾಗುತ್ತದೆ. ಅದು ರಾಜಧಾನಿಯೊಂದಕ್ಕೂ ದೊಡ್ಡದಾದ ಜನಸಂಖ್ಯೆ ಎಂಬುದು ಏಕೆಂದರೆ, ಜೀವನವು ಆ ದಿನಗಳಲ್ಲಿ ಪ್ರಧಾನವಾಗಿ ಗ್ರಾಮೀಣವಾಗಿತ್ತು ಮತ್ತು ರಾಜಧಾನಿಯೊಂದು ಕೂಡ ಮೊದಲು ಹಳ್ಳಿ ಮತ್ತು ಅನಂತರವೇ ಒಂದು ಸರ್ಕಾರ ವ್ಯವಸ್ಥೆಯಾಗಿರುತ್ತಿತ್ತು" ಎಂಬ ಡಂಕನ್ ಡೆರೆಟ್‌ರ ಮಾತು (೧೯೫೭, ಪುಟ.೩೪-೩೫) ಆಗಿನ ಸಾರ್ವತ್ರಿಕ ವಸತಿ ಲಕ್ಷಣಗಳ ಮೇಲೆ ಬೆಳಕು ಚೆಲ್ಲುತ್ತದೆ.

7. **ಸೀಮಿತ ಪರಿಧಿ:** ಸಂಕೇತಿಗಳ ಪ್ರಮುಖ ಆಶ್ರಯದಾತರಾದ ಹೊಯ್ಸಳ, ವಿಜಯನಗರ, ಮೈಸೂರು ಸಂಸ್ಥಾನಗಳು ವಿಸ್ತರಿಸಿದಂತೆ ಅವರೂ ಹರಡಿಕೊಳ್ಳಲಿಲ್ಲ; ಬದಲಿಗೆ ಚಿಲಕುಂದ, ಪಾಲಹಳ್ಳಿ, ಕುಪ್ಪಳ್ಳಿ, ಬೆಟ್ಟದಪುರ, ಕಣಿವೆ, ಬಸವಾನಿ - ಈ ಪರಿಧಿಯೊಳಗೇ ಉಳಿದುಕೊಂಡರು.

8. **ಬೇಸಾಯಕ್ಕೆ ಪ್ರಧಾನ ಗಮನ:** ಸಂಕೇತಿ ರೈತರ ಅನುಭವ ಮತ್ತು ಪರಿಣತಿಗೆ ಹೇಗೋ ಹಾಗೆಯೇ ಅವರ ನೆಲೆಗಳ ವೈಶಿಷ್ಟ್ಯದ ಮೇಲೂ ಬೆಳಕುಚೆಲ್ಲುವ ಸಂಗತಿಯೊಂದನ್ನು ಇಲ್ಲಿ ಪ್ರಸ್ತಾಪಿಸಬಹುದು. ಅದು, ಅನುಭವಿಗಳಾದ ಸಂಕೇತಿ ಕೃಷಿಕರು ತಮ್ಮ ನೆಲೆಗಳು ಮತ್ತು ಬೇಸಾಯ ಸೌಲಭ್ಯವನ್ನು ಕುರಿತಂತೆ ಮಾಡುವ ವಿಶ್ಲೇಷಣೆ. ಅವರ ಕೃಷಿಜ್ಞಾನದ ಮುಖ್ಯ ಅಂಶಗಳನ್ನು ಇಲ್ಲಿ ಪಟ್ಟಿ ಮಾಡಿದೆ. ಸಂಕೇತಿಗಳು ನಿರ್ದಿಷ್ಟನೆಲೆಗಳನ್ನೇ ಆರಿಸಿಕೊಳ್ಳಲು ಇದ್ದ ಕಾರಣಗಳನ್ನು ಅವು ನಿಚ್ಚಳಗೊಳಿಸುತ್ತವೆ:

0.1 ಅಡಿಕೆ ಬೆಳೆಯಲು ಅತ್ಯುತ್ತಮ ಹವೆ ಎಂದರೆ ಎರಡು ಸಾವಿರದ ನಾಲ್ಕುನೂರು ಅಡಿ ಎತ್ತರದ ಘಟ್ಟದ ಸೆರಗು.

0.2 ಮಂಗಳೂರು (ಕರಾವಳಿ) ಅಡಿಕೆಯು ಗೋಟಿಗೆ ಯೋಗ್ಯವಾದರೆ, ಸಂಕೇತಿಗಳು ನೆಲೆಸಿದ ಈ ಪ್ರದೇಶಗಳಲ್ಲಿ ಬೆಳೆಯುವ ಅಡಿಕೆಯು ಗೋಟು, ಬಟ್ಟಲು, ಚೂರು, ಚಾತರಗಳೆಲ್ಲಕ್ಕೂ ಸಾಧ್ಯ (ತಿಪ್ಪೂರು ಅಡಿಕೆಯು ಕಳಿಗೆ, ಚಿಲಕುಂದದ ಅಡಿಕೆಯು ತೂಕಕ್ಕೆ ಹೆಚ್ಚು ಪ್ರಸಿದ್ಧ).

0.3 ಕರಾವಳಿಯಲ್ಲಿ ಮಳೆ ಹೆಚ್ಚಾದುದರಿಂದ ರೋಗ ಹೆಚ್ಚು. ಈ ಪ್ರದೇಶದಲ್ಲಿ ಅಲ್ಲಿನಂತೆ ಕೊಳೆರೋಗ ಇಲ್ಲ.

0.4 ಘಟ್ಟದ ಮೇಲೆ ಬಿಸಿಲು ಕಡಮೆ; ಮಳೆ, ಶೈತ್ಯ ಹೆಚ್ಚು. ಆದುದರಿಂದ ಫಸಲಿನ ಅವಧಿ ದೊಡ್ಡದು.

0.5 ಮಲೆನಾಡಿನಲ್ಲಿ ಅಡಿಕೆಯು ಶುದ್ಧಬೆಳೆಯಾದರೆ, ಈ ಪ್ರದೇಶದಲ್ಲಿ ಅದರ ಜೊತೆಗೆ ಹಂಬು, ಬಾಳೆ, ತೆಂಗು, ಮಾವು ಪೋಷಕಬೆಳೆಗಳು.

0.6 'ತೇವ ಆರಬಾರದು, ನೀರು ನಿಲ್ಲಬಾರದು' ಎಂಬ ಮೂಲಭೂತ ಅಗತ್ಯವನ್ನು ಇವರು ನೆಲೆಸಿದ ಪ್ರದೇಶವು ಸಮರ್ಥವಾಗಿ ಪೂರೈಸುತ್ತದೆ. ಅದರಿಂದಾಗಿಯೇ ಇಲ್ಲಿ ಇಳುವರಿ ಹೆಚ್ಚು.

0.7 ಇಲ್ಲಿನ ಕಪ್ಪು ಜಿಗುಟುಮಣ್ಣಿನ ಕೆರೆಬಯಲುಗಳು ಅಡಿಕೆತೋಟಗಳಿಗೆ ಅನುಕೂಲವಾಗಿವೆ. ಸಮನಾದ ಹರಹುಳ್ಳ (well distributed) ಮಳೆ; ಮೂಡಲ ಮತ್ತು ಪಡುವಲ ಸೋನೆಗಳೆರಡಕ್ಕೂ ಈಡಾಗುವುದು; ಹಾಸನ, ಚಿಕ್ಕಮಗಳೂರು, ಶಿವಮೊಗ್ಗ, ಮಡಿಕೇರಿಯ ಪಶ್ಚಿಮ ಭಾಗದ ಮುನ್ನೂರು ಅಂಗುಲ ಮಳೆಯು ಮಲೆನಾಡು ದೂರವಾದಂತೆಲ್ಲಾ ನಲವತ್ತು ಅಂಗುಲಗಳಿಂದ ಇಪ್ಪತ್ತೈದು ಅಂಗುಲಗಳಿಗೆ ಇಳಿಯುವುದು ಇವರಿಗೆ ಸಹಾಯಕವಾಗಿವೆ. ಅತಿವೃಷ್ಟಿ, ಅನಾವೃಷ್ಟಿಗಳಿಂದ ಮುಕ್ತವಾದ ಭಾಗವೂ ಇದಾಗಿದೆ (ನಕ್ಷೆ 7 ಪು.274).

ಸಂಕೇತಿ ವಲಸಿಗರು ಪಂಚಲಿಂಗಕ್ಷೇತ್ರವಾದ ತಲಕಾಡಿನ ಬಳಿ ಉಳಿಯದೆ, ಪಶ್ಚಿಮಘಟ್ಟಗಳನ್ನೇರದೆ, ಮಲೆನಾಡಿನ ಸೆರಗಿನ ಕೆರೆಗಳ ಬಯಲುಗಳನ್ನಾಶ್ರಯಿಸಿದ್ದರ ಕಾರಣಗಳಲ್ಲಿ ಹವಾಗುಣ, ಭೂಗುಣಗಳು ಪ್ರಧಾನವಾಗಿ ತಮ್ಮ ಪ್ರಭಾವ ಬೀರಿವೆ ಎಂಬುದು ಇದರಿಂದ ಸ್ಪಷ್ಟವಾಗುತ್ತದೆ.

9. **ಭೂಗುಣ-ಹವಾಗುಣ:** ಭೂಲಕ್ಷಣವು ಮೈದಾನದ ಸಮೀಪದ್ದಾಗಿರುತ್ತಿದ್ದರೂ, ಅರಣ್ಯಲಕ್ಷಣ, ಹವಾಮಾನ, ಆರ್ಥಿಕತೆಗೆ ಸಂಬಂಧಿಸಿದಂತೆ ಮಲೆನಾಡನ್ನು ಹೋಲುವ ಮಧ್ಯಅರಕಲಗೂಡು, ಹಾಸನ ತಾಲ್ಲೂಕಿನ ಪಶ್ಚಿಮ; ಆಲೂರು ತಾಲ್ಲೂಕಿನ ಪೂರ್ವ, ಬೇಲೂರು ಮಧ್ಯ, ಪೂರ್ವ ಅರಸೀಕೆರೆಯ ಅರೆಮಲೆನಾಡು ಪ್ರದೇಶಗಳು; ಅನೇಕ ಕಾವಲುಗಳುಳ್ಳ ಹೊಳೇನರಸೀಪುರ ತಾಲ್ಲೂಕು, ಚೆನ್ನರಾಯಪಟ್ಟಣ ತಾಲ್ಲೂಕು; ಅರಸೀಕೆರೆ ಮತ್ತು ಹಾಸನ ತಾಲ್ಲೂಕಿನ ಪೂರ್ವ, ಅರಕಲಗೂಡಿನ ಆಗ್ನೇಯದ ಮೈದಾನ ಪ್ರದೇಶಗಳು; ಇಂಥದೇ ಲಕ್ಷಣದ ಬೆಟ್ಟದಪುರ, ಪಿರಿಯಪಟ್ಟಣಗಳ ಅರೆಮಲೆನಾಡು; ಚಿಲಕುಂದದ ಮೈದಾನ; ಕಡೂರಿನ ಪೂರ್ವ ಮತ್ತು ತರೀಕೆರೆ ತಾಲ್ಲೂಕಿನ ಮೈದಾನಗಳು; ಶಿವಮೊಗ್ಗೆಯ ಅರೆಮಲೆನಾಡುಪ್ರದೇಶ- ಇವರನ್ನು ಆಕರ್ಷಿಸಿವೆ. ಸಮಾನ ಹಿತಕರ ವಾಯುಗುಣ ಈ ಎಲ್ಲೆಡೆಯ ಸಾಮಾನ್ಯ ಲಕ್ಷಣ. ಸಂಕೇತಿಗಳು (ಪಶ್ಚಿಮ) ಘಟ್ಟವನ್ನೇಕೆ ಏರಲಿಲ್ಲ ಎಂಬುದಕ್ಕೆ ಒಂದು ಕುತೂಹಲಕಾರಿಯಾದ ವಿವರಣೆ ಇದೆ. 'ಕಣಿವೆ'ಯ ಬಳಿಗೆ ರಾಮಲಕ್ಷ್ಮಣರು ಬರುತ್ತಿದ್ದಂತೆಯೇ ಅವರಲ್ಲಿ ವೈಮನಸ್ಯಮೂಡಿತೆಂದೂ ಆದುದರಿಂದಲೇ ಅವರು ಕೊಡಗಿಗೆ ಕಾಲಿಡಲಿಲ್ಲವೆಂದೂ (ಅದಕ್ಕೆ 'ರಾಮಸ್ವಾಮಿ ಕಣಿವೆ' ಎಂದೇ ಹೆಸರಿದೆ) ಒಂದು ಐತಿಹ್ಯವಿದೆ. ಆದರೆ 'ಇರುಪ್ಪುಮಾಹಾತ್ಮ್ಯ'ದಲ್ಲಿ ಕೊಡಗನ್ನು ದಾಟಿ ಕೇರಳದ ನೆಲಕ್ಕೆ ಕಾಲಿಟ್ಟಾಗ ರಾಮಲಕ್ಷ್ಮಣರಲ್ಲಿ ವೈಮನಸ್ಯ ಮೂಡಿತೆಂಬ ಐತಿಹ್ಯವು ಉಲ್ಲೇಖವಾಗಿದೆ. ಆದುದರಿಂದ ಸಂಕೇತಿಗಳು ಘಟ್ಟದ ಮೇಲಕ್ಕೆ ಹೋಗಲಿಲ್ಲವೆಂಬುದಕ್ಕೆ ಇಂಥ ಕಾರಣಗಳನ್ನು ಜೋಡಿಸುವುದು ಯುಕ್ತವಾಗದು. ಅಪರೂಪಕ್ಕಾಗಿಯಾದರೂ ಘಟ್ಟಜೀವನದ ನಿದರ್ಶನವೊಂದು ತೀರ್ಥಹಳ್ಳಿ ತಾಲೂಕಿನ ಬಸವಾನಿಯಲ್ಲಿ ದೊರೆಯುತ್ತದೆ. ಆದರೆ ಆ ಪ್ರಯೋಗವು ವಿಫಲವಾಗಿ ಅವರು ಲಿಂಗದಹಳ್ಳಿಗೆ ಮರಳಬೇಕಾಯಿತು. ಮಲೆನಾಡಿನ ಸೆರಗಿನ ಹಿರಗನಹಳ್ಳಿಯಲ್ಲಿಯೇ ಅರಣ್ಯಗಳು ದಟ್ಟವಾಗಿದ್ದ ಕಾಲದಲ್ಲಿ ಹೊಟ್ಟೆಯ ಗಡ್ಡೆರೋಗದ ಕಾಟವಿತ್ತು; ಅಲ್ಲಿನ ಸಂಕೇತಿಗಳು ಮತ್ತೂ ಪಶ್ಚಿಮಕ್ಕೆ ಹೋಗಲಿಲ್ಲ.

10. **ಸುರಕ್ಷಿತತೆ:** ಮಲೆನಾಡಿನಲ್ಲಿದ್ದ ಬರ್ಬರ ನಾಯಕರಿಂದ ಒದಗುತ್ತಿದ್ದ ಪ್ರಾಣಾಂತಕ ಅಪಾಯಗಳನ್ನೂ ಉಪೇಕ್ಷಿಸುವಂತಿಲ್ಲ. ಆದರೆ, ಹೊಯ್ಸಳರ ಪ್ರಾರಂಭಿಕ ಶತಮಾನದ ಕಾರ್ಯಕ್ಷೇತ್ರವಾಗಿದ್ದ ಹಾಸನಜಿಲ್ಲೆ, ಮತ್ತು ಮೈಸೂರು, ಚಿಕ್ಕಮಗಳೂರು, ತುಮಕೂರು ಜಿಲ್ಲೆಗಳ ಭಾಗಗಳನ್ನೊಳಗೊಂಡ ಪ್ರದೇಶವು ಪ್ರಧಾನಯುದ್ಧ, ಪ್ರವಾಹಗಳಿಂದ ದೂರವಾಗಿತ್ತೆಂಬುದರ ಜೊತೆಗೆ, ಅದರ ಒಟ್ಟು ಪರಿಸರವು ಸಮರ್ಥಪೀಳಿಗೆ ಬೆಳೆಯಲು ಅನುಕೂಲದ್ದಾಗಿತ್ತೆಂಬುದು ಸಂಕೇತಿಗಳ ನೆಲೆಗಳ ಬಗೆಗೆ ಇರುವ ಮತ್ತೊಂದು ಸಮರ್ಥನೆಯ ಅಂಶವಾಗಿದೆ.

11. **ಸರ್ವತ್ರ ಸಮಾನ ಪರಿಸರ:** ಈ ಅಂಶಗಳೆಲ್ಲವೂ, ತಿರುನೆಲ್‌ವೇಲಿಯಿಂದ ವಲಸೆಬಂದಾಗಲೇ ಈ ಸಮುದಾಯಕ್ಕೆ ಸ್ಪಷ್ಟವಾಗಿತ್ತೆನ್ನುವಂತಿಲ್ಲ. ಇಲ್ಲಿನ ಬದುಕು ಉಂಟುಮಾಡಿದ ಅನುಭವಗಳೂ ಅವರ ಪೂರ್ವಜ್ಞಾನಕ್ಕೆ ಪೂರಕವಾಗಿ ಸೇರಿದವು ಎನ್ನಬಹುದು. ಸಂಕೇತಿಗಳ ಮೂಲಸ್ಥಾನವಾದ ಶೆಂಕೋಟ್ಟೈನ(ತಿರುನೆಲ್‌ವೇಲಿ) ಸಮಾನ ಪರಿಸರವು, ವಲಸೆಬಂದ ಆ ಜನಗಳ ಮಾನಸಿಕ ಅನಿಶ್ಚಿತತೆಯ ಸಂದರ್ಭದಲ್ಲಿ ಉಂಟುಮಾಡಿರಬಹುದಾದ ಸಂವೇದನೆಯು ಈ ಪ್ರದೇಶದಲ್ಲಿ ಆಕರ್ಷಣೆಯನ್ನು ಮೂಡಿಸಿದೆ ಎನ್ನುವುದು ಸಹಜ ವಿವರಣೆಯೇ ಆಗುತ್ತದೆ. ಮೊದಲು ಶೆಂಕೋಟ್ಟೈಘಟ್ಟಗಳ ಪೂರ್ವಸೆರಗಿನ ತಾಮ್ರಪರ್ಣಿ, ಚಿತ್ರಾ, ಹನುಮಾನ್, ಘಡನಾ, ರಾಮ, ಹರಿಹರ ನದಿಗಳ ತೀರದಲ್ಲಿ ನೆಲೆಸಿದ್ದವರು ವಲಸೆಯನಂತರ ಕರ್ನಾಟಕದ ಘಟ್ಟಗಳ ಪೂರ್ವಸೆರಗಿನ ಕಾವೇರಿ, ಹೇಮಾವತಿ, ತುಂಗಾ ನದಿಗಳ ತೀರದಲ್ಲಿ ನೆಲೆಸಿದರು.

12. **ದಕ್ಷಿಣದ ನೆಲೆಗಳಲ್ಲಿ:** ದಕ್ಷಿಣದ ಸಂಕೇತಿಗಳ ಅಬಾಧಿತ ಪಾರಂಪರಿಕ ವ್ಯವಸ್ಥೆಯ ಕಾರಣದಿಂದಾಗಿಯೇ ವೈದಿಕಕ್ಷೇತ್ರಗಳು ವ್ಯವಸಾಯಕ್ಕಿಂತ ಮೇಲುಗೈ ಪಡೆದವು. ಆದುದರಿಂದ ಅವರ ನೆಲೆಗಳು ಪುಣ್ಯಕ್ಷೇತ್ರಗಳು, ತೀರ್ಥಕ್ಷೇತ್ರಗಳು, ನದೀತೀರ, ದೇವಾಲಯಗಳು - ಇವುಗಳಿಗೆ ಹೊಂದಿಕೊಂಡಂತಿತ್ತು. ಅಂಥ ನೆಲೆಗಳು ಹಳ್ಳಿಗಳೇ ಆಗಿರಬೇಕೆಂಬ ಮಿತಿ ಅವರಿಗೆ ಎದುರಾಗಲಿಲ್ಲ. ಆದರೂ ಅವರು ಶೆಂಕೋಟ್ಟೈ, ತಿರುನೆಲ್‌ವೇಲಿ, ಕನ್ಯಾಕುಮಾರಿ ಮತ್ತು ತಿರುವನಂತಪುರಂ ಪರಿಧಿಯಲ್ಲಿ ಮಾತ್ರ ಹರಡಿಕೊಂಡುದು, ಕರ್ನಾಟಕದ ಹರಹಿನೊಂದಿಗೆ ತೀವ್ರ ಸಾಮ್ಯವನ್ನು ಪಡೆದಿದೆ.

ಇವೆಲ್ಲವೂ ಸ್ಪಷ್ಟಪಡಿಸುವ ಸಂಗತಿ ಎಂದರೆ, ಸಂಕೇತಿಗಳು ನಾನಾ ಕಾರಣಗಳಿಂದ ತೀವ್ರ ತರಂಗಿತ ವಲಸೆಗಳಿಗೆ ತುತ್ತಾದರೂ, ತಮ್ಮ ಜೀವನವಿಧಾನಕ್ಕೆ ಪೂರಕವಾದ ಪ್ರದೇಶಗಳನ್ನೇ ಆರಿಸಿಕೊಂಡರು ಮತ್ತು ತಮ್ಮ ವಿಸ್ತಾರ ಹರಹಿನ ಸಂದರ್ಭದಲ್ಲಿಯೂ ಈ ಅಂಶವನ್ನು ಉಪೇಕ್ಷಿಸಲಿಲ್ಲ ಎಂಬುದು. ಜೊತೆಗೆ, ಹೆಚ್ಚುಹೆಚ್ಚು ಉತ್ತಮ ಸ್ಥಳಗಳನ್ನೇ ಅವರು ಆರಿಸಿಕೊಂಡು ತಮ್ಮ ಜೀವನವನ್ನು ಸುಧಾರಿಸಿಕೊಳ್ಳಬಯಸಿದರೆಂಬುದೂ ಎದ್ದುಕಾಣುವ ಸಂಗತಿಯಾಗಿದೆ.


ಆ. ಗ್ರಾಮ ಒಕ್ಕೂಟಗಳು:

ಸಂಕೇತಿಗಳು ಪರಂಪರಾಗತವಾಗಿ ನೆಲೆಸಿ, ಅಲ್ಲಿನ ಬದುಕಿನಲ್ಲಿ ತಮ್ಮನ್ನು ನಿರಂತರವಾಗಿ ಗುರುತಿಸಿಕೊಂಡ ನೆಲೆಗಳ ವಿಶಿಷ್ಟ ಲಕ್ಷಣವೆಂದರೆ ಗ್ರಾಮ ಒಕ್ಕೂಟಗಳು.

1. **ಕರ್ನಾಟಕ:** ಕರ್ನಾಟಕದಲ್ಲಿ ಬಸವಾನಿ, ಮತ್ತೂರು-ಹೊಸಹಳ್ಳಿ, ಲಿಂಗದಹಳ್ಳಿ ಮಾತ್ರ ಬಹಳ ಸೀಮಿತವಾಗಿ ಉಳಿದುಕೊಂಡ ನೆಲೆಗಳು. ಕಾವೇರಿ-ಹೇಮಾವತಿ ನದಿಗಳ ನಡುವೆ ಹರಡಿಹೋದ ಅನೇಕ ಹಳ್ಳಿಗಳು ಅಷ್ಟ, ಪಂಚಸಂಖ್ಯೆಯ ಮಿತಿಯಲ್ಲಿ ನಿಲ್ಲದೆ 'ಮಧ್ಯದೇಶ'ವೆಂಬ ಅಂಕಿತದ ವಿಶಾಲ ಒಕ್ಕೂಟದಲ್ಲಿ ಸೇರಿವೆ. ಕಾವೇರಿಯ ದಕ್ಷಿಣದ ಚಿಲಕುಂದವೂ ಒಕ್ಕೂಟವ್ಯವಸ್ಥೆಯಿಂದ ಹೊರತಾಗಿ 'ದಕ್ಷಿಣದೇಶ' ಎಂಬ ಸಂಜ್ಞೆಯನ್ನು ಹೊಂದಿದೆ.


ಕರ್ನಾಟಕದ ಸಂಕೇತಿಗಳ ಅಷ್ಟಗ್ರಾಮ, ಪಂಚಗ್ರಾಮಗಳ ಘಟಕಗಳ ವಿವರಗಳು ಇಂದು ಖಚಿತವಾಗಿ ದೊರೆಯದುದಕ್ಕೆ ಅನೇಕ ಸಂಕೇತಿ ಮೂಲನೆಲೆಗಳು ಬೇಚಿರಾಕ್ ಗ್ರಾಮಗಳಾಗಿರುವುದು, ಕೆಲವನ್ನು ಸಂಕೇತಿಗಳು ಮಾತ್ರ ತೊರೆದಿರುವುದು, ಕೆಲವು ಗ್ರಾಮಗಳ ಪ್ರಾಮುಖ್ಯವು ಮಾಸಿರುವುದು ಕಾರಣವಾಗಿದೆ. ಮೂಲದ ಅಷ್ಟಗ್ರಾಮ ಒಕ್ಕೂಟದ ಘಟಕಗಳಿಗೆ ಹೊಸ ಹೆಚ್ಚಿನ ನೆಲೆಗಳು ಸೇರಿದುದರಿಂದಲೂ ಆದ ಸ್ಥಿತ್ಯಂತರದಿಂದಾಗಿಯೇ ಹೊಸ ಪಂಚಗ್ರಾಮ ಒಕ್ಕೂಟಗಳು ತಲೆಎತ್ತಿವೆ. ನಮಗೆ ಈಗ ದೊರೆಯುವುದು, ತೀರ ಈಚಿನ ಕಾಲದಲ್ಲಿ ಕ್ರಿಯಾತ್ಮಕವಾಗಿ ಉಳಿದಿರುವ ಗ್ರಾಮ ಒಕ್ಕೂಟವಿವರಗಳು ಮಾತ್ರ. ಮೂಲತಃ ಇದ್ದ ಕೌಶಿಕ ಅಷ್ಟಗ್ರಾಮಕ್ಕೆ ಬದಲಾಗಿ ಈಗ ಕಾಣುವುದು ಕೌಶಿಕ-ಪಂಚಗ್ರಾಮ, ಮುದಲಾಪುರ-ಅಷ್ಟಗ್ರಾಮ, ಹಂದನಹಾಲು ಪಂಚಗ್ರಾಮ-ಒಕ್ಕೂಟಗಳು. ಇವಲ್ಲದೆ ಇತರ ಗ್ರಾಮಕೂಟಗಳೂ ಇವೆ. ಆಧುನಿಕ ಪರಿಸರದಲ್ಲಿ ಕುಂದಿದ ಒಕ್ಕೂಟವ್ಯವಸ್ಥೆಯ ಕ್ರಿಯಾತ್ಮಕತೆಯೂ ಈ ಒಕ್ಕೂಟಗಳ ಅಸ್ಪಷ್ಟ ವಿವರಗಳಿಗೆ ಕಾರಣವಾಗಿದೆ. ಈ ವಿವರಗಳಿಗೆ ಸಂಬಂಧಿಸಿದಂತೆ ದೊರೆತ ವಿಭಿನ್ನ ಪಾಠಗಳಲ್ಲಿ ಕಾರ್ಯಸೌಕರ್ಯದ ದೃಷ್ಟಿಯಿಂದ ಉಚಿತವೆನಿಸಿದ ಪಾಠಗಳನ್ನು ಇಲ್ಲಿ ಕೊಟ್ಟಿದೆ.

0.1 ಕೌಶಿಕ ಪಂಚಗ್ರಾಮ:



ಕೌಶಿಕ (ಕೌಶಿಕ ಸಂಕೇತಿಗಳ ಪ್ರಧಾನ ಮೂಲನೆಲೆ), ಮೊಸಳೆ, ಕಟ್ಟಾಯ (ಈಗ ಇಲ್ಲಿ ಸಂಕೇತಿಗಳಿಲ್ಲ), ಹಿರಿಗನಹಳ್ಳಿ, ಮುದ್ದನಹಳ್ಳಿ (ಬೇಚಿರಾಕ್ ಗ್ರಾಮ).

0.2 ಹಂದನಹಾಲು ಪಂಚಗ್ರಾಮ:




ಹಂದನಹಾಲು (ಈ ಒಕ್ಕೂಟದ ಪ್ರಧಾನನೆಲೆ), ರಾಮೇನಹಳ್ಳಿ (ಈಗ ಸಂಕೇತಿಗಳಿಲ್ಲ),

ತೆಂಡೇಕೆರೆ (ಈಗ ಸಂಕೇತಿಗಳಿಲ್ಲ), ಅನುಗನಹಾಳು (ಈಗ ಸಂಕೇತಿಗಳಿಲ್ಲ),


ಮಲ್ಲಾಪುರ (ಕೊಮಾರನಹಳ್ಳಿ) (ಹಗರೆ-ಹಳೇಬೀಡು ದಾರಿಯಲ್ಲಿ).

0.3 ಮುದಲಾಪುರ ಅಷ್ಟಗ್ರಾಮ:



ಮುದಲಾಪುರ (ಚೆಂನಾಪುರವು ಮೊದಲು ಸರ್ವಮಾನ್ಯವಾಗಿ ಬಂದುದರಿಂದ 'ಮುದಲಾ'ಪುರ ಎನಿಸಿತು). ಕೊಂಡಗುಳ (ಈಗ ಸಂಕೇತಿಗಳಿಲ್ಲ), ಪೂಮಗಾಮೆ, ಚಿಕುಮೈನಹಳ್ಳಿ, ಕೃಷ್ಣಾಪುರ, ನಿಟ್ಟೂರು, ಮುಗಳೂರು, ಅನುಗವಳ್ಳಿ (ಈಗ ಸಂಕೇತಿಗಳಿಲ್ಲ) (ಈ ಅಷ್ಟಗ್ರಾಮದ ಬಹಳ ಬಳಕೆಯ ಮುಖ್ಯನೆಲೆಯಾಗಿದ್ದ ಸಾಲಗಾಮೆ, ಅಲ್ಲಿನ ಸಂಕೇತಿಗಳು ಹೊರವಲಸೆ ಹೋದಂತೆ ಕ್ರಿಯಾತ್ಮಕವಾಗಿ ಸಂಬಂಧ - ದೂರವಾಯಿತು).

0.4 ಹಾಸನಜಿಲ್ಲೆಯಿಂದ ದೂರ ಚದುರಿದ ಸಂಕೇತಿಗಳು ಮಾಡಿಕೊಂಡ ಕಲ್ಲಹಳ್ಳಿ ಅಷ್ಟಗ್ರಾಮ :



ವರಾಹನಾಥನ ಕಲ್ಲಹಳ್ಳಿ (ಹೇಮಾವತಿ, ಕಾವೇರಿ ಸಂಗಮ. ಮುಳುಗಡೆ)

ಹೊಸಕೋಟೆ (ಮುಳುಗಡೆ), ಕುಪ್ಪಳ್ಳಿ, ತೇಗನಹಳ್ಳಿ, ಮಡವನಕೊರಿ,

ವಿಠಲಾಪುರ (ಈಗ ಸಂಕೇತಿಗಳಿಲ್ಲ), ತಿಪ್ಪೂರು (ಬೂಕನಕೆರೆ), ನಾಟನಹಳ್ಳಿ (ಈಗ ಸಂಕೇತಿಗಳಿಲ್ಲ);


0.5 ಬೆಟ್ಟದಪುರ ಅಷ್ಟಗ್ರಾಮದ ವಿವರಗಳು ಹೆಚ್ಚು ಭಿನ್ನವಾಗಿಲ್ಲದುದಕ್ಕೆ ಆ ಉಪಪಂಗಡದ ನೆಲೆಗಳ ಸಂಖ್ಯಾಮಿತಿಯೇ ಕಾರಣವಾಗಿದೆ.

ಬೆಟ್ಟದಪುರ ಅಷ್ಟಗ್ರಾಮದ ವಿವರಗಳು:

ಬೆಟ್ಟದಪುರ (ಪ್ರಧಾನಕೇಂದ್ರ), ಹನಸೋಗೆ, ರುದ್ರಪಟ್ಟಣ, ಸಾಲಿಗ್ರಾಮ, ಹರವೆ, ಬಸವಪಟ್ಟಣ, ಕಣಗಾಲ್, ರಾಗಿಮರೂರು. ಆದರೆ ಪಿರಿಯಪಟ್ಟಣ, ಶೀಗೋಳು, ರಾಮನಾಥಪುರ, ಜನ್ನೇಗೌಡನ ಹೊಸಹಳ್ಳಿಗಳನ್ನೂ ಬೆಟ್ಟದಪುರ ಸಂಕೇತಿ ನೆಲೆಗಳೆಂದು ಗುರುತಿಸಿದವರೂ ಉಂಟು. ಎಲ್ಲರೂ ಬಸವಪಟ್ಟಣವನ್ನು ಸೇರಿಸಿಯೇ ಇದ್ದಾರೆ. ಕಾರ್ಯಸೌಕರ್ಯ, ಪ್ರಾಚೀನತೆ ಎರಡು ದೃಷ್ಟಿಯಿಂದಲೂ

ಪಿರಿಯಪಟ್ಟಣ ಮತ್ತು ಜನ್ನೇಗೌಡನ ಹೊಸಹಳ್ಳಿಗಳು ಬಸವಪಟ್ಟಣಕ್ಕಿಂತ ಮೊದಲು ಬರುತ್ತವೆ. ಮೈಸೂರಿನ ಪುರೋಹಿತರಾದ ವಿಶ್ವೇಶ್ವರಾವಧಾನಿ (೮೦) ಅವರು ಪ್ರಧಾನಗ್ರಾಮ ಉಪಗ್ರಾಮವೆಂಬ ವಿಭಜನೆಯನ್ನು ಈ ಸಂಬಂಧದಲ್ಲಿ ಕೊಟ್ಟಿದ್ದಾರೆ.


ಪ್ರಧಾನ ಗ್ರಾಮ	**ಉಪಗ್ರಾಮ**
ಬೆಟ್ಟದಪುರ	ಕಣಗಾಲು
ರುದ್ರಪಟ್ಟಣ	ಹನ್ಯಾಳು
ಹನಸೋಗೆ	ಹರವೆ
ಸಾಲಿಗ್ರಾಮ	ಶೀಗೋಳು




ಯಾವುದೇ ಹಳ್ಳಿಯಲ್ಲಿ ನಡೆಯುವ ಶುಭಶೋಭನಗಳು, ದುರಂತಗಳು, ನ್ಯಾಯಪಂಚಾಯಿತಿಗಳು, ಊರೊಟ್ಟಿನ ಸಮಾರಂಭಗಳಲ್ಲಿ ಆಯಾ ಒಕ್ಕೂಟದ ಎಲ್ಲ ಹಳ್ಳಿಗಳೂ ಬೆರೆಯುವುದು ಈ ವ್ಯವಸ್ಥೆಯ ಲಕ್ಷಣ. ಪರಸ್ಪರ ವೈವಾಹಿಕ ಸಂಬಂಧಗಳೂ ಅಲ್ಲಿಯೇ ನಡೆಯುತ್ತಿದ್ದುದರಿಂದ ಈ ಒಕ್ಕೂಟಗಳು ಬಲಿಷ್ಠ ಸಾಮಾಜಿಕ ವ್ಯವಸ್ಥೆಗಳಾಗಿರುತ್ತಿದ್ದವು. ಆದರೆ ಈ ಗ್ರಾಮ ಒಕ್ಕೂಟ ವ್ಯವಸ್ಥೆಯು ಸಂಕೇತಿಗಳಿಗೇ ವಿಶಿಷ್ಟವಾದುದಲ್ಲ.

2. ದಕ್ಷಿಣ: 'ಅಷ್ಟಗ್ರಾಮ' ಎಂಬ ಪದವಾಗಲೀ ಅಂಥದೊಂದು ಒಕ್ಕೂಟವ್ಯವಸ್ಥೆಯ ನೆನಪಾಗಲೀ ಇಂದು ಉಳಿದಿಲ್ಲದಿದ್ದರೂ, ದಕ್ಷಿಣದ ಸಂಕೇತಿನೆಲೆಗಳಲ್ಲಿಯೂ ಆ ಮಾದರಿಯ ಗ್ರಾಮಸಮೂಹಗಳನ್ನು ಗುರುತಿಸಬಹುದಾಗಿದೆ. ಅವುಗಳ ಕೆಲವು ನಿದರ್ಶನಗಳನ್ನು ಇಲ್ಲಿ ನೋಡಬಹುದು:


0.1 ನಾಗರಕೋಯಿಲ್-ಗ್ರಾಮ ಒಕ್ಕೂಟ:



0.2 ಶೆಂಕೋಟ್ಟೈ-ಗ್ರಾಮ ಒಕ್ಕೂಟ:



0.3 ಶಾಪತ್ತೂರು-ಗ್ರಾಮ ಒಕ್ಕೂಟ:



(ಶಾಪತ್ತೂರು ನಾಶವಾದಂತೆ, ಶಾಪತ್ತೂರು ಕೇಂದ್ರಿತ ಕೆಲ ಪ್ರಾಚೀನ ನೆಲೆಗಳೂ ನಾಶವಾಗಿವೆ.)

ಪಾರಂಪರಿಕವಾಗಿ ದೊಡ್ಡಸಂಖ್ಯೆಯ ಸಂಕೇತಿ ಕುಟುಂಬಗಳಿರುವ ನೆಲೆಗಳಿಗೆ 'ಸಂಕೇತಂ' ಎಂದು ಹೇಳುವುದು 'ದಕ್ಷಿಣ'ದಲ್ಲಿ ಕಾಣಸುತ್ತದೆ. ಆದರೆ ಅದು 'ಗುಂಪು', 'ಸಮೂಹ' ಎಂಬ ಅರ್ಥದ ಸಾಮಾನ್ಯ ಬಳಕೆಯಾಗಿದೆಯೇ ಹೊರತು, ಸಂಕೇತಿಗಳಿಗೇ ಮೀಸಲಾದ ಪಾರಿಭಾಷಿಕಪದವಾಗಿ ಅಲ್ಲ. ಅರಿವಿಕೆರ, ಆವರಾಂಚೆರಿ, ಏರ್‌ವಾಡಿ, ಶೆಂಕೋಟ್ಟೈ ಮೊದಲಾದುವು ಸಂಕೇತಿಗಳ ಅಂಥ ಸಂಕೇತಂಗಳು.

ಕರ್ನಾಟಕದಲ್ಲಿ ವ್ಯವಸಾಯಕ್ಕೆ ಮತ್ತು ದಕ್ಷಿಣದಲ್ಲಿ ದೇವಸ್ಥಾನ ಕೇಂದ್ರಿತತೆಗೆ ಬಿದ್ದ ಒತ್ತು, ವ್ಯವಸಾಯ ಮತ್ತು ವೈದಿಕತೆಯ ಸಮನ್ವಯದ ಮಿತಿಯಲ್ಲಿಯೇ ನಡೆದುದರಿಂದಲೇ, ಎರಡೂ ಪ್ರದೇಶಗಳ ಮಿತ-ಹರಹಿನಲ್ಲಿನ ಭೂ ಮತ್ತು ವಾಯುಗುಣ ಹಾಗೂ ಸುರಕ್ಷಿತತೆಯ ತೀವ್ರ ಸಾಮ್ಯವನ್ನು ಗುರುತಿಸಬಹುದಾಗಿದೆ. ಸಾಮಾಜಿಕ ಭದ್ರತೆ ಮತ್ತು ಸಾಂಸ್ಕೃತಿಕ ಕ್ರಿಯಾಶೀಲತೆಗಾಗಿ ಆದ ಗ್ರಾಮಒಕ್ಕೂಟಗಳಲ್ಲಿಯೂ ಈ ಸಾಮ್ಯವನ್ನು ಗುರುತಿಸಬಹುದು. 'ದಟ್ಟ ಸಾಂಸ್ಕೃತಿಕ ಕ್ರಿಯಾಶೀಲ ಕೇಂದ್ರಗಳು' ಎಂಬ ಅರ್ಥದಲ್ಲಿ

ದಕ್ಷಿಣದಲ್ಲಿ ಅಸ್ತಿತ್ವದಲ್ಲಿದ್ದ 'ಸಂಕೇತಂ'ಗಳು ನಶಿಸಿದುದಕ್ಕೆ ಅಲ್ಲಿನ ಅತ್ಯಲ್ಪ ಜನಸಂಖ್ಯೆ ಮತ್ತು ನಗರೀಕರಣದ ಆಧಿಕ್ಯವೇ ಕಾರಣವಾಗಿದೆ. ಅಷ್ಟು ಕ್ಷೀಣದೆಸೆಯದಲ್ಲದಿದ್ದರೂ ಅದೇ ಪ್ರವೃತ್ತಿಯೇ ಕರ್ನಾಟಕದಲ್ಲಿಯೂ ಗ್ರಾಮ ಒಕ್ಕೂಟಗಳ ಶೈಥಿಲ್ಯದ ಮೂಲಕ ವ್ಯಕ್ತವಾಗಿದೆ.

೩. ಮರುವಲಸೆಗಳ ಪ್ರಧಾನ ತರಂಗಗಳ ಕಾಲಘಟ್ಟಗಳು

ಈವರೆಗೆ, ಸಂಕೇತಿಗಳ ಮರುವಲಸೆಗಳ ಪ್ರವೃತ್ತಿಗಳನ್ನೂ, ಅವರ ನೆಲೆಗಳ ವಿಶಿಷ್ಟ ಲಕ್ಷಣಗಳನ್ನೂ ಗಮನಿಸಿದ್ದೇವೆ. ಅವರ ವಲಸೆಗಳ ಕಾಲಘಟ್ಟಗಳೂ ಕುತೂಹಲಕಾರಿಯಾದವು. ಚಾಲುಕ್ಯರು, ಹೊಯ್ಸಳರು, ವಿಜಯನಗರದ ಅರಸರು ಮತ್ತು ಮೈಸೂರು ಅರಸರ ರಾಜಕೀಯ ಸ್ಥಿತಿಗತಿಗಳನ್ನನುಸರಿಸಿಯೇ ರಾಜಾಶ್ರಯದ ಸ್ಥಿತ್ಯಂತರಗಳೂ ಉಂಟಾದುದರಿಂದ ಕರ್ನಾಟಕದಲ್ಲಿ ಮರುವಲಸೆಗಳು ಪ್ರಧಾನ ತರಂಗಗಳಲ್ಲಿ ಸಂಭವಿಸಿವೆ. ದಕ್ಷಿಣದಲ್ಲಿ ದೇವಸ್ಥಾನ ಸೇವೆಯ ಬಹುಸಾಧ್ಯತೆಯಿದ್ದ ತಿರುನೆಲ್‌ವೇಲಿ, ಕನ್ಯಾಕುಮಾರಿ, ತಿರುವನಂತಪುರಂ ಜಿಲ್ಲೆಗಳಲ್ಲಿ ನಿರಂತರ ಮರುವಲಸೆಗಳು ನಡೆದಿವೆ. ಈ ತರಂಗಿತ ಮರುವಲಸೆಗಳ ಕಾಲಮಾನವನ್ನು ಗುರುತಿಸುವುದು ಇಲ್ಲಿನ ಉದ್ದೇಶವಾಗಿದೆ.

ಅ. ಸಂಕೇತಿಗಳ ಮರುವಲಸೆಗಳ ಪ್ರಧಾನ ತರಂಗಗಳು:

ಕರ್ನಾಟಕದಲ್ಲಿ ಸಂಕೇತಿಗಳ ಮರುವಲಸೆಯು ವ್ಯವಸಾಯಪ್ರಧಾನವಾಗಿಯೇ ನಡೆಯಿತು ಮತ್ತು ದೂರದೇಶದಿಂದ ಬಂದ ಆ ಕೃಷಿಕ ವೈದಿಕ ಸಮುದಾಯಕ್ಕೆ ಕಾಲಕ್ರಮದಲ್ಲಿ ಹೊಸ ಹೊಸ ಸಾಗುವಳಿ ಪ್ರದೇಶಗಳ ಅಗತ್ಯವೂ ಇತ್ತು ಎಂಬ ಅಂಶವು, ವೃತ್ತಿಗಳ ಸ್ವರೂಪದಲ್ಲಿಯೋ ಮತ್ತಾವುದೋ ರೂಪದಲ್ಲಿಯೋ ಜಮೀನು ದೊರೆತಾಗಲೆಲ್ಲಾ ಅಗತ್ಯಬಿದ್ದಲ್ಲಿ ಅವರು ಮತ್ತೆ ಮತ್ತೆ ವಲಸೆಹೊರಟಿರುವ ಸಂಗತಿಯಿಂದ ಸ್ಪಷ್ಟವಾಗುತ್ತದೆ. ಎಂ.ಕೇಶವಯ್ಯನವರು ಸುಮಾರು ಅರುವತ್ತು ವರ್ಷಗಳ ಹಿಂದೆ ನಡೆಸಿದ ಕ್ಷೇತ್ರಕಾರ್ಯದ ಸಂದರ್ಭದಲ್ಲಿ ಅವರಿಗೆ ನೋಡಲು ಸಿಕ್ಕ ತಾಮ್ರಪತ್ರಗಳು ಮತ್ತು ಇತರ ದಾಖಲೆಗಳನ್ನಾಧರಿಸಿ ಅಂಥ ಮರುವಲಸೆಯನ್ನು ಕೆಲವು ಪ್ರಧಾನ ತರಂಗಗಳಲ್ಲಿ ಗುರುತಿಸಿದ್ದಾರೆ:

1. ಲಿಂಗದಹಳ್ಳಿ (ಮತ್ತು ಬಸವಾನಿ)
2. ಮತ್ತೂರು ಹೊಸಹಳ್ಳಿ
3. ಮುದಲಾಪುರ, ಪೂಮಗಾಮೆ, ಹಂದನಹಾಲು, ಕೃಷ್ಣಾಪುರ
4. ಒಡ್ಡರಹಳ್ಳಿ, ಮರಿತಮ್ಮನಹಳ್ಳಿ
5. ದಿವಾನ ಪದವಿಗಾಗಿ ತಿಪ್ಪೂರು, ಹೊಸಹೊಳಲು, ಪಿರಿಯಪಟ್ಟಣ.
6. ಇವಲ್ಲದೆ, ಬೆಟ್ಟದಪುರದಿಂದ ಆದ ಮರುವಲಸೆಗಳ ಮತ್ತೊಂದು ತರಂಗವೂ ಇದೆ.

ಪ್ರತ್ಯಕ್ಷಾನುಭವಗಳು, ವಂಶಚರಿತ್ರೆ, ವಂಶವೃಕ್ಷ, ಸಾಂಸ್ಕೃತಿಕ ವಿವರಗಳು - ಇವೆಲ್ಲವೂ ಒಟ್ಟಾಗಿ ಸಂಕೇತಿಗಳ ಮರುವಲಸೆ ಮತ್ತು ಅವುಗಳ ಕಾಲವನ್ನು ನಿರ್ಧರಿಸಲು ಸಹಾಯಕವಾಗಿವೆ. 'ಸಂಕೇತಿ' ಎಂಬ ಹೆಸರನ್ನೇ ಉಲ್ಲೇಖಿಸುವ ಯಾವ ಶಾಸನವೂ ಇಲ್ಲವಾದರೂ, ಅವರಿಗೆ ಸಂಬಂಧಿಸಿದ ಶಾಸನಗಳನ್ನು ಖಚಿತಪಡಿಸುವಲ್ಲಿ ಈ ಅಂಶಗಳು ಸಮರ್ಥವಾಗಿವೆ. ಸಂಕೇತಿಗಳ ವ್ಯಕ್ತಿನಾಮಗಳು, ಅವರ ಗೋತ್ರಗಳು ಮತ್ತು ಅವು ಖಿಲವಾದ ಸಂದರ್ಭಗಳು, ವೇದಶಾಖೆಗಳು ಮತ್ತು ಅವು ಖಿಲವಾದ ಸಂದರ್ಭಗಳು, ಅವರ ಪಾರಂಪರಿಕ ನೆಲೆಗಳು, ಅನೇಕ ನೆಲೆಗಳೊಂದಿಗೆ ಇದ್ದ ಸಂಬಂಧದ ಸ್ವರೂಪ, ಸ್ಥಳನಾಮಗಳು, ಸಂಕೇತಿಗಳು ಮಾರಿಕೊಂಡ ಇಲ್ಲವೆ ಕೊಂಡುಕೊಂಡ ವೃತ್ತಿಗಳು - ಈ ಆಧಾರಗಳನ್ನು ಅವಲಂಬಿಸಿಯೇ, ಸಂಕೇತಿಗಳು ಕಾಲಕ್ರಮದಲ್ಲಿ ವಲಸೆಗೊಂಡ ನೆಲೆಗಳು ಮತ್ತು ಆ ಮರುವಲಸೆಗಳ ಕನಿಷ್ಠ ಕಾಲಗಡಿಯನ್ನು ಇಲ್ಲಿ ದಾಖಲಿಸಿದೆ. ತರಂಗಿತ ವಲಸೆಗಳ ಕಾಲಮಾನವನ್ನು ಗುರುತಿಸುವ ಉದ್ದೇಶಕ್ಕೆ ಖಚಿತ ಆಧಾರಗಳು ಸಾಕಷ್ಟು ಲಭ್ಯವಿರುವುದರಿಂದ, ಎಲ್ಲ ನೆಲೆಗಳ ವಲಸೆಯ ಕಾಲವನ್ನು ಅವಲೋಕಿಸುವುದು ಇಲ್ಲಿ ಅನಗತ್ಯ.

ಆ. ನೀಲಗುಂದದಿಂದ ಹೊರವಲಸೆ:

ಹತ್ತನೆಯ ಶತಮಾನದ ಕೊನೆಯಭಾಗದಲ್ಲಿ ಅಸ್ತಿತ್ವಕ್ಕೆ ಬಂದು ಸುಮಾರು ಎರಡು ಶತಮಾನಗಳ ಕಾಲ ವಿಶೇಷವಾಗಿ ಉತ್ತರಕರ್ನಾಟಕದ

ಭಾಗಗಳನ್ನಾಳಿ ಹನ್ನೆರಡನೆಯ ಶತಮಾನದ ಅಂತ್ಯದ ಹೊತ್ತಿಗೆ ಮರೆಯಾದ ಕಲ್ಯಾಣಚಾಲುಕ್ಯರ ಆಶ್ರಯದಿಂದ, ಹನ್ನೊಂದನೆಯ ಶತಮಾನದ ಆರಂಭದಲ್ಲಿ ಪ್ರಾರಂಭವಾಗಿ ಕ್ರಿ.ಶ.೧೧೧೬ರಲ್ಲಿ ಚೋಳರನ್ನು ಗೆಲ್ಲುವ ಮೂಲಕ ಪ್ರಬಲವಾಗಿ ಹದಿನಾಲ್ಕನೆಯ ಶತಮಾನದ ಮಧ್ಯದವರೆಗೆ ವಿಶೇಷವಾಗಿ ದಕ್ಷಿಣಕರ್ನಾಟಕವನ್ನಾಳಿದ ಹೊಯ್ಸಳರ ಆಶ್ರಯಕ್ಕೆ ಹಸ್ತಾಂತರಗೊಂಡ ಸಂಕೇತಿಗಳ ಮರುವಲಸೆಯ ಸನ್ನಿವೇಶವು, ಪ್ರಧಾನವಾಗಿ ಆಯಾ ರಾಜಮನೆತನಗಳ ಇಬ್ಬರು ಉತ್ತುಂಗಚಕ್ರವರ್ತಿಗಳಾದ ಆರನೆಯ ವಿಕ್ರಮಾದಿತ್ಯ ಮತ್ತು ಬಿಟ್ಟಿಗ ವಿಷ್ಣುವರ್ಧನರ ಜೀವನದ ಏರಿಳಿತಗಳೊಂದಿಗೇ ಹೊಂದಿಕೊಂಡಿದೆ. ಮುಮ್ಮಡಿ ಸೋಮೇಶ್ವರ (ಕ್ರಿ.ಶ.೧೧೨೭-೧೧೩೯), ಪೆರ್ಮ ಜಗದೇಕಮಲ್ಲ-೨ (ಕ್ರಿ.ಶ.೧೧೩೯-೧೧೪೯) ಇವರದು ಚಾಲುಕ್ಯರ ಇಳಿಮುಖ ಕಾಲ. ಕ್ರಿ.ಶ.೧೧೪೦-೧೧೪೧ರ ವೇಳೆಗೆ ಉಚ್ಚಂಗಿಯು ಹೊಯ್ಸಳರ ಸ್ಥಿರವಾದ ಹಿಡಿತದಲ್ಲಿತ್ತು. ವಿಷ್ಣುವರ್ಧನನು ಬಂಕಾಪುರದಲ್ಲಿಯೇ ನೆಲೆಸಿ ಗಂಗವಾಡಿ, ನೊಳಂಬವಾಡಿ, ಬನವಾಸಿ, ಹಾನಗಲ್ ಮತ್ತು ಹುಲಿಗೆರೆ ಪ್ರಾಂತವನ್ನು ಆಳುತ್ತಿದ್ದುದು ತಿಳಿಯುತ್ತದೆ. ಕ್ರಿ.ಶ.೧೧೫೬ರಲ್ಲಿ ಬಿಜ್ಜಳನು ದಂಗೆ ಎದ್ದು ಚಕ್ರವರ್ತಿಯಾದಂತೆ, ಹೊಯ್ಸಳರೂ ಸ್ವತಂತ್ರರಾಗಿ ಆಳತೊಡಗಿದರು. ಇವೆಲ್ಲ ವಿವರಗಳೂ ಸಂಕೇತಿಗಳು ನೀಲಗುಂದದಿಂದ ಚದುರಿದ ವಲಸೆಯ ವಿದ್ಯಮಾನಕ್ಕೆ ಹೊಂದಿಕೊಂಡಿವೆ.

ಕ್ರಿ.ಶ.೧೧೨೩ರಲ್ಲಿ ಎರಡನೆಯ ಬಾರಿ ದತ್ತಿದೊರೆತುದು, ಸಂಕೇತಿಗಳು ನೀಲಗುಂದ ಭಾಗದಲ್ಲಿ ಆನಂತರದ ಕೆಲಕಾಲದವರೆಗಾದರೂ ನೆಲೆಸಿ ಉಳಿದುದನ್ನು ಸಮರ್ಥಿಸುತ್ತದೆ. ಆದರೆ ಇದೇ ಮಾತನ್ನು ವಿಕ್ರಮಾದಿತ್ಯನ ಕಾಲಾನಂತರದ ಬಗೆಗೂ ಹೇಳುವಂತಿಲ್ಲ. ಚಾಲುಕ್ಯರ ಪತನ ಮತ್ತು ಹೊಯ್ಸಳರ ಪ್ರವರ್ಧಮಾನದ ಈ ಕಾಲದಲ್ಲಿಯೇ, ಕಡೂರುಕೇಂದ್ರಿತ ಭಾಗದಲ್ಲಿ ಅನೇಕ ದತ್ತಿಗಳು ದೊರೆತುದು (ಮುಂದೆ ಕೂಡ ಕರ್ನಾಟಕದ ಸಂಕೇತಿಗಳ ವಲಸೆಯ ಪ್ರವೃತ್ತಿಯಿಂದ ಸ್ಪಷ್ಟವಾಗುವಂತೆ) ಸಂಕೇತಿಗಳು ನೀಲಗುಂದವನ್ನು ಪೂರ್ಣವಾಗಿ ತೊರೆದು ಹೊಯ್ಸಳ ರಾಜ್ಯಕ್ಕೆ ವಲಸೆಬಂದುದನ್ನು ಸಹಜ ಪ್ರಕ್ರಿಯೆಯಾಗಿಸುತ್ತದೆ. ಅದಾಗಲೇ ಹಾಸನಸೀಮೆಯಲ್ಲಿ ಉಳಿದುಕೊಂಡಿದ್ದ ಸಂಕೇತಿಗಳ ಪೂರ್ವನಿದರ್ಶನವು ಈ ಪ್ರಕ್ರಿಯೆಗೆ ಪೋಷಕವಾಗಿತ್ತೆಂದೂ ತರ್ಕಿಸುವುದು ಅನುಚಿತವಾಗದು. ಈಗ ಹರಪನಹಳ್ಳಿ ತಾಲ್ಲೂಕೂ ಸೇರಿದಂತೆ ಉತ್ತರ ಕರ್ನಾಟಕದ ಯಾವ ಭಾಗದಲ್ಲಿಯೂ ಸಂಕೇತಿಗಳಿಲ್ಲ. ಸಂಕೇತಿಗಳು ತಮ್ಮ ಎಕ್ಕುಂಡಿ ನೆಲೆಯನ್ನು (ಗದಗದ ಸಮೀಪದಲ್ಲಿ ಜೋಡಿಗ್ರಾಮಗಳು ಹಲವು ಸಂಕೇತಿ ವಿದ್ವಾಂಸರಿಗೆ ದೊರೆತಿದ್ದುವು) ಕಳೆದ ಎರಡು ದಶಕಗಳಲ್ಲಿ ಪೂರ್ಣವಾಗಿ ತೊರೆದಿದ್ದಾರೆ. ಆನೆಗೊಂದಿಯಲ್ಲಿಯೂ ಸಂಕೇತಿಗಳು ನೆಲೆಸಿದ್ದರೆಂದು ಮೌಖಿಕಪರಂಪರೆ ಇದೆ. ಒಟ್ಟಿನಲ್ಲಿ ಸಂಕೇತಿಗಳು ಉತ್ತರಕರ್ನಾಟಕದ ನೆಲೆಗಳನ್ನು ಬೇಗ ತೊರೆದರು. ಒಂದು ಪರಂಪರೆಯನ್ನು ಉಳಿಸುವ ಪ್ರಮಾಣದಲ್ಲಿ ಇರಲಿ, ಹೆಸರಿಗೂ ಅವರ ಯಾವ ನೆಲೆಗಳೂ ಅಲ್ಲಿ ಮುಂದುವರಿಯಲಿಲ್ಲ.

ಇ. ಕಡೂರು ಕೇಂದ್ರ:

ಕಡೂರುಕೇಂದ್ರಿತ ಗ್ರಾಮಗಳಲ್ಲಿ ಹನ್ನೆರಡನೆಯ ಶತಮಾನದ ಮಧ್ಯಭಾಗದ ವೇಳೆಗೆ ಹೊಯ್ಸಳರ ಆಶ್ರಯ ಪಡೆದು ಸಂಕೇತಿಗಳು ನೆಲೆಸತೊಡಗಿದುದು, ಅದೇಕಾಲಕ್ಕೆ ನೀಲಗುಂದದಿಂದ ಹೊರವಲಸೆಗಳು ತೊಡಗಿದುದನ್ನೂ ಸ್ಪಷ್ಟಪಡಿಸುತ್ತದೆ. ಉತ್ತಮಾಶ್ರಯಗಳಿಗಾಗಿ ನೀಲಗುಂದವನ್ನು ತೊರೆದ ಸಂಕೇತಿಗಳು, ಕಡೂರುಕೇಂದ್ರಿತನೆಲೆಗಳನ್ನೂ ವಿಜಯನಗರದ ಅರಸರಿಂದ ವೃತ್ತಿಗಳು ದೊರೆತಾಗ ತೊರೆದಿರುವುದು ಕಾಣುತ್ತದೆ (ಪಟ್ಟಿ 10, 11 ಪು.306, 307).

ಕಡೂರು ಕೇಂದ್ರಕ್ಕೆ ಸಂಬಂಧಿಸಿದಂತೆಯೇ ವಲಸೆಗಳ ಎರಡು ಮುಖ್ಯಮುಖಗಳನ್ನು ಇಲ್ಲಿ ಅವಲೋಕಿಸಬಹುದು.

1. ಕಡೂರು ಕೇಂದ್ರದಿಂದ ಬೆಟ್ಟದಪುರಕ್ಕೆ ಹೊರವಲಸೆ: ಹರವೆಯ ವಂಶಚರಿತ್ರೆಯು, ಕ್ರಿ.ಶ.೧೬೨೦ರ ವೇಳೆಗೆ ಯಗಟಿಯಿಂದ ಹರವೆಗೆ ವಲಸೆನಡೆದುದನ್ನು ಹೇಳುತ್ತದೆ. ಹರವೆಯ ಎಚ್.ಎನ್.ಶ್ರೀನಿವಾಸಯ್ಯ (೬೦) ಅವರು ಒದಗಿಸಿದ ವಂಶವೃಕ್ಷದಿಂದಲೂ ಇದು ಖಚಿತವಾಗುತ್ತದೆ. ಹರವೆ ಬಳಿಯ ಕಲ್ಲಹಳ್ಳಿಯು ಬೆಟ್ಟದಪುರದ ದಿಡ್ಡೆಉಪಾಧ್ಯಾಯ ಎಂಬುವವರಿಗೆ ಜೋಡಿಯಾಗಿ ದೊರೆತುದರಿಂದ, ಈ ವಲಸೆಯು ಅವರ ಪ್ರಧಾನಕೇಂದ್ರವಾದ ಬೆಟ್ಟದಪುರದ ಮೂಲಕವೇ ನಡೆದಿರುವುದು ಸಾಧ್ಯ. ಬೆಟ್ಟದಪುರದ 'ಮಲ್ಲಿಕಾರ್ಜುನ'ನು ಹಲವರ ಮನೆದೇವರಾಗಿ ಬೆಳೆದಿರುವುದೂ, ಕಡೂರುಕೇಂದ್ರಿತ ನೆಲೆಗಳಿಂದ ಮೊದಲು ಬೆಟ್ಟದಪುರಕೇಂದ್ರಕ್ಕೆ ವಲಸೆನಡೆದುದನ್ನೇ ಪೋಷಿಸುತ್ತದೆ.

ಕಡೂರುಕೇಂದ್ರಿತ ನೆಲೆಗಳಿಂದ ಬೆಟ್ಟದಪುರಕ್ಕೆ ಆದ ವಲಸೆಯನ್ನು ಪೋಷಿಸುವ ಇತರ ಅಂಶಗಳಿವೆ:

0.1 ಅನೇಕ ಬೆಟ್ಟದಪುರ ಸಂಕೇತಿಗಳ ಮನೆದೇವರು ಯಗಟಿಯ ಮಲ್ಲಿಕಾರ್ಜುನ ಮತ್ತು ಮುಗಳಿಕಟ್ಟೆ ಲಕ್ಷ್ಮೀನರಸಿಂಹ ಆಗಿರುವುದಿದೆ. ಶೆಂಕೋಟ್ಟೈನಿಂದ ಬಂದ ವಲಸಿಗರು ನೇರವಾಗಿ ಬೆಟ್ಟದಪುರಕ್ಕೆ ಬಂದು ನೆಲೆಸಿದ್ದರೆ, ಯಗಟಿಯ ಅಪ್ರಖ್ಯಾತ ದೇವತೆಗಳು ಅವರ ಕುಲದೈವವಾಗುವುದು ಅಸಂಭವ.

ಹರಕೆಗಳಿಂದಲೂ, ದೂರದ ದೇವತೆಗಳು ಮನೆದೇವರಾಗಬಹುದು. ಆದರೆ, ಆ ಕಾಲಕ್ಕೆ ಪ್ರಖ್ಯಾತವಾಗಿದ್ದ ತಿರುಪತಿ, ಧರ್ಮಸ್ಥಳ, ಸುಬ್ರಹ್ಮಣ್ಯಕ್ಕೆ ಸಂಬಂಧಿಸಿದಂತೆ ಈ ವಾದವನ್ನು ಒಪ್ಪಬಹುದು; ಯಗಟಿಯಂಥ ಸೀಮಿತಪ್ರಭಾವಲಯದ ದೇವತೆಗೆ ಸಂಬಂಧಿಸಿದಂತೆ ಅಲ್ಲ.

ಮರುವಲಸೆಗಳ ಕಾರಣದಿಂದ ದೂರದೂರಕ್ಕೆ ಚದುರಿದಾಗ, ಮೊದಲನೆಲೆಗಳ ಇಲ್ಲವೆ, ಪರಂಪರೆಯ ಮನೆದೇವತೆಗಳಿಗೇ ನಡೆದುಕೊಳ್ಳುವುದನ್ನು ಮುಂದುವರಿಸಿದಂತೆಯೇ, ಸನಿಹದ ಸಮಾನದೇವತೆಯೊಂದನ್ನು ಪರ್ಯಾಯವಾಗಿ ಬಳಸಿಕೊಂಡ ಪ್ರವೃತ್ತಿಯು ಸಂಕೇತಿಗಳಲ್ಲಿ ಕಾಣಿಸುತ್ತದೆ. ದೊಡ್ಡ ತಿರುಪತಿಯ ಬದಲು ಮಾಲೆಕಲ್ ತಿರುಪತಿ (ಅರಸೀಕೆರೆ), ಮಾವಿನಕೆರೆ ರಂಗನಾಥ; ಸುಬ್ರಹ್ಮಣ್ಯದ ಬದಲು ರಾಮನಾಥಪುರದ ಸುಬ್ರಹ್ಮಣ್ಯೇಶ್ವರ; ದೇವನೂರು ಲಕ್ಷ್ಮೀಕಾಂತಸ್ವಾಮಿಯ ಜಾಗದಲ್ಲಿ ಬಸವಪಟ್ಟಣದ ಲಕ್ಷ್ಮೀಕಾಂತಸ್ವಾಮಿ; ಯಗಟಿಯ ಮಲ್ಲಿಕಾರ್ಜುನನ ಜಾಗದಲ್ಲಿ ಬೆಟ್ಟದಪುರದ ಮಲ್ಲಿಕಾರ್ಜುನನು ಮನೆದೇವರಾದುದು - ಇವು ಅಂಥ ಕೆಲವು ನಿದರ್ಶನಗಳು. ಯಗಟಿಯ ಮಲ್ಲಿಕಾರ್ಜುನನ ಭಕ್ತರು ಕೆಲವರು ಈಗಲೂ ಅಲ್ಲಿಗೇ ನಡೆದುಕೊಳ್ಳುತ್ತಾರೆ; ಕೆಲವರು ಬೆಟ್ಟದಪುರದ ಮಲ್ಲಿಕಾರ್ಜುನನನ್ನು ಸ್ವೀಕರಿಸಿದ್ದಾರೆ.

ಪ್ರಾಥಮಿಕ ನೆಲೆಯಾದ ಕೌಶಿಕದ ಕೇಶವನನ್ನು ಮನೆದೇವರಾಗಿ ಹೊಂದಿದವರ ಸಂಖ್ಯೆ ಗಣನೀಯವಾಗಿ ದೊಡ್ಡದು; ಕೇಶವನು ಮನೆದೇವರಾಗಿಲ್ಲದವರೂ ತಮ್ಮ ಪ್ರಾಥಮಿಕನೆಲೆ ಎಂಬ ಕಾರಣಕ್ಕಾಗಿ ಅಲ್ಲಿನ ರಥೋತ್ಸವದಲ್ಲಿ ಭಾಗವಹಿಸುತ್ತಾರೆ. ಆದರೆ ಬೆಟ್ಟದಪುರದ ಮಲ್ಲಿಕಾರ್ಜುನನನ್ನು ಮನೆದೇವರಾಗಿ ಉಳ್ಳ ಕುಟುಂಬಗಳ ಸಂಖ್ಯೆ ಬಹು ಸಣ್ಣದು.

0.2 ಬೆಟ್ಟದಪುರಸಂಕೇತಿಗಳು ಮತ್ತು (ಹಿರಿಯಂಗಳದವರೂ ಸೇರಿದಂತೆ) ಲಿಂಗದಹಳ್ಳಿಸಂಕೇತಿಗಳಲ್ಲಿ ವಿಶಿಷ್ಟವಾದ ಶಠಮರ್ಷಣ, ನೈಧ್ರುವಕಾಶ್ಯಪ, ಸಂಕೃತಿಗೋತ್ರಗಳ ಸಾಮ್ಯವಿದೆ.

0.3 ಕರ್ನಾಟಕದ ಇತರ ಸಂಕೇತಿಗಳಲ್ಲಿ ಇರುವ ಸಂಭ್ರಮದ 'ಸೋದರಬಿದಿಗೆ' ಅವರಿಬ್ಬರಲ್ಲಿಯೂ ಇಲ್ಲ.

0.4 ಭಾಷಿಕ ನಿಕಟತೆ ಆ ಉಪಪಂಗಡಗಳ ಭಾಷೆಯಲ್ಲಿ ಹೆಚ್ಚು.

ಈ ಸಂಗತಿಗಳು, ಬೆಟ್ಟದಪುರಸಂಕೇತಿಗಳು ಹಿರಿಯಂಗಳ ಹಾಗೂ ಲಿಂಗದಹಳ್ಳಿಯ ಸಂಕೇತಿಗಳ ಒಡನಾಡಿಗಳಾಗಿ ಕಡೂರುಕೇಂದ್ರಿತ ನೆಲೆಗಳಲ್ಲಿ ಮೊದಲು ಇದ್ದುದನ್ನು ದೃಢಪಡಿಸುತ್ತವೆ.

2. ಕಡೂರುಕೇಂದ್ರದಿಂದ ಹೊರವಲಸೆಗಳಾದುದಕ್ಕೆ ಮತ್ತಷ್ಟು ಆಧಾರ : ದಕ್ಷಿಣದ ಸಂಕೇತಿಗಳು (ಈಗ) ಮೂರು ವಿಭಿನ್ನ ಜಿಲ್ಲೆಗಳಲ್ಲಿ ಹರಡಿದವರಾದರೂ, ಇಂದಿಗೂ ಅವರಲ್ಲಿ ಯಾವ ಉಪಪಂಗಡಗಳೂ ಬೆಳೆದಿಲ್ಲ. ಅವರೆಲ್ಲರಲ್ಲಿ ಸಂಬಂಧದ ನಿಕಟತೆ ಮತ್ತು ಸಾಂಸ್ಕೃತಿಕಸಮಾನತೆ ಮುಂದುವರಿದಿದೆ. ಆದುದರಿಂದ, ಶೆಂಕೋಟ್ಟೈನ ವಿಭಿನ್ನ ನೆಲೆಗಳು ಇಲ್ಲವೇ ಉಪಸಂಸ್ಕೃತಿಗಳಿಂದ ಹೊರಟವರಾದುದರಿಂದಲೇ ಕರ್ನಾಟಕದಲ್ಲಿಯೂ ವಿಭಿನ್ನ ಉಪಪಂಗಡಗಳು ಪ್ರತ್ಯೇಕ ಅಸ್ತಿತ್ವವನ್ನು ಮುಂದುವರಿಸಿಕೊಂಡವು ಎನ್ನಲು ಆಧಾರವಿಲ್ಲ. ಆದರೂ ಇಂಥದೊಂದು ಸಾಧ್ಯತೆಯ ಕಲ್ಪನೆ ಶಿವಮೊಗ್ಗೆಯ ಪ್ರೊ.ಎಲ್.ಎಂ.ಎಲ್.ಶಾಸ್ತ್ರಿ ಅವರಿಂದ ಬಂದುದು ಸಂಶೋಧನೆಯ ದೃಷ್ಟಿಯಿಂದ ಮುಖ್ಯವಾಗಿತ್ತು. ಈ ಸಮಸ್ಯೆಗೆ ಉತ್ತರವು ಕರ್ನಾಟಕದ ಬೆಳವಣಿಗೆಗಳಲ್ಲಿಯೇ ಕಾಣುವಂತಾದುದು ಸಂಕೇತಿಗಳ ಪುಟ್ಟ ಸಮುದಾಯವು ಸಾಂಸ್ಕೃತಿಕವಾಗಿ ಮೂಲಭೂತವಾಗಿ ಒಂದೇ ಘಟಕವೆಂಬುದನ್ನೇ ಸಾರುತ್ತದೆ.

ಕರ್ನಾಟಕದ ಸಂಕೇತಿಗಳ ಐತಿಹಾಸಿಕ ಸಾಂಸ್ಕೃತಿಕ ವೈಶಿಷ್ಟ್ಯವಾದ 'ಕೋಡಂಗಿ ಸಭೆ'ಯು ಉಭಯಸಂಕೇತಿಗಳಲ್ಲಿಯೂ ಆಚರಣೆಯಲ್ಲಿರುವುದು; ದೇವನೂರು ಲಕ್ಷ್ಮೀಕಾಂತನು ಇಬ್ಬರಿಗೂ ಮನೆದೇವರಾಗಿರುವುದು-ಕರ್ನಾಟಕಕ್ಕೆ ಬಂದನಂತರವೂ ಅನೇಕಕಾಲ ಎಲ್ಲ ಸಂಕೇತಿಗಳಲ್ಲಿದ್ದ ನಿಕಟ ಸಂಪರ್ಕವನ್ನೇ ಸೂಚಿಸುತ್ತವೆ. ಆದುದರಿಂದ ಕರ್ನಾಟಕದ ಸಂಕೇತಿಗಳಲ್ಲಿ ಕಾಣುವ ಉಪಪಂಗಡಗಳ ಪ್ರತ್ಯೇಕ ಅಸ್ತಿತ್ವವು, ಕಡೂರುಕೇಂದ್ರಿತ ನೆಲೆಗಳಿಂದ ಹದಿನೈದನೆಯ ಶತಮಾನದಿಂದ ತೊಡಗಿ ಆದ ವಿಕೇಂದ್ರೀಕರಣದ ಅನಂತರದ ಬೆಳವಣಿಗೆಯಾಗಿದೆ.

ಈ. ಲಿಂಗದಹಳ್ಳಿ:

ಹರಿಹರಬುಕ್ಕನ ಕಾಲದಲ್ಲಿ (ಕ್ರಿ.ಶ.೧೩೩೬-೩೭) ಉಂಟಾದ ವಿದ್ಯಾರಣ್ಯಪುರ ಅಗ್ರಹಾರದ ಇನ್ನೂರೈವತ್ತು ವೃತ್ತಿಗಳಲ್ಲಿ ಕೆಲವು ಲಿಂಗದಹಳ್ಳಿಸಂಕೇತಿಗಳ ಅನುಭವದಲ್ಲಿದ್ದುದನ್ನು ಎಂ.ಕೇಶವಯ್ಯನವರೂ ದಾಖಲಿಸಿದ್ದಾರೆ. ಲಿಂಗದಹಳ್ಳಿ ಮತ್ತು ಮತ್ತೂರಿನ ಸಂಕೇತಿಗಳು ಭೌಗೋಳಿಕ ಸನಿಹದಿಂದಾಗಿ ಶೃಂಗೇರೀ ಮಠದೊಂದಿಗೆ ಹೆಚ್ಚಿನ ಸಂಪರ್ಕ ಇಟ್ಟುಕೊಂಡಿರುವುದು ಸಹಜ. ಕಾರಣಾಂತರದಿಂದ ಈ ವೃತ್ತಿಗಳನ್ನು ಲಿಂಗದಹಳ್ಳಿಯವರು ಕಳೆದುಕೊಂಡುದನ್ನೂ, ಕೆಳದಿಯ ಶಿವಪ್ಪನಾಯಕನು ಮತ್ತೆ ಅವುಗಳನ್ನು ಅವುಗಳ ಹಕ್ಕುದಾರರಿಗೇ ಕೊಡಿಸಿದುದನ್ನೂ, ಸಚ್ಚಿದಾನಂದಭಾರತೀ ಸ್ವಾಮಿಗಳು ವೃತ್ತಿವಂತರಿಗೆಲ್ಲಾ 'ಪಟ್ಟೆ'ಗಳನ್ನು ಮಾಡಿಸಿಕೊಟ್ಟುದನ್ನೂ, ಎಂ.ಕೇಶವವಯ್ಯನವರೂ ದಾಖಲಿಸಿದ್ದಾರೆ.[4]

ಬಸವಾನಿಯನ್ನು ತೊರೆದವರು ಲಿಂಗದಹಳ್ಳಿ ಮತ್ತು ಹಿರಿಯಂಗಳಕ್ಕೆ ಹೋದುದು ವಂಶಚರಿತ್ರೆಗಳಲ್ಲಿ ಸ್ಪಷ್ಟವಾಗಿದೆ. ಬಸವಾನಿ, ಲಿಂಗದಹಳ್ಳಿ ಮತ್ತು ಹಿರಿಯಂಗಳ (ಬೀರೂರು)ದವರು ಪರಸ್ಪರ ಜ್ಞಾತಿಗಳೂ ಹೌದು. 'ಮಲೆನಾಡು' 'ಹಿರಿಯಂಗಳ' ಎಂಬ ಭಿನ್ನಸಂಜ್ಞೆಗಳಿಂದ ಆಗಾಗ ಲಿಂಗದಹಳ್ಳಿ ಮತ್ತು ಹಿರಿಯಂಗಳ ಸಂಕೇತಿಗಳು ಉಲ್ಲೇಖಿಸಲ್ಪಟ್ಟಿದ್ದರೂ ಅವರ ನಡುವಿನ ಸಂಪರ್ಕ, ಸಂಬಂಧಗಳು ಎಂದೂ ಕಡಿದುಬಿದ್ದಂತೆ ಕಾಣುವುದಿಲ್ಲ. ಲಿಂಗದಹಳ್ಳಿಯವರಿಗೆ ಬೀರೂರು ಸಮೀಪದ (ಎರಡು ಮೈಲು) ತಿಮ್ಮಾಪುರದಲ್ಲಿ ಜೋಡಿಗ್ರಾಮವಿದ್ದುದೂ, ಈ ಸಂಪರ್ಕದ ಅತಿಶಯವನ್ನು ಪೋಷಿಸುತ್ತದೆ. 'ಸೋದರಬಿದಿಗೆ' ಇಲ್ಲದ ಸಾಮ್ಯವೂ ಇವರಲ್ಲಿದೆ. ಈ ಅಂಶಗಳು, ಬಸವಾನಿಗೆ ಹೋದ ಕೆಲವು ಕುಟುಂಬಗಳು ತಮ್ಮ ಮೂಲನೆಲೆಗೆ ಮರಳಿದವು ಎಂಬುದನ್ನೇ ದೃಢಪಡಿಸುತ್ತವೆ. ಬಸವಾನಿಯವರು ತಮ್ಮ ನೆಲೆಯನ್ನು ತೊರೆಯತೊಡಗಿದುದು ಶಿವಪ್ಪನಾಯಕನು ಆಳುತ್ತಿದ್ದ ಅವಧಿಯಲ್ಲೇ. ಆದರೆ ವಿದ್ಯಾರಣ್ಯಪುರದ ವೃತ್ತಿಗಳನ್ನು ಮರಳಿಪಡೆದವರು ಇವರೇ ಎಂದು ಗುರುತಿಸುವುದು ಈಗ ಸಾಧ್ಯವಿಲ್ಲವಾಗಿದೆ. ಲಿಂಗದಹಳ್ಳಿ ಮತ್ತು ಹಿರಿಯಂಗಳದ ನೆಲೆಗಳು ಕ್ರಿ.ಶ. ಹದಿನಾಲ್ಕನೆಯ ಶತಮಾನದ ವೇಳೆಗೆ ಉಂಟಾಗಿದ್ದುದನ್ನು ಮಾತ್ರ ಈ ಎಲ್ಲ ಅಂಶಗಳು ಖಚಿತಪಡಿಸುತ್ತವೆ.

ಉ. ಬಸವಾನಿ:

ಮತ್ತೂರಿನ ಸರ್ವಮಾನ್ಯಕ್ಕೆ ಮೊದಲೇ ಕ್ರಿ.ಶ.೧೪೦೮ರಲ್ಲಿ ಶಿವಮೊಗ್ಗ ಜಿಲ್ಲೆಯ ಬಸವಾನಿಯಲ್ಲಿ ಒಂದು ಆಶ್ರಯವು ಇಪ್ಪತ್ತೊಂದು ಸಂಕೇತಿ ಕುಟುಂಬಗಳಿಗೆ ದೊರೆತಿತ್ತು ಎಂಬುದು ಬಸವಾನಿ ರಾಮಶರ್ಮರು (೯೦, ಸ್ವಾತಂತ್ರ್ಯ ಹೋರಾಟಗಾರ, ಶಿವಮೊಗ್ಗ ಜಿಲ್ಲೆ) ಒದಗಿಸಿದ ವಂಶಚರಿತ್ರೆಯಿಂದ ತಿಳಿದುಬರುತ್ತದೆ. ಬಸವಾನಿ ರಾಮದಾಸರು (೭೦, ಸ್ವಾತಂತ್ರ್ಯ ಹೋರಾಟಗಾರ, ಶಿವಮೊಗ್ಗ ಜಿಲ್ಲೆ), ದೇವಸ್ಥಾನದ ಮುಂದೆ ಎರಡುಸಾಲುಗಳಲ್ಲಿದ್ದ ಬಹುತೇಕ ಸಂಕೇತಿಕುಟುಂಬಗಳಿಗೆ ಸೇರಿದ ಮನೆಗಳ ಬಗೆಗೆ ಮಾಹಿತಿಹೊಂದಿದ್ದಾರೆ. ಕೌಶಿಕಗೋತ್ರದ ಯಜುಶ್ಶಾಖೆಯ ಮುತ್ತಪ್ಪಯ್ಯಗಳ ಮಕ್ಕಳು ದೇವರಯ, ಯಜುಶ್ಶಾಖೆಯ ಚಂಗಾಲ ಅಪಾವಝ್ಝರ ಮಕ್ಕಳು ಭೈರವಝ್ಝರು, ಕೌಶಿಕಗೋತ್ರದ ಯಜುಶ್ಶಾಖೆಯ ಲಕ್ಷ್ಮೀಧರರಪುತ್ರ ಮಂಚಿಭಟ್ಟ, ಮೊದಲಾದವರಿಗೆ ಬಂದ ಈ ವೃತ್ತಿಗಳಲ್ಲಿ


---

4 ಅ. ಪೂರ್ವೋಕ್ತ : ಪು.೩೭.

ಆ. ಶೃಂಗೇರಿ ಸಮೀಪದ ಹಾಲಂದೂರು ರಾಮಭಟ್ಟರ ಮೊಮ್ಮಗ ಡಾ.ರಮಾನಂದರಾವ್ (ವೈದ್ಯರು, ೫೫) ಅವರಿಗೆ ನೆನಪಿರುವಂತೆ, ಲಿಂಗದಹಳ್ಳಿಯ ಭೈರವ ದೀಕ್ಷಿತರೂ, ಪುಟ್ಟಪ್ಪನವರೂ ಹಲವು 'ವೃತ್ತಿ'ಗಳನ್ನು ಅಲ್ಲಿ ಹೊಂದಿದ್ದರು. ತಮ್ಮ ಜಮೀನಿನ ವ್ಯವಸಾಯದ ಸಂಬಂಧದಲ್ಲಿ ಹಾಲಂದೂರು ರಾಮಭಟ್ಟರ ಮನೆಯಲ್ಲಿ ತಿಂಗಳುಗಟ್ಟಲೆ ಉಳಿದುಕೊಳ್ಳುತ್ತಿದ್ದರು. ಆ ಊರಿನ ಪುಟ್ಟ ಮಕ್ಕಳಿಗೆ ಕಥೆ ಹೇಳುತ್ತಾ, ನಿತ್ಯಾನುಷ್ಠಾನಗಳಲ್ಲಿ ತೊಡಗಿರುತ್ತಾ ತಮ್ಮ ವ್ಯವಸಾಯದ ಕಲಾಪ ಮುಗಿಸಿಕೊಂಡು ಊರಿಗೆ ಹಿಂದಿರುಗುತ್ತಿದ್ದರು.

ಹಲವು, ಸಂಕೇತಿಗಳಿಗೆ ಸೇರಿದ್ದುವು ಎನ್ನಲಾಗಿದೆ. ಇಲ್ಲಿ, ಋಕ್‌ಶಾಖೆಯವರಿಗೂ, ಸಾಮವೇದಿಗಳಿಗೂ ವೃತ್ತಿಗಳು ದೊರೆತಿವೆ. ಸದ್ಯಕ್ಕೆ ಲಿಂಗದಹಳ್ಳಿಸಂಕೇತಿಗಳಲ್ಲಿ ಯಾರೂ ಈ ವೇದಶಾಖೆಯವರಿಲ್ಲ. ಆದರೆ, ಅತಿಪುಟ್ಟ ಗುಂಪಾದ ಈ ಸಂಕೇತಿಗಳಲ್ಲಿ ಅನೇಕ ಗೋತ್ರಗಳೂ ಶಾಖೆಗಳೂ ನಶಿಸಿಹೋಗಿರುವುದು, ಚಿದಂಬರಜೋಯಿಸರು ಅರ್ಧಶತಮಾನದ ಹಿಂದೆಯೇ ಸಂಗ್ರಹಿಸಿಟ್ಟ ವಂಶವೃಕ್ಷಗಳಿಂದ ಖಚಿತವಾಗಿದೆ. ಒಂದು ದ್ವೀಪದಂತೆ ಉಳಿದ ಈ ಉಪಪಂಗಡದಲ್ಲಿ ಎಲ್ಲ ವೇದಶಾಖೆಗಳೂ ಇರಬೇಕಾದುದು ಬ್ರಾಹ್ಮಣ - ಕರ್ಮಾನುಷ್ಠಾನಗಳ ದೃಷ್ಟಿಯಿಂದ ಅಗತ್ಯ. ಇತರ ಗುಂಪುಗಳಲ್ಲಿ ಅವಿವೆ. ಆದುದರಿಂದ ಇದು ಪರಂಪರಾಗತ ಅನುಭವದ 'ವೃತ್ತಿ'ಗಳ ವಾರಸುದಾರಿಕೆಯನ್ನು ಪ್ರಶ್ನಿಸಲು ಸಮರ್ಥಕಾರಣವಾಗುವುದಿಲ್ಲ. ಅಲ್ಲದೆ ಇತ್ತೀಚಿನವರೆಗೆ ಅನುಭವದಲ್ಲಿದ್ದ ಮತ್ತು ಈಗಲೂ ಅಳಿದುಳಿದಿರುವ ದೇವಸ್ಥಾನದ ವೃತ್ತಿಗಳು ಮೇಲಿನ ಸಂಗತಿಗಳನ್ನು ಪೋಷಿಸುತ್ತವೆ.

ಜೊತೆಗೆ, ಕರ್ನಾಟಕದ ಸಂಕೇತಿಗಳ ವಲಸೆಯ ಚರಿತ್ರೆಯಲ್ಲಿ ಘಟ್ಟದ ಮೇಲಕ್ಕೆ ವಲಸೆಹೋದ ಮೊದಲ ಪ್ರಸಂಗ ಇದು. ಮಲೆರಾಜ್ಯದ ಬರ್ಬರರ ಉಪಟಳಗಳಿಗೆ ಹೆದರಬೇಕಿದ್ದ ಹತ್ತನೆಯ ಶತಮಾನದ ಪರಿಸ್ಥಿತಿಯು, ಹದಿನೈದನೆಯ ಶತಮಾನದ ಹೊತ್ತಿಗೆ ಇದ್ದಿರಲಾರದು. ಅದು, ಸಂಕೇತಿಗಳು ದೂರದ ಘಟ್ಟರಾಜ್ಯಕ್ಕೆ (ಅರಗವು ಮಲೆರಾಜ್ಯದ ರಾಜಧಾನಿ ಎಂದೇ ಖ್ಯಾತವಾಗಿತ್ತು) ವಲಸೆ ಹೋಗಲು ಇದ್ದ ಕಾರಣವಾಗಲಾರದು. ಎಲ್ಲಿಯೂ ಯಾವ ಸಂಕೇತಿಗಳೂ ಪ್ರವೇಶಿಸದಿದ್ದ ಘಟ್ಟದನಾಡಿಗೆ ಅವರು ಹೋಗಲು ಇದ್ದ ಕಾರಣವು ಈ ವೃತ್ತಿಗಳು ದೊರೆತುದೇ ಎಂಬುದು ತಾರ್ಕಿಕವಾಗಿದೆ.



ಅಡಿಕೆಗೆ ಬರುವ ಕೊಳೆರೋಗ ಮತ್ತು ಹೊಟ್ಟೆಗೆ ಬರುವ ಗಡ್ಡೆರೋಗದ ಕಾರಣದಿಂದ ಈ ವಲಸೆಯು ಯಶಸ್ವಿಯಾಗಲಿಲ್ಲ ಎಂಬುದೂ ಗಮನಾರ್ಹವಾದುದು. ಕಳೆದ ಇನ್ನೂರು ವರ್ಷಗಳಲ್ಲಿ ಅವರಲ್ಲಿ ಬಹುಪಾಲು ಕುಟುಂಬಗಳು ಆ ನೆಲೆಯನ್ನು ತೊರೆದಿರುವುದು ಕಾಣಿಸುತ್ತದೆ. ಅವರ ಹಿಂಬಲಸೆಯ ಮಾರ್ಗವೂ ಖಚಿತವಾಗಿದೆ. ಬಸವಾನಿಯಿಂದ ತೆಂಗಿನಕೆರೆಯ ಮಾರ್ಗವಾಗಿ ಈ ವಲಸೆ ನಡೆದಿದೆ.



24 ತ್ರ್ಯಂಬಕರಾಯನು ಮತ್ತೂರು ಹೊಸಹಳ್ಳಿಯನ್ನು ಸಂಕೇತಿಗಳಿಗೆ ದತ್ತ ಮಾಡಿದ ಸಂದರ್ಭದಲ್ಲಿಯೇ ನಿರ್ಮಾಣವಾದ ಶ್ರೀತ್ರ್ಯಂಬಕೇಶ್ವರ ದೇವಾಲಯ


ತೆಂಗಿನಕೆರೆಯು ಶಿವಮೊಗ್ಗ ಮತ್ತು ತೀರ್ಥಹಳ್ಳಿಯ ನಡುವೆ ಬೇಗವಳ್ಳಿಯ ಸಮೀಪ ಇರುವ ಗ್ರಾಮ. 'ನಾರಿಕೇಳತಟಾಕಗ್ರಾಮ' ಎಂಬುದು ದಾಖಲೆಗಳಲ್ಲಿ ಇದಕ್ಕಿರುವ ಹೆಸರು. ಅಲ್ಲಿಂದ ಕೆಲವರು ಶೃಂಗೇರಿಮಠದ ಆಶ್ರಯ ಪಡೆದು ಸನ್ಮಾನಿತರಾಗಿ ಉಳಿದರೆ ಮತ್ತೆ ಕೆಲವರು ಶಾನುಭೋಗಿಕೆಯನ್ನವಲಂಬಿಸಿ ಲಿಂಗದಹಳ್ಳಿಗೆ ಹೋಗಿ ನೆಲೆಸಿದರು.

ಊ. ಮತ್ತೂರು:

ಕ್ರಿ.ಶ.೧೫೨೬ರಲ್ಲಿ ವಿಜಯನಗರದ ಅರಸರಿಂದ ಲಭ್ಯವಾದ ಮತ್ತೂರು-ಹೊಸಹಳ್ಳಿ ಸರ್ವಮಾನ್ಯವು ಪ್ರಸಿದ್ಧವಾದುದು. ತುಂಗಾತೀರದ ಇಕ್ಕೆಲಗಳ ಮತ್ತೂರು,

ಹೊಸಹಳ್ಳಿಯಲ್ಲಿ ಆದಾಗಲೇ ನೆಲೆಸಿದ್ದ ಸಂಕೇತಿಗಳ ತೀವ್ರ ಅನುಷ್ಠಾನಪರತೆಯಿಂದ ಪ್ರಭಾವಿತನಾದ ತ್ರ್ಯಂಬಕರಾಯನು, ಈ ಸರ್ವಮಾನ್ಯವನ್ನು ಒತ್ತಾಯಪೂರ್ವಕವಾಗಿ ನೀಡಿದನೆಂಬ ಪ್ರಚಲಿತ ಐತಿಹ್ಯವು, (ಚಿತ್ರ 24) ಹದಿನಾರನೆಯ ಶತಮಾನಕ್ಕೆ ಮೊದಲೇ ಆ ನೆಲೆಗಳಲ್ಲಿ ಸಂಕೇತಿಗಳಿದ್ದರೆಂದು ಹೇಳುತ್ತದೆ. ಈ ಸಂಬಂಧದಲ್ಲಿ -

1 ಮತ್ತೂರು ವಂಶಚರಿತ್ರೆಗಳಿಂದ, ಅಲ್ಲಿನ ಬಹುಪಾಲು ಕುಟುಂಬಗಳು ಹಾಸನಸೀಮೆ, ಮಧ್ಯದೇಶದಿಂದ ಬಂದ ವಲಸಿಗರೆಂಬುದು ಸ್ಪಷ್ಟವಾಗುತ್ತದೆ. ಆದರೆ, ಕೆಲವು ವಾಧೂಲಸರು ಮತ್ತು ಭಾರದ್ವಾಜಿಗಳ ಮೂಲವು ಅದರಲ್ಲಿ ತಿಳಿಯುವುದಿಲ್ಲ.



2 ಈ ಸಂಬಂಧದಲ್ಲಿ ದೊರೆತ ನೂರಿಪ್ಪತ್ತು ವೃತ್ತಿಗಳಲ್ಲಿ, ಬಹುಪಾಲು ದೊರೆತುದು ಸಂಕೇತಿಗಳಿಗೆ. ಅವೆಲ್ಲವೂ ದೂರದಿಂದ ಬಂದ ವಲಸಿಗರಿಗೇ ದೊರೆತುವೆಂದು ಹೇಳಲಾಗದು.

3 ಮತ್ತೂರು-ಹಾಸನ ಎರಡೂ ಪ್ರಾಂತಗಳಲ್ಲಿ ಪರಸ್ಪರವಾಗಿ 'ಹೊಳೆಆಚೆ'ಯವರಿಗೆ ಮೂರು ಅಥವಾ ಹನ್ನೊಂದು ದಿನಗಳ ಆಶೌಚಾಚರಣೆ ಇಟ್ಟುಕೊಂಡಂತೆ, ಕೇವಲ ಸ್ನಾನ ಅಥವಾ ಅದನ್ನೂ ಇಟ್ಟುಕೊಂಡಿಲ್ಲದ ನಿದರ್ಶನಗಳಿವೆ. ಇದುಕೂಡ, ಮೂಲತಃ ಅಲ್ಲಿಯೇ ಇದ್ದ ಕೆಲವು ಕುಟುಂಬಗಳ ಸೂಚನೆ ಕೊಡುತ್ತದೆ.

ಇವೆಲ್ಲವೂ, ಮತ್ತೂರು-ಹೊಸಹಳ್ಳಿಯ ಸರ್ವಮಾನ್ಯವು ದೊರೆಯುವ ಮೊದಲೇ ಸಂಕೇತಿಗಳು ಕೆಲವರಾದರೂ ಅಲ್ಲಿ ನೆಲೆಸಿದ್ದುದನ್ನು ಸಮರ್ಥಿಸುತ್ತವೆ.

ಈ ಮೂಲಕುಟುಂಬಗಳು ಅಲ್ಲಿಗೆ ಎರಡುನೆಲೆಗಳಿಂದ ಬಂದ ವಲಸಿಗರಾಗಿರುವುದು ಸಾಧ್ಯ. ಒಂದು: ನೀಲಗುಂದದಿಂದ ನೇರವಾಗಿ, ಎರಡು: ಕಡೂರುಕೇಂದ್ರಿತ ಸನಿಹದ ನೆಲೆಗಳಿಂದ. ನೀಲಗುಂದದಿಂದ ನೇರವಾಗಿ ಬಂದುದಕ್ಕೆ ಈಗ ಆಧಾರಗಳು ದೊರೆಯುತ್ತಿಲ್ಲ. ಆದರೆ ಮತ್ತೂರಿನ ಜಿ.ಗೋಪಾಲಕೃಷ್ಣ (೬೦, ಕೃಷಿಕ) ಅವರ ಬಳಿ ಇರುವ ಸುಮಾರು ನೂರಮೂವತ್ತು ವರ್ಷಗಳ ಹಿಂದಿನ 'ಪಾಣಿಸೂಡು' ದಾಖಲಿಸಿರುವಂತೆ ಅಲ್ಲಿನ ಅನೇಕ ಕುಟುಂಬಗಳ ಮೂಲನೆಲೆ ತರೀಕೆರೆ, ತಂಗ್ಲಿ ಮೊದಲಾದ ಕಡೂರುಕೇಂದ್ರಿತ ಗ್ರಾಮಗಳಾಗಿವೆ. ತಂಗ್ಲಿಯಿಂದ ಮತ್ತೂರಿಗೆ ಬಂದು ನೆಲೆಸಿರುವವರು ತಂಗ್ಲಿಯ ರಥೋತ್ಸವಕ್ಕೆ ಹೋಗಿಬರುವ ಪರಿಪಾಠ ಇತ್ತೀಚಿನವರೆಗೂ ಇತ್ತು. ಅಲ್ಲದೆ, ತರೀಕೆರೆಯ ಸುತ್ತಮುತ್ತ ಇದ್ದ ತಮ್ಮ ಪಾರಂಪರಿಕ ಆಸ್ತಿಗಳನ್ನು ಕಳೆದ ಎರಡು ದಶಕಗಳವರೆಗೂ ಉಳಿಸಿಕೊಂಡಿದ್ದರು.

ದೂರದೂರದ ವಿಭಿನ್ನನೆಲೆಗಳಿಂದ, ಎಲ್ಲರೂ, ಹೊಸದಾಗಿ ವೃತ್ತಿದೊರೆತು ವಲಸೆಬಂದರೆಂಬುದಕ್ಕಿಂತಲೂ, ಅದಾಗಲೇ ಅಲ್ಲಿ ನೆಲೆಸಿ ಪರಂಪರೆಯೊಂದನ್ನು ಬೆಳೆಸಿಕೊಂಡಿದ್ದವರಿಗೆ ನೂರಕ್ಕೂ ಹೆಚ್ಚು ವೃತ್ತಿಗಳು ದೊರೆತುವೆಂಬುದು ತಾರ್ಕಿಕವಾಗಿದೆ.

ಋ. ಬೆಟ್ಟದಪುರ:

ಬೆಟ್ಟದಪುರದಲ್ಲಿ ನೆಲೆಸಿದ ಸಂಕೇತಿಗಳು ರಾಮನಾಥತುಂಗ (೭ ಕಿ.ಮೀ.), ಕುಡಕೂರು (೫ ಕಿ.ಮೀ.), ಅನವಾಳ್ (೫ ಕಿ.ಮೀ.), ಹರದೂರು (೩ ಕಿ.ಮೀ.), ನಾಗನಹಳ್ಳಿ (೩ ಕಿ.ಮೀ.), ಗೊರಳ್ಳಿ (೩ ಕಿ.ಮೀ.), ಜೋಗನಹಳ್ಳಿ (೩ ಕಿ.ಮೀ.), ಸುರಗಳ್ಳಿ (೪ ಕಿ.ಮೀ.) - ಗಳಲ್ಲಿಯೂ ವೃತ್ತಿಗಳನ್ನು ಪಡೆದು ತೋಟಗಳನ್ನು ಬೆಳೆಸಿದರು. ಹಿಟ್ಟನೇ ಹೆಬ್ಬಾಗಿಲು, ಆಲನಹಳ್ಳಿ ಅವರಿಗೆ ದೊರೆತ ಜೋಡಿಗ್ರಾಮಗಳು. ಹದಿನಾರನೆಯ ಶತಮಾನದ ಕೊನೆಯಭಾಗದಲ್ಲಿ (ಸು.೧೫೯೮) ದೊರೆತ ಈ ಆಶ್ರಯಗಳೇ ಬೆಟ್ಟದಪುರಕೇಂದ್ರದ ಬಗೆಗೆ ದೊರೆಯುವ ಅತ್ಯಂತ ಪ್ರಾಚೀನ ದಾಖಲೆಗಳು.[5]

(ಬೆಟ್ಟದಪುರಸಂಕೇತಿಗಳಲ್ಲಿ ವಿಶಿಷ್ಟವಾಗಿರುವ) ಸಂಕೃತಿಗೋತ್ರದ ಯಜುರ್ವೇದಿ ಮಹಾದೇವಸೋಮಯಾಜಿ, ಕೌಶಿಕಗೋತ್ರದ ಋಕ್‌ಶಾಖೆಯ ನೃಸಿಂಹದೀಕ್ಷಿತ, ಭಾರದ್ವಾಜಗೋತ್ರದ ಯಜುರ್ವೇದಿ ರಾಮಚಂದ್ರಸೋಮಯಾಜಿ ಮೊದಲಾದವರಿಗೆ ಅಡಿಕೆತೋಟಗಳಿಂದ ಕೂಡಿದ ಇಪ್ಪತ್ತೊಂದು ವೃತ್ತಿಗಳು ಸಾಲಿಗ್ರಾಮಕ್ಕೆ ಹೊಂದಿದಂತೆ ರಚಿತವಾದ ದೇವರಾಜಪುರ ಅಗ್ರಹಾರದಲ್ಲಿ ದೊರೆತುದನ್ನು ಮುಂಡೂರು ತಾಮ್ರಶಾಸನ ಹೇಳುತ್ತದೆ.[6] ಅವರು ಹದಿನೆಂಟು-ಹತ್ತೊಂಬತ್ತನೆಯ ಶತಮಾನದ ವೇಳೆಗೆ ಸಾಲಿಗ್ರಾಮದ ಸುತ್ತಣ ಹಳ್ಳಿಗಳಲ್ಲಿ ಅಪಾರವಾದ ತೋಟಗಳನ್ನು ಬೆಳೆಸಿ ರೂಢಿಸಿರುವುದು ಅವರ ವಂಶಚರಿತ್ರೆಗಳಿಂದಲೂ ಸ್ಪಷ್ಟವಾಗುತ್ತದೆ. ವಂಶವೃಕ್ಷಗಳು ತೋರಿಸುವಂತೆಯೂ (ಈ ಶತಮಾನದ ಆರಂಭದಹೊತ್ತಿಗೆ ಅಲ್ಲಿ ಸಂಕೇತಿಗಳ ನೂರೈವತ್ತು ಕುಟುಂಬಗಳಿದ್ದವು) ಸಾಲಿಗ್ರಾಮಕ್ಕೆ ಅವರ ವಲಸೆಯು ಕ್ರಿ.ಶ.೧೬೬೭ಕ್ಕೂ ಹಿಂದೆ ಹೋಗುವುದಿಲ್ಲ (ಪಟ್ಟಿ 12, ಪು.308).

ೠ. ಕೌಶಿಕ:

ಕೌಶಿಕವನ್ನು ಕೇಂದ್ರವಾಗಿ ಉಳ್ಳ ಹಾಸನಸೀಮೆಗೆ ಕ್ರಿ.ಶ.೧೧೨೦ರ ವೇಳೆಗೆ ಸಂಕೇತಿಗಳು ವಲಸೆ ಬಂದುದಾಗಿತ್ತು ಎಂಬುದನ್ನು ನೋಡಿದ್ದೇವೆ. ಹಾಸನಸೀಮೆಯಲ್ಲಿನ ಸಂಕೇತಿನೆಲೆಗಳಿಗೆ ಕೌಶಿಕವು ಪ್ರಧಾನಕೇಂದ್ರವಾಗಿದ್ದುದರಿಂದಲೇ ಅವರು 'ಕೌಶಿಕ ಸಂಕೇತಿ'ಗಳೆನಿಸಿದ್ದಾರೆ. ಕೌಶಿಕದ ಲಕ್ಷ್ಮೀಕೇಶವಸ್ವಾಮಿಯನ್ನು ಮನೆದೇವರಾಗಿ ಹೊಂದಿದ ದೊಡ್ಡಸಂಖ್ಯೆಯ ಕುಟುಂಬಗಳಿವೆ. ಅದು ಮನೆದೇವರಲ್ಲದವರೂ ತಮ್ಮ ಮೊದಲನೆಲೆ ಎಂಬ ಕಾರಣಕ್ಕಾಗಿ ಅಲ್ಲಿನ ರಥೋತ್ಸವದಲ್ಲಿ ಭಾಗವಹಿಸುತ್ತಾರೆ. ಅಲ್ಲಿನ ಚೌಕಾಕಾರದ ಅಣಿಯಾದ ನಾಲ್ಕು ಬೀದಿಗಳು, ಅಲ್ಲಿ ತುಂಬಿದ್ದ ಮನೆಗಳು, ಅವರು ಬೆಳೆಸಿದ್ದ ಲಕ್ಷಮರದ ಆಗ್ರ ಅದು ಪ್ರಧಾನನೆಲೆಯಾಗಿದ್ದುದನ್ನು ಪೋಷಿಸುತ್ತವೆ. ಕೌಶಿಕಕ್ಕಾದ ವಲಸೆಯ ಸಮಕಾಲದಲ್ಲಿಯೇ ಉಂಟಾದ ಇತರ ನೆಲೆಗಳಿಗೆ ಸಂಬಂಧಿಸಿದಂತೆಯೂ ಆಧಾರಗಳಿವೆ. ಹಾಸನಜಿಲ್ಲೆಯ ನೂರಅರುವತ್ತೇಳನೆಯ ಶಾಸನವು[7] ಅನುಗವಳ್ಳಿ ಇತ್ಯಾದಿ ಉಪನೆಲೆಗಳೂ ಸೇರಿದಂತೆ ಪ್ರಧಾನವಾಗಿ ಶಾಂತಿಗ್ರಾಮದಲ್ಲಿ ಸಂಕೇತಿಗಳು ಕ್ರಿ.ಶ.೧೧೨೨ರ ವೇಳೆಗೆ ನೆಲೆಸಿದ್ದುದನ್ನು ಪೋಷಿಸುತ್ತದೆ. ಸಾಲಗಾಮೆಯ ಕೇಶವ ದೇವಾಲಯವನ್ನು ಸಂಕೇತಿ ಹೆಬ್ಬಾರವರು ಕಟ್ಟಿಸಿದುದಕ್ಕೆ ಸಾಂಸ್ಕೃತಿಕ ಮತ್ತು ಭೌತಿಕ ಆಧಾರಗಳು ಈಗಲೂ ಉಳಿದಿವೆ. ಅವರ ಅರಮನೆಯು ಅಲ್ಲಿ ಆರು ದಶಕಗಳ ಹಿಂದೆಯೂ ಇತ್ತು; ಎರಡು-ಮೂರು ದಶಕಗಳ ಹಿಂದೆ ಅದರ ಮೋಟುಗೋಡೆಗಳು ಉಳಿದಿದ್ದು ಇದೀಗ 'ಹೆಬ್ಬಾರವರ ಮಂದಳ'ವಾಗಿದೆ. ಹೆಬ್ಬಾರವರು ಸಾಲಗಾಮೆಯಲ್ಲಿ ಕೇಶವದೇವಾಲಯವನ್ನು ಕಟ್ಟಿಸಿದುದಕ್ಕೆ ಸಂಬಂಧಿಸಿದ ಐತಿಹ್ಯವೊಂದು ಹೀಗಿದೆ: ಬೇಲೂರಿನಿಂದ

---

5 ಸುರಗವಳ್ಳಿ ೧೫೯೮ ರಲ್ಲಿ (ಇಸಿ ಸುರಗವಳ್ಳಿ ೨೫ IV ಹು ೭೯), ಬೆಟ್ಟದತುಂಗ (೧೧೦, IV ಹು ೭೧), ಕುಡಕೂರು ೧೬ನೆಯ ಶತಮಾನದಲ್ಲಿ ದೊರೆತವು. ರಾವಂದೂರು, ಒಳಸೋಗೆ ಮತ್ತು ನಂಜರಾಯಪಟ್ಟಣ ಸೀಮೆಗೆ ಸೇರಿದ ೩೩ ಹಳ್ಳಿಗಳು ವಿತರಣೆಗೊಂಡುದನ್ನು ಬೆಟ್ಟದಪುರ (ಇಸಿ ೭೧IV ಹು ೪೧)ರ ಶಾಸನ ತಿಳಿಸುತ್ತದೆ. ಅವೂ ೧೫೮೬ರಲ್ಲಿ ವಿತರಣೆಗೊಂಡವು.

6 ಇಸಿ ೭೯, (IV ಯೆ ೪೩) ಮುಂಡೂರು ತಾಮ್ರಶಾಸನ.

7 ಇಸಿ ೧೬೭ (V ಹಾ ೧೧೬) ಶಾಂತಿಗ್ರಾಮ, ಕ್ರಿ.ಶ.೧೧೨೨, ಧರ್ಮೇಶ್ವರ ದೇವಾಲಯದ ದಕ್ಷಿಣದಲ್ಲಿ

ಅವರ ಮನೆದೇವರಾದ ಬೇಲೂರಿನ ಲಕ್ಷ್ಮೀಚನ್ನಕೇಶವಸ್ವಾಮಿಯ ಪ್ರಸಾದವು ನಿತ್ಯವೂ ಅವರಿಗೆ ಬರುತ್ತಿತ್ತು. ಒಮ್ಮೆ ಯಗಚಿ ನದಿಯ ಪ್ರವಾಹದಿಂದಾಗಿ ಅನೇಕ ದಿನಗಳು ಪ್ರಸಾದ ಬಾರದೆಹೋಯಿತು. ಮಕ್ಕಳು-ಮರಿಗಳೂ ಉಪವಾಸವಿದ್ದರು. ದೇವರಿಂದ ಕನಸಿನಲ್ಲಿ ಆದೇಶಿತರಾದ ಹೆಬ್ಬಾರರು ತಾವೇ ಒಂದು ಕೇಶವ ದೇವಾಲಯವನ್ನು ಅಲ್ಲಿ ಕಟ್ಟಿಸಿದರು. ಈ ಪ್ರಚಲಿತ ಐತಿಹ್ಯವನ್ನು, ಬೇಲೂರು- ಸಾಲಗಾಮೆಯ ಕಾಲುದಾರಿಯ ಉದ್ದಕ್ಕೂ ಪ್ರಸಾದ ತರುವ ದೂತರಿಗಾಗಿ ನಿರ್ಮಿಸಿದ್ದ 'ಹೆಬ್ಬಾರವ ಕೊಳಗಳು' ಇಂದಿಗೂ ಸಮರ್ಥಿಸುತ್ತಿವೆ. ಕಡದವರಹಳ್ಳಿ, ಮಾದೆಹಳ್ಳಿ, ಹಾಲುತೊರೆ, ನೆಟ್ಟೆಕೆರೆ, ಲಕ್ಷ್ಮೀಪುರ, ರಾಯಪುರ ಹೀಗೆ ಪ್ರತಿ ನಾಲ್ಕು ಮೈಲಿಗೊಂದರಂತೆ 'ಹೆಬ್ಬಾರವ ಕೊಳ'ಗಳಿವೆ. ಸಾಲಗಾಮೆಯ ಆ ದೇವಾಲಯದ ಜೀರ್ಣೋದ್ಧಾರವು ಕ್ರಿ.ಶ.೧೨೫೮ರಲ್ಲಾದುದರಿಂದ,[8] ಅದಕ್ಕೂ ಸುಮಾರು ಒಂದು ಶತಮಾನದ ಮೊದಲೇ ಆ ದೇವಾಲಯವನ್ನು ಕಟ್ಟಿಸಿರುವುದು ಸಾಧ್ಯವೆಂದೂ ಮತ್ತು ಆ ಕಾರಣದಿಂದಾಗಿ, ಸಂಕೇತಿಗಳು ಗೋಣಿಸೋಮನಹಳ್ಳಿ ಮೊದಲಾದ ಉಪನೆಲೆಗಳನ್ನೊಳಗೊಂಡ ಸಾಲಗಾಮೆಯಲ್ಲಿ ಅದಾಗಲೇ ನೆಲೆಸಿದ್ದರೆಂದೂ ತರ್ಕಿಸಬಹುದಾಗಿದೆ.

ಕಾಲಕ್ರಮದಲ್ಲಿ ಜೀವನಾಧಾರಕ್ಕಾಗಿ ಆದ ಇತರ ಮರುವಲಸೆಗಳ ಕನಿಷ್ಠ ಕಾಲವನ್ನು ಹೀಗೆ ಗುರುತಿಸಬಹುದು:

ಕ್ರಮ ಸಂಖ್ಯೆ	*ನೆಲೆ*	*ಕಾಲ*	*ವಿವರ*
೧	ಗುದ್ದುಂಬಳ್ಳಿ	ಕ್ರಿ.ಶ.೧೨೧೬	ದೊಡ್ಡಗದ್ದಹಳ್ಳಿ ೩೭ (V ಹಾ.೧೫೦)
೨	ಮಾವಿನಕೆರೆ, ಹಾಸನಹಳ್ಳಿ, ಸೀಗೆಹಳ್ಳಿ	ಕ್ರಿ.ಶ.೧೨೬೧	ಬೇಲೂರು ೭೦(V ಬೇ.೭೪)
೩	ಚಿಕ್ಕಕಡಲೂರು	ಕ್ರಿ.ಶ.೧೩ನೇ ಶತಮಾನ	ಹಿರೇಕಡಲೂರು ೧೧೨ (V ಹಾ.೮೪) ನಂಜೇಗೌಡನ ವಶದಲ್ಲಿದ್ದ ತಾಮ್ರಶಾಸನ
೪	ಸೀಗೆನಾಡಿನ ಘಟ್ಟದಹಳ್ಳಿ	ಕ್ರಿ.ಶ.೧೩೮೫	೨೬೪ (V ಬೇ.೧೪೮; ರಿ ೧೯೨೪-೨೫) ಜೋಡಿದಾರ್ ಚನ್ನಪ್ಪಯ್ಯ ಬಳಿ ಇದ್ದ ತಾಮ್ರಶಾಸನ
೫	ಮುದಲಾಪುರ, ಕೃಷ್ಣಾಪುರ, ಹಂದನಹಾಲು, ಪೂಮಗಾಮೆ.	ಕ್ರಿ.ಶ.೧೬ನೇ ಶತಮಾನ	ಇನಾಂರದ್ದತಿ ಪರಿಹಾರ ದಾಖಲೆಗಳು. ಜೋಡೀದಾರ್ ಸೀತಾರಾಮಯ್ಯ, ಮುದಲಾಪುರ
೬	ಮುಗಳೂರು	ಕ್ರಿ.ಶ.೧೭೬೨	ಮುಗಳೂರು ೧೬ (V ಹಾ.೧೩೨) (ಪಟೇಲ ವೆಂಕಟಸುಬ್ಬಯ್ಯ ವಶದಲ್ಲಿದ್ದ ತಾಮ್ರಶಾಸನ)
೭	ಆಲದಹಳ್ಳಿ, ಸಮುದ್ರವಳ್ಳಿ ಜೋಡಿ (ಕೌಶಿಕದ ಸಮೀಪ)	ಎರಡು ತಲೆಮಾರುಗಳ ಹಿಂದೆ ಪಡೆದುದು	ನಾಲ್ವಡಿ ಕೃಷ್ಣರಾಜ ಒಡೆಯರು

ಸಂಪನ್ಮೂಲದ ಕೊರತೆಯಾದಂತೆ ಆಗಾಗ ವೃತ್ತಿಗಳನ್ನು ಪಡೆದು ಹಾಸನಸೀಮೆಯಲ್ಲಿ ಹರಡಿಕೊಂಡ ಚಿತ್ರ ಇದರಿಂದ ದೊರೆಯುತ್ತದೆ.

[8] ಇಸಿ ಸಾಲಗಾಮೆ ೫೮(ರಿ ೧೯೨೬-೪೬)

1. ಕೌಶಿಕದಿಂದ ಆದ ಹೊರವಲಸೆಗಳು: ಹಾಸನಸೀಮೆಯಿಂದ ಆದ ಎರಡು ಪ್ರಧಾನ ಹೊರವಲಸೆಗಳಲ್ಲಿ ಒಂದು ತಿಪ್ಪೂರು; ಇನ್ನೊಂದು ಮರಿತಮ್ಮನಹಳ್ಳಿ, ಒಡ್ಡರಹಳ್ಳಿ - ಈ ಕೇಂದ್ರಗಳಿಗೆ ಆದುದು.

0.1 **ತಿಪ್ಪೂರು:** ರಾಜಕಾರ್ಯಾಸಕ್ತರಾಗಿ ತಿಪ್ಪೂರಿನಲ್ಲಿ ನೆಲೆನಿಂತವರು ಮೈಸೂರು ಸಂಸ್ಥಾನದ ರಾಜಕೀಯದ ದಿಕ್ಕನ್ನು ರೂಪಿಸುವ ಐತಿಹಾಸಿಕ ಪಾತ್ರ ವಹಿಸಿದರು. ಕ್ರಿ.ಶ.೧೬೨೯ರಲ್ಲಿ ತಿಪ್ಪೂರಿನ ವೀರಭದ್ರರಾಜ ಅರಸನ ಮಂತ್ರಿಯಾಗುವ[9] ಸ್ವಲ್ಪಕಾಲ ಮೊದಲೇ ತಿಮ್ಮಪ್ಪಯ್ಯನ ವಂಶಸ್ಥರು ತಿಪ್ಪೂರಿಗೆ ಬಂದು ನೆಲೆಸಿರುವ ಸಾಧ್ಯತೆಯನ್ನು ತಳ್ಳಿಹಾಕಲಾಗುವುದಿಲ್ಲ.

ಈ ವಂಶದ ಇತರ ಮಂತ್ರಿಗಳು

ಕೇಶವ
(ಪಿರಿಯಪಟ್ಟಣದ ನಂಜುಂಡರಸನ ದಿವಾನ)

ಸುಬ್ರಹ್ಮಣ್ಯ
(ಹೊಸಹೊಳಲು ದಿವಾನ)

ಶ್ರೀನಿವಾಸ
(ತಿಪ್ಪೂರು ದಿವಾನ)

ಈ ಮೂರೂ ಸಂಸ್ಥಾನಗಳೂ ಹೈದರನ ಆಕ್ರಮಣಕ್ಕೆ ಬಲಿಯಾದವು; ಈ ಮೂವರು ದಿವಾನರೂ ರಣರಂಗದಲ್ಲಿ ಕಾದುತ್ತಾ ಮಡಿದರು.[10]

0.0.1 ಪಿರಿಯಪಟ್ಟಣದ ದಿವಾನ ಕೇಶವನ ವಂಶಸ್ಥರು ಕ್ರಿ.ಶ.೧೬೬೯ರಲ್ಲಿ ಕಂಠೀರವ ಮಹೀಪಾಲನ ಹೆಸರಿನಲ್ಲಿ ಕಾವೇರಿ, ಕಪಿನಿಗಳ ನಡುವೆ ಆದ ಕಂಠೀರವಸಮುದ್ರ ಅಗ್ರಹಾರ ಗ್ರಾಮಗಳಲ್ಲಿ[11] ವೃತ್ತಿಗಳನ್ನು ಪಡೆದು ನೆಲೆಸಿದರು. ಮುಂದೆ, ಚಿಲಕುಂದಕ್ಕೆ ಬಂದು ಮೊದಲು ನೆಲೆಸಿದವರು ಈ ಲೋಹಿತರೇ.

0.0.2 ತಿಪ್ಪೂರಿನ ದಿವಾನ ಶ್ರೀನಿವಾಸನ ಮಗ ಕೇಶವನನ್ನು, ಹೈದರ್, ತನ್ನಲ್ಲಿ ಅಧಿಕಾರಿಯಾಗಿ ನೇಮಿಸಿಕೊಂಡ.

ಆ ವಂಶಿಕರು ನೆಲೆಸಿದ ಪ್ರದೇಶಗಳು:

ಕ್ರಮ ಸಂಖ್ಯೆ	*ನೆಲೆ*	*ಕಾಲ*	*ಮೂಲ*
೦.೧	ಹೊಸಕೋಟೆ	ಕ್ರಿ.ಶ.೧೬೬೭	ಶೇಷಭಟ್ಟರ ವಶದ ತಾಮ್ರಶಾಸನ, ಮೈಸೂರು ೧೦೪ ರಿ(೧೯೩೪-೩೯)
೦.೨	ನಂಜರಾಜಸಮುದ್ರ ಅಗ್ರಹಾರದಲ್ಲಿ	ಕ್ರಿ.ಶ.೧೭೪೧	ಮಾಚನಹಳ್ಳಿ ತಾಮ್ರಶಾಸನ ೧೧೭(IV ಯೆ ೫೮)
೦.೩	ದೇವಾಂಬಸಮುದ್ರ ಅಗ್ರಹಾರ. (ಆ.೧೨ ಗ್ರಾಮಗಳಲ್ಲಿ ಎಡತೊರೆ ತಿಪ್ಪೂರು ಸೇರಿದ್ದವು)	ಕ್ರಿ.ಶ.೧೭೬೧	ಹನಸೋಗೆ ೪೭ (IV ಯೆ ೧೮ ಕ್ರಿ.ಶ.೧೭೬೧)

9 ವಿವರಗಳಿಗೆ ನೋಡಿ:
Life of Nacharamma (History of Her Migration), pp.61-64

10 ಮೇಲಿನ ಆಧಾರದ ಜೊತೆಗೆ ವೆಂಕಟೇಶಯ್ಯ, ೮೬, ನಾಟಕ ಕಲಾವಿದ, ಗಮಕಿ ಮತ್ತು ಕೃಷಿಕ ಕುಪ್ಪಳ್ಳಿ ಅವರು ಒದಗಿಸಿದ ವಂಶಚರಿತ್ರೆಯನ್ನೂ ಬಳಸಿಕೊಂಡಿದೆ.

11 ಇಸಿ ತರೀಕಲ್ಲು ೩೨(IV ಹು ೧೩೯), ಕ್ರಿ.ಶ.೧೬೬೯

0.0.3 ಹೊಸಹೊಳಲುವಿನ ದಿವಾನನ ವಂಶಸ್ಥರು ಕುಪ್ಪಳ್ಳಿಯಲ್ಲೇ ಮುಂದುವರಿದರು.

ಈ ನೆಲೆಗಳೆಲ್ಲವೂ ಮೈಸೂರು ಸಂಸ್ಥಾನದೊಂದಿಗೆ ನಿಕಟಸಂಪರ್ಕ ಹೊಂದಿದ್ದವು.

0.2 **ಮಧ್ಯದೇಶ**: ಕೌಶಿಕಕೇಂದ್ರದಿಂದ ಮತ್ತೊಂದು ಪ್ರಧಾನ ವಲಸೆ ಆದುದು ಒಡ್ಡರಹಳ್ಳಿ-ಮರಿತಮ್ಮನಹಳ್ಳಿ ಕೇಂದ್ರಕ್ಕೆ. ಮರಿತಮ್ಮನಹಳ್ಳಿಯ ಪಟೇಲ್ ವೆಂಕಟಸುಬ್ಬಯ್ಯನವರ ಬಳಿ ಇದ್ದ ತಾಮ್ರಶಾಸನವನ್ನು ಪರಿಶೀಲಿಸಿದ ಎಂ.ಕೇಶವಯ್ಯನವರು, ಆ ಗ್ರಾಮವು ಹೊಳೇನರಸೀಪುರದ ನರಸಪ್ಪನಾಯಕನಿಂದ (ಕ್ರಿ.ಶ.೧೫೮೪) ದತ್ತಿಯಾಗಿ ಬಂದುದನ್ನು ದಾಖಲಿಸಿದ್ದಾರೆ. ವೆಂಕಟಸುಬ್ಬಯ್ಯನವರ ಬಳಿ ಇದ್ದ ತಾಮ್ರಶಾಸನವು 'ಪಂಜುಗಳ್ಳರ ಕಾಟದಿಂದಲೋ ದಾಯಾದಿ ಮತ್ಸರದಿಂದಲೋ ಈಗ ನಷ್ಟವಾಗಿ ಹೋಗಿದೆ'. ಕ್ರಿ.ಶ.೧೬೩೧ರ ವೇಳೆಗೇ ಚಾಮರಾಜ ಒಡೆಯರ ಆಕ್ರಮಣಕ್ಕೆ ಒಳಗಾಗತೊಡಗಿ ಕ್ರಿ.ಶ.೧೬೫೮ರ ವೇಳೆಗೆ ಹೊಳೇನರಸೀಪುರದ ನಾಯಕರು ಮೈಸೂರು ಅರಸರಿಗೆ ಕಪ್ಪ ಸಲ್ಲಿಸುತ್ತಿದ್ದರು. ಆದುದರಿಂದ ಕೇಶವಯ್ಯನವರು ಹೇಳುವಂತೆ ತಿಪ್ಪೂರಿಗೆ ಆದ ವಲಸೆಗೂ ಮೊದಲೇ ಮರಿತಮ್ಮನಹಳ್ಳಿಗೆ ವಲಸೆ ನಡೆದಿರುವುದನ್ನು ಒಪ್ಪಬಹುದು. ಮುಂದೆ, ಹೊಳೇನರಸೀಪುರದ ನರಸನಾಯಕನಲ್ಲಿ ಸಂಕೇತಿ ಸೋದರರು ದಿವಾನರಾಗಿದ್ದರೆಂದು (ಕೆಲವು ಪಾಠಗಳಲ್ಲಿ ಸೇನಾಪತಿಗಳಾಗಿದ್ದರೆಂದೂ) ಐತಿಹ್ಯವಿದೆ. ತಿಪ್ಪೂರಿನ ಪರಂಪರೆಯು ಪ್ರತೀಕಿಸುವ ರಾಜಕಾರ್ಯನೈಪುಣ್ಯಕ್ಕೆ ಪರ್ಯಾಯವಾಗಿ ಮರಿತಮ್ಮನಹಳ್ಳಿಯ ದತ್ತಿ ಬಂದುದು ಗಾಢ ಅನುಷ್ಠಾನಕ್ಕಾಗಿ ಎಂಬುದಕ್ಕೆ ನಿದರ್ಶನವಾಗಿ, ಸಮಾರಂಭಗಳಲ್ಲಿ (ಆ ದತ್ತಿಯನ್ನು ಪಡೆದ ಅವಧಾನಿಗಳ ಗೌರವದ ಸಂಕೇತವಾಗಿ) ಎತ್ತುವ 'ಸರ್ವಶ್ರೇಷ್ಠ ತಾಂಬೂಲ' ಇಂದಿಗೂ ಆ ಪರಂಪರೆಯವರಿಗೆ ಸಲ್ಲುತ್ತಿರುವುದನ್ನು ಕಾಣಬಹುದು. ಮಧ್ಯದೇಶದಲ್ಲಿ ವ್ಯಾಪಿಸಿರುವ ಭಾರದ್ವಾಜಿಗಳ ಮೂಲಕೇಂದ್ರಗಳು ಮರಿತಮ್ಮನಹಳ್ಳಿ ಮತ್ತು ಒಡ್ಡರಹಳ್ಳಿ. ಅವು ಇನಾಂಗ್ರಾಮಗಳೇ ಆಗಿವೆ ಮತ್ತು ಈ ಹೊರವಲಸೆಗಳಾದುದೂ ಅನುಷ್ಠಾನ ಮತ್ತು ಜೀವನಾಧಾರಕ್ಕೆ ಇದ್ದ ಒತ್ತಡಗಳಿಂದಲೇ.

ಹೊರವಲಸೆಯ ಕೆಲವು ನಿದರ್ಶನಗಳು :

ಮರಿತಮ್ಮನಹಳ್ಳಿಯಿಂದ ಚಾಹಳ್ಳಿಗೆ (ಕ್ರಿ.ಶ.೧೭೦೦) (ಬಸವಪಟ್ಟಣದ ವ್ಯಾಕರಣ ವಿದ್ವಾನ್ ಸುಬ್ಬರಾಯ ಶಾಸ್ತ್ರಿಗಳು ಒದಗಿಸಿದ ವಂಶಚರಿತ್ರೆ)

ಬಸವಪಟ್ಟಣಕ್ಕೆ (ಕ್ರಿ.ಶ.೧೭೫೦) -----ಅದೇ-----

ಹಾನಗಲ್ಲಿಗೆ (ಕ್ರಿ.ಶ.೧೭೬೫) [ಹಾನಗಲ್ಲಿನ ನಾರಾಯಣರಾವ್ (ಗುಂಡಪ್ಪ)ನವರಲ್ಲಿದ್ದ ಮೇಣಗಬಟ]

ಮಧ್ಯದೇಶದಲ್ಲಿ ಕಾಲಕಾಲಕ್ಕೆ ಚದುರಿದ ಇತರ ನಿದರ್ಶನಗಳು:

ಭರತವಳ್ಳಿ - (ಕ್ರಿ.ಶ.೧೬೬೧)[12]

ಹೆಬ್ಬಾಲೆ - (ಕ್ರಿ.ಶ.೧೬೬೫)[13]

ಬರಗೂರು - (೧೭೬೧)[14]

ಕಟ್ಟೆಪುರ - (ಕ್ರಿ.ಶ.೧೮೧೧) (ಬಕ್ಷಿತಿಪ್ಪಯ್ಯನವರ ಆಶ್ರಯ)

---

12 ಕೆಸವತ್ತೂರು ಪುಟ್ಟಸ್ವಾಮಯ್ಯನವರ ಬಳಿ ಇದ್ದ ತಾಮ್ರಶಾಸನ ೧೪೨ (ರಿ.೧೯೨೬-೫)

13 ಜೋಡಿದಾರ್ ವೆಂಕಟಸುಬ್ಬಯ್ಯನವರ ಬಳಿ ಇದ್ದ ತಾಮ್ರಶಾಸನ ಇಸಿ ೨೦(XV ಅಗೂ ೧೦೬)

14 ಇಸಿ ೪೬(IV ಯೆ ೧೭) ಹನಸೋಗೆ.

ಪ್ರತ್ಯಕ್ಷಾನುಭವವೂ ಸೇರಿದಂತೆ ಸುಲಭವಾಗಿ ಈಗಲೂ ಲಭ್ಯವಾಗುವ ಇತರ ಆಧಾರಗಳಿಂದಲೇ ಈ ತೀರ್ಮಾನಗಳಿಗೆ ಬರಲಾಗಿದೆ. ಆಯಾ ನೆಲೆಗಳಲ್ಲಿ ಸಂಕೇತಿಗಳು ನೆಲೆಸಿದ ಕನಿಷ್ಠ ಕಾಲಮಿತಿಯನ್ನು ಸೂಚಿಸಲು ಶಾಸನಗಳನ್ನು ಉಲ್ಲೇಖಿಸಲಾಗಿದೆ. ಈ 'ಇತರ' ಆಧಾರಗಳನ್ನು ಅವಲಂಬಿಸಿಯೇ ಉಲ್ಲೇಖಿತ ಶಾಸನಗಳು ಸಂಕೇತಿ ಸಮುದಾಯಕ್ಕೂ ಸಂಬಂಧಿಸಿರುವುದನ್ನು ಇಲ್ಲಿ ದಾಖಲಿಸಲಾಗಿದೆ ಎಂಬುದನ್ನು ಇಲ್ಲಿ ಮತ್ತೆ ಸ್ಪಷ್ಟಪಡಿಸಬೇಕಾಗಿದೆ.

ನೀರಾವರಿ ಅನುಕೂಲಗಳಾದಂತೆ ಮಧ್ಯದೇಶದ ಅನೇಕ ಗ್ರಾಮಗಳಲ್ಲಿ ಸಂಕೇತಿಗಳು ವ್ಯಾಪಕವಾಗಿ ಚದುರಿರುವುದನ್ನು ಈಗ ಕಾಣಬಹುದು. ಈ ವಲಸೆಗಳ ಕಾಲವನ್ನೂ ವಂಶಚರಿತ್ರೆ ಮತ್ತಿತರ ದಾಖಲೆಗಳಿಂದ ನಿರ್ಣಯಿಸಬಹುದಾದರೂ ಮೇಲಿನ ನಿದರ್ಶನಗಳಂತೆ ಸಂವಾದಿಯಾದ ಶಾಸನಸಂಬಂಧಗಳು ಇವಕ್ಕಿರುವುದಿಲ್ಲ.

ಎ. ದಕ್ಷಿಣದಲ್ಲಿ :

ನೆಲೆಗೆಟ್ಟ ಕರ್ನಾಟಕದ ಸಂಕೇತಿಗಳ ಮರುವಲಸೆಗಳ ಚರಿತ್ರೆಯಲ್ಲಿ ಗುರುತಿಸಬಹುದಾದಂತೆ ದಕ್ಷಿಣದ ಸಂಕೇತಿಗಳ ಮರುವಲಸೆಗಳ ನಿರ್ದಿಷ್ಟ ಕಾಲಘಟ್ಟಗಳನ್ನು ಗುರುತಿಸಲಾಗದುದಕ್ಕೆ ಅಲ್ಲಿನ ಮರುವಲಸೆಗಳ ನಿರಾತಂಕ ಪ್ರವೃತ್ತಿ ಹಾಗೂ ವ್ಯವಸಾಯೇತರ ಪ್ರೇರಣೆಗಳು ಕಾರಣಗಳಾಗಿವೆ.

1. ಈಗಾಗಲೇ ಗುರುತಿಸಿರುವಂತೆ ಹನ್ನೊಂದನೆಯ ಶತಮಾನದ ಕೊನೆಯಭಾಗದಲ್ಲಿ ಆದ ದುರಂತಪ್ರಸಂಗದಿಂದಾಗಿ ಶಾಪತ್ತೂರನ್ನು (ಆಳ್ವಾರ್‌ಕುರುಚಿ) ಸಂಕೇತಿಗಳು ಪೂರ್ಣವಾಗಿ ತೊರೆದಿದ್ದಾರೆ. ಅಂಬಾಸಮುದ್ರಂ ಮೊದಲಾದ ಶಾಪತ್ತೂರ್‌ಕೇಂದ್ರಿತ ಇತರ ಪ್ರಾಚೀನ ನೆಲೆಗಳನ್ನೂ ಸಂಕೇತಿಗಳು ತೊರೆದಿರುವುದು ಆ ಸಮಕಾಲದಲ್ಲಿಯೇ ಎಂಬುದು ಆ ಸಂಬಂಧದಿಂದ ಗುರುತಿಸಬಹುದಾದ ಸಂಗತಿ.

2. ದಳವಾಯಿ ರಾಮ್ಮೆಯ್ಯನ ಪ್ರಸಂಗದಿಂದ ಖಚಿತವಾಗುವ ಸಂಗತಿಯೆಂದರೆ (ಮರಣ ಕ್ರಿ.ಶ.೧೭೫೬), ಬಹಳ ಹಿಂದಿನಿಂದಲೂ ಶೆಂಕೋಟ್ಟೈ ಭಾಗದ ಸಂಕೇತಿಗಳು ತಿರುವಾಂಕೂರುಸಂಸ್ಥಾನದೊಂದಿಗೆ ಪಾರಂಪರಿಕ ಸಂಬಂಧವನ್ನು ಹೊಂದಿದ್ದುದು ಮತ್ತು ವಲಸೆಗೊಂಡಿದ್ದುದು.

ವಿದ್ಯಾಭ್ಯಾಸ ಮತ್ತಿತರ ವ್ಯವಹಾರಗಳಿಗಾಗಿ ಶೆಂಕೋಟ್ಟೈನಿಂದ ತಿರುವಾಂಕೂರಿಗೆ ಕಾಲುನಡಿಗೆಯಲ್ಲಿ ಸಂಪರ್ಕಸಾಧಿಸುವುದು ಈ ಶತಮಾನದ ಪ್ರಾರಂಭದವರೆವಿಗೂ ಇದ್ದ ಪರಿಪಾಠ ಎಂಬುದೂ ಮೇಲಿನ ಸಂಗತಿಯನ್ನು ಪೋಷಿಸುತ್ತದೆ.

ಈ ಶತಮಾನದಲ್ಲಿ ಕೇರಳದಲ್ಲಿ ದಿವಾನರಾಗಿದ್ದ ಸಿ.ಪಿ.ರಾಮಸ್ವಾಮಿ ಅಯ್ಯರ್ ಅವರ ಕಾಲದಲ್ಲಿ ಶೆಂಕೋಟ್ಟೈನಿಂದ ಅಲ್ಲಿಗೆ ಆದ ದೊಡ್ಡ ಸಂಖ್ಯೆಯ ವಲಸೆಯು, ಹಿಂದಿನ ಪರಂಪರೆಯ ಮುಂದುವರಿಕೆ ಎಂಬುದನ್ನು ಗುರುತಿಸಬಹುದು.

3. ತಿರುನೆಲ್‌ವೇಲಿ, ಶುಚೀಂದ್ರಂ ಮೊದಲಾದ ಎರಡನೆಯಹಂತದ ವಲಸಿಗರ ಕೆಲವು ವಂಶವೃಕ್ಷಗಳು ಎರಡು-ಮೂರು-ನಾಲ್ಕು ಶತಮಾನಗಳ ಹಿಂದೆಯೇ ಶೆಂಕೋಟ್ಟೈಸೀಮೆಯಿಂದ ಅಲ್ಲಿಗೆ ವಲಸೆ ನಡೆದುದನ್ನು ಸಮರ್ಥಿಸುತ್ತವೆ. ಈ ಹಂತದ ವಲಸೆಯು ನಿರಂತರವಾಗಿ ಪ್ರತಿತಲೆಮಾರಿನಲ್ಲಿಯೂ ಸಂಪನ್ಮೂಲಗಳ ಹುಡುಕಾಟಕ್ಕಾಗಿ ಆಗಿದೆ. ಶೆಂಕೋಟ್ಟೈಸೀಮೆಯ ಜನಸಂಖ್ಯೆ ನಿರಂತರ ವಲಸೆಗಳಿಂದಾಗಿ ಸೊರಗಿದೆ.

4. ಕ್ರಿ.ಶ.೧೯೩೦ರ ದಶಕದಿಂದೀಚೆಗೆ ಮದರಾಸು ಮತ್ತಿತರ ನಗರಗಳಿಗೆ ಆದ ವಲಸೆಗಳಿಂದಾಗಿ ಎರಡನೆಯ ಹಂತದ ನೆಲೆಗಳೂ ಈಗ ಜನಸಂಖ್ಯೆಯ ದೃಷ್ಟಿಯಿಂದ ತೀವ್ರವಾಗಿ ಸೊರಗಿವೆ.

ಈ ವಿವರಗಳು ಸ್ಥೂಲವಾಗಿ ವಲಸೆಗಳ ಕಾಲಘಟ್ಟಗಳನ್ನು ಸೂಚಿಸುತ್ತವಾದರೂ, ಕರ್ನಾಟಕದಲ್ಲಿನಂತೆ, ನಿಖರತೆ ಸಾಧ್ಯವಾಗುವುದಿಲ್ಲ ಎಂಬುದನ್ನು ಇಲ್ಲಿ ಗಮನಿಸಬಹುದು (ಪಟ್ಟಿ 11 ಪು.307).

ಈವರೆಗಿನ ಅವಲೋಕನದಿಂದ ತಿಳಿಯುವುದೆಂದರೆ - ಕ್ರಿ.ಶ.ಹನ್ನೊಂದನೆಯ ಶತಮಾನದ ಕೊನೆಯಭಾಗದಲ್ಲಿ ಕರ್ನಾಟಕಕ್ಕೆ ಕಾಲಿಟ್ಟ ಸಂಕೇತಿಗಳು ಚಾಲುಕ್ಯರ ನೀಲಗುಂದದಿಂದ ಕ್ರಿ.ಶ.ಹನ್ನೆರಡು-ಹದಿಮೂರನೆಯ ಶತಮಾನದ ವೇಳೆಗೆ ಹೊಯ್ಸಳರ ಕಡೂರುಕೇಂದ್ರಿತ ನೆಲೆಗಳಿಗೆ ವಲಸೆಗೊಂಡುದು ನಿರಾತಂಕದ ಮನಸ್ಥಿತಿಯದಾಗಿರಲಿಲ್ಲ. ಆದರೆ ಅಲ್ಲಿಂದ ವಿಜಯನಗರದ ಅರಸರ ಆಶ್ರಯದಲ್ಲಿ ವಿಭಿನ್ನ ನೆಲೆಗಳಿಗೆ ಚದುರುವ ವೇಳೆಗೆ ಅವರು ತಮ್ಮ ಅಸ್ತಿತ್ವವನ್ನು ಸ್ಥಾಪಿಸಿಕೊಂಡು ವಿಕಾಸದತ್ತ ಮುಖಮಾಡಿದ್ದರು. ಹಾಸನಕೇಂದ್ರದಿಂದ ಇದೇ ಕಾಲಕ್ಕೆ ಆದ ಮರುವಲಸೆಗಳೂ ವಿಜಯನಗರದ ಅರಸರ ಆಶ್ರಯದಲ್ಲಿ ಇದೇ ಮನಸ್ಥಿತಿಯಲ್ಲಾದವು. ಮೈಸೂರು ಅರಸರ ವೇಳೆಗೆ ರಾಜಕೀಯವಾಗಿಯೂ ವ್ಯಾಪಕವಾಗಿ ತಮ್ಮ ಪಾಲಿನ ಸೇವೆಸಲ್ಲಿಸುವ ದೃಢತೆ ಅವರಿಗೆ ಬಂದಿತ್ತು. ಕರ್ನಾಟಕದ ಮರುವಲಸೆಗಳ ಪ್ರಧಾನ ತರಂಗಗಳು ಈ ರಾಜಮನೆತನಗಳನ್ನು ಅನುಸರಿಸಿಯೇ ಆದವು. ದಕ್ಷಿಣದಲ್ಲಿ ಹನ್ನೊಂದನೆಯ ಶತಮಾನದ ಕೊನೆಯಭಾಗದಲ್ಲಿ ಶಾಪತ್ತೂರುಕೇಂದ್ರಿತ ನೆಲೆಗಳನ್ನು ತೊರೆದರು. ಶೆಂಕೋಟ್ಟೈಕೇಂದ್ರಿತ ನೆಲೆಗಳು ಇನ್ನೂ ಕೆಲವುಕಾಲ ಪ್ರಧಾನಕೇಂದ್ರವಾಗಿಯೇ ಮುಂದುವರಿದವು. ವಂಶಚರಿತ್ರೆಗಳೂ, ವಂಶವೃಕ್ಷಗಳೂ ಕೊನೆಯಪಕ್ಷ ನಾಲ್ಕು ಶತಮಾನಗಳ ಹಿಂದಿನಿಂದಲೇ ತಿರುನೆಲ್‌ವೇಲಿ, ಕನ್ಯಾಕುಮಾರಿಜಿಲ್ಲೆಗಳ ಹಲವೆಡೆಗಳಿಗೆ ತರಂಗಿತ ಮರುವಲಸೆಗಳ ಆರಂಭವಾದುದಕ್ಕೆ ಆಧಾರವನ್ನು ಒದಗಿಸುತ್ತವೆ. ಆದರೆ, ನಿರ್ದಿಷ್ಟ ಕಾಲಘಟ್ಟಗಳನ್ನು ಸೂಚಿಸುವ ಇತರ ಆಧಾರಗಳು ಈಗ ಅವರಿಗೆ ಸಂಬಂಧಿಸಿದಂತೆ ದೊರೆಯುತ್ತಿಲ್ಲ.

ಅಧ್ಯಾಯ : ನಾಲ್ಕು

ಸಂಕೇತಿಗಳ ವೃತ್ತಿ ಮತ್ತು ಜೀವನವಿಧಾನ

'ಸಂಕೇತಿ' ಸಮುದಾಯದ ಸಾಂಸ್ಕೃತಿಕ ಅಧ್ಯಯನಕ್ಕೆ ಅಗತ್ಯವಾದ ಸಮಗ್ರ ಹಿನ್ನೆಲೆಯನ್ನು ಮೊದಲ ಮೂರು ಅಧ್ಯಾಯಗಳು ಒದಗಿಸಿವೆ. ಸಂಕೇತಿಗಳ ಪಾರಂಪರಿಕ ನೆಲೆಗಳೆಲ್ಲವೂ ತಮಿಳುನಾಡು, ಕೇರಳ ಮತ್ತು ಕರ್ನಾಟಕದ ಮಿತಿಯಲ್ಲಿಯೇ ಇವೆ ಮತ್ತು ಆಯಾ ಪ್ರದೇಶಗಳಲ್ಲಿನ ಇತರ ಬ್ರಾಹ್ಮಣ ಸಮುದಾಯಗಳ ಜನಸಂಖ್ಯಾ ಪ್ರಮಾಣಕ್ಕೆ ಹೋಲಿಸಿದರೆ ಸಂಕೇತಿಗಳು ಬಹು ಅಲ್ಪಸಂಖ್ಯಾತರಾಗಿದ್ದಾರೆ. ಆದುದರಿಂದ, ಇತರ ಪ್ರಭಾವಗಳಿಗೆ ಅವರು ಒಳಗಾಗಿರುವ ಸಾಧ್ಯತೆ ದೊಡ್ಡದು. ಆದರೂ, ಕರ್ನಾಟಕದ 'ಸಂಕೇತಂ'ಗಳು ಇಂದಿಗೂ ತಮ್ಮ ವೈಶಿಷ್ಟ್ಯವನ್ನು ಹೆಚ್ಚಿನ ಪ್ರಮಾಣದಲ್ಲಿ ಉಳಿಸಿಕೊಂಡಿರುವುದು ಗಮನಿಸತಕ್ಕ ಸಂಗತಿ. ಯಾವುದೇ ಪ್ರದೇಶದ ಪರಂಪರಾಗತ ಬದುಕು ತನ್ನ ಸುತ್ತಮುತ್ತಣ ಭೌಗೋಳಿಕ, ರಾಜಕೀಯ, ಸಾಂಸ್ಕೃತಿಕ ಅಂಶಗಳಿಂದ ಪ್ರಭಾವಿತವಾಗಿಯೇ ರೂಪುಗೊಳ್ಳುವುದರಿಂದ, ಪ್ರಾದೇಶಿಕ ವೈಶಿಷ್ಟ್ಯಗಳೂ ರೂಪುಗೊಳ್ಳುತ್ತವೆ. ಒಂದೇ ಮೂಲಸಂಪ್ರದಾಯವೂ ವಿಭಿನ್ನ ಪ್ರದೇಶಗಳಲ್ಲಿ ವಿಭಿನ್ನವಾಗಿ ಆಚರಣೆಗೊಳ್ಳತೊಡಗುತ್ತದೆ. ಈ ದೃಷ್ಟಿಯಿಂದ, ಮುಂದಿನ ಅಧ್ಯಾಯಗಳು ಸಂಕೇತಿಗಳ ಭೌತಿಕ, ಅಭೌತಿಕ, ಶಾಬ್ದಿಕ - ಜಾನಪದದ ಅವಲೋಕನ ಮಾಡುತ್ತವೆ. ಪ್ರಕೃತ, ಈ ಅಧ್ಯಾಯವು ಭೌತಿಕಜಾನಪದದ ವಿವರಗಳನ್ನು ವಿಶ್ಲೇಷಿಸುತ್ತದೆ.

೧. ವೃತ್ತಿ ಮತ್ತು ಆರ್ಥಿಕತೆ

ಸಂಕೇತಿಗಳ ವೃತ್ತಿಯು ಅವರ ಧಾರ್ಮಿಕ ಜೀವನವಿಧಾನಕ್ಕೆ ಹೊಂದಿಕೊಂಡಂತೆಯೇ ಇದೆ. ಈ ಮಿತಿಯು ಅವರ ಆರ್ಥಿಕತೆಯನ್ನು ರೂಪಿಸಿರುವ ರೀತಿಯನ್ನು ಈ ವಿವರಗಳ ಜೊತೆಜೊತೆಗೇ ಇಲ್ಲಿ ವಿಶ್ಲೇಷಿಸಿದೆ.



25 ಮತ್ತೂರಿನ ಗುರುಕುಲವೊಂದರ ವೇದಾಧ್ಯಾಯಿಗಳು ಶಾಸ್ತ್ರವಿಚಾರ ಚರ್ಚೆಯಲ್ಲಿ

ಅ. ಷಟ್ಕರ್ಮ :

'ಷಟ್ಕರ್ಮ'ವು - ಅಧ್ಯಯನ, ಅಧ್ಯಾಪನ, ಯಜನ, ಯಾಜನ, ದಾನ, ಪರಿಗ್ರಹ - ಬ್ರಾಹ್ಮಣನ ಕರ್ತವ್ಯ. ವೇದ ವೇದಾಂಗಗಳಲ್ಲಿ ಪರಿಣತರಾದವರ ಮತ್ತು ಗುರುಕುಲಗಳನ್ನು ಇಟ್ಟುಕೊಂಡವರ ವಿಪುಲ ನಿದರ್ಶನಗಳು ಎಲ್ಲೆಡೆಯ ಸಂಕೇತಿಗಳಲ್ಲಿಯೂ ದೊರೆಯುತ್ತವಾದರೂ, ಆ ಪರಂಪರೆಯು ಇಂದಿಗೂ ಕ್ಷೀಣವಾಗಿಯಾದರೂ ಜೀವಂತವಾಗಿ ಪ್ರಕಟಗೊಳ್ಳುವುದು ಕರ್ನಾಟಕದಲ್ಲಿ (ಚಿತ್ರ 25, 26). ಅಲ್ಲಿಯೂ, ಸಾಮಾನ್ಯವಾಗಿ ಒಂದೇ ವೇದ ಇಲ್ಲವೆ ಶಾಸ್ತ್ರದಲ್ಲಿ ಮಾತ್ರ ಪರಿಶ್ರಮ ಹೊಂದುವ



26 ಮತ್ತೂರಿನ ವೈದಿಕ ಗ್ರಂಥಾಲಯ

ನಿದರ್ಶನಗಳಿಗೆ, ತೋಟದಲ್ಲಿ ದುಡಿಯುತ್ತಲೇ ಅಧ್ಯಯನ ಮಾಡಬೇಕಾದ ಆರ್ಥಿಕ ಅನಿವಾರ್ಯತೆಯನ್ನೇ ಕಾರಣವಾಗಿ ಕೊಡಲಾಗುತ್ತಿದೆ. ಗುರುವು ತೋಟದಲ್ಲಿ ಅಗತೆ ಮಾಡುತ್ತಲೋ ಪಿಳ್ಳೆ ಸೋಸುತ್ತಲೋ ಹೇಳಿಕೊಡುವನು; ಶಿಷ್ಯನು ಹಂಬುಕಟ್ಟುತ್ತಲೋ ಗಿಡಕ್ಕೆ ನೀರು ಹೊಯ್ಯುತ್ತಲೋ ಕಲಿಯುವನು. ಅದಕ್ಕೆ 'ವಾಳಾಗಡ್ಡೆಪಾಠು' ಎಂದೇ ಹೆಸರಾಗಿದೆ. ಈ ಮಿತಿಯಲ್ಲಿಯೂ ಅವಧಾನಿ, ಜಟಾಪಾಠಿ, ಘನಪಾಠಿಗಳು ಹಾಗೂ ಅನೇಕ ಶಾಸ್ತ್ರ ಪರಿಣತರಿರುವುದು ವೈದಿಕವಿದ್ಯೆಯ ಮೇಲಿನ ಶುದ್ಧಪ್ರೀತಿಯನ್ನೇ ಪ್ರಕಟಿಸುತ್ತದೆ. ಗುರುಕುಲಗಳು ಅಧ್ಯಾಪಕನ ಜೀವನನಿರ್ವಹಣೆಯ ಆಧಾರಗಳಲ್ಲ, 'ಋಷಿಋಣವನ್ನು ತೀರಿಸುವ' ಅವಕಾಶಗಳು ಮಾತ್ರ. ಸಂಕೇತಿಗಳಲ್ಲಿಯೂ ಯಜುರ್ವೇದಿಗಳೇ ಬಹುಸಂಖ್ಯಾತರಾಗಿರುವುದು ಮತ್ತು ಸಾಮವೇದ, ಅಥರ್ವಣ ವೇದಗಳು ಖಿಲವಾಗುತ್ತಿರುವುದಕ್ಕೆ, ಯಜ್ಞದಿಂದ ಯಜುರ್ವೇದಿಗಳಿಗೆ ದೊರೆಯುವ ಆರ್ಥಿಕ ಪ್ರತಿಫಲವೇ ಕಾರಣವೆಂದು ಒಪ್ಪಿಕೊಳ್ಳಲು ಈಗ ಯಾವ ಆಧಾರಗಳೂ ದೊರೆಯುತ್ತಿಲ್ಲ. ಬದಲಿಗೆ, ಯಜ್ಞಗಳಲ್ಲಿ ಎಲ್ಲ ವೇದಗಳಿಗೂ ಸ್ಥಾನವಿದೆ (ಋಗ್ವೇದ-ಹೋತೃ, ಯಜುರ್ವೇದ-ಅಧ್ವರ್ಯು, ಸಾಮವೇದ-ಉದ್ಗಾತೃ, ಅಥರ್ವವೇದ-ಬ್ರಹ್ಮ). ಇತ್ತೀಚೆಗೆ ಶಾಖಾಂತರಗಳು ಕೇವಲ ಸೌಲಭ್ಯಾಕಾಂಕ್ಷೆಯಿಂದ ಆಗುತ್ತಿವೆ ಎಂಬುದಕ್ಕೆ ಪ್ರತ್ಯಕ್ಷ ನಿದರ್ಶನಗಳಿವೆ. ಭಾರತ, ಭಾಗವತವಾಚನ, ಪುರಾಣಪ್ರವಚನ, ಸಂಗೀತ, ಹರಿಕಥೆ ಮೊದಲಾದ ಪರಿವರ್ತನಕಾಲದ ವಿದ್ಯೆಗಳೂ ಧಾರ್ಮಿಕ ಅನುಸಂಧಾನದ ಭಾಗಗಳಾಗಿ ಮಾತ್ರ ಉಳಿದವು. ಬ್ರಿಟಿಷರ ಆಳ್ವಿಕೆ ಮತ್ತು ಕೈಗಾರಿಕೀಕರಣದೊಡನೆ ವಿದ್ಯೆಯು ಆರ್ಥಿಕತೆಯೊಂದಿಗೆ ಬೆಸೆದುಕೊಂಡರೂ, ಸಾಂಪ್ರದಾಯಿಕ ವಿದ್ಯೆಗೆ ಆರ್ಥಿಕತೆ ಆಧಾರವಾಗಿ ರೂಢಿಗೊಳ್ಳಲಿಲ್ಲ. ಆಧುನಿಕ ನೌಕರಿಗಳಿಗೆ ಇತರ ಬ್ರಾಹ್ಮಣರಿಗಿಂತ ತಡವಾಗಿ ಪ್ರವೇಶಿಸಿದುದಕ್ಕೂ, ಸಂಪ್ರದಾಯಬದ್ಧತೆ ಮತ್ತು ಭೌತಿಕತೆಯಿಂದ ವಿಮುಖವಾದ ಆಧ್ಯಾತ್ಮಿಕ ಮನೋಭಾವವೇ ಕಾರಣವಾಗಿದೆ. ನಿತ್ಯ, ನೈಮಿತ್ತಿಕ, ಕಾಮ್ಯಕರ್ಮಗಳ ಸಂದರ್ಭಗಳು ದಾನ, ಪರಿಗ್ರಹಗಳ ಅವಕಾಶಗಳೂ ಹೌದು. ಅವೆರಡೂ ಸಮಾನಪ್ರಾಶಸ್ತ್ಯವನ್ನು ಪಡೆದವು. ಜೀವನಾವಶ್ಯಕತೆಯು ಕನಿಷ್ಠಪ್ರಮಾಣದಲ್ಲಿ ಪೂರೈಕೆಯಾದಾಗ ಪರಿಗ್ರಹಗಳಿಂದ ದೂರವಿರುತ್ತಿದ್ದ ಪ್ರವೃತ್ತಿಗೂ ಇವರಲ್ಲಿ ನಿದರ್ಶನಗಳಿವೆ. ವೈದಿಕತೆಯು ಪ್ರವೃತ್ತಿಯಾಗಿ ವ್ಯವಸಾಯವು ವೃತ್ತಿಯಾದುದರಿಂದಲೇ, ಈ ಸಮುದಾಯದಲ್ಲಿ ಇದು ಸಾಧ್ಯವಾಗಿದೆ. ಯಜನ ಯಾಜನಗಳು ಸಮುದಾಯದ ಸಾರ್ವತ್ರಿಕ ಆದಾಯಮೂಲಗಳಾಗುವುದು ಸಾಧ್ಯವಿಲ್ಲದ ಸಂದರ್ಭವನ್ನೇ, ವ್ಯವಸಾಯವು ಅವರ ಪ್ರಧಾನ ವೃತ್ತಿಯಾಗಿರುವುದು ಸೂಚಿಸುತ್ತದೆ.

ಈ ಸನ್ನಿವೇಶವು, ಆಧುನಿಕ ದೃಷ್ಟಿಕೋನದಿಂದ, ಜೀವನಾಧಾರಕ್ಕಾಗಿ ದೈಹಿಕದುಡಿಮೆಯ ಸ್ವಾವಲಂಬೀ ಪ್ರವೃತ್ತಿಯನ್ನು ಸೂಚಿಸುವ ಹೊತ್ತಿನಲ್ಲಿಯೇ, ಷಟ್ಕರ್ಮದ ಮಿತಿಯ ಶುದ್ಧ ಪಾರಂಪರಿಕ ಧಾರ್ಮಿಕ ಜೀವನವಿಧಾನದಲ್ಲಿ ಆದ ವಿಕೃತಿಯನ್ನೂ ಪ್ರತಿಧ್ವನಿಸುತ್ತದೆ.

ಆ. ಬೇಸಾಯ:

"... ಬೆಳಿಗ್ಗೆ ಸ್ನಾನ ಸಂಧ್ಯಾವಂದನೆ ಎಲ್ಲಾ ಮುಗಿಸಿಕೊಂಡು ಹೊರಟರೆ . . . ಬ್ರಾಹ್ಮಣರು ಅಂತ ಬೇಕಾದರೂ ಅನ್ನಬಹುದು, ಶೂದ್ರರು ಅಂತ ಬೇಕಾದರೂ ಅನ್ನಬಹುದು . .. ದುಡಿಯೋದೊಂದೇ ಆಗ ನಮ್ಮ ಕೆಲಸ . . . ಸಂಜೆ ಕೈಕಾಲು ತೊಳಕೊಂಡು ಸಂಧ್ಯಾವಂದನೆ ಮಾಡೋವರೀಗೆ ನಾವೇ ಬೇರೆ . . ." ಇದು ವ್ಯವಸಾಯದೊಂದಿಗೆ ತಳಕುಹಾಕಿಕೊಂಡ ಸಂಕೇತಿ ದಿನಚರಿಯ ಪ್ರಾತಿನಿಧಿಕ ಮಾತು. ಕರ್ನಾಟಕಕ್ಕೆ ವಲಸೆಬಂದ ಸಂಕೇತಿಗಳು, ಗಾಢವಾಗಿ ಬೇಸಾಯವನ್ನು ಆಧರಿಸಿಯೇ ತಮ್ಮ ಭಗ್ನಗೊಂಡ ಜೀವನಾಧಾರವನ್ನು ಮತ್ತೆ ರೂಪಿಸಿಕೊಳ್ಳಬೇಕಾಗಿದ್ದುದರಿಂದ, ಅವರ ಬೇಸಾಯಕ್ರಮವನ್ನು ಇಲ್ಲಿ ಪರಿಶೀಲಿಸಬಹುದು. 'ದಕ್ಷಿಣ'ದ ಸಂಕೇತಿಗಳಲ್ಲಿ ಪೌರೋಹಿತ್ಯ ಮತ್ತು ದೇವಸ್ಥಾನಗಳ ವೈದಿಕಸೇವೆಯು ಮೇಲುಗೈ ಪಡೆದು ಬೇಸಾಯವು ಪರೋಕ್ಷವಾಗುತ್ತಾ ಬಂದುದನ್ನು ಇಲ್ಲಿಯೇ ಸೂಚಿಸಬಹುದು.

1. **ತೋಟಗಾರಿಕೆ - ಪರಿಣತಿ:** ವ್ಯವಸಾಯ ಕ್ಷೇತ್ರದಲ್ಲಿ, ಪ್ರಾಂತವಾರು ವ್ಯತ್ಯಾಸಗಳಿರುವಂತೆ ಜಾತಿವಾರು ವಿಲಕ್ಷಣತೆ ಸಾಧ್ಯವಿಲ್ಲ. ಪ್ರಕೃತಿಯೊಡನೆ ಹೋರಾಡಿ ಜೀವನಾಧಾರ ಕಲ್ಪಿಸಿಕೊಳ್ಳುವ ರೈತರು ವ್ಯವಸಾಯವಿವರಗಳ ಉತ್ತಮಾಂಶಗಳನ್ನು ಮುಕ್ತವಾಗಿ ಸ್ವೀಕರಿಸುತ್ತಾರೆ. ಆದರೂ, ಮುಂದಿನ ವಿವರಣೆಗಳಲ್ಲಿ, ಸಂಕೇತಿರೈತರು ವ್ಯವಸಾಯವನ್ನು ಕಂಡ ರೀತಿ, ಮಾಡಿಕೊಂಡ ಸುಧಾರಣೆ, ಅನ್ವೇಷಿಸಿದ ಉಪಾಯ ಇವುಗಳಲ್ಲಿ ವೈಶಿಷ್ಟ್ಯವನ್ನು ಮೆರೆದಿರುವುದನ್ನು ನೋಡಬಹುದು. ಅವರ ಬೇಸಾಯದ ಮೂಲಸ್ವರೂಪವು (originality) ಅತಿಶಯವಾಗಿರುವುದು ತೋಟಗಾರಿಕೆಯಲ್ಲಿ. ತಮ್ಮ ಕ್ಷೇತ್ರದ ಅವರ ಸಾಧನೆಗಳನ್ನು ಹೇಳುವಾಗ ಒದಗಿಬರುವ ನಿದರ್ಶನಗಳ ಸರಣಿ ದೊಡ್ಡದು. ಚಿಲಕುಂದದ ಬಳಿಯ 'ತಾವರೆಕೆರೆ' ಎಂಬ ಕೆರೆಯು 'ಟಿಪ್ಪು ಮತ್ತು ಬ್ರಿಟಿಷರ ನಡುವಿನ ಯುದ್ಧದ ವೇಳೆ' ಒಡೆದು ಹಾಳಾದಾಗ ತಳದ ತೋಟಗಳೆಲ್ಲಾ ನಾಶವಾದವು. ಆ ಸಂದರ್ಭದಲ್ಲಿ ಅಲ್ಲಿದ್ದ ಸಂಕೇತಿಗಳು ಬಲಿತ ತೆಂಗು, ಅಡಿಕೆಯ ಮರಗಳನ್ನೇ ಮತ್ತೆ ನೆಟ್ಟು ಕೆಲವೇ ತಿಂಗಳಲ್ಲಿ ಹೊಸ ತೋಟವೊಂದನ್ನು ಸಿದ್ಧಮಾಡಿದರು. ಬಸವಾನಿಯಿಂದ ಲಿಂಗದಹಳ್ಳಿಗೆ ವಲಸೆಬಂದ ಸಂಕೇತಿಗಳೂ, ಬಲಿತ ಮರಗಳನ್ನು ಸ್ಥಳಾಂತರಿಸಿ ತೋಟ ಮಾಡಿ ಅರಸರಿಂದ ಪಾರಿತೋಷಕ ಪಡೆದಿದ್ದರು. ಬೆಟ್ಟದಪುರ ಸಂಕೇತಿಗಳು ಬೆಳೆದ ಬದನೆಕಾಯಿಯ ಅಸಾಧಾರಣ ಗಾತ್ರಕ್ಕಾಗಿಯೇ ಮೈಸೂರು ಅರಸರಿಂದ ಉಂಬಳಿಯ ಪ್ರಶಸ್ತಿ ಬಂದಿತ್ತು- ಮೊದಲಾದ ಆತ್ಮತೃಪ್ತಿಯ ಮಾತು ಅವುಗಳಲ್ಲಿ ಸೇರುತ್ತವೆ. ಸಂಕೇತಿಗಳ ಬೇಸಾಯದ ವೈಶಿಷ್ಟ್ಯವು ತೌಲನಿಕ ಅಧ್ಯಯನದ ಸಂದರ್ಭದಲ್ಲಿ ಹೆಚ್ಚು ನಿಚ್ಚಳವಾಗಬಹುದು.

ಷಟ್ಕರ್ಮಕ್ಕೆ ಅವಿರೋಧವಾಗಿ ನಿರ್ವಹಿಸಬಹುದಾದ ಸಾಧ್ಯತೆಯಿಂದಾಗಿಯೇ ಹೊಲಗದ್ದೆಗಳ ಬೇಸಾಯಕ್ಕಿಂತ ಅವರ ಆದ್ಯತೆ ತೋಟಗಾರಿಕೆಯಾಗಿದೆ:

0.1 ಇಲ್ಲಿ, ತಾವೇ ದುಡಿಯುತ್ತಾರೆ; ಪ್ರಾಣಿಹಿಂಸೆಗೆ ಅವಕಾಶವಿಲ್ಲ.

0.2 ಸ್ವಂತ ಪರಿಶ್ರಮದಿಂದಲೇ ಇದರ ನಿರ್ವಹಣೆ ಸಾಧ್ಯ; ಇತರರನ್ನು ಅವಲಂಬಿಸಬೇಕಾಗಿರುವುದಿಲ್ಲ.

0.3 ತೋಟದ ಕೃಷಿಯ 'ಕಾಲ'ದ ಬಗೆಗಿನ ನಮ್ಯತೆ (flexibility) ಅವರ ವೈದಿಕವೃತ್ತಿಗೆ ಹೊಂದುವಹಾಗೆ ನಿರ್ದಿಷ್ಟವೇಳೆಯ ಕ್ಷಿಪ್ರವ್ಯವಸಾಯವನ್ನು ನಿರೀಕ್ಷಿಸುವ ಹೊಲಗದ್ದೆಗಳ ಕೃಷಿ ಹೊಂದುವುದಿಲ್ಲ.

0.4 ತೋಟದ ನೆರಳು, ಶಾಂತಿ ಮತ್ತು ತಂಪಾದ ಹವೆಯು, ದುಡಿಯುತ್ತಲೇ ಅಧ್ಯಯನ ಮಾಡುವುದಕ್ಕೂ, ಮನೆಯಲ್ಲಿ ಕಲಿಯುವುದಕ್ಕೆ ನಿಷೇಧವಿರುವ ಮಂತ್ರಭಾಗಗಳನ್ನು ಕಲಿಯುವುದಕ್ಕೂ, ಅನುಕೂಲವಾದುದು.

ತೋಟದ ಬೇಸಾಯವು ವರ್ಷವಿಡೀ ಕಠಿಣದುಡಿಮೆಯನ್ನು ನಿರೀಕ್ಷಿಸುವಂಥದು: ಹಂಬು ಹಾಕುವುದು, ತೆಕ್ಕೆ ಬಿಡುವುದು, ಅಡಿಕೆ ಮತ್ತು ತೆಂಗಿನ ಒಗ್ಗು ಹಾಕುವುದು, ನೀರು ಹಾಕುವುದು, ಪಿಳ್ಳೆ ತೆಗೆಯುವುದು, ಅಗತೆ ಮಾಡುವುದು, ಅಡಿಕೆ ತುಡಿಕೆ (ಚಿತ್ರ 27, 28)ಇತ್ಯಾದಿ. ತಮ್ಮ ಫಸಲನ್ನು ಹತ್ತಾರು ಮೈಲು ದೂರದ ಸಂತೆಗೆ ಹೊತ್ತು ಮಾರಿ ವಾರದ ಖರ್ಚು ಹುಟ್ಟಿಸಿಕೊಳ್ಳುವ ಮಿತಿ ಮತ್ತು ಅನೇಕ ವಿಧದ ಶೋಷಣೆಗಳಿಗೂ ಬಲಿಯಾಗುತ್ತಿದ್ದ ಸಂಕೇತಿ ರೈತನು ಬಡತನ ಮತ್ತು ಸಾಲಸೋಲಗಳ ದಾಸನಾದುದು ಭಾರತದ ಇತರ ರೈತರಿಗೆ ಸಮಾನ ಸಂಗತಿಯೇ ಆಗಿದೆ. ಶೋಷಣೆ ಮಾಡುವ ಪುಂಡರ ಕಾಟವು ಮಿತಿಮೀರಿದಾಗ ಗೊದಮಟ್ಟೆಯಿಂದ ಬಡಿದು ತಮ್ಮ ಅಸ್ತಿತ್ವವನ್ನು ಉಳಿಸಿಕೊಳ್ಳುವ ಅನಿವಾರ್ಯಕ್ಕೆ ಒಳಗಾದ ಪ್ರಸಂಗಗಳಿವೆ. ಅದರಿಂದಾಗಿಯೇ 'ಗೊದಮಟ್ಟೆ ಸಂಕೇತಿ' ಎಂಬ ವಿಶೇಷಣವು ಆಧುನಿಕ ದೃಷ್ಟಿಯಿಂದ



27 ಸಾಂಪ್ರದಾಯಿಕ ರೀತಿಯಲ್ಲಿ ಅಡಿಕೆ ಎಡೆಯುತ್ತಿರುವ ಹೆಂಗಸರು

'ಜಾಗೃತಿ'ಗಾಗಿ ದೊರೆತ ಪ್ರಶಸ್ತಿಯೂ ಆಗಿದೆ. ಅರುಣೋದಯಕ್ಕೂ ಮೊದಲೇ ತೋಟದಲ್ಲಿ ದುಡಿಯತೊಡಗಿ ಬೆಳಗ್ಗೆ ಹತ್ತು ಗಂಟೆಯ ವೇಳೆಗೆ ಸ್ನಾನಾದಿಗಳಲ್ಲಿ ತೊಡಗಿಕೊಳ್ಳುತ್ತಿದ್ದ ಸಂದರ್ಭಗಳಲ್ಲಿಯೂ ನಿತ್ಯಕರ್ಮಗಳು ಅಬಾಧಿತವಾಗಿದ್ದವು ಎನ್ನುವಂತಿಲ್ಲ. ಆರ್ಥಿಕತೆ ಮತ್ತು ಅನುಷ್ಠಾನಗಳಿಗೆ ಸಂಬಂಧಿಸಿದಂತೆ ಈ ಲೋಪಗಳಿದ್ದರೂ ಕಠಿಣದುಡಿಮೆಯನ್ನು ನಿರಂತರವಾಗಿ ನಿರೀಕ್ಷಿಸುವ ತೋಟಗಾರಿಕೆಗೆ ಅವನು ಅಂಟಿಕೊಂಡುದರಲ್ಲಿ, ದೂರದ ಹೊಸನಾಡಿನಲ್ಲಿ ಬದುಕನ್ನು ಹೊಸದಾಗಿ ಕಟ್ಟಿಕೊಂಡ ವಲಸಿಗರು ವಿಧಿಯೊಡನೆ ಮಾಡಿಕೊಂಡ ರಾಜಿಯನ್ನು ಗುರುತಿಸಬಹುದು. ಅನುಷ್ಠಾನಕ್ಕೆ ಸಂಬಂಧಿಸಿದಂತೆ, ಪೌರೋಹಿತ್ಯ ಮತ್ತು ವೈದಿಕ ಸೇವೆಗಳಲ್ಲಿ ಹೆಚ್ಚಾಗಿ ತೊಡಗಿಕೊಂಡ ದಕ್ಷಿಣದ ಸಂಕೇತಿಗಳು ಅನೂಚಾನದ ನೆಲೆಗಳೆಂಬ ದೃಷ್ಟಿಯಿಂದ ಉತ್ತಮಸ್ಥಿತಿಯಲ್ಲಿದ್ದರೂ, ಆರ್ಥಿಕವಾಗಿ ದುರ್ಬಲರಾಗಿಯೇ ಉಳಿದುದಕ್ಕೆ ಆ ಕಾಲ-ಸನ್ನಿವೇಶದ ಬ್ರಾಹ್ಮಣರ ಅಲ್ಪತೃಪ್ತಿಯೂ ಕಾರಣವಾಗಿದೆ.



28 ಅಡಿಕೆ ಬೇಯಿಸುತ್ತಿರುವುದು



29 ಕರ್ನಾಟಕದಲ್ಲಿ ಸಂಕೇತಿಗಳು ಬೆಳೆಸಿರುವ ತೋಟಗಳ ಒಂದು ಮಾದರಿ

ಕರ್ನಾಟಕದಲ್ಲಿ ಸಂಕೇತಿಗಳು ತಮ್ಮ ನೆಲೆಗಳನ್ನು ಆರಿಸಿಕೊಳ್ಳುವಾಗ ಇದ್ದ ಬಲವಾದ ಪ್ರೇರಣೆ ತೋಟಗಾರಿಕೆಗೆ ಅನುಕೂಲ ಸನ್ನಿವೇಶ ಎಂಬುದು ಮತ್ತು ಅವರು ನೆಲೆಸಿದ ಎಡೆಗಳಲ್ಲೆಲ್ಲಾ ಸಹಸ್ರಾರು ಎಕರೆ ತೋಟಗಳನ್ನು ಬೆಳೆಸಿದುದು, ಅವರ ಪೂರ್ವಪರಂಪರೆಯ ಬಲದಿಂದಲೇ (ಚಿತ್ರ 29, 30, 31). ಶಾಪತ್ತೂರ್‌ನ ಸುತ್ತಣ ಎಡೆಗಳಲ್ಲಿ ಬಾಳೆ, ತರಕಾರಿ; ಶೆಂಕೋಟ್ಟೈನ ಸುತ್ತಣ ಎಡೆಗಳಲ್ಲಿ ತೆಂಗು, ಬಾಳೆ, ತರಕಾರಿ, ತೋಟದ ಬೆಳೆಗಳು. ಶೆಂಕೋಟ್ಟೈ ಪ್ರದೇಶದಲ್ಲಿಯೂ, ಅಡಿಕೆಯು ಪ್ರಧಾನವಾದ ಬೆಳೆಯಲ್ಲ. ಕೇರಳದ ಗಡಿಯಭಾಗದಲ್ಲಿ ಅದಿದೆ (ಚಿತ್ರ 32, 33). ಕರ್ನಾಟಕದ ಸಂಕೇತಿ ರೈತನ ತೋಟದ ಪ್ರಧಾನಬೆಳೆ ಅಡಿಕೆ; ಮತ್ತು, ಆ ಕ್ಷೇತ್ರದಲ್ಲಿ ಅವನು ನೈಪುಣ್ಯ ಸಾಧಿಸಿರುವುದು ತೋಟಗಳ ರಚನೆಯಲ್ಲಿಯೂ ಕಾಣಿಸುತ್ತದೆ: ಹಳ್ಳಹಸಿ ಇರುವ ಎರೆನೆಲದ ಆಯ್ಕೆ; ನೀರು ಯಾವಾಗಲೂ ಇದ್ದು ತನುವಾಗಿಡುವ ಕೆರೆಗಳು; ಜೋವು ಹರಿಯುತ್ತಿರುವ ಪಿಳ್ಳೆಗಳು; ಹೊರಬೇಲಿಗಳ 'ಗಾಳಿಮರ'ಗಳ ರಕ್ಷಣೆ ... ಇತ್ಯಾದಿ ಸಂಗತಿಗಳಲ್ಲಿ ಅವನ



30 ಶೆಂಕೋಟ್ಟೈ ತೋಟ




31 ತನ್ನ ತೋಟಕ್ಕೆ ಹೊರಟ ವೈದಿಕ ಕೃಷಿಕ


ವಿಶೇಷವಾದ ಅನುಭವವು ಹರಡಿಕೊಂಡಿದೆ.

ಕರ್ನಾಟಕದಲ್ಲಿಯೂ ಸನ್ನಿವೇಶ ಮತ್ತು ಸೌಲಭ್ಯವನ್ನನುಸರಿಸಿ ತೋಟದ ರಚನೆಯಲ್ಲಿ ಪ್ರಾದೇಶಿಕ ಭಿನ್ನತೆ ಇದೆ. ಹೋಚೇಹಳ್ಳಿಯಲ್ಲಿ ಕೇವಲ ತೆಂಗಿನತೋಟವನ್ನು ಬೆಳೆಸಿದರೆ, ಲಿಂಗದಹಳ್ಳಿ ಹಾಗೂ ಮತ್ತೂರಿನಲ್ಲಿ ತೆಂಗಿನಮಕ್ಕಿ ಇರುವುದಿಲ್ಲ; ಲಿಂಗದಹಳ್ಳಿಯಲ್ಲಿ ಈಗ ವೀಳೆ, ಮೆಣಸು ಇಲ್ಲವಾಗಿದೆ - ಹೀಗೆ. ಆದರೆ ಎಲ್ಲೆಡೆಯೂ ಸಂಕೇತಿಗಳು ಬೆಳೆಸಿರುವ ತೋಟಗಳ ಮೂಲಭೂತ ಲಕ್ಷಣವು ಸಮಾನವಾಗಿರುವುದನ್ನು ಗಮನಿಸಬಹುದು.

ಚಿತ್ರ 32 ಕರ್ನಾಟಕದ ಸಂಕೇತಿಗಳ ತೋಟದ ರಚನೆಯ ಮಾದರಿ



ಚಿತ್ರ 33 ದಕ್ಷಿಣದ ತೋಟದ ಮಾದರಿ



ಪೌರೋಹಿತ್ಯ ಮತ್ತು ವೈದಿಕತೆಯ ಮೇಲೆ ಹೆಚ್ಚು ಒತ್ತು ಬಿದ್ದ ದಕ್ಷಿಣದ ಸಂಕೇತಿಯು ನೇರವಾಗಿ ದುಡಿಮೆಗೆ ತೊಡಗಿಕೊಳ್ಳುವ ಅಗತ್ಯ ಬೀಳದೆ, ತೋಟವು ಗೌಣವಾಗಿ ಗದ್ದೆಗಳು ಪರೋಕ್ಷ ಕೃಷಿಯ ಮಾಧ್ಯಮಗಳಾಗಿ ಮುಂದುವರಿದವು. ಆದರೆ ವೈದಿಕತೆ ಮತ್ತು ಕೃಷಿಯ ಸಮನ್ವಯವು ಕರ್ನಾಟಕದ ಸಂಕೇತಿಗಳ ವೈಶಿಷ್ಟ್ಯವಾಯಿತು.

ಸಂಕೇತಿಯು ಪ್ರಗತಿಶೀಲ ರೈತನಾಗಿರುವುದನ್ನು ಸಮರ್ಥಿಸುವ ಧಾರಾಳ ನಿದರ್ಶನಗಳಿವೆ. ಚೀಲದಲ್ಲಿ ಗೋಟುತುಂಬಿ ಕರಗಿಸಿ ಗುಂಡಿಯಲ್ಲಿ ಸುರಿಯುವ ವಿಧಾನದಲ್ಲಿ ಶೇಕಡ ಇಪ್ಪತ್ತೈದರಷ್ಟು ಹಾಳಾಗುತ್ತಿದ್ದುದು, ಪಟಗಳಲ್ಲಿ ಒಗ್ಗು ಹಾಕುವ ವಿಧಾನದಿಂದಾಗಿ ಸುಧಾರಣೆಗೊಂಡಿದೆ. ಅಡಿಕೆ ಸಸಿಗಳನ್ನು ಬಹಳ ಆಳಕ್ಕೆ ನೆಡುತ್ತಿದ್ದಾಗ, ನೀರಿನ ಮಟ್ಟ ಹೆಚ್ಚಿದಾಗ ಬೇರು ಕರಗುತ್ತಿದ್ದುದು ಹಾಗೂ ತಳದ್ದು ಕಾಯಿಮಣ್ಣಾಗಿ ವ್ಯವಸಾಯಕ್ಕೆ ಈಡಾಗದೆ ಉಳಿಯುತ್ತಿದ್ದುದು ಇಂದು ಪರಿಷ್ಕಾರಗೊಂಡಿದೆ. ಎಕರೆಗೆ ಅರುವತ್ತು ತೆಂಗಿನಗಿಡ ಹಾಕುತ್ತಿದ್ದವರು ಈಗ 'ತ್ರಿಕೋಣ ತೆಂಗು' ಹಾಕಿ ಎಂಬತ್ತು ಸಸಿ ನೆಡುತ್ತಾರೆ. ಹನಿನೀರಾವರಿ ಬಳಕೆಗೊಂಡಿದೆ. ಅಡಿಕೆಸಸಿಗಳ ನಡುವಿನ ಜಾಗದಲ್ಲಿ ಕಾಫಿ ಬೆಳೆಯುವ ಹೊಸ ಪ್ರಯೋಗವೂ ನಡೆದಿದೆ. ಗಿಡಗಳಿಗೆ ಬಂದ ರೋಗಗಳಿಗೆ ತಮ್ಮ ಮಿತಿಯಲ್ಲಿಯೇ ಚಿಕಿತ್ಸೆ ನಡೆಸುತ್ತಿದ್ದ ದಿನಗಳು ಹೋಗಿ, ಪ್ರಯೋಗಶೀಲರೈತರು ಹೊಸಹೊಸ ವೈಜ್ಞಾನಿಕ ಪರಿಹಾರಗಳ ನೆರವು ಪಡೆಯುತ್ತಿದ್ದಾರೆ. ಮನೆಮಂದಿಯೆಲ್ಲಾ 'ಮುಯ್ಯಿ' ಆಧಾರದಿಂದ ಶ್ರಮವಹಿಸಿ ಮಾಡುತ್ತಿದ್ದ ಅಡಿಕೆತುಡಿಕೆಯ ಲಾಭವು ದಳ್ಳಾಳಿಗಳಿಗೂ ಬಂಡವಾಳಶಾಹಿಗಳಿಗೂ ದಕ್ಕಿ ಸೊರಗಿದ್ದ ರೈತನು, ಅಡಿಕೆಯನ್ನು ರೇಖೆ ಮಾಡುವ ಹೊಸವಿಧಾನಗಳನ್ನು ರೂಢಿಸಿಕೊಂಡು ಮಾರುಕಟ್ಟೆಯ ಪರಿಜ್ಞಾನವನ್ನೂ ಪಡೆದು ಜಾಗೃತನಾಗುತ್ತಿರುವುದರಿಂದ, ಕಾಸು ಕಾಣುವುದು ಈಗ ಸಾಧ್ಯವಾಗಿದೆ. ಆ ಕುರಿತ ಪತ್ರಿಕೆಗಳ ಪ್ರಯೋಜನ; ಮಾರುಕಟ್ಟೆಯ ಅಗತ್ಯವನ್ನನುಸರಿಸಿ ಗೋಟು, ಚೂರು, ಬಟ್ಟಲು, ಚಾತರ, ಚಾಲಿ, ಲವಂಗಚೂರು ಮೊದಲಾದ ರೀತಿಯಲ್ಲಿ ಮಾಲು ಸಿದ್ಧಪಡಿಸುವುದು; ಬೇರಿನ್ ಸ್ವೀಕಾರ . . . ಇತ್ಯಾದಿಗಳಿಂದ ಆತ ವಿಕಾಸಶೀಲನೆನಿಸಿದ್ದಾನೆ.



34 ಗದ್ದೆ ಬಯಲು ಮತ್ತು ಹಿನ್ನೆಲೆಯಲ್ಲಿ ತೋಟದ ದೃಶ್ಯ

2. ಹೊಲ ಗದ್ದೆಗಳ ಬೇಸಾಯ: ವಿಸ್ತರಣ: ಕೆರೆಬಯಲುಗಳ ತೋಟಗಳೊಂದಿಗೆ ಗದ್ದೆಯ ವ್ಯವಸಾಯವೂ ಹೊಂದಿಕೊಂಡು ಬಂದಿದೆ (ಚಿತ್ರ 34, 35). ಬತ್ತ ಮತ್ತು ಬಾಳೆಯನ್ನು ಬದಲಿಸಿ ಬೆಳೆಯುವ ದಕ್ಷಿಣದಂತಲ್ಲದೆ, (ಎರಡು ಬೆಳೆಯ ಅವಕಾಶವಿರುವೆಡೆ) ಬತ್ತ ಮತ್ತು ಕಿರಾಣಿಯನ್ನು ಬದಲಿಸಿ ಬೆಳೆಯುವುದನ್ನು ಕರ್ನಾಟಕದಲ್ಲಿ ಕಾಣುತ್ತೇವೆ. ನೀರಾವರಿ ಸೌಕರ್ಯಗಳು ಉಂಟಾದಂತೆ ಗದ್ದೆಯ ಸಾಗುವಳಿ ಹೆಚ್ಚು ವ್ಯಾಪಕವಾಗಿದೆ ಮತ್ತು ಮರುವಲಸೆಗಳಿಗೆ ಅದೂ ಪ್ರೇರಣೆ ನೀಡಿದೆ. ಹಾಸನಸೀಮೆ, ಲಿಂಗದಹಳ್ಳಿ, ಮಧ್ಯದೇಶದ ನಾಲೆ ಇರದ ಹಳ್ಳಿಗಳು ಹೊಲವನ್ನು ಹೆಚ್ಚಾಗಿ ಆಶ್ರಯಿಸಿವೆ.



35 ಗದ್ದೆ ಬಯಲು ಮತ್ತು ಹಿನ್ನೆಲೆಯಲ್ಲಿ ತೋಟದ ದೃಶ್ಯ

ತೋಟದ ವ್ಯವಸಾಯಕ್ಕೆ ಸಂಬಂಧಿಸಿದ ಪಾರಿಭಾಷಿಕ ಪದಗಳು ಕರ್ನಾಟಕದ ಸಂಕೇತಿಗಳಲ್ಲಿ (ತಮಿಳು)

ಮೂಲರೂಪಗಳಲ್ಲಿ ಉಳಿದುಕೊಂಡಿವೆ. ಘಾರ (ಹಾರೆ), ಅರ್‌ವಾಳ್ (ಕುಯಿಗತ್ತಿ), ಕಡ್‌ಕತ್ತಿ (ಮಚ್ಚು), ತಳಲ ಊರರ್‌ದ್ (ತಳಲು ನೆಡುವುದು), ಖಾತ್‌ಮರು (ಗಾಳಿಮರ), ಕಡಗ್ (ಪಿಳ್ಳೆ) - ಇಂಥ ಪದಗಳು ಮೂಲ ರೂಪದಲ್ಲಿ ಉಳಿದುದು ಅವುಗಳ ನಿತ್ಯಬಳಕೆಯ ಕಾರಣದಿಂದ. ಸಾಮಾನ್ಯವಾಗಿ ಎಲ್ಲ ಕುಟುಂಬಗಳೂ ಮೊದಲ ಆದ್ಯತೆಯಾಗಿ ತೋಟ ಹೊಂದಿರುತ್ತವೆ; ಅವರಲ್ಲಿ ಆ ಸಂಬಂಧದ ಉಪಕರಣಗಳೂ ಇರುತ್ತವೆ. ಗದ್ದೆ ಮತ್ತು (ದಕ್ಷಿಣದಲ್ಲಿ ರೂಢಿಯಲ್ಲಿಲ್ಲದ) ಹೊಲಗಳನ್ನು ಹೊಂದುವುದು ವ್ಯಕ್ತಿಯ ಶಕ್ತಿ, ಆಸಕ್ತಿಗೆ ಅನುಗುಣವಾಗಿ ಆಗುವ ವಿಸ್ತರಣ. ಆ ಸಂಬಂಧದ ಪಾರಿಭಾಷಿಕ ಪದಗಳು ಹೆಚ್ಚಾಗಿ ಕನ್ನಡದಿಂದ ಸ್ವೀಕರಿಸಿದಂಥವು; ಉಪಕರಣಗಳು (ಮುಖ್ಯವಾಗಿ ನೇಗಿಲು, ಗಾಡಿ ಇತ್ಯಾದಿ) ಸಾರ್ವತ್ರಿಕವಾಗಿ ಎಲ್ಲರಲ್ಲಿಯೂ ಇರುವಂಥವಲ್ಲ. ನೇಗಿಲ್, ನೊಗು, ಕೊರಡು, ಈಚ್, ಜೊತಿಕಣ್ಣಿ . . . ಇವೆಲ್ಲವೂ ಕನ್ನಡ ಪದಗಳನ್ನು ಸ್ವೀಕರಿಸಿ ತಮ್ಮದಾಗಿಸಿಕೊಂಡ ರೂಪಗಳು. ಹೊಲದ ವ್ಯವಸಾಯದ ಹಾಗೆಯೇ ಇವೂ ಸ್ವೀಕರಣಗಳು. ಈ ಅಂಶಗಳೂ, ತೋಟಗಾರಿಕೆಗೆ ಇವರು ಪಾರಂಪರಿಕವಾಗಿ ಹತ್ತಿರವಾಗಿರುವುದನ್ನೇ ಸೂಚಿಸುತ್ತವೆ.

ಕರ್ನಾಟಕದ ಎಲ್ಲ ಸಂಕೇತಿನೆಲೆಗಳ ಪಾರಂಪರಿಕತೋಟಗಳು ಸಂಕೇತಿಗಳು ಬೆಳೆಸಿದವು. ಬ್ರಾಹ್ಮಣೇತರರು ಹೊಲಗದ್ದೆಗಳಿಗೆ ಹೊಂದಿಕೊಂಡಿದ್ದಾರೆ. ತೋಟಗಾರಿಕೆಗೆ ಅನ್ಯಾವಲಂಬನೆ ಕಡಿಮೆಯಾದುದರಿಂದಲೂ ಅದರ ಮೂಲಭೂತ ಲಕ್ಷಣಗಳು ಪ್ರಭಾವದೂರವಾಗಿ ಮುಂದುವರಿದಿವೆ. ಆದರೆ ಹೊಲಗದ್ದೆಗಳ ವ್ಯವಸಾಯಗಳು ಹೆಚ್ಚಾಗಿ ಅನ್ಯರ ನೆರವಿನಿಂದ ನಡೆಯುವುದರಿಂದಾಗಿ ಅವುಗಳ ಸ್ವರೂಪವು ಸಾರ್ವತ್ರಿಕವಾದುದು.[1] ಹೊಲಗದ್ದೆಗಳ ಬೇಸಾಯ ವಿಧಾನ, ಮಳೆಯನ್ನು ಕುರಿತ ನಂಬಿಕೆಗಳು ಮೊದಲಾದ ಎಲ್ಲ ವಿವರಗಳಲ್ಲಿಯೂ, ಸಂಕೇತಿರೈತನು ತನ್ನದೇಆದ ಪರಿಣತಿಯನ್ನು ಬೆಳೆಸಿಕೊಂಡಿದ್ದರೂ, ಮೂಲಭೂತವಾಗಿ ಅವು ಸಾರ್ವತ್ರಿಕಸ್ವರೂಪದವು. ". . . . ಎರೆನೆಲಕ್ಕೆ ಸೊಪ್ಪು ಅತ್ಯುತ್ತಮ ವ್ಯವಸಾಯ. ಎರೆನೆಲದಲ್ಲಿಯೇ ಇಳುವರಿ ಕಡಮೆ. ಮರಳು, ಕೆಬ್ಬೆ, ಕಲ್‌ಚಿಟಕಲು ಸೇರಿರುವುದರಲ್ಲಿ ಬೆಳೆ ಚೆನ್ನಾಗಿ ಕಾಣದಿದ್ದರೂ ಇಳುವರಿ ಚೆನ್ನಾಗಿರುತ್ತದೆ. ಕಾರಣ, ಅತಿ ಆಳಕ್ಕೆ ಬೇರು ಬಿಡಬಾರದು. ಎರೆನೆಲಕ್ಕೆ ೬-೭ ಇಂಚು ಬೇರು ಇಳಿದಿರುತ್ತದೆ; ಬೆಳೆ ಚೆನ್ನಾಗಿ ಕಂಡರೂ ಇಳುವರಿ ಹೆಚ್ಚುವುದಿಲ್ಲ. . .. " ಸಂಕೇತಿ ರೈತನ ವಿಶ್ಲೇಷಣೆ ಹೀಗೆ ಸಾಗುತ್ತದೆ. ಹೊಸ ತಳಿಗಳನ್ನು ಬಳಸುವುದು, ರಸಗೊಬ್ಬರದ ಬಳಕೆ ಮತ್ತು ವಿಧಾನ, ಆರ್ಥಿಕಬೆಳೆ, ಆಧುನಿಕ ತಂತ್ರಜ್ಞಾನ - ಇವುಗಳಿಂದಾಗಿ ಪ್ರಯೋಗಶೀಲನಾದ ಅವನು ಪ್ರಗತಿಶೀಲನೂ ಆಗುತ್ತಿರುವುದನ್ನು ಈಗ ಎಲ್ಲೆಡೆ ಗುರುತಿಸಬಹುದು. ಬೆಟ್ಟದಪುರವೂ ಸೇರಿದಂತೆ ಮಧ್ಯದೇಶ, ಹಾಸನಸೀಮೆ, ಲಿಂಗದಹಳ್ಳಿಯ ವ್ಯವಸಾಯಕ್ರಮ, ಬೆಳೆಗಳ ವೈವಿಧ್ಯದಲ್ಲಿ ಕಾಣುವ ಪ್ರಾದೇಶಿಕ ಭಿನ್ನತೆಯನ್ನು ಆಯಾ ಪ್ರದೇಶದ ಸಂಕೇತಿಗಳೂ ಮೈಗೂಡಿಸಿಕೊಂಡಿರುವುದು ಸ್ವೀಕರಣವನ್ನು ಸೂಚಿಸುವಂತೆಯೇ, ಅವರ ಹೊಂದಿಕೊಳ್ಳುವ (adaptability) ಗುಣಕ್ಕೂ ಸಾಕ್ಷಿಯಾಗಿದೆ. ಉದಾಹರಣೆಗೆ ಒಕ್ಕಲು ಮಾಡುವಾಗ ಲಿಂಗದಹಳ್ಳಿಯಲ್ಲಿ ಪೂರಾ ತುಳಿಸುವ ಕ್ರಮವಿದೆ. ಮುದಲಾಪುರ ಅಷ್ಟಗ್ರಾಮದಲ್ಲಿ ಬಡಿಯುವುದು, ತುಳಿಸುವುದು ಎರಡೂ ಬಳಕೆಯಲ್ಲಿದೆ. ಕೌಶಿಕದಲ್ಲಿ ಹಿಂದೆ ಕೇವಲ ತುಳಿಸುತ್ತಿದ್ದವರು ಈಗ ರೋಣಗಲ್ಲು ಕೂಡ ಬಳಸುತ್ತಾರೆ. ಹಾಗೆಯೇ ತಡಣಿ, ಹಸುಜೋಳ, ಮುಸುಕಿನ ಜೋಳ, ನವಣೆ, ಹುರುಳಿ, ಅವರೆ ಇವೆಲ್ಲವೂ ರಾಗಿಯ ಜೊತೆಗೇ ಬೆಳೆಯುವ ಬೆಳೆಗಳು. ಲಿಂಗದಹಳ್ಳಿಯಲ್ಲಿ ಇವಲ್ಲದೆ ಬಟಾಣಿ, ಶೇಂಗಾ, ಕುರುಸಾನಿ (ಎಣ್ಣೆಬೀಜ), ಗೋಧಿ; ಮಧ್ಯದೇಶದಲ್ಲಿ ಅಗೆತಳದಲ್ಲಿ ಮೆಣಸಿಗೆ, ಹೀರೆ, ಸೌತೆ; ಅಷ್ಟಗ್ರಾಮ, ಮಧ್ಯದೇಶದಲ್ಲಿ ರಾಗಿ, ಹುರುಳಿ ಮತ್ತು ರಾಗಿ, ತೊಗರಿ . . . ಹೀಗೆ ಪ್ರತಿಬಾರಿ ಎರಡು ಬೆಳೆ ತೆಗೆಯುತ್ತಾರೆ.

3. ಬೇಸಾಯದಲ್ಲಿ ಧಾರ್ಮಿಕ ಆಚರಣೆಗಳು: ವ್ಯವಸಾಯಕ್ಕೆ ಸಂಬಂಧಿಸಿದ ಧಾರ್ಮಿಕ ಆಚರಣೆಗಳಲ್ಲಿ ಕೂಡ, ತೋಟಕ್ಕೆ ಸಂಬಂಧಿಸಿದಂತೆ ಇರುವುದು 'ವೃಕ್ಷಪೂಜೆ' ಮತ್ತು 'ವನಭೋಜನ' ಮಾತ್ರ. ಸಿಡಿಲು ಮೊದಲಾದ ದುರಂತಗಳಿಗೆ ಸಂಬಂಧಿಸಿದಂತೆ ಮಾಡುವ ಶಾಂತಿಯೂ ಆ ಸಂಬಂಧದಲ್ಲಿದೆ. ಹೊಸಬತ್ತಕ್ಕೆ ಸಂಬಂಧಿಸಿದಂತೆ ನಡೆಯುವ 'ಆಗ್ರಯಣೇಷ್ಟಿಯು' ಅದರ ಮೂಲರೂಪದಲ್ಲಿ, ಇಲ್ಲವೆ ಅಪಭ್ರಂಶರೂಪದಲ್ಲಿ ಇಂದಿಗೂ ಉಳಿದುಕೊಂಡಿದೆ. ಬತ್ತಬಡಿದ ಅನಂತರ ದೇವರಪೂಜೆ ಮಾಡಿ, ನಾಲ್ಕು ಜನಕ್ಕೆ ಹೊಸ ಅಕ್ಕಿಯಿಂದ ಮಾಡಿದ ಅನ್ನಹಾಕಿ, ಅನಂತರ ಊಟಮಾಡುವುದು ಮಧ್ಯದೇಶದಲ್ಲಿ ಕೆಲವೆಡೆ ಇದೆ. ಅದು ಆಗ್ರಯಣೇಷ್ಟಿಯ ಅಪಭ್ರಂಶ ರೂಪ. ಕೆಲವರು ದೇವಸ್ಥಾನಕ್ಕೆ ನೈವೇದ್ಯಕ್ಕೆ ಕೊಡುತ್ತಾರೆ. ದವಸದ ಮೊದಲ ಕೆಲವು ತೆನೆಗಳನ್ನು ಮನೆಯ ಮುಂದೆ ಕಟ್ಟಿ ಹಕ್ಕಿಗಳಿಗಾಗಿ ಬಿಡುವ ರೂಪವನ್ನೂ ಅದು ಕೆಲವೆಡೆ ಪಡೆದಿದೆ. ಆದರೆ ಇದರ ಮೂಲಸ್ವರೂಪದ ಆಚರಣೆ ಮತ್ತೂರಿನಲ್ಲಿ ಉಳಿದಿದೆ. ಅನೇಕ ಸನ್ನಿವೇಶಗಳಲ್ಲಿ ಮಾಡುವ 'ಬೆನಕನ ಪೂಜೆ'ಯು ಸಾಮಾನ್ಯವಾದದ್ದು. ವ್ಯವಸಾಯದ

[1] ಮಧ್ಯದೇಶದ ಹೊಲದ ವ್ಯವಸಾಯದ ವಿವರಗಳು ಇತರ ರೈತರ ವ್ಯವಸಾಯಕ್ರಮವನ್ನೇ ಹೋಲುತ್ತವೆ. ನೋಡಿ: ಗ್ರಾಮಜ್ಯೋತಿ, ಕೆ.ಆರ್.ಲಿಂಗಪ್ಪ ಅಭಿನಂದನ ಗ್ರಂಥ, ಸಂ:ಗೊ.ರು.ಚನ್ನಬಸಪ್ಪ; ಗ್ರಾಮಾಂತರ ವ್ಯವಸಾಯ ಚಕ್ರ, ಹ.ಕ.ರಾಜೇಗೌಡ; ಬೆಂಗಳೂರು, ೧೯೭೭, ಪು.೧೨೫-೧೪೦.

ವಿವಿಧ ಹಂತಗಳಲ್ಲಿ ನಡೆಯುವ ವಿವಿಧ ಆಚರಣೆಗಳಿಗೆ ಸಂಬಂಧಿಸಿದ ಸೂತ್ರನಿರ್ದೇಶನಗಳೇ ಇದ್ದರೂ, ಮಧ್ಯದೇಶದ 'ಮಲ್ಲಯ್ಯನ ಸಂಪ್ರದಾಯ'; ಹಾಸನಸೀಮೆಯ 'ರಾಶಿಗೆ ಪಾದಗಟ್ಟೋದು', 'ತಿಪ್ಪಮ್ಮನ ಪೂಜೆ', 'ಹೊನ್ನಾರು'; ಲಿಂಗದಹಳ್ಳಿಯ 'ಮೊದಲ ಬೇಸಾಯ' - ಇವೆಲ್ಲವೂ ಸ್ಥಳೀಯ ಒಕ್ಕಲಿಗರ ಅನುಕರಣೆಗಳೇ ಆಗಿವೆ. ಸೋಮವಾರ ಉಳದಿರುವುದು, ಊರಿನ ಹೊರಗೆ ಹೋಗುವಾಗ ಮತ್ತು ಒಳಗೆ ಬರುವಾಗ ಎತ್ತಿನ ಮೇಲೆ ನೊಗ ಇಡದಿರುವುದು ಮೊದಲಾದ ವಿಧಿನಿಷೇಧಗಳಿಗೂ ಅವರು ಒಗ್ಗಿಕೊಂಡುದು, ಸ್ವತಃ ಉಳತೊಡಗಿದ ದಿನಗಳಲ್ಲಿ ಕಂಡ ಸ್ವೀಕರಣ ಎಂಬುದು ನಿಚ್ಚಳವಾಗಿದೆ.

ಷಟ್ಕರ್ಮದ ಮಿತಿಯ ಜೀವನವಿಧಾನದಿಂದ ಹೊರಬಂದರೂ ಅದಕ್ಕೆ ವಿರೋಧವಲ್ಲದ ರೀತಿಯಲ್ಲಿ ವ್ಯವಸಾಯವನ್ನು ರೂಢಿಸಿಕೊಳ್ಳುವ ಕಾಳಜಿ, ಅವರ ಆದ್ಯತೆಯ ತೋಟಗಾರಿಕೆಯಲ್ಲಿ ವ್ಯಕ್ತವಾಗುತ್ತದೆ. ಆದರೆ, ಕೃಷಿಯು ಹೊಲಗದ್ದೆಗಳಿಗೂ ವಿಸ್ತರಣೆಗೊಂಡುದು, ಧಾರ್ಮಿಕ ಜೀವನವಿಧಾನದಿಂದ ಆರ್ಥಿಕ ಕಾರಣಕ್ಕಾಗಿ ಮತ್ತಷ್ಟು ದೂರಸರಿದ ಪ್ರವೃತ್ತಿಯನ್ನೇ ಸೂಚಿಸುತ್ತದೆ. ಆತನು ಪ್ರಗತಿಶೀಲನಾದುದರಿಂದ ಪ್ರಾದೇಶಿಕ ತಾದಾತ್ಮ್ಯವನ್ನು ಸಾಧಿಸಿದುದು, ಕೃಷಿಕ್ಷೇತ್ರದ ವಿಸ್ತರಣೆಯಾದಂತೆ ಧಾರ್ಮಿಕವಾಗಿಯೂ ಪರಪ್ರಭಾವಗಳಿಗೆ (ಬ್ರಾಹ್ಮಣೇತರ ಪ್ರಭಾವಗಳಿಗೆ ಕೂಡ) ಮುಕ್ತವಾಗಿ ಒಳಗಾದುದು ಇನ್ನಿತರ ಲಕ್ಷಣಗಳು. ಸಂಕೇತಿಗಳು ಬೆಳೆಸಿದ ಸಹಸ್ರಾರು ಎಕರೆ ತೋಟಗಳು ತಮ್ಮಷ್ಟಕ್ಕೇ ಕರ್ನಾಟಕಕ್ಕೆ ನೀಡಿದ ಕಾಣಿಕೆಗಳಾದಂತೆ, ತಮ್ಮ ನೆಲೆಗಳಲ್ಲಿ ಒಂದು ವಿಧಾನವನ್ನು ಚಾಲನೆಗೊಳಿಸಿದ ದೃಷ್ಟಿಯಿಂದಲೂ ಮಹತ್ವವಾದವು.

ಇ. ಪಶುಪಾಲನೆ:

ಪ್ರಸ್ತುತ ನಿಬಂಧದಲ್ಲಿ, ಸಂಕೇತಿಗಳನ್ನು 'ಕೃಷಿಕರು' ಎಂದು ಗುರುತಿಸಿರುವ ಎಡೆಗಳಲ್ಲೆಲ್ಲಾ, ಅವರ 'ಪಶುಪಾಲನೆ'ಯ ವೃತ್ತಿಯನ್ನೂ ಅದರಲ್ಲಿ ಅಂತರ್ಗತಗೊಳಿಸಲಾಗಿದೆ. ಏಕೆಂದರೆ ಕೃಷಿ ಮತ್ತು ಪಶುಪಾಲನೆ ಈವರೆಗಿನ ಜೀವನವಿಧಾನದಲ್ಲಿ ಪರಸ್ಪರ ಪೂರಕ ಮತ್ತು ಅಗತ್ಯವಾದವು. ಆದರೆ ಪಶುಪಾಲನೆ ಧಾರ್ಮಿಕ ಅಗತ್ಯವಾಗಿಯೂ ಪಾರಂಪರಿಕವಾಗಿ ಇವರಲ್ಲಿ ಉಳಿದಿದೆ.

1. ಸಿಂಧಿಹಸು - ಪರಿವರ್ತಿತ ದೃಷ್ಟಿ: 'ಗೋಸೇವೆ ಮಾಡಬೇಕು, ದೇವರ ಪೂಜೆಗೆ ಹಸುವಿನ ಹಾಲು ಬೇಕು' ಎಂಬ ಧಾರ್ಮಿಕ ಉದ್ದೇಶದೊಂದಿಗೇ, ವ್ಯವಸಾಯಕ್ಕೆ ಬೇಕಾದ ಗೊಬ್ಬರದ ಅಗತ್ಯವನ್ನೂ ಪೂರೈಸಿಕೊಳ್ಳಲು ಪ್ರತಿಮನೆಯಲ್ಲಿಯೂ ದನಗಳನ್ನು ಕಟ್ಟಿಕೊಳ್ಳುತ್ತಾರೆ (ಚಿತ್ರ 36). ಕುರಿ, ಕೋಳಿ, ಆಡು, ನಾಯಿಗಳನ್ನು, ಸಾಕದಿರುವುದಕ್ಕೆ ಅವುಗಳ ಬಹುಮುಖಪ್ರಯೋಜನವು ಅವರಿಗೆ ಇಲ್ಲದುದನ್ನೇ ಕಾರಣವಾಗಿ ನೀಡಬಹುದು. ಕೇವಲ ಹಾಲು ಮತ್ತು ಗೊಬ್ಬರಕ್ಕಾಗಿ ಎಮ್ಮೆಯನ್ನು ಸಾಕುವುದು, ಕೆಲವರಾದರೂ ಯಾನ ಸೌಲಭ್ಯಕ್ಕಾಗಿ ಎತ್ತು, ಕುದುರೆಗಳನ್ನು ಸಾಕುತ್ತಿದ್ದುದು - ಶುದ್ಧ ಧಾರ್ಮಿಕ ಉದ್ದೇಶವನ್ನು ಮೀರಿದ ನಿದರ್ಶನಗಳೇ ಆಗಿವೆ. ಆದರೆ, ಸಿಂಧಿಹಸುಗಳನ್ನು ಸಾಕಿ ಹಾಲು ಮಾರತೊಡಗಿದ ಇತ್ತೀಚಿನ ಆರ್ಥಿಕ ದೃಷ್ಟಿಕೋನವು, ಧಾರ್ಮಿಕ ಮುಜುಗರಗಳನ್ನು ಉಜ್ಜಿಹಾಕಿದ ಯಂತ್ರಯುಗದ್ದು ಮಾತ್ರ.



36 ಗೋವನ್ನು ಮೇಯಿಸಿಕೊಂಡು ಬರುತ್ತಿರುವ ವೈದಿಕ ಕೃಷಿಕ

ರಾಸುಗಳು 'ಕಾಲಾಡಲು' 'ಬಾಯಾಡಲು' ಅಗತ್ಯವಿದ್ದ ಬೋರೆಗಳು ಸಾಗುವಳಿಗೆ ಈಡಾದ ಸನ್ನಿವೇಶವು ಸುಮಾರು ಇಪ್ಪತ್ತರಿಂದ ಐವತ್ತು ರಾಸುಗಳಿರುತ್ತಿದ್ದ ಕೊಟ್ಟಿಗೆಗಳು ಎರಡು-ಮೂರಕ್ಕೆ ಮಿತಗೊಳ್ಳುವುದನ್ನು ಅನಿವಾರ್ಯವಾಗಿಸಿದ್ದರ ಜೊತೆಗೆ, ಬೋರೆಗಳ ಅಗತ್ಯವಿಲ್ಲದ ಸಿಂಧಿಹಸುಗಳನ್ನು ಪರ್ಯಾಯವಾಗಿಸಿತು. ಅದರಿಂದಾಗಿ, ನಾಜೂಕಾದ ಸಿಂಧಿ ದನಗಳಿಗೆ ಬೇಕಾದ ಆಹಾರ, ಔಷಧೋಪಚಾರ,

ಚೊಕ್ಕಟವಾದ ಕೊಟ್ಟಿಗೆ, ಶ್ರಮ - ಇವೆಲ್ಲವೂ ನಿರೀಕ್ಷಿಸಿದ ವೆಚ್ಚವು, ಪಶುಪಾಲನೆಯನ್ನು ಆರ್ಥಿಕ ಉದ್ದೇಶದ ವೃತ್ತಿಯನ್ನಾಗಿಸಿತು. ಆದರೆ, ಪಶುಪಾಲನೆಯನ್ನು ಆರ್ಥಿಕ ಉದ್ದೇಶಕ್ಕೆ ಬಳಸಿಕೊಳ್ಳುತ್ತಿರುವ ಆಧುನಿಕಯುಗದ ನಿದರ್ಶನಗಳೂ ಬೆರಳೆಣಿಕೆಯಷ್ಟು ಮಾತ್ರವಾದುದರಿಂದ ಅದನ್ನು ಅಪವಾದವೆಂದಷ್ಟೇ ಗ್ರಹಿಸಬಹುದು. ಅದರ ಪ್ರಮಾಣವು ದೊಡ್ಡದಾಗದುದಕ್ಕೆ ವೆಚ್ಚ, ಶ್ರಮ, ನಷ್ಟದ ಸಾಧ್ಯತೆಯೂ ಅದರಲ್ಲಿ ದೊಡ್ಡದಾಗಿರುವುದರ ಜೊತೆಗೆ ಧಾರ್ಮಿಕಭಾವವೂ ಕಾರಣವಾಗಿರುವುದನ್ನು ಉಪೇಕ್ಷಿಸುವಂತಿಲ್ಲ.

2. ಆರ್ಥಿಕತೆಯನ್ನು ಮೀರಿದ ದೃಷ್ಟಿ: ಹೋರಿಗರುವಾದಾಗ ಮಾರುವ ಪರಿಪಾಠವಿರುವುದು ಅವುಗಳನ್ನು ಬಳಸುವ ಸಂದರ್ಭವು ಕಡಿಮೆಯಾದುದರಿಂದ. ದನಗಳ ಮಾರಾಟವನ್ನು ಆರ್ಥಿಕ ಹವ್ಯಾಸವಾಗಿ ಮಾಡಿಕೊಂಡಿಲ್ಲದುದಕ್ಕೆ, ಜಾತ್ರೆಗಳಲ್ಲಿ ದನಗಳನ್ನು ಬದಲಿಸಿಕೊಳ್ಳುವ ಸಂದರ್ಭದಲ್ಲಿರುವ 'ಕೃಷಿ ಜೀವನ'ವನ್ನು ನವೀಕರಿಸಿಕೊಳ್ಳುವ ಮತ್ತು ಪುನಶ್ಚೇತನಗೊಳಿಸುವ ಶುದ್ಧ ಉದ್ದೇಶವೂ ಉತ್ತಮ ನಿದರ್ಶನವಾಗಿದೆ (ಚಿತ್ರ 37).



37 ತಮ್ಮ ರಾಸುಗಳನ್ನು ಬದಲಿಸಿಕೊಳ್ಳಲು ಜಾತ್ರೆಗಳು ಅವಕಾಶ ಒದಗಿಸುತ್ತವೆ

ತನ್ನ ರಾಸುಗಳಿಗೆ ಹೆಸರಿಟ್ಟು ಕೂಗಿ ಆತ್ಮೀಯವಾಗಿಸಿಕೊಳ್ಳುವುದು, ಅವು ಸತ್ತಾಗ ಅಕ್ಕರೆಯಿಂದ ಸಂಸ್ಕಾರ ಮಾಡುವುದು, ನಿತ್ಯದ ಪೂಜೆ, ದೃಷ್ಟಿಪರಿಹಾರಕ್ಕಾಗಿ ಮಾಡುವ ಅಲಂಕಾರ, ಕಾಯಿಲೆಕಸಾಲೆ ಆದಾಗ ಮಾಡಿಕೊಳ್ಳುವ ಹರಕೆಗಳು ಇವೆಲ್ಲವೂ, ರಾಸುಗಳು ಅವರ ಕುಟುಂಬದ ಸದಸ್ಯರಂತೆ ಅವಿಭಾಜ್ಯ ಅಂಗವಾಗಿರುವುದನ್ನೇ ಸೂಚಿಸುತ್ತವೆ. ಸೀತಾ, ಕಾವೇರಿ, ಗಂಗೆ, ಗೌರಿ ಮೊದಲಾದ ಹೆಸರುಗಳು ಕರ್ನಾಟಕದಲ್ಲಿ ಸಾರ್ವತ್ರಿಕ ಬಳಕೆಯವು. 'ದಕ್ಷಿಣ'ದಲ್ಲಿ ಗೋಮತಿ, ಗಂಗೆ, ಸೀತಾ ಮೊದಲಾದವು ವಿಶೇಷವಾಗಿ ಬಳಕೆಗೊಳ್ಳುತ್ತವೆ. ತಮ್ಮ ರಾಸುಗಳೊಂದಿಗಿನ ಆ ಆತ್ಮೀಯತೆ ಕೃಷಿಕಸಮಾಜದ ಸಾರ್ವತ್ರಿಕ ಮೂಲಭೂತ ಲಕ್ಷಣವೇ ಆಗಿದೆ. ಪಶುಸಾಕಾಣಿಕೆ, ಔಷಧೋಪಚಾರ, ಸುಳಿ ಮೊದಲಾದ ಲಕ್ಷಣಗಳ ಪರಿಜ್ಞಾನ - ಇವೆಲ್ಲವಲ್ಲಿ ಸಂಕೇತಿ ರೈತನಿಗಿರುವ ಪರಿಣತಿಯಲ್ಲಿ ಸ್ಥಳೀಯ ರೈತರ ಪ್ರಭಾವವನ್ನೂ ಗುರುತಿಸಬಹುದು. ಪೊಶ್‌ಕಂಡ್‌ಹ (ಹಸುಕರುಗಳು), ಚಾಣ (ಸಗಣಿ), ಕೋಮಿಯು (ಗಂಜಲ), ಕೊಟ್ಟಾಯಿ (ಕೊಟ್ಟಿಗೆ), ಕಳನೀರ್ (ಕಲಗಚ್ಚು) ಇತ್ಯಾದಿಯಾಗಿ ಪಶುಪಾಲನೆಗೆ ಸಂಬಂಧಿಸಿದಂತೆ ಇರುವ ಪದಗಳು ತಮ್ಮ ಮೂಲಲಕ್ಷಣವನ್ನು ಇಂದಿಗೂ ಉಳಿಸಿಕೊಂಡಿರುವುದು, ಈ ವೃತ್ತಿಯು ಅವರಿಗೆ ಅನೂಚಾನವಾಗಿ ಬಂದಿರುವುದನ್ನೇ ಸಮರ್ಥಿಸುತ್ತದೆ.

ಪಶುಪಾಲನೆಯೂ, ಪ್ರಧಾನವಾಗಿ 'ಗೋಸೇವೆ'ಯ ಧಾರ್ಮಿಕ ಉದ್ದೇಶಕ್ಕಾಗಿ ಇದ್ದುದು, ಆರ್ಥಿಕ ಕಾರಣಕ್ಕಾಗಿ ದೂರಸರಿದ ಪ್ರವೃತ್ತಿಯನ್ನು ಕ್ಷೀಣವಾಗಿಯಾದರೂ ಇವರಲ್ಲಿ ಗುರುತಿಸಬಹುದು. ಸ್ಥಳೀಯ ಪ್ರಭಾವಗಳೂ ಈ ಸಂಬಂಧದಲ್ಲಿ ಇವೆ. ಆದರೆ ಪಶುಪಾಲನೆ ಅವರ ಆರ್ಥಿಕ ವೃತ್ತಿಯಾಗಿ ರೂಢಿಗೊಳ್ಳಲಿಲ್ಲ.

ಈ. ಇತರ ವೃತ್ತಿಗಳು ಮತ್ತು ಆರ್ಥಿಕತೆ:


ಪಾರಂಪರಿಕ ವೃತ್ತಿವೈವಿಧ್ಯವು ದಟ್ಟವಾಗಿ ಕರ್ನಾಟಕದ ಸಂಕೇತಿಗಳಲ್ಲಿಯೇ ಕಾಣಿಸಿಕೊಳ್ಳುವುದರ ಹಿಂದಿನ ಕಾರಣವೂ, ವಲಸೆಯಿಂದಾಗಿ ಏರುಪೇರಾದ ಜೀವನವನ್ನು ಪುನರ್ರೂಪಿಸಿಕೊಳ್ಳುವ ತುರ್ತಿನಲ್ಲಿಯೇ ಇದೆ.

1. 'ಸಂಕೇತಿ-ಸಕಲಾತಿ'- ಒಂದು ಪ್ರಶಸ್ತಿ: ಅಗತ್ಯವಾದ ಎಲ್ಲವನ್ನೂ ತಾನೇ ಬೆಳೆದುಕೊಳ್ಳುವ ಸಂಕೇತಿರೈತನು ಬೇಲಿನೆಡುವುದರಿಂದ


38 ಕುಟುಂಬದ ಮಂದಿಯೆಲ್ಲಾ ಸೇರಿ ಹುಣಸೆಹಣ್ಣು ಜಜ್ಜಿ ರೇಖೆ ಮಾಡುತ್ತಿರುವುದು

ತೊಡಗಿ ಗೊಬ್ಬರ ಹಾಕುವುದು, ಸಸಿನೆಡುವುದು, ಕೊಯ್ಲು, ರೇಖೆ - ಹೀಗೆ ಸಮಸ್ತವನ್ನೂ ತಾನೇ ಮಾಡಿಕೊಳ್ಳುತ್ತಾನೆ, ಇಲ್ಲವೆ, ತನ್ನ ಬಂಧುಬಳಗದವರಲ್ಲಿ 'ಮುಯ್ಯಿ' ಆಧಾರದಿಂದ ಅದನ್ನು ನೆರವೇರಿಸಿಕೊಳ್ಳುತ್ತಾನೆ. ಅವನ ಹಿತ್ತಿಲು ಕೂಡ ಹೆಂಗಸರು, ಮಕ್ಕಳೇ ಬೆಳೆಸಿದ ಒಂದು ತೋಟವಾಗಿರುತ್ತದೆ. ಕೃಷಿಯನ್ನೇ ಆಧರಿಸಿ ಹಗ್ಗ ಹೊಸೆಯುವುದು, ದೊನ್ನೆಕಟ್ಟುವುದು, ನಶ್ಯ ಇಡಿಯುವುದು, ಜನಿವಾರ ಹೊಸೆಯುವುದು, ಕದಬೆ ಬಳಸಿ ಹಾಸಿಗೆಯನ್ನೂ, ರಾಗಿ ಒಡ್ಡಿನಲ್ಲಿ ದಿಂಬನ್ನೂ ಮಾಡಿಕೊಳ್ಳುವುದು, ಹರಳು, ಎಳ್ಳಿನಿಂದ ಎಣ್ಣೆ ಊತುಕೊಳ್ಳುವುದು, ಎಲೆ ಹಚ್ಚುವುದು, ಮೊದಲಾದ ಆನುಷಂಗಿಕ ಕಸಬುಗಳನ್ನೂ ಅವನು ರೂಢಿಸಿಕೊಂಡಿದ್ದಾನೆ. ಇವಲ್ಲದೆ ನೇಗಿಲು, ಮೇಣಿ, ಶಾವಿಗೆಒರಳು, ಪೀಠೋಪಕರಣಗಳು, ಗಾಡಿ ಹೂಡುವುದು, ತೇರು ಮಾಡುವುದು ಮೊದಲಾದ ಮರಗೆಲಸಗಳು; ಗೇರು,[2] ಪೆಟ್ಟೆ, ಗೂಡೆ ಮೊದಲಾದ ಕುಶಲ ಕೆಲಸಗಳು; ಬಾವಿತೋಡುವುದು, ಮನೆಕಟ್ಟುವುದು, ಕುಲುಮೆ ಮೊದಲಾದ ವೃತ್ತಿಪರ


39 ವೀಳೆದೆಲೆ ಕೊಯ್ದು ತಂದು ಸಂತೆಗೆ ಒಯ್ಯಲು ಸಿದ್ಧ ಮಾಡುತ್ತಿರುವುದು


40 ಬಿಡುವಿನ ವೇಳೆಯಲ್ಲಿ ತಮ್ಮ ರಾಸುಗಳಿಗಾಗಿ ಹಗ್ಗ ಹೊಸೆಯುವುದು

ಕೆಲಸಗಳು - ಇಂಥ ವಿವಿಧ ರಂಗಗಳಿಗೆ ಸೇರಿದ ಕಸಬುಗಳನ್ನು ತಾನೇ ಮಾಡಿಕೊಳ್ಳುವುದು, ತನ್ನ ಆರ್ಥಿಕ ಮಿತಿಯ ಕಾರಣದಿಂದ ಅವನಿಗೆ ಅನಿವಾರ್ಯವಾಗಿತ್ತು. ಅಡ್ಡೆನೀರು ಹೊತ್ತು ಪರಿಚಾರಿಕೆ ಮಾಡುವುದರಿಂದ ತೊಡಗಿ ದಿವಾನ್‌ಪದವಿಯ ನಿರ್ವಹಣೆಯವರೆಗೆ ವೈವಿಧ್ಯಪೂರ್ಣ ಕಸಬುಗಳಲ್ಲಿ ತೊಡಗಿಕೊಂಡ ವೈಶಿಷ್ಟ್ಯ ಅವರದಾಗಿದೆ (ಚಿತ್ರ 38, 39, 40, 41). ಹೀಗೆ ತನ್ನ ಜಾತಿಗೆ ಸಂಬಂಧವಿಲ್ಲದ ಎಲ್ಲವನ್ನೂ ತನ್ನ ಅಳವಿಗೆ ತಂದುಕೊಳ್ಳುವ ಅವನ ಪ್ರವೃತ್ತಿಯಿಂದಾಗಿ 'ಸಂಕೇತಿ


[2] ಹಿತ್ತಲಿನಲ್ಲಿ ಗುಣಿತೋಡಿ ಒಂದರಮೇಲೊಂದು ಮಡಿಕೆ ಜೋಡಿಸಿ ಹುಗಿಯುವುದು. ಮೇಲಿನ ಮಡಿಕೆಯಲ್ಲಿ ಗೇರುಬೀಜ ತುಂಬಿರುತ್ತದೆ. ಅದರ ತಳದಲ್ಲಿ ಸಣ್ಣ ರಂಧ್ರವಿರುತ್ತದೆ. ಬೆರಣಿ ಒಟ್ಟಿ ಶಾಖ ಕೊಡುವುದು. ಗೇರುಎಣ್ಣೆ ಕೆಳಗಿನ ಮಡಿಕೆಗೆ ಇಳಿಯುತ್ತದೆ. ಅದರ ಜೊತೆಗೆ ಬಳಪದ ಹಿಟ್ಟು, ಕಿಟ್ಟ ತುಂಬಿ ಕಲಸಿ ಕುಕ್ಕೆಯನ್ನು ಸಾರಿಸುತ್ತಾರೆ.

ಸಕಲಾತಿ' ಎಂಬುದು ಗಾದೆರೂಪದ ಪ್ರಶಸ್ತಿಯಾಯಿತು.[3] ತಮ್ಮ ಅಗತ್ಯಗಳಿಗೆ ತಕ್ಕಂತೆ ಉಪಕರಣಗಳನ್ನು ಸಿದ್ಧಪಡಿಸಿಕೊಳ್ಳುವ ಸಂಕೇತಿರೈತನ ಕರ್ತೃತ್ವಶಕ್ತಿ, ಜಾಣ್ಮೆ, ಸೃಜನಶೀಲ ಗುಣಕ್ಕೆ ಹಲವು ಪ್ರಾತ್ಯಕ್ಷಿಕೆಗಳಿವೆ (ಚಿತ್ರ 42, 43).



41 ಅಡುಗೆ ಭಟ್ಟರ ತಂಡ

2. **ಸೂಕ್ಷ್ಮ ಆರ್ಥಿಕತೆ:** ಅವರು ವಾಸವಿರುವ ನೂರಾರು ವರ್ಷಗಳ ಶಿಥಿಲಗೊಂಡ ಮನೆಗಳು, ಉಡುವ ಎರಡು ವಸ್ತ್ರಗಳು, ತಿಳಿಸಾರಿನ ಸರಳ ಊಟ - ಇವೆಲ್ಲವೂ ಅವರ ಬಡತನದ ಪ್ರತೀಕಗಳೂ ಹೌದು. "ಎಲ್ಲರೂ ಅವತ್ತವತ್ತಿಗೆ ಆಗುವಂಥವರೇ. ಭಿಕಾರಿ, ಶ್ರೀಮಂತ ಎರಡೂ ಇಲ್ಲ. ದಾನ, ಪ್ರತಿಗ್ರಹ ಎರಡೂ ಸಮಸಮ. ಸಾಲಮಾಡೋದು, ತೀರಿಸೋದು; ಯಾಕಂದರೆ ಅನ್ನದಾನ ಮಾಡಬೇಕು ಅನ್ನೊ ಹಂಬಲ. " ಇದು ಎಲ್ಲೆಡೆಯ ರೀತಿ. ಸಾಕುವವೆಚ್ಚ ಕಡಮೆ ಎಂಬುದಕ್ಕಾಗಿ ಗಿಡ್ಡದನಗಳನ್ನು ಆರಿಸಿಕೊಳ್ಳುವುದು; ಮತ್ತೆ ಮತ್ತೆ ಹೋರಿಗರುಗಳನ್ನೇ ಎಲ್ಲಿ ಹಾಕಿಬಿಡುತ್ತದೋ ಎಂದು ಆತಂಕಗೊಳ್ಳುವುದು; ಸಾಲಮಾಡಿದರೆ ಆಸ್ತಿಯೇ ಕಳವಾದೀತೆಂಬ ಭೀತಿಯಿಂದ ಅನಿವಾರ್ಯವಿದ್ದಾಗಲೂ ಪರಸ್ಪರ ಶ್ರಮವಿನಿಮಯದಿಂದ ಕಾರ್ಯಸಾಧಿಸುವುದು; ಬಾಳೆ, ವೀಳೆಯಂಥ ಬೆಳೆಗಳು ರೋಗಬಂದು ನಾಶವಾದರೆ ಬದುಕೇ ಬುಡಮೇಲಾಗುವುದು; ಅಡಿಕೆಪಟ್ಟೆಯ ನಾರನ್ನು ಉರುವಲಾಗಿ ಬಳಸಿ ತೋಟದ ಮರಗಳನ್ನು ಕಡಿಯದಂತೆ ಜಾಗ್ರತೆವಹಿಸುವುದು- ಇವೆಲ್ಲವೂ ಅವರು ಹಾಕಿಕೊಂಡ ಆರ್ಥಿಕ ಮಿತಿಗಳು.



42 ನೂಲುವ ರಾಟೆ

ಎಡಗೈ ಸ್ವಾಧೀನವಿಲ್ಲದ ವೃದ್ಧರೊಬ್ಬರು ಜನಿವಾರ ಹೊಸೆಯುವುದಕ್ಕಾಗಿ ತಾವೇ ರೂಪಿಸಿ ಮಾಡಿಕೊಂಡ ಸರಳ ಚರಕ. ಒಂದೇ ಚಕ್ರದ ಈ ಚರಕವನ್ನು ತೊಡೆಯ ಮೇಲಿರಿಸಿಕೊಂಡು ಎಡಗೈಲಿ ತಿರುಗಿಸಿ ಬಲಗೈಲಿ ನೂಲಬಹುದು. ಅದಕ್ಕೆ ಕಟ್ಟುವ ಬೆಲ್ಟನ್ನು ತುಸು ನುಲಚುವ ಮೂಲಕ ಅದೇ ಜನಿವಾರವನ್ನು ಹೊಸೆಯುವಂತೆ ಮಾಡಬಹುದು. ಜಾರುಗ (ಸ್ಲೈಡರ್) ಬಳಸಿದ್ದರಿಂದ, ಬೆಲ್ಟ್ ಕಿತ್ತಾಗಲೂ ಸುಲಭವಾಗಿ ಗಂಟು ಹಾಕಿಕೊಳ್ಳಬಹುದು. ಅದರ ಅಳತೆಯಲ್ಲಾದ ವ್ಯತ್ಯಾಸವನ್ನು ಜಾರುಗದ ಮೂಲಕ ಸರಿಪಡಿಸಿಕೊಳ್ಳಬಹುದು. ಅನ್ಯರ ನೆರವಿಲ್ಲದೆ ಸ್ವತಂತ್ರವಾಗಿ ಕೂತೆಡೆಯೇ ಕೆಲಸ ನಿರ್ವಹಿಸವ ಅನ್ವೇಷಣೆ ಇಲ್ಲಿಯದು.

3. **ಆಧುನಿಕ ಪರಿವರ್ತನೆ:** ಅವರ ಆರ್ಥಿಕಸ್ಥಿತಿಯಲ್ಲಿ ಈಗ ಆಗಿರುವ ಬದಲಾವಣೆಯ ಕೆಲವು ಮುಖ್ಯ ಕಾರಣಗಳು:

0.1 ಹಿಂದಿನ ಹತ್ತು-ಹದಿನೈದು ಮಕ್ಕಳ ಬದಲು ಈಗ ಒಂದು-ಎರಡು ಮಕ್ಕಳ ಮಿತಸಂಸಾರ.

0.2 ಹಿಂದಿನ ಕಠಿಣ ದುಡಿಮೆ ಮತ್ತು ಅಧಿಕ ಆಹಾರಸೇವನೆ; ಬದಲು ಈಗ ಕಡಮೆಯಾದ ಕಠಿಣ ದುಡಿಮೆ, ಕಾಫಿ ಸೇವನೆಯಿಂದಲೂ ಆದ ಮಿತಾಹಾರ ಸೇವನೆ.

0.3 ಅಡಿಕೆ, ಹೊಗೆಸೊಪ್ಪು, ಹತ್ತಿ, ಆಲೂಗೆಡ್ಡೆ ಈಗ ವಾಣಿಜ್ಯಬೆಳೆಗಳಾಗಿ ಒದಗಿರುವುದು.

0.4 ಆಧುನಿಕ ವಿದ್ಯೆ ಮತ್ತು ನೌಕರಿಯ ಸಾಧ್ಯತೆಗಳು; ನಗರಜೀವನ.

---

3 ರೇಷ್ಮೆವಸ್ತ್ರಕ್ಕೂ 'ಸಕಲಾತಿ' ಎನ್ನುವ ಪದವು ಬಳಕೆಯಾಗುತ್ತದೆ. ಮಡಿಗಾಗಿ ವಿಶೇಷವಾಗಿ ರೇಷ್ಮೆಮಗುಟವನ್ನು ಬಳಸುವವರಾದುದರಿಂದ ಈ ನುಡಿಗಟ್ಟು ಹುಟ್ಟಿಕೊಂಡಿತೆಂಬ ಅಭಿಪ್ರಾಯವೂ ಇದೆ.



43 ಬಹುಪಾಲು ಸಂಕೇತಿಗಳೇ ಭಾಗವಹಿಸುವ ಕೌಶಿಕದ ಶ್ರೀಲಕ್ಷ್ಮೀಕೇಶವ ಸ್ವಾಮಿಯ ರಥೋತ್ಸವ. ಕೌಶಿಕ ಮತ್ತು ಬಸವಪಟ್ಟಣದ ರಥಗಳನ್ನು ಮೊದಲು ನಿರ್ಮಿಸಿದವರು ಸಂಕೇತಿಗಳು

ಸೇನಾಧಿಪತಿಗಳು, ಯೋಧರು, ದಿವಾನರು, ವೈದ್ಯರು, ಜ್ಯೋತಿಷಿಗಳು, ಶಾನುಭೋಗ ಮೊದಲಾದ ವೃತ್ತಿಗಳಲ್ಲಿ ತೊಡಗಿಕೊಂಡಾಗಲೂ ವೈದಿಕತೆ ಮತ್ತು ವ್ಯವಸಾಯಕೇಂದ್ರಿತ ಸರಳ ಜೀವನಕ್ಕೆ ಒಗ್ಗಿಕೊಂಡಿದ್ದ ಸಂಕೇತಿಗಳು ಈ ಶತಮಾನದ ಪ್ರಾರಂಭದಿಂದ ನೌಕರಿಗಳನ್ನು ಪಡೆದು ನಗರೀಕರಣಕ್ಕೊಳಗಾಗಿ ಕೃಷಿಯ ಪ್ರೀತಿಯ ನಂಟನ್ನು ಕಳೆದುಕೊಳ್ಳತೊಡಗಿದುದು ಕಾಣಿಸುತ್ತದೆ. ಮೀಸಲಾತಿಯ ಕಾರಣದಿಂದಾಗಿ ಸರ್ಕಾರಿ ನೌಕರಿಗಳ ಸಾಧ್ಯತೆ ಕಡಮೆಯಾದಾಗಲೂ ಇತರ ವಿವಿಧ ವೃತ್ತಿಗಳ ಒಲುವು ಬೆಳೆದಿದೆ. ಹಳ್ಳಿಗಳಲ್ಲಿನ ಪಾರಂಪರಿಕ ಕೃಷಿಕರು ಅಲ್ಪಸಂಖ್ಯಾತರಾಗಿದ್ದಾರೆ. ಅವರ ಕೃಷಿಯೂ ಆರ್ಥಿಕತೆಯ ದೃಷ್ಟಿಕೋನದಿಂದಾಗಿ ಕೆಲವು ಬೆಳೆಗಳಿಗೆ ಕೇಂದ್ರೀಕೃತವಾಗುತ್ತಿದೆ. ಆದರೆ, ಎಲ್ಲೆಡೆಯೂ ಕಾಣಿಸುವಂತೆ ಬಟ್ಟೆ, ತರಕಾರಿ, ಪ್ರಯಾಣ ಮತ್ತಿತರ ಸೌಲಭ್ಯಗಳಿಗಾಗಿ ಅವರು 'ಕಾಸು ಕಾಣುತ್ತಿರುವುದು' ಈಗಲೇ. ಬಡತನದ ಮಿತಿಯಲ್ಲಿಯೂ ಅವರ ಬಾಳು ಈಗ ಹಿಂದಿಗಿಂತಲೂ ಸುವ್ಯವಸ್ಥಿತವಾಗಿರುವುದು ಸ್ಪಷ್ಟವಾಗಿದೆ; ಅದು ಸಾರ್ವತ್ರಿಕ ವಿದ್ಯಮಾನದ ಪ್ರವಾಹದಲ್ಲಿ ಗುರುತಿಸಬಹುದಾದ ಲಕ್ಷಣವೂ ಹೌದು.

ಕರ್ನಾಟಕ ಮತ್ತು ದಕ್ಷಿಣದ ಸಂಕೇತಿಗಳ ಜೀವನದ ಒತ್ತು ಪ್ರಧಾನವಾಗಿ ಕ್ರಮವಾಗಿ ಕೃಷಿ ಮತ್ತು ದೇವಸ್ಥಾನ ಸೇವೆಯೇ ಆದರೂ, ಆಧುನಿಕಪೂರ್ವ ಜೀವನದ ಆರ್ಥಿಕ ತಳಮಳವು ಸಮಾನವಾದುದು. ಈಗ ಆಯಾಕ್ಷೇತ್ರಗಳ ಪಾರಂಪರಿಕತೆ ಕೈಬಿಟ್ಟುಹೋದುದು ಮತ್ತು ನೌಕರಿಗಳ ಖಾತರಿ ಇಲ್ಲದ ಸನ್ನಿವೇಶದಲ್ಲಿ, ಆ ತಳಮಳವೇ ಬೇರೊಂದು ರೀತಿಯಲ್ಲಿ ಮುಂದುವರಿದಿದೆ. ನಗರಜೀವನದ ವೈವಿಧ್ಯಪೂರ್ಣ ಅವಕಾಶಗಳ ನಡುವೆ, ತಮ್ಮ ಭವಿಷ್ಯವನ್ನು ಹುಡುಕಿಕೊಳ್ಳುವ ಆತಂಕವು ಅವರ ಆರ್ಥಿಕ ತಳಮಳದ ಪರಿಹಾರದ ಒಂದು ಮುಖವಾಗಿ ಈಗ ಕಾಣಿಸಿಕೊಳ್ಳುತ್ತಿದೆ.

೨. ಆಹಾರ ಮತ್ತು ಪಾನೀಯ ಸಂಪ್ರದಾಯಗಳು

ಆಹಾರ ಮತ್ತು ಪಾನೀಯ ಸಂಪ್ರದಾಯಗಳು ಭೌಗೋಳಿಕ ಸನ್ನಿವೇಶಕ್ಕೆ ತಕ್ಕಂತೆ ಇರುತ್ತವೆ; ಆಯಾ ಸಮುದಾಯದ ಸಂಸ್ಕೃತಿಯನ್ನೂ ಪ್ರಕಟಿಸುತ್ತವೆ. ಸಂಕೇತಿ ಸಮುದಾಯವು ಜೀವನನಿರ್ವಹಣೆಗಾಗಿ ಮಾಡುತ್ತಿರುವ ಹೋರಾಟದ ಚಿತ್ರವೂ ನಮ್ಮ ಕಣ್ಣ ಮುಂದಿದೆ. ದುಡಿಮೆಗಾರರಾದರೂ ಆರ್ಥಿಕವಾಗಿ ದುರ್ಬಲರಾದ ಸಂಕೇತಿಗಳ ಸಾಂಪ್ರದಾಯಿಕ ಆಹಾರಕ್ರಮದ ಪ್ರಾತಿನಿಧಿಕ ಸಂಗತಿಗಳನ್ನು ಚರ್ಚಿಸುವುದು ಇಲ್ಲಿನ ಉದ್ದೇಶವಾಗಿದೆ.

ಅ. ದಿನನಿತ್ಯದ ಆಹಾರ:

ಬೇಳೆಸಾರು, ಅನ್ನ; ಮಜ್ಜಿಗೆ, ಅನ್ನ; ಜೊತೆಗೆ ಉಪ್ಪಿನಕಾಯಿ ಬಹುಪಾಲು ಸಂಸಾರಗಳ ನಿತ್ಯದ ಆಹಾರವೆಂಬುದು ಸರಳತೆ ಮತ್ತು ಪೌಷ್ಟಿಕಾಂಶಗಳ ಕೊರತೆಯ ದೃಷ್ಟಿಯಿಂದ ಗಮನಾರ್ಹವಾದುದು. ಅಕ್ಕಿಯೇ ಪ್ರಧಾನ ಆಹಾರವಾಗಿರುವುದು, ಬೇಳೆಕಾಳುಗಳು ಬಹಳ ಅಲ್ಪಪ್ರಮಾಣದಲ್ಲಿ ಬಳಕೆಯಾಗುವುದು -ಅದನ್ನೇ ಪೋಷಿಸುತ್ತವೆ. ಸಾರಿನ ಜಾಗದಲ್ಲಿ ಹುಳಿ, ಮಜ್ಜಿಗೆ ಹುಳಿ, ಬಜ್ಜಿ, ಗೊಜ್ಜು ಇತ್ಯಾದಿ ಬಳಕೆಯಾದಾಗ ಇಲ್ಲವೆ ಪಲ್ಯವೊಂದನ್ನು ಮಾಡಿದಾಗ ಏಕತಾನತೆ ತಪ್ಪಿದರೂ ಪುಷ್ಟಿ ಹೆಚ್ಚುವುದಿಲ್ಲ. ರಾಗಿ ಪಾರಂಪರಿಕವಾಗಿ ಇದ್ದುದು; ಗೋಧಿ ಇತ್ತೀಚಿನ ಸ್ವೀಕರಣ. ಈಗ, ಪುಷ್ಟಿ ನೀಡಬಹುದಾದ ಅವೆರಡೂ ಹಳ್ಳಿಗಳಲ್ಲಿ ವಿಶೇಷ

ಸಂದರ್ಭಗಳ ಅಡುಗೆಗಳಾಗಿ ಮಾತ್ರ ಉಳಿದಿವೆ. ದುಡಿಯುವ ಈ ಜನರ ದಿನದ ಆಹಾರ ಕೇವಲ ಎರಡು ಸರಳ ಊಟಗಳು ಮಾತ್ರ ಎಂಬುದೂ ಪುಷ್ಟಿಗೆ ಆಗದುದೇ. ಕಠಿಣ ದುಡಿಮೆಗಾರರಾದ ಇವರು ಸಹಜವಾಗಿಯೇ ಭೋಜನದಲ್ಲಿಯೂ ಗಟ್ಟಿಗರು ಎಂದು ಖ್ಯಾತರಾಗಿರುವುದರ ಹಿಂದೆ ಇರುವ ಈ ಎಲ್ಲ ನ್ಯೂನತೆಯ ಅಂಶಗಳೂ ಗಮನಾರ್ಹವಾದವು. " ಹದಿನಾಲ್ಕು ವರ್ಷಕ್ಕೆ ವಿವಾಹ, ವಿವಾಹಾನಂತರ ಎರಡು ಊಟ ಮಾತ್ರ; ಉಪ ಆಹಾರಗಳು ನಿಷಿದ್ಧ. ಪುರುಷರಿಗೆ ದೇವರಪೂಜೆಗೆ ಉಪದೇಶ ಮತ್ತು ಹೆಂಗಸರಿಗೆ ಜಪಕ್ಕೆ ಉಪದೇಶ ಆದಾಗ ಆ ನಿಯಮ ಇನ್ನೂ ಕಠಿಣವಾಗುತ್ತದೆ. ವಿಧವೆಯರಂತೂ ಒಂದೇ ಊಟಕ್ಕೆ ಮಿತಗೊಳ್ಳುತ್ತಾರೆ. ಅವರಿಗೆ ರಾತ್ರಿ ಮುಸುರೆಯಲ್ಲದ ಉಪಾಹಾರ ಸಾಧ್ಯ. ಬ್ರಹ್ಮಚಾರಿಗಳಿಗೆ ಭಿಕ್ಷಾನ್ನ, ವಾರಾನ್ನ. ... " ಇದು ಅವರ ಆಹಾರಕ್ರಮದ ಒಂದು ಮುಖದ ಚಿತ್ರ.

'ರಾಗಿ' ಬಡವರ ಆಹಾರವೆಂಬುದು ಸಾರ್ವತ್ರಿಕವಾಗಿ ರೂಪುಗೊಂಡ ಅಭಿಪ್ರಾಯ. ಸಂಕೇತಿಗಳು ರಾಗಿಯನ್ನು ಪಾರಂಪರಿಕವಾಗಿ ಬಳಸುತ್ತಿದ್ದುದನ್ನು ಈ ಹಿನ್ನೆಲೆಯಲ್ಲಿ ಗಮನಿಸಬೇಕು. ಪಲ್ಯವೊಂದು ಇರಲೇಬೇಕೆಂಬ ತಮಿಳುನಾಡಿನ ರೀತಿಯು, ದಾರಿದ್ರ್ಯದ ನಡುವೆಯೂ ಕರ್ನಾಟಕಕ್ಕಿಂತ ಉತ್ತಮ ಪರಿಸ್ಥಿತಿಯನ್ನು ಸೂಚಿಸುತ್ತದೆ. ರಾತ್ರಿ ಮಿಕ್ಕ ಅನ್ನವನ್ನು ತಣ್ಣೀರಿನಲ್ಲಿ ಮುಳುಗಿಸಿಟ್ಟು ಬೆಳಗ್ಗೆ ಮೊಸರಿನೊಂದಿಗೆ (ಮಕ್ಕಳು) ಊಟ ಮಾಡುವ 'ತಂಪು' ವಿಧಾನವು ತಮಿಳುನಾಡಿನ ಪ್ರಾದೇಶಿಕ (ಹವಾಗುಣದ ಹಿನ್ನೆಲೆಯ) ವೈಶಿಷ್ಟ್ಯವಾಗಿಯೇ ಉಳಿದಿದೆ.

ಸಂಕೇತಿಗಳ ಎಲ್ಲೆಡೆಯ ಸರಳ ಆಹಾರಕ್ಕೆ ಪ್ರಧಾನವಾದ ಕಾರಣ ಅವರ ಬಡತನ. ಬಿಡುವಿಲ್ಲದ ಕೆಲಸಗಳು, ಮತ್ತು ಸಾಧನಗಳ ಅಭಾವವೂ ಈ ಮಿತಿಯನ್ನು ಒಡ್ಡಿತೆನ್ನುವುದು ಅರ್ಧಸತ್ಯ. ವರ್ಷದ ಹಬ್ಬಗಳು, ಸಂಸ್ಕಾರಗಳು ಹಾಗೂ ವಿಶೇಷ ಸಂದರ್ಭಗಳನ್ನು ಧಾರ್ಮಿಕನಂಬಿಕೆಗಳಿಗೆ ಚ್ಯುತಿಬರದಂತೆ ನಿಭಾಯಿಸಿಬೇಕಾದ ಆತಂಕಕ್ಕೆ ಒಡ್ಡಿಕೊಂಡು ತಮ್ಮ ನಿತ್ಯದ ಬದುಕನ್ನು ತೀರ ಸರಳಗೊಳಿಸಿದಾಗ 'ಲೋಭ'ದ ಭ್ರಮೆಯನ್ನುಂಟುಮಾಡಿದ ಸಂದರ್ಭಗಳೂ ಇಲ್ಲದಿಲ್ಲ.

ಆ. ಹಣ್ಣು-ತರಕಾರಿ :

ಸುಂಡೆ, ದಿಂಡು, ಬಾಳೆಹೂ, ಕೆಸವು, ಹೆರಳೆ, ನಿಂಬೆ, ಚಟ್ಟು, ಕಡಕತ್ತವರೆ, ಬದನೆಕಾಯಿ, ಕುಂಬಳಕಾಯಿ, ಹಾಲುಸೋರೆ, ಹೀರೆ, ಹಾಗಲ, ಬೆಂಡೆ, ಗೋರಿ, ಚೂರ್ಣಗೆಡ್ಡೆ, ಗೆಣಸು ಎಲ್ಲೆಡೆಯ ಸಾಂಪ್ರದಾಯಿಕ ತರಕಾರಿಗಳು. ಅವೆಲ್ಲವೂ ಹಿತ್ತಿಲು ಹಾಗೂ ತೋಟಗಳಲ್ಲಿ ಬೆಳೆದಿದ್ದು, ಆರ್ಥಿಕವಾಗಿ ಹೊರೆಯಾಗದಂಥವು. ಆದರೂ ನಿತ್ಯದಲ್ಲಿ ತರಕಾರಿಯ ಬಳಕೆಯೇ ಇಲ್ಲದುದಕ್ಕೆ, ಇಲ್ಲವೆ ಅತ್ಯಲ್ಪ ಪ್ರಮಾಣದಲ್ಲಿ ಬಳಕೆ ಆಗುತ್ತಿದ್ದುದಕ್ಕೆ ಕೂಡ, ಪರಿಕರಗಳನ್ನು ಹೊಂದಿಸಲಾಗದ ಆರ್ಥಿಕ ದೌರ್ಬಲ್ಯವೇ ಕಾರಣ. ಈರುಳ್ಳಿ, ನುಗ್ಗೆಕಾಯಿ, ಬೆಳ್ಳುಳ್ಳಿ, ಅಣಬೆ ಸಾರ್ವತ್ರಿಕವಾಗಿ ನಿಷಿದ್ಧವಾದುದು ಅವುಗಳು ಉಂಟುಮಾಡುವ ಕಾಮಪ್ರಚೋದನೆ ಇಲ್ಲವೆ 'ಉಷ್ಣ'ದ ಕಾರಣಕ್ಕಾಗಿ ಎಂಬುದು, ಜೀವನದೃಷ್ಟಿಯನ್ನೂ ಸೂಚಿಸುವಂಥದು. ತೊಂಡೆಕಾಯಿ ಬುದ್ಧಿಯನ್ನು ಮಂಕುಗೊಳಿಸುತ್ತದೆಂಬುದು ಬುದ್ಧಿಜೀವಿಗಳ ಚಿಂತನೆ ಎಂಬುದೂ ಗಮನಾರ್ಹವಾದುದು. ವಿದೇಶಗಳಿಂದ ಬಂದ ಎಲ್ಲ ತರಕಾರಿಗಳೂ ನಿಷಿದ್ಧವಾದುದು ಹೊಸತನ್ನು ಮುಕ್ತವಾಗಿ ಸ್ವೀಕರಿಸದ ಸಾರ್ವತ್ರಿಕ ಗುಣದಿಂದ. ಬೀಟ್‌ರೂಟ್, ಕ್ಯಾರಟ್, ಕೆಂಪು ಮೂಲಂಗಿಗಳು ಮಾಂಸಾಹಾರದ ನೆನಪುತರುವುದರಿಂದಲೇ ನಿಷಿದ್ಧವಾದುದು ತಮ್ಮ ಸಂಪ್ರದಾಯಗಳ ಬಗೆಗೆ ಹೊಂದಿರುವ ತೀವ್ರಸ್ಪಂದನಕ್ಕೆ ಸಾಕ್ಷಿ. ತಂಪು ಗುಣದ ಹೆಸರುಕಾಳು, ಕೀರೆಸೊಪ್ಪಿಗೆ ಇರುವ ವಿಶೇಷ ಪ್ರಾಧಾನ್ಯವು, ತಮಿಳುನಾಡಿನ ಹವಾಮಾನವನ್ನು ಅನುಸರಿಸಿದ ಪ್ರಾದೇಶಿಕ ವೈಶಿಷ್ಟ್ಯವಾಗಿದೆ. ನಿಷೇಧಗಳಲ್ಲಿಯೂ ಇರುವ ಪ್ರಾದೇಶಿಕ ವ್ಯತ್ಯಾಸಗಳು ಪರಪ್ರಭಾವಗಳ ಸೂಚಿಗಳು.

ಹಿಂದೆ ಮಡಿಯ ಕಾರಣಕ್ಕಾಗಿಯೂ ತರಕಾರಿಗಳನ್ನು ಕೊಳ್ಳುತ್ತಿರಲಿಲ್ಲವೆನ್ನುವುದು ಈಗ ಆಗಿರುವ ಮಹಾಪರಿವರ್ತನೆಯನ್ನು ಸೂಚಿಸುತ್ತದೆ. ಚಾತುರ್ಮಾಸ್ಯ ಮೊದಲಾದ ವಿಶೇಷ ಸಂದರ್ಭಗಳಲ್ಲಿ ಇರುವ ನಿರ್ದಿಷ್ಟ ತರಕಾರಿಗಳ ನಿಷಿದ್ಧವು, ಧಾರ್ಮಿಕ ನಂಬಿಕೆಗಳೂ ಆಹಾರವನ್ನು ನಿಯಂತ್ರಿಸುವ ನೇರಸಾಕ್ಷಿಗಳು. ಹಿರಿಯರೂ ವ್ರತನಿರತರೂ ಈ ನಿಯಮಗಳನ್ನು ಹೆಚ್ಚು ನಿಷ್ಠೆಯಿಂದ ಪಾಲಿಸುವುದೂ ಅಂಥದೇ ಕಾರಣದಿಂದ. ಅಲ್ಲದೆ, ಬೂದಗುಂಬಳ ಆರೋಗ್ಯಕರ; ಆಲೂಗಡ್ಡೆ, ಸಕ್ಕರಗುಂಬಳ ವಾಯುಕಾರಕ; ಕೆಸವು ಜೀರ್ಣಕಾರಿ . . . . ಮೊದಲಾದ ವೈದ್ಯಕೀಯ ನಂಬಿಕೆಗಳು ತಜ್ಞರ ಪರಿಶೀಲನೆಗೆ ಅರ್ಹವಾಗಿವೆ.

ಇ. ಬೆಳಗಿನ ಉಪಾಹಾರ:

ಎರಡು ಊಟಗಳ ಜೊತೆಗೆ ಬೆಳಗಿನ ಆಹಾರವಾಗಿ ನಿಯತವಾಗಿ ರೂಢಿಗೆಬಂದ ಪರಿಕರಗಳು ಎಂಬ ಅರ್ಥದಲ್ಲಿ ಸಂಕೇತಿಗಳೂ ಆಧುನಿಕ ಪರಿಸರಕ್ಕೆ ಈಚೆಗೆ ಹೊಂದಿಕೊಂಡಿದ್ದಾರೆ. ಉಪಾಹಾರವೆಂಬ ಹೆಸರಿನಲ್ಲಿ ವಿಶೇಷ ಸಂದರ್ಭಗಳಲ್ಲಿ ಮಾತ್ರ ಹುಳಿ ಅವಲಕ್ಕಿ, ಹುರಿಟ್ಟು, ಅರಳು, ಅವಲಕ್ಕಿ, ಚಕ್ಕುಲಿ, ಕೋಡುಬಳೆ, ಇಡಲಿ, ದೋಸೆ, ಕಡುಬು ಸಾಂಪ್ರದಾಯಿಕವಾಗಿ ಬಳಕೆಯಲ್ಲಿದ್ದಂಥವು. ಕೇವಲ ಒಂದು ಹೊತ್ತು ಮಾತ್ರ ಊಟಮಾಡುವ ವಿಧವೆಯರು ರಾತ್ರಿ ಉಪಾಹಾರಗಳನ್ನು ಮಾಡಿಕೊಳ್ಳುವಾಗ ಅರಳಹಿಟ್ಟು, ಅವಲಕ್ಕಿ, ಅರಳನ್ನು ವಿಶೇಷವಾಗಿ ಬಳಸುವುದಕ್ಕೆ ಮಡಿ, ತಂಪುಗುಣ, ಸಂಗ್ರಹಸಾಧ್ಯತೆಗಳೂ ಕಾರಣವಾಗಿವೆ. ಹಾಲು, ಕೊತ್ತಂಬರಿ ಮತ್ತು ಜೀರಿಗೆಕಷಾಯ, ಷರಬತ್ತು, ನೀರುಮಜ್ಜಿಗೆ, ಎಳೆನೀರು ಸಾಂದರ್ಭಿಕ ಪಾನೀಯಗಳು. ಯಾವ ಪಾನೀಯವೂ ದಿನಚರಿಯಾಗಿರದ ಈ ಸಮುದಾಯದಲ್ಲಿ, ಕಾಫಿ ಮತ್ತು ಅಲ್ಪಪ್ರಮಾಣದಲ್ಲಿ ಇತ್ತೀಚೆಗೆ ಚಹಾ ದೈನಂದಿನ ಪಾನೀಯವಾಗಿ ಸಾರ್ವತ್ರಿಕವಾಗಿ ಸ್ವೀಕಾರಗೊಂಡಿವೆ. ಕೇರಳದ ಪ್ರಭಾವದಿಂದ ಹಾಲಿಲ್ಲದ ಬರಕಾಫಿ ತಮಿಳುನಾಡಿನ ಕೆಲವೆಡೆ ರೂಢಿಯಲ್ಲಿದ್ದರೆ, 'ತಿಂಡಿಮಾಡದವರು ಬಡವರು' ಎಂಬ ಸಾರ್ವತ್ರಿಕ ಅನಿಸಿಕೆಗೂ, ಸಾರ್ವತ್ರಿಕ ಆಧುನಿಕ ಪರಪ್ರಭಾವಗಳೇ ಕಾರಣವಾಗಿವೆ.

ಈ. ಹಬ್ಬಹರಿದಿನಗಳು ಮತ್ತು ಅಡುಗೆ:

ಹಬ್ಬಗಳು, ದೈವಧ್ಯಾನವನ್ನು ನಿಮಿತ್ತವಾಗಿ ಮಾಡಿಕೊಂಡ ವಿಶೇಷ ಸಂದರ್ಭಗಳು. ಆ ಸಂದರ್ಭಗಳ ಅಡುಗೆಯೂ ವಿಶೇಷವಾದುದೇ. ಸಂಕೇತಿಗಳ ಊಟೋಪಚಾರಗಳು ಹಬ್ಬಗಳ ಸಂದರ್ಭಗಳಲ್ಲಿ ಪ್ರಕಟಗೊಳ್ಳುವ ವಿಶಿಷ್ಟ ರೀತಿಯನ್ನು ಇಲ್ಲಿ ಪರಿಶೀಲಿಸಿದೆ:

1. **ಅಡುಗೆ-ಕೂಟಗಳು:** ಹಬ್ಬ-ಹರಿದಿನಗಳಲ್ಲಿ ಏಕತಾನವನ್ನು ಪರಿಹರಿಸಿಕೊಳ್ಳುವ ಮತ್ತು ವೈವಿಧ್ಯದ ಆಹಾರ ತೆಗೆದುಕೊಳ್ಳುವ ಪ್ರಯತ್ನ ಕಾಣುತ್ತದೆ. ಆದರೆ ಆ ದಿನಗಳಲ್ಲಿ ಮಾಡುವ ವಿಶೇಷ ತಿನಿಸುಗಳೂ ಸಾರ್ವತ್ರಿಕವಾಗಿ ಸಾಂಪ್ರದಾಯಿಕ ನಿರ್ದಿಷ್ಟತೆಯನ್ನು ಪಡೆದಿವೆ. ಪ್ರಾರಂಭಿಕ ಹಂತದಲ್ಲಿ ವಿಶೇಷವೆನಿಸಿದ್ದ ಬೇಳೆಸಾರು ಮತ್ತು ಕೀರು (ಪರಪ್‌ಚಾರ್ ಪಾಯ್ಸ) 'ಶುಭ'ದ ಪರಿಗಣನೆಗೆ ಬಂದವು. ಈಗ ಪ್ರಚಲಿತವಾಗಿರುವ ವಿಶೇಷ ವಿವಿಧ ಅಡುಗೆ ಕೂಟಗಳು ಈ ಮೂಲದ ವಿಕಾಸಗಳು. ಈ ಕಾರಣದಿಂದಲೇ ಅವಕ್ಕೆ 'ಸಂಪ್ರದಾಯ'ದ ಮುದ್ರೆ ಬಿದ್ದಿದೆ. ಇಡ್ಲಿ, ಕಡುಬು (ಇಡ್ಲಿ ಕೊಳಕಟ್ಟ) ('ಕೊಳಕಟ್ಟ' ಎನ್ನುವುದು ಬೆಲ್ಲದ ಕಡುಬು, ಉದ್ದಿನಕಡುಬು ಎರಡನ್ನೂ ಒಳಗೊಂಡ ಪದ.), ಶಾವಿಗೆ - ಪಾಯಸ (ಚೋಮಾ - ಪಾಯ್ಸ) ಹುಳಿಅನ್ನ - ಪಾಯಸ (ಪಾಯ್ಸ - ಪುಳೀಸಾ) ಹೋಳಿಗೆ - ಹುಳಿಅನ್ನ (ಒಬ್ಬಟ್ಟ್ ಪುಳೀಸಾ), ಶಾವಿಗೆ ಹೋಳಿಗೆ (ಚೋಮಾ ಒಬ್ಬಟ್) - ಈ ಪ್ರಸಿದ್ಧ ಅಡುಗೆ ಕೂಟಗಳು (combinations) ಐಚ್ಛಿಕವಾಗಿ ಬಳಕೆಗೊಳ್ಳುವಂತೆಯೇ ಐಚ್ಛಿಕತೆಗೆ ಎಡೆ ಇಲ್ಲದಂತೆಯೂ ಬಳಕೆಯಾಗುವ ಸಂದರ್ಭಗಳಿವೆ.* ಶನಿವಾರಗಳ ರಾಮಪೂಜೆಗಾಗಿ ಮಾಡುವ ಸಜ್ಜಿಗೆಯ ನಿರ್ದಿಷ್ಟ ನೈವೇದ್ಯವು ಅಂಥ ಒಂದು ಉದಾಹರಣೆಯಾಗಿದೆ. ಒಂದು ಕಾರ ಮತ್ತು ಒಂದು ಸಿಹಿಯನ್ನು ಹೊಂದಿರುವ ಈ ಕೂಟಗಳು ಅಡುಗೆಯ ವಿಕಾಸವಾದಂತೆ ಆದ ಪ್ರಾಚೀನ ರೂಢಿಗಳು. ಈ ಪ್ರಕ್ರಿಯೆಯ ಮುಂದುವರಿಕೆಯನ್ನು ಆಧುನಿಕ ಭಕ್ಷ್ಯಗಳ ಸ್ವೀಕರಣದ ಸಂದರ್ಭಗಳಲ್ಲಿ ಕಾಣಬಹುದು.

ಅಡುಗೆ ಕೂಟಗಳ ವಿವರಗಳ ಅವಲೋಕನವು, ವಿಭಿನ್ನ ಪ್ರದೇಶಗಳಲ್ಲಿ ಸಾಮಾನ್ಯವಾಗಿ ರೂಢಿಯಲ್ಲಿರುವ ಸಮಾನ ಸಂಪ್ರದಾಯಗಳ ಚಿತ್ರವನ್ನೇ ಮೂಡಿಸುತ್ತದೆ. ಯುಗಾದಿಹಬ್ಬಕ್ಕೆ ಸಂಬಂಧಿಸಿದಂತೆ ಅಂಥ ನಿದರ್ಶನವನ್ನು ಇಲ್ಲಿ ಕೊಟ್ಟಿದೆ.

---

* ನಿರ್ದಿಷ್ಟ ಅಡುಗೆ ಕೂಟಗಳು, ಆಯಾ ಕಾಲದ ಹವಾಮಾನ ಮತ್ತು ಅದಕ್ಕೆ ಹೊಂದಿಕೊಂಡ ನೈಸರ್ಗಿಕ ಚಿಕಿತ್ಸೆ, ರುಚಿವೈವಿಧ್ಯ ಹಾಗೂ ಹೊಂದಾಣಿಕೆ, ಪ್ರಭಾವ ಹಾಗೂ ಸ್ವೀಕಾರ - ಈ ನಿಟ್ಟಿನ ಅಧ್ಯಯನವು ಸಮಗ್ರ ಭಾರತೀಯ ನೆಲೆಯಲ್ಲಿ ನಡೆದರೆ ರೋಚಕವೂ ಉಪಯುಕ್ತವೂ ಆದ ಮಾಹಿತಿ ಲಭ್ಯವಾಗಬಹುದು.

ಕ್ರಮ ಸಂಖ್ಯೆ	*ಮಧ್ಯದೇಶ*	*ಲಿಂಗದಹಳ್ಳಿ*	*ಮತ್ತೂರು*	*ಮುದಲಾಪುರ*	*ಕೌಶಿಕ*	*ದಕ್ಷಿಣ*
೧	ಇಡ್ಲಿ, ಕಡುಬು	ಇಡ್ಲಿ, ಹೋಳಿಗೆ	ಇಡ್ಲಿ, ಕಡುಬು	ಇಡ್ಲಿ, ಕಡುಬು	ಇಡ್ಲಿ, ಕಡುಬು	ಅವಿಯಲ್ (ಎಲ್ಲ ತರಕಾರಿ ಹಾಕಿದ ಕೂಟು)
೨	ಇಡ್ಲಿ, ಶಾವಿಗೆ, ಪಾಯಸ	ಇಡ್ಲಿ, ಹೋಳಿಗೆ, ಪಾಯಸ				ಹೋಳಿಗೆ, ಪಾಯಸ
೩	ಒಬ್ಬಟ್ಟು	ನೈವೇದ್ಯಕ್ಕೆ ಪಾನಕ, ಕೋಸುಂಬರಿ				

ಇಲ್ಲಿ - ಎಲ್ಲೆಡೆಯ ಅಡುಗೆ ಕೂಟಗಳಲ್ಲಿ ಬಹುತೇಕ ಸಾಮ್ಯವನ್ನು ಗುರುತಿಸಬಹುದು.

2. **ಪ್ರಾದೇಶಿಕ ವೈಶಿಷ್ಟ್ಯಗಳು:** ಪ್ರಾದೇಶಿಕ ವಿಶಿಷ್ಟಾಂಶಗಳೂ ಇಲ್ಲಿ ಉಂಟು. ಮಧ್ಯದೇಶವೊಂದರಲ್ಲೇ ವಿವಿಧ ಮನೆಗಳಲ್ಲಿ ಮೊದಲ ತದಿಗೆಗೆ ಒಬ್ಬಟ್ಟು ಅಥವಾ ಯರಿಯಪ್ಪ ಅಥವಾ ಕರಿಗಡಬು, ಲಕೋಟ್‌ಹೋಳಿಗೆ ಮಾಡುವ ನಿದರ್ಶನವು ತೀವ್ರಭಿನ್ನತೆಯ ಅಪರೂಪದ ಸಂದರ್ಭಗಳ ಸಾಕ್ಷಿ. ಇವೆಲ್ಲವೂ ಮೂಲ ಪಾಯಸದ ಜಾಗದಲ್ಲಾದ ಐಚ್ಛಿಕ ಬೆಳವಣಿಗೆಗಳು ಎಂಬುದು ಗಮನಾರ್ಹವಾದುದು. ಹೊಸದಾಗಿ ಐಚ್ಛಿಕವಾಗಿ ಪ್ರಾಶಸ್ತ್ಯಪಡೆದ ವರಮಹಾಲಕ್ಷ್ಮಿಯ ಅಡುಗೆಯಲ್ಲಿ ಅಂಥ ಐಚ್ಛಿಕತೆ ಮತ್ತು ವಿಜೃಂಭಣೆಯನ್ನು ಗಮನಿಸಬಹುದು:

ಕ್ರಮ ಸಂಖ್ಯೆ	*ಮಧ್ಯದೇಶ*	*ಲಿಂಗದಹಳ್ಳಿ*	*ಮತ್ತೂರು*	*ಮುದಲಾಪುರ*	*ದಕ್ಷಿಣ*
೧	ಹುಳಿಅನ್ನ, ಪೊಂಗಲು ಯರಿಯಪ್ಪ	ಹಬ್ಬದಡುಗೆ; ನೈವೇದ್ಯಕ್ಕೆ ಹೋಳಿಗೆ, ಮೈಸೂರುಪಾಕು	ಭಕ್ಷ್ಯ	ಇಡ್ಲಿ, ಹೋಳಿಗೆ	ಕಡ್ಲೆಬೇಳೆ ಪಾಯಸ, ಕಡುಬು, ರಾತ್ರಿ-ಕೂನಪ್ಪ
೨	ಇಡ್ಲಿ, ಕಡುಬು ಶಾವಿಗೆ ಜೊತೆಗೆ ಯರಿಯಪ್ಪ, ಕರಿಗಡುಬು, ಒಬ್ಬಟ್ಟು, ಪಾಯಸ, ಕೇಸರಿಬಾತ್ ಹೀಗೆ ೫ ಅಥವಾ ೬ ಭಕ್ಷ್ಯ				
೩	ಇಡ್ಲಿ, ಪಾಯಸ				

ಹಾಲುಸೋರೆ-ಇಡ್ಲಿ ಕರ್ನಾಟಕದ ಎಲ್ಲೆಡೆಗಳಲ್ಲಿ ನೀರುತುಂಬುವ ಹಬ್ಬದ ವಿಶೇಷ ನಿರ್ದಿಷ್ಟ ಅಡುಗೆಯಾದರೆ, ದಕ್ಷಿಣದಲ್ಲಿ ಅದರ ಗಮನವಿಲ್ಲ; ಲಿಂಗದಹಳ್ಳಿಯಲ್ಲಿ ಹಾಲುಸೋರೆ ನಿಷಿದ್ಧ ತರಕಾರಿಯೇ ಎಂಬುದೂ ಪ್ರಾದೇಶಿಕ ಭಿನ್ನತೆಯ ನಿದರ್ಶನವಾಗಿದೆ.

3. **ಶಾವಿಗೆ:** ಶಾವಿಗೆ, ಇವರ ಹಬ್ಬಗಳಲ್ಲಿ ಕಾಣಿಸಿಕೊಳ್ಳದಿರುವುದು ಅಪರೂಪ. ವೇದಾಧ್ಯಯನವು ಪೂರ್ಣವಾಗುವುದೆ ಇಲ್ಲವೆ ತುಂಡಾಗುವುದೆ ಎಂಬುದನ್ನು ಶಾವಿಗೆಯ ಎಳೆಯು ಸಂಕೇತಿಸುತ್ತದೆಂಬ ನಂಬಿಕೆಯೊಂದಿಗೆ, ಅದು ಉಪಾಕರ್ಮದ ಸಾರ್ವತ್ರಿಕ ನಿರ್ದಿಷ್ಟ ಅಡುಗೆಯಾಗಿರುವುದು ವಿದ್ಯೆ ಮತ್ತು ಅದರ ಧಾರ್ಮಿಕವಲಯದಲ್ಲಿ ನಡೆದಿದೆ.

4. **ಅಡುಗೆಯ ಪಾತ್ರ:** ಗೌರಿ-ಗಣಪತಿ, ದೀಪಾವಳಿ, ನವರಾತ್ರಿಯಂಥ ಪ್ರಮುಖ ಹಬ್ಬಗಳ ಅಡುಗೆಯೂ ವೈಭವದ್ದು; ದೀಪಾವಳಿಯ ನೀರುತುಂಬುವ ಹಬ್ಬ, ಚತುರ್ದಶಿ, ಅಮಾವಾಸ್ಯೆಗೆ ಹಬ್ಬದ ಕಳೆ ಬರುವುದು ಕೇವಲ ಅಡುಗೆಯಿಂದ; ವೈಷ್ಣವರಲ್ಲದಿದ್ದರೂ ಗೋಕುಲಾಷ್ಟಮಿಯ ಕರಿದ ತಿಂಡಿಗಳ ಹೆಚ್ಚುಗಾರಿಕೆಯಲ್ಲಿ ಹಿಂದಿಲ್ಲ; ಶಿವರಾತ್ರಿಯಂತೆ ಉಪವಾಸ ಮತ್ತು ಮಿತ ಉಪಾಹಾರವೂ ಹಬ್ಬದ ಭಾಗವೇ. ಅಡುಗೆಯ ನಿರ್ದಿಷ್ಟ ಕೂಟಗಳ ಕಾರಣದಿಂದ ಆದ ವೈವಿಧ್ಯದ ಮಿತಿಯ ನಡುವೆಯೂ ಏಕತಾನತೆಯನ್ನು ಪರಿಹರಿಸಬಲ್ಲ ಸಂಕೀರ್ಣಗುಣವನ್ನು ಇಲ್ಲಿ ಕಾಣಬಹುದು.

5. **ನಿರ್ದಿಷ್ಟ ಅಡುಗೆ: ಕಾರಣ:** ನಿರ್ದಿಷ್ಟ ಅಡುಗೆಗಳನ್ನೇ ಮಾಡುತ್ತಿದ್ದುದರ ಹಿಂದಿನ ಕಾರಣ ಇಲ್ಲಿದೆ: ". . . . ಹುಳಿಅನ್ನ, ವಾಂಗಿಭಾತ್ ತಡವಾಗುತ್ತದೆ ಎಂದು ಹಬ್ಬ ಹುಣ್ಣಿಮೆಗಳಲ್ಲಿ ಮಾಡುತ್ತಿರಲಿಲ್ಲ (ಕಲಸಿದ ಅನ್ನ, ಉದ್ದಿನ ಅನ್ನ, ಮಾವಿನಅನ್ನ ಮಾಡುತ್ತಿದ್ದರು). ಕೇಸರಿಬಾತ್‌ನಂತಹುದು ಭಕ್ಷ್ಯ ಎಂಬ ಗಣನೆಗೆ ಇರಲಿಲ್ಲ. ಅದು ಪೂಜೆ ಪುರಸ್ಕಾರಕ್ಕೆ, ಹಬ್ಬಕ್ಕಲ್ಲ ಎಂಬುದು ಭಾವನೆ. ಮಾರನೆಯದಿನ ಮಕ್ಕಳಿಗೆ ಕೈಗೆಕೊಡಲು ಉಳಿಯುವಂಥದಾಗಬೇಕೆಂಬುದು ಲೆಕ್ಕಾಚಾರ. ಅದಕ್ಕೇ ಒಬ್ಬಟ್ಟು, ಕರಿಗಡುಬು, ಲಕ್ಕೊಟಿನ ಹೋಳಿಗೆಗಳನ್ನು ಕಷ್ಟಪಟ್ಟಾದರೂ ಮಾಡುತ್ತಿದ್ದರು . . . . ."

6. **ಶೈಥಿಲ್ಯ:** ಅನೇಕ ಹಬ್ಬಗಳು ಆಚರಣೆಗೊಳ್ಳದೆ ಬಿಟ್ಟುಹೋಗುತ್ತಿರುವುದು; ಆಚರಿಸಿದಾಗಲೂ ಅಡುಗೆ ಹೆಚ್ಚು ವಿಸ್ತಾರಗೊಳ್ಳದುದು; ಶ್ರಾವಣ ಶನಿವಾರದಂತೆ ವಾರಸರಣಿ ಬಂದಾಗ ಪ್ರಾತಿನಿಧಿಕವಾಗಿ ಒಂದು-ಎರಡು ವಾರಗಳಲ್ಲಷ್ಟೇ ವಿಶೇಷ ಆಚರಣೆ ಇಟ್ಟುಕೊಳ್ಳುವುದು-ಇತ್ತೀಚಿನ ಧಾರ್ಮಿಕ ಮೌಲ್ಯಗಳ ಶಿಥಿಲತೆಗೆ ಹೇಗೋ ಆರ್ಥಿಕ ದೌರ್ಬಲ್ಯಕ್ಕೂ ಹಾಗೆಯೇ ಸಾಕ್ಷಿಗಳಾಗಿವೆ. ಆದರೆ, ಗಂಡುಮಕ್ಕಳಿಗೆ ವಿಶೇಷ ಸಂದರ್ಭವಿರುವ ರಾಮನವಮಿ, ಶ್ರಾವಣ ಶನಿವಾರ, ವಿಜಯದಶಮಿಯಂಥ ಹಬ್ಬಗಳಂತೆಯೇ, ಹೆಣ್ಣುಮಕ್ಕಳ ಗೌರಿ, ವರಮಹಾಲಕ್ಷ್ಮಿಗಳೂ ಅಡುಗೆಯ ವೈಭವದಲ್ಲಿ ತಾರತಮ್ಯ ಹೊಂದುವುದಿಲ್ಲ.

7. **ದಕ್ಷಿಣದ ಭಿನ್ನತೆ:** ತಮಿಳುನಾಡಿನ ಹಬ್ಬ-ನಿರ್ದಿಷ್ಟ ಅಡುಗೆಗಳು ಕರ್ನಾಟಕದ ವಿವರಕ್ಕಿಂತ ಬಹಳಷ್ಟು ಭಿನ್ನವಾಗಿರುವುದು, ಸಾವಿರಾರು ವರ್ಷಗಳ ಪ್ರಾದೇಶಿಕ ಪ್ರಭಾವಗಳ ಪರಿಣಾಮವಾಗಿದೆ.

ದಕ್ಷಿಣದ ಹಬ್ಬ-ನಿರ್ದಿಷ್ಟ ಅಡುಗೆಗಳು:

0.1	ಮಕರ ಸಂಕ್ರಾಂತಿ	:	ವಡೆ, ಪಾಯಸ, ತೈಪೊಂಗಲ್ (ಸಿಹಿ)
0.2	ದೀಪಾವಳಿ	:	ಒಕ್ಕಾರೈ (ಹಲ್ವ ರೀತಿಯದು, ಕಡ್ಲೆಬೇಳೆಯಲ್ಲಿ ಮಾಡಿದ ಸಿಹಿತಿಂಡಿ), ಶುಂಠೀಲೇಹ್ಯ (ಕಡ್ಡಾಯವಾಗಿ), ಆಂಬೊಡೆ.
0.3	ಪಂಗುನಿ	:	ಅಡೈ (ಸಿಹಿತಿಂಡಿ)
0.4	ಚಿತ್ರಾಪೂರ್ಣಮಿ	:	ಸಕ್ಕರೆಪೊಂಗಲ್, ವಡೈ
0.5	ಪದಿನಟ್ಟಾಂಪಿರಿಕ್ಕ್	:	ಹದಿನೆಂಟು ಬಗೆಯ ಆಹಾರ (ಎಳ್ಳನ್ನ, ನಿಂಬೆಅನ್ನ, ತೆಂಗಿನಅನ್ನ, ಮೊಸರನ್ನ, ನಾಲ್ಕು ಸಿಹಿ ಇತ್ಯಾದಿ)
0.6	ಉಪಾಕರ್ಮ	:	ಸಾಧಾರಣ ಆಹಾರ, ಆಂಬೊಡೆ
0.7	ಪ್ರಥಮ ಉಪಾಕರ್ಮ	:	ಹೆಸರುಕಾಳು ಸಿಹಿ, ಅಪ್ಪ (ಸಿಹಿ)
0.8	ಚಿತ್ತಿರೈ, ಯುಗಾದಿ, ವಿಶು	:	ಓಲನ್ (ಕೂಟು), ಅವಿಯಲ್.

ಹಬ್ಬವಿವರಗಳೂ ಬದಲಾದುದನ್ನು ಇಲ್ಲಿ ಕಾಣಬಹುದು. ಇಷ್ಟರ ನಡುವೆಯೂ, ಶ್ರೀವೈಷ್ಣವರಿಗೆ ವಿಶಿಷ್ಟವಾದ ಪೊಂಗಲ್ ಎಲ್ಲೆಡೆಯ ಸಂಕೇತಿಗಳಲ್ಲಿಯೂ ಅಪ್ರಧಾನವಾಗಿ ಉಳಿದಿರುವುದು ಮೂಲಭೂತ ಸಾಂಸ್ಕೃತಿಕ ಸಂಗತಿಗಳು ಹಾಗೆಯೇ ಉಳಿಯುವ ಒಂದು ಗಾಢ ನಿದರ್ಶನವಾಗಿದೆ.

ಉ. ಷೋಡಶ ಸಂಸ್ಕಾರಗಳು ಮತ್ತು ಆಹಾರವಿಧಿಗಳು:

1. ಹಬ್ಬಗಳಲ್ಲಿ ಕಂಡಹಾಗೆಯೇ, ಸಹಜವಾಗಿ ಮೂಡಿದ ಪ್ರಾರಂಭಿಕ ಸಂಗತಿಗಳು ಸಂಪ್ರದಾಯವಾಗಿ ಗಟ್ಟಿಗೊಂಡು ಮುಂದುವರಿಯುವ ಲಕ್ಷಣವನ್ನು ಇಲ್ಲಿಯೂ ಕಾಣಬುಹುದು:

ಉದಾ : ಕರ್ನಾಟಕದಲ್ಲಿ.

0.1	ಹುಟ್ಟುಹಬ್ಬ	:	ಒಬ್ಬಟ್ಟು ಅಥವಾ ಪಾಯಸ ಅಥವಾ ಮಿಠಾಯಿ
0.2	ನಾಮಕರಣ	:	ಒಬ್ಬಟ್ಟು ಅಥವಾ ಮಿಠಾಯಿ, ಆರತಿಬಾಗಿನಕ್ಕೆ ಉಂಡೆ ಅಥವಾ ಚಕ್ಕುಲಿ
0.3	ಜುಟ್ಟು, ಚೌಲ, ಉಪನಯನ	:	ಬೂಂದಿ, ಲಾಡು
0.4	ಧಾರೆ	:	ಲಾಡು
0.5	ಅದರ ಮರುದಿನ	:	ಪೊಂಗಲ್
0.6	ಅದರ ಮರುದಿನ	:	ಕಾಯಿಒಬ್ಬಟ್ಟು
0.7	ಕಣ್‌ಕಣ್ಣೆ (ಕಣ್‌ಕಣ್ಣ)	:	ಮಿಠಾಯಿ ಇತ್ಯಾದಿ.

ಇಂಥ ನಿರ್ದಿಷ್ಟತೆಯು ಹಿರಿಯರ, ವಿದ್ವಾಂಸರ, ಉಳ್ಳವರ ಮೇಲ್ಪಂಕ್ತಿಯನ್ನನುಸರಿಸಿ ಸಾಮಾಜಿಕ ಮರ್ಯಾದೆಯಿಂದಾಗಿ ರೂಢಿಗೊಳ್ಳುವುದನ್ನು ಕಾಲಕಾಲಕ್ಕೆ ಹೊಸದಾಗಿ ಸೇರಿರುವ ಭಕ್ಷ್ಯಗಳೂ ಧ್ವನಿಸುತ್ತವೆ. "ಲಾಡು ಭಕ್ಷ್ಯವಾಗಿ ಬಂದದ್ದೇ ಅರುವತ್ತು - ಎಪ್ಪತ್ತು ವರ್ಷಗಳ ಹಿಂದೆ ಎಂದು ಹೇಳಬಹುದು - ಅದೂ ಐಶ್ವರ್ಯವಂತರ ಮನೆಗಳಲ್ಲಿ ಮಾತ್ರ. ಸಾಮಾನ್ಯರ ಮನೆಯಲ್ಲಿ ಒಬ್ಬಟ್ಟು, ಆಂಬಡೆ, ಹುಳಿಅನ್ನ, ಪಾಯಸ ಇವೇ ಸಮಾರಾಧನೆಯ ಊಟ. ಎರಡು ಸಿಹಿ, ಎರಡು ಖಾರ ಅನ್ನುವುದೆಲ್ಲಾ ಈಚಿನ ಆಧುನಿಕ ಕೊಡುಗೆ." ದೇವರ ಸಮಾರಾಧನೆಯಲ್ಲಿ ನಿರ್ದಿಷ್ಟವಾಗಿ ಮಾಡುವ ಪೂರ್ಣದ ಒಬ್ಬಟ್ಟು ಪೂರ್ಣಾಯುಸ್ಸು ಕೋರುವ ಮಾಧ್ಯಮವೆಂಬ ನಂಬಿಕೆಯನ್ನು ಭವಿಷ್ಯದ ಅನಿಶ್ಚಿತತೆಯ ನಡುವೆ ಶುಭವನ್ನೇ ಕೋರುವ ಮನಸ್ಸು ತಳ್ಳಿಹಾಕುವುದು ಸಾಧ್ಯವಿಲ್ಲ. ಆದ್ದರಿಂದಲೇ ದಕ್ಷಿಣ ಮತ್ತು ಕರ್ನಾಟಕದಲ್ಲಿ ಅದು ಸಮಾನ ಸ್ವರೂಪದಲ್ಲಿ ಉಳಿಯುವುದು ಸಾಧ್ಯವಾಗಿದೆ. ಸಂತೋಷ-ಸಂದರ್ಭಗಳಲ್ಲಿ ಕೊಬ್ಬರಿ-ಸಕ್ಕರೆ ಹಂಚುವುದು, ವಿವಾಹದಲ್ಲಿ ಒಯ್ಯುವ ಬುತ್ತಿ, ಬೀಗರಿಗಾಗಿ ಮಾಡುವ ಔತಣ, ಗಂಡಿನವರು ಹೆಣ್ಣಿನವರಿಗೆ ಕೊಡುವ ಔತಣ (ಮಾಮ್ನೆ ಸಂತರ್ಪಣ, ಸಂಬಂಧಿಸ್ಸಾಪ್ಪಾಡ್), ಮನೆ ತುಂಬಿಸಿಕೊಂಡಾಗ ಸೊಸೆಗೆ ಹಾಲು ಹಣ್ಣು ಕೊಡುವುದು (ಸಕ್ಕರೆವಾಳಾಪ್ಪ ಕುಡರದ್), ಪ್ರಸ್ತದ ರಾತ್ರಿ ಹಾಲನ್ನವನ್ನೇ ಊಟ ಮಾಡುವುದು- ಮೊದಲಾದ ಸರ್ವಸಮಾನ ಸಂದರ್ಭಗಳ ಹಿಂದೆ ಇಂಥ ಸಾಂಸ್ಕೃತಿಕ ಕಾರಣಗಳನ್ನು ಗುರುತಿಸಬಹುದು. ಆದರೆ ತೀರ ಅಲ್ಪಸಂಖ್ಯಾತರಾಗಿ ಇತರ ಬಹುಸಂಖ್ಯಾತ ಬ್ರಾಹ್ಮಣರ ನಡುವೆ ಬಾಳುತ್ತಿರುವ ದಕ್ಷಿಣದ ಸಂಕೇತಿಗಳು ಆಹಾರದ ವಿಷಯದಲ್ಲಿಯೂ ಹೆಚ್ಚಿನ ಪರಪ್ರಭಾವಗಳಿಗೆ ಒಳಗಾಗಿರುವುದು ಸಹಜವಾಗಿದೆ. ಬಸುರಿಗೆ ಎಂಟನೆಯ ತಿಂಗಳಿನಲ್ಲಿ ನವಧಾನ್ಯದಲ್ಲಿ ಮಾಡುವ 'ವರವರಶಿ', ಮತ್ತು ಅಲ್ಲಿ ರೂಢಿಯಲ್ಲಿರದ ಮುರುಕು, ಅತಿರಸ, ಮನೋಹರ ಮೊದಲಾದ ಸಿಹಿಗಳು, ಇಂಥ ಅನೇಕ ನಿದರ್ಶನಗಳೂ ಅಂಥ ಭಿನ್ನತೆಗೆ ಸಾಕ್ಷಿಗಳು.

2. ಶ್ರಾದ್ಧದ ಅಡುಗೆಗಳು: ಭೀತಿ ಮತ್ತು ಭಕ್ತಿಮೂಲವಾದ ನಿಷ್ಠೆಯು ಸಂಪ್ರದಾಯವನ್ನು ಹೆಚ್ಚು ಗಾಢವಾಗಿ ಉಳಿಸಿಕೊಳ್ಳುವುದಕ್ಕೆ ಶ್ರಾದ್ಧಸಂದರ್ಭದ ಅಡುಗೆಗಳು ನಿಚ್ಚಳ ನಿದರ್ಶನಗಳಾಗಿವೆ. ಆದ್ದರಿಂದಲೇ 'ಕದಲಿ-ಪಂಚಕ'ದ ಗಾಢ ಸಾಮ್ಯವನ್ನು ಕಾಣುವುದು ಸಾಧ್ಯ. ಕನಿಷ್ಠ ಐದು ವಿಧದ ಪಲ್ಯಗಳು, ಗೊಜ್ಜು, ಮಜ್ಜಿಗೆಹುಳಿ, ಸಾರು, ಹಣ್ಣುಗಳು, ವಡೆ, ಬಜ್ಜಿ, ರವೆಉಂಡೆ, ಪಾಯಸ, ಕೋಡುಬಳೆ, ವಡೆ, ಇಡ್ಲಿ, ಎಳನೀರು ಮೊದಲಾದ ವಿವರಗಳಲ್ಲಿ ಪ್ರಾದೇಶಿಕವಾಗಿ ಆಂಶಿಕ ವ್ಯತ್ಯಾಸಗಳಿದ್ದರೂ ಸಮೃದ್ಧ ಆಹಾರದ ಮೂಲಕ ಪಿತೃಗಳನ್ನು ತೃಪ್ತಿಪಡಿಸುವ ಮೂಲಭೂತ ಆಶಯವನ್ನು ಸಮಾನವಾಗಿ ಗುರುತಿಸಬಹುದು. ಇಲ್ಲಿಯೂ, ಪಿತೃಗಳನ್ನು ಆವಾಹಿಸಿರುವ ಬ್ರಾಹ್ಮಣರು ಸಂಪೂರ್ಣತೃಪ್ತರಾಗಿ ಭೋಜನ ಮಾಡಿದರೆಂಬುದನ್ನು ಅವರು ಚೆಲ್ಲಿದ ಆಹಾರದ ಮೊತ್ತದಿಂದ ಅಳೆಯುವ ಪ್ರವೃತ್ತಿ ದೂರವಾಗಿರುವುದು ಆಧುನಿಕ ಶಿಕ್ಷಣಪ್ರೇರಿತ ಚಿಂತನೆಯಿಂದ ಎನ್ನುವಂತೆಯೇ, ಆರ್ಥಿಕ ಮಿತಿಯಿಂದಲೂ ಎಂಬುದು ಸತ್ಯವಾಗಿದೆ. ಆದರೆ ಪರಂಗಿ, ಆಲೂ, ಕೋಸು, ಮೂಲಂಗಿ ಮೊದಲಾದ ತರಕಾರಿಗಳು ಈಗಲೂ ನಿಷಿದ್ಧವಾಗಿಯೇ ಮುಂದುವರಿದಿರುವುದಕ್ಕೆ, ಶುದ್ಧ ಸಂಪ್ರದಾಯಬದ್ಧತೆಯೇ ಕಾರಣವಾಗಿರುವುದನ್ನು ಗುರುತಿಸಬಹುದು. ವರ್ಷವಿಡೀ 'ಸಾವಿನಮನೆ'ಯನ್ನು ಹಬ್ಬಗಳಿಗೆ ಆಮಂತ್ರಿಸುವುದು, ಸತ್ತ ವರ್ಷದೊಳಗೆ ಬಂಧುಗಳು ಸಿಹಿತಿಂಡಿಗಳು ಮತ್ತು ಕರಿದ ತಿಂಡಿಗಳನ್ನು ಕುಕ್ಕೆಗಳಲ್ಲಿ ತುಂಬಿಕೊಡುವುದು, ಗಂಡನು ಸತ್ತ ಹತ್ತನೆಯದಿನ 'ತವರುಮನೆ ತಣ್ಣಗಿರಲೆಂದು' ವಿಧವೆಯು ಅಲ್ಲಿ ಹೋಗಿ ಮೊಸರನ್ನ ಊಟಮಾಡಿ ಬರುವುದು, ಮೊದಲಾದ ಸಾಂಸ್ಕೃತಿಕ ವಿವರಗಳಂತೆಯೇ

ಇತರ ನಿಯಮಗಳಲ್ಲಿಯೂ ಸಾರ್ವತ್ರಿಕ ಸಾಮ್ಯ ಇರುವುದಕ್ಕೆ, ಸಾವಿಗೆ ಸಂಬಂಧಿಸಿದ ಆಚರಣೆಗಳಿಗೆ ಹೊಂದಿಕೊಂಡಂತೆ ಇರುವ ಹೆಚ್ಚಿನ ಶ್ರದ್ಧೆಯೇ ಕಾರಣವಾಗಿದೆ.

ಊ. ಅತಿಥಿ ಸತ್ಕಾರ:

ಭಾರತೀಯ ಸಂಸ್ಕೃತಿಯಲ್ಲಿ ಅತಿಥಿಸತ್ಕಾರಕ್ಕೆ ವಿಶೇಷ ಪ್ರಾಶಸ್ತ್ಯವಿದೆ. ವಿಭಿನ್ನ ಜಾತಿ ಬುಡಕಟ್ಟುಗಳ ಅತಿಥಿಸತ್ಕಾರದ ರೀತಿಗಳು ವೈಶಿಷ್ಟ್ಯಪೂರ್ಣವಾಗಿದ್ದರೂ ಅವುಗಳ ಮೂಲಭೂತ ಸ್ವರೂಪವು ಸಮಾನವಾದುದಾಗಿದೆ. ಈ ಹಿನ್ನೆಲೆಯಲ್ಲಿ, ಸಂಕೇತಿ ಸಮುದಾಯದಲ್ಲಿ ರೂಢಿಯಲ್ಲಿರುವ ಅತಿಥಿಸತ್ಕಾರ ವಿವರಗಳನ್ನು ನೋಡಬಹುದು:

ಸಂಕೇತಿಗಳಲ್ಲಿಯೂ ಪಂಚಮಹಾಯಜ್ಞಗಳ ಭಾಗವಾದ ಅತಿಥಿಸತ್ಕಾರವಾಗಲಿ, ಅರ್ಘ್ಯಪಾದ್ಯಾಚಮನೀಯಗಳ ಸತ್ಕಾರವಾಗಲಿ ಅಪರೂಪದ ಸಂದರ್ಭಗಳಿಗೆ ಮಿತಗೊಳ್ಳಲು, ಬದಲಾದ ಜೀವನಕ್ರಮವೇ ಕಾರಣವಾಗಿದೆ. ಆದರೆ ಅತಿಥಿಗಳ ಬಗೆಗಿನ ಆದರಭಾವ ವಿಶೇಷವಾಗಿಯೇ ಉಳಿದಿದೆ. ಕೆಲವು ವಿವರಗಳನ್ನು ಇಲ್ಲಿ ಅವಲೋಕಿಸಬಹುದು:

1. ಉಚ್ಚಸ್ವರದಲ್ಲಿ ಸ್ವಾಗತಸಂಭಾಷಣೆ ನಡೆಯುವುದರಲ್ಲಿ ಆತ್ಮೀಯತೆಯ ಗಾಢತೆ ಪ್ರಕಟವಾಗುತ್ತದೆ.

2. ಮಕ್ಕಳು ಹಾಗೂ ಹಿರಿಯರನ್ನು ಕಾಣಲು ಹಣ್ಣುಹಂಪಲು ಒಯ್ಯುವುದು ಸದ್ಭಾವದ ದ್ಯೋತಕ. ಮುತ್ತೈದೆಯರು ಯಾರದೇ ಮನೆಗೆ ಬರಿಗೈಯಲ್ಲಿ ಹೋಗದೆ 'ಕಡಲೆಬೆಲ್ಲ' ಒಯ್ಯುತ್ತಾರೆ. ಅಂತೆಯೇ ಹಾಗೆ ಬಂದಿದ್ದವರಿಗೆ ಆತಿಥ್ಯ ನೀಡುವುದರ ಜೊತೆಗೆ 'ಹಣೆಗೆ ಕುಂಕುಮವಿಟ್ಟು' ಕಳಿಸುತ್ತಾರೆ. ಪುಟ್ಟಮಕ್ಕಳಿಗೆ ಹಣ ನೀಡುವುದು ವಿಶೇಷರೂಢಿ. ಆದರೆ ಈಗ ಉಳಿದ ಮಕ್ಕಳಿಗೂ ಹಣಕೊಡುವ ಪದ್ಧತಿಯನ್ನು ಕಾಣುತ್ತೇವೆ. ಇದರಿಂದ ಎಲ್ಲರೊಡನೆ ಆತ್ಮೀಯತೆ ಬೆಳೆಯುವ ಸನ್ನಿವೇಶ ಕಲ್ಪಿತವಾಗುತ್ತದೆ.

3. ಅವರ ಯೋಗಕ್ಷೇಮ ವಿಚಾರಗಳಲ್ಲಿ ವ್ಯವಸಾಯ, ಕುಟುಂಬ ವ್ಯವಹಾರಗಳು, ಸಮುದಾಯದ ರೀತಿನೀತಿಗಳು, ಸಾರ್ವತ್ರಿಕ ಸಂಗತಿಗಳು ಅನುಕ್ರಮ ಪ್ರಾಶಸ್ತ್ಯದಲ್ಲಿ ಸೇರುತ್ತವೆ.

4. ಅಭ್ಯಂಗಸ್ನಾನ ಮತ್ತು ಶಾವಿಗೆಯ ಊಟ ಅತಿಥಿಗಳ ಆದರದ ಮುಖ್ಯ ಅಂಗಗಳು.

5. ಹತ್ತಿರ ಮತ್ತು ದೂರದ ಸಂಬಂಧಗಳು ಅಡುಗೆಯ ವೈವಿಧ್ಯದಲ್ಲಿ ವ್ಯಕ್ತವಾಗುವುದು ಈಚಿನ ರೀತಿಯಾದರೂ, ಅದು, ಅತಿದೂರದ ಸಂಬಂಧಿಗಳನ್ನೂ ವಾವೆ ಹಿಡಿದು ಕೂಗಿ ಪ್ರೀತಿಯ ಬಂಧವನ್ನು ಉಳಿಸಿಕೊಂಡಿದ್ದ ಹಿಂದಿನ ದಿನಗಳ ರೀತಿಯಲ್ಲ.

6. ಅತಿಥಿಗಳೊಂದಿಗೆ (ಪಕ್ಕದ ಹಳ್ಳಿಗಳಲ್ಲಿಯೇ ಎಲ್ಲ ಬಂಧುಗಳೂ ಇರುತ್ತಿದ್ದ ದಿನಗಳಲ್ಲಿ) ಅರ್ಧದೂರ ನಡೆದು ಕಳಿಸಿಬರುವುದು ('ವಳಿ ಉಡರದ್') ಆದರ, ಸದ್ಭಾವದೊಂದಿಗೆ ಗೌರವವನ್ನೂ ಮೂಡಿಸುವಂಥದು.

   ಅತಿಥಿಗಳನ್ನು ಉಪಾಯದಿಂದ ಹೊರಹಾಕುವ ಲೋಭಿಗಳ ಅಪರೂಪದ ಕತೆಗಳೂ ಸಮುದಾಯದಲ್ಲಿ ರಂಜಕವಾಗಿ ಪ್ರಚಾರದಲ್ಲಿರುವುದು ಲೋಭವನ್ನು ಒಪ್ಪದ ಮನೋಧರ್ಮವನ್ನೇ ಸೂಚಿಸುತ್ತದೆ.

ಋ. ಭೋಜನ ಮತ್ತು ನಿಯಮಬದ್ಧತೆ:

ಭೋಜನವು ರುಚಿಕರವೂ ಪುಷ್ಟಿಕರವೂ ಆದರೆ ಸಾಲದು; ಊಟ ಮಾಡುವ ಪರಿಸರ, ಮನಃಸ್ಥಿತಿಯೂ ಮುಖ್ಯವಾದುದು ಎಂಬುದನ್ನು ವೈದ್ಯಶಾಸ್ತ್ರವೂ ಒಪ್ಪುತ್ತದೆ. ಸಂಕೇತಿಗಳಲ್ಲಿ ಅಡುಗೆ ಮತ್ತು ಊಟಕ್ಕೆ ಸಂಬಂಧಿಸಿದಂತೆ ಇರುವ ಕ್ರಮಬದ್ಧತೆಯನ್ನು ಇಲ್ಲಿ ನೋಡಬಹುದು:

1. ಊಟಮಾಡಲು ಎಲೆಯು ಮಾತ್ರ ಲಭ್ಯವಾಗುತ್ತಿದ್ದ ದಿನಗಳ ಜಾಗದಲ್ಲಿ ಲೋಹದ ತಟ್ಟೆಗಳು ಬಂದಾಗ ಎಲೆಗೆ 'ಸಂಪ್ರದಾಯ' ಮತ್ತು 'ಮಡಿ'ಯ ಪಟ್ಟ ಬಂದಿತು. ನಿಧಾನವಾಗಿ ಲೋಹದತಟ್ಟೆಗಳನ್ನು ಸ್ವೀಕರಿಸಿದಾಗಲೂ 'ಬೆಳ್ಳಿ'ಯ ತಟ್ಟೆ ಮಾತ್ರ ಮಡಿಗೆ

ಮಾನ್ಯವಾದುದು ಅದರ ಸ್ಥಾನಮಾನದಿಂದ ಎಂಬುದು ಸ್ಪಷ್ಟ. ಅಲ್ಯುಮಿನಿಯಂ, ಸ್ಟೀಲ್‌ತಟ್ಟೆಗಳು ಆರ್ಥಿಕ ಅನಿವಾರ್ಯತೆಯಿಂದಾಗಿ ನಿಧಾನವಾಗಿ ಮಾನ್ಯವಾದವು.

2. ಬಾಳೆಎಲೆಯು ಪ್ರಾಚೀನಕಾಲದಿಂದ ತನ್ನ ಜೊತೆಗೆ ಉಳಿಸಿಕೊಂಡು ಬಂದ ಕೆಲವು ಕ್ರಮಗಳು ಇವು: ಕುಳಿತವರ ಎಡಕ್ಕೆ ಸುಳಿಬರಬೇಕು, ಹೆಂಗಸರಿಗೆ ಸುಳಿ ಮುಂದೆ ಬರುವಂತೆ ಎಲೆ ಹಾಕಬಹುದು; ದೊನ್ನೆ, ಕುಳಿತವರ ಬಲಕ್ಕೆ; ಶುಭದಲ್ಲಿ ಅಡಿಕೆಪಟ್ಟೆ ನಿಷಿದ್ಧ; ನಾಲ್ಕು ಸೀಳುಗಳ ಮೇಲೆ ಎರಡು ಸುಳಿಬಾಳೆ ಎಲೆಗಳು ಶ್ರಾದ್ಧಕ್ಕೆ - ಇವುಗಳ ಹಿಂದೆ ಗುರುತಿಸಬಹುದಾದುದು ಸೌಲಭ್ಯಾಕಾಂಕ್ಷೆಯನ್ನು. ಆದರೆ, 'ಪದ್ಧತಿ'ಯು ಹೆಚ್ಚು ಹಳತಾದಂತೆ ಅದಕ್ಕೆ ಹೆಚ್ಚು 'ಅಲೌಕಿಕ ಆವರಣವೂ ಒದಗುವುದಕ್ಕೆ ಇವು ಸಾಕ್ಷಿಗಳು.'


3. ಅಭಿಮಾನ ಮತ್ತು ತೀವ್ರ ಚರ್ಚೆಗೆ ಆಕರವಾಗುವ ಸಂಗತಿಗಳಲ್ಲಿ ಬಡಿಸುವ ಕ್ರಮದ ಪ್ರಾದೇಶಿಕ ವೈಶಿಷ್ಟ್ಯವೂ ಒಂದು. ಪ್ರದಕ್ಷಿಣಾಕಾರವಾಗಿ ಬಡಿಸುವ ಎಲ್ಲೆಡೆಯ ಕ್ರಮವು ಹೇಗೋ ಹಾಗೆಯೇ 'ದಿಕ್ಕುಶುದ್ಧಿ'ಯಾಗಿ ಬಡಿಸುವ ಮಧ್ಯದೇಶ ಮತ್ತು ಹಾಸನಸೀಮೆಯ ಕ್ರಮವೂ ಇತರ ಧಾರ್ಮಿಕಾಚರಣೆಗಳ ಹಿನ್ನೆಲೆಯಿಂದ ನಿಷ್ಪನ್ನವಾದುದೇ. ಆದರೆ, ಎಲ್ಲ ದಿಕ್ಕಿಗೂ ಮುಖಮಾಡಿ ಊಟಕ್ಕೆ ಕೂರುವುದರೊಂದಿಗೆ 'ದಿಕ್ಕುಶುದ್ಧಿ'ಯ ಆಶಯವೂ ಸೋತುದನ್ನು ಅಲ್ಲಿ ಕಾಣಬಹುದು. ನಿತ್ಯ ಮತ್ತು ಅಪರಗಳ ನಡುವೆ ಎಲ್ಲದರಲ್ಲೂ ಭಿನ್ನತೆಯನ್ನು ಕಾಣುವ ಮಧ್ಯದೇಶದ ಮನಸ್ಸು, ಬಡಿಸುವ ಕ್ರಮದ ಸಾರ್ವತ್ರಿಕ ಮೂಲರೂಪವನ್ನು ಶ್ರಾದ್ಧಸಂದರ್ಭದಲ್ಲಿ ಮಾತ್ರ ಉಳಿಸಿಕೊಂಡಿದೆ ಎಂಬುದು, ಉಳಿದ ಸಂದರ್ಭಗಳಿಗಿಂತ ಹೆಚ್ಚಾಗಿ ಸಾಂಸ್ಕೃತಿಕ ಮೂಲರೂಪಗಳು ಶ್ರಾದ್ಧದಲ್ಲಿ ಉಳಿದಿರುವುದರ ನಿದರ್ಶನ.

4. ಶ್ರಾದ್ಧಗಳಲ್ಲಿ ಗೊಜ್ಜು ಮಾಡುವುದರಿಂದ ಹಬ್ಬಗಳಲ್ಲಿ ಅದು ನಿಷಿದ್ಧ. ಹಬ್ಬಗಳಲ್ಲಿ ಗೊಜ್ಜು ಮಾಡಿದರೆ ಅದರೊಂದಿಗೆ ಮಜ್ಜಿಗೆಹುಳಿಯೂ ಇರಲೇಬೇಕೆಂಬುದು-ಅಪರಕ್ಕೆ ಸಂಬಂಧಿಸಿದ ಸಂಗತಿಗಳ ಬಗೆಗೆ ಇರುವ ಭೀತಿ; ಉಳಿದ ಸಂದರ್ಭಗಳಲ್ಲಿ ಅದಕ್ಕೆ ವಿರುದ್ಧವಾದುದನ್ನು ಆಚರಿಸುವ ಮೂಲಕ ಮಂಗಳವನ್ನಾಶಿಸುವುದು; ಆ ಮೂಲಕ ವಿಧಿನಿಷೇಧಗಳ ಸಂಕೀರ್ಣ ಬೆಳವಣಿಗೆ - ಇವುಗಳ ಒಂದು ಪ್ರಾತಿನಿಧಿಕ ಸಂಗತಿಯಾಗಿದೆ.

5. ಬಡಿಸುವ ಪದಾರ್ಥಗಳ ಅನುಕ್ರಮದಲ್ಲಿ ಕಾಣುವ ಪ್ರಾದೇಶಿಕ ವ್ಯತ್ಯಾಸಗಳು ಪ್ರಾದೇಶಿಕ ಪ್ರಭಾವದಿಂದ ಬಂದವು ಇಲ್ಲವೆ ಮೂಲ ಸಾಮಾನ್ಯಪದ್ಧತಿಯ ವಿಕೃತಿಗಳು. ಉದಾಹರಣೆಗೆ,

ಮಧ್ಯದೇಶದಲ್ಲಿ - ಉಪ್ಪಿನಕಾಯಿ, ಎರಡು ಕೋಸುಂಬರಿ, ಎರಡು ಪಲ್ಯ, ಸಂಡಿಗೆ, ಎಲೆತುದಿಗೆ ಪಾಯಸ, ಅನ್ನ, ಹಪ್ಪಳ, ತೊವ್ವೆ, ಅಭಿಗಾರ - ಇದು ಬಡಿಸುವ ಕ್ರಮ.

ಸಂಕೇತಿಗಳ ವಿವಿಧ ಉಪಪಂಗಡಗಳಲ್ಲಿ ರೂಢಿಯಲ್ಲಿರುವ ಊಟಬಡಿಸುವ ಕ್ರಮಗಳಲ್ಲಿ ಒಂದರ ರೀತಿಯನ್ನು ಇಲ್ಲಿ ಚಿತ್ರಿಸಿದೆ: (ಚಿತ್ರ 44)



44 ಊಟ ಬಡಿಸುವ ಕ್ರಮ

ಹೀಗೆಯೇ ಇತರ ಪ್ರದೇಶಗಳ ಕ್ರಮಗಳನ್ನೂ ಇಲ್ಲಿ ಗಮನಿಸಬಹುದು:

ಬೆಟ್ಟದಪುರ	:	ಉಪ್ಪಿನಕಾಯಿ, ಕೋಸುಂಬರಿ, ಪಲ್ಯ, ಅನ್ನ, ತೊವ್ವೆ, ಪಾಯಸ ಅಭಿಘಾರ.
ಲಿಂಗದಹಳ್ಳಿ	:	ಪಾಯಸ, ಪಲ್ಯ, ಕೋಸುಂಬರಿ, ಉಪ್ಪಿನಕಾಯಿ, ಉಪ್ಪು, ಅನ್ನ, ತೊವ್ವೆ, ಅಭಿಘಾರ.
ಮತ್ತೂರು	:	ವಾಮೆ, ಕೋಸುಂಬರಿ, ಪಲ್ಯ, ಪಾಯಸ, ಅನ್ನ, ಭಕ್ಷ್ಯ, ಚಿತ್ರಾನ್ನ, ತೊವ್ವೆ, ಅಭಿಘಾರ.
ದಕ್ಷಿಣ	:	ಪಾಯಸ, ಪಲ್ಯ, ಅನ್ನ, ಬೇಳೆ, ತುಪ್ಪ.

-ಸಾರು, ತೊವ್ವೆ (ಪರಪ್)ಗೆ ಅನ್ನ, ತೊವ್ವೆ, ಮಜ್ಜಿಗೆಹುಳಿ, ಸಿಹಿ, ಹುಳಿಅನ್ನ(ಕಾರ) ಸಿಹಿ, ಮತ್ತೊಂದುಕಾರ, ಮಜ್ಜಿಗೆಗೆ ಅನ್ನ, ಮಜ್ಜಿಗೆ -ಇದು ಊಟದ, ಮುಂದಿನ ಕ್ರಮಬದ್ಧ ಭಾಗ.

6. ಶುಭದಲ್ಲಿ ಎರಡು ಪಲ್ಯ, ಎರಡು ಕೋಸುಂಬರಿ ಇರಲೇಬೇಕೆಂಬ ನಿಯಮವು ಒಂದೊಂದಕ್ಕೆ ಇಳಿಯುವುದು (ಆಗ ಹೆಸರು ಬೇಳೆ ಕೋಸಂಬರಿ ಮಾಡುವಂತಿಲ್ಲ) ಸೌಲಭ್ಯಾಕಾಂಕ್ಷೆಯಿಂದ ಮಾಡಿಕೊಂಡ ರಾಜಿಗಳ ಒಂದು ಸಣ್ಣ ನಿದರ್ಶನ.



45 ಉಪಾಹಾರ ಅಥವಾ ಭೋಜನಕ್ಕೆ ಸುಳಿಬಾಳೆ ಎಲೆ ಹಾಸಿ ಅದರ ಮುಂದೆ ರಂಗೋಲಿಯ ಅಲಂಕಾರ ಮಾಡುವುದು.

7. ವಾದ್ಯಸಮೇತ ಹೋಗಿ ಮಂತ್ರಾಕ್ಷತೆ ಇಟ್ಟು ಊಟಕ್ಕೆ ಕರೆಯುವುದು, ಮದುವೆ ಮುಂಜಿ ಮೊದಲಾದ ಸಂಭ್ರಮದ ಸಂದರ್ಭಗಳಲ್ಲೆಲ್ಲಾ ಸುಳಿಬಾಳೆ ಎಲೆಯನ್ನೇ ಹಾಸಿ ರಂಗೋಲಿಯ ಅಲಂಕಾರವಮಾಡಿ ದೀಪಹೊತ್ತಿಸುವುದು (ಚಿತ್ರ 45). - ಧಾರ್ಮಿಕ ಚೌಕಟ್ಟಿನಲ್ಲಿಯೇ ನಡೆಯುವ ವೈಭವವಾಗುತ್ತದೆ. ಊಟಕ್ಕೆ ಮೊದಲು ನಡೆಯುವ ಅನ್ನಪೂಜೆ, ಸ್ವಸ್ತಿವಾಚನ ,ಊಟದ ನಡುವೆ ನಡೆಯುವ ದೈವಸ್ಮರಣೆಗಳು;[4] ಊಟದನಂತರದ ವಂದನಾರ್ಪಣೆ, ಆಶೀರ್ವಚನ ಕೂಡ, ಊಟದ ಬಗೆಗಿನ ನಿಯಮಗಳು ಉಂಟುಮಾಡುವ ವಿಶಿಷ್ಟ ಮಾನಸಿಕ ಪರಿಣಾಮಗಳ ಸಂದರ್ಭಗಳಾಗಿವೆ. ಒಟ್ಟಿನಲ್ಲಿ, ಅಡುಗೆ ಮತ್ತು ಊಟಕ್ಕೆ ಸಂಬಂಧಿಸಿದಂತೆಯೂ ಹೆಜ್ಜೆಹೆಜ್ಜೆಗೂ ನಿಯಮಗಳು, ವಿಧಿನಿಷೇಧಗಳು ಇಡಿಕಿರಿದಿರುವುದು ಕಾಣಿಸುತ್ತದೆ. ಜೊತೆಗೆ, ಸಂಕೇತಿಗಳ ವೈಶಿಷ್ಟ್ಯಗಳು ಊಟೋಪಚಾರಗಳಿಗೆ ಸಂಬಂಧಿಸಿದಂತೆಯೂ ಇಲ್ಲಿ ನಿಚ್ಚಳವಾಗುತ್ತವೆ.

೩೦. ತಿನಿಸುಗಳು:

ತಮ್ಮ ಶಾಸ್ತ್ರಾಚಾರಗಳು ಮತ್ತು ಸಂಪ್ರದಾಯಗಳನ್ನೆಲ್ಲಾ ಆರ್ಥಿಕ ಇತಿಮಿತಿಯಲ್ಲಿಯೇ ಪಾಲಿಸುವಾಗಿನ ತಿನಿಸುಗಳ ವೈವಿಧ್ಯ ದೊಡ್ಡದಾಗಿ ಕಾಣುವುದಿಲ್ಲ. "ಹಿಂದೆಲ್ಲಾ ಒಬ್ಬಟ್ಟು ಜಾಸ್ತಿ ಮಾಡುತ್ತಿದ್ದರು. ಚಿರೋಟಿ, ಲಾಡು, ಮೈಸೂರುಪಾಕು, ಜಹಂಗೀರು ಇಲ್ಲವೇಇಲ್ಲ. ಕಾಯಿಒಬ್ಬಟ್ಟು, ಸಕ್ಕರೆ ಒಬ್ಬಟ್ಟು ಹೆಚ್ಚು . . . ಸಮಾರಂಭಗಳಲ್ಲಿ, ಭಾರಿ ಸಾಹುಕಾರರಾದರೆ ಚಿರೋಟಿ, ಲಾಡು, ಒಬ್ಬಟ್ಟು, ಆಂಬೊಡೆ

4 ಸಮಾರಾಧನೆಗಳಲ್ಲಿ, ಭೋಜನವು ಸಾಗಿದಂತೆ, ಹಾಡಬಲ್ಲವರು ದೇವರನಾಮಗಳು, ಶ್ಲೋಕಗಳು, ಕೀರ್ತನೆಗಳನ್ನು ಹಾಡುತ್ತಾರೆ. ಹಾಡುಮುಗಿದಾಗ ಭೋಜನಾಂತದಲ್ಲಿ,
ಭೋಜನಕಾಲೇ ಶ್ರೀಲಕ್ಷ್ಮೀಕಾಂತಸ್ಮರಣಾ - ಗೋವಿಂದಾ
ಪುಂಡರೀಕ ವರದ ಗೋವಿಂದಾ - ಗೋವಿಂದಾ
ಹರನಮಃ ಪಾರ್ವತೀಪತಯೇ - ಹರಹರಮಹಾದೇವಾ
ಇತ್ಯಾದಿಯಾಗಿ ಸಾಮೂಹಿಕಘೋಷಣೆ ಮಾಡಿ ದೈವಸ್ಮರಣೆ ಮಾಡುತ್ತಾರೆ.

ಮಾಡಿಸುತ್ತಿದ್ದರು. ಅಳಿಯನನ್ನು ಗೋಕುಲಾಷ್ಟಮಿ ಮುಂತಾದುವಕ್ಕೆ ಕರೆದಾಗ ಚಿರೋಟಿ ಮಾಡಿಸುತ್ತಿದ್ದರು. ಮಿಠಾಯಿಯೂ ಒಂದು 'ಭಕ್ಷ್ಯ'ವಾಗಿತ್ತು . . . " ಖಾರವೂ ಹುಳಿಅನ್ನ, ಆಂಬೊಡೆ, ಮಜ್ಜಿಗೆಹುಳಿ; ಕಾರಾಶಾವೆ ಇರಲಿಲ್ಲ. ಬೋಂಡ ಹಿಂದಿನಿಂದಲೂ ಇತ್ತು. ನಂಚಿಕೆಗೆ ಚಟ್ನಿ, ಗೊಜ್ಜು, ಉಪ್ಪಿನಕಾಯಿ; ಸಾಗು ಇಲ್ಲ. ನಲ್ಲಿ, ನಿಂಬೆ, ಹೆರಳೆ, ಅಮಟೆ - ಉಪ್ಪಿನಕಾಯಿ ಇದ್ದರೂ ವರ್ಷಬಾಳುವ ಮಿಡಿಉಪ್ಪಿನಕಾಯಿ ಅವರ ವೈಶಿಷ್ಟ್ಯ. ಹಪ್ಪಳ, ಸಂಡಿಗೆ - ಸಮಾರಂಭಗಳಿಗೆ, ಅತಿಥಿಗಳು ಬಂದಾಗ; ಹಬ್ಬಗಳಿಗಿಲ್ಲ. ಅವೂ ವರ್ಷಾಕಾಲ ಬಾಳಿಕೆಗೆ ಬರುವಂಥವು. ಕರಿದ ಪದಾರ್ಥಗಳು ತಿಂಗಳ ಬಳಕೆಯವು. ಸಾಂಪ್ರದಾಯಿಕ ಭಕ್ಷ್ಯಗಳು ಮಿತವಾದವು, ಮತ್ತು ಅವುಗಳ ನಿರ್ದಿಷ್ಟ ಉದ್ದೇಶ, ಸೌಲಭ್ಯಾಕಾಂಕ್ಷೆಯೇ. ತಿನಿಸುಗಳ ಸಂಖ್ಯೆ ಮತ್ತು ವಿಧಗಳು ಹೀಗೆ ಮಿತವಾಗಿ ಕಂಡರೂ ರುಚಿ ವೈವಿಧ್ಯದ ವ್ಯಾಪ್ತಿ ದೊಡ್ಡದು. ಉದಾಹರಣೆಗೆ ಉಂಡೆಯ ವೈವಿಧ್ಯವನ್ನೇ ಗಮನಿಸಬಹುದು: ರವೆ, ಪುಳ್ಳಂಗಾಯಿ, ಕಡ್ಲೆಕಾಯಿಬೀಜ, ಕುಂಬಳಬೀಜ, ಎಳ್ಳು, ಅವಲಕ್ಕಿಪುಡಿ, ಕೊಬ್ಬರಿ, ಗಸಗಸೆ, ಹುರಿಗಡಲೆ, ಬತ್ತದಅರಳು, ಬೆರಕೆ, ಮೈದಾ, ಚಿಗಳಿ ಮುಂತಾದವುಗಳ ಉಂಡೆಗಳು ರುಚಿಯಲ್ಲಿ, ಗಾತ್ರದಲ್ಲಿ, ನೋಟದಲ್ಲಿ ಆಕರ್ಷಕವೂ, ಆಸ್ವಾದನೀಯವೂ ಆಗಿರುತ್ತವೆ. ಹಾಗೆಯೇ, ಪಾಯಸದಲ್ಲಿ - ಗಸಗಸೆ, ಶಾವಿಗೆ, ಕಡಲೆಬೇಳೆ, ಹೆಸರುಬೇಳೆ, ರವೆ, ಕುಂಬಳಬೀಜ, ಕೊಬ್ಬರಿಹಾಲು, ಬಾದಾಮಿಹಾಲು, ಕಾಯಿಹಾಲು, ಸೇವಿಗೆ, ಹಾಲುಕೀರು (ದಕ್ಷಿಣದಲ್ಲಿ ವಿಶೇಷವಾಗಿ ಹಲಸು, ಬಾದಾಮಿ, ಅಡಪಾಯಸ) ಇತ್ಯಾದಿ. - ಹೀಗೆ ವಿಪುಲ ರುಚಿವೈವಿಧ್ಯವನ್ನು ಕಾಣಬಹುದು. ವೈಷ್ಣವರೊಂದಿಗೆ ಗಾಢವಾಗಿ ಹೊಂದಿಕೊಂಡ 'ಹಯಗ್ರೀವ' (ಸಿಹಿ) ಲಿಂಗದಹಳ್ಳಿ ಸಂಕೇತಿಗಳಲ್ಲಿಯೂ ಸಾಂಸ್ಕೃತಿಕವಾಗಿ ಸೇರಿರುವುದೇ, ಆಹಾರ ಪಾನೀಯಗಳ ವಿಷಯದಲ್ಲಿಯೂ ಆಗಿರುವ ಕೊಳು-ಕೊಡೆಗಳ ಪ್ರಕ್ರಿಯೆಗೆ ಉತ್ತಮ ನಿದರ್ಶನವಾಗಿದೆ. ಸಂಕೇತಿಗಳಲ್ಲಿ ರೂಢಿಯಲ್ಲಿಲ್ಲದ, ಆದರೆ ವೈಷ್ಣವರಲ್ಲಿ ಪದ್ಧತಿಯಾಗಿರುವ, ಬಡಿಸುವ ಪ್ರಾರಂಭದಲ್ಲಿಯೇ, ಮಾಡಿರುವ ಅಡುಗೆಯನ್ನೆಲ್ಲಾ ಪ್ರಾತಿನಿಧಿಕವಾಗಿ ಬಡಿಸುವುದೂ ಅವರಲ್ಲಿಯೇ ಸೇರಿರುವ ಒಂದು ಅಂಶವಾಗಿದೆ.

ಸಂಕೇತಿಗಳ ಅಧಿಕಬಳಕೆಯ ಕೆಲವು ತಿನಿಸುಗಳು - ಶಾವಿಗೆ, ಕೊಳ್‌ಚಟ್ನಿಪುಡಿ, ದುರ್ಗಮ್ಮನ ಉಂಡೆ (ಸುಖೀನ್‌ಉಂಡೆ), ನೀರ್‌ಪಿಳಿ, ಪುಟ್ಟು ಇತ್ಯಾದಿ. ಶಾವಿಗೆಯಂತೆ ಸಮುದಾಯಕ್ಕೆ ಹೊಂದಿಕೊಂಡ ತಿನಿಸು ಮತ್ತೊಂದಿಲ್ಲ. ಈಗ ಒರಟಾಗಿ ಕಂಡರೂ, ಅವರ ತಾಂತ್ರಿಕತೆಯ ನಿದರ್ಶನ ಪ್ರತಿ ಅಡುಗೆಮನೆಯಲ್ಲಿದ್ದ ಶಾವಿಗೆಯಂತ್ರ. ಗೋಡೆಗೆ ಒಂದು ಅಡಿ ಅಳತೆಯ ಬಿದಿರಿನ ಕೊಳವೆಯನ್ನು ಹುಗಿಯುವುದು; ಒಂದು ತೊಲೆಯ ತುಂಡಿನಲ್ಲಿ ಶಾವಿಗೆಒರಳು(ಬಿಲ್ಲೆ); ಕೊಂತಕ್ಕೆ ಮರದತುಂಡು. ಒರಳನ್ನು ಬಳ್ಳದ ಮೇಲೆ ಇಟ್ಟುಕೊಳ್ಳುವುದು; ಅದರ ಮೇಲೆ ಕೊಂತ ಇಡುವುದು; ಗೂಡಿಗೆ ಹಾರೆಹಾಕಿ ಅಮುಕುವುದು- ಇದು ಶಾವಿಗೆ ಮಾಡುವ ವಿಧಾನ. (ಮುಂದೆ ದೊಡ್ಡ ದೊಡ್ಡ ಶಾವಿಗೆ ಯಂತ್ರಗಳನ್ನು ಮರದಿಂದಲೇ ಮಾಡಿದರು; ಅದನ್ನೇ ಸಣ್ಣ ಮತ್ತು ಸುಲಭವಾದ ಯಂತ್ರಗಳಾಗಿ ಪರಿವರ್ತಿಸಿದರು). ಶಾವಿಗೆ ಯಂತ್ರಗಳ (ಚಿತ್ರ 46) ಇತಿಹಾಸ ಮತ್ತು ಸಂಕೇತಿಗಳೊಂದಿಗೆ ಈ ತಿನಿಸಿನ ಗಾಢ ತಾದಾತ್ಮ್ಯ ಇವುಗಳು ಪರಸ್ಪರ ಹೊಂದಿಕೊಂಡು ಸಾಗಿರುವುದನ್ನು ಇಲ್ಲಿ ಗುರುತಿಸುವುದು ಸಾಧ್ಯ.



46 ಬಳ್ಳದ ಮೇಲೆ ಒರಳನ್ನಿಟ್ಟು ಶಾವಿಗೆ ಒತ್ತುವ ಕ್ರಮ ಈಗಲೂ ದಕ್ಷಿಣದಲ್ಲಿ ರೂಢಿಯಲ್ಲಿದೆ. ಈಗ ಪ್ರಚಲಿತವಾದ ಶಾವಿಗೆ ಯಂತ್ರಗಳ ಸುಧಾರಿತ ಸ್ಥಿತಿಯನ್ನು ಚಿತ್ರದಲ್ಲಿ ಕಾಣಬಹುದು.

ಎ. ಆರೈಕೆ: ಆಚಾರ, ವೈದ್ಯ:

ಸಮುದಾಯದ ಸುಮಾರು ಒಂದೂವರೆ ಶತಮಾನದ ಇತಿಹಾಸದಲ್ಲಿ ವ್ಯಕ್ತವಾಗುವಂತೆ 'ವೈದ್ಯ'ವೆಂಬುದು ಅವರಿಗೆ ವೃತ್ತಿಯಲ್ಲದಿದ್ದರೂ, ಹವ್ಯಾಸವಾಗಿತ್ತು. ಅವರ ಷೋಡಶ ಸಂಸ್ಕಾರಗಳು ಜೀವಿಯನ್ನು ಉದಾತ್ತಗೊಳಿಸುವ ಆಶಯ ಹೊಂದಿದಂಥವು. ಶರೀರವ್ಯಾಧಿಗಳ ಪರಿಹಾರಕ್ಕಾಗಿಯೂ ಸೂರ್ಯನಮಸ್ಕಾರ, ಚಂಡೀಹೋಮ, ವೇದಪಾರಾಯಣ ಮೊದಲಾದ ಧಾರ್ಮಿಕವಿಧಿಗಳನ್ನು ಆಚರಿಸುವ ಇವರು

ತಾಯಿತ, ಯಂತ್ರಗಳು ಮತ್ತು ನಿವಾಳಿಸುವ ಕ್ರಮಗಳನ್ನೂ ಅನುಸರಿಸುತ್ತಾರೆ. ಜನರಿಗೆ ಹೇಗೋ ಹಾಗೆಯೇ ತಮ್ಮ ರಾಸುಗಳಿಗೂ ಔಷಧ ಚಿಕಿತ್ಸೆ ಮಾಡುವ ಪರಂಪರೆಯೂ ಅವರಲ್ಲಿದೆ. ಅವರ ವೈದ್ಯದ ವಿವರವಾದ ಅವಲೋಕನವು ಇಲ್ಲಿನ ಉದ್ದೇಶವಲ್ಲ; ಬದಲು, ಆಹಾರಕ್ರಮಕ್ಕೆ ಹೊಂದಿಕೊಂಡಂತೆ ಆರೈಕೆ, ಆಚಾರ, ವೈದ್ಯದ ಚಿತ್ರಕೊಡುವುದು.

1. ಅವರ ಪಾರಂಪರಿಕ ನೇರವೈದ್ಯದ ಪ್ರಾತಿನಿಧಿಕ ನಿದರ್ಶನಗಳನ್ನು ಮೊದಲಿಗೆ ಕೇವಲ ಪರಿಚಯಾತ್ಮಕವಾಗಿ ಇಲ್ಲಿ ಉಲ್ಲೇಖಿಸಬಹುದು. ಸಂಕೇತಿಸಮುದಾಯದಲ್ಲಿ ಆಚರಣೆಯಲ್ಲಿರುವ ಕೆಲವು ವೈದ್ಯವಿಧಾನಗಳು ಭಯ ಹುಟ್ಟಿಸುವಂಥವು. ಉದಾಹರಣೆಗೆ ಚಿಟಿಕೆ ಹಾಕುವುದು (ಬಳೆಗಾಜು ಕಾಯಿಸಿ ನೆತ್ತಿ, ಹಣತಲೆ, ಎದೆಗೆ ಬರೆಹಾಕಿ ನೆಗಡಿ, ಶೀತವನ್ನು ಪರಿಹರಿಸುವುದು - 'ಚಿಟಿಕೆ ವಯ್ಯರದ್'). ಆದರೆ ಎಲ್ಲಾ ಚಿಕಿತ್ಸೆಗಳು ಈ ಬಗೆಯವಲ್ಲ. ಸರಳ ಚಿಕಿತ್ಸೆಗಳೂ ಇವೆ. ಉದಾಹರಣೆಗೆ, ಬಿಳಿಗುಲಗಂಜಿಸೊಪ್ಪು ಅರೆದು ಮೆತ್ತಿ ನಿಂಬೆರಸ ಬಿಡುತ್ತಿದ್ದರೆ ಉರಿಮಂಡಲದ ಕೊಳೆತ ನಿಲ್ಲುತ್ತದೆ. ಕೆಲವು ನಿಂದ್ಯವಾದ ಚಿಕಿತ್ಸೆಗಳಾಗಿವೆ. ಉದಾಹರಣೆಗೆ, ರಕ್ತಬಂದ ಗಾಯಕ್ಕೆ ನಶ್ಯ ಮೆತ್ತುವುದು, ಬೆರಣಿಪುಡಿ ಹಾಕುವುದು. ಇವುಗಳ ಜೊತೆಗೆ ಯಂತ್ರ-ತಂತ್ರಗಳ ಬಳಕೆಯೂ ಇದೆ. ಉದಾಹರಣೆಗೆ, ಕಾಲು ಊದಿದರೆ ಇಂದ್ರಾಕ್ಷಿ ಹೇಳಿ ಕುಯಗತ್ತಿ ತಾಗಿಸಿ 'ಉಫ್' ಎಂದು ಊದುವುದು ಇತ್ಯಾದಿ. ಈ ಬಗೆಯ ನಾನಾ ತೆರದ ದೇಶೀವೈದ್ಯ ಅಥವಾ ಮನೆಮನೆಗಳಲ್ಲಿದ್ದ ನಾಟೀವೈದ್ಯದ ಪರಂಪರೆ ಈಗ ನಶಿಸಿ ಕೆಲವೇ ಕುಟುಂಬಗಳಲ್ಲಿ ಅಲ್ಪ ಪ್ರಮಾಣದಲ್ಲಿ ಅಳಿದುಳಿದಿದೆ. ಹೀಗಾಗಿ ಮೊದಲಿಗೆ ಕಂಡುಬರುತ್ತಿದ್ದ ಪ್ರಯೋಗನಿಖರತೆ ಮಸುಕಾಗಿದೆ. ಉಳಿದುಕೊಂಡುಬಂದ ವಿವರಗಳೂ ಖಚಿತ ಪರಿಣಾಮಗಳಿಂದ ಕೂಡಿಲ್ಲ. ಸಮುದಾಯದ ಜನರಲ್ಲಿ ಶೇಕಡ ತೊಂಬತ್ತೊಂಬತ್ತು ಮಂದಿ ಆಂಗ್ಲವೈದ್ಯಪದ್ಧತಿಯ ಅನುಸರಣೆಗೆ ಒಳಗಾಗಿದ್ದಾರೆ. ಹೀಗಾಗಿ ಸಾಂಪ್ರದಾಯಿಕ ವೈದ್ಯದ ಅಂಶಗಳು ಕೇವಲ ಪೂರ್ವಾಚಾರ ಹಾಗೂ ಪ್ರಾಚೀನಪದ್ಧತಿಗಳನ್ನು ಉಳಿಸಿಕೊಂಡುಬಂದ ಕೆಲವಾರು ಹಳೆಯ ಕುಟುಂಬಗಳಲ್ಲಿ ಮಾತ್ರ ಕಾಣುತ್ತವೆ.


47 ಹುಡುಗಿ ದೊಡ್ಡವಳಾದಾಗ: ಮಡಿಲು ತುಂಬುವುದು

2. ಹುಡುಗಿ ದೊಡ್ಡವಳಾದಾಗ, ಬಸುರಿಯಾದಾಗ, ಹೆರಿಗೆಯಾದಾಗ ಇರುವ ಅನೇಕ ಆಚಾರಗಳು ವ್ಯಕ್ತಿಗೆ ಧೈರ್ಯತುಂಬುವ, ಮನಸ್ಸನ್ನು ಪ್ರಫುಲ್ಲವಾಗಿಡುವ, ಕೀಳರಿಮೆ ತೊಡೆಯುವ, ಬದಲಾದ ದೈಹಿಕ ಸ್ಥಿತಿಗಳಿಗೆ ಮನಸ್ಸನ್ನು ಹದಗೊಳಿಸುವ ಉದ್ದೇಶದವು. ಉದಾಹರಣೆಗೆ, ಹುಡುಗಿ ಮೈನೆರೆದಾಗ ಆಕೆಯು ಓರಗೆಯವರೊಡನೆ ಮೂರುದಿನವೂ ಆಟ ಊಟಗಳಿಗೆ ವ್ಯವಸ್ಥೆಮಾಡುವುದು; ಆರತಿ, ಅಲಂಕಾರ, ಮೆರವಣಿಗೆ, ಭೋಜನಕೂಟ ಮೊದಲಾದವು ಏಕತಾನತೆಯನ್ನು ಪರಿಹರಿಸಿ ಮನೋರಂಜನೆಯನ್ನೂ ಉಂಟುಮಾಡುವಂಥವು (ಚಿತ್ರ 47).

3. 'ಆರೈಕೆ'ಯು ವೈದ್ಯದ ಭಾಗವಾಗಿ - ಮೈನೆರೆದಾಗ, ಬಸುರಿ, ಬಾಣಂತಿತನಗಳ ಸಂದರ್ಭಗಳಲ್ಲಿ ನಡೆಯುತ್ತದೆ. ಮೈನೆರೆದಾಗ ಮಾಡುವ ಆರೈಕೆಯ ಒಂದು ನಿದರ್ಶನವನ್ನು ಇಲ್ಲಿ ಪ್ರಾತಿನಿಧಿಕವಾಗಿ ಕೊಟ್ಟಿದೆ:

ಮೊದಲ ತಿಂಗಳು: ಪುಟ್ಟೆಳ್ಳು, ಕೊಬ್ಬರಿ, ಬೆಲ್ಲವನ್ನು ಕುಟ್ಟಿಮಾಡಿದ ಉಂಡೆಗಳನ್ನು ಪ್ರತಿದಿನ ಬೆಳಗ್ಗೆ ಖಾಲಿ ಹೊಟ್ಟೆಗೆ ತುಪ್ಪದೊಡನೆ ಕೊಡುವುದು; ಪಿತ್ಥವು ನೆತ್ತಿಗೆ ಹತ್ತದಹಾಗೆ ಮೊಸರನ್ನ ಕೊಡುವುದು; ಮಧ್ಯಾಹ್ನ ಬಿಸಿಅನ್ನದ ಊಟ; ಎರಡು ಹೊತ್ತು ಊಟ, ಎರಡು ಹೊತ್ತು ಹಾಲು; ವಾರಕ್ಕೆರಡುಬಾರಿ ಅಭ್ಯಂಗಸ್ನಾನ.

ಎರಡನೆಯ ತಿಂಗಳು: ರವೆ, ಸಕ್ಕರೆ (ಅಥವಾ ಉಪ್ಪು) ತುಪ್ಪಹಾಕಿ ಮಾಡಿದ ಸಜ್ಜಿಗೆ ನಿತ್ಯವೂ ಖಾಲಿ ಹೊಟ್ಟೆಗೆ; ಎರಡುಹೊತ್ತು ಊಟ, ಎರಡುಹೊತ್ತು ಹಾಲು, ಎಣ್ಣೆನೀರು.




48 'ಚಟ್' ಬಡಿಯುವುದು

ಮೂರನೆಯ ತಿಂಗಳು: ಮೊದಲ ಹದಿನೈದು ದಿನ ಖಾಲಿಹೊಟ್ಟೆಗೆ ಹುರಿಗಡಲೆಹಿಟ್ಟು, ಕೊಬ್ಬರಿ ಮತ್ತು ತುಪ್ಪದ ಮಿಶ್ರಣ ಕೊಡುವುದು; ಮುಂದಿನ ಹದಿನೈದು ದಿನ ಖಾಲಿಹೊಟ್ಟೆಗೆ ಎರಡು ರಸಬಾಳೆಹಣ್ಣು, ತುಪ್ಪ; ಮುಂದಿನ ಎಂಟುದಿನ (ದಿಂಡಿಗದ ಮೇಣ) ಗೋಂದು; (ಒಣಗಿಸಿದ ಮೇಣವನ್ನು ತುಪ್ಪದಲ್ಲಿ ಹುರಿದು ಬೆಲ್ಲ, ಕೊಬ್ಬರಿಯೊಡನೆ) ಖಾಲಿ ಹೊಟ್ಟೆಗೆ ನೀಡುವುದು ಇತ್ಯಾದಿ.

ಈ ಎಲ್ಲ ಸಂಗತಿಗಳಲ್ಲಿ ಕರ್ನಾಟಕದಲ್ಲಿಯೇ ಅಲ್ಪಪ್ರಮಾಣದ ವ್ಯತ್ಯಾಸಗಳು ಪ್ರಾದೇಶಿಕವಾಗಿ ಇವೆ. ತಮಿಳುನಾಡಿನ ಕ್ರಮಗಳು ಹೆಚ್ಚಿನ ಭಿನ್ನತೆಯನ್ನು ಪ್ರದರ್ಶಿಸುತ್ತವೆ. ಉದಾಹರಣೆಗೆ, ತಮಿಳುನಾಡಿನಲ್ಲಿ ಹುಡುಗಿ ಮೈನೆರೆದ ಸಂಜೆಗಳಲ್ಲಿ ಚಿಗಳಿಆರತಿ ಇರುವುದಿಲ್ಲ; 'ಚಟ್‌ಬಡಿ'ಯುವುದು, (ಚಿತ್ರ 48) ನಾಲ್ಕನೆಯ ದಿನದ ಮೆರವಣಿಗೆ, ರಕ್ಷೆ ಬಡಿಯುವುದು, (ಚಿತ್ರ 49) ಮೂರು ತಿಂಗಳು ಆರೈಕೆ, ಬಸುರಿಯರಿಗೆ 'ಚೂಬಡಿಯರದ್;' 'ಚೂಚೋರ್‌ಆರತಿ' ಮೊದಲಾದವು ಅವರಲ್ಲಿಲ್ಲ. ಬದಲಿಗೆ, ಅವರಿಗೇ ವಿಶಿಷ್ಟವಾಗಿ, ಮೈನೆರೆದ ಮೂರನೆಯದಿನ ದೀಪದ ಸುತ್ತ ಹಾಡುತ್ತ ಪ್ರದಕ್ಷಿಣೆ ಬರುವುದು; ಅಂದೇ 'ಪುಟ್ಟು' ಎಂಬ ಸಿಹಿತಿಂಡಿ ಮಾಡಿ ಭೋಜನ ಕೊಡುವುದು; ಮೈನೆರೆದ ಕೂಡಲೆ ಮನೆಯ ಮುಂದೆ ವಿಶೇಷ ರಂಗೋಲಿ ಹಾಕಿ ಜನಕ್ಕೆ ಸೂಚಿಸುವುದು (ಚಿತ್ರ 50); ನಾಲ್ಕನೆಯ ದಿನ 'ಮಂಜೆಪೊಂಗಲ್ ಚಿತ್ರಾನ್ನ'ದ ಭೋಜನ ಮಾಡಿಸುವುದು ಮೊದಲಾದ ಆಚಾರಗಳಿವೆ. ಈ ಭಿನ್ನತೆಗಳು ಭೀತಿ ಮತ್ತು ಸಂಭ್ರಮದ ಸಂದರ್ಭಗಳ ಸಹಜ ಪ್ರಾದೇಶಿಕ ಸ್ವೀಕರಣದಿಂದಾಗುವುದು ಸಹಜ ಪ್ರಕ್ರಿಯೆ.



49 'ರಕ್ಷೆ' ಬಡಿಯುವುದು



50 ಮೈನೆರೆದ ಹೆಣ್ಣಿನ ಮನೆಯ ಮುಂದೆ ಬಿಡಿಸಿದ
ವಿಶೇಷ ರಂಗೋಲಿ: ತಮಿಳುನಾಡು

ಸಂಕೇತಿಗಳ ಸಾಂಪ್ರದಾಯಿಕ ಆಹಾರ ಪಾನೀಯಗಳ ರೀತಿಗಳನ್ನು ಸಾಮಾಜಿಕಬದ್ಧತೆ, ಆದರ, ಶಿಸ್ತು, ಸೌಲಭ್ಯ, ಮಂಗಳಾಶಯ, ಭೀತಿ, ಉಲ್ಲಾಸ, ಮಕ್ಕಳಮುದ, ದೀರ್ಘಕಾಲ ಬಳಸುವ ಸಾಧ್ಯತೆ, ಆರೈಕೆ, ಮನೋಸ್ಥೈರ್ಯವನ್ನು ಕಾಯುವುದು, ಆತ್ಮೀಕರಣದೃಷ್ಟಿ, ಧರ್ಮ, ವೈದ್ಯ, ಸದ್ಭಾವ ಮತ್ತು ಮನೋರಂಜನೆಯ ಕಲ್ಪನೆ, ಶ್ರದ್ಧೆ, ಸಾಂಕೇತಿಕತೆ ಮತ್ತು ಆರ್ಥಿಕ ಸ್ಥಿತಿಗತಿಗಳು ನಿಯಂತ್ರಿಸಿವೆ. ಅವುಗಳ ಒಡಲಿನಿಂದಲೇ ವಿಧಿನಿಷೇಧಗಳೂ ಹುಟ್ಟಿವೆ. ಸಾಂದರ್ಭಿಕವಾಗಿ ರುಚಿವೈವಿಧ್ಯವಿದ್ದರೂ, ನಿತ್ಯದಲ್ಲಿ ಪೌಷ್ಟಿಕಾಂಶಗಳ ಕೊರತೆ ಇದೆ; ಏಕತಾನತೆ ಪರಿಹಾರವಾದಾಗಲೂ ಅದು ಸುಧಾರಿಸಿದಂತಿಲ್ಲ. ಮೂಲಭೂತ ಸಾಂಸ್ಕೃತಿಕ ಸಾಮ್ಯಗಳನ್ನುಳಿಸಿಕೊಂಡೂ ಭೌಗೋಳಿಕ ಸನ್ನಿವೇಶದ ಪ್ರಭಾವದಿಂದಾಗಿ ಪ್ರಾದೇಶಿಕ ಭಿನ್ನತೆಯನ್ನೂ ಅದು ಪ್ರಕಟಿಸುತ್ತದೆ. ವೈಜ್ಞಾನಿಕ ಅರಿವು, ಕೈಗಾರಿಕೀಕರಣ, ನಗರೀಕರಣದ ಕಾರಣದಿಂದ ಆದ ಜೀವನವಿಧಾನದ ಬದಲಾವಣೆಯು ಅನೇಕ ಪಾರಂಪರಿಕ ಅಂಶಗಳನ್ನು ಕೈಬಿಟ್ಟು ಆಧುನಿಕ ಮನೋಭಾವದ ಸಾರ್ವತ್ರಿಕ ಸ್ವರೂಪದ ಪದ್ಧತಿಗಳನ್ನು ಸ್ವೀಕರಿಸುವಂತೆ ಮಾಡಿದೆ.

ಬದಲಾದ ಜೀವನವಿಧಾನದಲ್ಲಿ ಮನೋರಂಜನೆಗೆ ಬೇರೆ ಆಕರಗಳಿವೆ; ವೈದ್ಯವಿಜ್ಞಾನದ ವಿಶಿಷ್ಟ ತಿಳಿವಳಿಕೆ ಮತ್ತು ಸೌಲಭ್ಯಗಳು ಬಳಕೆಗೊಂಡಿವೆ. ಆಹಾರ ಪಾನೀಯಗಳು ಆಧುನಿಕಗೊಂಡಿವೆ. ಆದುದರಿಂದ ಈ ಸಂಬಂಧದ ಸಾಂಪ್ರದಾಯಿಕ ವಿವರಗಳು ಹಳ್ಳಿಗಳಲ್ಲಿ ಮಾತ್ರ ಅಷ್ಟಿಷ್ಟು ಉಳಿದಿವೆ. ಆಧುನಿಕ ವಿಜ್ಞಾನದ ಹಿನ್ನೆಲೆಯಲ್ಲಿ ಇಂದಿನವರಿಗೆ ಹಳೆಯ ಪದ್ಧತಿಗಳು, ಚಿಕಿತ್ಸಾವಿಧಾನ, ಆರೈಕೆರೀತಿ ಭಯಾನಕವಾಗಿ ಕಾಣುವುದು ಸಹಜವಾದದ್ದು. "ಈ ಬಾಣಂತನದ ರೀತಿ ರಾಕ್ಷಸ-ವೈದ್ಯದಂತೆ ಕಾಣುತ್ತದೆ. ಮೆಣಸು ಕೊಡುವಾಗ ನೀರು ಕುಡಿಯಬಾರದಂತೆ! ದಾಹವಾದಾಗ ಎಲೆ-ಅಡಿಕೆ ಮೆಲ್ಲಬೇಕು!... ಬಾಣಂತನ ಮಾಡುವಾಗ ಬಾಣಂತಿ ಕಕ್ಕಸಿಗೆ ಹೋದಾಗ ಕಾಯುತ್ತಾ ನಿಂತುಕೊಳ್ಳುತ್ತಿದ್ದರಂತೆ! ಕಾರಣ, ಆ ದಾಹದ ಆತುರದಲ್ಲಿ ಕಕ್ಕಸ್ ಬಕೆಟ್ ನೀರನ್ನೇ ಕುಡಿದುಬಿಟ್ಟಾಳು ಎಂದು! ಮೆಣಸು ತಿಂದು ತಿಂದು ಕಣ್ಣು ಕೈಕಾಲೆಲ್ಲಾ ಉರಿಹತ್ತಿ ಮಗುವಿನ ಮೂತ್ರದ ಬಟ್ಟೆಯನ್ನಾದರೂ ಹಾಕಿಕೊಂಡು ತಣ್ಣಗೆ ಮಾಡಿಕೊಳ್ಳುತ್ತಿದ್ದುದುಂಟು. ಜತೆಗೆ, ಗಾಳಿ ಬೀಸಬಾರದೆಂದು ಬಾಣಂತಿ ಕೊಠಡಿಯ ಬಾಗಿಲು ಕಿಟಕಿಗಳ ಸಂದುಗಳಿಗೆಲ್ಲಾ ಸಣ್ಣಸಣ್ಣ ಬಟ್ಟೆಗಳನ್ನು ತುರುಕಿ ಕಗ್ಗತ್ತಲೆ, ನಿರ್ವಾತ ಮಾಡುತ್ತಿದ್ದರು. ಬಾಣಂತಿ ಕೊಠಡಿ ಎಂದರೆ ಮೂಗುಮುಚ್ಚಿಕೊಂಡೇ ಒಳಗೆ ಹೋಗಬೇಕಾಗಿತ್ತು. ಇದನ್ನೆಲ್ಲಾ ಅವರುಗಳ ವೈದ್ಯಕೀಯ ಪ್ರಜ್ಞೆ ಎಂದು ಹೇಳಿದರೆ 'ವೈದ್ಯ' ಶಬ್ದಕ್ಕೇ ಅವಮಾನವೋ ಎನಿಸುತ್ತದೆ." ಸಾಂಪ್ರದಾಯಿಕ ಆಹಾರದಲ್ಲಿ ದೈಹಿಕಪುಷ್ಟಿ, ರುಚಿಗಿಂತಲೂ ಆರ್ಥಿಕಮಿತಿ, ಧಾರ್ಮಿಕಕಟ್ಟುಪಾಡುಗಳಿಗೆ ಹೆಚ್ಚಿನ ಒತ್ತುಬಿದ್ದಿದೆ. ಅನನ್ಯತೆಯ ದೃಷ್ಟಿಯಿಂದ ಸಂಕೇತಿಗಳಿಗೇ ವಿಶಿಷ್ಟವಾದ ಭಾಗಗಳೂ ಇಲ್ಲಿ ಧಾರಾಳವಾಗಿ ಕಾಣುತ್ತವೆ.

೩. ಉಡುಗೆ ತೊಡುಗೆಗಳು

ಕಠಿಣದುಡಿಮೆಗೆ ಒಡ್ಡಿಕೊಂಡವರಾದರೂ ಬಡತನದ ಮಿತಿಯಲ್ಲಿ ಬದುಕುತ್ತಾ, ಆಹಾರಪಾನೀಯಗಳನ್ನು ಅದಕ್ಕೆ ತಕ್ಕಂತೆ ಹೊಂದಿಸಿಕೊಂಡ ಸಂಕೇತಿಗಳ ಉಡುಗೆ ತೊಡುಗೆಗಳನ್ನು ಪರಿಶೀಲಿಸುವುದು ಇಲ್ಲಿನ ಉದ್ದೇಶವಾಗಿದೆ. ಮಾನವನ ಮೂಲಭೂತ ಅಗತ್ಯಗಳೆಂದು ಇಂದು ಪರಿಗಣಿಸಲ್ಪಡುವ ಉಡುಗೆತೊಡುಗೆಗಳು ಮೊದಲು ಆವಿಷ್ಕಾರಗೊಂಡನಂತರ ಪ್ರದೇಶ ಮತ್ತು ಸಮುದಾಯಗಳಿಗನುಗುಣವಾದ ವೈವಿಧ್ಯ ಪಡೆದವು. ಭಾರತದಲ್ಲಿ ಧರ್ಮಶಾಸ್ತ್ರಗಳ ನಿರ್ದೇಶನಕ್ಕನುಗುಣವಾಗಿ (ವಿಶೇಷವಾಗಿ ಬ್ರಾಹ್ಮಣಸಮುದಾಯಕ್ಕೆ ಅನ್ವಯವಾಗುವಂತೆ) ಉಡುಗೆ ತೊಡುಗೆಗಳ ಸಾಮಾನ್ಯ ವಿಧಿವಿಧಾನಗಳು ರೂಢಿಯಲ್ಲಿವೆ. ಸಂಕೇತಿಗಳು ತೀವ್ರವಾಗಿ ಗಮನಿಸುವ ಅಥವಾ ಅವರಿಗೇ ವಿಶಿಷ್ಟವೆನಿಸುವ ಅಂಶಗಳನ್ನು ಇಲ್ಲಿ ಪರಿಶೀಲಿಸಬಹುದು.

ಅ. ಸ್ನಾನ - ಉಡುಗೆ:

ಜಪತಪಗಳಿಗೆ ಪೂರ್ವಾಂಗವಾದ ದೇಹಶುದ್ಧಿಗಷ್ಟೆ ಸ್ನಾನದ ಉದ್ದೇಶವು ಸೀಮಿತವಾಗಬಹುದು. ಆದರೆ, ನಿಯತತೆ ಮತ್ತು ಸಾತತ್ಯ ಮಾತ್ರವಲ್ಲ, ತೀರ್ಥಸ್ನಾನದ ವ್ಯಾಪ್ತಿಯನ್ನೂ ಪಡೆದು ಅದು ಪಾವಿತ್ರ್ಯದ ವಲಯವನ್ನು ಪ್ರವೇಶಿಸುತ್ತದೆ. ಶಿಸ್ತು ಮತ್ತು ಪಾರಮಾರ್ಥಿಕ ಅನುಸಂಧಾನದ ಮಾಧ್ಯಮವಾಗುವ ಸ್ನಾನಕ್ರಮದೊಂದಿಗೆ ಅವರ ವಸ್ತ್ರಗಳ ಬಳಕೆಯ ವಿಶಿಷ್ಟ ಮುಖವನ್ನೂ ಇಲ್ಲಿ ಕಾಣಬಹುದು: ಸ್ನಾನಕ್ಕೆ ಮೊದಲು (ಪುರುಷರು ನದಿಯ ದಡದಲ್ಲಿ ಕುಳಿತು) ಉದಕದಿಂದ ಪ್ರೋಕ್ಷಣೆ ಮಾಡಿಕೊಳ್ಳುತ್ತಾರೆ;

ವಸ್ತ್ರಗಳನ್ನು ನೆನೆಸುತ್ತಾರೆ; ಪ್ರವಾಹಕ್ಕೆ ಅಭಿಮುಖವಾಗಿ ಮೂರುಬಾರಿ ಮುಳುಗಿ ಸ್ನಾನಮಾಡುತ್ತಾರೆ; ಪೂರ್ವಾಭಿಮುಖವಾಗಿ ನಿಂತು ಆಚಮನಮಾಡಿ ಪ್ರಾಣಾಯಾಮ, ಸಂಕಲ್ಪ ಮಾಡುತ್ತಾರೆ; ಗಂಗೆ ಮತ್ತು ಸೂರ್ಯನಿಗೆ ಅರ್ಘ್ಯಕೊಟ್ಟು ಮತ್ತೆ ಪ್ರವಾಹಾಭಿಮುಖವಾಗಿ ನಿಂತು ಸ್ನಾನಮಾಡಿ ಅಘಮರ್ಷಣ ಸೂಕ್ತ ಪಾರಾಯಣ ಮಾಡುತ್ತಾರೆ; ಮತ್ತೆ ಸ್ನಾನ, ಪೂರ್ವಾಭಿಮುಖವಾಗಿ ನಿಂತು ಆಚಮನ; ಮೇಲೆಬಂದು, ಇಟ್ಟ ಉತ್ತರೀಯವನ್ನು ಹಿಂಡಿ ಪಿತೃದೇವತೆಗಳ ತೃಪ್ತ್ಯರ್ಥವಾಗಿ ಶ್ಲೋಕಪಠಣ ಮಾಡುತ್ತಾರೆ. ಆ ಉತ್ತರೀಯದಿಂದಲೇ ಮೈ ಒರೆಸಿಕೊಂಡು ಮಡಿಬಟ್ಟೆ ಧರಿಸುತ್ತಾರೆ. ಕೇವಲ ಸ್ನಾನಕ್ಕೆ ಹೊಂದಿಕೊಂಡಂತೆ ವಸ್ತ್ರಗಳು ವೈವಿಧ್ಯಪೂರ್ಣವಾಗಿ ಬಳಕೆಯಾಗುವುದನ್ನು ಈ ವಿವರಗಳು ಸ್ಪಷ್ಟಪಡಿಸುತ್ತವೆ.

ವಿಭಿನ್ನ ಆಕರಗಳು ಮತ್ತು ಪ್ರಾದೇಶಿಕ ಪ್ರಭಾವಗಳಿಗೆ ಅನುಗುಣವಾಗಿ ಈ ಕ್ರಮದಲ್ಲಿ ಅಲ್ಪಸ್ವಲ್ಪ ವ್ಯತ್ಯಾಸವಿದ್ದರೂ, ಮೂಲ ಆಶಯವನ್ನನುಸರಿಸಿದ ವಿವರವು ಸಮಾನವಾಗಿರುತ್ತದೆ. ಸ್ತ್ರೀಯರೂ, ಸೀರೆ (ಮಾತ್ರ; ಕುಪ್ಪಸವಿಲ್ಲ) ಉಟ್ಟೇ ಸ್ನಾನ ಮಾಡಬೇಕು; ಸ್ನಾನಮಾಡಿದ ಸೀರೆಯನ್ನು ಉಟ್ಟಿರುವಂತೆಯೇ ಅದನ್ನು ಒಗೆಯುವುದರಿಂದ ಸ್ನಾನಫಲ ಬೇರೆಯವರಿಗೆ ಹೋಗುತ್ತದೆ; ಮಿಂದನಂತರ ತಾನು ಕಳಚಿದ ಸೀರೆಯನ್ನು ಬೇರೆಯವರು ಒಗೆದರೆ ಸ್ನಾನಫಲ ಬೇರೆಯವರಿಗೆ ಹೋಗುತ್ತದೆ - ಮೊದಲಾದ ನಂಬಿಕೆಗಳನ್ನು ರೂಢಿಸಿಕೊಂಡಿದ್ದಾರೆ. ಮತ್ತು, ಆ ನಂಬಿಕೆಗಳು ಮಾನರಕ್ಷಣೆ, ಆಲಸ್ಯವನ್ನು ದೂರಮಾಡುವುದು ಮೊದಲಾದ ಕಾರ್ಯಸಾಧಕ ಅಂಶಗಳಿಂದಲೇ ಉದ್ಭವವಾದುವಾದರೂ, ಅವಕ್ಕೆ ಪಾಪಪುಣ್ಯಗಳ ಸಂಬಂಧವನ್ನು ಕಲ್ಪಿಸುವುದನ್ನು ಕಾಣಬಹುದು. ವೇದಾಧ್ಯಯನ ಮಾಡದಿದ್ದರೂ, ಅವರ ಚಿಂತನೆ ಮತ್ತು ಧಾರ್ಮಿಕ ಜೀವನವಿಧಾನವು ಪುರುಷರ ಮಾರ್ಗಕ್ಕಿಂತ ಬೇರೆಯಾಗುವುದಿಲ್ಲ.

ಕೇವಲ ಆರೋಗ್ಯಸಾಧನೆಗಾಗಿ ಮಾಡುವ 'ಅಭ್ಯಂಗಸ್ನಾನ'ವೂ ಪುರುಷರಿಗೆ ಸಪ್ತಚಿರಂಜೀವಿಗಳ ಹಾಗೂ ಸ್ತ್ರೀಯರಿಗೆ ಪಂಚಕನ್ಯೆಯರ ಔನ್ನತ್ಯಸಾಧನೆಯ ಆಶಯದೊಂದಿಗೆ ಆರಂಭವಾಗಿ, ಭವ್ಯಭವಿಷ್ಯದ ಆಶೀರ್ವಚನಗಳೊಂದಿಗೆ ಮುಗಿಯುತ್ತದೆ. ಸ್ನಾನಾನಂತರವೂ ಯಜ್ಞೇಶ್ವರನಿಗೆ ನಮನ ಮತ್ತು 'ಮೇಧಾವಿಧಾರಣ' ನಡೆಯುತ್ತದೆ. ಇವೆಲ್ಲವೂ ಮೇಲಿನ ಅಂಶಗಳನ್ನೇ ಸಮರ್ಥಿಸುವಂಥವು.

ಸ್ನಾನಾನಂತರ ಮಲವಿಸರ್ಜನೆಯಾದರೆ ಮತ್ತೆ ಸ್ನಾನ ಮತ್ತು ಮಡಿಬಟ್ಟೆಗಳ ಧಾರಣೆಯಾಗಬೇಕೆಂಬ ನಿಯಮವು ಶುಚಿಗೆ ಕೊಟ್ಟ ಪ್ರಾಮುಖ್ಯವನ್ನೇ ತಿಳಿಸುವಂಥದು. ಈ ನಿಯಮದ ಸರಿಯಾದ ಪಾಲನೆಗಾಗಿ, ರಾತ್ರಿಯ ಆಹಾರವಿಹಾರಗಳಲ್ಲಿಯೂ ನಿಯಮವನ್ನು ಪಾಲಿಸುವುದು, ಒಂದು ಆಚಾರವು ಮತ್ತೊಂದು ಆಚಾರವನ್ನು ಅಗತ್ಯವಾಗಿಸುವುದರ ನಿದರ್ಶನವಾಗಿದೆ. ಇದರಲ್ಲಿ "ರಾತ್ರಿ ಮೊದಲ ಯಾಮದಲ್ಲಿಯೇ ಊಟ; ಬೇಗ ಮಲಗಿ ಪಂಚಪಂಚ ಉಷಃಕಾಲಕ್ಕೆ ಏಳುವುದು; ವ್ರತಾಚರಣೆಗಳು, ಪರ್ವದಿನಗಳು ಮೊದಲಾದ ಸಂದರ್ಭಗಳಲ್ಲಿ ದಂಪತಿಗಳು ಜೊತೆಗೆ ಮಲಗದಿರುವುದು ಇತ್ಯಾದಿ"ಗಳು ಸೇರುತ್ತವೆ.

ಆ. ಮಡಿ-ಮೈಲಿಗೆ-ಉಡುಗೆ:

ಮಡಿ-ಮೈಲಿಗೆಗೂ ಉಡುಗೆಗೂ ನೇರ ಸಂಬಂಧವಿದೆ. ಆವರಣಶುದ್ಧಿ, ದೇಹಶುದ್ಧಿ, ಪರಿಕರ ಶುದ್ಧಿಯಷ್ಟೇ ಆತ್ಮಸಾಧನೆಗೆ ವಸ್ತ್ರಶುದ್ಧಿಯೂ ಪೂರಕವಾದುದು. ಆದರೆ, ಮೂಲೋದ್ದೇಶವನ್ನು ಮರೆತು, ಅಪಭ್ರಂಶಗೊಂಡ ಈ ಆಚರಣೆಗಳು ಅತಿರೇಕ, ಬಾಹ್ಯಾಡಂಬರಗಳಿಗೆ ಎಡೆಮಾಡಿ ಟೀಕೆಗೆ ಗುರಿಯಾದುದೂ ಅಷ್ಟೇ ಸಹಜವಾದ ಬೆಳವಣಿಗೆ. ಬಾಲಕರು, ಗೃಹಸ್ಥರು, ಬ್ರಹ್ಮಚಾರಿಗಳು, ಋತುಮತಿಯಾಗಿದ್ದೂ ಅವಿವಾಹಿತೆಯರು, ಮುತ್ತೈದೆ, ಋಷಿಪಂಚಮಿ ಮಾಡಿದವರು, ವಿಧವೆಯರು, ಜಪಕ್ಕೆ ಉಪದೇಶ ಪಡೆದವರು - ಎಲ್ಲರೂ ಬೇರೆ ಬೇರೆ ಮಡಿವಲಯಗಳಿಗೆ ಸೇರಿದವರು. ಸಣ್ಣದೊಂದು ಜ್ವರವೂ ಪ್ರಾಣಹಾರಕವಾಗುತ್ತಿದ್ದ ಸನ್ನಿವೇಶ, ಅದು ದೇವರು ಮುನಿದುದರಿಂದಲೇ ಆದುದೆಂದು ತಿಳಿದ ಮೌಢ್ಯ, ದೇವರನ್ನು ಒಲಿಸಲು ಪೂಜೆ, ಅದಕ್ಕಾಗಿ ಮಡಿ; ಅದನ್ನು ಹೆಚ್ಚು ನಿಷ್ಠೆಯಿಂದ ಮಾಡುವ ಯತ್ನ - ಇವುಗಳ ವಿಕೃತ ಬೆಳವಣಿಗೆಯನ್ನು ಇಲ್ಲಿ ಗುರುತಿಸಬಹುದು.

ಇಂಥ ಸಂಕೀರ್ಣಸ್ಥಿತಿಯು, ಉಡುಪುಗಳ ಮೇಲೆ ಮಾಡುವ ಪರಿಣಾಮವೂ ಸಂಕೀರ್ಣವಾದುದು. ಒಂದು ಉದಾಹರಣೆ: " ... ಆಗೆಲ್ಲಾ ಮೂರು ಮಡಿಮಾಡುವವರು. ಬೆಳಿಗ್ಗೆ ಎದ್ದು ಕೈಕಾಲು ಮುಖ ತೊಳೆದುಕೊಂಡು, ಮಲಗುವಾಗ ಉಟ್ಟುಕೊಂಡಿದ್ದ ಸೀರೆ ಬಿಚ್ಚಿ ಗಳುವಿನ ಮೇಲೆ ಹಾಕಿರುವ ಮಡಿಸೀರೆ ಉಡುವುದು 'ಬೆಳಗಿನ ಮಡಿ' ('ವಡಚಾಲೆ ಮಡಿ'). ಗುಡಿಸಿ ಸಾರಿಸುವುದು ಅದರಲ್ಲಿಯೇ.

ಸ್ನಾನಾನಂತರ ಬೇರೆ ಸೀರೆ ಉಡುವುದು: 'ಮಧ್ಯಾಹ್ನದ ಮಡಿ'. ಪೂಜೆ, ಅಡುಗೆಗೆ ಅದು. ಊಟ ಮಾಡಿದ ಕೂಡಲೆ ಅದು ಮೈಲಿಗೆ. ರಾತ್ರಿ, ತುಂಡುಸೀರೆ ಉಟ್ಟು ಅಡುಗೆಮಾಡುವುದು. ಅದು 'ರಾತ್ರಿಮಡಿ'. ಗಂಡಸರೂ, ಸಂಜೆ ಮಗುಟ ಉಟ್ಟು ಸಂಧ್ಯಾವಂದನೆ ತೀರಿಸುವರು..." ಇದೆಲ್ಲದರ ಹಿಂದಿನ ಶ್ರಮ, ತೊಂದರೆ, ನಿರಂತರ ಮುಜುಗರಗಳನ್ನು ಕಂಡವರಿಗೆ ಇವು ತಾವೇ ವಿಧಿಸಿಕೊಂಡ ಶಿಕ್ಷೆಗಳಂತೆ ಕಂಡರೆ ಆಶ್ಚರ್ಯವಿಲ್ಲ. ಮೈಲಿಗೆಯಾದಾಗಲೆಲ್ಲಾ ಬಟ್ಟೆ ಬದಲಿಸುವುದಕ್ಕೆ ಅವರ ಬಳಿ ಹೆಚ್ಚು ವಸ್ತ್ರಗಳಿರುತ್ತಿರಲಿಲ್ಲವಾದ್ದರಿಂದ ಅವರು ಕಂಡುಕೊಂಡ ಉಪಾಯ-ಮಗುಟ, ನಾರುಮಡಿ, ರೇಷ್ಮೆ ಸೀರೆಗಳು.

ವಸ್ತ್ರಕ್ಕೆ ಅಂಚು ಇರಬೇಕು; ಕೆಂಪು ಅಂಚು ಶ್ರೇಷ್ಠ; ಕಪ್ಪು, ನೀಲಿ ಮೈಲಿಗೆ; ನದಿಯಲ್ಲಿ ಸ್ನಾನಮಾಡಿದಾಗ ಅರ್ಘ್ಯಪ್ರದಾನದವರೆಗೆ ಒದ್ದೆಬಟ್ಟೆ ಆಗಬಹುದು, ಅನಂತರ ಒಣಗಿದಬಟ್ಟೆಯೇ ಆಗಬೇಕು - ಇಂಥ ನಂಬಿಕೆಗಳಿಗೆ ಸೌಲಭ್ಯಕ್ಕಿಂತ ಹೆಚ್ಚಿನ ಅರ್ಥವಿರುವುದಿಲ್ಲ. ನಾಗರಪಂಚಮಿಯಂದು ಹುತ್ತಕ್ಕೆ 'ತನಿ ಎರೆ'ಯುವುದು; 'ಮಡೆ' ಮತ್ತು 'ಎಂಜಲು ಮಡೆ' ಹೊರಳುವುದು ಕರ್ನಾಟಕದಲ್ಲಿ ವೈಷ್ಣವ ಪ್ರಭಾವದಿಂದ ಬಂದವು. ಸ್ಮಾರ್ತರ ಮಡಿಯ ಕಲ್ಪನೆಗೆ ವಿರುದ್ಧವಾದ 'ಒದ್ದೆ ಮಡಿ'ಯೂ ಅದರೊಂದಿಗೆ ಸ್ವೀಕೃತವಾಗಿರುವುದು ಸಾಂಸ್ಕೃತಿಕ ಸಂದರ್ಭಗಳಲ್ಲಿಯೂ ಪರಿಸರ ಸಾಮಾನ್ಯಗಳ ಅಳವಡಿಕೆಯ ಒಂದು ನೇರಸಾಕ್ಷಿ.

ಈ ಸಂಕೀರ್ಣಸ್ವರೂಪದ ಮಡಿ ಮೈಲಿಗೆಗಳಿಂದಾಗಿ ಮಕ್ಕಳಿಗೆ ಅನೇಕ ವರ್ಷಗಳವರೆಗೆ ಬಟ್ಟೆ ತೊಡಿಸದೆಯೇ ಬೆತ್ತಲೆಯೇ ಇಟ್ಟಿರುತ್ತಿದ್ದ ದಿನಗಳು ಈಗ ಮುಗಿದಿವೆ. ವಿಜ್ಞಾನವು ತಂದ ಬೆಳಕಿನ ಹಿನ್ನೆಲೆಯಲ್ಲಿ ಈ ಸಂಬಂಧದ ವಿಕೃತಿಗಳು ಮರೆಯಾಗುತ್ತಿವೆ; ಆತ್ಮವಿಮರ್ಶೆಯೂ ನಡೆದಿದೆ.

ಇ. ಉಡುಗೆ - ತೊಡುಗೆ:

ಸಂಕೇತಿಗಳ ಉಡುಗೆ ತೊಡುಗೆಗಳ ಅನುಕ್ರಮವು ಕೆಲವು ಸಾಮಾಜಿಕ, ಧಾರ್ಮಿಕ ಸಂಗತಿಗಳೊಂದಿಗೆ ಹೊಂದಿಕೊಂಡಿದೆ.

1. "ಮಡಿಯ ಕಾರಣಕ್ಕಾಗಿ ಬೆತ್ತಲೆ ಓಡಾಡುವ ಮಕ್ಕಳು ಸ್ವಲ್ಪ ದೊಡ್ಡವಾದಾಗ ತೊಡಿಸುವ ವಸ್ತ್ರವೆಂದರೆ ಪಂಚೆಯ ಇಲ್ಲವೆ ಸೀರೆಯ ತುಂಡು. ಅಂಗಿ, ಚೆಡ್ಡಿ, ಲಂಗ ಈಚಿನವು. ಕಿವಿ ಚುಚ್ಚಿದಾಗ ಹರಳಿರುವ ಕಡಕು, ಕಾಲಿಗೆ ಗೆಜ್ಜೆ, ಸೊಂಟಕ್ಕೆ ಉಡುದಾರ - ಗಂಡುಮಕ್ಕಳ ತೊಡುಗೆಗಳು. ಜಡೆಹೆಣೆದು ಹೂಮುಡಿದು ಬಳೆತೊಡಿಸಿ (ಈಚೆಗೆ) ಲಂಗ ತೊಡಿಸಿದರೆ ಹೆಣ್ಣುಮಕ್ಕಳ ಅಲಂಕಾರ ತೀರಿತು. ಸೊಂಟಕ್ಕೋ ಕತ್ತಿಗೋ ನೇತುಬಿದ್ದ ರಕ್ಷೆತಾಳಿಯೂ ಸಾಮಾನ್ಯ ಸಂಗತಿಯೇ."

2. ವಯಸ್ಸಿಗೆ ಬಂದ ಹೆಣ್ಣಿಗೆ ಲಂಗ ಮತ್ತು ದಾವಣಿತೊಡಿಸಿ 'ಆಧುನಿಕಗೊಳಿಸಿದ' ಕಾಲ ಇತ್ತೀಚೆಗಷ್ಟೆ ಕಳೆದಿದೆ. ಸರ, ಓಲೆ, ಚಿನ್ನದಬಳೆಗಳು ಅವರನ್ನು ಶೃಂಗರಿಸುತ್ತಿವೆ.

3. ಮೂಗುತಿ, ಓಲೆ, ಕಾಲುಂಗುರ, ಮಾಂಗಲ್ಯ, ಕರಿಮಣಿಸರ, ಬೆರಳಿಗೆ ಉಂಗುರ - ವಿವಾಹಿತೆಯ ಕನಿಷ್ಠ ತೊಡುಗೆಗಳು. ಮುತ್ತೈದೆಗೆ ಸೀರೆಯ ಜೊತೆಗೆ ಕುಪ್ಪಸವೂ ಬಂದುದು ಹೊಲಿದುದನ್ನೂ ಮಡಿಗೆ ಮಾನ್ಯವಾಗಿಸಿಕೊಂಡ ಆಧುನಿಕ ಪ್ರಜ್ಞೆಯ ದಿನಗಳಲ್ಲಿ.

4. ವಿಧವೆಗೆ ಬಿಳಿಯ ಮತ್ತು (ಈಚೆಗೆ) ಕೆಂಪು ಅಥವಾ ಕಾವಿ ಸೀರೆ ಮಾತ್ರ; ಕುಪ್ಪಸವಿಲ್ಲ. ಅವಳ ತಲೆಗೂದಲು ತೆಗೆಸಿ ವಿಕಾರಗೊಳಿಸುವ ಕ್ರೂರಕ್ರಿಯೆಯು ಇತ್ತೀಚಿನ ದಶಕಗಳಲ್ಲಿ ಕಡಮೆಯಾಗುತ್ತಿರುವುದು ಆಧುನಿಕ ನಾಗರಿಕ ಅರಿವಿನ ಹಿನ್ನೆಲೆಯಲ್ಲಾದ ಒಂದು ಸುಧಾರಣೆ.

5. ಕೌಪೀನಧಾರಿಯಾದ ಬ್ರಹ್ಮಚಾರಿಯು ತಡುಪುಸುತ್ತಿ ಒಂದು ವಸ್ತ್ರವನ್ನು ಸೊಂಟಕ್ಕೆ ಕಟ್ಟುತ್ತಾನೆ, ಇಲ್ಲವೆ ಹೊದೆಯುತ್ತಾನೆ.

6. ಸಾಮಾಜಿಕ ಅಂತಸ್ತನ್ನು ಅನುಭವಿಸುವ ಒಂದೇ ನಿದರ್ಶನವೆಂದರೆ ವರನು ಸ್ನಾತಕನಾದಾಗ ಸಾಂಕೇತಿವಾಗಿ ತೊಡುವ ವಿಶೇಷ ಉಡುಗೆ. ಶಾನುಭೋಗಿಕೆ, ಮಾಸ್ತರಿಕೆ ಮಾಡಿದ ದಿನಗಳಲ್ಲಿ ಕೋಟು ಪೇಟಗಳು ಅವರಿಗೆ ಆ ಪ್ರತ್ಯೇಕತೆಯನ್ನು ತಂದವು.

7. ಗೃಹಸ್ಥನ ನಿತ್ಯದ ಉಡುಗೆ ಎಂದರೆ ಉಡುವ (ಕಚ್ಚೆ ಪಂಚೆ) ಮತ್ತು ಹೊದೆಯುವ - ಎರಡು ಬಿಳಿಯ ವಸ್ತ್ರಗಳು; ಹೆಚ್ಚೆಂದರೆ ಸುತ್ತಿದ ಮತ್ತೊಂದು ವಸ್ತ್ರ. ಅದೇ ಪೇಟವಾಗಿಯೂ ಬಳಕೆಯಾಗುತ್ತದೆ. "ಗೃಹಸ್ಥನಿಗೆ ಯಾವಾಗಲೂ ರುಮಾಲು ಇರಲೇಬೇಕು. ಮೊದಲು ಅದನ್ನು ಅವನು ವಿವಾಹದ ವೇಳೆ ತೊಡುತ್ತಾನೆ. ಅದನ್ನು ಸುತ್ತಲು ಯಾವ ಕ್ರಮವೂ ಇಲ್ಲ. ಬಿಸಿಲು, ಮಲವಿಸರ್ಜನೆಯ ವೇಳೆ ತಲೆಯ ಮೇಲೆ ಒಂದು ಆಚ್ಛಾದನವಿರುತ್ತದೆ. ಧಾರ್ಮಿಕ ಕ್ರಿಯೆಗಳಿಗೆ ಬಳಸುವುದು ಎರಡು ವಸ್ತ್ರಗಳನ್ನೇ. ಹೆಚ್ಚಿನವು ಇದ್ದರೆ ಆಸನವಾಗಿ ಮಾತ್ರ ಬಳಸುತ್ತಾರೆ." ದುಡಿಮೆಗೆ ಹೊರಡಲಿ, ನೆಂಟರಮನೆಗೋ ಸಮಾರಂಭಕ್ಕೋ, ಜಾತ್ರೆಗೋ ಹೊರಡಲಿ, ಋತುಮಾನ ಬದಲಾಗಲಿ, ಅವೇ. ಶಹಲು, ರೇಷ್ಮೆ ಸೀರೆಗಳು ಅಂಥವೇಳೆ ವಿಶೇಷವಾಗಿ ಬಳಕೆಯಾಗುವುದು ಕೆಲವರಲ್ಲಿ.

ತಲೆಗೆ ವಸ್ತ್ರ ಇಲ್ಲವೆ ಟವಲಿನ ರುಮಾಲು ಅಥವಾ ಲಪ್ಪಟ್ಟೆ, ಜಪಕ್ಕೆ ಕೃಷ್ಣಾಜಿನದ ಆಸನ, ಅಲ್ಲಲ್ಲಿ ಮಡಿಯ ಕಾರಣಕ್ಕಾಗಿ ಬರಿಗಾಲು ಇಲ್ಲವೆ ಚರ್ಮದ ಚಪ್ಪಲಿಯ ಬದಲು (ತಮಿಳುನಾಡಿನಲ್ಲಿ) ಮರದ ಹಾವುಗೆಗಳು ಇತರ ವಿಶೇಷಗಳು.



51 ವಿವಾಹ: ವಸ್ತ್ರ ಕಾಣಿಕೆ: ವಧುವಿಗೆ

8. ವಿಶೇಷ ಸಂದರ್ಭಗಳಲ್ಲಿ ಕೆಲವು ಮಾರ್ಪಾಡುಗಳೂ ಆಗುತ್ತವೆ. ನಿತ್ಯದ ಉಡುಗೆ ತೊಡುಗೆಗಳು ಲಿಂಗ ಮತ್ತು ವಯಸ್ಸನ್ನು ಅನುಸರಿಸಿ ಬದಲಾಗುತ್ತವೆ; ಪ್ರಾದೇಶಿಕತೆ, ವೃತ್ತಿ, ಶ್ರೀಮಂತಿಕೆಗಳನ್ನಲ್ಲ. ಹಬ್ಬಗಳಲ್ಲಿ ಮಡಿಗೆ ಒತ್ತುಬಿದ್ದು ಮುಗುಟ, ರೇಷ್ಮೆಸೀರೆಗಳು ಬಳಕೆಯಾಗುತ್ತವೆ; ಹಬ್ಬಕ್ಕೆ ಹೊಸಬಟ್ಟೆ ಎಂಬ ನಿಯತತೆ ಇಲ್ಲ. ಅಲ್ಲಲ್ಲಿ ಅದು ರೂಢಿಗೊಂಡ ಸಂದರ್ಭಗಳು ಶ್ರೀಮಂತಿಕೆಯು ಇಲ್ಲವೆ ಹೊರಪ್ರಭಾವಗಳ ಪ್ರವೇಶದ ಸೂಚಿಗಳು. ಸಂಸ್ಕಾರ ಸಂದರ್ಭಗಳಲ್ಲಿಮಕ್ಕಳಿಗೆ ಉಡಿಸುವ ವಲ್ಲಿ, ವಟುಗಳಿಗೆ ಅರಿಶಿನ-ಪಂಚೆ ಇತ್ಯಾದಿಗಳೂ ವೈಭವಕ್ಕಿಂತಲೂ ಧಾರ್ಮಿಕ ಮಿತಿಯವು. ವಿವಾಹ ಸಂದರ್ಭಗಳಲ್ಲಿ ಜವಳಿಪೂಜೆಮಾಡಿ ಸುಮಂಗಲೆಯರನ್ನಾದರಿಸುವುದು, 'ವಸ್ತ್ರ ಕಾಣಿಕೆ' ಮೊದಲಾದವು ಕೂಡ (ಚಿತ್ರ 51) ಶುಭಹಾರೈಕೆ ಮತ್ತು ಸದ್ಭಾವದ ದ್ಯೋತಕಗಳಾಗಿ ಬಳಕೆಯಾಗುತ್ತವೆ.

ಸಾಮಾನ್ಯ ದಿನಗಳ ರೀತಿಗೆ ವಿರುದ್ಧವಾಗಿ ಅರಿಶಿನ ಹಚ್ಚದ ಬಿಳಿಯವಸ್ತ್ರವು ಅಪರಕರ್ಮಗಳ ವೇಳೆ ಬಳಕೆಯಾಗುವುದು, ಸಾವಿನ ಮನೆಯಲ್ಲಿ ಹದಿಮೂರನೆಯ ದಿನದ 'ಶುಭಸ್ವೀಕಾರ' ಸಂದರ್ಭದಲ್ಲಿ ಸಭಾಸದರ ಪಾದಧೂಳಿಯಿಂದ ಪವಿತ್ರವಾದ ಶುಭ್ರಶ್ವೇತ ವಸ್ತ್ರಗಳ ಧಾರಣ-ಇವೆಲ್ಲವೂ ವಸ್ತ್ರಮಾಧ್ಯಮವು ನಿರ್ವಹಿಸುವ ವೈವಿಧ್ಯಪೂರ್ಣ ಧಾರ್ಮಿಕಕ್ರಿಯೆಯ ಒಂದು ನಿದರ್ಶನ ಮಾತ್ರ.

9. ಆರ್ಥಿಕ ಸ್ಥಿತಿಯಂತೆಯೇ, ಜೀವನದ ದೃಷ್ಟಿಕೋನವು ಅವರ ಉಡುಗೆ ತೊಡುಗೆಗಳನ್ನು ಪರಿಮಿತಿಯಲ್ಲಿಟ್ಟಿದೆ. ವೈಭವ ಮತ್ತು ವೈವಿಧ್ಯವು ಇತ್ತೀಚಿನ ದಿನಗಳಲ್ಲಿ ಆದ ಬೆಳವಣಿಗೆ. ಪ್ರತಿಮನೆಯಲ್ಲಿರುವ ಎರಡು-ಮೂರು ಸಂಖ್ಯೆಯ ಕನಿಷ್ಠ ಸರಳ ಉಡುಗೆಗಳೇ ಸಂದರ್ಭಾನುಸಾರವಾಗಿ ವೈವಿಧ್ಯಪೂರ್ಣವಾಗಿ ಬಳಕೆಯಾಗುವುದು ಈ ವಿವರಗಳಲ್ಲಿ ಗಮನಿಸಬಹುದಾದ ಮತ್ತೊಂದು ಅಂಶವಾಗಿದೆ. ಉಡುಗೆಯ ಬಗೆಗಿನ ಒಂದು ಸಣ್ಣ ಕೌಟುಂಬಿಕ ಚಿತ್ರ ಇದು: "... ಹೆಂಗಸರಿಗೆ ಕೇಳಕ್ಕೆ ತಿಳಿಯಲ್ಲ, ಗಂಡಸರಿಗೆ ತರಕ್ಕೆ ತಿಳಿಯಲ್ಲ; ಬಟ್ಟೆ ಬಗ್ಗೆ ನಿಗ ಇಲ್ಲ. ಚೆನ್ನಾಗಿ ಸಂತರ್ಪಣೆ ಮಾಡಿ ಅನ್ನದಾನ ಮಾಡೋಕೇ ಗಮನ. ಆಡಂಬರದ ಉಡುಗೊರೆ ಇಲ್ಲ. ದಂಪತಿಪೂಜೆಗೂ ನೂಲಿಂದು 'ಕುತ್ತಾಲು ಸೀರೆ'

(ಅರ್ಧರೇಷ್ಮೆ, ಅರ್ಧನೂಲುಸೀರೆ)[5] ಕೊಟ್ಟರೆ ಅದೇ ಹೆಚ್ಚುಗಾರಿಕೆ . . . ಒಂದು ಧರ್ಮಾವರಂಸೀರೆ ಇದ್ದರೆ ಹತ್ತುವರ್ಷ ಆದರೂ ಚಿನ್ನದ ಹಾಗೆ ಜೋಪಾನವಾಗಿ ಇಟ್ಟುಕೊಳ್ಳೋರು ... ಒಂದು ದೊಡ್ಡಸೀರೆ. ಅದು ಎರಡು ಇದ್ದರೆ ಮಿತಿಮೀರಿಹೋಯ್ತು. ಬಿಡಿಸೀರೆ ಎರಡು-ಮಧ್ಯಾಹ್ನದ ಮಡೀಗೆ ಅದು ಮುಖ್ಯ. ಎರಡು ತುಂಡು (ಅರ್ಧಸೀರೆ) - ಅದು ರಾತ್ರಿ ಅಡುಗೆ ಮಾಡಕ್ಕೆ, ಬೆಳಿಗ್ಗೆ ಮಡಿಗೆ. ಎರಡು ಅರ್ಧತುಂಡುಸೀರೆ ಸ್ನಾನ ಮಾಡಕ್ಕೆ. ಹೀಗೆ ನೂಲುಸೀರೆ ಎರಡು, ಕುತ್ತಾಲುಸೀರೆ ಎರಡು ಅಥವಾ ಆದ್ಯಂತ ನೂಲುಸೀರೆ ಇದ್ದೋರೂ ಇದ್ದರು ..." ಇದು ಈಗಲೂ ಹಳ್ಳಿಗಳಲ್ಲಿ ವ್ಯಾಪಕವಾಗಿ ಮತ್ತು ನಗರಗಳಲ್ಲಿ ಹಿರಿಯತಲೆಮಾರಿಗೆ ಸೀಮಿತವಾಗಿ ಇರುವ ಸ್ಥಿತಿ.

ಈ. ಒಡವೆ:

ಒಡವೆಗಳ ವಿಚಾರದಲ್ಲಿ ಧಾರ್ಮಿಕತೆಯೊಂದಿಗೆ ಸೌಂದರ್ಯಪ್ರಜ್ಞೆಯೂ ಕೆಲಸ ಮಾಡಿರುವುದನ್ನು ಅವರ ಒಡವೆಗಳ ವೈವಿಧ್ಯದಲ್ಲಿ[6] ಕಾಣಬಹುದು. ಚಿನ್ನದರೂಪದ ಉಳಿತಾಯವೇ ಕ್ರಮವಾಗಿದ್ದ ಕಾಲದಲ್ಲಿ ಅವು ಸಂಕಷ್ಟಗಳನ್ನು ಪಾರುಮಾಡುವ ಮಾಧ್ಯಮಗಳೂ ಆಗುತ್ತಿದ್ದುದು ಸಹಜವೇ. ಆಸ್ತಿಸಂಗ್ರಹದ ಬೆರಳೆಣಿಕೆಯ ಪ್ರಾಚೀನ ಸಾಧನಗಳಲ್ಲಿ ಚಿನ್ನ ಒಂದಾದುದರಿಂದ ಅವರ ಬಳಿ ಚಿನ್ನದ ರೂಪದ ಅಷ್ಟಿಷ್ಟು ಆಸ್ತಿ ಇರುತ್ತಿತ್ತು. ಸಮಷ್ಟಿಯು ವಟುಗಳಿಗೂ, ವಧೂವರರಿಗೂ ತಮ್ಮ ಒಡವೆಗಳಿಂದಲೇ ಸಿಂಗರಿಸುವುದರಿಂದ ಸಂಭ್ರಮಕ್ಕೆ ಕುಂದು ಬರುವುದಿಲ್ಲ.


ಪುರುಷರು ನಿಯತವಾಗಿ ಕಿವಿಗೆ ಕಡಕು (ಕುಂಡಲ), ಸಾಧ್ಯವಿದ್ದವರು ಪವಿತ್ರದುಂಗುರ, ಶ್ರೀಮಂತರು ಮತ್ತು ರಾಜಸನ್ಮಾನಿತರು ಮಾತ್ರ ಚಿನ್ನದ ಕಪ್ಪತೊಡುತ್ತಿದ್ದ ಸಂಗತಿಯು, ಧಾರ್ಮಿಕ ಅನಿವಾರ್ಯತೆಯನ್ನು ಬಿಟ್ಟರೆ ಪುರುಷರಿಗೆ ಒಡವೆಗಳ ಬಗೆಗೆ ವಿಶೇಷ ಒಲವು ಇಲ್ಲದುದನ್ನೇ ತೋರಿಸುತ್ತದೆ. ಮದುವೆಯಲ್ಲಿ ತೊಡಿಸಿದ ಚಿನ್ನದ 'ಮುಡಿ' ಉಂಗುರವನ್ನು ಪುರುಷನು (ಕರ್ಮಮಾಡುವ ಸಂದರ್ಭ ಹೊರತು) ಯಾವಾಗಲೂ ತೆಗೆಯುವುದಿಲ್ಲ ಎಂಬುದು ವಿಶೇಷವೇ; ಆದರೆ ಆ ಉಂಗುರ ಇರದವರೂ ಉಂಟು.

ಹೆಂಗಸರಲ್ಲಿ ಆಭರಣಪ್ರಿಯತೆ ಇದ್ದರೂ ಆ ಆಭರಣಗಳು ಸಾರ್ವತ್ರಿಕ ಸ್ವರೂಪದವಾದುದು ಅವುಗಳ ಜಾತ್ಯತೀತ ಗುಣದಿಂದ. ಉದಾಹರಣೆಗೆ, 'ಕುರುಡು ಬಾವಲಿ'ಯನ್ನು ಕೆನ್ನೆಯ ಪಕ್ಕದ ಕಿವಿಯ ಉಬ್ಬಿಗೆ ಚುಚ್ಚಿ ತೊಡಿಸಿದಾಗ ಅನೇಕರು ಜ್ಞಾನ ತಪ್ಪುತ್ತಿದ್ದರು, ಕೆಲವರಿಗೆ ಊದುತ್ತಿತ್ತು, ಚಳಿಜ್ವರ ಬರುತ್ತಿತ್ತು ಎಂಬುದು, ಸಂಭ್ರಮದ ಸಂದರ್ಭಗಳ ಮಿತಿಯಲ್ಲಾದರೂ ಅವರಿಗೆ ಇರುತ್ತಿದ್ದ ಅಲಂಕಾರಪ್ರಿಯತೆಯನ್ನು ಎತ್ತಿತೋರಿಸುತ್ತದೆ. ಈ ಒಡವೆಗಳಲ್ಲಿ ತಮ್ಮದೇ ಆದ ವಿಶೇಷಗಳಿಲ್ಲದಿದ್ದರೂ ಅವಕ್ಕೆ ಹೊಂದಿಕೊಂಡ ಸಂಪ್ರದಾಯಗಳಲ್ಲಿ ವಿಶೇಷವನ್ನು ಗುರುತಿಸಬಹುದು. ಕೈ ಉಂಗುರಕ್ಕೆ ಹಿಂದೆ ಅಷ್ಟೇನೂ ಪ್ರಾಮುಖ್ಯವಿರಲಿಲ್ಲ. ಮದುವೆಯಲ್ಲಿ 'ಮುಡಿ ಉಂಗುರ' ಎಂದು ಒಂದು ಸಲಿಗೆ ಮಾಡಿಸಿ ವಧುವಿನ ಬೆರಳಿಗೆ ತೊಡಿಸುತ್ತಿದ್ದರು. ಅದನ್ನು ಕಳೆಯಬಾರದು, ಅದನ್ನು ಇಟ್ಟುಕೊಂಡು ಮೂಗುತಿ ಮಾಡಿಸಿಕೊಳ್ಳಬೇಕು ಎಂಬುದು ಅಂಥದೊಂದು ನಿಯಮ. ಧಾರ್ಮಿಕ ಪ್ರಾಮುಖ್ಯ ಉಳ್ಳವು ಮೂಗುತಿ, ಮಾಂಗಲ್ಯ, ಓಲೆ, ಕಾಲುಂಗುರ, ಬಳೆ, ಕರಿಮಣಿ ಮಾತ್ರ. ಮೂಗುಬಟ್ಟು ಭಿನ್ನವಾದರೆ ಗಂಡನಿಗೆ (ಆ ಸ್ಥಿತಿಯಲ್ಲಿ) ಮುಖ ತೋರಿಸಬಾರದು, ಹೊಸಲು ದಾಟಬಾರದು; ಅದು ಗಂಡನಿಗೆ ಅಮಂಗಳ ಎಂಬ ನಂಬುಗೆಯ ಹಿಂದೆ ಇರುವ ಮುತ್ತೈದೆತನದ ತೀವ್ರಅಪೇಕ್ಷೆ ಗುರುತಿಸುವಂಥದು.

ಹಚ್ಚೆಯೂ ಇವರನ್ನು ಗಾಢವಾಗಿ ಆಕರ್ಷಿಸಿರುವ ಅಪರೂಪದ ನಿದರ್ಶನಗಳಿವೆ. ಹೆಂಗಸರು ಎಡಹೆಬ್ಬೆರಳು ಮತ್ತು ಎಡತೋರುಬೆರಳಿನ

5 'ಕುತ್ತಾಲು ಸೀರೆ' ಎಂದರೆ 'ಕುತ್ತಾಲಂ ಸೀರೆ'. ಶೆಂಕೋಟ್ಟೈ ಸೀಮೆಯಲ್ಲಿರುವುದು ಕುತ್ತಾಲಂ ಎಂಬ ಊರು. ಸಂಕೇತಿಗಳು ಕರ್ನಾಟಕಕ್ಕೆ ಬಂದು ಹಲವು ಶತಮಾನಗಳಾದರೂ ಆ ಸೀರೆಯನ್ನು ಬಳಸುವುದು ಅವರ ಮೂಲನೆಲೆಯ ಖಚಿತತೆಯ ದೃಷ್ಟಿಯಿಂದ ಮುಖ್ಯವಾಗುತ್ತದೆ - ಡಾ.ಎಂ.ಎಲ್.ಲಲಿತಮ್ಮ, ಬೆಂಗಳೂರು.

6 ವಿವಿಧ ರೀತಿಯ ಆಭರಣಗಳು ಪ್ರತಿಯೊಬ್ಬರಲ್ಲಿಯೂ ಇರುತ್ತಿದ್ದವು. ಉದಾ.ಗೆ ಅಡ್ಡಿಕೆಗಳು, ಜೋಮಾಲೆಸರ, ಬಂದಿ, ತಾತಿಗುಂಡು, ಕೆನ್ನೆಸರಪಳಿ, ಚೋಳತಂಬು, ಬುಗುಡಿ, ರಾಗಟೆ, ತಾಳಂಪೂ, ತೋಳಬಂದಿ, ವಾಕ್ ಇತ್ಯಾದಿಗಳು ಅತಿಶಯವಾದುವು. ಇವುಗಳ ಸಾರ್ವತ್ರಿಕ ಸ್ವರೂಪದಿಂದಾಗಿ ಅವುಗಳ ವಿವರದ ಅಗತ್ಯವಿಲ್ಲ.



52 ಪೂನೂರ್‌ತುಂಬೆ ಎಂಬ ಈ ರಂಗೋಲಿಯನ್ನು ಅನೇಕ ವೇಳೆ ಮನೆಯಲ್ಲಿ ಬಿಡಿಸುತ್ತಾರೆ. ಹಚ್ಚೆಗೂ ಅದನ್ನೇ ಬಳಸುತ್ತಿದ್ದ ನಿದರ್ಶನ ಇದು

ನಡುವಿನ ಪ್ರದೇಶದಲ್ಲಿ ಹಾಕಿಸಿಕೊಳ್ಳುವ 'ವಲಗುಪ್ಪು' ಅಡುಗೆಮಾಡುವವರಿಗೆ ಶ್ರೇಯಸ್ಕರ ಎಂಬ ನಂಬಿಕೆಯು, ಸೌಂದರ್ಯಸಾಧನೆಯ ಜೊತೆಗೆ ಅದನ್ನು ಮೀರಿದ ಚಿಂತನೆಯೂ ಆ ಬಗೆಗೆ ಇರುವುದರ ನಿದರ್ಶನ. ಬಲಗೈನ ಅದೇ ಭಾಗದಲ್ಲಿ 'ಗಿಂಡಿ' ಎಂಬ ಹಚ್ಚೆಹಾಕಿಸಿಕೊಳ್ಳುವುದೂ ಉಂಟು. ಮುಟ್ಟಾದಾಗ ಹಣೆಗೆ ಕುಂಕುಮ ಹಚ್ಚಿಕೊಂಡಿಲ್ಲದಿರುವುದರಿಂದ, ಆ ಸ್ಥಿತಿಯಲ್ಲಿ ಪತಿಗೆ ಮುಖ ತೋರಿಸುವುದು ಶ್ರೇಯಸ್ಕರವಲ್ಲವೆಂಬ ನಂಬಿಕೆಯಿಂದ ಹಣೆಗೆ ಹಚ್ಚಿದ ಕುಂಕುಮದಂತೆ ಹಚ್ಚೆಹೊಯ್ಯಿಸಿಕೊಳ್ಳುವುದೂ ಮೇಲಿನ ಸಂಗತಿಯನ್ನೇ ಪೋಷಿಸುತ್ತದೆ. ಶುದ್ಧ ಅಲಂಕಾರಪ್ರಜ್ಞೆಯಿಂದಲೇ ಶಿವನಕಣ್ಣು, ಬಿಲ್ವಪತ್ರೆ, ಕೃಷ್ಣನ ಮಲಕು, ಪಾರಿಜಾತ, ಬುಡುಬುಡಿಕೆ, ಬೇಲೂರುಬೀದಿ, ಪೂನೂರ್ ತುಂಬೆ (ಚಿತ್ರ 52) ಇತ್ಯಾದಿ ಹಚ್ಚೆಗಳನ್ನು ಹಾಕಿಸಿಕೊಂಡಾಗಲೂ, ಚಿತ್ರಗಳ ಆಯ್ಕೆಯು, ಅವುಗಳ ಉದ್ದೇಶವು ಸೌಂದರ್ಯ ಮತ್ತು ಧಾರ್ಮಿಕತೆಯ ಸಮನ್ವಯದ್ದು ಎಂಬುದನ್ನೇ ಸ್ಪಷ್ಟಪಡಿಸುತ್ತದೆ. ಪುರುಷರಲ್ಲಿಯೂ ತೀರ ಅಪರೂಪಕ್ಕೆ ಕಾಣುವ ಹಚ್ಚೆಹಾಕಿಸಿಕೊಳ್ಳುವ ಪದ್ಧತಿಯು ಮೇಲಿನ ದೃಷ್ಟಿಯಿಂದ ಸಹಜವಾದುದೇ ಆಗಿದೆ. ಕಣ್ಣನ್ನು ತಂಪಾಗಿ ಇಡುವ ಗುಣದಿಂದಾಗಿ ವೈದ್ಯವಾಗಿಯೂ ಬಳಕೆಯಾಗುವ ಕಣ್ಣುಕಪ್ಪು ಕೂಡ[7] ಅಲಂಕಾರದ ಸಾಧನವೂ ಆಗಿದೆ.

ಒಟ್ಟಿನಲ್ಲಿ, ತಮ್ಮ ಆರ್ಥಿಕಮಿತಿಯ ನಡುವೆಯೂ ಒಡವೆಗಳ ವೈವಿಧ್ಯವನ್ನು ತಮ್ಮ ಸಂಭ್ರಮಗಳ ಭಾಗವಾಗಿ ಮಾಡಿಕೊಂಡಿರುವುದು ಮತ್ತು ಆದಿಮ ಕನಿಷ್ಠ ತೊಡುಗೆಗಳಿಗೆ ಹಳಮೆ ಬಂದಂತೆ ಅವಕ್ಕೆ ಸಂಪ್ರದಾಯ ಮತ್ತು ಪಾವಿತ್ರ್ಯದ ಮುದ್ರೆ ಬಿದ್ದುದನ್ನು ಇಲ್ಲಿ ಗುರುತಿಸಬಹುದು.

ಉ. ಕೇಶವಿನ್ಯಾಸ:

ಹೆಂಗಸರು ಕೊಬ್ಬರಿಎಣ್ಣೆ ತೊಡೆದುಕೊಂಡು ಬೈತಲೆತೆಗೆದು ತಲೆಬಾಚಿ ಜಡೆಹಾಕಿಕೊಳ್ಳುವುದು ಅವರ ಕೇಶಾಲಂಕಾರದ ಸಾಂಪ್ರದಾಯಿಕ ರೀತಿ. ತಲೆಗೂದಲನ್ನು ಗಂಟುಕಟ್ಟುವುದೂ ಮಡಿಯ ಕಾರಣಕ್ಕೆ. ಜಪ, ಗೌರಿಪೂಜೆ ಆದವರಿಗೆ ಅದು ಮುರಿಯಬಾರದ ನಿಯಮ. ಅವರು ಪೂಜಾದಿ ಮುಗಿಯುವವರೆಗೆ (ಅದು ಮೈಲಿಗೆ ಎಂಬ ಕಾರಣಕ್ಕೆ) ಕೂದಲಿಗೆ ಎಣ್ಣೆ ತೊಡೆದುಕೊಳ್ಳುವಂತೆಯೂ ಇಲ್ಲ. ಗಂಡಸರೂ ತಲೆಯ ಹಿಂದೆ ಶಿಖೆಬಿಟ್ಟು ಹೂಮುಡಿಯುವುದು, ಮುಂಭಾಗದಲ್ಲಿ ಅರ್ಧ ಚಂದ್ರಾಕಾರಕ್ಕೆ ವಪನ ಮಾಡಿಸಿಕೊಳ್ಳುವುದು ಎಲ್ಲೆಡೆಯ ಸಾಂಪ್ರದಾಯಿಕ ರೀತಿ. ದೇವರಿಗೆ ಮುಡಿಕೊಡುವ ಪದ್ಧತಿ ಸಾರ್ವತ್ರಿಕವಲ್ಲ. ಧಾರ್ಮಿಕ ನಂಬಿಕೆಗಳು ಕೇಶಾಲಂಕಾರವನ್ನೂ ನಿಯಂತ್ರಿಸುವ ರೀತಿಯನ್ನು ಈ ವಿವರಗಳಲ್ಲಿ ಕಾಣಬಹುದು.


ಊ. ಧಾರ್ಮಿಕ ಲಾಂಛನಗಳು:

ಲಾಂಛನವು ಧಾರ್ಮಿಕ ಅಗತ್ಯಗಳನ್ನು ಪೂರೈಸುತ್ತಲೇ ಸಾಂಪ್ರದಾಯಿಕರ ಕಣ್ಣಿಗೆ ಅಲಂಕಾರದ ಪರಿಣಾಮವನ್ನೂ ಉಂಟುಮಾಡುತ್ತದೆ; ಧಾರ್ಮಿಕ ಉಪಪಂಗಡವನ್ನೂ ಸೂಚಿಸುತ್ತದೆ. ಸ್ಮಾರ್ತರಾದ ಸಂಕೇತಿಗಳ ಮುಖ್ಯ ಲಾಂಛನಗಳೆಂದರೆ ಗಂಡಸರಿಗೆ ವಿಭೂತಿ ಮತ್ತು ಗಂಧ; ಹೆಂಗಸರಿಗೆ ಕುಂಕುಮ, ಅರಿಶಿನ, ಗಂಡು ಮಕ್ಕಳಿಗೆ ಸಾದು.

---

7 ಚಿಲ್ಲದ ಬೀಜ, ವೀಳೆ, ಸುರುಸುರಿಕೆ ಸೊಪ್ಪು, ಹೊನಗೊನೆ ಸೊಪ್ಪು, ನಂಜುಬಟ್ಟಲು ಹೂನಿಂದ ಬೇರೆ ಬೇರೆ ರೀತಿಯಲ್ಲಿ ಕಪ್ಪು ತಯಾರಿಸುತ್ತಾರೆ.

ಸಂಕೇತಿಗಳ ಬಳಕೆಯ ಲಾಂಛನ ರೀತಿಗಳು: (ಚಿತ್ರ 53)



ಚಿತ್ರ 53 ಲಾಂಛನ ರೀತಿಗಳು

ಲಾಂಛನಗಳಿಗೆ ಸಂಬಂಧಿಸಿದಂತೆ ಸಂಕೇತಿ ಸಮುದಾಯದ ರೀತಿಗಳನ್ನು ಇಲ್ಲಿ ಅವಲೋಕಿಸಬಹುದು.

1. ಆಕರ: ಜಿಜ್ಞಾಸೆ: ತ್ರ್ಯಂಬಕ ಮಂತ್ರ, ಮಂತ್ರಮಹೋದಧಿ, ದೇವೀಭಾಗವತದ ವಿವರಣೆ - ಹೀಗೆ ವಿವಿಧ ಆಕರಗಳನ್ನನುಸರಿಸಿ ವಿಭೂತಿಧಾರಣ ಮಾಡಿಕೊಳ್ಳುವವರಿದ್ದು ಅವುಗಳ ಧಾರಣವಿಧಿಯ ವಿವರಗಳಲ್ಲಿ ಭಿನ್ನತೆ ಇದ್ದರೂ 'ತ್ರ್ಯಂಬಕ'ವೇ ಹೆಚ್ಚು ಪ್ರಚಲಿತವಾದುದು. ಒಂದೇ ಆಕರವನ್ನನುಸರಿಸಿದಾಗಲೂ ಇಂಥ ಭಿನ್ನಕ್ರಮಗಳನ್ನು ಗುರುತಿಸಬಹುದು. ಉದಾಹರಣೆಗೆ ತ್ರ್ಯಂಬಕ ವಿಧಿಯನ್ನನುಸರಿಸುವವರಲ್ಲಿಯೇ ಇರುವ ಭೇದಗಳು ಹೀಗಿವೆ:

0.1 ಶಿರಸ್ಸು, ಹಣೆ, ಮಣಿಕಟ್ಟು, ಮೊಳಕೈ, ಭುಜ, ಹೃದಯ, ಎದೆ, ಬೆನ್ನು, ಪಾದಗಳು - ಈ ಕ್ರಮದಲ್ಲಿ ವಿಭೂತಿಧಾರಣೆ ಮಾಡುವುದು. ಉಳಿದ ವಿಭೂತಿಯನ್ನು ಕೆಲವರು ನೀರಿನಲ್ಲಿ ಕಲಸಿ ಪಾನ ಮಾಡುವುದುಂಟು.

0.2 ಹಣೆ, ಎರಡು ತೋಳು, ಎರಡು ಭುಜ, ಎರಡು ಮೊಳಕೈ, ಎದೆ, ಬೆನ್ನು ಎರಡು, ಕಂಠ ಒಂದು, ತಲೆ ಒಂದು - ಈ ಕ್ರಮದಲ್ಲಿ ಧಾರಣೆ ಮಾಡುವುದು ಮತ್ತೊಂದು ಕ್ರಮ.

ವಿಭೂತಿಯ ಮೂರು ಗೆರೆಗಳನ್ನು ಊರ್ಧ್ವಮುಖವಾಗಿ ಜೋಡಿಸುವ ಸಂಧ್ಯಾಸಂದರ್ಭದ ಕ್ರಮವಾಗಲಿ, ವಿಭೂತಿ ಇರುವಂತೆಯೇ ಗಂಧಧಾರಣ ಮಾಡುವ ಕ್ರಮವಾಗಲಿ, ವಿಭೂತಿಯನ್ನು ಅಳಿಸಬಹುದಾದ ರೀತಿಯಾಗಲಿ, ಸಂಜೆ ವಿಭೂತಿಯನ್ನು ಕಲಸಿಹಾಕಿಕೊಳ್ಳಬಹುದೆ ಎಂಬ ಸಂಗತಿಯಾಗಲಿ ಸಮುದಾಯದಲ್ಲಿ ತೀವ್ರಜಿಜ್ಞಾಸೆಯ ಸಂದರ್ಭಗಳಾಗುತ್ತವೆ. ಮೂಲ ಆಶಯಕ್ಕೆ ಒತ್ತುಕೊಟ್ಟು ಇಂಥ ಬಾಹ್ಯಸಂಕೇತಗಳಲ್ಲಿ ನಮ್ಯತೆಗೆ ಅನುವು ಮಾಡಿಕೊಂಡವರೇ ಮೂಲ ಆಶಯವನ್ನು ಮರೆತು ಬಾಹ್ಯಸಂಗತಿಗಳಿಂದ ಬಿಡಿಸಿಕೊಳ್ಳಲಾಗದೆ ತೊಳಲುವ ಪ್ರಸಂಗಗಳ ನಿದರ್ಶನವೂ ಇದಾಗಿದೆ.

2. ಸ್ತ್ರೀಯರಿಗೂ ನಿಯಮ: ಮಂತ್ರವಿಲ್ಲದಿದ್ದರೂ ಹೆಂಗಸರೂ ಲಾಂಛನದ ವಿಷಯದಲ್ಲಿ ಅನುಸರಿಸುವ ವಿಧಾನಗಳ ಸಂಕೀರ್ಣತೆಯ ಒಂದು ನಿದರ್ಶನ: "ಸ್ನಾನದವೇಳೆ ಅರಿಶಿನವನ್ನು ತೋರುಬೆರಳು ಅಥವಾ ಮಧ್ಯದ ಬೆರಳಿನಿಂದ ಹೆಬ್ಬೆರಳಿನೊಡನೆ ತೆಗೆದುಕೊಂಡು ಅಥವಾ ಮೂರೂ ಬೆರಳಿನಿಂದ ತೆಗೆದುಕೊಂಡು ಗಂಗೆಗೆ ಎರಡುಬಾರಿ ಪ್ರೋಕ್ಷಿಸಬೇಕು. ಎಡಗೆನ್ನೆ, ಬಲಗೆನ್ನೆ, ಎಡಗೈ, ಬಲಗೈ, ಎಡಗಾಲು, ಬಲಗಾಲಿಗೆ ಕ್ರಮವಾಗಿ ಎರಡೆರಡುಬಾರಿ ಮೇಲಿನಿಂದ ಕೆಳಕ್ಕೆ ಪೂಸಬೇಕು."

3. ವೈವಿಧ್ಯ - ಪ್ರಭಾವ: ಬೆಳಗ್ಗೆ ಮತ್ತು ಸಂಜೆ ವಿಭೂತಿಧಾರಣ, ಬೆಳಗ್ಗೆ ದೇವತಾರ್ಚನೆಯನಂತರ ಗಂಧಧಾರಣವು ಕ್ರಮ. ತ್ರಿಪುಂಡ್ರಕ್ರಮಕ್ಕಿಂತ ಭಿನ್ನವಾಗಿ ಗಂಧವನ್ನು ಹುಣಸೆಬೀಜದ ಆಕಾರಕ್ಕೆ ಹಚ್ಚಿಕೊಳ್ಳುವುದು; ಚಂದ್ರ ಇಲ್ಲವೆ ಸೂರ್ಯಾಕಾರದಲ್ಲಿ ಗಂಧವನ್ನು ಧರಿಸಿ, ನಡುವೆ ಕುಂಕುಮ ಹಾಕಿಕೊಳ್ಳುವುದು, ಅಕ್ಷತೆ - ಇವೆಲ್ಲವೂ ಅಲಂಕಾರ ಗುಣವನ್ನೇ ಪ್ರಧಾನವಾಗಿ ಇಟ್ಟುಕೊಂಡ



54 ದ್ರಾವಿಡ ಸಂಪ್ರದಾಯದ ಸೀರೆ ಉಟ್ಟ ದಕ್ಷಿಣದ ಗೃಹಿಣಿ

ಅನ್ಯಪ್ರಭಾವದ ರೀತಿಗಳು. ಕುಂಕುಮವು ಪ್ರಸಾದವಾದಾಗ ಮಾತ್ರ ಗಂಡಸರು ಹುಬ್ಬುಗಳ ನಡುವೆ ಅದನ್ನು ಧರಿಸುವುದು ರೂಢಿ.

ಕರ್ನಾಟಕದಲ್ಲಿ ಬ್ರಹ್ಮಚಾರಿಗಳು ಮಾತ್ರ ಗೂಟನಾಮ ಧರಿಸುವುದು ಪದ್ಧತಿ. ಬೆಳಗ್ಗೆ ಎಲ್ಲರೂ ಗೋಪೀಚಂದನ ಹಚ್ಚಿಕೊಳ್ಳುವುದು ಇಲ್ಲವೆ ವಿಭೂತಿಯ ಮೇಲೆ ಗೋಪೀಚಂದನವನ್ನೂ ಕೆಲವರು ಹಚ್ಚಿಕೊಳ್ಳುವುದು ಕೇರಳದ ಭಾಗದಲ್ಲಿರುವ ರೂಢಿ. ತಿರುನೆಲ್‌ವೇಲಿಯಲ್ಲಿಯೂ ಗೂಟನಾಮ ಹಾಕಿಕೊಳ್ಳುವ ಗೃಹಸ್ಥರು ನೋಡಸಿಗುತ್ತಾರೆ. ಅದು ಸೌಕರ್ಯಕ್ಕಾಗಿ ಮಾಡಿಕೊಂಡ ಅನುಕರಣವೇ ಅಥವಾ ಭಾಗವತ ಸಂಪ್ರದಾಯದ ಮೂಲ ಲಕ್ಷಣದ ಉಳಿಕೆಯೇ ಎಂಬುದು ಮತ್ತೊಂದು ಸಂಶೋಧನೆಯ ವಸ್ತು ಆಗಬಹುದು. ಭಾಗವತ ಏಕಾದಶಿ ಆಚರಿಸುವ ಕರ್ನಾಟಕದ ಸಂಕೇತಿಗಳಲ್ಲಿ ಲಾಂಛನಕ್ರಮವು ಉಳಿದವರಿಗಿಂತ ಭಿನ್ನವಾಗಿಲ್ಲ.

4. ಪ್ರಾದೇಶಿಕ ವೈಶಿಷ್ಟ್ಯ: ಸಂತರ್ಪಣೆಯ ವೇಳೆ ಕೇಸರಿ-ಗಂಧ ಧರಿಸುವುದು ಮಧ್ಯದೇಶದ ಕ್ರಮವಾದರೆ ಹಾಸನ, ಲಿಂಗದಹಳ್ಳಿ, ಮತ್ತೂರಿನಲ್ಲಿ ಕುಂಕುಮಬೆರೆಸಿದ ಗಂಧ ಇಲ್ಲವೆ ಕಲಸಿದ ಕುಂಕುಮವನ್ನೇ ಧರಿಸುವುದು; ಅಕ್ಷತೆ, ಶ್ರಾವಣಶನಿವಾರದ ನಾಮಧಾರಣೆ ದಕ್ಷಿಣದಲ್ಲಿಲ್ಲದುದು - ಪ್ರಾದೇಶಿಕ ಪ್ರಭಾವಗಳನ್ನಾಧರಿಸಿದ ಭಿನ್ನತೆಗಳು.

5. ಸ್ಥಿತ್ಯಂತರ: ಆಹಿತಾಗ್ನಿಯ ಪವಿತ್ರಭಸ್ಮವನ್ನೇ ಬಳಸುತ್ತಿದ್ದ ಸಮುದಾಯವು ಆಹಿತಾಗ್ನಿಗಳು ಕಡಮೆಯಾದಂತೆ, ಮಹಾಶಿವರಾತ್ರಿಯಂದು ಹಸುವಿನ ಸಗಣಿಯನ್ನು ಸುಟ್ಟು ತಯಾರಿಸಿದ ಭಸ್ಮವನ್ನೇ ಬಳಸತೊಡಗಿದುದು ಸಾಮಾಜಿಕ ಸ್ಥಿತ್ಯಂತರದ ಸಂಕೇತವೂ ಹೌದು.

6. ಆಧುನಿಕ ಪ್ರವೃತ್ತಿ: ಧಾರ್ಮಿಕಮಿತಿಯ ಲಾಂಛನವು ಕೂಡ ಪರಪ್ರಭಾವಗಳ ವಸ್ತುವಾಗಿರುವುದು ತೀವ್ರಜಿಜ್ಞಾಸೆ ಮತ್ತು ಗೊಂದಲಗಳ ಕೇಂದ್ರವಾಗಿರುವುದು ಈ ಸಮುದಾಯದ ವೈಶಿಷ್ಟ್ಯವಾಗಿದೆ. ಲಾಂಛನ ವೈವಿಧ್ಯ ಮತ್ತು ಅಲಂಕಾರ ಸಾಧ್ಯತೆಗಳು ವಿಕಾಸವಾಗುವುದರ ಬದಲು ಲಾಂಛನರಾಹಿತ್ಯದ ಕಡೆಗೆ ಸಮುದಾಯವು ಪರಿವರ್ತನಶೀಲವಾಗಿದೆ. ಆಧುನಿಕ ಅಲಂಕಾರ ಸಾಧ್ಯತೆಗಳು ಮುಕ್ತವಾಗಿ ಇವರನ್ನು ಆಕರ್ಷಿಸಿವೆ.

ಋ. ಕೆಲವು ಗಾಢ ವೈಶಿಷ್ಟ್ಯಗಳು:

ಉಡುಗೆ ತೊಡುಗೆಗಳಿಗೆ ಸಂಬಂಧಿಸಿದಂತೆ ಸಂಕೇತಿಗಳಿಗಷ್ಟೇ ವಿಶೇಷವಾದ ಕೆಲವು ಗಾಢ ಸಂಗತಿಗಳಿವೆ. ಅವುಗಳನ್ನು ಇಲ್ಲಿ ಪರಿಶೀಲಿಸಿದೆ:

1. ಗಂಡೀಸೀರೆ: ದಕ್ಷಿಣದಿಂದ ಕರ್ನಾಟಕಕ್ಕೆ ವಲಸೆಬಂದ ಸಂಕೇತಿಗಳು ತಮ್ಮ ಮೂಲಸಂಸ್ಕೃತಿಯನ್ನು ವಿವಾಹದವೇಳೆ 'ಸಂಕಲಿಕೆಸೀರೆ'ಯನ್ನು (ಮಾತ್ರ) ದ್ರಾವಿಡಸಂಪ್ರದಾಯದಂತೆ ಉಡುವುದರಲ್ಲಿಯೂ (ಚಿತ್ರ 54) ಉಳಿಸಿಕೊಂಡಿದ್ದಾರೆ. ಒಳಗಚ್ಚೆಹಾಕಿ ನೆರಿಗೆಯ ಸೀರೆಯುಡುವುದು ಪ್ರಾಂತೀಯ ಪ್ರಭಾವದಿಂದ ಬಂದ ಈಗಿನ ಸಾಮಾನ್ಯಕ್ರಮವಾದರೂ (ಚಿತ್ರ 55) ಅವರ ಐತಿಹಾಸಿಕ ಹಿನ್ನೆಲೆಯ ಸೀರೆಯುಡುಗೆ ಎಂದರೆ 'ಗಂಡೀಸೀರೆ'ಯೇ.



55 ಕರ್ನಾಟಕದ ಸಾಂಪ್ರದಾಯಿಕ ಸೀರೆ ಉಟ್ಟ ಗೃಹಿಣಿ ಪತಿಯೊಂದಿಗೆ



56 ಗಂಡೀಸೀರೆ ಉಟ್ಟ ಕನ್ಯೆ (ಸೀರೆಯ ಎಡತುದಿಯನ್ನು ಸೊಂಟಕ್ಕೆ ಸುತ್ತಿ ಗಂಟು ಹಾಕುವುದು; ಸುತ್ತಿದ ಭಾಗದ ಕೆಳ ಅಂಚನ್ನು ಕಚ್ಚೆ ಹಾಕುವುದು; ಉಳಿದ ಭಾಗದ ಪ್ರಾರಂಭವನ್ನು ಎರಡು ನೆರಿಗೆ ಮಾಡಿ ಸೊಂಟಕ್ಕೆ ಸುತ್ತುವುದು; ಉಳಿದ ಭಾಗವನ್ನು ಹಿಂದಿನಿಂದ ಬಳಸಿ ಒಂದು ಮತ್ತು ಎರಡನೆಯ ಸುತ್ತುಗಳನ್ನು ಎದೆಯ ಮಟ್ಟದಲ್ಲಿ ಸುತ್ತುವುದು; ಅದನ್ನು ಹೆಗಲಿನ ಮೇಲೆ ಮುಂದುವರಿಸಿ ಎಡಹೆಗಲ ಮೇಲೆ ಗಂಟು ಹಾಕುವುದು)

ಎಡಗಡೆಯಿಂದ ಪ್ರದಕ್ಷಿಣಾಕಾರವಾಗಿ ಸುತ್ತಿ ಎಡಹೆಗಲ ಮೇಲೆ ಗಂಟುಹಾಕುವುದು, ಮತ್ತು ದೊಡ್ಡಭಾಗದಲ್ಲಿ ತುಸು ನೆರಿಬರುವುದು, ಸೀರೆಯ ಕೆಳಅಂಚು ಕಾಲಿನ ತಳದವರೆಗೂ ಬಾರದೆ, ಸುಮಾರು ಒಂದು ಗೇಣು ಮೇಲಿರುವುದು ಅದರ ವೈಶಿಷ್ಟ್ಯ. ಕೇರಳಕ್ಕೆ ವಲಸೆ ಹೋದವರೂ 'ತಮಿಳ್‌ಮಡಿಪ್ಪಡವೈ'ನ್ನು ತಾಳಿಕಟ್ಟುವ ವೇಳೆಗೆ ಮತ್ತು ಗೋಕುಲಾಷ್ಟಮಿ, ವರಮಹಾಲಕ್ಷ್ಮಿ ವ್ರತದ ದಿನ ಉಳಿಸಿಕೊಂಡಿರುವುದು ಸಂಪ್ರದಾಯವು ಉಳಿದುಕೊಳ್ಳುವ ರೀತಿ. ಗಂಡೀಸೀರೆಯನ್ನು ಉಡುವ ಕ್ರಮ: ಸೀರೆಯ ಎಡತುದಿಯನ್ನು ಸೊಂಟಕ್ಕೆ ಸುತ್ತಿ ಒಂದು ಗಂಟುಹಾಕುವುದು; ಸುತ್ತಿದಭಾಗದ ಕೆಳಅಂಚನ್ನು ಕಚ್ಚೆಹಾಕುವುದು; ಉಳಿದ ಭಾಗದ ಪ್ರಾರಂಭವನ್ನು ಎರಡು ನೆರಿಗೆ ಮಾಡಿ ಸೊಂಟಕ್ಕೆ ಸಿಕ್ಕಿಸುವುದು; ಉಳಿದಭಾಗವನ್ನು ಹಿಂದಿನಿಂದ ಬಳಸಿ ಒಂದು ಮತ್ತು ಎರಡನೆಯ ಸುತ್ತುಗಳನ್ನು ಎದೆಯ ಮಟ್ಟದಲ್ಲಿ ಸುತ್ತುವುದು; ಅನಂತರ ಅದನ್ನು ಹೆಗಲಮೇಲೆ ಮುಂದುವರಿಸುವುದು; ಎಡಹೆಗಲಮೇಲೆ ಗಂಟುಹಾಕುವುದು. ಉಳಿದ ಸೆರಗನ್ನು ಎಡಭುಜದ ಅಡಿಯಿಂದ ಬಲಹೆಗಲ ಮೇಲೆ ಸೆರಗು ಎಳೆದು ಕತ್ತಿಗೆಸುತ್ತಿ ಸಿಕ್ಕಿಸುವುದು (ಚಿತ್ರ 56). ವಿಧವೆಯಾದರೆ, ಎಡ ಹೆಗಲಮೇಲೆ ಗಂಟುಹಾಕಿದ ಅನಂತರ ತಲೆಯಮೇಲೆ ಎಳೆದು ಎಡಭುಜದ ಮೇಲಿನಿಂದ ಕತ್ತಿಗೆಸುತ್ತಿ ಸಿಕ್ಕಿಸುವುದು (ಚಿತ್ರ 57).

ಗಂಡೀಸೀರೆಯನ್ನು ಉಡುವ ವಿಧಾನವಾಗಲಿ, ಐತಿಹಾಸಿಕ ಹಿನ್ನೆಲೆಯಾಗಲಿ ಸಂಕೇತಿಗಳಿಗೇ ವಿಶಿಷ್ಟವಾದುದು. ಕೊಡವಸೀರೆ ಇಲ್ಲವೆ ಇತರ ಬ್ರಾಹ್ಮಣೇತರರು ಉಡುವ ಸೀರೆಯ ಮಾದರಿಯು, ಮೇಲುನೋಟಕ್ಕೆ ಉಂಟುಮಾಡುವ ಸಾಮ್ಯದ ಭ್ರಮೆಯು ಈ ವಿವರಗಳಲ್ಲಿ ಪೂರ್ಣವಾಗಿ ಪರಿಹಾರವಾಗುತ್ತದೆ. ಕೊಡವಸೀರೆ ಹಿಂದಣ ನೆರಿಗೆಯುಳ್ಳದ್ದು. ಅದರ (ಕಾವೇರೀಪುರಾಣದ) ಪೌರಾಣಿಕ ಹಿನ್ನೆಲೆಯು ಚಂದ್ರವರ್ಮನೆಂಬ ಮತ್ಸ್ಯದೇಶದ ರಾಜನಿಗೆ ಪಾರ್ವತಿಯು ನೀಡಿದ ಆದೇಶವನ್ನು ವಿವರಿಸುತ್ತದೆ. ಹಾಗೆಯೇ ಸೀರೆಯ ಬಹುಭಾಗದ ವಿಸ್ತೀರ್ಣವನ್ನೆಲ್ಲ ಸೊಂಟಕ್ಕೆ ಸುತ್ತಿ ಗೊಬ್ಬೆಸೆರಗು ಕಟ್ಟಿಕೊಳ್ಳುವ ಮಲೆನಾಡಿನ ಒಕ್ಕಲಿಗರ ಸೀರೆಯುಡುವ ವಿವರಗಳೂ ಗಂಡೀಸೀರೆಗಿಂತ ಭಿನ್ನವಾದವು.[8]



57 ಸೆರಗನ್ನು ಎಡ ಹೆಗಲ ಮೇಲೆ ಗಂಟು ಹಾಕಿದನಂತರ ತಲೆಯ ಮೇಲೆ ಎಳೆದು ಎಡಭುಜದ ಮೇಲಿಂದ ಕತ್ತಿಗೆ ಸುತ್ತಿ ಸಿಕ್ಕಿಸುವುದು ವಿಧವೆಯರ ರೀತಿ.


[8] ವಿವರಗಳಿಗೆ ನೋಡಿ:

ಅ) ಪಟ್ಟೋಲೆ ಪಳಮೆ, ಪು.೧೮-೧೯

ಆ) *The Coorgs and their origins*, Cariappa M.P. & Cariappa (Ponnamma), Geetha Book House, Mysore, 1981, pp.81-82.

ಇ) ಮಲೆನಾಡಿನ ಒಕ್ಕಲಿಗರು ಮತ್ತು ಅವರ ಜಾನಪದ, ಪು.೧೫೮.

2. ಪೂವಾಡಿಪಾನೆ: ನಾಚಾರಮ್ಮನ ಶಾಪವನ್ನು ಪರಿಹರಿಸಿಕೊಳ್ಳುವುದಕ್ಕಾಗಿ ದಕ್ಷಿಣದ ಕೆಲವು ಮನೆತನಗಳಲ್ಲಿ ಮಾತ್ರ ರೂಢಿಯಲ್ಲಿರುವ ಪೂವಾಡಿಪಾನೆ; ಎಲ್ಲೆಡೆಯೂ ಹೊಸಸೀರೆ ಉಡುವುದಕ್ಕೆ ಮೊದಲು ಮಾಡುವ 'ಮೀಸಲು' - ಇವೆರಡೂ ವಸ್ತ್ರಪೂಜೆಗಳೇ. ಆದರೆ, ವರ್ಷಕ್ಕೊಮ್ಮೆ (ಮಾತ್ರ) ನಿಯತವಾಗಿ ನಡೆಯುವ 'ಪೂವಾಡಿಪಾನೆ'ಯಲ್ಲಿ ಅದಕ್ಕಾಗಿಯೇ ಮೀಸಲಾದ ಹಿತ್ತಾಳೆಪಾತ್ರೆಯಲ್ಲಿ ಪೂಜಿತಸೀರೆಯು ವರ್ಷವಿಡೀ ಇರುತ್ತದೆ. ಮರುವರ್ಷವೇ ಆ ಸೀರೆ ಉಡುವುದು; ಮತ್ತು, ಮತ್ತೊಂದು ಹೊಸವಸ್ತ್ರವನ್ನು ಪೂಜಿಸಿ ಆ ಪಾತ್ರೆಯಲ್ಲಿಡುವುದು. (ಚಿತ್ರ 58) ನಾಚಾರಮ್ಮನ ಸುಪ್ರೀತಿ ಇದರ ಉದ್ದೇಶ.[9] ಆದರೆ 'ಮೀಸಲು,' ಶ್ರಾದ್ಧದ ಸ್ವರೂಪವನ್ನೇ ಪಡೆಯುತ್ತದೆ. 'ಹೊಸಸೀರೆ ಉಡುವ ಮೊದಲು' ಮಾಡುವ ಈ ವಿಧಿಗೆ ಕಾಲನಿಗದಿ ಇಲ್ಲ. ಸಾಮಾನ್ಯವಾಗಿ ಶುಕ್ರವಾರವೇ ಮಾಡುವುದು, ಆ ದಿನವು ಈ ಸಂಬಂಧದ ಶುಭದಿನವೆಂಬುದರಿಂದ; ಅದು ಲಕ್ಷ್ಮಿಗೆ ವಿಶೇಷವಾಗಿ ಸಂಬಂಧಿಸಿದ ದಿನ. ಈ ಸಂದರ್ಭದಲ್ಲಿ ಇಬ್ಬರು ಮುತ್ತೈದೆಯರಿಗೆ ಕುಂಕುಮ ಮತ್ತು ಎಣ್ಣೆಕೊಟ್ಟು, ಅಭ್ಯಂಗಸ್ನಾನ ಮಾಡಿಕೊಂಡು ನೇಮದಿಂದ ಬರುವಂತೆ ಹಿಂದಿನ ದಿನವೇ ಆಹ್ವಾನಿಸಲಾಗಿರುತ್ತದೆ. ದೇವರ ಮುಂದೆ ರಂಗವಲ್ಲಿ ಹಾಕಿ ಇಟ್ಟ ಮಣೆಯ ಮೇಲೆ, ನೆರಿಗೆಹಿಡಿದ ಹೊಸ ವಸ್ತ್ರಗಳನ್ನಿಟ್ಟಿರುತ್ತದೆ. ಮೊದಲು ಅದಕ್ಕೆ ಎಡೆಇಟ್ಟು ಅನಂತರ ಬಂದ ಮುತ್ತೈದೆಯರೊಂದಿಗೆ ಸಹಭೋಜನ ಮಾಡುತ್ತಾರೆ. ಆನಂತರವೇ ಆಕೆ ಹೊಸಸೀರೆ ಉಡಬಹುದು. ನಿಯತ ಶ್ರಾದ್ಧಗಳು ನಡೆದಮೇಲೆಯೂ 'ಸವತಿಯು ಹೊಸಸೀರೆ ಉಟ್ಟುನಲಿಯುವುದನ್ನು ಸಹಿಸಲಾರದ ಮೃತಳ ಆತ್ಮವನ್ನು ಓಲೈಸುವ' ರೀತಿಯು, ಸತ್ತನಂತರವೂ ಸಂಬಂಧಗಳು ಮುಂದುವರಿಯುವ ವಿಶಿಷ್ಟವಾದ ರೀತಿಯ ನಿದರ್ಶನವೂ ಆಗಿದೆ.




58 ಪೂವಾಡಿಪಾನೆ : ವಸ್ತ್ರಪೂಜೆಯನಂತರ ಅದನ್ನು ಮುಂದಿನ ವರ್ಷದ ಪೂಜೆಯವರೆಗೆ ಅಟ್ಟದ ಮೇಲೆ ಜೋಪಾನವಾಗಿ ಇಟ್ಟಿರುತ್ತಾರೆ.

3. ಮಾಂಗಲ್ಯ: ಒಂದೇ ಮೂಲದಿಂದ ಹರಡಿಕೊಂಡವರಾದುದರಿಂದ, ದೂರದೂರ ಚದುರಿ ನೂರಾರು ವರ್ಷಗಳಾದನಂತರವೂ ಮೂಲಸಾಂಸ್ಕೃತಿಕ ವಿವರಗಳು ಹಾಗೆಯೇ ಮುಂದುವರಿದಿರುವ ಸಂದರ್ಭಗಳನ್ನೂ ಅಲ್ಲಲ್ಲಿ ಈ ನಿಬಂಧದಲ್ಲಿ ಗುರುತಿಸಿದೆ. ಆದರೆ, ಅದಕ್ಕೆ ವ್ಯತಿರಿಕ್ತವಾಗಿ, ಮಾಂಗಲ್ಯದಂಥ ಮುಖ್ಯ ಸಂಗತಿಯು ತೀವ್ರಭಿನ್ನತೆಯನ್ನು ಪ್ರದರ್ಶಿಸುವುದು ಇವರಲ್ಲಿ ಕಾಣಿಸುತ್ತದೆ.

ಕರ್ನಾಟಕದಲ್ಲಿ ಮಾಂಗಲ್ಯದ ರೀತಿ	*ದಕ್ಷಿಣದಲ್ಲಿ ಮಾಂಗಲ್ಯದ ರೀತಿ*
0.1ತಾಳಿಯು ಲಿಂಗದ ಆಕಾರದ್ದು	0.1 ತಾಳಿಯು ಎರಡು ಪಾದಗಳ ಆಕಾರದ್ದು (ಚಿತ್ರ 59)
0.2ಜೋಡಿಮಾಂಗಲ್ಯ; ಪ್ರತಿಮಾಂಗಲ್ಯದ ಅಕ್ಕಪಕ್ಕದಲ್ಲಿ ಒಂದೊಂದು 'ಗುಂಡು'.	0.2 ಅದೇ.
0.3ಮದುವೆಗೆ ಮೊದಲು ತಾಯಿಯೇ ಒಂದು ತಾಳಿಯನ್ನು ವಧುವಿಗೆ ಕಟ್ಟಿ, ತಾನೂ ಒಂದು ಕಟ್ಟಿಕೊಂಡಿರುತ್ತಾಳೆ.	0.3 ಒಂದೇ ದಾರದಲ್ಲಿ ಪೋಣಿಸಿದ ಎರಡು ತಾಳಿಗಳನ್ನೂ ವಿವಾಹವೇಳೆ ವರನೇ ವಧುವಿಗೆ ಕಟ್ಟುತ್ತಾನೆ. (ಆದರೆ, ಅವುಗಳಲ್ಲಿ ಒಂದು ಮಾಂಗಲ್ಯ, ವಧುವಿನ ತಾಯಿಯ ಮನೆಯವರು ಕೊಟ್ಟುದೇ ಆಗಿರುತ್ತದೆ.)

9 ವಿವರಗಳಿಗೆ ನೋಡಿ: ಶ್ರೀ ನಾಚಾರಮ್ಮನ ಜೀವನ ಚರಿತ್ರೆ (ಆಕೆಯ ಪ್ರವಾಸ), ಪು.೯-೧೦.

0.4'ತಿಂಗಳಕಾಂಬೋಲಿ'ಯ ಸಂದರ್ಭದಲ್ಲಿ ಎರಡು ಮಾಂಗಲ್ಯಗಳನ್ನೂ ಒಂದೇ ದಾರಕ್ಕೆ ಪೋಣಿಸಿಕೊಳ್ಳುತ್ತಾರೆ.	0.4 ಕೆಲವು ಮನೆತನಗಳಲ್ಲಿ ಕೆಲವು ವರ್ಷಗಳನಂತರ, ಎರಡು ಮಾಂಗಲ್ಯಗಳನ್ನೂ ಸೇರಿಸಿ ಒಂದೇ ಮಾಡುತ್ತಾರೆ.
0.5ತಾಳಿಕಟ್ಟುವಾಗ ವಧುವಿನ ತಾಯಿಯು ಉಪಸ್ಥಿತಳಿದ್ದು ನೋಡಿಕೊಳ್ಳುತ್ತಾಳೆ.	0.5 ಗಂಡು ತಾಳಿಕಟ್ಟುವಾಗ ಸೋದರಿಯರು ನೆರವಾಗುತ್ತಾರೆ.
0.6ತಾಳಿಯು ಚಿತ್ರರಹಿತವಾದುದು.	0.6 ಚಿತ್ರರಹಿತ, ಇಲ್ಲವೆ ಮೀನಾಕ್ಷಿ-ಸುಂದರೇಶ್ವರ, ಅಥವಾ ಬೃಂದಾವನ ಅಥವಾ ನಾಲ್ಕು ಹೂವುಗಳು ಚಿತ್ರಿತವಾದುದಾಗಿರುತ್ತದೆ.
0.7ಹೆಣ್ಣು ಅಥವಾ ಗಂಡುಮಕ್ಕಳಿಗೆ ವಿವಾಹ ಮಾಡುವಾಗ, ಮಾವ ಅಥವಾ ತಂದೆ ಸತ್ತಾಗ, ಹತ್ತಿರದ ಹಿರಿಯ ಬಂಧುಗಳು ಸತ್ತಾಗ, ಶಾಂತಿಗಳು ನಡೆದಾಗ ಒಂದೊಂದು ಮಾಂಗಲ್ಯವು ಸೇರ್ಪಡೆಯಾಗುತ್ತದೆ.	0.7 ಗಂಡನಿಗೆ ಅರುವತ್ತು ಅಥವಾ ಎಂಬತ್ತನೆಯ ವರ್ಷದ ಶಾಂತಿ ನಡೆದಾಗ ಮಾಂಗಲ್ಯ ಸೇರ್ಪಡೆಯಾಗುತ್ತದೆ.
0.8ಕರೀಮಣಿಯ ಸರವೂ ಮಾಂಗಲ್ಯದ ಜೊತೆಗಿರುತ್ತದೆ. ಅದು ಮಡಿ. ಮುಟ್ಟಾದಾಗ ತೆಗೆದಿಟ್ಟು, ಮುಟ್ಟು ಕಳೆದ ಮೇಲೆ ಹಾಕಿಕೊಳ್ಳುತ್ತಾರೆ.	0.8 -------



59 ಶಿವಲಿಂಗದ ಆಕಾರದ ತಾಳಿಯನ್ನು ಕರ್ನಾಟಕದ ಸಂಕೇತಿಗಳು ಬಳಸುತ್ತಾರೆ. ದಕ್ಷಿಣದ್ದು (ಮೇಲಿನ ಚಿತ್ರ) ಅಲ್ಲಿನ ಸ್ಮಾರ್ತ ಬ್ರಾಹ್ಮಣರಿಗೆ ಸಾಧಾರಣವಾದ ರೀತಿ

ಮಾಂಗಲ್ಯ ವೈದಿಕವಾದುದಲ್ಲ, ಪೌರಾಣಿಕವಾದುದು ಎಂಬುದು ಈ ಭಿನ್ನತೆಗೆ ಕೊಡಬಹುದಾದ ಕ್ಷೀಣವಿವರಣೆಯಾಗುತ್ತದೆ. ತಾಳಿಯ ಮಾದರಿಯು ಕರ್ನಾಟಕದಲ್ಲಿ ಸಂಕೇತಿಗಳಿಗೇ ವಿಶಿಷ್ಟವಾದುದಾಗಿದ್ದು ದಕ್ಷಿಣದ ಮಾದರಿಯು ಬ್ರಾಹ್ಮಣ-ಸಾಮಾನ್ಯವಾದುದೆಂಬ ಅಂಶವು ಇಲ್ಲಿ ಮುಖ್ಯವಾಗುತ್ತದೆ. ಆದರೆ ನಾಚಾರಮ್ಮನ ನಿರ್ದೇಶನದಂತೆ ತಾಳಿಯ ಈ ಆಕಾರವು ಹೊಸದಾಗಿ ಸ್ವೀಕಾರವಾಯಿತೆ ಅಥವಾ ಇದೇ ಮೂಲರೂಪವಾಗಿದ್ದು ದಕ್ಷಿಣದ ಸಂಕೇತಿಗಳು ಅಲ್ಲಿ ಅಲ್ಪಸಂಖ್ಯಾತ ರಾದುದರಿಂದ ತೀವ್ರ ಪರಪ್ರಭಾವಕ್ಕೆ ಒಳಗಾದರೆ ಎಂಬುದನ್ನು ನಿರ್ಣಯಿಸಲು ಈಗ ಯಾವ ಆಧಾರವೂ ಇಲ್ಲವಾಗಿದೆ. ತಮಿಳು ಸ್ಮಾರ್ತ ಬ್ರಾಹ್ಮಣರಿಗಿಂತ ಭಿನ್ನ ಆಕಾರದ ತಾಳಿಯನ್ನು ಧರಿಸಲು ದಕ್ಷಿಣದಲ್ಲಿ ಯಾವ ಕಾರಣವೂ ಇಲ್ಲ; ಬದಲಿಗೆ 'ಕರ್ನಾಟಕಕ್ಕೆ ಬಂದ ಸಂಕೇತಿಗಳು ನಾಚಾರಮ್ಮನ ಆದೇಶದಂತೆ ಸೀರೆಯನ್ನು ಭಿನ್ನ ರೀತಿ ಉಟ್ಟರು, ಮಾಂಗಲ್ಯದ ಆಕಾರವನ್ನೂ ಬದಲಿಸಿಕೊಂಡರು; ಅದು ಆ ಕ್ರಾಂತಿಕಾರೀ ಸಂದರ್ಭದ ಸಂಕೇತವಾಗಿಯೂ ಬಂತು' ಎಂಬ ತರ್ಕದಲ್ಲಿ ಅರ್ಥವಿರುವಂತಿದೆ.

ಸಂಕೇತಿಗಳಲ್ಲಿ ಉಡುಗೆ-ತೊಡುಗೆಗಳೆಲ್ಲವೂ ಸರಳವಾಗಿದ್ದರೂ ಧರ್ಮ, ಆಚಾರಗಳ ತಳಕು ಅವಕ್ಕಿರುವುದರಿಂದ ವೈವಿಧ್ಯಪೂರ್ಣವಾಗಿ



60 ಕೆರೆಯ ಹಿನ್ನಲೆಯಲ್ಲಿ ಲಿಂಗದ ಹಳ್ಳಿಯ ನೋಟ

ಅಭಿವ್ಯಕ್ತಗೊಳ್ಳುತ್ತವೆ. ಜೊತೆಗೆ ಅಲ್ಲಿನ ಸೂಕ್ಷ್ಮಾತಿಸೂಕ್ಷ್ಮ ನಿಯಮಬದ್ಧತೆಗಳಿಂದಾಗಿ ಜೀವನದ ಎಲ್ಲ ವಿವರಗಳೂ ಶಿಸ್ತು, ಅಚ್ಚುಕಟ್ಟು ಮತ್ತು ಗಾಂಭೀರ್ಯದಿಂದ ಕೂಡುತ್ತವೆ. ಶಮಾದಿ ಷಡ್ಗುಣಗಳ ಸಾಧನೆಗೆ ಇವು ಕೇವಲ ಮಾಧ್ಯಮಗಳಾಗಬಹುದಾದವು ಎಂಬ ಅರಿವಿದ್ದಾಗ, ಗೊಂದಲಗಳಿಗೆ ಎಡೆಯಾಗುವುದಿಲ್ಲ. ಲೌಕಿಕಶಿಸ್ತು ಮತ್ತು ಪಾರಮಾರ್ಥಿಕ ಗುರಿಗಳ ಸಮನ್ವಯವು ಇಲ್ಲಿ ಗಮನಿಸಬೇಕಾದ ಅಂಶವಾಗಿದೆ. ಧಾರ್ಮಿಕ ಮತ್ತು ಸಾಮಾಜಿಕ ಉಡುಗೆತೊಡುಗೆಗಳೆಂಬ ಭೇದವು ಇತ್ತೀಚಿನ ಲಕ್ಷಣ ಮಾತ್ರ. ಆದ್ದರಿಂದಲೇ ಸಾಂಪ್ರದಾಯಿಕರೀತಿಯಲ್ಲಿ ಅಭಿರುಚಿಗೆ ಮುಕ್ತ ಅವಕಾಶವಿಲ್ಲ; ಅವರ ಆರ್ಥಿಕಮಿತಿಗೂ ಅದು ಹೊಂದುತ್ತದೆ.

ಆ. ಮನೆ ಮಾದರಿ

ವಸತಿಗಳು ಭೌಗೋಳಿಕ ಸನ್ನಿವೇಶಕ್ಕೆ ಅನುಗುಣವಾಗಿ ರೂಪುಗೊಳ್ಳುವ ಅವಕಾಶ ದೊಡ್ಡದು. ಜೊತೆಗೆ, ಧಾರ್ಮಿಕ ನಂಬಿಕೆಗಳು ಮತ್ತು ವೃತ್ತಿಯ ಅಗತ್ಯಗಳನ್ನು ಪೂರೈಸಲು ವಸತಿಗಳ ವಿವರಗಳಲ್ಲಿ ವೈಶಿಷ್ಟ್ಯಗಳು ಕಾಣಿಸಿಕೊಳ್ಳುತ್ತವೆ. ಆರ್ಥಿಕತೆ, ಆಹಾರಪಾನೀಯ ಸಂಪ್ರದಾಯಗಳು ಮತ್ತು ಉಡುಗೆತೊಡುಗೆಗಳ ನೇರವಾದ ಇಲ್ಲವೆ ಪರೋಕ್ಷವಾದ ಸಂಬಂಧವು ವಸತಿಗಳ ರೀತಿಯ ಬಗೆಗೆ ಇರುತ್ತದೆ. ಈ ದೃಷ್ಟಿಯಿಂದ ಸಂಕೇತಿಗಳ ಮನೆಮಾದರಿಗಳನ್ನು ಅವಲೋಕಿಸಬಹುದು.

ಅ. ಸಂಕೇತಿಗಳ ಮನೆಯೊಂದರ ಸನ್ನಿವೇಶ:

ಸಂಕೇತಿಗಳ ಮನೆಗಳ ನೇರ ವಿಶ್ಲೇಷಣೆಗೆ ಪೂರಕವಾಗಿ ಅವರ ನೆಲೆಗಳ ಪರಿಸರದ ಪರಿಚಯ ಮಾಡಿಕೊಳ್ಳುವುದು ಅಗತ್ಯವಾಗಿದೆ:

1. ಕೃಷಿ ಮತ್ತು ವೈದಿಕತೆಗೆ ಅನಿವಾರ್ಯವೂ ಸೂಕ್ತವೂ ಆದುದರಿಂದ ಅವರ ಪಾರಂಪರಿಕ ನೆಲೆಗಳು ಈ ಶತಮಾನದ ಮಧ್ಯಭಾಗದವರೆಗೆ ಪ್ರಧಾನವಾಗಿ ಹಳ್ಳಿಗಳೇ ಆಗಿದ್ದವು. (ಚಿತ್ರ 60, 61)

2. ಕರ್ನಾಟಕದಲ್ಲಿ, ರಕ್ಷಣೆಯ ಅಗತ್ಯವಿರುವವರೆಗೆ ಕೋಟೆ ಇಲ್ಲವೆ ಕೋಟೆಗೆ ಸಮೀಪದ ನೆಲೆಗಳಲ್ಲಿರುತ್ತಿದ್ದವರು, ನಿರಾತಂಕದ ದಿನಗಳಲ್ಲಿ ಮುಕ್ತವಾಗಿ ಚದುರಿದ್ದಾರೆ.

3. ಬಿಡಿವಾಸಗಳಾಗಲೀ (isolated households) ಕರಾವಳಿ ಕರ್ನಾಟಕದ ಮಾದರಿಯ ಸಾಲುಮನೆಗಳಾಗಲೀ (linear Settlements) ಸಂಕೇತಿ ನೆಲೆಗಳ ರೀತಿಯಲ್ಲ. ಎರಡೂ ಬದಿಯಲ್ಲಿ ಬಿಡಿ ಇಲ್ಲವೆ ಸರಣಿಮನೆಗಳುಳ್ಳ ಅಗಲವಾದ ಹಾಗೂ ಚರಂಡಿ ವ್ಯವಸ್ಥೆಯುಳ್ಳ ಚೊಕ್ಕಟವಾದ ಅಚ್ಚುಕಟ್ಟಾದ ರಸ್ತೆಗಳು ಅವರ ನೆಲೆಗಳ ಲಕ್ಷಣ



61 ಗದ್ದೆ ಬಯಲಿನ ಹಿನ್ನೆಲೆಯಲ್ಲಿ ದರ್ಶನಂ ಕೋಪು



62 ಮತ್ತೂರಿನ ಒಂದು ಬೀದಿ

(ಚಿತ್ರ 62, 63, 64, 65, 66). ದೇವಸ್ಥಾನವನ್ನು ಕೇಂದ್ರವಾಗಿಟ್ಟುಕೊಂಡ ಕ್ರಮಬದ್ಧ ರಸ್ತೆಗಳ ವ್ಯವಸ್ಥೆ ಇರುವ ತಮಿಳುನಾಡಿನ ಅನೇಕ 'ಗ್ರಾಮ'ಗಳಲ್ಲಿಯೂ ಸಂಕೇತಿಗಳು ಪಾರಂಪರಿಕವಾಗಿ ನೆಲೆಸಿದ್ದಾರೆ[10] (ನಕ್ಷೆ 8, ಪು.275). ಆದರೆ ಅಂಥ ಕೇಂದ್ರಗಳು, ರಚನೆಯಲ್ಲಿ ಹೆಚ್ಚು ಸಾರ್ವತ್ರಿಕ ಸ್ವರೂಪದವು. ದೇವಸ್ಥಾನದ ಮುಂದಿನ ಒಂದು ರಸ್ತೆ ಇಲ್ಲವೆ ದೇವಸ್ಥಾನವನ್ನು ಒಂದು ಮಗ್ಗುಲಿಗೆ ಬಿಟ್ಟುಕೊಂಡ ಚೌಕಾಕಾರದ ರಸ್ತೆಗಳ ವ್ಯವಸ್ಥೆಯನ್ನು ಕರ್ನಾಟಕ ಮತ್ತು ತಮಿಳುನಾಡಿನ ಸಂಕೇತಿಗಳ ಪಾರಂಪರಿಕ ನೆಲೆಗಳಲ್ಲಿ ಸಮಾನವಾಗಿ ಕಾಣಬಹುದು (ನಕ್ಷೆ 9 ಪು.276-278). ಆದರೆ, ಹಾಸನಸೀಮೆಯಲ್ಲಿ ಕಾಣುವ ಓಣಿಮನೆಗಳ ಮಾದರಿಯ ಕುರುಹು (ನಕ್ಷೆ 10 ಪು.279) ಈಗ ತಮಿಳುನಾಡಿನಲ್ಲಿ ದೊರೆಯುವುದಿಲ್ಲ. ಅಲ್ಲದೆ, ಅದು ಹಾಸನ ಸೀಮೆಗಷ್ಟೇ ವಿಶಿಷ್ಟವಾದುದಾಗಿದೆ.



63 ಲಿಂಗದ ಹಳ್ಳಿಯ ಒಂದು ಬೀದಿ

ಆ. ಮನೆಗಳು:

ಸಂಕೇತಿಗಳ ವಾಸದ ಮನೆಗಳ ವಿವಿಧ ಪ್ರಕಾರಗಳನ್ನು ಇಲ್ಲಿ ಗಮನಿಸಿದೆ.

1. ಗುಡಿಸಲುಗಳು: ಕಳೆದ ಶತಮಾನದಲ್ಲಿಯೂ ಬಹಳ ಬಡವರಾದವರಷ್ಟೇ ವಾಸಿಸಲು ಬಳಸುತ್ತಿದ್ದ ಗುಡಿಸಿಲುಗಳು ಈ ಶತಮಾನದಲ್ಲಿ ಕಾಣಿಸದಿರುವುದು, ಸಮುದಾಯದಲ್ಲಿ ಆದ ಆರ್ಥಿಕ ಸುಧಾರಣೆಗಿಂತಲೂ ಹೆಚ್ಚಾಗಿ, ಸಾರ್ವತ್ರಿಕ ಪ್ರವೃತ್ತಿಯನ್ನನುಸರಿಸಿ ಆದ ಬೆಳವಣಿಗೆ. ಪ್ಲೇಗುರೋಗದ ಸಂದರ್ಭದಲ್ಲಿ ಊರಿನ ಹೊರಗೆ ತಾತ್ಕಾಲಿಕವಾಗಿ ನೆಲೆಸಲಷ್ಟೆ ಗುಡಿಸಲುಗಳು ಈ ಶತಮಾನದಲ್ಲಿ ಬಳಕೆಗೊಂಡವು; ಈಗಲೂ, ಅಪರೂಪಕ್ಕೆ ಕಾಣಸಿಗುವ ಗುಡಿಸಿಲುಗಳು ಉರುವಲು ಇಡಲು ಹಾಗೂ ಗಾಡಿ ನಿಲ್ಲಿಸಲು ಬಳಕೆಗೊಳ್ಳುತ್ತಿವೆ.



64 ಕೌಶಿಕದ ಬೀದಿ

2. ತೊಟ್ಟಿಮನೆಗಳು: ಸಮುದಾಯದ ಪ್ರಾಚೀನ ನೆಲೆಗಳು ಅನೇಕ ಶತಮಾನಗಳಿಂದಲೂ ತೊಟ್ಟಿಮನೆಗಳಿಂದಲೇ ಕೂಡಿದ್ದವು. ಈಗಲೂ, ಮೂರು-ನಾಲ್ಕು-ಐದು ಶತಮಾನಗಳಷ್ಟು

[10] ವಿವರಗಳಿಗೆ ನೋಡಿ: *India: Cultural Patterns and Processes*, pp.125-126.



65 ಶೆಂಕೋಟ್ಟೈನ ಒಂದು ಬೀದಿ

ಹಳೆಯದಾದ ತೊಟ್ಟಿಮನೆಗಳು ಕೆಲವಾದರೂ ಉಳಿದುಕೊಂಡಿವೆ. ಭದ್ರತೆ ಮತ್ತು ಅವಿಭಕ್ತ ಕುಟುಂಬಗಳಿಗೆ ಇರುವ ಸೌಲಭ್ಯದ ದೃಷ್ಟಿಯಿಂದ ಅವು ಗಮನಾರ್ಹವಾದವು. ರಕ್ಷಣೆಗಾಗಿ ತೊಟ್ಟಿಮನೆಗಳನ್ನವಲಂಬಿಸಿದ ಸಾರ್ವತ್ರಿಕ ಪ್ರವೃತ್ತಿಗೇ ಇದೂ ಅನುಗುಣವಾದುದು.

3. ಕೌಳಿಗೆ ಮನೆಗಳು: ಕೌಳಿಗೆಮನೆಗಳು ತಮ್ಮ ಸರಳರಚನೆಯ ದೃಷ್ಟಿಯಿಂದ ತೊಟ್ಟಿಮನೆಗಳಿಗೂ ಪೂರ್ವಹಂತದವೆನ್ನುವುದು ಸಹಜ. ಪಂಜುಗಳ್ಳರು, ದರೋಡೆಕಾರರು, ಮತ್ತು ಆಕ್ರಮಣಕಾರರ ತೀವ್ರ ಉಪಟಳದ ದಿನಗಳು ಕಳೆದಂತೆ, ಮತ್ತೆ ಕೌಳಿಗೆಮನೆಗಳೇ ಪ್ರಚಲಿತವಾದುದನ್ನು ಇಲ್ಲಿ ಕಾಣಬಹುದು. ಆಗಲೂ, ಸಮಾನಗೋಡೆಗಳ ಸರಣಿಸಾಲುಗಳು ಇಲ್ಲವೆ, ಓಣಿಗಳ ಮೂಲಕ ಮಿತವ್ಯಯ, ಮತ್ತು ರಕ್ಷಣೆಯ ಅಗತ್ಯಗಳನ್ನು ಪೂರೈಸಿಕೊಂಡಿದ್ದಾರೆ.



66 ಅಂಬಾಸಮುದ್ರಂ ಹೊರವಲಯ : ತಾಮ್ರಪರ್ಣಿಯ ದಾರಿ

4. ಗುಡಾರಗಟ್ಟು: 'ಮೂಲೆ'ಗಳಿರುವುದರಿಂದಾಗಿ (ತೊಟ್ಟಿಮನೆಗಳನ್ನು ಬಿಟ್ಟರೆ) ಹೆಚ್ಚು ಭದ್ರವೂ ಸುರಕ್ಷಿತವೂ ಆದರೂ, ಪ್ರತ್ಯೇಕ ಘಟಕಗಳಾದ ಗುಡಾರಗಟ್ಟುಗಳು ಆರ್ಥಿಕತೆ ಹಾಗೂ ರಕ್ಷಣೆಯ ದೃಷ್ಟಿಯಿಂದ ಕಾರ್ಯಸಾಧ್ಯವಾದುವಲ್ಲವಾದುದರಿಂದಲೇ ಅವು ಅಪರೂಪದ ಪ್ರಸಂಗಗಳಾಗಿಯಷ್ಟೆ ಉಳಿದವು (ಚಿತ್ರ 67).



67 ಕೌಶಿಕ ಗ್ರಾಮದ ಗುಡಾರಗಟ್ಟು ಮನೆ : ಓಣಿಯ ವ್ಯವಸ್ಥೆಯನ್ನು ಗಮನಿಸಬಹುದು

5. ಆರ್ಥಿಕತೆ : ಪರಿಣಾಮ: ಕರ್ನಾಟಕದ ಮತ್ತೂರು ಮತ್ತು 'ದಕ್ಷಿಣ'ದ ತೊಟ್ಟಿಮನೆಗಳ ಎದ್ದು ಕಾಣುವ ಸಾಮ್ಯವೆಂದರೆ ಸಮಾನಗೋಡೆಗಳ ಮೂಲಕ ಸರಣಿಗೊಂಡ ತೊಟ್ಟಿಮನೆಗಳನ್ನು ಕಟ್ಟಿ, ಸರಳ ಆರ್ಥಿಕತೆಯನ್ನೂ ಸಾಧಿಸಿರುವುದು. ದಪ್ಪವಲ್ಲದ ಗೋಡೆಗಳು; ಗಾಳಿ ಮತ್ತು ನೀರಿಗೆ ಹೆಚ್ಚಾಗಿ ಒಡ್ಡಿಕೊಳ್ಳುವುದು - ಇದರಿಂದ ಬೇಗ ಶಿಥಿಲವಾಗುವುದಾದರೂ ಕೌಳಿಗೆಮನೆಗಳು ಮತ್ತೆ ಪ್ರಚಲಿತವಾದುದಕ್ಕೆ ಅವುಗಳ ಸರಳ ಆರ್ಥಿಕತೆ ಮತ್ತು ವಿಭಕ್ತಕುಟುಂಬಗಳ ಮಿತಿಗೆ ಸಾಕಾದುದೂ ಕಾರಣವಾಗಿದೆ.

6. ಕುಟುಂಬದ ಗಾತ್ರ: ಮನೆಯ ವಿಸ್ತಾರ: ಉಳಿದೆಡೆಯ ತೊಟ್ಟಿಮನೆಗಳು, ಅವಿಭಕ್ತ ಕುಟುಂಬವು ವಿಭಾಗಗೊಂಡಂತೆ ಒಳಮುಖವಾಗಿಯೇ ವಿಭಜನೆಗೊಂಡಿವೆ. ಅದರಿಂದಾಗಿ, ಮನೆಯ ಒಟ್ಟು ಸ್ವರೂಪಕ್ಕೆ ಭಂಗ ಬಂದಿಲ್ಲ. ಬದಲಿಗೆ, ದಕ್ಷಿಣ ಮತ್ತು ಮತ್ತೂರಿನ ತೊಟ್ಟಿಮನೆಗಳು ಅಗಲ ಕಿರಿದಾಗುತ್ತ ಹೋಗಿ ಉದ್ದವು ಮೊದಲಿನಂತೆಯೇ ಉಳಿದು 'ಲಂಗೋಟಿಮನೆ'ಗಳಾಗಿವೆ (Telescopic House) (ನಕ್ಷೆ 11 ಪು.280) ಉಳಿದೆಡೆಯ ತೊಟ್ಟಿಮನೆಗಳಲ್ಲಿಲ್ಲದ ತಿಕಡಿ (ಮಹಡಿ) ಈ ಪ್ರದೇಶಗಳಲ್ಲಿ (ಮುಂಭಾಗಕ್ಕೆ ಸೀಮಿತವಾದಂತೆ) ಇರುತ್ತದೆ. ವಿಸ್ತಾರದ ದೃಷ್ಟಿಯಿಂದ, ಕುಟುಂಬದ ಗಾತ್ರ ಮತ್ತು ಆವಶ್ಯಕತೆಯನ್ನನುಸರಿಸಿ ಕೌಳಿಗೆಮನೆಗಳಲ್ಲಿಯೂ ಒಂಟಿತೊಲೆಮನೆ, ಜೋಡಿತೊಲೆಯ 'ದ್ವಿಹೇರಿ', ಮೂರುತೊಲೆದಾಯದ 'ತ್ರಿಹೇರಿ' ಮನೆಗಳನ್ನು ಕರ್ನಾಟಕದಲ್ಲಿ ಕಾಣಬಹುದು. ತೊಟ್ಟಿಮನೆಗಳೂ ದ್ವಿಹೇರಿಗಳಾಗಿದ್ದು ವಿಸ್ತರಣಕ್ಕೆ ಅನುಕೂಲಕರವಾಗಿವೆ. ಹೀಗೆ ಮನೆಗಳನ್ನು ಆಗಾಗ ವಿಸ್ತರಿಸುವುದಕ್ಕೆ ವ್ಯವಸಾಯ ಮತ್ತು ಪಶುಪಾಲನೆಯ ಅಗತ್ಯಗಳನ್ನು ಪೂರೈಸಿಕೊಳ್ಳುವುದೂ ಒಂದು ಮುಖ್ಯ ಕಾರಣವಾಗಿದೆ.

ಇ. ಕಟ್ಟಡವಿಧಿ:

ರಕ್ಷಣೆಯನ್ನೂ ಏಕಾಂತವನ್ನೂ (privacy) ಆಶಿಸಿ ಕಟ್ಟಿಕೊಂಡ ವಸತಿಗಳೂ ದೈವ, ಧರ್ಮ; ವಿಧಿ, ನಿಷೇಧ; ಕಟ್ಟುಕಟ್ಟಲೆಗಳಿಗೆ ಬದ್ಧವಾಗಿರುವುದು ಭಾರತದಲ್ಲಿ ಸಾರ್ವತ್ರಿಕ ಸಂಗತಿಯಾಗಿದೆ. ಅಪಾರವೆಚ್ಚ ಮತ್ತು ಶ್ರಮದಿಂದ ನನಸಾಗಿಸಿಕೊಂಡ ಜೀವಮಾನದ ಸಾಧನೆಯು ಶ್ರೇಯಸ್ಕರವಾಗಿರಲೆಂಬ ಉತ್ಕಟಭಾವನೆಯಿಂದಾಗಿ ಮುಕ್ತಸ್ವೀಕರಣಗಳು ಈ ಕ್ಷೇತ್ರದಲ್ಲಿಯೂ ನಡೆದಿವೆ. ಶಾಸ್ತ್ರಾಧಾರದಿಂದ ನಡೆಯುವ ಈ ಸಂಬಂಧದ ವಿಧಿಗಳ ಸಮಾನಾಂಶಗಳನ್ನು ಇಲ್ಲಿ ನಾವು ನೋಡಬೇಕಾದುದಿಲ್ಲ. ಆದರೆ, ಸಂಕೇತಿಗಳು ಗಣಿಸುವ ಕೆಲವು ಮುಖ್ಯ ಸಂಗತಿಗಳನ್ನು ಇಲ್ಲಿ ಗಮನಿಸಿದೆ:

1. ಗೃಹನಿರ್ಮಾಣಕ್ಕೆ ತೊಡಗಲು ವಾಸ್ತುಪುರುಷನ ಗಣನೆಗಿಂತಲೂ ಕೃಷಿ-ವಿಶ್ರಾಮದ ದಿನಗಳು ಹೆಚ್ಚು ಮುಖ್ಯವಾಗುವುದು ಶಾಸ್ತ್ರಕ್ಕಿಂತಲೂ ಸೌಲಭ್ಯಾಕಾಂಕ್ಷೆಯು ಮುಖ್ಯವಾಗುವ ನಿದರ್ಶನಗಳಲ್ಲೊಂದು.

2. ಕೇರಳದಲ್ಲಿ ಆಯದ ಗಣನೆಯೇ ಇಲ್ಲವಾದರೆ, ಕರ್ನಾಟಕದಲ್ಲಿ ಅದರ ಗಣನೆ ಇದೆ; ಲಿಂಗದಹಳ್ಳಿಯಲ್ಲಿ ಶಂಕು, ನವರತ್ನಗಳೂ ಪೂಜೆಗೊಂಡರೆ,[11] ಕರ್ನಾಟಕದಲ್ಲಿಯೇ ಉಳಿದೆಡೆಗಳಲ್ಲಿ ಆ ಕ್ರಮವಿಲ್ಲ. ಲಿಂಗದಹಳ್ಳಿಯ ರೂಢಿಯು 'ಒಳಾಯ' ಮಾತ್ರ.[12] ಇಂಥ ಅನೇಕ ಸಂಗತಿಗಳಲ್ಲಿ ದೇಶಾಚಾರದ ಪ್ರಭಾವವು ಗಮನಾರ್ಹವಾದುದು.

3. ಗೃಹಪ್ರವೇಶಪೂರ್ವದ ರಾತ್ರಿ 'ಪುಣ್ಯಾಹ' ಮಾಡಿ ಕರ್ತೃವು 'ರಾಕ್ಷೋಘ್ನ ಹೋಮ' ಮಾಡವುದು ಮಧ್ಯದೇಶದಲ್ಲಿ ಇತ್ತೀಚೆಗೆ ಬಂದ ಪದ್ಧತಿ. ಈ ಹೋಮದನಂತರ ಬಿಳಿಸಾಸಿವೆಯ ಹೊಗೆಯನ್ನು ಮನೆಯಲ್ಲೆಲ್ಲಾ ತೋರಿಸುವುದೂ, ಪಂಜುಹೊತ್ತಿಸಿ ಮನೆಯ ಸುತ್ತಲೂ ಪ್ರದಕ್ಷಿಣಾಕಾರವಾಗಿ ತೋರಿಸುವುದೂ, ಭೂತಪ್ರೇತಗಳನ್ನು ತೊಲಗಿಸುವ ಉದ್ದೇಶದಿಂದ. ದಿಗ್ಬಲಿ, ಕೂಷ್ಮಾಂಡಬಲಿ ಮೊದಲಾದ ಇತರ ತಾಂತ್ರಿಕ ಕ್ರಮಗಳೂ ಮುಕ್ತವಾಗಿ ನಡೆಯುತ್ತವೆ. ವೈದಿಕ, ಪೌರಾಣಿಕ ಆಚರಣೆಗಳ ಜೊತೆಗೆ ತಾಂತ್ರಿಕ ಕ್ರಮಗಳೂ ಸಮಾನ ಪ್ರಾಶಸ್ತ್ಯ ಪಡೆದಿರುವುದೂ, ಶುಭಾಕಾಂಕ್ಷೆಯ ತೀವ್ರತೆಯಿಂದಾದ ಸ್ವೀಕರಣದಿಂದಾಗಿ. ಆಪಸ್ತಂಬೀಯರು, ಆಪಸ್ತಂಬರ ಹ್ರಸ್ವವಿವರಗಳಿಂದ ತೃಪ್ತರಾಗದೆ ಬೋಧಾಯನರಿಂದ ವಿವರಗಳನ್ನು ಸ್ವೀಕರಿಸಿರುವುದೂ ಇದನ್ನೇ ಸಮರ್ಥಿಸುತ್ತದೆ.

ಈ. ಕಟ್ಟಡ ನಿರ್ಮಾಣ :

ಮನೆಯನ್ನು ಪೂರ್ಣವಾಗಿ ಸ್ವತಂತ್ರವಾಗಿ ಕಟ್ಟಿಕೊಳ್ಳಬಲ್ಲ ಈ ಸಮುದಾಯವು ಅದಕ್ಕೆ ಸಂಬಂಧಿಸಿದ ಮಣ್ಣು, ಮರದ ಕೆಲಸಗಳಲ್ಲಿಯೂ

---

11 ಚೌಕಗುಂಡಿಯಲ್ಲಿ ನವರತ್ನಗಳನ್ನು ಹುಗಿಯುತ್ತಾರೆ. ಗೋಡೆಯು ನಡುವೆ ಬಾರದ ಕಡೆ ಗುಂಡಿ ತೆಗೆದು ಶಂಕುಸ್ಥಾಪನೆಮಾಡಿ ಕಲ್ಲು ಮುಚ್ಚುತ್ತಾರೆ. ಶಂಕು ಇಲ್ಲದಾಗ ಮೂರು ಮೂಲೆ ಇರುವ ಕಲ್ಲನ್ನು ಅದರ ಬದಲು ಬಳಸುತ್ತಾರೆ.

12 ಆಯದ ಅಳತೆ ಗೋಡೆಯ ಒಳಗೇ ಇದ್ದರೆ ಒಳಾಯ; ಗೋಡೆಯೂ ಸೇರಿದರೆ ಹೊರಾಯ.

ಪರಿಣತಿ ಪಡೆದಿದೆ. ಸಾಮೂಹಿಕ ಸಹಕಾರದಿಂದ ಅದನ್ನು ಆಗಮಾಡಿಕೊಳ್ಳುತ್ತದೆ (ಚಿತ್ರ 68). ಅನೇಕ ನೂರು ವರ್ಷಗಳ ಕಾಲ ಬಾಳುವ ಸರಳವಾದರೂ ಸುಭದ್ರವಾದ, ಅಂದವಾದ, ಸೌಲಭ್ಯಹೊಂದಿದ ಮನೆಗಳನ್ನು, ಸುಲಭವಾಗಿ ದೊರೆಯುವ ನೈಸರ್ಗಿಕ ಸಾಮಗ್ರಿಗಳಿಂದಲೇ ಕಟ್ಟಿಕೊಳ್ಳುವ ಅವರ ಕೌಶಲ್ಯ ಮೆಚ್ಚುವಂಥದು. ಈ ಸಂಬಂಧದ ಕೆಲವು ಮುಖ್ಯ ಸಂಗತಿಗಳು:

1. ತಳಹದಿಯಲ್ಲಿ ಮೂಳೆಸೇರಿದರೆ ಬಹಳ ಕೆಟ್ಟದ್ದು ಎಂಬ ಭೀತಿಮೂಲ ನಂಬಿಕೆಯಿಂದಾಗಿ ಚೆನ್ನಾಗಿ ಶೋಧಿಸುವುದು.



68 ಸಂಕೇತಿಗಳೇ ಕಟ್ಟಿದ ಮನೆಗಳ ಒಂದು ಮಾದರಿ (ಮತ್ತೂರು)




69 ಕುಸುರಿ ಕೆಲಸ ಮಾಡಿದ ಬಾಗಿಲು (ಮತ್ತೂರು)

2. ಗೋಡೆಕಟ್ಟಲು ಬಳಸುವ ಕಲ್‌ಚಿಟಕಲು ಜರಗು ಮಣ್ಣನ್ನು ಕಲಸುವ ಮುನ್ನ ನೇಗಿಲಿನಲ್ಲಿ ಉಳುವುದು, ಎಮ್ಮೆಯಿಂದ ತುಳಿಸಿ ಅಂಟುಬರಿಸುವುದು. ವಿಶೇಷ ಸಂದರ್ಭಗಳಲ್ಲಿ ರಾಗಿ ಅಂಬಲಿ ಬೆರೆಸುವುದು.
3. ಗಳುಗಳನ್ನು ಬಿಗಿಯಲು, ಭೀಮುಕಟ್ಟಲು ನೂರಾರು ವರ್ಷಬಾಳುವ ಹಂಬುಗಳನ್ನೇ ಬಳಸುವುದು.
4. ಮಣ್ಣುಬಗ್ಗಡ, ಕಾಡುಗಲ್ಲುಗಳನ್ನು ಹಂತಹಂತವಾಗಿ ಬಳಸಿದ ಐದು-ಆರು ವರಸೆಯ ತಳಹದಿ ಕಟ್ಟುವುದು.
5. ಮೂರು-ನಾಲ್ಕು ಅಡಿ ದಪ್ಪದ ಗೋಡೆಗಳು; ಗೋಡೆಯ ಒಳಮಗ್ಗುಲಿಗೆ ಮಾತ್ರ ಸಾರಣೆ, ಸಗಣಿಬಗ್ಗಡ, ಸುಣ್ಣ. ನೆಲದಿಂದ ಎರಡು ಅಡಿ ಎತ್ತರದವರೆಗೆ ಮರಳು, ಸುಣ್ಣ ಸೇರಿಸಿ ಮೇಜಕಟ್ಟು ಮಾಡುವುದು, ಕಿರುಸುಣ್ಣ; ನೀಲಿ ಅಥವಾ ಚಂದ್ರದ ಚಿತ್ತಾರ ಬಿಡಿಸುವುದು.
6. ಹೊಸಮನೆಗೆ ಸುಣ್ಣ ಬಳಿಯುವವರೆಗೆ ಮಣ್‌ಗಾಜಿನ ಮೇಲೆ ಸುಣ್ಣದಲ್ಲಿ ಹಸ್ತದ ಗುರುತು ಬಡಿದು



70 ಕುಸುರಿ ಕೆಲಸದ ಕಂಬ, ಬೋದಿಗೆ (ರುದ್ರಪಟ್ಟಣ)




71 ಹಲಗೆ ಸೇವೆ ಮತ್ತು ಮರದ ಬಡು (ಕೋಣನೂರು)

ದೃಷ್ಟಿತಾಗದಂತೆ ನೋಡಿಕೊಳ್ಳುವ ಸ್ವೀಕೃತ ನಂಬಿಕೆ ಇಟ್ಟುಕೊಂಡಿರುವುದು.


7. ಸಮಾನಾಂತರವಾಗಿ ಎರಡು ಹೊರಗೋಡೆಗಳನ್ನು ಕಟ್ಟಿ ಅಂತರಕ್ಕೆ ಮರಳುತುಂಬಿ ಕಳ್ಳರು ಕನ್ನಹಾಕಲಾಗದಂತೆ ಮಾಡುವುದು; ಹಲಗೆಗಳು ಇಲ್ಲವೆ ಅಡಿಕೆಮರಗಳನ್ನು ಬಳಸಿ ಮಟ್ಟಸವಾದ ಗೋಡೆ ಕಟ್ಟುವುದು ಮೊದಲಾದ ಪ್ರಯೋಗಗಳನ್ನು ಮಾಡುವುದು.

8. ಮುಕ್ತವಾಗಿ ಬೆಳಕುಹರಡಲೆಂದು ಅಪರೂಪಕ್ಕೆ ಒಳಮೋಟುಗೋಡೆಗಳನ್ನು ಇರಿಸುವುದು.

9. ಮೂಳೆ ಇದ್ದರೆ 'ಏಳಿಗೆ ಆಗುವುದಿಲ್ಲ' 'ದೆವ್ವ ಕುಣಿಯುತ್ತದೆ' ಎಂಬ ನಂಬಿಕೆಯಿಂದಾಗಿ ನೆಲವನ್ನೂ ನಾಲ್ಕಾರು ಅಡಿ ಆಳದವರೆಗೆ ಶೋಧಿಸುವುದು; ಕಾಡುಗಲ್ಲು, ಸಾರಣೆಮಣ್ಣು, ಮರಳುಮಣ್ಣು ಹಾಕಿ ಗಟ್ಟಿಮಾಡುವುದು, ಸಗಣಿಯಿಂದ ಸಾರಿಸುವುದು ಅಥವಾ ಮರಳು ಸುಣ್ಣ ರುಬ್ಬಿ ಗಾರೆಯ ಹಾಗೆ ತಿಕ್ಕಿ ಗುಮಚಿಕಲ್ಲಿನಿಂದ ಉಜ್ಜಿ ನುಣುಪು ಮಾಡುವುದು.



72 ಚಾವಣಿಯ ಹಲಗೆಗಳಿಗೂ ಚಿತ್ತಾರ (ಲಿಂಗದಹಳ್ಳಿ)



73 ಅವರು ರಚಿಸಿದ ಚಿತ್ರಗಳು ಹಾಗೂ ನಾಟಕದ ಪರಿಕರಗಳನ್ನು ಒಂದೆಡೆ ಜೋಡಿಸಿದೆ. ಮತ್ತೊಂದೆಡೆ ಬಾಗಿಲು, ಕಂಬಗಳ ಕೆತ್ತನೆಯನ್ನು ಗಮನಿಸಬಹುದು

10. ನಿಲವು, ಕಿಟಕಿಗಳ ಮೇಲಕ್ಕೆ ಕಲ್ಲುಚಪ್ಪಡಿಗಳ ಬದಲು ಅಡಿಕೆದಬ್ಬೆ; ಮರದಮಣೆಗಳನ್ನು ಬಳಸುವಂತೆಯೇ ಅಡಿಕೆದಬ್ಬೆಗಳನ್ನೇ ಸಲಾಕಿಗಳಾಗಿಯೂ ಬಳಸುವುದು. ತೊಲೆಗೆ ಸಲಾಮರ; ಕಂಬ ಮತ್ತು ಪಿಳ್ಳೆಕಾಲಿಗೆ ಬಿದಿರು; ಚಿತ್ತಾರದ ಬಾಗಿಲು, ಬೋದಿಗೆ, ಕಂಬ (ಚಿತ್ರ 69, 70, 71, 72, 73, 74) ಕಂಬದ ತಳಕ್ಕೆ ಗೇದ ಸುಣಪಾದಕಲ್ಲು; ಅದರ ತಳಕ್ಕೆ ಚಪ್ಪಡಿಯ ಹಾಸಿಗೆ. ರಕ್ಷಣೆಯ ಕಾರಣಕ್ಕಾಗಿ ಗೋಡೆಯ ಮೇಲ್ತುದಿಯಲ್ಲಿ ಇರುವ ಅತಿಪುಟ್ಟ ಕಿಟಕಿ ಇಲ್ಲವೆ ಗವಾಕ್ಷಿ;



74 ಮನೆಯ ಒಳ ಅಂಗಳ

ಅಡಿಕೆದಬ್ಬೆಹರಡಿದ ಅಟ್ಟಗಳು. ಭದ್ರತೆಗಾಗಿ ಬಾಗಿಲಿಗೆ ಅಗಳಿ, ಬಿರಿ. ಸೂರಿಗೆ ಬಿದಿರು ಅಥವಾ ಅಡಿಕೆಮರದ ದೋಣಿಯನ್ನು ಕಟ್ಟಿ ನೀರು ಹಿಡಿದುಕೊಳ್ಳುವ ವ್ಯವಸ್ಥೆ. ಅರ್ಧಅಡಿ ದಪ್ಪದ ನಾಲ್ಕು ಅಡಿ ಎತ್ತರದ ಅತ್ತಿಮರದ ಹೊರಬಾಗಿಲು; ಕೊಯ್ಯಲಾಗಲಿ, ಒಡೆಯಲಾಗಲಿ ಆಗದಂತೆ ಆ ಬೆಂಡುಮರಕ್ಕೆ ಬಡಿದು ಅಳವಡಿಸಿದ ಗೋರ್ಚಿಕಲ್ಲು ಅಥವಾ ಕಾಡುಗಲ್ಲು - ಇವುಗಳಲ್ಲಿ ಕೌಶಲ್ಯವನ್ನು ಸಾಧಿಸಿರುವುದು.

11. ಮುಂಬಾಗಿಲಿನ ಎರಡೂ ಪಕ್ಕಕ್ಕೆ ಮಣ್ಣಿನ ಜಗುಲಿಗಳು; ಅದರ ಅಂಚಿಗೆ ಉತ್ತರ ಅಥವಾ ಪೂರ್ವಕ್ಕೆ ತುಳಸಿಕಟ್ಟೆ - ಇದು ಅವರ ಮನೆಗಳ ಕಟ್ಟಡದ ಸಾಧಾರಣ ರೀತಿ.
12. ಕಟ್ಟಡನಿರ್ಮಾಣಕ್ಕೆ ಸಂಬಂಧಿಸಿದಂತೆ ಮರಗೆಲಸದಲ್ಲಿ ಸಂಕೇತಿಗಳು ಪಡೆದುಕೊಂಡಿರುವ ಪರಿಣತಿ ವಿಶೇಷ ಉಲ್ಲೇಖಕ್ಕೆ ಅರ್ಹವಾದುದು; ಅವರು ಬಳಸುವ ಮರಗಳಲ್ಲಿ ಪ್ರಾದೇಶಿಕ ವೈವಿಧ್ಯವಿದೆ (ಪಟ್ಟಿ 13 ಪು. 309).

ಮಧ್ಯದೇಶ ಮತ್ತು ದಕ್ಷಿಣದಲ್ಲಿ ಈ ಮರಮುಟ್ಟುಗಳ ಬಳಕೆಯ ಹೆಚ್ಚಿನ ಸಾಮ್ಯವಿದೆ. ಎಲ್ಲ ನೆಲೆಗಳಿಗಿಂತ ಮರಮುಟ್ಟುಗಳನ್ನು ಅತಿಶಯವಾಗಿ ಬಳಸಿರುವುದು ಮತ್ತೂರಿನಲ್ಲಿ. ಇವರ ಎಲ್ಲ ನೆಲೆಗಳೂ ಇರುವುದು ಮಲೆನಾಡಿನ ಸೆರಗಿನಲ್ಲಿಯೇ ಆದರೂ, ಕೇವಲ ಅಡಿಕೆಮರ, ತೆಂಗಿನಮರ, ಹೆಚ್ಚೆಂದರೆ ತೋಟದ ನೇರಳೆ, ಮಾವು, ಹಲಸಿನ ಮರಗಳನ್ನು ಬಳಸಿರುವ ಮನೆಗಳೇ ಮಧ್ಯದೇಶ, ಅಷ್ಟಗ್ರಾಮ, ಪಂಚಗ್ರಾಮಗಳಲ್ಲಿ ಹೆಚ್ಚು. ಲಿಂಗದಹಳ್ಳಿ ಈ ಉಳಿದೆಡೆಗಳಿಗಿಂತ ಹೆಚ್ಚು ನಾಟಾಗಳನ್ನು ಬಳಸಿದ್ದರೂ, ಮಾಳಿಗೆಯ ಅಚ್ಚುಕಟ್ಟುವ್ಯವಸ್ಥೆ ಮತ್ತೂರು ಮತ್ತು ದಕ್ಷಿಣಕ್ಕೆ ವಿಶಿಷ್ಟವಾದುದು. ಹುಣಸೆ, ಬಾಗೆಮರಗಳನ್ನು ಬಳಸಿದರೆ ಮನೆಯು ಭೂತಾವಾಸದ್ದಾಗುತ್ತದೆಂಬ ಸ್ವೀಕೃತ ನಂಬಿಕೆಯಿಂದಾಗಿ, ಎಲ್ಲೆಡೆಯೂ ಅವು ನಿಷಿದ್ಧವಾಗಿವೆ. ಮತ್ತೂರಿನಲ್ಲಿ ವಿಶೇಷವಾಗಿ ದೊಡ್ಡ ಪ್ರಮಾಣದಲ್ಲಿ; ಲಿಂಗದಹಳ್ಳಿ, ಕೊಣನೂರು, ರುದ್ರಪಟ್ಟಣದಲ್ಲಿ ಅಲ್ಲಲ್ಲಿ, ಒಳ್ಳೆಯ ನಾಟಾಗಳನ್ನು ಅತಿಶಯವಾಗಿ ಬಳಸಿರುವುದಕ್ಕೆ, ಅಲ್ಲಿ ನಿಪುಣ ಸಂಕೇತಿ ಕೆಲಸಗಾರರಿದ್ದುದೇ ಕಾರಣವಾಗಿದೆ.

ಮೇಲಿನ ವಿವರಗಳಲ್ಲಿ ಕಟ್ಟಡಕ್ಕೆ ಸಂಬಂಧಿಸಿದಂತೆ ಕಾಣುವ ಮೂಢನಂಬಿಕೆಗಳೂ, ಜೀವನಪರ್ಯಂತ ವಾಸಿಸುವ ತಾಣವು ಮಂಗಳಕರವಾಗಿರಲೆಂಬ ಆಸೆ ಮತ್ತು ಅನಿಷ್ಟದ ಭೀತಿಮೂಲದವೇ. ಅವು ಸಂಕೇತಿಗಳ ಸಾರ್ವತ್ರಿಕ ನಂಬಿಕೆಗಳಲ್ಲ; ಪ್ರಾದೇಶಿಕ ಪ್ರಭಾವದಿಂದ ಬಂದವು. ಅಲ್ಲದೆ, ಕಟ್ಟಡಕ್ಕೆ ಸಂಬಂಧಿಸಿದ ಈ ವಿವರಗಳು ಜೀವಂತವಾಗಿ ಈಗಲೂ ಕಾಣಿಸಿಕೊಳ್ಳುವುದು ಕರ್ನಾಟದಲ್ಲಿ.

ಉ. ಮನೆಯ ಭಾಗಗಳು:

ತಮ್ಮ ರಕ್ಷಣೆ, ದನಕರುಗಳಿಗೆ ಜಾಗ, ಪೂಜೆ, ಅಡುಗೆ, ಕೃಷಿಸಾಧನಕ್ಕೆ ಜಾಗ ಇವು ಪ್ರತಿಮನೆಯ ಕನಿಷ್ಠ ಆವಶ್ಯಕತೆಗಳು. ಅವರ ಬದುಕಿನ ವಿಶಿಷ್ಟತೆಗೆ ಹೊಂದಿಕೊಂಡ ಕೆಲವು ವಿವರಗಳು ಇಲ್ಲಿವೆ.: (ನಕ್ಷೆ 12 ಪು.281-283)



75 ಶುಚೀಂದ್ರಂನ ವಕ್ತೃ ಒಬ್ಬರು ತಮ್ಮ ಮನೆಯ ದೇವರ ಗೂಡಿನ ಪಕ್ಕದಲ್ಲಿ

1. ಅಡುಗೆಮನೆ (ಅಡಕಲ), ಊಟದಮನೆ (ಅರಂಗ್), ಅಂಗಳ(ನೆಟ್ಟರಂಗ್) , ಜಗುಲಿ, ಹಜಾರ, ತೊಟ್ಟಿ, ಕೋಣೆ, ವರಾಂಡ (ಮೂಕ್‌ಚೌಕಿ), ಕೊಟ್ಟಿಗೆ, ಹಿತ್ತಿಲು, ಬಾವಿ ಇಂಥ ವಿಭಾಗಗಳಿಂದ ಕೂಡಿದ, ದೊಡ್ಡ ಕುಟುಂಬಗಳಿಗೂ ವ್ಯವಸಾಯ ಸೌಲಭ್ಯಕ್ಕೂ ಆಗುವ ವಿಶಾಲಮನೆಗಳು ಇವು.

2. ದಿಕ್ಕುಶುದ್ಧಿ, ನೈವೇದ್ಯವನ್ನು ಒದಗಿಸುವುದು ಮತ್ತು ಮಡಿಗೆ ಅನುಕೂಲವೆಂಬ ಕಾರಣಕ್ಕಾಗಿ ಅಡುಗೆಮನೆಯ ಒಂದು ಭಾಗದಲ್ಲಿಯೇ ದೇವರಮನೆಯೂ ಇರುತ್ತದೆ. 'ದೇವರಮನೆ'ಯಾಗಿ ಇರುವುದು ಒಂದು ಗೂಡು ಇಲ್ಲವೆ ಮಂದಾಸನ ಮಾತ್ರ. ಈ ಭಾಗಕ್ಕೆ ಎಲ್ಲರ ಪ್ರವೇಶ ಇಲ್ಲದಂತೆಯೇ ಅದರ ಸನ್ನಿವೇಶವಿರುತ್ತದೆ (ಚಿತ್ರ 75, 76, 77, 78, 79).

3. ವಿಶೇಷ ಸಂದರ್ಭಗಳಿಗಾಗಿ ವಿಶೇಷವಾದ ಪ್ರತ್ಯೇಕ ಅಡುಗೆಮನೆಯೂ (ಹರ್ವಾಲೆ ಹ್ವಾ) ಇರುವುದು ಮತ್ತೂರು ಹೊಸಹಳ್ಳಿಗಳಲ್ಲಿ. ಮೂಲತಃ



76 ಲಿಂಗದಹಳ್ಳಿಯ ವಕ್ತೃ ತಮ್ಮ ಮನೆಯ ದೇವರಗೂಡಿನ ಪಕ್ಕದಲ್ಲಿ



77 ಒಂದು ಪ್ರತ್ಯೇಕ ದೇವರಕೋಣೆ



78 ಮತ್ತೂರು: ದೇವರಪೂಜೆಯಲ್ಲಿ ನಿರತ ವೈದಿಕ



79 ದೇವರಗೂಡಿನ ಜೊತೆಗೆ ಸುಧಾರಿತ ಅಡುಗೆ ಮನೆ : ಮತ್ತೂರು

ಹರ್ವಾಲೆಹ್ಹಾ ಎಂಬುದೊಂದು ಇಲ್ಲದಾಗಲೂ, ಮತ್ತೂರಿನಲ್ಲಿ ಮನೆಯನ್ನು ವಿಸ್ತರಿಸುವಾಗ ಕಟ್ಟಿಕೊಂಡಿರುವುದೇ ಹೆಚ್ಚು. ಹಾಸನಸೀಮೆಯಲ್ಲಿಯೂ ಅಪರೂಪಕ್ಕಾಗಿಯಾದರೂ ಸಿಕ್ಕುವ 'ಹರ್ವಾಲೆ ಹ್ಹಾ' ಮತ್ತೂರಿನ ಪ್ರಭಾವದಿಂದ ಬಂದುದೇ ಎಂಬುದು ಖಚಿತವಿಲ್ಲ. ಹೆಚ್ಚಿನ ಸಂಶೋಧನೆಯನ್ನು ನಿರೀಕ್ಷಿಸುವ ಕುತೂಹಲದ ಸಂಗತಿ ಇದು.

4. ಒಲೆ ಮತ್ತು ದೇವರಪೂಜೆಗೆ ದಿಕ್ಕುಶುದ್ಧಿಯನ್ನು ನಿಯಮಿತವಾಗಿ ಗಣಿಸುತ್ತಾರೆ. ಆದರೆ, ಈಶಾನ್ಯಭಾಗಕ್ಕೇ ಅಡುಗೆಮನೆ ಮತ್ತು ದೇವರಮನೆಗಳಿರಬೇಕೆಂಬ ನಿಯಮವು ಮನೆಯ ವಿಭಜನೆಗೊಂಡಾಗ ಪಾಲನೆಗೆ ಬರುವುದಿಲ್ಲ. ಶಾಸ್ತ್ರವಿಧಿಗಳಿಗಿಂತಲೂ ಸೌಲಭ್ಯವು ಪ್ರಧಾನವಾಗುವ ಅನೇಕ ಸಂದರ್ಭಗಳಿಗೆ ಇದೊಂದು ನಿದರ್ಶನ ಮಾತ್ರ.

5. 'ಅರಂಗ್' ಅವರ ಊಟದಮನೆ. ಅದು ಅಡುಗೆಮನೆಯ ಪಕ್ಕದಲ್ಲೇ ಇದ್ದು ಅನೇಕವೇಳೆ ಅವಿಭಜಿತವಾಗಿರುತ್ತದೆ. ಮನೆಯನ್ನು ವಿವಿಧಭಾಗಗಳಾಗಿ ಗೋಡೆಗಳ ಮೂಲಕ ಪ್ರತ್ಯೇಕಿಸುವುದು ಈ ಮನೆಗಳ ಲಕ್ಷಣವಲ್ಲ. ಮತ್ತೂರು ಮತ್ತು ದಕ್ಷಿಣದ ಮನೆಗಳಲ್ಲಿ ಮನೆಯ ವಿಭಾಗೀಕರಣ ಉಳಿದೆಡೆಗಿಂತ ಹೆಚ್ಚಾಗಿದೆ.

6. ಅರಂಗ್, ನೆಟ್ಟರಂಗ್‌ಗಳೂ ವಿಭಾಗಗೊಳ್ಳದೆ ವಿಶಾಲವಾದ ಹಜಾರಗಳೇ ಇರುವುದು ಸಮಾರಂಭಗಳನ್ನು ನಡೆಸುವ ಸೌಕರ್ಯಕ್ಕಾಗಿ. ಆ ಕಾರಣಕ್ಕೇ, ಪ್ರತ್ಯೇಕಕೋಣೆಗಳೂ ಇರದ ಸಂದರ್ಭಗಳೇ ಹೆಚ್ಚು. ಆ ವಿಶಾಲವಾದ ಹಜಾರವೇ ಅರಂಗ್, ನೆಟ್ಟರಂಗ್‌ಗಳುಳ್ಳ ಮೇಲುಹಜಾರ, (ವರಾಂಡಕ್ಕೆ ಸಮನಾದ) ಕೆಳಹಜಾರ ಆಗಿರುವುದು ಮಧ್ಯದೇಶದ ರೀತಿ. ಅವೆಲ್ಲವೂ ಮಲಗುವ ಭಾಗಗಳೇ. ಕೃಷಿ ಉಪಕರಣಗಳು ಕೆಳಹಜಾರವನ್ನು ಆಕ್ರಮಿಸುತ್ತವೆ. ಹೆಚ್ಚಿನವು ಅಟ್ಟವನ್ನು ಸೇರುತ್ತವೆ (ಚಿತ್ರ 80).



80 ಅಟ್ಟವೊಂದರ ದೃಶ್ಯ : ಮಧ್ಯದೇಶ

7. ಜಗುಲಿ, ಕೊಟ್ಟಿಗೆ, ವರಾಂಡ (ವಂಕು)ದ ಮೂಲೆಯಲ್ಲಿ ಪೆಟ್ಟೆ, ಚಾಪೆಗಳನ್ನು ಕಟ್ಟಿ ಮುಟ್ಟಾದವರಿಗೂ, ಬಾಣಂತಿಯರಿಗೂ ತತ್ಕಾಲಕ್ಕೆ ಜಾಗಮಾಡುವುದು ಕೋಣೆಗಳಿಲ್ಲದ ಮನೆಗಳ ಪದ್ಧತಿ.[13] ಮಡಿಯ ಕಾರಣಕ್ಕಾಗಿಯಾದರೂ ಪ್ರತ್ಯೇಕವಾದ ಕೋಣೆಯೊಂದು ಇದ್ದಾಗಲೂ ಕಿರಿದಾದ ಕತ್ತಲುಭಾಗವೇ ಅದಾಗಿರುವುದು ರೂಢಿ.

---

[13] ಮತ್ತೂರಿನಲ್ಲಿ, ರಜಸ್ವಲೆಯರು ಹಗಲೆಲ್ಲಾ ಪಕ್ಕದ ಕಾಡಿನಲ್ಲಿರುತ್ತಿದ್ದರು. ರುದ್ರಪಟ್ಟಣದಲ್ಲಿ ಮುಟ್ಟು, ಬಾಣಂತಿತನ ಇತ್ಯಾದಿ ಮೈಲಿಗೆಗಳ ಸಂದರ್ಭದಲ್ಲಿ, ಹಿರಿಯರಾದ ಮಡಿಯವರು ದಾಯಾದಿಗಳ ಮನೆಗಳಲ್ಲಿದ್ದು ಬರುತ್ತಿದ್ದರು. ಮೈಲಿಗೆಯವರನ್ನು ಪ್ರತ್ಯೇಕವಾಗಿ ಇರಿಸಲು ಇದ್ದ ಕೋಣೆಗಳ ಅಭಾವದ ಪರಿಸ್ಥಿತಿಯನ್ನೇ ಅವು ಸೂಚಿಸುತ್ತವೆ.

8. ಕೊಟ್ಟಿಗೆಗೆ ಹೊಂದಿಕೊಂಡೇ ಅವಿಭಾಜಿತ ಬಚ್ಚಲು ಇರುತ್ತದೆ. ಸರಣಿಯಂತೆ ಅಂಟಿದ ಮನೆಗಳಾದುದರಿಂದ ಹಸುಗಳ ಪ್ರವೇಶಕ್ಕೆ ಅನುಕೂಲವಾಗಲು ಮನೆಯ ಮುಂಭಾಗದಲ್ಲಿಯೇ ಕೊಟ್ಟಿಗೆ ಇರಬೇಕಾದುದು ಮತ್ತೂರಿನ ಮನೆಗಳಿಗೆ ಅನಿವಾರ್ಯವಾಗಿದೆ. ಉಳಿದೆಡೆಗಳಲ್ಲಿ ಕೊಟ್ಟಿಗೆಗಳು ಪಕ್ಕಕ್ಕೋ ಹಿಂದಕ್ಕೋ ಇರುವುದಲ್ಲದೆ, ಅವೇ ಪ್ರತ್ಯೇಕ ಕಟ್ಟಡಗಳಾಗಿರುವುದೂ ಇದೆ.

ಊ. ಪರಿಕರಗಳು:

ತಮ್ಮ ಸಂಸ್ಕೃತಿ ಮತ್ತು ಕೃಷಿಯ ಅಗತ್ಯಗಳನ್ನು ಪೂರೈಸುವುದು ಈ ಮನೆಗಳ ರಚನೆಯ ಹಿಂದಿನ ಮೂಲ ತತ್ತ್ವವಾಗಿದೆ. ಹಳ್ಳಿಯ ಸಾಂಪ್ರದಾಯಿಕ ಮನೆಗಳು ಆಧುನಿಕ ಸೌಲಭ್ಯಗಳನ್ನು ಕ್ರಮಕ್ರಮವಾಗಿ ರೂಢಿಸಿಕೊಳ್ಳುತ್ತಿವೆ.

ಸಾಂಪ್ರದಾಯಿಕ ಬದುಕಿನ ಮನೆಯೊಂದರ ಪರಿಕರಗಳ ಚಿತ್ರ ಇದು:

1. ಕಂಬ ನೆಟ್ಟು ಅಡಿಕೆದಬ್ಬೆಗಳನ್ನೇ ಹರಡಿ ಮಾಡಿಕೊಂಡ ಬಡುಗಳು.
2. ಅಂಥದೊಂದು ಕಂಬವೇ ಕಡೆಗೋಲಾಗಿರುವುದು.
3. ಹಾಲುಮೊಸರು ತೂಗುಬಿದ್ದ ಹಗ್ಗದ 'ಹುರಿ'ಗಳು.
4. ಮಣ್ಣಿನಿಂದ ಮಾಡಿಕೊಂಡ ವಿವಿಧ ರೀತಿಯ ಒಲೆಗಳು (ಶುಭ ಮತ್ತು ಅಪರಗಳೆಲ್ಲಕ್ಕೂ ಅವೇ ಒಲೆಗಳು, ಅವೇ ಪಾತ್ರೆಗಳು) 'ಹರ್ವಾಲೆ ಹ್ಣಾ' ಇದಕ್ಕೆ ಅಪವಾದ.
5. ಉರುವಲಿಗೆ ಬಳಸುವ ಅಡಿಕೆಪಟ್ಟೆಯ ನಾರು, ಬಾಳೆನಾರು, ಸೋಗೆ, ಗೊದಮಟ್ಟೆಗಳು, ಹೊಗೆಹತ್ತಿ ಕಪ್ಪುತಿರುಗಿದ ಗೋಡೆ, ಚಾವಣಿ.
6. ನೇತುಬಿದ್ದ ವಿಭೂತಿತುಂಬಿದ ಸೋರೆಬುರುಡೆ, ಬಿದಿರಿನ ಅಂಡೆ.
7. ಧಾನ್ಯಗಳನ್ನು ಕಟ್ಟಿದ ನೊಜೆಹುಲ್ಲಿನ ಮೂಡೆಗಳು, ಗುಡಾಣ, ಪೆಟ್ಟೆ, ಓಡೆ.
8. ದಿನನಿತ್ಯದ ಬಳಕೆಯ ಮಣ್ಣುಕಲ್ಲಿನ ಗುಂಬಗಳು; ಕಲ್ಲಿನ ಪಾತ್ರೆಗಳು.
9. ಚಾವಣಿಗೆ ತೂಗುಬಿದ್ದ ಮಡಿಕೊಡಿಗಳು.
10. ಏತ, ಒಡೆಯುವ ಕಲ್ಲು, ಬೀಸುವಕಲ್ಲು, ಒರಳು, ಬಕ್ರ, ಶಿರಾವೆಗಳು, ಇತ್ಯಾದಿ.

ಇವುಗಳಿಂದ ಕೂಡಿದ ಕೃಷಿಕನ ಮನೆಯು ಆಧುನಿಕ ಮಾನದಂಡದಿಂದ ಸಹ್ಯವಾದುದಲ್ಲ. ನಗರಕ್ಕೆ ಸೇರಿದ ಗೃಹಿಣಿಯರ ದೃಷ್ಟಿಯಲ್ಲಿ ಹಳ್ಳಿಯ ಮನೆಯೊಂದರ ಓರಣದ ಚಿತ್ರ ಇದು: "... ಹಿಂದೆ ಅಣಿ ಅಚ್ಚುಕಟ್ಟು ಇರುತ್ತಿರಲಿಲ್ಲ. ಎಷ್ಟು ಹಣವಿದ್ದವರಿಗೂ ಸೌಲಭ್ಯಗಳಿರಲಿಲ್ಲ. ಕೆಲವರಷ್ಟೆ (ಅಪರೂಪಕ್ಕೆ) ಮಂಚದಲ್ಲಿ ಮಲಗುತ್ತಿದ್ದರು. ಕದಬೆಯ ಹಾಸಿಗೆ; ಹಳೆಯ ಸೀರೆ ಪಂಚೆಗಳನ್ನು ಹೊಲಿದು, ಹಾಸಲೂ ಹೊದೆಯಲೂ ಮಾಡಿಕೊಳ್ಳುತ್ತಿದ್ದ ದಟ್ಟಿ. ಮಕ್ಕಳಿಗೆ ಗೋಣಿಚೀಲ ಅಥವಾ ದಟ್ಟಿವನ್ನು ಹಾಸಿ ಅದರ ಮೇಲೆ ಸೀರೆಯತುಂಡು ಹಾಸಿ ಮಲಗಿಸುತ್ತಿದ್ದರು. ಅಪರೂಪಕ್ಕೆ ಹತ್ತಿಹಾಸಿಗೆ ಇದ್ದರೂ ಅಂದವಲ್ಲ; ಅಡ್ಡಾದಿಡ್ಡಿಯಾಗಿರುತ್ತಿತ್ತು. ಅಂದ ಅಡಕ ಜನಕ್ಕೆ ತಿಳಿಯುತ್ತಿರಲಿಲ್ಲ . . . ಹಾಸಿಗೆಯನ್ನು ಹಲಗೆ ಅಥವಾ ಅಡಿಕೆದಬ್ಬೆಯ ಚಾವಣಿಯ ಮೇಲೆ ಅಡಕುತ್ತಿದ್ದರು. ಹುಣಸೆಪಿಂಡಿಯು ಅಟ್ಟದತುದಿ ಅಥವಾ ಬಡುವಿನ ಮೇಲೆ ಇರುತ್ತಿತ್ತು. ಎಲೆಪಿಂಡಿ, ದೊನ್ನೆಮೋದೆಗಳೂ ಅಟ್ಟದತುದಿಯಲ್ಲಿ ಕಾಣುತ್ತಿದ್ದವು. ಅಲ್ಲೇ ಗೋಣಿಚೀಲದ ಕಂತೆಗಳೂ ಜಾಗ ಮಾಡಿಕೊಂಡಿರುತ್ತಿದ್ದವು . . . ಪುಸ್ತಕಗಳನ್ನು ಓದುವವರು ತುಂಬ ಅಪರೂಪ. ಇದ್ದರೂ ಪುಸ್ತಕಗಳು ಬಡುವಿನ ಮೇಲಿರುತ್ತಿದ್ದವು. ಓಲೆಗರಿಗಳೇ ಆಗಿನ ಓದಿನ ಆಕರ ಸಾಮಗ್ರಿ. ಕಂಠವಿದ್ಯೆ ಹೆಚ್ಚು. ಬೀರುಗೀರು ಒಂದೂ ಇರಲಿಲ್ಲ. ಇದ್ದರೂ, ತಾವೇ ಮಾಡಿಕೊಂಡ ಮರದ ಸಾಮಾನ್ಯಬೀರುಗಳು. ಜಾಯಿಕಾಯಿಪೆಟ್ಟಿಗೆ ಒಂದಿದ್ದರೆ ಸಾಕು. ಅವರ ಮನೇಲಿ ತುಂಬಾ ನಯಾನಾಜೂಕಾಗಿ ಇಟ್ಟುಕೊಂಡಿದಾರೆ ಅಂತ ಲೆಕ್ಕಾಚಾರ . . . ಕರೀ ಮಣ್ಣು ಕಲ್ಲಿನ

ಪಾತ್ರೆಗಳೇ ಅಡುಗೆ ಮನೆಯ ತುಂಬ . . ." ಓರಣ ಇಲ್ಲವೆ ಸುಖ ಸೌಲಭ್ಯಗಳಿಗಿಂತ ಜೀವನ ನಿರ್ವಹಣೆಯ ಹೋರಾಟದಲ್ಲಿ ಮಗ್ನವಾದ ಬದುಕಿನ ಚಿತ್ರವನ್ನೇ ಇದು ಕೊಡುತ್ತದೆ. ಹಳ್ಳಿಯ ಕೃಷಿಕನಲ್ಲಿ ಸೌಂದರ್ಯಪ್ರಜ್ಞೆ, ಅಚ್ಚುಕಟ್ಟು ಇರಲಿಲ್ಲವೆನ್ನುವುದಕ್ಕಿಂತಲೂ, ಲಭ್ಯಸೌಲಭ್ಯಗಳು ಮತ್ತು ಕಾರ್ಯಸಾಧ್ಯತೆಯ ಮಿತಿಯಲ್ಲಿತ್ತು ಎನ್ನುವುದು ಯುಕ್ತವಾಗುತ್ತದೆ.

ಸಂಕೇತಿಗಳ ವಸತಿಗಳ ಸನ್ನಿವೇಶವು ರಕ್ಷಣೆ, ಶುಚಿ, ಮತ್ತು ಕೃಷಿ ಹಾಗೂ ಧಾರ್ಮಿಕಜೀವನ ಸಾಧ್ಯತೆಯನ್ನು ದೃಷ್ಟಿಯಲ್ಲಿಟ್ಟುಕೊಂಡಿದೆ. ಮನೆಗಳ ರಚನೆಗಳೂ ಈ ಮೂಲಭೂತ ಅಂಶಗಳಿಗೆ ಚ್ಯುತಿ ಇಲ್ಲದಂತೆ ಕಾಲಕಾಲದ ಅಗತ್ಯ ಮತ್ತು ಸೌಲಭ್ಯಗಳನ್ನನುಸರಿಸಿ ಸುಧಾರಣೆಗೊಂಡಿವೆ. ಮನೆಗಳ ರಚನೆಯ ಪ್ರತಿವಿವರದಲ್ಲಿ ನೈಪುಣ್ಯ, ಸ್ವಾವಲಂಬನೆ ಅವರ ವೈಶಿಷ್ಟ್ಯ. ಮತ್ತೂರು ಮತ್ತು ದಕ್ಷಿಣದ ತೊಟ್ಟಿಮನೆಗಳ ವಿನ್ಯಾಸದ ಗಾಢ ಸಾಮ್ಯವು ಸಮಾನಪರಂಪರೆಯ ಉಳಿಕೆಯಾಗಿದೆ. ಕಟ್ಟಡದ ವಿಧಿಗಳು; ನಾಟಾಗಳ ಬಳಕೆ; ನಂಬಿಕೆ, ವಿಧಿನಿಷೇಧಗಳ ಮುಕ್ತಸ್ವೀಕರಣವೂ ಮೂಲಆಶಯಗಳ ಚೌಕಟ್ಟಿನಲ್ಲಿ, ಮಂಗಳಾಶಯ ಮತ್ತು ಅನುಕೂಲಗಳ ಆಶಯದಿಂದ ನಡೆದಿರುವುದು ಅವರ ಅಳವಡಿಕೆಯ ಮನೋಧರ್ಮಕ್ಕೂ ಸಾಕ್ಷಿಯಾಗಿದೆ. ಇವೆಲ್ಲವೂ ಅವರ ಆರ್ಥಿಕಸಾಧ್ಯತೆಗಳ ಮಿತಿಯಲ್ಲಿಯೇ ನಡೆದಿವೆ ಎನ್ನುವುದು ಅವರ ಸಾಹಸ ಪ್ರವೃತ್ತಿಯನ್ನು ಸೂಚಿಸುತ್ತದೆ.

ಈ ಅಧ್ಯಾಯದಲ್ಲಿ ಪರಿಶೀಲಿಸಿದ ಎಲ್ಲ ವಿವರಗಳ ಮೂಲದಲ್ಲಿ ಭಾರತದ ಸಾರ್ವತ್ರಿಕ ಚಿಂತನ ವಿಧಾನ ಮತ್ತು ಜೀವನಪದ್ಧತಿಯ ಅಂಶವೊಂದಿದೆ. ಲೌಕಿಕವೆನಿಸುವ ಸಂಗತಿಗಳೂ ಅವರ ಜೀವನ ವಿಧಾನದಲ್ಲಿ ಅಷ್ಟೇ ಮಿತಿಯಲ್ಲಿ ಉಳಿಯುವುದಿಲ್ಲ ಎಂಬುದೇ ಆ ಸಂಗತಿಯಾಗಿದೆ. ಈಗಾಗಲೇ, ಅವರ ವೃತ್ತಿ, ಆಹಾರಪಾನೀಯ, ಉಡುಗೆತೊಡುಗೆ, ಮತ್ತು ವಸತಿಗಳಿಗೆ ಸಂಬಂಧಿಸಿದಂತೆ ಈ ಸಂಗತಿಯ ಸತ್ಯವನ್ನು ಕಂಡಿದ್ದೇವೆ. ವಿಲ್ಕಿನ್ಸ್‌ನ ಈ ಮಾತುಗಳು ಅದನ್ನೇ ಸ್ಪಷ್ಟಪಡಿಸುತ್ತವೆ: "............ ಹಿಂದುವೊಬ್ಬನಿಗೆ ಧರ್ಮವೆಂಬುದು ಕೇವಲ ಋತುಮಾನಗಳಿಗೆ ಸೀಮಿತವಾಗಿ ನಿಲ್ಲುವಂಥದಲ್ಲ; ಆದರೆ ಅದು ಅವನ ಜೀವನವನ್ನು ಹಲವು ಆಯಾಮಗಳಲ್ಲಿ ನಿಯಂತ್ರಿಸುವಂಥದು ಎಂಬುದನ್ನು ಮರೆಯಬಾರದು. ಆ ಧರ್ಮವು ಆತನ ಹುಟ್ಟಿಗೆ ಮೊದಲೇ ಅವನಿಗಾಗಿ ಕೆಲವು ಸಂಸ್ಕಾರಗಳನ್ನು ನಿರ್ದೇಶಿಸುತ್ತದೆ; ಅವನ ಸಾವಿನನಂತರವೂ ಕೆಲವು ಸಂಸ್ಕಾರಗಳನ್ನು ನಿಗದಿಗೊಳಿಸುತ್ತದೆ. ಶಿಶುವೊಂದರ ಪೋಷಕರ ಮೇಲೆ ಅದರ ಪ್ರಾರಂಭಿಕ ತರಪೇತಿ, ಉಡುಗೆಯ ವಿಧಾನ, ಆಹಾರವಿಧಾನ ಮತ್ತು ಅದರ ತಯಾರಿಕೆ, ವೃತ್ತಿ, ವಿವಾಹ, ಮನೋರಂಜನೆಗಳ ನಿರ್ವಹಣೆಯ ಜವಾಬ್ದಾರಿಯನ್ನೂ ಅದು ಇಡುತ್ತದೆ. ಅದು ಆತನ ವೈಯಕ್ತಿಕ ಜೀವನವಿಧಾನವನ್ನು ಮಾತ್ರವಲ್ಲ, ಅವನ ಕೌಟುಂಬಿಕ ಮತ್ತು ರಾಷ್ಟ್ರೀಯ ಜೀವನವನ್ನೂ ನಿಯಂತ್ರಿಸುತ್ತದೆ. ಹಾಗೆಂದೇ ಒಬ್ಬ ಹಿಂದುವಿನ ಸಾಮಾನ್ಯ ಜೀವನವನ್ನು ವಿವರಿಸುವುದೆಂದರೆ ಆತನ ಧರ್ಮವನ್ನೇ ವಿವರಿಸಿದಂತೆ ...[14]

---

[14] Modern Hinduism - An account of the religion and life of Hindus in The Northern India, Wilkins W.J., Roopa & Co., 1975, p.vi.

ಅಧ್ಯಾಯ : ಐದು

ಸಂಕೇತಿಗಳ ಸಾಮಾಜಿಕ ಜೀವನ

ಈವರೆಗೆ ಭೌತಿಕ ಜಾನಪದದ ವಿವರಗಳಲ್ಲಿ ಸಂಕೇತಿ ಸಂಸ್ಕೃತಿಯ ಅನನ್ಯತೆಯನ್ನು ಗುರುತಿಸಿಕೊಂಡಿದ್ದೇವೆ. ಮುಂದಿನ ಎರಡು ಅಧ್ಯಾಯಗಳಲ್ಲಿ ಅವರ ಸಂಸ್ಕೃತಿಯ ವೈಶಿಷ್ಟ್ಯವನ್ನು ಅಭೌತಿಕ ಜಾನಪದದ ವಿವರಗಳ ಮೂಲಕ ವಿಶ್ಲೇಷಿಸಲಾಗಿದೆ. ಪ್ರಕೃತ ಅಧ್ಯಾಯದಲ್ಲಿ ಅವರ ಜೀವನಚಕ್ರದ ಸಂಪ್ರದಾಯದ ವಿವರಗಳನ್ನು ಪ್ರಧಾನವಾಗಿ ಪರಿಶೀಲಿಸಿದೆ. ಅದಕ್ಕೆ ಪೂರಕವಾಗಿ ಸಂಕೇತಿಗಳ ಕೌಟುಂಬಿಕ ಮತ್ತು ಸಾಮಾಜಿಕ ವ್ಯವಸ್ಥೆಯನ್ನು ಅವಲೋಕಿಸಿದೆ.

೧. ಸಂಕೇತಿ ಸಮುದಾಯದ ಸಾಮಾಜಿಕ ಹಿನ್ನೆಲೆ

ಕೌಟುಂಬಿಕ ಮತ್ತು ಸಾಮಾಜಿಕ ವ್ಯವಸ್ಥೆ ಹಾಗೂ ಜೀವನವಿಧಾನವು ಪುರುಷಾರ್ಥಗಳ ಚೌಕಟ್ಟಿನಲ್ಲಿ, ಚತುರಾಶ್ರಮಗಳ ಪಾತಳಿಯಲ್ಲಿ ಧರ್ಮಶಾಸ್ತ್ರ-ನಿರ್ದೇಶಿತ ನಿಯಮ ಮತ್ತು ವಿಧಿವಿಧಾನಗಳ ಅಚ್ಚಿನಲ್ಲಿ ಇರುವುದು ಬ್ರಾಹ್ಮಣರಲ್ಲಿ ಸಾಮಾನ್ಯವಾದ ಸಂಗತಿ. ಶಾಸ್ತ್ರವಿವರಗಳನ್ನು ಕೊಡಬೇಕಾದ ಅಗತ್ಯವಿಲ್ಲದಿರುವುದು ಮತ್ತು ಸಂಕೇತಿಗಳ ವಿಶಿಷ್ಟ ಜೀವನಕ್ರಮವನ್ನು ಚಿತ್ರಿಸುವುದು - ಇವೆರಡರ ಮಿತಿಯೊಳಗೆ, ಇಲ್ಲಿ ಅವರ ಜೀವನದ ಪ್ರವೃತ್ತಿಯನ್ನು ಗುರುತಿಸಲು ಯತ್ನಿಸಿದೆ. ಆದ್ದರಿಂದಲೇ, ಅವರ ಜೀವನವಿಧಾನದ ನಿರಂತರ ಚಿತ್ರವನ್ನು ಕೊಡುವುದರ ಬದಲು ಆನುಷಂಗಿಕವಾಗಿ ಕೆಲವು ವಿವರಗಳನ್ನು ಇಲ್ಲಿ ಕೊಟ್ಟಿದೆ:

ಅ. ಸಂಕೇತಿಗಳ ಜೀವನವನ್ನು ನಿಯಂತ್ರಿಸುತ್ತಿರುವ ಆಕರಗಳು: ವೇದಗಳು: ಶೇಕಡ ತೊಂಬತ್ತರಷ್ಟು ಕೃಷ್ಣಯಜುರ್ವೇದ ತೈತ್ತಿರೀಯ ಶಾಖೆ (ಆಪಸ್ತಂಬ ಸೂತ್ರ: ಶೇಕಡ ತೊಂಬತ್ತು, ಬೋಧಾಯನ: ಶೇಕಡ ಹತ್ತು); ಋಗ್ವೇದ : ಶೇಕಡ ಏಳು (ಆಶ್ವಲಾಯನ:ಕರ್ನಾಟಕ, ಶೌನಕ:ದಕ್ಷಿಣ); ಸಾಮವೇದ:ಶೇಕಡ ಮೂರು (ದ್ರಾಹ್ಯಾಯಣ:ಖಿಲವಾಗುವ ಅಂಚಿನಲ್ಲಿ); ಅಥರ್ವವೇದ:ಲುಪ್ತ. ಜೊತೆಗೆ, ಷಡಂಗಗಳು (ವಿಶೇಷವಾಗಿ ತರ್ಕ, ವೇದಾಂತ, ಜ್ಯೋತಿಷ); ಅಷ್ಟಾದಶ ಪುರಾಣಗಳು (ವಿಶೇಷವಾಗಿ ಭಾಗವತ); ರಾಮಾಯಣ, ಮಹಾಭಾರತ (ವಿಶೇಷವಾಗಿ ರಾಮಾಯಣ, ಭಗವದ್ಗೀತೆ); ಶಂಕರರ ಅದ್ವೈತ ವೇದಾಂತ; ಪರಾಶರ, ಮನು, ಯಾಜ್ಞವಲ್ಕ್ಯ ಸ್ಮೃತಿಗಳು; ಜ್ಯೋತಿಷಕ್ಕೆ ಪ್ರಧಾನವಾಗಿ 'ಕಾಲಾಮೃತ', 'ವಿದ್ಯಾಮಾಧವೀಯ'; ಆಶೌಚಕ್ಕೆ 'ಆಶೌಚಶತಕ'; ಶ್ರಾದ್ಧಾದಿಗಳಿಗೆ 'ವೈದ್ಯನಾಥೀಯ' (ಪಟ್ಟಿ 14 ಪು.310-311).

ಆ. ಸಂಕೇತಿ ಸಮುದಾಯದ ಕೆಲವು ಲಕ್ಷಣಗಳು :

1. ನಿಯತವಾಗಿ ಒಂದೇ ವೇದವನ್ನು ಕಲಿಯುವ ರೂಢಿ ಕಾಣಿಸುತ್ತದಾದರೂ ಅಲ್ಲಲ್ಲಿ ಒಂದಕ್ಕಿಂತ ಹೆಚ್ಚಿನ ವೇದಗಳನ್ನು ಕಲಿತ ಅಪರೂಪದ ನಿದರ್ಶಗಳು ದೊರೆಯುತ್ತವೆ. ಆದರೆ, 'ದ್ವಿವೇದಿ', 'ತ್ರಿವೇದಿ', 'ಚತುರ್ವೇದಿ' ಇತ್ಯಾದಿ ಉಪಾಧಿಗಳಿಲ್ಲ.
2. ನಿಯಮಿತವಾಗಿ ಪದ, ಕ್ರಮಪಾಠವೇ ಆದರೂ ಜಟಾಪಾಠಿಗಳು, ಈಚೆಗೆ ಘನಪಾಠಿಗಳು ಅಲ್ಲಲ್ಲಿ ಕಾಣಸಿಗುತ್ತಾರೆ.
3. ವ್ಯಾಪಕವಾಗಿ ಸಂಕೇತಿಗಳಲ್ಲಿರುವ 'ಅವಧಾನೀ', 'ದೀಕ್ಷಿತ' ಎಂಬ ಉಪಾಧಿಗಳು ಮತ್ತು ಯಜ್ಞಪರಂಪರೆಯು ಇತ್ತೀಚಿನವರೆಗೂ ದಟ್ಟವಾಗಿದ್ದ ಸೂಚನೆಗಳು ಹಾಗೂ 'ಶ್ರೋತ್ರಿಯ', 'ಋತ್ವಿಕ' ಎಂಬ ಪ್ರಯೋಗಗಳು ವ್ಯಾಪಕವಾಗಿರುವುದು

- ಅವರ ಉನ್ನತ ವೈದಿಕ ಜೀವನವಿಧಾನಕ್ಕೆ ಸಾಕ್ಷಿಗಳಾಗಿವೆ.

4. ಅನೇಕ ಶಾಸ್ತ್ರಗಳಲ್ಲಿ ಏಕಕಾಲಕ್ಕೆ ಪರಿಣತರಾದ ಬಹುಶಾಸ್ತ್ರವಿಶಾರದರೂ ಇಲ್ಲಿ ಕಂಡುಬರುತ್ತಾರೆ.

5. ಕೆಲವು ಪುರೋಹಿತ ಮನೆತನಗಳೇ ಇದ್ದು, ಶುಭ ಮತ್ತು ಅಪರಕರ್ಮಗಳನ್ನು ಒಬ್ಬ ಪುರೋಹಿತನೇ ನಿರ್ವಹಿಸುವ ಪರಿಪಾಠ ಇಲ್ಲಿದೆ.

ಹರಿಕಥೆ, ಸಂಗೀತ ಮೊದಲಾದ ಮಧ್ಯಕಾಲೀನ ವಿದ್ಯೆಗಳಲ್ಲಿಯೂ ಪರಿಣತಿ ಹೊಂದಿದ ಇವರು, ಈಗ ಸಮಕಾಲೀನ ಆಧುನಿಕ ವಿದ್ಯೆಗಳಲ್ಲಿ ತೊಡಗಿಸಿಕೊಂಡಿದ್ದಾರೆ. ಕಳೆದ ಶತಮಾನದ ಕೊನೆಯ ಭಾಗದ ಹೊತ್ತಿಗೆ ಶೇಕಡ ತೊಂಬತ್ತರಷ್ಟು ಇದ್ದ ವೈದಿಕರ ಸಂಖ್ಯೆ ಈಗ ಶೇಕಡ ಅರ್ಧಕ್ಕೆ ಇಳಿದಿದೆ. ಇದಕ್ಕೆ ಮುಖ್ಯ ಕಾರಣವೆಂದರೆ ಸಾಮಾಜಿಕ ಸ್ಥಿತ್ಯಂತರಗಳು ಅಗಾಧವಾಗಿ ಉಂಟಾಗಿರುವುದು. ಅಲ್ಲದೆ ಬ್ರಾಹ್ಮಣೇತರರಿಗೆ ಪೌರೋಹಿತ್ಯ ಮಾಡಿಸುವುದು, ಅರ್ಥ ತಿಳಿಯದೆ ಬಾಯಿಪಾಠ, ಪಾಂಡಿತ್ಯವಿದ್ದೂ ಅನುಷ್ಠಾನದಲ್ಲಿ ಹಿಂದೆಬಿದ್ದುದು - ಈ ಸ್ಥಿತ್ಯಂತರದ ಅವಧಿಯಲ್ಲಿ ಸಂಭವಿಸಿದ ಇತರ ಸಂಗತಿಗಳಾಗಿವೆ.

೨. ಕುಟುಂಬ ವ್ಯವಸ್ಥೆ ಮತ್ತು ವಿವಾಹ

ಸಂಕೇತಿ ಸಮುದಾಯದಲ್ಲಿ ಗಾಢವಾಗಿ ಕಾಣಿಸಿಕೊಳ್ಳುವ ಕೆಲವು ಪ್ರಾತಿನಿಧಿಕ ಅಂಶಗಳನ್ನು ಈ ಸಂಬಂಧದಲ್ಲಿ ಗಮನಿಸಬಹುದು:

ಅ. ನೈಷ್ಠಿಕ ಬ್ರಹ್ಮಚರ್ಯದಲ್ಲಿಯೇ ಉಳಿಯುವವರಿಗೆ ಹಾಗೂ ವಿವಾಹಿತರಿಗೆ ಸಂನ್ಯಾಸಿಗಳಿಗೆ ಸಮಾನ ಗೌರವಾದರಗಳು ಸಂದಿರುವುವಾದರೂ, ಬ್ರಹ್ಮಚರ್ಯದಲ್ಲಿಯೇ ಉಳಿದ ಮತ್ತು ಗೃಹಸ್ಥಾಶ್ರಮವಿಲ್ಲದೆಯೇ ಸಂನ್ಯಾಸವನ್ನು ಸ್ವೀಕರಿಸಿದ ನಿದರ್ಶನಗಳು ದೊರೆಯುವುದು ದಕ್ಷಿಣದ ವಂಶವೃಕ್ಷಗಳಲ್ಲಿ. ಕ್ರಮವಾಗಿ ಬ್ರಹ್ಮಚರ್ಯ, ಗೃಹಸ್ಥಾಶ್ರಮಗಳ ಅನಂತರವೇ ಸಂನ್ಯಾಸ ಸ್ವೀಕರಿಸುವ ಕರ್ನಾಟಕದಲ್ಲಿ ಸಂನ್ಯಾಸವು ಕೇವಲ ಆಶ್ರಮಪಾಲನೆಯ ಯಾಂತ್ರಿಕ ಉಳಿಕೆಯಾದುದು ಇತ್ತೀಚಿನ 'ಆತುರ ಸಂನ್ಯಾಸದ' ಕ್ರಮದಲ್ಲಿ ಪ್ರಕಟವಾಗುತ್ತಿದೆ. ಆದರೂ, ಸಂನ್ಯಾಸವನ್ನು ಸ್ವೀಕರಿಸಲಾಗದುದಕ್ಕಾಗಿ ಪರಿತಪಿಸಿ ಮೃತರಾದ ಪ್ರಾಮಾಣಿಕ ವಿರಕ್ತಿಯ ನಿದರ್ಶನಗಳೂ ಅವರ ವಂಶಚರಿತ್ರೆಗಳಲ್ಲಿವೆ. ಸಾಮಾನ್ಯವಾಗಿ ಯಾವುದೇ ಮಠದ ಸಂನ್ಯಾಸಿಯಾಗದ ಇವರ ವೈಶಿಷ್ಟ್ಯವು, ವಿರಕ್ತಿಮೂಲ ಸಂನ್ಯಾಸದ ಬಗೆಗಿನ ಒಲವನ್ನೇ ಪ್ರಕಟಿಸುವಂಥದು. ಹಾಗಾಗಿ, ಬದುಕಿನ ತಮ್ಮೆಲ್ಲ ಲೌಕಿಕ, ಪಾರಮಾರ್ಥಿಕ ಸಾಧನೆಗೆ ಆಶ್ರಯಸ್ಥಾನವಾದ ಕುಟುಂಬದ ಪ್ರಾಮುಖ್ಯವೂ ಸಮಾನವಾದುದಾಗಿದೆ.

ಆ. ಸಾಲಂಕೃತ ಕನ್ಯೆಯನ್ನು ಶೀಲವಂತನೂ ವಿದ್ಯಾವಂತನೂ ಆದ ವರನಿಗೆ, ಹೃತ್ಪೂರ್ವಕವಾಗಿ ಸ್ವಾಗತಿಸಿ ಅವನಿಂದ ಪ್ರತಿಫಲವಾಗಿ ಏನನ್ನೂ ಪಡೆಯದೆ ಕನ್ಯೆಯನ್ನು ದಾನಮಾಡುವ ಅತಿಶುದ್ಧ ವಿಧಾನವಾದ 'ಬ್ರಾಹ್ಮ' ವಿವಾಹವು ಇವರ ರೀತಿ.

1. ಕುರೂಪಿಯಾದ ಹೆಣ್ಣಾಗಿದ್ದಾಗಲೂ ಗಂಡಿಗಾಗಿ ಹೆಣ್ಣನ್ನು ಕಾಡಿಬೇಡುತ್ತಿದ್ದ ದಿನಗಳು ಹೋಗಿ ವರಾನ್ವೇಷಣೆಗಾಗಿ ಪರಿತಪಿಸುವ ಸ್ಥಿತಿ ಉಂಟಾದುದು ಇತ್ತೀಚಿನ ದಶಕಗಳಲ್ಲಿ. ಕನ್ಯಾನ್ವೇಷಣೆಯ ಮಂತ್ರಭಾಗಗಳೇ ಇರುವುದರಿಂದ ಅದರ ಇತಿಹಾಸವು ಹಳತಾದುದೇ; ಸ್ತ್ರೀ ಜನಸಂಖ್ಯೆಯ ಇಳಿಕೆಯ ಕಾರಣದ್ದಲ್ಲ.

2. ಸಿಗುವ ಕನ್ಯಾಶುಲ್ಕದ ಪೂರ್ವಸಂದರ್ಭಗಳು ಕೃತಜ್ಞತಾರೂಪದವು; ಪರಿಹಾರರೂಪದವಲ್ಲ.

3. ಶಾಸ್ತ್ರವಿರುದ್ಧವಾದರೂ ಕೆಲವು ದಶಕಗಳಿಂದೀಚೆಗೆ ವಿನಿಮಯ ವಿವಾಹಗಳು ನಡೆದಿವೆ; ಆದರೆ ಪಾರಸ್ಪರಿಕ ಸಂಭವನೀಯ ಕ್ಷೋಭೆಯ ಭೀತಿಯಿಂದಾಗಿ ಪ್ರಚಲಿತವಾಗಿಲ್ಲ.

4. ಅವೈಜ್ಞಾನಿಕವೂ ಅಶಾಸ್ತ್ರೀಯವೂ ಆದ ಸಗೋತ್ರ ವಿವಾಹಗಳು ವಿಶಾಲ ಮನೋಧರ್ಮದ ಹೆಸರಿನಲ್ಲಿ ಇತ್ತೀಚೆಗೆ ನಡೆದು ಸಾಮಾಜಿಕ ಕ್ಷೋಭೆಯನ್ನುಂಟುಮಾಡಿವೆ.

5. ಶಾಸ್ತ್ರವಿರುದ್ಧವಾದ - ಅಕ್ಕನ ಮಗಳು, ಸೋದರಮಾವ ಮತ್ತು ಅವನ ಮಗಳ ಸಂಬಂಧಗಳು ಈಚೆಗೆ ಸಾರ್ವತ್ರಿಕವಾಗಿ

ಸ್ವೀಕೃತವಾಗಿವೆ.

೬. ಮೊದಲಪತ್ನಿಯ ಬಂಜೆತನ, ಮೊದಲ ಪತ್ನಿ ಮೃತಳಾದಾಗ (ಸಂತಾನವಿದ್ದರೂ) ಅಗ್ನಿನಷ್ಟವಾಗಬಾರದೆಂಬ ಕಾರಣಗಳನ್ನೊಡ್ಡಿ ಪುರುಷನ ಪುನರ್ವಿವಾಹ, ಮತ್ತು, ಬಾಲವಿಧವೆಯೇ ಆದರೂ ಆಕೆಗೆ ಸಂನ್ಯಾಸಜೀವನ - ಸಮಾಂತರವಾಗಿ ಆದ ವಿರೋಧಾಭಾಸದ ಬೆಳವಣಿಗೆಗಳಾಗಿವೆ.

ಧರ್ಮಪ್ರಜಾಸಂಪತ್ತಿಯ ಮೂಲ ಉದ್ದೇಶವನ್ನು ಮರೆತು ದೇಹಾಪೇಕ್ಷೆಯನ್ನು ತೀರಿಸಿಕೊಳ್ಳುವುದು ಹಾಗೂ 'ಏಕಪತ್ನೀವ್ರತ' ಮೊದಲಾದ ಸಂಗತಿಗಳಲ್ಲಿ ಇತ್ತೀಚಿನ ಇತಿಹಾಸದಲ್ಲಿ ಕಾಣುವ ಶೈಥಿಲ್ಯವನ್ನು ಗುರುತಿಸಿ, ಕೆಲವರು 'ಬ್ರಾಹ್ಮವಿವಾಹ'ವು ಸಂಕಲ್ಪಮಾತ್ರದಲ್ಲಿದೆಯೆಂದೂ, ಇತ್ತೀಚಿನ ಇತಿಹಾಸದಲ್ಲಿ ಕಾಣುವುದು 'ಆರ್ಷವಿವಾಹ' ಮಾತ್ರವೆಂದೂ ವಾದಿಸುವುದು ಸಮರ್ಥನೀಯವಾಗಿದೆ.

ಇ. ಬಹುಪತ್ನಿತ್ವ, ವಿವಾಹವಿಚ್ಛೇದನ; ಅನುಲೋಮ, ಪ್ರತಿಲೋಮ ವಿವಾಹಗಳು; ದಾಸಿಯ ಅಸ್ತಿತ್ವ ಅಥವಾ ಶಾಸ್ತ್ರವಿಪರಿತವಾದ ಇಂಥ ಹಲವು ಕ್ರಮಗಳು ಸಾಂಪ್ರದಾಯಿಕ ಜೀವನದ ಲಭ್ಯ ಇತಿಹಾಸದಲ್ಲಿ ಕಾಣುವುದಿಲ್ಲ. ಬಾಲ್ಯವಿವಾಹ, ಪ್ರೌಢವಿವಾಹಗಳು ಸಾಮಾಜಿಕ ಸನ್ನಿವೇಶಕ್ಕೆ ತಕ್ಕಂತೆ ಅಳವಟ್ಟಿವೆ. ಎಲ್ಲ ಜಾತಿಗಳಿಗೂ ಗಾಂಧರ್ವವಿವಾಹ ರೀತಿಯು ಕೆಲವು ಮುನಿಗಳಿಂದ ಹೇಳಲ್ಪಟ್ಟಿದೆಯೆಂದು ಬೋಧಾಯನರು ಹೇಳುತ್ತಾರೆ. ಏಕೆಂದರೆ ಅದು ಪರಸ್ಪರ ಪ್ರೇಮವನ್ನು ಆಧರಿಸಿದುದು. ಹಾಗೆಯೇ ಭಾರದ್ವಾಜ ಮತ್ತು ಆಪಸ್ತಂಬರೂ ಪ್ರೇಮದ ಜೋಡಿಗಳ ಪರವಾದ ಕೆಲವು ಮುನಿಗಳನ್ನು ಉಲ್ಲೇಖಿಸುತ್ತಾರೆ. 'ದುರದೃಷ್ಟವಶಾತ್ ಅತ್ಯಾಚಾರ ಇಲ್ಲವೆ ದುರ್ಮಾರ್ಗಕ್ಕೆ ಒಳಗಾದ ಸ್ತ್ರೀಯು, ಪಶ್ಚಾತ್ತಾಪಕ್ಕೆ ಒಳಗಾದನಂತರ ಶುದ್ಧಳೂ ಪಾಪರಹಿತಳೂ ಆಗಿರುವಳೆಂದೇ ಪರಿಗಣಿಸಲ್ಪಡಬೇಕೆಂಬುದು' ಆಪಸ್ತಂಬರ ನಿಲುವಾಗಿದೆ. ಆದರೆ, ಸೂತ್ರಕಾರರು ಮೆರೆದಿರುವ ವಿಶಾಲಧೋರಣೆಗಳೂ ಮರೆಯಾದುದು (- ಪ್ರೇಮವಿವಾಹ, ಅತ್ಯಾಚಾರಕ್ಕೊಳಗಾದ ಅಸಹಾಯಕ ಕನ್ಯೆಯ ಭವಿಷ್ಯ ಮೊದಲಾದ ಸಂದರ್ಭಗಳಲ್ಲಿ ಕಾಣಿಸದುದು) ಪುರುಷಪ್ರಾಧಾನ್ಯದ ಬೆಳವಣಿಗೆಯ ಫಲಗಳಾಗಿವೆ. ಉಳಿದೆಡೆಗಳಲ್ಲಿ ಪ್ರತಿರೋಧ ವ್ಯಕ್ತವಾದರೂ, ಅನುಕೂಲಕರವಾಗಿದ್ದಾಗ ಶಾಸ್ತ್ರವಿರೋಧ ಅಂಶಗಳನ್ನೂ ಮೌನವಾಗಿ ಮಾನ್ಯಮಾಡುವುದು 'ಧರ್ಮಸಿಂಧು', 'ನಿರ್ಣಯಸಿಂಧು'ಗಳ ಜೊತೆಗೆ "ಅನುಕೂಲಸಿಂಧು" ಎಂಬ ಅಣಕುಪದವನ್ನೇ ಸೃಷ್ಟಿಸಿದೆ. ವೇದ, ಸ್ಮೃತಿ ಮತ್ತು ಆಚಾರಗಳ ಮೂಲಾಶಯವು ಪರಸ್ಪರ ವಿರುದ್ಧವಾಗಿರಬಾರದೆಂಬ ಮೂಲತತ್ತ್ವವು ಎಲ್ಲವೇಳೆಯೂ ಸ್ಥಿರವಾಗಿಲ್ಲದ ಬೆಳವಣಿಗೆಗಳನ್ನು ಇಲ್ಲಿ ಗುರುತಿಸಬಹುದು. ಇಷ್ಟರ ನಡುವೆಯೂ, ಕುಟುಂಬವು ಒಂದು ಘಟಕವಾಗಿ ಸುಭದ್ರವೂ ಆತ್ಮೀಯ ಸಂಬಂಧದ್ದೂ ಆಗಿ ಮುಂದುವರಿದಿರುವುದಕ್ಕೆ ಅವರ ಜೀವನವಿಧಾನದ ಮೂಲ ಆಕರ-ನಿರ್ದೇಶಿತ ವಿವರಗಳಲ್ಲಿ ಬಹುಪಾಲು ಅಂಶಗಳು ಆಚರಣೆಯಲ್ಲಿರುವುದೇ ಕಾರಣವಾಗಿದೆ.

ಈ. ಹೊರಬಾಂಧವ್ಯ (ಎಕ್ಸೋಗಮಿ) ಪದ್ಧತಿಯು ಸಗೋತ್ರವಿವಾಹದ ವಿರುದ್ಧ ಎಷ್ಟು ನಿಷ್ಠುರವಾಗಿ ಬೆಳೆಯಿತೋ ಒಳಬಾಂಧವ್ಯಪದ್ಧತಿಯು (ಕರ್ನಾಟಕದಲ್ಲಿ) ಸಂಕೇತಿ ಉಪಪಂಗಡಗಳ ನಡುವಿನ ಸಂಬಂಧದ ವಿರುದ್ಧವಾಗಿಯೂ ಅಷ್ಟೇ ನಿಷ್ಠುರವಾಗಿ ಬೆಳೆಯಿತು. ವಿಶಾಲಧೋರಣೆಯ ಪ್ರಸ್ತುತ ದಶಕಗಳಲ್ಲಿಯೂ - ಕೆಲವು ಶತಮಾನಗಳ ಅಂತರದನಂತರ ದಕ್ಷಿಣದ ಸಂಕೇತಿಗಳ ಪರಿಚಯ ಹಾಗೂ ಸಂಪರ್ಕಗಳಾದಾಗಲೂ ವೈವಾಹಿಕ ಸಂಬಂಧಗಳು ನಡೆಯದುದರ ಹಿಂದೆ - ಉಪಜಾತಿಗಳಿಗೆ ಕಾರಣವಾದ ವಂಶಶುದ್ಧಿ, ಅಪರಿಚಿತರ ಬಗೆಗಿನ ಅಂಜಿಕೆ ಮೊದಲಾದ ಕಾರಣಗಳು ಜೀವಂತವಾಗಿರುವುದನ್ನು ಗುರುತಿಸಬಹುದು.

ಉ. ಮೂರು-ನಾಲ್ಕು ತಲೆಮಾರುಗಳ ಸುಮಾರು ಅರುವತ್ತು-ಎಪ್ಪತ್ತು ಸದಸ್ಯರ ಪಿತೃಸ್ಥಾನೀಯ ಅವಿಭಕ್ತಕುಟುಂಬಗಳು ವಿಭಕ್ತಕುಟುಂಬಗಳಾಗಿ ಒಡೆದುದು ಈ ಶತಮಾನದ ಸ್ವತಂತ್ರ ಪ್ರವೃತ್ತಿಯಿಂದಾದ ಸ್ಥಿತ್ಯಂತರಕ್ಕೆ ನಿದರ್ಶನ. ಕುಟುಂಬದ ಯಜಮಾನನ ಬಗೆಗೆ ವಿನಯ - ವಿಧೇಯತೆಗಳು ವ್ಯಕ್ತವಾಗುವ ಕೆಲವು ರೀತಿಗಳನ್ನು ಇಲ್ಲಿ ನಿದರ್ಶಿಸಿದೆ:

1. ಪತಿಪತ್ನಿಯರು ಕೂಡ ಹಿರಿಯರೆದುರಿಗೆ ಸಂಭಾಷಿಸದಿರುವುದು; ಪುರುಷನು ಮೊದಲು ಊಟ ಮಾಡಿದಮೇಲೆ ಅದೇ ಎಲೆಯಲ್ಲಿ ಪತ್ನಿಯು ಊಟಮಾಡುವುದು.

2. ಪುರುಷರೂ ಯಜಮಾನನೊಂದಿಗೆ ಅಥವಾ ಹಿರಿಯರೊಂದಿಗೆ (ತಂದೆ ಅಥವಾ ಅಜ್ಜ ಅಥವಾ ಮುತ್ತಜ್ಜ), ಮಾತನಾಡಬೇಕಾದರೆ ಕಂಬದ ಮರೆಯಲ್ಲಿ ನಿಂತು ತಗ್ಗಿದದನಿಯಲ್ಲಿ ಮಾತನಾಡುವುದು; ಮಾತನಾಡುವ ಮೊದಲು ಅಭಿವಾದನ ಮಾಡುವುದು.

3. ಆಸ್ತಿಯಹಕ್ಕು ಯಜಮಾನನ ಮೂಲಕವೇ ಮುಂದುವರಿಯುವುದು ಇತ್ಯಾದಿ. ಆದರೆ, ನಿತ್ಯ ನೈಮಿತ್ತಿಕಾದಿ ಸಕಲ ಧಾರ್ಮಿಕ ಕ್ರಿಯೆಗಳಲ್ಲಿಯೂ ನಿರಂತರವಾದ ಎಲ್ಲರ ಸಾಹಚರ್ಯವಿರುವುದರಿಂದ ಸಂಕೇತಿ ಕುಟುಂಬದ ಯಜಮಾನನ ಸ್ಥಾನವನ್ನು ಇತರ ಕೆಲವು ಬ್ರಾಹ್ಮಣೇತರ ಕುಟುಂಬಗಳ ಮೂಲ ಪ್ರವೃತ್ತಿಗೆ[1] ಹೋಲಿಸಲಾಗದು.

ಊ. ಜನಸಂಖ್ಯೆ ಹೆಚ್ಚಾದಂತೆ ಅವಿಭಕ್ತ ಕುಟುಂಬಗಳು ವಿಭಕ್ತಕುಟುಂಬಗಳಾಗಿ ಒಡೆದಾಗಲೂ ಬಂಧುತ್ವದ ದೃಷ್ಟಿಯಿಂದ ಒಂದೇಕುಲ ಆಗಿ ಮುಂದುವರಿದವು. ಇಂಥ ಕುಲಗಳು ಪ್ರತಿಗೋತ್ರದಲ್ಲಿ ಒಂದರಿಂದ ಹತ್ತರವರೆಗೆ ಇದ್ದುದು 'ನವವಾದಲ', 'ದಶಕುಂಡಲ' ಇತ್ಯಾದಿ ಗೋತ್ರ ಉಪವಿಭಾಗಗಳಲ್ಲಿ ಕಾಣಿಸುತ್ತದೆ. ಕೆಲವು ಕುಲಗಳೇ ವಿನಾಶವಾಗಿ (extinct) ಹೋದುದು ಕೂಡ ಅವರ ವಂಶವೃಕ್ಷಗಳಲ್ಲಿ ಸ್ಪಷ್ಟವಾಗಿದೆ. ಪ್ರತಿ ಸಂಕೇತಿ ಉಪಪಂಗಡಗಳಲ್ಲಿಯೂ ಇಂಥ ಕುಲಗಳನ್ನು ಕಾಣಬಹುದು. ಈ ಉಪಪಂಗಡಗಳನ್ನು 'ಬುಡಕಟ್ಟುಗಳು' 'ಫ್ರೇಟರಿ' ಎಂದು ಗುರುತಿಸಿ, ಇಡೀ ಸಂಕೇತಿ ಸಮುದಾಯವನ್ನು ಬ್ರಾಹ್ಮಣರ ಒಂದು ಉಪಜಾತಿಯಾಗಿ ಗಣಿಸಬಹುದು.


ಸಂಕೇತಿ ನೆಲೆಗಳಲ್ಲಿ, ಇಡೀ ಊರು ಒಂದೇ ಕುಲಕ್ಕೆ ಸಂಬಂಧಿಸಿದ ಕುಟುಂಬಗಳಿಂದ ಕೂಡಿದವೂ ಇವೆ. ವಿವಿಧ ನೆಲೆಗಳಿಗೆ ಚದುರಿದರೂ ಈ ಕುಲಗಳ ಕುಟುಂಬಗಳು (ಸೂತಕ ಇತ್ಯಾದಿ) ಅನುಷ್ಠಾನಗಳಿಂದ ಗಾಢವಾದ ಸಂಬಂಧವನ್ನು ಮುಂದುವರಿಸುತ್ತಿರುವುದೂ ಇದೆ. ವಿವಿಧ ಗೋತ್ರಗಳಿಗೆ ಸೇರಿದ್ದರೂ ಪರಸ್ಪರ ಸಂಬಂಧಗಳ ಮೂಲಕ ಹೆಣೆದುಕೊಂಡ ಮತ್ತೂರು, ಲಿಂಗದಹಳ್ಳಿಗಳನ್ನು ಸಂಕೇತಿಗಳ 'ಬಂಧುತ್ವಗುಂಪು'ಗಳಾಗಿ (kinship groups) ಪರಿಗಣಿಸಬಹುದು.[2]

ಋ. ಪುರುಷಪ್ರಧಾನ ಸಮಾಜದ ಎಲ್ಲ ಪ್ರವೃತ್ತಿಗಳ ನಡುವೆ, ಹೆಣ್ಣುಮಗಳನ್ನು ಕ್ಷೇಮವಾಗಿ ಕಾಪಾಡಬೇಕಾದ ಮತ್ತು ವಿಪರೀತವಾದ ವಿವಾಹವೆಚ್ಚದ ಭೀತಿ ತಂದೆತಾಯಿಗಳಿಗೆ ಸಹಜವಾಗಿ ಇದ್ದಾಗಲೂ, ಕನ್ಯಾದಾನಕ್ಕಾಗಿಯೂ ಮನೆಯಲ್ಲಿ ಜೀವಂತಿಕೆ ಇರಲೂ

---

1 ನೋಡಿ: ಮಲೆನಾಡಿನ ಒಕ್ಕಲಿಗರು ಮತ್ತು ಅವರ ಜಾನಪದ, ಪು.೫೨೩-೫೨೭.

2 - ಕುಲ ಅಥವಾ ಬುಡಕಟ್ಟು



ಹೆಣ್ಣುಮಗು ಬೇಕೆಂದು ಉತ್ಕಟವಾಗಿ ಬಯಸುವ ಮತ್ತು ಅನೇಕ ಗಂಡುಗಳ ಅನಂತರ ಹೆಣ್ಣೊಂದು ಜನಿಸಿದಾಗ ವಿಶೇಷ ಉತ್ಸಾಹ, ವಿಜೃಂಭಣೆಗಳಿಂದ ಅದನ್ನು ಸ್ವಾಗತಿಸುವ - ಪ್ರವೃತ್ತಿ ಸಂಕೇತಿಗಳದು. ನಿತ್ಯಕರ್ಮಗಳಿಂದತೊಡಗಿ ಬ್ರಾಹ್ಮಣಜೀವನದ ಎಲ್ಲ ಧಾರ್ಮಿಕ ವಿವರಗಳಲ್ಲಿ ಹೆಣ್ಣಿನದು ಸಮಾನಪಾತ್ರವೆಂಬುದನ್ನು ಉಪೇಕ್ಷಿಸುವಂತಿಲ್ಲ.

1. ಸಂಪ್ರದಾಯದ ಹಾಡು ಮತ್ತು ಹರಿಕಥೆ ಪುರಾಣ-ಶ್ರವಣ ಹಾಗೂ ಗೃಹಕೃತ್ಯಗಳ ಮಿತಿಯಲ್ಲಿದ್ದ ಹೆಣ್ಣು ವಿದ್ಯೆ ಹಾಗೂ ನೌಕರಿಗಳಲ್ಲಿ ಗಂಡಿಗೆ ಸರಿಮಿಗಿಲಾಗಿ ಮುನ್ನಡೆದಿರುವುದು ಈ ಶತಮಾನದ ನಡುಭಾಗದಲ್ಲಿ ಕಂಡುಬಂದ ನವೀನ ಲಕ್ಷಣ.

2. ಹೆಣ್ಣಿನ ಬಗೆಗೆ ಕೆಲವೊಮ್ಮೆ ಅತಿರೇಕಗೊಳ್ಳುವ ತುಳಿತ, ಮತ್ತೊಂದೆಡೆ ಇರುವ ಪೂಜ್ಯಸ್ಥಾನ ಭಾರತದ ಸಾಮಾನ್ಯಲಕ್ಷಣ. ಗಂಡು ಹೆಣ್ಣುಗಳ ಪ್ರೀತಿ, ನಿಯಂತ್ರಣ, ಜವಾಬ್ದಾರಿಗಳ ಸಮನ್ವಯವೇ ಈ ಕುಟುಂಬಗಳ ಜೀವಾಳವಾಗಿದೆ.

3. ಹೆಣ್ಣಿನ ಆರ್ಥಿಕಸ್ವಾತಂತ್ರ್ಯದ ಮೀಸಲುಭಾಗ ಇದು: ಹೆಣ್ಣಿಗೆ 'ಉಂಗುರತೊಡಿಸು'ವಾಗ, 'ಶೇಷಹವನ' ಇತ್ಯಾದಿ ವೇಳೆ, ಮಡಿಲುತುಂಬಿದಾಗ, ಗೃಹಪ್ರವೇಶದಲ್ಲಿ ಸಕ್ಕರೆ ಬಾಳೆಹಣ್ಣು ಕೊಟ್ಟಾಗ, ಮದುವೆ ಆಗಿ ಏಳುವರ್ಷಗಳವರೆಗೆ 'ಗೌರಿಹಣ ' ಕೊಡುವಾಗ - ಬಂದ ಹಣವಲ್ಲದೆ ಗಂಡನಮನೆಯಿಂದ ಒಂದು ವರ್ಷದವರೆಗೆ ಬಂದ 'ಚಿನ್ನದಹಣ' - ಎಲ್ಲವೂ ಆಕೆಯ 'ಸ್ತ್ರೀಧನ'ವಾಗುತ್ತದೆ. ಅದು ಆಕೆಗೆ ಇಷ್ಟಬಂದಂತೆ ಹೆಣ್ಣುಮಕ್ಕಳ ಮೂಲಕ ಮುಂದುವರಿಯುತ್ತದೆ.

4. ಸಾಂಸ್ಕೃತಿಕ, ಧಾರ್ಮಿಕ ಕಾರ್ಯಗಳಲ್ಲಿ ಆಕೆಯ ಪಾತ್ರ ಅನಿವಾರ್ಯವಾದುದು: ಸಂಸ್ಕಾರಗಳಲ್ಲಿ ಅಗ್ನಿಕೊಡುವುದು, ಆರತಿಎತ್ತುವುದು, ಅತ್ತೆಸೆರಗು, ಗಣಪತಿಪೂಜೆ, ಗೋದನಕಲ್ಲು; ದೀಪಾವಳಿಯಲ್ಲಿ 'ವಾರಾತುರುವೆ' ಮೂಲಕ ತವರಿಗೆ ಶುಭಕೋರುವುದು ಇತ್ಯಾದಿಗಳು ಸೋದರತ್ತೆ ಮತ್ತು ತಾಯಿಯಕಡೆಯ ಚಿಕ್ಕಮ್ಮ, ದೊಡ್ಡಮ್ಮ - ಇವರ ಪಾಲಿನ ನೈತಿಕ ಹಕ್ಕಾಗಿರುವುದು ಹೆಣ್ಣಿನ ಸ್ಥಾನದ ಮಹತ್ತ್ವಕ್ಕೆ ಸಾಕ್ಷಿಗಳಾಗಿವೆ.

ಈ ವಿವರಗಳಿಂದ ಸ್ಪಷ್ಟವಾಗುವಂತೆ, ಸಮಾನ ಆಕರ(ಗ್ರಂಥ)ಗಳ ಕಾರಣದಿಂದಾಗಿ ಕೌಟುಂಬಿಕ ವ್ಯವಸ್ಥೆಯ ಬಹುಪಾಲು ಅಂಶಗಳು ಇತರ ಸಮುದಾಯಗಳಿಗೆ ಸಮಾನವಾಗಿವೆ. ಸಂಕೇತಿ ಸಮುದಾಯದಲ್ಲಿಯೂ ಕಾಲದೇಶಗಳು ಅನಿವಾರ್ಯಗೊಳಿಸುವ ಸಾಂದರ್ಭಿಕ ಅಳವಡಿಕೆ, ಸುಧಾರಣೆಗಳು ಈ ಸಂಬಂಧದಲ್ಲಿ ಆಗಾಗ ಕಂಡುಬಂದಿವೆ; ಕೆಲವು ವಿಕೃತಿಗಳೂ ಅವುಗಳಲ್ಲಿ ಸೇರಿವೆ. ಆದರೆ ಪಾರಂಪರಿಕ ಮೂಲಭೂತ ವಿವರಗಳು ಹಾಗೆಯೇ ಉಳಿದಿವೆ. ಕೆಲವೊಮ್ಮೆ ಪುರುಷಪ್ರಾಧಾನ್ಯದ ಅತಿರೇಕಗಳು ಪ್ರಕಟವಾಗುತ್ತವಾದರೂ, ಸ್ತ್ರೀ-ಪುರುಷರ ಹಕ್ಕುಜವಾಬ್ದಾರಿಗಳ ಸಮನ್ವಯವೇ ಈ ಕುಟುಂಬಗಳ ಸಾಧಾರಣ ಸ್ಫೂರ್ತಿಯಾಗಿದೆ. ಹಾಗಾಗಿಯೇ, ಇಂದಿಗೂ ಅದು ಸುಭದ್ರ ಸಾಮಾಜಿಕ ಘಟಕವಾಗಿ ಉಳಿದಿದೆ. ಧಾರ್ಮಿಕಬಂಧವು ಅದರ ಹಿಂದಿನ ನಿಜವಾದ ಕಾರಣವಾಗಿದೆ. ಪುಟ್ಟಸಮುದಾಯವಾದುದರಿಂದ ಕುಟುಂಬಗಳು ಪರಸ್ಪರ ಬಾಂಧವ್ಯದ ಮೂಲಕ ಹೆಣೆದುಕೊಂಡಿರುವುದೂ ಈ ಸುಭದ್ರತೆಯನ್ನು ಕಾಯ್ದುಕೊಳ್ಳಲು ನೆರವಾಗಿದೆ.

೩. ಸಾಮಾಜಿಕ ವ್ಯವಸ್ಥೆ

ಸಂಕೇತಿ ಸಮುದಾಯದ ಸಾಮಾಜಿಕ ಹಿನ್ನೆಲೆ ಮತ್ತು ಕುಟುಂಬವ್ಯವಸ್ಥೆಯ ವಿಶೇಷ ಲಕ್ಷಣಗಳು ಅವರ ಸಾಮಾಜಿಕ ಜೀವನದ ಬಗೆಗೆ ಅರ್ಥಪೂರ್ಣ ಹಿನ್ನೆಲೆಯನ್ನು ಒದಗಿಸಿವೆ. ಪ್ರಸ್ತುತ ಭಾಗದಲ್ಲಿಯೂ, ಅವರ ಸಾಮಾಜಿಕ ವ್ಯವಸ್ಥೆಯ ಸಮಗ್ರಚಿತ್ರವನ್ನು ಕೊಡುವುದರ ಬದಲು, ಬ್ರಾಹ್ಮಣಸಾಮಾನ್ಯ ಅಂಶಗಳ ನಡುವೆ ಕಾಣುವ ಸಂಕೇತಿಗಳ ವಿಶಿಷ್ಟ ಲಕ್ಷಣಗಳನ್ನಷ್ಟೆ ಗುರುತಿಸುವ ಪ್ರಯತ್ನ ಮಾಡಿದೆ.

ಅ. ಮಠ : ಸಂಕೇತಿಗಳಲ್ಲಿ ಸಾರ್ವತ್ರಿಕವಾಗಿ ಇರುವ ಗಾಢ ಸಾಂಸ್ಕೃತಿಕ ಸಾಮ್ಯವೆಂದರೆ ಮಠದ ಸಂಬಂಧದ ಸ್ವರೂಪದ್ದು. ಸ್ವಯಮಾಚಾರ್ಯರೆನಿಸಿದ ಇವರಿಗೆ ಗುರುದಕ್ಷಿಣೆಯಿಂದ ವಿನಾಯಿತಿ ಇರುವುದು ಮಾತ್ರವಲ್ಲ, ಅವರ ಸಾಮಾಜಿಕ ವ್ಯವಸ್ಥೆಯ ನಿರ್ವಹಣೆ ಸ್ವತಂತ್ರವಾದುದು; ಮಠದ ಬದ್ಧತೆಯಿಂದ ಮುಕ್ತವಾದುದು. ಅನೂಚಾನವಾಗಿ ಹೊಂದಿರುವ ಸಂಪರ್ಕವು ಶೃಂಗೇರಿಮಠದೊಂದಿಗೆ. ಲಿಂಗದಹಳ್ಳಿ, ಮತ್ತೂರು ಹೆಚ್ಚಿನ ಸಂಪರ್ಕದಲ್ಲಿರುವುದಕ್ಕೆ ಭೌಗೋಳಿಕ ಸನಿಹವೊಂದೇ ಕಾರಣ. ಆ ಕಾರಣದಿಂದಲೇ ಮತ್ತೂರಿನವರು ಕೂಡಲಿಮಠ ಮತ್ತು ದಕ್ಷಿಣದವರು ಕಂಚೀಮಠದ ಸಂಪರ್ಕಕ್ಕೆ ಇತ್ತೀಚೆಗೆ ಬಂದಿರುವುದು. ಆ

ಮೂಲಕ ಈ ಬಗೆಗಿನ ಮುಕ್ತತೆಯೂ ವ್ಯಕ್ತವಾಗಿದೆ. ವಿವಾಹಾದಿ ಸಮಾರಂಭಗಳ ಸಂದರ್ಭದಲ್ಲಿ ತಮ್ಮ ಪುರೋಹಿತರ ಮೂಲಕ ಶೃಂಗೇರಿಮಠಕ್ಕೆ ತಾಂಬೂಲ ಕಾಣಿಕೆಯೊಂದನ್ನು (ಮತ್ತೂರಿನಲ್ಲಿ ತೆಂಗಿನಕಾಯಿ, ದಕ್ಷಿಣೆಯುಳ್ಳ ಈ ತಾಂಬೂಲವನ್ನು 'ಗುರುಚರಣ ತಾಂಬೂಲ' ಎನ್ನುತ್ತಾರೆ) ಸಲ್ಲಿಸುವ ಕನಿಷ್ಠ ಸಂಪ್ರದಾಯ ಮಾತ್ರ ಮತ್ತೂರು ಮತ್ತು ದಕ್ಷಿಣದಲ್ಲಿ (ಮಾತ್ರ) ರೂಢಿಗೊಂಡಿದೆ. ಅದೂ ಅನ್ಯಪ್ರಭಾವದಿಂದಾದುದೆಂಬುದಕ್ಕೆ, ಇತರ ಬಹುಸಂಖ್ಯಾತ ಸಂಕೇತಿಗಳಲ್ಲಿ ಅದು ಇಲ್ಲದುದೂ ಆಧಾರವಾಗಿದೆ.

ಆ. ನ್ಯಾಯವ್ಯವಸ್ಥೆ : ಮಠದ ಬದ್ಧತೆಯಿಂದ ಮುಕ್ತವಾದುದರಿಂದ ಆದ ಪರ್ಯಾಯ ಬೆಳವಣಿಗೆಯಿಂದ ಯಜಮಾನ, ಪಂಚಾಯಿತಿ, ಪರಿಷತ್‌ಗಳಿಗೆ ಪ್ರಾಧಾನ್ಯ ಬಂದಿದೆ.

ವಿದ್ಯಾವಂತನೂ ದಕ್ಷನೂ ಆದ ಹಿರಿಯನು ಗ್ರಾಮದ ಯಜಮಾನ. ಅದು ಪರಂಪರೆಯಾಗಿ ಮುಂದುವರಿಯುವ ಸ್ಥಾನ. ನ್ಯಾಯಪಂಚಾಯಿತಿ, ಪಂಚಾಂಗಶ್ರವಣ, ಉಪಾಕರ್ಮ, ರಾಮೋತ್ಸವ, ಅಪರಕ್ರಿಯೆ ಇಂಥ ಸಮಷ್ಟಿಕಾರ್ಯಗಳೆಲ್ಲವೂ ಆತನ ನಿರ್ದೇಶನ ಮತ್ತು ಜವಾಬ್ದಾರಿಯಲ್ಲಿ ನಿರ್ವಹಣೆಗೊಳ್ಳುತ್ತವೆ. ಪ್ರತಿಮನೆಯ ಸಮಾರಂಭಗಳ ವೇಳೆ 'ಯಜಮಾನಿಕೆಯ ತಾಂಬೂಲ' ಸಲ್ಲುವ ಮೂಲಕ ಆತನು ಗೌರವ ಪಡೆಯುತ್ತಾನೆ. ಈ ಪರಂಪರೆಯಲ್ಲಿ ಅಸಮರ್ಥನೊಬ್ಬನು ಬಂದಾಗ, ಈ ಪದವಿಯು ನಾಮಮಾತ್ರದ್ದಾಗಿ ಗ್ರಾಮದ ಯಾರೊಬ್ಬ ದಕ್ಷನೋ, ಶಾನುಭೋಗನೋ, ಪಟೇಲನೋ ಕಾರ್ಯಗಳನ್ನು ನಿರ್ವಹಿಸುವ ಸ್ಥಿತ್ಯಂತರಗಳು ಹಲವೆಡೆಗಳಲ್ಲಿ ಕಾಣುತ್ತವೆ. ಅನೇಕ ನೆಲೆಗಳಲ್ಲಿ 'ಯಜಮಾನ'ನ ಸ್ಥಾನವೇ ಲುಪ್ತವಾಗಿ ನೆನಪಿನಿಂದ ಅಳಿದುದು ಮುಂದಿನ ಬೆಳವಣಿಗೆಯಾಗಿದೆ.

ಆಪಾದಿತನೊಬ್ಬನನ್ನು ವಿಚಾರಣೆಗೆ ಒಳಪಡಿಸುವುದು 'ಪಂಚಾಯಿತಿ'; ಪಶ್ಚಾತ್ತಾಪಗೊಂಡು ಶಿಕ್ಷೆಬೇಡಿ ಬಂದವನಿಗೆ ಪ್ರಾಯಶ್ಚಿತಕ್ಕೊಳಪಡಿಸುವುದು 'ಪರಿಷತ್'. ಶುಭ ಮತ್ತು ಅಪರಗಳಿಗೆ ವಿಶಿಷ್ಟ ಮೀಸಲು ಪದಗಳನ್ನೇ ಬಳಸುವ ಮಧ್ಯದೇಶದಲ್ಲಿ 'ಪರಿಷತ್' ದಹನಭೂಮಿಯಲ್ಲಿ ಮಾತ್ರ ಬಳಕೆಯಾಗುವ ಪದವಾಗಿ ಹೀನಾರ್ಥವನ್ನು ಪಡೆದಿದೆ. ಅಗ್ನಿಸಾಕ್ಷಿಯಾಗಿ ಸಂಸ್ಕಾರಗಳು ನಡೆಯುವಾಗ, ನೆರೆದ ಸುತ್ತಣ ಗ್ರಾಮಗಳ ಸಭಾಸದರ ಎದುರು 'ನ್ಯಾಯ'ದ ಬೇಡಿಕೆ ಬರುವುದೂ ಪದ್ಧತಿಯೇ. ತಮಿಳುನಾಡಿನ ಬ್ರಾಹ್ಮಣರಲ್ಲಿ ಕ್ರಿ.ಶ.ಎಂಟು-ಒಂಬತ್ತನೆಯ ಶತಮಾನದಿಂದಲೇ ಇಂಥ ವ್ಯವಸ್ಥೆ ಇತ್ತು. ಸಂಕೇತಿಗಳಲ್ಲಿ 'ಸಭಾ' ಹೊಂದಿರುವ ಪ್ರಾಮುಖ್ಯದ ದೃಷ್ಟಿಯಿಂದ ಇದು ಮುಖ್ಯ ಸಂಗತಿಯಾಗಿದೆ.

ಸಾಮಾನ್ಯ ಅಪರಾಧಗಳ ಸಂದರ್ಭದಲ್ಲಿ "ಕಾವೇರಿಯಲ್ಲಿ ಸ್ನಾನಮಾಡಿ ಲಕ್ಷಜಪ ಮಾಡು", "ದೇವರಿಗೆ ಅಡ್ಡಬೀಳು", "ದೇವರಿಗೆ ಮಂಗಳಾರತಿ ಮಾಡಿಸು"- ಎಂಬಂಥ ಸಾಮಾನ್ಯ ಸಾತ್ತ್ವಿಕ ಶಿಕ್ಷೆಗಳೇ ಇರುವುದು ಸಮುದಾಯದ ಸಾತ್ತ್ವಿಕ ಪ್ರವೃತ್ತಿಯ ಸಾಕ್ಷಿ. ಗಂಭೀರ ಸಂದರ್ಭದಲ್ಲಿ ಸಾಮಾಜಿಕ ಬಹಿಷ್ಕಾರಕ್ಕೊಳಗಾಗುವ ಪರಮಶಿಕ್ಷೆಯು ವ್ಯಕ್ತಿಯನ್ನು ಕರ್ಮಭ್ರಷ್ಟನನ್ನಾಗಿಸುವ ಅಪಾಯವಿದ್ದುದರಿಂದ ಅಂಥ ಪ್ರಸಂಗಗಳು ಉದ್ಭವವಾಗದ ಎಚ್ಚರಿಕೆಯೂ ಇತ್ತು. ಅಲ್ಲದೆ, ವ್ಯಕ್ತಿಗತ ಅಪರಾಧಗಳು ಗೌಣಪ್ರಮಾಣದಲ್ಲಿದ್ದು, ಸಮಷ್ಟಿರೂಪದ ಧಾರ್ಮಿಕ ಜಿಜ್ಞಾಸೆಯ ಜೊತೆಗೆ ಸಂಪ್ರದಾಯಾಚರಣೆಗಳಿಗೆ ಸಂಬಂಧಿಸಿದ 'ನ್ಯಾಯ'ಗಳೇ ಪ್ರಧಾನವಾದುದೂ, ಅವರ ಜೀವನ ವಿಧಾನದ ರೀತಿಯ ಮೇಲೆ ಬೆಳಕು ಚೆಲ್ಲುತ್ತದೆ. ಸಮುದ್ರಯಾನ, ವರುಣರ ಸಂಬಂಧ, ಶ್ರಾದ್ಧದಲ್ಲಿ ತ್ರಿಪಿಂಡವೋ ಷಟ್ಪಿಂಡವೋ ಇಂಥವು ಸಮುದಾಯದ ಇತ್ತೀಚಿನ ಇತಿಹಾಸದಲ್ಲಿ ಕಂಡ ಮಹಾಜಿಜ್ಞಾಸೆಗಳು ಎಂಬುದನ್ನೂ ಇಲ್ಲಿ ನಿದರ್ಶಿಸಬಹುದು.

ಇಲ್ಲಿ, ಮಿತಿಮೀರಿ ವಿಳಂಬವಾಗಿ ಬಂದ ಪುರೋಹಿತರೊಬ್ಬರು, ಭೋಜನಕೂಟಕ್ಕೆ ತನಗಾಗಿ ಕಾದಿರಲಿಲ್ಲವೆಂಬ ದೂರುಹೊರಿಸಿ ಬಡ ವಿಧವೆಯೊಬ್ಬಳನ್ನು ಬಹಿಷ್ಕಾರಕ್ಕೆ ಈಡುಮಾಡಿದಂತೆಯೇ, ಗೃಹಸ್ಥರೊಬ್ಬರ ಕರ್ಮವನ್ನು ನೆರವೇರಿಸಲು ನಿರಾಕರಿಸಿದ ಪುರೋಹಿತರೊಬ್ಬರಿಗೇ ಬಹಿಷ್ಕಾರ ಹಾಕಿದ ನಿದರ್ಶನವೂ ಇದೆ. ಇಂಥ ಬಹಿಷ್ಕಾರಗಳ ಬಿಗುವಾದ ನ್ಯಾಯಪದ್ಧತಿಗೆ, ಮೊದಲ ಯಶಸ್ವೀ ಪ್ರತಿಭಟನೆ ಬಂದದ್ದು ಸಮುದ್ರಯಾನಿಗಳಿಂದ. ಮೊದಮೊದಲು, ಸಮುದ್ರಯಾನ ಮಾಡಿದವರು ಸನಾತನಿಗಳ ತೀವ್ರ ಉಪೇಕ್ಷೆ, ತಿರಸ್ಕಾರ, ಬಹಿಷ್ಕಾರಗಳಿಗೆ ಒಳಗಾದರೂ, ಸಮುದ್ರಯಾನಿಗಳ ವಿದ್ಯೆ, ಅಧಿಕಾರ, ಹಣದ ಕಾರಣದಿಂದಾಗಿ ಸಾರ್ವತ್ರಿಕ ಗೌರವಾದರಗಳಿಗೆ ಅವರು ಪಾತ್ರರಾಗುತ್ತಿದ್ದಂತೆಯೇ, ಸನಾತನಿಗಳಿಗೂ ಮಾನ್ಯರಾದುದು ಒಂದು ಮಹಾ ಪರಿವರ್ತನೆ. ಅಲ್ಲದೆ, ಆಧುನಿಕ ವಿದ್ಯೆ ದೊರೆಕಿಸಿಕೊಟ್ಟ ಪ್ರಶ್ನಿಸುವ ಮನೋಭಾವ, ಉದ್ಯೋಗ ಮತ್ತು ಆರ್ಥಿಕ ಸ್ವಾತಂತ್ರ್ಯಗಳಿಂದಾಗಿ ರೂಢವಾದ

ಪ್ರಜಾಪ್ರಭುತ್ವಮೌಲ್ಯ, ಪಾರಂಪರಿಕ ಬಂಧದಿಂದ ದೊರೆತ ಬಿಡುಗಡೆ - ಈ ಸಾಮಾಜಿಕ ಸ್ಥಿತ್ಯಂತರಗಳ ಹಿಂದೆ ಇದೆ; ಬಹಿಷ್ಕಾರಗಳ ಸ್ವರೂಪದ ಇತಿಹಾಸವು ಸಾಮಾಜಿಕ ಸ್ಥಿತ್ಯಂತರದ ಇತಿಹಾಸವೂ ಹೌದು.

ಮಧ್ಯದೇಶದ ಕೌಶಿಕ ಸಂಕೇತಿಗಳು ಮತ್ತು ಬೆಟ್ಟದಪುರ ಸಂಕೇತಿಗಳಲ್ಲಿ ಮಾತ್ರ ಸಮುದ್ರಯಾನಿಗಳನ್ನು ಬಹಿಷ್ಕರಿಸುವ ಪ್ರಸಂಗವು ನಡೆದಿದೆ. ಆಧುನಿಕ ಪರಿವರ್ತನೆಯ ಸಂಧಿಕಾಲದಲ್ಲಿ ಅಲ್ಲಿ (ಮಾತ್ರ) ಸಂಭವಿಸಿದ ಸಮುದ್ರಯಾನ ಪ್ರಸಂಗಗಳೇ ಅದಕ್ಕೆ ಕಾರಣವೆಂಬುದನ್ನು ಗಮನಿಸಬೇಕು. ಈ ಪ್ರವೃತ್ತಿಯ ಬೆಳವಣಿಗೆಯು ಪರಿಷತ್‌ನಿಂದ ಕೋರ್ಟುಕಚೇರಿಗಳಿಗೆ ಸಮುದಾಯವನ್ನು ನೂಕಿದೆ ಎಂಬುದೂ ಒಂದು ಮುಖ್ಯ ಸಂಗತಿಯಾಗಿದೆ. ತಿರುವನಂತಪುರದಲ್ಲಿ ತಿರುವಾಂಕೂರು ಮಹಾರಾಜರ ಮಧ್ಯಪ್ರವೇಶದಿಂದಾಗಿ ಇದು ದೊಡ್ಡದಾಗಿ ಬೆಳೆಯಲಿಲ್ಲ ಎಂಬುದನ್ನು ಇಲ್ಲಿ ದಾಖಲಿಸಬೇಕು.

ಇ. ವಾವೆ : ಸಮೂಹ, ಸಂಘಟಿತ ಗುಂಪು ಎಂಬ ಅರ್ಥದ 'ಸಂಕೇತಂ' ಎಂಬ ಪದದಿಂದಲೇ 'ಸಂಕೇತಿ' ಎಂಬ ಜಾತಿವಾಚಕವು ಹುಟ್ಟಿತು ಎಂಬ ವಾದವೊಂದು ಹುಟ್ಟಿಕೊಳ್ಳುವಷ್ಟು ಗಾಢವಾದ ಪರಸ್ಪರ ಸಂಬಂಧಗಳು ಸಂಕೇತಿ ಸಮುದಾಯದಲ್ಲಿ ಹೆಣೆದುಕೊಂಡಿವೆ. ಅತಿಪುಟ್ಟ ಸಮುದಾಯವೊಂದಕ್ಕೆ ಇದು ಸಹಜವಾದ ಲಕ್ಷಣವಾಗಿದೆ. ಅವರ 'ವಾವೆ'ಗಳು ದೂರ ಸಂಬಂಧಗಳೂ ಆತ್ಮೀಯ ಬಳಕೆಯವಾಗಿರುವುದರ ನಿದರ್ಶನಗಳು : ಉದಾಹರಣೆಗೆ - ಅತ್ತಾನ್ (ಅತ್ತೆಯ ಮಗ), ತೋಳಪ್ಪ (ಅತ್ತಾನ್‌ನ ಮಗ), ಅಮ್ಮಾಂಬು (ಮಾವನ ಮಗ); ಅಮ್ಮಂಗೆ (ಮಾವನ ಮಗಳು); ಅಮ್ಮಾನಂಬಿ (ಅವಳ ಗಂಡ), ಅಮ್ಮಂಗ್‌ತಾಯಾ (ಅಮ್ಮಂಗೆಯ ಮಗಳು), ಅತ್ತೆನಂಚ (ಅತ್ತೆಯ ಮಗಳ ಮಗಳು), ಅಮ್ಮೇನೆಂಚಾಳ್ (ಗಂಡನ ಅಮ್ಮಾಂಬುವಿನ ಹೆಂಡತಿ), ಅತ್ತೆನೆಂಚಾಳ್ (ಗಂಡನ ಅತ್ತಾನ್‌ನ ಹೆಂಡತಿ) ... ಇತ್ಯಾದಿ. ಒಂದೇ ಗೋತ್ರದವರೆಲ್ಲರೂ ಚಿಕ್ಕಪ್ಪ, ಚಿಕ್ಕಮ್ಮ, ಅಣ್ಣಯ್ಯ, ಅಕ್ಕಯ್ಯ ಎಂದೇ ಸಂಬೋಧನೆಗೊಳ್ಳುವಷ್ಟು ಆತ್ಮೀಯರಾಗಿರುತ್ತಾರೆ. ಇತರ ಗೋತ್ರದವರೆಲ್ಲರೂ ಮಾವಯ್ಯ, ಅಮ್ಮಾಮಿ ಎಂದೇ ಆತ್ಮೀಯ ಗೌರವದಿಂದ ಸಂಬೋಧಿಸಲ್ಪಡುತ್ತಾರೆ.

ಈ. ಕುಲದೇವತಾಪದ್ಧತಿ: ಕುಲಚಿಹ್ನೆಯಾಗಲಿ (totem) ಕುಲದೇವತಾಪದ್ಧತಿ (totemism)ಯಾಗಲಿ ಇಲ್ಲದುದು ಸಂಕೇತಿಗಳ ವಿಶಿಷ್ಟ ಲಕ್ಷಣಗಳಲ್ಲೊಂದಾಗಿದೆ.

ಉ. ದೂರವಿಡುವಿಕೆ : ಸಂಕೇತಿಗಳ ಮತ್ತೊಂದು ಸಾಮಾಜಿಕ ವೈಶಿಷ್ಟ್ಯವೆಂದರೆ 'ದೂರವಿಡುವಿಕೆ'ಗೆ ಸಂಬಂಧಿಸಿದುದು. ವಿವಾಹದ ಮೊದಲವರ್ಷ ಆಷಾಢದಲ್ಲಿ ಹೆಣ್ಣು ಅತ್ತೆಯ ಜೊತೆಯಲ್ಲಿಯೂ, ಚೈತ್ರದಲ್ಲಿ ತಂದೆಯ ಮನೆಯಲ್ಲಿಯೂ ಇರಬಾರದೆಂಬ ನಿರ್ದೇಶನವು 'ಧರ್ಮಸಿಂಧು' ಎಂಬ ಧಾರ್ಮಿಕ ಗ್ರಂಥದಲ್ಲಿದೆ ಎಂಬ ವಿವರಣೆಯನ್ನು ಲಿಂಗದಹಳ್ಳಿಯ ವಿದ್ವಾಂಸರು ನೀಡುತ್ತಾರೆ. ಆದರೆ, ಅಲ್ಲಿನ ಸಂಕೇತಿಗಳಲ್ಲಿ ಈ ಆಷಾಢದ ಆಚರಣೆ ಪಾಲನೆಯಾಗುತ್ತಿರುವುದು ಆ ಧರ್ಮಗ್ರಂಥದ ಸ್ಫೂರ್ತಿಯಿಂದಲೇ ಎನ್ನುವಂತಿಲ್ಲ. ಉಳಿದ ಯಾವ ಎಡೆಯ ಸಂಕೇತಿಗಳಲ್ಲಿಯೂ ಈ ಆಚರಣೆ ಇಲ್ಲ. ದಕ್ಷಿಣದಲ್ಲಿಯಂತೂ, ಆ ಮಾಸದಲ್ಲಿ ಹೊಸ ಅಳಿಯನನ್ನು (ಪತ್ನಿಯೊಡನೆ) ಕರೆದು ಉಪಚರಿಸುವ ರೂಢಿ ಇದೆ. ಈ ಕಾರಣದಿಂದಲೇ ಕರ್ನಾಟಕದ ಇತರ ಸಮುದಾಯಗಳ ಪ್ರಭಾವದಿಂದಲೇ ಲಿಂಗದಹಳ್ಳಿಯ ಸಂಕೇತಿಗಳಲ್ಲಿ ಈ ಆಚರಣೆ ನುಸುಳಿರುವುದು ಸಂಭಾವ್ಯವೆನ್ನಬೇಕಾಗಿದೆ.

ಊ. ಸದಾಚಾರ: ನಿತ್ಯವೂ ತಂದೆ-ತಾಯಿಗಳಿಗೆ ಹಾಗೂ ಭೇಟಿಯಾದ ಹಿರಿಯರಿಗೆ ನಮಸ್ಕರಿಸುವಾಗ ಪುರುಷರು ಅಭಿವಾದನ ಕ್ರಮವನ್ನನುಸರಿದರೆ, ಸ್ತ್ರೀಯರು ಎರಡುಬಾರಿ ಎರಡೂ ಕೈಗಳಿಂದ ಪಾದಮುಟ್ಟಿ ಕಣ್ಣಿಗೆ ಒತ್ತಿಕೊಳ್ಳುತ್ತಾರೆ. ಆ ವೇಳೆಗಳಲ್ಲಿ ಚಿರಂಜೀವಿತ್ವ ಮತ್ತು ಮಾಂಗಲ್ಯಭಾಗ್ಯಕ್ಕಾಗಿ ಮಾಡುವ ಆಶೀರ್ವಾದಗಳು ಅವರು ಮಹತ್ತ್ವದವೆಂದು ಪರಿಗಣಿಸುವ ಸಂಗತಿಗಳ ಸೂಚಿ.

ಋ. ಪಂಚಾಂಗ: ದಕ್ಷಿಣದಲ್ಲಿನ ಸೌರಮಾನ ಆಚರಣೆಗೆ ಬದಲಾಗಿ, ಕರ್ನಾಟಕದಲ್ಲಿ ಚಾಂದ್ರಮಾನವು ಹೆಚ್ಚು ಬಳಕೆಗೆ ಬಂದುದು ವಿಶ್ವಮಾದರಿಗಳ ಅನುಕರಣದ ನಿದರ್ಶನವಾಗಿದೆ. ಉದಾಹರಣೆಗೆ ಕರ್ನಾಟಕದಲ್ಲಿ

1. ಯುಗಾದಿ ಮತ್ತು ತಿಥಿಗಳು ಚಾಂದ್ರಮಾನಕ್ರಮದಂತೆ ಇವೆ.
2. ಸೌರಮಾನದಂತೆ ಮಕ್ಕಳ ಹಬ್ಬ (ವೃಶ್ಚಿಕಮಾಸ ಪೌರ್ಣಮಿ) ತುಲಾಸಂಕ್ರಮಣ ನಡೆಯುತ್ತದೆ.

3. 'ಗೋಕುಲಾಷ್ಟಮಿ'ಯ ಆಚರಣೆಗಾಗಿ ರೋಹಿಣಿ ನಕ್ಷತ್ರ, ಅಷ್ಟಮಿತಿಥಿ ಹಾಗೂ ಸಿಂಹಮಾಸ ಕೂಡಿಬರುವ ಮುಹೂರ್ತವನ್ನು ನೋಡುವುದುಂಟು.
   ಧನುಸ್ಸು ಮತ್ತು ಪುಷ್ಯ, ಕರ್ಕಾಟಕ ಮತ್ತು ಶ್ರಾವಣ, ಮೀನ ಮತ್ತು ಚೈತ್ರ ಸೇರಿದ್ದು 'ಶೂನ್ಯಮಾಸ'. ಆಗ ಶುಭದ ಆಚರಣೆ ಇರುವುದಿಲ್ಲ.
4. ತುಲಾ ಮತ್ತು ಕಾರ್ತಿಕ ಸೇರಿದರೆ ಕಾವೇರೀ ಪುಣ್ಯಸ್ನಾನಕ್ಕೆ ಹೆಚ್ಚು ಶ್ರೇಷ್ಠವೆಂದು ಪರಿಗಣಿತವಾಗುತ್ತದೆ.
5. ಕರ್ಕಾಟಕ, ತುಲಾ, ಧನುಸ್ಸು, ಮೀನ - ಈ ಸೌರಮಾಸಗಳು ಹಾಗೂ ಚೈತ್ರ, ವೈಶಾಖ, ಆಷಾಢ, ಶ್ರಾವಣ, ಭಾದ್ರಪದ, ಆಶ್ವಯುಜ, ಕಾರ್ತಿಕ, ಪುಷ್ಯ, ಮಾಘ - ಈ ಚಾಂದ್ರಮಾಸಗಳು ಹೆಚ್ಚು ಬಳಕೆಯ ಮಾಸನಾಮಗಳು.

ದಕ್ಷಿಣದಲ್ಲಿ ಸೌರಮಾನವನ್ನೇ ಅನುಸರಿಸಿದರೂ ಚಾಂದ್ರಮಾನ ತಿಥಿಯನ್ನೇ ಗಣಿಸುತ್ತಾರೆ. ಹಾಗಾಗಿ ಒಮ್ಮೊಮ್ಮೆ ಸೌರಮಾನ ಮಾಸದಲ್ಲಿ ಎರಡು ತಿಥಿಗಳು ಬರುವುದುಂಟು.

ಅನುಷ್ಠಾನಕ್ಕೆ 'ಸಿದ್ಧಾಂತ'; ಗ್ರಹಣ ಹಾಗೂ ಸಂಕ್ರಮಣದ ಲೆಕ್ಕಕ್ಕೆ ದೃಗ್ಗಣಿತ ಹಾಗೂ ಆರ್ಯಭಟ ಸಿದ್ಧಾಂತ ಮುಖ್ಯ ಆಧಾರಗಳಾಗಿವೆ. ದಕ್ಷಿಣದಲ್ಲಿ ವಾಕ್ಯಪಂಚಾಂಗವೂ ಬಳಕೆಯಾಗುವುದು ವಿಶ್ವಮಾದರಿಯ ಅಳವಡಿಕೆಯ ಮತ್ತೊಂದು ಸಂದರ್ಭವಾಗಿದೆ.

೩೦. ವಿದ್ಯಾಭ್ಯಾಸ : ಎಲ್ಲೆಡೆಯ ಮುನ್ನೂರು ವಂಶವೃಕ್ಷಗಳ ಅಧ್ಯಯನದಿಂದ ವ್ಯಕ್ತಪಡುವ ಸಾಮಾಜಿಕ ಪರಿವರ್ತನೆಯ ನಿಧಾನಪ್ರವೃತ್ತಿಯ ಕೆಲವು ಅಂಶಗಳು ಹೀಗಿವೆ:

1. ಒಂದೇ ಕುಟುಂಬದಲ್ಲಿ ಗಂಡಸರು (ಮಾತ್ರ) ವೇದ ವಿದ್ಯೆ ಕಲಿತು ಹೆಂಗಸರು ಅಕ್ಷರಾಭ್ಯಾಸ ಮಾಡದುದು (ಕ್ರಿ.ಶ.ಸುಮಾರು ೧೮೫೦-೧೯೦೦).
2. ಗಂಡಸರು ಕೂಲಿಮಠದಲ್ಲಿಯೂ ವಿದ್ಯಾಭ್ಯಾಸ ಪಡೆದರೂ ವೈದಿಕರಾದುದು; ಹೆಂಗಸರು ಅಕ್ಷರ ಕಲಿಯದುದು (ಕ್ರಿ.ಶ.ಸುಮಾರು ೧೯೦೦-೧೯೨೦).
3. ಗಂಡಸರು ಶಾಲೆಗಳಲ್ಲಿ ಕಲಿಯತೊಡಗಿದುದು ಮತ್ತು ಹೆಂಗಸರೂ ಶಾಲೆಗಳಲ್ಲಿ ಕಲಿಯತೊಡಗಿದರೂ ಪ್ರಾಥಮಿಕ ಹಂತವನ್ನು ಮೀರದುದು (ಕ್ರಿ.ಶ.ಸುಮಾರು ೧೯೨೦-೧೯೩೦).
4. ಗಂಡಸರು ಹೆಚ್ಚಿನ ವಿದ್ಯಾಭ್ಯಾಸಕ್ಕೆ ತೊಡಗಿದಂತೆ ಸ್ತ್ರೀಯರೂ ಮೇಲಿನ ತರಗತಿಗಳಿಗೆ ಏರಿ ಉದ್ಯೋಗಗಳಿಗೂ ತೊಡಗಿದುದು (ಕ್ರಿ.ಶ.ಸುಮಾರು ೧೯೩೦-೧೯೬೦).
5. ಸ್ತ್ರೀಯರು ಪುರುಷರಿಗೆ ಸರಿಸಮವಾಗಿ ಆಧುನಿಕ ವಿದ್ಯೆಯಲ್ಲಿ ಪ್ರವೇಶ ಪಡೆದಿರುವುದು; ಉದ್ಯೋಗಗಳಲ್ಲಿ ಸರಿಸಮನಾಗಿ ನಿಂತುದು (ಕ್ರಿ.ಶ.ಸುಮಾರು ೧೯೬೦ ರಿಂದ ಈಚೆಗೆ).

ಇನ್ನು ಕೆಲವು ಅಂಶಗಳು ಈ ಬಗೆಗೆ ಗಮನಿಸುವಂಥವಾಗಿವೆ:

1. ಒಂದೇ ಕುಟುಂಬದಲ್ಲಿ ಆಯಾಕಾಲದಲ್ಲಿ ಪುರುಷ ಮತ್ತು ಸ್ತ್ರೀ ವಿದ್ಯಾಭ್ಯಾಸದಲ್ಲಿ ತಾರತಮ್ಯವುಂಟಾದುದು.
2. ಒಂದೇ ಕುಟುಂಬದಲ್ಲಿ ಮೊದಮೊದಲ ಮಕ್ಕಳಿಗಿಂತ ಅನಂತರ ಹುಟ್ಟಿದ ಮಕ್ಕಳು ಹೆಚ್ಚಿನ ಅವಕಾಶ ಪಡೆದುದು.
3. ಉದ್ಯೋಗಸ್ಥ ದಂಪತಿಗಳಾದುದು.
4. ಕ್ರಿ.ಶ.೧೯೨೦ರ ಅನಂತರ ವಿವಿಧ ಉದ್ಯೋಗಗಳಿಗಾಗಿ ಪಟ್ಟಣಗಳಿಗೆ ವಲಸೆಹೋದುದು. ಕಳೆದ ಶತಮಾನದ

ಉತ್ತರಾರ್ಧದಲ್ಲಿದ್ದ ಶೇಕಡ ತೊಂಬತ್ತು ವೈದಿಕರ ಸಮುದಾಯವು ಕ್ರಿ.ಶ.೧೯೬೦ರ ವೇಳೆಗೆ ಶೇಕಡ ತೊಂಬತ್ತು ಲೌಕಿಕರ ಸಮುದಾಯವಾಗಿ ಪರಿವರ್ತನೆಗೊಂಡುದು. ವೈದಿಕರಿಗಿಂತ ಲೌಕಿಕರಿಗೆ ಹೆಚ್ಚು ಗೌರವಾದರಗಳು ಸಲ್ಲುವ ಸ್ಥಿತ್ಯಂತರವೂ ಈಗ ಉಂಟಾಗಿದೆ. ಈ ಸಂಗತಿಗೆ ಅಪವಾದವಾಗಿ ವೈದಿಕತೆಯ ಪುನರುಜ್ಜೀವನವು ಕ್ಷೀಣವಾಗಿಯಾದರೂ ಮತ್ತೂರಿನಲ್ಲಿ ಮಾತ್ರ ಕಾಣಿಸುತ್ತದೆ.

ಎ. **ಸಾಮಾಜಿಕ ಸ್ಥಾನ :** ವಿದ್ಯೆ ಮತ್ತು ಅನುಷ್ಠಾನಗಳಲ್ಲಿ ಔನ್ನತ್ಯವನ್ನು ಸಾಧಿಸಿದರೂ ಆರ್ಥಿಕ ದೌರ್ಬಲ್ಯವು ಸಂಕೇತಿಗಳ ಸಾರ್ವತ್ರಿಕ ಲಕ್ಷಣ. ಆದರೂ ಕರ್ನಾಟಕದ ಸಂಕೇತಿಗಳಿಗೆ ವಿರುದ್ಧವಾಗಿ, ದಕ್ಷಿಣದ ಸಂಕೇತಿಗಳು ಬದುಕಿದ ಸನ್ನಿವೇಶವು ಅವರಲ್ಲಿ ಸಾಮಾಜಿಕ ಕೀಳರಿಮೆಯನ್ನುಂಟುಮಾಡಿದೆ. ಅಲ್ಲಿ ಅವರ ಬಹುಅಲ್ಪಸಂಖ್ಯೆ, ನಾಚಾರಮ್ಮನಿಂದ ಶಾಪಗ್ರಸ್ತರಾದವರು ಮತ್ತು ಆ ಕಾರಣದಿಂದ ಸಂಕಷ್ಟಗಳನ್ನನುಭವಿಸುತ್ತಿರುವವರೆಂಬ ತೀವ್ರಭಾವ, ಜೊತೆಗೆ ಬಡತನ - ಇವೆಲ್ಲವೂ ಅವರ ಆತ್ಮವಿಶ್ವಾಸವನ್ನು ಕುಗ್ಗಿಸಿವೆ. ಸಂಕೇತಿಯೇತರ ಬ್ರಾಹ್ಮಣ ಸಮುದಾಯದೊಡನೆ ವಿವಾಹ ಸಂಬಂಧಗಳನ್ನು ಬೆಳೆಸುವುದು ತಮಗಿರುವ ಶಾಪಕ್ಕೆ ಪರಿಹಾರವೆಂದು ಭಾವಿಸುವುದರ ಜೊತೆಗೆ ಕೆಲವರು ಇತ್ತೀಚೆಗೆ 'ಸಂಕೇತಿವಡಮ' ಎಂಬ ಛಾಯಾ ಅಂಕಿತವನ್ನು ಹೇಳಿಕೊಳ್ಳುವವರೆಗೆ ಅದು ಬೆಳೆದಿದೆ. ಒಂದೇ ಸಮುದಾಯವು ಭಿನ್ನ ಪರಿಸರಗಳಲ್ಲಿ ಪಡೆಯುವ ಸಾಮಾಜಿಕ ಸ್ಥಾನಮಾನಗಳ ವೈಲಕ್ಷಣ್ಯಕ್ಕೆ ಇದೊಂದು ಉತ್ತಮ ನಿದರ್ಶನವಾಗಿದೆ.

ಏ. **ಸಾಮಾಜಿಕ ತಾದಾತ್ಮ್ಯ :** ಎಲ್ಲೆಡೆಯೂ ಬಡಗಿ, ಗೆಜ್ಜೆಗಾರ, ಗಾಣಿಗ, ಒಕ್ಕಲಿಗ ಮೊದಲಾದ ವೃತ್ತಿನಿರತರ ಜೊತೆಗಿನ ಸಂಬಂಧವು ಪರಸ್ಪರ ಅವಲಂಬನೆಯ ಸಾಮಾಜಿಕ ಸ್ವರೂಪದ್ದು. ಆದರೆ ಅವರ ಸಂಸ್ಕಾರ ಸಂದರ್ಭಗಳಿಗೆ ಅಗತ್ಯವಾದ ಕ್ಷೌರಕರ್ಮ ಮತ್ತು ಮಂಗಳವಾದ್ಯಗಳಿಗಾಗಿ ನಾಪಿತ; ಬಳೆತೊಡಿಸುವ ಶಾಸ್ತ್ರಕ್ಕೆ ಬಳೆಗಾರ; (ಸೀಮಂತದ ವೇಳೆ) ನಡೆಮುಡಿ ಹಾಸುವುದು, ಒಸಗೆ ಕಳಿಸುವುದು, ಹೆರಿಗೆಯ ಸಂದರ್ಭದಲ್ಲಿ ಮಡಿ ಮಾಡಿಕೊಡುವುದು ಇತ್ಯಾದಿಗಳಿಗೆ ಬೇಕಾದ ಅಗಸಗಿತ್ತಿ; ದೇವತಾಮೂರ್ತಿಗಳನ್ನೂ ಮಡಿಕೆ ಕುಡಿಕೆಗಳನ್ನೂ ಮಾಡಿಕೊಡುವ ಕುಂಬಾರ; ಮಾಂಗಲ್ಯ ಮೊದಲಾದ ಒಡವೆಗಳಿಗಾಗಿ ಅಕ್ಕಸಾಲಿಗ ಇವರ ಅವಲಂಬನೆಯು ಸಾಂಸ್ಕೃತಿಕವಾದುದು. ಕೃಷಿಕರಾದ ಸಂಕೇತಿಗಳು ಅದಕ್ಕೆ ಪ್ರತಿಫಲವನ್ನು 'ಆಯ' ಕೊಡುವ ಮೂಲಕವೂ ಸಲ್ಲಿಸುವುದುಂಟು. ಆದರೆ, ಆಯಾ ಸಂದರ್ಭದಲ್ಲಿ ಬಳಸುವ ಧಾನ್ಯ, ವಸ್ತ್ರ, ದಕ್ಷಿಣೆ, ಭೋಜನಗಳ ಮೂಲಕ ಪ್ರತಿಫಲ ನೀಡುವ ಮೂಲಪದ್ಧತಿಯು ಸಂಕೇತಿಗಳಲ್ಲಿ ಇಂದಿಗೂ ಉಳಿದುಕೊಂಡು ಬಂದಿದೆ.


ಒಟ್ಟಿನಲ್ಲಿ ಈ ವಿವರಗಳಿಂದ ವ್ಯಕ್ತವಾಗುವಂತೆ, ಮಠ ಮತ್ತು ಕುಲದೇವತಾಪದ್ಧತಿ ಇಲ್ಲದ ಗಾಢ ವೈಶಿಷ್ಟ್ಯವು ಈ ಸಮುದಾಯದ್ದಾಗಿದೆ. ಮಠದ ಸಂಬಂಧದ ಕೆಲವು ನಡವಳಿಕೆಗಳು ಇತ್ತೀಚಿನ ವಿಶ್ವಸಾಮಾನ್ಯಗಳ ಅನುಕರಣಗಳು ಮಾತ್ರ. ಪರಸ್ಪರ ಗಾಢ ಬಂಧುತ್ವದ 'ಸಂಕೇತಂ' ಕೂಡ ಸಂಕೇತಿಗಳ ವೈಶಿಷ್ಟ್ಯಗಳಲ್ಲೊಂದು; ಆಧುನಿಕ ಸನ್ನಿವೇಶವು ಅದನ್ನು ಶಿಥಿಲಗೊಳಿಸಿರುವುದಕ್ಕೆ ಪರಿಷತ್‌ನಂಥ ಸಾಂಸ್ಕೃತಿಕ ನ್ಯಾಯವ್ಯವಸ್ಥೆಯಿಂದ ಕೋರ್ಟುಕಛೇರಿಗಳ ವ್ಯವಸ್ಥೆಗೆ ಆದ ಸ್ಥಿತ್ಯಂತರವೂ ಸಾಕ್ಷಿಯಾಗಿದೆ. ವೈದಿಕತೆಯಿಂದ ಲೌಕಿಕತೆಗೆ, ಪಾರಂಪರಿಕ ವಿದ್ಯೆ ಮತ್ತು ನೌಕರಿಗಳಿಂದ ಆಂಗ್ಲ ವಿದ್ಯೆ ಮತ್ತು ನಗರೀಕರಣಕ್ಕೆ ಆದ ಪರಿವರ್ತನೆಯೂ ಈ ಶತಮಾನದ ಬೆಳವಣಿಗೆ. ಇಂಥ ಸನ್ನಿವೇಶವೇ ಹೆಚ್ಚಿನ ವಿಶ್ವಸಾಮಾನ್ಯಗಳ ಸ್ವೀಕಾರಕ್ಕೂ ದಾರಿಮಾಡಿದೆ. ಇಲ್ಲಿಯೂ ಸ್ತ್ರೀ-ಪುರುಷ ಸಮಾನತೆಯ ಲಕ್ಷಣವನ್ನು ಗುರುತಿಸಬಹುದು. 'ದಕ್ಷಿಣ'ದ ಸಂಕೇತಿಗಳ ಸಾಮಾಜಿಕ ಸ್ಥಾನಮಾನವು ಅವರಲ್ಲಿ ಕೀಳರಿಮೆಯನ್ನುಂಟುಮಾಡಿರುವುದಕ್ಕೆ ಬಡತನ, ಅಲ್ಪಸಂಖ್ಯೆಗಳಂತೆಯೇ ನಾಚಾರಮ್ಮನ ಐತಿಹಾಸಿಕ ಪ್ರಸಂಗವೂ ಕಾರಣವಾಗಿದೆ. ಎಲ್ಲೆಡೆಯ ಸಂಕೇತಿಗಳು ಸಾರ್ವತ್ರಿಕವಾಗಿ ಎಲ್ಲ ಸಮುದಾಯಗಳೊಂದಿಗೆ ಅನ್ಯೋನ್ಯತೆಯ ಸುಮಧುರ ಬಾಂಧವ್ಯವನ್ನು ಹೊಂದಿದ್ದುದಕ್ಕೆ ಸಾಮಾಜಿಕ ಅಗತ್ಯಗಳಂತೆಯೇ ಸಾಂಸ್ಕೃತಿಕ ಅನಿವಾರ್ಯತೆಯೂ ಕಾರಣವಾಗಿದೆ.

೪. ಹುಟ್ಟಿನಿಂದ ಸಾವಿನವರೆಗೆ ಜೀವನಚಕ್ರದ ಮುಖ್ಯಘಟ್ಟಗಳಲ್ಲಿ ಅನುಸರಿಸುವ ಸಂಪ್ರದಾಯಾಚರಣೆಗಳು:

ಸಂಪ್ರದಾಯಗಳ ಪರಿವೀಕ್ಷಣೆ ಮತ್ತು ವ್ಯಾಖ್ಯಾನವು ಸಾಂಸ್ಕೃತಿಕ ಅಧ್ಯಯನದ ಮುಖ್ಯ ಭಾಗವಾಗಿದೆ. ಸಂಕೇತಿಗಳ ಜೀವನಚಕ್ರಕ್ಕೆ ಸಂಬಂಧಿಸಿದಂತೆ ಅವನ್ನು ಇಲ್ಲಿ ಪರಿಶೀಲಿಸಿದೆ.

ಅ. ಷೋಡಶ ಸಂಸ್ಕಾರಗಳು:

ವಿವಿಧ ಗೃಹ್ಯಸೂತ್ರಗಳು ಹುಟ್ಟಿನಿಂದ ಸಾವಿನವರೆಗೆ ನಡೆಸಬೇಕಾದ ಸಂಸ್ಕಾರಗಳನ್ನು ವಿವರಿಸಿವೆ. ಅವುಗಳ ಸಂಖ್ಯೆಯು ಸೂತ್ರಕ್ಕನುಗುಣವಾಗಿ ವ್ಯತ್ಯಾಸವಾಗುತ್ತದೆ. ಆದರೆ, ಪ್ರಧಾನ ಸಂಸ್ಕಾರಗಳನ್ನಾಧರಿಸಿ ಅವು ಖ್ಯಾತವಾಗಿರುವುದೇ 'ಷೋಡಶಸಂಸ್ಕಾರ'ಗಳೆಂಬ ಹೆಸರಿನಿಂದ. ಅವುಗಳನ್ನು ಹೀಗೆ ವಿಭಾಗಿಸಬಹುದು:



81 ಗಣಪತಿ ಪೂಜೆ ಮಾಡಿ ಪ್ರಸಾದ ಸ್ವೀಕರಿಸುತ್ತಿರುವ ಹಿರಿಯ ಮುತ್ತೈದೆ

1 ಗರ್ಭಸಂಸ್ಕಾರಗಳು: ಗರ್ಭಾಧಾನ, ಪುಂಸವನ, ಸೀಮಂತೋನ್ನಯನ
2 ಬಾಲಸಂಸ್ಕಾರಗಳು: ಜಾತಕರ್ಮ, ನಾಮಕರಣ, ನಿಷ್ಕ್ರಮಣ, ಅನ್ನಪ್ರಾಶನ, ಚೂಡಾಕರ್ಮ, ಕರ್ಣವೇಧನ
3 ಶಿಕ್ಷಣಸಂಸ್ಕಾರಗಳು: ಅಕ್ಷರಾಭ್ಯಾಸ, ಉಪನಯನ, ಪ್ರಥಮ ಉಪಾಕರ್ಮ, ಉಪಾಕರ್ಮ, ಉತ್ಸರ್ಗ, ಕೇಶಾಂತ, ವ್ರತಚತುಷ್ಟಯ, ಸಮಾವರ್ತನ.
4 ವಿವಾಹ
5 ಅಂತ್ಯಸಂಸ್ಕಾರಗಳು.

ಇಹಪರಗಳ ವಿಕಾಸ ಮತ್ತು ಶುದ್ಧೀಕರಣಕ್ಕಾಗಿ ಜೀವನದ ಮುಖ್ಯಘಟ್ಟಗಳಲ್ಲಿ ಈ ಸಂಸ್ಕಾರಗಳು ನಡೆಯುತ್ತವೆ. ಗರ್ಭದಿಂದಲೇ ಪ್ರಾರಂಭಿಸಿ ಮರಣಾನಂತರದವರೆಗೂ ಅವು ವಿಸ್ತರಿಸಿಕೊಂಡಿವೆ. ಹುಟ್ಟುವ ಮಗುವಿಗೆ ದೈವಬಲ; ಮೊದಲಬಾರಿ ಹೊರಗೆ ಕಾಲಿಡುವ ಮಗುವಿಗೆ ರಕ್ಷಣೆ; ಮೊದಲಬಾರಿ ಘನಾಹಾರ ಊಡಿಸುವಾಗ ಬುದ್ಧಿ ಮತ್ತು ಆರೋಗ್ಯಕ್ಕಾಗಿ ಗಮನ; ಮೊದಲಬಾರಿಯ ಆಯುಷ್ಕರ್ಮದಲ್ಲಿನ ಎಚ್ಚರ, ಅಲಂಕಾರಪ್ರಜ್ಞೆ; ಅಧ್ಯಯನದೊಂದಿಗೆ ಶಿಸ್ತುಬದ್ಧ ಜೀವನದ ಅಭ್ಯಾಸ; ವಿವಾಹದ ಸಂಭ್ರಮದೊಂದಿಗೇ ಸಾಮಾಜಿಕ ಜವಾಬ್ದಾರಿಯ ಪ್ರಜ್ಞೆ - ಇವೆಲ್ಲವೂ ಇಲ್ಲಿವೆ.



82 ಚಪ್ಪರದ ಪೂಜೆ ಮಾಡುತ್ತಿರುವ 'ಮನೆಯ ಹೆಣ್ಣು ಮಕ್ಕಳು'

ಗೃಹ್ಯಸೂತ್ರ ನಿರ್ದೇಶಿತ ವಿವರಗಳು ಆಯಾ ಸೂತ್ರಾನುಯಾಯಿಗಳಾದ ಎಲ್ಲ ಸಮುದಾಯಗಳಿಗೂ ಸಮಾನವಾದುವು (ನೋಡಿ: ಸಂಕೇತಿಗಳ ಆಚರಣೆಯ ಗೃಹ್ಯಸೂತ್ರಗಳ ಪಟ್ಟಿ 5, ಪು.290). ಪ್ರತಿಸಂಸ್ಕಾರಕ್ಕೆ ಹೊಂದಿಕೊಂಡಂತೆ ಸ್ತ್ರೀಯರು ಮಾಡುವ ಕೈಕರಣದ ಗಣಪತಿಪೂಜೆ, ಗೋದನಕಲ್ಲು ಮೊದಲಾದ ವಿಶ್ವಸಾಮಾನ್ಯ ವಿಧಿಗಳೂ ಇವೆ (ಚಿತ್ರ 81, 82). ಸಂಸ್ಕಾರ, ಅದರ ವಿವರಗಳು, ಮಹತ್ತ್ವ, ವೈಶಿಷ್ಟ್ಯಗಳ ಬಗೆಗೆ ತೊಡಗಿಕೊಳ್ಳುವುದು ಪ್ರಸ್ತುತ ನಿಬಂಧದ

ವ್ಯಾಪ್ತಿಯ ಹೊರಗಿನದು.[3] ಪ್ರತಿಸಂಸ್ಕಾರಕ್ಕೆ ಹೊಂದಿಕೊಂಡಂತೆ ಇರುವ ರೂಢಿಯ ಆಚರಣೆಗಳಲ್ಲಿ ಸಂಕೇತಿಗಳ ಸಂದರ್ಭದಲ್ಲಿ[4] ಉಲ್ಲೇಖಿಸಬೇಕಾದುವನ್ನು ಮಾತ್ರ ಇಲ್ಲಿ ಗಮನಿಸಿದೆ. 'ಮಧ್ಯದೇಶ'ವನ್ನು ಕೇಂದ್ರವಾಗಿಟ್ಟುಕೊಂಡು ಉಳಿದ ಪಂಗಡಗಳ ವಿವರಗಳನ್ನು ಕೊಟ್ಟಿದೆ.

ಆ. ಹೆಣ್ಣು ದೊಡ್ಡವಳಾದಾಗ:

ರಜಸ್ವಲೆಯಾಗುವ ಮೊದಲಬಾರಿಯ ಅನುಭವವು, ಆ ಬಗೆಗಿನ ಶಾರೀರಿಕ ರಚನೆ ಮತ್ತು ಕ್ರಿಯೆಗಳ ಅರಿವಿಲ್ಲದ ಸಂದರ್ಭದಲ್ಲಿ ಮುಜುಗರ, ಆಘಾತಗಳನ್ನುಂಟುಮಾಡಬಹುದಾದುದು. ತನ್ನ ಸನ್ನಿವೇಶದ ಮಿತಿಯಲ್ಲಿ ಕಂಡುಕೊಂಡ ಪರಿಹಾರಗಳು ಆ ಸಂದರ್ಭದ ಆಚರಣೆಗಳಲ್ಲಿವೆ. ಆ ಸಂಬಂಧದ ಕೆಲವು ಸಂಗತಿಗಳನ್ನು ಇಲ್ಲಿ ಉಲ್ಲೇಖಿಸಲಾಗಿದೆ.

1. ರಜಸ್ವಲೆಯಾದ ಹೆಣ್ಣನ್ನು ಮೊದಲು ತಾಯಿಯು ಮಾತನಾಡಿಸದೆ, ನೆರೆಯ ಹಿರಿಯ ಸುಮಂಗಲೆಯರಿಂದ ಮಾತನಾಡಿಸುವುದು; ಓರಗೆಯ ಹುಡುಗಿಯರ ಜೊತೆಗೂಡಿಸಿ ಮೂರು ದಿನವೂ ಭೋಜನಕೂಟಗಳನ್ನೇರ್ಪಡಿಸುವುದು ಆಕೆಯ ಮುಜುಗರವನ್ನೂ ಮಾನಸಿಕ ಆಘಾತವನ್ನೂ ದೂರಮಾಡುತ್ತವೆ. ಮನೆಯ ಮುಂದೆ ವಿಶಿಷ್ಟ ರೀತಿಯ ರಂಗೋಲಿ ಬಿಡಿಸುವುದರ ಮೂಲಕವೇ ಅದನ್ನು ಪ್ರಕಟಿಸುವ ವಿಶೇಷ ಅರ್ಥಪೂರ್ಣಕ್ರಮವು ದಕ್ಷಿಣದಲ್ಲಿದೆ (ಚಿತ್ರ 50 ಪು. 115).

2. ಅದರ ಜೊತೆಗೆ, 'ಆರತಿ'ಗಳು ಮತ್ತೆ ಮತ್ತೆ ನಡೆಯುವುದು ಆಕೆಯನ್ನು 'ದುಷ್ಟಶಕ್ತಿಯಿಂದ ಪಾರುಮಾಡುವ' ಗುರಿಹೊಂದಿರುತ್ತದೆ. ಮಡಿಲು ತುಂಬುವುದು, ಭೋಜನ, ಮೆರವಣಿಗೆಗಳಂತೆಯೇ ಆರತಿಯ ವೈವಿಧ್ಯವೂ ಅನೇಕ ವಾರಗಳ ವೈಭವ, ಮನೋರಂಜನೆ, ಸಂಭ್ರಮದ ಭಾಗವಾಗುವಂಥದು.

ಮೊದಲಬಾರಿ ಹೊರಗಾದಾಗ	:	ಐದು ಸಂಜೆಗಳೂ ಚಿಗುಳಿ ಆರತಿ.
ಎರಡನೆಯಬಾರಿ ಹೊರಗಾಗುವವರೆಗೆ	:	ಪ್ರತಿ ಮಂಗಳವಾರ ಮತ್ತು ಶುಕ್ರವಾರ ಆರತಿ, ಬಾಗಿನ.
ಎರಡನೆಯಬಾರಿ ಆದಾಗ	:	ಮೂರುದಿನ ಚಿಗುಳಿ ಆರತಿ; ಐದನೆಯ ದಿನ ಉಂಡೆ ಆರತಿ.
ಮೂರನೆಯಬಾರಿ ಹೊರಗಾದಾಗ	:	ಐದನೆಯದಿನ ಮುಚ್ಚೋರೆ ಆರತಿ.

ಹಾಗೂ ಜನಶಕ್ತಿಯ ಅಗತ್ಯವಿದ್ದ ದಿನಗಳ ಸಂಭ್ರಮ ಮತ್ತು ಉಲ್ಲಾಸಗಳನ್ನು ಇಲ್ಲಿ ಅರ್ಥಮಾಡಿಕೊಳ್ಳಬಹುದು.

3. ದೃಷ್ಟಿಪರಿಹಾರವನ್ನೇ ಗುರಿಯಾಗಿಟ್ಟುಕೊಂಡ ಎರಡು ವಿಶೇಷ ಆಚರಣೆಗಳು ಹೀಗಿವೆ:


0.1 ತೇರು ಕೂಡಿಸುವುದು: ಮೊದಲಸಂಜೆ ನಡೆಯುವ ಚಿಗುಳಿ ಆರತಿಯ ಸಂದರ್ಭದಲ್ಲಿಯೇ 'ಚಟ್ಟ್ ಬಡಿಯರದ್' (ಚಟ್ಟು ಬಡಿಯುವುದು) ನಡೆಯುತ್ತದೆ. ಅರಿಶಿನ ಮತ್ತು ಸುಣ್ಣ ಕಲಸಿದ ನೀರಿನಲ್ಲಿ (ಅಥವಾ ಚಂದ್ರವನ್ನು ತುಪ್ಪದಲ್ಲಿ ಕಲಸಿ) ಹುಡುಗಿಯು ಕೈಅದ್ದಿ ಹಿಮ್ಮೊಗವಾಗಿ ನಿಂತು ಗೋಡೆಯ ಮೇಲೆ ಹಸ್ತದ ಐದು ಮುದ್ರೆ ಒತ್ತುತ್ತಾಳೆ. ಮೂರೂದಿನದ ಚಿಹ್ನೆಗಳಿಗೆ ಕೊನೆಯಲ್ಲಿ ಮತ್ತಷ್ಟು ಸೇರಿಸಿ ಗೋಪುರಾಕಾರ ಮಾಡುತ್ತಾರೆ. ಅದು 'ತೇರಾಕೂಟರದ್' (ತೇರು ಕೂಡಿಸುವುದು).

---

[3] ವಿವರಗಳಿಗೆ ನೋಡಿ : Hindu samskaras (Socio-religious study of the Hindu sacraments), Pandey (Raj Bali), 1969

[4] ವಿವರಗಳಿಗೆ ನೋಡಿ: ಸಂಕೇತಿ: ಜನಾಂಗ, ಸಂಸ್ಕೃತಿ ಮತ್ತು ಭಾಷೆ, ಪು.೩೨-೭೬

ತೇರು ಕೂಡಿಸುವ ಬಗೆ:



ಮೂರನೆಯ ದಿನ ಐದು ಚಟ್ಟು

ಎರಡನೆಯ ದಿನ ಐದು ಚಟ್ಟು

ಮೊದಲದಿನ ಐದು ಚಟ್ಟು

ಹಿಮ್ಮೊಗನಾಗಿ ಬಡಿದ ಚಟ್ಟುಗಳು ಕ್ರಮಬದ್ಧವಾಗಿರುವುದಿಲ್ಲ

ಕೊನೆಯದಿನ ಹೆಚ್ಚು ಚಟ್ಟುಗಳನ್ನು ಬಡಿದು

ಈ ಗೋಪುರಾಕಾರ ಮಾಡುತ್ತಾರೆ.

0.2 ರಕ್ಷೆಬಡಿಯುವುದು: 'ಮೊದಲ'ಬಾರಿ ರಜಸ್ವಲೆಯಾದ ನಾಲ್ಕನೆಯದಿನ ಹೆಣ್ಣು ನದಿಯಲ್ಲಿ ಸ್ನಾನಮಾಡಿ ಅಲಂಕರಿಸಿಕೊಂಡು ಮಂಗಳವಾದ್ಯದೊಂದಿಗೆ ಸುಮಂಗಲೆಯರೊಡಗೂಡಿ ಮನೆಗೆ ಬರುತ್ತಾಳೆ. ಆಗ 'ರಕ್ಷೆ' ಬಡಿಯುತ್ತಾರೆ.



83 ರಕ್ಷೆ ಬಡಿಯುವುದು

ಅಕ್ಕಿ ಮತ್ತು ಅರಿಶಿನದ ದೋಸೆಹಿಟ್ಟಿನಲ್ಲಿ ಮುತ್ತಿನಬಟ್ಟು, ನಾಲ್ಕುಹಸ್ತ, ನಾಲ್ಕುಪಾದ, ಎರಡು ಭುಜಕೀರ್ತಿಆಕಾರದ ದೋಸೆ ಹೊಯ್ಯುತ್ತಾರೆ. ಹೆಣ್ಣನ್ನು ಹಸೆಯಮೇಲೆ ನಿಲ್ಲಿಸಿ ಅವಳ ಸೋದರತ್ತೆಯ ಮಗಳು ದೋಸೆಗಳನ್ನು ಆಕೆಯ ತಲೆಗೆ ಒಂದು, ಭುಜಕ್ಕೆ ಎರಡು, ಕೈಗೆ ಎರಡು, ಕಾಲಿನ ತಳಕ್ಕೆ ಎರಡು, ಕಾಲಿನ ಮೇಲೆ ಎರಡು ಇಟ್ಟು ಅಲಂಕರಿಸುತ್ತಾಳೆ. ಆರತಿ ನಡೆಯುತ್ತದೆ. ಅತ್ತೆಯ ಮಗಳು ಎರಡು (ಹೊಸ) ದೋಸೆಗಳನ್ನು ಹುಡುಗಿಯ ಕಾಲತಳಕ್ಕಿಟ್ಟು, ಅಲ್ಲಿ ಅದಾಗಲೇ ಇಟ್ಟಿದ್ದ ಎರಡು ದೋಸೆಗಳನ್ನು ತೆಗೆದುಕೊಂಡು ಅದರಲ್ಲಿ ಕೆನ್ನೆಗೆ ಮೂರುಬಾರಿ ಹೊಡೆಯುತ್ತಾಳೆ (ತಾಗಿಸುತ್ತಾಳೆ). ಇದು, ಜಲಾಶಯಕ್ಕೆ ಹೋಗಿಬಂದ ಮೆರವಣಿಗೆಯ ಹೆಣ್ಣಿಗೆ ಆಗಿರಬಹುದಾದ ಗಾಳಿಸೋಕನ್ನು ನಿವಾರಿಸುವ ಕ್ರಮ (ಚಿತ್ರ 83).

ಈ ಸಂದರ್ಭದಲ್ಲಿಯೇ, ಕೊನೆಯ ಪಕ್ಷ ಐದು ಸುಮಂಗಲೆಯರಿಗೆ ಇಡ್ಲಿ, ಎರೆಯಪ್ಪದ ಬಾಗಿನ ಸಲ್ಲುತ್ತದೆ.

4) ಪ್ರಾಚೀನ ಸಾಮಾಜಿಕ ಸ್ಥಿತಿಯಲ್ಲಿ ಅಗತ್ಯವಾಗಿದ್ದ, ಇಂದು ಸಾಂಸ್ಕೃತಿಕ ಪಳೆಯುಳಿಕೆಯಾಗಿರುವ ಎರಡು ಸಂಗತಿಗಳು ಹೀಗಿವೆ:

0.1 ಒಸಗೆ ಕಳಿಸುವುದು: ಹುಡುಗಿಯು ಋತುಮತಿಯಾದ ಕೂಡಲೆ, ಒಂದು ಹೊಸಕುಕ್ಕೆಗೆ ಸುಣ್ಣವನ್ನು ಸವರಿ ಐದು ಅಚ್ಚು ಬೆಲ್ಲ, ಐದು ಸೇರು ಎಳ್ಳು, ಅರಿಶಿನ, ಕುಂಕುಮ, ಎಲೆ ಅಡಿಕೆ ಇಟ್ಟು ಕಾಗದವನ್ನೂ ಬರೆದು ಅಗಸನ ಕೈಲಿ ಗಂಡನ ಮನೆಗೆ ಸುದ್ದಿ ಕಳಿಸುತ್ತಾರೆ.

0.2 ಗುರುತು ಕೊಡುವುದು: ಒಸಗೆ ಪಡೆದ ಗಂಡನಿಗೆ ಹಿಟ್ಟುಕದಡಿದ ಓಕುಳಿಯಲ್ಲಿ ಆರತಿ ಮಾಡುತ್ತಾರೆ. ಅಗಸನಿಗೆ ಹಬ್ಬದೂಟ ಮಾಡಿಸಿ ಚೊಂಬು, ಲೋಟವನ್ನು ಅವನ ಮೂಲಕ ಹೆಣ್ಣಿಗೆ 'ಗುರುತು' ಕಳಿಸುತ್ತಾರೆ. ಹೀಗೆ, ನೈಸರ್ಗಿಕವಾದ ಸರಳ, ಸಹಜ

ಸಂಗತಿಗಳು ಮಂಗಳ ಪರಿವಲಯವನ್ನು ಸೃಷ್ಟಿಸಿಕೊಳ್ಳುತ್ತಿದ್ದುದನ್ನೂ ಈ ಸಂಪ್ರದಾಯಗಳ ಹಿನ್ನೆಲೆಯಲ್ಲಿ ಕಾಣಬಹುದಾಗಿದೆ.

ಇ. ಗರ್ಭಾಧಾನ (ಗರ್ಭಸಂಸ್ಕಾರಗಳು):

ಮಗುವು ಗರ್ಭದಲ್ಲಿರುವಾಗಲೇ ತಾಯಿಯ 'ಕ್ಷೇತ್ರಸಂಸ್ಕಾರ'ದ ಮೂಲಕ ಮಗುವಿನಲ್ಲಿ ಸತ್‌ಪ್ರೇರಣೆಯನ್ನುಂಟುಮಾಡುವ ಉದ್ದೇಶವನ್ನು ಭ್ರೂಣಸಂಸ್ಕಾರಗಳು ಹೊಂದಿವೆ. ಬೀಜಾಂಕುರದಿಂದ ಗರ್ಭವು ಪೂರ್ಣವಾಗಿ ಬೆಳೆಯುವವರೆಗೆ ಹರಡಿಕೊಳ್ಳುವ ಈ ಸಂಸ್ಕಾರಗಳು ತಮ್ಮ ವಿಶಿಷ್ಟ ಪ್ರಯೋಗಗಳ ಮೂಲಕ ಇದನ್ನು ಸಾಧಿಸುತ್ತವೆ.

ಗರ್ಭಾಧಾನದ ಸಂದರ್ಭದ ಒಂದು ಆಚರಣೆ ಹೀಗಿದೆ: ಹಣ್ಣು, ಹೂ, ಅರಿಶಿನ, ಕುಂಕುಮ, ವೀಳ್ಯಗಳನ್ನೊಳಗೊಂಡ ಮಂಗಳ ದ್ರವ್ಯಗಳನ್ನು ಒಂದು ತಟ್ಟೆಯಲ್ಲಿಟ್ಟು ನಾಲ್ಕು ಜನ ಪುರುಷರು ಮತ್ತು ನಾಲ್ಕು ಜನ ಸುಮಂಗಲೆಯರಿಂದ ಸ್ಪರ್ಶ ಮಾಡಿಸುತ್ತಾರೆ. ಅನಂತರ ಆ ತಟ್ಟೆಯನ್ನು ಹಿಡಿದು ಪುರೋಹಿತರು ಆಶೀರ್ವದಿಸುತ್ತಾರೆ. ಆ ತಟ್ಟೆಯನ್ನೇ ವಧುವಿನ ತೊಡೆಯ ಮೇಲೆ ಇಡುತ್ತಾರೆ. ಅನಂತರ ವಧುವಿನ ತಾಯಿಯು ಆ ತಟ್ಟೆಯನ್ನು ಶಯನಗೃಹದಲ್ಲಿ ಉಚ್ಚಸ್ಥಾನದಲ್ಲಿ ಇಡುತ್ತಾಳೆ. ವಧುವು ಫಲವತಿಯಾಗಬೇಕೆಂಬ ಆಶಯವನ್ನು ಇದು ಸಮರ್ಥವಾಗಿ ಸಂಕೇತಿಸುತ್ತದೆ. ಆ ರಾತ್ರಿ ವಧುವು ಹಾಲನ್ನವನ್ನೇ ಊಟಮಾಡುವುದು ಸಂಪ್ರದಾಯಕ್ಕಿಂತ ಮಿಗಿಲಾಗಿ ಶುದ್ಧ ವೈದ್ಯಕೀಯ ವಿಧಿ. ವಧುವಿನ ಕಡೆಯವರೇ ಶಯನಾಗಾರ ಸಿದ್ಧತೆಗಳನ್ನು ಮಾಡುವುದರಿಂದ ವಧುವಿನ ಮುಜುಗರವೂ ದೂರವಾಗುತ್ತದೆ.

ಈ. ಬಸುರಿ:

ಹುಡುಗಿಯು ಋತುಮತಿಯಾದಾಗ ಇದ್ದ ಅಂಜಿಕೆ ಮತ್ತು ಸಂಭ್ರಮ, ಈ ಸಂದರ್ಭದಲ್ಲಿ ಇನ್ನೂ ದೊಡ್ಡದಾದುದರಿಂದ ಈಗಿನ ಉಪಚಾರಗಳೂ ಆಚರಣೆಗಳೂ ಅತಿಶಯವಾಗಿವೆ.

1) **ಬಳೆ ತೊಡಿಸುವುದು:** ಎಂಟನೆಯ ತಿಂಗಳಿನಲ್ಲಿ ಗಂಡನ ಮನೆಯಲ್ಲಿ ವಿವರವಾಗಿ ನಡೆಯಬೇಕಾದ ಈ ಆಚರಣೆಯು ಐದನೆಯ ತಿಂಗಳಿನಲ್ಲಿ ತಾಯಿಯ ಮನೆಯಲ್ಲಿ ಒಮ್ಮೆ ನಡೆಯುವುದು 'ಮುಂದೆ ಸಾಧ್ಯವಾಗುತ್ತದೋ ಇಲ್ಲವೋ' ಎಂಬ ಸಂಶಯದಿಂದ. ಈ ಸಂಕ್ಷೇಪಶಾಸ್ತ್ರವು ಕೂಡ ಎಣ್ಣೆಶಾಸ್ತ್ರ-ಅಭ್ಯಂಗಸ್ನಾನ-ಗಣಪತಿಪೂಜೆ-ಮಲಾರಪೂಜೆ-ಎಲೆ ಅಡಿಕೆ - ಮಡಿಲುತುಂಬುವುದು - ಈ ವಿವರಗಳಿಂದ ಕೂಡಿರುತ್ತದೆ. ವಿವಿಧ ಬಣ್ಣಗಳ ಬಳೆಗಳನ್ನು ತೊಟ್ಟು ಬಸುರಿಗೆ ಸಂಭ್ರಮವನ್ನುಂಟುಮಾಡುವ ಮೂಲಕ್ರಿಯೆಯ ಸುತ್ತ ದೈವಿಕ ಆವರಣವನ್ನೂ ಸೃಷ್ಟಿಸುವುದು ಇಲ್ಲಿ ಗಮನಿಸಬೇಕಾದ ಸಂಗತಿಯಾಗಿದೆ. ಅದರ ಜೊತೆಗೆ ಭೋಜನಕೂಟವೂ ನಡೆದು ಅದರ ಸಂಭ್ರಮವು ಹೆಚ್ಚುತ್ತದೆ.



84 ನಾತಿಪಿಚಾರ್: ಗರ್ಭಿಣಿಯಾದ ಹುಡುಗಿಗೆ ಮಡಿಲು ತುಂಬುವ ದೃಶ್ಯ

2) **ನಾತಿಪಿಚಾರ್ ಸಮಾರಂಭ:** ಅತ್ತೆ ಮನೆಯವರು ಬಸುರಿ ಹುಡುಗಿಯನ್ನು ಕರೆದುಕೊಂಡು ಹೋಗಲು ಬಂದಾಗ ಸಂಜೆ ಆರತಿ, ಮಡಿಲುತುಂಬುವುದು, ಭೋಜನಕೂಟ ಏರ್ಪಡುತ್ತದೆ. ದೃಷ್ಟಿಪರಿಹಾರ, ಸಂಭ್ರಮಗಳು ವ್ಯಕ್ತವಾಗುವ ರೀತಿ ಇಲ್ಲಿ ವಿಶಿಷ್ಟವಾದುದು (ಚಿತ್ರ 84).

ಮಡಿಲು ತುಂಬುವುದಕ್ಕೆ - ಪ್ರತಿಯೊಂದೂ ಒಂದು ಪಾವು ಪ್ರಮಾಣದ ಪರಿಕರದಲ್ಲಿ ಮಾಡಿದ ಒಂದು ಪುಳ್ಳಂಗಾಯಿ ಉಂಡೆ, ಒಂದು ಲಡ್ಡು, ಒಂದು ರವೆ ಉಂಡೆ, ಒಂದು ಸಕ್ಕರೆ ಉಂಡೆ, ಮುಖ್ಯವಾಗಿ ಒಂದು ಎಳ್ಳುಂಡೆ, ಒಂದು

ಕಡಲೇಬೀಜದ ಉಂಡೆ, ಒಂದು ಹುರಿಗಡಲೆ ಉಂಡೆ - ಹೀಗೆ ಒಂಬತ್ತು ಉಂಡೆಗಳು; ಜೊತೆಗೆ ಒಂಬತ್ತು ಚಕ್ಕುಲಿ, ಒಂಬತ್ತು ಮುಚ್ಚೋರೆ, ಒಂಬತ್ತು ತೇಂಗೊಳಲು, ಒಂಬತ್ತು ಚಿರೋಟಿ, ಒಂಬತ್ತು ಕರಿಗಡುಬು, ಒಂಬತ್ತು ಮೈಸೂರುಪಾಕು; ಐದುಸೇರು ಕಾರಾಶೇವೆ, ಹುರಿಗಾಳು, ಎಳ್ಳೆಸರು - ಬಳಕೆಯಾಗುತ್ತವೆ. ಇಲ್ಲಿ ಬಳಕೆಯಾಗುವ ಎಳ್ಳು, ಒಂಬತ್ತರ ಸಂಖ್ಯೆ, ಉಂಡೆಗಳ ಗಾತ್ರಗಳು ಅಮಂಗಲ ಪರಿಹಾರಕ್ಕಾಗಿ ಒಡ್ಡುವ ರಕ್ಷಣೆಗಳು. ಅಂಜಿಕೆಯನ್ನು ಅಡಗಿಸಿಕೊಂಡ ಸಂಭ್ರಮವೂ ಇಲ್ಲಿದೆ.

ಎಂಟನೆಯ ತಿಂಗಳಿನಲ್ಲಿ ಗಂಡನ ಮನೆಯಲ್ಲಿ ನಡೆಯುವ ಸೀಮಂತದ ಹಿಂದಿನದಿನ 'ನಾತಿಪಿಚಾರ್' ಪುನರಾವರ್ತನೆಗೊಳ್ಳುತ್ತದೆ. ಅಂದು ವಿವರವಾಗಿ ನಡೆಯುವ 'ಬಳೆತೊಡಿಸುವ' ಶಾಸ್ತ್ರದಲ್ಲಿ ಐದು-ಒಂಬತ್ತು-ಹನ್ನೊಂದು-ಹದಿಮೂರು ಹೀಗೆ ಬೆಸಸಂಖ್ಯೆಯ ಬಳೆಗಳನ್ನು ಆಕೆಗೆ ತೊಡಿಸುವುದು, ಕರಿ ಮತ್ತು ಕೆಂಪುಬಣ್ಣದ ಬಳೆಗಳನ್ನು ವರ್ಜಿಸುವುದು ಕೂಡ ಮೇಲಿನ ಮಾತನ್ನು ಪುಷ್ಟೀಕರಿಸುತ್ತದೆ.

ಈ ಸಂದರ್ಭದಲ್ಲಿ ಮಡಿಲುತುಂಬುವ ಪರಿಕರಗಳೂ ಬೇರೆ. ಬಾಳೆಹಣ್ಣು, ಬೆಲ್ಲ, ಅರಿಶಿನ, ಕುಂಕುಮ, ಕಣ, ಮೊಟ್ಟೆತೆಂಗಿನಕಾಯಿ, ಎಲೆಅಡಿಕೆ - ಎಲ್ಲವೂ ಮಂಗಳದ್ರವ್ಯಗಳು; ಗಂಡಿನ ಕಡೆಯವರು ಸಂತಾನವನ್ನು ನಿರೀಕ್ಷಿಸುತ್ತ ಅರ್ಪಿಸುವಂಥವು. ಆದರೆ, ತಾಯಿಯ ಮನೆಯಿಂದ ಏಳನೆಯ ತಿಂಗಳಿನಲ್ಲಿ ಗಂಡನ ಮನೆಗೆ ಬಂದಕೂಡಲೆ (ತಾಯಿಯ ಮನೆಯಿಂದ ತಂದಿರುವ ಉಂಡೆ ಮತ್ತು ಚಕ್ಕುಲಿ ಪುಡಿಯನ್ನು) 'ಮುರುಕುಚಕ್ಕುಲಿ ಬೀರುವುದು' ದೃಷ್ಟಿಪರಿಹಾರಕ ಮಾತ್ರವಾಗಿರಲು ಸಾಧ್ಯ.

3) ಈ ಸಂಬಂಧದಲ್ಲಿ ನಡೆಸುವ ಒಂದೆರಡು ಆಚರಣೆಗಳು ಸಾಂಸ್ಕೃತಿಕವಾಗಿ ಸ್ವಾರಸ್ಯಕರವಾದವು.

0.1 ಚೂ ಬಡಿಯರದ್ (ಚೂ ಬಡಿಯುವುದು): ಸೀಮಂತದ ಮಾರನೆಯದಿನ ಬೆಳಗ್ಗೆ ಗೋಧಿಹಿಟ್ಟು, ಅಕ್ಕಿಹಿಟ್ಟಿನಲ್ಲಿ ಮೀನು, ಮೊಸಳೆ ಇತ್ಯಾದಿ ಪ್ರಾಣಿಗಳನ್ನು ಮಾಡುತ್ತಾರೆ. ಬಸುರಿಯನ್ನು ಓರಗೆಯವರೊಂದಿಗೆ ಕೂರಿಸಿ ಹಿಂದಿನ ದಿನದ ಅನ್ನ ಆಹಾರಗಳನ್ನು ಊಟವಾಗಿ ಬಡಿಸುತ್ತಾರೆ. ಹೀಗೆ ಊಟ ಮಾಡುವಾಗ, ಬಗ್ಗಿದವರಿಗೆ, ಊಟ ಬಡಿಸುವವರು 'ಚೂಚೂಚೂ' ಎಂದು ಕೂಗಿ ಬೆನ್ನಿಗೆ ಬಡಿಯುತ್ತಾರೆ. ಇದರಿಂದ ಋತುಮತಿಯಾಗದವರು ಋತುಮತಿಯಾಗುತ್ತಾರೆ, ಬಸುರಿ ಆಗದವರು ಬಸುರಿಯಾಗುತ್ತಾರೆ ಎಂಬ ನಂಬಿಕೆಯ ಹಿಂದೆ, ಸಂಪರ್ಕ ಪರಿಣಾಮದ ಆಶಯವಿದೆ. ಗರ್ಭಿಣಿಯ ಬಯಕೆಯನ್ನು ತೀರಿಸದೆ ಹೋದರೆ ಮಗುವಿನ ಕಿವಿಯಲ್ಲಿ ಸೋರುತ್ತದೆ ಎಂಬ ನಂಬಿಕೆಯೂ ಅವಳಿಗೆ ಮಾಡುವ ಆರೈಕೆ ಹಾಗೂ ಆದರಗಳಿಗೆ ಪ್ರೇರಕ.

0.2 ಚೂಚೋರ್ ಆರತಿ (ಹುರಿಕಲ್‌ಚಕ್ಕುಲಿ ಆರತಿ): ಅಂದು ಸಂಜೆ ನಡೆಯುವ ಆರತಿಗೆ ಹುರಿಗಾಳೂ, ಚಕ್ಕುಲಿಗಳೂ ಬಾಗಿನವಾದ್ದರಿಂದ ಅದಕ್ಕೆ 'ಹುರಿಕಲ್‌ಚಕ್ಕುಲಿ ಆರತಿ' ಎಂಬ ಹೆಸರೂ ಇದೆ.

ಗಂಡನ ಮನೆಯವರು ತಿಂಡಿಗಳ ಬುಟ್ಟಿಗಳೊಡನೆ ಬಸುರಿಯನ್ನು ತೊಟ್ಟಿಲು ಡೋಲಿಯಲ್ಲಿ ತವರಿಗೆ ಕಳಿಸುವಾಗ, ಡೋಲಿಯನ್ನು ಹೊರುವವರು

"ಹೋಳಿಗೆ ತುಪ್ಪ - ಜೈ ಜೈ
ಹಾಲು ಮೊಸರು - ಜೈ ಜೈ
ಹೋಳಿಗೆ ಹಾಲು - ಜೈ ಜೈ"

ಎಂದು ಹಾಡುತ್ತ ಸಾಗುವುದು ಬಸುರಿಗೆ ಮಾನಸಿಕ ಧೈರ್ಯವನ್ನು ತುಂಬುತ್ತದೆ. ಸಂತೋಷವನ್ನೂ ಹರ್ಷವನ್ನೂ ಉಂಟುಮಾಡುತ್ತದೆ. ತವರಿನವರು ಆಕೆಗೆ ಆರತಿ ಮಾಡಿ ಒಳಗೆ ಕರೆದುಕೊಳ್ಳುತ್ತಾರೆ; ಡೋಲಿಯವರಿಗೆ ಔತಣ ನಡೆಯುತ್ತದೆ.

ಮುಖ್ಯವಾಗಿ, ಹೆರಿಗೆ ಎಂದರೆ ಮರಣದ ಬಾಯಿಗೆ ದೂಡಿದಂತೆ ಎಂದೇ ಹೆಣ್ಣು ಅಸಹಾಯಕಳಾಗಿದ್ದ ಮಾನಸಿಕ ಸನ್ನಿವೇಶದ ಹಿನ್ನೆಲೆಯಲ್ಲಿಯೇ ಈ ವಿವರಗಳನ್ನು ನೋಡಿದಾಗ, ಮೇಲಿನ ಸಾಂಪ್ರದಾಯಿಕ ಆಚರಣೆಗಳೂ ಸೂಕ್ತ ಪರಿಹಾರೋಪಾಯಗಳಾಗಿ ಭಾಸವಾದರೆ ಆಶ್ಚರ್ಯವೇನಿಲ್ಲ.

ಊ. ಹೆರಿಗೆ:

ಈವರೆಗೆ ಗಮನಿಸಿದ ಮೂರು ಘಟ್ಟಗಳಿಗಿಂತಲೂ ಹೆಣ್ಣಿನ ಜೀವನದಲ್ಲಿ ಹೆಚ್ಚು ಆತಂಕಕಾರಿಯಾದ ಘಟ್ಟ ಇದು. ಅದಕ್ಕಾಗಿಯೇ ವಿಶೇಷ ಎಚ್ಚರ, ಸಂಭ್ರಮ ಇಲ್ಲಿದೆ.

1. ಎಚ್ಚರ : ಹೆರಿಗೆಯು ಸುಲಭವಾಗಿ ಆಗಲು ಕಂಡುಕೊಂಡ ಉಪಾಯಗಳು ಸರಳವಾದವು. ಹೆರಿಗೆನೋವು ಕಾಣಿಸಿಕೊಂಡಾಗ ಬೇಗ ಹೆರಿಗೆ ಆಗಲೆಂದು ಜೀರಿಗೆ ಕಷಾಯ ಕೊಡುವುದು; ನರಗಳು ಸಡಿಲಾಗಿ ಹೆರಿಗೆಯು ಸುಲಭವಾಗಿ ಆಗಲೆಂದು ಬಿಸಿನೀರಿನಿಂದ ಮೀಯಿಸುವುದು - ಅಂಥ ಒಂದೆರಡು ನಿದರ್ಶನಗಳು.

2. ವಿಶೇಷ ಆಚರಣೆಗಳು : ಹೆರಿಗೆಯ ಸಂದರ್ಭದ ಒಂದೆರಡು ವಿಶಿಷ್ಟ ಆಚರಣೆಗಳನ್ನು ಇಲ್ಲಿ ನಿರೂಪಿಸಿದೆ:

0.1 ಬಜೆಬೆಣ್ಣೆ : ಹೆರಿಗೆಯ ಅನಂತರ ಏಳನೆಯ ದಿನ ಮಾಡುವ ವಿಶಿಷ್ಟ ಸಾಂಸ್ಕೃತಿಕ ಆಚರಣೆ 'ಬಜೆಬೆಣ್ಣೆ'. ಅಂದು, 'ಮುತ್ತತ್ಥಾ ಪಶ್‌ಲ್‌ಕ್ಕ್ ಮುವಟ್ಲ್ ವಣ್ಣೆಕುಡಂಗೊ' (ಮುತ್ತಿನಂಥ ಮಗುವಿಗೆ ಮೂರು ಬಟ್ಟಲು ಬೆಣ್ಣೆ ಕೊಡಿ) ಎಂದು ಹಿರಿಯ ಮಕ್ಕಳು ಮೂರು ಮನೆಗೆ ಹೋಗಿ ಬೆಣ್ಣೆಯನ್ನು ತರುತ್ತಾರೆ. ಅದನ್ನು ಬಜೆಯಲ್ಲಿ ತೇದು ಮಗುವಿಗೆ ನೆಕ್ಕಿಸುವುದರಿಂದ ಅದು 'ಬಜೆಬೆಣ್ಣೆ'.



85 ಗುಣೇಕಿಡರದ್ : ಒಂದು ಸೇರು ಬತ್ತದ ಮೇಲೆ ದಾಳಿಂಬೆ ಹೂ ಇಟ್ಟಿರುತ್ತದೆ. ಪವಿತ್ರಗ್ರಂಥವನ್ನೂ ಮಗುವಿನ ಕೈಗೆ ಇಡುತ್ತಾರೆ

ಅಂದು 'ವಿಧಿ' ಬಂದು ಮಗುವಿನ 'ಹಣೆಬರಹ'ವನ್ನು ಬರೆಯುತ್ತಾಳೆಂಬ ನಂಬಿಕೆಯಿಂದ ನಿರಂತರವಾಗಿ ದೀಪಬೆಳಗಿಸಿ ಇಡುತ್ತಾರೆ. ಬಾಣಂತಿಯು ಮಿಂದು ಶುಚಿಯಾದ ವಸ್ತ್ರವುಟ್ಟು ಅರಿಶಿನ ಹಚ್ಚಿಕೊಂಡು ಹೂ ಮುಡಿದುಕೊಂಡು ಮಗುವನ್ನು ಅತಿ ಎಚ್ಚರದಿಂದ ಎತ್ತಿಕೊಂಡು (ನಿದ್ರಿಸದೆ) ಎಚ್ಚರವಾಗಿಯೇ ಕುಳಿತಿರುತ್ತಾಳೆ. ಮಗುವಿನ ಹಣೆಯಲ್ಲಿ ಶುಭವನ್ನೂ, ದೀರ್ಘಾಯುಸ್ಸನ್ನೂ, ಭವ್ಯಭವಿಷ್ಯವನ್ನೂ ಬರೆಯಲೆಂಬುದು ಈ ಎಚ್ಚರದ ಆಶಯವಾಗಿರುತ್ತದೆ.

0.2 ಗುಣೇಕಿಡರದ್ (ಗುಣಿಗೆ ಇಡುವುದು): ಹನ್ನೊಂದನೆಯ ದಿನ 'ಒಳಗೆ ಬಂದಾಗ' ಆಚರಿಸುವುದು 'ಗುಣೇಕಿಡರದ್'. ಅಂದು, ಹಸೆಹಾಕಿ ಅದರಮೇಲೆ ಒಂದು ಪಡಿ ಬತ್ತ ಹರಡಿರುತ್ತದೆ. ಮಗುವಿನ ಕಣ್ಣಿಗೆ ಕಾಡಿಗೆ ಹಚ್ಚಿ ಉಡುದಾರ ಹಾಕಿ ಕೈಗೆ ಪವಿತ್ರ ಭಗವದ್ಗೀತೆ ಗ್ರಂಥವನ್ನು ಕೊಟ್ಟಿರುತ್ತದೆ (ಚಿತ್ರ 85, 86).



86 ಗುಣೇಕಿಡರದ್: ಹರಡಿದ ಬತ್ತದ ಮೇಲೆ ಮಗುವನ್ನು ಮುಖ ಅಡಿಯಾಗಿ ಮಲಗಿಸಿರುವುದು

ಹೊಸಿಲಿನ ಮೇಲೆ ಹಾಲುತುಪ್ಪವನ್ನು ಲೋಟದಲ್ಲಿಟ್ಟು ಹುಡುಗನೊಬ್ಬನಿಂದ ಅದನ್ನು ದಾಟಿಸುತ್ತಾರೆ. ಆ ಹಾಲನ್ನು ತಾಯಿಯು ಮಗುವಿಗೆ ಕುಡಿಸಿದರೆ ಮತ್ತೆ ಕಾಲುಧೂಳಾಗುವುದಿಲ್ಲವೆಂದು ನಂಬುತ್ತಾರೆ (ನಿರೋಧಕಶಕ್ತಿ ವಿಧಾನ). ತಾಯಿಯು ಮಗುವನ್ನು

ಬತ್ತದಮೇಲೆ ಮುಖ ಅಡಿಯಾಗಿ ಮಲಗಿಸಿ ತಾನೂ ಎಲ್ಲರಿಗೂ ನಮಸ್ಕಾರ ಮಾಡುತ್ತಾಳೆ; ಆರತಿ ಆಗುತ್ತದೆ.

ಹೆತ್ತಜಾಗದಲ್ಲಿ ರಂಗೋಲಿ ಹಾಕಿ ಅದರ ಮೇಲೆ ಸುಳಿಬಾಳೆ ಹಾಸಿ ಪೊಂಗಲು (ಅರಿಶಿನದ ಅನ್ನ) ಬಡಿಸುತ್ತಾರೆ, ತೆಂಗಿನಕಾಯಿ ಒಡೆದು ಪೂಜಿಸುತ್ತಾರೆ, ಅನ್ನದಮೇಲೆ ಹರಳೆಣ್ಣೆಯ ಕಕ್ಕಡ ಹತ್ತಿಸಿಡುತ್ತಾರೆ. ಹೆರಿಗೆಯಾದ ಕೋಣೆಯ ನೆಲವನ್ನು ಕುಕ್ಕಿ ಅದರಲ್ಲಿ ಹೊಕ್ಕಳಬಳ್ಳಿ ಹಾಕಿ ಮುಚ್ಚುತ್ತಾರೆ. ಮಗುವಿಗೆ ಅದನ್ನು ರಕ್ಷೆಯಾಗಿ ಕಟ್ಟುವುದೂ ಉಂಟು. ಅರಿಶಿನದ ಅನ್ನವನ್ನು ಎಂಟು ದಿಕ್ಕಿಗೂ ಬಲಿ ಇಡುತ್ತಾರೆ. ಉಳಿದ ಅನ್ನವನ್ನು ಅಗಸಗಿತ್ತಿ ಹೊರಗೆ ಒಯ್ಯುತ್ತಾಳೆ. ಮಗು ಅಲ್ಲಿ ಬಿದ್ದರೂ ತೊಂದರೆ ಆಗುವುದಿಲ್ಲವೆಂದು ನಂಬುತ್ತಾರೆ.

ಈ ಆಚರಣೆಯಲ್ಲಿ, ಔಷಧವನ್ನು ಹೇಗೋ ತಂತ್ರವನ್ನೂ ಹಾಗೆಯೇ ತಾಯಿ-ಮಕ್ಕಳ ರಕ್ಷಣೆಗಾಗಿ ಬಳಸಿಕೊಳ್ಳುವುದನ್ನು ಕಾಣುತ್ತೇವೆ. ಇದರಲ್ಲಿ, ಹೆತ್ತಜಾಗದಲ್ಲಿ ರಕ್ತದ ರುಚಿಗೆ ಬರುವ 'ಪಿಶಾಚಿಗಳನ್ನು ಓಡಿಸುವ' ಆಶಯವಿದೆ. ಹೆರಿಗೆಗೆ ಅನುವುಮಾಡಿಕೊಟ್ಟ ಭೂಮಾತೆಯನ್ನು ಕೃತಜ್ಞತೆಯಿಂದ ನೆನೆಯುವ ಉದ್ದೇಶವೂ ಇದೆ. ತಮ್ಮ ಅಸ್ತಿತ್ವವನ್ನು ಪೂರ್ಣವಾಗಿ ನಿಸರ್ಗದ ಕೃಪೆಯಲ್ಲಿ ಚೆಲ್ಲಿಕೊಂಡವರ ಮನೋಧರ್ಮ ಇಲ್ಲಿ ಸ್ಪಷ್ಟವಾಗಿ ವ್ಯಕ್ತವಾಗುತ್ತದೆ.

3. ತೊಟ್ಟಿಲಿಡುವ ಶಾಸ್ತ್ರ: ತೊಟ್ಟಿಲಿಡುವಶಾಸ್ತ್ರದ ವಿವರಗಳೂ ಅಷ್ಟೇ ಕಳಕಳಿಯನ್ನು ವ್ಯಕ್ತಪಡಿಸುತ್ತವೆ:

0.1 ಹಳೆಯತೊಟ್ಟಿಲು ತಂದು ಅಲಂಕರಿಸುವುದು (ಬಾಳಿ ಬದುಕಿದುದು ಎಂದು)

0.2 ಹಿರಿಯ ಮುತ್ತೈದೆಯರು ಗಣಪತಿಗೆ, ತೊಟ್ಟಿಲಿಗೆ ಪೂಜಿಸುವುದು (ಹೊಸತಾಯಿ ಹಿರಿಯರೊಂದಿಗೆ ಸಾಮ್ಯ ಸಾಧಿಸಲು)

0.3 ನೈವೇದ್ಯಕ್ಕೆ ಚಿಗುಳಿಯನ್ನು ಬಳಸುವುದು (ಅನಿಷ್ಟಹರಣಕ್ಕಾಗಿ ಎಳ್ಳು)

0.4 ಗುಂಡುಕಲ್ಲೊಂದಕ್ಕೆ ಬೇವಿನಸೊಪ್ಪು ಕಟ್ಟಿ ಅಲಂಕರಿಸುತ್ತಾರೆ. ಅದನ್ನು ಎತ್ತಿಕೊಳ್ಳುವವಳು ಒಬ್ಬ ಕೊಡಗೂಸು (ಮಗುವು ಕಲ್ಲಿನಂತೆ ದೃಢವಾಗಿರಲು; ಬೇವು, ರಕ್ಷಣೆಗೆ). ತೊಟ್ಟಿಲಿನಲ್ಲಿ ಮೊದಲು 'ಗುಂಡಪ್ಪ'ನನ್ನು ಮಲಗಿಸುವುದೂ ಇದೇ ಕಾರಣಕ್ಕೆ.

0.5 ಮೂರುಬಾರಿ ಮಗುವನ್ನು ತೊಟ್ಟಿಲಿಗೆ ನಿವಾಳಿಸುವುದು; ಐದು ರಕ್ಷೆದೀಪ ಹಚ್ಚಿ ಐದು ಮುತ್ತೈದೆಯರು ಅದರಲ್ಲಿ ಕೈಕಾಯಿಸಿ "ತಲೆಗೆ ಅಚ್ಯುತನರಕ್ಷೆ, ಕಾಲಿಗೆ ವಾಮನರಕ್ಷೆ ..." - ಹೀಗೆ ಮೈಗೆಲ್ಲಾ ರಕ್ಷೆ ಇಡುವುದು; ಐದು ಸುಮಂಗಲೆಯರು ಒಟ್ಟಿಗೆ ತೂಗಿ ಕಿವಿಯಲ್ಲಿ ಹೆಸರು ಹೇಳುವುದು - ಇವೆಲ್ಲಾ, ಮೊದಲಬಾರಿ ತೊಟ್ಟಿಲಿನಲ್ಲಿ ಮಲಗಿಸುವ ಸಂದರ್ಭದ ಎಚ್ಚರಿಕೆಗಳು. ವಿವಿಧ ವಿಷ್ಣುನಾಮಗಳನ್ನು ಹೇಳಿ ಮಗುವಿನ ವಿವಿಧ ಅಂಗಗಳನ್ನು ಮುಟ್ಟಿ 'ರಕ್ಷೆ' ಹೇಳುವುದು ತಾವು ನಂಬಿದ ದೈವಾವಲಂಬನೆಯ ದ್ಯೋತಕಗಳು. ಮಕ್ಕಳ ಸಾವು ಅಧಿಕವಾಗಿದ್ದ ವೈದ್ಯಕೀಯ ಅಸಹಾಯಕತೆಯ ಹಿನ್ನೆಲೆಯಲ್ಲಿ ಈ ತುಡಿತದ ತೀವ್ರತೆ ಅರ್ಥವಾಗುವಂಥದು (ಚಿತ್ರ 87).



87 ರಕ್ಷೆ ಇಡುವುದು

4. **ಸಾಧನೆಯ ಸಂಭ್ರಮ :** ವಸ್ತ್ರಗಳು, ಒಡವೆಗಳು, ತಿಂಡಿತಿನಿಸುಗಳನ್ನು ಕೊಟ್ಟು ತಾಯಿ ಮತ್ತು ಮಗುವನ್ನು ಗಂಡನಮನೆಗೆ ಕಳಿಸಿಬರುವ ವೇಳೆಗೆ ಆತಂಕದ ದಿನಗಳು ಮುಗಿದು ನಲಿವು ಪೂರ್ಣವಾಗಿ ಕಾಣಿಸಿಕೊಂಡಿರುತ್ತದೆ. ಮಗುವು ಹೊಸಿಲುದಾಟಿದಾಗ, ಮಗುಚಿಕೊಂಡಾಗ ಕೂಡ 'ಆರತಿ' ಮಾಡುವ ಸಂಭ್ರಮ ಉಳಿಯುವುದು - ತಾಯಿ ಮತ್ತು ಮಗು ಬದುಕಿ ಉಳಿದು ಆರೋಗ್ಯದಿಂದಿರುವ ಸಾಹಸದ ಸಾಧನೆಯ ಪ್ರೇರಣೆಯಿಂದಲೇ. ಗಣಪತಿಹಬ್ಬದಲ್ಲಿ ಮಗುವಿಗಾಗಿ 'ಬೆನಕನ ಎಳ್ಳು' ಬೀರುವುದು; ಸಂಕ್ರಾಂತಿಯಲ್ಲಿ, ಗಂಡು ಮಗುವಾದರೆ ಬೆಳ್ಳಿ ಕೃಷ್ಣನನ್ನೂ, ಹೆಣ್ಣು ಮಗುವಾದರೆ ಬೆಳ್ಳಿಬಟ್ಟಲನ್ನು ಬೀರುವುದು - ಇವೆಲ್ಲವೂ,

ಸಂತಾನವನ್ನು ಒಂದು ಭಾಗ್ಯವೆಂದು ತಿಳಿದವರ, ಅದರ ಭವಿಷ್ಯಕ್ಕಾಗಿ ತುಡಿಯುವವರ, ಅತಿಮಾನುಷ ಶಕ್ತಿಗಳ ಒಲವು ಗಳಿಸಬಯಸುವವರ ತುಡಿತದ ವಿಭಿನ್ನ ಮುಖಗಳು. ಬೆಳ್ಳಿಕೃಷ್ಣ ಮತ್ತು ಬೆಳ್ಳಿಬಟ್ಟಲಿನ - ಪುರುಷ, ಸ್ತ್ರೀ - ಸಾಂಕೇತಿಕತೆಯನ್ನೂ ಇಲ್ಲಿ ಗಮನಿಸಬಹುದು.

ಹೆಣ್ಣಿಗೆ ಸಂಬಂಧಿಸಿದಂತೆ - ದೊಡ್ಡವಳಾದಾಗ, ಪ್ರಸ್ತವಾದಾಗ ಮತ್ತು ಬಸುರಿಯಾದಾಗ, ಹೆರಿಗೆಯಾದಾಗ ಮಾಡುವ ಎಲ್ಲ ಆಚರಣೆಗಳೂ ಹೆಣ್ಣಿನ ದೈಹಿಕ ರಚನೆ ಮತ್ತು ಕ್ರಿಯೆಗಳ ವೈಜ್ಞಾನಿಕ ಅರಿವು ಇಲ್ಲದ ಭೀತಿಯ ಒಡಲಿನಿಂದ ಹುಟ್ಟಿಕೊಂಡವು. ಆಕೆಯ ದೈಹಿಕ ಕ್ಷೇಮ ಮತ್ತು ಮಾನಸಿಕ ಸ್ವಾಸ್ಥ್ಯಕ್ಕಾಗಿ ಲಭ್ಯವಿದ್ದ ಎಲ್ಲ ತಿಳಿವು ಮತ್ತು ಸಾಧನಗಳನ್ನೂ ಇಲ್ಲಿ ಬಳಸಿಕೊಂಡಿದೆ. ಈ ಸಂದರ್ಭಗಳು ಹೆಣ್ಣಿನ ಜೀವನದ ಮೈಲಿಗಲ್ಲುಗಳು ಹಾಗೂ ಸಂತಾನಭಾಗ್ಯದ ಶುಭ ಸ್ತರಗಳು ಎಂಬುದರಿಂದಾಗಿ ಭೀತಿಯ ಜೊತೆಜೊತೆಗೇ ಹರ್ಷ, ಉಲ್ಲಾಸದ ಅಂಶಗಳೂ ಸೇರಿವೆ. ಈ ಹಂತಗಳು ಯಶಸ್ವಿಯಾಗಿ ಮುಂದುವರಿದಂತೆಲ್ಲಾ ಸಾಹಸ ಹಾಗೂ ತೃಪ್ತಿಯ ದ್ಯೋತಕವಾಗಿಯೂ ಕೆಲವು ಆಚರಣೆಗಳು ಸೇರಿರುವುದನ್ನೂ ಈ ವಿವರಗಳಲ್ಲಿ ಗಮನಿಸಬಹುದು.

ಊ. ಮಗು ಬೆಳೆಯುವ ಹಂತದಲ್ಲಿ :

ಅವರ ಎಲ್ಲ ಸಂಸ್ಕಾರಗಳ ಮೂಲ ಆಶಯಕ್ಕೆ ಹೊಂದಿಕೊಂಡಂತೆ ಇಂಥ ರೂಢಿಗತ ಆಚರಣೆಗಳನ್ನು ಗುರುತಿಸಬಹುದು:

1. **ಬಾಲ ಸಂಸ್ಕಾರಗಳು :** ಜೀವನದ ಮೊದಲ ಹೆಜ್ಜೆಗಳನ್ನು ತಿದ್ದಿ, ರೂಪಿಸಿ ಗಮನಿಸಬೇಕಾದ ಜವಾಬ್ದಾರಿ ಹಾಗೂ ಸಕಾಲಿಕ ಕರ್ತವ್ಯಗಳು ಒಂದುಕಡೆ, ಇಂಥ ಬಾಳಿನ ಚಿಗುರುಗಳನ್ನು ನೋಡಿ ಸವಿದು ಆನಂದಿಸುವುದು ಮತ್ತೊಂದುಕಡೆ ಸೇರಿ ಬಾಲಸಂಸ್ಕಾರಗಳು ಬೆಳೆದಿವೆ.


ಶುಚೀಕರಣದ ಮೂಲಕ ಆರೋಗ್ಯಸಾಧನೆಗಾಗಿ ನಡೆಸುವ ಚೌಲಕರ್ಮವನ್ನು ಮಾಡಿದಾಗ, ಕಾರಣಾಂತರದಿಂದ ವಟುವು ಮೃತಪಟ್ಟನೆಂಬುದಕ್ಕಾಗಿ ಅನೇಕ ವಂಶಗಳು 'ಜುಟ್ಟು' ಎಂಬ ರೂಢಿಯನ್ನು ಪಾಲಿಸುತ್ತ ಬಂದಿರುವುದು ಹೊಸ ಆಚಾರಗಳು ಹುಟ್ಟಿಕೊಳ್ಳುವ ಬಗೆಯೂ ಆಗಿದೆ. ಸಮಂತ್ರಕವಾದ ಚೌಲಕರ್ಮವು 'ಜುಟ್ಟು' ಎಂಬ ಅಮಂತ್ರಕ ಕ್ರಿಯೆಯಾಗಿ ಸ್ಥಿತ್ಯಂತರಗೊಂಡ ವಿಶಿಷ್ಟ ಸಂದರ್ಭ ಇದು. ಇದು ಬ್ರಾಹ್ಮಣ್ಯದ ಮೂಲತತ್ತ್ವದ ವಿರೋಧಾಭಾಸವೂ ಹೌದು.

ಕಿವಿಯನ್ನು ಚುಚ್ಚಿದನಂತರ ಕಿವಿಯ ಬಳಿ ಕೊಬ್ಬರಿಬೆಲ್ಲ ಮುರಿದು (ಗಂಡು, ಹೆಣ್ಣು ಮಕ್ಕಳಿಬ್ಬರಿಗೂ) ವಜ್ರದೋಲೆ ಹಾಕಿಕೊ ಎಂದು ಹರಸುವುದರ ಹಿಂದಿನ ಶುಭಾಶಯ; ಕೊಬ್ಬರಿಯನ್ನು ಅಗಿದು, ಚುಚ್ಚಿದ ಜಾಗಕ್ಕೆ ಊದುವುದರ ಹಿಂದಿನ ವೈದ್ಯ - ಇವನ್ನು ಹಿರಿಯರು ಗಂಭೀರವಾಗಿ ಪರಿಗಣಿಸುತ್ತಾರೆ. ಅಲ್ಲಿಯೂ, ಗಂಡಸರಿಗೆ ಬಲಭಾಗವೂ ಹೆಂಗಸರಿಗೆ ಎಡಭಾಗವೂ ಶ್ರೇಷ್ಠವೆಂಬ ನಂಬಿಕೆಯ ಹಿನ್ನೆಲೆಯಲ್ಲಿ, ಗಂಡು ಮಕ್ಕಳಿಗೆ ಮೊದಲು ಬಲಗಿವಿಗೂ ಹೆಣ್ಣು ಮಕ್ಕಳಿಗೆ ಎಡಗಿವಿಗೂ ಚುಚ್ಚುವ ಪರಿಪಾಠ ಬೆಳೆದಿದೆ. ಭಾವನಾತ್ಮಕ ನಂಬಿಕೆಗಳು ಹೊಸ ವಿವರಗಳೊಂದಿಗೆ ವಿಸ್ತಾರಗೊಳ್ಳುವ ರೀತಿ ಇದು.

ಹೆಸರಿಡುವುದು, ಮೊದಲಬಾರಿ ಅನ್ನ ಊಡಿಸುವುದು, ಮೊದಲಬಾರಿ ನಡೆಸುವುದು, ಇವೆಲ್ಲವೂ ಸಂಭ್ರಮದ ಸಂದರ್ಭಗಳಾದಂತೆ, ಎಚ್ಚರಿಕೆಯ ಸನ್ನಿವೇಶಗಳೂ ಹೌದು. ಆ ಸಂಬಂಧದ ಆಚರಣೆಗಳು ಅಂಥ ಮನೋಭಾವದಿಂದಲೇ ಮೂಡಿಬಂದವು.

2. **ಶಿಕ್ಷಣ ಸಂಸ್ಕಾರಗಳು :** ಮಗುವು ಹುಟ್ಟಿದೊಡನೆ ಮಾಡುವ ಜಾತಕರ್ಮದಿಂದಲೇ ಮೇಧಾಜನನವು ತನ್ನ ಸ್ಥಾನವನ್ನು ಪಡೆದು ಬಾಲಸಂಸ್ಕಾರಗಳಲ್ಲಿ ವ್ಯಾಪಿಸಿ ವಿದ್ಯಾಪ್ರೇರಣೆಯ ಅಂಕುರಾರ್ಪಣ ಮಾಡಿರುತ್ತದೆ. ಬ್ರಹ್ಮಚರ್ಯಾಶ್ರಮವು ಪೂರ್ಣವಾಗಿ ವಿದ್ಯಾಭ್ಯಾಸಕ್ಕೆ ಮೀಸಲಾದುದು. ತಪಸ್ಸಿನಂತೆ ನಿಯಮಬದ್ಧವಾಗಿ ನಡೆಯುವ 'ಅಧ್ಯಯನ'ವು ಸ್ನಾತಕವ್ರತದೊಂದಿಗೆ ಗೃಹಸ್ಥಾಶ್ರಮವನ್ನು ಮುಟ್ಟುತ್ತದೆ; ಅಧ್ಯಾಪನವೂ ಅಲ್ಲಿ ಸೇರಿಕೊಳ್ಳುತ್ತದೆ.

ಚೌಲಕರ್ಮದೊಂದಿಗೆ ನಡೆಯುವ ಅಕ್ಷರಾಭ್ಯಾಸದ ಸಂದರ್ಭವನ್ನು ನಿರೂಪಿಸಲು ಸಾಂಕೇತಿಕ ಆಚರಣೆಯೊಂದನ್ನು ಇಲ್ಲಿ ವಿವರಿಸಿದೆ: ವಟುವಿನ ಹಣೆಗೆ ಚಂದ್ರಲೇಪನ ಮಾಡುತ್ತಾರೆ. ಪೂಜೆ ಮಾಡಿದ ತಟ್ಟೆಯಲ್ಲಿರುವ ಸುವರ್ಣಪುಷ್ಪವು (ನಾಣ್ಯ) ಅಂಟಿಕೊಳ್ಳುವಂತೆ



88 ಉಪನಯನ: ಆಚಾರ್ಯರಿಂದ ಯಜ್ಞೋಪವೀತ ಸ್ವೀಕಾರ

ಹಣೆಗೆ ಅದನ್ನು ತಾಗಿಸುತ್ತಾರೆ. ಅದು ಬಲವಾಗಿ ಅಂಟಿಕೊಂಡಷ್ಟೂ ವಿದ್ಯೆ ಹೆಚ್ಚು ಎಂಬ ಇಲ್ಲಿನ ನಂಬಿಕೆ ಕೂಡ, ಶಾವಿಗೆ ಎಳೆಯು ಉದ್ದವಾದಷ್ಟೂ ವಿದ್ಯಾಭ್ಯಾಸವು ನಿಷ್ಕಂಟಕವಾಗಿ ಪೂರ್ಣಗೊಳ್ಳುತ್ತದೆಂಬ ಪ್ರಥಮ ಉಪಾಕರ್ಮದ ವೇಳೆಯ ನಂಬಿಕೆಯಂತೆಯೇ ಸಮಾನ ಪರಿಣಾಮದ ಆಶಯವನ್ನು ಹೊಂದಿದುದು.

ಈ ಸಂದರ್ಭದಲ್ಲಿ, ಮಗುವಿಗೆ ಅಗತ್ಯವಾದ ಹಲಗೆ, ಬಳಪ, ಕೈಚೀಲ ಮೊದಲಾದ ವಿದ್ಯಾಭ್ಯಾಸದ ಉಪಕರಣಗಳನ್ನು ಅದರ ಅಜ್ಜ-ಅಜ್ಜಿ ಉಡುಗೊರೆಯಾಗಿ ಕೊಡುತ್ತಾರೆಂಬುದು ಸಂತಾನದ ಬಗೆಗಿನ ಗಾಢವಾದ ಪ್ರೀತಿಯೊಂದಿಗೆ ವಿದ್ಯೆಗೆ ಕೊಟ್ಟ ಮಹತ್ತ್ವವನ್ನೂ ಸೂಚಿಸುತ್ತದೆ.



89 ಉಪನಯನ: ಶ್ರೀಸಾವಿತ್ರೀ ಉಪದೇಶ

ಮಿತ ವೈದ್ಯಕೀಯ ಜ್ಞಾನವು ನಿರಾತಂಕವನ್ನುಂಟುಮಾಡುವ ಸ್ಥಿತಿಯಲ್ಲಿರದ ದಿನಗಳಲ್ಲಿ ಬಾಲಕರ ಕ್ಷೇಮದ ಬಗೆಗೆ ಅಂಜಿಕೆ ಇತ್ತು. ಈ ಹಂತದ ಆಚರಣೆಗಳು ಬಾಲಕನ ಕ್ಷೇಮಕ್ಕಾಗಿ ಮತ್ತು ಅದಕ್ಕಿಂತ ಹೆಚ್ಚಾಗಿ ಆತನ ಭವ್ಯ ಭವಿಷ್ಯಕ್ಕಾಗಿ ಹಾತೊರೆಯುವ ಮನೋಭಾವದವಾಗಿವೆ (ಚಿತ್ರ 88, 89, 90).



90 ಉಪನಯನ: ತಾಯಿಯಿಂದ ಮೊದಲ ಭಿಕ್ಷೆ ಸ್ವೀಕರಿಸುತ್ತಿರುವ ವಟು

ಖ. ವಿವಾಹ ಸಂಪ್ರದಾಯಗಳು :

ಸಂಕೀರ್ಣ ಸ್ವರೂಪದ ದಟ್ಟವಾದ ರೂಢಿಯ ಆಚರಣೆಗಳು ಬೆಳೆದಿರುವುದು ವಿವಾಹಕ್ಕೆ ಹೊಂದಿಕೊಂಡಂತೆ. ಸಂಕೇತಿಗಳಲ್ಲಿ ಅತಿಶಯವಾಗಿ ಕಾಣಿಸುವ ಸಂದರ್ಭಗಳನ್ನು ಇಲ್ಲಿ ಅವಲೋಕಿಸಿದೆ.

1. ಕನ್ಯೆಯ ಆಯ್ಕೆ : ಪರ್ಯಾಯ : ಅಪಸ್ತಂಬರು ಕನ್ಯೆಯನ್ನು ಆರಿಸುವುದಕ್ಕೆ ಕೊಟ್ಟ ನಿರ್ದೇಶನಕ್ಕೆ[5] ಪರ್ಯಾಯವಾಗಿ ಬೆಳೆದ ರೂಢಿಯ

5 ವಿವಿಧ ಬಗೆಯ ಬೀಜಗಳ ಮಿಶ್ರಣ, ಯಜ್ಞವೇದಿಯ ಪುಡಿಮಣ್ಣು, ಹೊಲದ ಹೆಂಟೆ, ಸಗಣಿ, ಶ್ಮಶಾನದ ಮಣ್ಣು ಹೆಂಟೆ - ಈ ಐದು ವಸ್ತುಗಳನ್ನು ಮಡಿಕೆಗಳಲ್ಲಿ ಮುಚ್ಚಿ ವಧುವಿನ ಮುಂದೆ ಇಡಬೇಕು. ಆಕೆ ಅವುಗಳಲ್ಲೊಂದನ್ನು ಮುಟ್ಟುವಂತೆ ಹೇಳಬೇಕು. ಇದು ಆಪಸ್ತಂಬ ಗೃಹ್ಯಸೂತ್ರದಲ್ಲಿ ವಿಧಿಸಿದ ರೀತಿ.



91 ವಿವಾಹ : ನಿಶ್ಚಿತಾರ್ಥ : ಫಲತಾಂಬೂಲ ವಿನಿಮಯ

ಆಚರಣೆಯೊಂದು ಹೀಗಿದೆ: ಅರಿಶಿನ, ಕುಂಕುಮ, ವಿಭೂತಿಯ ಮೂರು ಪೊಟ್ಟಣಗಳನ್ನಿಡುವುದು; ಮಕ್ಕಳನ್ನು ಕರೆದು, ಅವುಗಳಲ್ಲಿ ಒಂದನ್ನು ಮುಟ್ಟುವಂತೆ ಹೇಳುವುದು. ಅರಿಶಿನವನ್ನು ಆರಿಸಿದರೆ ಅತ್ಯುತ್ತಮ; ಕುಂಕುಮ ಮಧ್ಯಮ; ವಿಭೂತಿ ಅಧಮ ಎಂದು ನಿರ್ಣಯಿಸುವುದು. ಅಪಸ್ತಂಬರ ಕ್ರಮದಂತೆ ಶ್ಮಶಾನದ ಮಣ್ಣನ್ನು ಇದಕ್ಕೆ ಉಪಯೋಗಿಸಲು ಹಿಂಜರಿದ ಮನಸ್ಸು, ಸರಳ ಮಾರ್ಗವನ್ನು ರೂಪಿಸಿಕೊಂಡಿರುವುದು ಇಲ್ಲಿ ಸ್ಪಷ್ಟವಾಗಿದೆ.

2. ನಿಶ್ಚಿತಾರ್ಥ: ನೈತಿಕಪತನ: 'ನಿಶ್ಚಿತಾರ್ಥ'ವೂ ಮೊದಲಿಗೆ ಕೇವಲ ಬಾಯಿಮಾತಿನ ಒಪ್ಪಂದವಾಗಿ ಆಚರಣೆಯಲ್ಲಿತ್ತು. ವಧುವಿನ ತಂದೆ (ಮಾತ್ರ) ವರನಕಡೆಯ ಹಿರಿಯರಿಗೆ ಕೊಡುವ 'ಫಲ ತಾಂಬೂಲ'ವಾಗಿ ಬೆಳೆಯಿತು. ಅನಂತರ, ಅದೇ, ಫಲತಾಂಬೂಲದ ಪರಸ್ಪರ ವಿನಿಮಯದ ರೂಪ ತಾಳಿತು; ಲಿಖಿತರೂಪದ ಒಡಂಬಡಿಕೆಯಾಗಿ ನೈತಿಕ ಪತನವನ್ನೂ ತೋರಿಸಿತು. ಲಗ್ನ ಕಟ್ಟಿಸುವ ವಿಸ್ತಾರವಾದ ಮತ್ತು ಸಂಭ್ರಮದ ಸಮಾರಂಭವಾಗಿ ಕೂಡ ರೂಪುಗೊಂಡಿತು (ಚಿತ್ರ 91) - ಹೀಗೆ ಬೆಳವಣಿಗೆ ಹೊಂದಿದ 'ನಿಶ್ಚಿತಾರ್ಥ'ವು ಕಾಲಕ್ರಮದಲ್ಲಿ ಆದ ನೈತಿಕ ಅಧಃಪತನ ಮತ್ತು ಆಚಾರದ ಬೆಳವಣಿಗೆಯ ಒಂದು ನಿದರ್ಶನವಾಗಿದೆ. 'ಲಗ್ನಕಟ್ಟಿಸಿ'ದ ಸಮಾರಂಭದ ಅನಂತರ ವರನ ಕಡೆಯವರು ವಧುವಿನ ಮನೆಯಲ್ಲಿ ಅಂದು



92 ವರಪೂಜೆ : ವರನಿಗಾಗಿ ಸಿದ್ಧವಾದ ಕಾಣಿಕೆಗಳು

ಉಳಿದುಕೊಳ್ಳುವಂತಿಲ್ಲ ಎಂಬ ನಿಷೇಧವು ಹೊಸ ಬೆಳವಣಿಗೆ ಎಂಬುದೂ ಅದರಿಂದಲೇ ಸ್ಪಷ್ಟವಾಗುತ್ತದೆ.



93 ವರನಿಗೆ ಅತ್ತೆಯಿಂದ 'ವಸ್ತ್ರಕಾಣಿಕೆ'

3. ಸಂಭ್ರಮಗಳು: ಮದುವೆಯ ವಿವರಗಳು ಧಾರ್ಮಿಕ ಆಚರಣೆಗಳ ಜೊತೆಗೆ ವಿಪುಲವಾದ ಸಂಭ್ರಮ, ಮನೋರಂಜನೆಗಳ ವಿವರಗಳನ್ನು ಒಳಗೊಂಡಿವೆ. ಕೆಲವು ಸಾಂಕೇತಿಕ ಆಚರಣೆಗಳೂ ಇದರಲ್ಲಿ ಸೇರಿವೆ. ಮದುವೆಯ ಪೂರ್ವಾಂಗವೆಲ್ಲವೂ ಕೊಡುವ-ತೆಗೆದುಕೊಳ್ಳುವ, ಸ್ವಾಗತಿಸುವ-ಉಪಚರಿಸುವ ಪೀಠಿಕಾ ರೂಪದ ಆಚರಣೆಗಳಿಂದ ಕೂಡಿವೆ. (ಚಿತ್ರ 92, 93, 94, 95)



94 ವರಪೂಜೆ : ಮಾವನಿಂದ ವರನಿಗೆ ವಸ್ತ್ರಾದಿ ಕಾಣಿಕೆ



95 ವರಪೂಜೆ : ವಧುವಿಗೆ ಮಡಿಲು ತುಂಬುತ್ತಿರುವ ವಧುವಿನ ಕಡೆಯ ಹಿರಿಯ ಮುತ್ತೈದೆ



96 ಉಂಗುರ ತೊಡಿಸುವುದು : ವಧುವಿನ ಕೈ ಬೆರಳಿಗೆ ಉಂಗುರ ತೊಡಿಸುತ್ತಿರುವ ಅತ್ತೆ



97 ಗೌರಿಪೂಜೆ ಮಾಡಿಸಿ ವಧುವಿಗೆ ಮಾಂಗಲ್ಯ ಕಟ್ಟುತ್ತಿರುವ ತಾಯಿ



98 ಗೌರೀಪೂಜೆ ಮಾಡಿಸಿ ವಧುವಿಗೆ ಕಾಲುಂಗರ ತೊಡಿಸುತ್ತಿರುವ ಅತ್ತೆ. ಕೆಲವರಲ್ಲಿ ತಾಯಿಯೇ ತೊಡಿಸುವ ರೂಢಿಯೂ ಉಂಟು



99 ದಕ್ಷಿಣದಲ್ಲಿಯೂ ಮತ್ತೂರಿನಲ್ಲಿಯೂ ವರನೇ ವಧುವಿಗೆ ಕಾಲುಂಗರ ತೊಡಿಸುವುದು ರೂಢಿ

4. **'ಉಂಗುರುಡಿಸರದ್':** ಸಂತೋಷಾಚರಣೆಗಳಲ್ಲಿ ಪುನರಾವರ್ತನೆ, ವಿಸ್ತರಣೆ, ಅತಿಶಯಕ್ಕೆ ಮಿತಿ ಇರುವುದಿಲ್ಲ. ಅವಕ್ಕೆ ಶುಭಾಕಾಂಕ್ಷೆ, ನಲಿವು, ಸದ್ಭಾವವನ್ನು ಬಿಟ್ಟು ಬೇರೆ ಅರ್ಥವೂ ಇರುವುದಿಲ್ಲ. 'ವರಪೂಜೆ' ಎಂಬ ಇಡೀ ಪ್ರಕರಣವು ಇಂಥ ವಿವರಗಳಿಂದಲೇ ಇಡಿಕಿರಿದಿದೆ. ಅದರಲ್ಲಿನ ಒಂದು ಆಚರಣೆ 'ಉಂಗುರುಡಿಸರದ್' (ಉಂಗುರುಡಿಸುವುದು).

ಅದರ ವಿವರ ಹೀಗಿದೆ: ವಧುವನ್ನೂ ಅವಳ ತಾಯಿಯನ್ನೂ ಹಸೆಯ ಮೇಲೆ ನಿಲ್ಲಿಸಿ ವರನ ತಾಯಿ ಮತ್ತು ಬಂಧುಗಳು ಮಂಗಳದ್ರವ್ಯದೊಡನೆ ತಂದಿರುವ ಮಾಂಗಲ್ಯ, ಉಂಗುರ, ಸೀರೆ, ಕಾಲುಂಗುರ, ಕಡಲೆಕಾಳು, ಅರಿಶಿನದಕೊನೆ, ಬಾಳೆಯಹಣ್ಣು, ವೀಳ್ಯವನ್ನು ಬಲಕ್ಕೆ ಬರುವಂತೆ ವಧುವು ಹೊದೆದಿರುವ ಸೆರಗಿನಲ್ಲಿ ತುಂಬುತ್ತಾರೆ. ವರನ ತಾಯಿಯೇ ವಧುವಿಗೆ ಕಾಲುಂಗುರ, ಉಂಗುರ, ಬಳೆ, ತೊಂಡಿಲು ತೊಡಿಸುತ್ತಾಳೆ. ಇಂಥ ಆಚರಣೆಗಳೆಲ್ಲವೂ ಸಮಾನತೆ, ಸದ್ಭಾವ, ಸಂಭ್ರಮದ ಚಿಹ್ನೆಗಳು (ಚಿತ್ರ 96, 97, 98, 99).



100 ವಿವಾಹದ ದಿನ: ಕಾಶಿಯಾತ್ರೆಗೆ ಮೊದಲು ವರನಿಗೆ ಸೋದರಿಯರಿಂದ ಅಲಂಕಾರ



101 ವಧುವಿನಿಂದ ಅಶ್ವತ್ಥ ವೃಕ್ಷದ ಪೂಜೆ




102 ಕಾಶಿಯಾತ್ರೆ: ಕಾಶಿಯಾತ್ರೆಗೆ ಹೊರಟ ಯುವಕನನ್ನು ತನ್ನ ಮಗಳನ್ನು ವಿವಾಹವಾಗಿ ಒಟ್ಟಿಗೆ ಕಾಶಿಯಾತ್ರೆಗೆ ಹೋಗುವಂತೆ ಬೇಡುತ್ತಿರುವ ವಧುವಿನ ತಂದೆ ತಾಯಿಗಳು



103 ಧಾರೆ: ವಧುವಿನ ತಂದೆಯು, ಬತ್ತ ತುಂಬಿದ ಕುಕ್ಕೆಯಲ್ಲಿ ಮಗಳನ್ನು ತೊಡೆಯ ಮೇಲೆ ಕೂರಿಸಿಕೊಂಡು ಧಾರೆ ಎರೆದುಕೊಡುತ್ತಾನೆ

5. ಕೆಲವು ವಿಶೇಷಗಳು : ಸಂಕೇತಿಗಳ ಸಾಂಸ್ಕೃತಿಕ ಸಂದರ್ಭದಲ್ಲಿ ಗುರುತಿಸಬಹುದಾದ ಕೆಲವು ವಿಶೇಷಗಳು ಹೀಗಿವೆ:

0.1 ವಧುವಿನ ತಾಯಿಯು ಧಾರೆ ಎರೆದನಂತರ ವಧುವಿನ ಸ್ತ್ರೀ ಸಂಬಂಧಿಗಳು ಮಾತ್ರ ಧಾರೆ ಎರೆಯುವುದು (ತಾಯಿಯೊಬ್ಬಳೇ ಧಾರೆ ಎರೆಯಬಹುದಾದುದು ಅರ್ಥಪೂರ್ಣ. ಆದರೆ ಸ್ತ್ರೀ



104 ಸಪ್ತಪದಿ: ವಿವಾಹದ ಅರ್ಥಪೂರ್ಣ ಮತ್ತು ಬಹುಮುಖ್ಯವಿಧಿ

ಸಂಬಂಧಿಗಳೆಲ್ಲರೂ ಆತ್ಮೀಯವಲಯದವರು ಎಂಬುದನ್ನೂ ಇದು ಸಮರ್ಥಿಸುತ್ತದೆ). ಧಾರೆಗೆ ಅಕ್ಕಿಹಾಕದಿರುವುದು ಸಂಕೇತಿಗಳ ವಿಶೇಷ. ಮೊದಲು ಗಂಗೆ, ಅನಂತರ ಹಾಲು ನೀರು ಬಳಸಿ ಧಾರೆ ಎರೆಯುತ್ತಾರೆ (ಚಿತ್ರ 100, 101, 102, 103, 104, 105).

0.2 ವರನು ವಧುವಿಗೆ ಹೊದಿಸಿಕೊಡುವ ಹದಿನಾರು ಮೊಳದ 'ಸಂಕಲಿಕೆಸೀರೆ'ಯನ್ನು, ವಧುವು ಮಾಂಗಲ್ಯಧಾರಣೆಯ ವೇಳೆ 'ದ್ರಾವಿಡ ಸಂಪ್ರದಾಯ'ದಂತೆಯೇ ಉಡುವುದು.



105 ಯುಗಚ್ಛಿದ್ರ ಪ್ರತಿಷ್ಠಾಪನೆ

0.3 ವಧುವಿನ ಸೊಂಟಕ್ಕೆ ಕಟ್ಟಿರುವ ಯೋಕ್ತ್ರವನ್ನು ವರನು ಬಿಚ್ಚಿದಾಗ ವಧುವಿನ ಸೋದರತ್ತೆಯರು ವಧುವಿಗೆ ಬಳುವಳಿಯಾಗಿ ಚಿನ್ನದ ಉಂಗುರವನ್ನು ಕೊಡುವುದು. ಇದಕ್ಕೆ 'ಅತ್ತೆ ಚರಂಗ್' ಎನ್ನುತ್ತಾರೆ.

0.4 ಕನ್ಯೆಯ ಹೆಬ್ಬೆರಳನ್ನೂ ಸೇರಿಸಿ



106 ಮಾಂಗಲ್ಯಧಾರಣೆಗೆ ಮುಂಚೆ 'ಊಂಜಲ್'

ಪಾಣಿಗ್ರಹಣಮಾಡುವ ಕ್ರಮದಲ್ಲಿ ಗಂಡು ಮತ್ತು ಹೆಣ್ಣು ಮಕ್ಕಳ ಸಮಾನ ಅಪೇಕ್ಷೆ ವ್ಯಕ್ತವಾಗುತ್ತದೆ.[6]

0.5 ವಿವಾಹದ ಪ್ರಧಾನ ಹೋಮಕ್ಕೆ ಅಗ್ನಿಯನ್ನು ತಂದುಕೊಡುವ ವಧುವಿನ ತಾಯಿಗೆ ವರನ ಕಡೆಯವರು ಕೊಡುವ ರೇಷ್ಮೆಸೀರೆ ಹಾಗೂ ಕಣದ 'ಯಜ್ಞೇಶ್ವರ ಕಾಣಿಕೆ' (ಇದು ಕೌಶಿಕ ಸಂಕೇತಿಗಳಲ್ಲಿ ಮಾತ್ರ ಇರುವ) ಮತ್ತೊಂದು ವಿಶೇಷ.

6. **ಕ್ರೀಡಾಚರಣೆಗಳು:** ಬಾಲ್ಯವಿವಾಹದ ಸಂದರ್ಭದಲ್ಲಿ ಮಕ್ಕಳ ಆಕರ್ಷಣೆಯನ್ನು ಹಿಡಿದಿಡುವ ಮಾಧ್ಯಮಗಳಾಗಿದ್ದ ಉರುಟಣೆ, ಉಯ್ಯಾಲೆ ಸಾಮಾನ್ಯವಾದವು (ಚಿತ್ರ 106). ಇತರ ಕೆಲವು ಆಚರಣೆಗಳನ್ನು ಈಗ ನೋಡಬಹುದು.



107 ಮಾಯಿಪಳಮ್ ಸಭೆಯ ದೃಶ್ಯ

0.1 ಗುಬ್ಬಿ ಬಡಿಯರದ್ (ಗುಬ್ಬಿ ಬಡಿಯುವುದು): ನಾಲ್ಕು ದಿನವೂ ದಂಪತಿಗಳನ್ನು ಒಟ್ಟಿಗೆ ನಿಲ್ಲಿಸಿ ಸ್ನಾನ ಮಾಡಿಸುವುದು, ಅರಿಶಿನ ಬೆರೆಸಿದ ಗೋಧಿಹಿಟ್ಟಿನಿಂದ ಮಾಡಿದ ಬೆಲೂನುಗಳಿಂದ ಗಂಡು ಹೆಣ್ಣುಗಳು ಪರಸ್ಪರರ ಬೆನ್ನಿಗೆ ಶಬ್ದಬರುವ ಹಾಗೆ ಬಡಿಯುವುದು, ಇತ್ಯಾದಿಗಳನ್ನು ಈ ಆಚರಣೆ ಒಳಗೊಳ್ಳುತ್ತದೆ.



108 ಮಾಯಿಪಳಮ್ ಸಭೆಯ ದೃಶ್ಯ

0.2 ಪಾಲ್ ನೈ ಅಟ್ಟರದ್ (ಹಾಲು, ತುಪ್ಪ ಹಾಕುವುದು) : ವಧುವರರು ಪರಸ್ಪರರಿಗೆ ಹಾಲು, ಬಾಳೆಯಹಣ್ಣು ಊಡಿಸುವುದು ಇಲ್ಲಿ ಸಮಾವೇಶಗೊಳ್ಳುತ್ತದೆ.

7. ಕೋಡಂಗಿ ಸಭೆ: ಅವರ ಮನೋರಂಜನೆಯ ಭಾಗವಾದರೂ, ಕರ್ನಾಟಕದಲ್ಲಿ ಮಾತ್ರ ಇರುವ ಐತಿಹಾಸಿಕ ಮಹತ್ತ್ವದ ಆಚರಣೆ 'ಮಾಯಿಪಳಮ್ ಸಭೆ' (ಕೋಡಂಗಿ ಸಭೆ) (ಚಿತ್ರ 107, 108)

---

6 ಕೇವಲ ಹೆಬ್ಬೆರಳು ಹಿಡಿದುಕೊಳ್ಳುವುದು ಪುತ್ರಾಪೇಕ್ಷೆಯಿಂದ; ಕೇವಲ ಇತರ ಬೆರಳುಗಳನ್ನು ಹಿಡಿದುಕೊಳ್ಳುವುದು ಸ್ತ್ರೀಸಂತಾನಾಪೇಕ್ಷೆಯಿಂದ; ಎಲ್ಲ ಬೆರಳುಗಳನ್ನೂ ಸೇರಿಸಿ ಹಿಡಿದುಕೊಳ್ಳುವುದು ಪುತ್ರ ಮತ್ತು ಸ್ತ್ರೀ ಎರಡೂ ಸಂತಾನದ ಅಪೇಕ್ಷೆಯಿಂದ ಎಂಬುದು ಸೂತ್ರ ನಿರ್ದೇಶನ.

ಇದು ವಿವಾಹದ ಮೂರನೆಯ ದಿನ ನಡೆಯುತ್ತದೆ. ಬಾಳೆಕಾಯಿಯನ್ನು ಬಿಲ್ಲೆಯಾಕಾರದಲ್ಲಿ ಹಚ್ಚಿ ಅದನ್ನು ಪೋಣಿಸಿ ಸರ, ಕಡಕು, ಕೈಕಂಕಣ, 'ರುದ್ರಾಕ್ಷಿಸರ' ಮಾಡುತ್ತಾರೆ. ಅಡಿಕೆಪಟ್ಟೆಯನ್ನು ಕೋನಾಕಾರದ ಕುಲಾವಿಮಾಡಿ ಅದಕ್ಕೆ ಅರಿಶಿನ ಕುಂಕುಮದ ಬಟ್ಟಿಟ್ಟು ಅಲಂಕಾರ ಮಾಡುತ್ತಾರೆ. ಟೋಪಿಯ ತುದಿಗೆ ಹಪ್ಪಳವನ್ನು ಛತ್ರಿಯಂತೆ ಸಿಕ್ಕಿಸಿರುತ್ತಾರೆ. ವರ ಮತ್ತು ಆತನ ಸೋದರಮಾವ ಇಬ್ಬರೂ ಹೀಗೆ ಅಲಂಕೃತರಾಗುತ್ತಾರೆ. ಇಬ್ಬರಿಗೂ ಮೈಗೆಲ್ಲ ತ್ರಿನಾಮಗಳನ್ನು ಹಾಕಿರುತ್ತಾರೆ. ಹಸೆಯಮೇಲೆ ಕುಳಿತ ಈ ಇಬ್ಬರೂ ಹೆಮ್ಮಿಗೆಯಲ್ಲಿ ಶ್ರೀವೈಷ್ಣವರಾಗಿ ಮತಾಂತರ ಹೊಂದಿದ ಸಂಕೇತಿ ಪ್ರತಿನಿಧಿಗಳು. ಸಭಾಸದರು ಅವರೊಂದಿಗೆ (ಮೂಲ) ತಮಿಳಿನಲ್ಲಿಯೇ ಸಂಭಾಷಿಸುತ್ತಾರೆ. ವಿಶಿಷ್ಟಾದ್ವೈತ ಮತ್ತು ಅದ್ವೈತ ಸಿದ್ಧಾಂತಗಳ ಗಂಭೀರ ಚರ್ಚೆಯೇ ಇಲ್ಲಿ ನಡೆಯುತ್ತದೆ.[7] ಈ ಪ್ರಹಸನದ ಉದ್ದೇಶವು ಮತಾಂತರಿಗಳನ್ನು ಅಣಕಿಸುವುದೇ ಆಗಿರುತ್ತದೆ. ಇತಿಹಾಸವನ್ನು ವರ್ತಮಾನದಲ್ಲಿ ಅನುಭವಕ್ಕೆ ತರುತ್ತಿರುವ ಒಂಬತ್ತು ಶತಮಾನಗಳಷ್ಟು ಹಳೆಯದಾದ ಆಚರಣೆ ಇದು.

8. **ಭೋಜನಕೂಟ:ಆತ್ಮೀಕರಣಸಾಧನ:** ಚತುರ್ಥಿಸಭೆಯ ಮಾರನೆಯ ದಿನ ನಡೆಯುವ 'ನಾತ್ನಾಡಕೋಲು' (ನಾದಿನಿಯ ಅಲಂಕಾರ) ಹುಡುಗನ ಸೋದರಿಯರು ವಧುವಿಗೆ ಅಲಂಕಾರ ಮಾಡುವ ಭೋಜನಕೂಟ. ನಾಲ್ಕನೆಯ ದಿನ ಗಂಡಿನವರು ಮಾಡುವ ಭೋಜನಕೂಟವು 'ಮಾಮ್ನೆ ಸಂತರ್ಪಣ' (ವಧುವಿನ ಮಾವನ ಸಂತರ್ಪಣೆ); ಗಂಡಿನ ಕಡೆಯವರು, ವಿವಾಹ ಕಳೆದನಂತರ ವಧುವರರಿಗೆ ಆಶೀರ್ವದಿಸಲೆಂದೇ ನಡೆಸುವ ಭೋಜನಕೂಟ 'ಓಟ್ ಸಮಾರಾಧನೆ' (ವರನ ಮಾವನ ಸಂತರ್ಪಣೆ) - ಭೋಜನಕೂಟಗಳೂ ಆತ್ಮೀಕರಣದ ಮಾಧ್ಯಮಗಳಾಗಿ ಬಳಕೆಯಾಗಿರುವುದು ಹೀಗೆ. ವಿವಾಹಾನಂತರ ವಧುವಿನ ತಾಯಿಯು ಅಳಿಯನ ಮನೆಯಲ್ಲಿ 'ಸಂಸಾರ ಹೂಡಿಸಿ' ಬರುವುದು ಕೂಡ ನವವಿವಾಹಿತೆಯು ಹೊಸ ವಾತಾವರಣಕ್ಕೆ ಹೊಂದಿಕೊಳ್ಳಲು ನೆರವಾಗುವ ಅಂಶವಾಗಿದೆ.

9. **ಸಾಂಕೇತಿಕ ವಿಧಿಗಳು :** ಔಪಚಾರಿಕ ವಿಧಿಗಳು ಸ್ನೇಹವನ್ನು ಬೆಳೆಸಿದರೆ ಸಾಂಕೇತಿಕ ವಿಧಿಗಳು ಬಾಂಧವ್ಯವನ್ನು ಬೆಸೆಯುತ್ತವೆ. ವಿವಾಹೋತ್ತರ ಆಚಾರಗಳೂ ಆತ್ಮೀಕರಣದ ಅತಿಮುಖ್ಯ ಮುಂದುವರಿಕೆಗಳಾಗಿವೆ. ವಧುವಿನ 'ಗೃಹಪ್ರವೇಶ'ವು ಅಂಥ ವಿವರಗಳಿಂದಲೇ ಕೂಡಿದೆ. ಅವುಗಳಲ್ಲಿ ಉಲ್ಲೇಖನೀಯವಾದವು:

0.1 ಮುತ್ತು ಪವಳು ವಾಂಗರದ್ (ಮುತ್ತು ಹವಳ ತೆಗೆಯುವುದು): ವಿವಾಹಾನಂತರ ಮನೆ ತುಂಬಿಸಿಕೊಂಡ ವಧುವನ್ನು ವರನ ತಾಯಿಯು ನೇರವಾಗಿ ದೇವರಮನೆಗೆ ಕರೆದೊಯ್ಯುತ್ತಾಳೆ. ಎರಡು ಬೆಳ್ಳಿ ತಂಬಿಗೆಗಳಲ್ಲಿ ನೀರು ತುಂಬಿ ಚಿನ್ನದ ಒಡವೆಗಳನ್ನು ಮುಳುಗಿಸಿಟ್ಟಿರುತ್ತಾರೆ. ವಧುವು ತಂಬಿಗೆಗೆ ಕೈಹಾಕುತ್ತಾಳೆ. ಸುತ್ತ ಇರುವ ಸುಮಂಗಲೆಯರು 'ಇದು ಏನು?' ಎನ್ನುತ್ತಾರೆ. ವಧುವು 'ಮುತ್ತು, ಪವಳು' (ಮುತ್ತು, ಹವಳ) ಎನ್ನುತ್ತಾಳೆ. ಒಡವೆಗಳನ್ನು ತೆಗೆದು ತೊಟ್ಟುಕೊಳ್ಳುತ್ತಾಳೆ (ಚಿತ್ರ 109). ಹೊಸಿಲಿನ ಮೇಲಿನ ಅಕ್ಕಿಪಡಿಯನ್ನು 'ಮನೆತುಂಬಿಸಿ' ತನ್ನ ಮಡಿಲಿನ ಸೋಗಲಕ್ಕಿಯನ್ನು ಮನೆಯಲ್ಲಿ ಹರಡುತ್ತಾ ಪ್ರವೇಶಿಸಿದ ವಧುವು ಸಮೃದ್ಧಿಯ ಸಂಕೇತವಾಗುತ್ತಾಳೆ. ಅವಳ 'ಕಾಲಗುಣ'ದ ನಿರೀಕ್ಷೆ ಇದಾದರೆ, ಕೈಹಾಕಿದಲ್ಲಿ ಒಡವೆಗಳು ದೊರೆಯುವ 'ಕೈಗುಣ' ಮೇಲಿನ ಆಚರಣೆಯ ಆಶಯವಾಗಿದೆ.



109 ಮುತ್ತು, ಹವಳ ತೆಗೆಯುವುದು

0.2 ಸಕ್ಕರೆ ವಾಳಾಪ್ಪೂ ಕುಡರದ್ (ಸಕ್ಕರೆ, ಬಾಳೆಹಣ್ಣು ಕೊಡುವುದು): ಅದೇ ವೇಳೆಯಲ್ಲಿ ನಡೆಯುವ ಆತ್ಮೀಕರಣ ಪ್ರಕ್ರಿಯೆ ಇದು: ವಧುವು ಹಸೆಯ ಮೇಲೆ ದೇವರಕೋಣೆಯಲ್ಲಿಯೇ ಕೂರುತ್ತಾಳೆ. ವರನ

7 ಮೂಲ ಉದ್ದೇಶವು ಒಂದೇ ಆದರೂ ವಿವರಗಳಲ್ಲಿ ಪಾಠಭೇದವು ಪ್ರಾದೇಶಿಕವಾಗಿ ಕಾಣುವುದುಂಟು. ನೋಡಿ: ಬೆಟ್ಟದಪುರ ಸಂಕೇತಿಸಂಘ ಸ್ಮರಣ ಸಂಚಿಕೆ; ಬೆಟ್ಟದಪುರ ಸಂಕೇತಿ ವಿವಾಹಪದ್ಧತಿ ಅಂದು, ಇಂದು; ಶಾರದಮ್ಮ, ರು.ಗೋ.ರಾಮಸ್ವಾಮಿ; ೧೯೮೮, ಪು.೨೩-೨೪.



110 ಸಕ್ಕರೆ ಬಾಳೆಹಣ್ಣು ತಿನ್ನಿಸುವುದು

ಮನೆಯವರೊಂದಿಗೆ ಪರಸ್ಪರ ಪರಿಚಯ ಇಲ್ಲಿಯೇ ನಡೆಯುತ್ತದೆ. ಒಂದು ತಟ್ಟೆಯಲ್ಲಿ ಸಕ್ಕರೆ ಬಾಳೆಹಣ್ಣು ಇಟ್ಟಿರುತ್ತಾರೆ. ಪ್ರತಿಯೊಬ್ಬರೂ ಒಂದು ಚೂರು ಬಾಳೆಯ ಹಣ್ಣನ್ನು ಸಕ್ಕರೆಯಲ್ಲಿ ಅದ್ದಿ ಆಕೆಗೆ ಕೊಡುತ್ತಾರೆ, ತಾವೂ ತಿನ್ನುತ್ತಾರೆ (ಚಿತ್ರ 110). 'ನನ್ನನ್ನು ಕಂಡರೆ ಚೆನ್ನಾಗಿರಿ' ಎಂದು ಸ್ವಾಗತಿಸುತ್ತಾರೆ. ಮುಜುಗರವು ದೂರವಾಗಿ ಹೊಸಮನೆಯಲ್ಲಿ ಒಂದಾಗುವ ರೀತಿ ಇದು. ವಧುವಿನ ಮನೆಯಲ್ಲಿ ನಡೆಯುವ ವರೋಪಚಾರದ ವಿವರಗಳಿಗೆ ಸಮಾಂತರವಾದವು ಗೃಹಪ್ರವೇಶದ ವೇಳೆ ವರನ ಮನೆಯಲ್ಲಿ ನಡೆಯುವ ವಧೂಪಚಾರಗಳಾಗಿವೆ.

ವಿವಾಹ ಸಂದರ್ಭದ ಆಚರಣೆಗಳಲ್ಲಿ, ವಧುವರರ ಆಯ್ಕೆ ಮತ್ತು ನಿಶ್ಚಿತಾರ್ಥದ ಸಂದರ್ಭವನ್ನು ಬಿಟ್ಟರೆ ಉಳಿದಂತೆ ಆತಂಕದ ಸೋಂಕು ಇರುವುದಿಲ್ಲ. ದಾಂಪತ್ಯವನ್ನು ಭದ್ರವಾಗಿ ಬೆಸೆಯುವ ಮತ್ತು ಯೋಗ್ಯ ಸಂತಾನಕ್ಕೆ ಪಾತ್ರರಾಗುವಂತೆ ಅಣಿಗೊಳಿಸುವ ಧಾರ್ಮಿಕವಿಧಿಗಳ ಜೊತೆಜೊತೆಗೇ ಸಂಭ್ರಮ, ಉಲ್ಲಾಸ, ಬಾಂಧವ್ಯದ ಆತ್ಮೀಕರಣ, ವಧುವರರ ಮನಸ್ಸು ಪರಸ್ಪರವಾಗಿ ಒಗ್ಗುವಂತೆ ಮಾಡುವ ವಿಪುಲ ಲೌಕಿಕ ಸ್ವರೂಪದ ಆಚರಣೆಗಳೂ ಬೆಳೆದಿವೆ. ಇವುಗಳ ಇತರ ಪ್ರಯೋಜನಗಳು ಅಲ್ಲಿ ಗೌಣವಾದವು. ಆದರೆ, ಸಂಕೇತಿಗಳಿಗೇ ಗಾಢವಾಗಿ ವಿಶೇಷವಾದ ಕೆಲವು ಸಾಂಸ್ಕೃತಿಕ ಅಭಿವ್ಯಕ್ತಿಗಳು ವಿವಾಹದ ಸಂದರ್ಭದಲ್ಲಿ ಸೇರಿವೆ ಎಂಬುದು ಇಲ್ಲಿ ಸ್ಪಷ್ಟವಾಗಿದೆ.

೩೦. ಇತರ ವಿಶೇಷಗಳು:

ಸಂಕೇತಿಗಳ ಸಾಂಸ್ಕೃತಿಕ ಸಂದರ್ಭದಲ್ಲಿ ವಿಶೇಷವಾದ ಕೆಲವು ಆಚರಣೆಗಳನ್ನು ಇಲ್ಲಿ ಬೇರೆಯಾಗಿ ಅವಲೋಕಿಸಿದೆ. ಇವು ಸಂಸ್ಕಾರಗಳ ಸಾಮಾನ್ಯ (general) ಆಚರಣೆಗಳು:

1. **ಆಬ್ದೀಕು ಬೀರರದ್ (ಆಬ್ದೀಕ ಬೀರುವುದು):** ಚೌಲ, ಉಪನಯನ, ವಿವಾಹಗಳಿಗೆ ಸಂಬಂಧಿಸಿದಂತೆ, ದೇವರ ಸಮಾರಾಧನೆಯ ಸಂಜೆ ಅಥವಾ ಅದರ ಮುನ್ನಾದಿನ, ಸುಮಂಗಲೆಯರು ಮಂಗಳವಾದ್ಯದೊಂದಿಗೆ ಎಲ್ಲರ ಮನೆಗೆ ಹೋಗಿ ಆಚರಿಸುವ ವಿಶಿಷ್ಟವಿಧಿ 'ಆಬ್ದೀಕು ಬೀರರದ್' (ಆಬ್ದೀಕ ಬೀರುವುದು). ಅರಿಶಿನ ಕುಂಕುಮ ಕೊಟ್ಟು ಅರಿಶಿನಪಟ್ಟೆ, ತೇಂಗೊಳಲು, ಬಾಡಿಸದ ಉದ್ದಿನಹಪ್ಪಳ, ಚಕ್ಕುಲಿ, ಬಾಗಿನಕ್ಕೆ ಐದು ವಿಧದ ಉಂಡೆಗಳು, ಚಿರೋಟಿ, ಫೇಣಿ, ಬೆಲ್ಲದ ಅಚ್ಚು ಇದನ್ನೆಲ್ಲಾ ಒಂದು ತಟ್ಟೆಗೆ ಹಾಕಿಕೊಡುತ್ತಾರೆ. ಸೌಟಿನಲ್ಲಿ ಎಣ್ಣೆ, ತುಪ್ಪವನ್ನೂ ಹಾಕಿಕೊಡುತ್ತಾರೆ. ಇದರ ಜೊತೆಗೆ ಉದ್ದಿನಬಟ್ಟೂ ಇರುತ್ತದೆ. ತನ್ನ ಹಳ್ಳಿಯ ಎಲ್ಲ ಕುಟುಂಬಗಳನ್ನೂ ತನ್ನ ಸಂಭ್ರಮದ ತೆಕ್ಕೆಗೆ ತೆಗೆದುಕೊಳ್ಳುವ ಕ್ರಿಯೆ ಇದು. ಬಹಳ ವೆಚ್ಚದ ಈ ವಿಧಿಯು ಸಹಜವಾಗಿಯೇ ಕಣ್ಮರೆಯಾಗಿ ಅದರ ಜಾಗದಲ್ಲಿ ಸರಳವಾದ 'ಊರ್‌ವಟ್ಟ್‌ಬೀರರದ್' (ಊರಬಟ್ಟು ಬೀರುವುದು) (ಚಿತ್ರ 111) ಬಂದಿದೆ. ಇದರಲ್ಲಿ ಉದ್ದಿನ ನಾಲ್ಕೈದು ಬಟ್ಟುಗಳನ್ನಷ್ಟೆ



111 ಊರಬಟ್ಟು ಬೀರುವ ಮೊದಲು ಪೂಜೆ ಮಾಡಿ ಮುತ್ತೈದೆಯರು ಬಟ್ಟು ಸಿದ್ಧ ಪಡಿಸುವುದು ಕ್ರಮ



112 ಸಭೆಯ ದೃಶ್ಯ

ಬೀರಲಾಗುತ್ತದೆ. ಆ ಮೂಲಕ, ಮೇಲಿನ ಪರಿಕರಗಳಲ್ಲಿ ಉದ್ದಿನ (ಹಪ್ಪಳದ) ಬಟ್ಟುಗಳು ಪೂಜೆಯ ಮೂಲಕ ಸುಮಂಗಲೆಯರಿಂದ ವಿಧ್ಯುಕ್ತವಾಗಿ ಸಿದ್ಧಗೊಳ್ಳುವ ಪ್ರಾಧಾನ್ಯವು ಕೂಡ ವ್ಯಕ್ತವಾಗುತ್ತದೆ.

2. **ಸಭೆ :** ಸಮುದಾಯದ ಸಮಷ್ಟಿಪ್ರಜ್ಞೆ, ಸುಮಧುರ ಬಾಂಧವ್ಯ, ಸಾಂಸ್ಕೃತಿಕ ಔನ್ನತ್ಯಗಳಿಗೆ ದಟ್ಟವಾದ ನೆಲೆ 'ಸಭೆ' (ಚಿತ್ರ 112, 113). ಇಲ್ಲಿನ ಪ್ರತಿವಿವರವೂ ಜನಸಮ್ಮುಖತೆಯ ದೃಷ್ಟಿಯಿಂದ ಪ್ರಮುಖವಾದುದು:



113 ಸಭೆಯ ದೃಶ್ಯ

0.1 ಎಲ್ಲ ಸಂಸ್ಕಾರಗಳ ಪ್ರಾರಂಭದಲ್ಲಿ ಹಾಗೂ ಕರ್ಮದ ಮುಖ್ಯ ಸಂದರ್ಭಗಳಲ್ಲಿ ದೇವತೆಗಳು, ಗುರುಗಳು, ಹಿರಿಯರ ಅನುಜ್ಞೆ, ಆಶೀರ್ವಾದ ಪಡೆಯುತ್ತಾರೆ. ಮಹಾಜನಗಳು ತಿಥಿ, ವಾರ, ನಕ್ಷತ್ರದೋಷಗಳ ನಿವಾರಣೆಯಾಗಲಿ ಎಂದೂ ಹರಸುತ್ತಾರೆ.

0.2 ಸಭಾಪೂಜೆ ಎಂದರೆ ಕುಲದೇವತಾಸ್ವರೂಪಿಗಳಾದ (ಸಭಾಸದ) ಬ್ರಾಹ್ಮಣರಿಗೆ ಮಾಡುವ ಪೂಜೆ.

0.3 ವಿವಿಧ ಸಂದರ್ಭಗಳಲ್ಲಿ ಉಡುಗೊರೆಗಳನ್ನು ಕೊಡುವ ಸಂಪ್ರದಾಯವು ಎಲ್ಲ ಸಮುದಾಯಗಳಲ್ಲಿಯೂ ಇದೆ. ಸಂಕೇತಿಗಳು ಸಮಾರಂಭದ ಭಾಗವಾದ ಉಡುಗೊರೆಯನ್ನು 'ಓದಿಯರದ್' (ಓದಿಸುವುದು) ಎನ್ನುತ್ತಾರೆ. ಅದು ಮುಯ್ಯಿಮಾಡುವ ಮತ್ತು ತೀರಿಸುವ ರೀತಿಯದೇ. ಸಂಕೇತಿಗಳ ಸಾಂಸ್ಕೃತಿಕ ಸಂದರ್ಭದಲ್ಲಿ ಓದಿಸುವುದು (presentation) ಕೂಡ ಗುರು ಹಿರಿಯರ 'ಆಶೀರ್ವಾದ' ಸ್ವರೂಪದ್ದು ಎನ್ನುವುದು 'ಮೊದಲು' ಓದಿಸುವ ಆಚಾರ್ಯರು ಸಾಂಕೇತಿಕವಾಗಿ 'ಎಲೆ ಅಡಿಕೆ' ಕೊಡುವುದರಲ್ಲಿ ವ್ಯಕ್ತವಾಗುತ್ತದೆ.

0.4 ಸಮುದಾಯದ ಸಾಂಸ್ಕೃತಿಕ ಔನ್ನತ್ಯ ಮತ್ತು ಸಭ್ಯತೆಗೆ ಕನ್ನಡಿಹಿಡಿಯುವ 'ತಾಂಬೂಲ' ನೀಡುವ ಕಾರ್ಯಕ್ರಮವು ಸಭೆಯ ಮುಖ್ಯಭಾಗವಾಗಿದೆ. ಕೌಶಿಕ ಸಂಕೇತಿಗಳಲ್ಲಿ ಮೊತ್ತಮೊದಲ ತಾಂಬೂಲವು ತಮ್ಮ ಮೂಲನೆಲೆಯಾದ ಕೌಶಿಕದ ಲಕ್ಷ್ಮೀಕೇಶವಸ್ವಾಮಿಗೆ ಸಲ್ಲುವುದು ಐತಿಹಾಸಿಕ ಮಹತ್ತ್ವದ ಸಂಗತಿ. ಅನಂತರ ಊರಿನ ಎಲ್ಲ ದೇವತೆಗಳಿಗಾಗಿ ಎತ್ತುವ ತಾಂಬೂಲವು (ಆಯಾ ಅರ್ಚಕರಿಗೆ ಸೇರುತ್ತದೆಂಬುದು) ವಿಶಾಲ ಮನೋಭಾವದ ದ್ಯೋತಕ. ಕಾವೇರಿಯಲ್ಲಿ ಸ್ನಾನಜಪ ಮಾಡುವ ಆಚಾರಶೀಲ ಹಿರಿಯರಿಗೆ ಸಲ್ಲುವ 'ಕಾವೇರಮ್ಮನ ತಾಂಬೂಲ'; ಯಜ್ಞ ಮಾಡಿದ ವಂಶದ ಹಿರಿಯರಿಗೆ ಸಲ್ಲುವ 'ಆಹಿತಾಗ್ನಿಗಳ ತಾಂಬೂಲ'; ಧರ್ಮಾಧ್ಯಯನ ಮಾಡಿಸುವವರಿಗೆ ಸಲ್ಲುವ 'ಧರ್ಮಾಧ್ಯಯನ ತಾಂಬೂಲ'; ಸಮುದಾಯದ ಅತಿಶ್ರೇಷ್ಠ ತಪಸ್ವಿಯೊಬ್ಬರಿಗೆ ಸಲ್ಲುವ 'ಸರ್ವಶಿಷ್ಟ ತಾಂಬೂಲ'; ಸಭೆಯಲ್ಲಿರುವ ಹಿರಿಯ ವಿದ್ವಾಂಸನಿಗೆ ಸಲ್ಲುವ 'ಬ್ರಹ್ಮಪೂಜೆ'

- ಇವೆಲ್ಲವೂ ಗುಣ ಮತ್ತು ಸತ್ತ್ವಕ್ಕೆ ಸಲ್ಲುವ ಪೂಜೆಗಳು. ವೈಷ್ಣವ, ಶ್ರೀವೈಷ್ಣವ ಹಿರಿಯರಿಗೂ ವಿಶೇಷವಾದ 'ಮತತ್ರಯ ತಾಂಬೂಲ' ಸಲ್ಲುವುದು ಅದ್ವೈತದ ಮೂರ್ತರೂಪದ ಆಚರಣೆ. ಭಾವ, ಅಳಿಯ, ಬೀಗ - ಹೀಗೆ ಬಂಧುತ್ವಕ್ಕೂ ವಿಶೇಷ ಗೌರವಗಳು ತಾಂಬೂಲ ರೂಪದಲ್ಲಿ ಸಲ್ಲುತ್ತವೆ.[8]

3. **ಕೋಲೂಕಟ್ಟರದ್ ('ಕೋಲ' ಕಟ್ಟುವುದು):** ಮುಖ್ಯವಾಗಿ ಚೌಲ, ಉಪನಯನ, ವಿವಾಹಗಳಾದನಂತರ ವಟು ಹಾಗೂ ವಧುವರರನ್ನು ಬಂಧುಮಿತ್ರರು ತಮ್ಮ ಮನೆಗಳಿಗೆ ಆಹ್ವಾನಿಸಿ ಏರ್ಪಡಿಸುವ ಭೋಜನಕೂಟವು ('ಕೋಲೂ ಕಟ್ಟರದ್') ಆಧುನಿಕ ಶಿಷ್ಟಾಚಾರದ ಪೂರ್ವರೂಪವಾಗಿದೆ. ತಮಿಳು, ಮಲೆಯಾಳಂ ಭಾಷೆಗಳಲ್ಲಿ 'ಕೋಲಂ' ಎಂದರೆ ರಂಗೋಲಿ. ಅದಕ್ಕೆ 'ಅಲಂಕಾರ', 'ವೇಷ' ಎಂಬ ಅರ್ಥಗಳೂ ಇವೆ. ಕೋಲಾಪುಳ್ಳ (ವರ), ಕೋಲಾಪೊಣ್ಣು (ವಧು) ಇಬ್ಬರೂ ಅಲಂಕೃತರು. ಅನ್ನಪ್ರಾಶನ, ಕುಮಾರಭೋಜನ, ವಿವಾಹದ ಕಾಶೀಯಾತ್ರೆಗೆ ಮುನ್ನಿನ ಉಪಾಹಾರ ಮೊದಲಾದ ವಿಶೇಷ ಭೋಜನ ಸಂದರ್ಭಗಳಂತೆಯೇ ಈ ಸಂದರ್ಭದಲ್ಲಿಯೂ ಸುಳಿಬಾಳೆ ಎಲೆಹಾಸಿ ಅದರ ಮುಂದೆ ರಂಗೋಲಿಯಿಂದ ಅಲಂಕರಿಸುತ್ತಾರೆ. ಆದ್ದರಿಂದಲೇ ಅದು 'ಕೋಲೂ ಕಟ್ಟರದ್' (ಚಿತ್ರ 45 ಪು.112)

4. **ಪಾಡಿಉಡರದ್ (ಪಾಡಿ ಬಿಡುವುದು):** (ಚಿತ್ರ 114) ಸದ್ಭಾವದ ಪ್ರತೀಕವಾಗಿ ಆಚರಣೆಗೊಳ್ಳುವ ಇದೊಂದೇ ಕ್ರಿಯೆಯ ವೈವಿಧ್ಯವೇ ಅವರ ಜೀವನೋತ್ಸಾಹವನ್ನು ಪ್ರತಿಬಿಂಬಿಸಲು ಸಾಕಾಗಿದೆ. ಉದಾಹರಣೆಗೆ:



114 ಪಾಡಿ ಬಿಡುವುದು

0.1 ಅರಳಿಕಟ್ಟೆಶಾಸ್ತ್ರದ ಭಾಗವಾಗಿ ಅವರವರ ಹೆಣ್ಣು ಮಕ್ಕಳೊಂದಿಗೆ ನಡೆಯುವ (ವಸ್ತ್ರಗಳ) ಉಡುಗೊರೆಗಳ ವಿನಿಮಯ.

0.2 ಧಾರೆಯದಿನ ವಧುವಿನ ಕಡೆಯವರು ವರನಿಗೆ ಧೋತ್ರದೊಂದಿಗೆ ಅಲಂಕಾರ ಸಾಧನಗಳು ಹಾಗೂ ಆಹಾರಸಾಮಗ್ರಿಗಳನ್ನು ಮರ್ಯಾದಿಸುವುದು 'ಧೋತ್ರು ಪಾಡಿ ಉಡರದ್' - ಧೋತ್ರ ಪಾಡಿ ಬಿಡುವುದು. (ಧಾರೆಗೆ ಮೊದಲು ವಧುವಿಗೆ ಮಡಿಲುತುಂಬುವುದು 'ಪಟ್ಟಂಪಳಂ'. ಅದನ್ನೇ 'ಉಂಗುರುಡಿಸುವುದು' ಎನ್ನುತ್ತಾರೆ.)

0.3 ವಿವಾಹದ ಮೂರನೆಯ ದಿನ (ನಾಗೋಲಿಯ ದಿನ) ವರನ ಸೋದರಿಯರು ವಧುವಿಗೆ ಮರ್ಯಾದಿಸುವ ಸೀರೆ "ನಾತನಾಡಕೋಲು ಪಾಡಿ ಉಡರದ್ - ನಾದಿನಿಯ ವಸ್ತ್ರ ಪಾಡಿ ಬಿಡುವುದು."

0.4 ವಧುವರರು ಪರಸ್ಪರರಿಗೆ ಊಡಿಸುವ "ಪಾಲ್‌ನಯ್ ಪಾಡಿ ಉಡರದ್" - ಹಾಲು ತುಪ್ಪ ಪಾಡಿ ಬಿಡುವುದು.

0.5 ಧಾರೆಯದಿನ ಧಾರೆಯನಂತರ ವರನ ಕಡೆಯವರು ವಧುವಿನ ತಾಯಿ ಮತ್ತು ವಧುವಿಗೆ ಗೌರಿಪೂಜೆ ಮಾಡಿಸುವುದಕ್ಕಾಗಿ ಮರ್ಯಾದಿಸುವ ಮೊರಬಾಗಿನಗಳು 'ಮೊರತ ಜೊತೆ ಪಾಡಿ ಉಡರದ್' - ಮೊರದ ಜೊತೆ ಪಾಡಿ ಬಿಡುವುದು.

---

8 'ಸಭಾತಾಂಬೂಲ'ದ ಕಟ್ಟುಪಾಡು ಬೆಟ್ಟದಪುರದ ಸಂಕೇತಿಗಳಲ್ಲಿ ಹೆಚ್ಚು ಸೂಕ್ಷ್ಮವಾದುದು. ಸಭಾತಾಂಬೂಲದ ಮೂಲಕ ವ್ಯಕ್ತವಾಗುವ ಸಂಬಂಧಗಳ ತಾದಾತ್ಮ್ಯಕ್ಕೆ ನೋಡಿ: ಬೆಟ್ಟದಪುರ ಸಂಕೇತಿ ವಾಣಿ, ಶ್ರಾವಣೀಸಂಚಿಕೆ, ನಮ್ಮ ವಿಶಿಷ್ಟಸಂಪ್ರದಾಯಗಳು-೧, ರು.ಗೋ.ರಾಮಸ್ವಾಮಿ, ೧೯೭೫, ಪು.೧-೬.

0.6 ಸಭಾಪೂಜೆಯನಂತರ ವರನಿಗೆ ಕೊಡುವ ಸಂಸಾರ ಸಾಮಗ್ರಿಗಳನ್ನು ಮರ್ಯಾದಿಸುವುದು 'ಅಳ್‌ಬೂದು ಪಾಡಿ ಉಡರದ್' - ಅಳ್‌ಬೂದು ಪಾಡಿ ಬಿಡುವುದು.

ಹೀಗೆ ವಿವಾಹದಲ್ಲಿ ಗಂಡಿನವರು ಒಮ್ಮೆ, ಹೆಣ್ಣಿನವರು ಒಮ್ಮೆ ಪರಸ್ಪರರಿಗೆ ಮರ್ಯಾದಿಸುವುದು ಹಾಗೂ ಪ್ರತಿಮರ್ಯಾದಿಸುವುದು 'ಪಾಡಿ ಉಡರ' ಕ್ರಿಯೆಯ ಲಕ್ಷಣ. ಸಾಂಕೇತಿಕತೆ ಇಲ್ಲವೆ 'ತಂತ್ರ'ದ ಸಾಧನವಾಗಿಯೂ ಇದು ನಡೆಯುವುದುಂಟು. ಸೀಮಂತದಲ್ಲಿ 'ಉದಕಶಾಂತಿ'ಯನಂತರ ಪಾಡಿ ಬಿಡುವಾಗ ಮೆರವಣಿಗೆಯಲ್ಲಿ ಬ್ರಹ್ಮಚಾರಿಯೊಬ್ಬನು ಮೋತೆಯೊಡನೆ ಇರುವ ಕಾಯಿಬಾಳೆಯ ಗೊನೆಯನ್ನು ಹಿಡಿದುಕೊಂಡು ಬರುತ್ತಾನೆ. ಫಲವತಿಯಾದ ಹೆಣ್ಣಿಗೆ ನಡೆಯುತ್ತಿರುವ ಸಂಸ್ಕಾರದಲ್ಲಿ ಇದು ಸೂಕ್ತ ಪ್ರತೀಕವೆನಿಸುತ್ತದೆ. ವಿವಾಹದ ಕೊನೆಯಲ್ಲಿ ವಧುವಿನ ತಾಯಿಯು ಹಸೆಯ ಮೇಲೆ ಕುಳಿತ ವರನ ಹಿಂದುಗಡೆಯಿಂದ ಬಂದು ಅವನ ಬಾಸಿಂಗವನ್ನು ಬಿಚ್ಚಿಕೊಂಡು ಹೋಗುತ್ತಾಳೆ. ವರನು ಆ ಬಾಸಿಂಗವನ್ನು ಮತ್ತೆ ನೋಡಬಾರದೆಂಬ ನಿಷೇಧವಿದೆ; ವಧುವಿನ ತಾಯಿಯೂ ಅದನ್ನು ಸೆರಗಿನಲ್ಲಿ ಮುಚ್ಚಿಕೊಂಡು ಹೋಗುತ್ತಾಳೆ. ಕೇವಲ ಬಾಸಿಂಗ ವಿಸರ್ಜನೆಯ ಸರಳ ವಿಧಿಯು ದೃಷ್ಟಿದೋಷಾದಿ ದುಷ್ಟ ಪ್ರಭಾವಗಳ ನಿವಾರಣೆಗಾಗಿ ಹೀಗೆ 'ತಂತ್ರ'ವಾಗಿ ನಡೆಯುತ್ತದೆ.

ಹೀಗೆ, 'ಪಾಡಿ ಉಡರದ್' ವಿಭಿನ್ನವಾಗಿ ಬೆಳೆದು ವ್ಯಾಪ್ತವಾಗಿರುವುದು ವಿವಾಹದ ಸಡಗರದ, ಬಾಂಧವ್ಯ ಬೆಸುಗೆಯ ಸಾಧನವಾಗಿ. ಉಳಿದ ಎಲ್ಲ ಸಂಸ್ಕಾರಗಳಲ್ಲಿಯೂ ಅದು ವಸ್ತ್ರದ ಉಡುಗೊರೆಯ ಪರಸ್ಪರ ವಿನಿಮಯದ ಸರಳ ರೂಪದಲ್ಲಿದೆ.

5. **ಭೂಮು ಇಡರದ್ (ಭೂಮ ಇಕ್ಕುವುದು):** ದುಷ್ಟಪ್ರಭಾವಗಳನ್ನು ನಿವಾರಿಸುವ ಒಂದು ಭಾಗವಾಗಿ 'ಆರತಿ'ಯು ಸಂಸ್ಕಾರಗಳ ವಿವಿಧ ಹಂತಗಳಲ್ಲಿ ನಡೆಯುತ್ತಲೇ ಇರುತ್ತದೆ. ಉದ್ದೇಶವು ಅದೇ ಆದರೂ, ಆರತಿಯ ಸ್ವರೂಪಕ್ಕಿಂತ ಭಿನ್ನವಾದ, 'ನಿವಾಳಿಸುವ' ಸ್ವರೂಪದ 'ಭೂಮು ಇಡರದ್' ವಿವಾಹದಲ್ಲಿ ನಡೆಯುತ್ತದೆ. ವಧುವರರಿಬ್ಬರನ್ನೂ ಹಸೆಯಮೇಲೆ ಎದುರುಬದುರಿಗೆ ಕೂರಿಸುತ್ತಾರೆ. ಹಿಂದಿನರಾತ್ರಿ ಮಿಕ್ಕ ಆಹಾರಪದಾರ್ಥಗಳು, ಬಾಳೆಹಣ್ಣು, ಹಾಲು ಎಲ್ಲವನ್ನೂ ಎರಡು ಸುಳಿಬಾಳೆ ಎಲೆಯಲ್ಲಿ ಹಾಕಿ ಮೊರದಲ್ಲಿ ಇಟ್ಟುಕೊಳ್ಳುತ್ತಾರೆ. ಅವೆರಡರ ಮೇಲೆಯೂ ಬತ್ತಿಯನ್ನು ಹೊತ್ತಿಸಿ ಇಟ್ಟು ವರನ ಸೋದರಿಯು ನಿವಾಳಿಸಿ ಎಸೆಯುತ್ತಾಳೆ. ವಧುವಿನ ತಾಯಿಯು ಆ ಹೆಣ್ಣುಮಕ್ಕಳಿಗೆ ಉಡುಗೊರೆ ನೀಡುತ್ತಾಳೆ.

ಈ ವಿಶಿಷ್ಟ ಆಚರಣೆಗಳೂ ಈ ಸಮುದಾಯದ ಸಾಂಸ್ಕೃತಿಕ ಔನ್ನತ್ಯವನ್ನೇ ಪ್ರಧಾನವಾಗಿ ಪ್ರಕಟಿಸುತ್ತವೆ. ಇಲ್ಲಿನ ತೀವ್ರ ಸಂಭ್ರಮ, ಗಾಢ ಸಾಮಾಜಿಕಪ್ರಜ್ಞೆ, ಪ್ರೀತಿಪೂರ್ಣ ಆವರಣ, ಸದ್ಭಾವ, ಜೀವನೋತ್ಸಾಹ 'ಸಂಕೇತಂ'ನ ಜೀವಾಳವೇ ಆಗಿದೆ.

ಎ. ಅಂತ್ಯ ಸಂಸ್ಕಾರಗಳು:

ಬಾಳಿನ ಘಟ್ಟಗಳಲ್ಲಿ ಕೊನೆಯದು ಪರಲೋಕ ಸದ್ಗತಿಗಾಗಿ ಮಾಡುವ ಅಂತ್ಯಸಂಸ್ಕಾರಗಳದು. ಆಧುನಿಕತೆಯು ಉಳಿದ ಸಂಸ್ಕಾರಗಳ ಬಗೆಗಿನ ಶ್ರದ್ಧೆಯನ್ನು ಶಿಥಿಲಗೊಳಿಸಿದ ಪ್ರಮಾಣದಲ್ಲಿ ಈ ಸಂಸ್ಕಾರಗಳ ಬಗೆಗೆ ಮಾಡಿಲ್ಲ. ಅದು ದುಃಖದ ಸಂದರ್ಭ ಮಾತ್ರವಲ್ಲದೆ ಸದ್ಗತಿ ಸಾಧನೆಯ ಗಂಭೀರ ಸನ್ನಿವೇಶವಾದುದರಿಂದ ರೂಢಿಯ ಆಚರಣೆಗಳ ಮುಕ್ತತೆಯೂ ಮಿತವಾದುದಾಗಿದೆ. ಪ್ರಾತಿನಿಧಿಕವಾಗಿ ಕೆಲವು ವಿಶಿಷ್ಟ ಆಚರಣೆಗಳನ್ನು ಇಲ್ಲಿ ಪ್ರಸ್ತಾಪಿಸಿದೆ.

1. ತಮ್ಮ ಸಾವಿನ ಮುಹೂರ್ತವನ್ನು ನಿಖರವಾಗಿ ಗುರುತಿಸಿಕೊಂಡು, ಸಾವಿಗೆ ಮೊದಲು ಮಾಡಿಕೊಳ್ಳಬೇಕಾದ ಶುದ್ಧೀಕರಣ, ಪ್ರಾಯಶ್ಚಿತ್ತ, ದಾನಾದಿಗಳನ್ನು ನೆರವೇರಿಸಿ ಪ್ರಾಣಬಿಟ್ಟ ನಿದರ್ಶನಗಳು ಈ ಸಮುದಾಯದಲ್ಲಿ ಹೇರಳವಾಗಿ ಸಿಗುತ್ತವೆ. ಅವರ ಜ್ಯೋತಿಷಪರಿಣತಿಯಂತೆಯೇ, ಪರಲೋಕಸದ್ಗತಿಯ ಬಗೆಗಿನ ಅಚಲವಿಶ್ವಾಸವನ್ನೂ ಈ ಕ್ರಿಯೆಗಳಲ್ಲಿ ಗುರುತಿಸಬಹುದು. ಆ ವೇಳೆಯ ಭಜನೆ, ಗಂಗಾಪ್ರಾಶನ, ತುಳಸಿ ಮತ್ತು ಶಾಲಗ್ರಾಮ ಸಾನ್ನಿಧ್ಯವೂ ಸಾವಿನ ಅನಿವಾರ್ಯತೆಗೆ ಕಂಡುಕೊಂಡ ಪಾರಮಾರ್ಥಿಕ ಪರಿಹಾರಗಳು.

ಹೀಗೆ, ಕೊನೆಯ ವಿಧಿಗಳನ್ನು ಆಚರಿಸಿಕೊಂಡವನು ಬದುಕಿ ಉಳಿದರೆ ಊರಿಗೆ ಹಾನಿ ಎಂಬ ಕಾಕತಾಳೀಯ ಘಟನೆಗಳನ್ನಾಧರಿಸಿದ

ಮೂಢನಂಬಿಕೆಯೂ ಕೆಲವೆಡೆ ಬೆಳೆದಿದೆ. ಕಂಠದಿಂದ ಮೇಲೆ ಪ್ರಾಣಹೋದರೆ ಪುಣ್ಯವೆಂಬ ನಂಬಿಕೆಗೆ ಬ್ರಹ್ಮರಂಧ್ರದ ಮೂಲಕ ಯೋಗಿಯು ಪ್ರಾಣವನ್ನು ವಿಸರ್ಜಿಸಿ ಬ್ರಹ್ಮೈಕ್ಯ ಹೊಂದುತ್ತಾನೆಂಬ ಯೋಗಶಾಸ್ತ್ರದ ಸಿದ್ಧಾಂತವೇ ಆಧಾರವಾಗಿದೆ.

2. 'ಶವವು ಹಿಂದಿರುಗಿ ಬರದಂತೆ' ಹೆಬ್ಬೆರಳುಗಳಿಗೆ ದಾರ ಕಟ್ಟುವುದು; 'ಸತ್ತವನ ಉಪಯೋಗ'ಕ್ಕೆಂದು ಶವದ ಬಳಿ ಕುಡುಗೋಲು ಇಡುವುದು, ಮಂತ್ರ ಸಂಸ್ಕಾರಗಳ ನಡುವೆ ಉಳಿದು ಬಂದಿರುವ ಆದಿಮ ವಿಶ್ವಸಾಮಾನ್ಯ ವಿಧಾನ. ಕಬ್ಬಿಣ ಅಥವಾ ನೀರು ಶವದಬಳಿ ಇದ್ದರೆ ಪಿಶಾಚಿಗಳು ಹತ್ತಿರ ಸುಳಿಯುವುದಿಲ್ಲವೆಂಬ ನಂಬಿಕೆಯೂ ಅದರೊಂದಿಗೆ ಬೆಳೆದಿದೆ.

3. ಸತ್ತ ಸುಮಂಗಲೆಯರು ದಹನಗೊಂಡನಂತರ ಉಳಿಯುವ ಮಾಂಗಲ್ಯ ಮತ್ತು ಶವದ ತಳಗೆ ಹಾಕಿದ ನಾಣ್ಯವು 'ಅತ್ಯಂತ ಶುಭ'ವೆಂಬ ಪರಿಗಣನೆಗೆ ಸೌಮಾಂಗಲ್ಯಾಭಿಲಾಷೆಯೇ ಕಾರಣ. ಮದುಮಗಳಿಗೆ ಅದನ್ನೇ ತೊಡಿಸುವ ಅಪೇಕ್ಷೆಯಲ್ಲಿ ಅದು ಗಾಢವಾಗಿ ಕಾಣಿಸುತ್ತದೆ. ಶವದಡಿಯ ಬೆಳ್ಳಿಯ ನಾಣ್ಯವನ್ನು ತಾಯಿತಕ್ಕೆ ಬಳಸಿ 'ರಕ್ಷಣೆ' ಪಡೆಯುವುದರಲ್ಲಿಯೂ ಮುತ್ತೈದೆ ಸಾವಿಗೆ ದೈವತ್ವದ ಆರೋಪ ಕಾಣಿಸುತ್ತದೆ. ಬದುಕಿದ್ದಾಗ ಶ್ರೇಷ್ಠವೆನಿಸಿದುದು ಸಾವಿನಲ್ಲಿ ಹೆಚ್ಚು ಶ್ರೇಷ್ಠವೆನಿಸುತ್ತದೆ. ದಹನಾನಂತರ ಮಾಂಗಲ್ಯ ಸಿಗದಿದ್ದರೆ ಅಶುಭವೆಂಬ ನಂಬಿಕೆಯು ಮೇಲಿನದಕ್ಕೆ ಪೂರಕವಾಗಿ ಬೆಳೆದುದು.

ಸತ್ತವರ್ಷದಲ್ಲಿ ನಡೆಯುವ ಮಾಸಿಕ ಶ್ರಾದ್ಧಗಳೂ ಮುಂದೆ ನಿಯತವಾದ ವಾರ್ಷಿಕ ಶ್ರಾದ್ಧಗಳೂ ಶಾಸ್ತ್ರೋಕ್ತವಾದವು. ಅವು ಲಿಂಗಭೇದವಿಲ್ಲದೆ ಸಮಾನವಾಗಿ ಶಾಸ್ತ್ರನಿರ್ದೇಶನದಂತೆ ನಡೆಯತಕ್ಕವು. ಆದರೆ, ಸುಮಂಗಲೆಯರು ನಿಧನರಾದ ಮನೆಯಲ್ಲಿ ಹೆಂಗಸರೇ ವಿಶೇಷವಾಗಿ ಆಚರಿಸುವ ಶ್ರಾದ್ಧರೂಪದ ಆಚರಣೆಗೆ 'ಹೂವೀಳ್ಯ' ಎಂಬ ಹೆಸರಿದೆ (ದಕ್ಷಿಣದಲ್ಲಿ 'ಸುಮಂಗಲೀಪ್ರಾರ್ಥನಾ'). ಸತ್ತ ಸುಮಂಗಲೆಯರ ನೆನಪಿನಲ್ಲಿ ನಡೆಸುವ ಈ ವಿಧಿಗಾಗಿ, ಐದು ಅಥವಾ ಅದಕ್ಕಿಂತ ಹೆಚ್ಚು ಸುಮಂಗಲೆಯರನ್ನು ಆಹ್ವಾನಿಸಿ 'ಕಾಲು ತೊಳೆದು' ಉಪಚರಿಸಿ ಫಲಾಹಾರ ಮಾಡಿಸುತ್ತಾರೆ. ವರ್ಷಕ್ಕೊಮ್ಮೆ ನಡೆಸುವ ಈ ಆಚರಣೆಗೆ ಬೆಸಸಂಖ್ಯೆಯ ಸುಮಂಗಲೆಯರನ್ನೇ ಆಹ್ವಾನಿಸುವುದೊಂದು ವಿಶೇಷ.

4. ವೈಕುಂಠಸಮಾರಾಧನೆಗೆ ದಕ್ಷಿಣದಲ್ಲಿ 'ಗೃಹಯಜ್ಞಂ' ಎನ್ನುತ್ತಾರೆ. ಅಂದು ಬೆಳಗ್ಗೆ 'ನಾರಾಯಣೀಯಂ' ಪಠಿಸುವ ಕ್ರಮವು ಕೇರಳದಲ್ಲಿರುವುದು ಪ್ರಾದೇಶಿಕ ಪ್ರಭಾವದಿಂದ. ಇದಕ್ಕೆ ಪರ್ಯಾಯವಾಗಿ ಕರ್ನಾಟಕದಲ್ಲಿ ಭಗವದ್ಗೀತೆಯ ಪಾರಾಯಣ ನಡೆಯುತ್ತದೆ. ಶುಭಸ್ವೀಕಾರ, ವೈಕುಂಠ ಸಮಾರಾಧನೆ, ವರ್ಷಾಬ್ದೀಕ, ಅದರ ಮರುದಿನದ ಸತ್ಯನಾರಾಯಣ ಪೂಜೆ, ಅಭಿಷೇಕ ಮತ್ತಿತರ ದೇವತಾಕಾರ್ಯಗಳು, ಸತತವಾಗಿ ನಡೆದ ಶ್ರಾದ್ಧಗಳ ಅಪರ-ಸಂಪನ್ನ ಮನಸ್ಸನ್ನು ತಿಳಿಗೊಳಿಸಿ ಶುಭದ ನಿತ್ಯಸಾಮಾನ್ಯ ಜೀವನಕ್ಕೆ ಒಗ್ಗಿಸಿಕೊಳ್ಳಲು ಸೃಷ್ಟಿಸಿಕೊಂಡ ಕೊಂಡಿಗಳು. "ಅಂತ್ಯಕರ್ಮ"ವನ್ನು "ಪಿತೃಯಜ್ಞ" ಎಂದು ಹೇಳುತ್ತಾರೆ. 'ಕ್ರತೂನಾಂ ಉತ್ತಮಃ ಕ್ರತುಃ' ಎಂದು ಆಪಸ್ತಂಬರು ಹೇಳಿದ್ದಾರೆ. ಇಂಥ ಯಜ್ಞವನ್ನು ಅಶುಭವೆಂದು ಭಾವಿಸಿ 'ಶುಭಸ್ವೀಕಾರ' ಎಂಬ ಅರ್ಥವಿಲ್ಲದ ಸಂಪ್ರದಾಯವನ್ನು ಜೋಡಿಸಿಕೊಂಡಿರುವುದು ನಮ್ಮ ಅಲ್ಪತೆ ಮತ್ತು ಭಯದ ಸ್ವಭಾವವನ್ನು ತೋರಿಸುತ್ತದೆ" ಎನ್ನುವ ವೈಚಾರಿಕತೆಯೂ ಈ ಸಂಬಂಧದಲ್ಲಿ ಪ್ರಕಟವಾದುದುಂಟು.

5. ಸಾವಿನ ಮನೆಗೆ ಆ ತುರ್ತಿನಲ್ಲಿ ಹಣದರೂಪದ ನೆರವು ಒದಗಿಸುವುದು (ಪುಳಿ ವಯ್ಯರದ್): ಇಡೀ ವರ್ಷ 'ಹಬ್ಬವಿಲ್ಲದ ಮನೆ' ಆದಾದುದರಿಂದ ಬಂಧುಮಿತ್ರರು ಅವರನ್ನು ವಿಶೇಷದಿನಗಳಲ್ಲಿ ಊಟಕ್ಕೆ ಕರೆಯುವುದು; ಸತ್ತ ಹನ್ನೊಂದು ತಿಂಗಳೊಳಗಾಗಿ ಸಾವಿನಮನೆಗೆ ಬಂಧುಗಳು ಬಗೆಬಗೆಯ ತಿಂಡಿಗಳನ್ನು ತುಂಬಿಕೊಡುವುದು ('ತಿಂಡಿ ವಯ್ಯರದ್') - ದುಃಖಿಗಳನ್ನು ಸಾಂತ್ವನಗೊಳಿಸುವ ಮಾನವೀಯ ವಿಧಾನಗಳು. ಆದರೆ, ಮೊದಲೇ ದುಃಖಿತೆಯಾಗಿ ಸೊರಗಿದ ವಿಧವೆಗೆ ಸಂಕಟದ ತೀವ್ರತೆ ಹಸಿಹಸಿಯಾಗಿರುವಾಗಲೇ ಆಭರಣಗಳನ್ನು ಕಳಚುವುದು, ಕೇಶಮುಂಡನ; ತವರಿಗೆ ಹೋಗಿ 'ತವರುಮನೆ ತಣ್ಣಗಿರಲೆಂದು' ಮೊಸರನ್ನ ಊಟಮಾಡಿ ಬರುವಂತೆ ವಿಧಿಸುವುದು - ಕ್ರೂರ ಮತ್ತು ಅಮಾನವೀಯ ಆಚಾರಗಳು.

6. ಕೈಮಂಡೆ ಕಳ್‌ವರದ್ (ಕೈ, ಮಂಡೆ ತೊಳೆಯುವುದು): ಇದು ಮೊದಲ ತಿಂಗಳ ತಲೆಮಾಸಿಕದ ಮಾರನೆಯದಿನ ಕರ್ಮಿಯ ಅಕ್ಕತಂಗಿಯರ ಮನೆಯಲ್ಲಿ ನಡೆಯುತ್ತದೆ. ಅಭ್ಯಂಗ, ಒಬ್ಬಟ್ಟಿನ ಊಟ ಅಂದಿನ ಕ್ಲ್ಪಪ್ತತೆ. ಚಿತ್ರಾನ್ನವು ಸಿಹಿಯೊಂದಿಗೆ ಕೂಡಿಲ್ಲದುದು,

ಉಳಿದ ಸಂದರ್ಭಗಳ ರೀತಿಗೆ ವಿರುದ್ಧವಾದುದು.

ಪರಲೋಕ, ಪುನರ್ಜನ್ಮ, ಸದ್ಗತಿಗಳಲ್ಲಿನ ಅಚಲ ನಂಬಿಕೆ; ಸದ್ಗತಿಸಾಧನೆಯ ಕಳಕಳಿ ಈ ಸಂಬಂಧದ ಆಚರಣೆಗಳ ಮೂಲದಲ್ಲಿದೆ. ಸಂಕೇತಿಗಳ ಈ ಸಂಬಂಧದ ವಿಶಿಷ್ಟ ಆಚರಣೆಗಳಲ್ಲಿ ಸಾಮಾಜಿಕ ಪ್ರಜ್ಞೆ ಅಭಿವ್ಯಕ್ತವಾಗುತ್ತದೆ. ವಿಧವೆಗೆ ಸಂಬಂಧಿಸಿದ ಆಚರಣೆಗಳು ಕ್ರೂರವಾಗಿಯೂ ಇವೆ. ಸಾವಿನ ಬಗೆಗಿನ ಭೀತಿ ಮತ್ತು ಪರಲೋಕದ ಬಗೆಗಿನ ಕಲ್ಪನೆಯಿಂದಾಗಿ ಈ ಸಂಬಂಧದ ಎಲ್ಲ ಆಚರಣೆಗಳು ಶ್ರದ್ಧೆಯಿಂದಲೇ ನಡೆಯುತ್ತವೆ. ಉಳಿದ ಸಂಸ್ಕಾರಗಳಿಗೆ ಸಂಬಂಧಿಸಿದ ಆಚರಣೆಗಳಲ್ಲಾದ ಬದಲಾವಣೆಗಳಿಗೆ ಹೋಲಿಸಿದರೆ, ಅಂತ್ಯ ಸಂಸ್ಕಾರಗಳಿಗೆ ಸಂಬಂಧಿಸಿದ ಅಂಥ ಬದಲಾವಣೆಗಳು ಬಹು ಗೌಣವಾದವು. ಅವು ವಿಶೇಷವಾಗಿ ವಿಧವೆಗೆ ಸಂಬಂಧಿಸಿದ ಕ್ರೂರ ಆಚರಣೆಗಳನ್ನು ಕೈಬಿಡುವುದರಲ್ಲಿ ಸಂಭವಿಸಿರುವುದು ಆಧುನಿಕ ಶಿಕ್ಷಣದ ಪ್ರಭಾವದಿಂದಾಗಿದೆ.

ಏ. **ಸಂಸ್ಕಾರ ಸ್ವರೂಪ:**

ಸಂಪ್ರದಾಯಗಳ ವಿವಿಧ ಆಯಾಮಗಳ ಸ್ಪಷ್ಟಚಿತ್ರವನ್ನು ಕೊಡುವುದಕ್ಕಾಗಿ ಸಂಸ್ಕಾರಕ್ಕೆ ಹೊಂದಿಕೊಂಡ ಸಂಪ್ರದಾಯಗಳ ಪ್ರಧಾನಲಕ್ಷಣಗಳನ್ನು ಇಲ್ಲಿ ಕ್ರೋಡೀಕರಿಸಬಹುದು:

1. ನಿರ್ದಿಷ್ಟ ಸಂಖ್ಯೆಗಳಿಗೆ ಇರುವ ಪ್ರಾಮುಖ್ಯವು ಸಂಖ್ಯಾಶಾಸ್ತ್ರಜ್ಞರ ಕುತೂಹಲದ ವಸ್ತು. ಇಡೀ ಸಂಸ್ಕಾರಗಳ ವ್ಯಾಪ್ತಿಯಲ್ಲಿ ಬೆಸಸಂಖ್ಯೆಗಳಿಗೆ ಬಹಳ ಪ್ರಾಶಸ್ತ್ಯ ಸಂದಿದೆ. ಅದರಲ್ಲಿಯೂ ಮೂರಕ್ಕೆ ಆದ್ಯತೆ; ಆನಂತರದ ಸ್ಥಾನ ಐದಕ್ಕೆ.
2. ಇಲ್ಲಿ ನಡೆಯುವ 'ಬಲಿ', ಅನ್ನಬಲಿಯೇ ಹೊರತು ಪ್ರಾಣಿಹಿಂಸೆಯಲ್ಲ ಎಂಬುದನ್ನು ಗಮನಿಸಬೇಕು. ಉದಾಹರಣೆಗೆ 'ಗುಣೀಕಿಡರದ್' - (ಗುಣಿಗೆ ಇಡುವುದು).
3. ಸಂಸ್ಕಾರಗಳು ಸ್ವಗೃಹ, ಕುಲದೇವತಾಸನ್ನಿಧಿ, ಜಲಾಶಯಗಳ ತೀರದಲ್ಲಿ ಸಂದರ್ಭಾನುಸಾರವಾಗಿ ನಡೆಯುತ್ತವೆ.
4. ದಾನಗಳಲ್ಲದೆ 'ಕಾಣಿಕೆ'ಗಳು ಸದ್ಭಾವದ ದ್ಯೋತಕವಾಗಿ ಎಲೆಅಡಿಕೆ ('ವೆತ್ಲ್‌ಪಾಕ್'), ಫಲತಾಂಬೂಲ, ಹಣೆಗಿಡುವುದು ಮೊದಲಾದ ಸ್ವರೂಪದಲ್ಲಿ 'ಸೇವೆ'ಗೆ ಪ್ರತಿಫಲವಾಗಿ ಸಲ್ಲುತ್ತವೆ.
5. ಪವಿತ್ರಗ್ರಂಥಗಳು ಬಳಕೆಯಾಗುವಾಗ (ಉದಾಹರಣೆಗೆ ಗುಣೀಕಿಡರದ್, ಅಕ್ಷರಾಭ್ಯಾಸ ಇತ್ಯಾದಿ ಸಂದರ್ಭಗಳು) ರಾಮಾಯಣ, ಭಗವದ್ಗೀತೆ, ಭಾಗವತ ಬಳಕೆಯಾಗುತ್ತವೆ.
6. ರೂಢಿಗತ ಆಚರಣೆಗಳ ಸಂದರ್ಭದಲ್ಲಿ ಸಂಪ್ರದಾಯದ ಹಾಡುಗಳು (ವಿಶೇಷವಾಗಿ ವಿವಾಹದಲ್ಲಿ) ಬಳಕೆಯಾಗುತ್ತವೆ. 'ಅಪರ'ಕ್ಕೆ ಸಂಬಂಧಿಸಿದಂತೆ ಹಾಡುಗಳ ಬಳಕೆ ಇಲ್ಲ.
7. ಸಂಸ್ಕಾರಗಳು ಧಾರ್ಮಿಕ ಕ್ರಿಯೆಗಳಾಗಿರುವಾಗಲೇ ಅವು ವಾಸ್ತವಿಕ ಪ್ರಜ್ಞೆಯನ್ನು ಕಳೆದುಕೊಳ್ಳದಿರುವುದಕ್ಕೆ, 'ವೈದ್ಯ' ಮತ್ತು 'ಅಧ್ಯಯನ'ಕ್ಕೆ ಸಂಬಂಧಿಸಿದ ಭಾಗಗಳು ಹಾಗೂ 'ಸಂಬಂಧ'ಗಳ ಬಗೆಗಿನ ಒತ್ತು ಒಳ್ಳೆಯ ಸಾಕ್ಷಿಗಳು.
8. ಎಲ್ಲ ಸಂಸ್ಕಾರಗಳೂ ದಕ್ಷಿಣ ಮತ್ತು ಮಧ್ಯದೇಶದಲ್ಲಿ ಹಗಲಿನಲ್ಲಿಯೇ ನಡೆದರೆ, ಬೆಟ್ಟದಪುರದಲ್ಲಿ ರಾತ್ರಿಯೂ ವಿವಾಹವಾಗುತ್ತದೆ; ಮತ್ತೂರಿನಲ್ಲಿ ಮುಂಜಾನೆ ಮೂರು ಗಂಟೆಗೂ 'ಧಾರೆ' ಆಗುವ ಸಂಪ್ರದಾಯವಿದೆ.
9. 'ಸಂಕೇತ'ಗಳು ದಟ್ಟವಾಗಿವೆ. ಉದಾಹರಣೆಗೆ: ಅಂಕುರಾರ್ಪಣವು ವಿಕಾಸಶೀಲತೆಯನ್ನು ಆಶಯವಾಗಿ ಉಳ್ಳ ಮೊಳಕೆಬೆಳೆಸುವ ಕ್ರಿಯೆ. ಆ ಸಂಕೇತವನ್ನೂ ಕರ್ನಾಟಕದ ಸಂಕೇತಿಗಳು 'ಎಲೆಅಡಿಕೆ'ಗಳ ಮೂಲಕ ಮತ್ತೆ ಸಾಂಕೇತಿಕಗೊಳಿಸಿದ್ದಾರೆ.
10. ಸಂಸ್ಕಾರಗಳ ಪ್ರಮುಖ ಅಂಶಗಳಲ್ಲಿ ದುಷ್ಟಪ್ರಭಾವಗಳ ನಿವಾರಣೆಯೂ ಒಂದು. ಉದಾಹರಣೆಗೆ ಜಾತಕರ್ಮದ ಪ್ರಧಾನ ಅಂಗವಾದ ಹೋಮದಲ್ಲಿ ಇರುವುದೆಲ್ಲಾ ಮಗು ಮತ್ತು ಬಾಣಂತಿಯರನ್ನು ಭೂತ ಪಿಶಾಚಿಗಳಿಂದ ರಕ್ಷಿಸುವ ಪ್ರಾರ್ಥನೆಯೇ. ಅದರ ಮತ್ತೊಂದು ತುದಿ - ಹೆರಿಗೆ ಮನೆಯಲ್ಲಿ ಚಪ್ಪಲಿ, ಪೊರಕೆಗಳನ್ನು ಆ ಉದ್ದೇಶಕ್ಕಾಗಿಯೇ ಇಡುವ ವಿಶ್ವಸಾಮಾನ್ಯ ಆಚರಣೆಯಾಗಿದೆ.

11. ಸಂಬಂಧಗಳು ಕುದುರುವುದು, ಆತ್ಮೀಯವಾಗುವುದು, ಹೊಸ ಪರಿಚಯಗಳಾಗುವುದು ಸಂಸ್ಕಾರಗಳ ಸಂದರ್ಭದಲ್ಲಿ. ಸೋದರಮಾವ, ಸೋದರಿಯರು, ಸೋದರರು, ತಾಯಿ, ತಂದೆ, ಸೋದರತ್ತೆ, ಚಿಕ್ಕಮ್ಮ, ಬಂಧುಗಳು, ಮಿತ್ರರು, ಗ್ರಾಮದ ಮಹಾಜನಗಳು - ಹೀಗೆ ಎಲ್ಲರ ಪಾತ್ರವೂ ನಿರ್ದಿಷ್ಟ ಸನ್ನಿವೇಶಗಳಲ್ಲಿ ಪ್ರಧಾನವಾಗಿದೆ.

12. ಹಸಿರುವಾಣಿಚಪ್ಪರ, ಮಂಗಳವಾದ್ಯ, ಹಸೆ, ವಧುವರರ ಅಲಂಕಾರ ಮೊದಲಾದ ಪ್ರಸಂಗಗಳಲ್ಲಿ ಸೌಂದರ್ಯಪ್ರಜ್ಞೆ ಅಭಿವ್ಯಕ್ತಗೊಳ್ಳುತ್ತದೆ.

13. ಆರತಿ, ಎಲೆಅಡಿಕೆ, ನಮಸ್ಕಾರ ಮೊದಲಾದ ಆನುಷಂಗಿಕ ಕ್ರಿಯೆಗಳು ಎಲ್ಲ ಸಂಸ್ಕಾರಗಳಲ್ಲಿಯೂ ಮತ್ತೆ ಮತ್ತೆ ಕಾಣಿಸಿಕೊಳ್ಳುವುದು ಅವುಗಳ ಉದ್ದೇಶಸಾಧನೆಯ ದೃಷ್ಟಿಯಿಂದ ಅರ್ಥಪೂರ್ಣವಾಗಿದೆ. ಆದರೆ ನಿಶ್ಚಿತಾರ್ಥ, ಕನ್ಯಾನ್ವೇಷಣೆ, ಗೃಹಪ್ರವೇಶ ಮೊದಲಾದ ಪುನರಾವರ್ತಿತ ವಿಧಿಗಳು ಯಾಂತ್ರಿಕ ಯುಗದಲ್ಲಿಯೂ ಮುಂದುವರಿಯುವುದು ಅರ್ಥಹೀನವಾಗಿದೆ.

14. 'ತಂತ್ರ'ದ ಮಟ್ಟಕ್ಕೇರಿದ, ಹೆಚ್ಚು ವಾಸ್ತವಿಕ ನೆಲೆಯಲ್ಲಿನ ವಿಧಿ, 'ಸ್ಪರ್ಶ'. ಉದಾಹರಣೆಗೆ ಹಿರಿಯ ಮುತ್ತೈದೆಯರು, ವಧುವಿಗೆ ಹಾಕುವಮುನ್ನ ಮಾಂಗಲ್ಯವನ್ನು 'ಸ್ಪರ್ಶಿಸಿ', ದೀರ್ಘ ಸೌಮಂಗಲ್ಯವನ್ನು ಸಾಧಿಸುವ ಆಶಯವನ್ನು ತೋರ್ಪಡಿಸುತ್ತಾರೆ.

15. ಈಗಾಗಲೇ ಸ್ಪಷ್ಟಪಡಿಸಿರುವಂತೆ, ಕರ್ನಾಟಕದ, ಅದರಲ್ಲಿಯೂ ಮಧ್ಯದೇಶವನ್ನು ಕೇಂದ್ರವಾಗಿಟ್ಟುಕೊಂಡು ಈ ಸಂಬಂಧದ ಎಲ್ಲ ವಿವರಗಳನ್ನು ಕೊಟ್ಟಿದೆ. ಎಲ್ಲೆಡೆಯ ಸಂಕೇತಿಗಳ ಆಚರಣೆಗಳು ಬಹುಪಾಲು ಸಾಮ್ಯವನ್ನು ಪ್ರದರ್ಶಿಸುವಂತೆಯೇ, ಪ್ರಾದೇಶಿಕ ಭಿನ್ನತೆಯ ಅಂಶಗಳು ವಿಶ್ವಸಾಮಾನ್ಯಗಳ ಅಳವಡಿಕೆಯ ನಿದರ್ಶನಗಳೂ ಆಗಿವೆ (ಪಟ್ಟಿ 15 ಪು.312-315).

16. ಹುಟ್ಟಿನಿಂದ ಸಾವಿನವರೆಗಿನ ವಿವಿಧ ಆಚರಣೆಗಳಲ್ಲಿ ಆಧುನಿಕಶಿಕ್ಷಣ ಮತ್ತು ಜೀವನಕ್ರಮವು ಅಗಾಧ ಸ್ಥಿತ್ಯಂತರವನ್ನು ತಂದಿದೆ.

    0.1 ಧರ್ಮಕೇಂದ್ರಿತ ಶಿಕ್ಷಣ ಸಂಸ್ಕಾರಗಳು ಅಪ್ರಸ್ತುತಗೊಂಡಿವೆ.

    0.2 ವೈದ್ಯವಿಜ್ಞಾನವು - ಮುಖ್ಯವಾಗಿ ಹೆಣ್ಣುದೊಡ್ಡವಳಾದಾಗ, ಬಸುರಿಯಾದಾಗ, ಬಾಣಂತಿಯಾದಾಗ ಮಾಡುವ ವೈದ್ಯ, ಆರೈಕೆ, ಆಚರಣೆಗಳನ್ನು ಹಿಂದಕ್ಕೆ ಸರಿಸಿದೆ.

    0.3 ಅಲ್ಪ ಪ್ರಮಾಣದಲ್ಲಿಯಾದರೂ, ಅಪರ-ಆಚರಣೆಗಳು ಪ್ರಶ್ನೆಗೆ ಈಡಾಗುತ್ತಿವೆ; ಮೂಢನಂಬಿಕೆಗಳು ಕೈಬಿಟ್ಟು ಹೋಗುತ್ತಿವೆ.

    0.4 ದೂರದೂರದ ನೆಲೆಗಳು, ಯಾಂತ್ರಿಕಜೀವನದ ಸಮಯಾಭಾವ, ಆರ್ಥಿಕಮಿತಿ, ತಾಳ್ಮೆ ಇಲ್ಲದುದು, ದೈಹಿಕದೌರ್ಬಲ್ಯ ಕೂಡ ಈ ಆಚರಣೆಗಳನ್ನು ಸಂಕ್ಷೇಪಗೊಳಿಸಿವೆ; ಕೂಡಿಸಿ ಒಟ್ಟಾಗಿ ಮಾಡುವಂತೆ ಪ್ರೇರೇಪಿಸಿವೆ; ಸಕಾಲದಲ್ಲಿ ನಡೆಸಲಾಗದಂತೆ ಇಲ್ಲವೆ ಕೈಬಿಡುವಂತೆ ಮಾಡಿವೆ.

    0.5 ಆಧುನಿಕ ಜ್ಞಾನ ಮತ್ತು ಸನ್ನಿವೇಶದ ಹಿನ್ನೆಲೆಯಲ್ಲಿ ಅನಗತ್ಯವೆನಿಸಿದ ವಿವರಗಳೂ ಬಿಟ್ಟು ಹೋಗಿವೆ.


    ಒಟ್ಟಿನಲ್ಲಿ, ಸಂಸ್ಕಾರಗಳಲ್ಲಿ ಅಗ್ನಿಆರಾಧನೆ ಇರುವಂತೆಯೇ ಪೌರಾಣಿಕ ದೇವತೆಗಳನ್ನು ಒಲಿಸಿಕೊಳ್ಳುವ ಪ್ರಯತ್ನವೂ ಇದೆ; ಜಲ, ವೃಕ್ಷ, ಗೋಪೂಜೆಗಳಿವೆ. ಜೀವನಪರವಾದ ಪ್ರಾರ್ಥನೆಗಳಿರುವಂತೆಯೇ ಸದ್ಗತಿಯ ಗುರಿಯೂ ಇದೆ. ಹಿರಿಯರಲ್ಲಿ ವಿನೀತಭಾವವಿದೆ. ದಾನಗಳ ಮೂಲಕವೂ ಇಷ್ಟಾರ್ಥ ಸಾಧನೆಯ ಯತ್ನವಿದೆ. ಸೌಂದರ್ಯಪ್ರಜ್ಞೆ, ರಸಿಕತೆ ಇದೆ; ಸಂಬಂಧಗಳಿಗೆ ಪ್ರಾಶಸ್ತ್ಯವಿದೆ. ತಪ್ಪಿಗಾಗಿ ಪಶ್ಚಾತ್ತಾಪ, ಪ್ರಾಯಶ್ಚಿತ್ತಗಳಿವೆ. ಸಂಕೇತ, ತಂತ್ರ, ಜ್ಯೋತಿಷಶಾಸ್ತ್ರ, ಸಂಖ್ಯಾಶಾಸ್ತ್ರಗಳೂ ತಮ್ಮ ಉದ್ದೇಶಸಾಧನೆಗಾಗಿ ಬಳಕೆಯಾಗಿವೆ. ಮಂಗಳಪರಿಕರಗಳ ವೈವಿಧ್ಯಪೂರ್ಣ ಬಳಕೆಯು ಸಂಸ್ಕಾರಕ್ಕೆ ಮಂಗಳಮಯ ಪರಿವೇಷವನ್ನುಂಟುಮಾಡುತ್ತದೆ. ಶಾಸ್ತ್ರದಷ್ಟೇ, ಸಾಂಪ್ರದಾಯಿಕ ಆಚರಣೆಗಳಿಗೂ ಪ್ರಾಶಸ್ತ್ಯವಿದೆ. ಪ್ರತಿ ಹಂತದ ಜೀವನವೂ ನಿಯಮಬದ್ಧಗೊಂಡಿದೆ. ಜ್ಞಾನಮಾರ್ಗದ ಔನ್ನತ್ಯಸಾಧನೆಗಾಗಿ ಇಲ್ಲಿನ ಕರ್ಮಮಾರ್ಗವು ಅಗತ್ಯ ಭೂಮಿಕೆಯನ್ನೊದಗಿಸುವುದು ಮುಖ್ಯ ಸಂಗತಿಯಾಗುತ್ತದೆ. ಅದರಿಂದ ಸ್ಪಷ್ಟವಾಗುವ ಸಂಗತಿ ಎಂದರೆ ಅವರ ಸಾಮಾಜಿಕ ಬದುಕು ಧರ್ಮದಿಂದ ಅಲಿಪ್ತವಾದುದಲ್ಲ ಎಂಬುದು. ಆದರೆ, ಧರ್ಮದ ಹಿಡಿತವು ಸಡಿಲವಾಗುತ್ತಿರುವುದರ ಸೂಚನೆಗಳೂ ಅಲ್ಲಿವೆ.

ಅಧ್ಯಾಯ : ಆರು

ಸಂಕೇತಿಗಳ ಧಾರ್ಮಿಕ ಜೀವನ

ಹಿಂದಿನ ಅಧ್ಯಾಯದಲ್ಲಿ ಜೀವನಚಕ್ರಕ್ಕೆ ಸಂಬಂಧಿಸಿದಂತೆ ಇರುವ ಸಂಪ್ರದಾಯಗಳ ಅವಲೋಕನ ಮತ್ತು ವಿಶ್ಲೇಷಣೆಯ ಮೂಲಕ ಸಂಕೇತಿಗಳ ಸಂಸ್ಕೃತಿಯ ಸ್ವರೂಪವನ್ನು ಗುರುತಿಸಲಾಗಿದೆ. ಈ ಅಧ್ಯಾಯದಲ್ಲಿ ದೈವಾರಾಧನೆ, ಹಬ್ಬಗಳು ಮತ್ತು ನಂಬಿಕೆ, ವಿಧಿ-ನಿಷೇಧಗಳಿಗೆ ಸಂಬಂಧಿಸಿದಂತೆ ಈ ಪ್ರಯತ್ನವು ಮುಂದುವರಿದಿದೆ.

೧. ದೈವ ಮತ್ತು ಧರ್ಮ



115 ಔಪಾಸನೆ ಮಾಡಿ ನಮಸ್ಕರಿಸುತ್ತಿರುವುದು. ಅಗ್ನಿಕುಂಡವನ್ನು ಕಾಣಬಹುದು

ಬ್ರಾಹ್ಮಣಧರ್ಮದ ಮೂಲ ಸೆಲೆ ವೇದ. ವೇದದ ಆಶಯವನ್ನು ಮುಂದುವರಿಸಿದ ಧರ್ಮಶಾಸ್ತ್ರಗಳ ನಿರ್ದೇಶನದಂತೆ ಬಾಳುತ್ತಿರುವ ಎಲ್ಲ ಬ್ರಾಹ್ಮಣ ಸಮುದಾಯಗಳ ದೈವ ಮತ್ತು ಧರ್ಮದ ಸರ್ವಸಮ ಭಾಗಗಳಿವೆ. ಅದರ ಪರಿಶೀಲನೆಯು ಪ್ರಸ್ತುತ ನಿಬಂಧದ ಅಗತ್ಯಕ್ಕೆ ಹೊರತಾದುದು. ಸನಾತನ ಜೀವನಮಾರ್ಗದ ಕೆಲವು ನಿರ್ದಿಷ್ಟ ಅಂಶಗಳಲ್ಲಿ ಸಂಕೇತಿಗಳ ಪ್ರವೃತ್ತಿಯನ್ನು ಗುರುತಿಸಲಷ್ಟೇ ಇಲ್ಲಿ ಕೆಲವು ವಿವರಗಳನ್ನು ಕೊಟ್ಟಿದೆ :

ಅ. ವೈದಿಕ ದೇವತೆಗಳು:

ವೈದಿಕ ದೇವತೆಗಳ ಆರಾಧನೆಯು ಕಣ್ಮರೆಯಾಗಿದೆ ಎಂಬ ತಪ್ಪು ಅಭಿಪ್ರಾಯದ[1] ಹಿನ್ನೆಲೆಯಲ್ಲಿ ಒಂದು ಸ್ಪಷ್ಟನೆ ನೀಡಬೇಕಾಗಿದೆ. ಶ್ರೌತ ಮತ್ತು ಗೃಹ್ಯಸೂತ್ರಗಳು ವಿಧಿಸುವ ನಿತ್ಯ, ನೈಮಿತ್ತಿಕ, ಕಾಮ್ಯ ಕರ್ಮಗಳಲ್ಲಿ ಅಗ್ನಿಆರಾಧನೆ ಇದ್ದು, ಇಂದಿಗೂ ವೈದಿಕದೇವತೆಗಳು ಆರಾಧನೆಗೊಳ್ಳುತ್ತಿವೆ. ಸಾಮಾನ್ಯವಾಗಿ ಈ



116 ವೈಶ್ವದೇವದ ಮೂಲಕ ನಿತ್ಯವೂ ಬಲಿಹರಣ ನಡೆಯುತ್ತದೆ

1 ನೋಡಿ: The Gods of India, A brief description of their history, character and worship, Martin (E. Osborn), London, and Toronto, 1913, p.vi



117 ವೈಶ್ವದೇವದ ಮೂಲಕ ನಿತ್ಯವೂ ಪ್ರಾಣಿಪಕ್ಷಿಗಳಿಗೆ ಆಹಾರ ಊಡಿಸಲಾಗುವುದು

ಶತಮಾನದಲ್ಲಿ ಬ್ರಾಹ್ಮಣಸಮುದಾಯಗಳಲ್ಲಿ ಕಾಣೆಯಾಗುತ್ತಿರುವ ಔಪಾಸನಾಗ್ನಿ, ಆಹಿತಾಗ್ನಿ ಮೊದಲಾದವು ಸಂಕೇತಿಗಳಲ್ಲಿ ಇಂದಿಗೂ ಮುಂದುವರಿಯುತ್ತಿವೆ (ಚಿತ್ರ 115-121). ಆದರೆ, ಈ ಶತಮಾನದ ಆರಂಭಭಾಗದಿಂದ ವೈದಿಕತೆಯು ಕ್ಷೀಣಿಸಿದಂತೆ ಅಗ್ನಿಆರಾಧನೆಯ ಪ್ರಮಾಣವು ಕಡಮೆಯಾಗಿದೆ; ಸಂದರ್ಭಗಳು ಸಂಸ್ಕಾರಗಳಿಗೆ ಸೀಮಿತವಾಗುತ್ತಿವೆ. ಪರಿವರ್ತಿತ ಜೀವನವಿಧಾನವು ಕಡಮೆಮಾಡಿದ - ಶ್ರದ್ಧೆ, ಆರ್ಥಿಕಸಾಧ್ಯತೆ, ಸಮಯಸಾಧ್ಯತೆಗಳು- ಇವರ ಮೇಲೆಯೂ ಪ್ರತಿಕೂಲ ಪರಿಣಾಮ ಮಾಡಿವೆ. ಆದುದರಿಂದ, ವೈದಿಕದೇವತೆಗಳ ಮೇಲಿನ ಒತ್ತು ಕಡಿಮೆಯಾಗುತ್ತಿದೆ ಎನ್ನಬಹುದಾದರೂ, ಆ ದೇವತೆಗಳ ಆರಾಧನೆ ಕಣ್ಮರೆಯಾಗಿದೆ ಎಂದು ಹೇಳುವಂತಿಲ್ಲ.



118 ಚಾತುರ್ಮಾಸ್ಯ ಯಜ್ಞಕ್ಕೆ ಹೊರಟ ಋತ್ವಿಕರು

ಆ. ಪೌರಾಣಿಕ ದೇವತೆಗಳು:

ಅಗ್ನಿಮುಖವಾಗಿ ಮಾಡುವ ಶ್ರೌತಕರ್ಮಗಳಂತೆಯೇ, ಅಗ್ನಿಯನ್ನು ದೂತನನ್ನಾಗಿ ಮಾಡಿಕೊಂಡ ನವಗ್ರಹಹೋಮ, ಗಣಪತಿಹೋಮ ಮೊದಲಾದ ಸ್ಮೃತ್ಯುಕ್ತ ಹೋಮಗಳಲ್ಲಿ ವೈದಿಕ ದೇವತೆಗಳಂತೆಯೇ ಪೌರಾಣಿಕ ದೇವತೆಗಳಿಗೂ ಹವಿಸ್ಸು ಸಲ್ಲುವುದು ಅಗ್ನಿಕಾರ್ಯದಲ್ಲಿ ಆದ ಮುಖ್ಯ ವಿಸ್ತರಣ. ಕರ್ನಾಟಕದಲ್ಲಿ ಮೊದಲು ಮತ್ತೂರು, ಅನಂತರ ಹಾಸನಸೀಮೆ, ಲಿಂಗದಹಳ್ಳಿ; ಅನಂತರ ಮಧ್ಯದೇಶ (ಬೆಟ್ಟದಪುರವೂ ಸೇರಿ) ಈ ವಿಶ್ವಸಾಮಾನ್ಯ ಗುಣಗಳನ್ನು ಅಳವಡಿಸಿಕೊಂಡುದು ಕಳೆದ ಒಂದು ಶತಮಾನದಲ್ಲಿ ಆದ ಬೆಳವಣಿಗೆಯಾಗಿದೆ.




119 ಕರ್ನಾಟಕದಲ್ಲಿ ದೊರೆಯುವ ಬೆರಳೆಣಿಕೆಯ ಆಹಿತಾಗ್ನಿಗಳಲ್ಲಿ ಮತ್ತೂರಿನ ಗೃಹಸ್ಥರೂ ಸೇರಿದ್ದಾರೆ. ಇಲ್ಲಿ ತ್ರೇತಾಗ್ನಿಯನ್ನು ಕಾಣಬಹುದು. ಇಷ್ಟಿಯೊಂದರ ಸಂದರ್ಭ




120 ಧರ್ಮಪತ್ನಿಯು ಯಾವುದೇ ಗೃಹ್ಯಕರ್ಮದ ಅವಿಭಾಜ್ಯ ಅಂಗವಾಗಿರುತ್ತಾಳೆ. ಚಾತುರ್ಮಾಸ್ಯ ಯಜ್ಞದ ಸಂದರ್ಭ

1. ಇಂದಿಗೂ ಸಂಕೇತಿಗಳ ಮುಖ್ಯ ನೆಲೆಗಳಲ್ಲೊಂದಾದ ಮತ್ತೂರಿನಲ್ಲಿ ಗಣಪತಿ, ಚಂಡೀ, ರುದ್ರ, ಪುರುಷಸೂಕ್ತ, ಶ್ರೀಸೂಕ್ತ, ಗಾಯತ್ರಿ, ಲಲಿತಾ, ರಾಮತಾರಕ, ಅತಿರುದ್ರ, ತೇರಾಕೋಟಿ ಮೊದಲಾದ ಹೋಮಗಳು ವ್ಯಾಪಕವಾಗಿ ನಡೆಯುತ್ತಿವೆ.
2. ಅರ್ಧಶತಮಾನದ ಹಿಂದೆ ಮತ್ತೂರಿನ ಪ್ರಭಾವದಿಂದ ಹಾಸನಸೀಮೆಯಲ್ಲಿ ಚಂಡೀಹೋಮವು ನಡೆಯತೊಡಗಿದಾಗ, ಮಧ್ಯದೇಶದವರು ಅದನ್ನು ವಾಮಾಚಾರವೆಂದೇ ತಿರಸ್ಕರಿಸಿದರು. ಕಳೆದ ದಶಕದಲ್ಲಿ ಮಧ್ಯದೇಶದಲ್ಲಿಯೂ ಅದು ನಡೆಯುವಂತಾಯಿತು. ಇದು ನಿಧಾನ ಸ್ವೀಕರಣದ ಒಂದು ನಿದರ್ಶನವಾಗಿದೆ.
3. ಈ ಸಂಬಂಧದ ಒಂದು ಪ್ರಾತಿನಿಧಿಕ ಹೇಳಿಕೆ "... ನಮ್ಮಲ್ಲಿ ನವಗ್ರಹಹೋಮ ಮಾತ್ರ ಇತ್ತು. ಹಿಂದೆ ನಮ್ಮಲ್ಲಿ ವೇದಾಧ್ಯಯನ ಪ್ರಧಾನವಾಗಿತ್ತು. ವೇದಪಾರಾಯಣ, ರಾಮಾಯಣಪಾರಾಯಣ (ಚಿತ್ರ 122) ಪ್ರತಿಮನೆಯಲ್ಲೂ ನಡೆಯುತ್ತಿತ್ತು. ಆದ್ದರಿಂದ ಇತರ ಹೋಮಗಳ ಅಗತ್ಯ ಕಂಡಿರಲಿಲ್ಲ. ಹೊರ ಸಂಪರ್ಕವಾದಂತೆ ಗಣಪತಿಹೋಮ, ಆಯುಷ್ಯಹೋಮ ಇತ್ಯಾದಿ ಬಳಕೆಗೆ ಬಂದವು ..."



121 ಗಣಪತಿ ಹೋಮದ ಪೂರ್ಣಾಹುತಿ



122 ರಾಮಾಯಣ ಪಾರಾಯಣವು ನಿಯತವಾಗಿ ತಪಸ್ಸಿನಂತೆ ನಡೆಯುತ್ತದೆ

4. ಈಗ ಸಂಕೇತಿ ವೈದಿಕರು ಭಾರತಾದ್ಯಂತ ಸಂಪರ್ಕವನ್ನು ಹೆಚ್ಚಿಸಿಕೊಂಡಿರುವುದರಿಂದ ಹೊಸಸ್ವೀಕರಣಗಳು ಮುಕ್ತವಾಗಿ ನಡೆಯುತ್ತಿವೆ (ಅತಿರುದ್ರ, ತೇರಾಕೋಟಿ ಇತ್ಯಾದಿ). ಹೀಗೆ,

ಪೌರಾಣಿಕ ದೇವತೆಗಳ ವೈದಿಕೀಕರಣ ಪ್ರವೃತ್ತಿಯು[2] ಸಂಕೇತಿಗಳಲ್ಲಿಯೂ ಕ್ರಮಕ್ರಮವಾಗಿ ಸ್ವೀಕಾರವಾಗಿರುವುದನ್ನು ಕಾಣಬಹುದು.

ಇ. ಇಷ್ಟದೇವತೆ :

ಕಾಮ್ಯಗುಣವೇ ಮೂಲಪ್ರೇರಣೆಯಾಗಿರುವ ಇಷ್ಟದೇವತಾ ಜಪಗಳು ಇವರಲ್ಲಿ ವ್ಯಾಪಕವಾಗಿವೆ. ಸದ್ಗತಿಯ ಅಪೇಕ್ಷೆಗಿಂತ ಹೆಚ್ಚಾಗಿ ವಾಮಾಚಾರಿಗಳ ವಿರುದ್ಧ ರಕ್ಷಣೆ ಮತ್ತು ವೈದ್ಯಕೀಯ ಬಳಕೆಯು ಜಪೋಪದೇಶಗಳನ್ನು ಅವರಿಗೆ ಅನಿವಾರ್ಯಗೊಳಿಸಿರುವುದು ಅವುಗಳ ಪ್ರಮಾಣದಲ್ಲಿ ವ್ಯಕ್ತವಾಗುತ್ತದೆ.

ಜಪಗಳ ವಿವರ

ಕಾಲ ಮತ್ತು ಉದ್ದೇಶ	*ಪುರುಷರು*	*ಸುಮಂಗಲೆಯರು*	*ವಿಧವೆ, ಸಂನ್ಯಾಸಿ*
ಬೆಳಗ್ಗೆ: ಐಹಿಕ ಮತ್ತು ಪಾರಮಾರ್ಥಿಕ ಪ್ರಯೋಜನ	ಸುಬ್ರಹ್ಮಣ್ಯ, ಶಿವಪಂಚಾಕ್ಷರಿ, ರುದ್ರ, ಚಮಕ, ಮೃತ್ಯುಂಜಯ, ಗೋಪಾಲಕೃಷ್ಣ, ಗಣಪತಿ, ಸೂರ್ಯ, ದುರ್ಗಾಸಪ್ತಶತಿ, ಲಕ್ಷ್ಮೀನಾರಾಯಣ, ಸೂರ್ಯನಮಸ್ಕಾರ (ದಕ್ಷಿಣದಲ್ಲಿ ಶಕ್ತಿಪಂಚಾಕ್ಷರಿ ಕೂಡ)		
ಬೆಳಗ್ಗೆ: ಶುದ್ಧ ಪಾರಮಾರ್ಥಿಕ	ರಾಮಾಯಣ ಪಾರಾಯಣ, ಭಗವದ್ಗೀತಾ ಪಾರಾಯಣ, ವಿಷ್ಣುಸಹಸ್ರನಾಮ	ಗೌರಿ, ಮಂತ್ರಜಪ (ದಕ್ಷಿಣದಲ್ಲಿ ಶಿವಪಂಚಾಕ್ಷರಿ, ಸೂರ್ಯನಮಸ್ಕಾರ, ಗಣಪತಿಮಂತ್ರ ಕೂಡ. ಗೌರಿ ಇಲ್ಲ)	ಮಂತ್ರಜಪ
ಸಂಜೆ: ಐಹಿಕ ಮತ್ತು ಪಾರಮಾರ್ಥಿಕ	ಇಂದ್ರಾಕ್ಷಿ, ಶಿವಕವಚ		
ಸಂಜೆ: ಶುದ್ಧ ಪಾರಮಾರ್ಥಿಕ	ಸ್ತೋತ್ರ ಪಠಣಗಳು	ಹಾಡುಗಳು	ಮಂತ್ರಜಪ

ಇಷ್ಟದೇವತಾರಾಧನೆಯಲ್ಲಿ ಕೆಲವು ಗಮನಾರ್ಹ ಅಂಶಗಳು ಹೀಗಿವೆ:

1. ಪುರುಷರಿಗೆ ಮಾತ್ರ 'ಶಕ್ತಿಸಂಚಯ' ಜಪಗಳು ಮೀಸಲಾಗಿವೆ.
2. ಒಬ್ಬರೇ ಹಲವು ಜಪಗಳನ್ನು ಮಾಡಲು ಅವಕಾಶವಿದೆ.

---

[2] ಪೌರಾಣಿಕ ದೇವತೆಗಳು, ಪುರಾಣ ಕತೆಗಳು, ವಿಗ್ರಹಾರಾಧನೆ, ದೇವಸ್ಥಾನ, ರಥಗಳ ಕಲ್ಪನೆಗೆ ವೇದಗಳಲ್ಲಿಯೇ ಬೀಜರೂಪದ ಸಾಮಗ್ರಿ ಇದೆಯೆಂಬ ಅಭಿಪ್ರಾಯವೂ ಇದೆ.

3. ನಿತ್ಯಕರ್ಮಗಳ ಜೊತೆಗೆ ಈ ಜಪಗಳು ವಿಶೇಷವಾಗಿ ಸೇರುತ್ತವೆ.

4. ಪ್ರಾಂತೀಯ ವೈವಿಧ್ಯವು ಗಮನಿಸುವಂಥದಾಗಿದೆ. ಉದಾಹರಣೆಗೆ ಹೇಳುವುದಾದರೆ - ಮತ್ತೂರಿನಲ್ಲಿ ರಾಮಾಯಣ ಪಾರಾಯಣವು ಬೆಳಗ್ಗೆ ಮತ್ತು ಸಂಜೆ ಎರಡು ಹೊತ್ತೂ ನಡೆಯುತ್ತದೆ. ಕೇವಲ ಸುಂದರಕಾಂಡ ಪಾರಾಯಣ ಮಾಡುವವರು ಬೆಳಗ್ಗೆ ಮಾತ್ರ ಪಾರಾಯಣ ಮಾಡುತ್ತಾರೆ. ದಕ್ಷಿಣದಲ್ಲಿ ನಿತ್ಯವೂ ಅಥವಾ ನವಮಿಗಳಲ್ಲಿ; ಮಧ್ಯದೇಶದಲ್ಲಿ ನಿತ್ಯವೂ ಅಥವಾ ಭಾನುವಾರಗಳಲ್ಲಿ (ಮಾತ್ರ) ಸೂರ್ಯನಮಸ್ಕಾರದ ರೂಢಿಯೂ ಇದೆ.

5. ಮೂಲ ಆಶಯದ ವ್ಯಾಖ್ಯಾನದ ರೀತಿ ಮತ್ತು ವಿಶ್ವಸಾಮಾನ್ಯಗಳ ಅನುಕರಣದಿಂದಾದ ವೈವಿಧ್ಯ ಇದು: ಗಾಯತ್ರಿ ಉಪದೇಶ ಒಂದಾದರೆ ಉಳಿದವಕ್ಕೆ ಉಪದೇಶ ಬೇಕಿಲ್ಲ; ಹೆಚ್ಚಿನ ಒಂದು ಮಂತ್ರ ಉಪದಿಷ್ಟವಾದರೆ ಉಳಿದವಕ್ಕೆ ಬೇಕಿಲ್ಲ; ಎಲ್ಲಕ್ಕೂ ಉಪದೇಶ ಬೇಕು. ಈ ರೀತಿ ಹಲವಾರು ಅಭಿಪ್ರಾಯಗಳನ್ನು ಕಾಣಬಹುದು.

ಇಷ್ಟದೇವತೆಗಳ ಪ್ರಚಲಿತತೆಯ ಮೂಲಕ, ಶುದ್ಧ ಪಾರಮಾರ್ಥಿಕತೆಯು ಪರಿಸರದ ಒತ್ತಡದಿಂದ ಪ್ರಯೋಜಕತೆಯ ವಿಕೃತಿಗೆ ಒಳಗಾಗಿರುವುದನ್ನು ಇಲ್ಲಿ ಕಾಣಬಹುದು.


ಈ. ವಿಗ್ರಹಾರಾಧನೆ - ದೇವಸ್ಥಾನ - ಅರ್ಚಕ:

ಹೋಮ ಮತ್ತು ಜಪಗಳ ಮೂಲಕ ನಡೆಯುತ್ತಿದ್ದ ಆರಾಧನೆಯೊಂದಿಗೆ ಮೂರ್ತಿಪೂಜೆಯೂ ಅಳವಟ್ಟು ದೈವಾರಾಧನೆ ಸಂಕೀರ್ಣವಾಗಿ ಬೆಳೆದ ರೀತಿ ಉಳಿದ ಸಮುದಾಯಗಳಂತೆ ಸಂಕೇತಿಗಳಲ್ಲೂ ಕಂಡುಬರುತ್ತದೆ.


1. ಮೂಲದಲ್ಲಿ, ಕೇವಲ ಗರ್ಭಗುಡಿಯೇ ಅವರು ಕಟ್ಟಿದ ದೇವಸ್ಥಾನದ ಘಟಕ; ಅದೇ ಎರಡು-ಮೂರು ವಿಸ್ತರಣಗಳನ್ನು ಪಡೆದುದು ಅದರ ಗರಿಷ್ಠತೆ.[3] 'ಗರ್ಭಗುಡಿ', 'ಪೌಳಿ' ಎಂಬ ಪದಗಳನ್ನು ಬಿಟ್ಟರೆ ದೇವಸ್ಥಾನದ ರಚನೆಗೆ ಸಂಬಂಧಿಸಿದ ಬೇರೆ ಪದಗಳೂ

---

[3] **ಕರ್ನಾಟಕದ ಸಂಕೇತಿ ದೇವಾಲಯಗಳ ರಚನೆಗಳ ಮಾದರಿ**



ದಕ್ಷಿಣ ಸಂಕೇತಿಗಳ ದೇವಾಲಯಗಳ ರಚನೆಗಳ ಮಾದರಿ



ಗಮನಿಸಿ : ಗರ್ಭಗುಡಿ ಮತ್ತು ಅದರ ಸುತ್ತ ಪ್ರದಕ್ಷಿಣ ಪಥ

ಕೋಮಲವಲ್ಲೀ ದೇವಾಲಯ
ಅಯ್‌ಕುಡಿ

ಸರಸ್ವತೀ ದೇವಾಲಯ
ತಿರುನೆಲ್‌ವೇಲಿ

(ಈ ದೇವಾಲಯಗಳಿಗೆ ಹೊಂದಿಕೊಂಡ ವಿಸ್ತರಣಗಳು ದೇವಾಲಯಕ್ಕೆ ನೇರವಾಗಿ ಸಂಬಂಧಿಸಿದುವಲ್ಲ)



123 ತೆಂಗಿನ ಕೆರೆಯ ಒಂದು ಗುಡಿ

ಇವರಲ್ಲಿಲ್ಲ. ಮೂಲದ ಮಣ್ಣಿನಗೂಡುಗಳೇ ಕಲ್ಲುಕಟ್ಟಡಗಳಾಗಿ ಪರಿವರ್ತನೆಗೊಂಡ ಇತ್ತೀಚಿನ ನಿದರ್ಶನಗಳೂ ಇವೆ. ದೇವಸ್ಥಾನವು ಸಾರ್ವತ್ರಿಕಗುಣದ ಅಳವಡಿಕೆಯಾಗಿ ಬಂದರೂ, ಅದು ಅವರ ಆಸಕ್ತಿಯನ್ನು ಗಾಢವಾಗಿ ಆಕರ್ಷಿಸದುದು ಆ ಕಟ್ಟಡಗಳ ಮೊದಲ ಸರಳ ರಚನೆಯಲ್ಲಿಯೂ ವ್ಯಕ್ತವಾಗುತ್ತದೆ. (ಚಿತ್ರ 123, 124) ಅವರು ದೇವಾಲಯಗಳಿಗೆ ಹೋಗುವ ಅನಿಯತತೆ ಅಥವಾ ಅವರದೇ ದೇವಾಲಯಗಳಲ್ಲಿ ನಡೆಯುವ ಕನಿಷ್ಠಸೇವೆ[4] ಕೂಡ ಇದನ್ನೇ ಪೋಷಿಸುತ್ತದೆ.

2. ಸಂಕೇತಿ ಸಮುದಾಯವು ಮಾತ್ರವೇ ಇದ್ದ ಪ್ರಾಚೀನ ನೆಲೆಗಳಲ್ಲಿ ವಿಷ್ಣುದೇವಾಲಯ ಇಲ್ಲದವು ಇವೆ; ಆಕಸ್ಮಿಕವಾಗಿ, ಸಂನ್ಯಾಸಿಯೊಬ್ಬನು ತಂಗಲೆಂದೇ ಶಿವಾಲಯವನ್ನು ಕಟ್ಟಿಸಿದುದೂ ಇದೆ; ರಾಮಮಂದಿರಗಳು ಇತ್ತೀಚೆಗಷ್ಟೆ ಸ್ವೀಕಾರಗೊಂಡ ಇತಿಹಾಸವಿದೆ. ಈ ಸಂಗತಿಗಳು, ಯಾವುದೇ ದೇವಾಲಯವು ಅನಿವಾರ್ಯವೆಂದು ಸಂಕೇತಿಗಳು ಪರಿಗಣಿಸದಿದ್ದ ಅಂಶವನ್ನೇ ಸೂಚಿಸುತ್ತವೆ.



124 ಬಸವಾನಿಯ ದೇವಸ್ಥಾನದ ಮುಂಭಾಗದ ವಿಸ್ತರಣ

3. ಸಂಕೇತಿಗಳು ಆಗಮ ದೀಕ್ಷಿತರಲ್ಲ; ಇವರೇ ಕಟ್ಟಿದ ದೇವಾಲಯಗಳು ಆಗಮಿಕ ದೇವಾಲಯಗಳಲ್ಲ. ಇವು ವೈದಿಕ ಪ್ರತಿಷ್ಠೆಗಳು ಮತ್ತು ಪೂಜೆಯೂ ವೈದಿಕ ವಿಧಾನದ್ದೇ. ಇವರ (ಕರ್ನಾಟಕದ) ಮನೆದೇವರುಗಳು ಬಹುಪಾಲು ಆಗಮಿಕ ದೇವಾಲಯಗಳೇ ಆಗಿರುವುದು, ತಮ್ಮದೇ ದೇವಾಲಯಗಳನ್ನು ಕಟ್ಟಿಕೊಂಡುದರ ಪೂರ್ವಸ್ಥಿತಿಯ ಬೆಳವಣಿಗೆ ಎಂಬುದೂ ಇದರಿಂದ ಸ್ಪಷ್ಟವಾಗುತ್ತದೆ.

ಇವರದು ಎಲ್ಲಿಯೂ ಅರ್ಚಕ ವೃತ್ತಿ ಅಲ್ಲ. ತಮ್ಮದೇ ದೇವಾಲಯಗಳನ್ನು ಕಟ್ಟಿಕೊಂಡಂತೆ ಅರ್ಚನೆಗೂ ತೊಡಗಿದುದು ಇತ್ತೀಚಿನ ಪ್ರವೃತ್ತಿಯಾಗಿದೆ. ಇತ್ತೀಚಿನ ಶತಮಾನಗಳಲ್ಲಿ ತಮಿಳುನಾಡಿನಲ್ಲಿ ಶಾಸ್ತಾ, ಸುಬ್ರಹ್ಮಣ್ಯ; ಕರ್ನಾಟಕದಲ್ಲಿ ಶಿವಾಲಯ, ಗಣಪತಿ ದೇವಸ್ಥಾನಗಳಲ್ಲಿ ಮಾತ್ರ ಇವರು ಅರ್ಚಿಸತೊಡಗಿದುದಿದೆ. ಆಗಮಿಕವಲ್ಲದ, ಇತ್ತೀಚೆಗೆ ಕಟ್ಟಿದ ವಿಷ್ಣುದೇವಾಲಯಗಳಿಗೂ ತಾವೇ ಅರ್ಚಕರಾದುದು ಅದರ ಮುಂದಿನ ಬೆಳವಣಿಗೆಯಾಗಿದೆ. ಹೀಗೆ ಅರ್ಚಕರಾಗಿ ಪ್ರವೇಶಿಸಿದುದಕ್ಕೆ ಇರುವ ಒತ್ತಡಗಳಲ್ಲಿ ಎರಡು ಮುಖ್ಯವಾಗಿವೆ: ಮೊದಲನೆಯದಾಗಿ ಪೂಜೆ ನಿಲ್ಲಬಾರದೆಂಬ ಆಶಯವಾದರೆ ಎರಡನೆಯದು, ಆರ್ಥಿಕ ಒತ್ತಡ. "ವಿಷ್ಣುದೇವಾಲಯದಲ್ಲಿ ಸಂಕೇತಿಗಳು ಪೂಜಿಸಿದರೆ ಏಳಿಗೆ ಕೊಡುವುದಿಲ್ಲ ಎಂಬುದೊಂದು ನಂಬಿಕೆ. ಶಿವ ದೇವಾಲಯದಲ್ಲಿ ಸತತವಾಗಿ ಹನ್ನೆರಡು ವರ್ಷ ಪೂಜಿಸಿದರೆ ಬ್ರಾಹ್ಮಣ್ಯ ನಷ್ಟವಾಗುತ್ತದೆಂಬುದು ಶಾಸ್ತ್ರನಿರ್ದೇಶನ. ದೇವಸ್ಥಾನದಲ್ಲಿ ಪೂಜೆ ಮಾಡುವವರನ್ನು ಸಮುದಾಯವು ವೈದಿಕರಷ್ಟು ಗೌರವದಿಂದ ಕಾಣುವುದಿಲ್ಲ" ಎಂಬುದು ಗಮನಾರ್ಹವಾದ ಅಭಿಪ್ರಾಯ.

[4] ನಿತ್ಯಪೂಜೆಯಲ್ಲದೆ ಕಾರ್ತಿಕಮಾಸದ ದೀಪಾರಾಧನೆ, ಶಿವರಾತ್ರಿಯ ನಾಲ್ಕುಯಾಮದ ಅಭಿಷೇಕ, ಶ್ರಾವಣ ಸೋಮವಾರಗಳ ಅಭಿಷೇಕ, ಸೋಮಸೂತ್ರ ಕಟ್ಟುವುದು - ಅವರ ದೇವಸ್ಥಾನಗಳ ಲಕ್ಷಣ ಮತ್ತು ವಿಶೇಷವಾಗಿದೆ.

ಆಗಮಿಕ ದೇವಾಲಯಗಳ ಸಂದರ್ಭದಲ್ಲಿ, ಅದನ್ನು ವೈದಿಕೀಕರಣಗೊಳಿಸುವ ಪ್ರಕ್ರಿಯೆ ಇಲ್ಲಿ ಮುಖ್ಯವಾಗಿ ಗಮನಿಸಬೇಕಾದ ಅಂಶವಾಗುತ್ತದೆ.

4. ದೇವಸ್ಥಾನ ಮತ್ತು ವಿಗ್ರಹಾರಾಧನೆಯು ಹೊಸ ಅಳವಡಿಕೆಯಾದರೂ ದೇವತಾವೈವಿಧ್ಯದ ಬಗೆಗಿನ ಮುಕ್ತಧೋರಣೆ ವೇದಮೂಲದ್ದು. ಅವರು ತಮ್ಮ ನೆಲೆಗಳಲ್ಲಿ ಬಳಕೆಗೆ ಇಟ್ಟುಕೊಂಡ ದೇವಾಲಯಗಳು ಈ ವೈವಿಧ್ಯದ ಚಿತ್ರ ಕೊಡುತ್ತವೆ:

0.1 ಕೌಶಿಕ : ಲಕ್ಷ್ಮೀಕೇಶವ, ಈಶ್ವರ, ಗಣಪತಿ, ಹನುಮಂತ, ಗ್ರಾಮದೇವತೆ ದ್ಯಾವಮ್ಮ.

0.2 ಮತ್ತೂರು : ಲಕ್ಷ್ಮೀಕೇಶವ, ಲಕ್ಷ್ಮೀನಾರಾಯಣ, ತ್ರ್ಯಂಬಕೇಶ್ವರ, ಸೋಮೇಶ್ವರ, ಗೌರೀಶಂಕರ, ಆಂಜನೇಯ, ದುರ್ಗಮ್ಮ, ಶ್ರೀರಾಮ.

0.3 ಹೊಸಹಳ್ಳಿ : ಚೆನ್ನಕೇಶವ, ಈಶ್ವರ, ದುರ್ಗಮ್ಮ, ಶ್ರೀರಾಮ.

0.4 ಬಸವಪಟ್ಟಣ : ಲಕ್ಷ್ಮೀಕಾಂತ, ವೆಂಕಟರಮಣ, ಈಶ್ವರ, ಸರ್ವಮಂಗಳ, ಗಣಪತಿ, ಆಂಜನೇಯ, ಶ್ರೀರಾಮ, ರಾಘವೇಂದ್ರಸ್ವಾಮಿ, ಗ್ರಾಮದೇವತೆ ಮಾರಮ್ಮ.

0.5 ಶಾಪತ್ತೂರ್ : ವಹ್ನಿನಾಥೇಶ್ವರರ್ ಮತ್ತು ಶಿವಕಾಮಿ ಅಂಬಾಳ್, ನರಸಿಂಗನಾಥಸ್ವಾಮಿ ಮತ್ತು ಆವಡಿ ಅಂಬಾಳ್, ಶ್ರೀಶೈಲನಾಥಪತಿ ಮತ್ತು ಪರಮಕಲ್ಯಾಣಿ.

0.6 ಶೆಂಕೋಟ್ಟೈ : ಕುಲಶೇಖರನಾಥರ್ ಮತ್ತು ಧರ್ಮಸಂವರ್ಧಿನಿ, ನವನೀತ ಕೃಷ್ಣ.

0.7 ಬೆಟ್ಟದಪುರ : ಶ್ರೀರಾಮ, ಮಲ್ಲಿಕಾರ್ಜುನ, ಗ್ರಾಮದೇವತೆ ಇತ್ಯಾದಿ.

ಜೊತೆಗೆ, ಯಾವುದೇ ದೇವಾಲಯದಲ್ಲಿ ಸೇವೆಸಲ್ಲಿಸುವ ಮುಕ್ತಭಾವ ಸಂಕೇತಿ ಸಮುದಾಯದಲ್ಲಿದೆ. ತಮಗೆ ಆದರ್ಶವಾದ ಶಂಕರಾಚಾರ್ಯರ ಚಿತ್ರಪಟ, ಜಯಂತ್ಯುತ್ಸವ, ಮಠ ಇವು ಯಾವುವೂ ಇಲ್ಲದಾಗಲೂ ರಾಘವೇಂದ್ರಸ್ವಾಮಿಗಳು, ರಮಣಮಹರ್ಷಿಗಳು, ಸತ್ಯಸಾಯಿಬಾಬಾ ಮೊದಲಾದ ಧಾರ್ಮಿಕ ಪುರುಷರ ಸೇವೆ, ಆರಾಧನೆ ನಡೆಸುವುದು ಸಂಕೇತಿಗಳಲ್ಲಿ ಕಂಡುಬರುವ ಮುಕ್ತಭಾವಕ್ಕೆ ನಿದರ್ಶನವಾಗಿದೆ.

5. ಸಾತ್ತ್ವಿಕ ದೇವತೆಗಳಂತೆಯೇ, ಉಗ್ರದೇವತೆಗಳೂ ಕ್ಷುದ್ರದೇವತೆಗಳೂ ಸ್ವೀಕಾರಗೊಂಡುದರ ಹಿಂದೆ ಅವುಗಳ ಪ್ರಯೋಜಕತೆಯೂ ಕೆಲಸ ಮಾಡಿದೆ. "ಚಿಲಕುಂದದಲ್ಲಿ ಒಂದು ಓಣಿಯಲ್ಲಿ ಕಲ್ಲೊಂದು 'ಉದ್ಭವ'ವಾಯಿತು. ಅದು ಗ್ರಾಮದೇವತೆಯೆಂದು ಯಾರಿಗೋ ಸ್ವಪ್ನವಾಯಿತು. ಅದರಿಂದಾಗಿ ಸಂಕೇತಿಗಳು ಅದನ್ನು ಆಕರ್ಷಿಸಿ ತಂದು ಒಂದು ದೇವಸ್ಥಾನ ಕಟ್ಟಿದರು. ಅದು 'ವಾಣಿ ಅಮ್ಮ' ಆಯಿತು." ಪ್ರತ್ಯಕ್ಷವಾದ ತಾತ್ಕಾಲಿಕ ಪ್ರಯೋಜನಕ್ಕೆ ಒಲಿಯುವುದು ಮನುಷ್ಯನ ಮೂಲಭೂತ ಗುಣ. ವಿಲಿಯಂ ಕ್ರುಕ್ ಭಾರತದ ಈ ಸಾರ್ವತ್ರಿಕ ಪ್ರವೃತ್ತಿಯ ಕಡೆಗೆ ಗಮನ ಸೆಳೆದಿದ್ದಾನೆ, "ಸಾಮಾನ್ಯವಾಗಿ ಸೀಮಿತ ಪ್ರಾದೇಶಿಕ ಪ್ರಚಲಿತತೆಯ ಈ ವರ್ಗದ ದೇವತೆಗಳು ದೊಡ್ಡ ಖ್ಯಾತಿಯ ದೇವತೆಗಳಿಗಿಂತ ಹಳ್ಳಿಗರ ದೃಷ್ಟಿಯಲ್ಲಿ ನಿಖರವಾಗಿ ಪ್ರಯೋಜಕವಾದವು. ಸೂಕ್ತವಾದ ರೀತಿಯಲ್ಲಿ ತೃಪ್ತಿಪಡಿಸಿ ಪ್ರಾರ್ಥಿಸಿದ್ದೇ ಆದರೆ ಅವು ಕಳೆದುಹೋದ ಪಾತ್ರೆಯೊಂದನ್ನು ಹುಡುಕಿಕೊಡಲು ನೆರವಾಗಬಲ್ಲವು; ರೋಗಿಯೊಬ್ಬನನ್ನು ಗುಣಪಡಿಸಬಲ್ಲವು ಅಥವ ನೆರೆಯವನ ಹಸುವನ್ನು ರೋಗಗ್ರಸ್ತವಾಗಿ ಮಾಡಬಲ್ಲವು. ಅವನ್ನು ದೊಡ್ಡದೇವತೆಗಳಾದ ಶಿವ ಅಥವಾ ವಿಷ್ಣು ಮಾಡಲಾರವು ..."[5] ತಮ್ಮ 'ದೊಡ್ಡ ಖ್ಯಾತಿಯ ದೇವತೆ'ಗಳನ್ನು ಬಲವಾಗಿ ನಂಬಿ ತಬ್ಬಿಹಿಡಿದುಕೊಂಡೇ (ಇತ್ತೀಚಿನ ದಿನಗಳಲ್ಲಿ) ಆಗಾಗ ಕ್ಷುದ್ರದೇವತೆಗಳ ಕಡೆಗೆ ಪ್ರಾಣಾಂತಕ ಕ್ಷಣಗಳಲ್ಲಿ ಕಣ್ಣುಹಾಯಿಸಿರುವುದು ಸಂಕೇತಿ ಸಮುದಾಯದ ವಿಶೇಷವಾಗಿದೆ. ಸದ್ಯದ ಪ್ರಯೋಜನವನ್ನು ಮೀರಿದ ಅಲೌಕಿಕತೆಯ ಕಡೆಗಿನ ದೃಷ್ಟಿಯನ್ನು ಅದು ಅಲುಗಿಸಿಲ್ಲ. ಕ್ಷುದ್ರದೇವತೆಗಳ ಬಗೆಗಿನ ಬೆಳವಣಿಗೆಯ ರೀತಿಯಲ್ಲಿ ಕೆಲವು ಅಂಶಗಳನ್ನು ಇಲ್ಲಿ ಉದಾಹರಿಸಿದೆ.

---

5 Popular religion and folklore of Northern India (2nd Ed). Crooke (W), Munshiram Manoharlal, Delhi, 1968, p.36.

0.1 ಕಷ್ಟಗಳು, ರೋಗಗಳು ತೀವ್ರವಾಗಿ ಕಾಡಿದಾಗ ಅಲ್ಲಿನ ಬ್ರಾಹ್ಮಣೇತರ ಪೂಜಾರಿಗಳಿಂದಲೇ ಆಯಾ ದೇವತೆಗಳಿಗೆ ಪೂಜೆ ಸಲ್ಲಿಸುತ್ತಾರೆ.

0.2 ಪ್ರತಿ ಶುಭಸಮಾರಂಭಗಳ ವೇಳೆ ಸೇವೆ ಸಲ್ಲಿಸುವ ಮೂಲಕ ಮನೆದೇವರ ಸ್ಥಾನಮಾನವನ್ನು ಕಲ್ಪಿಸಿದ್ದಾರೆ (ಉದಾಹರಣೆಗೆ ಕೊಂಡಗುಳದ ಗಿಡ್ಡಮ್ಮ ಮತ್ತು ಬೆಂಕ್ಯಮ್ಮ.)

0.3 ವರ್ಷಕ್ಕೊಮ್ಮೆ, ಬ್ರಾಹ್ಮಣೇತರ ಪೂಜಾರಿಯು ಪೂಜೆಮಾಡುವ ದೇವಾಲಯಗಳನ್ನು ಶುದ್ಧೀಕರಿಸಿ ತಾವೇ ಪೂಜೆಮಾಡುತ್ತಾರೆ.

0.4 ವೈದಿಕ ಕ್ರಮದಂತೆಯೇ ಆ ದೇವತೆಗಳಿಗೂ ಪೂಜೆ ಮಾಡುತ್ತಾರೆ.

0.5 ಜೊತೆಗೆ, ಎಡೇಇಟ್ಟು ಪೂಜಿಸುವ ಬ್ರಾಹ್ಮಣೇತರ ಕ್ರಮವನ್ನೂ[6] ಅನುಸರಿಸಿದ್ದಾರೆ.

ಕ್ಷುದ್ರದೇವತೆಯ ವೈದಿಕೀಕರಣದ ಪ್ರಕ್ರಿಯೆಯಲ್ಲಿ ಪರ್ಯಾಯವಾಗಿ ಆದ ಇತ್ತೀಚಿನ ಮಹತ್ತ್ವದ ಬೆಳವಣಿಗೆ ಎಂದರೆ, ಅಲ್ಲಲ್ಲಿ, ಅಪರೂಪವಾಗಿಯಾದರೂ ಗಂಭೀರ ಸಂದರ್ಭಗಳಲ್ಲಿ ಅಬ್ರಾಹ್ಮಣರ ಮೂಲಕ ಪ್ರಾಣಿಬಲಿಯನ್ನು ಅರ್ಪಿಸತೊಡಗಿದ ಸಂಗತಿಯಾಗಿದೆ.

ತ್ರಿಕಾಲದಲ್ಲಿಯೂ ನಡೆಯಬೇಕಾದ ವೈಯಕ್ತಿಕ ಮತ್ತು ಕೌಟುಂಬಿಕ ಅಮೂರ್ತದೈವರಾಧನೆಯ ದಟ್ಟಧಾರ್ಮಿಕತೆಗೆ ಸ್ವಗೃಹವೇ ಅನಿವಾರ್ಯವಾಗಿ ಯೋಗ್ಯಸ್ಥಾನವಾಗಿದ್ದುದು, ಮನೆಯಿಂದ ಹೊರಗಿನ ಸಾಮೂಹಿಕ ಮೂರ್ತಿಪೂಜಾನೆಲೆಯೊಂದಕ್ಕೆ ಸ್ಥಳಾಂತರಗೊಂಡಿತು. ಅದು ಸಂಕೀರ್ಣವಾಗಿ ಬೆಳೆದು, ಮೂಲ ವೈದಿಕತೆಯಿಂದಲೂ ದೂರಕ್ಕೆ ಸರಿಸಿತು. ಆದರೆ ಅದು ವೈದಿಕವಿಧಾನದ ಜೊತೆಗೆ ಮತ್ತೊಂದು ಮಾರ್ಗವಾಗಿ ಮುಂದುವರಿಯಿತು.

ಉ. ಮನೆದೇವರು:

ಕುಲದೇವತಾಪದ್ಧತಿ ಇಲ್ಲದ ಸಂಕೇತಿಗಳು ದೇವಸ್ಥಾನಸಂಸ್ಕೃತಿಯ ಮುಂದಿನ ಹೆಜ್ಜೆಯಾಗಿ ಮನೆದೇವರುಗಳನ್ನು ಬೆಳೆಸಿಕೊಂಡಿದ್ದಾರೆ. ದಕ್ಷಿಣದಲ್ಲಿ, ಕಾಲಕ್ರಮದಲ್ಲಿ ಚದುರಿಕೊಂಡಾಗಲೂ ಊರ್‌ಕಾಡ್ ಶಾಸ್ತಾ (ಅಂಬಾಸಮುದ್ರಂ ಬಳಿ); ತರವೈ ಶಾಸ್ತಾ; ಗೋಮತಿ ಅಂಬಾಳ್ (ಶಂಕರನ್ ಕೋವಿಲ್); ನಡುಕ್ಕಾ-ಉಳಯಾರ್ ಶಾಸ್ತಾ ಇತ್ಯಾದಿಯಾಗಿ ತಮ್ಮ ಮೂಲಮನೆದೇವರನ್ನು ಉಳಿಸಿಕೊಂಡ ನಿದರ್ಶನವಿರುವಂತೆಯೇ ಸಮೀಪದ ದೇವಸ್ಥಾನಕ್ಕೆ ಬದಲಿಸಿಕೊಂಡ ಪ್ರವೃತ್ತಿಯನ್ನೂ[7] ಗುರುತಿಸಬಹುದಾಗಿದೆ. ಕರ್ನಾಟಕಕ್ಕೆ ವಲಸೆ ಬಂದವರೂ ಈ ಪ್ರವೃತ್ತಿಗೆ ಅನುಗುಣವಾಗಿ ಪೂರ್ಣವಾಗಿ ಹೊಸ ಮನೆದೇವರುಗಳನ್ನು ಕಲ್ಪಿಸಿಕೊಂಡರು; ಈ ಪ್ರವೃತ್ತಿಯು ಸಾಮಾನ್ಯ ಕ್ರಮಕ್ಕಿಂತ ಭಿನ್ನವಾದುದು.[8] ಕರ್ನಾಟಕದಲ್ಲಿಯೇ ವಿವಿಧೆಡೆಗೆ ಚದುರಿದಂತೆ ಪರ್ಯಾಯ ಮನೆದೇವರುಗಳನ್ನು ಮಾಡಿಕೊಂಡರು. ಒಂದೇ ಗೋತ್ರ, ಒಂದೇ ಮನೆತನವು (ಮೂಲ ಆಶಯಕ್ಕೆ ಭಿನ್ನಬಾರದ ಮುಕ್ತತೆಯಿಂದಾಗಿ,) ಭಿನ್ನ ಮನೆದೇವರುಗಳನ್ನು

6 ಉದಾಹರಣೆಗೆ : ಸೋಮನಹಳ್ಳಿಯ 'ದೊಡ್ಡಮ್ಮ'ನಿಗೆ ಇರುವುದು ಅಬ್ರಾಹ್ಮಣ ಅರ್ಚಕ. ಆದರೆ ಕಾರ್ತಿಕಾದಿಗಳಲ್ಲಿ ಸಂಕೇತಿಗಳು ಆ ದೈವಕ್ಕೆ ವೈದಿಕಪೂಜೆ, ಅಭಿಷೇಕ ಸಲ್ಲಿಸುತ್ತಾರೆ. ಆ ದೇವತೆಗೆ ನಡೆಯುವ 'ಅಮ್ಮನಹಬ್ಬ'ದಲ್ಲಿ (ನವರಾತ್ರಿ) ತೋಟದಲ್ಲಿ ಹೊಂಬಾಳೆ, ಐದು ಕಲ್ಲು ಇಟ್ಟು, ಆ ದೇವತೆಯನ್ನು ಆವಾಹನೆ ಮಾಡಿ ಪೂಜಿಸುತ್ತಾರೆ. ಕಲಶಸ್ಥಾಪನೆಮಾಡಿ ಅದರ ಸುತ್ತ ಹದಿನಾರು ಸುಳಿಬಾಳೆಎಲೆಯಲ್ಲಿ ಎಡೆ ಇಡುತ್ತಾರೆ. ಕೊನೆಗೆ ಅಗಸರು ಅದನ್ನು ಒಯ್ಯುತ್ತಾರೆ. ಸಮುದಾಯದ ಉಳಿದೆಲ್ಲಿಯೂ ಹೀಗೆ ವಿವರವಾಗಿ 'ಎಡೇಇಡುವ' ಪದ್ಧತಿ ಇಲ್ಲ. ಮಾರಿದೇವತೆಗೆ ಮೊಸರನ್ನದ ಎಡೆ, ನದಿಗೆ ಎಡೆ ಹಾಕುವುದು - ಇಂಥವು ಇತರ ಸರಳ ಸಂದರ್ಭಗಳು.

7 ಗರ್ಭಿಣಿಯು ಗಾಡಿಯಲ್ಲಿ ಯಾನಮಾಡುತ್ತಿದ್ದಾಗ ಪ್ರಸವವೇದನೆಯಾದದ್ದು ಕೊಳತ್ತುಶಾಸ್ತಾ ದೇವಾಲಯದ ಬಳಿ. ಹರಸಿಕೊಂಡದ್ದು ಆ ದೇವರಿಗೆ; ಸುಖಪ್ರಸವವೂ ಆಯಿತು. ಅದು ಮನೆದೇವರಾಗಿ ಸ್ವೀಕೃತವೂ ಆಯಿತು. ಮಠದ ಸ್ವಾಮಿಗಳ ನಿರ್ದೇಶನದಂತೆ, ಸಮೀಪದ ದೈವವನ್ನೇ ಮನೆದೇವರಾಗಿ ಸ್ವೀಕರಿಸಿದ ಇತ್ತೀಚಿನ ನಿದರ್ಶನವು ತಿರುವನಂತಪುರದಲ್ಲಿದೆ. ಅಯ್‌ಕುಡಿಯಿಂದ ಎರಚ್ಚಕೊಳಂಗೆ ವಲಸೆಬಂದವರು ಮೂಲದ ಸುಬ್ರಹ್ಮಣ್ಯನ ಬದಲು ತರವೈಶಾಸ್ತಾವನ್ನೇ ಮನೆದೇವರಾಗಿ ಮಾಡಿಕೊಂಡರು. ಕೇರಳಗಡಿಯ ಭಾಗದವರು ಹೆಚ್ಚಾಗಿ ಶಾಸ್ತಾವನ್ನೇ ಮನೆದೇವರಾಗಿ ಹೊಂದಿದ್ದಾರೆ. ಶೆಂಕೋಟ್ಟೈನ ಶಾಸ್ತಾಭಕ್ತರು ತಿರುವನಂತಪುರಕ್ಕೆ ಬಂದಾಗ ತಮ್ಮ ತಮ್ಮ ಮನೆಯಲ್ಲಿಯೇ ಮನೆದೇವರಾದ ಶಾಸ್ತಾವನ್ನು ಪ್ರತಿಷ್ಠಾಪಿಸಿ ಪೂಜಿಸತೊಡಗಿದರು. ಸಂಕೇತಿಗಳಿಗೆ, ಮನೆದೇವರೆನ್ನುವುದು ಒಂದು ಅನುಕೂಲ ವ್ಯವಸ್ಥೆ. ಅವರವರು ಪೂಜಿಸಿ ಸಿದ್ಧಮಾಡಿಕೊಂಡದ್ದು ಮನೆದೇವರಾಗುತ್ತದೆ.

8 ವಿವರಗಳಿಗೆ ನೋಡಿ: ಪಂಚಾಯತನ ದೇವರಪೂಜೆ, ಪುರೋಹಿತ ಶಂಕರನಾರಾಯಣಭಟ್ಟ, ಪುರೋಹಿತ ಪ್ರಕಾಶನ, ಕೆದಿಲ, ದ.ಕ., ೧೯೭೭, ಪು.೧೯.

ಹೊಂದಿರುವುದು ಸಾಧ್ಯವಾಗಿದೆ. ಈ ಪ್ರಕ್ರಿಯೆಯಲ್ಲಿ ಸ್ಥಳೀಯ ರೂಢಿಗಳನ್ನು ಅವರು ಅಳವಡಿಸಿಕೊಂಡಿರುವುದೂ ಮನೆದೇವತೆಗಳ ಪಟ್ಟಿಯಿಂದ ಸ್ಪಷ್ಟವಾಗುತ್ತದೆ (ಪಟ್ಟಿ 16 ಪು. 316-318).

1. ಒಂದೂವರೆ ಶತಮಾನದ ಹಿಂದೆ ಮಧ್ಯದೇಶದ ಭಾರದ್ವಾಜೀ ವಂಶವೊಂದು ತನ್ನ ಮನೆದೇವರನ್ನು ಕೌಶಿಕದ ಮನೆದೇವರ ಬದಲು ಸಮೀಪದ ರಾಮನಾಥಪುರದ ಸುಬ್ರಹ್ಮಣ್ಯೇಶ್ವರನಿಗೆ ಬದಲಿಸಿಕೊಂಡಿತು. ಆ ವಂಶದ ಪ್ರಸಿದ್ಧ ವೈದ್ಯರೊಬ್ಬರಿಂದ ನಾಗಸರ್ಪವೊಂದು ತನ್ನ ಕಣ್ಣಿಗೆ ನೆಟ್ಟಿದ್ದ ಮುಳ್ಳನ್ನು ತೆಗೆಸಿಕೊಂಡಿತು ಮತ್ತು ವಂಶವನ್ನು ರಕ್ಷಿಸುವುದಾಗಿ ಹರಸಿತು ಎಂಬುದನ್ನು ಇದಕ್ಕೆ ಹಿನ್ನೆಲೆಯಾಗಿ ಹೇಳಲಾಗುತ್ತಿದೆ (ವಿಭಿನ್ನ ನೆಲೆಗಳಲ್ಲಿ ಇಂಥದೇ ಐತಿಹ್ಯಗಳಿವೆ).

2. ದಕ್ಷಿಣದಲ್ಲಿ - ಕನಸಿನಲ್ಲಿ ಬಂದ ಆದೇಶದಂತೆ ಅಯ್‌ಕುಡಿಯಲ್ಲಿ ಕೋಮಲವಲ್ಲಿಯ ದೇವಸ್ಥಾನ ಕಟ್ಟಿಸಿದುದು ಮತ್ತು ಅದೇ ಮನೆದೇವರಾದುದು; ಕುತ್ತಾಲದ ಧರ್ಮಸಂವರ್ಧಿನಿ ಅಮ್ಮಾಳ್‌ದೇವಿಯ ಸನ್ನಿಧಿಯಲ್ಲಿ 'ಐಕ್ಯನಾದ' ಬ್ರಹ್ಮಚಾರಿ ಮತ್ತು ಸಿದ್ಧ ಅಣ್ಣಾವಿಪಿಳ್ಳೆ ಎಂಬ ಬಾಲಕನೇ ಆ ವಂಶಸ್ಥರಿಗೆ ಮನೆದೇವರಾದುದು; ಯಜ್ಞನಾರಾಯಣನೆಂಬ ಬಾಲಕನು ಇದ್ದಕ್ಕಿದ್ದಂತೆ 'ಮಾಯವಾಗಿ' ವಂಶರಕ್ಷಕನಾಗುವುದಾಗಿ 'ಆಕಾಶವಾಣಿ' ನುಡಿದುದರಿಂದ ಆತನೂ ಆ ಮನೆತನದಲ್ಲಿ ಮನೆದೇವರ ಸ್ಥಾನಮಾನ ಪಡೆದುದು - ಇತ್ತೀಚಿನ ಇತಿಹಾಸದಲ್ಲಿ ಕಂಡ ಆವಿಷ್ಕಾರಗಳಾಗಿವೆ.

3. ಕರ್ನಾಟಕದ ಪರಿವರ್ತನೆಗಳು:

ಯಗಟಿ ಮಲ್ಲಿಕಾರ್ಜುನ ಮನೆದೇವರಾದ ಕುಟುಂಬಕ್ಕೆ ಬೆಟ್ಟದಪುರ ಮಲ್ಲಿಕಾರ್ಜುನ ಮನೆದೇವರಾದುದು, ಬೇಲೂರು ಕೇಶವ ಮನೆದೇವರಾದ ಕುಟುಂಬಕ್ಕೆ ಸಾಲಗಾಮೆ ಕೇಶವ (ಕನಸಿನ ಆದೇಶ) ಮನೆದೇವರಾದುದು, ಕೌಶಿಕದ ಕೇಶವ ಮನೆದೇವರಾದ ಕುಟುಂಬಕ್ಕೆ ಮತ್ತೂರು ಕೇಶವ ಮನೆದೇವರಾದುದು, ದೊಡ್ಡತಿರುಪತಿವೆಂಕಟೇಶ್ವರ ಮನೆದೇವರಾದ ಕುಟುಂಬಕ್ಕೆ ಮಾಲೆಕಲ್ ಮತ್ತು ಮಾವಿನಕೆರೆ ವೆಂಕಟೇಶ್ವರ ಮನೆದೇವರಾದುದು, ಸುಬ್ರಹ್ಮಣ್ಯದ ಸುಬ್ರಹ್ಮಣ್ಯೇಶ್ವರ ಮನೆದೇವರಾದ ಕುಟುಂಬಕ್ಕೆ ರಾಮನಾಥಪುರ ಸುಬ್ರಹ್ಮಣ್ಯೇಶ್ವರ ಮನೆದೇವರಾದುದು, ದೇವನೂರು ಲಕ್ಷ್ಮೀಕಾಂತ ಮನೆದೇವರಾದ ಕುಟುಂಬಕ್ಕೆ ಬಸವಪಟ್ಟಣ ಲಕ್ಷ್ಮೀಕಾಂತ ಮನೆದೇವರಾದುದು ಇಲ್ಲಿನ ನಿದರ್ಶನಗಳು.

4. ಕುಲದೇವತೆಗಳ ಉತ್ಸವವಾಗಲೀ ಸಮೀಪದ ಯಾವುದೇ ರಥೋತ್ಸವವಾಗಲೀ ಇಲ್ಲದ ಲಿಂಗದಹಳ್ಳಿಯವರು, ರಾಮೋತ್ಸವವನ್ನು ವಿಜೃಂಭಿಸಿ ಆ ಕೊರತೆಯನ್ನು ತುಂಬಿಕೊಳ್ಳತೊಡಗಿದ ಪ್ರಸಂಗವು, ಮೂಲ ಆಶಯವು ಅಭಿವ್ಯಕ್ತಗೊಳ್ಳುವ ಸಾಂಸ್ಕೃತಿಕ ಸಂಕೀರ್ಣ ಮುಖಕ್ಕೊಂದು ನಿದರ್ಶನವಾಗಿದೆ.

ಶುಭಕಾರ್ಯಗಳಿಗೆ ಮೊದಲೂ ಅನಂತರವೂ ಮನೆದೇವರ ಸೇವೆ ಮಾಡುವುದು, ರಥೋತ್ಸವ, ವಸವಂತ, ಹರಕೆ ಮೊದಲಾದ ಸಂಗತಿಗಳಲ್ಲಿಯೂ ಇರುವ ಆಚರಣೆಗಳು ಸಾರ್ವತ್ರಿಕತೆಯ ಅನುಕರಣೆಯವೇ ಆಗಿವೆ. ಆದರೂ, ಮನೆಯಲ್ಲಿ ನಿತ್ಯಪೂಜೆ ಮಾಡುವುದು 'ಕುಲದೇವತಾ ಸ್ವರೂಪೀ' ಪಂಚಾಯತನಕ್ಕೆ ಎಂಬಷ್ಟು ಆತ್ಮೀಯ ಸಂಬಂಧವನ್ನು ಸಂಕೇತಿಗಳು ರೂಢಿಸಿಕೊಂಡಿರುವುದು ಕಂಡುಬರುತ್ತದೆ.

ಮನೆದೇವರುಗಳ ಸಂಬಂಧದಲ್ಲಿ ವ್ಯಕ್ತವಾಗುವ ಅಪಾರ ಮುಕ್ತತೆಯೇ, ಮೂಲಭೂತವಾದ ವೈದಿಕವಿಧಾನವನ್ನು ಇನ್ನೂ ಪ್ರಧಾನವಾಗಿ ಮುಂದುವರಿಸಿಕೊಂಡ ಮನೋನೆಲೆಯಿಂದ ಆದುದು. ಸಾರ್ವತ್ರಿಕ ಪ್ರವೃತ್ತಿಯೊಂದು ಸ್ವೀಕಾರವಾಗಿ ಸಂಕೀರ್ಣತೆಯನ್ನು ಪಡೆದರೂ, ವೈದಿಕತೆಯ ಜೊತೆಗೆ ಬೆಳೆದು ಉಳಿದ ಮತ್ತೊಂದು ನಿದರ್ಶನ ಇಲ್ಲಿನದಾಗಿದೆ.

ಊ. ಹರಕೆ:

ದೇವಸ್ಥಾನಸಂಸ್ಕೃತಿಯು ಜನಜೀವನದಲ್ಲಿ ಮೂರ್ತಿಪೂಜೆ, ಶ್ರವಣ ಮತ್ತು ದೃಶ್ಯಕಲೆಗಳಲ್ಲಿ ಆಸಕ್ತಿ ಹಾಗೂ ಬೆಳವಣಿಗೆ, ಪ್ರವಚನಗಳ ಮೂಲಕ ಸಾರ್ವತ್ರಿಕ ಶಿಕ್ಷಣ ಇತ್ಯಾದಿಯಾದ ಅನೇಕ ರೀತಿಯಲ್ಲಿ ಹಬ್ಬಿಕೊಂಡಿದೆ. ಈ ಪೈಕಿ 'ಹರಕೆ' ಪದ್ಧತಿ ಒಂದಾಗಿದೆ. ಹರಕೆ ಹೊರುವುದು, ಮೀಸಲು ಕಟ್ಟುವುದು, ಅನ್ಯ ಸಮುದಾಯಗಳಲ್ಲೂ ಕಂಡುಬರುತ್ತದೆ. ಸಂಕೇತಿ ಸಮುದಾಯದಲ್ಲಿ, 'ಮನೆದೇವರಿಗೆ'

ಸಮೀಪದಲ್ಲಿಯೇ ನೆಲೆಸಿದ್ದಾಗ 'ಮುಡಿಪು' ಕಟ್ಟುವ[9] ಮೂಲಕ ಹರಕೆ ಕಟ್ಟಿಕೊಳ್ಳುತ್ತಿದ್ದ ರೂಢಿಯು, ದೂರದ ನೆಲೆಗಳಿಗೆ ಹೋಗಿ ಅಲ್ಲಿನ ಪ್ರಾದೇಶಿಕ ದೇವತೆಗಳ ಪ್ರಯೋಜಕತೆಯಿಂದ ಬಿಡಿಸಿಕೊಳ್ಳಲಾಗದಾಗ, ಮನೆದೇವರಿಗೆ ಮುಡಿಪುಕಟ್ಟಿಕೊಳ್ಳುವುದರ ಜೊತೆಗೆ ಇತರ ದೇವತೆಗಳಿಗೆ ಹರಕೆ (ಮಾತ್ರ) ಹೊರುವ ರೂಢಿಯಾಗಿ ಬೆಳೆದಿದೆ. ಇದೆಲ್ಲದರ ಹಿಂದಿನ ಸದ್ಯಪ್ರಯೋಜನವು ಮನೆದೇವರುಗಳ ಮತ್ತು ಪ್ರಾದೇಶಿಕದೇವತೆಗಳ ಸ್ವೀಕರಣಕ್ಕೆ ಇರುವ ತೀವ್ರ ಪ್ರೇರಣೆಯನ್ನು ವಿವರಿಸುತ್ತದೆ. "ಕಟ್ಟಿಕೊಂಡ ಹರಕೆಯನ್ನು ತೀರಿಸದಾಗ ದೇವರು 'ಕಾಡಿದ' ಕತೆಗಳು[10] ಕಾಕತಾಳೀಯ ಘಟನೆಗಳನ್ನೋ ತೀವ್ರ ಭಕ್ತಿಯಿಂದ ಉದ್ಭವವಾದ ಭ್ರಮೆಯನ್ನೋ ಆಧರಿಸಿ ಹುಟ್ಟಿಕೊಂಡು ದೈವದ ಮಹತ್ತ್ವವನ್ನು ಮತ್ತಷ್ಟು ಹೆಚ್ಚಿಸಿರುವುದನ್ನು ತಿಳಿಸುತ್ತವೆ" ಎಂದು ವ್ಯಾಖ್ಯಾನಿಸುವವರು ಅಪರೂಪವೆಂದೇ ಹೇಳಬೇಕು.

ಬಟ್ಟೆಗಳು ಬೇಗ ಹರಿಯುವುದನ್ನು ತಪ್ಪಿಸಲು ಕೌಶಿಕದ ಕೇಶವನಿಗೆ ಹೊಸವಸ್ತ್ರವನ್ನು ಉಡಿಸುವ ಹರಕೆಯು ಸಂಕೇತಿಗಳಿಗೇ ವಿಶಿಷ್ಟವಾದ ಹರಕೆ ಪದ್ಧತಿ ಆಗಿದೆ. ಆ ದೇವತೆಗೆ 'ಹರಕ್‍ಪೂರೆ ಕೇಶವ' (ಹರಕುಬಟ್ಟೆ ಕೇಶವ) ಎಂದೇ ಹೆಸರು ಬಂದಿದೆ. ಆ ದೇವರ ಒಕ್ಕಲಿನವರಿಗೆ ವಸ್ತ್ರಗಳು ಬೇಗ ಹರಿಯುತ್ತವೆಂಬುದು ಒಂದು ನಂಬಿಕೆ.

ಹರಕೆಗಳು ವೈವಿಧ್ಯಪೂರ್ಣವಾಗಿವೆ. ಕೆಲವನ್ನು ಇಲ್ಲಿ ನಿದರ್ಶಿಸಿದೆ.

1. ಕಾಯಿಲೆ ಹರಿದಾಗ ತುಲಾಭಾರ ಮಾಡಿಸುವುದು; ಮಗು ಹುಟ್ಟಿದಾಗ ಬೆಳ್ಳಿಯ ತೊಟ್ಟಿಲು ಹಾಕಿಸುವುದು; ಮಾತುಬಂದಾಗ ಬೆಳ್ಳಿಯ ನಾಲಗೆ ಮಾಡಿಸಿ ದೇವರಿಗೆ ಅರ್ಪಿಸುವುದು - ಹೀಗೆ, ಬಂದ ತೊಂದರೆ ಮತ್ತು ಒಪ್ಪಿಸುವ ಹರಕೆಯ ನಡುವೆ ಸಾದೃಶ್ಯ ಸಂಬಂಧವನ್ನು ಕಾಣಬಹುದು.
2. ಮಕ್ಕಳಾಗದಾಗ ನಾಗಪ್ರತಿಷ್ಠೆ ಮಾಡಿಸುವುದು, ಕಷ್ಟಪರಿಹಾರಕ್ಕೆ ಅಶ್ವತ್ಥ ಪ್ರದಕ್ಷಿಣೆ ಮಾಡುವುದು, ಇವೇ ಮೊದಲಾದ ಶಾಸ್ತ್ರಮೂಲ ಹರಕೆಗಳೂ ಇವೆ.
3. ಮಡೆ ಹೊರಳುವುದು, ಎಂಜಲುಮಡೆ ಹೊರಳುವುದು, ಮಕ್ಕಳ ಉಗ್ಗು ಹೋಗಲೆಂದು 'ಬಾಯಿ ಬೀಗ'ದ ಹರಕೆ ಹೊರುವುದು; ಇಂಥ ಹರಕೆಗಳು ತಾಮಸ ರೀತಿಯವಾಗಿವೆ. ಇತ್ತೀಚೆಗೆ ತಲೆಯೆತ್ತುತ್ತಿರುವ ಪ್ರಾಣಿಬಲಿಗಳು ಇದೇ ವರ್ಗಕ್ಕೆ ಸೇರುತ್ತವೆ.
4. ಕೃಷಿಕನು ತನ್ನ ಭಾಗಶಃ ಫಸಲನ್ನು - ಉದಾಹರಣೆಗೆ ಬಾಳೆಗೊನೆ ಮೊದಲಾದವನ್ನು - ಮೀಸಲಿಡುವುದು.



125 ಹಿರಿಯರಿಗೆ ಪಾದಪೂಜೆ ಪ್ರತ್ಯೇಕವಾಗಿಯೂ ಸಂಸ್ಕಾರ ಸಮಾರಂಭಗಳ ಸಂದರ್ಭದಲ್ಲಿಯೂ ಇತ್ತೀಚೆಗೆ ನಡೆಯತೊಡಗಿದೆ

5. ಮುತ್ತೈದೆ 'ಕುಶಲ' ನಿವಾರಣೆಗಾಗಿ ಮೀಸಲು ಮತ್ತು 'ಹೂವೀಳ್ಯ' ಮಾಡುವುದು.
6. ತನ್ನ ರಾಸುಗಳ ಕಷ್ಟಪರಿಹಾರಕ್ಕೆ ಹರಕೆ ಹೊರುವುದು ಇತ್ಯಾದಿಯಾದವು ಹರಕೆಗಳ ಮತ್ತೆ ಕೆಲವು ನಿದರ್ಶನಗಳಾಗಿವೆ.
7. ಕುಲದೇವತಾಪದ್ಧತಿ ಮತ್ತು ಮಠದಬದ್ಧತೆ ಎರಡೂ ಇಲ್ಲದ ಸಂಕೇತಿಗಳು ಸಂಸ್ಕಾರಸಂದರ್ಭಗಳಲ್ಲಿ ಇಲ್ಲವೇ ಪ್ರತ್ಯೇಕವಾಗಿ ಹಿರಿಯರಿಗೆ, 'ಪಾದಪೂಜೆ' ಮಾಡುವ ಸಂಪ್ರದಾಯವನ್ನೂ ರೂಢಿಸಿಕೊಂಡಿದ್ದಾರೆ. ಇದು 'ಕಾಲಾಕಳವರದ್'ಕ್ಕಿಂತ ಭಿನ್ನವಾದುದು. ಪೂರ್ವಸಂಕಲ್ಪದಂತೆ ನಡೆಯುವ ಈ ವಿಧಿಯಲ್ಲಿ, ದೇವತೆಗೆ ಸಮಾನವಾದ ಪೂಜೆಯು ಹಿರಿಯರಿಗೆ ನಡೆಯುತ್ತದೆ. (ಚಿತ್ರ 125)

---

9 ಸ್ನಾನಮಾಡಿ ಶುಚಿಯಾಗಿ ಅರಿಶಿನದ ಬಟ್ಟೆಯಲ್ಲಿ ಒಂದು ನಾಣ್ಯ, ಮಂತ್ರಾಕ್ಷತೆಯನ್ನು ಗಂಟುಕಟ್ಟಿ, ದೇವರ ಸಂಪುಟದಲ್ಲಿಡುವುದು.

10 ಕೌಶಿಕದ ಕೇಶವನ ಸನ್ನಿಧಿಯಲ್ಲಿ ಮಗನಿಗೆ ಚೌಲಕರ್ಮ ಮಾಡುವುದಾಗಿ ಹರಕೆ, ಮರೆವು; ಸ್ವಾಮಿಯು ಬಾಲಕನಿಗೆ ಚಾವಟಿಯಿಂದ ಹೊಡೆದು ಎಚ್ಚರಿಸಿದ ಅನುಭವ - ನಾಗಸರ್ಪವು ಮಗುವಿನ ತೊಟ್ಟಿಲಿನ ಮೇಲೆ ಕಾಣಿಸಿಕೊಂಡುದು, ಮನೆದೇವರ ನೆನಪು, ಮಗುವಿಗೆ ದೇವರ ಹೆಸರಿಡುವುದಾಗಿ ಹರಕೆ; ಸರ್ಪವು ಮಾಯವಾಗುವುದು ಇತ್ಯಾದಿ. ಹರಕೆಯ ಸಂಬಂಧದ ವಿವರಗಳಿಗೆ ನೋಡಿ: ಬೆಟ್ಟದಪುರ ಸಂಕೇತಿವಾಣಿ, ಸಂಕ್ರಾಂತಿ ಸಂಚಿಕೆ, ನಮ್ಮ ಸಂಪ್ರದಾಯಗಳು-2, ರು.ಗೋ.ರಾಮಸ್ವಾಮಿ, ೧೯೭೬, ಪು.೫-೬.

ಸದ್ಯಪ್ರಯೋಜಕತೆಯನ್ನು ಮುಂದುಮಾಡಿಕೊಂಡ ಈ ಆಚರಣೆಗಳು - ವೈದಿಕತೆಯಿಂದ ದೂರಸರಿದು ಹೊರಟ ಮಾರ್ಗವು ಸಮುದಾಯವನ್ನು ತನ್ನ ಬಲೆಗೆ ತಬ್ಬಿಕೊಂಡ ರೀತಿ ಮತ್ತು ಪ್ರಮಾಣವನ್ನು ಸೂಚಿಸುತ್ತವೆ.

೩ಮ. ಯಾತ್ರೆಗಳು:

ಮೂರ್ತಿಪೂಜೆಯ ಇನ್ನೊಂದು ಬೆಳವಣಿಗೆಯ ಮುಖ ತೀರ್ಥಯಾತ್ರೆಗಳದ್ದು ಎನ್ನಬಹುದು. ಆ ಸಂಬಂಧದಲ್ಲಿನ ಆಚರಣೆಗಳಲ್ಲಿ ಸಾರ್ವತ್ರಿಕತೆಯು ಅತಿಶಯವಾದುದಕ್ಕೆ ತೀರ್ಥಯಾತ್ರೆಗಳು ಸಾಧಿಸುವ ವಿಶಾಲ ಸಂಪರ್ಕ ಮತ್ತು ಸಂಸ್ಕೃತಿಸಂವಹನವೇ ಕಾರಣ. ಜೀವನದಲ್ಲಿನ ಪಾಪಪರಿಹಾರ ಮಾಡಿಕೊಂಡು ಸದ್ಗತಿಗೆ ಅಣಿಯಾಗುವ ಈ ವಿಧಿಯ ಹಿಂದಿನ ತುಡಿತದ ತೀವ್ರತೆಯು ಸ್ವರ್ಗ ನರಕಗಳಲ್ಲಿನ ಗಾಢ ನಂಬಿಕೆಗೆ ಅನುಗುಣವಾದುದು. ಅದರಿಂದ ದೊರೆಯುವ ನೆಮ್ಮದಿಗಾಗಿಯೇ ಜೀವನದ ಗಳಿಕೆ ಮತ್ತು ದೈಹಿಕಶ್ರಮವನ್ನು ವಿನಿಯೋಗಿಸುವುದು ಒಂದು ತಪಸ್ಸಿನಂತೆಯೇ ನಡೆಯುತ್ತದೆ. ಈ ಪ್ರಯತ್ನದಲ್ಲಿ ಆಗುವ ಪ್ರಾಣಹರಣವನ್ನು ಸದ್ಗತಿಪ್ರಾಪ್ತಿಯೆಂದೇ ಪರಿಗಣಿಸುವಷ್ಟು ಮಹತ್ತ್ವ ತೀರ್ಥಯಾತ್ರೆಗಳಿಗಿದೆ.

ಯಾತ್ರೆ ಹೊರಡುವಾಗ ಹಿರಿಯರಿಂದ ಆಶೀರ್ವಾದ ಪಡೆಯುವುದು, ಕ್ಷೇಮತಂಡುಲ (ಹಣ್ಣು, ಕಾಯಿ, ಅಕ್ಕಿ, ಬೆಲ್ಲ, ಹಣಗಳನ್ನೊಳಗೊಂಡ ಧರ್ಮಗಂಟು); ಹಿಂದಿರುಗಿದಾಗ ಗಂಗೆಗೂ ಸೇರಿ ಆರತಿಯ ಸ್ವಾಗತ ಮಾಡುವುದು, ಗಂಗಾಪೂಜೆ ಮಾಡುವುದು, ಗಂಗಾ ಸಂತರ್ಪಣೆ ನಡೆಸುವುದು - ಇವುಗಳು ಇಂದೂ ಉಳಿದುಕೊಂಡಿದ್ದರೂ ಅವುಗಳಲ್ಲಿ ಹಿಂದಿನ ಕಳಕಳಿ, ಆತಂಕ, ಉನ್ಮಾದ, ಭಕ್ತಿಯ ತೀವ್ರತೆ ಉಳಿದಿಲ್ಲದಿರುವುದಕ್ಕೆ ಆಧುನಿಕ ಸಂದರ್ಭದಲ್ಲಿನ ಸಂಪರ್ಕಸಾಧನಗಳ ಸೌಲಭ್ಯಗಳೂ ಕಾರಣವಾದಂತೆ ಆ ವಿಧಿಗಳಲ್ಲಿ ಜನರ ಶ್ರದ್ಧಾಸಕ್ತಿಗಳು ಕುಂಠಿತವಾದುದೂ ಕಾರಣವಾಗಿದೆ.

ಗೋಕರ್ಣ, ಹೃಷೀಕೇಶ, ಮಥುರಾ, ಅಯೋಧ್ಯಾ, ತಿರುಪತಿ, ಧರ್ಮಸ್ಥಳ ಮೊದಲಾದ ಕ್ಷೇತ್ರಗಳ ಸಂದರ್ಶನವು ದೇಶ ವಿದ್ಯಮಾನಗಳ ಅಧಿಕ ಸ್ವೀಕರಣವೆಂಬುದಕ್ಕೆ, ಸಂಕೇತಿಗಳಲ್ಲಿ ಇಂದಿಗೂ 'ಕ್ಷೇತ್ರವಿಧಿ' ಮತ್ತು 'ತೀರ್ಥಶ್ರಾದ್ಧ'ವೂ ಒಳಗೊಂಡಂತೆ ತೀರ್ಥಯಾತ್ರೆಯ ಉದ್ದೇಶವು ಪೂರ್ಣವಾಗುವುದು ಕಾಶಿಯಾತ್ರೆಯಿಂದಲೇ ಎನ್ನುವುದೇ ಸಾಕ್ಷಿ. ವಿಶ್ವೇಶ್ವರನ ದರ್ಶನಕ್ಕೆ ರಾಮೇಶ್ವರದಲ್ಲಿ ಅನುಜ್ಞೆ ಪಡೆದು ಅಲ್ಲಿನ ಮರಳನ್ನು ಗಂಗೆಯಲ್ಲಿ ಬಿಟ್ಟು, ಕಾಶಿಯ ಗಂಗೆಯಲ್ಲಿ ರಾಮೇಶ್ವರನಿಗೆ ಅಭಿಷೇಕ ಮಾಡುವ ನಿಯತತೆ ಇತ್ತೀಚಿನ ಇತಿಹಾಸದಲ್ಲಿ ಹೆಚ್ಚಾಗಿ ಕಾಣುವುದಿಲ್ಲವೆನ್ನುವುದು, ಈ ಸಂಬಂಧದಲ್ಲಿ ಆಗಿರುವ ಲೋಪದ ನಿದರ್ಶನವೂ ಹೌದು.

ಇದರಲ್ಲಿಯೂ, ದೇಶಾಚಾರದಿಂದಾಗಿ ಪ್ರಾದೇಶಿಕ ವ್ಯತ್ಯಾಸಗಳು ಕಂಡುಬರುತ್ತವೆ. ಉದಾಹರಣೆಗೆ ಮತ್ತೂರು ಹಾಗೂ ಲಿಂಗದಹಳ್ಳಿಯಲ್ಲಿ "ಒಳ್ಳೆಯದಿನ ಬ್ರಾಹ್ಮೀ ಮುಹೂರ್ತದಲ್ಲಿ ಉಪವಾಸದಿಂದ ಹೊರಡುವುದು" ಕ್ರಮವಾದರೆ, ಹಾಸನಸೀಮೆಯಲ್ಲಿ "ಗಣಪತಿಪೂಜೆಯನ್ನೂ ಫಲಪೂಜೆಯನ್ನೂ ಮಾಡಿಸುವುದು, ಮುತ್ತೈದೆಯರಿಗೆ ಕೊಬ್ಬರಿಸಕ್ಕರೆಯನ್ನೂ ಎಲೆಅಡಿಕೆಯನ್ನೂ ನೀಡುವುದು, ಕಾಲಭೈರವ ಸಮಾರಾಧನೆ ನೆರವೇರಿಸಿಕೊಂಡು ಹೊರಡುವುದು" ಕ್ರಮ. ಇಂಥ ಸಂಗತಿಗಳು ಮೂಲ ಆಶಯವನ್ನು ವಿಭಿನ್ನ ನೆಲೆಗಳಲ್ಲಿ ಅರ್ಥಪೂರ್ಣಗೊಳಿಸುತ್ತವೆ ಮತ್ತು ಅವು ಭಾರತದ ಸಂಸ್ಕೃತಿಯ ಸಾಮಾನ್ಯ ವೈಶಿಷ್ಟ್ಯಗಳೂ ಆಗಿವೆ.

ಮನೆದೇವರ ದರ್ಶನ ಮಾಡುವುದು, ಸೇವೆ ಸಲ್ಲಿಸುವುದು, ರಥೋತ್ಸವ, ಕೈಂಕರ್ಯ, ಹರಕೆಗಾಗಿ ಮಾಡುವ ಸಂದರ್ಶನ - ಇವುಗಳು, ತಮ್ಮ ಸ್ವರೂಪದಲ್ಲಿ 'ತೀರ್ಥಯಾತ್ರೆ' ಗಿಂತ ಭಿನ್ನವಾಗಿವೆ.

ಸಮಸ್ತದಲ್ಲಿಯೂ ಪರಮಾತ್ಮನ ಅಂಶವನ್ನು ಅನುಭವಿಸುವುದು ಮತ್ತು ತೀರ್ಥಯಾತ್ರೆಗಳನ್ನು ಪಿತೃಶ್ರಾದ್ಧಗಳ ಮಾಧ್ಯಮಗಳಾಗಿ ಮಾಡಿಕೊಳ್ಳುವುದು - ಯಾತ್ರೆಯ ಉದ್ದೇಶ ಎನ್ನಬಹುದು. ತನ್ನ ಮಾತೃಭೂಮಿಯ ಆತ್ಮೀಕರಣವೂ ಇದರಿಂದ ಸಾಧಿತವಾಗಿರುವುದು ಕಂಡುಬರುತ್ತದೆ. ವೇದದ ಮೂಲ ಆಶಯವು ಯಾತ್ರೆಗಳ ಮೂಲಕ ಮತ್ತಷ್ಟು ಸಂಕೀರ್ಣವಾದ ಬಾಹ್ಯರೂಪವನ್ನು ಪಡೆದಿದೆ ಎನ್ನುವುದು ಮೇಲಿನ ವಿವರಗಳಲ್ಲಿ ಖಚಿತವಾಗಿದೆ.

೫೦. ಇತರ ರೂಢಿಗಳು :

ನೇರ ಕೃಷಿಕರಾದ ಕರ್ನಾಟಕದ ಸಂಕೇತಿಗಳು ಅಳವಡಿಸಿಕೊಂಡಿರುವ ಬ್ರಾಹ್ಮಣೇತರ ದೇಶಾಚಾರಗಳ ಕೆಲವು ನಿದರ್ಶನಗಳನ್ನಿಲ್ಲಿ ಗಮನಿಸಲಾಗಿದೆ.

1. ಮಲ್ಲಯ್ಯನ ಪೂಜೆ: ಕೊಯ್ಲಿನ ದಿನ ಒಂದುಸಾಲು ಅರಿಯನ್ನು ಮೊದಲು ಕೊಯ್ದು ದಕ್ಷಿಣದಿಕ್ಕಿಗೆ ತಲೆಯಾಗಿ ಇಟ್ಟು ಕಡಕತ್ತಿಗೂ ಪೂಜೆಮಾಡಿ ಕೈಮುಗಿಯುತ್ತಾರೆ (ಉಳಿದ ಅರಿಗಳನ್ನು ಉತ್ತರಕ್ಕೆ ತಲೆಯಾಗಿ ಇಡುತ್ತಾರೆ). ಇದು ಮಧ್ಯದೇಶದಲ್ಲಿ ಮಾತ್ರ ಇರುವ 'ಮಲ್ಲಯ್ಯನ ಸಂಪ್ರದಾಯ'. ಇತರ ಎಡೆ ಈ ಪದ್ಧತಿ ಇಲ್ಲದ್ದು ಹಾಗೂ ಈ ಪದ್ಧತಿಯ ಹೆಸರು, ಇದು ಇಲ್ಲಿನ ಒಕ್ಕಲಿಗರಿಂದ ಸ್ವೀಕರಿಸಿರುವ ಪದ್ಧತಿ ಎಂಬುದನ್ನು ಖಚಿತಪಡಿಸುತ್ತದೆ. (ಮಧ್ಯದೇಶದವರಿಗೆ ಬೆಟ್ಟದಪುರದ 'ಮಲ್ಲಯ್ಯ' ಇರುವುದು ದಕ್ಷಿಣದಿಕ್ಕಿಗೆ.) ಉಳಿದ ಎಲ್ಲ ಪೂಜೆಗಳೂ 'ದಿಕ್ಕುಶುದ್ಧಿ'ಯಾಗಿ (ಪೂರ್ವ ಅಥವಾ ಉತ್ತರಾಭಿಮುಖ) ನಡೆಯುವುದು ಸಂಪ್ರದಾಯವಾದರೂ, ಅಬ್ರಾಹ್ಮಣಾನುಕರಣೆಯಿಂದಾಗಿ ದಕ್ಷಿಣದಿಕ್ಕು ಅಲ್ಲಿ ಅಮಂಗಳ ಸ್ಪರ್ಶವನ್ನು ಪಡೆದಿಲ್ಲ.

ಕೌಶಿಕ ಪಂಚಗ್ರಾಮದಲ್ಲಿ ಸಹಜವಾಗಿಯೇ ಈ ಸಂಪ್ರದಾಯ ಇಲ್ಲ. ಅಂಚಿನ ಅರಿಗಳನ್ನು ಒಳಮುಖವಾಗಿ ಇಡುವುದು ಕಾಳು ಒಳಗೇ ಉದುರಲಿ ಎಂಬ ಉದ್ದೇಶದಿಂದ. ಇಲ್ಲಿಯೂ, ಅರಿ ಇಡಲು ದಿಕ್ಕು ಗಮನಕ್ಕೆ ಬರುವುದಿಲ್ಲ. ಆದರೆ ಕೊಯ್ಲಿಗೆ ಮೊದಲು ಗದ್ದೆಯ ಹತ್ತಿರ ಕುಯಿಗತ್ತಿ ಹಾಗೂ ಮಸೆಗಲ್ಲು ಇಟ್ಟು ಪೂಜೆಮಾಡಿ ಪ್ರಸಾದ ಸ್ವೀಕರಿಸುವುದರಲ್ಲಿ ಆ ಪ್ರದೇಶದ ಕೃಷಿಪೂಜೆಯ ಅನುಕರಣೆ ಇದೆ.

2. ಹೊನ್ನಾರು: ಸೋಮವಾರ ಉಳದಿರುವುದು ಕರ್ನಾಟಕದಲ್ಲಿ ಮೊದಲಿಂದಲೂ ಕಂಡು ಬರುವ ಸಂಪ್ರದಾಯವಾಗಿದೆ. ಅಂದು ಆರು ಕಟ್ಟಿದರೆ ಬಹಿಷ್ಕಾರ ಹಾಕುವರೆಂಬ ಹೆದರಿಕೆ; ಊರ ಹೊರಗೆ ಹೋಗುವಾಗ ಮತ್ತು ಒಳಗೆ ಬರುವಾಗ ಎತ್ತಿನ ಮೇಲೆ ನೊಗ ಇಡುವುದಕ್ಕೆ ನಿಷೇಧ-ಇವೆಲ್ಲವೂ, ಅಲ್ಲಲ್ಲಿ ಸಂಕೇತಿಗಳೂ ಉಳುವುದಕ್ಕೆ ನೇರವಾಗಿ ತೊಡಗಿದ ಸಂದರ್ಭದ ಸ್ವೀಕೃತಿಗಳಾಗಿವೆ.

ಕಸಬಿಗೆ ಹೊಂದಿಕೊಂಡ ಆಚರಣೆಗಳೂ ಅನಿವಾರ್ಯ ಸ್ವೀಕರಣಗಳಾಗುವುದು 'ಹೊನ್ನಾರು' ಪದ್ಧತಿಯಲ್ಲಿಯೂ ಸ್ಪಷ್ಟವಾಗುತ್ತದೆ. ಮಧ್ಯದೇಶದಲ್ಲಿ ಯುಗಾದಿಯಂದು ತಮ್ಮತಮ್ಮ ಎತ್ತು, ನೊಗ ಪೂಜಿಸಿ ತಮ್ಮತಮ್ಮ ಜಮೀನು ಉತ್ತು ಒಂದು ಸುತ್ತು 'ಕೆರೆದು' ಬರುತ್ತಾರೆ. ಕೌಶಿಕ ಪಂಚಗ್ರಾಮದಲ್ಲಿ ಊರ ಒಕ್ಕಲಿಗರ ಜೊತೆ ಅವರೂ 'ಹೊನ್ನಾರು' ಹೂಡುತ್ತಾರೆ. ಊರ ಎಲ್ಲ ಆರುಗಳೂ ಗ್ರಾಮದ ಸುತ್ತ ಒಂದು ಸುತ್ತು ಬರುತ್ತವೆ. ಮುದಲಾಪುರ ಅಷ್ಟಗ್ರಾಮದಲ್ಲಿ ಯುಗಾದಿ ಕಳೆದ ತಕ್ಷಣ ದೇವಸ್ಥಾನದಲ್ಲಿ ಒಳ್ಳೆಯದಿನ ಮಂಗಳಾರತಿ ಮಾಡಿ ಅಲ್ಲಿಂದ ಅಲಂಕಾರ ಮಾಡಿದ ಎತ್ತು ಊರಸುತ್ತ ಒಂದು ಸುತ್ತು ತರುತ್ತಾರೆ. ಅನಂತರವೇ, ಎತ್ತು ಹೂಡುತ್ತಾರೆ. ಲಿಂಗದಹಳ್ಳಿಯಲ್ಲಿ 'ಮೊದಲ ಬೇಸಾಯ' ಎಂದು ಒಳ್ಳೆಯ ಮುಹೂರ್ತದಲ್ಲಿ ನೇಗಿಲುಪೂಜೆ ಮಾಡಿ, ತೆಂಗಿನಕಾಯಿ ಒಡೆಯುತ್ತಾರೆ. ವ್ಯವಸಾಯಕ್ಕೆ ನೇರವಾಗಿ ಇಳಿಯದ 'ದಕ್ಷಿಣ'ದಲ್ಲಿ ಈ ಅಳವಡಿಕೆಗಳಿಗೆ ಕಾರಣವಿಲ್ಲ. ಆದರೆ, ಕರ್ನಾಟಕದಲ್ಲಿ ಈಗ ಆಯಾ ಪ್ರಾಂತ ವೈಶಿಷ್ಟ್ಯಗಳನ್ನು ಮೈಗೂಡಿಸಿಕೊಂಡು ಪ್ರಾಂತೀಯ ಸಮುದಾಯಗಳೊಂದಿಗೆ ತಾದಾತ್ಮ್ಯ ಸಾಧಿಸಿರುವುದನ್ನು ಕಾಣಬಹುದು.

3. ರಾಶಿಗೆ ಪಾದ್‌ಗಟ್ಸೋದು: ಮುದಲಾಪುರ ಅಷ್ಟಗ್ರಾಮದಲ್ಲಿ ತನ್ನ ಪರಿಸರದಿಂದ ಸ್ವೀಕೃತವಾದ ರೀತಿ ಇದು: ಕಣವನ್ನು ಸಾರಿಸಿದ ಕೂಡಲೆ, ಸುತ್ತಲೂ, ಒಬ್ಬರು ಪರಕೆ ಹಿಡಿದುಕೊಂಡು ಹೋಗುತ್ತಾರೆ. ಅದರ ಮೇಲೆ ಒಬ್ಬರು ನೀರುಬಿಟ್ಟುಕೊಂಡು ಒಂದು ಸುತ್ತು ಪ್ರದಕ್ಷಿಣೆ ಬರುತ್ತಾರೆ. ಅದು 'ಕಣಕ್ಕೆ ಪಾದ್‌ಗಟ್ಸೋದು'. ಧಾನ್ಯವನ್ನು ಬಡಿದನಂತರ ರಾಶಿಯನ್ನು ಗುಡ್ಡೆಮಾಡಿ, ಮೊರದಲ್ಲಿ ಪ್ರತಿದಿಕ್ಕಿಗೆ ಒಮ್ಮೆ ಗೆರೆಎಳೆದು ಕೈ ಮುಗಿಯುವುದು, ಕೊನೆಗೆ ನಮಸ್ಕಾರ ಮಾಡುವುದು 'ರಾಶಿಗೆ ಪಾದ್‌ಗಟ್ಸೋದು'.

4. ತಿಪ್ಪಮ್ಮನ ಪೂಜೆ: ದೀಪಾವಳಿಯಲ್ಲಿ ಗೋಪೂಜೆಯಲ್ಲದೆ ಬಲಿಪಾಡ್ಯಮಿಯ ಸಂಜೆ ತಿಪ್ಪಮ್ಮನ ಪೂಜೆ ಇರುತ್ತದೆ. ಅಂದು ತಿಪ್ಪೆಯನ್ನು ಚೊಕ್ಕಟಗೊಳಿಸಿ ಅಲಂಕಾರಮಾಡಿ ತೆಂಗಿನಕಾಯಿ ಒಡೆದು ಪೂಜೆಮಾಡುತ್ತಾರೆ. ನೆಲ್ಲಿಕೊನೆ, ಕರಿಬಂಟನಸೊಪ್ಪು, ಉತ್ತರಣೆ, ಬಿದಿರುಸೊಪ್ಪು ಇವನ್ನು ತಿಪ್ಪೆಯ ಮಧ್ಯೆನೆಟ್ಟು ದೀಪಹೊತ್ತಿಸಿ, ಸಂಜೆ 'ತಿಪ್ಪಮ್ಮನ ಪೂಜೆ' ಮಾಡುತ್ತಾರೆ.

ಹಸುಗಳು ಸುಖವಾಗಿ ಈಯುವುದಕ್ಕೆ, ಹಾಲು ಕೊಡದೆ ಒದೆಯುವ ಚಾಳಿಯನ್ನು ತಪ್ಪಿಸುವುದಕ್ಕೆ, ಕೆಚ್ಚಲಲ್ಲಿ ರಕ್ತ ಬರುವುದನ್ನು ತಪ್ಪಿಸುವುದಕ್ಕೆ ಕ್ಷುದ್ರದೇವತೆಗಳಿಗೆ ಹರಕೆ ಕಟ್ಟಿಕೊಳ್ಳುವುದರಲ್ಲಿಯೂ ಪ್ರಾಂತೀಯ ಪದ್ಧತಿಗಳ ಸುಲಭ ಅಳವಡಿಕೆಗಳನ್ನು ಕಾಣಬಹುದು. ಹಸುವು ಕರುಹಾಕಿದಾಗಿನ ಕಸವನ್ನು 'ದಕ್ಷಿಣ'ದಲ್ಲಿ ಮರಕ್ಕೆ ನೇತುಹಾಕಿದರೆ ಕರ್ನಾಟಕದಲ್ಲಿ ತಿಪ್ಪೆಯಲ್ಲಿ ಹುಗಿಯುತ್ತಾರೆ. ನಾಯಿಯು ಅದನ್ನು ತಿಂದರೆ ಹಸುವಿನ ಹಾಲು ಇಂಗುತ್ತದೆಂಬ ನಂಬಿಕೆ ಎಲ್ಲೆಡೆಯೂ ಸಮಾನವಾದುದು.

ಸೂತ್ರಗಳಲ್ಲಿಯೂ ಕೃಷಿಸಂಬಂಧಿತ ಆಚರಣೆಗಳ ನಿರ್ದೇಶನಗಳಿದ್ದರೂ ಈ ಸಂಬಂಧದ ಸಂಕೇತಿ ಆಚರಣೆಗಳು ಬ್ರಾಹ್ಮಣೇತರರಿಂದ ಸ್ವೀಕೃತವಾದವು ಎಂಬುದು ಇಲ್ಲಿ ಮುಖ್ಯವಾಗುತ್ತದೆ.

5. ಇತರ ಆರಾಧನೆಗಳು: ಮೂರ್ತಿಪೂಜೆಯಲ್ಲದೆ ಇತರ ಬಗೆಯ ಆರಾಧನೆಗಳನ್ನು ಉಳಿದವರಲ್ಲಿ ಕಾಣುವಂತೆ ಸಂಕೇತಿಗಳಲ್ಲೂ ಕಾಣಬಹುದಾಗಿದೆ. ಇತರ ಆರಾಧನೆಗಳಿಗೆ ಇವು ಕೆಲವು ನಿದರ್ಶನಗಳಾಗಿವೆ:

ತುಲಸಿ (ದಕ್ಷಿಣದಲ್ಲಿ ಇಲ್ಲ), ಅಶ್ವತ್ಥ, ಬೇವು ಮೊದಲಾದ ಮರಗಿಡಗಳನ್ನು ಆರಾಧಿಸುವುದು; ಶಾಲಗ್ರಾಮವನ್ನು ಪೂಜಿಸುವುದು; ಭೂಮಾತೆ, ಗ್ರಾಮದೇವತೆ ಇತ್ಯಾದಿ ದೇವತೆಗಳನ್ನು ಆರಾಧಿಸುವುದು; ಮೀಸಲು, ಹೂವೀಳ್ಯ ರೂಪದಲ್ಲಿ ಭೂತಾರಾಧನೆ ನಡೆಸುವುದು; ಸತ್ತವರಿಗಾಗಿ ಶ್ರಾದ್ಧ ಹಾಗೂ ತರ್ಪಣಗಳ ರೂಪದಲ್ಲಿ ಪಿತೃಪೂಜೆ ನಡೆಸುವುದು - ಎಲ್ಲ ಮೂಲಗಳಲ್ಲಿಯೂ ದೈವಶಕ್ತಿಯನ್ನು ಗುರುತಿಸಿ, ಹಸನುಮಾಡಿಕೊಳ್ಳುವ ಆಶಯ ಹೊಂದಿದಂಥವು.

ಸನ್ನಿವೇಶವನ್ನನುಸರಿಸಿ ಸಂಕೀರ್ಣ ಬಾಹ್ಯ ಆಚರಣೆಗಳಲ್ಲಿ ಸಂಕೇತಿಗಳೂ ತಮ್ಮನ್ನು ಗುರುತಿಸಿಕೊಂಡಿರುವುದು ಈ ವಿವರಗಳಲ್ಲಿ ವ್ಯಕ್ತವಾಗುತ್ತದೆ. ವೈದಿಕತೆಯ ಸರಳ, ನೇರ ವಿಧಾನವು ಗೌಣಗೊಂಡುದು ಮೂರ್ತಿಪೂಜೆಯ ಬಹುಮುಖವಾದ ದಟ್ಟವಾದ ಬೆಳವಣಿಗೆಯಿಂದ. ಅಷ್ಟರಮಟ್ಟಿಗೆ ಧರ್ಮದ ಮೂಲೋದ್ದೇಶವು ಮರೆಯಾಗಲು ಈ ಬೆಳವಣಿಗೆಗಳೂ ಕಾರಣವಾದವು ಎನ್ನಬಹುದು.

ಎ. ಪಂಚಾಯತನ ಮೂರ್ತಿಪೂಜೆ:

ಆದಿಶಂಕರರು ಪ್ರವರ್ತಿಸಿದ ಪಂಚಾಯತನ ಪೂಜೆಯು (ನಾರಾಯಣ, ಶಂಕರ, ಗಣಪತಿ, ರವಿ, ದೇವಿ) ಮೂರ್ತಿಪೂಜೆಯ ಬದಲು ಸಂಕೇತಶಿಲೆಗಳ ಮೂಲಕ ಅಮೂರ್ತತೆಗೆ ಒತ್ತುಕೊಟ್ಟಿತು; ಅಸಂಖ್ಯ ದೇವತೆಗಳನ್ನು ಐದು ದೇವತೆಗಳ ಮೂಲಕ ಪ್ರತಿನಿಧಿಸಿ ಮತ್ತೆ ಏಕದೇವಭಾವನೆಯತ್ತ ಗುರಿ ಇಟ್ಟಿತು. ಆದಿಶಂಕರರ ಈ ಮಾರ್ಗವನ್ನನುಸರಿಸುವ ಮೂಲಕ ಸಂಕೇತಿಗಳೂ ಮತ್ತೆ ಅದ್ವೈತ ಭಾವವನ್ನು ಜಾಗೃತಗೊಳಿಸಿಕೊಂಡರು.

ಅನೇಕಮಂದಿ ಸಂಕೇತಿಗಳು:

1. ದಕ್ಷಿಣದಲ್ಲಿ (ಈಗಲೂ) ಪ್ರಮುಖದೇವತೆಯಾದ ಸುಬ್ರಹ್ಮಣ್ಯನನ್ನೂ ಪಂಚಾಯತನದೊಂದಿಗೆ ಸೇರಿಸಿಕೊಂಡರು.

2. ಆಯಾ ಇಷ್ಟದೇವತೆಗಳನ್ನು ಪ್ರಧಾನವಾಗಿ ಇಟ್ಟು ಪೂಜಿಸುವ ಪಂಚಾಯತನ ಪೂಜೆಯ ವಿಧಿಯೊಂದು ಇದ್ದರೂ, ಆ ನಿಯಮಗಳ ಬಗೆಗೆ ನಮ್ಯತೆತೋರಿ, ಸರ್ವದೇವಸಮಭಾವದ ಮೂಲಆಶಯವನ್ನು ಗಾಢವಾಗಿ ಉಳಿಸಿಕೊಂಡರು. ಸಂಕೇತಿಗಳಲ್ಲಿ ಪಂಚಾಯತನ ಪೂಜೆಯ ಕ್ರಮದಲ್ಲಿ ಕಾಣುವ ನಮ್ಯತೆ - ನಿತ್ಯ ಶಿವ ಪಂಚಾಯತನ ಪೂಜೆ (ಉದಾಹರಣೆಗೆ: ಮತ್ತೂರು, ಮುದಲಾಪುರ ಅಷ್ಟಗ್ರಾಮ ಮತ್ತು ದಕ್ಷಿಣದಲ್ಲಿ); ನಿತ್ಯ ವಿಷ್ಣುಪಂಚಾಯತನ (ಉದಾಹರಣೆಗೆ: ಮಧ್ಯದೇಶದಲ್ಲಿ); ಸಂದರ್ಭಾನುಸಾರ ಇಷ್ಟದೇವತಾ ಪಂಚಾಯತನ (ಎಲ್ಲೆಡೆಗಳಲ್ಲಿ); ಎಲ್ಲ ಸಂದರ್ಭಗಳಲ್ಲೂ ಒಂದೇ ಪಂಚಾಯತನ ಬಳಸುವ ಮೂಲಕ ತೋರಿಸುವ ಪ್ರಾಧಾನ್ಯ ಕಲ್ಪನೆಯ ಬಗೆಗಿನ ಅಲಿಪ್ತತೆ - ಹೀಗೆ ವ್ಯಕ್ತವಾಗಿದೆ. ಈ ಎಲ್ಲವುಗಳ ಹಿಂದಿನ ಪ್ರೇರಣೆ 'ಏಕದೇವ' ಭಾವವೇ ಆಗಿದೆ.

ಅಂತರಂಗದ ಸಮಾನ ಮೂಲಆಶಯದ ಹೊತ್ತಿನಲ್ಲಿಯೂ ಬಾಹ್ಯವಿವರಗಳು ಭಿನ್ನವಾಗುವುದು ಮತ್ತು ತೀವ್ರ ಜಿಜ್ಞಾಸೆಗೆ ಕಾರಣವಾಗುವುದು ಈ ಸಂಸ್ಕೃತಿಯ ಇನ್ನೊಂದು ಲಕ್ಷಣವಾಗಿದೆ. ಉದಾಹರಣೆಗೆ ಪಂಚಾಯತನ ದೇವರಪೂಜೆಯಲ್ಲಿನ 'ಬಲಿಹರಣ'ಕ್ರಮ

ಮತ್ತೂರಿನಲ್ಲಿದೆ; ಲಿಂಗದಹಳ್ಳಿಯಲ್ಲಿಲ್ಲ; ಮಧ್ಯದೇಶದಲ್ಲಿ ಎರಡೂ ಕ್ರಮಗಳಿವೆ. ಏಕೆ ಹೀಗೆ ಎಂಬ ಪ್ರಶ್ನೆ ಜಿಜ್ಞಾಸೆಗೆ ಗ್ರಾಸ ಒದಗಿಸುವ ವಸ್ತುವಾಗಿದೆ.

ಪ್ರತಿಮನೆಯಲ್ಲಿ ನಡೆಯತೊಡಗಿದ ಪಂಚಾಯತನ ಪೂಜೆಯು ಮತ್ತೆ ದೇವಸ್ಥಾನದ ಅಗತ್ಯವನ್ನು ಗೌಣವಾಗಿಸಿತೆಂಬುದನ್ನು ಸಂಕೇತಿಗಳು ದೇವಸ್ಥಾನಗಳ ಬಗೆಗೆ ಹೊಂದಿರುವ ಪೂಜ್ಯಭಾವವನ್ನು ಗೌಣಗೊಳಿಸದೆ ಗುರುತಿಸಬಹುದು. ಯಾವ ಸಂದರ್ಭದಲ್ಲಿಯೂ ಪಂಚಾಯತನ ಸಂಪುಟವನ್ನು ತಮ್ಮೊಂದಿಗೆ ಒಯ್ಯುವ ಮತ್ತು ಅದರ ಪೂಜೆಯಾದ ಹೊರತು 'ಬಾಯಿಗೆ ನೀರೂ ಬಿಡದ' ಹೊಸ ಸಂಪ್ರದಾಯವೊಂದು ಇದರೊಂದಿಗೆ ಹುಟ್ಟಿಕೊಂಡಿತು. 'ಶೈವ' 'ವೈಷ್ಣವ' 'ಗಾಣಾಪತ್ಯ' ಮೊದಲಾದ 'ಪರ'ತೆಗಳನ್ನು ಮೀರಿದ ಏಕದೇವಭಾವವು ಮುಂದುವರಿಯಿತು. ಆದರೆ, ಯಾವ ಸಂಕೀರ್ಣ ಆಚರಣೆಗಳ ಗೊಂದಲವನ್ನು ತಪ್ಪಿಸಲೆಂದು ಶಂಕರರು ಈ ಉಪಾಯವನ್ನು ಜಾರಿಗೊಳಿಸಿದ್ದರೋ, ಅದೂ ಸಂಕೀರ್ಣತೆಯ ಮತ್ತೊಂದು ಭಾಗ ಮಾತ್ರವೇ ಆಗಿ ಮುಂದುವರಿಯುವ ದುರಂತ ಇಲ್ಲಿ ಸಂಭವಿಸಿತು.

ಏ. ನಂಬಿಕೆ ಮತ್ತು ದಿನಚರಿ:

ಸಂಕೇತಿಗಳ ದಿನಚರಿಯಲ್ಲಿ ಅಂತರ್ಗತವಾದ ಧಾರ್ಮಿಕಭಾವಗಳಲ್ಲಿ ಕೆಲವನ್ನು ಈಗ ಗಮನಿಸಬಹುದು:

1. ದಿನವು ಮಂಗಳಕರವಾಗಿರಲೆಂಬ ಉದ್ದೇಶದಿಂದ ಬ್ರಾಹ್ಮೀಮುಹೂರ್ತದಲ್ಲಿ ದೇವರದರ್ಶನ ಮತ್ತು ದೇವನಾಮಸ್ಮರಣೆಯೊಂದಿಗೆ ಏಳುವುದು.

2. ಪರಮಾತ್ಮನಿಗೆ ಮಾಡುವ ಪ್ರದಕ್ಷಿಣನಮಸ್ಕಾರದಂತೆ ಬಲಮಗ್ಗುಲಾಗಿ ಏಳುವುದು; ಕಾಶಿಯನ್ನು ನೆನೆದರೂ ಪುಣ್ಯ ಮತ್ತು ಸದ್ಗತಿ ಪ್ರಾಪ್ತವಾಗುತ್ತದೆ ಎಂಬ ನಂಬಿಕೆಯಿಂದ 'ಕಾಶಿ ಕಾಶಿ' ಎಂದು ಸ್ಮರಿಸುತ್ತಾ ಏಳುವುದು.

3. ಪುರುಷಪ್ರಯತ್ನದಲ್ಲಿ ವಿಶ್ವಾಸವಿದ್ದೂ ದೈವಾನುಗ್ರಹದ ಅಪೇಕ್ಷೆಯಿಂದ ನಿದ್ದೆಯಿಂದ ಎದ್ದಕೂಡಲೇ ಹಾಸಿಗೆಯಲ್ಲಿ ಕುಳಿತು

> ಕರಾಗ್ರೇ ವಸತೇ ಲಕ್ಷ್ಮೀಃ ಕರಮಧ್ಯೇ ಸರಸ್ವತೀ|
> ಕರಮೂಲೇ ಸ್ಥಿತಾ ಗೌರೀ ಪ್ರಭಾತೇ ಕರದರ್ಶನಮ್||

ಎಂಬ ಅರ್ಥಪೂರ್ಣ ಶ್ಲೋಕ ಹೇಳಿಕೊಂಡು ಕರದರ್ಶನ ಮಾಡುವುದು; ಅನ್ನ ಮತ್ತು ಆಶ್ರಯವನ್ನು ಕೊಡುವ ಭೂಮಿದೇವಿಯ ಬಗೆಗೆ ಕೃತಜ್ಞತೆಯನ್ನು ಸೂಚಿಸುವ ಉದ್ದೇಶದಿಂದ, ಹಾಸಿಗೆಯಿಂದ ನೆಲಕ್ಕೆ ಕಾಲಿಡುವ ಮೊದಲು ಪಾದಸ್ಪರ್ಶಕ್ಕಾಗಿ ಭೂಮಿದೇವಿಯಲ್ಲಿ

> ಸಮುದ್ರವಸನೇ ದೇವಿ ಪರ್ವತಸ್ತನಮಂಡಲೇ |
> ಭೂಮಿದೇವಿ ನಮಸ್ತುಭ್ಯಂ ಪಾದಸ್ಪರ್ಶಂ ಕ್ಷಮಸ್ವ ಮೇ ||

ಎಂದು ಧ್ಯಾನ ಮಾಡಿ ಕ್ಷಮಾಯಾಚನೆ ಮಾಡುವುದು; ಹಾಲು ಕರೆದಾಗ ಮೊದಲ ಧಾರೆಯನ್ನು ಭೂಮಿಗೆ ಬಿಡುವುದು, ಏನಾದರೂ ಕುಡಿಯುವ ಮೊದಲು ಒಂದೆರಡು ಹನಿಗಳನ್ನು ನೆಲಕ್ಕೆ ಬಿಡುವುದು, ಎಣ್ಣೆ ಒತ್ತುವಾಗ ಭೂಮಿತಾಯಿಗೂ ಒತ್ತುವುದು ಹೀಗೆ ಈ ಕೃತಜ್ಞತಾಭಾವ ದಿನವನ್ನೆಲ್ಲ ತುಂಬಿಕೊಳ್ಳುತ್ತದೆ.

4. ತನ್ನ ಮುಖದ ವಿಕಾರದರ್ಶನದ ಮೂಲಕ ಅಹಂಕಾರ ನಿರಸನವಾಗಲೆಂದು ಎದ್ದಕೂಡಲೆ ಕನ್ನಡಿಯಲ್ಲಿ ಮುಖದರ್ಶನ ಮಾಡಿಕೊಳ್ಳುವುದು.

5. ಪುಣ್ಯಪ್ರಾಪ್ತಿಗಾಗಿ ಸ್ತೋತ್ರ, ಸುಪ್ರಭಾತ ಪಠನ; ತಂದೆತಾಯಿಗಳಿಗೆ ನಮನ; ಜಲಾಶಯ ಸ್ನಾನ; ಸಂಧ್ಯಾವಂದನೆ ಮೊದಲಾದ ನಿತ್ಯಕರ್ಮಗಳನ್ನು ತಪ್ಪದೆ ಆಚರಿಸುವುದು.

6. ದುಡಿಮೆಯೊಂದಿಗೆ ವೇದಶಾಸ್ತ್ರಾಧ್ಯಯನ ಹಾಗೂ ಪುರಶ್ಚರಣಗಳ ಅಭ್ಯಾಸವನ್ನು ಬಿಟ್ಟುಕೊಡದಿರುವುದು.

7. ಹೆಂಗಸರು ಏಳುತ್ತಲೇ 'ಮಾಂಗಲ್ಯವೇ ಪತಿರೂಪು' ಎಂದು ತಿಳಿದು ಅದನ್ನು ಕಣ್ಣಿಗೊತ್ತಿಕೊಳ್ಳುವುದು; ಗೋದರ್ಶನ, ಗೋಪೂಜೆ, ಗಂಗಾಪೂಜೆ, ಅಶ್ವತ್ಥಪೂಜೆ, ಪ್ರದಕ್ಷಿಣೆ, ಜಪ, ಗೌರಿಪೂಜೆ, ತುಳಸಿಪೂಜೆ, 'ಲಕ್ಷ್ಮಿ ನಿನಗೆ ಅರಿಶಿನ ಹಚ್ಚಿದೇನಮ್ಮ, ನನಗೂ ಅದು ಶಾಶ್ವತವಾಗಿರಲಿ' ಎಂಬ ಪ್ರಾರ್ಥನೆಯನ್ನು ಒಳಗೊಂಡ ಹೊಸ್ತಿಲುಪೂಜೆ ಮಾಡುವುದು; ಸಂಜೆ ದೇವರ ಮುಂದೆ ಮತ್ತು ತುಳಸಿಯ ಮುಂದೆ ದೀಪಹಚ್ಚುವವರೆಗೂ ದಿನವಿಡೀ ದುಡಿಮೆಯೊಂದಿಗೆ ಹಾಡಿನರೂಪದಲ್ಲಿ ದೇವಸ್ಮರಣೆ ಮಾಡುವುದು (ಬೆಳಗ್ಗೆ: ಉದಯರಾಗ, ಮಧ್ಯಾಹ್ನ: ಮಾನಸಪೂಜೆ, ರಾತ್ರಿ: ಶಿವಗೀತೆಗಳು).

ತಪಸ್ಸಿನರೂಪ ಪಡೆಯುವ ಜೀವನದಲ್ಲಿ ಅಚ್ಚುಕಟ್ಟೂ ಶಿಸ್ತೂ ಇದ್ದು, ನಿರಂತರವಾಗಿ ನಡೆಯುವ ಆಚರಣೆಗಳಲ್ಲಿ ಗಂಡಸರ ಪರಮಗುರಿ 'ಜೀವೋ ಬ್ರಹ್ಮೈವ ನಾಪರಃ' ಎಂಬುದರ ಸಾಕ್ಷಾತ್ಕಾರವಾದರೆ, ಹೆಂಗಸರ ಪರಮ ಅಭೀಪ್ಸೆ ಮುತ್ತೈದೆಭಾಗ್ಯವಾಗಿರುತ್ತದೆ ಎಂಬುದು ಗಮನಿಸಬೇಕಾದ ಮತ್ತೊಂದು ಸಂಗತಿಯಾಗಿದೆ.

ಐ. ಪರಬ್ರಹ್ಮ:

ಅಗ್ನಿ, ಮೂರ್ತಿ, ಕಲಶ ಇತ್ಯಾದಿ ಸಂಕೇತಗಳನ್ನಿಟ್ಟುಕೊಂಡು ವಿವಿಧರೀತಿಯಲ್ಲಿ ನಡೆಯುವ ಪೂಜೆಯು ದೇವತೆಗಳು, ಅತಿಮಾನುಷರು, ವೃಕ್ಷ, ಪ್ರಾಣಿ, ಜಡವಸ್ತುಗಳಿಗೂ ಸಲ್ಲುತ್ತದೆ. ಆದರೆ, ಅವೆಲ್ಲವೂ ನಿರಾಕಾರನೂ ನಿರ್ಗುಣನೂ ಆದ ಪರಬ್ರಹ್ಮನನ್ನು ಧ್ಯಾನಿಸುವುದಕ್ಕಾಗಿ ಇರುವ ಮಾಧ್ಯಮ ಎಂಬ ಅರಿವು ಅಲ್ಲಿನದು. ತನ್ನ ಎಲ್ಲ ಕರ್ಮಗಳನ್ನು (ಇತರ ಸ್ಮಾರ್ತರಂತೆಯೇ) ಸಮುದಾಯವು ಅರ್ಪಿಸುವುದು ಈ ಪರಮೇಶ್ವರನಿಗೇ (ಪರಬ್ರಹ್ಮ). 'ಅಹಂ ಬ್ರಹ್ಮಾಸ್ಮಿ, ಸೋಹಮಸ್ಮಿ' ಎಂಬುದು, ಅವರು ನಿತ್ಯ ಸಂಧ್ಯಾವಂದನೆಯ ಸಮಯದಲ್ಲಿ ಮನನ ಮಾಡುವ ಅಂಶವಾಗಿದೆ. ಅದನ್ನು ಸಾಧಿಸುವುದೇ ಎಲ್ಲ ಕರ್ಮಾನುಷ್ಠಾನಗಳ ಗುರಿ. ವೈವಿಧ್ಯದ ನಡುವೆ ಇರುವ ಅದ್ವೈತದ ಏಕಭಾವವು ಪರಕೀಯ ಪ್ರಜ್ಞೆಗೆ ದಕ್ಕುವಂಥದಲ್ಲ. ಆದ್ದರಿಂದಲೇ, ಮೋನಿಯರ್ ವಿಲಿಯಂಸ್‌ನ ಹಿಂದೂಗಳ ದೇವತೆಗಳನ್ನು ಕುರಿತ ಮಾತುಗಳನ್ನು, ರೆವರೆಂಡ್ ಆಸ್ಬಾರ್ನ್ ಮಾರ್ಟಿನ್‌ನು ವ್ಯಂಗ್ಯವಾಗಿ ಬಳಸಿಕೊಳ್ಳುವುದು ಸಾಧ್ಯವಾಯಿತು.[11] ಅದ್ವೈತ ಪರಿಸರದ ಬದುಕಿನ ಅನುಭವದಿಂದ ಮಾತ್ರ ಅದರ ಸರಿಯಾದ ವ್ಯಾಖ್ಯಾನ ಸಾಧ್ಯವಾಗಬಹುದು.[12]

ಸಂಕೇತಿಗಳ ಧಾರ್ಮಿಕ ಬದುಕಿನ ಈ ವಿವರಗಳಲ್ಲಿ, ಕಾಲಕಾಲಕ್ಕೆ ಎದ್ದುಕಾಣುವ ವಿಕೃತಿಗಳೂ ಅವರ ಪ್ರವೃತ್ತಿಯ ದೃಷ್ಟಿಯಿಂದ ಮುಖ್ಯವಾದವು. ಎಲ್ಲ ಸ್ಮಾರ್ತರಂತೆಯೇ ಸಂಕೇತಿಗಳೂ ಬಹುಪಾಲು ಭಕ್ತಿಮಾರ್ಗದ ಅವಸ್ಥೆಯಲ್ಲಿ ಉಳಿದವರು; ಜ್ಞಾನಮಾರ್ಗಕ್ಕಾಗಿ ಆಶಿಸಿದವರು. ಈ ಸ್ಥಿತಿಯನ್ನು ಥಾಮಸನ ಈ ಮಾತುಗಳು ಸಮರ್ಥವಾಗಿ ವಿವರಿಸುತ್ತವೆ:

"ಬೌದ್ಧಮತ ಮತ್ತಿತರ ಹಿಂದೂ ದರ್ಶನಗಳು ಪ್ರತಿಪಾದಿಸುವ ಹತಾಶಧೋರಣೆಗೆ ವಿರೋಧವಾಗಿರುವುದರಲ್ಲಿಯೇ ಅದ್ವೈತದ ಶ್ರೇಷ್ಠತೆ ಅಡಗಿದೆ. ಅದ್ವೈತಿಯೊಬ್ಬನಿಗೆ ಜೀವನವು ಬಾಳುವುದಕ್ಕಾಗಿ ಇದೆ; ಜೀವನೋದ್ದೇಶವು ಮೋಕ್ಷವಲ್ಲ, ಸಾಕ್ಷಾತ್ಕಾರವಾಗಿದೆ. ಆದರೆ ಅದ್ವೈತದ ಬೌದ್ಧಿಕ ಪರಾಕಾಷ್ಠೆ ಮತ್ತು ತಾತ್ತ್ವಿಕ ಎದೆಗಾರಿಕೆಯು, ಜನಸಾಮಾನ್ಯರಿಗೆ ಕೈಗೆ ಎಟುಕದಾಗಿದೆ."[13]

ಹೀಗೆ, ತೀವ್ರವಾದ ಉನ್ನತ ಬುದ್ಧಿಸ್ತರದಲ್ಲಿಯೇ ಅದ್ವೈತದ 'ಪರಬ್ರಹ್ಮ'ವು ಅನುಭವಕ್ಕೆ ಬರಬೇಕಾದುದು ಅನಿವಾರ್ಯ; ಅದು ಅನುಷ್ಠಾನದಲ್ಲಿ ವ್ಯಕ್ತವಾಗಬೇಕಾದುದು ಅಗತ್ಯ. ಆದರೆ, ಹೆಚ್ಚಾಗಿ, ಸಂಕೇತಿಗಳು, ಈ ಪ್ರವೃತ್ತಿಯೊಡನೆ ತೀವ್ರ ತಾದಾತ್ಮ್ಯ ಸಾಧಿಸುವುದರ ಬದಲು, ಕವಲುದಾರಿಗಳಲ್ಲಿ ಗೊಂದಲಗೊಂಡಿದ್ದಾರೆಂಬುದು ಈವರೆಗಿನ ವಿವರಗಳಲ್ಲಿ ಸೂಚಿತವಾಗುತ್ತದೆ.

---

[11] The Gods of India, A brief description of their history character and worship, p.81.

[12] ಅಂಥ ಪರಿಸರದ ಚಿತ್ರಣವೊಂದಕ್ಕಾಗಿ ನೋಡಿ : ಗ್ರಾಮಜ್ಯೋತಿ, ಕೆ.ಆರ್.ಲಿಂಗಪ್ಪ ಅಭಿನಂದನ ಗ್ರಂಥ, ಪು.೫೧೭-೫೧೮.

[13] Hindu religion, customs and manners, (6th Edn.) Thomas P.; D.B. Taraporevala Sons and Co., Pvt. Ltd., Bombay; 1975, p.43.

೨. ಹಬ್ಬಗಳು

ದೇವರನ್ನು ಒಲಿಸಿಕೊಳ್ಳುವ ಸತತ ಪ್ರಯತ್ನ ಮತ್ತು ಅದಕ್ಕೆ ಪೂರಕವಾಗಿ ನೈತಿಕತೆಯನ್ನು ಜಾಗೃತಗೊಳಿಸಿಕೊಳ್ಳುವ ಮುಖ್ಯ ಉದ್ದೇಶದಿಂದಲೇ ಹಬ್ಬಗಳು ಮತ್ತು ಅವುಗಳಿಗೆ ಸಂಬಂಧಿಸಿದ ವಿವರಗಳು ಬೆಳೆದಿವೆ. ಸಂಕೇತಿಗಳ ಧಾರ್ಮಿಕ ಬದುಕಿನ ಅನನ್ಯತೆಯನ್ನು, ಹಬ್ಬಗಳ ಸಂಬಂಧದ ಆಚರಣೆಗಳಲ್ಲಿ ಗುರುತಿಸುವ ಯತ್ನವನ್ನು ಇಲ್ಲಿ ಮಾಡಿದೆ.

ಕನ್ನಡದಲ್ಲಿ ಹಬ್ಬಗಳನ್ನು ಕುರಿತ ಸಾಹಿತ್ಯ ಸಾಕಷ್ಟು ಬಂದಿದೆ. ಕೆಲವು ನಿಬಂಧಗಳೂ ಆ ಬಗೆಗೆ ಚರ್ಚಿಸಿವೆ. ಹಬ್ಬಗಳ ಹಿರಿಮೆ, ಹಿನ್ನೆಲೆ, ತಾತ್ತ್ವಿಕ ಮೌಲ್ಯ, ಆಚರಣೆಯ ವಿವರಣೆಗಳ ಪುನರಾವರ್ತನೆ ಪ್ರಸ್ತುತ ನಿಬಂಧದ ಉದ್ದೇಶಕ್ಕೆ ಹೊರತಾದುದು.

ಮೂಲಪುರಾಣಗಳ ಅವಲೋಕನ ಮಾಡಿ ಹಬ್ಬಗಳು ಹಾಗೂ ವ್ರತಗಳ ಬಗೆಗೆ ಸುವ್ಯವಸ್ಥಿತ 'ವ್ರತಚೂಡಾಮಣಿ'ಯನ್ನು ಕನ್ನಡಕ್ಕೆ ಮೊದಲು ಕೊಟ್ಟವರು ಮಧ್ಯದೇಶದ ಒಬ್ಬ ಸಂಕೇತಿ ವಿದ್ವಾಂಸರು.[14] ಅದನ್ನನುಸರಿಸಿ ಇತರ ಅಂಥ ಗ್ರಂಥಗಳು ಬಂದಿವೆ. ಆದರೆ ಇಂದಿಗೂ ನಿಖರತೆ, ಅಸ್ಖಾಲಿತ್ಯ, ನಿರ್ದೋಷ ನಿರೂಪಣೆಗೆ ಮಾದರಿಯಾದುದು ಮೊದಲ ವ್ರತಚೂಡಾಮಣಿಯೇ. ಅದು ಬ್ರಾಹ್ಮಣರಲ್ಲಿ ಸಾರ್ವತ್ರಿಕವಾಗಿ ಪ್ರಚಾರವಾಯಿತೆಂಬುದೂ, ಆ ಕುರಿತ ಆಚರಣೆಗಳ ಅವರ ಸಮಾನ ಲಕ್ಷಣದ ದೃಷ್ಟಿಯಿಂದ ಮುಖ್ಯವಾದುದು. ಪುರಾಣಗಳ ಮೂಲಆಕರವು ಎಲ್ಲರಿಗೂ ಸಮಾನವಾದುದೇ. ಇತ್ತೀಚೆಗೆ ಬಂದ ಸಿ.ಎಸ್.ರಾಮಚಂದ್ರ ಅವರ 'ಸಂಕೇತಿ: ಜನಾಂಗ, ಸಂಸ್ಕೃತಿ ಮತ್ತು ಭಾಷೆ' ಎಂಬ ಗ್ರಂಥದಲ್ಲಿ ಸಂಪ್ರದಾಯಾಚರಣೆಗಳಿಗೆ ಒತ್ತುಕೊಟ್ಟು ಹಬ್ಬಗಳನ್ನು ವಿವರಿಸಲಾಗಿದೆ (ಪು.೭೬-೧೨೫). ಅದರಿಂದಲೂ ಸ್ಪಷ್ಟವಾಗುವಂತೆ, ಕರ್ನಾಟಕದ ಸಂಕೇತಿಗಳ ಹಬ್ಬಗಳ ಆಚರಣೆ, ಅದರ ರೀತಿ ಮತ್ತು ವಿವರಗಳು ದಕ್ಷಿಣ ಕರ್ನಾಟಕದ ಇತರ ಬ್ರಾಹ್ಮಣರ ಆಚರಣೆಗಳೊಂದಿಗೆ ಬಹುಪಾಲು ಸಾಮ್ಯ ಹೊಂದಿವೆ.

ಆದುದರಿಂದ ಸಂಕೇತಿಗಳನ್ನು ಕೇಂದ್ರವಾಗಿಟ್ಟುಕೊಂಡು ಅವರ ಪ್ರವೃತ್ತಿಯನ್ನು ಗುರುತಿಸಲು ಅಗತ್ಯವಾದ ಕೆಲವು ಸಂಗತಿಗಳನ್ನಷ್ಟೆ ಇಲ್ಲಿ ಪರಿಶೀಲಿಸಿದೆ. ಕರ್ನಾಟಕಕ್ಕೆ ಹೋಲಿಸಿದರೆ ದಕ್ಷಿಣದ ಸಂಕೇತಿಗಳ ಹಬ್ಬಗಳು ಬಹಳ ಮಿತವಾದುದರಿಂದ, ಅದನ್ನು ಆನುಷಂಗಿಕವಾಗಿ ನೋಡಿದೆ.

ಅ. ಕೆಲವು ವಿಶಿಷ್ಟ ಆಚರಣೆಗಳು:

ಸಂಕೇತಿಗಳಿಗೇ ವಿಶಿಷ್ಟವಾದ ಆಚರಣೆಗಳಿರುವಂತೆಯೇ ಈ ಸಮುದಾಯವು ಗಾಢವಾಗಿ ಪರಿಗಣಿಸುವ ಕೆಲವು ಆಚರಣೆಗಳೂ ಇವೆ. ಅವುಗಳನ್ನು ಇಲ್ಲಿ ವಿವೇಚಿಸಿದೆ:

1. ವಾರಾತುರುವೆ: ದೀಪಾವಳಿಯ ಅಂಗವಾಗಿ ನಡೆಯುವ ಬಲೀಂದ್ರಪೂಜಾ ಸಂದರ್ಭದ ಮಂಗಳಾಶಯದ ಆಚರಣೆ ಇದು. ಇಲ್ಲಿ ಹೆಣ್ಣುಮಕ್ಕಳು (ಅವಿವಾಹಿತರು ಇಲ್ಲವೆ ವಿವಾಹಿತೆಯರು; ಮನೆಯ ಯಜಮಾನನ ಅಕ್ಕತಂಗಿಯರು ಅಥವಾ ಮಕ್ಕಳು ಅಥವಾ ಮೊಮ್ಮಕ್ಕಳು) ತವರು ಮನೆಗೆ ಶ್ರೇಯಸ್ಸನ್ನು ಕೋರುತ್ತಾರೆ.

ಬಲೀಂದ್ರನ ಮಂಗಳಾರತಿಗೆ ಮೊದಲು ಇದು ನಡೆಯುತ್ತದೆ. ಒಂದು ಶಂಖದಲ್ಲಿ, ಹಸುವಿನ 'ಹಸಿ ಹಾಲನ್ನೂ' ನಾಲ್ಕುಕಾಳು ಬತ್ತವನ್ನೂ ಹಾಕಿಕೊಳ್ಳುತ್ತಾರೆ. ಹೆಣ್ಣು ಮಕ್ಕಳು ಇಬ್ಬರು ಅದನ್ನು ಬಲಗೈಲಿ ಹಿಡಿದುಕೊಂಡು ಮೂರುಬಾರಿ ಬಲೀಂದ್ರನಿಗೆ ಪ್ರದಕ್ಷಿಣೆ ಬರುತ್ತಾರೆ. ಪ್ರತಿಸುತ್ತಿಗೂ -

ವಾರ್ರಾ | ತುರುವೇ | ವಳೀಲು | ನಿಲ್ಲಾದೇ |
ನಿಲ್ಲಾ | ತುರುವೇ | ನೆಲ್ಲುಳ್ಳು | ಪುಲ್ಲುಳ್ಳು |
ಕೊಟ್ಟ್ಯಾಯ್ಯೆಪ್ಪ | ಪೊಶಕ್ಕು | ಹಾತ್ತೆಪ್ಪ | ಪಶ್ಶಾಳೂ |

[14] ಪುಟ್ಟಪ್ಪ, ವೈದಿಕರು, ರಾಮನಾಥಪುರ, ಹಾಸನಜಿಲ್ಲೆ.



126 ವಾರಾ ತುರುವೆ: ಮನೆಯ ಹೆಣ್ಣು ಮಕ್ಕಳು ಗೋವಿನ ಹಸಿಹಾಲಿನಲ್ಲಿ ಬಲೀಂದ್ರನಿಗೆ ಅಭಿಷೇಕಿಸುತ್ತಿರುವುದು

ಕಣಜತ್ತ್ಹೆಪ್ಪ | ನೆಲ್ಲೂ | ಪೆಟ್ಟೆ ಹೆಪ್ಪ | ಪಾಕೂ |

ಪಕ್ಕುಳಿ ಆಡರ್ | ಪರಂದ್ ಹ್ಹಾ | ಕುಳ್ಳೀರ್ಕ್ ಇಕ್ಕ್ವಾಡ್ |

ಎಂದು ಹಾಡಿ ಪ್ರತಿನುಡಿಗೂ ಹಾಲನ್ನು ಬಲೀಂದ್ರನ ಮೇಲೆ ಅಭಿಷೇಕಿಸುತ್ತಾರೆ (ಚಿತ್ರ 126).

ಇದು ಹಸುಗಳನ್ನು ಕರೆಯುವ ಹಾಡು. ಅದು ಮುಂದುವರಿದು, ಕೊಟ್ಟಿಗೆಯ ತುಂಬ ಪಶುಸಂಪತ್ತು ತುಂಬಲಿ ಎಂಬ ಧ್ವನಿಯುಕ್ತ ಮಾತಾಗುತ್ತದೆ. ಪಶುಗಳು ಮುಖ್ಯ ಸಂಪತ್ತಾಗಿದ್ದ ಕಾಲದ ಈ ಆಶಯದ ಮೌಲ್ಯವು ದೊಡ್ಡದು. ಗೋಸೇವೆಯ ಫಲವಾಗಿ ಅದನ್ನನುಸರಿಸಿ ಮನೆಯತುಂಬ ಮಕ್ಕಳು; ಕಣಜದ ತುಂಬ ಬತ್ತ, ಅಡಿಕೆ ಫಲಿಸುತ್ತವೆ - ಎಂಬುದೂ ಗೋಸೇವೆಯ ಪ್ರಾಮುಖ್ಯವನ್ನು ತಿಳಿಸುವಂತೆಯೇ ಕೃಷಿಕೇಂದ್ರಿತ ಬದುಕಿನ ಚಿಂತನೆಯ ಲಹರಿಗೂ ಕನ್ನಡಿಯಾಗಿದೆ. 'ತವರುಮನೆ ತಣ್ಣಗಿರಲಿ' ಎಂದು ಹಾರೈಸುವ ಸೋದರಿಯರ ಮನಸ್ಸು ತುಡಿಯುವ ರೀತಿ 'ಪುಟ್ಟಮಕ್ಕಳು ಆಡುವ ತವರುಮನೆ' ಎಂಬ ಪ್ರಯೋಗದಲ್ಲಿ ಅಂತಃಕರಣವನ್ನು ತುಂಬುತ್ತದೆ. ಆ ಪ್ರಾರ್ಥನೆ ನಡೆಯುವುದೂ ಬಲೀಂದ್ರನ ಮಂಗಳಾರತಿಗೆ ಮೊದಲು; ಸಂಪದ್ಭರಿತ ರಾಜ್ಯದ ಒಡೆಯನಾದ ಬಲೀಂದ್ರನಲ್ಲಿ. ಕರೆದ (ಹಸಿ) ಹಾಲು ಮತ್ತು ಬತ್ತ, ಸಂಪತ್ತಿನ ವಿಕಾಸದ ಸಂಕೇತಗಳು; ಅದನ್ನು ಒಳಗೊಂಡ ಶಂಖವು, ಅರ್ಥ ಮತ್ತು ಕಾಮವನ್ನು ಧರ್ಮದ ಚೌಕಟ್ಟಿನಲ್ಲಿಡುವುದರ ಸಂಕೇತ. ಹೆಣ್ಣುಮಕ್ಕಳೇ ಈ ಹಾರೈಕೆ ಮಾಡುವುದೂ 'ಲಕ್ಷ್ಮೀಸ್ವರೂಪಿ'ಗಳಾದುದರಿಂದ ಉಚಿತವಾದುದು.

'ವಾರಾತುರುವೆ' ಅನಂತರ, ಬಲೀಂದ್ರನ ಮುಂದೆ 'ಇರಿಸಿರುವ' ಎಲೆಅಡಿಕೆಯಲ್ಲಿ ಒಂದೊಂದನ್ನು ಇಬ್ಬರೂ 'ಸ್ವೀಕರಿಸುತ್ತಾರೆ'. ಯಾರೂ ಅದನ್ನು 'ಕೊಡದಿರುವುದ'ಕ್ಕೆ, ಅಂದು 'ಲಕ್ಷ್ಮಿ'ಯನ್ನು ಬಿಟ್ಟುಕೊಡಬಾರದು, ಪಡೆದುಕೊಳ್ಳಬಹುದು ಎಂಬ ಮನೋಭಾವವೇ ಕಾರಣವಾಗಿದೆ. ಅನಂತರ, ಹಸುಗಳಿಗೆ ಪೂಜಿಸಿ ಕಡಬು ತಿನ್ನಿಸಿ ಆರತಿ ಎತ್ತುತ್ತಾರೆ. ಮಂಗಳಾರತಿಯನಂತರ, ಈಗಾಗಲೇ ಬಲೀಂದ್ರನ ಸುತ್ತ ಹೊತ್ತಿಸಿಟ್ಟಿರುವ ಎಲ್ಲ ದೀಪಗಳನ್ನು ಜೋಡಿಯಾಗಿ ಎಲ್ಲೆಡೆ ಇಡುತ್ತಾರೆ. ಅನಂತರ ಸುಮಂಗಲೆಯರಿಗೆ ಎಲೆಅಡಿಕೆ ಸಲ್ಲುತ್ತದೆ. ಆ ಹೆಣ್ಣುಮಕ್ಕಳೇ ಬಲೀಂದ್ರನನ್ನು ಉತ್ತರಕ್ಕೆ ಸರಿಸು('ಉದ್ವಾಸನೆ' ಅಲ್ಲ)ತ್ತಾರೆ. ಪ್ರಾರ್ಥನೆಯನಂತರ ಮಂಗಳಾರತಿ; ಮಂಗಳಾರತಿಯನಂತರ ಬೆಳಕು ಎಲ್ಲೆಡೆಗೆ ಸೂಸುವ ಪ್ರಸಾದ ಕೂಡ ತುಂಬುಅರ್ಥದ ಸಂಕೇತವಾಗಿದೆ. ಇದೊಂದೇ ಸಂದರ್ಭವೇ ಹಬ್ಬಗಳ ಆಶಯವನ್ನು ಪೂರ್ಣವಾಗಿ ವಿವರಿಸಲು ಸಮರ್ಥವಾಗಿದೆ.

ಈ ಹಾಡಿನ ಭಾಷೆ ತಮಿಳು ('ವಾರಾ', 'ನಿಲ್ಲಾ'ದಂಥ ಪೂರ್ವಹಳಗನ್ನಡ ರೂಪಗಳೂ, 'ಕಣಜ'ದಂಥ ಹೊಸಗನ್ನಡ ಪದವೂ ಇದರಲ್ಲಿವೆ). ತಮಿಳು ಮಾತೃಭಾಷೆಯಾದರೂ ಕರ್ನಾಟಕದ ಸಂಕೇತಿಗಳ ವ್ಯವಹಾರಗಳು ಕನ್ನಡದಲ್ಲಿಯೇ ನಡೆಯುತ್ತವೆ. ತಮ್ಮದೇ ಆದ ತಮಿಳು ಹಾಡುಗಳೂ ಬಳಕೆಯಲ್ಲಿಲ್ಲ; ಬಳಕೆಗೊಂಡಿರುವುವು ಕನ್ನಡದ ಹಾಡುಗಳೇ. ಆದರೆ ಮೂಲ ತಮಿಳನ್ನೇ ಬಳಸುವ ಕೆಲವೇ ವಿಶಿಷ್ಟ ಸಂದರ್ಭಗಳಿವೆ. ಕೋಡಂಗಿಸಭೆ, ಶ್ರಾದ್ಧದ ಉಪಚಾರ ಮತ್ತು ತೃಪ್ತಿಪ್ರಶ್ನೆ, ವಾರಾತುರುವೆ ಇವು ಪರಂಪರೆಯಾಗಿ ಬಂದ ಅಂಥ ಕೆಲವು ಸಂದರ್ಭಗಳು. ಆದರೆ 'ವಾರಾತುರುವೆ' ದಕ್ಷಿಣದ ಸಂಕೇತಿಗಳಲ್ಲಿ ಈಗ ಆಚರಣೆಯಲ್ಲಿಲ್ಲ (ಗೋಸ್ನಾನ, ಗೋಪೂಜೆ, ನೈವೇದ್ಯ ಎಲ್ಲವೂ ಕರ್ನಾಟಕದಲ್ಲಿ ದೀಪಾವಳಿಯಲ್ಲಿ ನಡೆದರೆ, ದಕ್ಷಿಣದಲ್ಲಿ ಮಕರ ಸಂಕ್ರಾಂತಿಯ ಮಾರನೆಯದಿನ 'ಮಾಟ್‌ಪೊಂಗಲ್' ಎಂಬ ಹೆಸರಿನಿಂದ ನಡೆಯುತ್ತವೆ). ವಾರಾತುರುವೆಯ ಆಶಯವನ್ನು ಹೊಂದಿದ ಭಿನ್ನ ಆಚರಣೆಯೊಂದು ದಕ್ಷಿಣದಲ್ಲಿ ಕಾರ್ತಿಕ ಬಿದಿಗೆಯಂದೇ ನಡೆಯುತ್ತದೆ. ಅಲ್ಲಿ, ಕಾರ್ತಿಕ ಮತ್ತು ರೋಹಿಣಿಯಲ್ಲಿ ಸಂಜೆ ಜಗುಲಿಯಲ್ಲಿ ದೀಪಗಳನ್ನಿಡುತ್ತಾರೆ. ನಿತ್ಯಪೂಜೆಯಷ್ಟೆ ನಡೆಯುತ್ತದೆ. ರೋಹಿಣಿಯಂದು ಜಗುಲಿಯ ಎಲ್ಲ ದೀಪಗಳನ್ನು ಒಳಕ್ಕೆ ಸ್ಥಳಾಂತರಿಸುತ್ತಾರೆ. 'ಆನೆದೀಪ'

ಹೊತ್ತಿಸುತ್ತಾರೆ. ಸೋದರರಿಗೆ ಸೋದರನು ಎಳೆನೀರು ಮತ್ತು ಮಂಗಳದ್ರವ್ಯವನ್ನು ಕೊಡುತ್ತಾನೆ. ಆಕೆ ಅರಳು, ಹುರುಳಿ, ಸಕ್ಕರೆ ಬೆರೆಸಿ ಆನೆದೀಪಕ್ಕೆ ಪೂಜಿಸಿ ಸೋದರನ ಒಳಿತಿಗಾಗಿ ಪ್ರಾರ್ಥಿಸುತ್ತಾಳೆ.

ಕರ್ನಾಟಕದ ಇತರ ಬ್ರಾಹ್ಮಣ ಸಮುದಾಯಗಳಲ್ಲಿ ಇಂಥ ಆಚರಣೆ ಇಲ್ಲದುದರಿಂದ, ಅಲ್ಪಸಂಖ್ಯಾತರಾದ ದಕ್ಷಿಣದ ಸಂಕೇತಿಗಳಲ್ಲಿ ಕೈಬಿಟ್ಟುಹೋಗಿದ್ದರೂ ಕರ್ನಾಟಕದ ಸಂಕೇತಿಗಳಲ್ಲಿ ಉಳಿದುಕೊಂಡ ಆಚರಣೆಗಳ ನಿದರ್ಶನಗಳಲ್ಲಿ 'ವಾರಾತುರುವೆ'ಯೂ ಒಂದು ಎಂಬುದು ಸ್ಪಷ್ಟವಾಗಿದೆ.

ಸಂಸ್ಕಾರಗಳ ಸಂದರ್ಭದಲ್ಲಿ, ಮುಖ್ಯವಾಗಿ 'ಮನೆಯ ಹೆಣ್ಣುಮಕ್ಕಳು' ಮತ್ತು ಸೋದರಮಾವನ ಅತಿಶಯವಾದ ಪ್ರೀತಿ ಹಾಗೂ ಶುಭಾಕಾಂಕ್ಷೆ ವ್ಯಾಪಕವಾಗಿ ವ್ಯಕ್ತವಾಗುತ್ತದೆ. ಹಬ್ಬಗಳ ಸಂದರ್ಭದಲ್ಲಿಯೂ ಅಂಥ ಪ್ರಸಕ್ತಿ ಇದೆ. ಅದು ಅತ್ಯಂತ ಸಮರ್ಥವಾಗಿ ಮತ್ತು ಗಾಢವಾಗಿ ವ್ಯಕ್ತವಾಗುವ ಸನ್ನಿವೇಶವೆಂದರೆ 'ವಾರಾತುರುವೆ' ಮತ್ತು ಅದಕ್ಕೆ ಸಮಾನಾಂತರವಾದ 'ಆನೆದೀಪ'ದ ಪೂಜೆ.

2. ಆವೂಟರದ್(ಆ ಊಡಿಸುವುದು): ದೀಪಾವಳಿಯ ಸಂದರ್ಭದಲ್ಲಿಯೇ ನಡೆಯುವ ಈ ಆಚರಣೆಯು 'ವಾರಾತುರುವೆ'ಯಂತೆಯೇ ಪರಂಪರಾಗತವಾಗಿ ಬಂದ ಸಂಕೇತಿಗಳ ಮೂಲ ಆಚರಣೆ ಎನ್ನಲು ಎರಡು ಕಾರಣಗಳಿವೆ. ಒಂದು: ಅದರ ತಮಿಳು ಪ್ರಯೋಗ; ಎರಡು: ಕರ್ನಾಟಕದ ಇತರ ಬ್ರಾಹ್ಮಣರಲ್ಲಿ ಅಂಥದೊಂದು ರೂಢಿ ಇಲ್ಲದಿರುವುದು.

ದಕ್ಷಿಣದಲ್ಲಿ ಇದೂ ರೂಢಿಯಲ್ಲಿಲ್ಲದುದು ಮಾತ್ರವಲ್ಲ, ಮಧ್ಯದೇಶದಲ್ಲಿಯೇ ಕನ್ನಡದ ಇತರ ಬ್ರಾಹ್ಮಣರಿಗೆ ಸಮಾನವಾದ 'ಹೊನ್ನು ತೊಳೆಯುವುದು' ಇದ್ದು 'ಅವೂಟರದ್' ಬಿಟ್ಟುಹೋಗಿದೆ. ಪಾರಂಪರಿಕ ಮೂಲರೂಪಗಳನ್ನು ಹೆಚ್ಚಾಗಿ ಉಳಿಸಿಕೊಂಡಿರುವ ಮತ್ತೂರು ಹಾಗೂ ಹಾಸನಸೀಮೆಯಲ್ಲಿ ಮಾತ್ರ ಅದು ಮುಂದುವರಿದಿದೆ.

ಬಲೀಂದ್ರನ ಮಂಗಳಾರತಿಯ ವೇಳೆ ಹೊನ್ನಾವರಿಕೆ ಹೂವನ್ನು 'ಹೊನ್ನು ಹೊನ್ನು' ಎನ್ನುತ್ತಲೋ 'ನಮ್ಮಪ್ಪನ ಮನೆ ಹೊನ್ನೋ ಹೊನ್ನು' ಎನ್ನುತ್ತಲೋ, ಮನೆಯವರೆಲ್ಲರೂ ಮನೆಯ ಎಲ್ಲ ಭಾಗಗಳಿಗೂ ಪ್ರೋಕ್ಷಿಸುತ್ತಾರೆ. ಪ್ರಾಚೀನ ಕಾಲದಲ್ಲಿ, ಬೆಳಗಾಗುವುದರೊಳಗೆ ಹೂವುಗಳೆಲ್ಲವೂ ಚಿನ್ನವಾಗುತ್ತಿದ್ದವೆಂದೂ, ದುರಾಸೆ ಮತ್ತು ಅಧಾರ್ಮಿಕತೆ ಬೆಳೆದಂತೆ ಹಾಗಾಗುವುದು ನಿಂತಿತೆಂದೂ ಒಂದು ನಂಬಿಕೆ ಇದೆ. ಆದರೂ ಆ ಹೂಗಳನ್ನು ಬೆಳಗಿನವರೆಗೆ ಯಾರೂ ಗುಡಿಸುವುದಿಲ್ಲ; ಬೆಳಗ್ಗೆ ಗುಡಿಸಿದಾಗಲೂ ಅದಕ್ಕಾಗಿ ಈಚಲು ಪೊರಕೆಯನ್ನು (ಮೈಲಿಗೆ ಎಂಬ ಕಾರಣಕ್ಕೆ) ಬಳಸುವುದಿಲ್ಲ. ಸ್ಪಷ್ಟವಾಗಿ ಎಲ್ಲರ ಮನಸ್ಸಿನಲ್ಲಿಯೂ ಬಲೀಂದ್ರನ ದೆಸೆಯಿಂದ ಮನೆಯು ಸಂಪತ್ತಿನಿಂದ ಕೂಡತ್ತದೆಂಬ ನಿರೀಕ್ಷೆ ಮುಂದುವರಿದಿರುವುದು ವ್ಯಕ್ತವಾಗುತ್ತದೆ. - ಇದೇ 'ಹೊನ್ನು ತೊಳೆಯುವುದು'.

'ಆವೂಟರದ್' ಇದಕ್ಕಿಂತ ಬೇರೆಯಾಗಿದೆ. ಅಂದು ಮಧ್ಯಾಹ್ನವೇ ಒಂದು ಪಾತ್ರೆಯಲ್ಲಿ ತುಪ್ಪ, ಹಾಲು, ಬಾಳೆಯಹಣ್ಣು, ಸಕ್ಕರೆ, ಅರಿಶಿನ-ಕುಂಕುಮ, ಹೂವಿನ ಎಸಳುಗಳು, ಅಕ್ಷತೆ-ಎಲ್ಲ ಮಂಗಳ ಪರಿಕರಗಳನ್ನೂ ಕೂಡಿಸಿಟ್ಟುಕೊಳ್ಳುವುದು; ದೊಡ್ಡದೊಂದು ಪುಷ್ಪದಿಂದ ಬೀದಿಯ ಬಾಗಿಲಿನಿಂದ ಪ್ರಾರಂಭಿಸಿ ಹಿತ್ತಿಲು ಬಾಗಿಲಿನವರೆಗೆ 'ಮಂಡಿಗೆ! ನೀ ಚೂಡು' (ತೊಲೆಯೆ! ನೀನು ಊಟಮಾಡು), 'ಪಡಿಕೆ! ನೀ ಚೂಡು ' (ಹಾಸಿಗೆಯೆ! ನೀನು ಊಟಮಾಡು), 'ವಾಶಲೆ! ನೀ ಚೂಡು' (ಬಾಗಿಲೆ! ನೀನು ಊಟಮಾಡು) ಹೀಗೆ ಹೇಳಿಕೊಂಡು ಆ ದ್ರವ್ಯವನ್ನು ಎಲ್ಲರೂ ಎಲ್ಲಕಡೆಗೂ ಪ್ರೋಕ್ಷಿಸುವುದು. ದಕ್ಷಿಣದಿಂದ ಉತ್ತರಾಭಿಮುಖವಾಗಿಯೇ ಇದನ್ನು ಮಾಡುವುದು ಜೀವನದ ಕಡೆಗೆ ಮುಖಮಾಡುವ ಇದರ ಆಶಯಕ್ಕೆ ಅನುಗುಣವಾಗಿದೆ. ಕೊಟ್ಟಿಗೆ, ತಿಪ್ಪೆ, ಬಾವಿ, ಕಡೆಯುವ ಕಂಬ - ಹೀಗೆ ವಿಸ್ತಾರವಾಗಿ ಇದು ಮುಂದುವರಿಯುತ್ತದೆ. ಇದು ಮತ್ತೂರಿನ ಕ್ರಮ. ಆದರೆ, ಹೊನ್ನು ತೊಳೆಯುವ ಪದ್ಧತಿಯೊಂದಿಗೆ 'ಆವೂಟರದ್'ನ್ನು ಕೂಡ ಇಟ್ಟುಕೊಂಡಿರುವ ಕೌಶಿಕ ಪಂಚಗ್ರಾಮದಲ್ಲಿ ಅದು ಮತ್ತೂರಿನ ಕ್ರಮಕ್ಕಿಂತ ತುಸು ಭಿನ್ನವಾದ ವಿವರಗಳನ್ನು ಹೊಂದಿದೆ: ಅಂದು ಬೆಳಗ್ಗೆ, ಕೆರಕನ ಪೂಜೆಯನಂತರ, ಶಾವಂತರಿಗೆ ಹೂ ಮತ್ತು ಬಾಳೆಯಹಣ್ಣನ್ನು ಒಬ್ಬರು ಹಿಡಿದುಕೊಳ್ಳುತ್ತಾರೆ. ಇನ್ನೊಬ್ಬರು ಘಂಟಾನಾದ ಮಾಡುತ್ತಿರುತ್ತಾರೆ. ಇಬ್ಬರೂ ಮನೆಯ ಎಲ್ಲ ಭಾಗಗಳಿಗೆ ಹೋಗುತ್ತಾರೆ. ಬಾಳೆಯಹಣ್ಣು ಹಿಡಿದವರು ಗೋಡೆ, ಬೀರು, ಬಾಗಿಲು ಹೀಗೆ ಪ್ರತಿಯೊಂದಕ್ಕೂ ಅದನ್ನು ತಗಲಿಸುತ್ತ ಬರುತ್ತಾರೆ. ಕೌಶಿಕದ ಪದ್ಧತಿಯಲ್ಲಿ, ಮತ್ತೂರಿನಲ್ಲಿ ಆಚರಣೆಯ ಸಂದರ್ಭದಲ್ಲಿ ಉಚ್ಚರಿಸುವ ಶಬ್ದಗಳು ಕಂಡುಬರದಿದ್ದರೂ ಉಳಿದ ಆಚರಣೆಗಳು ಮತ್ತೂರಿನಂತೆಯೇ ಇವೆ. ಹೊನ್ನು ತೊಳೆಯುವುದರ

ಹಿಂದಿನ ಸಂಪದಭಿವೃದ್ಧಿಯ ಆಶಯವು ವ್ಯಕ್ತವಾಗುವ ಮತ್ತೊಂದು ರೀತಿ ಇಲ್ಲಿನದು.

ದೈವಶಕ್ತಿಯನ್ನು ಒಲಿಸಿಕೊಂಡು, ಗೃಹಸ್ಥಾಶ್ರಮವಿಧಿಗಳ ನಿರ್ವಹಣೆಗೆ ಅಗತ್ಯವಾದ ಸಂಪದಭಿವೃದ್ಧಿಯನ್ನು ಆಶಿಸುವ ಗಾಢ ಆಚರಣೆ ಇದಾಗಿದೆ ಎಂಬುದು ಗಮನಾರ್ಹ ಸಂಗತಿಯಾಗಿದೆ.

3. ಅಂಗಡಿಹಬ್ಬ: ರಥಸಪ್ತಮಿಯಂದು ಮನೆಯ 'ದೇವರಮನೆ'ಯಲ್ಲಿ ದೇವರ ಮಂದಾಸನದ ಮುಂದೆ (ಸೂರ್ಯನ) ರಥದ ಚಿತ್ರವನ್ನು ರಂಗೋಲಿಯಲ್ಲಿ ಬಿಡಿಸಿ ಅದರ ಚೌಕಗಳಲ್ಲಿ ನವಗ್ರಹ ಧಾನ್ಯವನ್ನಿಟ್ಟು ಪೂಜಿಸುವ ವಿಶೇಷ ಕ್ರಮವೊಂದು ಸಂಕೇತಿಗಳಲ್ಲಿದೆ. ದಕ್ಷಿಣದಲ್ಲಿಯೂ ಕರ್ನಾಟಕದಲ್ಲಿಯೂ ಸೂರ್ಯಮಂಡಲಕ್ಕೇ ಪೂಜೆ ಸಲ್ಲುವಷ್ಟಕ್ಕೇ ಅದು ಮಿತಗೊಳ್ಳುವ ಸಂದರ್ಭಗಳೂ ಉಂಟು (ಪಂಚಾಯತನ ಸಂಪುಟದ ಮೇಲೆ ಸೂರ್ಯಮಂಡಲ ಇರುತ್ತದೆ).



127 ಅಂಗಡಿಹಬ್ಬ : ಲಿಂಗದಹಳ್ಳಿ

ಆದರೆ ಲಿಂಗದಹಳ್ಳಿಯಲ್ಲಿ (ಮಾತ್ರ) ಅದು 'ಅಂಗಡಿಹಬ್ಬ'ವಾಗಿ ವಿಸ್ತರಣಗೊಂಡಿದೆ. ಅಂದಿನ ಸೂರ್ಯಪೂಜೆಗಾಗಿ ಬರೆದ ರಥದ ಪಕ್ಕದಲ್ಲಿಯೇ ಚೌಕಗಳನ್ನು ರಂಗೋಲಿಯಲ್ಲಿ ಬಿಡಿಸಿರುತ್ತಾರೆ. ಅದರಲ್ಲಿ ವಿವಿಧ ಬೇಳೆಗಳನ್ನೂ ಬೆಲ್ಲವನ್ನೂ ಇಟ್ಟಿರುತ್ತದೆ. ಅದಕ್ಕೇ ನವಗ್ರಹಪೂಜೆ ಸಲ್ಲುತ್ತದೆ. ಪೂಜೆಯನಂತರ ಮಕ್ಕಳೇ ಮಾರುವ ಮತ್ತು ಕೊಳ್ಳುವ ಪಾತ್ರ ವಹಿಸಿಕೊಂಡು ಆ (ಪೂಜಿತ) ಧಾನ್ಯಗಳ ವ್ಯಾಪಾರ ಮಾಡುತ್ತಾರೆ (ಚಿತ್ರ 127). ಮಕ್ಕಳು ಮಾರುವ ಈ ವಸ್ತುಗಳನ್ನು ದೊಡ್ಡವರೂ ಕೊಳ್ಳುತ್ತಾರೆ. ವ್ಯಾಪಾರವು ಎಂದೂ ಕಸಬಾಗಿ ಇರದಿದ್ದ ಮತ್ತು ಇಂದೂ ಹಾಗೆ ಇರದ ಸಮುದಾಯವು ಇದನ್ನು ವಹಿವಾಟಿನ ಉದ್ದೇಶದಿಂದ ಕಲ್ಪಿಸಿಕೊಂಡಿಲ್ಲವೆಂಬುದು ಸ್ಪಷ್ಟವಾಗಿದೆ. ದವಸಧಾನ್ಯಗಳ ಸಮೃದ್ಧಿ ಮತ್ತು ದೇವರ ಕೃಪೆಯ ಸಾಂಕೇತಿಕತೆಯೇ ಇದರ ಮೂಲ ಆಶಯವಾಗಿದೆ.

4. ಕ್ರೀಡೆಗಳು: ಸಂಕೇತಿಗಳಿಗೇ ವಿಶಿಷ್ಟವಾದ ಕ್ರೀಡೆಗಳು ಇಲ್ಲದುದರಿಂದ, ಈ ಸಮುದಾಯವು ತಮ್ಮ ಜೀವನದ ವಿವಿಧ ಘಟ್ಟಗಳಲ್ಲಿ ಕ್ರೀಡೆಗಳನ್ನು ಅಳವಡಿಸಿಕೊಂಡ, ಬಳಸಿಕೊಂಡ, ಮತ್ತು ಕ್ರೀಡಾ ಮನೋಭಾವವನ್ನು ರೂಢಿಸಿಕೊಂಡ ಅಂಶಗಳನ್ನು ಆನುಷಂಗಿಕವಾಗಿ ಇಲ್ಲಿಯೇ ಪ್ರಸ್ತಾಪಿಸಬಹುದು.

ಪ್ರತ್ಯೇಕ ಪರಿಗಣನೆಗೆ ಅರ್ಹವಾದಷ್ಟು ಸಂಕೇತಿಗಳದೇ ಆದ ವಿಶಿಷ್ಟ ಕ್ರೀಡೆಗಳಿಲ್ಲ. ಮಧ್ಯದೇಶದಲ್ಲಿ ಮಾತ್ರ ಹಬ್ಬದ ಸಂಭ್ರಮವು ಗಣಪತಿಹಬ್ಬದಲ್ಲಿ ತೆಂಗಿನಕಾಯಿ ಜೂಜು, ಪ್ರಥಮ ಏಕಾದಶಿಯಲ್ಲಿ ಗಾಳಿಪಟ (ಬೆಟ್ಟದಪುರದಲ್ಲಿ 'ಬಾವುಟದ ಹಬ್ಬ'ವಾಗಿ ಒಂದು ತಿಂಗಳು), ಯುಗಾದಿಯಲ್ಲಿ ಚೆಂಡಾಟ, ಚಿನ್ನಿಕೋಲು ಇಲ್ಲವೆ ಇಸ್ಪಿಟಿನಲ್ಲಿ ಪ್ರಕಟಗೊಳ್ಳುತ್ತದೆ. ಅದನ್ನು ಬಿಟ್ಟರೆ ಉಳಿದ ಎಲ್ಲಿಯೂ ಹಬ್ಬಕ್ಕೆ ಹೊಂದಿಕೊಂಡಂತೆ ಕ್ರೀಡೆಗಳ ರೂಢಿ ಇಲ್ಲ ಎಂಬುದೇ, ಅವು ಪ್ರಾದೇಶಿಕ ಪ್ರಭಾವದಿಂದಾದ ಬೆಳವಣಿಗೆಗಳು ಎಂಬುದಕ್ಕೆ ಸಾಕ್ಷಿ. ವಿವಾಹ ಮೊದಲಾದ ಸಂಸ್ಕಾರಗಳ ಸಂದರ್ಭದ ಮನೋರಂಜನೆಯ ಕೆಲವು ಆಚರಣೆಗಳನ್ನು ವಿಶಾಲಾರ್ಥದಲ್ಲಿ ಕ್ರೀಡೆಗಳು ಎನ್ನಬಹುದು; ಅವುಗಳಲ್ಲಿ ಕೆಲವಾದರೂ ಸಂಕೇತಿಗಳಿಗೇ ವಿಶಿಷ್ಟವಾದುವಿವೆ. ಉಳಿದಂತೆ, ಒಗಟು, ಚದುರಂಗದಂಥ ಬೌದ್ಧಿಕ ಕ್ರೀಡೆಗಳು ಇವರನ್ನು ಹೆಚ್ಚಾಗಿ ಆಕರ್ಷಿಸಿವೆ. ಕ್ರೀಡೆಗಳ ಮೂಲ ಕರಡುರೂಪಗಳು ಅವರಲ್ಲಿ - ತಲೆಕೆಳಗಾಗಿ ಮರ ಹತ್ತುವುದು, ಕವಣೆಬೀಸಿ ತೆಂಗಿನಕಾಯಿ ಉದುರಿಸುವುದು, ತುಂಬಿದ ಪ್ರವಾಹವನ್ನು ಈಸುವುದು ಮೊದಲಾದ ರೀತಿಯ ಸಾಹಸಗಳಲ್ಲಿ ಕಾಣಿಸಿಕೊಳ್ಳುತ್ತವೆ. ಇಸ್ಪಿಟ್ ಆಟವು ಮಾತ್ರ, ಅವರ ಪಂಚಲಕ್ಷಣಗಳ ಜತೆಗೆ (ವೇದ, ಸಂಗೀತ, ತೋಟಗಾರಿಕೆ, ಛಲ, ಪರಿಶ್ರಮ),

ತೀವ್ರ ಪರಿಣಾಮದ ಜೀವನಭಾಗವಾಗಿ ವ್ಯಾಪಕವಾಗಿದೆ.[15] ಉಳಿದ ಆಟಗಳ ಪ್ರವೃತ್ತಿಗಳು ಆಯಾ ಪ್ರಾದೇಶಿಕ ರೀತಿಗಳ ಸ್ವೀಕರಣಗಳಿಂದ ಆದುವೇ ಆಗಿವೆ. ಆದರೆ, ಲಿಂಗದಹಳ್ಳಿಯ ಈ ಅಂಗಡಿಹಬ್ಬವು ಗಂಭೀರ ಸಾಂಕೇತಿಕತೆಯ, ಸಂಕೇತಿಗಳಿಗೇ ವಿಶಿಷ್ಟವಾದ, ಅರ್ಥಪೂರ್ಣ ಕ್ರೀಡೆಯೂ ಆಗಿದೆ.

ಧಾರ್ಮಿಕ ಸಂಪ್ರದಾಯವೇ ಸಂಪದಾಶಯದ ಸಂಕೇತವಾಗಿ, ಮನೋರಂಜನೆಯ ಮಾಧ್ಯಮವೂ ಆಗಿ ಬೆಳೆದ ಪ್ರಸಂಗ ಇದು.

5. ಕನೂಹಬ್ಬ: ಹಬ್ಬಗಳಲ್ಲಿ, ದಕ್ಷಿಣದ ಆಚರಣೆಗಳೊಂದಿಗೆ ಗಾಢ ಸಾಮ್ಯವನ್ನು ಉಳಿಸಿಕೊಂಡಿರುವ ಅಪರೂಪದ ಪ್ರಸಂಗಗಳಲ್ಲಿ 'ಕನೂಹಬ್ಬ' ಒಂದು.

ಮಕರಸಂಕ್ರಾಂತಿಯ ಮಾರನೆಯದಿನ ದಕ್ಷಿಣದಲ್ಲಿ 'ಕನೂ ಪೊಂಗಲ್' ಎಂಬ ಹೆಸರಿನಿಂದ ನಡೆಯುವ ಆಚರಣೆಯಲ್ಲಿ, ಸೋದರಿಯು ಸೋದರನ ಮಂಗಳಕ್ಕಾಗಿ ಸಂಕ್ರಾಂತಿಯ ತಂಗಳು ಮತ್ತು ಅರಿಶಿನ ಕಲಸಿ ಅದನ್ನು ಹಣೆಗೆ ಹಚ್ಚಿಕೊಂಡು, ಕಾಗೆಗೆ ಎಡೆಇಟ್ಟು ಮಾಡುವ ಪ್ರಾರ್ಥನೆ ಇದು:

ಕಾಕಾ ಪಿಡಿ ವಚ್ಚೆ | ಕನೂ ಪಿಡಿ ವಚ್ಚೆ |
ಒಡ ಪರಂದವ ಎನ್ರೂ | ಚೀರೋಡು ಇರಕಣು |

(ಕಾಗೆಗೆ ಪಿಂಡ ಹಾಕಿದ್ದೇನೆ. ಒಡಹುಟ್ಟಿದವರು ಎಂದೆಂದಿಗೂ ಸುಖವಾಗಿರಲಿ.)

ಕೇರಳ ಸಂಪರ್ಕದ ಭಾಗದಲ್ಲಿ ಅದರ ಪಾಠ ಹೀಗಿದೆ:

ಕಾಕಾಕ್ಕುಟ್ಟಿಂ ಕಲಚ್ ಪೋನಾಲೂ | ನಮ್ಮ ಕೂಟಂ ಕಲಯಾಮ ಇರಕ್ಕಣು

(ಕಾಗೆ ತಿಂದು ಚದುರಿ ಹಾರಿದರೂ, ನಮ್ಮ ಬಂಧುಗಳು ಒಗ್ಗಟ್ಟಾಗಿರಬೇಕು.)

ಕರ್ನಾಟಕದ ಅದರ (ಸಂಕ್ರಮಣದಕರಿ) ವಿವರ ಹೀಗಿದೆ:

ಸಂಕ್ರಾಂತಿಯ ಮರುದಿನ ಸ್ನಾನಮಾಡಿ, ಗಂಗಾಪೂಜೆ ನಡೆಸಿ ಅಶ್ವತ್ಥಪೂಜೆ ಮಾಡಿದಮೇಲೆ ತೆಂಗಿನಕಾಯಿ, ಬಾಳೆಯಹಣ್ಣು, ಅರಿಶಿನ, ಉಪ್ಪು, ಅಕ್ಕಿ, ಬಿಚ್ಚೋಲೆ, ಕರಿಮಣಿಯನ್ನು ಮರದ ಅಡಿ ಇಟ್ಟು ನಮಸ್ಕರಿಸುತ್ತಾರೆ (ಆಮೇಲೆ ಅದನ್ನು ಅಗಸಗಿತ್ತಿ ಒಯ್ಯುತ್ತಾಳೆ). ಕಾಗೆಗೆ ಊಡುವ ಸಂಬಂಧದ ಮುಂದಿನ ಆಚರಣೆಯನ್ನು ಮುಟ್ಟುನಿಂತವರು ಮಾತ್ರ ಮಾಡುತ್ತಾರೆ. ಇದಕ್ಕೆ, ಶ್ರಾದ್ಧಸ್ವರೂಪದ ಅದು ಮಡಿಯ ಹಿರಿಯರಿಂದ ಆಗಬೇಕೆಂಬ ಭಾವನೆಯೇ ಕಾರಣವಾಗಿ ತೋರುತ್ತದೆ. ಅವರು ಉಪ್ಪು ಮತ್ತು ಅಕ್ಕಿಯನ್ನು ಕಾಗೆಯ ಬಾಯಿಗೆಂದು ಮೇಲೆ ಎರಚುತ್ತಾರೆ.

"ಕರ್ ಕುಳ್‌ಚೆ | ಕರ್ ಕುಳ್‌ಚೆ | ಕಾಕಾ ವಾಯ್‌ಕ್ | ಅರಶಿ ಅಟ್ಟೀನೆ |
ಚಾವಾದ್ ಪಶ್ಯಾಳಕ್ಕ್ | ತಾಯಾರಾ ಇರಣೆ|"

(ಸಂಕ್ರಾಂತಿ ಕರಿಯ ಸ್ನಾನ ಮಾಡಿದೆ. ಕಾಗೆಯ ಬಾಯಿಗೆ ಅಕ್ಕಿ ಹಾಕಿದೆ. ಚಿರಂಜೀವಿಗಳಾದ ಮಕ್ಕಳಿಗೆ ತಾಯಾಗಿ ಇರುತ್ತೇನೆ) ಎಂಬುದು ಆಗ ಮಾಡುವ ಹಾರೈಕೆ. ಇದಾದನಂತರ ಪ್ರಸಾದವನ್ನು ತಿಂದು ತಾಂಬೂಲವನ್ನು ಹಾಕಿಕೊಂಡು ಮನೆಗೆ ಬರುತ್ತಾರೆ. ಅಂದು ಅವರಿಗೆ ಕೇವಲ ಫಲಾಹಾರ. ಕರ್ನಾಟಕದಲ್ಲಿ ಕೈಬಿಟ್ಟುಹೋದ, ಹಬ್ಬದ ವಿವರಗಳಲ್ಲಿ ಇದೂ ಒಂದಾಗಿದೆ.


ದಕ್ಷಿಣ ಮತ್ತು ಕರ್ನಾಟಕದ ಆಚರಣೆಗಳ ಮೂಲಭೂತ ರೀತಿಯು ಸಮಾನವಾಗಿ ಉಳಿದುಕೊಂಡಿರುವುದು ಹೀಗೆ.[16] ಆಗಿನ ಆಶಯವೂ

15 ನೋಡಿ: ಸಕ್ಕರೆಯ ಸೀಮೆ: ಮಂಡ್ಯಜಿಲ್ಲೆಯ ಪ್ರವಾಸಕಥನ, ಅನಂತರಾಮು ಕೆ., ೧೯೮೩, ಪು.೨೧.

16 ಸಂಕ್ರಾಂತಿಯ 'ಕರಕುಳಿಯುವುದರ' ಹೆಚ್ಚಿನ ವಿವರಕ್ಕೆ ನೋಡಿ: ಸ್ಮರಣಸಂಚಿಕೆ, ಸಂಕೇತಿಗಳ ವಿಶಿಷ್ಟ ಹಬ್ಬ ಹರಿದಿನಗಳು, ಡಾ.ಆರ್.ಎನ್.ವಿಜಯಲಕ್ಷ್ಮಿ, ಬೆಟ್ಟದಪುರ ಸಂಕೇತಿ ಸಂಘ, ೧೯೮೮, ಪು.೨೭-೨೮.

ಮೂಲಭೂತವಾಗಿ ಸಮಾನವಾದುದು. ತವರಿನ ಶ್ರೇಯಸ್ಸಿಗಾಗಿ ಆಚರಿಸುವ ಮತ್ತೊಂದು ಗಾಢ ನಿದರ್ಶನವೂ ಇದಾಗಿದೆ. ಇದು ಶ್ರಾದ್ಧಸ್ವರೂಪದ ಆಚರಣೆಯು ಹಬ್ಬದ ಭಾಗವಾಗಿ ಬರುವ ಅಪರೂಪದ ಸಂದರ್ಭವೂ ಹೌದು.

ಕರ್ನಾಟಕದ ಸಂಕೇತಿಗಳಿಗೇ ವಿಶಿಷ್ಟವಾದ ಕೆಲವು ಸಂಗತಿಗಳೂ ಇವೆ. ದೀಪಾವಳಿ ಕಳೆದು ಹದಿನೈದು ದಿನಕ್ಕೆ ಬರುವ ಹುಣ್ಣಿಮೆಯಂದು ಮಕ್ಕಳ ಹಬ್ಬ (ಕಿರುದೀವಳಿಗೆ ಮಾಡುವುದು); ಇತರ ಬ್ರಾಹ್ಮಣರು ಶ್ರಾವಣಮಾಸದಲ್ಲಿ ಆಚರಿಸಿದರೆ ಸಂಕೇತಿಗಳು ಮಾರ್ಗಶಿರ ಶುದ್ಧ ಪಂಚಮಿಯಂದು 'ಕೂಟ್‌ಕರಿ ಪಂಚಮಿ' ಆಚರಿಸುವುದು; ಆಷಾಢ ಶುಕ್ರವಾರದ ಎಣಿಕೆಯನ್ನು ಸಂಕ್ರಮಣದನಂತರ ಎಣಿಸುವುದು ಇತ್ಯಾದಿ.



128 ದೀಪಾವಳಿ: ಗೋವರ್ಧನ ಪೂಜೆ (ಬಲಿಪಾಡ್ಯಮಿಯ ಮುಂಜಾನೆ)

ಆ. ಹಬ್ಬಗಳ ಸ್ವರೂಪ:

ಈಗಾಗಲೇ ಪ್ರಸ್ತಾಪಿಸಿರುವಂತೆ, ಸಂಕೇತಿಗಳ ಹಬ್ಬಗಳ ಆಚರಣೆಯ ವಿವರಗಳಲ್ಲಿ ಬಹುಪಾಲು ಸಾರ್ವತ್ರಿಕ ಸ್ವರೂಪದವು (ಚಿತ್ರ 128-133). ಹಬ್ಬಗಳ ಆಚರಣೆಯ ವಿವರವಾದ ಪರಿಚಯ ಮಾಡಿಕೊಡುವುದು ಇಲ್ಲಿನ ಉದ್ದೇಶವಲ್ಲ. ಬದಲಿಗೆ, ಈ ಸಮುದಾಯದ ಮನೋಭಾವ, ಧೋರಣೆ, ಪ್ರವೃತ್ತಿಗಳನ್ನು ಪ್ರತಿಬಿಂಬಿಸುವ ಕೆಲವು ಆಚರಣೆಗಳ ವಿವರಗಳನ್ನು ಮಾತ್ರ, ಹಬ್ಬದ ಸ್ವರೂಪದ ಭಾಗವಾಗಿ ಇಲ್ಲಿ ಕೊಟ್ಟಿದೆ.

1. ಸೋದರಿಯರ ವಿಶಿಷ್ಟ ಸ್ಥಾನ: ಸಂಸ್ಕಾರಗಳ ಕೆಲವು ಆಚರಣೆಗಳಲ್ಲಿ ಇರುವಂತೆಯೇ ಹಬ್ಬಗಳ ಕೆಲವು ಆಚರಣೆಗಳಲ್ಲಿಯೂ, ಸೋದರಿಯರ ವಿಶಿಷ್ಟ ಪಾತ್ರವಿರುವುದು ವಾರಾತುರುವೆ, ಕನೂಹಬ್ಬದ ವಿವರಗಳಲ್ಲಿ ಪ್ರಖರವಾಗಿದೆ. ಅದರ ವೈವಿಧ್ಯಪೂರ್ಣ ಸನ್ನಿವೇಶಗಳು ಸಂಕೇತಿಗಳಲ್ಲಿ ಸೋದರಿಯ ಪಾತ್ರದ ಮಹತ್ತ್ವವನ್ನು ಹೆಚ್ಚಿಸುತ್ತವೆ. ಅಂಥ ಕೆಲವು ಸನ್ನಿವೇಶಗಳನ್ನು ಇಲ್ಲಿ ಅವಲೋಕಿಸಿದೆ:

0.1 ಸೋದರಬಿದಿಗೆ: ದೀಪಾವಳಿಯ ಸಂದರ್ಭದಲ್ಲಿ ಕಾರ್ತಿಕಮಾಸದಲ್ಲಿ ನಡೆಯುವ 'ಸೋದರಬಿದಿಗೆ' ಹಳೆಯ ಕರ್ನಾಟಕದ ಇತರ ಬ್ರಾಹ್ಮಣ ಸಮುದಾಯಗಳಲ್ಲಿ ರೂಢಿಯಲ್ಲಿಲ್ಲದ ಮುಖ್ಯವಾದ ಹಬ್ಬ. ಸೋದರನಿಗೆ ಅಭ್ಯಂಗಸ್ನಾನ, ಹಬ್ಬದೂಟ; ಉಡುಗೊರೆಗಳ ಪರಸ್ಪರ ವಿನಿಮಯ ಈ ಹಬ್ಬದ ಅಂಗಗಳು. ಎಷ್ಟೇದೂರದಲ್ಲಿದ್ದರೂ ಸೋದರಿಯ ಮನೆಗೆ ಹೋಗಿ ಮಂಗಳದ್ರವ್ಯಗಳನ್ನು ಕೊಟ್ಟು ಅವಳ ಮನೆಯಲ್ಲಿ ಊಟಮಾಡುವುದು ನಿಯತವಾಗಿ ನಡೆಯುವುದರಲ್ಲಿ ಸಂಕೇತಿಗಳು ಈ ಹಬ್ಬಕ್ಕೆ ಕೊಟ್ಟ ಪ್ರಾಶಸ್ತ್ಯವು ಗೊತ್ತಾಗುತ್ತದೆ. ಮಧ್ಯದೇಶದಷ್ಟೇ ಗಾಢವಾಗಿ ಈ ಆಚರಣೆ ಮತ್ತೂರಿನಲ್ಲಿ ಇಲ್ಲದುದಕ್ಕೆ, ಒಂದೇ ಹಳ್ಳಿಯಲ್ಲಿ ಪರಸ್ಪರ ಬಂಧುತ್ವದಿಂದ ಹೆಣೆದುಕೊಂಡ ಕೆಲವು ವಂಶಗಳಷ್ಟೇ ಇರುವುದರಿಂದ ಆದ ಅತಿಬಳಕೆಯೇ



129 ದೀಪಾವಳಿ : ಗೋವುಗಳಿಗೆ ಅಲಂಕಾರ, ಪೂಜೆ



130 ದೂರದ ಊರುಗಳಲ್ಲಿ ಚದುರಿರುವ ಮನೆಮಂದಿಯೆಲ್ಲಾ ಗಣಪತಿ ಹಬ್ಬಕ್ಕೆ ಹಿರಿಯರಿರುವ ಕಡೆ ಸೇರುತ್ತಾರೆ

ಕಾರಣವಾಗಿದೆ. ದೂರದೂರಕ್ಕೆ ಚದುರಿದ ನೆಲೆಗಳ ಸ್ವರೂಪದಿಂದಾಗಿ, ಅದು ಮಧ್ಯದೇಶ ಮತ್ತು ಹಾಸನಸೀಮೆಯಲ್ಲಿ ಉತ್ಸಾಹ, ಆತ್ಮೀಯತೆ, ವೈಭವಗಳನ್ನು ಮೈಗೂಡಿಸಿಕೊಂಡು ಬೆಳೆದಿದೆ. ದಕ್ಷಿಣದ ಸಂಪ್ರದಾಯದ ವಿವರವು ಭಿನ್ನವಾಗಿದ್ದರೂ (ಆನೆದೀಪ), ಅಂದೇ ನಡೆಯುವ ಸೋದರಬಿದಿಗೆಯ ಮೂಲರೂಪವು ಒಂದೇ ಆಗಿದೆ (ದಕ್ಷಿಣದ ಕೆಲವೆಡೆ ಮಕರಸಂಕ್ರಾಂತಿಗೂ ಸೋದರಿಯರಿಗೆ ಮಂಗಳದ್ರವ್ಯ ಉಂಟು).

ಆದರೆ, ಮಧ್ಯದೇಶದಷ್ಟು ಗಾಢವಾಗಿ ಅಲ್ಲದಿದ್ದರೂ ಮಂಗಳದ್ರವ್ಯವನ್ನು ಕೊಟ್ಟು ಶುಭವನ್ನು ಹರಸುವ ಮೂಲಆಶಯವನ್ನುಳ್ಳ ಈ ಆಚರಣೆಯು ಮತ್ತೂರು, ಲಿಂಗದಹಳ್ಳಿಯಲ್ಲಿ ಬೇರೆ ಸಂದರ್ಭದಲ್ಲಿದೆ. ಅಲ್ಲಿ, ಯುಗಾದಿಹಬ್ಬದಲ್ಲಿ ಮನೆಯ ಹೆಣ್ಣುಮಕ್ಕಳನ್ನು ಕರೆದು ಔತಣ ಮಾಡುತ್ತಾರೆ; ಮರುದಿನ, ಸೋದರಿಯು ಸೋದರನನ್ನು ಕರೆದು ಔತಣ ಮಾಡುತ್ತಾಳೆ. ಕೌಶಿಕಪಂಚಗ್ರಾಮದಲ್ಲಿ ಈ ಆಚರಣೆಯೂ ರೂಢಿಯಲ್ಲಿದೆ.



131 ಮಧ್ಯದೇಶ: ಗೌರಿಪೂಜೆ ಸಾಮೂಹಿಕವಾಗಿ ನಡೆಯುತ್ತದೆ. ಅನಂತರ ಗೌರಮ್ಮನ ಮೆರವಣಿಗೆ: ಮನೆಯ ಬಾಗಿಲಲ್ಲಿ ಮುತ್ತೈದೆಯರಿಂದ 'ತೊಟ್ಟಿಲು ಗೌರಮ್ಮ'ನಿಗೆ ಪೂಜೆ

0.2 ಮಂಗಳದ್ರವ್ಯ: ಕರ್ಕಾಟಕ ಹಾಗೂ ಮಕರಸಂಕ್ರಾಂತಿಗಳು, ರಥಸಪ್ತಮಿ, ಅಕ್ಷತದಿಗೆ, ಗೌರಿಹಬ್ಬಗಳ ಹಿಂದಿನ ದಿನವೇ ಮನೆಯ ಹೆಣ್ಣುಮಕ್ಕಳಿಗೆ ಮೊರಬಾಗಿನಗಳನ್ನು ತವರಿನವರು ಕೊಡುವುದು ಹಾಗೂ ಹೆಣ್ಣುಮಕ್ಕಳು ಹಬ್ಬದದಿನ ಅವನ್ನು ಸುಮಂಗಲೆಯರಿಗೆ ದತ್ತಮಾಡುವುದು, ಮತ್ತೂರಿನಲ್ಲಿ ಮಾತ್ರ ರೂಢಿಯಲ್ಲಿರುವ ಸಂಪ್ರದಾಯವಾಗಿದೆ.



132 ಲಿಂಗದ ಹಳ್ಳಿ: ಅನಂತಪದ್ಮನಾಭ ವ್ರತ

ಮಂಗಳಾಶಯದ ಇದೇ ಆಚರಣೆಯು ಇತರೆಡೆಗಳಲ್ಲಿ ಭಿನ್ನರೂಪದಲ್ಲಿ ವ್ಯಕ್ತವಾಗಿದೆ. ಹಾಸನಸೀಮೆಯಲ್ಲಿ ಮಕರಸಂಕ್ರಾಂತಿ ಮತ್ತು ಗೌರಿಹಬ್ಬದ ಸಂದರ್ಭದಲ್ಲಿ ಹೆಣ್ಣುಮಕ್ಕಳಿಗೆ ಮಂಗಳದ್ರವ್ಯಗಳನ್ನು ಕೊಡುವುದು, ದೂರದ ನೆಲೆಗಳಿಗೆ ಚದುರಿದಂತೆ ಹಣದ ರೂಪದಲ್ಲಿ ಪ್ರಾತಿನಿಧಿಕವಾಗಿ ಕಳಿಸುವ ಪದ್ಧತಿಯಾಗಿ ರೂಪುಗೊಂಡಿದೆ. ದಕ್ಷಿಣದಲ್ಲಿ ಇಂದಿಗೂ



133 ಲಿಂಗದ ಹಳ್ಳಿ : ಹಬ್ಬ : ಮಂಗಳಾರತಿಗೆ ಸೇರಿದ ಭಕ್ತರು

ರೂಢಿಯಲ್ಲಿರುವ ಮಕರ ಸಂಕ್ರಾಂತಿಯವೇಳೆಯ ಆಚರಣೆಯನ್ನು ಕೈಬಿಟ್ಟು, ಹೊಸದಾಗಿ ಸ್ವೀಕರಿಸಿದ ಗೌರಿಹಬ್ಬದ ಸಂದರ್ಭಕ್ಕೆ ಮಾತ್ರ ಹೊಂದಿಸಿಕೊಂಡಿರುವ ಮಧ್ಯದೇಶದ ಕ್ರಮವು, ಸಂಸ್ಕೃತಿಯ ಮೂಲಾಂಶಗಳೂ ಬದಲುವ ನಿದರ್ಶನವಾಗಿದೆ. 'ಗೌರಿ'ಯು ಸೌಮಾಂಗಲ್ಯದ ಪ್ರಾಧಾನ್ಯವನ್ನು ಹೊಂದಿದ ಆಚರಣೆಯಾಗಿರುವುದು ಈ ಬದಲಾವಣೆಯ ಹಿಂದಿನ ಪ್ರಬಲ ಪ್ರೇರಣೆಯಾಗಿದೆ. ಆದರೆ, ಸೋದರ-ಸೋದರಿಯರ ವಾತ್ಸಲ್ಯ, ಪರಸ್ಪರ ಶುಭಾಕಾಂಕ್ಷೆಯ ಮೂಲಧೋರಣೆಯು ಎಲ್ಲೆಡೆಯೂ ಸಮಾನವಾಗಿ ಉಳಿದು ಅದು ಪ್ರಕಟಗೊಳ್ಳುವ ಸಂದರ್ಭಗಳು ಮಾತ್ರ ಸನ್ನಿವೇಶವನ್ನವಲಂಬಿಸಿ ವೈವಿಧ್ಯಪೂರ್ಣವಾಗಿರುವುದು ಮುಖ್ಯವಾಗುತ್ತದೆ.

'ಮನೆಯ ಹೆಣ್ಣುಮಕ್ಕಳಿಗೆ' ಹಬ್ಬಗಳಲ್ಲಿಯೂ ಇರುವ ಮುಖ್ಯಸ್ಥಾನ ಮತ್ತು ಪ್ರೀತಿಪೂರ್ಣ ನಡತೆ, ಶುಭ ಹಾರೈಕೆಯ ಆಚರಣೆಗಳು ಮಹತ್ತ್ವದ ಅಂಶಗಳು. ಸಂಕೇತಿ ಕುಟುಂಬವೊಂದು ಹೆಣ್ಣನ್ನು ಅನಿವಾರ್ಯ ಮತ್ತು ಅತ್ಯಗತ್ಯ ಭಾಗವಾಗಿ ಪರಿಗಣಿಸುತ್ತದೆಂಬುದೂ ಇದರಿಂದ ಸ್ಪಷ್ಟವಾಗುತ್ತದೆ.

2. ಅಳಿಯನಿಗೆ ಆದರಣೆ: ಹೊಸದಾಗಿ ಸಂಬಂಧವಾದ ಅಳಿಯನನ್ನು 'ಮೊದಲವರ್ಷ' ಹಬ್ಬಗಳಲ್ಲಿ ಆದರಿಸುವುದು ಎಲ್ಲ ಬ್ರಾಹ್ಮಣರ ಸಂಪ್ರದಾಯ. ಈ ಸಂಬಂಧದ ಸಂಕೇತಿಗಳ ರೀತಿ ಇದು: ದಕ್ಷಿಣ, ಹಾಸನಸೀಮೆ, ಬೆಟ್ಟದಪುರದಲ್ಲಿ ಮೊದಲವರ್ಷದ ದೀಪಾವಳಿಗೆ ಅಳಿಯನನ್ನು ಹಬ್ಬಕ್ಕೆ ಕರೆಯುವ ಕ್ರಮವಿದೆ. ಪಾಡ್ಯದಂದು ನಡೆಯುವ ಫಲಪೂಜೆ ಹಾಗೂ ಬಳುವಳಿ ಅದರ ಭಾಗ. ಮತ್ತೂರು, ಲಿಂಗದಹಳ್ಳಿ ಮತ್ತು ಮಧ್ಯದೇಶದಲ್ಲಿ ವಿಶೇಷವಾಗಿ ಕೃಷ್ಣಾಷ್ಟಮಿಯಲ್ಲಿ ಅಳಿಯನಿಗೆ ವಿಶೇಷ ಆರತಿ, ಉಪಚಾರಗಳು ನಡೆಯುತ್ತವೆ. ಅಳಿಯನಿಗೆ ಅಭ್ಯಂಗಸ್ನಾನ; ವಿವಿಧ ಭಕ್ಷ್ಯಗಳಿಂದ ಕೂಡಿದ ರಾತ್ರಿ ಫಲಾಹಾರ; ಆರತಿ; ಮಾರನೆಯ ದಿನ ಪಾರಣೆ - ಹಬ್ಬದೂಟ, ಉಡುಗೊರೆ, ಹೆಡಿಗೆಗಳಲ್ಲಿ ಕರಿದ ತಿಂಡಿಗಳ ಗೌರವಪೂರ್ಣ ಕೊಡುಗೆ; ಶ್ರೀಕೃಷ್ಣ ಮತ್ತು ಗಣಪತಿಯ ಬೆಳ್ಳಿವಿಗ್ರಹಗಳ ಕೊಡುಗೆ ಅದರ ಭಾಗಗಳಾಗಿವೆ. ಗೌರವಿಸಿಕೊಟ್ಟ ಕರಿದ ತಿಂಡಿಗಳ ಬುಟ್ಟಿಗಳನ್ನು ಅಳಿಯನ ಭಾವಮೈದುನರು ಆತನ ಮನೆಗೆ ತಲುಪಿಸುವ ಪ್ರೀತಿ, ಗೌರವಗಳನ್ನೂ ತೋರಿಸುತ್ತಾರೆ. ಪ್ರಥಮಏಕಾದಶಿಯಲ್ಲಿ ನಡೆಯುವ ಆಚರಣೆಯು ಕರ್ನಾಟಕದಲ್ಲಿ ಈ ಸಮುದಾಯದ ಮತ್ತೊಂದು ವೈಶಿಷ್ಟ್ಯವಾಗಿದೆ. ಅಂದು ಏಕಾದಶಿಯಾದರೂ ಅಳಿಯನಿಗೆ ಕಡುಬಿನೂಟದ ವಿಶೇಷ ಭೋಜನ ಮಾಡಿಸುತ್ತಾರೆ.

ಐದು ಅಥವ ಒಂಬತ್ತು ಬಗೆಯ ಉಂಡೆಗಳನ್ನು ಐದು ಅಥವಾ ಒಂಬತ್ತು ಸಂಖ್ಯೆಯಲ್ಲಿ ಇಟ್ಟು ನೂರು ಚಕ್ಕುಲಿ, ಕೋಡುಬಳೆ ಇಟ್ಟು ಅಳಿಯನಿಗೆ ಒಪ್ಪಿಸುತ್ತಾರೆ. ಆರತಿ, ಉಡುಗೊರೆ ಇರುತ್ತವೆ. ಬಂದವರಿಗೆ ಬಾಗಿನ ಕೊಡುವುದಲ್ಲದೆ, ಪಾರಣೆಗೆ ಬಂಧುಗಳಿಗೆಲ್ಲ ಭೋಜನ ನಡೆದು ಹಬ್ಬದ ಸಡಗರ, ವೈಭವ ಹೆಚ್ಚುತ್ತದೆ. ಗಣಪತಿ ಹಬ್ಬಕ್ಕಾಗಿ ಅಳಿಯನಿಗೆ ಬೆಳ್ಳಿಗಣಪತಿಯ ವಿಗ್ರಹವನ್ನು ಕೊಡುವ ಪದ್ಧತಿಯು ಕರ್ನಾಟಕದ ಸಂಕೇತಿಗಳಲ್ಲಿದ್ದರೂ ಆ ಹಬ್ಬಕ್ಕೆ ಅಳಿಯನು ಮಾವನ ಮನೆಗೆ ಹೋಗುವ ಸಂಪ್ರದಾಯವಿಲ್ಲ. 'ದಕ್ಷಿಣ'ದಲ್ಲಿ 'ಆಷಾಢ'ದಲ್ಲಿ ಅಳಿಯನಿಗೆ ವಿಶೇಷ ಆದರೋಪಚಾರಗಳು ನಡೆಯುವುದನ್ನು ಇಲ್ಲಿಯೇ ಉಲ್ಲೇಖಿಸಬಹುದಾಗಿದೆ.

ಈ ಎಲ್ಲ ಪ್ರಾದೇಶಿಕ ವೈವಿಧ್ಯದ ಮೂಲದಲ್ಲಿರುವುದು ಅಳಿಯನಿಗೆ ಸಲ್ಲುವ ಗೌರವ, ಆದರ, ಪ್ರೀತಿಯೇ ಆಗಿದೆ. ಹೊಸ ಸಂಬಂಧವಾದ ಸಂದರ್ಭವನ್ನು ಹಬ್ಬಗಳ ಸಂತೋಷಸಂವರ್ಧನೆಗೆ ಬಳಸಿಕೊಳ್ಳುವುದು; ಆ ಮೂಲಕವೇ ಹೊಸಸಂಬಂಧದ ಮುಜುಗರಗಳನ್ನು

ದೂರಮಾಡಿ ಆತ್ಮೀಕರಿಸಿಕೊಳ್ಳುವುದು; ನವದಂಪತಿಗಳ ಅನ್ಯೋನ್ಯತೆಯು ಗಾಢವಾಗುವಂತೆ ಮಾಡುವುದು - ಹೀಗೆ ಬಹುಮುಖ ಉದ್ದೇಶಗಳ ಈಡೇರಿಕೆ ಅಳಿಯನ ಆದರಣೆಯ ಪದ್ಧತಿಯಲ್ಲಿ ಕಂಡುಬರುತ್ತದೆ.

3. ನದೀಸ್ನಾನ ಮತ್ತು ಧಾರ್ಮಿಕ ಆಚರಣೆಗಳು: ನಿತ್ಯ ಪುಣ್ಯಸ್ನಾನವನ್ನೂ ಕ್ಷೇತ್ರಸ್ನಾನವನ್ನೂ ಪರ್ವಸ್ನಾನವನ್ನೂ ಹತ್ತಾರುಮೈಲು ನಡೆದು ಸಾಧಿಸುವುದು ಎಲ್ಲೆಡೆಯ ಗಾಢ ನಿಯತ ಆಚರಣೆ (ಚಿತ್ರ 134). ಆದರೆ ಪರಿವರ್ತಿತ ಆಧುನಿಕ ಸನ್ನಿವೇಶದಲ್ಲಿಯೂ ಮತ್ತೂರಿನಲ್ಲಿ ಅದು ಉಳಿದು ವಿಶೇಷವಾಗಿ ಬೆಳೆದಿರುವುದಕ್ಕೆ, ನದಿಯ ಸಾಮೀಪ್ಯವೂ ಕಾರಣವಾಗಿದೆ; ಸಂಕೇತಂ ಲಕ್ಷಣವು ಉಳಿದಿರುವುದೂ ಕಾರಣವಾಗಿದೆ. ಇದಕ್ಕೆ ಸಂಬಂಧಿಸಿದಂತೆ ಕೆಲವು ಅಂಶಗಳನ್ನು ಇಲ್ಲಿ ನಿರೂಪಿಸಲಾಗಿದೆ:



134 ತೀರ್ಥಸ್ನಾನ: ರಾಮನಾಥಪುರ

0.1 ದಕ್ಷಿಣಾಯನಪುಣ್ಯಕಾಲ ಮೊದಲುಗೊಂಡು ಕರ್ಕಾಟಕದ ಕೊನೆಯವರೆಗೂ (ಸಿಂಹಮಾಸ ಹುಟ್ಟುವವರೆಗೂ) ಒಂದುತಿಂಗಳು ನಿತ್ಯವೂ - ಕುಡಿಬಾಳೆ ಎಲೆಯಲ್ಲಿ ಮೊಸರನ್ನ ಮತ್ತು ಪಾಯಸವಿಟ್ಟು ಗಂಗಾಪೂಜೆಮಾಡಿ ಅರ್ಪಿಸುವುದು ("ಎಡೆ ಉಡರದ್");

0.2 ಆ ದಿನಗಳಲ್ಲಿ ದೊನ್ನೆಯಲ್ಲಿ ಹತ್ತಿಸಿದ ಐದು-ಹತ್ತು ದೀಪಗಳನ್ನು ನಿತ್ಯವೂ ನದಿಯಲ್ಲಿ ತೇಲಿಬಿಡುವುದು;

0.3 ಯಾವುದಾದರೊಂದು ಶುಕ್ರವಾರ ಮುತ್ತೈದೆಯರು ಸೇರಿ ಗಂಗಾ ಸಹಸ್ರನಾಮಪೂಜೆ ಮಾಡಿ, ಮೊರಬಾಗಿನ ಬಿಡುವುದು (ಒಂದು ಅಂಬಿಗನಿಗೂ ಮತ್ತೊಂದು ಪುರೋಹಿತನಿಗೂ ಸೇರುತ್ತವೆ);
ಇವೇ ಮೊದಲಾದವು ನದೀಸ್ನಾನಗಳಲ್ಲಿ ಸೇರ್ಪಡೆ ಆದ ಕಾರ್ಯಕ್ರಮಗಳಾಗಿವೆ.

0.4 ಮಂಟಪದೀಪೋತ್ಸವ: ಪವಿತ್ರ ನದೀಸ್ನಾನಕ್ಕೆ ಸಂಬಂಧಿಸಿದಂತೆ ಮತ್ತೂರಿನಲ್ಲಿ ವಿಶೇಷವಾಗಿ ಬೆಳೆದಿರುವ ಒಂದು ಆಚರಣೆ 'ಮಂಟಪದೀಪೋತ್ಸವ'ದ್ದು. ಅದರ ವಿವರಗಳನ್ನಿಲ್ಲಿ ನೋಡಬಹುದು:
ಒಂದು ಶುಭದಿನ (ಮಂಗಳವಾರ ಅಥವಾ ಶುಕ್ರವಾರ) ಬಾಳೆಯಕಂದಿನ ಮಂಟಪಕಟ್ಟಿ ಅದರ ಸುತ್ತ ಪಂಜುಹತ್ತಿಸಿ ಸಿಕ್ಕಿಸಿ ಅಲಂಕರಿಸುತ್ತಾರೆ. ದೇವಸ್ಥಾನಗಳಲ್ಲಿ ಪೂಜೆಗಳು ನಡೆದನಂತರ ನದಿಯಲ್ಲಿ ಗಂಗಾಪೂಜೆ ಮಾಡುತ್ತಾರೆ. ಅನಂತರ ಮಂಟಪವನ್ನು ನಡುಪ್ರವಾಹಕ್ಕೆ ಸೇರಿಸಿ ಬರುತ್ತಾರೆ. 'ಗಂಗೆಯು ರಕ್ಷಿಸಲಿ' ಎಂದು ಅವಳನ್ನು ಸಂತೋಷಪಡಿಸುವುದಕ್ಕಾಗಿ ಇರುವ ಈ ಆಚರಣೆಯು ನದಿಯ ದಡದಲ್ಲಿಯೇ ಇರುವವರ ವಿಶೇಷ ಕಲ್ಪನೆಯಾಗಿರುವುದು ಸಹಜವಾಗಿದೆ (ಪ್ರವಾಹದಲ್ಲಿ ಕೊಚ್ಚಿಹೋದ ಊರನ್ನು ಮತ್ತೆ ಕಟ್ಟಿದುದರಿಂದ ಮತ್ತೆ ಊರು → ಮತ್ತೂರು ಆಗಿದೆ ಎಂಬ ಸ್ಥಳನಾಮ ವಿವರಣೆ ಇದೆ). ನದಿಗೆ ಕೃತಜ್ಞತೆ, ರಕ್ಷಣೆಯ ಬಯಕೆ, ಸಂಭ್ರಮ, ಸಾಹಸ, ಪಾರಮಾರ್ಥಿಕತೆ ಎಲ್ಲವೂ ಈ ಆಚರಣೆಗಳಲ್ಲಿ ಕಂಡುಬರುತ್ತವೆ.

0.5 ಗಂಗಾಹಬ್ಬ: ಸಂಕ್ರಾಂತಿಯ ಗಂಗಾಪೂಜೆ ಮಾಡಲು ಮತ್ತು ಬಲೀಂದ್ರನ ಕಲಶಕ್ಕಾಗಿ ಗಂಗೆಯನ್ನು ತರಲು ಊರಿನ ಸುಮಂಗಲೆಯರೆಲ್ಲಾ ಮಂಗಳವಾದ್ಯದೊಂದಿಗೆ ಮೆರವಣಿಗೆಯಲ್ಲಿ ಕೆರೆಗೆ ಹೋಗಿ ಸ್ನಾನ, ಪೂಜೆಗಳನಂತರ ಮೆರವಣಿಗೆಯಲ್ಲಿಯೇ ಹಿಂದಿರುಗುವ ಆಚರಣೆಯು ಕೌಶಿಕವು ಬೆಳೆಸಿಕೊಂಡ ವಿಶೇಷ. ಪುಣ್ಯಸ್ನಾನ ಹಾಗೂ ಗಂಗಾಪೂಜೆಗೆ ಇರುವ ಮಹತ್ತ್ವವನ್ನು ಇದು ತಿಳಿಸುತ್ತದೆ. ಆದರೆ, ಹಾಸನಸೀಮೆಯ (ತುಲಾಸಂಕ್ರಮಣದ) 'ಗಂಗಾಪೂಜೆಹಬ್ಬ', ಲಿಂಗದಹಳ್ಳಿಯ (ದಕ್ಷಿಣಾಯನ ಪುಣ್ಯಕಾಲದ) 'ಭಾಗೀರಥೀಹಬ್ಬ', ಬೆಟ್ಟದಪುರದ (ಧನುಸ್ಸಂಕ್ರಮಣದ) 'ಗಂಗೆಹಬ್ಬ'ಗಳ ವೈಶಿಷ್ಟ್ಯಗಳು ಮರೆಯಾದರೂ, ಮತ್ತೂರಿನಲ್ಲಿ ಮಾತ್ರ ಈ ಸಂಬಂಧದ ಆಚರಣೆಗಳು ಜೀವಂತವಾಗಿರುವುದು, ಸನ್ನಿವೇಶಾನುಕೂಲಗಳನ್ನವಲಂಬಿಸಿ ಸಾಂಸ್ಕೃತಿಕ ಅಭಿವ್ಯಕ್ತಿಯಲ್ಲಾಗುವ ಏರುಪೇರುಗಳ ಒಂದು ಸಂದರ್ಭವಾಗಿದೆ.

ತೀರ್ಥಸ್ನಾನದ ಸರಳಆಚರಣೆಯೊಂದು ಗಾಢ ಕೃತಜ್ಞತೆಯಿಂದಾಗಿ ಸಂಕೀರ್ಣವಾಗಿಯೂ ಸಂಭ್ರಮವಾಗಿಯೂ ವಿಕಾಸವಾಗಿರುವ ಪ್ರವೃತ್ತಿ ಇಲ್ಲಿ ವ್ಯಕ್ತವಾಗುತ್ತದೆ.

4. ಧಾರ್ಮಿಕ ಆಚರಣೆಗಳು - ಅವುಗಳ ಸಂಕೇತಗಳು: ಸಂಸ್ಕಾರಗಳಲ್ಲಿ ಆಗುವಂತೆಯೇ ಅನೇಕ ಸಾಂಕೇತಿಕ ಆಚರಣೆಗಳು ಹಬ್ಬಗಳನ್ನೂ ಅರ್ಥಪೂರ್ಣಗೊಳಿಸುತ್ತವೆ. ಯುಗಾದಿಯ ಬೇವು-ಬೆಲ್ಲ, ವರ್ಷ-ತೊಡಕು; ದೀಪಾವಳಿಯ ದೀಪಗಳು ಅಂಥ ಪ್ರಖ್ಯಾತ ಸಾರ್ಥಕ ಸಂಕೇತಗಳು. ಹಬ್ಬಗಳ ವಿವರಗಳಲ್ಲಿಯೂ ಅಂಥ ಸಂಕೇತಗಳು ತುಂಬಿವೆ. ಕೆಲವನ್ನು ಇಲ್ಲಿ ನೋಡಬಹುದು:

0.1 ಯುಗಾದಿಯಲ್ಲಿ ನಡೆಯುವ ಪಂಚಾಂಗದ ಪೂಜೆಯು ನವಗ್ರಹಪೂಜೆಯನ್ನು ಪ್ರತಿನಿಧಿಸುತ್ತದೆ. ಕೆಲವೆಡೆಗಳಲ್ಲಿ ಹಳೆಯ ಪಂಚಾಂಗದೊಂದಿಗೆ ಹೊಸಪಂಚಾಂಗವನ್ನೂ ಇಟ್ಟು ಪೂಜಿಸುವುದು ಹಳೆಯದರ ಮುಂದುವರಿಕೆಯಾಗಿಯೇ ಹೊಸತು ಬರುವುದನ್ನು ಸೂಚಿಸುತ್ತದೆ.

0.2 ಯುಗಾದಿಯಲ್ಲಿ ಗೇರುಎಣ್ಣೆಯನ್ನು ಹಚ್ಚುವುದು ಮತ್ತೂರು ಹಾಗೂ ಲಿಂಗದಹಳ್ಳಿ ಅಳವಡಿಸಿಕೊಂಡ ಉತ್ತರ ಕರ್ನಾಟಕದ ಆಚರಣೆ. ಗೇರುಎಣ್ಣೆಯು ಹಳೆಯ ಚರ್ಮವನ್ನು ಸುಟ್ಟು, ಹೊಸಚರ್ಮವು ಬೆಳೆಯುವಂತೆ ಮಾಡುವುದು, ಹೊಸವರ್ಷಕ್ಕೆ ಎಲ್ಲವನ್ನೂ ಹೊಸತಾಗಿಸಿಕೊಳ್ಳುವುದರ ಸಂಕೇತ. ವರ್ಷ-ತೊಡಕನ್ನು ಸಂಭ್ರಮ, ಶಾಂತಿಯಿಂದ ಆಚರಿಸುವುದು ವರ್ಷದ ಶುಭನಿರೀಕ್ಷೆಯನ್ನು ಸಾಂಕೇತಿಕಗೊಳಿಸುವ ವಿಧಾನವಾಗಿದೆ.

0.3 ದೀಪಾವಳಿಯಲ್ಲಿ 'ಹೊನ್ನು ತೊಳೆಯುವುದು', 'ಆವೂಟರದ್' ಬಲೀಂದ್ರನ ರಾಜ್ಯವು ಸಂಪದ್ಭರಿತವಾಗುವುದರ ಸಂಕೇತವಾಗಿದೆ. ಬಲೀಂದ್ರನ ಪೂಜೆಗಾಗಿ ದೊಡ್ಡಕಲಶದ ಮೇಲೆ ಸಣ್ಣಕಲಶವನ್ನಿಟ್ಟಿರುವುದು ವಾಮನನು ಬಲೀಂದ್ರನನ್ನು ಮೆಟ್ಟಿದುದರ ಸಂಕೇತವೆಂದು ಕೆಲವೆಡೆ ಹೇಳಲಾಗುತ್ತಿದೆ. ಆದರೆ ಅದು ಬಲೀಂದ್ರನ ಪೂಜೆಯ ಸಂದರ್ಭವೇ ಆದುದರಿಂದ, ಸಣ್ಣಕಲಶವು ಬಲೀಂದ್ರ; ದೊಡ್ಡದು ಅವನ ಸಿಂಹಾಸನ; ಸಣ್ಣಕಲಶದಲ್ಲಿಟ್ಟ ದಾಳಿಂಬೆ ಹೂ ಅವನ ಕಿರೀಟ - ಎಂಬ ವ್ಯಾಖ್ಯಾನವು ಸಮರ್ಪಕವಾಗಿದೆ.

ಹಬ್ಬಗಳು ಮತ್ತು ಆ ಸಂಬಂಧದ ಪೂಜೆಗಳು, ತಮ್ಮಷ್ಟಕ್ಕೇ ಸಾಂಕೇತಿಕವಾದವು. ಆದುದರಿಂದಲೇ ಎಲ್ಲ ಸಂಕೇತಗಳೂ ಅರ್ಥವನ್ನು ತುಂಬಿಕೊಡುತ್ತವೆ.

5. ಆಚರಣೆಗಳಲ್ಲಿ ಶೈಥಿಲ್ಯ: ಸಾಮಾಜಿಕ ಬದಲಾವಣೆಗಳಾದಂತೆ ಮುಖ್ಯವಾಗಿ ಆರ್ಥಿಕ ಬದಲಾವಣೆಗಳ ಫಲವಾಗಿ ಅರ್ಥಪೂರ್ಣ ಆಚರಣೆಗಳು ಮೂಲದ ಆಶಯಗಳಿಂದ ದೂರವಾಗಿ ಭಿನ್ನರೂಪದಲ್ಲಿ ಕಾಣಿಸಿಕೊಳ್ಳುವುದು ಎಲ್ಲಾ ಸಮಾಜಗಳಲ್ಲಿ ಕಂಡುಬರುವ ಪದ್ಧತಿ ಆಗಿದೆ. ಇದಕ್ಕೆ ಸಂಕೇತಿ ಸಮುದಾಯವೂ ಹೊರತಲ್ಲ. ಈ ಬಗೆಗೆ ಒಂದೆರಡು ನಿದರ್ಶನಗಳನ್ನು ಇಲ್ಲಿ ಗಮನಿಸಬಹುದು:

0.1 ವನಭೋಜನ: ಮತ್ತೂರಿನಲ್ಲಿ 'ಭೂಮಿ ಹುಣ್ಣಿಮೆ' ಆಶ್ವಯುಜ ಶುದ್ಧಪೂರ್ಣಿಮೆಯಂದು ನಡೆಯುತ್ತದೆ. ಅಂದು ದೇವರಮುಂದೆ ಭೂಮಿದೇವಿಯ ಹಸೆಬರೆದು ಮೊಸರನ್ನ ಮತ್ತು ಸಿಹಿಯ ನೈವೇದ್ಯ ಮಾಡುತ್ತಾರೆ. ಅಡುಗೆಯನ್ನೆಲ್ಲಾ ತೋಟಕ್ಕೆ ಒಯ್ದು ಮತ್ತೆ ಅಡಿಕೆ, ತೆಂಗು ಇತ್ಯಾದಿ ವೃಕ್ಷಗಳಿಗೂ ಭೂಮಿಗೂ ಪೂಜೆಮಾಡಿ ಆಳುಕಾಳುಗಳೊಡನೆ ವನಭೋಜನ ಮಾಡುತ್ತಾರೆ. ಭೂಮಿತಾಯಿಗೆ ಕೃಷಿಕರ ಕೃತಜ್ಞತೆಯ ರೀತಿ ಇದು. ಫಲ ಹೆಚ್ಚುವಂತೆ ಪ್ರಾರ್ಥನೆ ಮಾಡುವುದು ಮತ್ತು ಅಂದು ಫಲವನ್ನು ಕೀಳದಿರುವುದು ಹಾಗೂ ನೆಲವನ್ನು ಅಗೆಯದಿರುವುದು ವೃಕ್ಷದೇವತೆಯ ಬಗೆಗಿನ ಭಕ್ತಿಯಿಂದಲೇ.

ಕಾರ್ತಿಕಮಾಸದಲ್ಲಿ ಆಮಲಕವೃಕ್ಷದ ಕೆಳಗೆ 'ವನಭೋಜನ' ಮಾಡಿದರೆ ವಿಶೇಷಫಲ ಉಂಟೆಂಬ ಕಾರ್ತಿಕಪುರಾಣದ ನಿರ್ದೇಶನದಂತೆ ನಡೆಯುವುದು ದಕ್ಷಿಣ, ಮಧ್ಯದೇಶದ ರೂಢಿ. ಆದರೆ ಇವುಗಳ ಅಪಭ್ರಂಶರೂಪಗಳೂ ಈ ಸಮುದಾಯದಲ್ಲಿವೆ.

0.0.1 ಊರಹೊರಗೆ ಕ್ಷುದ್ರದೇವತೆ ಉಡುಸಲಮ್ಮನಿಗೆ ಪೂಜೆಮಾಡಿ ಕೆರೆಯ ಬದಿಯ ತೋಪಿನಲ್ಲಿ ಊಟಮಾಡಿ ಬರುವುದು (ಉದಾಹರಣೆಗೆ: ಹಾಸನದ ಸಮೀಪದ ಮೊಸಳೆ ಎಂಬ ಗ್ರಾಮದಲ್ಲಿ ಇರುವ ಆಚರಣೆ).

0.0.2 ಯಾವಪೂಜೆಯೂ ಇಲ್ಲದೆ, ಒಂದುದಿನ ಕಾಡಿನಲ್ಲಿ ಅಡುಗೆಮಾಡಿ ಊಟಮಾಡಿ ಬರುವುದು (ಉದಾಹರಣೆಗೆ ಚಿಕ್ಕಮಗಳೂರು ಜಿಲ್ಲೆಯ ಲಿಂಗದಹಳ್ಳಿಯಲ್ಲಿರುವ ಆಚರಣೆ).

0.0.3 ಹೆಂಗಸರು ಒಟ್ಟಾಗಿಸೇರಿ ಆಚರಿಸುವ ಸಂತೋಷಕೂಟ -'ಅಟ್‌ಗುಣಿ' (ಉದಾಹರಣೆಗೆ ರುದ್ರಪಟ್ಟಣದ ಆಚರಣೆ).

ಹೀಗೆ, ಮೂಲ ಆಶಯವನ್ನು ಕಳೆದುಕೊಂಡು, ಮನೋರಂಜನೆಯು ಮೌಲ್ಯವಾಗಿ ಬೆಳೆದಿರುವುದು ಈ ವಿವರಗಳಲ್ಲಿ ಕಾಣಿಸುತ್ತದೆ.

0.2 ಕೃಷ್ಣನಹಬ್ಬ: ಕೃಷ್ಣನಹಬ್ಬದಲ್ಲಿ 'ಪಾರಣೆ'ಗೆ ನೆಂಟರಿಷ್ಟರನ್ನೂ ಆಹ್ವಾನಿಸುವ ರೂಢಿ ಮತ್ತೂರಿನದು. 'ಜಯಂತಿ' ಮತ್ತು 'ಅಷ್ಟಮಿ' ಸಂಪ್ರದಾಯಗಳೆರಡೂ ಇದ್ದುದರಿಂದ ಹಬ್ಬವು ಭಿನ್ನದಿನಗಳಲ್ಲಿ ನಡೆದು ಎಲ್ಲರಿಗೂ ಅದು ದುಬಾರಿಯಾಗುತ್ತಿತ್ತು. ಬಡತನದ ಒತ್ತಡವನ್ನು ಇಳಿಸಿಕೊಳ್ಳುವುದಕ್ಕಾಗಿ ಎಲ್ಲರೂ ಒಂದೇ ದಿನದಲ್ಲಿ ಆ ಹಬ್ಬದ ಆಚರಣೆ ಮಾಡತೊಡಗಿದರು. ಆರ್ಥಿಕ ಕಾರಣಕ್ಕಾಗಿ ಪರಂಪರಾಗತ ಸಾಂಸ್ಕೃತಿಕ ರೂಢಿಯೊಂದೇ ಬದಲಾದುದು ಅಸಾಧಾರಣವಾದ ಸಂಗತಿಯಾಗಿದೆ. ಸಂಕೇತಿಗಳಲ್ಲಿ ಹಾಗೂ ಇತರ ಸಮುದಾಯಗಳಲ್ಲಿ ಸಾರ್ವತ್ರಿಕವಾಗಿ, ಅವರ ಆಚರಣೆಯ ಹಬ್ಬಗಳ ಸಂಖ್ಯೆಯು ಇಳಿಮುಖವಾದುದರ ಜೊತೆಗೆ, ಆಚರಣೆಯ ವಿವರಗಳು, ವೈಭವ, ಸಂಭ್ರಮ, ಅರ್ಥವಂತಿಕೆಯಲ್ಲೂ ಆದ ಶೈಥಿಲ್ಯವನ್ನು ಈಗ ಗುರುತಿಸಬಹುದಾಗಿದೆ.

6. ಇತರ ಪ್ರವೃತ್ತಿಗಳು : ಸಂಕೇತಿಗಳ ಹಬ್ಬಗಳ ಆಚರಣೆಯ ಸಂದರ್ಭದಲ್ಲಿ ಗಮನಿಸಬಹುದಾದ ಕೆಲವು ಸಾಮಾನ್ಯ ಪ್ರವೃತ್ತಿಗಳನ್ನು ಇಲ್ಲಿ ಗುರುತಿಸಿದೆ:

0.1 ಪ್ರಯೋಜಕತೆ, ಸಮೂಹಸನ್ನಿ: ಕರ್ನಾಟಕದಲ್ಲಿ, ಮನೆಯ ಸದಸ್ಯರು ಎಷ್ಟೇ ದೂರದ ನೆಲೆಗಳಿಗೆ ಚದುರಿದ್ದರೂ, ಹಿರಿಯರಿರುವಕಡೆ ಒಟ್ಟಿಗೆಸೇರಿ ಆಚರಿಸುವುದು ದೀಪಾವಳಿ, ಗಣಪತಿ, ಯುಗಾದಿಗಳನ್ನು ಮಾತ್ರ ಎಂಬುದು, ಈ ಸಮುದಾಯಕ್ಕೆ ಅವು ಅತಿಪ್ರಮುಖ ಹಬ್ಬಗಳೆಂಬುದನ್ನು ಸೂಚಿಸುತ್ತದೆ. ದಕ್ಷಿಣದಲ್ಲಿ ಈ ಪ್ರಾಮುಖ್ಯ ಇರುವುದು ಶರನ್ನವರಾತ್ರಿಗೆ (ಚಿತ್ರ 135); ಮತ್ತು ಮೇಲಿನ ಈ ಮೂರೂ ಹಬ್ಬಗಳು ಅವರಿಗೆ ಸರಳ ಆಚರಣೆಯವು ಎಂಬುದು, ಕರ್ನಾಟಕದಲ್ಲಿ ಆಗಿರುವ ದೇಶಾಚಾರಗಳ ಅಳವಡಿಕೆಯ ಪ್ರಮಾಣವನ್ನು ತಿಳಿಸುತ್ತದೆ. ಈ ಹಬ್ಬಗಳ ವಿವರಗಳು ಸಮೃದ್ಧವಾಗಿರವುದೂ ಅದನ್ನೇ ಸೂಚಿಸುತ್ತದೆ. ಅರ್ಧಶತಮಾನದಿಂದೀಚೆಗೆ ಬೆಂಗಳೂರಿಗೆ ವಲಸೆಬಂದ ದಕ್ಷಿಣದ ಸಂಕೇತಿಗಳಲ್ಲಿಯೇ ಕರ್ನಾಟಕದ ಹಬ್ಬಗಳು ಸ್ವೀಕಾರವಾಗತೊಡಗಿರುವುದು, ಹಲವು ಶತಮಾನಗಳ ಹಿಂದೆ ಕರ್ನಾಟಕಕ್ಕೆ ಬಂದವರಲ್ಲಿ ಆದ ವ್ಯಾಪಕ ಬದಲಾವಣೆಗಳನ್ನು ಸಹಜಪ್ರಕ್ರಿಯೆಯೆನಿಸುತ್ತದೆ. ಈಗಲೂ, 'ಸಂತೋಷಿಮಾ', 'ಬನಶಂಕರಿ' ಮೊದಲಾದ ವ್ರತಗಳೂ ರಾಘವೇಂದ್ರಸ್ವಾಮಿ, ಸತ್ಯಸಾಯಿಬಾಬಾ, ರಮಣಮಹರ್ಷಿ ಕುರಿತಾದ ಆಚರಣೆಗಳೂ ಸ್ವೀಕಾರವಾಗುತ್ತಿರುವ ರೀತಿಯು, ಪ್ರಯೋಜಕತೆ ಮತ್ತು ಸಮೂಹಸನ್ನಿಗಳು ವಿಶ್ವಸಾಮಾನ್ಯಗಳ ಸ್ವೀಕಾರದ ನಿರಂತರ ಪ್ರೇರಣೆಗಳಾಗಿ ಮುಂದುವರಿದಿರುವುದನ್ನು ಖಚಿತಪಡಿಸುತ್ತವೆ.



135 'ಕೋಲು' ನವರಾತ್ರಿಯ ಬೊಂಬೆ

0.2 ಮಕ್ಕಳಿಗಾಗಿ ಆಚರಣೆಗಳು: ಮಕ್ಕಳ ಶ್ರೇಯಸ್ಸಿಗಾಗಿ ಆರತಿ, ಎಳ್ಳುಬೀರುವುದು, 'ಚೌತಿಎಳ್ಳು', ಬೆಳ್ಳಿಯಲೋಟ ಇಲ್ಲವೆ ಕೃಷ್ಣನ ಪ್ರತಿಮೆಯನ್ನು ಬೀರುವುದು - ಹಬ್ಬಗಳ ಅಂಗವಾಗಿ ನಡೆಯುವ ಆಚರಣೆಗಳಾಗಿವೆ. ಆದರೆ ಕರ್ನಾಟಕದಲ್ಲಿ ಮಕ್ಕಳಿಗಾಗಿಯೇ ಪ್ರತ್ಯೇಕವಾಗಿ ನಡೆಯುವುದು 'ಮಕ್ಕಳ ಹಬ್ಬ'. ಸಂಕ್ರಾಂತಿಯಲ್ಲಿ ಮಕ್ಕಳಿಗೆ ನಡೆಯುವ 'ಫಲಧಾರೆ ಎರೆಯುವ' ಆಚರಣೆಯನ್ನೂ ಈ ಹಬ್ಬವು ಒಳಗೊಳ್ಳುತ್ತದೆ. ಸಂತಾನ ಮತ್ತು ಅದರ ಶ್ರೇಯಸ್ಸಿಗೆ ಈ ಸಮಾಜವು ಕೊಟ್ಟಿರುವ ಪ್ರಾಮುಖ್ಯವು ಶಿಶುಮರಣಗಳು ಮತ್ತು ಸಂತಾನಹೀನತೆಯನ್ನು ಪ್ರಖರವಾಗಿ ಹೊಂದಿದ ವಂಶವೃಕ್ಷಗಳ ಹಿನ್ನೆಲೆಯಲ್ಲಿ ಹೆಚ್ಚಿನ ಅರ್ಥವನ್ನು ಪಡೆದುಕೊಳ್ಳುತ್ತದೆ.

0.3 ಕೆಲವು ನಂಬಿಕೆಗಳು: ಹಬ್ಬಗಳಿಗೆ ಸಂಬಂಧಿಸಿದ ಕೆಲವು ನಂಬಿಕೆಗಳನ್ನು ಇಲ್ಲಿ ಗಮನಿಸಬಹುದು:

0.0.1 ಹನುಮಂತೋತ್ಸವದ ಅಂಗವಾಗಿ ನಡೆಯುವ ಓಕುಳಿ ಆಟದಿಂದಾಗಿ ಬೇಗ ಮಳೆ ಬರುತ್ತದೆ ಎಂಬ ನಂಬಿಕೆಯ ಹಿಂದೆ, ನೀರೆರಚಿ ಆಡುವ ಸಾದೃಶ್ಯವು ಕೆಲಸಮಾಡಿದೆ (ಚಿತ್ರ 136).



136 ಶ್ರೀರಾಮನವಮಿಯಲ್ಲಿ ಹನುಮಂತೋತ್ಸವದ ಅಂಗವಾಗಿ ಓಕುಳಿ ನಡೆಯುತ್ತದೆ. ಓಕುಳಿ ಆಡಿದವರು ಭಜನೆ ಮಾಡುತ್ತಾ ಮೆರವಣಿಗೆಯಲ್ಲಿ ಸಾಗುತ್ತಾರೆ

0.0.2 ಸೋದರಬಿದಿಗೆಯಲ್ಲಿ ಸೋದರಿಯ ಮನೆಯಲ್ಲಿ ಊಟಮಾಡುವುದರಿಂದ ಆಯುಸ್ಸು ವರ್ಧಿಸುತ್ತದೆ ಎಂಬುದೊಂದು ನಂಬಿಕೆ. ಸಂತೋಷದಿಂದ ಆರೋಗ್ಯ, ಆರೋಗ್ಯದಿಂದ ಆಯುಸ್ಸು ಎಂಬುದು ವೈಜ್ಞಾನಿಕ ಸತ್ಯವೂ ಹೌದು. ಬಂಧುತ್ವವೃದ್ಧಿಯ ಉದ್ದೇಶವೂ ಇಲ್ಲಿದೆ.

0.0.3 ವರ್ಷತೊಡಕಿನ ದಿನ ಸಂಭವಿಸಿದ್ದು ವರ್ಷವಿಡೀ ಆಗುತ್ತದೆ ಎಂಬ ನಂಬಿಕೆಯಲ್ಲಿ - ಪ್ರಾರಂಭದಂತೆಯೇ ಮುಂದುವರಿಕೆಯೂ ಇರುತ್ತದೆಂಬ ಭಾವುಕ ನಿರೀಕ್ಷೆ ಇದೆ.

0.0.4 ಯುಗಾದಿಯ 'ಬೇವು ಬೆಲ್ಲ' ತಯಾರಿಸಿದಾಗ ಬೇವು ಹೆಚ್ಚಾಗಿದ್ದರೆ ಆ ವರ್ಷ ಕಷ್ಟಗಳು ಹೆಚ್ಚು; ಬೆಲ್ಲ ಹೆಚ್ಚಾಗಿದ್ದರೆ ಸುಖ ಹೆಚ್ಚು ಎಂಬುದರಲ್ಲಿ ಸದೃಶ ಪರಿಣಾಮದ ಭಾವುಕ ನಿರೀಕ್ಷೆ ಇದೆ.

ಹಬ್ಬಗಳಿಗೆ ಸಂಬಂಧಿಸಿದ ನಂಬಿಕೆಗಳ ಹಿಂದೆ ಭಕ್ತಿ, ಸುಸಂಬಂಧ, ಭಾವುಕತೆ ಮುಂತಾದ ಇಂಥ ಪ್ರೇರಣೆಗಳಿವೆಯೇ ಹೊರತು ಕೇವಲ ತರ್ಕವಲ್ಲ ಎಂಬುದು ಈ ಮೇಲ್ಕಂಡ ನಿದರ್ಶನಗಳಿಂದ ಸ್ಪಷ್ಟವಾಗುತ್ತದೆ.

0.4 ಹಬ್ಬ - ವ್ರತಗಳು : ಹಬ್ಬಗಳಲ್ಲಿ ಸಂಭ್ರಮ ಉಲ್ಲಾಸಗಳು ಕಂಡುಬಂದರೆ, ವ್ರತಗಳಲ್ಲಿ ಉಪವಾಸ, ಪ್ರಾರ್ಥನೆ, ನಿಯಮಗಳಿಂದ ದೇಹದಂಡನೆ ಇರುತ್ತದೆ. ದಕ್ಷಿಣದಲ್ಲಿ ವ್ರತಗಳಿಲ್ಲ (ಪಟ್ಟಿ 17, ಪು.319, 320); ಇದ್ದಾಗಲೂ, ಅತ್ಯಲ್ಪ ಪ್ರಮಾಣದಲ್ಲಿರುತ್ತವೆ. ಅವೆಲ್ಲವೂ ಐಚ್ಛಿಕ ಸ್ವರೂಪದವು. ಆದರೆ ಕರ್ನಾಟಕದಲ್ಲಿ ನಿಯತವಾಗಿ ವಿಪುಲ ವ್ರತಗಳು ನಡೆಯುವುದು ದೇಶರೂಢಿಯ ಅಳವಡಿಕೆಯಿಂದಾಗಿದೆ. ಅವುಗಳ ವಿವರಗಳು ಕರ್ನಾಟಕದಲ್ಲಿ ಸಾರ್ವತ್ರಿಕ ಸ್ವರೂಪದವು. ವಿಶೇಷ ಕಾಮ್ಯಗಳಾದ ವ್ರತಗಳು ದಕ್ಷಿಣದವರನ್ನು ಹೆಚ್ಚು ಆಕರ್ಷಿಸದಿರುವುದು ಅವರ ಶುದ್ಧಭಕ್ತಿಯ ಪರವಾದ ಸಂಗತಿಯಾಗಿದೆ.

ಸ್ವರ್ಣಗೌರಿ, ವಿನಾಯಕ, ಅನಂತ ಮುಂತಾದ ವ್ರತಗಳು ನಿರ್ದಿಷ್ಟಕಾಲದಲ್ಲಿ ಸಾರ್ವತ್ರಿಕವಾಗಿ ನಡೆದು ಸಂತೋಷ ಸಂಭ್ರಮಗಳನ್ನು ಮುಂದುಮಾಡಿಕೊಂಡು ಕಠಿಣನಿಯಮಗಳು ಗೌಣವಾಗಿ 'ಹಬ್ಬ'ದ ಸ್ವರೂಪ ಪಡೆದಿರುವುದು ಕರ್ನಾಟಕದಲ್ಲಿ ಕಂಡುಬರುತ್ತದೆ. ಆದರೆ ದಕ್ಷಿಣದಲ್ಲಿ ಹಬ್ಬಗಳ ಸಂಖ್ಯೆ, ಅವುಗಳ ವಿವರಪೂರ್ಣ ಆಚರಣೆಗಳು ಹಾಗೂ ವೈಭವದ ಅಂಶಗಳಲ್ಲಿ ಸರಳತೆ ಕಾಣಿಸುತ್ತದೆ (ಪಟ್ಟಿ 18 ಪು.321-323).

0.5 ವರ್ಗೀಕರಣ: ಸಂಕೇತಿಗಳಲ್ಲಿ ಆಚರಣೆಯಲ್ಲಿರುವ ಹಬ್ಬಗಳು ಮತ್ತು ವ್ರತಗಳನ್ನು ಗುಣಶಃ ಹೀಗೆ ವಿಭಾಗಿಸಬಹುದು:

ಹಬ್ಬಗಳ ಸ್ವರೂಪ	*ಹಬ್ಬಗಳು ಅಥವಾ ವ್ರತಗಳು*
ಸಾರ್ವತ್ರಿಕವಾದವು	: ವಿನಾಯಕ, ಯುಗಾದಿ, ದೀಪಾವಳಿ ಇತ್ಯಾದಿ
ವಂಶನಿರ್ದಿಷ್ಟವಾದವು	: ಅನಂತ, ವರಮಹಾಲಕ್ಷ್ಮಿ ಇತ್ಯಾದಿ
ಸಾಧಾರಣ ಕಾಮ್ಯದವು	: ಅನಂತ, ಗೌರಿ ಇತ್ಯಾದಿ

ವಿಶೇಷ ಕಾಮ್ಯದವು	: ಸತ್ಯನಾರಾಯಣ ವ್ರತ, ಮಂಗಳಗೌರಿ ಇತ್ಯಾದಿ
ಅವಿವಾಹಿತೆಯರು ಕೂಡ ಆಚರಿಸಬಹುದಾದವು	: ಭೀಮೇಶ್ವರ ಪೂಜೆ, ಗೌರಿ ಇತ್ಯಾದಿ
ನವವಿವಾಹಿತೆಯರು ಆಚರಿಸಬಹುದಾದವು	: ಮೌನಗೌರಿ, ಮಂಗಳಗೌರಿ, ಸೌಭಾಗ್ಯಗೌರಿ ಇತ್ಯಾದಿ
ಮುಟ್ಟುನಿಂತವರು, ವಿಧವೆಯರು ಆಚರಿಸಬಹುದಾದವು	: ಋಷಿಪಂಚಮಿ
ಮಕ್ಕಳಾಗದವರು ಆಚರಿಸಬಹುದಾದವು	: ನಾಗಪ್ರತಿಷ್ಠೆ, ಸಂತಾನ ಗಣಪತಿ, ಅಶ್ವತ್ಥಪ್ರದಕ್ಷಿಣೆ ಇತ್ಯಾದಿ
ಮಕ್ಕಳಿಗಾಗಿ ಮಾಡುವುದು	: ಮಕ್ಕಳಹಬ್ಬ
ಈಗ ಆಚರಣೆಯಲ್ಲಿ ಅಷ್ಟಾಗಿ ಇಲ್ಲದವು	: ಗಜಗೌರಿ, ವಟಸಾವಿತ್ರಿ ಇತ್ಯಾದಿ
ಹೊಸದಾಗಿ ಆಚರಣೆಗೆ ಬಂದವು	: ಬನಶಂಕರಿ, ಸಂತೋಷಿಮಾ, ಶಾಕಾಂಬರಿ, ರಾಷ್ಟ್ರೀಯ ಹಬ್ಬಗಳು
ಅಬ್ರಾಹ್ಮಣರಿಂದ ನೇರಸ್ವೀಕಾರ ಮಾಡಿದವು	: 'ಮಿಡಚಲು' (ದನಗಳಿಗಾಗಿಯೇ ಮಾಡುವ ನಾಡಹಬ್ಬ: ದನಗಳಿಗೆ ಕಾಯಿಲೆ ಬರದಂತೆ ಮಾಡುವುದು ಉದ್ದೇಶ), ಬಸವನ ಅಮಾವಾಸ್ಯೆ : ಉತ್ತರಕರ್ನಾಟಕದ ಪ್ರಭಾವದಿಂದ.

ಹಬ್ಬಗಳು ಮತ್ತು ವ್ರತಗಳ ಬಗೆಗಿನ ಹೆಚ್ಚಿನ ವಿವರಗಳು ಮತ್ತು ಪ್ರಾದೇಶಿಕ ವೈದೃಶ್ಯಗಳ ಮಾಹಿತಿಗಾಗಿ ನೋಡಿ : ಪಟ್ಟಿ 19, ಪು. 324, 325

0.6 ಬಹುದೇವತೆ - ಏಕದೇವಭಾವ : ಅನೇಕ ಹೆಸರು, ರೂಪು ಮತ್ತು ವಿವರಗಳಿಂದ ಪೂಜೆಗೊಳ್ಳುವ ವೈವಿಧ್ಯಪೂರ್ಣ ದೇವತೆಗಳನ್ನು ಹಬ್ಬಗಳ ಸಂದರ್ಭದಲ್ಲಿಯೂ ಗಮನಿಸಬಹುದು. ಆದರೆ ಏಕದೇವಭಾವವು ಇವುಗಳಲ್ಲಿ ಅಂತರ್ಗತವಾಗಿ ಗಾಢವಾಗಿರುವುದನ್ನು ಎತ್ತಿತೋರಿಸುವ ಕೆಲವು ಅಂಶಗಳನ್ನು ಇಲ್ಲಿ ಕಾಣಿಸಿದೆ:

0.7 ಸಮನ್ವಯ : ದೇವತೆಗಳ ಸಮನ್ವಯದ ಕೆಲವು ನಿದರ್ಶನಗಳು :

0.0.1 ಶರನ್ನವರಾತ್ರಿ ಮತ್ತು ರಾಮನವರಾತ್ರಿಯ[17] ಒಂಬತ್ತು ದಿನಗಳ ಧಾರ್ಮಿಕವಿಧಿಗಳಲ್ಲಿ ರಾಮಾಯಣಪಾರಾಯಣದೊಂದಿಗೆ ನವಗ್ರಹಜಪ, ಸೂರ್ಯನಮಸ್ಕಾರ, ವೇದಪಾರಾಯಣ, ದುರ್ಗಾಸಪ್ತಶತಿ ಪಾರಾಯಣ, ಭಗವದ್ಗೀತಾ ಪಾರಾಯಣ, ರುದ್ರಾಭಿಷೇಕ, ಲಲಿತಾಸಹಸ್ರನಾಮ ಮೊದಲಾದ ಧಾರ್ಮಿಕ ಕಾರ್ಯಕ್ರಮಗಳು ಸೇರ್ಪಡೆ ಆಗಿರುತ್ತವೆ.

0.0.2 ರುದ್ರಾಧ್ಯಾಯದಿಂದಲೇ, ರಾಮನವರಾತ್ರಿಯಲ್ಲಿ ಶ್ರೀರಾಮನಿಗೆ ಕ್ರಮಾರ್ಚನೆ ನಡೆಯುತ್ತದೆ.

0.0.3 ಆ ದಿನಗಳಲ್ಲಿ ರುದ್ರಾಭಿಷೇಕವನ್ನು ನಿರ್ವಹಿಸುವವರೇ ಕೊನೆಯಲ್ಲಿ ರಾಮಪಟ್ಟಾಭಿಷೇಕವನ್ನೂ ನಿರ್ವಹಿಸುವರು ಮತ್ತು ಅವರೇ ರಾಮಾಯಣ ಪಾರಾಯಣ ಮಾಡಿದವರಿಗೆ ಪಾದಪೂಜೆ ಮಾಡುವರು.

0.0.4 ಕೃಷ್ಣನ ಹಬ್ಬ ಬರುವುದು ಶ್ರಾವಣಮಾಸದಲ್ಲಿ; ಆ ಮಾಸದಲ್ಲಿ ಪ್ರತಿ ಬೆಳಗ್ಗೆ ವಿಶೇಷ ರುದ್ರಾಭಿಷೇಕ ನಡೆಯುತ್ತದೆ; ಕೃಷ್ಣನ ಹಬ್ಬದ ದಿನವೂ ರುದ್ರಾಭಿಷೇಕ ನಡೆಯುತ್ತದೆ.

0.8 ವಿಶೇಷ ಪ್ರಾಶಸ್ತ್ಯ: ವಿಶಿಷ್ಟ ಸಾಂದರ್ಭಿಕ ಉದ್ದೇಶಗಳಿಗಾಗಿ ವಿಶೇಷ ಪ್ರಾಶಸ್ತ್ಯ ಕೆಲವು ದೇವತೆಗಳಿಗಿರುವುದುಂಟು. ಅದನ್ನು, ಮುತ್ತೈದೆತನದ ತೀವ್ರ ಅಭಿಲಾಷೆಯಿಂದ ಆಚರಿಸುವ ವಿವಿಧ ಗೌರೀವ್ರತಗಳ ಹೆಚ್ಚಳದಲ್ಲಿ ಕಾಣಬಹುದು. ಸಮುದಾಯವು

[17] ಮುಖ್ಯವಾಗಿ ಅದು ಮಹಾರಾಷ್ಟ್ರ ವೈಷ್ಣವರಿಂದ ಆಚರಿಸಲ್ಪಡುತ್ತದೆ. ಕರ್ನಾಟಕರೂ ತೆಲುಗರೂ ಸ್ವಲ್ಪಮಟ್ಟಿಗೆ ಅದನ್ನು ಆಚರಿಸುವುದಿದೆ. ಅದು ದ್ರಾವಿಡರ ಹಬ್ಬವಲ್ಲ. (ತಮಿಳು) ದೇಶಕ್ಕೆ ಅದು ಮಹಾರಾಷ್ಟ್ರೀಯರಿಂದ ತರಲ್ಪಟ್ಟಿದೆ . . . (ಅನು : ಲೇಖಕನದು) South Indian festivities, Jagadisa Ayyar (P.V.), Asian Educational Services, New Delhi, 1982, P.195-197.



137 ಸರಸ್ವತಿ ಪೂಜೆ : ಶರನ್ನವ ರಾತ್ರಿಯ ಸಂದರ್ಭ: ಪುಸ್ತಕಗಳನ್ನು ಜೋಡಿಸಿ ಸೀರೆ ಉಡಿಸಿ ಅಲಂಕರಿಸಿ ಪೂಜಿಸುವುದು ರೂಢಿ

ಎಲ್ಲಿಯೂ ತನ್ನ ಶರನ್ನವರಾತ್ರಿ ಆಚರಣೆಗಳಲ್ಲಿ ದುರ್ಗೀ, ಲಕ್ಷ್ಮೀ, ಸರಸ್ವತಿಗಾಗಿ ಪ್ರತ್ಯೇಕತೆಯನ್ನು ರೂಪಿಸಿಕೊಂಡಿಲ್ಲ. ಆ ದಿನಗಳ ಪ್ರಧಾನಪೂಜೆ ಇರುವುದು ಸರಸ್ವತಿಗೆ ಮಾತ್ರ. ಅಲ್ಲಲ್ಲಿ ಕಾಣುವ ದೇವೀಪಾರಾಯಣ, ಕನ್ನಿಕಾಪೂಜೆಗಳು ಹೊಸ ಸ್ವೀಕಾರಗಳಾಗಿದ್ದು ಸಾರ್ವತ್ರಿಕತೆ ಪಡೆದಿಲ್ಲ. ದುರ್ಗಾಷ್ಟಮಿಯ ವಿಶೇಷಪೂಜೆ ಎಲ್ಲಿಯೂ ಇಲ್ಲದುದು ಪಾರ್ವತಿಯ ಉಗ್ರರೂಪಕ್ಕೆ ವಿಶೇಷ ಮನ್ನಣೆ ಇಲ್ಲದುದನ್ನೇ ಸೂಚಿಸುತ್ತದೆ.[18] ದುರ್ಗಾಷ್ಟಮಿಯಂದು ಸಾಂಗವಾಗಿ ಪೂಜೆ ನಡೆಯುವುದು ಸರಸ್ವತಿಗೆ (ಚಿತ್ರ 137). ದಕ್ಷಿಣದಲ್ಲಿ ಶ್ರೀಚಕ್ರಪೂಜೆ ಅಲ್ಲಲ್ಲಿ ಕಾಣಿಸುತ್ತದಾದರೂ, ಅದೂ ಪಂಚಾಯತನದ ಭಾಗವಾಗಿ ಇರುವಂಥದು. ಅವರಲ್ಲಿ ಹಬ್ಬ ಇಲ್ಲವೆ ವ್ರತಗಳ ರೂಪದಲ್ಲಿ ಅದು ಎಲ್ಲಿಯೂ ಪ್ರಕಟಗೊಂಡಿಲ್ಲ. ಬಲೀಂದ್ರನ ಜೊತೆಗೆ ಬತ್ತ, ಅಡಿಕೆ, ಬಂಗಾರವನ್ನು ಬಲೀಂದ್ರನ ಸಂಪದ್ಭರಿತ ರಾಜ್ಯದ ಸಂಕೇತವಾಗಿ ಮಾತ್ರ (ಪೂಜಾಪರಿಕರದಂತೆ) ಇಟ್ಟು ಪೂಜಿಸುವ ಕರ್ನಾಟಕದ ಕೆಲವೆಡೆಯ ರೂಢಿಯನ್ನು ಬಿಟ್ಟರೆ ಎಲ್ಲಿಯೂ ಲಕ್ಷ್ಮಿಗೆ ಪ್ರಾಮುಖ್ಯವಿಲ್ಲ. ನವವಿವಾಹಿತೆಯು ಮಾತ್ರ ಆಚರಿಸುವ ಆಷಾಢದ 'ಆಡಿ ಶುಕ್ರವಾರ'ದ ಲಕ್ಷ್ಮೀಪೂಜೆ, ಪದ್ಧತಿಗೆ ತಂದುಕೊಂಡ ಕೆಲವರು ಮಾತ್ರ ಮಾಡುವ ವರಮಹಾಲಕ್ಷ್ಮೀ ವ್ರತ ಕೂಡ ಸಮುದಾಯದ ಸಾರ್ವತ್ರಿಕ ಪ್ರಾಮುಖ್ಯದಿಂದ ದೂರವಾಗಿದೆ. ಪ್ರತಿ ಶುಕ್ರವಾರ ಹಜಾರದಲ್ಲಿ ದೀಪ ಬೆಳಗಿಸುವುದರ ಮೂಲಕ ಲಕ್ಷ್ಮಿಗೆ ಗೌರವ ಸಲ್ಲುತ್ತದೆ. ಆದರೆ ಅದನ್ನು ಅತಿಶಯಗೊಳಿಸುವುದು ಇವರ ರೀತಿಯಲ್ಲ. ಎಲ್ಲ ಮನೆದೇವರುಗಳೊಡನೆ ಆ ದೇವತೆಗಳ ಪತ್ನಿಯರೂ ಸೇರುತ್ತಾರಾದರೂ ಪ್ರತ್ಯೇಕವಾಗಿ ಸ್ತ್ರೀ ದೇವತೆಯೊಂದು ಮನೆದೇವರಾಗಿರುವುದು ಮತ್ತು ಆ ಸಂಬಂಧದ ಜಾತ್ರೆಯೊಂದೂ ನಡೆಯುವುದು ಅಯ್‌ಕುಡಿಯ ಕೋಮಲವಲ್ಲಿಗೆ ಮಾತ್ರ; ಅದೂ ಇತ್ತೀಚಿನ ಇತಿಹಾಸದಲ್ಲಿ ಹುಟ್ಟಿಕೊಂಡುದು. ವಿಷ್ಣುವಿನ ಅವತಾರಗಳಲ್ಲಿಯೇ ರಾಮ, ಕೃಷ್ಣರು- ಅದರಲ್ಲಿಯೂ ರಾಮನು - ಹಬ್ಬಗಳಲ್ಲಿ ಹೆಚ್ಚು ವಿಸ್ತಾರವಾಗಿ ಪೂಜೆಗೊಳ್ಳುತ್ತಾರೆ. ವಿಷ್ಣುಪರವಾದ ಹಬ್ಬಗಳಿಗೆ ಹೋಲಿಸಿದರೆ ಶಿವನಿಗಾಗಿ ಇರುವುದು ಮಹಾಶಿವರಾತ್ರಿಯ (ಉಪವಾಸ, ಜಾಗರಣೆ ಪ್ರಧಾನವಾದ) ಆಚರಣೆ ಮಾತ್ರ.

ಆದರೆ, ದೇವತೆಗಳು ವೈವಿಧ್ಯಪೂರ್ಣವಾಗಿದ್ದರೂ, ಆಚರಣೆಗಳ ವಿವರಗಳಲ್ಲಿ ಪ್ರಮಾಣವ್ಯತ್ಯಾಸವಿದ್ದರೂ, ಎಲ್ಲವೂ ಪರಮೇಶ್ವರ (ಬ್ರಹ್ಮ) ಪ್ರೀತ್ಯರ್ಥವಾಗಿ ಮಾತ್ರ ನಡೆಯುವುದರಿಂದ ಯಾವ ದೇವತೆಯ ಬಗೆಗಿನ 'ಪರ'ತೆಯೂ[19] ಇಲ್ಲಿ ಮುಖ್ಯವಾಗುವುದಿಲ್ಲ.

ವೇದಾಂತವನ್ನಾಧರಿಸಿ ಬ್ರಾಹ್ಮಣರಲ್ಲಿ ಆದ ಮೂರು ಪ್ರಮುಖ ಪಂಥಗಳಲ್ಲಿ ಸಂಕೇತಿಗಳು ಶಂಕರರ ಅನುಯಾಯಿಗಳಾಗಿದ್ದು ಸ್ಮಾರ್ತರೆನಿಸಿದ್ದಾರೆ. ಪರಬ್ರಹ್ಮವೊಂದೇ ಸತ್ಯ; ಅದರ ಅರಿವೇ ಗುರಿ, ಎಂಬ ಮೂಲಭೂತ ಧೋರಣೆಯೊಂದಿಗೆ ಬ್ರಹ್ಮ, ವಿಷ್ಣು, ಶಿವನೂ ಸೇರಿದಂತೆ ಅದರ ತೋರಿಕೆಗಳಾದ ಸರ್ವದೇವತಾಮಾನ್ಯತೆಯನ್ನು ರೂಢಿಸಿಕೊಂಡುದು ಅದ್ವೈತಮತ. ಎಲ್ಲ ಅನುಷ್ಠಾನಗಳೂ ಈ ಸತ್ಯದ ಅರಿವಿನ ಸಾಧನಗಳು ಮತ್ತು ವಿವಿಧ ಹಂತಗಳು ಮಾತ್ರ ಎಂಬುದು ಈ ವೈವಿಧ್ಯಪೂರ್ಣ ಆಚರಣೆಗಳ ವಿವರಗಳಲ್ಲಿ ಸ್ಪಷ್ಟವಾಗುತ್ತದೆ.

18 ಲಲಿತಾಪೂಜೆ ಕೆಲವರಲ್ಲುಂಟು. ತೀರ ಅಪರೂಪದ ಈ ಅಪವಾದಗಳನ್ನು ಪರೀಕ್ಷಿಸಿದಾಗ ಅದು ವೈಯಕ್ತಿಕವಾದ ತತ್ಕಾಲೀನ ಆಚಾರವೆನ್ನುವುದು ತಿಳಿಯುತ್ತದೆ. ಕಲಶದಲ್ಲಿ ಲಲಿತೆಯನ್ನು ಆವಾಹನೆ ಮಾಡಿ ಹತ್ತು ದಿನವೂ ಪೂಜಿಸುವುದು ಮತ್ತು ಲಲಿತಾಪಂಚಮಿಯ ದಿವಸ ಲಲಿತೆಗೆ ವಿಶೇಷ ಪೂಜೆ ಮಾಡುವ ಅಪರೂಪದ ಪ್ರಸಂಗಗಳಿವೆ. ಇದು ಸ್ಪಷ್ಟವಾಗಿ ಹಾಸನಸೀಮೆಯ ಪ್ರಾದೇಶಿಕ ಸ್ವೀಕಾರ.

19 ವೈಷ್ಣವರಲ್ಲವೆಂದು ಸೂಚಿಸುವ ಬಹಳ ಪರಿಮಿತಾರ್ಥದಲ್ಲಿ ಕೆಲವರು ಸಂಕೇತಿ ಸಮುದಾಯವನ್ನು 'ಶೈವ'ರೆಂದು ಗುರುತಿಸುತ್ತಾರೆ. ಶುದ್ಧಾರ್ಥದಲ್ಲಿ ಅದು ತಪ್ಪು ಪ್ರಯೋಗ.

0.9 ಪ್ರಾದೇಶಿಕ ಪ್ರಭಾವ - ಸಂಕೀರ್ಣ ಬೆಳವಣಿಗೆ : ಕರ್ನಾಟಕದ ಸಂಕೇತಿಗಳು ತಮ್ಮ ಧರ್ಮಶಾಸ್ತ್ರ-ನಿರ್ದೇಶನಗಳಿಗಾಗಿ ಸುಮಾರು ಹದಿನೇಳನೆಯ ಶತಮಾನದ ಪೂರ್ವಾರ್ಧದಲ್ಲಿ ಬಂದ ವೈದ್ಯನಾಥ ದೀಕ್ಷಿತನ 'ಸ್ಮೃತಿಮುಕ್ತಾಫಲ'ವನ್ನು ವಿಶೇಷ ಗೌರವದಿಂದ ಸ್ವೀಕರಿಸಿದ್ದಾರೆ. ಶ್ರೀಕೃಷ್ಣನ ಹುಟ್ಟುಹಬ್ಬಕ್ಕೆ ಸಂಬಂಧಿಸಿದಂತೆ ಮಾತ್ರ ಅನೇಕರು ಹಾರೀತ ವೆಂಕಟಾಚಾರ್ಯ (ತೋಳಪ್ಪರ್)ನ ಸಿದ್ಧಾಂತವನ್ನು ಸ್ವೀಕರಿಸಿದ್ದಾರೆ (ಕ್ರಿ.ಶ.೧೪೫೦-೧೫೦೦). ಇವೆರಡೂ ಪ್ರಾದೇಶಿಕ ಪ್ರಭಾವಪ್ರೇರಿತ ವಿಶಿಷ್ಟ ಪ್ರವೃತ್ತಿಗಳು; ಕಾಲಕ್ರಮದಲ್ಲಿ ಧಾರ್ಮಿಕಾಚರಣೆಗಳು ಸಂಕೀರ್ಣಗೊಳ್ಳುವುದಕ್ಕೂ ನಿದರ್ಶನಗಳು.[20]

0.10 ರಂಗೋಲಿ: ಸೌಂದರ್ಯಪ್ರಜ್ಞೆಯ ಕಾರಣದಿಂದಾಗಿ ರಂಗೋಲಿಗೆ ಸಂಬಂಧಿಸಿದ ಕಲಾಭಿವ್ಯಕ್ತಿಯು ಸಂಕೇತಿಗಳಲ್ಲಿಯೂ ಮುಕ್ತವಾಗಿ ನಡೆದಿದೆ. ಆದರೆ ಅದಕ್ಕೆ ಧಾರ್ಮಿಕ ನಿರ್ದಿಷ್ಟ ಸಂದರ್ಭಗಳಿರುವಂತೆಯೇ ಧಾರ್ಮಿಕ ನಿರ್ದಿಷ್ಟ ರಂಗೋಲಿಗಳೂ ಇವೆ. ಸಂಸ್ಕಾರಗಳಿಗೆ ಸಂಬಂಧಿಸಿದಂತೆಯೂ ಇಂಥ ನಿದರ್ಶನಗಳನ್ನು ಆಗಲೇ ಗಮನಿಸಿದ್ದೇವೆ. ಹಬ್ಬ, ವ್ರತಗಳಿಗೆ ಸಂಬಂಧಿಸಿದಂತೆಯೂ ಅಂಥ ನಿರ್ದಿಷ್ಟ ರಂಗೋಲಿಗಳಿವೆ. ಸಾರ್ವತ್ರಿಕತೆಯ ನಡುವೆಯೂ ಸಂಕೇತಿಗಳಿಗೇ ವಿಶಿಷ್ಟವಾದ ಕೆಲವು ಸಂದರ್ಭಗಳೂ ಪ್ರವೃತ್ತಿಗಳೂ ರಂಗೋಲಿಗೆ ಸಂಬಂಧಿಸಿದಂತೆ ಇರುವುದನ್ನು ಈ ನಿಬಂಧದಲ್ಲಿ ಬೇರೆಡೆ ಆನುಷಂಗಿಕವಾಗಿ ಸೂಚಿಸಿದೆ. ಹಬ್ಬಕ್ಕೆ ಸಂಬಂಧಿಸಿದಂತೆ ಕೆಲವು ನಿದರ್ಶನಗಳು:




138 ನಾಗಮಂಡಲ: ನಾಗರಪಂಚಮಿಯ ನಾಗಮಂಡಲ ರಂಗೋಲಿ: ಲಿಂಗದಹಳ್ಳಿ

0.0.1 ನಾಗರಪಂಚಮಿಯದಿನ ಮನೆಯತುಂಬ ಮಂಡಲಸರ್ಪಗಳನ್ನು ಬಿಡಿಸುವುದು ಲಿಂಗದಹಳ್ಳಿಯಲ್ಲಿ ವಿಶೇಷವಾಗಿ ರೂಢಿಯಲ್ಲಿದೆ. (ಚಿತ್ರ 138)

0.0.2 ಯಾವುದೇ ಹಬ್ಬದಲ್ಲಿ ಪದ್ಮ ಅಥವಾ ಸ್ವಸ್ತಿಕಗಳನ್ನು ಬಾಗಿಲೆದುರು ದೊಡ್ಡದಾಗಿ ಬಿಡಿಸುವುದು ಬೆಟ್ಟದಪುರ ಸಂಕೇತಿಗಳಲ್ಲಿ ನಿರ್ದಿಷ್ಟವಾಗಿ ನಡೆಯುತ್ತದೆ.

0.0.3 ಗೌರಿಹಬ್ಬದ ದಿನ ಹದಿನಾರು ಪದ್ಮ ಬರೆದು ಪ್ರತಿಯೊಂದಕ್ಕೂ ದೀಪ ಹಚ್ಚಿಕೊಂಡು ಪೂಜಿಸುವುದು ಮತ್ತೂರಿನ ವೈಶಿಷ್ಟ್ಯವಾಗಿದೆ.




139 ಉಪಾಕರ್ಮದಲ್ಲಿ ಕೃಷ್ಣನ ಉಡಿಗೆಜ್ಜೆ ಅಥವಾ ಪಾದಗಳನ್ನು ರಂಗೋಲಿಯಲ್ಲಿ ಮನೆಯ ಬಾಗಿಲಿನಿಂದ ದೇವರಮನೆಯುವರೆಗೆ ಬಿಡಿಸುತ್ತಾರೆ. ಉಪಾಕರ್ಮ ಮಾಡಿಕೊಂಡು ಬಂದವರು ಅದರಮೇಲೆ ನಡೆದುಹೋಗಿ ದೇವರಿಗೆ ಕೈ ಮುಗಿಯುತ್ತಾರೆ.

0.0.4 ಉಪಾಕರ್ಮ ಮುಗಿಸಿಕೊಂಡು ಮನೆಗೆಬಂದ ಪುರುಷರನ್ನು ಆರತಿಬೆಳಗಿ ಸ್ವಾಗತಿಸಲಾಗುತ್ತದೆ. ಮುಂಬಾಗಿಲಿನಿಂದ ದೇವರಮನೆಯವರೆಗೆ ರಂಗೋಲಿಯಲ್ಲಿ ಚಿತ್ರಿಸಿರುವ ಕೃಷ್ಣನ ಹೆಜ್ಜೆ ಅಥವಾ ಗೆಜ್ಜೆಯನ್ನನುಸರಿಸಿ ಅವರು ದೇವರಮನೆಗೆ ಹೋಗಿ ನಮಸ್ಕರಿಸಿ ಪ್ರಸಾದ ಸ್ವೀಕರಿಸುತ್ತಾರೆ (ಚಿತ್ರ 139).

---

[20] ... ಚೆಂಗಲ್‌ಪೇಟ್ ಜಿಲ್ಲೆಯವನಾದ ಹಾರೀತ ವೆಂಕಟಾಚಾರ್ಯ, (ತೋಳಪ್ಪರ್, ಕ್ರಿ.ಶ.೧೪೫೦-೧೫೦೦)ನ 'ಸ್ಮೃತಿ ರತ್ನಾಕರ' ವೈಷ್ಣವ ವಿದ್ವಾಂಸರ ಸಮೃದ್ಧಿಯ ಸಂಕೇತವಾಗಿತ್ತು. ಅದು ಇಂದಿಗೂ ದಕ್ಷಿಣದ ವೈಷ್ಣವರಿಂದ ಧರ್ಮಶಾಸ್ತ್ರದ ಸಪ್ರಮಾಣ ವ್ಯಾಖ್ಯಾನವೆಂದು ಸ್ವೀಕೃತವಾಗಿದೆ. ಪ್ರಾಯಃ ಹದಿನೇಳನೆಯ ಶತಮಾನದ ಪ್ರಾರಂಭದಲ್ಲಿ ವೈದ್ಯನಾಥ ದೀಕ್ಷಿತನು ಬರೆದ 'ಸ್ಮೃತಿ ಮುಕ್ತಾಫಲ' ಸ್ಮಾರ್ತರಿಗೆ ಅಂಥದೇ ಪ್ರಾಮುಖ್ಯದ ಗ್ರಂಥವಾಗಿದೆ. ವಿವರಗಳಿಗೆ ನೋಡಿ: A History of South India (from pre-historic times to the fall of Vijayanagar) 2nd Edn. p.359.



140 ವರಮಹಾಲಕ್ಷ್ಮಿ ಹಬ್ಬದಲ್ಲಿ ಲಕ್ಷ್ಮಿಯ ಹೆಜ್ಜೆಗಳನ್ನು ಬೀದಿಯಿಂದ ದೇವರಮನೆಯವರೆಗೆ ಬಿಡಿಸುತ್ತಾರೆ

ಹೀಗೆ ವೈವಿಧ್ಯಪೂರ್ಣವಾಗಿ ಅಭಿವ್ಯಕ್ತಿಗೊಳ್ಳುವ ರಂಗೋಲಿಗೆ ಸಂಕೇತಿಗಳು ಕೊಟ್ಟಿರುವ ಪ್ರಾಮುಖ್ಯಕ್ಕೆ 'ದಕ್ಷಿಣ'ದಲ್ಲಿ ಅದಕ್ಕಿರುವ ಸ್ಥಾನಮಾನದ ಪರಂಪರೆಯ ಮುಂದುವರಿಕೆಯೂ ಕಾರಣವಾಗಿದೆ.[21]

ಕೆಲವರಲ್ಲಿ - 'ವರಮಹಾಲಕ್ಷ್ಮಿ' ಹಬ್ಬದ ದಿನದಲ್ಲಿ ಬೀದಿ ಬಾಗಿಲಿನಿಂದ ದೇವರಮನೆಯವರೆಗೆ ಲಕ್ಷ್ಮಿಯ ಪಾದವನ್ನು ಚಿತ್ರಿಸುವ ಕ್ರಮ ಇದೆಯಾದರೂ, ಗೋಕುಲಾಷ್ಟಮಿಯಲ್ಲಿ ಕೃಷ್ಣನ ಹೆಜ್ಜೆಗಳನ್ನು ಚಿತ್ರಿಸುವ ಕ್ರಮ ಇಲ್ಲದುದನ್ನು ಇಲ್ಲಿಯೇ ಉಲ್ಲೇಖಿಸಬಹುದು. ಆದರೆ ಇಂಥ ಸಂಪ್ರದಾಯ ವೈವಿಧ್ಯಗಳಿಗೆ - ಸಂಕೇತಿಗಳ ಅದ್ವೈತ ಧೋರಣೆಯ ಹಿನ್ನೆಲೆಯಲ್ಲಿ - ಮಹತ್ತ್ವದ ತಾರ್ಕಿಕತೆಯೇನೂ ಇಲ್ಲವೆನ್ನಬೇಕಾಗಿದೆ (ಚಿತ್ರ 140).

ಇ. ಅನನ್ಯತೆ:

ಇಹಪರಗಳೆರಡನ್ನೂ ಗಮನದಲ್ಲಿರಿಸಿಕೊಂಡ ಪರ್ವಾಚರಣೆಗಳು ಸಂಸ್ಕೃತಿಸಂವರ್ಧಕ ಕಾರ್ಯಕ್ರಮಗಳು. ದೇಹದಂಡನೆ, ಸಂತೋಷ, ಸಂಭ್ರಮ, ವೈಭವ, ಮನೋರಂಜನೆ, ಬಂಧುತ್ವವರ್ಧನೆ, ಪೂಜೆ-ಪುರಸ್ಕಾರ, ದಾನ, ಜಪ - ಎಲ್ಲವೂ ಅವುಗಳ ಅಂಗಗಳು. ಅಲ್ಲಿ ಕೃತಜ್ಞತೆ, ಭೀತಿ, ಕಾಮನೆ, ಮೋಕ್ಷಾಕಾಂಕ್ಷೆ ಎಲ್ಲವೂ ಕೆಲಸ ಮಾಡಿವೆ. ಸ್ವರ್ಗ, ಮೋಕ್ಷ, ಬ್ರಹ್ಮಜ್ಞಾನದ ಕ್ರಮಬದ್ಧವಿಕಾಸವು - ವೈವಿಧ್ಯಪೂರ್ಣ ದೇವತೆಗಳ ಆರಾಧನೆಯು ಪರಮೇಶ್ವರ (ಪರಬ್ರಹ್ಮ) ಪ್ರೀತ್ಯರ್ಥವಾಗಿ ನಡೆಯುವ ಮೂಲಕ ಆಗಿದೆ. ವೇದಗಳಲ್ಲಿ ಅಂಕುರರೂಪದಲ್ಲಿದ್ದು ಪುರಾಣದಲ್ಲಿ ಪ್ರಕಟವಾಗಿ ಹಬ್ಬಗಳ ರೂಪದಲ್ಲಿ ಆಚರಣೆಗೊಳ್ಳುತ್ತಿರುವುದು ವೇದಮಾರ್ಗದ ಮುಂದುವರಿಕೆಯಾಗಿ 'ಏಕದೇವ' ಭಾವವನ್ನು ಬಲಗೊಳಿಸುತ್ತದೆ; ಶಮಾದಿಷಡ್ಗುಣಗಳ ಸಾಧನೆಗೆ ನಿತ್ಯನೈಮಿತ್ತಿಕಕಾಮ್ಯಗಳೆಲ್ಲವೂ ಮಾಧ್ಯಮಗಳಾದಾಗ ಅವು ಅರ್ಥಪೂರ್ಣವಾಗುತ್ತವೆ. ಆದುದರಿಂದಲೇ, ಕರ್ನಾಟಕ-ದಕ್ಷಿಣ;ಇಲ್ಲವೆ ಕರ್ನಾಟಕದಲ್ಲಿಯೇ ಕಾಣುವ ಪ್ರಾಂತ ವೈವಿಧ್ಯಗಳು (ಪಟ್ಟಿ 17, 19, 20 ಪು.319-326) ಈ ಸಂಬಂಧದ ಲೋಪಾಧಿಕಗಳಾಗುವುದಿಲ್ಲ. ಇವು ಕೇವಲ ಪರಬ್ರಹ್ಮಸಾಧನೆಯ ಮಾಧ್ಯಮಗಳಾದುದರಿಂದ ಇವುಗಳ ಆಚರಣೆಯಲ್ಲಿ ನಮ್ಯತೆಯು ಸಹಜ, ಸಾಧ್ಯ, ಮತ್ತು ಅಗತ್ಯ. ಸಾಧನೆಯ ವಿವಿಧ ಸ್ತರಗಳಲ್ಲಿರುವವರ ಅಗತ್ಯಗಳು ವಿವಿಧ ಪ್ರಮಾಣದ ಆಚರಣೆಗಳನ್ನು (ಗುರಿಸಾಧನೆಗಾಗಿ) ನಿರೀಕ್ಷಿಸುತ್ತವೆ. ಬ್ರಹ್ಮಸಾಕ್ಷಾತ್ಕಾರದ ಸ್ತರದಲ್ಲಿಯೇ ಎಲ್ಲರ ವ್ಯವಹಾರಗಳೂ ಯಾವಾಗಲೂ ಪರಿಣಾಮಗೊಳ್ಳುತ್ತಿವೆ ಎನ್ನುವುದು ಪೂರ್ಣವಾಗಿ ಅಸತ್ಯವಾಗುತ್ತದೆ. ಆದರೆ ನಿಶ್ಚಯವಾಗಿಯೂ ಬದುಕನ್ನು ಸಹನೆ, ಶಾಂತಿ, ಪ್ರೀತಿಯ ಪಾತಳಿಯಲ್ಲಿ ನಡೆಸಲು ಅವು ನೆರವಾಗಿವೆ ಎಂಬುದನ್ನು ಸಂಕೇತಿಗಳ ಬದುಕಿನಲ್ಲಿ ಕಾಣಬಹುದು.

ಹೀಗೆ ಹಬ್ಬಗಳ ಮೂಲಕ ವಿಶೇಷವಾಗಿ ಪ್ರಕಟವಾಗಿರುವ ಸಂಕೇತಿಗಳ ಸಾಂಸ್ಕೃತಿಕ ಸ್ವರೂಪವನ್ನು ಇಲ್ಲಿ ಕ್ರೋಡೀಕರಿಸಬಹುದು: ಅವರದೇ ಆದ ವಿಶಿಷ್ಟ ಆಚರಣೆಗಳು ಹಬ್ಬಗಳ ಭಾಗವಾಗಿ ಬೆಳೆದಿರುವುದು ಅವರ ಸ್ವೋಪಜ್ಞತೆಯನ್ನು ಸೂಚಿಸುತ್ತದೆ. ಪ್ರಯೋಜಕತೆ ಮತ್ತು ಸಮೂಹಸನ್ನಿಯ ಕಾರಣದಿಂದಾಗಿ ಇಂದಿಗೂ ಸ್ವೀಕಾರಗಳು ಮುಂದುವರಿದಿವೆ. ವಿಶ್ವಸಾಮಾನ್ಯಗಳ ಸ್ವೀಕಾರದಿಂದಾಗಿ ವಿವಿಧ ಪ್ರಮಾಣ, ಸ್ವರೂಪಗಳಲ್ಲಿ ಪ್ರಾದೇಶಿಕ ಭಿನ್ನತೆ ತಲೆದೋರಿದೆ. ಅದರಿಂದಾಗಿ ಹಳೆಯ ವಿವರಗಳನ್ನು ಬಿಟ್ಟುಕೊಡುವುದು, ಹೊಸವನ್ನು

---

[21] ವಿವರಗಳಿಗೆ ನೋಡಿ :

ತರಂಗ, ಸರ್ಪದ ವಿಶ್ವರೂಪ: ಕೇರಳೀಯರ ವೈಶಿಷ್ಟ್ಯ, ಡಾ.ಯು.ಪಿ.ಉಪಾಧ್ಯಾಯ, ಪು.೬೬; ತಮಿಳರ ಕೋಲಂ, ಡಾ.ಸುಶೀಲಾ ಪಿ.ಉಪಾಧ್ಯಾಯ, ಪು.೭೦; ೨೧, ಅಕ್ಟೋಬರ್, ೧೯೯೦.

ಸೇರಿಸಿಕೊಳ್ಳುವುದು ನಡೆದಿದೆ. ಒಂದೇ ಆಚರಣೆ ಭಿನ್ನವಾಗಿ ಅಭಿವ್ಯಕ್ತಿಗೊಳ್ಳುತ್ತಿರುವುದೂ ಉಂಟು. ಸಂಸ್ಕೃತಿಯ ಮೂಲಾಂಶವೂ ಬದಲಾಗಿದೆ. ಇಷ್ಟರನಡುವೆಯೂ, ಉಳಿದುಬಂದ ಗಾಢ ಸಾಮ್ಯಗಳೂ ಇವೆ. ಸನ್ನಿವೇಶಾನುಕೂಲವನ್ನು ಅನುಸರಿಸಿ ಪ್ರಾದೇಶಿಕ ಏರುಪೇರುಗಳಿವೆ. ನಾನಾ ಕಾರಣಗಳಿಂದ ನಾನಾರೀತಿಯ ಶೈಥಿಲ್ಯಗಳು ಸಂಭವಿಸುತ್ತಿವೆ. ಮೂಲ ಆಶಯಗಳನ್ನು ಮರೆತ ವಿಕೃತಿಗಳಿವೆ. ಸರಳ ಆಚರಣೆಗಳು ಸಂಕೀರ್ಣತೆಯನ್ನು ಪಡೆದಿವೆ. ಬ್ರಾಹ್ಮಣೇತರರಿಂದಲೂ ಸ್ವೀಕಾರಗಳು ನಡೆದಿವೆ. ಪ್ರಧಾನಹಬ್ಬಗಳು ಹಿರಿಯರಿರುವ ಎಡೆಯಲ್ಲಿಯೇ ನಡೆಯುತ್ತವೆ. ಈ ಸಂಬಂಧದ ನಂಬಿಕೆಗಳಲ್ಲಿ ಭಾವುಕತೆಯ ಅಂಶವಿದೆ. ಹಬ್ಬದ ಭಾಗವಾಗಿ ಅಲ್ಪಪ್ರಮಾಣದಲ್ಲಿ ಕ್ರೀಡೆ, ಮನೋರಂಜನೆ ಇದೆ. ಮಕ್ಕಳಿಗೆ ವಿಶೇಷ ಪ್ರಾಶಸ್ತ್ಯವಿದೆ; ಬಂಧುತ್ವದ ಅತಿಶಯತೆಗೆ ಒತ್ತು ಇದೆ. ಶುಭಕಾಮನೆಗಳ ವಾತ್ಸಲ್ಯಪೂರ್ಣ ಮೆರುಗು ಇದೆ. ಮುಖ್ಯವಾಗಿ ಸಂಪತ್ತು, ಸಂತಾನ, ಸದ್ಗತಿಗಾಗಿ ಪ್ರಾರ್ಥನೆ ಇದೆ. ಗೌರಿಗೆ ವ್ಯಾಪಕ ಪ್ರಾಶಸ್ತ್ಯವಿರುವುದು ಮುತ್ತೈದೆತನಕ್ಕಿರುವ ತವಕದಿಂದ; ಆದರೆ ಪಾರ್ವತಿಯ ಉಗ್ರರೂಪಕ್ಕೆ ಪ್ರಾಮುಖ್ಯವಿಲ್ಲ. ಲಕ್ಷ್ಮಿಯ ಬಗೆಗೆ ಗೌರವ, ಆದರ ಇದೆಯಾದರೂ ಆ ಸಂಬಂಧದ ತುಡಿತವು ಆಚರಣೆಗಳಲ್ಲಿ ಕಾಣದು; ಸರಸ್ವತಿ ಮಾನ್ಯಳಾದರೂ ಸಂಖ್ಯೆಯ ದೃಷ್ಟಿಯಿಂದ ಹೆಚ್ಚಿನ ಆಚರಣೆಗಳಿಲ್ಲ. ಬಹುದೇವತೆಗಳಲ್ಲಿ ನಿರ್ದಿಷ್ಟದೇವತೆಗಳಿಗೆ ಸಾಂದರ್ಭಿಕವಾದ ಒತ್ತು ಇದೆ. ಆದರೆ ಎಲ್ಲ ದೇವತೆಗಳ ಪೂಜಾಭಾವದಲ್ಲಿ ಸಮನ್ವಯ ಇದ್ದು, ಮೂಲದಲ್ಲಿ ಏಕದೇವಭಾವದ ಅನುಭವವೇ ಜಾಗೃತವಾಗಿದೆ.

೩. ನಂಬಿಕೆ: ವಿಧಿ, ನಿಷೇಧ: ಮಾಟ ಮಂತ್ರ

ಹಬ್ಬಗಳ ವಿವರಗಳಲ್ಲಿ ವ್ಯಕ್ತವಾದ, ಸಂಕೇತಿ ಸಮುದಾಯದ ಸಂಸ್ಕೃತಿಯ ಅನನ್ಯತೆಯನ್ನು ನೋಡಿದ್ದೇವೆ. ಈ ಹಿಂದಿನ ಅಧ್ಯಾಯಗಳಲ್ಲಿ ಆನುಷಂಗಿಕವಾಗಿ ಸಂಕೇತಿಗಳ ನಂಬಿಕೆ, ವಿಧಿ, ನಿಷೇಧಗಳನ್ನು ಅವಲೋಕಿಸಿದೆ. ಆದರೂ, ಇವುಗಳ ಸಮಗ್ರವಾದ ಅವಲೋಕನವನ್ನು, ಅವರ ವೈಶಿಷ್ಟ್ಯಗಳ ಪ್ರಾತಿನಿಧಿಕ ನಿದರ್ಶನಗಳ ಮೂಲಕ ಮಾಡುವ ಉದ್ದೇಶವನ್ನು ಇಲ್ಲಿ ಇಟ್ಟುಕೊಂಡಿದೆ.

ಯಾವುದೇ ಸಮುದಾಯಕ್ಕೆ ಮೀಸಲೆನ್ನಬಹುದಾದ ನಿರ್ದಿಷ್ಟ ನಂಬಿಕೆಗಳನ್ನು ಘೋಷಿಸುವುದಕ್ಕೆ ಕಠಿಣವೆನ್ನುವಂತಹ ಸಂಕೀರ್ಣಸ್ವರೂಪವು ಅದಕ್ಕಿರಲು ಕಾರಣಗಳಿವೆ:

* ಹಲವು ಸಮುದಾಯಗಳ ಮಿಶ್ರ ಸಂಸ್ಕೃತಿಯು ಭಾರತದಲ್ಲಿರುವುದು.
* ಸಮಾನ ಆಕರಗಳನ್ನು ಅವಲಂಬಿಸುವುದು.
* ಪ್ರಯೋಜಕ ನಂಬಿಕೆಗಳಿಗೆ ಹೇಗೋ ಹಾಗೆಯೇ ಭೀತಿಮೂಲ ನಂಬಿಕೆಗಳಿಗೂ ಮುಕ್ತ ಸ್ವೀಕೃತಿ ಇರುವುದು.
* ಸ್ವೀಕರಿಸುವವನೇ ಪ್ರಸಾರಕನೂ ಪ್ರೇರಕನೂ ಆಗುವುದು.
* ಎಲ್ಲರೂ ಎಲ್ಲರಿಂದಲೂ ಸ್ವೀಕರಿಸುವ ಪ್ರವೃತ್ತಿ.
* ಸಮುದಾಯವೊಂದರಲ್ಲಿಯೇ ವಿವಿಧ ಪ್ರದೇಶಗಳಲ್ಲಿ ವಿವಿಧ ಸ್ವೀಕೃತಿಗಳು ವಿವಿಧ ಪ್ರಮಾಣ ಮತ್ತು ಹಂತಗಳಲ್ಲಿರುವುದು ಇತ್ಯಾದಿ.

ನಮ್ಮೆಲ್ಲ ಅನುಭವಗಳ ಮೊತ್ತವಾದ ನಂಬಿಕೆಯು ಭಾವಮೂಲವಾದುದೆ, ಬುದ್ಧಿಮೂಲವಾದುದೆ, ಮೂಢನಂಬಿಕೆಯ ಆಧಾರಿತವೇ ಎಂಬುದು ಎಲ್ಲ ಸಂದರ್ಭಗಳಲ್ಲಿ ನಿಚ್ಚಳ ನಿರ್ಣಯಕ್ಕೆ ದಕ್ಕದಿರಬಹುದು. ಆದರೆ ನಂಬಿಕೆಯ ಸಂಕೀರ್ಣಸ್ವರೂಪದ[22] ಬೆಳವಣಿಗೆಯು

---

[22] ನಂಬಿಕೆ (belief) ಎಂಬುದು ವಿವಿಧ ಅರ್ಥಮುಖಗಳನ್ನು ಪಡೆದಿದೆ: ಮೂಢನಂಬಿಕೆ (superstition), ಅಭಿಪ್ರಾಯ (opinion), ಸಂಪ್ರದಾಯ (convention), ಪರಂಪರೆ (tradition), ತೀರ್ಮಾನ (judgement), ಪರಿಕಲ್ಪನೆ (concept), ತತ್ತ್ವ (principle), ಸಿದ್ಧಾಂತ (theory), ವಿಶ್ವಾಸ (faith), ಇತ್ಯಾದಿ.
ನೋಡಿ: ತುಮಕೂರು ಜಿಲ್ಲೆಯ ಜನಪದ ನಂಬಿಕೆಗಳು, ಎನ್.ಎಸ್.ತಿಮ್ಮೇಗೌಡ, ಕಸಾಪ, ೧೯೮೧, ಪು.೧.

ಮಾನವನ ಅಗತ್ಯವನ್ನು ಪೂರೈಸಲೆಂದೇ ಆಗಿದೆ. ನಂಬಿಕೆ ಇಲ್ಲದ ಮಾನವನು ಬುಡಮಟ್ಟದಲ್ಲಿ ನಿಷ್ಫಲನೂ ಹತಾಶನೂ ಭೀತನೂ ಆಗಿರುವ ಸಾಧ್ಯತೆಯನ್ನು ತಳ್ಳಿಹಾಕಲಾಗುವುದಿಲ್ಲ.

ಅ) ನಂಬಿಕೆಗಳ ಸ್ವರೂಪ: ಭಾರತೀಯರ ಜೀವನವನ್ನು ಪ್ರತ್ಯಕ್ಷವಾಗಿ ಇಲ್ಲವೆ ಪರೋಕ್ಷವಾಗಿ ವೇದೋಪನಿಷತ್ತುಗಳು, ಇತಿಹಾಸ, ಪುರಾಣ, ಗೃಹ್ಯಸೂತ್ರ, ಧರ್ಮಶಾಸ್ತ್ರಗಳು ಪ್ರಭಾವಿಸಿವೆ; ಬ್ರಾಹ್ಮಣರ ವಿಷಯದಲ್ಲಿ ಗಾಢವಾಗಿ ನಿಯಂತ್ರಿಸಿವೆ. ಜ್ಯೋತಿಷ್ಯ ಶಕುನ, ತಂತ್ರ ಮೊದಲಾದವಕ್ಕೆ ಕೂಡ ಆಕರ ಗ್ರಂಥಗಳಿವೆ. ಮನುಸ್ಮೃತಿ ಮತ್ತು ಇತರ ಸ್ಮೃತಿಗಳು ಅನೇಕ ಶತಮಾನಗಳಿಂದ ಜೀವನವನ್ನು ಗಾಢವಾಗಿ ರೂಪಿಸಿವೆ. ಸಂಕೇತಿಗಳ ವಿವಿಧ ನೆಲೆಗಳಲ್ಲಿ ನಡೆಸಿದ ಕ್ಷೇತ್ರಕಾರ್ಯದ ಸಂದರ್ಭದಲ್ಲಿ ದೊರಕಿದ ಕೆಲವು ಪ್ರಸಂಗಗಳ ಆಧಾರದ ಮೇಲೆ ನಂಬಿಕೆಗಳ ಸ್ವರೂಪದ ಬಗೆಗೆ[23] ಕೆಲವು ಸಂಗತಿಗಳನ್ನು ಇಲ್ಲಿ ಪ್ರತಿಪಾದಿಸಿದೆ.

1. ವೈಯಕ್ತಿಕ ನಂಬಿಕೆಗೆ ಸಾರ್ವತ್ರಿಕತೆ ದೊರೆಯುವುದು:

ಅಣ್ಣ, ತಂಗಿ ಮುಂಜಾವಿನ ನಸುಗತ್ತಲಲ್ಲಿ ದೇವಸ್ಥಾನಕ್ಕೆ ಹೊರಟರು. ತಂಗಿಗೆ ರೋಗವು ಗುಣವಾಗಲೆಂದು ಪೂಜೆ ಮಾಡುವುದು ಉದ್ದೇಶ. ಅಣ್ಣನು ಪೂಜೆಗೆ ಕುಳಿತ. ನಿರ್ಮಾಲ್ಯವನ್ನು ತೆಗೆಯಲು ಕೈ ಹಾಕಿದ. ಏನೋ ಮೆತ್ತಗಾದ ಹಾಗಾಯಿತು. ದೀಪಹಚ್ಚಿ ನೋಡಿದ. ಸರ್ಪವೊಂದು ಶಿವಲಿಂಗದ ಮೇಲಿತ್ತು. ಆದರೆ, ಬಾಲವು ಮೇಲೆ; ಹೆಡೆಯು ಕೆಳಗೆ. ತಂಗಿಯು ಒಂದು ವಾರದಲ್ಲಿ ಸತ್ತಳು. ಹೆಡೆ ತಳಮುಖವಾಗಿದ್ದ ಸರ್ಪದರ್ಶನವಾದರೆ ಅಪಶಕುನ ಎಂಬ ನಂಬಿಕೆ ಹಟ್ಟಿಕೊಂಡಿತು; ಪ್ರಸಾರವೂ ಆಯಿತು. ಈ ಪ್ರಸಂಗ ವ್ಯಕ್ತಿಗತ ನಂಬಿಕೆ ಸಾರ್ವತ್ರಿಕ ನಂಬಿಕೆ ಆಗಿ ರೂಪುಗೊಂಡುದಕ್ಕೆ ನಿದರ್ಶನವಾಗಿದೆ.

2. ಇದ್ದ ನಂಬಿಕೆಯೇ ಖಚಿತಗೊಳ್ಳುವುದು:

ಮಧ್ಯದೇಶದ ಒಂದು ಹಳ್ಳಿಯವರು ಪ್ಲೇಗಿನ ಕಾರಣದಿಂದ ಊರು ಖಾಲಿಮಾಡಿ ಬೋರೆಯ ಮೇಲೆ ಹೋಗಿ ಗುಡಿಸಿಲು ಹಾಕಿಕೊಂಡರು. ಇಡೀ ಹಳ್ಳಿಯೇ ಖಾಲಿಯಾಯಿತು. ಒಂದು ಮನೆಯವರು, ಹೀಗೆ ಹೋಗುವ ಆತುರದಲ್ಲಿ ಕೊಟ್ಟಿಗೆಯಲ್ಲಿ ಕಟ್ಟಿದ್ದ ಕರುವನ್ನು ಮರೆತುಬಿಟ್ಟಿದ್ದರು. ಅದು ಹಸಿವಿನಿಂದ ಅರಚಿಕೊಳ್ಳುವುದು ಬೋರೆಗೂ ಕೇಳಿಸುತ್ತಿತ್ತು. ಆದರೆ ಊರೊಳಗೆ ಹೋಗದಂತೆ ನಿಷೇಧವಿತ್ತು; ಆ ಮನೆಯವರನ್ನೂ ತಡೆದರು. ಹಸಿವಿನಿಂದ ಅರಚಿ ಅರಚಿ ಕರು ಸತ್ತಿತ್ತು. ಕೆಲವು ಕಾಲದಲ್ಲಿ ಆ ಮನೆತನವೇ ಪೂರ್ಣವಾಗಿ ನಾಶವಾಯಿತು. ಅದು ಗೋಶಾಪದ ಫಲ ಎಂದು ಜನಜನಿತವಾಯಿತು. ಗೋಶಾಪದ ಫಲದ ನಂಬಿಕೆ ಈ ಘಟನೆಯಿಂದ ಜನರಲ್ಲಿ ಚೆನ್ನಾಗಿ ತಳವೂರಿತು.

3. ಕಾಕತಾಳೀಯ ನ್ಯಾಯ:

ಒಬ್ಬ ಆಸ್ತಿಕರು ರಥೋತ್ಸವವೊಂದರ ಸಂದರ್ಭದಲ್ಲಿ ಅನೂಚಾನವಾಗಿ ಭೋಜನಕೂಟ ನಡೆಸುತ್ತಿದ್ದರು. ಕಾರಣಾಂತರದಿಂದ ಅದನ್ನು ನಿಲ್ಲಿಸಿದರು. ಕಷ್ಟಗಳ ಮೇಲೆ ಕಷ್ಟಗಳೊದಗಿದವು. ಮತ್ತೆ ಭೋಜನಕೂಟವನ್ನು ಮುಂದುವರಿಸಿದರು. ಕಷ್ಟ ಪರಿಹಾರವಾಯಿತು. ಈಗ ಕಷ್ಟ ಪರಿಹಾರಕ್ಕೂ ರಥೋತ್ಸವದ ಭೋಜನಕ್ಕೂ ಸಂಬಂಧವನ್ನು ಕಾಕತಾಳೀಯನ್ಯಾಯವಾಗಿ ಕಲ್ಪಿಸಲಾಗಿದೆ.

4. ಅಂಜಿಕೆ:

ಪುರೋಹಿತರೊಬ್ಬರು, ತಮ್ಮ ಹೆಂಡತಿ ಗರ್ಭಿಣಿಯಾದಾಗ ಸೀಮಂತ ನಡೆಸಿದರು. ಗಂಡು ಮಗು ಹುಟ್ಟಿತು; ಆದರೆ ಆಮೇಲೆ ಸತ್ತಿತು. ಅವರ ಮನೆತನದವರು ಸೀಮಂತಗಳನ್ನೇ ವರ್ಜಿಸಿದರು. ಚೌಲ ಮಾಡಿದಾಗ ಮಗನು ಸತ್ತ; ಚೌಲದ ಬದಲು 'ಜುಟ್ಟು'

[23] ಅದು ಒಂದು ಗುಂಪಿನಿಂದ ಒಪ್ಪಿತವಾದ ಮಾನವ ವರ್ತನೆಯ ಪಾರಂಪರಿಕ ಮಾದರಿ. ವ್ಯಕ್ತಿ ಪ್ರವೃತ್ತಿ ಸೇರಿಲ್ಲ. ಸಂಪ್ರದಾಯವು, ಜನಪದರು ಏನು ಮಾಡುತ್ತಾರೋ ಅದು. ನಂಬಿಕೆ, ಅವರು ಅದನ್ನು ಏಕೆ ಮಾಡುತ್ತಾರೆಂದು ಯೋಚಿಸುತ್ತಾರೋ ಅದು. Standard Dictionary of Folklore Mythology and Legend, Ed.Maria Leach, Funk & Wagnalls Company, New York, Vol 2, p.1143.

ಮಾಡತೊಡಗಿದರು. ಈಗ ಅದೇ ಒಂದು 'ಸಂಪ್ರದಾಯ'ವಾಗಿ ಬೆಳೆದಿದೆ.[24] ಈ ನಂಬಿಕೆಗಳ ಹಿನ್ನೆಲೆಯಲ್ಲಿ 'ಅಂಜಿಕೆ' ಪರಿಣಾಮ ಬೀರಿರುವುದನ್ನು ಕಾಣಬಹುದು.

5. **ಕೃತಜ್ಞತೆ:**

ಮನೆಯಲ್ಲಿ ಎಲ್ಲರಿಗೂ ಕಜ್ಜಿ ಹತ್ತಿತು; 'ಶಾಸ್ತ್ರ' ಕೇಳಿದರು. ಸುಬ್ರಹ್ಮಣ್ಯೇಶ್ವರನ ಪೂಜೆ ಮಾಡುವಂತೆ ಆದೇಶವಾಯಿತು. ಅವರು ಹಾಗೆಯೇ ಮಾಡಿದರು; ಎಲ್ಲರ ಕಜ್ಜಿ ವಾಸಿಯಾಯಿತು. ಪಂಚಾಯತನದ ಜೊತೆಗೆ ಸುಬ್ರಹ್ಮಣ್ಯನನ್ನೂ ಇಟ್ಟು ಪೂಜಿಸುವುದು ಸಂಪ್ರದಾಯವಾಯಿತು. 'ಕೃತಜ್ಞತಾಭಾವ' ಈ ಸಂಪ್ರದಾಯದಲ್ಲಿ ಅಡಕವಾಗಿದೆ. ತನ್ನ ಸಮುದಾಯದ ನಾಯಕಿಯ (ನಾಚಾರಮ್ಮ) ಆದೇಶದಂತೆ ಗಂಡೀಸೀರೆ ಉಡತೊಡಗಿದುದು; ಕೃತಜ್ಞತೆಯಿಂದ ಆಕೆಯ ಹೆಸರನ್ನು ಮಕ್ಕಳಿಗೆ ಇಡತೊಡಗಿದುದು - ಇವು ಸಹ ಕೃತಜ್ಞತಾಭಾವದ ನೆಲೆಯ ನಂಬಿಕೆಗಳೇ ಆಗಿವೆ.

ಆ) ನಂಬಿಕೆಗಳ ಪ್ರಾತಿನಿಧಿಕ ಅವಲೋಕನ:

ನಂಬಿಕೆಗಳ ಸಂಗ್ರಹ ಮತ್ತು ವಿಶ್ಲೇಷಣೆ ವಿದ್ವಾಂಸರಿಂದ ಈಗಾಗಲೇ ವಿಪುಲವಾಗಿ ನಡೆದಿದೆ; ಜಗತ್ತಿನ ವಿದ್ವಾಂಸರಿಂದ ಚರ್ಚಿತವಾಗಿದೆ. ಆದರೆ ಸಂಕೇತಿ ಸಮುದಾಯದಲ್ಲಿ ನಂಬಿಕೆಗಳ ಸ್ವರೂಪಕ್ಕಾಗಿ ಇಲ್ಲಿ ಕೆಲವು ಪ್ರಾತಿನಿಧಿಕ ಅವಲೋಕನಗಳನ್ನು ಮಾಡಿದೆ. ಶಕುನ, ಕನಸು, ಮಾಟ ಮಂತ್ರಗಳನ್ನೂ ಅದರ ಭಾಗವಾಗಿ ಮಾಡಿಕೊಂಡಿದೆ:

1. **ದೈವ:**

ದಿನನಿತ್ಯದ ವ್ಯವಹಾರಗಳಲ್ಲಿ ದೇವದೇವತೆಗಳಿಗೆ ಭಯಭಕ್ತಿಯಿಂದ ನಡೆದುಕೊಳ್ಳುವುದು ಕಂಡುಬರುತ್ತದೆ. ಊಟಕ್ಕೆ ಕೂರುವುದು, ಪೂಜೆಗೆ ಕೂರುವುದು, ತರಕಾರಿಹೆಚ್ಚಲು ಕೂರುವುದು - ಇಂಥ ಎಲ್ಲ ವಿವರಗಳೂ 'ದಿಕ್ಕುಶುದ್ಧಿ'ಗೆ ಮಹತ್ತ್ವ ಕೊಡುತ್ತವೆ. ಯಾವಾಗಲೂ ಕಾಲುನೀಡಿ ಕೂರುವಂತಿಲ್ಲ; ಮುಚ್ಚಂಜೆಯಲ್ಲಿ ಹಾಗೆ ಕುಳಿತರಂತೂ, 'ತಿರಸ್ಕೃತ'ಳಾದ ಲಕ್ಷ್ಮಿಯು ಹೊರಟೇ ಹೋಗುತ್ತಾಳೆಂದು ಅಂಜುತ್ತಾರೆ. ಅನ್ನವು ಬದುಕಿನ ಆಸರೆಯಾದುದರಿಂದ ಅದು ದೇವತೆ; ಗೊಬ್ಬರವು ಅನ್ನವನ್ನು ಬೆಳೆಯುವ ಪರಿಕರವಾದುದರಿಂದ ಅದೂ ದೇವತೆಯೇ; ಪುಸ್ತಕವು ವಿದ್ಯೆಯ ಮಾಧ್ಯಮವಾದುದರಿಂದ ಅದು ದೇವತೆ; ಪ್ರತಿ ವ್ಯಕ್ತಿಯಲ್ಲಿಯೂ ಆತ್ಮ ಇರುವುದರಿಂದ ಅವನೂ ದೈವಾಂಶ. ಹಾಗಾಗಿ ವ್ಯಕ್ತಿಗಾಗಲಿ, ಪುಸ್ತಕಕ್ಕಾಗಲಿ ಕಾಲುಸೋಕಿಸಿದರೆ ಅಪಚಾರ; ಪರಿಹಾರಕ್ಕೆ ಕಣ್ಣಿಗೊತ್ತಿಕೊಳ್ಳಬೇಕು; ಇಲ್ಲದಿದ್ದರೆ ಕೇಡು. ಮೆಣಸಿನಪುಡಿ ಹುರಿಯುವುದು, ಗೋಡೆಯ ಧೂಳುಹೊಡೆಯುವುದು ಶುಕ್ರವಾರಗಳಲ್ಲಿ ನಿಷಿದ್ಧ. ಹಾಗೆ ಮಾಡಿದರೆ ಲಕ್ಷ್ಮಿಗೆ ಘಾಟು ಆಗಿ ಹೊರಟುಹೋಗುತ್ತಾಳೆಂಬುದು ನಂಬಿಕೆ. ಸಂಜೆ ಅರ್ಧಬಾಗಿಲು ತೆಗೆಯುವುದು, 'ಒಳಗಿನ ಲಕ್ಷ್ಮಿ ಹೊರಗೆಹೋಗಲಾರಳು ಮತ್ತು ಹೊರಗಿನ ಲಕ್ಷ್ಮಿ ಒಳಗೆ ಬರುವಳು' ಎಂಬ ನಿರೀಕ್ಷೆಯಿಂದ.

ದೇವರ ಅಸ್ತಿತ್ವವನ್ನು ಎಲ್ಲೆಡೆಯೂ ಯಾವಾಗಲೂ ಅನುಭವಿಸುವ ಮನಸ್ಸು ರೂಪಿಸಿಕೊಂಡ ನಂಬಿಕೆಗಳು ಮನುಷ್ಯನ ವರ್ತನೆಗಳನ್ನು ದೈವಕ್ಕೂ ಆರೋಪಿಸಿರುವುದನ್ನು ಇಲ್ಲಿ ಕಾಣಬಹುದು.

2. **ಮಡಿ-ಮೈಲಿಗೆ:**

ನಿತ್ಯವೂ ಸ್ನಾನ; ಒಣಗಿದ ಮಡಿಬಟ್ಟೆ ಧರಿಸುವುದು; ನಾಯಿ, ಕಾಗೆ ಹಂದಿಗಳನ್ನು ಮುಟ್ಟಿಸಿಕೊಳ್ಳದಿರುವುದು; ಯಾವುದನ್ನೂ ಕಚ್ಚಿಕೊಂಡು ತಿನ್ನದಿರುವುದು; ಒಬ್ಬರ ಎಂಜಲು ಒಬ್ಬರು ತಿನ್ನದುದು; ಬೇರೆಯವರ ಬಟ್ಟೆ ಉಪಯೋಗಿಸದುದು; ರಜಸ್ವಲೆಯಾದವರನ್ನು ಪ್ರತ್ಯೇಕಿಸಿ ಇಡುವುದು - ಇವೆಲ್ಲವೂ ಶುಚಿಗೆ ಮಹತ್ವಕೊಟ್ಟ ರೂಢಿಗಳು. ವೈದ್ಯವಿಜ್ಞಾನವೂ ಇದನ್ನು ಸಮರ್ಥಿಸುತ್ತದೆ. ಆದರೆ

---

[24] ಸಂಸ್ಕಾರ (ಆಚರಣೆ)ಗಳು ಹೇಗೂ ನಂಬಿಕೆಯ ಕಾರ್ಯರೂಪವೇ ಆಗಿವೆ. ನೋಡಿ: Cultural Anthropology: Abridged revision of 'Man and his works', Herskovits (Melville F), India Book House, New Delhi, 1974, p.230.

ಇಂಥ ಕಾರಣಕ್ಕಾಗಿ "ಸಮಾಜದ ಒಂದು ವರ್ಗವೇ ಜನ್ಮತಃ 'ಅಸ್ಪೃಶ್ಯ'ರಾಗಿ ಉಳಿದುಬಿಡುವುದು ಅಜ್ಞಾನದ ವಿಜೃಂಭಣೆಯಾಗಿದೆ." ಮೂಲ ಆಶಯವನ್ನು ಮರೆತು ವಿಕೃತಿಗಳು ರೂಪುಗೊಳ್ಳುವುದರ ನಿದರ್ಶನವೂ ಇದಾಗಿದೆ.

3. ಆಯುಷ್ಕರ್ಮ:

ಅದಕ್ಕಾಗಿ ಒಳ್ಳೆಯ ದಿನದ ಆಯ್ಕೆ, ಬೆಳಗ್ಗೆ ಮಾತ್ರ ಕ್ಷೌರ ಮಾಡಿಸಿಕೊಳ್ಳುವ ಪದ್ಧತಿಯ ಹಿಂದೆ ಬಾಹ್ಯವಿಶ್ವವು ಭೂಜೀವಿಗಳ ಮೇಲೆ ಪರಿಣಾಮ ಬೀರುತ್ತದೆಂಬ ನಂಬಿಕೆ ಕೆಲಸಮಾಡಿದೆ. ನಾಪಿತನ ಮನೆಗೆ ಹೋಗಿ ಕ್ಷೌರ ಮಾಡಿಸಿಕೊಂಡರೆ ಸರ್ವನಾಶವಾಗುತ್ತದೆಂಬ ನಂಬಿಕೆಯ ಹಿಂದೆ, ತಮ್ಮ ಕೂದಲು ವಾಮಾಚಾರಿಗಳಿಗೆ ಸಿಗುತ್ತದೆಂಬ ಭೀತಿ ಕೆಲಸಮಾಡಿದೆ. ಉಗುರನ್ನು ಯಾರೂ ತುಳಿಯದ ಜಾಗಕ್ಕೆ ಹಾಕಿ "ಸಾಕ್ಷಿ, ಸಾಕ್ಷಿ" ಎನ್ನುವುದೂ, ಬಿದ್ದ ಹಲ್ಲನ್ನು ಸಗಣಿಯಲ್ಲಿ ಮೆತ್ತಿ ಮನೆಯಮೇಲೆ ಎಸೆಯುವುದೂ ವಾಮಾಚಾರಿಗಳ ಬಗೆಗಿನ ಭೀತಿಯಿಂದಲೇ ಎಂಬುದು ಗಮನಿಸಬೇಕಾದ ಸಂಗತಿಯಾಗಿದೆ.

4. ವ್ಯಕ್ತಿಸಂಬಂಧ :

ಹುತ್ತವನ್ನು ಒಂದೇ ಮಗ್ಗುಲಿನಲ್ಲಿ ಕ್ರಮಿಸಬೇಕೆಂಬ ನಂಬಿಕೆಗೆ 'ಹಾವಿನಿಂದ ರಕ್ಷಣೆ'ಯ ಪ್ರಸಿದ್ಧ ವಿವರಣೆಗಳಿವೆ. ಅದರ ಜೊತೆಗೆ ಪ್ರದಕ್ಷಿಣಾಕಾರವಾಗಿ (ಹುತ್ತವನ್ನು ಬಲಕ್ಕೆ ಬಿಟ್ಟುಕೊಂಡು) ಹೋದರೆ ಪುಣ್ಯಪ್ರಾಪ್ತಿ ಎಂಬ ಆಸೆಯನ್ನೂ ಹುಟ್ಟಿಸಿದ್ದಾರೆ. ದೊಡ್ಡವರು ನಿಂತಿರುವಾಗ ಚಿಕ್ಕವರು ಕುಳಿತಿರಬಾರದು; ದೊಡ್ಡವರಿಗೆ ವಿಧೇಯರಾಗಿರಬೇಕು, ನಮಸ್ಕಾರ ಮಾಡಬೇಕು; ಬ್ರಹ್ಮಚಾರಿಗಳು ಹಗಲು ನಿದ್ದೆ ಮಾಡಬಾರದು, ಎಲೆ-ಅಡಿಕೆ ಹಾಕಿಕೊಳ್ಳಬಾರದು - ಇವೆಲ್ಲವೂ ಉತ್ತಮ ವ್ಯಕ್ತಿತ್ವವನ್ನು ರೂಪಿಸಲು ಹವಣಿಸಿದಂಥವು.

5. ಮನೆ-ವಸ್ತುಸಂಬಂಧ:

ನೆಲ ಮತ್ತು ಗೋಡೆಗಳ ಮೇಲೆ ಬರೆದರೆ ಅಥವಾ ಗೀಜಿದರೆ ಸಾಲ ಹೆಚ್ಚುತ್ತದೆನ್ನುವುದು, ಮಕ್ಕಳು ಹಾಗೆ ಮಾಡದಂತೆ ತಡೆಯಲು ಬಳಸುವ ಮೊರೆ. ಚಾಪೆ ಹಾಸುವಾಗ, ಬಟ್ಟೆಒಣಗಿಸುವಾಗ ಕೂಡ ಅವುಗಳ ಅಂಚು ದಿಕ್ಕುಶುದ್ಧಿಯಾಗಿರಬೇಕೆಂದು ನಿರೀಕ್ಷಿಸಲಾಗುತ್ತದೆ. ಹೊಸಿಲುಮೇಲೆ ಕೂರುವ ಕ್ರಿಯೆಯು ಶ್ರಾದ್ಧಗಳಲ್ಲಿ ಹಾಗೂ ಅಪರಕರ್ಮಗಳ ಸಂದರ್ಭಗಳಲ್ಲಿ ನಡೆಯುವ ಒಂದು ತಾಂತ್ರಿಕ ಆಚರಣೆ. ಅಪರಕ್ಕೆ ವಿರುದ್ಧವಾದುದೇ ನಿತ್ಯದಲ್ಲಿ ನಿರೀಕ್ಷಿತ. ಸಾಲಕೊಟ್ಟವನು ಹೊಸಿಲುಮೇಲೆ ಕೂರುವ ವಿವಿಧೋದ್ದೇಶಗಳಲ್ಲಿ, ಆ ಮೂಲಕ ಪರಿಣಾಮಗೊಳಿಸಬಹುದಾದ ಅಮಂಗಳಭಾವವೂ ಒಂದಾಗಿದೆ.

6. ಅಂಗಸಂಬಂಧ:

ಎಣ್ಣೆನೀರು ಹಾಕಿಕೊಂಡ ದಿನ (ತಲೆಬಾಚಲೆಂದು) ತಲೆಗೆ ಕೊಬ್ಬರಿಎಣ್ಣೆ ಹಚ್ಚಿಕೊಳ್ಳಬಾರದು. ಅದರಿಂದ ಹೆಣ್ಣು ಹುಟ್ಟಿದಮನೆಗೆ ಬಡತನ ಹಾಗೂ ಸೋದರಮಾವನಿಗೆ ಕಷ್ಟ ಎಂಬುದೊಂದು ರೂಢಿಗತ ನಂಬಿಕೆ. ಸೋದರಮಾವ ಇಲ್ಲದವರೂ ಅಂದು ಕೊಬ್ಬರಿಎಣ್ಣೆ ಹಚ್ಚಿಕೊಳ್ಳುವುದಿಲ್ಲ. ಅಭ್ಯಂಗಸ್ನಾನ ಮಾಡಿದ ದಿನ ಮತ್ತೆ (ತಲೆಬಾಚಲೆಂದು) ಯಾವುದೇ ಎಣ್ಣೆ ಹಚ್ಚಿಕೊಂಡರೂ ಆರೋಗ್ಯದಲ್ಲಿ ವೈಪರೀತ್ಯ ಉಂಟಾಗುತ್ತದೆ. ಸಾಮಾನ್ಯವಾಗಿ ತಲೆಬಾಚಿಕೊಳ್ಳಲು ಬಳಸುವುದು ಕೊಬ್ಬರಿಎಣ್ಣೆ. ಆದ್ದರಿಂದ ಅದನ್ನೇ ಹೆಸರಿಸಿದ್ದಾರೆ. ತವರು ಮತ್ತು ಸೋದರಮಾವ ಬಹಳ ಹತ್ತಿರದ ಬಂಧುಗಳಾದುದರಿಂದ ಅವರ ನಿಮಿತ್ತದ ಈ ನಿಷೇಧವು ಯಶಸ್ವಿಯಾಗುತ್ತದೆಂಬುದು ಉದ್ದೇಶ. ನಿಂತು ಜಲಬಾಧೆ ಮಾಡಬಾರದು, ಊಟದಲ್ಲಿ ಕೂದಲು ಸಿಗಬಾರದು ಇವೇ ಮೊದಲಾದ ನಿಷೇಧಗಳ ಹಿಂದೆ ಸಭ್ಯತೆ, ಶುಚಿ ನಿರೀಕ್ಷಿತ.

7. ಸಾಲ:

ಸೂರ್ಯಾಸ್ತವಾದಮೇಲೆ ಯಾವುದನ್ನೂ ಸಾಲಕೊಡದುದಕ್ಕೆ ಲಕ್ಷ್ಮಿಯು ಮನೆಯೊಳಗೆ ಬರುವವೇಳೆ ಕೊಟ್ಟರೆ ಲಕ್ಷ್ಮಿ ಕೈಬಿಟ್ಟುಹೋಗುತ್ತಾಳೆಂಬ ಅಂಜಿಕೆಯೇ ಕಾರಣ; ಮೊಸರು, ಮಜ್ಜಿಗೆ, ಅಕ್ಕಿ, ಸುಣ್ಣ, ಅರಿಶಿನ ಇವುಗಳನ್ನು ರಾತ್ರಿ ನೀಡಬಾರದು

ಎಂಬುದಕ್ಕೆ ಹೆಚ್ಚು ಒತ್ತುಇರುವುದಕ್ಕೆ ಅವುಗಳ ಅತ್ಯವಶ್ಯಕತೆಯೇ ಕಾರಣ. ಒಂದು ವೇಳೆ ಮಜ್ಜಿಗೆಯನ್ನು ಕೊಡಲೇಬೇಕಾದರೆ ಅದರಲ್ಲಿ ಮೆಣಸಿನಕಾಯಿಹಾಕಿ ಕೊಡುವುದು, ಅದರ ಘಾಟುಗುಣದಿಂದಾಗಿ ಕೊಟ್ಟದೋಷವು ಪರಿಹಾರವಾಗುತ್ತದೆಂಬ ತಂತ್ರಮೂಲ ನಂಬಿಕೆಯಿಂದ.

8. ಪ್ರಾಣಿ-ಸಂಬಂಧ:

'ಆಸ್ತಿಕ ಅಂದೋನ ಮುಟ್ಟಬೇಡ; ಅಟ್ಟಿಸಿಕೊಂಡು ಕಡೀಬೇಡ' ಎಂಬುದು ಗಾದೆಮಾತಾಗುವಂಥ ನಂಬಿಕೆ ನಾಗರಹಾವಿನ ಬಗೆಗೆ ಇದೆ. 'ಆಸ್ತಿಕ' ಎಂದರೆ ಹಾವು ಹೊರಟುಹೋಗುತ್ತದೆಂಬ ನಂಬಿಕೆ ಪುರಾಣಮೂಲದ್ದು. ಕೊಳಲು ಮತ್ತು ಶಿಳ್ಳುಹಾಕುವ ಧ್ವನಿಗೆ ಸರ್ಪಗಳು ಬರುತ್ತವೆನ್ನುವುದು, ಧ್ವನಿತರಂಗಗಳನ್ನು ಚರ್ಮದ ಮೂಲಕ ಗ್ರಹಿಸುವ ಶಕ್ತಿ ಹಾವುಗಳಿಗಿರುವುದರಿಂದ ನಿರರ್ಥಕವಲ್ಲ. ಹಸುವಿನಹಗ್ಗ ದಾಟಿದರೆ ಅದರ ಹೊಟ್ಟೆ ಊದುತ್ತದೆಂಬುದು ಮಕ್ಕಳ ಬಗೆಗೂ ಇರುವ 'ಕಾಲುಧೂಳಿ'ನ ನಂಬಿಕೆಗೆ ಸಮನಾದುದು. ಪ್ರಾಣಿಸಂಬಂಧದ ನಂಬಿಕೆಗಳಲ್ಲಿ ಪುರಾಣಮೂಲದ ಸಂಗತಿಗಳ ಜತೆಗೆ ಅವುಗಳಿಂದ ಸಂಭವಿಸಬಹುದಾದ ಅಪಾಯದ ವಿರುದ್ಧವೂ ಎಚ್ಚರವಿದೆ.

9. ಅಶುಭವಿರೋಧೀ ನಂಬಿಕೆಗಳು:

ಅಪರದ ಬಳಕೆ ಮತ್ತು ಆಚರಣೆಗಳನ್ನು ನಿತ್ಯದಲ್ಲಿ ಪೂರ್ಣವಾಗಿ ನಿಷೇಧಿಸಿರುವುದಕ್ಕೆ ಮರಣದ ಬಗೆಗಿನ ಅಂಜಿಕೆ ಮತ್ತು ಶುಭಕ್ಕಾಗಿ ತುಡಿಯುವ ಮನಸ್ಸೇ ಕಾರಣ. 'ಅಗ್ನಿ' ಎಂಬ ಪದವು ನಿತ್ಯದಲ್ಲಿ ಬಳಕೆಯಾದರೆ ಅಪರದಲ್ಲಿ 'ಬೆಂಕಿ' ಬಳಕೆಯಾಗುವುದು ಶಬ್ದಪ್ರಯೋಗದಲ್ಲಿಯೂ ಆ ಭೇದವಿರುವುದರ ನಿದರ್ಶನ. ಎಣ್ಣೆಹಚ್ಚಿಕೊಂಡು ಕನ್ನಡಿ ನೋಡಬಾರದು, ಕಾಲಲ್ಲಿ ಕಾಲುಉಜ್ಜಿ ತೊಳೆಯಬಾರದು, ಯಾರಸುತ್ತಲೂ ಸುತ್ತಬಾರದು, ತೊಡೆತಟ್ಟಬಾರದು ಇಂಥವು ನಿತ್ಯದಲ್ಲಿ ನಿಷಿದ್ಧವಾದುದು ಅಂಜಿಕೆ ಮತ್ತು ಶುಭಹಾರೈಕೆಗೆ ಒಲವು ತೋರಿದ ಕಾರಣದಿಂದ.

10. ಪ್ರಯಾಣ :

ಪ್ರಯಾಣ ಹೊರಟಾಗ ಊಟಕ್ಕೆ ಕೂಗಿದರೆ, ಬಟ್ಟೆಹಿಡಿದು ಜಗ್ಗಿದರೆ ಅಥವ ಅಪಶಕುನಗಳಾದರೆ ಹೊರಟ ಕೆಲಸವು ಆಗುವುದಿಲ್ಲ ಎಂದು ನಂಬುವುದಕ್ಕೆ ತೊಡಕಿನ ಸದೃಶಪರಿಣಾಮದ ನಿರೀಕ್ಷೆಯೇ ಕಾರಣ. ಅಂಥವೇಳೆ, ಒಂದುಕ್ಷಣ ಕುಳಿತು ದೇವರಿಗೆ ಕೈಮುಗಿದು ಹೊರಡುವವರು 'ಹೊಸದಾಗಿ ಹೊರಟ' ಭಾವನೆಯನ್ನು ಬೆಳೆಸಿಕೊಂಡು ಪುರುಷಪ್ರಯತ್ನವನ್ನೂ ಮುಂದುವರಿಸುವ ಲಕ್ಷಣವನ್ನು ತೋರಿದರೆ, ಅಂದಿನ ಯಾನವನ್ನೇ ಕೈಬಿಡುವವರು ಪೂರ್ಣವಾಗಿ ತಮ್ಮ ಭವಿಷ್ಯವನ್ನು ವಿಧಿಯ ಕೈಗೆ ಒಪ್ಪಿಸಿದ ಲಕ್ಷಣವನ್ನು ಪ್ರದರ್ಶಿಸುತ್ತಾರೆ. ಹೀಗೆ ಹೊರಟಾಗ, 'ಬರ್‍ತೀನಿ' ಎನ್ನುವುದು ಶುಭಾಕಾಂಕ್ಷೆಯಿಂದ; 'ಹೋಗ್ತೀನಿ' ಎನ್ನುವುದು ಸಾವನ್ನೇ ನೆನಪಿಗೆ ತರುವುದರಿಂದ ನಿಷಿದ್ಧ. ಪ್ರಯಾಣ ಹೊರಟಾಗ ಗಂಟುಮೂಟೆಗಳ ಮೇಲೆ ಕೂರುವುದನ್ನು ವಿಘ್ನವೆಂದು ಭಾವಿಸುವುದೂ ತೊಡಕಿನ ಸದೃಶ ಪರಿಣಾಮದ ಭೀತಿಯಿಂದಲೇ ಎನ್ನಬೇಕು.

11. ಉಡುಪು:

ಮಕ್ಕಳು ಉಡುದಾರ ಹಾಕಿಕೊಳ್ಳದೆ ಇರುವುದನ್ನು ಅಗಸಗಿತ್ತಿ ನೋಡಬಾರದು; ಉಡುದಾರ ಇಲ್ಲದಿದ್ದರೆ ಯಾವ ಪಿಶಾಚಿಯಾದರೂ ಬಂದು ಸೇರಬಹುದು, ಬಡತನ ಬರುತ್ತದೆ - ಇತ್ಯಾದಿಗಳು ಮಾನರಕ್ಷಣೆ, ಬ್ರಹ್ಮಚರ್ಯಗಳ ಮೇಲೆ ಕಣ್ಣಿಟ್ಟ ಬೆದರುಗೊಂಬೆಗಳಾಗಿವೆ. ಹೊಸಬಟ್ಟೆ ಹಾಕಿಕೊಳ್ಳುವುದೂ ಸೇರಿದಂತೆ ವಿವಿಧ ಹಂತಗಳಲ್ಲಿ ಈ ಬಗೆಗೆ ಇರುವ ವಿಧಿನಿಷೇಧಗಳು ಇಂಥ ಸಾಮಾನ್ಯ ವಿಷಯದಲ್ಲಿಯೂ ಇರುವ ಕ್ರಮಬದ್ಧತೆಗೆ ಸಾಕ್ಷಿಗಳಾಗಿವೆ.

12. ಗಿಡಬಳ್ಳಿಗಳು:

ಹರಳುಕಾಯಿ ಸಿಡಿಯುವುದಕ್ಕೂ ಮನೆಯಲ್ಲಿ ಜಗಳ ಆಗುವುದಕ್ಕೂ ಸಾಮ್ಯವಿರುವುದರಿಂದ ಮನೆಯಬಳಿ ಅದನ್ನು ಬೆಳೆಸುವುದಕ್ಕೆ

ಭೀತಿಮೂಲ ನಿಷೇಧವಿದೆ. ಹತ್ತಿಗಿಡವನ್ನು ಕೈಯಾರೆ ಹಾಕಿದರೆ ತೊನ್ನುಬರುತ್ತದೆನ್ನುವುದು ಪುರಾಣಮೂಲ ನಂಬಿಕೆ. ಹತ್ತಿಯನ್ನು ಬಡಿದವರೇ ಬೀಜವನ್ನು ಗುಡ್ಡೆ ಮಾಡಿ ದನಕ್ಕೆ ಹಾಕಬೇಕು; ತರಕಾರಿಹಚ್ಚಿದವರೇ ಅದರ ಕಸವನ್ನು ಎಸೆಯದಿದ್ದರೆ ಮುತ್ತೈದೆತನಕ್ಕೆ ಭಂಗ; ಎಣ್ಣೆಬಾಣಲೆಯನ್ನು ಒಲೆಯಮೇಲೆ ಇಟ್ಟವರೇ ತೆಗೆಯದಿದ್ದರೆ ಕಣ್ಣು ಇಂಗುತ್ತದೆ - ಇವೆಲ್ಲವೂ ಕಾರ್ಯಸಾಧಕ ಹಿನ್ನೆಲೆಯವು. ಹಲಸಿನಬೀಜಹಾಕಿ ಬೆಳೆಸಿದರೆ, ಫಲಬಿಡುವಹೊತ್ತಿಗೆ ಮರಣಸಂಭವಿಸುವುದೆಂಬ ನಂಬಿಕೆ ಕಾಕತಾಳೀಯವಾದುದೆನ್ನಬೇಕು.

13. **ತಿಂಡಿ-ತಿನಿಸು-ಧಾನ್ಯ:**

ಊಟಕ್ಕೆ ಪಾಯಿಸಮಾಡಿದರೆ ಜೊತೆಗೆ ಹುಳಿಅನ್ನ ಇರಲೇಬೇಕೆನ್ನುವುದು, ಮೊದಮೊದಲ ಸಹಜಕ್ರಿಯೆಯೇ ನಿಯಮವಾಗಿ ಬೆಳೆದ ರೀತಿ. ಉಪ್ಪನ್ನು ಬಲಗಡೆ ಬಡಿಸಿದರೆ ಬಡಿಸಿಕೊಂಡವರಿಂದ ಕೆನ್ನೆಗೆ ಹೊಡಿಸಿಕೊಳ್ಳಬೇಕು;ಆಗ ದೋಷಪರಿಹಾರವಾಗುತ್ತದೆ. ಇಲ್ಲವಾದರೆ ಮೂರುವರ್ಷ ಬದ್ಧವೈರವಿರುತ್ತದೆ. ಬದಲು, ಬಲಕ್ಕೆ ಬಡಿಸಿದ ಉಪ್ಪು ಊಟಮಾಡಿದರೆ ಕಾಯಿಲೆ-ಕಸಾಲೆ ಬರುತ್ತದೆ; ಊಟಮಾಡದೆ ಹಾಗೆಯೇ ಎದ್ದು ಬಡಿಸಿದವರ ಮುಖವನ್ನು ಆರುತಿಂಗಳು ನೋಡದಿದ್ದರೆ ದೋಷವಿಲ್ಲ - ಇಂಥ ಭಯಂಕರ ವಿಧಿನಿಷೇಧಗಳ ಹುಟ್ಟು ಹೇಗೆ ಆಯಿತು ಎಂಬುದಕ್ಕೆ ಕಾರಣಗಳು ತೆರೆಮರೆಯಲ್ಲೇ ಉಳಿದಿವೆ.

14. **ಶಕುನಗಳು:**

"..... ಕಾರ್ವೆತ್ ರೀಡ್ ಅವರು ಗಮನಿಸಿರುವಂತೆ ಅಪಾಯ ಮತ್ತು ಅನಿಶ್ಚಯತೆಗಳಿಂದ ಕೂಡಿದ ಸಾಮಾಜಿಕ ಪರಿಸ್ಥಿತಿಯಲ್ಲಿ ಸಿಲುಕಿಕೊಂಡಿರುವ ಮಾನವ ಸದಾ ತನ್ನ ಭವಿಷ್ಯವನ್ನು ಕುರಿತು ಚಿಂತಿಸುತ್ತಿರುತ್ತಾನೆ. ನಾನಾ ರೀತಿಯ ಹುಚ್ಚುಕಲ್ಪನೆಗಳನ್ನು ಹೆಣೆದುಕೊಳ್ಳುತ್ತಾನೆ. ಭವಿಷ್ಯದ ಬಗೆಗಿನ ಅವರ ಕಾತರತೆಗೆ ಕುರುಡುನಂಬಿಕೆಗಳೂ ಅಲ್ಪಸ್ವಲ್ಪ ತೃಪ್ತಿನೀಡುತ್ತವೆ. ಅವುಗಳ ಬೊಂತೆ ಬಲೆಯಲ್ಲಿ ಸಿಕ್ಕಿಕೊಂಡ ಶಕುನಗಳು ಆ ಬಲೆಯನ್ನು ಮತ್ತಷ್ಟು ಸಿಕ್ಕುಗೊಳಿಸುತ್ತವೆ . . . ."[25]

ಜ್ಯೋತಿಶ್ಯಾಸ್ತ್ರ, ಸ್ವಪ್ನಶಾಸ್ತ್ರ, ಶಕುನಶಾಸ್ತ್ರಗಳು ಈ ಸಂಬಂಧದ ಅವರ ನಂಬಿಕೆಗಳನ್ನು ರೂಪಿಸಿವೆ. ಆದುದರಿಂದ ಈ ಬಗೆಗಿನ ಸಂಕೇತಿ ಸಮುದಾಯದ ಕೆಲವು ಪ್ರವೃತ್ತಿಗಳನ್ನಷ್ಟೆ ಇಲ್ಲಿ ಗಮನಿಸಲಾಗಿದೆ:

0.1 ಹಲ್ಲಿಶಕುನಗಳು ಉಳಿದೆಲ್ಲ ಶಕುನಗಳಿಗಿಂತ ಹೆಚ್ಚಿನ ಬಳಕೆಯವು. ಅದರಲ್ಲಿ ಶುಭ, ಅಶುಭ ಫಲಗಳೆರಡೂ ಇದ್ದರೂ, ಹಲ್ಲಿಯು ಮೈಮೇಲೆ ಬೀಳದಂತೆ ವಹಿಸುವ ಎಚ್ಚರದಲ್ಲಿ ಅನಿಶ್ಚಿತ ಭವಿಷ್ಯವನ್ನು ಮೈಮೇಲೆ ಎಳೆದುಕೊಳ್ಳಲಾರದ ಧೋರಣೆಯೇ ಕಾಣಿಸುತ್ತದೆ. ಕಂಚಿಯ ಚಿನ್ನದಹಲ್ಲಿಯ ದರ್ಶನಮಾಡುವ ಕ್ರಮವು ಈಗ ಪೂರ್ಣವಾಗಿ ಕಣ್ಮರೆಯಾಗಿರುವುದೂ ಆ ಬಗೆಗಿನ ಶಕುನದ ಪರಿಗಣನೆ ರೂಢಿಯಿಂದ ಮರೆಯಾಗುತ್ತಿರುವುದರ ಸೂಚನೆಯೇ ಆಗಿದೆ.

0.2 ಯಾವುದೇ 'ಶಕುನ-ಶಾಂತಿ'ಗಳು ಎಲ್ಲಿಯೂ ಗಂಭೀರವಾಗಿ ಪಾಲನೆಗೊಳ್ಳುತ್ತಿಲ್ಲ. ತೋಟಕ್ಕೆ ಸಿಡಿಲುಬಡಿಯುವಂಥ ಸಂದರ್ಭದಲ್ಲಿ ಮಾತ್ರ ಅದರ ನಿದರ್ಶನವಿರುವುದಕ್ಕೆ, ತಮ್ಮ ಜೀವನಾಧಾರವಾದ ತೋಟದ ಬಗೆಗಿನ ತೀವ್ರ ಕಾಳಜಿಯೊಂದೇ ಕಾರಣವಾಗಿದೆ.

0.3 ಬೆಕ್ಕು, ಗೂಬೆಗಳಿಗೆ ಸಂಬಂಧಿಸಿದಂತೆ ಇರುವ ಶಕುನಗಣನೆಯು ಸಾರ್ವತ್ರಿಕಸ್ವರೂಪದ್ದು ಮಾತ್ರ. ಬೆಕ್ಕು ಅಡ್ಡಲಾಗುವುದರ ಗಣನೆಯ ಜೊತೆಗೆ, ಬೆಳಗ್ಗೆ ಎದ್ದಕೂಡಲೆ ಬೆಕ್ಕಿನ ದರ್ಶನವಾದರೆ ಸೋದರರಲ್ಲಿ ಕಲಹವಾಗುತ್ತದೆಂಬ ನಂಬಿಕೆಯೂ ಇವರಲ್ಲಿದೆ. ಅದು ಕಾಕತಾಳೀಯವೆಂಬುದು ಸ್ಪಷ್ಟ. ಅದನ್ನು ತಪ್ಪಿಸಲು ಮತ್ತೆ ಮಲಗಿ ಏಳುತ್ತಾರೆ. ಗೂಬೆ 'ಲೊಳಲೊಳವಾಯಿ' ಎಂದು ಕೂಗಿದರೆ ಹೆರಿಗೆ; 'ಗುಡ್ಡುಗುಡುಡು' ಎಂದರೆ ಅಬ್ರಾಹ್ಮಣರ ಸಾವು; 'ಕಿಚ್ಕಿಡಿ' ಎಂದರೆ ಬ್ರಾಹ್ಮಣರ ಸಾವು - ಎಂಬುದೂ ಕಾಕತಾಳೀಯವಾದುದು.

0.4 ಸಂಖ್ಯೆಗಳ ಬಗೆಗೂ ಕೆಲವು ನಂಬಿಕೆಗಳು ಇವರಲ್ಲಿ ಕಂಡುಬರುತ್ತವೆ. ಬೆಸಸಂಖ್ಯೆ ಶುಭ; ಸಮಸಂಖ್ಯೆ ಅಶುಭವೆಂಬ ಸರಳನಿಯಮ

---

[25] ಅರಸು ಜನಾಂಗ ಒಂದು ಅಧ್ಯಯನ, ನಂಜಮ್ಮಣ್ಣಿ, ಎಂ., (ಮೊ.ಮು.) ೧೯೮೬, ತ.ವೆಂ.ಸ್ಮಾರಕ ಗ್ರಂಥಮಾಲೆ, ಮೈಸೂರು, ಪು.೨೧೮.

ಇಲ್ಲಿಲ್ಲ. ಸಂಪ್ರದಾಯಾಚರಣೆಗಳಲ್ಲಿ ಮೂರು-ಐದು-ಒಂಬತ್ತು ಹೀಗೆ ಬೆಸಸಂಖ್ಯೆಗೆ ಪ್ರಾಶಸ್ತ್ಯವಿದೆ. ಆದರೆ, ಮೂರುಜನರು ಹೊರಟರೆ ಕೆಲಸಕೇಡು; ಮನೆಯಲ್ಲಿ ಮೂರು ಬ್ರಹ್ಮಚಾರಿಗಳಿದ್ದರೆ ಕೇಡು - ಇಂಥ ಕಡೆ ಆ ಸಂಖ್ಯೆ ಶುಭಕರವಲ್ಲವೆಂಬ ಗಣನೆ ಇದೆ.

0.5 ವೈಯಕ್ತಿಕ ನಂಬಿಕೆಯ ಶಕುನದ ನಿದರ್ಶನ ಇದು: ವ್ಯಕ್ತಿಯೊಬ್ಬರು ಗರ್ಭಿಣಿಯನ್ನು ಕರೆದುಕೊಂಡು ತವರಿಗೆ ಹೊರಟಿದ್ದರು; ದಾರಿಯಲ್ಲಿ ನಾಯಿಯು ನೆಲಕೆರೆದು ತಲೆಕೊಡವಿತು. ಆದರೆ ಪ್ರಯಾಣ ಮುಂದುವರಿಯಿತು. ಗರ್ಭಿಣಿ ಸತ್ತಳು. ಶಕುನ ಮತ್ತು ಜ್ಯೋತಿಷವನ್ನು ಗಾಢವಾಗಿ ನಂಬುವ ಈ ಗೃಹಸ್ಥರು ಅದನ್ನು ಶಕುನವಾಗಿ ಸ್ವೀಕರಿಸಿದರು. ಶಕುನಗಳು ಇನ್ನೂ ಹುಟ್ಟಿಕೊಳ್ಳುತ್ತಿರುವುದು ಮತ್ತು ಅದು ಹುಟ್ಟುವ ರೀತಿಗೂ ಇದು ನಿದರ್ಶನವಾಗಿದೆ. ವೈಯಕ್ತಿಕ ನಂಬಿಕೆಯಾದ ಈ ಶಕುನವು ಸಾರ್ವತ್ರಿಕ ಸ್ವರೂಪವನ್ನು ಪಡೆದಿಲ್ಲದ ಹಂತದಲ್ಲಿದೆ ಎಂಬುದನ್ನೂ ಇಲ್ಲಿ ಉಲ್ಲೇಖಿಸಬಹುದು.

0.6 ಬೆಳಗಿನಜಾವದ ಕನಸು ಸಾಧಾರಣಸ್ಥಿತಿಯಲ್ಲಿ ಸತ್ಯವಾಗುತ್ತದೆಂಬ ನಂಬಿಕೆಯು ಸಾರ್ವತ್ರಿಕ ಸ್ವರೂಪದ್ದು. ಇದರಲ್ಲಿಯೂ ವೈಯಕ್ತಿಕ ನಂಬಿಕೆಯ ನಿದರ್ಶನವಿದು: ಗಾಡಿ ಕಾಣುವುದು ಕೆಟ್ಟದ್ದು, ಗಾಡಿಯು ಬಿದ್ದಹಾಗೆ ಅಥವಾ ನಿಂತಹಾಗೆ ಕನಸುಕಂಡರೆ ಮರಣವಾರ್ತೆ ಬರುತ್ತದೆ - ಇದು ವ್ಯವಸಾಯಗಾರರೊಬ್ಬರ ಅನುಭವಜನ್ಯ ನಂಬಿಕೆ. ಕನಸಿನಲ್ಲಿ ಪೋಲಿಸರು ಕಂಡರೆ ಅನಿಷ್ಟ, ತೊಂದರೆ ಎಂಬುದು ಇತ್ತೀಚಿನ ನಂಬಿಕೆ ಎಂಬುದು ಸ್ಪಷ್ಟ. ಈ ಸ್ವಪ್ನ-ಶಕುನವನ್ನು ಸ್ವೀಕರಿಸಿದ ವಕ್ತೃ ಒಮ್ಮೆ ಪೋಲಿಸರಿಂದ ತೊಂದರೆಗೆ ಒಳಗಾದವರು. ಸ್ವಪ್ನ-ಶಕುನಗಳ ರೀತಿಗೂ ಇವು ನಿದರ್ಶನಗಳು. ಕನಸಿನಲ್ಲಿ ಹಾವುಕಚ್ಚಿದರೆ ಸಂತತಿ ಆಗುತ್ತದೆ; ಮಳೆಬಂದರೆ ರೋಗ-ರುಜಿನ, ಜೇನುಹುಳು ಕಚ್ಚಿದರೆ ಕೆಟ್ಟದ್ದು - ಇಂಥ ಶಕುನಗಳನ್ನೂ ಮೇಲಿನ ನಿದರ್ಶನಗಳೇ ವಿವರಿಸುತ್ತವೆ. ಆದುದರಿಂದಲೇ ಅವುಗಳ ತಾರ್ಕಿಕತೆ ಕೂಡ ವೈಯಕ್ತಿಕವಾದುದಾಗುತ್ತದೆ.[26] ಕೆಟ್ಟಕನಸನ್ನು ಗೋವಿನಕಿವಿಯಲ್ಲಿ ಹೇಳಿ ಪರಿಹರಿಸಿಕೊಳ್ಳುವ ಕ್ರಮವು ಮತ್ತೂರಿನ ಪ್ರಾದೇಶಿಕ ವೈಶಿಷ್ಟ್ಯವಾಗಿದೆ.

ಹೀಗೆ ಎಲ್ಲ ನಂಬಿಕೆಗಳೂ ಅನುಭವಜನ್ಯ, ಕಾಕತಾಳೀಯ, ಮೂಢ, ಸಾದೃಶ್ಯಮೂಲ, ಅಂಜಿಕೆ, ಮುನ್ನೆಚ್ಚರಿಕೆ ಹೀಗೆ ವೈವಿಧ್ಯಪೂರ್ಣವಾದ ಹಿನ್ನೆಲೆಯನ್ನು ಹೊಂದಿರುತ್ತವೆ. ನೆನಪಿನ ಕೊಂಡಿ ಕಳಚಿದಾಗ, ಜ್ಞಾನವು ವಿಸ್ತರಿಸಿದಾಗ, ಪರಿಸ್ಥಿತಿಯು ಬದಲಾದಾಗ, ಅವುಗಳ ಮೌಲ್ಯವೂ ಸ್ಥಿತ್ಯಂತರಗೊಳ್ಳುತ್ತದೆ. ಆಧುನಿಕ ಸನ್ನಿವೇಶದಲ್ಲಿಯೂ ಎಲ್ಲ ರೀತಿಯ ನಂಬಿಕೆಗಳೂ ನಾಶವಾಗಿಲ್ಲದ ಸಾರ್ವತ್ರಿಕ ಪ್ರವೃತ್ತಿಯೇ ಈ ಸಮುದಾಯದಲ್ಲಿಯೂ ಇದೆ. ಅವು ಮೊದಲಿನಷ್ಟೇ ವ್ಯಾಪಕವೂ ಗಾಢವೂ ಆಗಿಲ್ಲದಿದ್ದರೂ ಅವು ಮಾನವನಿಗೆ ಅಗತ್ಯವಾದವು ಎಂಬ ಮೂಲಭೂತ ಗುಣವನ್ನು ಇಲ್ಲಿ ಗುರುತಿಸಬಹುದು.

ಇಲ್ಲಿ ವಿವರಿಸಿದ ನಂಬಿಕೆ, ವಿಧಿ, ನಿಷೇಧಗಳು ಸಂಕೇತಿಗಳ ಚಿಂತನಪ್ರವೃತ್ತಿಯ ಪರಿಚಯವನ್ನು ತಮ್ಮಷ್ಟಕ್ಕೇ ಮಾಡಿಕೊಡುತ್ತವೆ. ಅವುಗಳ ವ್ಯಾಪಕ ವಿಶ್ಲೇಷಣೆಯು ಇಲ್ಲಿನ ಉದ್ದೇಶವೂ ಅಲ್ಲ; ಮತ್ತು, ಅದಕ್ಕೆ ಅಗತ್ಯವಾದ ಸಮಗ್ರ ಸಂಗ್ರಹವೂ ಇಲ್ಲಿ ನಡೆದಿಲ್ಲ. ದೈವ, ಧರ್ಮಮೂಲವಾದ ನಂಬಿಕೆಗಳಂತೆಯೇ ಲೌಕಿಕ ಕಾರ್ಯಸಾಧನೆಯ-ಮೂಲದ ನಂಬಿಕೆ, ವಿಧಿ, ನಿಷೇಧಗಳೂ ಇರುವುದನ್ನು ಇಲ್ಲಿ ಕಾಣಬಹುದು. ಈ ಸಂಬಂಧದಲ್ಲಿರುವ ಅಧಿಕ ವಿಶ್ವಸಾಮಾನ್ಯಗಳು ಮತ್ತು ಈ ನಡುವೆಯೂ ವ್ಯಕ್ತವಾಗುವ ಸಂಕೇತಿಗಳ ಪ್ರವೃತ್ತಿಯನ್ನು ಗುರುತಿಸಲು ಮೇಲಿನ ವಿವರಗಳು ಸಾಕಾಗಿವೆ.

15. ತಂತ್ರಗಳು:

ಗುಪ್ತನಾಮವ್ಯವಸ್ಥೆ ಬಂದುದು ವಾಮಾಚಾರಿಗಳ ಬಗೆಗಿನ ಭೀತಿಯಿಂದಲೇ ಎಂಬುದು ಪ್ರಸಿದ್ಧ ವಾಖ್ಯಾನ. ಆದರೆ, ವೇದಾಧ್ಯಯನನಿರತರೂ, ಜಪನಿರತರೂ ವಾಮಾಚಾರಕ್ಕೆ ಹೆದರಬೇಕಾಗಿಲ್ಲವೆನ್ನುವ ಅಭಿಪ್ರಾಯವೂ ಇದೆ. ಈಗಲೂ ಆ ಕಸಬಿನ ಬಗೆಗೆ ಅವರಲ್ಲಿ ಎಷ್ಟು ತಿರಸ್ಕಾರವಿದೆ ಎಂದರೆ, ವಾಮಾಚಾರವನ್ನು ಅದರ ಹೆಸರಿನಿಂದಲೂ ಉಲ್ಲೇಖಿಸಲು ಹೇಸುತ್ತಾರೆ.

---

[26] ನಂಬಿಕೆಯೊಂದರ ತಾರ್ಕಿಕತೆ ಅಥವಾ ಅತಾರ್ಕಿಕತೆ, ನಂಬುವವನು ತಾನೇ ಹೊಂದಿರುವ ಆಧಾರದಿಂದ ನಿರ್ಧರಿತವಾಗುತ್ತದೆಂಬುದನ್ನು ಗಮನಿಸುವುದೂ ಮುಖ್ಯವಾದುದು. ನೋಡಿ: Encyclopaedia Britannica, Vol.III, 1963, pp.437-438.

ಇದಕ್ಕೆ ಅಪವಾದಗಳು ಈ ಸಮುದಾಯದಲ್ಲಿ ಕೊನೆಯಪಕ್ಷ ಕಳೆದ ನೂರೈವತ್ತು ವರ್ಷಗಳ ಇತಿಹಾಸದಲ್ಲಿ ತೀರಾತೀರಾ ಅಪರೂಪಕ್ಕಾದರೂ ಸಿಗುತ್ತವೆ. ಅಪಾಯಕಾರಿ ವಾಮಾಚಾರವನ್ನು ವಶಪಡಿಸಿಕೊಳ್ಳುವ ಭರದಲ್ಲಿ ಹುಚ್ಚರಾದುದು, ದೇಶಾಂತರಹೋದುದು, ಮನೆಮಠ ಕಳೆದುಕೊಂಡುದು ನಡೆದಿದೆ. ಮೋಡಿಯ ವಿದ್ಯೆಯನ್ನು ಕಲಿತು ಕಸಬುದಾರರಿಗೆ ಸವಾಲುಹಾಕಿದ ಪ್ರಸಂಗಗಳಿವೆ. ಇದಕ್ಕೆ ಭಿನ್ನವಾದ 'ಉಪಯುಕ್ತ ತಂತ್ರ'ಗಳು ಎಲ್ಲರಂತೆ ಸಮುದಾಯದಲ್ಲಿ ಇಂದಿಗೂ ವ್ಯಾಪಕವಾಗಿವೆ. ಇವೆಲ್ಲಕ್ಕಿಂತ ಹೊರತಾದುದು ಮಂತ್ರಶಕ್ತಿ. ಹೆರಿಗೆಯು ಸುಲಭವಾಗಿ ಆಗಲು ವೇದಮಂತ್ರವನ್ನೇ ಬಳಸುವುದು ಅಂಥ ಒಂದು ನಿದರ್ಶನ.

0.1 ಉಪಯುಕ್ತ ತಂತ್ರ: ಇದರಲ್ಲಿ ಪ್ರಧಾನವಾದುದು 'ನಿವಾಳಿಸು'ವುದು. ಅರಿಶಿನದಾರ ಕಟ್ಟುವುದು, ಕೆಂಡರಂಜ್, ಗಾಳಿದಟ್ಟು ಮೊದಲಾದವು ಇತರ ವಿಧಗಳು. ಇದು, ನಾಟಿವೈದ್ಯವು ಮರೆಯಾದ ಆಧುನಿಕ ಸಂದರ್ಭದಲ್ಲಿಯೂ ಅಲೋಪತಿಯ ಜೊತೆಜೊತೆಗೆ ಮುಂದುವರಿಯುತ್ತಿರುವ ಚಿಕಿತ್ಸಾವಿಧಾನವಾಗಿದೆ. ಅದರ ಕೆಲವು ಲಕ್ಷಣಗಳು ಹೀಗಿವೆ:

* ಹೆದರಿದಾಗ, ಕೈಕಾಲು ಉಳುಕಿದಾಗ, ಕೆಟ್ಟಜಾಗದಲ್ಲಿ ಮಕ್ಕಳು ಬಿದ್ದಾಗ, ಕಣ್ಣಾಸರಿಕೆ ಆದಾಗ, ಭೇದಿ, ಕಾಲುಧೂಳು, ಹೊಟ್ಟೆನೋವು, ಪಿಶಾಚಿಸಂಬಂಧದ ಕುಶಲ, ಸೋಂಕು, ಚಳಿಜ್ವರ, ಸುಲಭವಾಗಿ ಮಾಯದ ಗಾಯ ಇವಕ್ಕೆಲ್ಲಾ ಚಿಕಿತ್ಸೆಯ ರೂಪದಲ್ಲಿ ನಿವಾಳಿಸುವುದು ಬಳಕೆಯಾಗುತ್ತದೆ.

* ಅನ್ನ, ಆರತಿ, ಉಪ್ಪು, ಮೆಣಸಿಕಾಯಿ, ಹಂಚಿಕಡ್ಡಿ, ತೆಂಗಿನಕಾಯಿ, ನಿಂಬೆಹಣ್ಣು, ಸಾಸಿವೆ, ಇದ್ದಿಲು ಇತ್ಯಾದಿಗಳು ನಿವಾಳಿಸುವ ಪರಿಕರಗಳಾಗಿವೆ. ಅನ್ನವು ಕೆಂಪನ್ನ, ಕರಿಅನ್ನ, ಬಿಳಿಅನ್ನ; ದೀಪವು ಹರಳೆಣ್ಣೆಯದು. ಇವು ಸಹ ನಿವಾಳಿಕೆಯ ಪರಿಕರಗಳೇ.

* ಪರಿಕರಗಳು ಸಾಮಾನ್ಯವಾಗಿ ಬಳಕೆಯಾಗುವುದು ಮೂರರ ಸಂಖ್ಯೆಯಲ್ಲಿ. ನಿವಾಳಿಸುವುದು ಮೂರು ಅಥವಾ ಮೂರು x ಮೂರು ಬಾರಿ. ನಿವಾಳಿಕೆಯನ್ನು ಚೆಲ್ಲುವುದು ಮೂರುದಾರಿ ಕೂಡಿದ ಜಾಗದಲ್ಲಿ. ಕೆಲವು ಸಂದರ್ಭಗಳಲ್ಲಿ ನಾಲ್ಕರ ಬಳಕೆ ಉಂಟು. ಉದಾಹರಣೆಗೆ ನಾಲ್ಕರ ಚಳಿಯಲ್ಲಿ ಮಾತ್ರ 'ನಾಲ್ಕನೆಯ ಹೆಂಡತಿ'ಯ ಕೈಲಿ ಊಟಮಾಡಬೇಕು, ಅಥವಾ ನಾಲ್ಕು ಏಣಿನ ರುದ್ರಾಕ್ಷಿಯನ್ನು ಬಳಸಬೇಕು.

* ನಿವಾಳಿಸುವ ಕ್ರಿಯೆ ಸೂರಿನಹೊರಗೆ ನಡೆಯುತ್ತದೆ. ಒಳಗೆ ಹೋಗುವಾಗ ಮೊದಲು ಬಾಯಿ ಮುಕ್ಕಳಿಸಿ ಕಾಲು ತೊಳೆದುಕೊಂಡು ಹೋಗುತ್ತಾರೆ.

* ರೋಗಿಯು ಮಲಗಿರುವಂತೆ, ದಕ್ಷಿಣಾಭಿಮುಖವಾಗಿ ನಿಂತಿರುವಂತೆ - ಈ ಕ್ರಿಯೆ ನಡೆಯುವುದಿಲ್ಲ. ಕೆಲವಲ್ಲಿ ಮೌನ, ಉಪವಾಸ ಉಂಟು.

* ನಿವಾಳಿಕೆಯನ್ನು ಅಪ್ರದಕ್ಷಿಣಾಕಾರವಾಗಿ ಅಥವಾ ಪ್ರದಕ್ಷಿಣೆ, ಅಪ್ರದಕ್ಷಿಣೆ ಎರಡೂ ರೀತಿಯಲ್ಲೂ ಮಾಡುತ್ತಾರೆ.

* ನಿವಾಳಿಸಿಕೊಂಡ ವ್ಯಕ್ತಿ ಅದಕ್ಕೆ ಉಗಿಯುವುದು ಅನಿಷ್ಟವನ್ನು ದೂರೀಕರಿಸುವ ಆಚರಣೆ.

* ನಿವಾಳಿಕೆಯನ್ನು ಮನೆಯಿಂದ ದೂರಕ್ಕೆ ನಿರ್ದಿಷ್ಟ ದಿಕ್ಕಿಗೆ ಎಸೆಯುತ್ತಾರೆ.

* ಉಪ್ಪನ್ನು ನೀರಿಗೆ, ಹಂಚಿಕಡ್ಡಿಯನ್ನು ಬೆಂಕಿಗೆ ಹಾಕಿದಾಗ ಅವು ಸಿಡಿಯುವ ಪ್ರಮಾಣವು ದೃಷ್ಟಿದೋಷದ ಪ್ರಮಾಣದ ಸೂಚಿ ಎಂದು ನಂಬುತ್ತಾರೆ. ಅದರ ಮೇಧಾವಿಯನ್ನು ಎಡಹೆಬ್ಬೆರಳಲ್ಲಿ ರೋಗಿಯ ಹಣೆಗೆ ಹಚ್ಚುತ್ತಾರೆ.

* ಉಳುಕಿದಾಗ ಅರಿಶಿನದದಾರ ಕಟ್ಟಿಸಿಕೊಳ್ಳುವುದು ತಮ್ಮದೇ ಹೆಸರಿನವರಿಂದ.

* ಈ ಕ್ರಿಯೆಗಳನ್ನು ಹಿರಿಯರು ನಡೆಸಬೇಕು.

* ನಿವಾಳಿಸುವ ಸಂದರ್ಭದಲ್ಲಿ ಬಳಸುವ ಮಾತುಗಳು ಅನಿಷ್ಟಪರಿಹಾರಕ್ಕೆ ತಕ್ಕವಾಗಿವೆ. ಉದಾಹರಣೆಗೆ "ಕಣ್ಣುಕಾಣದ ಕುರುಡು ದೈವವೇ! ಕಕ್ಕಡದ ಬೆಳಕಲ್ಲಿ ತಿಂದುಕೊಂಡು ಹೋಗು. ಹಾಳೀಕಣ್ಣು, ಮೂಳೀಕಣ್ಣು, ಮುಂಡೇಕಣ್ಣು,

ಹಾದೀಲಿಬಂದದ್ದು, ಬೀದೀಲಿಬಂದದ್ದು, ಓಣೀಲಿಬಂದದ್ದು - ಎಲ್ಲಾ ಕಣ್ಣೂ ಸಿಡಿದು, ಉರಿದು, ಬೆಂಕಿಬಿದ್ದು ಬಯಲಾಗಿ ಹೋಗಲಿ" ಇತ್ಯಾದಿ ಮಾತುಗಳನ್ನು ಈ ಸಂದರ್ಭದಲ್ಲಿ ಹೇಳುತ್ತಾರೆ. ಇವನ್ನು ಹೇಳಿ ನೆಟಿಕೆಮುರಿದರೆ ದೃಷ್ಟಿಪರಿಹಾರವಾಗುತ್ತದೆ ಎಂಬುದು ನಂಬಿಕೆ.

'ನಿವಾಳಿಕೆಯ ವಿಧಿ' ರೋಗಿಗೆ ಮಾನಸಿಕ ಸ್ಥೈರ್ಯತುಂಬಬಹುದು ಅಥವಾ ಕಾಕತಾಳೀಯವಾಗಿ ಗುಣವಾಗಬಹುದು; ಇದರ ಜೊತೆಗೇ ಮಾಡಿದ ಇತರ ಚಿಕಿತ್ಸೆಗಳಿಂದಲೂ ಗುಣವಾಗಬಹುದು. ಹಂಚಿಕಡ್ಡಿ ಸಿಡಿಯುವಂಥ ದೃಶ್ಯವು ಮಗುವಿನ ಮನಸ್ಸನ್ನು ಪ್ರಫುಲ್ಲಗೊಳಿಸಬಹುದು. ಇದಕ್ಕಾಗಿ ಬಳಸುವ ಅನಿಷ್ಟ ಪರಿಕರಗಳು, ಮಾತುಗಳು ದುಷ್ಟಶಕ್ತಿಯನ್ನು ನಿವಾರಿಸಲು ತಕ್ಕವೆಂಬ ನಿರೀಕ್ಷೆ ಈ ವಿಧಾನದ ಅನ್ವೇಷಣೆಯಲ್ಲಿದೆ.

'ಒಂದೇ ಹೆಸರಿನವರು' 'ನಾಲ್ಕನೆಯ ಹೆಂಡತಿ' - ಇಂಥ ಪಾತ್ರಗಳು ಮೇಲುನೋಟಕ್ಕೇ ಅರ್ಥಹೀನವಾಗಿ ಕಾಣಿಸುತ್ತವೆ. ಆದರೆ ಗಂಡ್‌ಗಾಳೀಸೊಪ್ಪಿನ ಬಳಕೆ (ಅದರ ಹೊಗೆಕೊಡುವುದು, ಅದನ್ನು ಅರೆದು ಮೆತ್ತುವುದು) ಶುದ್ಧ ಚಿಕಿತ್ಸಾವಿಧಾನಗಳಾಗಿಯೇ ಸೇರುತ್ತವೆ.

ಒಟ್ಟಿನಲ್ಲಿ ಬಹುವ್ಯಾಪಕವಾದ ಉಪಯುಕ್ತ ತಂತ್ರಗಳ ವಿವರಗಳಲ್ಲಿ ಸಾರ್ವತ್ರಿಕ ಅಂಶಗಳೇ ಹೆಚ್ಚಾಗಿವೆ. ಇದು ಆಧುನಿಕಪೂರ್ವದ ಪ್ರಧಾನ ವೈದ್ಯಭಾಗವೂ ಆದುದರಿಂದ, ಸ್ವೀಕರಣವು ಸಹಜವಾದುದೂ ಹೌದು.

0.2 ಮಾಟ-ಮಂತ್ರ: ಮಾಟವು ಧರ್ಮಕ್ಕಿಂತ ಹಿಂದಿನದು. ಪ್ರಕೃತಿಯನ್ನೇ ತನ್ನ ಇಚ್ಛಾನುವರ್ತಿಯಾಗಿ ಮಾಡಿ ವಾಂಛಿತ ಉದ್ದೇಶಗಳಿಗೆ ಬಳಸಿಕೊಳ್ಳಬಯಸುವುದು ಮಾಟ. ಈ 'ದಬ್ಬಾಳಿಕೆ'ಯಂತಲ್ಲದೆ, ನಿಸರ್ಗದ ಅತಿಮಾನುಷ ಸತ್ತ್ವವನ್ನು ಪ್ರಸನ್ನಗೊಳಿಸಿ ಒಲಿಸಿಕೊಳ್ಳಬಯಸುವುದು ಧರ್ಮ. ನಿಸರ್ಗದ ಮೇಲಿನ ತನ್ನ ಹಿಡಿತದ ತಿಳಿವಳಿಕೆ ತಪ್ಪು ಎಂದು ಅರಿವಾದನಂತರದ ಫುಟ್ಟ ಧರ್ಮದ್ದು. ಅದರ ಮುಂದಿನ ಹಂತ, ಕಾರ್ಯ-ಕಾರಣ ಸಂಬಂಧಗಳ ಖಚಿತ ತಾತ್ತ್ವಿಕ ನೆಲೆಗಟ್ಟನ್ನು ಹೊಂದಿ ಪ್ರಾಯೋಗಿಕವಾಗಿ ಮುಂದುವರಿಯುವ ವಿಜ್ಞಾನದ್ದು.

ಪರಸ್ಪರ ಸಂಪರ್ಕವಿಲ್ಲದ ಎರಡು ವಸ್ತುಗಳ ನಡುವೆ ಆಕಾಶದ್ರವ್ಯದ ಮೂಲಕ ತರಂಗಿತ ಸಂಪರ್ಕವೆಂಬುದು ಅನುಕಂಪ ಮಾಟದ (Sympathetic magic) ಮೂಲ ಆಶಯ. ಸೋಮಸೂತ್ರಕಟ್ಟಿ ಮಳೆಬರಿಸುವುದು, ತಂತ್ರಗಳ ಮೂಲಕ ಖಾಯಿಲೆ ಪರಿಹರಿಸುವುದು, ಇತರರ ಸಾವಿಗೆ ಅದನ್ನು ಬಳಸುವುದು, - ಇವು ಉತ್ಪಾದಕಮಾಟ, ರಕ್ಷಣಾಮಾಟ ಮತ್ತು ವಿನಾಶಾತ್ಮಕ ಮಾಟದ ನಿದರ್ಶನಗಳು. ಇವನ್ನು ಸಾಧಿಸುವುದಕ್ಕೆ ಅನೇಕ ವಿಧಾನಗಳಿರುವಂತೆಯೇ, ಅನಗತ್ಯಪರಿಣಾಮ ಆಗದಂತೆ ಮಾಡಲು ನಿಷೇಧಗಳೂ ಇವೆ. ಅದರಿಂದಾಗಿ, ನಿಷೇಧವೂ ಮಾಟದ ಋಣಾತ್ಮಕ ಮುಖವೇ. ಇವೆರಡರ ಮೂಲತತ್ತ್ವ 'ಅನುಕರಣ' ಮತ್ತು 'ಸಂಪರ್ಕ'ದ್ದೇ. ಆದರೆ, ಸದೃಶಮಾಟವು ಪರಸ್ಪರ ಹೋಲಿಕೆ ಇದ್ದ ಎರಡು ವಸ್ತುಗಳು ಒಂದೇ ಎಂಬ ತಪ್ಪುಮಾಡಿದರೆ, ಸಂಪರ್ಕಮಾಟವು ಒಮ್ಮೆ ಸಂಪರ್ಕದಲ್ಲಿದ್ದುದೆಂದರೆ ಎಂದೆಂದಿಗೂ ಸಂಪರ್ಕ ಇದ್ದಂತೆಯೇ ಎಂಬ ತಪ್ಪುಮಾಡುತ್ತದೆ ಎಂಬುದು, ಇಂದಿಗೂ ಉಳಿದಿರುವ ಫ್ರೇಜರನ ಪ್ರಸಿದ್ಧ ವಿವರಣೆ.[27]

ಅವಳಿಬಾಳೆಹಣ್ಣು ತಿಂದರೆ ಅವಳಿ ಮಕ್ಕಳು ಹುಟ್ಟುತ್ತವೆ; ವಿವಾಹಾನಂತರ 'ಗೃಹಪ್ರವೇಶ' ಸಂದರ್ಭದಲ್ಲಿ - ಸಂತಾನವು ನಾಶವಾಗದ, ಮೊದಲನೆಯದು ಗಂಡುಮಗುವೇ ಆಗಿರುವ, ಗಂಡು ಸಂತಾನವೇ ಅಧಿಕವಾಗಿರುವ ವಂಶದ - ಮೊದಲ ಗಂಡುಮಗುವಿಗೆ ನವವಿವಾಹಿತೆಯು ಫಲವನ್ನು ತಿನ್ನಿಸುವುದರಿಂದ, ಅವರಿಗೂ ಮೊದಲು ಗಂಡುಶಿಶುವೇ ಹುಟ್ಟುತ್ತದೆ; ಬತ್ತದ ಅಗೆಹಾಕಲು ಹೋಗುವಾಗ ದಾರಿಯುದ್ದಕ್ಕೂ ಸಗಣಿಯಲ್ಲಿ ಬಿತ್ತುತ್ತಾಹೋದರೆ ಬೆಳೆ ಸಮೃದ್ಧವಾಗುತ್ತದೆ; ಗರ್ಭಿಣಿಯರು ಬಂಜೆಯರಿಗೆ 'ಚೋ ಚೋ' ಬಡಿದರೆ ಅವರೂ ಗರ್ಭಧರಿಸುತ್ತಾರೆ; ಮಾಂಗಲ್ಯಧಾರಣೆಗೆ ಮೊದಲು ಹಿರಿಯ ಮುತ್ತೈದೆಯರಿಂದ ಅದನ್ನು ಮುಟ್ಟಿಸಿದರೆ ವಧುವು ದೀರ್ಘಸುಮಂಗಲೆಯಾಗುತ್ತಾಳೆ; ಅಶ್ಮಾರೋಹಣದಿಂದ ಬ್ರಹ್ಮಚರ್ಯ, ವಿವಾಹ ದೃಢವಾಗುತ್ತವೆ - ಇವೆಲ್ಲವೂ 'ಅನುಕರಣ'

[27] The Golden bough: Study in magic and religion, Frazer (James George); Macmillan and Co., Ltd., London, Abridged Edition (1924), p.711.

ತತ್ತ್ವದಿಂದಾದ ಆಚರಣೆಗಳು. ಚೂಡಾಕರ್ಮದ ಕೂದಲನ್ನು ಸಗಣಿಯಲ್ಲಿ ಒತ್ತಿ ಜಲಾಶಯದಲ್ಲಿ ವಿಸರ್ಜಿಸುವುದು, ಹಲ್ಲುಗಳನ್ನು ಮನೆಯಮೇಲೆ ಎಸೆಯುವುದು - ಸಂಪರ್ಕತತ್ವದಿಂದಾಗಬಹುದಾದ ಅಭಿಚಾರದ ವಿರುದ್ಧ ರಕ್ಷಣೆ. ಇವೆಲ್ಲವೂ ವೈಯಕ್ತಿಕ ತಂತ್ರಗಳಾದರೆ (private magic) ಸೋಮಸೂತ್ರಕಟ್ಟಿ ಮಳೆಬರಿಸುವುದು ಸಾರ್ವತ್ರಿಕತಂತ್ರ (public magic). ಆದರೆ, ಸಮುದಾಯದಲ್ಲಿ ಈಗ ಇರುವುದು ಮಾನವಾತೀತ ಶಕ್ತಿಯನ್ನು ಒಲಿಸಿಕೊಳ್ಳುವ ಪ್ರಯತ್ನವೇಹೊರತು, ಅಧೀನಪಡಿಸಿ ದುಡಿಸಿಕೊಳ್ಳುವ ಧೋರಣೆಯದಲ್ಲ. ಅತಿಪ್ರಾಚೀನ ಯಜ್ಞಗಳಲ್ಲಿ ಅತಿ ಆದಿಮ ತಂತ್ರವಿಧಾನಗಳೂ ಸೇರಿವೆ ಎಂಬುದು, ಧರ್ಮ ಮತ್ತು ಮಾಟಗಳು ಬೆರೆತಿದ್ದ ಒಂದು ಸ್ಥಿತಿಯನ್ನೂ ಸೂಚಿಸುತ್ತದೆಂಬ ಅಭಿಪ್ರಾಯವೂ ಇದೆ.[28]

ಸಮುದಾಯದಲ್ಲಿ ರೂಢಿಯಲ್ಲಿರುವ ಕೆಲವು ಉತ್ಪಾದಕಮಾಟದ ನಿದರ್ಶನಗಳು ಸಾರ್ವತ್ರಿಕ ಬಳಕೆಯವೇ. ರಕ್ಷಣಾತ್ಮಕ ಮತ್ತು ವಿನಾಶಾತ್ಮಕಮಾಟಗಳ ಅಪವಾದದ ನಿದರ್ಶನಗಳು ದೊರೆಯುತ್ತವಾದರೂ, ಅದು ಅವರ ಜೀವನವಿಧಾನದ ಮಾನ್ಯ ಭಾಗವಲ್ಲ.

ವೃಕ್ಷಪೂಜೆ ಕೂಡ ಅವುಗಳಲ್ಲಿ ಆತ್ಮದ ಇರುವಿಕೆಯನ್ನು ಗ್ರಹಿಸಿದ್ದರಿಂದ ಬಂದುದು. ಅರಳಿ, ಬೇವು ಮೊದಲಾದವು ಪೂಜ್ಯಸ್ಥಾನಗಳಾದುದು ಹೀಗೆ. ಅವು ಬ್ರಹ್ಮಪಿಶಾಚಿಗಳ ಆವಾಸಸ್ಥಾನವೆಂಬ ನಂಬಿಕೆಯೂ ಇಲ್ಲಿದೆ. ಅವನ್ನು ಉಚ್ಚಾಟಿಸಿದ ಐತಿಹ್ಯಗಳೂ ಇವೆ. ಮೂಲಭೂತ ಪೂಜಾಕ್ರಮಗಳಲ್ಲಿ ಒಂದಾದ ಕಣದಪೂಜೆ ಇತ್ತೀಚಿನ ದಿನಗಳಲ್ಲಿ ಸಮುದಾಯದ ಭಾಗವೂ ಆಗಿದೆ. ದೇವಸ್ಥಾನ, ಪುರೋಹಿತ, ನಿರ್ದಿಷ್ಟದೇವತೆ ಇಲ್ಲದೆ ನಿಸರ್ಗವನ್ನೇ ದೈವವೆಂದು ಭಾವಿಸಿ ತಾಂತ್ರಿಕಪೂಜೆ ನಡೆಸುವ ಈ ಪದ್ಧತಿ ಧರ್ಮಯುಗಕ್ಕೂ ಪೂರ್ವದ್ದು. ಅಲ್ಲದೆ, ವೃಕ್ಷದೇವತಾರಾಧನೆಗೇ ಸಂಬಂಧಿಸಿದಂತೆ, ಮೊದಲ ಫಲವನ್ನು ಊಟಮಾಡುವ ಮೊದಲು ಅನುಸರಿಸುವ ವಿಧಿಯು 'ಧರ್ಮೀಕರಣ'ಗೊಂಡಿರುವುದನ್ನು ಸಮುದಾಯದ 'ಆಗ್ರಯಣೇಷ್ಟಿ'ಯಲ್ಲಿ ಕಾಣಬಹುದು.

ಇ. ವರ್ಗೀಕರಣದ ಒಂದು ಸಾಧ್ಯತೆ:

ನಂಬಿಕೆಯು ಅಭಯದ ಮಾನಸಿಕಸ್ಥಿತಿ. ಅದರೊಂದಿಗೆ 'ಆಚರಣೆ'ಯೂ ಧರ್ಮದಲ್ಲಿ ಸೇರಿದೆ. ಪುರಾಣ, ಐತಿಹ್ಯ, ಮಂತ್ರವಿದ್ಯೆ, ಜನಪದವೈದ್ಯ, ಧರ್ಮ ಮೊದಲಾದ ಜನಪದ ಪ್ರಕಾರಗಳೊಡನೆ ಸಂಬಂಧಿಸಿರುವುದರಿಂದಲೇ ಅದು ಸಂಕೀರ್ಣಸ್ವರೂಪದ್ದಾಗಿ[29]

[28] ಪೂರ್ವೋಕ್ತ, ಪು.೫೨, ೫೩.

[29] ಹೆಚ್ಚು ವೈಜ್ಞಾನಿಕವೆಂದು ಹೇಳಲಾದ ಆರ್.ಎಸ್.ಬಾಗ್ಸ್ ಅವರ ವರ್ಗೀಕರಣ

ಸಾಹಿತ್ಯಿಕ ಬಗೆ	ಭಾಷಿಕ ಬಗೆ	ಕ್ರಿಯಾತ್ಮಕ ಬಗೆ	ವೈಜ್ಞಾನಿಕ ಬಗೆ
(ಪುರಾಣ, ಐತಿಹ್ಯ, ಕತೆ, ಗೀತೆ)	(ಗಾದೆ, ಒಗಟು, ಮಾತು, ಸನ್ನೆ)	(ಸಂಗೀತ, ನೃತ್ಯ, ಆಟ, ಹಬ್ಬ, ಪದ್ಧತಿ ನಾಟಕ)	ನಂಬಿಕೆ

- ಪುರಾಣ (ವಿಶ್ವದ ಸೃಷ್ಟಿ ಮತ್ತು ವ್ಯವಸ್ಥೆ)
- ಐತಿಹ್ಯ (ದೆವ್ವವನ್ನು ಕುರಿತ ನಂಬಿಕೆಗಳು)
- ಪದ್ಧತಿ (ಹೂಳುವುದು, ಆಹಾರಸೇವನೆ, ಪಾನೀಯ...)
- ಮಾಂತ್ರಿಕತೆ (ಪ್ರಾರ್ಥನೆ, ಶಾಪ, ಮಾಟ, ಇಂದ್ರಜಾಲ, ವೇಷ, ಮುದ್ರಿಕೆ, ಸಂಕೇತ)
- ವೈದ್ಯ
- ಕಾಲಜ್ಞಾನ (ಕನಸು, ಹಸ್ತಸಾಮುದ್ರಿಕೆ, ಸಂಖ್ಯಾಶಾಸ್ತ್ರ, ಜ್ಯೋತಿಷ, ಶಕುನ)

ಕಾಣಿಸುತ್ತದೆ. ಆದ್ದರಿಂದಲೇ ಅವುಗಳ ವರ್ಗೀಕರಣಕ್ಕೂ ಅನೇಕ ಸಾಧ್ಯತೆಗಳಿವೆ. ಇವು ತತ್ವಶಾಸ್ತ್ರ, ಸಮಾಜಶಾಸ್ತ್ರ, ಧರ್ಮ ಮೊದಲಾದ ದೃಷ್ಟಿಗಳಿಂದ ವಿಶ್ಲೇಷಣೆಗೆ ದಕ್ಕುತ್ತವೆ. ಕೆಲವು ನಿದರ್ಶನಗಳು ಸಮುದಾಯದ ಪ್ರವೃತ್ತಿಯನ್ನು ನಿಚ್ಚಳಗೊಳಿಸುತ್ತವೆ:

1. ಧಾರ್ಮಿಕ: ದೇವರು, ದೆವ್ವಗಳ ಕಲ್ಪನೆ; ತೆಂಗಿನಕಾಯಿಯನ್ನು ಗಣಪತಿಯ ಪ್ರತೀಕವಾಗಿ ಗಣಿಸುವುದು; ಹಿಮ್ಮಡಿ ತೊಳೆಯದಿದ್ದರೆ ಶನಿಮೆಟ್ಟಿಕೊಳ್ಳುತ್ತಾನೆಂಬ ಲೌಕಿಕ ಕ್ರಿಯಾರೂಪ; ಬ್ರಹ್ಮಚಾರಿಯು ಹಾಸಿಗೆಯಲ್ಲಿ ಮಲಗಬಾರದೆಂಬ ಶಾಸನರೂಪ ಇತ್ಯಾದಿಗಳು.

2. ವೈದ್ಯಕೀಯ: ಮಕ್ಕಳು ಬದನೆಕಾಯಿ ಕಚ್ಚಿದರೆ ಹಲ್ಲು ಹುಳುಕಾಗುತ್ತದೆ.

3. ಪೌರಾಣಿಕ: ಉತ್ತರಕ್ಕೆ ತಲೆಹಾಕಿ ಮಲಗಿದರೆ ಕೇಡು ಉಂಟಾಗುತ್ತದೆ.

4. ಜಾಗರೂಕತೆ: ಮಲಗುವಾಗ ಗೋಡೆಗೂ ಹಾಸಿಗೆಗೂ 'ಧರ್ಮಸ್ಥಳ ' ಬಿಡುವುದು - ಹಾವು, ಹಲ್ಲಿ ಹೊರಟುಹೋಗಲು ಎಚ್ಚರವಹಿಸುವ ರೀತಿ.

5. ನೈತಿಕ : ಹಣ್ಣು ಹಂಚದೆ ತಿಂದರೆ ಕಣ್ಣಾಕುಟಿಕೆ ಬರುತ್ತದೆ.

6. ಟೆಲಿಪತಿ: ತುಂಬಾ ಆಕಳಿಸಿದರೆ ಯಾರೋ ನೆನಪುಮಾಡಿಕೊಳ್ಳುತ್ತಿದ್ದಾರೆ ಎಂದು ತಿಳಿಯುವುದು.

7. ಅನುಭವಜನ್ಯ : ಅಕ್ಕತಂಗಿಯರ ವಿವಾಹಗಳು ಒಟ್ಟಿಗೆ ನಡೆದರೆ ಒಂದು ಏಳು; ಒಂದು ಬೀಳು.

8. ನಿಗ್ರಹ: ಅಕ್ಕಿತಿಂದರೆ ಮದುವೆಯಲ್ಲಿ ಮಳೆಬರುತ್ತದೆ.

9. ವೃತ್ತಿ, ಸಂಸ್ಕೃತಿ, ಧರ್ಮದ ಪ್ರೇರಣೆ: ಒಂದೇ ಮನೆಯಲ್ಲಿ ಮೂವರು ಬ್ರಹ್ಮಚಾರಿಗಳಿದ್ದರೆ ಅಶ್ರೇಯಸ್ಸು.

10. ಪ್ರಾದೇಶಿಕ ವೈವಿಧ್ಯ: ಒಂದೇ ಶಕುನವೇ ಪ್ರಾದೇಶಿಕ ಭಿನ್ನಪಾಠಗಳನ್ನು ಹೊಂದಿರುವ ನಿದರ್ಶನವನ್ನು ಕೆಳಗೆ ಕಾಣಿಸಿದೆ:

    0.1 ಎದುರಿಗೆ ಒಂಟಿ ಬ್ರಾಹ್ಮಣ ಬಂದರೆ ಹೊರಟ ಕೆಲಸ ವಿಘ್ನ (ಮಧ್ಯದೇಶ, ಲಿಂಗದಹಳ್ಳಿ, ಹಾಸನಸೀಮೆ).

    0.2 ಎದುರಿಗೆ ಒಂಟಿ ಅಬ್ರಾಹ್ಮಣ ಬಂದರೆ ಒಳ್ಳೆಯದು (ಮತ್ತೂರು)

    0.3 ಎದುರಿಗೆ ಒಂಟಿ ಅಬ್ರಾಹ್ಮಣ ಬಂದರೆ ವಿಘ್ನ (ಬೆಟ್ಟದಪುರ)

    0.4 ಎದುರಿಗೆ ಜಂಟಿ ಅಬ್ರಾಹ್ಮಣರು ಬಂದರೆ ವಿಘ್ನ (ಹಾಸನಸೀಮೆ)

    0.5 ಅಬ್ರಾಹ್ಮಣರ ಪರಿಗಣನೆ ಇಲ್ಲ (ಮಧ್ಯದೇಶ, ದಕ್ಷಿಣ)

11. ಅನುಕೂಲ: ಅಭ್ಯಂಗಕ್ಕೆ, ಹೆಂಗಸರಿಗೆ ಮತ್ತು ಗಂಡಸರಿಗೆ ಭಿನ್ನದಿನಗಳ ಶ್ರೇಷ್ಠತೆಯ ಕಲ್ಪನೆ.

12. ಪರಸ್ಪರ ಸಹಕಾರ: ಅರಳು ಆರಿಸುವಾಗ ಕಂಡೂ ಆರಿಸದೆ ಬಂದರೆ ಗಂಡ ಹೆಂಡತಿ ಬಿಟ್ಟುಹೋಗುತ್ತಾರೆ; ಎಲೆ ಹಚ್ಚುವವರು ಕಂಡಾಗ ಒಂದಾದರೂ ಹಚ್ಚಿಕೊಟ್ಟು ಬರಬೇಕು.

13. ವಿಸ್ತರಣ: ಪೂಜೆ 'ದಿಕ್ಕುಶುದ್ಧಿ'ಗೆ ಆಗಬೇಕು - ಅಡುಗೆ, ಚಾಪೆ, ಒಣಹಾಕಿದ ಬಟ್ಟೆ, ಆಸ್ತಿ ಕೊಳ್ಳುವಿಕೆ, ವಲಸೆ ಇತ್ಯಾದಿ ಕೂಡ.

14. ಸಂಕೋಚ, ವಿಕಾಸ : ವೈಯಕ್ತಿಕ ನಂಬಿಕೆ ಸಾರ್ವತ್ರಿಕವಾಗುವುದು (ನಂಬಿಕೆಗಳ ಅಸ್ತಿತ್ವವೇ ಹಾಗೆ ಆದುದು); ಸಾರ್ವತ್ರಿಕ ನಂಬಿಕೆಗಳು ಕೆಲವರಿಗೆ ಮಿತಗೊಳ್ಳುವುದು (ವಿಜ್ಞಾನಯುಗದ ಸಂದರ್ಭದಲ್ಲಿ ಅನೇಕ ನಂಬಿಕೆಗಳು ಕೆಲವರಿಗೆ ಸೀಮಿತವಾಗುತ್ತಿವೆ ಇಲ್ಲವೆ ನಾಶವಾಗುತ್ತಿವೆ).

15. ಅಪವಾದ : ವಿಧಿನಿಷೇಧಗಳಿಗೆ ಕೆಲವು ಸಂದರ್ಭಗಳಲ್ಲಿ ಅಪವಾದಗಳಿವೆ. ದಕ್ಷಿಣಾಯನದಲ್ಲಿ ಸಂಸ್ಕಾರ ಮಾಡಬಾರದೆಂಬುದು ಶಾಸ್ತ್ರ ವಿಧಿಸಿದ ನಿಷೇಧ. ಅದಕ್ಕೆ ಅಪವಾದವಿಲ್ಲ. ಆದರೆ ದಕ್ಷಿಣಾಯನವು ಯಾವುದಕ್ಕೂ ಪ್ರಶಸ್ತವಲ್ಲ ಎಂಬುದು ಮತ್ತೊಂದು ವಿಧಿ. ವಿಜಯದಶಮಿಯ ಯಾತ್ರೆಗೆ ಮಾತ್ರ ದಕ್ಷಿಣಾಯನವು ಆಗಬಹುದು ಎಂಬುದು ಅದಕ್ಕಿರುವ ಅಪವಾದ (ವಿನಾಯಿತಿ).

ಇಲ್ಲಿ ನಿದರ್ಶಿಸಿದ ನಂಬಿಕೆಗಳು ಸಂಕೇತಿಗಳಿಗೇ ಸೀಮಿತವಾದುವಾಗಲಿ ವಿಶಿಷ್ಟವಾದುವಾಗಲಿ ಅಲ್ಲ. ಆದರೆ ಅವರ ಗಾಢ ಪರಿಗಣನೆಯಲ್ಲಿರುವುದರಿಂದ ಆ ಸಮುದಾಯದ ಸಾಂಸ್ಕೃತಿಕ ಪ್ರವೃತ್ತಿಯನ್ನು ಅವು ನಿಚ್ಚಳಗೊಳಿಸುತ್ತವೆ.

ಈವರೆಗಿನ ಪರಿಶೀಲನೆಯಿಂದ ವ್ಯಕ್ತವಾಗುವಂತೆ, ಸಂಕೇತಿಗಳು ವೇದಮೂಲ ಧರ್ಮವನ್ನು ಅನುಷ್ಠಾನ ಮಾಡುವ ಹೊತ್ತಿನಲ್ಲಿಯೇ, ಕಾಲಕಾಲಕ್ಕೆ ಪ್ರಚಲಿತವಾದ ಇತರ ಧಾರ್ಮಿಕಪ್ರವೃತ್ತಿಗಳನ್ನೂ ಸೇರಿಸಿಕೊಳ್ಳುತ್ತಾ ಸಾಗಿದ್ದಾರೆ. ಪ್ರಯೋಜಕತೆ, ಸಮೂಹಸನ್ನಿಗಳೆರಡೂ ಅದಕ್ಕೆ ಪ್ರೇರಕಗಳಾಗಿವೆ. ದೇವತಾರಾಧನೆ, ಹಬ್ಬಗಳ ಸಂಪ್ರದಾಯಗಳು, ನಂಬಿಕೆಗಳು - ಇವೆಲ್ಲದರಲ್ಲಿಯೂ ವ್ಯಕ್ತವಾಗುವ ಈ ಪ್ರವೃತ್ತಿಯು ಪರಿವರ್ತನಶೀಲತೆಯನ್ನೇ ಪ್ರಕಟಿಸುತ್ತದೆ. ಇದರಿಂದಾಗಿ, ಸರಳವೂ, ನೇರವೂ ಆದ ಮಾರ್ಗದ ಮೂಲಕ ಆಧ್ಯಾತ್ಮಿಕ ಔನ್ನತ್ಯವನ್ನೂ, ಮಾನವೀಯ ಶ್ರೇಷ್ಠತೆಯನ್ನೂ ಸಾಧಿಸುವ ಸುಲಭಸಾಧ್ಯತೆಯು ತಪ್ಪಿ, ಬಾಹ್ಯಾಚರಣೆಗಳ ಭಾರದಿಂದ ಗೊಂದಲಕ್ಕೊಳಗಾಗುವ ಪರಿಣಾಮವಾಗಿದೆ. ಆದರೂ, ಈ ಸಂಕೀರ್ಣತೆಯೂ ಬದುಕನ್ನು ಧರ್ಮಕೇಂದ್ರಿತವಾಗಿಯೇ ಇಟ್ಟಿರುವುದರಿಂದ ಪತನದ ಭೀತಿಯನ್ನು ತಪ್ಪಿಸಿದೆ. ಆಧುನಿಕ ಪೀಳಿಗೆಯು ವೈಜ್ಞಾನಿಕ ಮನೋಭಾವವನ್ನು ಬೆಳೆಸಿಕೊಂಡಿರುವುದರಿಂದ ಧರ್ಮದ ಹಿಡಿತವು ಸಡಿಲವಾಗುತ್ತಿರುವ ಈ ಹೊತ್ತಿನಲ್ಲಿ, ಖಚಿತ ವೈಚಾರಿಕತೆಯನ್ನಾದರೂ ದಕ್ಕಿಸಿಕೊಳ್ಳದಿದ್ದರೆ ಆಗಬಹುದಾದ ವಿಘಟನೆಯ ಸೂಚನೆಯು ಸಮುದಾಯದಲ್ಲಿ ಅಲ್ಲಲ್ಲಿ ಕಾಣಿಸಿಕೊಳ್ಳುತ್ತಿದೆ.

ಅಧ್ಯಾಯ : ಏಳು

ಸಂಕೇತಿಗಳ ಭಾಷೆ ಮತ್ತು ಜನಪದ ಸಾಹಿತ್ಯ

ಭೌತಿಕ ಮತ್ತು ಅಭೌತಿಕ ಜಾನಪದದ ವಿವರಗಳಲ್ಲಿ ಸಂಕೇತಿಗಳ ಸಂಸ್ಕೃತಿಯ ಅನನ್ಯತೆಯ ಸ್ವರೂಪದ ಬಗೆಗೆ ಕಳೆದ ಪರಿಚ್ಛೇದಗಳಲ್ಲಿ ಗಮನಿಸಲಾಯಿತು. ಪ್ರಸ್ತುತ ಅಧ್ಯಾಯವು ಶಾಬ್ದಿಕ ಜಾನಪದದ ಮೂಲಕ ಅದರ ಸ್ವರೂಪವನ್ನು ಅವಲೋಕಿಸುತ್ತದೆ. ಯಾವುದೇ ಸಾಹಿತ್ಯದ ಭಾಷಿಕ, ಬೌದ್ಧಿಕ, ಭೌಗೋಳಿಕ ನೆಲೆಯಲ್ಲಿ ಪ್ರತಿಯೊಂದು ಜಾನಪದ ರೂಪವೂ ವಿಶಿಷ್ಟವಾಗಿ ರೂಪುಗೊಳ್ಳುತ್ತಾ ಹೋಗುತ್ತದೆ. ಸಂಕೇತಿ ಜನಪದ ಸಾಹಿತ್ಯವೂ ಇದಕ್ಕೆ ಹೊರತಲ್ಲ.

೧. ಭಾಷೆ

ಸಂಕೇತಿ ಜನಪದ ಸಾಹಿತ್ಯದ ಅವಲೋಕನಕ್ಕೆ ತೊಡಗುವ ಮೊದಲು ಅವರ ಭಾಷಿಕ ಹಿನ್ನೆಲೆಯನ್ನು ಇಲ್ಲಿ ಪರಿಶೀಲಿಸಬೇಕಾಗಿದೆ. ಸಂಸ್ಕೃತಿಯ ಒಂದು ಮುಖ್ಯ ಅಂಗ ಭಾಷೆ. ಸಂಕೇತಿ ಸಮುದಾಯದಲ್ಲಿ ಭಾಷೆಯು ವೈವಿಧ್ಯಪೂರ್ಣವಾಗಿ ಅಭಿವ್ಯಕ್ತಿಗೊಂಡ ಪ್ರವೃತ್ತಿಯನ್ನು ಅವಲೋಕಿಸುವ ಪ್ರಯತ್ನವನ್ನು ಇಲ್ಲಿ ಮಾಡಲಾಗಿದೆ.

ಅ. ವರ್ಗೀಕರಣ :

1. ಪ್ರಾದೇಶಿಕ ದೂರದಿಂದಾದ ಅಸಂಪರ್ಕ ಇಲ್ಲವೆ ಅಲ್ಪಸಂಪರ್ಕ; ಪ್ರಾದೇಶಿಕ ಸನ್ನಿವೇಶ- ಇವುಗಳಿಂದ ಉಂಟಾದ ಪ್ರಾದೇಶಿಕ ಉಪಭಾಷೆಗಳ ವರ್ಗೀಕರಣವನ್ನು ಹೀಗೆ ತೋರಿಸಬಹುದು:

0.1	ತಮಿಳುನಾಡು : ಸಂಕೇತಿ ಭಾಷೆ	ತಿರುನೆಲ್‌ವೇಲಿ, ಕನ್ಯಾಕುಮಾರಿ ಜಿಲ್ಲೆಗಳು		ಸುಮಾರು ೨೦೦೦ ಜನ
0.2	ಕೇರಳದ : ಸಂಕೇತಿ ಭಾಷೆ	ತಿರುವನಂತಪುರಂ ಜಿಲ್ಲೆ ಮತ್ತು ತಮಿಳುನಾಡಿನ ಗಡಿಯ ಹಳ್ಳಿಗಳು		
0.3	ಕರ್ನಾಟಕದ : ಸಂಕೇತಿ ಭಾಷೆ	ಮಧ್ಯದೇಶ, ಹಾಸನಸೀಮೆ -	ಸುಮಾರು ೧೫೦೦೦ ಜನ	ಸುಮಾರು ೨೩೦೦೦ ಜನ
		ಮತ್ತೂರು -	ಸುಮಾರು ೧೩೦೦ ಜನ	
		ಲಿಂಗದಹಳ್ಳಿ -	ಸುಮಾರು ೭೦೦ ಜನ	
		ಬೆಟ್ಟದಪುರ -	ಸುಮಾರು ೬೦೦೦ ಜನ	

ಪದಗಳು, ಅವುಗಳ ರಚನೆ, ಉಚ್ಚಾರ, ಅನ್ಯಭಾಷಾಪದಸ್ವೀಕಾರ ಮತ್ತು ಪ್ರಭಾವದ ಪ್ರಮಾಣವೈವಿಧ್ಯ - ಇವೆಲ್ಲವೂ ಉಪಭಾಷೆಗಳನ್ನು ಸ್ಥಿರಗೊಳಿಸಿವೆ; ಆದರೆ ಸಂವಾದಸಾಧ್ಯತೆಯನ್ನು ದೂರ ಮಾಡಿಲ್ಲ.

2. ನಿಕಟತೆಯ ದೃಷ್ಟಿಯಿಂದ ವರ್ಗೀಕೃತ ಸಂಕೇತಿ ಭಾಷೆಯ ಲಕ್ಷಣಗಳನ್ನು ಹೀಗೆ ಗುರುತಿಸಬಹುದು:

0.1 ದಕ್ಷಿಣದ ಎಲ್ಲ ಸಂಕೇತಿಗಳೂ ಅಲ್ಲಿನ ಇತರ ತಮಿಳು ಬ್ರಾಹ್ಮಣರಿಗೆ ಸಮಾನವಾದ ಭಾಷೆಯನ್ನೇ ಬಳಸುತ್ತಾರೆ. ಕೇರಳದ (ನಂಬೂದಿರಿಯೇತರ) ತಮಿಳು ಬ್ರಾಹ್ಮಣರೆಲ್ಲರೂ ತಮಿಳುನಾಡಿನಿಂದಲೇ ವಲಸೆ ಹೋದವರಾದುದರಿಂದ ಅವರ ತಮಿಳೂ ಭಿನ್ನವಾದುದಲ್ಲ.

0.2 ಆಡುಮಾತು, ವ್ಯವಹಾರ, ವಿದ್ಯಾಭ್ಯಾಸವು ಪೂರ್ಣವಾಗಿ ತಮಿಳಿನಲ್ಲಿಯೇ ಇರುವುದು ತಮಿಳುನಾಡಿನಲ್ಲಿ. ತಮಿಳನ್ನು ಮನೆಯ ಮಾತಾಗಿ ಇಟ್ಟುಕೊಂಡು ವಿದ್ಯಾಭ್ಯಾಸ ಮತ್ತು ವ್ಯವಹಾರಗಳಿಗೆ ಮಲೆಯಾಳವನ್ನೇ ಬಳಸುವ ಕೇರಳದ (ಎಲ್ಲ ತಮಿಳರಂತೆ) ಸಂಕೇತಿಗಳ ತಮಿಳಿನಲ್ಲಿ ಮಲೆಯಾಳಂ ಪದಗಳು, ಪದರಚನಾಪ್ರಭಾವ, ಉಚ್ಚಾರಣಾಪ್ರಭಾವ ಸಹಜವಾಗಿ ಕಾಣಿಸುತ್ತವೆ. ಆದರೆ, ತಮಿಳುನಾಡಿನ ನಿಕಟತೆ, ಬಂಧುತ್ವ, ತಮಿಳು ಬಳಕೆಯ ಪ್ರಮಾಣದ ಕಾರಣದಿಂದ, ಆಡುತಮಿಳಿನಲ್ಲಿ ಆದ ವ್ಯತ್ಯಾಸವು ಗಣನೀಯವಾಗಿ ದೊಡ್ಡದಲ್ಲ.

0.3 ಕರ್ನಾಟಕದ ಸಂಕೇತಿಗಳು ದಕ್ಷಿಣದೊಂದಿಗೆ ಮಾತ್ರವಲ್ಲದೆ ಕರ್ನಾಟಕದ ಇತರ ತಮಿಳು ಬ್ರಾಹ್ಮಣರೊಂದಿಗೂ ಸಾಂಸ್ಕೃತಿಕ ಇಲ್ಲವೆ ಭಾಷಾ ಸಂಪರ್ಕವನ್ನು ಬೆಳೆಸಿಕೊಳ್ಳಲಿಲ್ಲ. ಅವರ ಒಡನಾಟವು ಪೂರ್ಣವಾಗಿ ಕನ್ನಡಿಗರೊಂದಿಗೇ ಆಗಬೇಕಾದುದು ಅವರು ವಲಸೆಬಂದ ಕಾಲಸ್ಥಿತಿಯ ಅನಿವಾರ್ಯವಾಗಿತ್ತು. ಕ್ರಮೇಣ, ವಿದ್ಯಾಭ್ಯಾಸ ಮತ್ತು ವ್ಯವಹಾರದಲ್ಲಿ ಕನ್ನಡದ ಬಳಕೆ ಹೆಚ್ಚಾಗುತ್ತಾ ಸಾಗಿತು. ಈ ಕಾರಣಗಳಿಂದ, ಅವರ ತಮಿಳು ಕನ್ನಡದಿಂದ ಹೆಚ್ಚು ಪ್ರಭಾವಗೊಂಡಿತು.

ಪ್ರಾಚೀನರಿಗೆ ಬರವಣಿಗೆಯ ಅಗತ್ಯ ಹೆಚ್ಚಾಗಿರಲಿಲ್ಲ; ಇದ್ದಾಗಲೂ, ಅದರ ಅಗತ್ಯವಿದ್ದ ಅಲ್ಪಸಂಖ್ಯಾತರಿಗೆ ಸಂಸ್ಕೃತದ ನೆರವು ಇತ್ತು. ಆದುದರಿಂದ, ಮೊದಲು ತಮಿಳು ಬರವಣಿಗೆ ಬಿಟ್ಟುಹೋಯಿತು; ಶತಮಾನದ ಆದಿಭಾಗದವರೆಗೆ ಅದು ಅಲ್ಲಲ್ಲಿ 'ಓದುವುದರ' ಮಿತಿಯಲ್ಲಿ ಮಾತ್ರ ಇತ್ತು; ಮುಂದೆ ಕೇವಲ ಆಡುಮಾತಾಗಿ ಉಳಿಯಿತು.

ಆಧುನಿಕ ವಿದ್ಯೆ ಮತ್ತು ನಗರೀಕರಣಕ್ಕೊಳಗಾದವರಿಗೆ ಮನೆಮಾತೂ ಕನ್ನಡವಾಗಿದೆ. ಪರಿಣಾಮವಾಗಿ, ಹೊಸಪೀಳಿಗೆಗೆ ಸಂಕೇತಿಭಾಷೆಯ ಅರಿವು ಇರುವುದಿಲ್ಲ.

3. ಈ ಸ್ಥಿತ್ಯಂತರದ ಸನ್ನಿವೇಶದಲ್ಲಿ, ಇತರ ಕೆಲವು ಸಾಂಸ್ಕೃತಿಕ ಪರಿಣಾಮಗಳೂ ಆಗಿವೆ.

0.1 ಬಾಲ್ಯದಿಂದಲೂ ಸಂಕೇತಿ ಭಾಷೆ ಬಳಕೆಗೆ ಒಗ್ಗಿರುವವರೊಡನೆ (ಉದಾಹರಣೆಗೆ ತಂದೆತಾಯಿಗಳು, ಬಾಲ್ಯದ ಗೆಳೆಯರು) ಮಾತ್ರ ಆ ಭಾಷೆಯಲ್ಲಿ ವ್ಯವಹರಿಸುವುದು; ಅಂಥವರೊಡನೆ ಕನ್ನಡಭಾಷಾ ವ್ಯವಹಾರವು ಕೃತಕವೆಂಬ ಭಾವನೆ ತಾಳಿರುವುದು.

0.2 ಈ ಶತಮಾನದ ಮಧ್ಯಭಾಗದ ನಗರವಾಸೀ ದಂಪತಿಗಳು ಪರಸ್ಪರವಾಗಿ ಸಂಕೇತಿ ಭಾಷೆಯಲ್ಲಿ ವ್ಯವಹರಿಸಿದರೂ, ಮಕ್ಕಳೊಡನೆ ಕನ್ನಡದಲ್ಲಿಯೇ ವ್ಯವಹರಿಸುವುದು.

0.3 ಹೊಸಬರೊಬ್ಬರು (ನಗರ ಸನ್ನಿವೇಶದಲ್ಲಿ) ಪರಿಚಿತರಾದಾಗ, ಬಂಧುವೇ ಆದರೂ, ಸಂಕೇತಿ ಭಾಷೆಯ ವ್ಯವಹಾರವನ್ನು ಕೃತಕವೆಂದು ಭಾವಿಸುವುದು.

0.4 ಹಳ್ಳಿಗಳಲ್ಲಿ ಮಾತ್ರ ಇಂದಿಗೂ ಬಹುಪ್ರಮಾಣದಲ್ಲಿ, ಸಂಕೇತಿಗಳ ನಡುವೆ ಕನ್ನಡ ವ್ಯವಹಾರವು ಕೃತಕವೆಂದು ಪರಿಗಣಿತವಾಗುವುದು.

0.5 ಲಿಂಗದಹಳ್ಳಿಯು ಕೇವಲ ನಲವತ್ತು ಮನೆಗಳ 'ಸಂಕೇತಂ' ಆದುದರಿಂದಲೇ, ಬಹುಸಂಖ್ಯಾತ ಕನ್ನಡಿಗರ ನಡುವೆ ದ್ವೀಪದಂತೆ ಉಳಿದಿದೆ; ಉಳಿದೆಲ್ಲರಿಗಿಂತ ಹೆಚ್ಚಾಗಿ ದೈಹಿಕವಾಗಿ ವ್ಯವಸಾಯದಲ್ಲಿ ತೊಡಗಿಕೊಂಡಿದೆ. ಆದುದರಿಂದ, ಅದು ಹಳ್ಳಿಯೇ ಆದರೂ, ಒಂದು ವಿಶಿಷ್ಟ ಭಾಷಾಪ್ರವೃತ್ತಿ ವಿಕಾಸವಾಗಿದೆ:

0.0.1 ಪುರುಷರು ಪರಸ್ಪರ ವ್ಯವಹಾರದಲ್ಲಿ ನೂರಕ್ಕೆ ನೂರು ಕನ್ನಡವನ್ನು ಬಳಸುವರು.

0.0.2 ಪುರುಷರು ತಮ್ಮ ಸ್ತ್ರೀಯರೊಂದಿಗೆ ವ್ಯವಹರಿಸುವಾಗ (ಶೇಕಡ ಅರುವತ್ತು ಕನ್ನಡ ಮತ್ತು ಶೇಕಡ ನಲವತ್ತು ತಮಿಳು) ಕನ್ನಡ-ತಮಿಳನ್ನು ಬಳಸುವರು.

0.0.3 ಸ್ತ್ರೀಯರು ಪರಸ್ಪರರಲ್ಲಿ ವ್ಯವಹರಿಸುವಾಗ (ಶೇಕಡ ಎಂಬತ್ತು ತಮಿಳು ಮತ್ತು ಶೇಕಡ ಇಪ್ಪತ್ತು ಕನ್ನಡ) ತಮಿಳು-ಕನ್ನಡದಲ್ಲಿ ವ್ಯವಹರಿಸುವರು.

ಈ ಕಾರಣಗಳಿಂದಾಗಿ, ಭಾಷೆಯ ಮೂಲಕ ವ್ಯಕ್ತವಾಗುತ್ತಿದ್ದ ಸಂಕೇತಿತನ ನಷ್ಟವಾಗುತ್ತಿದೆ. ಹೊಸ ನಾಡಿನಲ್ಲಿ ಈ ಭಾಷೆ ಉಂಟುಮಾಡುತ್ತಿದ್ದ ಆತ್ಮೀಯತೆಯ ತಹತಹ, ಇಲ್ಲಿ ನೆಲೆಸಿದ ಒಂಬತ್ತು ಶತಮಾನಗಳನಂತರ ಇಲ್ಲದುದು ಸಹಜವೂ ಆಗಿದೆ. ನಗರೀಕರಣದಿಂದಾಗಿ ಸಾಮಾಜಿಕ ಒಡನಾಟವೂ ಕಡಮೆಯಾಗಿ, ಸಾಮಾಜಿಕ ಮತ್ತು ಆರ್ಥಿಕ ಸ್ಥಿತ್ಯಂತರವೂ ಉಂಟಾದ ಸನ್ನಿವೇಶದಲ್ಲಿ, ಆ ಭಾಷೆ ಉಂಟುಮಾಡಬಹುದಾಗಿದ್ದ ಆತ್ಮೀಯತೆಯು ನಷ್ಟವಾಗಿ ಪರಕೀಯತೆಯೂ ಪುಷ್ಟಿಗೊಳ್ಳುತ್ತಿದೆ.

ಕರ್ನಾಟಕದ ಪ್ರಾದೇಶಿಕ ಉಪಭಾಷೆಗಳಲ್ಲಿಯೇ ಕೌಶಿಕ, ಬೆಟ್ಟದಪುರ ಉಪಭಾಷೆಗಳು ಹೆಚ್ಚಿನ ವ್ಯತ್ಯಾಸವನ್ನು ಬೆಳೆಸಿಕೊಂಡಿರುವುದನ್ನು, ಆ ಬಗೆಗೆ ಅಧ್ಯಯನ ಮಾಡಿದವರೆಲ್ಲರೂ ಗುರುತಿಸಿದ್ದಾರೆ. ಮಧ್ಯದೇಶ-ಹಾಸನಸೀಮೆಯ ಉಪಭಾಷೆಗಳ ವ್ಯತ್ಯಾಸವು, ನಿಕಟತೆಯ ಕಾರಣದಿಂದಲೇ ಗೌಣವಾಗಿದೆ. ಮತ್ತೂರು ಉಪಭಾಷೆ ಅವೆರಡರಿಂದಲೂ ಹೆಚ್ಚು ಭಿನ್ನತೆಯನ್ನು ಪ್ರಕಟಿಸುತ್ತದೆ. ಬೆಟ್ಟದಪುರ, ಲಿಂಗದಹಳ್ಳಿ, ಪರಸ್ಪರವಾಗಿ ಹೆಚ್ಚಿನ ಸಾಮ್ಯವನ್ನು ಪ್ರಕಟಿಸುತ್ತವೆ; ಮತ್ತೂರು ಉಪಭಾಷೆ ಕೆಲವು ಅಂಶಗಳಲ್ಲಿ ಅವುಗಳೊಂದಿಗೆ ಸಂವಾದಿಯಾಗಿದೆ (ನೋಡಿ: ಪಟ್ಟಿ 21 ಪು.327-329).

ಸಂಕೇತಿ ಭಾಷೆಯು ಧ್ವನಿಮಾ ಮತ್ತು ವ್ಯಾಕರಣ ವಿಚಾರದಲ್ಲಿ ತಮಿಳು ಭಾಷಾ ರಚನೆಯ ಸರಳೀಕರಣವೇ ಆಗಿದೆ. ಮುಖ್ಯವಾಗಿ ಆಯಾ ಪ್ರದೇಶದ ಕನ್ನಡಭಾಷೆಯ ಪ್ರಭಾವ ಅದರ ಮೇಲಾಗಿದೆ. ಕರ್ನಾಟಕದ ಎಲ್ಲ ಸಂಕೇತಿ ಉಪಭಾಷೆಗಳಲ್ಲಿಯೂ ಭಾಷೆಯನ್ನು ಸರಳಗೊಳಿಸುವ ಪ್ರವೃತ್ತಿ ಹೀಗೆ ವ್ಯಕ್ತವಾಗಿದೆ.

ಒಟ್ಟಿನಲ್ಲಿ, ಕೇವಲ ಸುಮಾರು ಇಪ್ಪತ್ತೈದು ಸಹಸ್ರ ಜನಸಂಖ್ಯೆಯ ಪುಟ್ಟ ಸಮುದಾಯವಾದರೂ, ಅದರ ಪ್ರಾದೇಶಿಕ ಹರಹು ಮತ್ತು ವಿಭಿನ್ನ ಭಾಷಾವಲಯಗಳ ಹರಹಿನ ಸನ್ನಿವೇಶದಲ್ಲಿ, ಆ ಭಾಷೆಯು ವೈವಿಧ್ಯಪೂರ್ಣವಾದ ಬೆಳವಣಿಗೆಗಳನ್ನು ಪ್ರಕಟಿಸಿದೆ. ಅದರೊಂದಿಗೆ ಸಾಂಸ್ಕೃತಿಕ ಪರಿಣಾಮಗಳೂ ತಳಕು ಹಾಕಿಕೊಂಡಿರುವುದು ಗಮನಾರ್ಹವಾದುದು.

ಆ. ಕನ್ನಡೀಕರಣ :

1. ತಮಿಳಿನ ಮುಖ್ಯ ಪ್ರವಾಹದಿಂದ ಬಿಡಿಸಿಕೊಂಡು ಕನ್ನಡ ಭಾಷಾ ಪರಿವಲಯವನ್ನು ರೂಢಿಸಿಕೊಂಡುದರ ಹಿನ್ನೆಲೆಯಲ್ಲಿಯೇ, (ಕರ್ನಾಟಕದ) ಸಂಕೇತಿ ಭಾಷೆಗೆ ಸಂಬಂಧಿಸಿದಂತೆ ಭಾಷಾವಿಜ್ಞಾನಿಗಳ ಅವಲೋಕನಗಳನ್ನಿಲ್ಲಿ ಗಮನಿಸಬಹುದು.

0.1 'ಸಂಕೇತಿ', ತಮಿಳಿನ ಒಂದು ಉಪಭಾಷೆಯಾಗಿದೆ.

0.2 'ಸಂಕೇತಿ', ಮಲೆಯಾಳಂನ ಉಪಭಾಷೆಯಲ್ಲ. ಪ್ರಾಕ್‌ದ್ರಾವಿಡದಿಂದ ಮಲೆಯಾಳಂ ಬೇರ್ಪಟ್ಟನಂತರ ಅದರಲ್ಲಾದ ಬೆಳವಣಿಗೆಯ ಲಕ್ಷಣಗಳು ಸಂಕೇತಿ ಭಾಷೆಯಲ್ಲಿ ಕಾಣಿಸಿಕೊಳ್ಳುವುದಿಲ್ಲ.

0.3 ಮಲೆಯಾಳಂ ಭಾಷೆಯ ಪ್ರಭಾವವಂತೂ, ಕನ್ನಡನಾಡಿನ ಸಂಕೇತಿಗಳ ಭಾಷೆಯಲ್ಲಿಯೂ ಕಾಣಿಸುತ್ತದೆ.

0.4 ಕರ್ನಾಟಕದ ಸಂಕೇತಿಗಳು ಅಪಭ್ರಂಶಗೊಂಡ (corrupt) ತಮಿಳನ್ನು ಬಳಸುತ್ತಾರೆ.

ಈಗಿನ ತಮಿಳುನಾಡು ಮತ್ತು ಕೇರಳ ರಾಜ್ಯಗಳ ಗಡಿಯ ಭಾಗದಲ್ಲಿದ್ದ ಸಂಕೇತಿಗಳ ಭಾಷೆಯಲ್ಲಿನ ಮಲೆಯಾಳಾಂಶಗಳು ಸಹಜ ಪ್ರಾದೇಶಿಕ ಪ್ರಭಾವದವು. ಆದರೆ ಸ್ವತಂತ್ರಗೊಂಡ ಮಲೆಯಾಳಂ ಭಾಷೆಯು ವಿಕಾಸವಾಗುವ ವೇಳೆಗೆ ಸಂಕೇತಿಗಳು ಕರ್ನಾಟಕಕ್ಕೆ ವಲಸೆ ಬಂದಾಗಿತ್ತು. ಆದುದರಿಂದ ಅನಂತರದ ಮಲೆಯಾಳಂ ಭಾಷಾಲಕ್ಷಣಗಳು ಸಂಕೇತಿಭಾಷೆಯಲ್ಲಿ ಇಲ್ಲದುದೂ ಸಹಜವಾದುದು.

ಹಲವು ಶತಮಾನಗಳ ಕನ್ನಡಪ್ರಭಾವದಿಂದಾಗಿ ಸಂಕೇತಿಭಾಷೆಯು ತಮಿಳಿನ ಅಪಭ್ರಂಶ ರೂಪವಾದುದು ಯಾವುದೇ ಜೀವಂತಭಾಷೆಗೆ ಸಹಜವಾದ ಬೆಳವಣಿಗೆ. ಆಧುನಿಕ ವಿದ್ಯಾಭ್ಯಾಸಕ್ರಮಕ್ಕೆ ಪೂರ್ಣವಾಗಿ ತೆರೆದುಕೊಂಡ ಈ ಸಮುದಾಯದ ಮೇಲೆ ಈಗ ಆಗುತ್ತಿರುವ ತೀವ್ರ ಕನ್ನಡಪ್ರಭಾವದಿಂದಾಗಿ, ಸಂಕೇತಿ ಭಾಷೆಯು ಕನ್ನಡದ ಉಪಭಾಷೆಯಂತಾದರೆ ಆಶ್ಚರ್ಯವಿಲ್ಲ.

ಈ ಸ್ಥಿತ್ಯಂತರವು ಇತರ ಸಾಂಸ್ಕೃತಿಕ ಅಂಶಗಳೊಡನೆ ತಳಕು ಹಾಕಿಕೊಂಡಿರುವಂಥದು. ಸಮುದ್ರಯಾನ ಮಾಡಬಾರದು, ಅಗ್ನಿಹೋತ್ರಿಯಾಗಿರುವುದರಿಂದ ಒಂದುರಾತ್ರಿಯೂ ಪರಸ್ಥಳದಲ್ಲಿ ನಿಲ್ಲಬಾರದು, ಇಂಗ್ಲಿಷ್ ಕಲಿಯಬಾರದು ಎಂಬ ಮಡಿವಂತಿಕೆಯ ಜೊತೆಗೆ - ಕನ್ನಡವನ್ನು ಉಚ್ಚರಿಸಲೂಬಾರದು, ಸಂಕೇತಿ ಭಾಷೆಯಲ್ಲಿಯೇ ಮಾತನಾಡಬೇಕೆಂಬ ಸಾಂಸ್ಕೃತಿಕ ವಿಧಿ ಈ ಶತಕದ ಆದಿಭಾಗದಲ್ಲಿಯೂ ಅಲ್ಪಪ್ರಮಾಣದಲ್ಲಿಯಾದರೂ ಉಳಿದಿತ್ತು.

ಲಿಪಿ ಇಲ್ಲದುದರಿಂದಾಗಿ ಸಂಕೇತಿ ಭಾಷೆಯು ಬೇಗ ಅನ್ಯಪ್ರಭಾವಕ್ಕೊಳಗಾಗಿ ತನ್ನ ಮೂಲಗುಣವನ್ನು ಕಳೆದುಕೊಂಡುದು; ನಗರೀಕರಣ ಮತ್ತು ಆರ್ಥಿಕ ಸ್ಥಿತ್ಯಂತರಗಳ ಸನ್ನಿವೇಶದಲ್ಲಿ ಆತ್ಮೀಯಬಂಧದ ಮಾಧ್ಯಮವಾಗಿ ಈ ಭಾಷೆ ಕೆಲಸ ಮಾಡುವ ಸಾಧ್ಯತೆ - ಇವುಗಳನ್ನು ಗಮನಿಸಿದ ಚಿಂತಕರು ಈ ಶತಮಾನದ ಮಧ್ಯಭಾಗದ ಹೊತ್ತಿಗೆ ಈ ಭಾಷೆಯ ಅಸ್ತಿತ್ವವನ್ನು ಕುರಿತು ವಿಚಾರ ಮಾಡುವಂತಾಯಿತು. ಈ ಭಾಷೆಗಾಗಿಯೇ ಲಿಪಿಯೊಂದನ್ನು ಸೃಷ್ಟಿಸಬೇಕು; ಅದರ ವಿಶಿಷ್ಟ ಧ್ವನಿಮಾಗಳಿಗೆ ತಕ್ಕ ಸಂಕೇತಕೊಟ್ಟು ಕನ್ನಡಲಿಪಿ ಬಳಸಬೇಕು; ಸಂಕೇತಿಗಳು ಪರಸ್ಪರವಾಗಿ ತಮ್ಮ ಭಾಷೆಯಲ್ಲಿಯೇ ವ್ಯವಹರಿಸಬೇಕು - ಇತ್ಯಾದಿ ಸಲಹೆಗಳು ಅಭಿಮಾನದ ಆವೇಶದಲ್ಲಿ ಬಂದಹಾಗೆಯೇ ವಾಸ್ತವಿಕತೆಯ ಸನ್ನಿವೇಶದಲ್ಲಿ ಸತ್ತವು.

2. ಸಂಪ್ರದಾಯಕ್ಕೆ ಜೋತುಬೀಳುವ ಗುಣವು ಭಾಷೆಯ ಸಂದರ್ಭದಲ್ಲಿಯೂ ಪ್ರಖರವಾಗಿ ವ್ಯಕ್ತಗೊಳ್ಳುವ ಕೆಲವು ಸನ್ನಿವೇಶಗಳಿವೆ:

- 0.1 ಕೋಡಂಗಿ ಸಭೆಯಲ್ಲಿ (ವಿವಾಹ ಸಂದರ್ಭ) ನಡೆಯುವ ಸಂಭಾಷಣೆಯಲ್ಲಿ,
- 0.2 ಶ್ರಾದ್ಧದ ತೃಪ್ತಿಪ್ರಶ್ನೆ, ಉಪಚಾರದ ಸಂದರ್ಭಗಳಲ್ಲಿ,
- 0.3 ವಿವಾಹದ ಸಂದರ್ಭದ ಕಾಶೀಯಾತ್ರೆಯ ಅನಂತರದ ಸಂಭಾಷಣೆಯಲ್ಲಿ,
- 0.4 ದೀಪಾವಳಿಯಲ್ಲಿ ಬಲೀಂದ್ರಪೂಜೆಯ ವೇಳೆಯಲ್ಲಿ ಹಾಡುವ 'ವಾರಾತುರುವೆ' ಹಾಡಿನಲ್ಲಿ ಇತ್ಯಾದಿ.

ಸಂಕೇತಿ ಸಮ್ಮೇಳನಗಳ ವೇಳೆ ಪ್ರಯತ್ನಪೂರ್ವಕವಾಗಿ ಭಾಗಶಃ ಸಂಕೇತಿ ಭಾಷೆಯ ಬಳಕೆ ಮಾಡುವುದು - ಇತ್ತೀಚಿನ ಪದ್ಧತಿ ಆಗಿದೆ.

ಮೇಲೆ ಹೇಳಿದ ಪಳೆಯುಳಿಕೆಯ ನಿರ್ವಹಣೆಯೂ ಆಂಶಿಕವಾದುದು. ಸಂಸ್ಕಾರ-ಸಭೆಗಳ 'ಆಶೀರ್ವಾದ', 'ಓದಿಸುವುದು' - ಇಂಥ ಮುಖ್ಯ ಸಾಂಸ್ಕೃತಿಕ ಸಂದರ್ಭಗಳಲ್ಲಿಯೂ ಬಳಕೆಯಾಗುತ್ತಿದ್ದ ತಮಿಳು, ಕಳೆದ ಕೆಲವು ದಶಕಗಳಲ್ಲಿ ಪೂರ್ಣವಾಗಿ ಕನ್ನಡಕ್ಕೆ ಜಾಗ ಮಾಡಿಕೊಟ್ಟಿರುವುದು ಕನ್ನಡೀಕರಣದ ತೀವ್ರತೆಯ ನಿದರ್ಶನಗಳಲ್ಲೊಂದಾಗಿದೆ.

ಸಂಕೇತಿ ಸಭೆ, ಸಮ್ಮೇಳನಗಳು ಕನ್ನಡದಲ್ಲಿ ನಡೆಯುತ್ತವೆ. ಅವರು ಹೊರಡಿಸುವ ಪತ್ರಗಳೂ ಸ್ಮರಣಸಂಚಿಕೆಗಳೂ ಲಿಪಿ ಮಾತ್ರವಲ್ಲದೆ ಭಾಷೆಯಲ್ಲಿಯೂ ಕನ್ನಡದಲ್ಲಿಯೇ ಇರುತ್ತವೆ ಎಂಬುದು, ಸಂಕೇತಿಗಳ ಕನ್ನಡೀಕರಣದ ಪ್ರಮಾಣವನ್ನೂ ಸ್ಪಷ್ಟಪಡಿಸುತ್ತದೆ.

ಶುದ್ಧತಮಿಳೂ ಅಲ್ಲದ, ಶುದ್ಧ ಕನ್ನಡವೂ ಅಲ್ಲದ, ವಿಚಿತ್ರ ಮಿಶ್ರಣವು ಇದಾಗಿರುವುದರಿಂದ ಇತರರೆದುರು ತಮ್ಮ ಭಾಷೆಯನ್ನು ಪ್ರದರ್ಶಿಸಲು ನಾಚುವ ಪ್ರವೃತ್ತಿಯು ದಟ್ಟವಾಗಿರುವುದು ಕೂಡ, ಸಂಕೇತಿ ಭಾಷೆಯು ಶೀಘ್ರವಾಗಿ ಪೂರ್ಣವಾಗಿ ಕನ್ನಡಕ್ಕೆ ಜಾಗಮಾಡಿಕೊಡುವ ಪ್ರಕ್ರಿಯೆಯನ್ನು ಪೂರೈಸುವ ಸೂಚನೆ ಕೊಡುತ್ತಿದೆ.

ಸುಮಾರು ಒಂಬತ್ತು ಶತಮಾನಗಳ ದೀರ್ಘ ಅವಧಿಯವರೆಗೆ, ತಮಿಳುಮೂಲದ ಪುಟ್ಟ ಸಮುದಾಯವೊಂದು ಭಿನ್ನ ಭಾಷೆಯೊಂದರ ನಡುವೆ ತನ್ನ ಭಾಷಾವೈಶಿಷ್ಟ್ಯವನ್ನು ಕಾಯ್ದುಕೊಂಡುದು, ಭಾಷೆಯು ಸಂಸ್ಕೃತಿಯ ಮುಖ್ಯಘಟಕವಾದುದರಿಂದಲೇ. ಆದರೆ, ಸಾಂಸ್ಕೃತಿಕವಾಗಿ ಗಾಢ ಕನ್ನಡೀಕರಣಕ್ಕೆ ಒಳಗಾದಂತೆ, ಭಾಷೆಯೂ ಕನ್ನಡತನವನ್ನು ರೂಢಿಸಿಕೊಳ್ಳುತ್ತಿರುವುದೂ ಅಷ್ಟೇ ಸಹಜವಾದ ಬೆಳವಣಿಗೆಯಾಗಿದೆ.

ಇ. ಸ್ವೀಕರಣ :

1. ಕರ್ನಾಟಕ ಮತ್ತು ಕೇರಳದ ಸಂಕೇತಿಗಳು ದ್ವಿಭಾಷಿಗಳು. ಕರ್ನಾಟಕದ ಸಂಕೇತಿಗಳಿಗೆ ಕನ್ನಡ ಮತ್ತು ತಮಿಳಿನ ಜ್ಞಾನವಿದ್ದರೆ, ಕೇರಳದವರಿಗೆ ಮಲೆಯಾಳಂ ಮತ್ತು ತಮಿಳಿನ ಜ್ಞಾನವಿದೆ. ಪಾರಂಪರಿಕವಾಗಿ, ಸಂಸ್ಕೃತದ ಬಳಕೆ ಮತ್ತು ಪ್ರಭಾವವು ಎಲ್ಲೆಡೆಯ ಸಂಕೇತಿಗಳಲ್ಲಿದೆ. ಆಧುನಿಕ ವಿದ್ಯಾಭ್ಯಾಸ ಪದ್ಧತಿಯಿಂದಾಗಿ, ಇಂಗ್ಲಿಷ್ ಮತ್ತು ಹಿಂದಿ ಭಾಷೆಯ ಅಧ್ಯಯನಕ್ಕೆ ಎಲ್ಲರೂ ಒಳಗಾಗಿದ್ದಾರೆ. ಸಂಪರ್ಕಮಾಧ್ಯಮಗಳು ಮತ್ತು ವೈವಿಧ್ಯಪೂರ್ಣ ವ್ಯವಹಾರಸಾಧ್ಯತೆಗಳಿಂದಾಗಿ, ಎಲ್ಲೆಡೆಯವರೂ ಬಹುಭಾಷೆಗಳ ಪ್ರಭಾವಕ್ಕೆ ಈಗ ತಮ್ಮನ್ನು ಒಡ್ಡಿಕೊಂಡಿದ್ದಾರೆ.

ತಮ್ಮ ವಿಶಿಷ್ಟ ಸಂಚಲನ ಮತ್ತು ಸಂಪರ್ಕಗಳಿಂದಾಗಿ ಅನ್ಯಭಾಷಾಪ್ರಭಾವದ ತೀವ್ರ ಪರಿಗಣನೆಗೆ ಅರ್ಹವಾದುದು ಕರ್ನಾಟಕದ ಸಂಕೇತಿಗಳ ಭಾಷೆಯೇ. ದಟ್ಟವಾದ ಕನ್ನಡ-ಪ್ರಭಾವ ಮತ್ತು ಸ್ವೀಕರಣದಿಂದ ಉದ್ಭವವಾದ ಕನ್ನಡೀಕೃತ ತಮಿಳಿನ ಜಾಯಮಾನಕ್ಕನುಗುಣವಾಗಿಯೇ, ಅನ್ಯಭಾಷಾ ಶಬ್ದಗಳು ಇದರಲ್ಲಿ ಸ್ವೀಕಾರಗೊಂಡಿವೆ.[1] ಕನ್ನಡಪ್ರತ್ಯಯ, ಉಚ್ಚಾರಣೆ, ತಮಿಳು ಭಾಷಾರಚನೆ - ಇವೆಲ್ಲವೂ ಅದರಲ್ಲಿ ಪಾತ್ರ ವಹಿಸಿವೆ.

ಈ ಸಂದರ್ಭದಲ್ಲಿ ಗಮನಿಸಬಹುದಾದ ಮುಖ್ಯವಾದ ಸಂಗತಿಗಳು ಹೀಗಿವೆ:

0.1 ದ್ರಾವಿಡೇತರ ಭಾಷೆಗಳಾದ ಹಿಂದಿ, ಉರ್ದು, ಇಂಗ್ಲಿಷ್, ಮರಾಠಿ ಮೊದಲಾದ ಭಾಷಾಶಬ್ದಗಳ ಸ್ವೀಕರಣವು ಸಾರ್ವತ್ರಿಕ ವಿದ್ಯಮಾನದ್ದಾಗಿದೆ.

0.2 ದ್ರಾವಿಡ ಭಾಷೆಗಳಲ್ಲಿಯೂ ತಮಿಳು, ಮಲೆಯಾಳಂ ಶಬ್ದಗಳು ನೇರವಾಗಿ ಮತ್ತು ಸಹಜವಾಗಿ ಅವರ ಪೂರ್ವಸ್ಥಾನದ ಬಲದಿಂದ ಬಂದಿವೆ.

0.3 ತುಳು, ಕೊಡವ, ತೆಲುಗು ಭಾಷೆಗಳಿಂದ ಸ್ವೀಕರಣಗೊಂಡವೆಂದು ಹೇಳಲಾಗುವ ಪದಗಳು ತಮಿಳು, ಮಲೆಯಾಳಂ ಸಾಮ್ಯದವು ಮತ್ತು ನೇರವಾಗಿ ಅವುಗಳಿಂದ ಬಂದವು.

0.4 ಬಹುಭಾಷಾಶಬ್ದ ಸ್ವೀಕೃತಿಯು ಸಂಕೇತಿ ಭಾಷೆಗೇ ವಿಶಿಷ್ಟವಾದುದಲ್ಲ. ಆ ಭಾಷೆಗೆ 'ಸಂಕೇತಂ' ಎಂಬ ಸಂಜ್ಞೆ ಎಲ್ಲಿಯೂ ರೂಢಿಯಲ್ಲಿಲ್ಲ.

ಸಂಕೇತಿ ಭಾಷೆಯಲ್ಲಿ, ಮೂಲದ ಶುದ್ಧತಮಿಳು ಹಾಗೂ ಮಲೆಯಾಳಂ ರೂಪಗಳು ಹಲವು ಉಳಿದುಕೊಂಡಿವೆ (ಪಟ್ಟಿ 22, ಪು.330); ಕನ್ನಡದ ಸನ್ನಿವೇಶದಲ್ಲಿ ರೂಪಾಂತರಗೊಂಡೂ ಬಳಕೆಯಾಗುತ್ತಿವೆ. ಕನ್ನಡಪದಗಳ ವಿಷಯದಲ್ಲಿಯೂ, ಮೂಲರೂಪಗಳು ಮತ್ತು ತಮಿಳೀಕೃತ ರೂಪಗಳಿರುವುದು ಕಾಣಿಸುತ್ತದೆ. ಯಾವುದೇ ಜೀವಂತಭಾಷೆಯ ಲಕ್ಷಣಕ್ಕೆ ಅನುಗುಣವಾಗಿಯೇ ಈ ಪ್ರಕ್ರಿಯೆಗಳು ನಡೆದಿವೆ. ಕೇವಲ ಆಡುಮಾತಾದುದರಿಂದ, ಗ್ರಂಥಸ್ಥ ಶುದ್ಧರೂಪವೊಂದು ನಿಲ್ಲದೆ, ಸ್ವಚ್ಛಂದ ಪರಿವರ್ತನೆ ಇಲ್ಲಿನ ರೀತಿಯಾಗಿದೆ.

2. ಸಂಕೇತಿ ಭಾಷೆಯಲ್ಲಿ ಬಳಕೆಯಾಗುವ ವಿಭಿನ್ನ ಭಾಷಾಮೂಲದ ಪದಗಳ ಬಗೆಗೆ ಕೆಲವು ಮಾಹಿತಿಗಳು ಇಲ್ಲಿವೆ:

0.1 ಸಂಸ್ಕೃತ ರೂಪಗಳು: ಸಂಸ್ಕೃತ ಮಂತ್ರಗಳು, ಸಾಹಿತ್ಯ, ಆಚರಣೆಗಳ ಸನ್ನಿವೇಶವು ಅವರ ಆಡುಮಾತನ್ನೂ ಸಂಸ್ಕೃತಭೂಯಿಷ್ಠವಾಗಿಸಿದೆ.

ಅವನಕ್ಕ್ ಬಹು ಇಚ್ಛ; ಸನ್ನಿವೇಶು ಓದ್; ಪ್ರಾರ್ಥಿಚ್ಚ್‌ಕಣೆ;
ಉದುಕು ಕೊಂಡಾಮ್ಮಾ; ಅವಕಾಶು ರಾಂದಾ; ಬಹು ಶ್ರಮಮಾಚ್;
ಅಗ್ನೀಯಾ ಪ್ರಜ್ವಲಿಪಿಯಣೂಪ್ಪಾ; ಕಿಂಚಿತ್ತೂ ಲಭ್ಯಮಿಲ್ಲ ಇತ್ಯಾದಿ.

---

1 ವಿವರಗಳಿಗೆ ನೋಡಿ: *ಸ್ಮೃತಿ ಸಂಪುಟ*, ಸಂಕೇತಿ ಭಾಷೆ, ಚಿ.ನಾ.ಕೇಶವಮೂರ್ತಿ, ಕೌಶಿಕ ಸಂಕೇತಿ ಸಂಘ,೧೯೭೭

0.2 ತಮಿಳಿನ ಪ್ರಾಚೀನ ರೂಪಗಳು ಕಂಡುಬರುತ್ತವೆ :

ಸಂಕೇತಿ	ಹಳೆಯ ತಮಿಳು	ಹೊಸ ತಮಿಳು	ಕನ್ನಡ
ಒಡಮ	ಒಡಮ್ಮೈ	ನಗಂ	ಒಡವೆ
ವಳಲಂಗಾಯಿ	ವಳಿಂಗಾಯಿ	ಕತ್ತರಿಕಾ	ಬದನೆ
ಉಢೇವ್ರ್	ಉಢೇಯವರ್	ಕಡುವುಲ್	ದೇವರು
ಥಾ	ಅಹಂ	ವೀಡ್	ಮನೆ

0.3 ಪೂರ್ವಹಳಗನ್ನಡದ ರೂಪಗಳೂ ಇವೆ: 'ವಾರಾತುರುವೆ' ಎಂಬ ದೀಪಾವಳೀಹಾಡಿನಲ್ಲಿ, 'ವಾರಾ' 'ನಿಲ್ಲಾ' ಇವು ಬಾ, ನಿಲ್ಲಬೇಡ ಎಂಬ ಅರ್ಥದಲ್ಲಿ ಬಳಕೆಯಾದ ಆಕಾರಾಂತ ಶಬ್ದಗಳು.

ಈ ಸಂಗತಿಗಳು, ಪ್ರಾಕ್‌ದ್ರಾವಿಡದಿಂದ ಮಲೆಯಾಳಂ ಬೇರ್ಪಡದಿದ್ದ ಸನ್ನಿವೇಶದ ಉಳಿಕೆಗಳು. ಮೂಲದ್ರಾವಿಡ ಭಾಷೆಯ ಬಗೆಗೆ ಚರ್ಚಿಸುವ ಭಾಷಾವಿಜ್ಞಾನಿಗಳ ಗಮನಕ್ಕೆ ಈ ಪ್ರವೃತ್ತಿಯು ಅರ್ಹವಾಗಿದೆ. ಸಾಂಸ್ಕೃತಿಕ ವಿವರಗಳಂತೆಯೇ ಭಾಷಾವಿವರಗಳಲ್ಲಿಯೂ ಪಾರಂಪರಿಕ ಸಂಕೇತಿ ವೈಶಿಷ್ಟ್ಯಗಳು ಕರ್ನಾಟಕದಲ್ಲಿಯೇ ಉಳಿದಿರುವುದಕ್ಕೆ, ಅವರ ಸಂಖ್ಯೆ ಮತ್ತು 'ಸಂಕೇತಂ' ಲಕ್ಷಣದ ಮುಂದುವರಿಕೆಯೂ ಕಾರಣವಾಗಿದೆ ('ಸಂಕೇತಂ' ಎಂಬುದು ತಮ್ಮ ಸಾಂಸ್ಕೃತಿಕ ವೈಶಿಷ್ಟ್ಯಗಳನ್ನು ಮುಂದುವರಿಸಿಕೊಂಡು, ಹೆಚ್ಚಿನ ಸಂಖ್ಯೆಯ ಯಾವುದೇ ಒಂದು ಜಾತಿಯ ಕುಟುಂಬಗಳು ಒಂದೆಡೆ ಬಾಳುವ ವ್ಯವಸ್ಥೆ ಮಾತ್ರ). ಕರ್ನಾಟಕದ ಸಂಕೇತಿ ಭಾಷೆಯ ಅನ್ಯಭಾಷಾ ಪದಸ್ವೀಕಾರದ ಪ್ರವೃತ್ತಿಯಲ್ಲಿ ಅನನ್ಯತೆಯನ್ನು ಗುರುತಿಸಬಹುದಾದುದು ಮಲೆಯಾಳಂ ಮತ್ತು ಸಂಸ್ಕೃತ ಭಾಷೆಗೆ ಸಂಬಂಧಿಸಿದಂತೆ ಮಾತ್ರ. ಉಳಿದ ಭಾಷಾ ಸ್ವೀಕೃತಿಗಳನ್ನು, ಕನ್ನಡದಲ್ಲಿಯೇ ಇರುವ ಅಂಥ ಪ್ರವೃತ್ತಿಯಿಂದ ಹೊರಗಿಟ್ಟು ನೋಡುವುದು ಕೃತಕವಾಗುತ್ತದೆ.

ಈ. ಭಾಷಾಲಕ್ಷಣ :

1. ಕರ್ನಾಟಕದ ಸಂಕೇತಿ ಭಾಷೆಯ ಕೆಲವು ಭಾಷಾ ವಿಶೇಷಗಳು ಹೀಗಿವೆ :

0.1 ಕನ್ನಡ ಮತ್ತು ಸಂಸ್ಕೃತದ ಲಿಪಿಗಳೂ ಧ್ವನಿಮಾಗಳೂ ಅವರ ಬಳಕೆಯಲ್ಲಿವೆ. ಸಂಕೇತಿ ಭಾಷೆಯಲ್ಲಿ ತಮಿಳು ಕ್ಷೀಣಗೊಂಡ ಬಳಕೆಯಾದುದರಿಂದ, ಅದರ ವಿಶಿಷ್ಟ ಧ್ವನಿಮಾಗಳು ಬಿಟ್ಟುಹೋಗುತ್ತಿವೆ. ಆದ್ದರಿಂದಲೇ ಶ, ಷ, ವಿಸರ್ಗ, ಮಹಾಪ್ರಾಣಗಳು, ಐ, ಔ, ಅನುಸ್ವಾರಗಳು, ಹ-ಕಾರ, ಒ, ಇ; ಚ ಜ-ಕಾರಗಳ ಉಚ್ಚಾರ, ಕನ್ನಡ ಮತ್ತು ಸಂಸ್ಕೃತದಂತೆ ಬಳಕೆಯಲ್ಲಿವೆ. ದ್ರಾವಿಡ ಮೂಲವರ್ಣಗಳಾದ ಎ ಒ ಕಾರಗಳೂ, ಳ ಟ ಱ ಎಂಬ ವ್ಯಂಜನಗಳೂ ಕನ್ನಡ ಮತ್ತು ತೆಲುಗು ಭಾಷೆಗಳಲ್ಲಿದ್ದರೂ, ಸಂಕೇತಿ ಭಾಷೆಯಲ್ಲಿ ಟ ಱ ಕಾರಗಳ ಉಚ್ಚಾರವು ತಮಿಳಿನ ರೀತಿಯನ್ನು ಬಿಟ್ಟು (ಆಧುನಿಕ) ಕನ್ನಡದಲ್ಲಿನಂತೆಯೇ ನಡೆದಿದೆ.

ಸಂಕೇತಿ ಭಾಷೆಯಲ್ಲಿ ವಿಶಿಷ್ಟವಾದ ಎರಡು ಧ್ವನಿಮಾಗಳಿಗೆ ಸೂಕ್ತ ಸಂಕೇತಗಳನ್ನು ಬಳಸಿಕೊಳ್ಳುವುದರಿಂದ ಕನ್ನಡ ಲಿಪಿಗೆ ಅದು ಪೂರ್ಣವಾಗಿ ಅಳವಡುತ್ತದೆ. ಉದಾಹರಣೆಗೆ :

ಸಂಕೇತಿ	ತಮಿಳು	ಕನ್ನಡ
ಅ ದ್$_s$	ಎದ್	ಯಾವುದು
ಅ ದ್$_s$	ಅದ್	ಅದು
ಥಾ	ಹಾಂ	ಮನೆ
ಆ. ಥಾ	ಆಹಾಂ	ಹೌದೆ

0.2 ದ್ರಾವಿಡ ಭಾಷೆಗಳ ವಿಶಿಷ್ಟ ಲಕ್ಷಣಗಳಲ್ಲಿ, ಉತ್ತಮಪುರುಷದ ಸರ್ವನಾಮ ಬಹುವಚನದಲ್ಲಿ ಎರಡು ರೂಪುಗಳಿರುವುದೂ ಒಂದು.

ಸಮಾವೇಶಕ (ಮಧ್ಯಮ ಪುರುಷ ಸೇರಿರುವುದು) ಉದಾಹರಣೆಗೆ ಸಂಕೇತಿ : ನಂಬ
ಅಸಮಾವೇಶಕ (ಮಧ್ಯಮ ಪುರುಷ ಸೇರದುದು) ಉದಾಹರಣೆಗೆ ಸಂಕೇತಿ : ನಂಗ

(ಕನ್ನಡದಲ್ಲಿ ಈ ಲಕ್ಷಣವಿಲ್ಲ).

0.3 ಏಕವಚನ ರೂಪವು ತ್ರಿಲಿಂಗಗಳಿಗೂ ಒಂದೇ ಆಗಿರುತ್ತದೆ. ಉದಾಹರಣೆಗೆ:
ಅದ್ ವರಂದ್ : ಅವನು ಬರುತ್ತಾನೆ, ಅವಳು ಬರುತ್ತಾಳೆ, ಅದು ಬರುತ್ತದೆ.

0.4 ಸ್ತ್ರೀಲಿಂಗ ಮತ್ತು ಪುಲ್ಲಿಂಗ ಶಬ್ದಗಳಿಗೆ ಸಮಾನ ನಾಮವಿಭಕ್ತಿಗಳಿವೆ. ಉದಾಹರಣೆಗೆ:

ಕಮಲು ಕಮಲನಣ್ಣು ಕಮಲಂದೆ ಕಮಲನಕ್ಕ್ ಕಮಲನ ಕಮಲನುಳ್ಳೆ
ರಾಮು ರಾಮನಣ್ಣು ರಾಮಂದೆ ರಾಮನಕ್ಕ್ ರಾಮನ ರಾಮನುಳ್ಳೆ

0.5 ಹ್ರಸ್ವ ವ್ಯಂಜನದ ಮುಂದೆ ತನ, ತಿಕೆ ಎಂಬ ತದ್ಧಿತ ಪ್ರತ್ಯಯಗಳು ಬಂದಾಗ ಕೆಲವೆಡೆ ವ್ಯಂಜನವು ಸ-ಕಾರಕ್ಕೆ ಸೇರಿಕೊಳ್ಳುವುದು ಕನ್ನಡದ ಜಾನಪದ ಮತ್ತು ಹವ್ಯಕ ಪ್ರಯೋಗದಂತೆ ಸಂಕೇತಿಗಳಲ್ಲಿಯೂ ಇದೆ. ಉದಾಹರಣೆಗೆ:

ಬಡಸ್ತನು, ನೆಂಟಿಸ್ತ್ಕ, ನಂಟಸ್ತನು, ಸೊಸ್ತ್ಮ ಇತ್ಯಾದಿ.
ಪ್ರತ್ಯಯವಿಲ್ಲದೆಯೂ ಈ ಪ್ರಯೋಗವು ಲಿಂಗದಹಳ್ಳಿ ಉಪಭಾಷೆಯಲ್ಲಿದೆ. ಉದಾಹರಣೆಗೆ: ವೆಸ್ತಾಲ.

0.6 ನಿಷೇಧಾರ್ಥದಲ್ಲಿ ಪ್ರಥಮ ಪುರುಷ ಏಕವಚನದ ಕ್ರಿಯಾಪದಕ್ಕೆ ಕೊನೆಯಲ್ಲಿ ಅತ್ವವಿದ್ದು ಪುಲ್ಲಿಂಗವಾಗಿದ್ದರೆ ಕೊನೆಯ ಅಕ್ಷರಕ್ಕೆ ಅನುನಾಸಿಕೋಚ್ಚಾರ ಇದೆ. ಉದಾಹರಣೆಗೆ:

ಅವ಼ು ಪಣ್ಣ಼	ಇವ಼ು ವ಼ರ಼
(ಅವನು ಮಾಡ)	(ಇವನು ಬಾರ)

0.7 ನುಡಿಗಟ್ಟುಗಳು :

ಕಣ್‌ಚಿತ್ರು ಕಣ್‌ಮಾಯು	:	ಕಣ್‌ಚಿತ್ರ ಕಣ್‌ಮಾಯ (ಮಂಗಮಾಯವಾಗುವುದು)
ವಾಯಾ ತಾಳಿಯರದ್	:	ಲಂಚ, ಪೂಸಿ
ಚೊವಿ ಊದರದ್	:	ಚಾಡಿ ಹೇಳುವುದು
ಗುಡಾಣತುಳ್ಳೆ ಒಳಿಯರದ್	:	ಸುಖವಾಗಿ ಬೆಳೆಯುವುದು
ಸಡ್ಲಿಯರದ್	:	ಕದಿ, ಮುಗಿಸು
ತೋಚ್‌ಮಡಿ	:	ಹಣ್ಣುಗಾಯಿ, ನೀರುಗಾಯಿ
ಐಗಂಚಿಪಟ್ಟು	:	ದೂರದ ಊರು, ರಹಸ್ಯ ತಾಣ
ಕೆಂಡುಕಳ್‌ವೀನ್ ಮಡಿ	:	ಅತಿರೇಕದ ಮಡಿ ಇತ್ಯಾದಿ.

0.8 ಬೈಗುಳಗಳು :

ಚಾಮ್ಲ್ ಅಟ್ಟಿಕಿಂಡ್ ವೇಲಾಕಾಚ್	:	ಬೂದಿ ಹುಯ್ದುಕೊಂಡು ಬಿಸಿಲುಕಾಯಿಸು (ಎಲ್ಲಾ ಹಾಳುಮಾಡಿಕೊಂಡವನಿಗೆ ಹೇಳುವುದು)
ಅಮಲಾಂಗ್	:	ಎಳಸು, ಐಲುಪೈಲು, ದಡ್ಡ
ಅಮನಾಕಣ್ಣ	:	ದಡ್ಡ
ತುರ್ವಾಮಣ	:	ಶೋಷಣೆ ಮಾಡುವವನು
ಪರಂದ್ ಕಟ್ಟೇನೆ ಅಣ್ಣಂದ್	:	'ಹುಟ್ಟಿ ಕೆಟ್ಟೆನು' ಎನ್ನುತ್ತಾನೆ (ಸೋಂಬೇರಿಗೆ, ಅಳುಕನಿಗೆ ಹೇಳುವ ಮಾತು)

0.9 ಜೋಡಿನುಡಿಗಳು :

ಪಶ್ಮ ಕುಟ್ಟಿ	:	ಮಕ್ಕಳು ಮರಿ
ಕಾತ್$_s$ ಕಟ್ಟಿ	:	ಕಾಡಿಬೇಡಿ
ಇಟ್ಟ್$_s$ ಅಟ್ಟೇ$_s$ ಪಣ್ಣೆ$_s$	:	ಊಟಕ್ಕೆ ಬಡಿಸುವುದು (ಸಮಾರಂಭಗಳ ಸಂದರ್ಭದಲ್ಲಿ ಬಳಕೆ)
ಪಾತ್$_s$ ಕೋಟ್$_s$ ಪಣ್ಣೇ$_s$ ಪಡಚ್	:	ನೋಡಿ ಕೇಳಿ ಮಾಡಿ ಮಟ್ಟಿ
ಪೊಯ್ಯಿಪಟ್ಕೆ	:	ಸುಳ್ಳು ಸುಪ್ಪಾಣಿ ಇತ್ಯಾದಿ.

ಮೇಲಿನ ಈ ಪ್ರಯೋಗಗಳೆಲ್ಲವೂ ತಮಿಳು ಪರಂಪರೆ ವಿಪುಲವಾಗಿ ಉಳಿದುಕೊಂಡ ನಿದರ್ಶನಗಳು. ಅವು, ಈ ಸಮುದಾಯದ ಧೋರಣೆ, ಪ್ರವೃತ್ತಿಯ ಸೂಚನೆಯನ್ನೂ ಕೊಡುತ್ತವೆ.

0.10 ಸಾಂದರ್ಭಿಕ ನಿರ್ದಿಷ್ಟ ಪದಗಳು: ಸನ್ನಿವೇಶ ಮತ್ತು ವ್ಯಕ್ತಿಗಳನ್ನನುಸರಿಸಿ ಭಾಷೆಯು ವಿಭಿನ್ನವಾಗಿ ಬಳಕೆಯಾಗುವ ಸಂದರ್ಭಗಳನ್ನು ಇಲ್ಲಿ ನಿದರ್ಶಿಸಿದೆ:

0.0.1 ಕೆಲವು ವಸ್ತುಗಳಿಗೆ ಹಗಲಿನಲ್ಲಿ ಬಳಸಿದ ಪದವನ್ನು ರಾತ್ರಿಯ ವೇಳೆ ಬಳಸುವುದಿಲ್ಲ. ಉದಾಹರಣೆಗೆ ಹಾವನ್ನು ಸೂಚಿಸಲು ಹಗಲಿನಲ್ಲಿ 'ಪಾಂಬ್$_s$' ಎಂದರೆ, ರಾತ್ರಿಯಲ್ಲಿ 'ಪುಳೂಪೊಟ್ಟು', 'ಸೆತ್ತ' ಎನ್ನುತ್ತಾರೆ. ಹಗಲಿನಲ್ಲಿ 'ಉಪ್ಪು' 'ಮಳಹಾಕಾ' (ಮೆಣಸಿನಕಾಯಿ) ಎಂಬ ಪದಗಳ ಬಳಕೆಯಾದರೆ ರಾತ್ರಿ 'ಅಡಕಡೇಕ್' (ಎಡಗಡೆಗೆ) 'ಖಾರು' ಎಂಬ ಪದಗಳು ಬಳಕೆಯಾಗುತ್ತವೆ.

0.0.2 ಮೇಲಿನ ಹಾಗೇಯೇ, ಶುಭದಲ್ಲಿ, ಅಗ್ನಿ, ಸಭಾ, ಸ್ನಾನು, ಮಡಿ ಎಂಬ ಪದಗಳು ಬಳಕೆಯಾದರೆ ಅಶುಭದಲ್ಲಿ ಅದೇ ವಸ್ತುಗಳಿಗೆ ಬೆಂಕಿ, ಪರಿಷತ್ (ಮಧ್ಯದೇಶದಲ್ಲಿ), ಕುಳಿ (ಮುಟ್ಟು ನೀರು: ಮಧ್ಯದೇಶದಲ್ಲಿ) ಎಂಬ ಪದಗಳು ಬಳಕೆಯಾಗುವುದು ಮತ್ತೊಂದು ಸಾಂಸ್ಕೃತಿಕ ವಿಶೇಷವೂ ಹೌದು.

0.0.3 ತೊನ್ನು, ಮಾಟ, ಬೀಳುವ ರೋಗಗಳನ್ನು 'ವಾಯುಳ್ಳ್ ಚೊಲ್ಲಾವ್ದ್' ಎನ್ನುವಾಗಲೂ ವೈದ್ಯಕೀಯವಾಗಿ ಹಿಂದುಳಿದ ದಿನಗಳ ಅಂಜಿಕೆಯ ಪ್ರಭಾವವನ್ನು ಕಾಣಬಹುದು.

0.0.4 ಸ್ತ್ರೀ-ಪುರುಷರ ಬಳಕೆಯಲ್ಲಿಯೂ ಇಂಥ ಪದಭೇದಗಳು ಕಾಣಿಸುವುದು ಅವರ ಸಾಮಾಜಿಕ ಸ್ಥಾನಮಾನಗಳ ದೃಷ್ಟಿಯಿಂದಲೂ ಗಮನಾರ್ಹವಾದುದು. ಉದಾಹರಣೆಗೆ ಪುರುಷರು (ಮತ್ತೂರಿನಲ್ಲಿ) 'ಏಕ್' (ಏತಕ್ಕೆ) ಎಂದರೆ ಸ್ತ್ರೀಯರು 'ಓಕ್' ಎನ್ನುತ್ತಾರೆ. ಕ್ಷೌರಮಾಡುವವನನ್ನು ಪುರುಷರು 'ನಾಪಿತು', 'ತಲೆಪಣ್ಣರದ್' ಎಂದರೆ ಸ್ತ್ರೀಯರು ನೆನಯಾವದ್ (ನೆನೆಯಬಾರದವನು) ಎನ್ನುತ್ತಾರೆ. (ವಿಧವೆಯರು ಮುಂಡನಕ್ಕೆ ಈಡಾಗುವ ಪದ್ಧತಿ ಇರುವುದರಿಂದ ಮುತ್ತೈದೆಯರಿಗೆ ಆತನ ಹೆಸರೆತ್ತಲೂ ಜುಗುಪ್ಸೆ.)

ಪರಿಚಯಾತ್ಮಕವಾಗಿ, ಯಾದೃಚ್ಛಿಕವಾಗಿಯಷ್ಟೆ ಕೆಲವು ಲಕ್ಷಣಗಳನ್ನು ಇಲ್ಲಿ ಉದಹರಿಸಿದೆ. ಪ್ರತ್ಯೇಕ ಸಂಶೋಧನೆಗೆ ವ್ಯಾಪ್ತಿಯುಳ್ಳ ಭಾಗ ಇದು.

ಕ್ರಿ.ಶ.೧೯೭೦-೯೨ರ ಅವಧಿಯಲ್ಲಿಯೇ ಸಂಕೇತಿ ಭಾಷೆಗೆ ಸಂಬಂಧಿಸಿದಂತೆ ಸಾಕಷ್ಟು ಅಧ್ಯಯನ ನಡೆದಿದೆ. ಕರ್ನಾಟಕದ ವಿವಿಧ ಭಾಗಗಳಲ್ಲಿ ವಾಸಿಸುತ್ತಿರುವ ಎಲ್ಲ ಸಂಕೇತಿ ಪಂಗಡಗಳ ಭಾಷಾಪ್ರಭೇದಗಳ ತೌಲನಿಕ ಅಧ್ಯಯನ ನಡೆದರೆ ಹಲವಾರು ಹೊಸ ಅಂಶಗಳು ಬೆಳಕಿಗೆ ಬರುತ್ತವೆ. ಈ ನಿಟ್ಟಿನಲ್ಲಿ ಭಾಷಾಶಾಸ್ತ್ರಜ್ಞರು, ಸಾಂಸ್ಕೃತಿಕ ಮಾನವಶಾಸ್ತ್ರಜ್ಞರು, ಜಾನಪದತಜ್ಞರು ಸಂಶೋಧನೆ ನಡೆಸಬೇಕಾಗಿದೆ.

೨. ಜನಪದ ಸಾಹಿತ್ಯ

ಜಾನಪದದ ಪ್ರಮುಖ ಅಂಗ ಜನಪದ ಸಾಹಿತ್ಯ. ಜೀವನವಿಧಾನ, ಶ್ರದ್ಧೆ, ನಂಬಿಕೆ, ಆಚರಣೆಗಳ ದಟ್ಟವಾದ ನೇರ ಪರಿಚಯ ಇಲ್ಲಿ ಆಗುತ್ತದೆ. ಸಂಕೇತಿಗಳ ಜೀವನ ಮತ್ತು ಸಂಸ್ಕೃತಿಯನ್ನು ಇಲ್ಲಿ ಅವರ ಜನಪದ ಸಾಹಿತ್ಯದ ಮೂಲಕ ಕಂಡಿದೆ.

ಅ. ಜನಪದ ಕತೆಗಳು :

ಸಂಕೇತಿ ಸಮುದಾಯದಲ್ಲಿಯೂ ಜನಪದ ಕತೆಗಳು ಪ್ರಸಾರದಲ್ಲಿವೆ. ಆದರೆ, ಅದು ಈ ಸಮುದಾಯದಲ್ಲಿಯೂ ಒಂದು ಪ್ರಮುಖ ಜಾನಪದ ಪ್ರಕಾರವಾಗಿದೆ ಎಂದು ಸರಳವಾಗಿ ಹೇಳುವಂತಿಲ್ಲ. ಪ್ರಮಾಣದ ದೃಷ್ಟಿಯಿಂದ ಜನಪದಗೀತೆಗಳು ಇಲ್ಲಿ ಮೊದಲಸ್ಥಾನ ಪಡೆಯುತ್ತವೆ. ಪ್ರಮಾಣ ಮತ್ತು ಬಳಕೆಯ ದೃಷ್ಟಿಯಿಂದ ಅವಕ್ಕೆ ಎರಡನೆಯ ಸ್ಥಾನದಲ್ಲಿ ನಿಲ್ಲುವುದು ಗಾದೆ. ಒಗಟುಗಳೂ ಸರ್ವವ್ಯಾಪಕವಾದರೂ, ವಿರಾಮವಾಗಿ ಕುಳಿತು ಬೌದ್ಧಿಕ ಮನೋರಂಜನೆಯ ಸವಿ ಉಣ್ಣುತ್ತಿದ್ದ ವೃದ್ಧ-ವೃದ್ಧೆಯರೂ ಬಾಲರೂ ಕಾಣಸಿಗದ ದಿನಗಳು ಈ ಶತಮಾನದ ಮಧ್ಯಭಾಗದವೇಳೆಗೆ ಬಂದುದಾಗಿತ್ತು. ಐತಿಹಾಸಿಕತೆಯನ್ನು ಬಹುವಾಗಿ ಉಳಿಸಿಕೊಂಡ ಐತಿಹ್ಯಗಳು ಬಳಕೆಯ ದೃಷ್ಟಿಯಿಂದ ಇಲ್ಲಿ ಗಂಭೀರ ಪರಿಗಣನೆಗೆ ಅರ್ಹವಾಗಿವೆ.

1. ಹಿನ್ನೆಲೆ : "ಅಂದ್ಯೊ ಅಡಗೂಲಜ್ಜಿ ಕತೆ ಚೊಲ್ಲಿಕಿಂಡ್ ಉಕ್ಕಾಕಂಡದ್" (ಯಾವುದೋ ಅಡಗೂಲಜ್ಜಿ ಕತೆ ಹೇಳಿಕೊಂಡು ಕೂತ/ಳು) ಎಂಬುದು ಈ ಸಮುದಾಯವು ಜನಪದ ಕತೆಗಳ ಬಗೆಗೆ ಹೊಂದಿರುವ ಲಘು ಮನೋಭಾವಕ್ಕೆ ಸಾಕ್ಷಿ. ಅದು, 'ಕೆಲಸಹಾಳು' ಎಂಬ ಧೋರಣೆಯದಷ್ಟೇ ಎನ್ನುವಂತಿಲ್ಲ; ವೇದ, ಪುರಾಣಗಳನ್ನಷ್ಟೇ ಗಂಭೀರವಾಗಿ ಪರಿಗಣಿಸುವ ಹಿನ್ನೆಲೆಯದೂ ಹೌದು. ಆದರೆ, ಪುರುಷರೂ ಸ್ತ್ರೀಯರೂ (ತಮ್ಮ ಗೌರವಕ್ಕೆ ಭಂಗವಿಲ್ಲದಂತೆ) ಕತೆ ಹೇಳುವುದು ಇಲ್ಲಿ ಸಂಭವಿಸಿಯೇ ಇಲ್ಲವೆಂದಲ್ಲ; ಅದು ಸಾಧ್ಯವಾದುದು, ಬಹುಪಾಲು ಅವರು ಆರಿಸಿಕೊಂಡ ಕಥಾನಕ (ವರ್ಗ)ಗಳಿಂದಲೇ. ಅವರ ಬಳಕೆಯ ಜನಪದ ಕತೆಗಳ ಸಂಖ್ಯೆ ಒಂದು ಶತಕವನ್ನೂ ದಾಟದುದಕ್ಕೆ ಈ ಮಿತಿಯು ಕಾರಣವಾಗಿದೆ. ಮತ್ತೂರು, ಲಿಂಗದಹಳ್ಳಿ, ಮುದಲಾಪುರ ಅಷ್ಟಗ್ರಾಮಗಳಲ್ಲಿ ಅವು ಪ್ರಸಾರದಲ್ಲಿದ್ದುದರ ಸುಳಿವೂ ದೊರೆತಿಲ್ಲ. ಈಗಿನ ಮತ್ತು ಹಿಂದಿನ ನಿದರ್ಶನಗಳೆಲ್ಲಾ ಇರುವುದು ದಕ್ಷಿಣ ಮತ್ತು ಮಧ್ಯದೇಶದಲ್ಲಿ. ಅಯ್‌ಕುಡಿ, ಶೆಂಕೋಟ್ಟೈ, ದರ್ಶನಂಕೋಪ್, ಬಸವಪಟ್ಟಣ, ರುದ್ರಪಟ್ಟಣ, ಅಗ್ರಹಾರ, ಹನಸೋಗೆಗಳಲ್ಲಿ ದೊರೆತ ವಕ್ತೃಗಳು ದಕ್ಷಿಣ, ಕೌಶಿಕ ಹಾಗೂ ಬೆಟ್ಟದಪುರ ಸಂಕೇತಿಗಳನ್ನು ಪ್ರತಿನಿಧಿಸುತ್ತಾರೆ. ಸಂಕೇತಿಗಳಲ್ಲಿ ಬಳಕೆಯಲ್ಲಿರುವ ಹಾಡುಗಳೂ ಗಾದೆಗಳೂ ಸಂಗ್ರಹಗೊಂಡು ಪ್ರಕಟವಾಗಿವೆ; ಅವರ ಕೆಲವಾದರೂ ಐತಿಹ್ಯಗಳು ಅವರದೇ ಸಂಘಗಳ ಸ್ಮರಣಸಂಚಿಕೆಗಳಲ್ಲಾದರೂ ಬೆಳಕು ಕಂಡಿವೆ. ಆದರೆ ಎಲ್ಲಿಯೂ ಅವರ ಕತೆಗಳು ಪ್ರಕಟಗೊಳ್ಳದುದಕ್ಕೂ ಅವುಗಳ ಪ್ರಸಾರಕ್ಷೀಣತೆಯಂತೆಯೇ ಆ ಬಗೆಗಿನ ಲಘುಮನೋಭಾವವೂ ಕಾರಣವಾಗಿದೆ. ಜಾನಪದದ ಪ್ರಾಮುಖ್ಯವು ತಿಳಿಯುವವರೆಗೆ ಅದು ಸಾರ್ವತ್ರಿಕವಾಗಿ ಗೌಣವಾಗಿಯೇ ಉಳಿದುಬಿಟ್ಟಿತೆಂಬುದನ್ನೂ ಮರೆಯುವಂತಿಲ್ಲ.

ಪ್ರಸ್ತುತ ಅಧ್ಯಯನಕ್ಕಾಗಿಯೇ ಸಂಗ್ರಹಿಸಿದ ಅರುವತ್ನಾಲ್ಕು ಕತೆಗಳನ್ನೇ ಇಲ್ಲಿ ಆಧಾರವಾಗಿಟ್ಟುಕೊಂಡಿದೆ. ಇವೆಲ್ಲವೂ ಧ್ವನಿಮುದ್ರಿತವಾದ ಕಥಾರೂಪಗಳೇ ಆದುದರಿಂದ ಭಾಷೆ, ಶೈಲಿ, ಕಥನಕಲೆ ಯಥಾವತ್ತಾಗಿ ದೊರೆತು ಅಧ್ಯಯನಕ್ಕೆ ಸಹಾಯಕವಾಗಿದೆ. ಸಂಕೇತಿಗಳ ಪ್ರಾದೇಶಿಕ ಹರಹು ಮತ್ತು ಗುಂಪುಗಳ ವೈವಿಧ್ಯದ ದೃಷ್ಟಿಯಿಂದ ಕತೆಗಳು ದೊರೆತ ಕ್ಷೇತ್ರವಿಸ್ತಾರವು (ದಕ್ಷಿಣ, ಬಸವಪಟ್ಟಣ,

ಅಗ್ರಹಾರ, ರುದ್ರಪಟ್ಟಣ, ಹನಸೋಗೆ) ತೀರ ಗೌಣವೆನಿಸುವಂಥದು. ಆದರೆ, ವಿವರವಾದ ಸರ್ವೇಕ್ಷಣದ ಅನಂತರವೂ, ಉಳಿದ ಎಲ್ಲಿಯೂ ಕತೆಗಳು ಲಭ್ಯವಾಗದುದರಿಂದ ಮತ್ತು ಲಭ್ಯವಾಗಬಹುದಾದ ಯಾವ ಸೂಚನೆಯೂ ದೊರೆಯದುದರಿಂದ, ಈ ಅರುವತ್ನಾಲ್ಕು ಕತೆಗಳನ್ನೇ ಪ್ರಾತಿನಿಧಿಕವಾಗಿ ಇಟ್ಟುಕೊಳ್ಳುವುದು ಅನಿವಾರ್ಯವಾಗಿದೆ. ಆದರೆ ಈ ಸಮುದಾಯದ ಕತೆಗಳ ಲಕ್ಷಣೀಕರಣಕ್ಕೆ ಸಾಕಾಗಬಹುದಾದ ಆಕರ ಇದು.

ಜನಪದ ಸಾಹಿತ್ಯದ ಬಳಕೆ ಮತ್ತು ವಕ್ತೃಗಳನ್ನು ದೃಷ್ಟಿಯಲ್ಲಿಟ್ಟುಕೊಂಡು ಗ್ರಹಿಸಬಹುದಾದ ಸಂಗತಿ ಎಂದರೆ ಸಂಪ್ರದಾಯದ ಹಾಡುಗಳಿಗೆ ಸ್ತ್ರೀಯರು ಹೆಚ್ಚು ಒಲಿದರೆ ಪುರುಷರು ಕತೆಗಳಿಗೆ ಹೆಚ್ಚು ಒಲಿದಿದ್ದಾರೆನ್ನುವುದು. ಯಂತ್ರಯುಗದ ಆಘಾತದ ನಡುವೆಯೂ ವೇದಶಾಸ್ತ್ರಗಳನ್ನು ಉಳಿಸಿಕೊಳ್ಳಲು ನಡೆದಿರುವ ಪ್ರಜ್ಞಾಪೂರ್ವಕ ಪ್ರಕ್ರಿಯೆಯಂತೆ ಜನಪದಸಾಹಿತ್ಯದ ಪರಂಪರೆಯನ್ನು ಕಾಯ್ದುಕೊಳ್ಳುವ ಕಾತರ ಇಲ್ಲಿಯೂ ಕಾಣಿಸುವುದಿಲ್ಲ.

ಕಥಾಸಮಯವು ಎಂದೂ ನಿರ್ದಿಷ್ಟಗೊಂಡಿರಲಿಲ್ಲವೆಂದರೂ, ಸಂಜೆಯ (ಬತ್ತಿ ಬೆಳಕಿನ) ವಿರಾಮವೇಳೆಯು ಅದಕ್ಕೆ ಪ್ರಶಸ್ತವಾಗಿತ್ತೆಂಬುದು ಸಹಜವಾದುದು. ಆದರೂ, ಅತಿಥಿಗಳು ಬಂದಾಗಲೋ ಊಟದವೇಳೆ ಅಥವಾ ಸಾಂದರ್ಭಿಕವಾಗಿಯೋ ಕತೆಗಳನ್ನು ಹೇಳುವ ಪರಿಪಾಠ ಈಗಲೂ ಕಾಣಸಿಗುತ್ತದೆ. ಸರಳ ಕತೆಗಳ ಪ್ರಾದುರ್ಭಾವವೂ ಅದಕ್ಕೆ ಅನುಗುಣವಾಗಿದೆ. ಅಂಥ ಬಿಡುವಿನ ಸಂದರ್ಭಗಳಲ್ಲಿಯೂ ಅವರ ಮೊದಲ ಆಯ್ಕೆ ಐತಿಹ್ಯಗಳದು. ಕತೆಗಳನ್ನೇ ಹೇಳಿದಾಗಲೂ ವೇದೋಪನಿಷತ್ತುಗಳು, ಪುರಾಣಗಳು, 'ಇತಿಹಾಸ'ಗಳು, ಸಂಸ್ಕೃತಸಾಹಿತ್ಯ ಗ್ರಂಥಗಳು (ಮುಖ್ಯವಾಗಿ ಪಂಚತಂತ್ರ) ಮೊದಲಾದ ಆಕರಗಳಿಂದ ಅವನ್ನು ಆಯ್ದುಕೊಳ್ಳುವುದೇ ರೂಢಿ.

ಕರ್ನಾಟಕದಲ್ಲಿ ಕನ್ನಡೀಕರಣವು ಎಷ್ಟು ದೊಡ್ಡ ಪ್ರಮಾಣದಲ್ಲಿ ಆಗಿದೆ ಎಂದರೆ, ವಕ್ತೃಗಳೆಲ್ಲರೂ ಕತೆ ಹೇಳುವ ಪರಂಪರೆ ಇಟ್ಟುಕೊಂಡಿರುವುದು ಕನ್ನಡದಲ್ಲಿಯೇ. ಐತಿಹ್ಯಗಳು ತಮ್ಮ ಸಂಪ್ರದಾಯದ ಇತಿಹಾಸವೇ ಆದುದರಿಂದಲೇ ಅವನ್ನು ತಮಿಳು ಮೂಲದಲ್ಲಿ ಹೇಳುವ ಯತ್ನ ನಡೆದರೂ, ಕತೆಗಳನ್ನು ಹಾಗೆ ತಮಿಳ್ಗನ್ನಡದಲ್ಲಿ ಹೇಳುವುದು ಅವರಿಗೆ ತೀರ ಕೃತಕವಾಗಿ ಕಾಣಿಸುತ್ತದೆ.

2. ಕಥಾಮಾದರಿ, ಆಶಯ :

ಸಮುದಾಯದಲ್ಲಿ ಬಳಕೆಯಲ್ಲಿರುವ ಕತೆಗಳಲ್ಲಿ ಎಲ್ಲ ಪ್ರಧಾನ ವಿಭಾಗಗಳ ಪ್ರಾತಿನಿಧಿಕ ಕತೆಗಳಿವೆ (ಪಟ್ಟಿ 23, 24 ಪು.331, 332). ಆದರೆ ಅದೇ ಮಾತನ್ನು ಎಲ್ಲ ವರ್ಗಗಳ ಬಗೆಗೆ ಹೇಳುವಂತಿಲ್ಲ. ಅಲ್ಲದೆ, ಈ ವಿಭಾಗಪ್ರಮಾಣವೂ ಸಮವಾದುದಲ್ಲ. ಕೇವಲ ನಾಲ್ಕು ಪ್ರಾಣಿಕತೆಗಳಿಗೆ ಹೋಲಿಸಿದಂತೆ ಇಪ್ಪತ್ತು 'ಸಾಮಾನ್ಯ ಜನಪದ ಕತೆ'ಗಳಿವೆ; ಅದರಲ್ಲಿಯೂ ಹದಿನೈದು ಧಾರ್ಮಿಕ ಕತೆಗಳು. ತಮಾಷೆ ಮತ್ತು ವಿನೋದ ವೃತ್ತಾಂತಗಳಿಗೆ ಸಂದಿರುವುದು ಸಿಂಹಪಾಲು (ಮೂವತ್ತಾರು). ಅಂದರೆ ಶೇಕಡ ಐವತ್ತಾರು ಭಾಗವೆಲ್ಲಾ ವಿನೋದ ಕತೆಗಳು; ಶೇಕಡ ಎಪ್ಪತ್ತೊಂಬತ್ತು ಭಾಗವೆಲ್ಲಾ ವಿನೋದ ಮತ್ತು ಧಾರ್ಮಿಕ ಕತೆಗಳಿಗೆ ಮೀಸಲಾದುದು. ವಿವರಣಾತ್ಮಕ ಮತ್ತು ಒಗಟಿನ ಕತೆಗಳು ಹಾಗೂ ನೀತಿಕತೆಗಳೇ ಆದ ಪ್ರಾಣಿಕತೆಗಳನ್ನೂ ಅದಕ್ಕೆ ಸೇರಿಸಿದರೆ, ಅದರ ಪ್ರಮಾಣ ಶೇಕಡ ತೊಂಬತ್ತೆರಡರಷ್ಟಾಗುತ್ತದೆ. ರಮ್ಯಕತೆಗಳ ಪ್ರಮಾಣ ಎಷ್ಟು ಕನಿಷ್ಠವಾದುದು (ಶೇಕಡ ಎಂಟು) ಎಂಬುದು ಸಮುದಾಯವು ಕೊಟ್ಟ ಒತ್ತಿನ ದೃಷ್ಟಿಯಿಂದ ಮುಖ್ಯವಾಗುತ್ತದೆ. ಇವರ ಗಮನವನ್ನು ಸೆಳೆದಿರುವುದೆಲ್ಲಾ ಧರ್ಮ, ಬುದ್ಧಿವಂತಿಕೆ, ವಿನೋದಕ್ಕೆ ಸಂಬಂಧಿಸಿದ ಕತೆಗಳೇ.

ಶೇಕಡ ತೊಂಬತ್ತೆಂಟರಷ್ಟು ಸರಳಗತೆಗಳೇ ಇರುವುದು, ಸಮುದಾಯವು ಕಡಮೆ ಸಮಯದಲ್ಲಿ, ಆನುಷಂಗಿಕವಾಗಿ ಅಥವಾ ಸಾಂದರ್ಭಿಕವಾಗಿ ಬಳಸಲು ಮಾತ್ರ ಜನಪದ ಕತೆಗಳನ್ನು ಇಟ್ಟುಕೊಂಡಿದೆ ಎಂಬ ಅಂಶವನ್ನು ಪೋಷಿಸುತ್ತದೆ.

ಚಾರಿತ್ರಿಕ ಭೌಗೋಳಿಕ ವಿಧಾನದಿಂದ (historical geographical method) ಇಲ್ಲಿನ ಕತೆಗಳ ಅಧ್ಯಯನಕ್ಕೆ ಆಸ್ಪದವಿಲ್ಲವೆಂಬುದು ಕರ್ನಾಟಕದ ಎಲ್ಲ ಪ್ರಾಂತಗಳಿಗೆ ಅನ್ವಯಿಸುವಂತೆ ಪ್ರಸ್ತುತ ಸಂದರ್ಭಕ್ಕೂ ಅನ್ವಯಿಸುತ್ತದೆ. ತೌಲನಿಕ ವಿಶ್ಲೇಷಣೆಗಾಗಲೀ, ಸಮಾಜಶಾಸ್ತ್ರೀಯ ಐತಿಹಾಸಿಕ ವಿಶ್ಲೇಷಣೆಗಾಗಲೀ ನಮ್ಮ ಸಂಗ್ರಹಗಳು ಸಾಲವು ಎಂಬುದೂ ಸ್ಪಷ್ಟವಿದೆ. ಆಶಯಗಳನ್ನನುಸರಿಸಿ ವರ್ಗೀಕರಣ ಮಾಡಿಕೊಳ್ಳುವಾಗಿನ ಸಮಸ್ಯೆಗಳು ಇಲ್ಲಿಯೂ ಇವೆ. ಇಲ್ಲಿನ ಅಧ್ಯಯನಕ್ಕೆ ಸ್ಟಿಥ್ ಥಾಂಸನರನ್ನನುಸರಿಸಿದರೂ ಕೆಲವು

ವಿವರಣಾತ್ಮಕ ಮತ್ತು ಒಗಟುಗತೆಗಳ ವಾಸ್ತವತೆಯು ಪ್ರತ್ಯೇಕವಾಗಿಯೇ ನಿಲ್ಲುವ ಗುಣವನ್ನು ಪ್ರಕಟಿಸುತ್ತದೆ. ಎಲ್ಲ ವಿವರಣಾತ್ಮಕ ಕತೆಗಳೂ ಐತಿಹ್ಯಗಳಾಗಿರುವುದಿಲ್ಲ ಮತ್ತು ಎಲ್ಲ ಒಗಟುಗತೆಗಳೂ ರಮ್ಯವಾಗಿರುವುದಿಲ್ಲ. ಸಂಕೇತಿಗಳ ಸಾಂಸ್ಕೃತಿಕ ಅಧ್ಯಯನದ ಅಂಗವಾಗಿಯಷ್ಟೆ ಇಲ್ಲಿನ ಕತೆಗಳನ್ನು ಗಣಿಸಿದೆ.

ಇಲ್ಲಿ ಕೆಲವು ನಿದರ್ಶನಗಳನ್ನು ಕೊಟ್ಟಿದೆ :

0.1 'ಪ್ರತ್ಯಕ್ಷಕಂಡರೂ ಪ್ರಮಾಣಿಸಿ ನೋಡು' ಎಂಬುದೊಂದೇ ಇವರಲ್ಲಿ ದೊರೆಯುವ ವಿಶೇಷ ಪ್ರಾಣಿಕತೆ. ಕಥಾಸಾರ: ಬಡವನೊಬ್ಬನ ನಾಯಿ ಅದು. ಅವನಿಗೆ ಅದೇ ಸರ್ವಸ್ವ. ಔಷಧಿಗೆ ಹಣವಿರಲಿಲ್ಲ. ಸಾಹುಕಾರನಿಂದ ಸಾಲ ಪಡೆದ. ತಗಾದೆ ಹೆಚ್ಚಾದುದರಿಂದ ನಾಯಿಯನ್ನೇ ಅಡವಿಡಬೇಕಾಯಿತು. ಆ ಒಡೆಯನ ಮನೆಯಲ್ಲಿಯೇ ಅದು ಹಾವನ್ನು ಕೊಂದದ್ದು. ಒಡೆಯನು ತಪ್ಪುಗ್ರಹಿಕೆಯಿಂದಾಗಿ ನಾಯಿಗೆ ಬಡಿದು ಸಾಯಿಸಹೊರಟ; ಮಗು ಅತ್ತಿತು; ದೊಣ್ಣೆ ಕೆಳಗೆ ಬಿತ್ತು. ಕೃತಜ್ಞತೆಯಿಂದ ನಾಯಿಯನ್ನು ಬಿಟ್ಟು ಕಳುಹಿಸಿದ. ಇದು ಬಡವನಿಗೆ ತಿಳಿಯದು. ಸಾಹುಕಾರನ ಋಣ ತೀರಿಸುವ ಮೊದಲೇ ಬಂದುದಕ್ಕಾಗಿ ಅದನ್ನು ಬಡಿದ. ಸಾಹುಕಾರನು ಬರೆದಿಟ್ಟಿದ್ದ ಚೀಟಿ ಅದರ ಬಾಯಿಯಿಂದ ಬಿತ್ತು. ವಿಷಯ ತಿಳಿದು ಪಶ್ಚಾತ್ತಾಪಪಟ್ಟ. ಆದರೆ ಪೆಟ್ಟು ತಿಂದಿದ್ದ ನಾಯಿ ಸತ್ತಿತ್ತು. ತಾನೂ ಕೊರಗಿ ಸತ್ತ. . . . . . ಅದು ಸಾಕುಪ್ರಾಣಿಗೆ ಸಂಬಂಧಿಸಿದುದು; ಮನುಷ್ಯನೊಡನೆ ಸಂಬಂಧ ಹೊಂದಿದುದು. ನಾಣ್ಣುಡಿಯೊಂದರ ವಿವರಣಾತ್ಮಕ ಕತೆಯಂತಿರುವ ಇದರಲ್ಲಿ, ನಾಯಿಯದೇ ಪ್ರಧಾನಪಾತ್ರ (ವರ್ಗ: ೨೦೦-೨೧೯). ಮುಂಗುಸಿಯು, ಮಗುವಿನ ತೊಟ್ಟಿಲಿಗೆ ಬರುತ್ತಿದ್ದ ಹಾವನ್ನು ಕೊಂದು, ಮನೆಯೊಡತಿಯಿಂದ ತಾನೇ ಕೊಲ್ಲಲ್ಪಟ್ಟ ಕತೆಯೊಂದಿದೆ. ಆದರೆ, ಪ್ರಸ್ತುತ ಕತೆಯು ವಿಸ್ತಾರವಾಗಿ ಬೆಳೆದಿದ್ದು, ಗಾಢವಾದ ಭಾವಪ್ರಪಂಚವೊಂದನ್ನು ಸೃಷ್ಟಿಸುತ್ತದೆ. ಹಾವಿನ ಪ್ರಸಂಗದಲ್ಲಿ, ನಾಯಿಯು ಬದುಕಿ ಉಳಿಯುವ ಬದಲಾವಣೆಯು ಸುಖಾಂತದ ಸುಳಿವು ನೀಡಿದರೂ, ಕೊನೆಗೆ ಈ (ನೀತಿ) ಕಥೆಯು ದುಃಖಾಂತವೇ ಆಗುತ್ತದೆ. ಎರಡು ಸಂದರ್ಭದ ಆಶಯವೂ, ಉಪಕಾರಿಯಲ್ಲಿ ಅನುಮಾನ ಹೊಂದುವುದೇ. ವಕ್ತೃವು ತನ್ನ ಕಥನ ಕೌಶಲ್ಯವನ್ನು ವಿಪುಲವಾಗಿ ಮೆರೆದ ಕತೆ ಇದು. ಕತೆ ಬೆಳೆಯುವ ರೀತಿಗೂ ಇದು ಒಂದು ಸಾಕ್ಷಿಯಾಗಿ ನಿಲ್ಲುತ್ತದೆ. ಆಶಯ: ಬಿ.೩೦೦-೫೯೯. ಸ್ನೇಹಭಾವದ ಪ್ರಾಣಿಗಳು.

0.2 ವಿವೇಕ ರೈ ಅವರು ಮಾಂತ್ರಿಕ ಕತೆಗಳ ಸಾಲಿನಲ್ಲಿ ಸೇರಿಸಿರುವ ಎರಡು ತುಳು ಕತೆಗಳ[2] ಆಶಯಗಳನ್ನೊಳಗೊಂಡ ಎರಡು ಪ್ರತ್ಯೇಕ ಕತೆಗಳು ಈ ಸಮುದಾಯದಲ್ಲಿ ಬಳಕೆಯಲ್ಲಿವೆ. ಅನೇಕ ರೂಪಾಂತರಗಳಲ್ಲಿ ಅಥವಾ ಆಶಯ-ಸಾಮ್ಯವಿದ್ದ ಅನೇಕ ರೂಪಗಳಲ್ಲಿ ದೊರೆಯುವ[3] ಈ ಕತೆಗಳಲ್ಲಿ, ಒಂದು, 'ಸಂಪಿಗೆ ಹೂವಿನ ಕತೆ'; ಇನ್ನೊಂದು, 'ನನ್ನ ಪುಣ್ಯವೋ ನಿನ್ನ ಪುಣ್ಯವೋ'. ಏಳು ಗಂಡುಮಕ್ಕಳೂ ತಮ್ಮ ಒಬ್ಬಳೇ ತಂಗಿಯನ್ನು ನೋಡಿಕೊಳ್ಳುತ್ತಿರುವಂತೆ ಹೇಳಿ ಕಾಶಿಯಾತ್ರೆಗೆ ಹೋಗುವ ಬ್ರಾಹ್ಮಣನೊಬ್ಬನ ಕತೆ, 'ಸಂಪಿಗೆ ಹೂವಿನ ಕತೆ'. ಇದರಲ್ಲಿ ಏಳನೆಯ ಮಗನು ಹೆಂಡತಿಯ ಮಾತಿನಂತೆ ತಂಗಿಯನ್ನು ಕಾಡಿನಲ್ಲಿ ಕಡಿದು ಬರುತ್ತಾನೆ. ಅವಳು ಸಂಪಿಗೆಯ ಗಿಡವಾಗಿ ಹುಟ್ಟುತ್ತಾಳೆ. 'ವಜ್ರಕುಮಾರ'ದ ವಿವರಗಳು ಹೆಚ್ಚು ರಮ್ಯವಾಗಿವೆ. ಸತ್ತ ಅರಸನ ಮಗನೊಬ್ಬ ಈ ಅನಾಥ ತಂಗಿಗೆ ಕೋಟೆಯಂತೆ ಕಾಣುವ ಪ್ರಸಂಗವು ಮಾಂತ್ರಿಕ ಆಶಯವನ್ನು ಹೊಂದಿದೆ. ಹೂವಾಗಿ ಅವಳು ರೂಪಾಂತರಗೊಳ್ಳುವುದು ಇಲ್ಲಿ ನಡೆಯುವುದಿಲ್ಲ. ಆದರೆ ರೈ ಅವರ 'ಹುಲಿಯು ತಿಂದ ಹುಡುಗಿ'ಯಲ್ಲಿ ಹುಲಿಯು ತಿನ್ನುವ ಆ ಹೆಣ್ಣಿನ ಕಿರುಬೆರಳು, ಹುಡುಗಿಯಾಗಿ ರೂಪಾಂತರಗೊಳ್ಳುವ ಕ್ರಿಯೆ ನಡೆಯುತ್ತದೆ. 'ವಜ್ರಕುಮಾರ' ಸಂಕೀರ್ಣಗೊಳ್ಳುವುದು ಅದರ ಎರಡನೆಯ ಭಾಗದಲ್ಲಿನ, ಸೌದೆಯನ್ನು ಮಾರುತ್ತಿದ್ದ ತನ್ನ ಸೋದರರಿಗೆ ಪ್ರಕಟಗೊಳ್ಳುವ ಪ್ರಸಂಗದಿಂದ. ಈ ಭಾಗವು 'ನನ್ನ ಪುಣ್ಯವೋ, ನಿನ್ನ ಪುಣ್ಯವೋ' ಎಂಬ ಪ್ರತ್ಯೇಕ ಕತೆಯಾಗಿಯೇ ಸಮುದಾಯದಲ್ಲಿ ಬೆಳೆದಿದೆ.[4] ಏಳು ಹೆಣ್ಣುಮಕ್ಕಳು; ಅವರಲ್ಲಿ ಕೊನೆಯವಳು ಮಾತ್ರ, ತಾನು ಬದುಕುವುದು ತನ್ನ ಪುಣ್ಯದಿಂದಲೇ ಎಂದರೆ ಉಳಿದವರು ತಂದೆಯ ಪುಣ್ಯದಿಂದ ಎನ್ನುತ್ತಾರೆ. ಸಿಟ್ಟಿಗೆದ್ದ ರಾಜನು ಅವಳನ್ನು

2 ತುಳು ಜನಪದ ಸಾಹಿತ್ಯ, ವಜ್ರಕುಮಾರ, ಹುಲಿಯು ತಿಂದ ಹುಡುಗಿ, ವಿವೇಕ ರೈ, ೧೯೮೫, ಪು.೩೩೩, ೩೪೦

3 *ಕನ್ನಡ ಜನಪದ ಕತೆಗಳು; ಕ್ರೂರಿಯಾದ ಅತ್ತಿಗೆ* - ಕೆ.೨೨೧೨.೨; *ಏಳುಮಂದಿ ಸೋದರರು ಮತ್ತು ಒಂದು ಸೋದರಿ, ಸಂಪಿಗೆ ಹೂವಿನ ಕತೆ* - ಜಡ್ ೭೧.೫.೧; *ತಾವರೆಹೂ,* ಜೀಶಂಪ, ೧೯೭೦, ಪು.೯

4 *ಏಳುಮಂದಿ ಸೋದರಿಯರು* - ಪಿ.೨೫೨೩

ಬಡಬ್ರಾಹ್ಮಣನೊಬ್ಬನಿಗೆ ವಿವಾಹಮಾಡಿ ಅಟ್ಟುತ್ತಾನೆ. ಆತ್ಮಹತ್ಯೆಗೆ ದೂಡುವಷ್ಟು ಬಡತನ ಅವಳದು. ಅದಕ್ಕಾಗಿ ಸರ್ಪದ ಅಡುಗೆಮಾಡಲೆಂದು ಬೇಯಿಸಲಿಟ್ಟರೆ, ಅದೆಲ್ಲವೂ ರತ್ನವಾಗುವ ಅದ್ಭುತ ಇಲ್ಲಿ ಸಂಭವಿಸುತ್ತದೆ. ಆಗಲೇ, ಸೌದೆಮಾರುತ್ತಿದ್ದ ಸೋದರರನ್ನು ಅವಳು ಆಹ್ವಾನಿಸಿ ಆದರಿಸುವುದು. ವಾಸ್ತವವಾಗಿ 'ವಜ್ರಕುಮಾರ'ದ ಎರಡನೆಯ ಭಾಗಕ್ಕಿಂತಲೂ ಈ ಕತೆ ಹೆಚ್ಚು ರಮ್ಯವಾಗುವುದು ಸರ್ಪವು ಮುತ್ತಾಗುವ ಈ ಪ್ರಸಂಗದಿಂದ. 'ಸಂಪಿಗೆ ಹೂ'ನಲ್ಲಿ ನಾಯಕಿಯು ಅತ್ತಿಗೆಯರಿಂದ ತೊಂದರೆಗೆ ಈಡಾಗುತ್ತಾಳೆ; 'ನನ್ನ ಪುಣ್ಯವೋ ನಿನ್ನ ಪುಣ್ಯವೋ'ದಲ್ಲಿ ಅವಳು ಕಷ್ಟಪಡಬೇಕಾಗುವುದು ತಂದೆಯಿಂದಲೇ. ಇವುಗಳಲ್ಲಿನ 'ನೆರವು', 'ವಜ್ರಕುಮಾರ'ದಲ್ಲಿನ ನೆರವುಗಳ ಸ್ವರೂಪಕ್ಕಿಂತ ಭಿನ್ನವಾದುದು. ಅಲ್ಲಿ ಅವು ಅತಿಮಾನುಷ ನೆರವು ಎನ್ನುವ ಸೂಚನೆಗಳಿಲ್ಲ ಎಂಬುದರಿಂದಲೂ, ಅವು 'ಸಿಂಡರೆಲ್ಲಾ ಸೈಕಲ್'ಗೆ 'ವಜ್ರಕುಮಾರ'ದಷ್ಟು ಹೊಂದಲಾರವು.

0.3 ಚಮತ್ಕಾರದ ಕತೆಯಾದ 'ಕಾಶೀಯಾತ್ರೆ' (ಬಿ ೭೫೦-೮೪೯) ಒಂದು ಧಾರ್ಮಿಕ ಚಿಂತನೆಯನ್ನೇ ನಡೆಸುತ್ತದೆ. ಜೀವನವಿಡೀ ನಿಸ್ಪೃಹನಾಗಿ ಬಾಳಿದ ಪಂಡಿತ, ನೂರು ಗೋಹತ್ಯೆ ಮಾಡಿದವನು ಮತ್ತು ನೂರು ಬ್ರಹ್ಮಹತ್ಯೆ ಮಾಡಿದವನು - ಈ ಮೂವರಲ್ಲಿ ಯಾರಿಗೆ ಮೊದಲು ಮೋಕ್ಷ ದೊರೆಯುವುದೆಂಬ ನಿರೀಕ್ಷೆಯು ಕೊನೆಯವರೆವಿಗೂ ಕುತೂಹಲವನ್ನು ಉಳಿಸುತ್ತದೆ. ಕಥಾಸಾರ: ಮೂವರೂ ಕಾಶಿಯಾತ್ರೆಗೆ ಹೋದುದು ಮೋಕ್ಷಸಾಧನೆಗಾಗಿ. ಪಾರ್ವತಿಗೆ ಕುತೂಹಲ- 'ಯಾರಿಗೆ ಮೊದಲು ಮೋಕ್ಷ?' ಎಂದು. ಅದಕ್ಕಾಗಿ ಶಿವನ ನಾಟಕ. ವೃದ್ಧನೂ ಮರಣಸಮ್ಮುಖನೂ ಆಗಿ ಮಲಗಿದ. 'ಬಾಯಿಗೆ ನೀರು ಬಿಡಿ; ಬದುಕಿಕೊಳ್ತಾನೆ' ಎಂದು ಮಾರುವೇಷದ ಪಾರ್ವತಿ ಎಲ್ಲರನ್ನೂ ಬೇಡಿದಳು. ಈವರೆಗೂ ನಿಸ್ಪೃಹಬಾಳು ನನ್ನದು; ಈಗ ಬಾಯಿಗೆ ನೀರು ಬಿಡಹೋಗಿ ಆತ ಸತ್ತರೆ ಬ್ರಹ್ಮಹತ್ಯಾದೋಷ ಬರುವುದೆಂದು ಪಂಡಿತನು ಅಂಜಿದ. ೧೦೦ ಗೋಹತ್ಯೆ ಮಾಡಿದವನಿಗೂ ಜೊತೆಗೆ ಇನ್ನೊಂದು ಬ್ರಹ್ಮಹತ್ಯೆಯ ಪಾಪ ಬೇಡವಾಯಿತು. ಆದರೆ ೧೦೦ ಬ್ರಹ್ಮಹತ್ಯೆ ಮಾಡಿದವನ ತರ್ಕ ಬೇರೆ. ಆತ ಸತ್ತರೆ ನೂರರ ಜೊತೆಗೆ ಇನ್ನೊಂದು ಹತ್ಯೆ; ಬದುಕಿದರೆ ಎಲ್ಲ ದೋಷದ ಪರಿಹಾರ. ಹಾಗೆಂದು ಬಾಯಿಗೆ ನೀರುಬಿಟ್ಟ. ವೃದ್ಧನು ಬದುಕಿದ. ಬ್ರಹ್ಮಹತ್ಯೆ ಮಾಡಿದವನಿಗೇ ಮೊದಲು ಮೋಕ್ಷ ಸಿಕ್ಕಿತು. ಮಾನವೀಯತೆ ವ್ಯಕ್ತಗೊಂಡರೂ ನೂರು ಬ್ರಹ್ಮಹತ್ಯೆ ಮಾಡಿದವನ ತರ್ಕದಲ್ಲಿ ಅದರ ಸುಳುಹೂ ಕಾಣದುದು ಶಿಷ್ಟಕತೆಯ ಸಂದರ್ಭದಲ್ಲಿ ಲೋಪವೆನಿಸಬಹುದು. ಆದರೆ, ಚಮತ್ಕಾರಗಳನ್ನಾಧರಿಸಿ ಜನಪದ ಕತೆಯೊಂದರಲ್ಲಿ ಆಗುವಂತೆಯೇ, ಇಲ್ಲಿನ ಎಲ್ಲ ವಿವರಗಳೂ, ಮುಕ್ತಾಯವೂ ಇದೆ ಎಂಬುದನ್ನು ಗಮನಿಸಬೇಕು. ತಮ್ಮ ನಡುವಿನ ಪಾತ್ರವನ್ನೇ ವಿಮರ್ಶಿಸಿದರೂ, ಆಚಾರಶೀಲತೆಯನ್ನು ಹೀಗಳೆಯವುದಾಗಲಿ ನೂರು ಬ್ರಹ್ಮಹತ್ಯೆ ಮಾಡಿದ್ದರೂ ಆಕಸ್ಮಿಕಗಳಿಂದ ಸುಲಭಮೋಕ್ಷ ದೊರೆಯುತ್ತದೆಂಬ ಧೋರಣೆಯಾಗಲಿ, ಇಲ್ಲಿನದಲ್ಲ. ಮಾನವೀಯತೆಗೆ ಒತ್ತುಕೊಡುವ ಜನಪದ ಮನಸ್ಸು ಅದನ್ನು ಇಟ್ಟ ರೀತಿ ಅದು. ಆನುಷಂಗಿಕವಾಗಿ, ಸ್ವ ವಿಮರ್ಶೆಯೂ ಇದರಲ್ಲಿ ಅಡಗಿದೆ.

ಶಿವಪಾರ್ವತಿಯರೇ ಪಾತ್ರಗಳಾಗಿ ಬಂದು, ಮಾರುವೇಷದಲ್ಲಿ ಭಕ್ತರನ್ನು ಪರೀಕ್ಷಿಸುವುದು ಅನೇಕ ಜನಪದ ಕತೆಗಳಲ್ಲಿ ಕಾಣುವ ಪ್ರಸಿದ್ಧ ಆಶಯವೇ ಆಗಿದೆ (ಆಶಯ ಎ ೧೨೫ ಮನುಷ್ಯ ಸ್ವರೂಪದಲ್ಲಿ ದೇವರು ಡಿ೪೨).

0.4 ಇಪ್ಪತ್ತೈದು ವರ್ಷಗಳ ಹಿಂದೆ ಚಿಲಕುಂದದ ವಕ್ತೃವೊಬ್ಬರು[5] ಕಿಗ್ಗಪ್ಪ ಕಿಗ್ಗಮ್ಮನ ಕತೆಯಲ್ಲಿ (ದಂಪತಿಗಳನ್ನು ಕುರಿತ ಕತೆ ೧೩೫೦-೧೪೩೯) ಇಬ್ಬರು ಪುರೋಹಿತರು ವಧೂವರರ ಪರವಾಗಿ ಜಾತಕ ಹಿಡಿದು ಹೊರಡುವ ವಿವರವನ್ನು ಕೊಟ್ಟಿದ್ದರು. ಕಿಗ್ಗಪ್ಪನಿಗೆ ಕಾಲಿಲ್ಲ; ಕಿಗ್ಗಮ್ಮನಿಗೆ ಕೈ ಇಲ್ಲ. ಆದರೆ ಅದನ್ನು ಮುಚ್ಚಿಹಾಕಿ ಹಿರಿಯರು ಅವರಿಬ್ಬರ ವಿವಾಹ ಮಾಡಿದರು. ಪ್ರಸ್ತದ ರಾತ್ರಿ ಕಿಗ್ಗಪ್ಪನು ತನ್ನ ಮರಗಾಲು ತೋರಿಸಿ 'ನಾನೇ ಗೆದ್ದೆ' ಎಂದು ಕುಣಿದಾಡಿದ. ಕಿಗ್ಗಮ್ಮ 'ನೀನೇನು ಗೆದ್ದದ್ದು, ಗೆದ್ದದ್ದು ನಾನೇ' ಎಂದು ತನ್ನ ಮರಗೈ ಅಳ್ಳಾಡಿಸಿ ನಕ್ಕಳು. ಆದರೆ ಕ್ರಿ.ಶ.೧೯೮೪ರಲ್ಲಿ ಸಂಗ್ರಹಿಸಿದ ಈ ಕತೆಯಲ್ಲಿ ರುದ್ರಪಟ್ಟಣದ ವಕ್ತೃ[6] ಜಾತಕದ ಬದಲು ಹೇಳಿದುದು ಫೋಟೋಗಳನ್ನು ಹಿಡಿದು ಹೊರಟರೆಂದು. ಇದು, ಸಾಂಸ್ಕೃತಿಕವಾಗಿಯೂ ಭಾಷಿಕವಾಗಿಯೂ ಅವರಲ್ಲಿ ಆದ ಸಾಮಾಜಿಕ ಪರಿವರ್ತನೆಯನ್ನು ಸೂಚಿಸುತ್ತದೆ.

ಜಾನಪದದ ಯಾವ ಪ್ರಕಾರವಾದರೂ, ಅದು ಅದರ ಆಕರಸಮುದಾಯದ ಸಂಸ್ಕೃತಿಯ ಕೈಗನ್ನಡಿಯಾಗಿರುತ್ತದೆ. 'ಜನಪದ ಸಾಹಿತ್ಯ' ಎಂಬಲ್ಲಿ 'ಸಾಹಿತ್ಯ'ವೆನ್ನುವುದು ದುರ್ಬಲ ಅರ್ಥದಲ್ಲಿ ಬಳಕೆಯಾಗಿದ್ದರೂ, ಜನಪದ ಸಂಸ್ಕೃತಿ ಅಲ್ಲಿ ಪೂರ್ಣವಾಗಿ ವ್ಯಕ್ತವಾಗುತ್ತದೆ.

5 *ಭೀಮಯ್ಯ*, ೭೬, ಕೃಷಿಕ, ಚಿಲಕುಂದ, ಮೈಸೂರು ಜಿಲ್ಲೆ

6 *ಸುಬ್ರಹ್ಮಣ್ಯ (ಮುತ್ತು)*, ೮೦, ಕೃಷಿಕ, ವೈದಿಕ, ರುದ್ರಪಟ್ಟಣ, ಹಾಸನಜಿಲ್ಲೆ

ಭಾಷಿಕ, ಚಾರಿತ್ರಿಕ, ಸಾಮಾಜಿಕ, ಮನಶ್ಶಾಸ್ತ್ರೀಯ ಮೊದಲಾದ ಅಧ್ಯಯನಗಳಿಗೆ ಹೆಚ್ಚು ಪರಿಕರಗಳನ್ನೊದಗಿಸುವ ಸಾಮರ್ಥ್ಯವು ಸಹಜವಾಗಿಯೇ ಕಥೆಗೆ ಹೆಚ್ಚಿದೆ; ಆವರಣ ಮಾತ್ರ ಮನೋರಂಜನೆಯದು.

3. **ಕಥಾಲಕ್ಷಣ :**

ಸಂಕೇತಿ ಸಮುದಾಯದಲ್ಲಿ ಪ್ರಚಲಿತವಾಗಿರುವ ಕತೆಗಳ ಕೆಲವು ಲಕ್ಷಣಗಳನ್ನು ಇಲ್ಲಿ ಕ್ರೋಡೀಕರಿಸಿದೆ:

0.1 ಈ ಸಮುದಾಯದಲ್ಲಿ ಬಳಕೆಯಲ್ಲಿರುವ ಕತೆಗಳಲ್ಲಿ ವಿಶ್ವಕಥಾ ಮಾದರಿಗಳಿವೆ. ಬ್ರಾಹ್ಮಣವಲಯದಲ್ಲಿ ವಿಶಿಷ್ಟವಾಗಿ ಪ್ರಚಾರದಲ್ಲಿರತಕ್ಕ ಕತೆಗಳೂ ಇವೆ.

0.2 ಇವರ ಕತೆಗಳಲ್ಲಿ ದಟ್ಟ ಸಾಹಸಗಳಿಲ್ಲ; ನಾಯಕ ನಾಯಕಿಯರ ಸಂಕೀರ್ಣ ಕ್ರಿಯಾಮುಖವಿಲ್ಲ; ರಮ್ಯತೆ, ಅತಿಮಾನುಷತೆ, ಮಾಂತ್ರಿಕತೆ ಇಲ್ಲಿ ತೆಳುವಾಗಿದೆ ಮತ್ತು ಆನುಷಂಗಿಕವಾಗಿದೆ.

0.3 ಬುದ್ಧಿವಂತಿಕೆಯ ಕತೆಗಳಲ್ಲಿಯೂ ವಂಚನೆ, ಮೋಸಕ್ಕಿಂತ ಜಾಣ್ಮೆಗೆ ಮಹತ್ವವಿದೆ; ವಿನೋದಕತೆಗಳಲ್ಲಿಯೂ 'ನೀತಿ'ಗೆ ಇವರ ಲಕ್ಷ್ಯ.

0.4 ಬ್ರಾಹ್ಮಣರ ಭಾಷೆಯು ಗ್ರಂಥಸ್ಥ ಭಾಷೆಗೆ ಹತ್ತಿರವಾದುದರಿಂದ ಬ್ರಾಹ್ಮಣೇತರ ಹಳ್ಳಿಗನ್ನಡದ ಸೊಗಡು ಅದರಲ್ಲಿ ಅಷ್ಟೇ ದಟ್ಟವಾಗಿರುವುದು ಸಾಧ್ಯವಿಲ್ಲ. ಆದರೆ, ಸಹಜ ಕಥನ, ಪಡೆನುಡಿಗಳು, ಗಾದೆಗಳು, ಉದ್ಗಾರಗಳು, ಬೈಗುಳಗಳು, ನಾಟಕೀಯತೆ, ಕಲ್ಪನಾವೈಭವ, ಭಾವಸಮೃದ್ಧಿ ಇಲ್ಲಿಯೂ ಇವೆ. ಸಂಸ್ಕೃತ ಶ್ಲೋಕಗಳ ಉದ್ಧರಣ, ಕನ್ನಡ ಪದ್ಯಗಳು, ಇಂಗ್ಲಿಷ್ ಪದ್ಯಗಳು, ಗ್ರಾಮ್ಯಭಾಷೆ, ಗ್ರಂಥಸ್ಥಭಾಷೆ ಎಲ್ಲವೂ ಇಲ್ಲಿನ ಸರಕುಗಳಾಗಿವೆ. ಹಾಗಾಗಿ ಕಥಾನಿರೂಪಣೆಯೇ ಉಂಟುಮಾಡುವ ಸ್ವಾರಸ್ಯಕ್ಕೆ ಕುಂದು ಇರುವುದಿಲ್ಲ. "ಮುಟ್ಟು ತಟ್ಟು ಒಂದೂ ಇಲ್ಲ ಮುಂಡೇರಾ ನಿಮ್ಗೆ. ಹಂಗ್ ಬಂದ್ಯೆತೆ ಹಮ್ಮು . . . ಸುಮ್ಕಿರಿ ಗೌಡ್ರಾ! ಆದ್ಯಾವ್ರು ವಿಸಯ ನಂಗೆ ಗೊತ್ತು. ನಾ ಅದ ಸರಿ ಮಾಡ್ತೀನಿ. ನೀವು ನಾಳೆಗಂಟ ಸುಂಕಿರಿ . . ." - ಇದು, ಸನ್ನಿವೇಶಕ್ಕನುಗುಣವಾಗಿ ಬಳಕೆಯಾದ ಗ್ರಾಮ್ಯಭಾಷೆಯ ನಿದರ್ಶನ.

0.5 ಅತಿರೇಕಗಳನ್ನೂ ಕುರುಡು ಆಚರಣೆಗಳನ್ನೂ ದಮನಮಾಡುವ ಚಿಕಿತ್ಸಕತೆ ಮತ್ತು ಸ್ವವಿಮರ್ಶೆ ಇವರ ಕತೆಗಳಲ್ಲಿ ಬಹಳ ಕಡೆ ಇದೆ.

0.6 ಅನೇಕ ಕತೆಗಳು ಬ್ರಾಹ್ಮಣ ವಲಯದಲ್ಲಿಯೇ ಹುಟ್ಟಿಕೊಂಡಂತಿದ್ದರೆ, ಕೆಲವಕ್ಕೆ ಬ್ರಾಹ್ಮಣ ಪರಿಸರವನ್ನು ತೊಡಿಸಿದಂತಿದೆ. ಉದಾಹರಣೆಗೆ ಸಂಪಿಗೆ ಹೂವಿನ ಕತೆ.

0.7 ವಕ್ತೃಗಳು ಜೀವಂತ ಕಥನ ಶೈಲಿಯನ್ನು ರೂಢಿಸಿಕೊಂಡಿದ್ದು, ಒಳ್ಳೆಯ ಸ್ಮರಣಶಕ್ತಿಯನ್ನೂ ಕಲ್ಪನಾ ಸಾಮರ್ಥ್ಯವನ್ನೂ ಮೆರೆದಿದ್ದಾರೆ. ಹಾಸ್ಯಪ್ರಜ್ಞೆ ಇಲ್ಲಿ ಧಾರಾಳವಾಗಿದೆ.

0.8 ಸಾರ್ವತ್ರಿಕ ಆಶಯಗಳಂತೆಯೇ ಅವರ ಸಂಸ್ಕೃತಿ, ಧೋರಣೆ, ಆಸಕ್ತಿಯನ್ನು ವಿಶೇಷವಾಗಿ ಬಿಂಬಿಸುವ ಆಶಯಗಳೂ ಇವೆ: ಚತುಶ್ಶಾಸ್ತ್ರ ಪಂಡಿತ, ವೇದಪಾರಗ, ವೈದ್ಯ, ಜ್ಯೋತಿಷಿ - ರಾಜಾಶ್ರಯದಲ್ಲಿ ಆಶ್ರಯ, ಸನ್ಮಾನ - ಕಾಶೀಯಾತ್ರೆ- ಗೋಹತ್ಯೆ, ಬ್ರಹ್ಮಹತ್ಯೆ-ದೈವಸಹಾಯ - ವಿದ್ಯೆ ಕಲಿಯಬೇಕೆಂಬ ಹಂಬಲ - ಖೋಟಾ ಪಂಡಿತ ಮತ್ತು ಮೂರ್ಖತನ - ತಪಸ್ಸು, ವರ - ದಾನದಿಂದ ದೋಷಪರಿಹಾರ - ಬ್ರಾಹ್ಮಣರ ಸತ್ತ್ವಪರೀಕ್ಷೆ; ವಿಶೇಷ ತೇಜಸ್ಸಿನ ಬ್ರಾಹ್ಮಣನೊಬ್ಬನಿಂದ ಎಲ್ಲರೂ ಪಾರಾಗುವುದು - ಮಂತ್ರ ಶಕ್ತಿಯಿಂದ ಶಲ್ಯವನ್ನು ತಲೆಯಮೇಲೆ ಹಾರಿ ಬಿಡುವುದು - ಗ್ರಹಚಾರದಲ್ಲಿ ನಂಬಿಕೆ . . . ಇತ್ಯಾದಿಗಳು ಧಾರಾಳವಾಗಿ ಕಂಡುಬರುತ್ತವೆ.

0.9 ಕತೆಗಳಲ್ಲಿ ಎಲ್ಲ ದೇವತೆಗಳಿಗೂ ಸಮಾನ ಸ್ಥಾನವಿದೆ. ಜೊತೆಗೆ, ದೇವದೇವತೆಗಳ ಬಗೆಗೆ ಸಲುಗೆ ಇದೆ. ಸಾಮಾನ್ಯವಾಗಿ ಕಥಾಪಾತ್ರಗಳು ಬ್ರಾಹ್ಮಣರು. ವಿಭಿನ್ನ ಜಾತಿಗಳಿಗೆ ವಿಭಿನ್ನ ಗುಣಗಳ ಆರೋಪಣವಿದೆ. ರಾಜರಾಣಿಯರು ಅವರ ಅನೇಕ ಕತೆಗಳ ಕೇಂದ್ರದಲ್ಲಿರುವುದು, ರಾಜಕೇಂದ್ರಿತ ಸಮಾಜದ ಚಿಂತನೆಯ ಫಲ. ದೇವರಲ್ಲಿ ಭಕ್ತಿ, ಹಿರಿಯರಲ್ಲಿ ಗೌರವ, ವಿದ್ಯೆ

ಕಲಿತಕೂಡಲೆ ಹೆಣ್ಣು ಕೊಡಲು ಮುಂದೆಬರುವ ಸಮಾಜ, ಚಕ್ಕಳಗೊಂಬೆ ಆಟ ಆಡಿಸಿದರೆ ದನಕರುಗಳಿಗೆ ಒಳ್ಳೆಯದಾಗುತ್ತದೆಂಬ ನಂಬಿಕೆ, ಅತ್ತೆಸೊಸೆಯರ ವೈಷಮ್ಯ - ಹೀಗೆ ವೈವಿಧ್ಯಪೂರ್ಣ ಸಾಮಾಜಿಕ ಚಿತ್ರ ಇಲ್ಲಿ ದೊರೆಯುತ್ತದೆ. ವಕ್ತೃಗಳ ಅರಿವಿಗೂ ಬಾರದಂತೆ ಬ್ರಾಹ್ಮಣ ಪರಿಸರವೊಂದು ನಿರ್ಮಾಣವಾಗುವ ರೀತಿ ಇದು. ". . . ಅತ್ತೆ ಹೊಳೇಂದ ಬಂದು ಹೊಸಲೊಳಗೆ ಕಾಲಿಡ್ತಾನೇ ಜಾರಿ ಬೀಳ್ತಾಳೆ. ಒಗೆದ ಬಟ್ಟೆ, ತೊಳೆದ ಪಾತ್ರೆ ಚೆಲ್ಲಾಡುತ್ತೆ . . . ಸೊಸೆ ಅತ್ತೇನ ಮಣೆಮೇಲೆ ಕೂರಿಸಿ ತಂದಿದ್ದ ದುಡ್ಡೆಲ್ಲ ಅವಳ ತಲೇಮೇಲೆ ಸುರಿದು ಕನಕಾಭಿಷೇಕ ಮಾಡ್ತಾಳೆ . . ." (ಬದನೆಕಾಯಿ ಕತೆ).

ಸಂಕೇತಿ ಜನಪದ ಕತೆಗಳ ಪ್ರಾದೇಶಿಕ ಹರಹು ಸಮವಾಗಿಲ್ಲದುದು, ಕತೆಗಳ ಸಂಖ್ಯೆಯು ದೊಡ್ಡದಲ್ಲದುದು ಮತ್ತು ಕಥಾಸಮಯವಾಗಲಿ ಕಥನ ಪರಂಪರೆಯ ತೀವ್ರತೆಯಾಗಲಿ ಇಲ್ಲದುದಕ್ಕೆ ಅವುಗಳ ಬಗೆಗಿನ ಲಘುಭಾವವೇ ಕಾರಣ. ಅದು, ಅವರಲ್ಲಿ ಈಗ ಪ್ರಚಲಿತವಿರುವ ಬಹುಪಾಲು ಕತೆಗಳು ಸಾರ್ವತ್ರಿಕವಾದುವು ಎಂಬುದಕ್ಕೂ ಕಾರಣ.

ಬಹುತೇಕ, ದೊರೆತ ಯಾವುದೇ ಆನುಷಂಗಿಕ ಸಂದರ್ಭದಲ್ಲಿ ಕತೆಯು ನೀತಿ ಇಲ್ಲವೆ ವಿನೋದಕ್ಕಾಗಿಯೇ ಬಳಕೆಯಾಗುವುದರಿಂದ, ಸರಳ ಕತೆಗಳದೇ ಅಲ್ಲಿ ಪ್ರಾದುರ್ಭಾವ. ಅವರು ಜನಪದ ಕತೆಗಳನ್ನು ದುಡಿಸಿಕೊಂಡ ರೀತಿಗೂ ಅದು ಸಾಕ್ಷಿ.

ಇಷ್ಟರ ನಡುವೆಯೂ ಕಲಾತ್ಮಕತೆ, ಸೃಜನಶೀಲತೆ, ವೈವಿಧ್ಯ, ಸಾಂಸ್ಕೃತಿಕ ಅಭಿವ್ಯಕ್ತಿ, ಮುಖ್ಯವಾಗಿ ಆತ್ಮಚಿಕಿತ್ಸೆ ಅವರ ಕತೆಗಳಲ್ಲಿ ಕಾಣಿಸಿಕೊಳ್ಳುವುದರ ಮೂಲಕ, ಜನಪದ ಕತೆಗಳ ವಿಶ್ವಸಾಮಾನ್ಯ ಗುಣಗಳನ್ನು ಪ್ರಕಟಿಸುತ್ತದೆ. ಸಾಂಸ್ಕೃತಿಕ ವಿವರ ಮತ್ತು ಭಾಷಾ ಪ್ರಯೋಗಗಳಲ್ಲಿ ಹೆಚ್ಚಾಗಿ ಸಂಕೇತಿಗಳ ಅನನ್ಯತೆಯೂ ವ್ಯಕ್ತವಾಗುತ್ತದೆ. ಸರ್ವದೇವಸಮಭಾವ, ಮಾನವೀಯ ಅನುಕಂಪ, ಆತ್ಮಚಿಕಿತ್ಸಕತೆ ಅವುಗಳಲ್ಲಿ ಮುಖ್ಯವಾದವು.

ಆ. ಐತಿಹ್ಯಗಳು :

ಕ್ರಿಯಾತ್ಮಕತೆ ಮತ್ತು ಪ್ರಮಾಣದ ದೃಷ್ಟಿಯಿಂದ ಸಂಕೇತಿ ಸಮುದಾಯದಲ್ಲಿ ಐತಿಹ್ಯಗಳ ಪಾತ್ರ ದೊಡ್ಡದು. ಅನನ್ಯ ಸಾಂಸ್ಕೃತಿಕ ವಿವರಗಳು ಪೂರ್ಣವಾಗಿ ದೊರೆಯುವುದು ಅವುಗಳಲ್ಲಿಯೇ.

1. **ಹಿನ್ನೆಲೆ :** ಸಂಕೇತಿಗಳು ನೆಲೆಸಿರುವ ಪ್ರದೇಶಗಳಿಗೆ ಸಂಬಂಧಿಸಿದ ಸ್ಥಳಪುರಾಣಗಳಿವೆ; ಐತಿಹ್ಯಗಳಿವೆ. ಆದರೆ ಅವಕ್ಕೂ ಸಂಕೇತಿಗಳಿಗೂ ನೇರ ಸಂಬಂಧವಿರುವುದಿಲ್ಲ. ವ್ಯಕ್ತಿ ಮತ್ತು ಘಟನೆಗಳಿಗೆ ಸಂಬಂಧಿಸಿದ ಐತಿಹ್ಯಗಳು ಅವರ 'ವಂಶಚರಿತ್ರೆ'ಗಳ ಭಾಗಗಳು. ಪ್ರತಿ ಮನೆತನಕ್ಕೂ ಅಂಥ ವಂಶಚರಿತ್ರೆ ಇದೆ. ಅಸಾಧಾರಣ ಸಂಗತಿಗಳಿಗೆ ಮೌಖಿಕ ಪರಂಪರೆಯಲ್ಲಿ ಹೆಚ್ಚಿನ ಮಾನ್ಯತೆ ಲಭಿಸುವುದು ಸಹಜವೇ. ಕೆಲವು ವಿಶಿಷ್ಟ ವಂಶಚರಿತ್ರೆಗಳು ಸಮುದಾಯದಲ್ಲಿ ಸಾರ್ವತ್ರಿಕ ಪ್ರಚಾರದಲ್ಲಿವೆ; ಕೆಲವು ಮರೆತಿವೆ; ಕೆಲವು ಅವಜ್ಞೆಗೆ ಒಳಗಾಗಿವೆ; ಕೆಲವರಾದರೂ ಅವನ್ನು ಬರೆದಿಡುವ ಪ್ರಯತ್ನ ಮಾಡಿದುದಿದೆ. ಅವರ ಐತಿಹ್ಯಗಳು ಇತರ ಸಮುದಾಯಗಳಿಗೂ ಹರಡಿವೆ; ಕತೆಗಳೂ ಪುರಾಣಗಳೂ ಆಗಿ ಬೆಳೆದಿವೆ. ಇತರರ ಐತಿಹ್ಯಗಳೂ ಅವರಲ್ಲಿ ಬಳಕೆಯಲ್ಲಿವೆ.

ಅನೇಕ ತಲೆಮಾರುಗಳ ಹರಹುಳ್ಳ ವಂಶಚರಿತ್ರೆಗಳಲ್ಲಿ ಉತ್ಪ್ರೇಕ್ಷೆ, ವಿಕೃತಿ, ಅಲಂಕಾರಗಳು ಇದ್ದೇ ಇರುತ್ತವೆಂದು ನಿರೀಕ್ಷಿಸಬಹುದು. ಶಾಸನಗಳ ಕಾವ್ಯಾಂಶವನ್ನು ಸರಿಸಿ ವಾಸ್ತವಾಂಶಗಳನ್ನು ಹೆಕ್ಕಿಕೊಳ್ಳುವಷ್ಟು ಸರಳವಾಗಿ ಇಲ್ಲಿ ಅದು ಸಾಧ್ಯವಾಗದಿರಬಹುದು. ಆದರೆ ಈ ವಂಶಚರಿತ್ರೆಗಳ ವಾಸ್ತವಾಂಶಗಳೂ ಮೇಲುಮಟ್ಟದವು. ಲಿಖಿತ ದಾಖಲೆಗಳಲ್ಲದ್ದರಿಂದ ಚರಿತ್ರೆ ಎನಿಸಲಾರದ, ಉತ್ಪ್ರೇಕ್ಷೆಗಳಿದ್ದರೂ ಕಾಲ್ಪನಿಕ ಅಲ್ಲದ, ಸಂಗತಿಗಳು ಇವು. ವೇದವನ್ನು ನೂರಕ್ಕೆ ನೂರರಷ್ಟು ಮೂಲನಿಷ್ಠವಾಗಿ ಮುಂದುವರಿಸಿಕೊಂಡುಬಂದ ಸಮುದಾಯವು ವಂಶಚರಿತ್ರೆಗಳನ್ನೂ ನಿಷ್ಠೆಯಿಂದಲೇ ಮುಂದುವರಿಸಿಕೊಂಡು ಬಂದಿದೆ. ಅತಿಪ್ರಚಲಿತ ಐತಿಹ್ಯಗಳಲ್ಲಿಯೂ ಮೂಲಾಂಶಗಳ ಸಾರ್ವತ್ರಿಕತೆಯನ್ನು ಗಮನಿಸುವುದು ಇಲ್ಲಿ ಸಾಧ್ಯ. ಸಾಂಸ್ಕೃತಿಕ ಲಕ್ಷಣದ ಅಭಿವ್ಯಕ್ತಿಯು ಸಂಕೇತಿ ಐತಿಹ್ಯಗಳ ಉಪಶೀರ್ಷಿಕೆಗಳಲ್ಲಿಯೂ ಆಗುತ್ತದೆ. ಉದಾಹರಣೆಗೆ ಸ್ಥಳೀಯ ಐತಿಹ್ಯಗಳು, ವಲಸೆಗೆ ಸಂಬಂಧಿಸಿದ ಐತಿಹ್ಯಗಳು, ಬ್ರಹ್ಮವರ್ಚಸ್ವಿಗಳು, ಕ್ಷಾತ್ರತೇಜಿಗಳು, ಸಾಹಸಿಗಳು, ಭೋಕ್ತಾಪುರುಷರು, ಮಂತ್ರವಾದಿಗಳು, ಜೀವನ ಹೋರಾಟ, ನಿಶಿತಮತಿಗಳು . . . ಇತ್ಯಾದಿ. ಪ್ರಸ್ತುತ ಅಧ್ಯಯನದ ಹೊತ್ತಿನಲ್ಲಿಯೇ ಎಲ್ಲೆಡೆಯ ಸಂಕೇತಿಗಳ ಮುನ್ನೂರು ವಂಶಚರಿತ್ರೆಗಳು ಲಭ್ಯವಾಗಿವೆ.

2. **ಮಾದರಿಗಳು :** ಸಂಕೇತಿಗಳ ಐತಿಹ್ಯದ ಸ್ವರೂಪದರ್ಶನಕ್ಕಾಗಿ ಇಲ್ಲಿ ಒಂದೆರಡು ನಿದರ್ಶನಗಳನ್ನು ನೀಡಿದೆ:

0.1 ಸ್ಥಳಕ್ಕೆ ಸಂಬಂಧಿಸಿದ ಐತಿಹ್ಯಗಳಲ್ಲಿ ಸಂಕೇತಿಗಳಿಗೇ ಸಂಬಂಧಿಸಿದ ಪ್ರಾತಿನಿಧಿಕ ಸಂಗತಿ ಇದು: ಪೂಮಗಾಮೆಯಿಂದ ಬಸವಪಟ್ಟಣಕ್ಕೆ ವಲಸೆಬಂದ ದೀಕ್ಷಿತರ ವಂಶಕ್ಕೆ ಹೊಂದಿದಂತೆ ಇದು ನಡೆದಿದೆ. ಬಸವಪಟ್ಟಣದ ನರಸಿಂಹಾವಧಾನಿಗಳ ಮನೆಗೆ ಒಂದುಸಂಜೆ ಸಂನ್ಯಾಸಿಯೊಬ್ಬನ ಪ್ರವೇಶವಾಗುತ್ತದೆ. ಅವರ ಮನೆಗೆ ಈಶಾನ್ಯದಲ್ಲಿ ಕೋಟೆಯೊಳಗೆ ಹುಗಿದುಹೋದ ಈಶ್ವರನ ಪೂಜೆಗೆ ವ್ಯವಸ್ಥೆಮಾಡುವಂತೆ ಕೊಟ್ಟ ಆದೇಶವೇ ಅದರ ವಸ್ತು. ಈವರೆಗೆ ಸಂನ್ಯಾಸಿ ಅಲ್ಲಿಯೇ ಇದ್ದು ಜಪಿಸುತ್ತಿದ್ದವನು; ಈಗ ನಿರ್ಗಮಿಸುತ್ತಿದ್ದುದರಿಂದ ಈ ಆದೇಶ ನೀಡುತ್ತಾನೆ. ಸುಮಾರು ಇನ್ನೂರೈವತ್ತು ವರ್ಷಗಳ ಹಿಂದಿನ ಘಟನೆ ಇದು. ಅಂದಿನಿಂದಲೂ ಆ ದೇವಸ್ಥಾನದಲ್ಲಿ ಪೂಜೆಯ ವ್ಯವಸ್ಥೆಯಾಗಿದೆ. ಕಾರ್ತಿಕಮಾಸದ ಮೊದಲಪೂಜೆ ಕೂಡ ಆ ವಂಶದಲ್ಲಿ ಮುಂದುವರಿದು ಬಂದಿದೆ. ವಲಸೆಬಂದ ಮೊದಲಿಗರಾದುದರಿಂದಲೂ ಮೊದಲ ಪೂಜೆಯ ಅವಕಾಶ ಸಾಧ್ಯ. 'ಗ್ರಾಮತಾಂಬೂಲ'ದ ಮರ್ಯಾದೆಕೂಡ ಅಂಥ'ವರಿಗೆ ಸಲ್ಲುವ ಇತರ ನಿದರ್ಶನಗಳೂ ಇವೆ. ವೈದಿಕಶ್ರೇಷ್ಠರಾದುದರಿಂದಲೂ ಅದು ಆಗಿರಬಹುದು. ಈ ಐತಿಹ್ಯವು 'ಆರು ಸಹಸ್ರವರ್ಷಗಳ ಇತಿಹಾಸದ' ಈಶ್ವರನ ಮಹತಿಯನ್ನು ಹೇಳುವಂತೆಯೇ, ದೀಕ್ಷಿತರ ಮನೆತನಕ್ಕೆ ಕಾರ್ತಿಕಮಾಸದ ಮೊದಲಪೂಜೆ ಸಂದುದರ ವಿವರಣಾತ್ಮಕ ಕತೆಯೂ ಆಗಿದೆ (etylogical tale). ಇದು ವಾಸ್ತವಿಕತೆಯ ನೆಲೆಗಟ್ಟನ್ನು ಕಳೆದುಕೊಳ್ಳುವುದು - ಆ ಈಶ್ವರಲಿಂಗಕ್ಕೆ ಆರು ಸಹಸ್ರವರ್ಷಗಳ ಪ್ರಾಚೀನತೆ ಇರುವುದಕ್ಕೆ ಆಧಾರವಿಲ್ಲದುದು ಮತ್ತು 'ದೀಕ್ಷಿತರ ಮನೆಯಿಂದ ಹೊರಬಿದ್ದ ಸಂನ್ಯಾಸಿ ಮಾಯವಾಗಿಬಿಟ್ಟಿದ್ದ; ಎಷ್ಟು ಹುಡುಕಿದರೂ ಸಿಗಲಿಲ್ಲ' ಎಂಬಂಥ ಸೇರ್ಪಡೆಗಳಿಂದ.

0.2 ಸಂಕೇತಿಗಳು ಕರ್ನಾಟಕದಲ್ಲಿ ಮಾಡಿದ ವಲಸೆ, ಮರುವಲಸೆಗಳಿಗೆ ಸಂಬಂಧಿಸಿದ ಚರಿತ್ರೆ ದೀರ್ಘವಾದುದು. ಶಾಸನ, ಕ್ರಯಪತ್ರ, ಪಹಣಿ, ಪಾಳುನಿವೇಶನ, ವಂಶವೃಕ್ಷ, ಕಪ್ಪಡಗಟ್ಟು, ಮನೆಯ ಆಯುಷ್ಯ - ಇವೆಲ್ಲವೂ ಈ ಚರಿತ್ರೆಗೆ ಆಧಾರಗಳಾಗಿವೆ. ಆದುದರಿಂದಲೇ ವಲಸೆಯ ಚರಿತ್ರೆಗೆ ಹೊಂದಿದಂತೆ ನಿಚ್ಚಳ ವಾಸ್ತವಾಂಶಗಳಿವೆ. ಆದರೂ, ಹಳ್ಳಿಮೈಸೂರಿಗೆ ಪಿರಿಯಪಟ್ಟಣದಿಂದ ಭಾರದ್ವಾಜಿಗಳು ವಲಸೆ ಬಂದುದಕ್ಕೆ 'ವಂಶವೃಕ್ಷ'ಗಳನ್ನೂ ಜ್ಞಾತಿತ್ವವನ್ನೂ ಆಧಾರವಾಗಿ ತೋರಿಸಬಹುದಾದಂತೆ, ಪಿರಿಯಪಟ್ಟಣದ ತಮ್ಮ ತೋಟದಲ್ಲಿ ವೇದಾಧ್ಯಯನ ಮಾಡುತ್ತ ಕುಳಿತಿದ್ದ ಶಿಷ್ಯನೊಬ್ಬನನ್ನು ಹುಲಿ ಹಿಡಿದುದರಿಂದಲೇ ಈ ವಲಸೆ ನಡೆಯಿತು ಎಂಬುದಕ್ಕೆ ಆಧಾರವಿರಲಾರದು. 'ಯತಿಶಾಪ'ದಿಂದಲೇ ಆದ ವಲಸೆಗಳನ್ನು 'ಶಾಪಗ್ರಸ್ತರ' ವಂಶಸ್ಥರೂ ಮುಕ್ತವಾಗಿ ಮೌಖಿಕ ಪರಂಪರೆಯಲ್ಲಿ ಉಳಿಸಿಕೊಂಡ ನಿಷ್ಠುರತೆಯನ್ನೂ ಇಲ್ಲಿ ಗಮನಿಸಬಹುದು.[7] ಅದರೊಂದಿಗೇ, ಆಧುನಿಕ ಪೀಳಿಗೆಯು ಅದು ತಮಗಾದ ಅಪಮಾನವೆಂದು ಭಾವಿಸಿ ಅಂಥ ಸಂಗತಿಯನ್ನು ನಿರಾಕರಿಸುವ ಪ್ರವೃತ್ತಿಯನ್ನು ಬೆಳೆಸಿಕೊಳ್ಳುತ್ತಿರುವುದನ್ನು ನೋಡಬೇಕಾಗುತ್ತದೆ. ಹೀಗೆ ತಪ್ಪಿಹೋಗುವ ಕೊಂಡಿಗಳು ವಂಶಚರಿತ್ರೆಯ ವಾಸ್ತವಾಂಶಗಳನ್ನೂ ದಾರಿತಪ್ಪಿಸುವ ಸಂಭವವಿಲ್ಲದಿಲ್ಲ.

0.3 ಜಪಸಿದ್ಧಿ ಪಡೆದವರು, ಯಜ್ಞಮಾಡಿದವರು, ವೇದಶಾಸ್ತ್ರಪಾರಗರು, ಅನುಷ್ಠಾನಪರರು, ನಿಷ್ಠರು ಆದವರಿಗೆ ಸಂಬಂಧಿಸಿದ ವಂಶಚರಿತ್ರೆ, ಪವಾಡಸದೃಶ ಸಂಗತಿಗಳನ್ನೊಳಗೊಂಡು ವಾಸ್ತವನೆಲೆಯಿಂದ ದೂರಸರಿದಿದೆ. ಈ ವಿವರಗಳಲ್ಲಿ, ತಾಂತ್ರಿಕರು ತೋರುವ ಸಾಧನೆಗಳನ್ನು ಇವರು ಮಂತ್ರಶಕ್ತಿಯಿಂದಲೇ ಸಾಧಿಸಿದ್ದಾರೆ. ಅನೇಕವೇಳೆ ಜಪಸಿದ್ಧಿಯಿಂದ ದೊರೆತ ವಾಕ್‌ಸಿದ್ಧಿ 'ಶಾಪ'ದಂತೆ ಕೆಲಸಮಾಡಿದೆ. 'ಪಿಶಾಚಿ', 'ಬ್ರಹ್ಮರಾಕ್ಷಸ'ಗಳನ್ನು ನಿಗ್ರಹಿಸಿದ್ದಾರೆ. ವೈದ್ಯವೂ ಅದರ ಪ್ರಯೋಜನವಾಗಿದೆ. ಜನಪದರಿಗೆ ಇವೆಲ್ಲವೂ ಎಷ್ಟು ವಾಸ್ತವವೋ ವಿಜ್ಞಾನಿಗಳಿಗೆ ಅಷ್ಟೇ ಪ್ರಶ್ನಾರ್ಹವೆನಿಸುತ್ತವೆ. ರಾಮನಾಥಪುರದ ದೀಕ್ಷಿತರು, ಬಸವಪಟ್ಟಣದ ದೀಕ್ಷಿತರು, ಬೆಳವಾಡಿಯ 'ಅಂಧಕ' ಸೂರ್ಯನಾರಾಯಣಾವಧಾನಿಗಳು, ಮರಿತಮ್ಮನಹಳ್ಳಿಯ ಆಹಿತಾಗ್ನಿಗಳಿಗೆ ಸಂಬಂಧಿಸಿದಂತೆ ದೊರೆಯುವ ವಿಸ್ತಾರ ವಿವರವು ಮತ್ತಾವ ವಂಶಚರಿತ್ರೆಗಳಲ್ಲಿಯೂ ಕಾಣಸಿಗುವುದಿಲ್ಲ.

---

7 ಆನೆಗೊಂದಿ ಮತ್ತು ಆನೆಕನ್ನಂಬಾಡಿಯಿಂದ ಸೋಮನಹಳ್ಳಿಗೆ, ಆನೆಕೆರೆಯಿಂದ ಹಿರಿಗನ ಹಳ್ಳಿಗೆ ಆಯಾಸ್ಯರ ಇಂಥ ವಲಸೆಗಳಾದುದನ್ನು ವಂಶಚರಿತ್ರೆಗಳು ಹೇಳುತ್ತವೆ.

ಸಂಕೇತಿಗಳ ಈ ಐತಿಹ್ಯಗಳ ಕೆಲವು ಅಂಶಗಳಿವು :

0.0.1 ರಾಜನು ಕೊಟ್ಟ ದಾನವನ್ನು ಎಡಗೈಲಿ ಸ್ವೀಕರಿಸುವುದು; ರಾಜನ ಕೋಪ; ಬಲಗೈ ಮೇಲೆ ಬೆರಣಿಯಪುಡಿ ಹಾಕಿದಾಗ ಭುಗ್ಗನೆ ಹೊತ್ತಿಕೊಳ್ಳುವುದು; ರಾಜನು ಶರಣಾಗುವುದು.

0.0.2 ರಾಜನು ಕೊಟ್ಟ ಕಾಣಿಕೆಯನ್ನು ಪೂರ್ಣಾಹುತಿಗೆ ಅರ್ಪಿಸುವುದು; ರಾಜನ ಕೋಪ, ಯಜ್ಞೇಶ್ವರನಿಂದ ಅದನ್ನು ಹಿಂದಕ್ಕೆ ಪಡೆದು ತೋರಿಸುವುದು; ರಾಜನ ಮೆಚ್ಚುಗೆ ಗಳಿಸುವುದು.

0.0.3 ಪ್ರಾಣಾಯಾಮ ಬಲದಿಂದ ಆಕಾಶದಲ್ಲಿ ತೇಲುವುದು.

0.0.4 ರಾಗಿಯ ಹಗೇವಿನಲ್ಲಿ ಕೂರಿಸಿ ಮಣ್ಣು ತುಂಬುವುದು; ನಾಲ್ಕುದಿನ ಕಳೆದನಂತರವೂ ಆಹಿತಾಗ್ನಿಯು ಕಳೆಗುಂದದೆ ಹೊರ ಬರುವುದು.

0.0.5 ನಿತ್ಯವೂ ಮನೋವೇಗದಲ್ಲಿ ಕಾಶಿಗೆ ಹೋಗಿ ಬರುವುದು.

0.0.6 ತಮ್ಮ ಸುತ್ತ ಮಾತ್ರ ಮಳೆ ಇಲ್ಲದಂತೆ ಮಾಡಿ ನಡೆದುಹೋಗುವುದು.

0.0.7 ಮನೆದೇವರ ಪ್ರಸಾದ ಹತ್ತಾರುಮೈಲು ದೂರದಿಂದ ಬಂದಹೊರತು ನೀರೂಕುಡಿಯದ ನಿಷ್ಠೆಯಿಂದಿರುವುದು, ದೇವರು ಒಲಿಯುವುದು.

0.0.8 ಗದ್ದೆಯ ಸುತ್ತ ಅಭಿಮಂತ್ರಿಸಿ ನೀರುಬಿಟ್ಟು ತೋಡದ ಕಾಟ ತಪ್ಪಿಸುವುದು ಇತ್ಯಾದಿ.

ಹೀಗೆ, ಅನೇಕ ರಂಜಿತ ವಿವರಗಳು ಈ ಸಂಬಂಧದ ಐತಿಹ್ಯಗಳಲ್ಲಿ ಸೇರಿವೆ. ಕರ್ನಾಟಕ ಮತ್ತು ದಕ್ಷಿಣದ ಸಮಾನ ಪರಂಪರೆಗಳು ಐತಿಹ್ಯಗಳಿಗೆ ಸಂಬಂಧಿಸಿದಂತೆಯೂ ಇವೆ.

ಸಮುದಾಯವು ಇಂಥವನ್ನು ಮಂತ್ರಶಕ್ತಿಯ ನಿದರ್ಶನಕ್ಕಾಗಿ ನೀಡಿದರೂ ಮೆಚ್ಚುವುದು ಅವುಗಳ ಫಲಿತಗಳನ್ನು. ಯಾಗಮಾಡಿದ ದೀಕ್ಷಿತರು ಕೊನೆಯಲ್ಲಿ ಉಳಿದ (ಅಲ್ಪ) ಹಣವನ್ನೂ ಸಾರ್ವಜನಿಕರಿಗೆ ವಿತರಿಸಲು ಪಟ್ಟಶ್ರಮ, ಕಂದಾಯ ಕಟ್ಟಲು ಹಣವಿಲ್ಲದೆ ಜಮೀನನ್ನು ಸರ್ಕಾರಕ್ಕೆ ಹಿಂದಿರುಗಿಸಲು ಪರ್ಜನ್ಯ ಜಪ ಮಾಡಿದುದು; ಪರಾನ್ನಭೋಜನ ಮಾಡದವರೊಬ್ಬರು ತಾವು ಅಡುಗೆ ಮಾಡಿಕೊಳ್ಳುತ್ತಿದ್ದ ಮಡಿಕೆ ಒಡೆದಾಗ ಜೀವನದ ನಶ್ವರತೆಯನ್ನು ಅನುಭಾವಿಸಿ ಪ್ರಾಯೋಪವೇಶ ಮಾಡಿದುದು - ಮೊದಲಾದವು, ಇವರ ಧೋರಣೆಗೂ ಸಾಕ್ಷಿಗಳಾಗಿವೆ.

ಸಮುದಾಯವು ಮೆಚ್ಚಿಕೊಳ್ಳುವ ಅತಿಪ್ರಚಲಿತ ಸಂಗತಿಯೊಂದು ಮಾನವೀಯಮೌಲ್ಯಕ್ಕೆ ಸಂಬಂಧಿಸಿದುದು. ಬಸವಪಟ್ಟಣದ ದೀಕ್ಷಿತರೊಬ್ಬರು ನಿಮಂತ್ರಣಕ್ಕಾಗಿ ಪಕ್ಕದಹಳ್ಳಿಗೆ ಹೋಗುತ್ತಿದ್ದರು - ದಾರಿಯಲ್ಲಿ ಬೋರೆಯ ಮೇಲೆ ಬಿಸಿಲಿನಲ್ಲಿಬಿದ್ದಿದ್ದ ಒಂದು ಶರೀರವು ಬಾಯಿಗೆ ನೀರುಬಿಡಲು ಸನ್ನೆಮಾಡಿತು. ಆ ತುಂಬುಗರ್ಭಿಣಿಗೆ ಪ್ರಸವಕ್ಕೆ ನೆರವು ನೀಡಿದರು; ಉಪಚಾರ ಮಾಡಿದರು. ಆಕೆಯನ್ನು ಹರಿಜನಕೇರಿಯ ಅವಳ ಮನೆಗೆ ಸುರಕ್ಷಿತವಾಗಿ ತಲುಪಿಸಿದರು. - ಇದು ಘಟನೆ. ಹತ್ತೊಂಬತ್ತನೆಯ ಶತಮಾನದ ಸಂಪ್ರದಾಯಜಡ ಸಮಾಜವೊಂದರ ಸಂದರ್ಭದಲ್ಲಿ ಇದರ ಮಹತಿ ಇದೆ. ಮುಂದೊಂದು ದಿನ ಗರ್ಭಿಣಿಯೊಬ್ಬಳಮೇಲೆ ಪಿಶಾಚಿಯೊಂದು ಬಂದಿರುತ್ತದೆ - ತಾನು ಬಿಟ್ಟುಹೋಗಬೇಕಾದರೆ ದೀಕ್ಷಿತರು ಆ ಗರ್ಭಿಣಿಯ ಬಾಯಿಗೆ ನೀರುಬಿಟ್ಟ ಫಲ ಅಥವಾ ಮೂವತ್ತೆರಡು ವರ್ಷಗಳಿಂದ ಅವರು ಮಾಡಿದ್ದ ರಾಮಾಯಣ ಪಾರಾಯಣದ ಫಲಕ್ಕಾಗಿ ಬೇಡುತ್ತದೆ - ದೀಕ್ಷಿತರು ರಾಮಾಯಣ ಪಾರಾಯಣದ ಫಲವನ್ನೇ ಧಾರೆಎರೆದು ಆ ಪಿಶಾಚಿಯನ್ನು ಬಿಡಿಸುತ್ತಾರೆ - ಇದು ಮುಂದಿನ ಭಾಗ. ಸಮುದಾಯದ ಆ ಶ್ರೇಷ್ಠ ವೈದಿಕರು ರಾಮಾಯಣ ಪಾರಾಯಣಕ್ಕಿಂತಲೂ ದೀನದಲಿತರ ಸೇವೆಗೆ ಆದ್ಯತೆ ಕೊಟ್ಟುದು ಗಮನಾರ್ಹವಾದುದು. 'ಜಪದಯ್ಯನೋರು' ಎಂದೇ ಹೆಸರಾದವರು ಅವರು; ಆದರೆ ವಾಸ್ತವ ವೇದಾಂತವನ್ನು ಮರೆತಿರಲಿಲ್ಲ. ಸಮುದಾಯದಲ್ಲಿ ಸರ್ವಶಿಷ್ಟರನ್ನು ಬಿಟ್ಟರೆ, ಹೆಚ್ಚು ಗೌರವಿಸಲ್ಪಡುವ ವ್ಯಕ್ತಿ ಅವರೇ.

0.4 ಅಧ್ಯಯನ, ಅನುಷ್ಠಾನ ಮತ್ತು ವ್ಯವಸಾಯ ಮಾತ್ರ ತಮ್ಮ ಪ್ರಧಾನ ಆಸಕ್ತಿಯಾಗಿರುವ ಸಂಕೇತಿಗಳು ಕ್ಷಾತ್ರವನ್ನು ಮರೆದ

ಪ್ರಸಂಗಗಳೂ ಹಲವಿವೆ. ದೂರದ ತಿರುನೆಲ್‌ವೇಲಿಯಿಂದ ವಲಸೆ ಬಂದ ಈ ಸಮುದಾಯವು ಮೈಸೂರಿನ ಇತಿಹಾಸದ ಒಂದು ಬಹುಮುಖ್ಯ ತಿರುವಿನಲ್ಲಿ ನಿರ್ವಹಿಸಿದ ಪಾತ್ರವು ಗಮನಾರ್ಹವಾದುದು. ಆದುದರಿಂದ ಪ್ರಾತಿನಿಧಿಕವಾಗಿ, ದಿವಾನರೂ ಸೇನಾನಿಗಳೂ ಆಗಿ ದುಡಿದ ವಂಶವೊಂದರ ಚರಿತ್ರೆಯ ಸಂಕ್ಷಿಪ್ತ ಅವಲೋಕನ ಮಾಡಬಹುದು:

ಮೂಲಪುರುಷ

ಹಿರಿಯಮಗ	ಸುಬ್ರಹ್ಮಣ್ಯ	ಕಿರಿಯಮಗ
ಕೇಶವ ಪಿರಿಯಪಟ್ಟಣದ ನಂಜುಂಡರಸನ ದಿವಾನ, ಸೇನಾನಿ	ಹೊಸಹೊಳಲಿನ ಅರಸನ ದಿವಾನ, ಸೇನಾನಿ	ಶ್ರೀನಿವಾಸ ತಿಪ್ಪೂರಿನ ಪಾಳೆಯಗಾರನ ದಿವಾನ, ಸೇನಾನಿ



141 ಬಕ್ಷಿ ತಿಪ್ಪಯ್ಯ: ಕೆಳಗೆ ಕುಳಿತವರು

ಮೂರು ಸಂಸ್ಥಾನಗಳೂ ಹೈದರನ ರಾಜ್ಯವಿಸ್ತರಣೆಗೆ ಬಲಿಯಾದುವೇ. ಮೂವರು ಸೋದರರೂ ಹೈದರನೊಡನೆ ಕಾದುತ್ತಾ ಮಡಿದರು. ತಿಪ್ಪೂರಿನ ದಿವಾನನ ಮಗ 'ಕೇಶವ' ಎಂಬ ಹದಿನೈದು ವರ್ಷದ ಬಾಲಕನು ಪ್ರಾಣದ ಹಂಗುತೊರೆದು ರಾಣಿವಾಸದ ರಕ್ಷಣೆಗೆ ನಿಂತು ಕಾದುತ್ತಿದ್ದ ರೀತಿಗೆ ಹೈದರನು ಆಕರ್ಷಿತನಾದ. ರಾಣಿವಾಸದ ಕ್ಷೇಮಕ್ಕೆ ವಾಗ್ದಾನ ಮಾಡಿದ. ಕೇಶವನನ್ನು ತನ್ನೊಡನೆ ಒಯ್ದು ತರಪೇತಿ ಕೊಟ್ಟ. ಅವನ ಮಗನೇ ಬಕ್ಷಿ ತಿಪ್ಪಯ್ಯ (ಚಿತ್ರ 141) ಆತನ ಬಗೆಗೆ ಇರುವ ಐತಿಹ್ಯಗಳು:

0.0.1 ಟಿಪ್ಪುವು ಮೈಸೂರು ಅರಸರ ಕುಟುಂಬವನ್ನು ಬಂಧನದಲ್ಲಿರಿಸಿದ್ದಾಗ ತಿಪ್ಪಯ್ಯನವರು ತೆಂಗಿನ ಬುರುಡೆಯಲ್ಲಿ ತುಪ್ಪವನ್ನು ತುಂಬಿ ಬಂದೀಖಾನೆಗೆ ಗುಟ್ಟಾಗಿ ಸಾಗಿಸುತ್ತಿದ್ದರು.

0.0.2 ಪಿತೂರಿಯ ಆರೋಪದಮೇಲೆ ಟಿಪ್ಪು ಅವರಿಗೆ ಗಲ್ಲುಶಿಕ್ಷೆ ವಿಧಿಸಿದ. ಆದರೆ ಸಮರ್ಥ ಅಧಿಕಾರಿಯನ್ನು ಕಳೆದುಕೊಳ್ಳಬಾರದೆಂಬ ಹಿತವಾದದ ಮೇಲೆ ಬಿಡುಗಡೆಗೊಳಿಸಿದ.

0.0.3 ಮಗು ಮುಮ್ಮಡಿಯೂ ಸಂಚಿಗೆ ಬಲಿಯಾಗುವುದರಲ್ಲಿದ್ದಾಗ, ತಮ್ಮ ಬೈರಾಸದಲ್ಲಿ ಅವರನ್ನು ಮುಚ್ಚಿಕೊಂಡು ಹೋಗಿ, ತಮ್ಮ ನೆಲಮಾಳಿಗೆಯಲ್ಲಿಟ್ಟು ಗುಟ್ಟಾಗಿ ಸಾಕಿದರು.

0.0.4 ಕ್ರುದ್ಧನಾದ ಟಿಪ್ಪು ಅಟ್ಟಿಬಂದ. ಬಕ್ಷಿ, ಮಗುವಿನೊಡನೆ ಪರಾರಿಯಾದರು. ಕಟ್ಟೆಪುರದ ಬಳಿ ಅವರ ಕುದುರೆ ಸತ್ತುಬಿತ್ತು. ಪೊದೆಯೊಂದರ ಹಿಂದೆ ಮಗುವಿನೊಂದಿಗೆ ಅವಿತರು. (ಟಿಪ್ಪು ಮುಂದೆಹೋದ, ಕುಶಾಲನಗರದ ಬಳಿ ಅವನಿಗೆ ಪುತ್ರೋತ್ಸವದ ಸುದ್ದಿಬಂತು. ಅದಕ್ಕೆ 'ಕುಶಾಲ್‌ನಗರ' ಎಂದು ಹೆಸರಿಸಿದ) ಬಕ್ಷಿಯವರು ಆಗ ಹೊತ್ತ ಹರಕೆಯಂತೆ ಕಟ್ಟೆಪುರದಲ್ಲಿ ಈಶ್ವರ ದೇವಾಲಯವನ್ನು ನಿರ್ಮಿಸಿದರು.

0.0.5 ಬ್ರಿಟಿಷರ ಮುಂದೆ ಬಕ್ಷಿಯವರು ಮೊದಲು ತಂದದ್ದು ನಕಲಿ ರಾಜಕುಮಾರನನ್ನು. ಅಭಯವು ಖಾತರಿಯಾದನಂತರವೇ ಮುಮ್ಮಡಿಯವರನ್ನು ತೋರಿಸಿದುದು. ಮುಮ್ಮಡಿಯವರಿಗೆ ದೈಹಿಕ ಮತ್ತು ಬೌದ್ಧಿಕ ಶಿಕ್ಷಣಕೊಟ್ಟು ಬೆಳೆಸುವ ಜವಾಬ್ದಾರಿ ಅವರ ಮೇಲಿತ್ತು.

ಅರಮನೆಯಲ್ಲಿನ ದಾಖಲೆಗಳು ಈ ವಂಶದ ಸೇವೆಯ ವಿವರವಾದ ಚಿತ್ರ ನೀಡುತ್ತವೆ. ಈ ವಂಶದವರ ಸಮಾಧಿಗಳು ಮೈಸೂರು ಮೃಗಾಲಯದ ಆವರಣದಲ್ಲಿ ಸೇರಿಹೋಗಿವೆ. ಈ ಅಧಿಕಾರಿಗಳೂ ತಮ್ಮ ಕೊನೆಗಾಲದಲ್ಲಿ ಸಂನ್ಯಾಸವನ್ನು ಸ್ವೀಕರಿಸಿದ್ದವರು.

ಏರ್‌ವಾಡಿಯಲ್ಲಿ ಮುಸ್ಲಿಂ ಆಕ್ರಮಣಕಾರರಿಂದ ಸರಸ್ವತಿಯ ವಿಗ್ರಹವನ್ನು ರಕ್ಷಿಸಿ ತಿರುವನಂತಪುರದ ರಾಜನಿಗೆ ಒಪ್ಪಿಸಿದ್ದು, ಹೊಳೇನರಸೀಪುರದ ನರಸಿಂಹನಾಯಕನ ದಿವಾನರೂ ಸೇನಾನಿಗಳೂ ಆಗಿದ್ದ ಸೋದರರು ಪಿರಿಯಪಟ್ಟಣದ ಪಾಳೆಯಗಾರನನ್ನು ಹಿಡಿದುತಂದದ್ದು, ಸಾಲಗಾಮೆಯ ವೈದಿಕರೊಬ್ಬರು ತಮ್ಮ ಏಕಮಾತ್ರಪುತ್ರನೊಬ್ಬನ ಕೊಲೆಯಾದಾಗ ಬ್ರಾಹ್ಮಣ್ಯವನ್ನು ತ್ಯಜಿಸಿ ಸುತ್ತಣ ಪಾಳೆಯಗಾರರನ್ನು ಸದೆಬಡಿದು ಕೊನೆಗೆ ಕಾಳಗದಲ್ಲಿಯೇ ಅಸುನೀಗಿದ್ದುದು - ಇಂಥ ಅನೇಕ ಪ್ರಕರಣಗಳು ಇಲ್ಲಿವೆ. ತಿರುವಾಂಕೂರು ಸಂಸ್ಥಾನದ ನಿರ್ಮಾಣಕ್ಕೆ ಕಾರಣರಾದ ಮೂವರಲ್ಲಿ ಒಬ್ಬನು ದಳವಾಯಿ ರಾಮೈಯ್ಯನೆಂಬ ಸಂಕೇತಿ ಎಂಬುದೂ ಗಮನಾರ್ಹವಾದುದು (ಚಿತ್ರ 20 ಪು.60).

0.5 ಅವರ 'ಸಾಹಸ ಪ್ರಸಂಗ'ಗಳು 'ಕತೆ'ಗಳಾಗಿ ಬೆಳೆದಿವೆ.[8] ಶ್ರಮಜೀವಿಗಳಾದ ಅವರ ಭೋಜನಶಕ್ತಿಯು ಸಮಕಾಲದಲ್ಲಿಯೇ ದಂತಕತೆಗಳಂತೆ ಹಬ್ಬಿವೆ. ಸನ್ನಿವೇಶದ ಅನಿವಾರ್ಯತೆಯನ್ನೆದುರಿಸಲು ಸಮಾಜವು ಹೀನವಾಗಿ ಕಾಣುವ ಮಾಂತ್ರಿಕವಿದ್ಯೆಗಳ ಬೆನ್ನುಹತ್ತಿ ಮೇಲುಗೈ ಸಾಧಿಸಿದ ಅಪರೂಪದ ನಿದರ್ಶನಗಳೂ ಇಲ್ಲಿವೆ.[9] ಹೊಸನಾಡಿಗೆ ಬಂದ ಕರ್ನಾಟಕದ ಸಂಕೇತಿಗಳು ಒಳಗಾದ ಶೋಷಣೆಗಳು, ಅವರ ತಾಳ್ಮೆ, ಕೊನೆಗೆ ಅವರ ಸಿಟ್ಟಿನ ಆಸ್ಫೋಟ - ಅನೇಕ ಪ್ರಸಂಗಗಳಲ್ಲಿ ವ್ಯಕ್ತವಾಗಿ (ಗೊದಮಟ್ಟೆಯನ್ನೇ ಆಯುಧವಾಗಿ ಬಳಸಿದ ಅವರಿಗೆ) 'ಗೊದಮಟ್ಟೆ ಸಂಕೇತಿ' ಎಂಬ ವಿಶೇಷಣಯುಕ್ತ ಸಂಜ್ಞೆಯನ್ನು ಬಳಕೆಗೆ ತಂದಿವೆ. ವಿದ್ಯೆ, ಅಧಿಕಾರಗಳಲ್ಲಿ ವಿಶೇಷ ಬುದ್ಧಿಮತ್ತೆ ಪ್ರಕಟವಾದ ನಿದರ್ಶನಗಳೂ ವಂಶಚರಿತ್ರೆಗಳ ಭಾಗವಾಗಿವೆ.

ಇವುಗಳಿಂದ ವ್ಯಕ್ತವಾಗುವ ಕೆಲವು ಮುಖ್ಯ ಸಂಗತಿಗಳು: ವೇದವಿಹಿತ ಕರ್ಮಾನುಷ್ಠಾನಗಳಲ್ಲಿ ನಿರತರಾಗಿ ಲೌಕಿಕದಿಂದ ಅಲಿಪ್ತರಾಗಿದ್ದುದರಿಂದ ವಿವಿಧರೀತಿಯ ಶೋಷಣೆಗೆ ಒಳಗಾದುದು; ಆದರೆ, ಜೀವನ್ಮರಣದ ಪ್ರಶ್ನೆಬಂದಾಗ ಕ್ಷಾತ್ರವನ್ನು ಮೆರೆದುದು. ಸಾಹಸ, ಅವರ ಜೀವನದ ಭಾಗ. 'ಒಡ್ಡು ಸಂಕೇತಿ' ಎಂಬ ವಿಶೇಷಣ ಬಂದುದೂ ಕಠಿಣ ದುಡಿಮೆಗೆ ಒಗ್ಗಿಸಿದ ಬಲಿಷ್ಠದೇಹ, ಕೃಷಿಕರಿಗೆ ಸಹಜವಾದ ಒರಟುತನಗಳಿಂದ. ಶ್ರಮಸಹಿಷ್ಣುತೆ, ಧಾರ್ಮಿಕತೆ, ಮಾನವೀಯತೆ, ಪರೋಪಕಾರ, ನಿಷ್ಠೆ, ಛಲ, ವಿದ್ಯಾಪರಿಣತಿ, ಪಾರಮಾರ್ಥಿಕ ಮನೋಭಾವ, ಆಧ್ಯಾತ್ಮಿಕ ವರ್ಚಸ್ಸು, ಭೋಜನಕ್ಷಮತೆ, ದಾನಗುಣ, ನಿಶಿತಮತಿ, ಬಡತನದ ಮಿತಿ, ಜೀವನೋತ್ಸಾಹ, ಅಲೆಮಾರಿ ಪ್ರವೃತ್ತಿ, ವಿಕಾಸಶೀಲತೆ, ಆತ್ಮಪ್ರತ್ಯಯ, ನಿಷ್ಠುರತೆ, ಅನುಷ್ಠಾನಪರತೆ, ಕೃಷಿಯಲ್ಲಿ ಪ್ರೇಮಪೂರ್ಣ ನಂಟು - ಮೊದಲಾದ ಅವರ ಗಾಢ ಪ್ರವೃತ್ತಿಗಳು ಅವರ ಐತಿಹ್ಯಗಳಲ್ಲಿ ವ್ಯಾಪಕವಾಗಿ ಪ್ರಕಟವಾಗುತ್ತವೆ.

ಇ. ಪುರಾಣ :

ರಾಲ್ಫ್ ಸ್ಟೀಲ್ ಬಾಗ್ಸ್ ಅವರ ಶಾಸ್ತ್ರೀಯ ವಿಭಜನ ಕ್ರಮದಲ್ಲಿ ಜನಪದ ಗದ್ಯಕಥನಗಳು (prose narratives) ಒಂದು ಮುಖ್ಯ ವರ್ಗವಾಗಿ ಬರುತ್ತವೆ. ಅದರ ಉಪವಿಭಾಗಗಳಾಗಿ ಕಟ್ಟುಕತೆಗಳು (marshen) ಪುರಾಣ, (myth) ಮತ್ತು ಐತಿಹ್ಯ (legend)ಗಳಿವೆ. ಇಲ್ಲಿ, ಸಂಕೇತಿಗಳಲ್ಲಿ 'ಪುರಾಣ'ವಾಗಿ ಬೆಳೆದಿರುವ ಒಂದು ಚಾರಿತ್ರಿಕ ಸಂಗತಿಯನ್ನು ಅವಲೋಕಿಸಿದೆ.

ಸಂಕೇತಿ ಸಮುದಾಯದಲ್ಲಿ ಬಹುಪ್ರಚಲಿತವಾದ ಸಂಗತಿಯೊಂದು ಅವರ ಐತಿಹಾಸಿಕ ನಾಯಕಿಯಾದ ನಾಚಾರಮ್ಮನನ್ನು ಕುರಿತದ್ದಾಗಿದೆ. ಇದು ಉಳಿದೆಲ್ಲ ಐತಿಹ್ಯಗಳಿಗಿಂತ ಪ್ರತ್ಯೇಕವಾದ ಗಣನೆಗೆ ಅರ್ಹವಾಗಿದೆ. ಉಳಿದವು ಚರಿತ್ರಾಂಶವನ್ನು ಹೊಂದಿದ್ದು ಐತಿಹ್ಯವಾಗುವಲ್ಲಿನ ವಿವಿಧ ಸ್ತರಗಳನ್ನು ಪ್ರತಿನಿಧಿಸಿದರೆ, ನಾಚಾರಮ್ಮನ ಚರಿತ್ರೆಯು ಐತಿಹ್ಯವಾಗಿ ಬೆಳೆದು ಈಗ 'ಪುರಾಣ'ವಾಗಿ ಪರಿವರ್ತಿತವಾಗಿದೆ.

ನಾಚಾರಮ್ಮನ ಚಾರಿತ್ರಿಕ ಅಸ್ತಿತ್ವವನ್ನು ಸಿದ್ಧಪಡಿಸುವ ಸಾಂಸ್ಕೃತಿಕ ಆಧಾರಗಳಿವೆ. ಭೌತಿಕ ಸಂಗತಿಗಳು ಬೇಗ ಬದಲಾಗುವಂತೆ ಸಾಂಸ್ಕೃತಿಕ ಸಂಗತಿಗಳು ಬದಲಾಗುವುದಿಲ್ಲ. ಕೊನೆಯಪಕ್ಷ, ವಿಜ್ಞಾನಪೂರ್ವಯುಗದಲ್ಲಿ ಅಂಥ ಸಾಧ್ಯತೆಯು ಕಡಮೆ ಇತ್ತು.

---

8 'ಕೈಲಾಸ', ಭಲ್ಲೂಕಪುರದ ಅಪ್ಪಾಜಿಭಟ್ಟ, ಮತಿಘಟ್ಟ ಕೃಷ್ಣಮೂರ್ತಿ, ಅಕ್ಟೋಬರ್ ೧೯೬೩

9 ಸಾಮಾನ್ಯವಾಗಿ ಈ ಸಮುದಾಯದವರು ವಾಮಾಚಾರವನ್ನು ಉಚ್ಚರಿಸಲೂ ಹೇಸುವುದೇ ಪರಂಪರೆ.

1. ನಾಚಾರಮ್ಮನು ಸಹಸ್ರಾರು ಕುಟುಂಬಗಳ ಗೌರವಾನ್ವಿತ ವ್ಯಕ್ತಿಯಾಗಿದ್ದಳೆಂಬ ಮೂಲಸತ್ಯವು ವಿಭಿನ್ನ ಪಾಠಗಳಲ್ಲಿ ವಿಸ್ತಾರಗೊಂಡು ಬೆಳೆದು ಐತಿಹ್ಯದ ಲಕ್ಷಣಗಳನ್ನು ಪಡೆದುದನ್ನು ಮುಂದಿನ ಹಂತದಲ್ಲಿ ಗುರುತಿಸಬಹುದು.

0.1 ಆಳ್ವಾರ್‌ಕುರುಚಿಯಲ್ಲಿ ಉಳಿದ ನಲವತ್ತು ಕುಟುಂಬಗಳು ತಾವೇ ನಾಚಾರಮ್ಮನನ್ನು ಅಪಮಾನಪಡಿಸಿದುದಕ್ಕಾಗಿ ಅತೀವ ಪಶ್ಚಾತ್ತಾಪ ಪಟ್ಟುದು; ಆಕೆಯು ದೈವಾಂಶಸಂಭೂತಳೆಂದು ಭಾವಿಸಿದುದು; ಈಗಲೂ ವರ್ಷಕ್ಕೊಮ್ಮೆ ಅದಕ್ಕಾಗಿ 'ಪೂವಾಡಿಪಾನೆ' (ವಸ್ತ್ರಪೂಜೆ) ಎಂಬ ವ್ರತವನ್ನು ಮಾಡುತ್ತಿರುವುದು.

0.2 ದಕ್ಷಿಣದೇಶದಲ್ಲಿ ಜನರು ತಮ್ಮ ಕಷ್ಟಗಳಿಗೆಲ್ಲಾ 'ನಾಚಾರುಶಾಪ'ವೇ ಕಾರಣ ಎಂದೇ ನಂಬಿಕೆ ಹಿಡಿದುದು. ಅದರಿಂದ ಹತ್ತೊಂಬತ್ತನೆಯ ಶತಮಾನದ ಕೊನೆಯಭಾಗದಲ್ಲಿ ಮಂತ್ರವಾದಿಯಿಂದ ಪರಿಹಾರೋಪಾಯಗಳನ್ನು ಪಡೆದುದು. ಆತನ ನಿರ್ದೇಶನ:

- 0.0.1 ರಾಮೇಶ್ವರದಲ್ಲಿ ವೇದ ಪಾರಾಯಣ ಮತ್ತು ಜಪ ಮಾಡಿಸುವುದು.
- 0.0.2 ನಾಚಾರಮ್ಮನ ಸುವರ್ಣಪ್ರತಿಮೆಯನ್ನು ಮಾಡಿಸಿ ಪೂಜೆಮಾಡಿ ಶ್ರೋತ್ರಿಯ ಬ್ರಾಹ್ಮಣನಿಗೆ ದಾನಮಾಡುವುದು.
- 0.0.3 ವಾಗ್ದೇವತೆಯಾದ ಸರಸ್ವತಿಯ ದೇವಾಲಯವನ್ನು ತಿರುನೆಲ್‌ವೇಲಿಯಲ್ಲಿ ಕಟ್ಟಿಸಿ ಮೂರ್ತಿಪ್ರತಿಷ್ಠೆ ಮಾಡಿಸುವುದು. - ಅದರಂತೆ ನಡೆದುದು.

0.3 ಕೇಶವಯ್ಯನವರು ಆಕೆಯನ್ನು ಸರಸ್ವತಿಯ ಅವತಾರವಾಗಿಯೇ ಕಂಡರು. ಅವರೂ ಕೆಲವು ಸೂಚನೆಗಳನ್ನು ಕೊಟ್ಟರು:

- 0.0.1 ಮನೆಯಲ್ಲಿ ಮೊದಲು ಹುಟ್ಟಿದ ಹೆಣ್ಣುಶಿಶುವಿಗೆ ಆಕೆಯ ಹೆಸರಿಡುವುದು.
- 0.0.2 ಪ್ರತಿಯೊಂದು ಸಂಸಾರದವರೂ ಆಕೆಯ ಜ್ಞಾಪಕಾರ್ಥವಾಗಿ ವರ್ಷಕ್ಕೊಂದಾವರ್ತಿ ಸುವಾಸಿನೀ ಪೂಜೆ ಮಾಡುವುದು.
- 0.0.3 ವಾಗ್ದೇವತೆಯಾದ ಸರಸ್ವತಿಯ ಅನುಗ್ರಹದಿಂದಲೇ ನಾಚಾರಮ್ಮನು ವಿದ್ಯಾಪ್ರೌಢಿಮೆಯನ್ನು ತೋರಿದಳು. ಆದುದರಿಂದ ಸರಸ್ವತಿಯನ್ನು ಕುಲದೈವವೆಂದು ತಿಳಿದು ದೇವಾಲಯವನ್ನು ಕಟ್ಟಿಸುವುದು.[10]

0.4 ಅದರ ಪ್ರೇರಣೆಪಡೆದೇ ಸಂಸ್ಕೃತ ಕಾವ್ಯವೊಂದು ಇತ್ತೀಚೆಗೆ ಹುಟ್ಟಿಕೊಂಡಿದೆ.[11] ಅದು ಪೂರ್ಣವಾಗಿ, 'ಸರಸ್ವತಿಯ ಅವತಾರವಾದ' ನಾಚಾರಮ್ಮನ ಸ್ತುತಿಯೇ ಆಗಿದೆ.

ನಾಚಾರಮ್ಮನ ಚರಿತ್ರೆಯು ಐತಿಹ್ಯವಾಗಿ ಮುಂದುವರಿದು ಪುರಾಣಗೊಳ್ಳುವ ಒಂದು ಚಕ್ರ ಅಲ್ಲಿಗೆ ಪೂರ್ಣವಾಗಿದೆ.

ಈ ನಿಬಂಧದಲ್ಲಿಯೂ ವ್ಯಾಪಕವಾಗಿ ಉಲ್ಲೇಖಗೊಂಡ ನಾಚಾರಮ್ಮನ ಪ್ರಸಂಗವು ಸಂಕೇತಿ ಸಮುದಾಯದ ಸಮಗ್ರ ಬದುಕಿನಲ್ಲಿ ಬಹುಮುಖ್ಯವಾದುದು. ಅದು ಸಂಕೇತಿಗಳ ಧೋರಣೆಯನ್ನು ತನ್ನಷ್ಟಕ್ಕೇ ಪ್ರತೀಕಿಸುವಂಥದೂ ಹೌದು. ಪುರುಷಪ್ರಾಧಾನ್ಯ, ಮತ್ತು ವಿದ್ಯಾಪ್ರೌಢಿಮೆಗೆ ತಕ್ಕ ವಿನಯ ಇರದ ಸ್ಥಿತಿಯಿಂದ ಸ್ತ್ರೀನಾಯಕತ್ವ, ಮತ್ತು ಮಹಿಮಾಶಕ್ತಿಗೆ ಪೂರ್ಣ ಶರಣಾಗತಿ - ಇಂಥ ಸ್ಥಿತ್ಯಂತರ ಇಲ್ಲಿನ ವಸ್ತು. ಸ್ವತಃ ನಾಚಾರಮ್ಮನ ಪ್ರಸಂಗದಿಂದಲೇ ವ್ಯಕ್ತವಾಗುವ ಬಡತನದ ಬವಣೆಯಿಂದ ಪಾರಾಗಲು ನಡೆದ ಹೋರಾಟ, ಕುಚೇಷ್ಟೆ, ಅಸಹನೆ, ಛಲ, ಮಾನವ ವ್ಯಕ್ತಿಯಲ್ಲಿನ ಮಹತಿಯನ್ನು ದೈವತ್ವಕ್ಕೇರಿಸಿಯೇ ಒಪ್ಪುವುದು - ಇಂಥ ಮನೋಲಕ್ಷಣಗಳು ಇಂದಿಗೂ ಈ ಸಮುದಾಯದಲ್ಲಿ ವ್ಯಕ್ತವಾಗುವಂಥವೇ. ಇಂಥ ಅತಿರೇಕಗಳ ಮೂಲದಲ್ಲಿರುವ ತೀವ್ರ ಭಾವುಕತೆಯನ್ನೂ ಇಲ್ಲಿ ಗುರುತಿಸಬಹುದು.

ಈ. ಗಾದೆಗಳು

ಗಾದೆಗಳ ಸಂಕಲನ ಮತ್ತು ಅಧ್ಯಯನ ಕನ್ನಡದಲ್ಲಿ ವಿಪುಲವಾಗಿ ನಡೆದಿದೆ. ಗಾದೆಗಳ ಉಗಮ, ರಚನೆ, ಲಕ್ಷಣ, ಕಾರ್ಯ,

---

10 *ಶ್ರೀ ನಾಚಾರಮ್ಮನ ಜೀವನಚರಿತ್ರೆ* (ಆಕೆಯ ಪ್ರವಾಸ), ಪು.೪೭, ೪೮.

11 *ಶ್ರೀನಾಚಾರಾಂಬ ವಿಜಯ,* ಎಚ್.ವಿ.ನಾರಾಯಣಶಾಸ್ತ್ರೀ, ರಾಜಾಜಿನಗರ, ಬೆಂಗಳೂರು; ೧೯೮೭

ಮಹತ್ತ್ವವನ್ನು ಕುರಿತಂತೆ ಹೇಗೋ, ಅದರ ಸಾಂಸ್ಕೃತಿಕ ಅಭಿವ್ಯಕ್ತಿಯನ್ನು ಕುರಿತಂತೆಯೂ ಹಾಗೆಯೇ ವಿವೇಚನೆ ನಡೆದಿದೆ. ಒಂದು ಸಮುದಾಯದ ಜಾಣ್ಮೆ, ಜೀವನಾನುಭವ, ಅಭಿವ್ಯಕ್ತಿಯ ನವುರು ಗಾದೆಗಳಲ್ಲಿ ಹೆಚ್ಚು ಸ್ಪಷ್ಟವಾಗಿ ಗೋಚರಿಸುತ್ತದೆಂಬುದು ಮುಖ್ಯವಾದ ಮಾತು.

ಯಾವುದೇ ಸಮುದಾಯ ಇಲ್ಲವೇ ಪ್ರದೇಶಕ್ಕೆ ಮಾತ್ರ ಸೀಮಿತವಾದ ಅಥವಾ ಸಂಬಂಧಿಸಿದ ಗಾದೆಗಳನ್ನೋ ಒಗಟುಗಳನ್ನೋ ಗುರುತಿಸುವುದಕ್ಕೆ ಅದರ ದೇಶಾತೀತ, ಭಾಷಾತೀತ ಗುಣಗಳು ಅಡ್ಡಿ ಬರುತ್ತವೆ. ಹಾಗೆಯೇ, ಪ್ರತಿಸಮುದಾಯದ ಸಾಂಸ್ಕೃತಿಕ ಛಾಪನ್ನೂ ಗಾದೆಗಳು ಧಾರಣ ಮಾಡಿರುತ್ತವೆ.

1. **ಹಿನ್ನೆಲೆ :** ಸಂಕೇತಿ ಸಾಂಸ್ಕೃತಿಕ ಪ್ರಕಾಶನದವರ ಇನ್ನೂರು ಅರುವತ್ತೊಂದು ಗಾದೆಗಳ ಸಂಗ್ರಹದ[12] ಜೊತೆಗೆ ಪ್ರಕೃತ ಅಧ್ಯಯನಕ್ಕಾಗಿ ಸಂಕೇತಿಗಳ ವಿವಿಧ ಉಪವಿಭಾಗಗಳಿಂದ ಎಂಟುನೂರು ಗಾದೆಗಳನ್ನು ಸಂಗ್ರಹಿಸಿ ಬಳಸಿಕೊಂಡಿದೆ.

0.1 ಈ ಗಾದೆಗಳ ಬಹುಪಾಲು ಇತರೆಡೆ ಅಚ್ಚಾಗಿವೆ; ಇಲ್ಲವೆ ಸಾರ್ವತ್ರಿಕವಾಗಿ ಬಳಕೆಯಲ್ಲಿವೆ.

0.2 ಬ್ರಾಹ್ಮಣವಲಯದ ಸಾಮಾನ್ಯಛಾಪನ್ನು ಪಡೆದವೂ ಇವೆ.

0.3 ಸಂಕೇತಿಗಳನ್ನೇ ಕುರಿತ ಗಾದೆಗಳೂ ಇವೆ.

ಗಾದೆಗಳ ಕಾವ್ಯ ಮತ್ತು ಸಾಂಸ್ಕೃತಿಕ ಮುಖದ ವಿಸ್ತಾರವಾದ ಅಧ್ಯಯನಕ್ಕೆ ಆಕರವಾಗಬಹುದಾದ ವಿಪುಲತೆ ಮತ್ತು ವೈಶಿಷ್ಟ್ಯ ಇಲ್ಲಿದೆ. ಪ್ರಸ್ತುತ ಅವಲೋಕನದ ಸಂದರ್ಭದಲ್ಲಿ ಸಂಕೇತಿಗಳ ಸಂಸ್ಕೃತಿಯು, ಬಳಕೆಯ ಜೀವಂತಿಕೆಯಾಗಿ ಗಾದೆಗಳಲ್ಲಿ ಕಾಣಿಸಿಕೊಂಡ ರೀತಿಯ ಪ್ರಾತಿನಿಧಿಕ ಗಣನೆ ಮಾತ್ರ ಇದೆ. ರಾಚನಿಕ ವರ್ಗೀಕರಣ, ದಶಮಾಂಕ ಪದ್ಧತಿ, ವಸ್ತುನಿಷ್ಠ ವರ್ಗೀಕರಣ ಇತ್ಯಾದಿ ನಿರ್ದಿಷ್ಟ ವಿಧಾನವು - ಪ್ರಕೃತ ಉದ್ದೇಶದ ವ್ಯಾಪ್ತಿಗೆ ಹೊರತಾದುದು.[13]

2. **ಸಂಕೇತಿ ಗಾದೆಗಳ ಮುಖ್ಯ ಲಕ್ಷಣಗಳು :** ಸಂಕೇತಿಗಳು ಬಳಸುವ ಗಾದೆಗಳ ಕೆಲವು ಲಕ್ಷಣಗಳನ್ನು ಇಲ್ಲಿ ಕ್ರೋಡೀಕರಿಸಿದೆ:

0.1 ಸಂಕೇತಿಗಳಲ್ಲಿ, ಪ್ರಯೋಗದ ದೃಷ್ಟಿಯಿಂದ, ಅಕ್ಷರಸ್ಥರು ಮತ್ತು ಅನಕ್ಷರಸ್ಥರು ಅಥವಾ ಹಳ್ಳಿಯವರು ಮತ್ತು ನಗರದಲ್ಲಿರುವವರು ಬಳಸುವ ಗಾದೆಗಳಲ್ಲಿ ಭಾಷೆ, ವಸ್ತು ಅಥವಾ ಮತ್ತಾವ ದೃಷ್ಟಿಯಿಂದಲೂ ವ್ಯತ್ಯಾಸಗಳಿಲ್ಲ.

0.2 ತಮಿಳುನಾಡು ಹಾಗೂ ಕೇರಳದ ಸಂಕೇತಿಗಳು ಸಹಜವಾಗಿಯೇ ತಮ್ಮ ಗಾದೆಗಳನ್ನು ಮೂಲ ತಮಿಳಿನಲ್ಲಿಯೇ ಬಳಸುತ್ತಾರೆ. ಮಲೆಯಾಳಂ ಗಾದೆಗಳು ಕೇರಳದಲ್ಲಿ ಉದ್ಧರಣರೂಪದಲ್ಲಿ ಬಳಕೆಗೊಳ್ಳುವುದಕ್ಕೆ ಪ್ರಾದೇಶಿಕ ಪ್ರಭಾವವೇ ಕಾರಣ. ಹಾಗೆಯೇ, ಕರ್ನಾಟಕದಲ್ಲಿ ಬಳಕೆಗೊಳ್ಳುವ ಬಹುಪಾಲು ಗಾದೆಗಳು ಶುದ್ಧ ಕನ್ನಡ ರೂಪದಲ್ಲಿಯೇ ಇರುವುದಕ್ಕೆ ದೀರ್ಘಕಾಲದ ಕನ್ನಡೀಕರಣ ಪ್ರಕ್ರಿಯೆಯೇ ಕಾರಣವಾಗಿದೆ.

0.3 ಭಾಷಾ ಸಂಬಂಧದ ಕೆಲವು ಸಂಗತಿಗಳನ್ನು ನಿದರ್ಶನಗಳ ಆಧಾರದಿಂದ ಇಲ್ಲಿ ನೋಡಿದೆ:

0.0.1 ಗಾದೆಗಳು ಅತ್ಯಲ್ಪ ಪ್ರಮಾಣದಲ್ಲಿ ಪಳೆಯುಳಿಕೆಗಳಾಗಿ ಉಳಿದಿವೆ.

ಪುಳಿತೋಕ್ಕು ಪಶಿಯರಿಯ್ಯು (ಹುಳಿತೇಗಿನವನು ಹಸಿವು ತಿಳಿಯ): ವೈದ್ಯಕೀಯ ಗಾದೆ.

ಅಡೀ ಅನ್ನಾಕಿ ಅವಳೇ ಇಲ್ಲೆ; ಪುಳ್ಳೇಪೇರ್ ರಾಮಕೃಷ್ಣ (ಲೇ ಎಂದು ಕೂಗಲು ಹೆಂಡತಿಯೇ ಇಲ್ಲ; ಮಗನ ಹೆಸರು ರಾಮಕೃಷ್ಣ)

ಉಣ್‌ವಾ ಅಂಡಾಕ ಕುತ್ ವಾ ಅಂಡಾಳಾ (ಉಣ್ಣು ಬಾ ಎಂದರೆ ಕುತ್ತು ಬಾ ಎಂದರಂತೆ)

12 *ಪ್ರಚಾರಗ್ರಂಥಮಾಲೆ* - ೪, ಪು.೪೯-೫೭

13 ಒಂದು ಸಮುದಾಯದಲ್ಲಿ ಇಲ್ಲವೇ ಪ್ರದೇಶದಲ್ಲಿ ಹುಟ್ಟಿಕೊಂಡ ಗಾದೆಗಳಿಗೆ ಇರುವಷ್ಟೇ ಸಾಂಸ್ಕೃತಿಕ ಪ್ರಾಮುಖ್ಯವು, ಬಳಕೆಯಲ್ಲಿ ವ್ಯಾಪ್ತವಾಗಿ ಉಳಿದುಬಂದಿರುವುದಕ್ಕೂ ಇದೆ - ಅದು ಸ್ವೀಕೃತವಾದುದಾರೂ ಸರಿಯೆ. ಸಂಕೇತಿ ಗಾದೆಗಳ ಪ್ರತ್ಯೇಕ ಅಧ್ಯಯನಕ್ಕೂ ಅವಕಾಶವಿದೆ.

0.0.2 ಕೆಲವು ಕನ್ನಡ ಪದಗಳು ತಮಿಳುಪದಗಳ ಜಾಗದಲ್ಲಿ ಬಂದುದು ಇಲ್ಲವೆ ತಮಿಳುಪದವು ಅಪಭ್ರಂಶಗೊಂಡುದೂ ಉಂಟು.

ಚೇಳ್ಕ್ಕ್ ಪಾರುಪತ್ಯು ಕುಡತಪ್ಪಿ (ಚೇಳಿಗೆ ಪಾರುಪತ್ಯ ಕೊಟ್ಟಹಾಗೆ)
ದಿನೂ ಚಾವರ್‌ವಾಳ್ಕ್ ಅಳರ್ವ ದಾರ್ (ದಿನಾ ಸಾಯೋರಿಗೆ ಅಳೋರು ಯಾರು)

0.0.3 ಕನ್ನಡದಲ್ಲಿಯೂ ಇವು ಸಮಾನವಾಗಿ ಬಳಕೆಯಲ್ಲಿರುವುದನ್ನು ಕಾಣಬಹುದು. ಕನ್ನಡದಿಂದಲೇ ಸ್ವೀಕರಿಸಿ ತಮ್ಮ ತಮಿಳಿಗೆ ಅಚ್ಚುಹೊಯ್ಯಲು ಮಾಡಿದ ಪ್ರಯತ್ನಗಳನ್ನು ಅವುಗಳ ಭಾಷೆ, ಪ್ರಾಸ, ಲಯ ಮೊದಲಾದ ಅಂಶಗಳಿಂದ ಸುಲಭವಾಗಿ ಗುರುತಿಸಿಬಹುದು.

ಕಾಡ್ ಪ್ರಾಣೀಕ್ ಬೇಟೆಗಾರು ವಚ್ಚಿಂದೇ ಪೇರ್ (ಕಾಡು ಪ್ರಾಣಿಗೆ ಬೇಟೆಗಾರ ಇಟ್ಟಿದ್ದೇ ಹೆಸರು)
ಕಾಗೆ ಶಾಪ್ಪ್‌ತ್ಕ್ ಬಡನಾಯಿ ಚಾವಂದಾ (ಕಾಗೆ ಶಾಪಕ್ಕೆ ಬಡನಾಯಿ ಸಾಯುತ್ತದೆಯೆ)[14]

ಆದರೆ, ಭಾಷಾಂತರಪ್ರಯೋಗವು ಕೃತಕವೆನಿಸುವುದರಿಂದಲೇ ಅಂಥ ಪ್ರವೃತ್ತಿ ಯಶಸ್ವಿಯಾಗಿಲ್ಲ. ತಮ್ಮ ಸಂಪರ್ಕಕ್ಕೆ ಬಂದ ತೆಲುಗು, ಹಿಂದಿ, ಸಂಸ್ಕೃತ ಗಾದೆಗಳನ್ನು ಯಥಾವತ್ತಾಗಿಯೇ ಬಳಸುವುದರಲ್ಲಿಯೂ ಭಾಷಾಂತರಿತ ಬಳಕೆಗೆ ಒಲವು ಇಲ್ಲದುದನ್ನೇ ಕಾಣಬಹುದು. ಗ್ರಂಥಸ್ಥ ಗಾದೆಗಳಂತೂ ಉದ್ಧರಣ ಸ್ವರೂಪದಲ್ಲಿಯೇ ಮುಕ್ತವಾಗಿ ಬಳಕೆಯಾಗುತ್ತವೆ.

0.4 ಸಂಸ್ಕೃತಿಸಂಬಂಧವಾದ ಸಂಗತಿಗಳು :

0.0.1 ಆರಾ ಕುಡತ್ ಮೂಡಾ ವಂಕಿಂಡ್‌ವಾಳಾ ಪೋಲೆ (ಆರು ಕೊಟ್ಟು ಮೂರು ತೊಗೊಂಡವರ ಹಾಗೆ)

ಮೇಲುನೋಟಕ್ಕೆ ಇದು ಲಾಭನಷ್ಟದ ರೂಪಕದಂತಿದೆ. ಆದರೆ ಆರು ವೀಳೆಎಲೆಗಳನ್ನು ಕೊಡುವುದಾಗಲಿ, ಮೂರು ಎಲೆಗಳನ್ನು ಸ್ವೀಕರಿಸುವುದಾಗಲಿ ಇಲ್ಲಿ ನಿಷಿದ್ಧ. ಅವು ಲಕ್ಷ್ಮಿ ಕೈಬಿಟ್ಟು ಹೋಗುವುದೇ ಮೊದಲಾದ ಕೇಡುಗಳನ್ನು ತರುತ್ತವೆ ಎಂಬ ನಂಬಿಕೆ ಇಲ್ಲಿದೆ. ಹಾಗೆ ಆಕಸ್ಮಿಕವಾಗಿ ನಡೆದಾಗ ಆರು ಎಲೆ ಸ್ವೀಕರಿಸಿದವರು ಮರುಮಾತಿಲ್ಲದೆ ಸ್ವೀಕರಿಸುವಂತೆಯೇ ಮೂರು ಎಲೆ ಪಡೆದವರು ಅದನ್ನು ಹಿಂದಿರುಗಿಸುವ ಅಥವಾ ಮತ್ತೆ ಎರಡು ಎಲೆಗಳನ್ನು ಪಡೆದುಕೊಂಡು ಸರಿದೂಗಿಸುವ ಇಲ್ಲವೆ ಮರೆತು ಪಶ್ಚಾತ್ತಾಪಪಡುವ ಸಂಗತಿಗಳು ಇಲ್ಲಿ ನಡೆಯುತ್ತವೆ.

0.0.2 ವಿಶಿಷ್ಟ ನಂಬಿಕೆ ಮತ್ತು ವಿಧಿನಿಷೇಧಗಳ ಆಧಾರದ ಗಾದೆಗಳಂತೆಯೇ ಧಾರ್ಮಿಕ ಆಚರಣೆಗಳ ಸಂದರ್ಭದಲ್ಲಿ ಹುಟ್ಟಿಕೊಂಡ ಗಾದೆಗಳೂ ಅವರ ವೈಶಿಷ್ಟ್ಯವನ್ನು ಬಿಂಬಿಸುತ್ತವೆ.

'ಗಂಧದ್ವಾರಾ ಅಂದ್ರೆ ಸಾಣೆಕಲ್ಲು'

'ಗಂಧದ್ವಾರಾಂ' ಎಂಬ ಮಂತ್ರದೊಂದಿಗೆ ದೇವತಾವಿಗ್ರಹಗಳಿಗೆ ಗಂಧದಲೇಪ (ಪೂಜೆ) ಮಾಡುವ ಭಾಗವು ಪೂಜಾಕ್ರಮದಲ್ಲಿ ಬರುತ್ತದೆ. ಆ ಮಂತ್ರ ಬಂದಾಗಲೇ, ಗಂಧವನ್ನು ತೇಯಬೇಕಾದುದು ನೆನಪಿಗೆ ಬರುತ್ತದೆ. ಪೂಜೆಗೆ ಅಣಿ ಮಾಡುವುದರಲ್ಲಿ ಇಂಥ ಪರಿಕರಗಳನ್ನೆಲ್ಲಾ ಜೋಡಿಸುವುದೆಲ್ಲಾ ಸೇರುತ್ತದೆ. ಪೂರ್ವಸಿದ್ಧತೆ ಇಲ್ಲದೆ ಮಾಡುವ ಕೆಲಸಗಳಿಗೆ ಈ ಗಾದೆಯನ್ನು ಅನ್ವಯಿಸುತ್ತಾರೆ.

0.0.3 ಶಂಖದಲ್ಲಿ ಬಂದ್ರೇ ತೀರ್ಥ, ಸಂಧ್ಯಾವಂದನೆ ಸಾವಿರಪಾಲು, ಉಡುದಾರ ಜಡ್ಡಂತು ಜನಿವಾರ ಭಡ್ಡಂತು, ಬೂದೀಲಿ ಹೋಮ ಮಾಡಿದ ಹಾಗೆ, ಜನರ ಕಣ್ಣಿಗೆ ಮರ ಮುರಿದ ಹಾಗೆ - ಇಂಥ ಅನೇಕ ಗಾದೆಗಳು ಈ ಪರಿವಲಯದವು.

0.5 ಐತಿಹಾಸಿಕ ಅಂಶವಿರುವ ಗಾದೆಗಳೂ ಇಲ್ಲಿವೆ. ಉದಾಹರಣೆಗೆ : ಶಿವಪ್ಪನಾಯಕನ ಆಸ್ಥಾನದಲ್ಲಿ ಶೈವರಿಗೂ ವೈಷ್ಣವರಿಗೂ

[14] ಇಂಥ ಹಲವು ಗಾದೆಗಳು ಸಿ.ಎಸ್.ರಾಮಚಂದ್ರ ಅವರ ಸಂಗ್ರಹದಲ್ಲಿವೆ (೧೯೯೧), ನೋಡಿ: ಪು.೧೩೮-೧೪೩

ಹತ್ತಿದ ಜಗಳ ಹರಿಯುತ್ತಿರಲಿಲ್ಲ. ಶೈವರು, 'ಕೈಲಾಸದಲ್ಲಿ ವಿಷ್ಣುವು ಶಿವನ ಕಾಲೊತ್ತುತ್ತಿದ್ದುದನ್ನು ಸ್ವತಃ ಈಗತಾನೇ ಕಂಡುಬಂದೆ ಪ್ರಭೂ' ಎಂದರೆ, ವೈಷ್ಣವರು, 'ವೈಕುಂಠದಲ್ಲಿ ಶಿವನೂ ಪಾರ್ವತಿಯೂ ಲಕ್ಷ್ಮೀನಾರಾಯಣರ ಪಾದ ಒತ್ತುತ್ತಿದ್ದುದನ್ನು ಇದೀಗ ಕಂಡುಬಂದೆ' ಎನ್ನುವರು. ಆಗ ಅವನು, 'ಕೈಲಾಸದೋರುಂಟು, ವೈಕುಂಠದೋರುಂಟು' ಎಂದು ಹೇಳಿ ಇಬ್ಬರನ್ನೂ ನಗುತ್ತಾ ನಿವಾರಿಸುತ್ತಿದ್ದನು.

ಉದ್ದೂರಕ್ಕ್ ಚೋಳರಾಯು ಪೋನಪ್ಪಿ (ಉದ್ದೂರಿಗೆ ಚೋಳರಾಯ ಹೋದಹಾಗೆ) ಮೊದಲಾದ ಇಂಥ ಇತರ ಘಟನಾಪ್ರಧಾನ ಗಾದೆಗಳೂ ಇವೆ. ಕರ್ನಾಟಕದ ಸಂಕೇತಿಗಳು ಇಲ್ಲಿನ ಇತಿಹಾಸ, ಸ್ಥಳ, ವ್ಯಕ್ತಿಗಳನ್ನು ಆತ್ಮೀಕರಿಸಿಕೊಂಡುದು ಇಂಥ ಗಾದೆಗಳ ವಿಪುಲ ಬಳಕೆಯಲ್ಲಿ ವ್ಯಕ್ತವಾಗುತ್ತದೆ. 'ಶಿವಪ್ಪನಾಯಕನ ಶಿಸ್ತು', 'ಕಪಿಕೈಲಿ ಮಾಣಿಕ್ಯ ಕೊಟ್ಟಹಾಗೆ', 'ಪುನರಾಯಾನ್ ಮಹಾಕಪಿಃ' ಮೊದಲಾದ ಗಾದೆಗಳು ಅರ್ಥಸ್ಥಿತ್ಯಂತರ ಇಲ್ಲವೆ ಹೀನಾರ್ಥಗೊಂಡು ಬಳಕೆಯಾಗುವುದು ಇಲ್ಲಿಯೂ ಇದೆ.

0.6 ಸಂಘಜೀವನ (ಊರಿಗೆಲ್ಲಾ ಒಂದುದಾರಿ ಆದರೆ ಎಡವಟ್ಟಂಗೆ ಒಂದು ದಾರಿ), ಸಾತ್ವಿಕತೆ (ಮಾಟ ಮಾಡಿದವನ ಮನೆಹಾಳು, ತೋಟಮಾಡಿದವನ ಹೊಲಹಾಳು), ಸಿದ್ಧಾಂತ(ಸುಮ್ಮನಿದ್ರೆ ಬ್ರಹ್ಮನೂ ಗೆಲ್ಲ), ಬಂಧುತ್ವ (ಕಿರಿಮಗ ಕಿವೀ ಕಿತ್ರೂ ಲೇಸು), ವ್ಯವಸಾಯ(ಕೊಟ್ಟಸಾಲ ಕೇಳ್ದೆ ಹೋಯ್ತು, ಮಾಡಿದ ಆರಂಬ ನೋಡದೆ ಹೋಯ್ತು), ವೈದ್ಯ (ಉದ್ದುತಿಂದ್ರೊ ಬುದ್ಧಿಗೆಟ್ರೊ), ನಿಂದಾತ್ಮಕ (ಸರಿಸರಿಯಾಗಿದ್ರೆ ಪರಿಪರಿ ನೆಂಟ್ರು), ಕೌಟುಂಬಿಕ(ಹೇಳ್‌ಹೇಳ್ತಾ ಮಗಳು ಹೆಣ್ಣೇ ಹೆತ್ಳು; ಇಷ್ಟು ಕಂಡ್ರಾ ಕೃಷ್ಣಭಟ್ರೆ, ಮುಪ್ಪಿನ ಕಾಲಕ್ಕೆ ಮೂರು ಹೆಂಡ್ರು), ಅಶ್ಲೀಲ ಪ್ರಯೋಗ (ಅತ್ತು ಹೆದರಿಸೋನೊಬ್ಬ, ಹೇತು ಹೆದರಿಸೋನೊಬ್ಬ) - ಹೀಗೆ ಗಾದೆಗಳ ಬಗೆಗೆ ಇರುವ ಸಾರ್ವತ್ರಿಕ ಪ್ರವೃತ್ತಿಯ ನಿದರ್ಶನಗಳು ವಿಪುಲವಾಗಿವೆ. ಇಂಥಲ್ಲಿಯೂ ಗಮನಿಸಬಹುದಾದ ಸೂಕ್ಷ್ಮವ್ಯತ್ಯಾಸಕ್ಕೆ ನಿದರ್ಶನವಾಗಿ, ಅಶ್ಲೀಲಗಾದೆಗಳ ಪ್ರಯೋಗವನ್ನು ಹೇಳಬಹುದು. ಅಂಥ ಪದಗಳನ್ನು ಮೌನಗೊಳಿಸಿಯೇ ಅವನ್ನು ಪ್ರಯೋಗಿಸಲಾಗುತ್ತದೆ. ಹಿರಿಯ ಪುರುಷರು, ಸ್ತ್ರೀಯರು, ಹತ್ತಿರದ ಗೆಳೆಯರು ತಮ್ಮತಮ್ಮಲ್ಲಿ ಮಾತ್ರ ತಗ್ಗಿದ ದನಿಯಲ್ಲಿ ಅವನ್ನು ಬಳಸುತ್ತಾರೆ. ಅಚ್ಚುಮಾಡುವಾಗಲೂ ಈ ಮಡಿವಂತಿಕೆಯನ್ನು ಪ್ರದರ್ಶಿಸಿರುವುದನ್ನು ಕಾಣಬಹುದು.[15] ಎಡವಟ್ಟ, ಬೋನ, ಸುಮಾನ, ಅಟ್ಟಮೇಲೆ, ಶೀಟಾಳು, ಮರಿಗುದ್ದಿ, ಹಿಂಡೆಕೂಳು, ಹಡಕ್‌ನಾತ, ಬೋಳಪ್ಪ, ಮಲ್ನಾಗರು - ಇಂಥ ಪ್ರಯೋಗಗಳು ಮುಕ್ತವಾಗಿಯೇ ಬಳಕೆಯಾಗುತ್ತವೆ.

ಟೀಕೆ, ವಿಡಂಬನೆಗಳನ್ನುಳ್ಳ ಜಾತಿನಿರ್ದೇಶಿತ ಗಾದೆಗಳು ಇವರಲ್ಲಿಯೂ ಇವೆ. ಅತಿರೇಕದ ಜಂಗಮಯ್ಯಂಗೆ ತಿಕವೆಲ್ಲ ರುದ್ರಾಕ್ಷಿ; ಅಂಗಳದಲ್ಲಿರೋರೆಲ್ಲ ಲಿಂಗವಂತ್ರೆ, ಕೋಳಿ ಮಾತ್ರ ಮಂಗಮಾಯ; ಸಾಬರ ಸಾವಾಸಾ ಮೂರು ದಿವ್ಸ ಉಪವಾಸ ಇತ್ಯಾದಿ. ಆದರೆ, ಅದಕ್ಕಿಂತ ಹೆಚ್ಚಿನ ಗಾದೆಗಳು ತಮ್ಮನ್ನು ಕುರಿತೇ ದಟ್ಟವಾಗಿ ಬಳಕೆಯಾಗುತ್ತವೆ. ಮಂತ್ರಕ್ಕಿಂತ ಉಗಳಪ್ಪಾರ; ಓದಿ ಓದಿ ಮರುಳಾದ ಕೂಚುಭಟ್ಟ; ಮಾಡೋದು ದ್ವಾದಶಿ, ತಿನ್ನೋದು ಬದನೆಕಾಯಿ; ಹೇಳೋದು ವೇದ, ಹಾಕೋದು ಗಾಳ; ಹಾರುವ ಮಾಡಿದ್ದು ಪಿಂಡಕ್ಕೆ, ಒಕ್ಕಲಿಗ ಮಾಡಿದ್ದು ದಂಡಕ್ಕೆ, ಹೊಲಿಯ ಮಾಡಿದ್ದು ಹೆಂಡಕ್ಕೆ - ಇತ್ಯಾದಿ. ಭಾಷೆಯಿಂದಲೂ ಸ್ಪಷ್ಟವಾಗುವಂತೆ ಅವುಗಳಲ್ಲಿ ಕೆಲವನ್ನು ತಾವೇ ಸೃಷ್ಟಿಸಿದ್ದಾರೆ; ಇತರರು ತಮ್ಮನ್ನು ಕುರಿತು ಆಡಿದ ಟೀಕೆಗಳನ್ನೂ ತಮ್ಮದಾಗಿಸಿಕೊಂಡಿದ್ದಾರೆ. ಈ ಆತ್ಮಚಿಕಿತ್ಸಕ ಗುಣ ಗಮನಾರ್ಹವಾದುದು.

0.7 ಸಂಕೇತಿಗಳಿಗೇ ಸಂಬಂಧಿಸಿದ ವಿಶಿಷ್ಟ ಗಾದೆಗಳ ನಿದರ್ಶನಗಳು ಅಲ್ಪವಾಗಿಯಾದರೂ ಸಿಗುತ್ತವೆ.

0.0.1 ಸಂಕೇತಿಗಳ ಬಗೆಗೇ ಕರ್ನಾಟಕದಲ್ಲಿ ಬಳಕೆಯಾಗುವ ಗಾದೆ 'ಸಂಕೇತಿ ಬಳಗ ಸತ್ತಾಗ ಕಾಣ್ತು'. 'ಶೆಟ್ಟರ ಆಸ್ತಿ ಸತ್ತಮೇಲೆ ಗೊತ್ತು' ಎಂಬ ಗಾದೆಯ ಹಿನ್ನೆಲೆಯಲ್ಲಿ, ಈ ಸಮುದಾಯವು ಬಳಗವನ್ನೇ ಸಂಪತ್ತನ್ನಾಗಿ ಬೆಳೆಸಿಕೊಂಡ ಗುಣವನ್ನು ಗುರುತಿಸಬಹುದು. ಸಂಕೇತಿಗಳು ತಮ್ಮ ಮಹಾವಲಸೆಯ ಸಂದರ್ಭದಲ್ಲಿ ಮಾಡಿಕೊಂಡ

[15] ನೋಡಿ: ಪ್ರಚಾರಗ್ರಂಥಮಾಲೆ-೪, ಪು.೫೪.

'ಒಗ್ಗಟ್ಟಾಗಿರಬೇಕು' ಎಂಬ ಒಪ್ಪಂದದ ಅವಶೇಷ ಇಲ್ಲಿದೆ. ಶುಭ ಸಮಾರಂಭಗಳಲ್ಲಿ ಅರ್ಪಿಸುವ ಕಾಣಿಕೆಯಂತೆಯೇ ಮರಣದ ಸಂದರ್ಭದಲ್ಲಿಯೂ ಧನಸಹಾಯವು 'ಪುಳಿ ವಯ್ಯರದ್' ಎಂಬ ಹೆಸರಿನಿಂದ ನಡೆಯುತ್ತದೆ. ಸತ್ತ ಸಂದರ್ಭದ ಹನ್ನೊಂದು ದಿನಗಳ ಕರ್ಮಗಳ ವೆಚ್ಚವನ್ನು ಬಂಧುಮಿತ್ರರು ವಹಿಸಿಕೊಳ್ಳುತ್ತಾರೆ. ಪ್ರತಿಮಾಸಿಕಕ್ಕೆ ಜ್ಞಾತಿಗಳೆಲ್ಲ ಸೇರುತ್ತಾರೆ; ಸಮಾಜದ ಎಲ್ಲರೂ ಸಾವಿನ ಮನೆಯವರನ್ನು ಹಬ್ಬಗಳಲ್ಲಿ ಊಟಕ್ಕೆ ಕರೆಯುತ್ತಾರೆ; ವಿಶೇಷವಾಗಿ ಒಮ್ಮೆ, ಕರಿದ ತಿಂಡಿಗಳನ್ನು (ದೊಡ್ಡ ಪ್ರಮಾಣದಲ್ಲಿಯೇ) ಕೊಡುತ್ತಾರೆ.

0.0.2 ದಕ್ಷಿಣದಲ್ಲಿ ಐತಿಹಾಸಿಕ ಮಹತ್ತ್ವದ ಗಾದೆಯೊಂದು ಸಂಕೇತಿ ಗಾದೆಗಳಲ್ಲಿ ಸೇರಿದೆ.

ಕೂಡಿ ವರರ ಪೋದು ಕಳಞ್ಞ ಪೋಗು (ಕೂಡಿಬರುವ ಹೊತ್ತಿಗೆ ಕಳೆದುಹೋಗುತ್ತದೆ). ಒಂದು ಸಂಸಾರವು ಆರ್ಥಿಕವಾಗಿ, ಸಾಮಾಜಿಕವಾಗಿ, ಕೌಟುಂಬಿಕವಾಗಿ ಒಂದು ಸ್ಥಿರವಾದ ಹಂತವನ್ನು ಮುಟ್ಟಿತೆನ್ನುವ ಹಂತ ಬರುತ್ತಿದ್ದಂತೆಯೇ ಆ ಕುಟುಂಬದಲ್ಲಿ ಒಂದು ಸಾವು, ಪತನ, ಅವಘಡ ಸಂಭವಿಸುತ್ತದೆನ್ನುವುದು ಅಲ್ಲಿನ ಸಂಕೇತಿಗಳ ನಂಬಿಕೆ. ಅದು ನಾಚಾರಮ್ಮನ ಶಾಪದ ಫಲ ಎಂಬುದು ಪಾರಂಪರಿಕವಾಗಿ ಬಂದ ತಿಳಿವು. ಸಂಸಾರದಲ್ಲಿ ಸಂಭವಿಸುವ ಯಾವುದೇ ವಿಪತ್ತನ್ನೂ ನಾಚಾರಮ್ಮನ ಶಾಪಕ್ಕೆ ಹೊಂದಿಸುವುದು ಮತ್ತು ಈ ಗಾದೆಯನ್ನು ಉದ್ಧರಿಸುವುದು ಅಲ್ಲಿ ಗಾಢವಾಗಿ ಬೆಳೆದುಬಂದ ರೀತಿ. ಈ ಪ್ರವೃತ್ತಿ ಇಂದಿಗೂ ಜೀವಂತವಾಗಿದೆ.

"ಎರಡು ಪ್ರಮುಖ ಕಾರಣಗಳಿಗಾಗಿ ಗಾದೆಗಳು ಮತ್ತು ಸುಭಾಷಿತಸಾಹಿತ್ಯ ವಿಶೇಷ ಅಭ್ಯಾಸಕ್ಕೆ ತಕ್ಕುದಾಗಿದೆ. ೧) ಜನಾಭಿಪ್ರಾಯದ ಮೇಲೆ ಅವುಗಳಿಗೆ ಸೂಕ್ಷ್ಮವಾದ ಮತ್ತು ವ್ಯಾಪಕವಾದ ಪ್ರಭಾವ ಇದೆ. ೨) ಜನರ ಸಾಮಾಜಿಕ, ರಾಜಕೀಯ, ನೈತಿಕ ಮತ್ತು ಧಾರ್ಮಿಕ ವಿಚಾರಗಳಿಗೆ ಅವು ವಿಶ್ವಾಸಾರ್ಹ ಸಾಕ್ಷಿಗಳಾಗಿವೆ. ಆ ವಿಚಾರಗಳಿಂದಲೇ ಅವು ಹುಟ್ಟಿಬಂದಿವೆ ಮತ್ತು ಪ್ರಸಾರವಾಗಿವೆ"[16] ಎಂಬ ವಿವೇಕ ರೈ ಅವರ ಮಾತುಗಳ ಹಿನ್ನೆಲೆಯಲ್ಲಿ, ಸಂಕೇತಿಗಳ ಗಾದೆಯ ಬಳಕೆ ಮತ್ತು ಪ್ರವೃತ್ತಿ ಲೋಕಸಾಮಾನ್ಯಗುಣದ ಅಚ್ಚಿನಲ್ಲಿಯೇ ಇರುವುದು ನಿಚ್ಚಳವಾಗುತ್ತದೆ. ಸ್ವೀಕಾರಗೊಂಡ ಗಾದೆಗಳಿರುವಂತೆಯೇ, ಸಮಾನ ಪರಿಸರದಿಂದಾಗಿ ಸ್ವತಂತ್ರವಾಗಿ ಅವರಲ್ಲಿಯೇ ಹುಟ್ಟಿದ ಸಾರ್ವತ್ರಿಕ ಸ್ವರೂಪದ ಗಾದೆಗಳೂ ಅವರಲ್ಲಿರುವುದಕ್ಕೆ, ಅದೇ ವಿವರಣೆಯಾಗುತ್ತದೆ. ಅದರ ನಡುವೆಯೇ, ಸಂಕೇತಿಗಳಿಗೆ ಅನನ್ಯವಾದ ಸಂಸ್ಕೃತಿ ಅಥವಾ ಸಾಂಸ್ಕೃತಿಕ ಒತ್ತು, ಅವರ ಇತಿಹಾಸ, ನಂಬಿಕೆ, ಮನೋಭಾವ, ಸಾಮಾಜಿಕಪ್ರಜ್ಞೆ, ಧಾರ್ಮಿಕತೆ, ಸಾಹಿತ್ಯಾಭಿರುಚಿ, ಕನ್ನಡನಾಡಿನೊಂದಿಗೆ ತಾದಾತ್ಮ್ಯ, ಆತ್ಮವಿಮರ್ಶೆ ಮತ್ತು ಭಾಷಾಪ್ರವೃತ್ತಿಯನ್ನು ವಿಶೇಷವಾಗಿ ವ್ಯಕ್ತಪಡಿಸುವ ಗಾದೆಗಳೂ ಇಲ್ಲಿರುವುದನ್ನು ಕಾಣಬಹುದು.

ಉ. ಒಗಟುಗಳು :

ಗಾದೆಗಳ ಸಂಗ್ರಹ, ಅಧ್ಯಯನ ಮತ್ತು, ಅವುಗಳ ಸಾರ್ವತ್ರಿಕ ಸ್ವರೂಪದ ನಡುವೆಯೂ ಇರುವ ಪ್ರಾದೇಶಿಕ ಇಲ್ಲವೆ ಜಾತಿವೈಶಿಷ್ಟ್ಯಗಳಿಗೆ ಸಂಬಂಧಿಸಿದಂತೆ, ಪ್ರಾಸ್ತಾವಿಕವಾಗಿ ಹೇಳಿದ ಮಾತುಗಳು ಒಗಟುಗಳಿಗೂ ಅನ್ವಯಿಸುತ್ತವೆ.

1. **ಸನ್ನಿವೇಶ :** ಸಂಕೇತಿಗಳ ಒಗಟುಗಳ ಹಿನ್ನೆಲೆಯನ್ನು ಇಲ್ಲಿ ನೋಡಬಹುದು:

0.1 ಸಂಕೇತಿಗಳು 'ಒಗಟು' ಎಂಬ ಪದವನ್ನಷ್ಟೆ ಈ ಪ್ರಕಾರಕ್ಕೆ ಬಳಸುತ್ತಾರೆ. 'ಒಡಪು' ಎಂಬ ಹೆಸರಾಗಲಿ, ಹೆಂಡತಿಯು ಗಂಡನ (ಅಥವಾ ಗಂಡನು ಹೆಂಡತಿಯ) ಹೆಸರು ಹೇಳಲು ಬಳಸುವ ಈ ಪ್ರಕಾರವಾಗಲಿ ಇವರಲ್ಲಿ ಇದ್ದುದರ ನೆನಪೂ ಉಳಿದಿಲ್ಲ.

0.2 ಬಹುತೇಕ ಹೆಂಗಸರು, ಮಕ್ಕಳು, ವಿಶೇಷವಾಗಿ ಲೌಕಿಕ ಪುರುಷರು ಒಗಟನ್ನು ಒಂದು ಮನೋರಂಜನೆಯ ಸಾಧನವನ್ನಾಗಿಯೂ ಕ್ರೀಡೆಯನ್ನಾಗಿಯೂ ಮಾಡಿಕೊಂಡಿದ್ದಾರೆ.

0.3 ಒಬ್ಬ ಹಿರಿಯನು ಒಗಟುಗಳನ್ನೊಡ್ಡುವುದು ಮತ್ತು ಹಲವು ಮಕ್ಕಳು ಇಲ್ಲವೆ ಆಸಕ್ತರು ಅದನ್ನು ಒಡೆಯಲು ತಿಣುಕುವುದು

---

[16] *ತುಳುಗಾದೆಗಳು,* ಬಿ.ಎ.ವಿವೇಕ ರೈ, ೧೯೭೧, ಪು.XVI

ಒಂದು ಕ್ರಮ. ಇಲ್ಲವೆ, ಒಂದು ಗುಂಪಿನಲ್ಲಿ ಎಲ್ಲರೂ ತಮತಮಗೆ ತೋರಿದ ಒಗಟು ಒಡ್ಡುವುದು ಮತ್ತು ಇತರರು ಅದನ್ನು ಒಡಚಲು ಉಪಕ್ರಮಿಸುವುದು ಇನ್ನೊಂದು ಕ್ರಮ. ನಿಯಮಬದ್ಧವಾದ ಕ್ರೀಡಾಮಾದರಿ ಇಲ್ಲಿ ಕಾಣುವುದಿಲ್ಲ. ಕ್ರೀಡಾಭಾವದ ಮನೋರಂಜನೆಯನ್ನಷ್ಟೇ ಇಲ್ಲಿ ಕಾಣಬಹುದು.

0.4 ಸಮಾರಂಭಗಳು ಹಾಗೂ ಮಲಗುವ ಇಲ್ಲವೆ ಊಟದ ಹೊತ್ತು, ಬಂಧುಗಳ ಮಿಲನದ ವಿರಾಮ ಸಂದರ್ಭಗಳಲ್ಲಿ ಈ ಬೌದ್ಧಿಕ ಕ್ರೀಡೆಗೆ ಅವಕಾಶ ಮಾಡಿಕೊಳ್ಳುವುದುಂಟು.

0.5 ಒಗಟುಗಳ ಉಗಮವು ಹೆಚ್ಚಾಗಿ ಪ್ರಜ್ಞಾಪೂರ್ವಕವಾಗಿ ಬೌದ್ಧಿಕಸ್ತರದಲ್ಲಿಯೇ ಆಗುವುದರಿಂದ ಸಮುದಾಯದಲ್ಲಿ ಇದು ಕೇವಲ ಒಡಚುವ ಸಂದರ್ಭವಾಗದೆ, ಒಗಟುಗಳನ್ನು ಕಟ್ಟುವ ಸಂದರ್ಭವೂ ಆಗುತ್ತದೆ. ಆದುದರಿಂದ ಈ ಕ್ರೀಡೆಗಳು ಕೇವಲ ನೆನಪಿನ ಪರೀಕ್ಷೆಯಾಗದೆ, ಹೊಸ ಸವಾಲುಗಳನ್ನೆದುರಿಸುವ ಕ್ರಿಯಾಶೀಲ ಕ್ಷಣಗಳೂ ಆಗುತ್ತವೆ. ಜನಪದ ಕತೆಗಳಿಗಿಂತ ಒಗಟಿನ ಪ್ರಕಾರಕ್ಕೆ ಇಲ್ಲಿ ಹೆಚ್ಚಿನ ಗೌರವ ಸಲ್ಲುವುದಕ್ಕೆ ಈ ಅಂಶವೇ ಕಾರಣವಾಗಿದೆ. "ಲೋಕಜ್ಞಾನ ಪರೀಕ್ಷೆ, ಸಮಸ್ಯಾಪರಿಹಾರ ಸಾಮರ್ಥ್ಯ, ತಾರ್ಕಿಕಬುದ್ಧಿಯ ವಿಕಾಸ, ವಾಕ್ಚಾತುರ್ಯ, ಒಂದು ಜನಾಂಗದ ಸಂಸ್ಕೃತಿದರ್ಶನ, ಶಿಕ್ಷಣಲಾಭ ಇವೇ ಮೊದಲಾದ ಪ್ರಯೋಜನಗಳೊದಗುವುದರಿಂದ ಒಗಟುಗಳು ಪ್ರಾಚೀನಕಾಲದಿಂದ ಲೋಕಪ್ರಿಯವಾಗಿವೆ"[17] ಎಂಬ ಮಾತು ಸಂಕೇತಿಗಳ ಬಗೆಗೆ ಉದ್ಧರಣಾರ್ಹವಾದುದಕ್ಕೆ ಕಾರಣ ಈ ಸಮುದಾಯದಲ್ಲಿ ಹೆಚ್ಚು ಕ್ರಿಯಾಶೀಲವಾಗಿ ಬಳಕೆಯಾಗುವ ಜಾನಪದಪ್ರಕಾರಗಳಲ್ಲಿ ಇದೂ ಒಂದು ಎಂಬುದು.

0.6 ಇಲ್ಲಿ ಧಾರ್ಮಿಕತೆಗೂ ಒಗಟಿಗೂ ಸಂಬಂಧವಿಲ್ಲ; ಧಾರ್ಮಿಕ ವಿಷಯಗಳು ಅವುಗಳ ವಸ್ತುವಾಗಬಹುದಷ್ಟೆ. ಬೆಳೆಯನ್ನು ರಕ್ಷಿಸುವ ಇಲ್ಲವೆ ನಾಶಪಡಿಸುವಂಥ ಯಾವುದೇ ಶಕ್ತಿ ಒಗಟುಗಳಿಗಿದೆ ಎಂಬ ಅಥವಾ ಮತ್ತಾವ ನಂಬಿಕೆ ಒಗಟಿನ ಬಗೆಗೆ ಇಲ್ಲ.

ಜೀವನವಿಧಾನದಲ್ಲಿಯೇ ಒಂದಾಗಿಬಿಡುವ ಗಾದೆಗಳಂತಲ್ಲದೆ ಮಿತಕಾರ್ಯವ್ಯಾಪ್ತಿಯ ಒಗಟಿಗೆ ದೊರೆತ ಪ್ರಚಾರವೂ ಕಡಮೆ; ಯಂತ್ರಯುಗದ ಸಮಯಾಭಾವದ ನಡುವೆ ಉಳಿದುಬಂದದ್ದೂ ಕಡಮೆ. ಸಮುದಾಯದಲ್ಲಿ ಗಾದೆಗಳ ಸಂಗ್ರಹದ ಕ್ಷೀಣವಾದ ಪ್ರಯತ್ನವಾದರೂ ನಡೆದಿದೆ; ಒಗಟಿಗೆ ಸಂಬಂಧಿಸಿದಂತೆ ಅದೂ ಆಗಿಲ್ಲ. ಪ್ರಸ್ತುತ ಅಧ್ಯಯನಕ್ಕಾಗಿ ವಿವಿಧ ಪ್ರದೇಶಗಳಿಂದ ಸಂಗ್ರಹಿಸಿದ (ಅಪ್ರಕಟಿತ) ಮುನ್ನೂರು ಒಗಟುಗಳು ಸಮಗ್ರ ಅಧ್ಯಯನವೊಂದಕ್ಕೆ ಅಗತ್ಯ ಆಕರವಾಗಲಾರವು; ಆದರೆ ಕೆಲವು ಲಕ್ಷಣಗಳ ಗ್ರಹಿಕೆಗೆ ಸಾಕು.

- ಈ ಸಂಗ್ರಹವೇ ವಿವಿಧ ವಕ್ತೃಗಳ ನೆರವಿನಿಂದಾದುದರಿಂದ ಪುನರಾವರ್ತನೆಗಳಿವೆ.
- ಇತರೆಡೆ ಪ್ರಚಾರದಲ್ಲಿದ್ದು ಅಚ್ಚಾಗಿರುವುವೂ ಇವೆ.
- ಬ್ರಾಹ್ಮಣ ವಲಯದ ಛಾಪು ಬಿದ್ದವು ಮತ್ತು ಸಂಕೇತಿಗಳಿಂದಲೇ ಕಟ್ಟಲ್ಪಟ್ಟವೂ ಇವೆ.
- ವಸ್ತು ಮತ್ತು ರಚನೆಯ ದೃಷ್ಟಿಯಿಂದ ಈಗಾಗಲೇ ಆಗಿರುವ ಅಧ್ಯಯನಗಳ ಫಲಶ್ರುತಿಗಳು ಇಲ್ಲಿಯೂ ಕಾಣಿಸುತ್ತವೆ.

ಸಂಕೇತಿಗಳಲ್ಲಿ ದಟ್ಟವಾಗಿ ಪ್ರಚಾರದಲ್ಲಿರುವ ಒಗಟುಗಳ ವೈಶಿಷ್ಟ್ಯದ ಪ್ರಾತಿನಿಧಿಕ ನಿದರ್ಶನಗಳಿಗಷ್ಟೇ ಈ ಅವಲೋಕನವನ್ನು ಮಿತಗೊಳಿಸಿಕೊಂಡಿದೆ:

2. **ಒಗಟಿನ ಶರೀರ :** ಗಾದೆ ಮತ್ತು ಒಗಟುಗಳು ಒಂದೇ ಗೋತ್ರದವಾದರೂ ಒಗಟುಗಳ ರಾಚನಿಕ (form) ಕಾರ್ಯ ಹೆಚ್ಚು ಮುಖ್ಯವಾದುದು. ಒಗಟುಗಳು ನಿರೀಕ್ಷಿಸುವ ಉತ್ತರವು ಬೌದ್ಧಿಕ ಕಸರತ್ತಿನ ದೃಷ್ಟಿಯಿಂದ ಮುಖ್ಯವಾಗಬಹುದು; ಆದರೆ ಆ ಉತ್ತರಕ್ಕಾಗಿ ಒಡ್ಡಿದ ಸವಾಲು ವೈವಿಧ್ಯಪೂರ್ಣವಾಗಿದ್ದು ಉಲ್ಲಾಸ, ಚುರುಕು, ಕ್ರೀಡಾಭಾವ, ಕಾವ್ಯಮಯತೆ, ಮಾಂತ್ರಿಕ ಸೊಗಡು ಮೊದಲಾದ ಗುಣಗಳನ್ನು ಮೈಗೂಡಿಸಿಕೊಳ್ಳುತ್ತದೆ.

[17] *ಜನಪದ ಅಧ್ಯಯನ,* ಜವರೇಗೌಡ, ಡಿ.; ಡಿ.ವಿ.ಕೆ.ಮೂರ್ತಿ, ಮೈಸೂರು, ೧೯೭೬, ಪು.೨೪೮

ಸಂಕೇತಿಗಳ ಒಗಟುಗಳಲ್ಲಿ ಕಾಣಬಹುದಾದ ರೀತಿಗಳು ಮತ್ತು ಅವುಗಳ ಲಕ್ಷಣಗಳು :

0.1 ಲೆಕ್ಕವಿಲ್ಲದ ಸಂಖ್ಯೆ. ಅದು ಒಬ್ಬನ ಹೆಸರು. ಏನು?
ಪ್ರತ್ಯೇಕವಾದ ಪ್ರಶ್ನೆಯ ಪದ; ಉತ್ತರ: ಅನಂತ- ನಾಮಪದ, ದೇವರೇ ವಸ್ತು, ಒಂದೇ ಪದದ ಉತ್ತರ.

0.2 ಅಡವಿಯಲ್ಲಿ ಹುಟ್ಟಿದ ಗಿಡ, ಗೋಪಾಲ
ನಿನಗ್ಯಾರಿಟ್ಟರು ಸಾದಿನ ಚುಕ್ಕೆ?
ಒಗಟಿನ ಭಾಗವಾಗಿಯೇ ಪ್ರಶ್ನೆ ಇದೆ. ಉದ್ದಿಷ್ಟ ವಸ್ತುವಿಗೇ ಈ ಪ್ರಶ್ನೆ. ಕೇಳುಗನಿಗೂ ಅದೇ ಅನ್ವಯಿಸುತ್ತದೆ.
ಉತ್ತರ : ಗುಲಗಂಜಿ - ನಾಮಪದ, ನಿಸರ್ಗಾವಲೋಕನ.

0.3 ಚಕ್ಕನೆ ಒತ್ತಲು | ಪಕ್ಕನೆ ಹತ್ತುವನು |
ಝಗ ಝಗ ಬೆಳಕು | ಬೀರುವನು. | ಅವನ್ಯಾರು?

'ಯಾರು?' 'ಅದು ಏನು?' 'ಇದು ಏನು?' ಇತ್ಯಾದಿ ಪದಗಳು ಬಳಕೆಯಾಗುವ ಒಗಟುಗಳೂ ಇವೆ. ಪ್ರಾಸಾನುಪ್ರಾಸವನ್ನೂ ಗಮನಿಸಬಹುದು. ಒತ್ತಕ್ಷರಾನುಪ್ರಾಸವು ಲವಲವಿಕೆಯನ್ನು ಹೆಚ್ಚಿಸುತ್ತದೆ. ಉತ್ತರ : ವಿದ್ಯುದ್ದೀಪ - ನಾಮಪದ, ನವೀನವಸ್ತು.

0.4 ಅಕಟಕಟ ಪಕ್ಷಿ | ಮಗುಟಾವ ಧರಿಸಿ |
ಕಲ್ಲುಪ್ಪು ಹಾಕಿ | ಕರಿಬೇವು ಬೆರೆಸಿ |
ಕಾರವಾಯಿತೇ? ಪಕ್ಷಿ | ಕಾರವಾಯಿತೇ ||
ಇಲ್ಲಿನ ಕಾವ್ಯಮಯತೆ ಆಕರ್ಷಕವೂ ಹೌದು.

0.5 ಒಂದರಿಂದ ಅನೇಕ ವಾಕ್ಯ ಪ್ರಮಾಣವುಳ್ಳ 'ಹೇಳಿಕೆ'ಗಳ ಸ್ವರೂಪದಲ್ಲಿದ್ದಾಗಲೂ ಅವುಗಳ ಕಾವ್ಯಮಯತೆ ಮತ್ತು ಅಲಂಕಾರ ಗಮನಾರ್ಹವಾಗಿರುತ್ತದೆ.

ವಾರಂಗಿರಿಗಿರಿ ಪೋರಂಗಿರಿಗಿರಿ ನೀರ್‌ಕಂಡ ಜಾಗದಲ್ಲಿ ನಿಲ್ಲಂಗಿರಿಗಿರಿ

ಉತ್ತರ: ಚಪ್ಪಲಿ. 'ನೀರು ಕಂಡ ಜಾಗದಲ್ಲಿ ನಿಲ್ಲುತ್ತೆ' ಎಂದಷ್ಟೆ ಹೇಳಿ ಮುಗಿಸಬಹುದಾದ ಪ್ರಶ್ನೆಯು, ಪ್ರಾಸಾನುಪ್ರಾಸಗಳನ್ನೂ, ಚಪ್ಪಲಿಯಿಂದ ನಡೆದಾಡಿ ಹೋಗುವ - ಬರುವ ಕ್ರಿಯೆಗಳನ್ನು ಸೂಚಿಸುವ 'ವಾರಂ' 'ಪೋರಂ' ಎಂಬ (ವಾ ಬಾ ಪೋ ಹೋಗು) ರೂಪಸಿದ್ಧಿಗಳನ್ನೂ, 'ಗಿರಿಗಿರಿ' ಎಂಬ ಶಬ್ದದ ಪುನರಾವರ್ತನೆಯಿಂದಾಗುವ ಮಾಂತ್ರಿಕ ಪರಿಣಾಮವನ್ನೂ ಮೈಗೂಡಿಸಿಕೊಂಡು ಆಕರ್ಷಕವಾಗಿ ರೂಪುಗೊಂಡಿದೆ. ಬೌದ್ಧಿಕ ಕ್ರೀಡೆಯನ್ನು ಮನೋರಂಜನೆಗೆ ಬೆಸೆದ ರೀತಿಯೂ ಇಲ್ಲಿ ಕಾಣುತ್ತದೆ. ದ್ವಿಪದಿಯ ಲಕ್ಷಣವನ್ನೂ ಗಮನಿಸಬಹುದು.

0.6 ಹಸಿರು ಬೆತ್ತದ ಕೋಲ | ಹಿಡಿವವನೇ ಜಾಣ |
ಕೆಂಬಟ್ಟೆ ನೀರ | ಕುಡಿವವನೇ ಜಾಣ |
ಮುತ್ತುಗದ ಹೂವ | ಮುಡಿವವನೇ ಜಾಣ ||
ಅಕ್ಕಕ್ಕ | ಮರ್‍ಸ ನೋಡು |
ಮರದ ಮೇಲ್ಸ | ಕಾಯ್ಸಿ ನೋಡು |
ಕಾಯ್ಸಿ ತಿನ್ನುವ | ಬಾಯ್ಸಿ ನೋಡು |
ಉತ್ತರ : ಏಲಕ್ಕಿ

ಅಕ್ಕ ಎನ್ನುವಾಗಿನ ಆತ್ಮೀಯತೆ ಮತ್ತು 'ಜಾಣ, ಇದ ಹೇಳಬಲ್ಲವನಿಗೆದುರಿಲ್ಲ,' 'ಇದ ಹೇಳಬಲ್ಲವರು ತಿಳಿದಿಲ್ಲ' ಮೊದಲಾದ ಪ್ರಚೋದನೆಗಳೂ ಗಮನಾರ್ಹ.

0.7 ಪ್ರಾಸಪ್ರಿಯತೆಯಿಂದ ಸೊರಗಿದ ಒಗಟುಗವಿಗಳಿದ್ದಾರೆ.

ನಾನು ತಂದೆನು | ನಿನ್ನ |
ನೀನೇಕೆ ನೋಡುವೆ | ಎನ್ನ |
ನಾನೇನು ಮಾಡಲಿ | ನಿನ್ನ |

ಉತ್ತರ : ಕನ್ನಡಿ

ಆದರೆ ಅಂಥವು ಚಲಾವಣೆಯ ಆಕರ್ಷಣೆ ಇಲ್ಲದೆಯೇ ಹಿಂದೆ ಬೀಳುತ್ತವೆ.

0.8 ಕಾವ್ಯ ಸೌಂದರ್ಯವು ಕಾಣುವುದೇ ಸಾಮಾನ್ಯ ಲಕ್ಷಣ.

ಕಯ್ಯುಂಟು ಕಾಲಿಲ್ಲ | ಶಿರಹರಿದ ಮುಂಡ |
ಮೈಯೊಳಗೆ ನೂರಾರು | ಗಾಯವನೆ ಗೊಂಡ |
ಒಯ್ಯನೊಯ್ಯನೆ ಬಂದು | ಹೆಗಲೇರಿಕೊಂಡ |
ರಾಯರಾಯರಿಗೆ | ನಾನೇ ಪ್ರಚಂಡ ||

ಉತ್ತರ : ಅಂಗಿ

ಹೊಸದಾಗಿ ಬಂದ ಅಂಗಿಯಂತೆಯೇ - ಪಿಸ್ತೂಲು, ವಿಮಾನ, ದೂರವಾಣಿ, ರಾಜೀವಗಾಂಧಿ ಕೂಡ ಒಗಟಿನ ವಸ್ತುವಾಗಿರುವುದು ಸೃಜನಶೀಲತೆ ಜೀವಂತವಾಗಿರುವುದರ ಸಾಕ್ಷಿಯೂ ಹೌದು.

0.9 ಒಗಟುಗಳು ಪೂರ್ಣವಾಗಿ ಕನ್ನಡದಲ್ಲಿಯೇ ವ್ಯವಹಾರಗೊಳ್ಳುತ್ತವೆ. ಆದರೆ ಪ್ರಸ್ತುತ ಸಂಗ್ರಹದಲ್ಲಿ ಸೇರಿದ ಒಂದೇ ಒಂದು ತಮಿಳು ಒಗಟು ಇದು:

ಅಡಿ ಅಡಿ ಅಂಗೆ ಪೋರೆ | ನಾ ಡಾಕ್ಟರುಳ್ಳಕ್ಕು ಪೋರೆ |
ನೀ ತೂಣ್‌ನಾಲೇ | ನಾ ಕಟ್ಟ್ ಪೋರೆ |

ಉತ್ತರ : ಪರಮಾಳ್‌ಚೆಟ್ಟಿ ಪೆನ್ಸಿಲ್ಲು

ಪ್ರಾಸಸಜ್ಜಿತವಾದ ತುಂಡು ಕವನದಂತಿರುವ ಈ ಒಗಟಿನಲ್ಲಿ ಸುಸಂಬದ್ಧತೆ ಇಲ್ಲ. ಇದು ಕೆಲ ಶ್ರೀವೈಷ್ಣವರ ತಮಿಳಿನಲ್ಲಿದ್ದು ಸಂಕೇತಿಗಳಿಂದ ಸ್ವೀಕೃತವಾದ ಒಗಟಿನಂತಿದೆ. ಆದರೆ ಒಗಟಿನ ಸೃಷ್ಟಿಲಕ್ಷಣವು ವಿಚಿತ್ರವಾದುದರಿಂದ ಆ ಬಗೆಗೆ ಅದು ಕೊನೆಯ ಮಾತಾಗಲಾರದು.

0.10 ಸಾಮಾನ್ಯವಾಗಿ 'ಉತ್ತರ'ವು ಒಂದು ನಾಮಪದವಾಗಿರುವುದು; ಒಗಟು ಸಂಕ್ಷಿಪ್ತವಾಗಿರುವುದು ರೂಢಿ. ಈ ಹಿನ್ನೆಲೆಯಲ್ಲಿ ಒಂದು ವಿಶಿಷ್ಟ ಮಾದರಿ: ಒಂದೂರಲ್ಲಿ ಒಬ್ಬ ಮನುಷ್ಯ ಇದ್ದ. ಅವನು ಪಕ್ಕದ ಊರಿನವನೊಬ್ಬನಿಗೆ ಸಾಲವಾಗಿ ಹಣ ಕೊಟ್ಟಿದ್ದ. ಸಾಲ ಹಿಂತಿರುಗಿ ಕೊಡದಿದ್ದ ಕಾರಣ ಹಣ ಕೇಳಲು ಊರಿಗೆ ಹೋದ. ಮನೆಯಲ್ಲಿ ವಿಚಾರಿಸಲಾಗಿ ತನ್ನ ತಂದೆ ಊರಿನಲ್ಲಿಲ್ಲವೆಂದು ಅವಳು ಹೇಳಿದಳು. ಎಲ್ಲಿಗೆ ಹೋಗಿದ್ದಾರೆಂದು ಕೇಳಿದ. ಅವಳು 'ಅಲಿಬಿಲಿ ಸಂತೆಗೆ, ಗಿಲಿಗಿಲಿ ತೆಗೆದುಕೊಂಡು ಹೋಗಿದ್ದಾರೆ' ಎಂದು ಹೇಳಿದಳು. 'ಯಾವಾಗ ಬರುತ್ತಾರೆ? ಇವತ್ತು ಬರುತ್ತಾರೆಯೇ?' ಎಂದು ಕೇಳಿದ. ಅವಳು, 'ಬಂದರೆ ಬರುವುದಿಲ್ಲ, ಬರದಿದ್ದರೆ ಬರುತ್ತಾರೆ' ಎಂದಳು. ಈ ಮಾತಿನಿಂದ ಆತ ಆಶ್ಚರ್ಯಗೊಂಡು 'ನೀನೇನು

ಮಾಡುತ್ತಿದ್ದೀಯೆ?' ಎಂದು ಕೇಳಿದ. ಅದಕ್ಕೆ ಅವಳು 'ತಲೆ ಕಡಿದು ಒಲೆಮೇಲೆ ಹಾಕಿ ಕಾಲುಚಾಚಿ ಕೂತಿದ್ದೀನಿ' ಎಂದು ಹೇಳಿದಳು. ಅದಕ್ಕೆ ಅವನು ಭಯ, ಆಶ್ಚರ್ಯಹೊಂದಿ 'ಇದರ ಅರ್ಥವೆಲ್ಲಾ ಸರಿಯಾಗಿ ಹೇಳಿದರೆ ನಿಮ್ಮಪ್ಪ ಕೊಡಬೇಕಾದ ಹಣ ಬಿಟ್ಟುಬಿಡುತ್ತೇನೆ' ಎಂದ. ಆಗ ಅವಳು ಎಲ್ಲಾ ಹೇಳಿದಳು.

ಉತ್ತರ: ಹೊಳೆಯಾಚೆಯ ಸಂತೆ - ಚರಕದಲ್ಲಿ ತೆಗೆದ ನೂಲು ಮಾರುವುದು - ಹೊಳೆ ಬರದಿದ್ದರೆ ಬರ್ತ್ತಾನೆ, ಹೊಳೆ ಬಂದರೆ ಬರಲ್ಲ - ಜೋಳದ ತೆನೆ ಕತ್ತರಿಸಿ ಒಲೆಯಮೇಲೆ ಹುರಿಯಕ್ಕೆ ಹಾಕುವುದು - ಬಾಣಲೆಗೆ ಕವಗಡ್ಡಿ ಸಿಕ್ಕಿಸಿ ಕೂರುವುದು.

ಪದತಂತ್ರದ ಮೂಲಕ ಸಮಾನಾಂತರವಾಗಿ ಇಡೀ ಕಥೆ ಸಾಗುತ್ತದೆ. ಉತ್ತರವು ಸಹಜವಾಗಿಯೇ ಲಂಬಿಸುತ್ತದೆ. ಇಂಥ ಒಗಟುಗಳು ದೊರೆತುದು ಹನಸೋಗೆಯ ವಕ್ತೃವಿನಲ್ಲಿ ಮಾತ್ರ.[18]

3. ಸಾಂಸ್ಕೃತಿಕ ಅಂಶಗಳು: ಬಳಸಿಕೊಂಡ ವಸ್ತು ಮತ್ತು ಒಗಟಿನ ಶರೀರ - ಎರಡರಲ್ಲಿಯೂ ಅವರ ಸಂಸ್ಕೃತಿ ವ್ಯಕ್ತವಾಗುತ್ತದೆ.

0.1 ಇವತ್ತು ಹುಟ್ಟಿದ ಕರು ನಿನ್ನೆ ಬಿತ್ತಿದ ಹೊಲ ಮೊನ್ನೇಲೇ ಮೇಯ್ತಿತ್ತು

ಉತ್ತರ :	ಮೊನ್ನೆ	-	ವೈಕುಂಠದಲ್ಲಿ ಲಕ್ಷ್ಮಿಯೂ ನಾರಾಯಣನೂ ಮಾತಾಡುತ್ತಿದ್ದರು
	ನಿನ್ನೆ	-	ವಾಯು ಎಲ್ಲಕಡೆ ಹರಡಿದ
	ಇವತ್ತು	-	ಈಗ ರಾಮಾಯಣ ಕೇಳುತ್ತಿದ್ದೇವೆ.

'ನಾಲಗೆ ' ಎಂಬ ಉತ್ತರ ನಿರೀಕ್ಷಿಸಲು 'ಚಿಕ್ಕ ಮನೇಲಿ ಹಾಸಿಗೆ ಹಾಸಿದೆ' ಎನ್ನಬಹುದು. ಆದರೆ, 'ಅಂಗಯ್ಯಗಲ ಪಂಚಾಂಗದಲ್ಲಿ ರಂಗಾಚಾರ್ಯರು ಪುರಾಣ ಹೇಳುತ್ತಾರೆ' ಎಂಬುದು ಅದನ್ನು ಇವರು ಇಟ್ಟ ರೀತಿ.

0.2 ಕೃಷಿಕರಾದ ಸಂಕೇತಿಗಳಿಗೆ ಅತಿ ಹತ್ತಿರದ ಅಡಿಕೆಮರ ವಸ್ತುವಾದುದು ಹೀಗೆ:

ಅಬ್ಬಬ್ಬ | ಆಳುದ್ದ ನೋಡು | ನೋಡಿದ ಬಡ್ಡಿ | ಹತ್ತೋದು ನೋಡು |
ಹತ್ತಿ ನಿಂಬೆಕಾಯ | ಕೊಯ್ಯೋದು ನೋಡು |
ಕುಯ್ದು ನಿಂಬೇಕಾಯ | ಅಗಿಯೋದು ನೋಡು |
ಅಗಿದ ನಿಂಬೇಕಾಯ | ಉಗಿಯೋದು ನೋಡು ||

0.3 ಅವರ ಅತಿ ವಿಶಿಷ್ಟ ಅಡುಗೆ, ಶಾವಿಗೆ. ಅವರ ಸಂಶೋಧನೆಯಿಂದ, ಬಿದಿರಿನಿಂದ ಮೊದಲುಗೊಂಡು ಶಾವಿಗೆ ಮಾಡುವ ಹಲವು ರೀತಿಯ ಯಂತ್ರಗಳು ಬಂದಿವೆ. ಅದು ಒಗಟಿಗೆ ಇಳಿದ ರೀತಿ:

ಅದರದರರಂಗಡಿ | ಬಿದಿರಿನ ಚಾವಡಿ |
ನಡುಗುತ ಬಂದನೆ | ಗಡ್ಡಜ್ಜೋಗಿ ||

'ಒದಗುತ ಬಂದಾ ಗಡ್ಡದ ಜೋಗಿ' ಎಂಬ ಪಾಠಾಂತರವೂ ಇದೆ. 'ಒದಗುವುದು' ಎನ್ನುವುದು 'ಚೆನ್ನಾಗಿ ಆಗುವುದು', 'ಹೆಚ್ಚುವುದು' ಎಂಬ ಅರ್ಥವುಳ್ಳ ಅತಿ ಪ್ರಚಲಿತವಾದ ಅಡುಗೆಮನೆಯ ಪಾರಿಭಾಷಿಕ ಪದ.

ನಿಸರ್ಗ, ಪ್ರಾಣಿ, ಸಸ್ಯ, ಮನುಷ್ಯನ ಅಂಗಗಳು, ಗೃಹವಸ್ತುಗಳು, ಆಹಾರಪದಾರ್ಥಗಳು, ಪೌರಾಣಿಕಸಂಗತಿಗಳು ಅವರ ಒಗಟುಗಳ ವಸ್ತುಗಳಾಗಿವೆ. ಸಾದೃಶ್ಯದ ಮೂಲಕವೇ ಸಮಸ್ಯೆಯ ಅಭಿವ್ಯಕ್ತಿ ಮತ್ತು ಪರಿಹಾರ ಆಗಬೇಕಾದುದರಿಂದ ಇಬ್ಬರಿಗೂ ಪರಿಚಿತವಾದ ವಸ್ತುವನ್ನೇ ಆರಿಸಿಕೊಳ್ಳಬೇಕಾದ ಮಿತಿ ಇಲ್ಲಿನದು. ಆದುದರಿಂದಲೇ ಅಮೂರ್ತವಾದುದರ, ಅಗ್ರಾಹ್ಯವಾಗಬಹುದಾದುದರ ಬಳಕೆ

[18] *ರಾಜಮ್ಮ, ೭೦, ಗೃಹಿಣಿ, ಹನಸೋಗೆ, ಮೈಸೂರು ಜಿಲ್ಲೆ*

ಇಲ್ಲಿ ಹೆಚ್ಚಾಗಿ ಕಾಣುವಂತಿಲ್ಲ. ಭಾಷೆಯನ್ನು ದುಡಿಸಿಕೊಳ್ಳುವ ಶಕ್ತಿ ಒಂದು ಕಡೆಯಾದರೆ ಕಲ್ಪಕತೆ ಮತ್ತೊಂದು ಕಡೆ ಕೆಲಸಮಾಡುವುದನ್ನು ಇಲ್ಲಿ ಗುರುತಿಸಬಹುದು. ಇಲ್ಲಿ ಮನೋರಂಜನೆಯ ಪ್ರಯೋಜನಕ್ಕಿಂತಲೂ ಒಗಟಿನ ಸ್ವರೂಪವೇ ಮಹತ್ವದ್ದೆಂಬುದನ್ನು ಮರೆಯುವಂತಿಲ್ಲ. "ಕಾವ್ಯ ಮತ್ತು ಕಾವ್ಯಾತೀತ ಸತ್ಯದರ್ಶನವಾಗುವುದು ಅದರ ಮಾಟದಿಂದಲೇ."[19] ಸಂಕೇತಿ ಒಗಟುಗಳು ತಮ್ಮ ವೈಶಿಷ್ಟ್ಯಗಳ ನಡುವೆಯೂ ಸರ್ವಸಾಮಾನ್ಯ ಲಕ್ಷಣಗಳಿಂದ ಹೊರತಾಗಿಲ್ಲ ಎಂಬುದು ಮೇಲಿನ ನಿದರ್ಶನಗಳಿಂದ ಸ್ಪಷ್ಟವಾಗುತ್ತದೆ.

ಇತರರಲ್ಲಿ ಕಾಣುವ ಕ್ರಮಬದ್ಧ ಕ್ರೀಡಾಶೀಲತೆಯಾಗಲೀ ನಂಬಿಕೆಮೂಲದ ಕ್ರಿಯಾತ್ಮಕ ಬಳಕೆಯಾಗಲೀ ಸಂಕೇತಿಗಳಲ್ಲಿಲ್ಲದಿದ್ದರೂ ಅದು ಅವರಿಗೆ ಗ್ರಾಹ್ಯವಾದದ್ದು ಅದರ ಬೌದ್ಧಿಕಗುಣದಿಂದ. ಅವರಿಗೆ ಸಾಂಸ್ಕೃತಿಕ ಅಗತ್ಯವಾಗಿದ್ದ ಕ್ರೀಡಾಸಮಯ ಮತ್ತು ಕ್ರೀಡಾಅವಧಿಗಳ ನಮ್ಯತೆ ಇಲ್ಲಿ ಸಾಧ್ಯವಾದುದರಿಂದಲೇ ಅದನ್ನು ಮುಕ್ತವಾಗಿ ಸ್ವೀಕರಿಸಿದ್ದಾರೆ ಮತ್ತು ಕ್ರೀಡಾನಿಯಮಗಳ ಚೌಕಟ್ಟಿನಲ್ಲಿಯೂ ಇರದೆ ಹೊರಗೆ ಉಳಿಯಬಲ್ಲವರಾಗಿದ್ದಾರೆ. ಇವರ ಒಗಟುಗಳ ವೈವಿಧ್ಯಪೂರ್ಣ ಕ್ರಿಯಾಶರೀರ, ಭಾಷೆ, ಲಯ, ವಸ್ತುವೈವಿಧ್ಯ ಮತ್ತು ನಾವೀನ್ಯ, ಸಾಂಸ್ಕೃತಿಕ ಅಭಿವ್ಯಕ್ತಿ - ಇವುಗಳಲ್ಲಿ ಈ ಸಮುದಾಯದ ಛಾಪು ಎದ್ದುಕಾಣುವಂಥದು. ಗಾದೆ ಮತ್ತು ಒಗಟುಗಳು ಮನುಷ್ಯಸಮಾಜದ ಸಾರ್ವತ್ರಿಕ ಸಮಾನಪ್ರವೃತ್ತಿಗಳ ಅಭಿವ್ಯಕ್ತಿಗಳೂ ಆದುದರಿಂದ 'ಸಂಕೇತಿತನ'ವನ್ನು ಇವುಗಳಲ್ಲಿ ಹೆಚ್ಚು ಲಂಬಿಸುವಂತಿಲ್ಲ. ಅನ್ಯಸ್ವೀಕಾರಗಳಿರುವಂತೆಯೇ, ಸಮಾನಪರಿಸರದಿಂದಾಗಿ ಅವರಲ್ಲಿಯೇ ಸಾರ್ವತ್ರಿಕ ಲಕ್ಷಣಗಳ ಒಗಟುಗಳು ಹುಟ್ಟಿದುದಕ್ಕೂ ಅದು ವಿವರಣೆಯಾಗುತ್ತದೆ.

ಊ. ಸಂಕೇತಿ 'ಪಾಟ್$_s$'ಗಳು :

ಸಂಕೇತಿ ಸಮುದಾಯವು ತಮಿಳುನಾಡಿನಿಂದ ಕನ್ನಡನಾಡಿಗೆ ವಲಸೆಬಂದ ಬ್ರಾಹ್ಮಣರ ಒಂದು ಗುಂಪು. ತಮಿಳುನಾಡಿನ ಸಂಕೇತಿಗಳಲ್ಲಿ ಬಳಕೆಯಲ್ಲಿರುವುದಕ್ಕಿಂತ ಬಹುಹೆಚ್ಚಿನ ಸಂಖ್ಯೆಯ ಹಾಡುಗಳು ಕರ್ನಾಟಕದ ಸಂಕೇತಿಗಳಲ್ಲಿವೆ. ಸಂಕೇತಿಗಳ ಸಂಪ್ರದಾಯಗೀತೆಗಳ ಸ್ವರೂಪವನ್ನು ಅವಲೋಕಿಸುವುದು ಇಲ್ಲಿನ ಉದ್ದೇಶವಾಗಿದೆ.

1. **ಸನ್ನಿವೇಶ :** ಸಂಕೇತಿಗಳು ಬಳಸುವ ಹಾಡುಗಳ ಹಿನ್ನೆಲೆ ಮತ್ತು ಸನ್ನಿವೇಶದ ಪರಿಚಯವನ್ನು ಮಾಡಿಕೊಳ್ಳುವುದು ಯುಕ್ತ.

0.1 ಸಂಪ್ರದಾಯಗೀತೆಗಳು - ದಾಸರಪದಗಳು, ವಾಗ್ಗೇಯಕಾರರ ಕೃತಿಗಳು, ಯಕ್ಷಗಾನ ಕಾವ್ಯಗಳು, ಸೃಜನಶೀಲ ಕೃತಿಗಳ ಆಯ್ದಭಾಗಗಳು - ಹೀಗೆ, ಹಾಡಬಹುದಾದ ಎಲ್ಲವನ್ನೂ ಒಳಗೊಳ್ಳುವಂತೆ ಸಂಕೇತಿಗಳಲ್ಲಿ ಬಳಕೆಯಾಗುವ ಪದ 'ಪಾಟ್$_s$' ಎಂಬುದು. ಇವೆಲ್ಲವೂ ಸಂಪ್ರದಾಯಾಚರಣೆಗಳಲ್ಲಿ ಕ್ರಿಯಾತ್ಮಕವಾಗಿ ಬಳಕೆಯಾಗುವಂಥವು. 'ಶೋಭಾನೆಪದ', 'ಸಂಪ್ರದಾಯದ ಹಾಡು', 'ಜನಪದಗೀತೆ' ಎಂಬ ಪ್ರಯೋಗಗಳು ಇಲ್ಲಿ ಕಾಣುವುದಿಲ್ಲ.

0.2 ಸಂಕೇತಿ ವಕ್ತೃಗಳಿಂದಲೇ ಸಂಗ್ರಹಿಸಿದ ವಿಪುಲವಾದ ಪಾಟ್$_s$ಗಳು ಪ್ರಕಟಗೊಂಡಿವೆ.[20] ಪ್ರಸ್ತುತ ಅಧ್ಯಯನಕ್ಕಾಗಿ ಹತ್ತುಸಾವಿರ ಪುಟಗಳಷ್ಟು ಪಾಟ್$_s$ಗಳನ್ನು ಸಂಗ್ರಹಿಸಿದೆ.

0.3 ಕರ್ನಾಟಕದಲ್ಲಿ ಸಂಕೇತಿಗಳ ತಮಿಳುಹಾಡಿನ ಪರಂಪರೆ ಎಲ್ಲಿಯೂ ಉಳಿದುಬಂದಿಲ್ಲ. ಹಾಡುಗಳ ರಚನೆ, ಬಳಕೆ, ಪ್ರಸಾರ, ಸ್ವೀಕೃತಿಗಳಲ್ಲೆಲ್ಲಾ ಕನ್ನಡೀಕರಣವು ಪೂರ್ಣವಾಗಿ ಕಾಣಿಸುತ್ತದೆ. ಹಾಡುಗಳ ವಿನಿಮಯದ ಪರಿಣಾಮದಿಂದಾಗಿ ಹಳೆಯಮೈಸೂರಿನ ವಿವಿಧ ಬ್ರಾಹ್ಮಣ ಉಪಪಂಗಡಗಳ ಹಾಡುಗಳ ಬಹುಪಾಲು ಸಾಮಾನ್ಯೀಕರಣವಾಗಿದೆ. ದಕ್ಷಿಣದಲ್ಲಿ ಸಹಜವಾಗಿಯೇ ತಮಿಳುನಾಡಿನ ಪರಂಪರೆ ಇದೆ; ಆದರೆ ಅದು ಅಲ್ಲಿನ ಸರ್ವಬ್ರಾಹ್ಮಣ ಸಾಧಾರಣವಾಗಿದೆ. ಅಲ್ಲಿ ವ್ರತಗಳು ಇಲ್ಲದುದು ಹಾಗೂ ಹಬ್ಬಗಳು ಸರಳವಾದುದು ಹಾಡುಗಳ ಬಳಕೆಯ ಸಂದರ್ಭವನ್ನೇ ಮೊಟಕುಗೊಳಿಸಿ ಅದರ ಪ್ರಮಾಣ ಮತ್ತು ವೈವಿಧ್ಯವನ್ನು ಮಿತಗೊಳಿಸಿವೆ. ವಿವಾಹ, ನವರಾತ್ರಿ, ಮೈನೆರೆಯುವುದು ಇಂಥ ಸಂದರ್ಭಗಳು ಸಾರ್ವತ್ರಿಕ

---

19 ಪ್ರಜಾವಾಣಿ, ಸಾಪ್ತಾಹಿಕ ಪುರವಣಿ, ಒಗಟುಗಳು (ಸಮ್ಮುಖ), ಕೀರ್ತಿನಾಥ ಕುರ್ತಕೋಟಿ, ೨೮ನೆಯ ಜುಲೈ ೯೧.

20 ಮತಿಘಟ್ಟ ಕೃಷ್ಣಮೂರ್ತಿ, ಬಿ.ಎಸ್.ಸರೋಜ, ವಾಗೀಶ್ವರೀಶಾಸ್ತ್ರಿ, ಸಿ.ಎಸ್.ರಾಮಚಂದ್ರ ಇವನ್ನು ಸಂಗ್ರಹಿಸಿ ಪ್ರಕಟಿಸಿದ್ದಾರೆ.

ಸಾಮ್ಯದವಾದುದರಿಂದಲೇ, ಆ ಸಂದರ್ಭಗಳಿಗಷ್ಟೇ ಮಿತಗೊಂಡು ಬಳಕೆಯಾಗುತ್ತಿರುವ ಹಾಡುಗಳಲ್ಲಿಯೂ ಸಾಮ್ಯ ಇದೆ.

0.4 ಯಂತ್ರಗಳ ಬಳಕೆ, ಧಾರ್ಮಿಕ ಆಚರಣೆಗಳ ಅವಸಾನ, ಸಂಸ್ಕಾರಗಳ ಆಚರಣೆಯಲ್ಲಿನ ಸಂಕ್ಷಿಪ್ತತೆ ಇಲ್ಲವೆ ಕಣ್ಮರೆ, ಆಧುನಿಕ ವಿದ್ಯಾಭ್ಯಾಸ ಮತ್ತು ಜೀವನವಿಧಾನ, ಸ್ತ್ರೀ ವಿದ್ಯಾಭ್ಯಾಸ ಮತ್ತು ಉದ್ಯೋಗ - ಇವೆಲ್ಲವೂ ಕ್ರಮಕ್ರಮವಾಗಿ ಕಳೆದ ನಾಲ್ಕು ದಶಕಗಳಿಂದ ಪಾಟ್ಸ್‌ಗಳ ಬಳಕೆಯನ್ನು ಹಿಂದೆ ಸರಿಸುತ್ತಿವೆ. ಆ ಪರಂಪರೆ ಈಗ ಜೀವಂತವಾಗಿ ಉಳಿದಿರುವುದು ಬಹುಪಾಲು ವೃದ್ಧರಲ್ಲಿ; ಅವರ ಸಂಖ್ಯೆಯೂ ಈಗ ಹೆಚ್ಚಿಲ್ಲ.

0.5 ತೋಟದಲ್ಲಿ ದುಡಿಯುತ್ತಲೇ ವೇದಗಳನ್ನು ಕಲಿತ ಪುರುಷರಿಗೆ ಸಮಾನಾಂತರವಾಗಿ, ಸ್ತ್ರೀಯರು ಮನೆಗೆಲಸಗಳ ನಡುವೆಯೇ ಸಹಸ್ರಾರು ಹಾಡುಗಳನ್ನು ತಮ್ಮ ಹಿರಿಯರಿಂದಲೋ ಓರಗೆಯವರಿಂದಲೋ ಕಲಿತಿದ್ದಾರೆ. ಅದು ಎರಡು ರೀತಿಯಲ್ಲಿ ನಡೆದಿದೆ :

0.0.1 ವೈಯಕ್ತಿಕವಾಗಿ, ಮನೆಯಲ್ಲಿ ಹಿರಿಯರು ಹೇಳುವುದನ್ನು ಕೇಳಿದುದರಿಂದ.

0.0.2 ಸಾಮೂಹಿಕವಾಗಿ, ಏಕಾದಶೀಜಾಗರಣೆ ಇಲ್ಲವೆ ಹಪ್ಪಳ ಅರೆಯುವಂಥ ಸಂದರ್ಭಗಳಲ್ಲಿ ಹಾಡುಗಳ ಕೇಳುಗರಾಗಿಯೂ ಮೇಳದವರಾಗಿಯೂ ಸೇರಿರುವುದರಿಂದ. ಹಾಡು, ಅದರ ಅರ್ಥ, ಕ್ರಿಯಾವಿಧಾನ ಎಲ್ಲವೂ ಗ್ರಹಿಕೆಗೆ ದಕ್ಕಿರುವುದು ಈ ಮೌಖಿಕ ಪರಂಪರೆಯಿಂದಲೇ. 'ಪಾಟ್ಸ್‌ಗಳು' ಜೀವನ ಸ್ಥಿತ್ಯಂತರದ ಈ ಶತಮಾನದ ಸಂದರ್ಭದಲ್ಲಿ ಲಿಖಿತಗೊಳ್ಳತೊಡಗಿವೆ.

0.6 ಇತರ ಅಂಶಗಳನ್ನೂ ಇಲ್ಲಿ ಈ ಸಂಬಂಧದಲ್ಲಿ ನೋಡಬಹುದು :

0.0.1 ವಾಕ್ಪರಂಪರೆಯಿಂದ ಬಂದುದು, ವ್ಯಾಪಕವಾಗಿ ಜನಮನದಲ್ಲಿ ಉಳಿದುಬಂದುದು, ಯಾರ ಸ್ವಾಮ್ಯಕ್ಕೂ ಒಳಪಡದುದು, ಸಾಮೂಹಿಕ ಪುನರ್‌ಸೃಷ್ಟಿ ಲಕ್ಷಣವಿರುವುದು, ಭಾಷೆಯು ಜನಬಳಕೆಯದಾಗಿರುವುದು - ಈ ಲಕ್ಷಣಗಳ ಮಾನದಂಡದಿಂದ ಇವರಲ್ಲಿ ಬಳಕೆಯಲ್ಲಿರುವ ಸಂಪ್ರದಾಯಗೀತೆಗಳು ಜನಪದಗೀತೆಗಳ ಸಾಲಿನಲ್ಲಿ ಸೇರುತ್ತವೆ. ಅಂಕಿತಗಳಿರುವ ಹಾಡುಗಳು, ಕರ್ತೃತ್ವ ತಿಳಿದ ಹಾಡುಗಳು, ಪಲ್ಲವಿ ಅನುಪಲ್ಲವಿ ಉಳ್ಳ ಸಂಗೀತಸಾಧ್ಯ ರಚನೆಗಳು, ಪ್ರಸಿದ್ಧ ವಾಗ್ಗೇಯಕಾರರ ಕೃತಿಗಳೂ ಕ್ರಿಯಾತ್ಮಕವಾಗಿ ಬಳಕೆಗೊಳ್ಳುವುದು,[21] ಅಲ್ಲದೆ ದಾಸರ ಮತ್ತು ವಾಗ್ಗೇಯಕಾರರ ಅನುಕರಣೆ ಮೊದಲಾದ ಕೆಲವು ಲಕ್ಷಣಗಳುಳ್ಳ 'ಪಾಟ್ಸ್'ಗಳೂ ಸಂಪ್ರದಾಯಗೀತೆಗಳಂತೆಯೇ ಬಳಕೆಗೊಳ್ಳುತ್ತಿರುವುದರಿಂದ, ಆಗಾಗ ಸಂಪ್ರದಾಯಗೀತೆಗಳ ಜಾನಪದೀಯತೆಯು ಪ್ರಶ್ನೆಗೆ ಈಡಾಗುವುದೂ ನಡೆದಿದೆ.

0.0.2 ಸಂಪ್ರದಾಯಗೀತೆಗಳೂ ನಿರ್ದಿಷ್ಟ 'ಧಾಟಿ'ಗಳನ್ನು ಹೊಂದಿವೆ. ಕ್ಷೇತ್ರಕಾರ್ಯದ ಸಂದರ್ಭದಲ್ಲಿ, ಯಾವ ವಕ್ತೃವೂ ಶಾಸ್ತ್ರೀಯ ಸಂಗೀತದಂತೆ ಅವನ್ನು ಹಾಡಿದುದು ಕಾಣಲಿಲ್ಲ; ವೈವಿಧ್ಯಪೂರ್ಣವಾದ 'ಮಟ್ಟು'ಗಳಲ್ಲಿರುವ ಈ ಹಾಡುಗಳನ್ನು ಧ್ವನಿಮುದ್ರಿಸಿಕೊಳ್ಳಲಾಗಿದೆ. ಈ ಹಾಡುಗಳಿಗೆ ತಾಳವಾದನಗಳ ಹಿಮ್ಮೇಳವಾಗಲಿ ಶ್ರುತಿ ಸಂಯೋಜನೆಯಾಗಲಿ ಇರುವುದಿಲ್ಲ. (ಇವರಲ್ಲಿ ಯಕ್ಷಗಾನವೂ ಅಂಥ ಯಾವ ಹಿಮ್ಮೇಳವಿಲ್ಲದೆ ಹಾಡಲ್ಪಡುತ್ತದೆ). ರಾಗತಾಳ ನಿಬದ್ಧ ರಚನೆಗಳು ದಾಸರ ಮತ್ತು ವಾಗ್ಗೇಯಕಾರರ ಅನುಕರಣೆಯಿಂದಾದ ಹಾಡುಗಳಲ್ಲಿವೆ. ಛಂದಸ್ಸಿಗೆ ಸಂಬಂಧಿಸಿದಂತೆ ಹವ್ಯಕರ ಶೋಭಾನೆ ಹಾಡುಗಳ ಬಗೆಗೆ ಹೇಳಿದ ಮಾತುಗಳು ಇಲ್ಲಿಗೂ ಒಪ್ಪುತ್ತವೆ. "ಈ ಹಾಡುಗಳಲ್ಲಿ ಬರುವ ಸುಪ್ರಾಸ (ದ್ವಿತೀಯಾಕ್ಷರ ಪ್ರಾಸ), ಅನುಪ್ರಾಸ, ಒಳಪ್ರಾಸ, ಅಂತ್ಯಪ್ರಾಸಗಳು, ಪಲ್ಲವಿ-

[21] ಬ್ರಾಹ್ಮಣರೆಲ್ಲರ ಸಂಪ್ರದಾಯಗೀತೆಗಳಿಗೂ ಈ ಮಾತು ಅನ್ವಯಿಸುತ್ತದೆ. ವಾಗೀಶ್ವರೀಶಾಸ್ತ್ರಿಯವರಲ್ಲಿಯೂ ಸಂಕೇತಿ ಕರ್ತೃಗಳ ವಿವರ ಬಂದಿದೆ. ನೋಡಿ: ಹೃದಯಸಂಪುಟ, ಸಂಪ್ರದಾಯದ ಹಾಡುಗಳು (ಪ್ರ.೩), ವಾಗ್ದೇವಿ ಕಲಾನಿಕೇತನ, ಬೆಂಗಳೂರು, ೧೯೮೫, ಪು.೨೭೫-೨೮೯

ಅನುಪಲ್ಲವಿಗಳು, ವರಣ, ಯತಿ, ಗತಿ, ಆವೃತ್ತಿ, ಮಕುಟಪಾದಗಳು ಒಂದೊಂದು ಹಾಡಿಗೂ ರೂಪುಗೊಂಡ ವಿಶಿಷ್ಟಧಾಟಿಗಳು - ಈ ಹಾಡುಗಳಿಗೆ ವಿಶೇಷ ರಮ್ಯತೆಯನ್ನು ಉಂಟುಮಾಡುತ್ತವೆ. ಧಾಟಿಗಳಿಂದಲೇ ಛಂದಸ್ಸು ಬೋಧ್ಯವಾಗುತ್ತದೆ. 'ಧಾಟಿ' ಎಂಬುದು ಹಾಡಿನ ಗತಿಗೆ ಅನುಗುಣವಾಗಿರುವ ತನ್ನದೇಆದ ಗೇಯ ಪದ್ಧತಿ ... [22]

0.0.3 ಸಂಸ್ಕೃತಭಾಷೆಯಲ್ಲಿಯೇ ಇರುವ ಮಂತ್ರಗಳ ಮಾಧ್ಯಮದಿಂದ ನಡೆಯುತ್ತಿದ್ದ ಎಲ್ಲ ಆಚರಣೆಗಳ ಜಾಗದಲ್ಲಿ 'ಮಂತ್ರಾಧಿಕಾರವಿಲ್ಲದ' ಸ್ತ್ರೀಯರಿಗಾಗಿ ಪೌರಾಣಿಕ ಶ್ಲೋಕಗಳು ಬಳಕೆಗೆ ಬಂದವು. ಮುಂದೆ, ಸ್ತ್ರೀಯರು ತಮ್ಮ ಇತಿಹಾಸ, ಪುರಾಣಗಳ ಜ್ಞಾನವನ್ನು ಹಾಡುಗಳ ಮೂಲಕ ಕನ್ನಡದಲ್ಲಿ ಅಭಿವ್ಯಕ್ತಿಸಿದರು. ಸಂಸ್ಕೃತಭಾಷೆಯ ಪ್ರಭಾವವು ಇದ್ದೇ ಇರುತ್ತಿದ್ದ ವಾತಾವರಣದಲ್ಲಿ ಮೂಡಿದ ಹಾಡುಗಳಲ್ಲಿ ಆ ಭಾಷೆಯ ಪದಗಳೂ ಕಾಣಿಸಿಕೊಂಡುದು ಸಹಜವೇ. ಬ್ರಾಹ್ಮಣರ ಆಡುಭಾಷೆಯು ಗ್ರಂಥಸ್ಥಭಾಷೆಗೆ ಹೆಚ್ಚು ಹತ್ತಿರವಾಗಿರುವುದು ಮತ್ತು, ಗ್ರಂಥಸ್ಥವಾದುದು ಸಾರ್ವತ್ರಿಕ ನಿಕಟತೆ ಪಡೆದಿರುವುದರಿಂದಲೇ ಸಂಪ್ರದಾಯಗೀತೆಗಳ ಭಾಷಾರಮ್ಯತೆಯು ಅನುಭವಕ್ಕೆಬಾರದೆ ಹೋಗಿದೆ. ಜನಪದಭಾಷೆ ಎಂದರೆ ಗ್ರಾಮ್ಯಭಾಷೆ ಎಂಬ ಪೂರ್ವಕಲ್ಪನೆಯೂ ಇದಕ್ಕೆ ಕಾರಣವಾಗಿದೆ.

0.0.4 ಸಂಪ್ರದಾಯಗೀತೆಗಳು ಎಂಬ ಹೆಸರು ಬಂದುದೇ ಈ ಗೀತೆಗಳ ವಸ್ತು ಸಂಪ್ರದಾಯಾಚರಣೆಗಳಿಗೆ ಸಂಬಂಧಿಸಿದುದು ಎಂಬುದರಿಂದ. ಇಲ್ಲಿ ಭಕ್ತಿ, ಸಂಭ್ರಮ, ನೀತಿ ಇದೆ. ಆದರೆ ಸೃಜನಶೀಲತೆ ಮತ್ತು ರಸಾಸ್ವಾದನೆಯ ಗಾಢಸಾಧ್ಯತೆಯುಳ್ಳ ವ್ಯಕ್ತಿಸಂಬಂಧಗಳು, ಒಳತೋಟಿಗಳು ಮತ್ತು ಲೌಕಿಕತೆಯು ಈ ಗೀತೆಗಳಲ್ಲಿ ಕಾಣದಿರುವುದೂ ರಮ್ಯಾನುಭವವನ್ನು ತೆಳುಗೊಳಿಸಿದೆ. ಈ ಸಮುದಾಯದ ಜೀವನವಿಧಾನ ಮತ್ತು ಇಲ್ಲಿನ ಒತ್ತು ಪಾರಮಾರ್ಥಿಕವಾದುದು ಎಂಬುದರಿಂದಾಗಿಯೇ ಅವರ ಗೀತೆಗಳು ಅದನ್ನೇ ಅಭಿವ್ಯಕ್ತಿಸಿದವು. ಆದರೂ ಪ್ರತಿಭಾಮೂಲವಾದ ಭಾವನಿರ್ಭರತೆಗೇನೂ ಇಲ್ಲಿ ಕುಂದು ಬಂದಿಲ್ಲ.

0.0.5 ಷೋಡಶಸಂಸ್ಕಾರಗಳು, ಹಬ್ಬಗಳು, ದೈನಂದಿನಜೀವನ, ವ್ರತಗಳು ಎಲ್ಲವೂ ಹಾಡಿನ ಮಾಧ್ಯಮವನ್ನು ಬಳಸಿಕೊಂಡುದು ಅದರ ಕ್ರಿಯಾತ್ಮಕತೆಯ ವ್ಯಾಪ್ತಿಯನ್ನು ತಿಳಿಸುತ್ತದೆ. ಬೀಸುವಾಗ, ಕುಟ್ಟುವಾಗಕೂಡ ಬಳಕೆಯಾಗುವುದು ಈ ಭಕ್ತಿಗೀತೆಗಳೇ.

0.0.6 ಮಧ್ಯದೇಶ, ಹಾಸನಸೀಮೆ, ಬೆಟ್ಟದಪುರ, ಲಿಂಗದಹಳ್ಳಿ ಮತ್ತು ಮತ್ತೂರಿನ ಪ್ರಚಲಿತ ಹಾಡುಗಳಲ್ಲಿ ಸಾಮ್ಯ ಇರುವುದಕ್ಕೆ ಅವುಗಳಲ್ಲಿನ ಪ್ರಸರಣಗುಣವೇ ಕಾರಣವಾಗಿದೆ. ಮತ್ತೂರು ಹವ್ಯಕರೊಡನೆ, ಮಧ್ಯದೇಶವು ಕರ್ನಾಟಕರು ಮತ್ತು ತೆಲುಗುಬ್ರಾಹ್ಮಣರೊಡನೆ ಮಾಡಿಕೊಂಡಿರುವ ಪರಸ್ಪರ ವಿನಿಮಯವೂ ಈ ಪ್ರಸರಣ ಗುಣದಿಂದಾಗಿಯೇ ಆದುದು. ಕರ್ನಾಟಕದ ಸಂಕೇತಿಗಳ ಪ್ರಾದೇಶೀಕರಣದಿಂದಾಗಿ ಅವರ ಸಂಪ್ರದಾಯಗೀತೆಗಳು ದಕ್ಷಿಣದಿಂದ ಪೂರ್ಣವಾಗಿ ಬೇರ್ಪಟ್ಟಿವೆ.

0.0.7 ಸಾಹಿತ್ಯದ ಸೃಷ್ಟಿಕಾರ್ಯವು ಸಾಮೂಹಿಕ ಪ್ರಕ್ರಿಯೆಯಾಗುವುದು ಅಸಾಧ್ಯವಾದುದು; ಹಾಗೆ ಆಗುವುದು ಪುನರ್‌ಸೃಷ್ಟಿ ಮಾತ್ರ. ಸಂದರ್ಭದ ಆವೇಶ ಮತ್ತು ಸ್ಫೂರ್ತಿಯಿಂದಲೇ ಸಾಹಿತ್ಯವು ನಿಂತನೆಲೆಯಲ್ಲಿ ಸೃಷ್ಟಿಯಾಗುತ್ತಿದ್ದ ನಿದರ್ಶನಗಳು ಇಲ್ಲಿ ದೊರೆತಿವೆ. ಸ್ತುತಿಗೀತೆಗಳು ಮತ್ತು ಬೀಗರನ್ನು ಜರೆಯುವ ಹಾಡುಗಳು ಅಂಥ ಎದ್ದುಕಾಣುವ ಸಂದರ್ಭಗಳು. ಈ ಸೃಜನಶೀಲ ಗುಣದಿಂದಲೇ ಪುನರ್‌ಸೃಷ್ಟಿಯೂ ಆಗುತ್ತದೆ.

ಈಗ ಇವರ ಸಂಪ್ರದಾಯಗೀತೆಗಳಲ್ಲಿ ದೊರೆಯುವ ಪಾಠಭೇದಗಳು ಅದನ್ನೇ ಸಮರ್ಥಿಸುತ್ತವೆ.

* ಇವರ ಸಂಪ್ರದಾಯಗೀತೆಗಳು ಗಂಡಸರು, ಹೆಂಗಸರು ಮತ್ತು ಮಕ್ಕಳೆಲ್ಲರೂ ತೊಡಗಿಕೊಂಡ ಅನಿವಾರ್ಯ

[22] ನೋಡಿ: ಹವ್ಯಕರ ಶೋಭಾನೆಗಳು (ಪ್ರ.೨), ಕೇಶವಭಟ್ಟ ಟಿ., ಚಿರಸಾಹಿತ್ಯ ಪ್ರಕಾಶನ, ಬೆಂಗಳೂರು, ೧೯೮೬, ಪು.೫೧೪.

ಸೃಷ್ಟಿಗಳಾಗಿವೆ.

* ಇವು, ಇವರ ಸಂಪ್ರದಾಯ, ನೀತಿ ಮತ್ತು ಜೀವನವಿಧಾನವನ್ನು ಪ್ರಸರಿಸುವ ಪ್ರಬಲ ಸಮೂಹ ಮಾಧ್ಯಮಗಳಾಗಿವೆ.
* ಇವರು, ಹಾಡುಗಳಲ್ಲಿ ತಮ್ಮ ಸಮಾಜದ ಆಶೋತ್ತರಗಳನ್ನು ಲಕ್ಷಣಮುಕ್ತ ರಚನೆಗಳಲ್ಲಿ ಅಭಿವ್ಯಕ್ತಿಸಿದ್ದಾರೆ.
* ಮುಖ್ಯವಾದುದು ಈ ಹಾಡುಗಳ ಪ್ರಚಲಿತತೆ. ಯಾವುದೇ ಸಾಹಿತ್ಯವನ್ನು 'ಜನಪದ'ವೆನಿಸಲು ಇದೊಂದೇ ಲಕ್ಷಣವೇ ಸಮರ್ಥವಾದುದೆನ್ನುವ ಅಭಿಪ್ರಯಾವೂ ಇದೆ.

0.7 ಬ್ರಾಹ್ಮಣರ ಪರಂಪರಾಗತ ಗೀತೆಗಳನ್ನು ಕುರಿತಂತೆ ನಡೆದಿರುವ ವಿಭಿನ್ನ ವರ್ಗೀಕರಣ ಪ್ರಯತ್ನಗಳು, ಹಾಡಿನ ವಿಧಗಳು, ಬಳಕೆಯ ಉದ್ದೇಶಗಳು, ಹಾಡುಗಳ ಲಕ್ಷಣ-ವಿವರಣೆಗಳು ಸಂಕೇತಿಗಳ ಬಳಕೆಯ ಗೀತೆಗಳಿಗೂ ಅನ್ವಯವಾಗುತ್ತವೆ.[23]

2. **ಲಕ್ಷಣಗಳು :** ಸಂಕೇತಿ ಪಾಟ್‌ಗಳ ಕೆಲವು ಲಕ್ಷಣಗಳನ್ನು ಇಲ್ಲಿ ಪರಿಭಾವಿಸಿದೆ:

0.1 ಸಂಕೇತಿಗಳಲ್ಲಿ ಹೆಂಗಸರು ಮಾತ್ರ ಜನಪದಗೀತೆಗಳನ್ನು ಹಾಡುತ್ತಾರೆ. ತೀರಾ ಅಪರೂಪಕ್ಕೆ ಗಂಡಸರೂ ಹಾಡುವ ನಿದರ್ಶನ ದೊರೆತಿದೆ. ಆದರೆ ಅದು ಕ್ರಿಯಾತ್ಮಕವಾಗಿ ಅಲ್ಲ. ಕೋಲಾಟದ ಪದ ಇಲ್ಲಿಲ್ಲ. ಲಾವಣಿಯು ಅಪರೂಪದ ಅನುಕರಣೆ ಮಾತ್ರ.

0.2 ಶುದ್ಧ ಮನೋರಂಜನೆಯ ಉದ್ದೇಶದ ಹಾಡುಗಳ ಪ್ರಮಾಣವು ಸುಮಾರು ಶೇಕಡ ಐದರಷ್ಟು ಮಾತ್ರ. ಉಳಿದೆಲ್ಲವೂ ಧಾರ್ಮಿಕ ಕ್ರಿಯಾತ್ಮಕ ಉದ್ದೇಶದ ಹಾಡುಗಳೇ.

0.3 ಸುಮಾರು ಎಂಬತ್ತು ವರ್ಷಗಳ ಹಿಂದಿನ, ಗೊರೂರರ ಅನುಭವ ಇದು: ". . . ನನ್ನ ಬಾಲ್ಯದಲ್ಲಿ ಒಬ್ಬ ಹೆಂಗಸು ಬೆಳಗಿನಿಂದ ರಾತ್ರಿವರೆಗೆ, ಯಾವುದೇ ಸಂಗತಿ ನಡೆಯಲಿ, ಅದಕ್ಕೆ ಹೊಂದಿದಂತೆ ಒಂದು ಹಾಡು, ಒಂದು ನುಡಿ ಹೇಳುತ್ತಿದ್ದಳು. ಇದರಿಂದ ಅವಳು ತನ್ನ ತಾಪತ್ರಯವನ್ನು ಮರೆತು, ಅನಾಸಕ್ತಳಾಗಿ ಬೇರೆ ಸ್ತರಕ್ಕೆ ಏರಿ, ಒಂದು ವಿಧವಾದ ಅಲೌಕಿಕ ನೆಮ್ಮದಿಯನ್ನು ಹೊಂದಿರುವುದು ಕಾಣುತ್ತಿದ್ದಿತು ..."[24] ಈ ಲಕ್ಷಣವು ಇಂದಿಗೂ ಅದರ ಪ್ರಮಾಣವು ಇಳಿಮುಖವಾಗಿದ್ದರೂ - ಸಂಕೇತಿ ಸಮುದಾಯದಲ್ಲಿ ಕಾಣಸಿಗುತ್ತದೆ.

0.4 ಮರಣ ಇಲ್ಲವೆ ಅಪರಕರ್ಮಗಳ ಸಂದರ್ಭಕ್ಕಾಗಿ ಯಾವ ಹಾಡುಗಳೂ ಬಳಕೆಯಾಗುವುದಿಲ್ಲ.

0.5 'ಕೆಲಸದ ಹಾಡೂ' ಸ್ತುತಿಗೀತೆಯೇ. ಇವರು ಕೃಷಿಕರಾದರೂ 'ವ್ಯವಸಾಯಗೀತೆ' ಇಲ್ಲಿಲ್ಲ.

0.6 ಇವರಲ್ಲಿ ಬಳಕೆಯಲ್ಲಿರುವ ಯಕ್ಷಗಾನದ ಹಾಡುಗಬ್ಬಗಳು ಕರ್ನಾಟಕ ಶಾಸ್ತ್ರೀಯಸಂಗೀತದ ಪೂರ್ವಸ್ಥಿತಿಯ ಸಂಪ್ರದಾಯ ಎಂಬುದು ಗಮನಾರ್ಹವಾದುದು. ಸಾಹಿತ್ಯಿಕವಾಗಿ ಇವು ಮೇಲುಮಟ್ಟದವು. ವಿವಿಧ ಮೂಲಮಟ್ಟುಗಳು, ನಾಟಕೀಯತೆ ಮತ್ತು ಚೈತನ್ಯಶೀಲತೆಯಿಂದಾಗಿ ಹೆಚ್ಚು ಆಕರ್ಷಕವಾಗಿವೆ. ಭಾವವೈವಿಧ್ಯದ ಗಾಢ ಅನುಭವವೂ ಇಲ್ಲಿ ಆಗುತ್ತದೆ.

0.7 ಮಕ್ಕಳ ಹಾಡುಗಳಲ್ಲಿ ಸೇರಬಹುದಾದ ಆಟದಹಾಡುಗಳಲ್ಲಿ ಇವರಿಗೇ ವಿಶಿಷ್ಟವಾದವು ಇಲ್ಲವೆನಿಸುತ್ತದೆ. ಉದಾಹರಣೆಗೆ:

---

[23] ಅ. ಹವ್ಯಕರ ಶೋಭಾನೆಗಳು

ಆ. ಹೃದಯಸಂಪುಟ (ಸಂಪ್ರದಾಯದ ಹಾಡುಗಳು)

ಇ. ಗೃಹಿಣೀ ಗೀತೆಗಳು (ಕನ್ನಡ ಜನಪದ ಸಾಹಿತ್ಯ ಭಂಡಾರ, ಸಂಪುಟ-೨), ಮತಿಘಟ್ಟ ಕೃಷ್ಣಮೂರ್ತಿ, ಬೆಂಗಳೂರು-೯, ೧೯೮೨, ಪು..೧೧೮೪

ಈ. ಸಂಪ್ರದಾಯದ ಹಾಡುಗಳು (ಪ್ರ.೨), ಸರೋಜ ಬಿ.ಎಸ್., ಕಸಾಪ, ೧೯೮೪

[24] ಹೃದಯ ಸಂಪುಟ, ಪು.XVI

"ಅವಲಕ್ಕಿ | ಪವಲಕ್ಕಿ | ಕಂಚಿನ | ಮಿಣಿಮಿಣಿ |
ಢಾಂ | ಢೂಂ | ಠಸ್ಸ | ಪಿಸ್ಸ | ಕೊಂಯ | ಕೊಟರ್|"
ಅಥವಾ
ಕಣ್ಣಾಮುಚ್ಚೇ | ಕಾಡೇಗೂಡೇ| . . . ಇತ್ಯಾದಿಗಳು ಇವರಲ್ಲಿ ಗಾಢವಾಗಿ ಬಳಕೆಯಲ್ಲಿರುವ ಕೆಲವು.

0.8 ಅದ್ವೈತಿಗಳಿಗೆ ಸಹಜವಾದ ಬಹುದೇವತಾ ಸ್ತುತಿಗಳು ಹಾಡುಗಳಲ್ಲಿಯೂ ಇವೆ. ಶಂಕರಾಚಾರ್ಯರ ಬಗೆಗಿನ ಹಾಡುಗಳ ಬಳಕೆ ಇರುವಂತೆಯೇ ಮಧ್ವಾಚಾರ್ಯ, ಶ್ರೀಪಾದರಾಯರು ಮತ್ತು ರಾಘವೇಂದ್ರ ಸ್ವಾಮಿಗಳನ್ನು ಕುರಿತ ಹಾಡುಗಳೂ ಶ್ರೀವೈಷ್ಣವಪರವಾದ ಹಾಡುಗಳೂ ಬಳಕೆಯಲ್ಲಿರುವುದು ಅವರ ಮೂಲ ಮುಕ್ತಧೋರಣೆ ಮತ್ತು ಸ್ವೀಕರಣ ಗುಣಗಳೆರಡರ ದೃಷ್ಟಿಯಿಂದಲೂ ಮಹತ್ತ್ವವಾದುದು. ಶಂಕರರ ಅನುಯಾಯಿಗಳಾದರೂ ". . . ಈ ಪರಿಯ ಮಹಿಮೆಯೂ ಇನ್ಯಾವ ಯತಿಗಳಿಗುಂಟು ಈಡಿಲ್ಲ ಓಗುರು ಶ್ರೀರಾಘವೇಂದ್ರರಿಗೇ . . ." ಎಂದು ಹಾಡಬಲ್ಲ ಮುಕ್ತತೆ ಇವರಲ್ಲಿದೆ.

0.9 ಭಕ್ತಿಮಾರ್ಗದ ಸ್ತುತಿಗೀತೆಗಳೂ, ಕರ್ಮಮಾರ್ಗದ ವ್ರತಗೀತೆಗಳೂ, ಜ್ಞಾನಮಾರ್ಗದ ತತ್ತ್ವಗೀತೆಗಳೂ ಇವರ ಸಂಪ್ರದಾಯಗೀತೆಗಳ ಭಾಗಗಳಾಗಿವೆ. ವಿವಾಹಾದಿ ಸಂದರ್ಭಗಳ ಲಘುಗೀತೆಗಳ ಪ್ರಮಾಣವೂ ಸಣ್ಣದಲ್ಲ. ಆದರೆ, ದಾಸಪಂಥದ ಪ್ರಭಾವದಿಂದಾಗಿ ಬಹುಪಾಲು ಸಂಪ್ರದಾಯಗೀತೆಗಳು ಭಕ್ತಿ ಮತ್ತು ಮೋಕ್ಷದ ಪರಿಭಾಷೆಯಲ್ಲಿರುವುದು ಶಂಕರಾನುಯಾಯಿಗಳಾದ ಈ ಸಮುದಾಯದಲ್ಲಿಯೂ ನಡೆದಿರುವುದಕ್ಕೆ, ವಿಶ್ವಸಾಮಾನ್ಯಗಳ ಸ್ವೀಕರಣ ಕಾರಣಗಳನ್ನಷ್ಟೇ ಕೊಡಬಹುದಾಗುತ್ತದೆ.

0.10 ತೆಲುಗು, ತಮಿಳು, ಮರಾಠಿ ಹಾಡುಗಳು ಬಳಕೆಯಲ್ಲಿರುವುದು ಮುಕ್ತ ಸ್ವೀಕರಣಗುಣದಿಂದಾಗಿ. ಅವರ ಬಳಕೆಯ ತಮಿಳುಹಾಡುಗಳೂ ಕರ್ನಾಟಕದಲ್ಲಿ ಆದ ಸ್ವೀಕರಣಗಳು; ತಮಿಳುನಾಡಿನಿಂದ ತಂದುವಲ್ಲ.

0.11 ವಸ್ತು, ಛಂದಸ್ಸು, ಹಾಡುವಧಾಟಿ, ಸಂಸ್ಕೃತ ಮತ್ತು ಕನ್ನಡಗಳೆರಡನ್ನೂ ಆತ್ಮೀಯವಾಗಿ ಬಳಸಿಕೊಳ್ಳುವ ಶೈಲಿ - ಎಲ್ಲ ದೃಷ್ಟಿಯಿಂದಲೂ ಈ ಸ್ನಾನಗೀತವು ಗಮನಾರ್ಹವಾದುದು.

ಉಂಗುಷ್ಠ ಊರ್ದಳೇ |
ಹರಿಪಾದ ತೀರ್ಥಳೇ |
ಕಂಕಣದ ಕೈಯಳೇ |
ಕುಂಕುಮದ ನೆರಿಯಳೇ |
ಸ್ನಾನಕ್ಕೆ ಬಂದೇ | ಭಾಗೀರತೀ |
ಬಾಗಿಲ್ ತೆಗೀ |
ತಂದೇದ್ಪತ್ತೂ ತಾಯೀದ್ಹನ್ನೊಂದೂ |
ಕೊಡು ಮುತ್ತೈದೆತನವಾ |
ಬಿಡುಹಸ್ತವಾ |
ನಮಸ್ತೇ | ಸಿಂಧು ಕಾವೇರೀ |
ನಮಸ್ತೇ | ಗೃಹಾಣಾರ್ಘ್ಯಂ |
ಸಮರ್ಪಯಾಮಿ ||

ಅದರ ಪಾಠಾಂತರ :

ಸ್ನಾನಕ್ಕೆ ಬಂದೆ | ಭಾಗೀರಥಿ | ಬಾಗಿಲು ತೆಗಿ | ಮಳಲ ಲಿಂಗ ಮಾಡೀ | ಗಂಗಾದೇವಿ ಮಾತನಾಡಿಸಿ | ಬಾಗಿಲು ತೆಗಿ | ತಂದೆ(ದ್) ಹತ್ತು | ತಾಯಿ (ದ್) ಹನ್ನೊಂದು | ಇಪ್ಪತ್ತೊಂದ್ ಮಾತಾಪಿತೃಗಳಿಗೂ | ಸ್ನಾನದ ಫಲಕೊಡು | ಅತಿ ಕ್ರೂರ

ಮಹಾಕಾಯ | ಕೋಟಿ ಸೂರ್ಯ ಸಮಪ್ರಭ | ಸ್ವಯಂ ಪಾಪಹರೇ ದೇವಿ | ಶ್ರೀರಂಗೆ ಸಂಘುಗಾಮಿನಿ . . . ||

ಈ ಎರಡು ಗದ್ಯಗೀತೆಗಳ ಧಾಟಿ ಕೂಡ ಭಿನ್ನವಾಗಿದೆ.

0.12 ಭಾಷೆಯನ್ನು ವೈವಿಧ್ಯಪೂರ್ಣವಾಗಿ ದುಡಿಸಿಕೊಂಡಿರುವ ದೃಷ್ಟಿಯಿಂದ :

0.0.1 ಹೊತ್ತಾರೆದ್ದು | ಹೋಗ್ಗಿಗೋಪೀ |
ಆಕಾಳನ್ನೇ ಹೊಡೆದೂ ಬಂದೇ . . . |

0.0.2 ಶನಿವಾರದ್ದಿನ್ಸ | ರಘುನಂದನನರಸೀನು |
ಕನಕಮಯದಿಂದ ಬಲಗೊಂಬೆ | ಮಹಲಕ್ಷ್ಮಿ |
ಕನಕ ಭಂಡಾರ | ಕೊಡುವೋಳು . . . |

0.0.3 ಇವೆಲ್ಲವು ಇದ್ದರೆ | ಜಂಟಲ್‌ಮ್ಯಾನ್ |
ಇವೆಲ್ಲವ ಬಿಟ್ಟರೆ | ಜಂಗಲ್‌ಮ್ಯಾನ್ . . . |

0.0.4 ಭಲ್ ಭಲಾರೆ | ಅವಲಕ್ಕೀ |
ಬಡವರ ಮನೆಯನು | ನೀ ಪೊಕ್ಕೀ ...

0.13 ಗಾದೆ ಮತ್ತು ಕತೆಗಳ ಪ್ರಕಾರಗಳಲ್ಲಿ ಗಮನಿಸಿದಂತೆಯೇ, ಅವರು ಆತ್ಮೀಯವಾಗಿ ಬಳಸುವ ಹಾಡುಗಳಲ್ಲಿಯೂ, ಆತ್ಮವಿಮರ್ಶೆ, ಗುಣಪಕ್ಷಪಾತವನ್ನು ಗಮನಿಸಬಹುದು.

ಉಡುಪಿ ಶ್ರೀಕೃಷ್ಣ ದೇವರ ದರುಶನಕ್ಕಾಗಿ | ಶ್ರೀಮತ್ಕನಕದಾಸರು ಬರುತ್ತಿರಲು | ಅಲ್ಲಿರುವ ಕೆಲವು ಬ್ರಾಹ್ಮಣರು | ಈತನು ಕುರುಬನು | ಈತನಿಗೆ ದರುಶನವಾಗದಂತೆ ಮಾಡಬೇಕೆಂದು ಬಾಗಿಲನ್ನು ಹಾಕಿಸಿರಲು | ಇತ್ತಲೀ ಕನಕದಾಸರು | ಶ್ರೀಕೃಷ್ಣಸ್ವಾಮಿಯನ್ನು ಸ್ಮರಿಸುತ್ತಾ | ಗುಡಿಯ ಹಿಂಭಾಗದೊಳು ನಿಂದು | ಮೊರೆಯಿಟ್ಟ ಬಗೇsss

ಎಂದು ಪ್ರಾರಂಭವಾಗುವ ಈ ಹಾಡಿನಲ್ಲಿ ಕನಕನಿಗೆ ಕಿಂಡಿಯ ಮೂಲಕ ಕೃಷ್ಣದರ್ಶನವಾದ ಕಥಾವಿವರ ಬರುತ್ತದೆ. ಅದರ ಮುಕ್ತಾಯ:

ಮುನಿ ವ್ಯಾಸನು ಬಲ್ಲ ಕನಕನ ಘನ ಮಹಿಮೆಯನು | ಭಕುತಿ ಕಾರಣವೆನಗೆ ಜಾತಿನಿಮಿತ್ತವೀ ಕಲಿಯುಗದೊಳಿಲ್ಲೆಂದಾ || ಹರಿಯಾಜ್ಞೆಯ ಶಿರದಲಿ ಧರಿಸುತಯೆಲ್ಲರು | ಕನಕಗೆ ಉಪಚರಿಸಿ ಅರಿಯೆವು ನಾವು | ಎಮ್ಮಪರಾಧವು | ಕ್ಷಮಿಸೆಂದು ಹರಿಗೆ ನಮಸ್ಕರಿಸೀ ||

ಈ ಪ್ರಕಾರ ಉಡುಪಿಯ ಕೃಷ್ಣನು | ಪೂರ್ವಾಭಿಮುಖವಾಗಿದ್ದು | ಕನಕನಿಗೊಲಿದು | ಪಶ್ಚಿಮಾಭಿಮುಖವಾಗಿ ನಿಂತು | ಎಲ್ಲರೂ ಕನಕ ಕಟಾಂಜನದಲ್ಲಿ | ದರುಶನ ಮಾಡಲೆಂದು | ಆಜ್ಞಾಪಿಸಿದನಾ ಬ್ರಾಹ್ಮಣಾದಿ ಸರ್ವಪ್ರಜೆಗಳು | ಕನಕದಾಸನಂ| ಬಹುವಿನಯದಿಂದ ವುಪಚರಿಸಿದರುಯೆಂಬಲಿ ಸಮಾಪ್ತಮಾದುದು ||

ಈ ಹಾಡಿನ ಭಾಷೆ ಕೂಡ, ಇದು ಬ್ರಾಹ್ಮಣರಿಂದಲೇ ರಚಿತವಾಗಿರುವುದನ್ನು ಪೋಷಿಸುತ್ತದೆ. ಸಂಕೇತಿಗಳಲ್ಲಿ ಇದು ನಿತ್ಯಪ್ರಾರ್ಥನೆಯ ಒಂದು ಹಾಡಾಗಿದೆ.

ಮನೆಯಲ್ಲಿ ಜೀವಂತ ಧಾರ್ಮಿಕ ವಾತಾವರಣವನ್ನುಂಟುಮಾಡುವುದರಿಂದಲೇ, ಈ ಸಂಪ್ರದಾಯಗೀತೆಗಳನ್ನು ಸ್ತ್ರೀಯರು ವೈಧವ್ಯದ ಆಘಾತಕ್ಕೊಳಗಾದಾಗಲೂ ತ್ಯಜಿಸಲಿಲ್ಲ; ಬದಲಿಗೆ, ಅವನ್ನು ಹೆಚ್ಚು ಆಶ್ರಯಿಸಿರುವುದು ಕಾಣಿಸುತ್ತದೆ. ಈ ಸಮುದಾಯದಲ್ಲಿ ಕಾಣುವ ಹಾಡುಗಾರ್ತಿಯರು ತಮ್ಮ ಎಪ್ಪತ್ತು ವರ್ಷಗಳ ಜೀವಿತದನಂತರವೂ, ಹೊಸ ಹಾಡುಗಳನ್ನು ಕಲಿಯುವ ಆಸಕ್ತಿಯನ್ನು ಉಳಿಸಿಕೊಂಡಿರುವುದನ್ನು ಇಂದಿಗೂ ನೋಡಬಹುದು.

ಪರಂಪರಾಗತ ಗೀತೆಗಳಲ್ಲದವೂ ಸಂಪ್ರದಾಯಾಚರಣೆಗಳಲ್ಲಿ ಕ್ರಿಯಾತ್ಮಕವಾಗಿ ಬಳಕೆಗೊಳ್ಳುವುದು ಈ ಸಮುದಾಯದ ವಿಶೇಷ. ಆದರೆ ಅವರ ಬಳಕೆಯ 'ಪಾಟ್'ಗಳಲ್ಲಿ ಸಂಪ್ರದಾಯಗೀತೆಗಳೆಂಬುವೇ ಪ್ರತ್ಯೇಕವಾಗಿವೆ. ಅವು ಪಾರಂಪರಿಕತೆಯ ಎಲ್ಲ ಲಕ್ಷಣಗಳಿಂದ ಕೂಡಿದಂಥವು. ಈಗ, ದಕ್ಷಿಣಕರ್ನಾಟಕದ ಇತರ ಬ್ರಾಹ್ಮಣ ಸಮುದಾಯಗಳ ನಡುವೆ ಪರಸ್ಪರ ವಿನಿಮಯ ನಡೆದು, ಅವರ ಸಂಪ್ರದಾಯಗೀತೆಗಳಲ್ಲಿ ಸಮಾನಾಂಶಗಳು ಕಾಣಿಸಿಕೊಂಡಿದ್ದರೂ, ಆ ಗುಂಪಿಗೆ ಸಂಕೇತಿ ಸಮುದಾಯದ ಕಾಣಿಕೆ ಇರುವುದಕ್ಕೆ ಆಧಾರವಿದೆ. ಸರ್ವದೈವಸಮಭಾವ, ಆತ್ಮವಿಮರ್ಶೆ, ಪೂರ್ಣಕನ್ನಡೀಕರಣ, ಮತಾತೀತ ಲಕ್ಷಣ, ಭಾಷಾವೈವಿಧ್ಯ, ವ್ಯಾಪಕ ಧಾರ್ಮಿಕತೆ - ಇವರ ಗೀತೆಗಳ ಮುಖ್ಯಲಕ್ಷಣಗಳು. ಧಾರ್ಮಿಕತೆಯೇ ಪ್ರಧಾನವಾಗಿದ್ದು, ಲೌಕಿಕ ಲಘುಗೀತೆಗಳ ಪ್ರಮಾಣವು ಬಹುಸಣ್ಣದಾದುರಿಂದ, ಹಾಡುಗಳಲ್ಲಿ ರಮ್ಯತೆ ತೆಳುವಾಗುವುದು ಸಹಜ; ಆದರೆ ಅಲ್ಲಿ ಪ್ರತಿಭೆಯ ನೆಲೆ ಕಾಣುತ್ತದೆ; ಭಾವಪೂರ್ಣತೆ ಪ್ರಕಟವಾಗುತ್ತದೆ. ಆದರೂ, ದಕ್ಷಿಣದಲ್ಲಿನ ಬಹು ಸೀಮಿತ ಬಳಕೆಗೆ ಹೋಲಿಸಿದರೆ, ಕರ್ನಾಟಕದಲ್ಲಿ ಗೀತೆಗಳ ಕ್ರಿಯಾತ್ಮಕ ಬಳಕೆಯ ವ್ಯಾಪ್ತಿ ದೊಡ್ಡದಾಗಿರುವುದಕ್ಕೆ, ವ್ಯಾಪಕವಾದ ಧಾರ್ಮಿಕಾಚರಣೆಗಳ ಸ್ವೀಕಾರವೂ ಕಾರಣವಾಗಿದೆ. ಆದುದರಿಂದ ಧಾರ್ಮಿಕ ಮತ್ತು ಲಘುಗೀತೆಗಳ ಪ್ರಮಾಣದ ಅಗಾಧ ಅಂತರವು ಕರ್ನಾಟಕದ ಪ್ರಭಾವಿತಲಕ್ಷಣ ಮಾತ್ರ ಎನ್ನಬೇಕಾಗಿದೆ.

ಒಟ್ಟಿನಲ್ಲಿ, ಸಂಕೇತಿಗಳ ಜೀವನಶ್ರದ್ಧೆ, ನಂಬಿಕೆ, ಆಚರಣೆ, ಮತ್ತು ಸಮಸ್ತ ಜೀವನವಿಧಾನದ ಪರಿಚಯವು, ಅವರ ಭಾಷೆ ಮತ್ತು ಜನಪದ ಸಾಹಿತ್ಯದಲ್ಲಿ ದೊರೆಯುತ್ತದೆ. ಸಂಕೇತಿ ಸಮುದಾಯದ ಸಂಸ್ಕೃತಿಯ ಅನನ್ಯತೆಯು ಅವುಗಳಲ್ಲಿ ನಿಚ್ಚಳವಾಗಿ ಅಭಿವ್ಯಕ್ತವಾಗಿದೆ.

ಅಧ್ಯಾಯ : ಎಂಟು

ಉಪಸಂಹಾರ

೧. ಅ. ಲಭ್ಯ ಸಾಂಸ್ಕೃತಿಕ ಆಧಾರಗಳಿಂದ ಸೂಚಿತವಾಗುವಂತೆ ಕ್ರಮವಾಗಿ ಗಂಗಾ, ನರ್ಮದಾ, ಗೋದಾವರೀ ತೀರಗಳಲ್ಲಿ ನೆಲೆಸಿದ್ದು (ಈಗಿನ) ತಮಿಳುನಾಡಿನ ಶೆಂಕೋಟ್ಟೈಸೀಮೆಗೆ ವಲಸೆ ಬಂದ ಬ್ರಾಹ್ಮಣರ ಒಂದು ಗುಂಪು ಇತರ ಸಮಾನ ನಿದರ್ಶನಗಳಂತೆ ಸ್ಥಳಾಧಾರಿತ ಹೆಸರು ಪಡೆದು 'ಸಂಕೇತಿ' ಎನಿಸಿತು.

ಆ. ಖಚಿತ ನಿರ್ಧಾರಕ್ಕೆ ಬಲವಾದ ಆಧಾರಗಳು ದೊರೆಯದಿದ್ದರೂ, ಸಂಕೇತಿಗಳು ತಮಿಳುನಾಡಿನಲ್ಲಿ ನೆಲೆಸಿದ ಕಾಲವನ್ನು ಶಂಕರರ, ಇಲ್ಲವೆ ಶಂಕರಾನಂತರದ ಸನಿಹದ ಶತಮಾನದಲ್ಲಿ ಗುರುತಿಸಬಹುದು.

ಇ. ವಿಂಧ್ಯದಕ್ಷಿಣದ ಪಂಚದ್ರಾವಿಡರಲ್ಲಿ ಭಾಷೆ ಮತ್ತು ದೇಶಸೂಚಿಯಾಗಿ 'ದ್ರಾವಿಡ' ಬ್ರಾಹ್ಮಣರೆನಿಸಿದ ತಮಿಳು ಬ್ರಾಹ್ಮಣರಲ್ಲಿ ಸಂಕೇತಿಗಳದೂ ಒಂದು ಪುಟ್ಟ ಸ್ಮಾರ್ತಸಂಪ್ರದಾಯದ ಉಪಜಾತಿಯಾಗಿ ಮುಂದುವರಿಯಿತು.

೨. ಅ. ಶೆಂಕೋಟ್ಟೈಸೀಮೆಯಿಂದ (ಮುಖ್ಯವಾಗಿ ಶಾಪತ್ತೂರ್ ಕೇಂದ್ರದಿಂದ) ಕರ್ನಾಟಕಕ್ಕೆ ಆದ ಸಂಕೇತಿಗಳ ಐತಿಹಾಸಿಕ ವಲಸೆಯು ಮೊದಲು ನೀಲಗುಂದಕ್ಕೆ (ಹರಪನಹಳ್ಳಿ ತಾಲ್ಲೂಕು, ಬಳ್ಳಾರಿಜಿಲ್ಲೆ) ಕ್ರಿ.ಶ.೧೦೮೭ರಲ್ಲಿಯೂ, ಅನಂತರ ಕೌಶಿಕಕ್ಕೆ (ಹಾಸನ ತಾಲ್ಲೂಕು, ಹಾಸನಜಿಲ್ಲೆ) ಕ್ರಿ.ಶ.೧೧೨೦ರಲ್ಲಿಯೂ ಆಗಿರುವುದಕ್ಕೆ ಖಚಿತ ಆಧಾರಗಳಿವೆ. ಕ್ರಿ.ಶ.೧೦೮೭ ಮತ್ತು ಕ್ರಿ.ಶ.೧೧೨೩ರ ನಡುವೆ ಕರ್ನಾಟಕಕ್ಕೆ ತರಂಗಿತ ವಲಸೆಗಳಾದವು ಎಂಬುದು ವಲಸೆಗಳ ಪ್ರವೃತ್ತಿಗೆ ಅನುಗುಣವಾದುದು.

ಆ. ವ್ಯಾಪಕವಾದ ಮತ್ತು ಖಚಿತವಾದ ಆಧಾರಗಳಿಂದ ಸಮರ್ಥಿತವಾಗುವಂತೆ, ಕರ್ನಾಟಕಕ್ಕೆ ಆದ ಸಂಕೇತಿಗಳ ಐತಿಹಾಸಿಕ ವಲಸೆಯ ನಿಜವಾದ ಕಾರಣವು, ನಾಚಾರಮ್ಮನಿಗೆ ಸಂಬಂಧಿಸಿದ ದುರಂತ ಪ್ರಸಂಗವೇ ಆಗಿದೆ. ಈ ಸಂಬಂಧದ ಇತರ ವಾದಗಳು ನಿರಾಧಾರವಾದುವಾಗಿವೆ.

ಇ. ಶೆಂಕೋಟ್ಟೈಸೀಮೆಯಿಂದ (ಈಗಿನ) ತಮಿಳುನಾಡು ಮತ್ತು ಕೇರಳದ ವಿವಿಧ ನೆಲೆಗಳಿಗೆ ಆದ ವಲಸೆಗಳು, ಕಾಲ ಮತ್ತು ಕಾರಣದಲ್ಲಿ ಕರ್ನಾಟಕಕ್ಕೆ ಆದ ಐತಿಹಾಸಿಕ ವಲಸೆಗೆ ಹೊಂದಿಕೊಂಡಂತೆ ಆಗಿರದೆ, ಅನೇಕ ಶತಮಾನಗಳ ದೀರ್ಘ ಅವಧಿಯಲ್ಲಿ ಜೀವನಾಧಾರಕ್ಕಾಗಿ ಕಾಲಕಾಲಕ್ಕೆ ಆದವು.

ಈ. ವ್ಯವಸ್ಥಿತವಾದ ಮತ್ತು ಸಾಮುದಾಯಿಕ ಕಾರಣದ ವಲಸೆಯಾದುದರಿಂದಲೇ, ಕರ್ನಾಟಕಕ್ಕೆ ಆದ ಈ ಮಹಾವಲಸೆಯು, ಆ ದಿನಗಳ ಪ್ರಚಲಿತ ವಾಣಿಜ್ಯ ಮತ್ತು ಸಾಂಸ್ಕೃತಿಕ ಮಾರ್ಗವಾಗಿದ್ದ ಕಾವೇರೀಕಣಿವೆಯ ಪಥದಲ್ಲಿಯೇ ನಡೆಯಿತು ಎಂಬುದಕ್ಕೆ ಪೂರಕ ಆಧಾರಗಳೂ ಇವೆ.

ಉ. ಕರ್ನಾಟಕಕ್ಕೆ ಆದ ಮಹಾವಲಸೆಯ ಗಾತ್ರವು ಸಾವಿರ ಕುಟುಂಬಗಳಿಗೂ ಹೆಚ್ಚಿನದಿತ್ತು ಮತ್ತು ಅಲ್ಲಿ ಉಳಿದವರಿಗಿಂತಲೂ ವಲಸೆಹೊರಟವರ ಸಂಖ್ಯೆ ದೊಡ್ಡದಾಗಿತ್ತು ಎಂಬುದು ತರ್ಕಸಮ್ಮತವಾಗಿದೆ.

೩. ಅಸಂಪರ್ಕ ಇಲ್ಲವೆ ಅಲ್ಪಸಂಪರ್ಕದಿಂದಾಗಿಯೇ, ಕಾಲಕ್ರಮದಲ್ಲಿ ಪ್ರತ್ಯೇಕತೆಯನ್ನು ಪಡೆದು ಆದ ಉಪಪಂಗಡಗಳ ಜನಸಂಖ್ಯೆಯು ನಾನಾ ಆಧಾರಗಳಿಂದ, ಖಚಿತತೆಗೆ ಸಮೀಪವಾಗಿ ವ್ಯಕ್ತವಾಗುವುದು ಹೀಗೆ:

ಅ. ಕರ್ನಾಟಕದಲ್ಲಿ:	ಕೌಶಿಕ ಸಂಕೇತಿ	-	೧೬,೩೦೦
	ಲಿಂಗದಹಳ್ಳಿ ಸಂಕೇತಿ (ಮಲೆನಾಡು ಸಂಕೇತಿ)	-	೭೦೦
	ಬೆಟ್ಟದಪುರ ಸಂಕೇತಿ	-	೬೦೦೦
ಆ. ದಕ್ಷಿಣದಲ್ಲಿ :	ದಕ್ಷಿಣ ಸಂಕೇತಿ	-	೨೦೦೦
		ಒಟ್ಟು	೨೫,೦೦೦

ಸಂಕೇತಿಗಳು ಪಾರಂಪರಿಕವಾಗಿ ನೆಲೆಸಿರುವ ಜಿಲ್ಲೆಗಳು: ಹಾಸನ, ಶಿವಮೊಗ್ಗ, ಮೈಸೂರು, ಮಂಡ್ಯ, ಚಿಕ್ಕಮಗಳೂರು; ತಿರುನೆಲ್‌ವೇಲಿ, ಕನ್ಯಾಕುಮಾರಿ; ತಿರುವನಂತಪುರಂ.


ಅವರು ಈಗ ಚದುರಿರುವ ಪ್ರದೇಶಗಳು: ಬೆಂಗಳೂರು, ಮದರಾಸು, ಮುಂಬಯಿ, ದೆಹಲಿ, ಇತರ ರಾಜ್ಯಗಳು ಮತ್ತು ಹೊರದೇಶಗಳು ಕೂಡ.

ಇವುಗಳಲ್ಲಿ, ಕರ್ನಾಟಕ ಮತ್ತು ದಕ್ಷಿಣದ ಸಂಪರ್ಕವು ಕಳೆದ ಒಂಬತ್ತು ಶತಮಾನಗಳಿಂದಲೂ ಪೂರ್ಣವಾಗಿ ಕಡಿದುಬಿದ್ದಿದೆ. ಕೌಶಿಕ, ಬೆಟ್ಟದಪುರ, ಲಿಂಗದಹಳ್ಳಿ - ಮೂರೂ ಖಚಿತವಾದ ಪ್ರತ್ಯೇಕತೆಯನ್ನು ಪಡೆದಿವೆ. ಮತ್ತೂರು ಪ್ರತ್ಯೇಕಗೊಳ್ಳುವ ಸೂಚನೆಗಳನ್ನು ಪ್ರಕಟಿಸುತ್ತಿದ್ದಾಗಲೇ, ಹಾಸನಸೀಮೆಯೊಂದಿಗಿನ ಸಂಪರ್ಕಸಾಧ್ಯತೆಗಳು ಅದನ್ನು ತಪ್ಪಿಸಿವೆ. ಆಧುನಿಕ ಸನ್ನಿವೇಶದಲ್ಲಿ ಈ ಪಂಗಡಗಳು ಒಂದಾಗಿ ಕೂಡುವ ಲಕ್ಷಣಗಳು ಕಂಡುಬರುತ್ತಿವೆ.


೪. ಅ. ಎಲ್ಲೆಡೆಯ ಸಂಕೇತಿಗಳಲ್ಲಿ ಕಾಣಿಸುವ ಸಮಾನ ಪ್ರವೃತ್ತಿ ಎಂದರೆ, ಜೀವನಾಧಾರಕ್ಕಾಗಿ ಮತ್ತೆ ಮತ್ತೆ ಮರುವಲಸೆ ಹೊರಡಲು ಹಿಂಜರಿಯದ ಅಕ್ಷರಶಃ ಅಲೆಮಾರೀ ಲಕ್ಷಣ. ಪೂರ್ಣವಾಗಿ ಉಧ್ವಸ್ತಗೊಂಡ ತಮ್ಮ ಬದುಕನ್ನು ಹೊಸನೆಲೆಯೊಂದರಲ್ಲಿ ಆಮೂಲಾಗ್ರವಾಗಿ ಕಟ್ಟಿಕೊಳ್ಳಬೇಕಾಗಿದ್ದ ಕರ್ನಾಟಕದ ಸಂಕೇತಿಗಳ ಮರುವಲಸೆಗಳ ವಿವರಗಳಲ್ಲಿ ಕಾಣಿಸುವ ತೀವ್ರತೆ, ಸಂಕೀರ್ಣತೆ, ತಳಮಳದ ಲಕ್ಷಣವು ದಕ್ಷಿಣದ್ದಲ್ಲ.

ಆ. ಕರ್ನಾಟಕದಲ್ಲಿನ ಮರುವಲಸೆಗಳು ಹೊಯ್ಸಳರು, ವಿಜಯನಗರದ ಅರಸರು ಮತ್ತು ಮೈಸೂರು ಅರಸರ ರಾಜಾಶ್ರಯವನ್ನನುಸರಿಸಿ ಪ್ರಧಾನ ತರಂಗಗಳಲ್ಲಿ ನಡೆದವು. ಅವನ್ನು ಅನುಸರಿಸಿ ವಿವಿಧ ಕಾರಣಗಳಿಗಾಗಿ ಸಂಕೀರ್ಣಸ್ವರೂಪದ ವಲಸೆಗಳು ಮುಂದುವರಿದವು. ಅವುಗಳನ್ನು ಎರಡು ಪ್ರಧಾನ ಸ್ತರಗಳಲ್ಲಿ ಗುರುತಿಸಬಹುದು:

1.




2.



ಹೊಯ್ಸಳರಾಜ್ಯಕ್ಕೆ ಆದ ವಲಸೆಗಳ ಸಂದರ್ಭವು, ಸಂಕೇತಿಗಳಿಗೆ, ಅನಿರ್ದಿಷ್ಟತೆಯ ಆತಂಕದಿಂದ ಮುಕ್ತವಾದುದಾಗಿರಲಿಲ್ಲ. ವಿಜಯನಗರದ ಅರಸರ ಆಶ್ರಯದ ವೇಳೆಗೆ ಅವರದು ಸುಸ್ಥಿರ ಮತ್ತು ಸುಸ್ಥಿತ ವಲಸೆಯಾಗಿತ್ತು. ಮೈಸೂರು ಅರಸರ ವೇಳೆಗೆ ರಾಜಕಾರಣದಲ್ಲಿ ಮುಖ್ಯ ಜವಾಬ್ದಾರಿಗಳನ್ನು ನಿರ್ವಹಿಸುವ ಮೇಲ್ಮೆ ಸಿದ್ಧಿಸಿತ್ತು.

ದಕ್ಷಿಣದಲ್ಲಿ, ಈ ಮರುವಲಸೆಗಳಿಗೆ ಸಂಬಂಧಿಸಿದ ಕಾಲದ ಖಚಿತ ಆಧಾರಗಳು ದೊರೆಯದುದಕ್ಕೆ ಅವು ವೈಯಕ್ತಿಕ ನೆಲೆಯಲ್ಲಿ ವಿಶಾಲ ಕಾಲಹರಹಿನಲ್ಲಿ ಆದ ವಲಸೆಗಳಾದುದು ಕಾರಣವಾಗಿದೆ.



ಇ. ವ್ಯವಸಾಯಕೇಂದ್ರಿತ ಬದುಕಿಗಾಗಿ 'ತೃಣಜಲಸಮೃದ್ಧವಾದ' ನೆಲೆಗಳನ್ನು ಅನ್ವೇಷಿಸುತ್ತ ಹೊರಟುದು ಕರ್ನಾಟಕದಲ್ಲಿ ನಡೆದರೆ, ದೇವಸ್ಥಾನಸೇವೆಗೆ ಒತ್ತುಬಿದ್ದ ದಕ್ಷಿಣದಲ್ಲಿ ಪ್ರಮುಖ ದೇವಸ್ಥಾನಗಳನ್ನು ಅದು ಅನುಸರಿಸಿತು. ಎಲ್ಲೆಡೆಯ ನೆಲೆಗಳೂ ಹಳ್ಳಿಗಳೇ ಮತ್ತು ಪಶ್ಚಿಮ ಘಟ್ಟದ ಪೂರ್ವದ ಅರೆಮಲೆನಾಡುಭಾಗದ ನದೀತಟಗಳ ಸೀಮಿತವಲಯವೆಂಬುದು ಎದ್ದುಕಾಣುವ ಸಾಮ್ಯ. ಮಳೆ, ಬೆಳೆ, ಹವಾಮಾನ, ಸುಸ್ಥಿರತೆ, ರಾಜಾಶ್ರಯ ಇವುಗಳಿಗೆ ಸಮಗ್ರವಾಗಿ ಹೊಂದಿಕೊಂಡಂತೆ ಅದು ನಡೆದಿದೆ. ಗ್ರಾಮಒಕ್ಕೂಟ ಮತ್ತು 'ಸಂಕೇತಂ' (ಹೆಚ್ಚಿನ ಸಂಖ್ಯೆಯ ಸಂಕೇತಿಗಳು ಒಟ್ಟಾಗಿ ತಮ್ಮ ಸಾಂಸ್ಕೃತಿಕ ವೈಶಿಷ್ಟ್ಯಗಳನ್ನು ಮುಂದುವರಿಸಿಕೊಂಡು ಬಾಳುವ ನೆಲೆ) ಎಲ್ಲೆಡೆಯ ಸಂಕೇತಿ ನೆಲೆಗಳ ಲಕ್ಷಣವಾದರೂ, ವ್ಯವಸಾಯಕೇಂದ್ರಿತತೆ ಮುಂದುವರಿದಿರುವುದರಿಂದಲೂ, ಜನಸಂಖ್ಯೆ ದೊಡ್ಡದಾದುದರಿಂದಲೂ, ಕರ್ನಾಟಕದಲ್ಲಿ ಆ ಪರಂಪರೆ ಹೆಚ್ಚು ಜೀವಂತವಾಗಿದೆ.

೫. ಅ. ಅವರಿಗೆ ಷಟ್ಕರ್ಮವಾಗಲಿ, ಪಶುಪಾಲನೆ (ಗೋಸೇವೆ)ಯಾಗಲಿ ಆರ್ಥಿಕ ಉದ್ಯೋಗಗಳಾಗಿಲ್ಲ; ಬದಲಿಗೆ, ಧಾರ್ಮಿಕ ಕರ್ತವ್ಯಗಳು. ಅದು ಸಾಧ್ಯವಾದದ್ದು ಕೃಷಿ ಮತ್ತು ವೈದಿಕತೆಯ ಸಮನ್ವಯವನ್ನು ಸಾಧಿಸಿದ್ದುದರಿಂದ. ಈ ಸಮನ್ವಯವು ಸಾಧ್ಯವಾದದ್ದು ತೋಟಗಾರಿಕೆ ಅದಕ್ಕೆ ಅನುಕೂಲಕರವಾದುದರಿಂದ. ಕರ್ನಾಟಕದಲ್ಲಿ ಕೃಷಿಗೆ ಒತ್ತುಬಿದ್ದು, ಅದು ಹೊಲಗದ್ದೆಗಳ ವ್ಯವಸಾಯಕ್ಕೂ ವಿಸ್ತರಿಸಿತು; ಸ್ವಾವಲಂಬನೆಗಾಗಿ ತಮ್ಮದಲ್ಲದ ವೈವಿಧ್ಯಪೂರ್ಣ ಕಸಬುಗಳನ್ನು ಸಮೂಹತತ್ವದಿಂದ ನಿರ್ವಹಿಸಿಕೊಳ್ಳುವ ತುರ್ತು ಅವರಿಗಿತ್ತು. ಕಠಿಣ ದುಡಿಮೆಗೆ ಒಡ್ಡಿಕೊಂಡರು. 'ದಕ್ಷಿಣ'ದಲ್ಲಿ, ದೇವಸ್ಥಾನಸೇವೆಗೇ ಹೆಚ್ಚು ಒತ್ತುಬಿತ್ತು. ಆದರೆ ಬಹುಮುಖ ವೃತ್ತಿನೈಪುಣ್ಯವಿದ್ದರೂ ಆರ್ಥಿಕ ದೌರ್ಬಲ್ಯದಿಂದಾಗಿ ಜೀವನವು ಒಂದು ಹೋರಾಟವಾದುದು ಎಲ್ಲೆಡೆಯ ಸಂಕೇತಿಗಳ ಲಕ್ಷಣ. ವ್ಯವಸಾಯದ ನಂಟೂ ಬಿಟ್ಟುಹೋಗಿ ನೌಕರಿಗಳೂ ದೊರೆಯದ ಸದ್ಯದಸ್ಥಿತಿಯಲ್ಲಿ ಆರ್ಥಿಕ ಬಿಕ್ಕಟ್ಟು ಮತ್ತೂ ದೊಡ್ಡದಾಗುತ್ತಿದ್ದು ನಗರೀಕರಣವನ್ನು ಅನಿವಾರ್ಯಗೊಳಿಸುತ್ತಿದೆ.

ಆ. ದುಡಿಮೆಗಾರರಾದರೂ ಆರ್ಥಿಕಮಿತಿ, ಸಾಧನಸೌಲಭ್ಯಗಳಮಿತಿ ಮತ್ತು ಧಾರ್ಮಿಕಮಿತಿಯಿಂದಾಗಿ ಅವರದು ಸರಳವಾದ ಸಸ್ಯಾಹಾರವಾಗಿದ್ದು, ಪೌಷ್ಟಿಕಾಂಶಗಳನ್ನು ಪೂರೈಸಲು ಸೋಲುತ್ತದೆ. ಕಠಿಣ ದುಡಿಮೆಗೆ ಒಡ್ಡಿಕೊಂಡ ಸಂಕೇತಿಗಳು ಭೋಕ್ತಾಪುರುಷರೆಂಬುದನ್ನು ಇದು ಸರಿಯಾಗಿ ವಿವರಿಸುತ್ತದೆ. ಸಾಂದರ್ಭಿಕವಾಗಿ ಆಗಾಗ ಆಹಾರದಲ್ಲಿ ಏಕತಾನವು ಪರಿಹಾರವಾದರೂ ಅದು ಪುಷ್ಟಿಗೆ ಪೂರಕವಾಗುವುದಿಲ್ಲ. ಆಹಾರ ತಯಾರಿಕೆಯಿಂದ ಹಿಡಿದು ಭೋಜನಾನಂತರದವರೆವಿಗೂ ಇರುವ ಕ್ರಮಬದ್ಧತೆ, ಅತಿಥಿಗಳಿಗೆ ನಡೆಯುವ ವಿಶೇಷ ಉಪಚಾರ, ಆಹಾರದಲ್ಲಿ ವೈದ್ಯಕೀಯಗಣನೆ, ಸಂಯಮ, ರುಚಿವೈವಿಧ್ಯ, ಬಂಧುತ್ವವೃದ್ಧಿಗಾಗಿ ಮತ್ತು ಸಂಸ್ಕೃತಿಮಾಧ್ಯಮವಾಗಿ ಆಹಾರದ ಬಳಕೆ - ಇವು ಅಲ್ಲಿನ ಉತ್ತಮಾಂಶಗಳು. ಆಹಾರಕ್ರಮದಲ್ಲಿ ಅವರದೇ ಆದ ವೈಶಿಷ್ಟ್ಯಗಳಿವೆ; ಅವುಗಳಲ್ಲಿ, 'ಶಾವಿಗೆ', 'ನೀರ್‌ಪಿಳಿ', 'ಪುಟ್ಟು' ಮೊದಲಾದವು ಅವರ

ವಿಶಿಷ್ಟ ಬಳಕೆಯವೂ ಹೌದು. ಭೌಗೋಳಿಕ ಸನ್ನಿವೇಶವನ್ನನುಸರಿಸಿಯೂ ಆಹಾರ ವೈವಿಧ್ಯಗಳಿವೆ. ಹೆಣ್ಣಿಗೆ ಸಂಬಂಧಿಸಿದಂತೆ ನಡೆಯುವ 'ಆರೈಕೆ'ಯ ವಿಶಿಷ್ಟ ಕ್ರಮವು ವೈದ್ಯವಿಜ್ಞಾನದ ಹಿನ್ನೆಲೆಯಲ್ಲಿ ಅಧ್ಯಯನಯೋಗ್ಯವಾದುದು. ಆಧುನಿಕ ಜೀವನ ಕ್ರಮವು ಸಂಕೇತಿಗಳ ಆಹಾರ ಪಾನೀಯಗಳ ವಿವರದಲ್ಲಿ ಬದಲಾವಣೆಗಳನ್ನು ಕ್ಷಿಪ್ರವಾಗಿ ತರುತ್ತಿದ್ದರೂ, ತಮ್ಮದೇ ಆದ ವೈಶಿಷ್ಟ್ಯಗಳು ಮಾಸಿಲ್ಲ.

ಇ. ಅವರ ಉಡುಗೆ, ತೊಡುಗೆ, ಕೇಶಾಲಂಕಾರ, ಲಾಂಛನಗಳೆಲ್ಲವೂ ಧಾರ್ಮಿಕ ನಂಬಿಕೆಗಳಿಂದ ನಿಯಂತ್ರಿಸಲ್ಪಟ್ಟಿವೆ. ಆದುದರಿಂದಲೇ, ಮೂಲಭೂತವಾಗಿ ಅತ್ಯಂತ ಸರಳವಾದರೂ ಅವೆಲ್ಲವೂ ಸಂದರ್ಭಗಳನ್ನನುಸರಿಸಿ ಶಿಸ್ತುಪೂರ್ಣವಾಗಿ ವೈವಿಧ್ಯಪೂರ್ಣವಾಗಿ ಪ್ರಕಟಗೊಳ್ಳುತ್ತವೆ. ಸೌಂದರ್ಯಪ್ರಜ್ಞೆಗಿಂತಲೂ ಕಾರ್ಯಸಾಧ್ಯತೆ ಇಲ್ಲಿ ಮುಖ್ಯವಾಗುತ್ತದೆ. ಸೌಂದರ್ಯಪ್ರಜ್ಞೆಯು ಅತಿಶಯವಾಗಿ ವ್ಯಕ್ತಗೊಳ್ಳುವುದು ಸ್ತ್ರೀಯರ ಕೇಶಾಲಂಕಾರ, ಒಡವೆಗಳು ಮತ್ತು ಲಾಂಛನದಲ್ಲಿ. ಆದರೆ, ಸಾಂಪ್ರದಾಯಿಕ ಸಂದರ್ಭದಲ್ಲಿ ಅವೂ ಲಜ್ಜೆಯ ಮಿತಿಯಲ್ಲೇ ಉಳಿಯುವಂಥವು. ಮೂಲಭೂತ ಸಾಂಸ್ಕೃತಿಕ ಅಂಶಗಳನ್ನು ಹೊರತುಪಡಿಸಿ ಉಳಿದಂತೆ ಎಲ್ಲವೂ ಈಗ ಸಾರ್ವತ್ರಿಕಗೊಳ್ಳುತ್ತಿವೆ. ಗಂಡೀಸೀರೆಯಂಥ ಐತಿಹಾಸಿಕ ಸಾಂಸ್ಕೃತಿಕ ವಿಧಾನವೇ ಬಿಟ್ಟುಹೋಗಿರುವುದರ ಹಿನ್ನೆಲೆಯಲ್ಲಿ, ಮಾಂಗಲ್ಯದ ಮೂಲರೂಪು ಕರ್ನಾಟಕ ಮತ್ತು ದಕ್ಷಿಣದಲ್ಲಿ ಭಿನ್ನವಾಗಿ ಬೆಳೆದಿರುವುದನ್ನು ಅರ್ಥಮಾಡಿಕೊಳ್ಳಬಹುದು.

ಈ. ಪರಿಸರದಲ್ಲಿ ಸುಲಭಲಭ್ಯವಿದ್ದ ಮರಮುಟ್ಟುಗಳನ್ನು ಬಳಸಿದುದು ಮತ್ತು ಮರಗೆಲಸ, ಕುಸುರಿಗೆಲಸಗಳೂ ಸೇರಿದಂತೆ ಪೂರ್ಣವಾಗಿ ತಮ್ಮ ವಸತಿಗಳನ್ನು ತಾವೇ ಸಮೂಹತತ್ತ್ವದಿಂದ ಕಟ್ಟಿಕೊಳ್ಳುವುದರಲ್ಲಿ ಅವರ ವಿಶೇಷವಿದೆ. ತಮ್ಮ ಮಿತಿಯಲ್ಲಿ ಅಂದಕ್ಕೆ, ಅದಕ್ಕಿಂತಲೂ ಶುಚಿತ್ವ, ಸುಭದ್ರತೆ, ಸುರಕ್ಷಿತತೆಗೆ ಒತ್ತುಕೊಟ್ಟದಿನಗಳಲ್ಲಿ - ಅಂದಕ್ಕಾಗಿ ಅವರು ಅನ್ವೇಷಿಸಿಕೊಂಡ ವಿಧಾನಗಳಲ್ಲಿಯೂ ಅವರ ಕೊಡುಗೆ ಇದೆ. ಶಾಸ್ತ್ರವಿಧಿಗಳನ್ನನುಸರಿಸುತ್ತಲೇ, ಕೃಷಿ ಮತ್ತು ವೈದಿಕತೆಗೆ ಅನುಕೂಲವಾಗುವಂತೆ ಹಾಗೂ ಹವಾಮಾನದಿಂದ ರಕ್ಷಣೆಗೆ ಒದಗುವಂತೆ ತಮ್ಮ ಮನೆಗಳನ್ನು ರೂಪಿಸಿದುದರಲ್ಲಿಯೂ ಅವರ ಪರಿಣತಿ ಇದೆ. ಕಾಲಕ್ರಮದಲ್ಲಾದ ಗೃಹವಿನ್ಯಾಸದ ಬದಲಾವಣೆಗಳಿಗೆ ಆರ್ಥಿಕಾನುಕೂಲ ಕಾರಣವಾಗುವುದರ ಬದಲು ಸುರಕ್ಷಾಸ್ಥಿತಿಗತಿಗಳನ್ನನುಸರಿಸಿ ಇಲ್ಲವೆ ಸಂಶೋಧನೆಗಳನ್ನನುಸರಿಸಿ ಸಾರ್ವತ್ರಿಕವಾಗಿ ಆದ ಬದಲಾವಣೆಗಳೇ ಕಾರಣವಾಗಿವೆ. ಭೌಗೋಳಿಕ ಪರಿಸರವೂ ಅವರ ವಸತಿಗಳ ರಚನೆಗಳನ್ನು ಪರಿಣಮಿಸಿದೆ; ಅದರಿಂದಾಗಿಯೇ ವಸತಿಗೆ ಸಂಬಂಧಿಸಿದಂತೆಯೂ ಪ್ರಾಂತವೈವಿಧ್ಯವಿದೆ. ಮತ್ತೂರು ಮತ್ತು ದಕ್ಷಿಣದ ತೊಟ್ಟಿಮನೆಗಳಲ್ಲಿ ಮಾತ್ರ ಎದ್ದುಕಾಣುವ ಸಾಮ್ಯ ಇರುವುದು ಕೆಲವು ಅಂಶಗಳಲ್ಲಿ ಶತಮಾನಗಳ ಅನಂತರವೂ ಕೆಲವೆಡೆಗಳಲ್ಲಾದರೂ ಪರಂಪರೆಯು ಹಾಗೆಯೇ ಮುಂದುವರಿದಿರುವುದನ್ನು ಸಮರ್ಥಿಸುತ್ತದೆ. ದೇವಸ್ಥಾನವನ್ನು ಮಗ್ಗುಲಿಗೆ ಬಿಟ್ಟುಕೊಂಡ ರಸ್ತೆಗಳ ಚೌಕವ್ಯವಸ್ಥೆಯಲ್ಲಿಯೂ ಅಂಥ ಗಾಢವಾದ ಹಾಗೂ ವ್ಯಾಪಕವಾದ ಸಾಮ್ಯವಿದೆ.

೬. ಅ ಸಂಕೇತಿಗಳ ಸಾಮಾಜಿಕ ಮತ್ತು ಧಾರ್ಮಿಕ ಜೀವನವು (ಇತರ ಬ್ರಾಹ್ಮಣರಿಗೆ) ಸಮಾನವಾದ ಆಕರಗಳಿಂದಲೇ ನಿರ್ದೇಶಿತವಾಗಿರುವುದರಿಂದ ವಿಶ್ವಸಾಮಾನ್ಯಗಳು ವ್ಯಾಪಕವಾಗಿರುವುದು ಸಹಜವೇ. ಧರ್ಮಶಾಸ್ತ್ರನಿರ್ದೇಶನದ ಪಾರಂಪರಿಕ ಜೀವನವು ಆಧುನಿಕ ಸನ್ನಿವೇಶದಲ್ಲಿ ವ್ಯಾಪಕವಾಗಿ ಬದಲುತ್ತಿರುವುದು ಸತ್ಯವಾದರೂ ಪರಂಪರೆಯ ಮೂಲಭೂತ ಅಂಶಗಳು ಪೂರ್ಣವಾಗಿ ಬಿಟ್ಟುಹೋಗಿಲ್ಲ. ಹಾಗಾಗಿಯೇ, ಕೌಟುಂಬಿಕ ಮತ್ತು ಸಾಮುದಾಯಿಕ ದೃಢತೆಯನ್ನು ಇಂದಿಗೂ ಗುರುತಿಸುವುದು ಸಾಧ್ಯ. ಉಚ್ಚಸ್ವರದಲ್ಲಿ ಮಾತನಾಡುವ ಮೂಲಕ ಆತ್ಮೀಯತೆಯ ನೇರ ಪ್ರಕಟಣೆ ಮತ್ತು ತೊಂತಿದ ಬಂಧುತ್ವವೂ ಈ ದೃಢತೆಯನ್ನು ಕಾಯಲು ನೆರವಾಗಿದೆ.

ಆ. ಅವರ ಸಾಮಾಜಿಕ ಸಂದರ್ಭದಲ್ಲಿ ಉಲ್ಲೇಖಿಸಬೇಕಾದ ವೈಶಿಷ್ಟ್ಯಗಳು:

1. ಅವರಲ್ಲಿ ಕುಲದೇವತಾಪದ್ಧತಿ ಇಲ್ಲದುದು.
2. ಧಾರ್ಮಿಕ ಮಠಗಳ ಬದ್ಧತೆ ಇಲ್ಲದುದು ಮತ್ತು ಅದಕ್ಕೆ ಪರ್ಯಾಯವಾಗಿ 'ಪರಿಷತ್' (ಸಭಾ) ವ್ಯವಸ್ಥೆ ಬಲಿಷ್ಠವಾದುದು.

3. ಇತರ ಬ್ರಾಹ್ಮಣ ಮತ್ತು ಬ್ರಾಹ್ಮಣೇತರ ಸಮುದಾಯಗಳ ಒಡನೆ ಇರುವ ಪ್ರೀತಿಪೂರ್ಣ ಸಂಬಂಧಗಳಿಂದಾಗಿಯೇ ವ್ಯಾಪಕ ವಲಸೆಗಳು ಮತ್ತು ಸ್ಥಿರತೆ ಸಾಧ್ಯವಾದುದು.

ಇ. ಇಹಪರಗಳ ಶ್ರೇಯಸ್ಸು ಮತ್ತು ಶುದ್ಧೀಕರಣದ ಉದ್ದೇಶದಿಂದ ಆಚರಣೆಯಲ್ಲಿರುವ ಹಬ್ಬಗಳೂ ಸೇರಿದಂತೆ ಅವರ ಜೀವನಚಕ್ರದ ವಿವಿಧ ಸಂಪ್ರದಾಯಗಳು ವಿಶಿಷ್ಟವಾದುವಾಗಿವೆ. ಅವರ ಜೀವನೋತ್ಸಾಹ, ಬಂಧುತ್ವವರ್ಧನೆ, ಪಾರಮಾರ್ಥಿಕತೆ, ಶ್ರದ್ಧೆ, ಸಾಂಸ್ಕೃತಿಕ ಔನ್ನತ್ಯ, ವಾಸ್ತವಪ್ರಜ್ಞೆ, ಸದಾಶಯ, ಸೌಂದರ್ಯಪ್ರಜ್ಞೆ, ಯಾವುದೇ 'ಪರ'ತೆ ಇಲ್ಲದ ಬಹುದೇವತೋಪಾಸನೆ ಮತ್ತು ಅದರ ಒಡಲಲ್ಲಿಯೇ ವೇದಮೂಲದ 'ಏಕದೇವ' ಭಾವದ ಜೀವಂತಿಕೆ, ವೈದ್ಯಕೀಯಪ್ರಜ್ಞೆ, ಸಾಮಾಜಿಕಪ್ರಜ್ಞೆ, ರಸಿಕತೆ, ಹೆಣ್ಣುಮಕ್ಕಳ ಪ್ರಾಮುಖ್ಯ ಮತ್ತು ಅನಿವಾರ್ಯತೆ, ದೇಹದಂಡನೆ, ಇವುಗಳಿಗೆ ನೇರವಾಗಿ ಇಲ್ಲವೆ ಪರೋಕ್ಷವಾಗಿ ಹೊಂದಿಕೊಂಡ ನಂಬಿಕೆಗಳು- ಇವೆಲ್ಲವೂ ಅವರ ಜೀವನ ಮತ್ತು ಧೋರಣೆಯ ಪರಿಚಯ ಮಾಡಿಕೊಡುತ್ತವೆ. ಶಮಾದಿ ಷಡ್ಗುಣಗಳ ಸಾಧನೆ ಮತ್ತು ಆ ಮೂಲಕ ಬ್ರಹ್ಮಸಾಧನೆಯ ಉನ್ನತಾದರ್ಶಕ್ಕೆ ಇವುಗಳು ಕೇವಲ ಮಾಧ್ಯಮಗಳಾದುದರಿಂದಲೇ ಪ್ರಾದೇಶಿಕ ವೈಶಿಷ್ಟ್ಯವು ಲೋಪವೆನಿಸುವುದರ ಬದಲು ಪೂರಕವೇ ಆಗುತ್ತದೆ. ಆದರೆ ಮಾಧ್ಯಮವನ್ನೇ ಗುರಿಯೆಂದು ಭ್ರಮಿಸುವುದರಿಂದ ಆಗುವ ಯಾಂತ್ರಿಕತೆಯು ಸಮಾಜದ ಧಾರ್ಮಿಕ ಜೀವನದ ಶೈಥಿಲ್ಯಕ್ಕೂ ಕಾರಣವಾಗಿದೆ. ಆಧುನಿಕ ಸನ್ನಿವೇಶವು ಪ್ರಶ್ನಿಸುವುದು ಇಂಥ ಅರ್ಥರಾಹಿತ್ಯವನ್ನು. ಅಲ್ಲದೆ, ಅದು ತನ್ನ ಜ್ಞಾನದ ಹೊಸ ಬೆಳಕಿನ ಮೂಲಕ ಸಂಪ್ರದಾಯಾಚರಣೆಗಳ ಬಹುಭಾಗವನ್ನು ಅರ್ಥಹೀನವಾಗಿಸಿದೆ; ಕೈಗಾರಿಕೀಕರಣದ ಯಾಂತ್ರಿಕ ಬದುಕು ಅದನ್ನು ಅಸಾಧ್ಯವಾಗಿಸಿಯೂ ಇದೆ. ಮೂಲದ ಸರಳ ಆಚರಣೆಯು ಪಡೆದುಕೊಂಡ ಗೊಂದಲಮಯವೂ ಗುಣಸಾಧ್ಯವಲ್ಲದ್ದೂ ಆದ ಸಂಕೀರ್ಣತೆಯೂ ಈ ಶೈಥಿಲ್ಯಕ್ಕೆ ಕಾರಣವಾಗಿದೆ. ಆದರೆ, ನಿಶ್ಚಯವಾಗಿಯೂ, ಶಾಂತಿ ಮತ್ತು ಪ್ರೀತಿಯ ಪಾತಳಿಯಲ್ಲಿ ನಡೆಸಲು ನೇರವಾಗಿ ಬದುಕನ್ನು ಸಹ್ಯವಾಗಿಸುವಲ್ಲಿ ಅವುಗಳ ಪಾತ್ರವಿದೆ ಎಂಬುದನ್ನೂ ಮರೆಯುವಂತಿಲ್ಲ. ಧರ್ಮದ ಹಿಡಿತವು ಸಡಿಲವಾಗುತ್ತಿರುವ ಸ್ಥಿತ್ಯಂತರ ಸ್ಥಿತಿಯಲ್ಲಿ ವೈಜ್ಞಾನಿಕ ಮನೋಭಾವ ಮತ್ತು ಖಚಿತ ವೈಚಾರಿಕತೆ ಪರ್ಯಾಯಶಕ್ತಿಯಾಗಬಹುದು. ಆದರೆ ಈಗಿನದು ಸ್ಥಿತ್ಯಂತರದ ಗೊಂದಲದ ಸ್ಥಿತಿಯಾಗಿದೆ ಎಂಬುದನ್ನು ಮಾತ್ರ ಗುರುತಿಸಬಹುದಾಗಿದೆ.

೭. ಅ. ಸಂಕೇತಿಗಳು, ತಾವು ನೆಲೆಸಿದ ಪ್ರದೇಶಗಳೊಂದಿಗೆ ತಾದಾತ್ಮ್ಯವನ್ನು ಸಾಧಿಸಿಕೊಳ್ಳುವ ಪ್ರವೃತ್ತಿಯವರಾದುದರಿಂದಲೇ, ಆ ಪುಟ್ಟ ಸಮುದಾಯದಲ್ಲಿಯೂ ಭಾಷಾಭೇದಗಳು ಕಾಣಿಸಿಕೊಂಡಿವೆ. ಕನ್ನಡನಾಡಿನಲ್ಲಿಯಂತೂ ಆ ಪ್ರವೃತ್ತಿಯು ಮುಂದುವರಿದು ಕನ್ನಡೀಕರಣವನ್ನು ಗಾಢವಾಗಿ ಸಾಧಿಸಿದೆ. ತಮಿಳುಮಾತೃಭಾಷೆಯು ಇಂದು 'ಸಂಕೇತಿಕನ್ನಡ ' ಎಂದು ಗುರುತಿಸಲು ಅವಕಾಶಕೊಡುವ ಸ್ಥಿತ್ಯಂತರವನ್ನು ಪಡೆದುದು ಭಾಷೆಯ ಪರಿವರ್ತನಶೀಲತೆಗೆ ಅನುಗುಣವಾದುದೂ ಹೌದು. ಮುಖ್ಯವಾಗಿ ಕರ್ನಾಟಕದ ಸಂಕೇತಿ ಭಾಷೆಯು ಪ್ರಾಕ್‌ದ್ರಾವಿಡ, ತಮಿಳು, ಮಲೆಯಾಳಂ, ಕನ್ನಡ ಭಾಷೆಗಳ ಒಡನಾಟದಿಂದಾಗಿ ಕೆಲವು ವಿಶಿಷ್ಟ ಲಕ್ಷಣಗಳನ್ನು ಪಡೆದಿದೆ. ಆ ಭಾಷೆಯು ನಶಿಸುತ್ತಿರುವ ಈ ಹೊತ್ತಿನಲ್ಲಿ, ಎಲ್ಲ ಸಂಕೇತಿ ಉಪಭಾಷೆಗಳ ತೌಲನಿಕ ಅಧ್ಯಯನವೊಂದರ ಅಗತ್ಯವಿದೆ.

ಆ. ಇಲ್ಲಿ, ಗದ್ಯಕಥನಗಳಲ್ಲಿ - ಐತಿಹ್ಯಗಳದೇ ಸಿಂಹಪಾಲು. ಚರಿತ್ರೆಯೇ ಐತಿಹ್ಯವಾಗಿ ಬೆಳೆದು ಪುರಾಣವಾಗಿ ರೂಪುಗೊಂಡ ನಾಚಾರಮ್ಮನ ಪ್ರಸಂಗವೊಂದೇ ಪುರಾಣದ ಗುಂಪಿನಲ್ಲಿರುವುದು. ಕತೆಗಳು ಸಾಕಷ್ಟು ಸಂಖ್ಯೆಯಲ್ಲಿ ದೊರೆಯುತ್ತವಾದರೂ, ಸಮುದಾಯವು ಗೌರವಿಸುವುದು ಮತ್ತು ಜತನಗೊಳಿಸಿರುವುದು ಐತಿಹ್ಯಗಳನ್ನು. ಕತೆಗಳಲ್ಲಿಯೂ ಸಂಕೇತಿಗಳ ಸಾಂಸ್ಕೃತಿಕ ಧೋರಣೆಯ ಸುಳುಹು ದೊರೆಯುತ್ತದಾದರೂ, ಐತಿಹ್ಯಗಳು ಅವರ ವಂಶಚರಿತ್ರೆಗಳ ಭಾಗವೇ ಆದುದರಿಂದ ಪೂರ್ಣವಾಗಿ ಅವರ ಸಂಸ್ಕೃತಿಯ ಕನ್ನಡಿಗಳೇ ಆಗಿವೆ. ಅವರ ಕ್ರಿಯಾತ್ಮಕ ಬಳಕೆಗೆ ಐತಿಹ್ಯಗಳು ಒಗ್ಗುವುದಕ್ಕೆ ಅವುಗಳ ಗಾತ್ರದ ನಮ್ಯಗುಣವೇ ಕಾರಣವಾಗಿದೆ. ಸಂಸ್ಕೃತಿಯನ್ನು ಮುಂದುವರಿಸುವ ಅವರ ಉದ್ದೇಶಕ್ಕೆ ಅದು ಸಾಕಾಗುತ್ತದೆ. ಈ ಮುಖ್ಯ ಅಂಶದಿಂದಾಗಿಯೇ ಈ ಸಮುದಾಯದಲ್ಲಿ ಬುದ್ಧಿವಂತಿಕೆ, ಆತ್ಮಚಿಕಿತ್ಸೆ, ನೈತಿಕತೆಗೆ ಒತ್ತುಕೊಟ್ಟ ಸರಳಕತೆಗಳೇ ಹೆಚ್ಚಾಗಿ ಬಳಕೆಯಲ್ಲಿವೆ. ಅವರ ಗದ್ಯಕಥನಗಳ ಸಂದರ್ಭದಲ್ಲಿ ಸಂಕೇತಿಗಳ ವಿದ್ಯಾಪ್ರೌಢಿಮೆ, ಆತ್ಮಪ್ರತ್ಯಯ, ಕ್ಷಾತ್ರ, ಛಲ,

ಸಾಹಸಪ್ರವೃತ್ತಿ, ಭೋಕ್ತಾಪಟುತ್ವ, ಆಧ್ಯಾತ್ಮಿಕ ವರ್ಚಸ್ಸು, ಪ್ರಾಮಾಣಿಕತೆ, ನಿಯಮನಿಷ್ಠೆ, ರಾಜ್ಯನಿಷ್ಠೆ, ಶ್ರದ್ಧೆ, ಮಾನವೀಯ ಅನುಕಂಪ, ಶ್ರಮಸಹಿಷ್ಣುತೆ, ನಿಶಿತಮತಿ, ಅಲೆಮಾರಿಪ್ರವೃತ್ತಿ ಮೊದಲಾದ ಗುಣಗಳು ಗಾಢವಾಗಿ ಪ್ರಕಟವಾಗುತ್ತವೆ.

ಇ. ಸಂಕೇತಿಗಳ ಧೋರಣೆ ಮತ್ತು ಪ್ರವೃತ್ತಿಯ ವಿವರಗಳು ಅವರ ಗಾದೆ, ಒಗಟು, ಪಾಟ್ಸ್‌ಗಳಲ್ಲಿಯೂ ಪ್ರಕಟಗೊಳ್ಳುತ್ತವೆ. ವಸ್ತುವೈವಿಧ್ಯದ ದೃಷ್ಟಿಯಿಂದ ಸಾರ್ವತ್ರಿಕ ಅಂಶಗಳು ಗಾದೆ ಮತ್ತು ಒಗಟುಗಳಲ್ಲಿ ಹೆಚ್ಚಾಗಿವೆ. ಪಾಟ್ಸ್‌ಗಳ ವಸ್ತುವು ಕರ್ನಾಟಕದಲ್ಲಿ ಬಹುಪಾಲು ಧಾರ್ಮಿಕವೇ ಆಗಿರುವುದಕ್ಕೆ, ಅವರು ಇಲ್ಲಿ ಸ್ವೀಕರಿಸಿರುವ ಹಬ್ಬ, ವ್ರತಗಳ ಆಧಿಕ್ಯವೇ ಕಾರಣವಾಗಿದೆ. ದಕ್ಷಿಣದಲ್ಲಿ ಹಾಡುಗಳ ಕ್ರಿಯಾತ್ಮಕ ಸಂದರ್ಭವೇ ಕಡಮೆಯಾದುದಕ್ಕೆ ಪರ್ವಾಚರಣೆಗಳ ಮಿತಿಯೇ ಕಾರಣ; ಆದರೆ ಅಲ್ಲಿ ಸಂಕೇತಿ ಪಾಟ್ಸ್‌ಗಳು ಬ್ರಾಹ್ಮಣಸಾಮಾನ್ಯವಾದುವಾಗಿವೆ. ಕರ್ನಾಟಕದಲ್ಲಿಯೂ ಅವು ದಕ್ಷಿಣ ಕರ್ನಾಟಕ ಬ್ರಾಹ್ಮಣ-ಸಾಮಾನ್ಯವಾಗಿರುವುದಕ್ಕೆ ಪ್ರಸರಣ ಗುಣವೇ ಕಾರಣವಾಗಿದೆ; ಅದರಲ್ಲಿ ಸಂಕೇತಿಗಳ ಕೊಡುಗೆಗೆ ಆಧಾರವಿದೆ. ಈ ಮೂರು ಪ್ರಕಾರಗಳಲ್ಲಿಯೂ ಸಂಕೇತಿಗಳು ಭಾಷೆಯನ್ನು ರೂಢಿಸಿಕೊಂಡ ವೈವಿಧ್ಯವನ್ನು ಕಾಣಬಹುದು. ಗಾದೆಯು ಸಮುದಾಯದ ಎಲ್ಲರ ಕ್ರಿಯಾತ್ಮಕ ಬಳಕೆಯದಾದರೆ ಪಾಟ್ಸ್‌ಗಳು ಸ್ತ್ರೀಯರಿಗೂ, ಒಗಟುಗಳು ಕೆಲವೇ ಆಸಕ್ತರಿಗೂ ಸೀಮಿತವಾಗುವುದು ಅವುಗಳ ಕಾರ್ಯಗುಣಗಳಿಂದಲೇ. ಗಾದೆಯು ಅದರ ಚಿಕಿತ್ಸಕತೆಗೆ, ಪಾಟ್ಸ್ ಅದರ ಧಾರ್ಮಿಕತೆಗೆ ಗೌರವಿತವಾದಂತೆ, ಸೀಮಿತ ಪಾತ್ರಿಗಳಿದ್ದಾಗಲೂ ಒಗಟು ಅದರ ಬೌದ್ಧಿಕ ಗುಣದಿಂದಾಗಿ ಗೌರವಿತವಾಗಿದೆ. ಒಗಟುಗಳನ್ನು ಕ್ರೀಡೆಯಾಗಿ ಸ್ವೀಕರಿಸಿದಾಗಲೂ ಅದರ ಅವಧಿಯ ಬಗೆಗೆ ಅವರೇ ಇಟ್ಟುಕೊಂಡ ನಮ್ಯತೆಯು ಸಮುದಾಯದಲ್ಲಿ ಅದು ಉಳಿದುಕೊಳ್ಳಲು ಸಹಾಯಕವಾಗಿದೆ. 'ಪಾಟ್ಸ್'ಗಳು ದಿನವಿಡೀ ಮನೆಯಲ್ಲಿ ಕೇಳಿಬರುತ್ತಿರುವಂತೆ ನೋಡಿಕೊಳ್ಳುವ ಪ್ರವೃತ್ತಿಯಿಂದಾಗಿ ಅಪಾರ ಸ್ವೀಕರಣಗಳು ನಡೆದಿವೆ; ವೃದ್ಧೆಯರೂ ಹೊಸ ಪಾಟ್ಸ್‌ಗಳನ್ನು ಕಲಿಯುವುದಕ್ಕೆ ಪ್ರೇರಣೆ ನೀಡಿದೆ. ಅದು ಸಾಧ್ಯವಾದುದು ಅವರಿಗೆ ಗೌರವಾದರದ ಧಾರ್ಮಿಕವಸ್ತು ಅದರಲ್ಲಿರುವುದರಿಂದ. ವಿಧವೆಯರು ಹತಾಶರಾಗದಂತೆ ಮಾಡುವ ಶಕ್ತಿ ಅದರಲ್ಲಿ ಪ್ರಕಟವಾದುದರಿಂದಲೇ ಮಧ್ಯವಯಸ್ಸಿನ ಅನಂತರ 'ಪಾಟ್ಸ್'ಗಳ ಕಲಿಕೆಗೆ ವಿಶೇಷ ಆಸಕ್ತಿತಳೆದ ನಿದರ್ಶನಗಳು ಇಲ್ಲಿ ದೊರೆಯುತ್ತವೆ. ಧಾರ್ಮಿಕವಸ್ತುವಿನ ಆಧಿಕ್ಯದಿಂದಾಗಿ ರಮ್ಯತೆ ಅವರ ಹಾಡುಗಳಲ್ಲಿ ಸೊರಗಿದರೂ ಪ್ರತಿಭಾಮೂಲದ ಭಾವನಿರ್ಭರತೆಗೆ ಎಲ್ಲಿಯೂ ಕುಂದುಬಂದಿಲ್ಲ. ಒಟ್ಟಿನಲ್ಲಿ ಅವರ ಭಾಷೆ ಮತ್ತು ಸಾಹಿತ್ಯದ ಎಲ್ಲ ಪ್ರಕಾರಗಳಲ್ಲಿಯೂ ಅವರ ಸಾಂಸ್ಕೃತಿಕ ಛಾಪು ಒಂದಲ್ಲ ಒಂದು ರೀತಿಯಲ್ಲಿ, ಪ್ರಮಾಣದಲ್ಲಿ, ರೂಪದಲ್ಲಿ ಕಾಣಿಸಿಕೊಂಡಿದೆ ಎಂಬುದನ್ನು ಗಮನಿಸಬೇಕು.

೮. ನಿಬಂಧದ ವಿವರಗಳಲ್ಲಿ ಸಂಕೇತಿ ಸಮುದಾಯದ ಅನನ್ಯತೆಯು ಸ್ಪಷ್ಟಗೊಳ್ಳುತ್ತಾ ಸಾಗಿರುವುದರ ಜೊತೆಗೆ, ವಿಶ್ವಸಾಮಾನ್ಯಗಳ ಅಳವಡಿಕೆಗೂ ನಿದರ್ಶನಗಳು ದೊರೆತಿವೆ. ಸಮುದಾಯದ ಸಾಂಪ್ರದಾಯಿಕ ಜೀವನವು ತೀವ್ರವಾಗಿ ಆಧುನಿಕ ಸಾರ್ವತ್ರಿಕ ಸ್ವರೂಪವನ್ನು ಪಡೆಯುತ್ತಿದ್ದರೂ, ಪೂರ್ಣವಾಗಿ ಅದರ ವೈಶಿಷ್ಟ್ಯವು ತೊಡೆದುಹೋಗಿಲ್ಲ ಎಂಬುದೂ ಇಲ್ಲಿ ಸ್ಪಷ್ಟವಾಗಿದೆ.

೯. ಪ್ರಾಮಾಣಿಕರು, ಧರ್ಮಶ್ರದ್ಧೆ ಉಳ್ಳವರು, ಕರ್ಮಠರು, ವಿದ್ಯೆಗಾಗಿ ವಿದ್ಯೆಕಲಿತು ಉನ್ನತಬೌದ್ಧಿಕ ಪರಂಪರೆಯನ್ನು ಮುಂದುವರಿಸಿಕೊಂಡು ಬಂದಿರುವವರು, ಆಧ್ಯಾತ್ಮಿಕ ಸಂವೇದನಾಶೀಲರು ಮತ್ತು ದೃಢಕಾಯರೂ ಆದ ಸಂಕೇತಿಗಳು ಅವರು ನೆಲೆಸಿದ ದೇಶಗಳ ಜೀವನದ ಮುಖ್ಯ ಪ್ರವಾಹದಲ್ಲಿ ಒಂದಾಗಿ ಸಾಗಿದ್ದಾರೆ. ನಿದರ್ಶನಕ್ಕೆ:

ಅ. ಕರ್ನಾಟಕದಲ್ಲಿ ತಾವು ನೆಲೆಸಿದ ಎಡೆಗಳಲ್ಲಿ ಸಹಸ್ರಾರು ಎಕರೆ ಅಡಿಕೆ ತೋಟಗಳನ್ನು ಬೆಳೆಸಿ ಅಂಥದೊಂದು ವ್ಯವಸಾಯ ಪರಂಪರೆಯನ್ನು ನಿರ್ಮಿಸಿದುದು; ಅದಕ್ಕಾಗಿ ಅನೇಕ ಕೆರೆಗಳನ್ನು ಕಟ್ಟಿಸಿದುದು.

ಆ. ಸಮರ್ಥ ವೇದಶಾಸ್ತ್ರ ಪರಂಪರೆಯ ಒಂದು ಮುಖ್ಯಭಾಗವಾದುದು.

ಇ. ಕರ್ನಾಟಕದ ರಾಜಮನೆತನಗಳಲ್ಲಿ ವಿವಿಧ ರೀತಿಯ ಸೇವೆ ಸಲ್ಲಿಸಿದುದು: ವಿಜಯನಗರ ಸಾಮ್ರಾಜ್ಯ ಸ್ಥಾಪನೆಯ ಪ್ರೇರಕ ಮತ್ತು ಪೋಷಕ ಶಕ್ತಿಯಾಗಿ ವಿದ್ಯಾರಣ್ಯರು ನಿಂತುದು, ಮೈಸೂರು ಅರಸರ ರಾಜಕೀಯ ಇತಿಹಾಸದ ಮುಖ್ಯ ತಿರುವಿಗೆ

ಬಕ್ಷಿ ತಿಪ್ಪಯ್ಯನವರು ಕಾರಣೀಭೂತರಾದುದು; ಹಾಗೆಯೇ, ತಿರುವಾಂಕೂರು ಸಂಸ್ಥಾನದ ಸ್ಥಾಪನೆಗೆ ಕಾರಣರಾದ ಮೂವರು ಪ್ರಧಾನರಲ್ಲಿ ರಾಮೈಯ್ಯನ್ ದಳವಾಯಿ ಎಂಬ ಸಂಕೇತಿಯೂ ಒಬ್ಬಾತನೆಂಬುದು - ಸಂಕೇತಿಗಳ ಮಣ್ಣಿನನಿಷ್ಠೆಗೆ ಪ್ರಬಲ ಸಾಕ್ಷಿಗಳಾಗಿವೆ. ಈ ಸಮುದಾಯದ ಅನಂತಸುಬ್ಬರಾವ್ ಕನ್ನಡದ 'ಬೆರಳಚ್ಚು ಬ್ರಹ್ಮ' ಎನಿಸಿದರು ಎಂಬುದೂ ಈ ದೃಷ್ಟಿಯಿಂದ ಮುಖ್ಯವಾದುದು.

ಅಹಂಕಾರದ ಭ್ರಮೆಯನ್ನುಂಟುಮಾಡುವಷ್ಟು ಆತ್ಮಪ್ರತ್ಯಯ, ಆತ್ಮವಿಶ್ವಾಸ; ಸಾತ್ವಿಕರಾದರೂ ಒರಟರಂತೆ ಕಾಣುವ ವರ್ತನೆ; ವ್ಯವಸ್ಥೆಯ ವಿರುದ್ಧ ಬಂಡೇಳುತ್ತಿರುವಂತೆ ಭ್ರಮೆ ಹುಟ್ಟಿಸುವಷ್ಟು ಶೋಷಣೆಗೆ ಒಪ್ಪಿಸಿಕೊಳ್ಳದ ಹೋರಾಟಗುಣ; ಹೊಸ ಸವಾಲುಗಳಿಗೆ ಮುಕ್ತಾಹ್ವಾನ; ಎಲ್ಲ ಪರಿಸರಗಳಲ್ಲಿ ಹೊಂದಿಕೊಳ್ಳುವ ಗುಣ; ಲೌಕಿಕತೆಯನ್ನು ಮೀರಿದ ವರ್ತನೆ - ಸಂಕೇತಿಗಳ ಕೆಲವು ಸ್ವಭಾವಗಳಾಗಿವೆ.

೧೦. ಸಂಕೇತಿಗಳು ಆರ್ಥಿಕ ಕ್ಷೋಭೆಯ ಬಾಗಿಲಲ್ಲಿರುವ ಮತ್ತು ಸಾಂಸ್ಕೃತಿಕ ಸ್ಥಿತ್ಯಂತರದಲ್ಲಿರುವ ಈ ಹೊತ್ತಿನಲ್ಲಿ ಮಾಡಬಹುದಾದುದು:

ಅ. ಸಾಂಸ್ಕೃತಿಕ ವೈವಿಧ್ಯದ ಅರ್ಥಪೂರ್ಣ ಪರಿಸರವಿರಬೇಕೆಂಬ ವಿಶ್ವತತ್ತ್ವದ ಹಿನ್ನೆಲೆಯಲ್ಲಿ, ವೇದಶಾಸ್ತ್ರಗಳ ಉತ್ತಮಾಂಶದ ಗಾಢ ಪರಂಪರೆಯು ಪ್ರಾತಿನಿಧಿಕವಾಗಿಯಾದರೂ ಉಳಿಯುವಂತೆ ಸೌಲಭ್ಯಗಳನ್ನೊದಗಿಸುವುದು.

ಆ. ತೋಟಗಾರಿಕೆಯಲ್ಲಿ ತಮ್ಮದೇ ನೈಪುಣ್ಯ ಪಡೆದಿರುವ ಮತ್ತು ಕೃಷಿ ಹಾಗೂ ಪಶುಪಾಲನೆಯೊಂದಿಗೆ ಪಾರಂಪರಿಕವಾದ ಪ್ರೀತಿಯ ನಂಟನ್ನು ಹೊಂದಿದ ಈ ಸಮುದಾಯಕ್ಕೆ ತತ್ಸಂಬಂಧದ ಸೌಲಭ್ಯಗಳನ್ನೊದಗಿಸುವುದು.


ಇ. ಸಂಕೇತಿಗಳ ಬದುಕನ್ನು ಕುರಿತ ಸಾಕ್ಷ್ಯಚಿತ್ರ ತಯಾರಿಸಿ ಅವರ ವಿಶಿಷ್ಟ ಜೀವನವನ್ನು ನೆನಪಿನಲ್ಲಿ ಉಳಿಸುವುದು.

ಈ. ಬಹುಮುಖ ಪ್ರತಿಭೆಯ ಪರಂಪರೆ ಇರುವುದರಿಂದ, ದೇಶವು ಅದನ್ನು ಸೂಕ್ತವಾಗಿ ಬಳಸಿಕೊಳ್ಳುವುದು.

ಅನುಬಂಧಗಳು

ಅನುಬಂಧ - ೧


ನಕ್ಷೆಗಳು



ನಕ್ಷೆ ೧ : ಸಂಕೇತಿಗಳ ನೆಲೆಗಳು ಮಲೆನಾಡಿನ ಸೆರಗಿನಲ್ಲಿರುವುದು


ದಕ್ಷಿಣದ ಸಂಕೇತಿಗಳು ಶೆಂಕೋಟ್ಟೈನಿಂದ ಮಧುರೈ, ತಿರುಚಿನಾಪಳ್ಳಿ, ಈರೋಡ್, ಸೇಲಂ, ಶಿವನಸಮುದ್ರದ ಮಾರ್ಗವಾಗಿ ಕರ್ನಾಟಕಕ್ಕೆ ಬಂದುದು - ಕಾವೇರಿ, ತುಂಗಭದ್ರಾ, ತಾಮ್ರಪರ್ಣಿ, ವೈಗೈ ನದಿಗಳು - ಕೆಲ ಮುಖ್ಯ ನೆಲೆಗಳು

ಆಧಾರ : **Life of Nacharamma (History of Her Migration)**



ನಕ್ಷೆ ೨ : ಕರ್ನಾಟಕ, ಕೇರಳ, ತಮಿಳುನಾಡು ಗಡಿಗಳು, ಸನ್ನಿವೇಶ


ಮತ್ತೂರು, ಬಸವಾನಿ, ಲಿಂಗದಹಳ್ಳಿ, ಹಾಸನಸೀಮೆ, ಮಧ್ಯದೇಶ, ದಕ್ಷಿಣದೇಶ, ದಕ್ಷಿಣ - ನದಿಗಳು - ಪಶ್ಚಿಮ ಘಟ್ಟಸಾಲು - ಶೆಂಕೋಟ್ಟೈ, ತಿರುನೆಲ್‌ವೇಲಿ, ಕನ್ಯಾಕುಮಾರಿ, ತಿರುವನಂತಪುರಂ ಪರಿಧಿಯಲ್ಲಿಯೇ ಸಂಕೇತಿಗಳಿರುವುದು



ನಕ್ಷೆ ೩ : ಕರ್ನಾಟಕದಲ್ಲಿ ಸಂಕೇತಿಗಳ ಪ್ರಾಥಮಿಕ ನೆಲೆಗಳು


ವಿನಯಾದಿತ್ಯನ ಕೊನೆ ಮತ್ತು ವಿಷ್ಣುವರ್ಧನನ ಪ್ರಾರಂಭಿಕ ಕಾಲದ ರಾಜ್ಯ ವಿಸ್ತಾರದ ಪರಿಧಿಯಲ್ಲಿಯೇ ಇರುವುದು

ಆಧಾರ : **The Hoysalas - A Medieval Indian royal family**




ನಕ್ಷೆ ೪ : ಸಂಕೇತಿಗಳ ಮಹಾವಲಸೆಯ ಸಂದರ್ಭದ ಚೋಳ, ಪಾಂಡ್ಯ, ಚಾಲುಕ್ಯ ರಾಜ್ಯಗಳು

ಆಧಾರ **: A Historical Atlas of the Indian peninsula, Collin C. Davis, 1949, (2nd Ed.) P.29**



ನಕ್ಷೆ ೫ : ಕರ್ನಾಟಕದಲ್ಲಿ ಸಂಕೇತಿಗಳ ನೆಲೆಗಳು


ತಾಲ್ಲೂಕುಗಳ ವಿವರ



ನಕ್ಷೆ ೫೮ : ಕರ್ನಾಟಕದಲ್ಲಿ ಸಂಕೇತಿಗಳ ನೆಲೆಗಳು

ವಸತಿ ವಿವರ


ಆಧಾರ : ಶ್ರೀ ನಾಚಾರಮ್ಮನ ಜೀವನಚರಿತ್ರೆ (ಆಕೆಯ ಪ್ರವಾಸ)



ನಕ್ಷೆ ೫ ಆ : ಕರ್ನಾಟಕದಲ್ಲಿ ಸಂಕೇತಿಗಳ ನೆಲೆಗಳು

ಬಳ್ಳಾರಿ ಜಿಲ್ಲೆಯ ನೆಲೆಗಳು


(ಕೆಳಗೆರೆ ಹಾಕಿದುವು)



ನಕ್ಷೆ ೫೩ : ಕರ್ನಾಟಕದಲ್ಲಿ ಸಂಕೇತಿಗಳ ನೆಲೆಗಳು

ಧಾರವಾಡ ಜಿಲ್ಲೆಯ ನೆಲೆಗಳು


(ಕೆಳಗೆರೆ ಹಾಕಿದುದು)



ನಕ್ಷೆ ೫೬ : ಕರ್ನಾಟಕದಲ್ಲಿ ಸಂಕೇತಿಗಳ ನೆಲೆಗಳು

ಚಿಕ್ಕಮಗಳೂರು ಜಿಲ್ಲೆಯ ನೆಲೆಗಳು


(ಕೆಳಗೆರೆ ಹಾಕಿದುವು)



ನಕ್ಷೆ ೫೭ : ಕರ್ನಾಟಕದಲ್ಲಿ ಸಂಕೇತಿಗಳ ನೆಲೆಗಳು

ಹಾಸನ ಜಿಲ್ಲೆಯ ನೆಲೆಗಳು


(ಕೆಳಗೆರೆ ಹಾಕಿದುವು)



ನಕ್ಷೆ ೫೭ : ಕರ್ನಾಟಕದಲ್ಲಿ ಸಂಕೇತಿಗಳ ನೆಲೆಗಳು

ಶಿವಮೊಗ್ಗ ಜಿಲ್ಲೆಯ ನೆಲೆಗಳು


(ಕೆಳಗೆರೆ ಹಾಕಿದುವು)



ನಕ್ಷೆ ೫೨ : ಕರ್ನಾಟಕದಲ್ಲಿ ಸಂಕೇತಿಗಳ ನೆಲೆಗಳು

ಕೊಡಗು ಜಿಲ್ಲೆಯ ನೆಲೆಗಳು


(ಕೆಳಗೆರೆ ಹಾಕಿದುವು)



ನಕ್ಷೆ ೫೩ : ಕರ್ನಾಟಕದಲ್ಲಿ ಸಂಕೇತಿಗಳ ನೆಲೆಗಳು

ಮೈಸೂರು ಜಿಲ್ಲೆಯ ನೆಲೆಗಳು


(ಕೆಳಗೆರೆ ಹಾಕಿದುವು)



ನಕ್ಷೆ ೫೨ : ಕರ್ನಾಟಕದಲ್ಲಿ ಸಂಕೇತಿಗಳ ನೆಲೆಗಳು


ಮಂಡ್ಯ ಜಿಲ್ಲೆಯ ನೆಲೆಗಳು

(ಕೆಳಗೆರೆ ಹಾಕಿದುವು)




ನಕ್ಷೆ ೬ : ದಕ್ಷಿಣದಲ್ಲಿ ಸಂಕೇತಿಗಳ ನೆಲೆಗಳು

ಕೊಲ್ಲಂ - ವರ್ಕಲೈ - ತಿರುವನಂತಪುರಂ - ನಾಗರಕೋಯಿಲ್ - ಶುಚೀಂದ್ರಂ - ಕನ್ಯಾಕುಮಾರಿ - ತಿರುಚಂದೂರು - ವಡಕ್ಕು - ಕಲಕ್ಕಾಡ್ - ನಂಗುನೇರಿ - ಶೆಂಕೋಟ್ಟೈ - ಪುನಲೂರ್ - ಕೊಟ್ಟಾರಕ್ಕರ - ಅಂಬಾಸಮುದ್ರಂ - ತಿರುನೆಲ್‌ವೇಲಿ - ತೆಂಕಾಸಿ - ಎಲತ್ತೂರ್ - ಶಂಕರನ್ ಕೋವಿಲ್ - ರಾಮೇಶ್ವರಂ - ಕೊಟ್ಟಾಯಂ




ನಕ್ಷೆ ೭ : ಮಳೆ ಹಂಚಿಕೆ

ಆಧಾರ **: A Historical Atlas of the Indian peninsula**




ನಕ್ಷೆ : ೮


ಒಂದು ಮಾದರಿ ದ್ರಾವಿಡ ಗ್ರಾಮದ ದೇವಸ್ಥಾನ ಪ್ರದೇಶದ ನಕ್ಷೆ




ನಕ್ಷೆ ೯ : ದೇವಸ್ಥಾನವನ್ನು ಮಗ್ಗುಲಿಗೆ ಬಿಟ್ಟುಕೊಂಡ ಚೌಕಬೀದಿಗಳ 'ಗ್ರಾಮ' ರಚನೆ



ನಕ್ಷೆ: ೯ ಈ
ಬಸವಪಟ್ಟಣ ಗ್ರಾಮ




ನಕ್ಷೆ: ೯ ಉ
ಬೆಟ್ಟದಪುರ ಗ್ರಾಮ




ನಕ್ಷೆ: ೯ ಊ

ಮತ್ತೂರು ಗ್ರಾಮ




ನಕ್ಷೆ: ೯ ಋ

ಮೊಸಳೆ ಗ್ರಾಮ




ನಕ್ಷೆ: ೧೦ ಅ. ಕೌಶಿಕ ಗ್ರಾಮ




ನಕ್ಷೆ: ೧೦ ಆ. ಕೃಷ್ಣಾಪುರ ಗ್ರಾಮ

ನಕ್ಷೆ ೧೦ : ಕರ್ನಾಟಕದ ಪ್ರಚೀನ ನೆಲೆಗಳಲ್ಲಿ ಕಾಣುವ ಓಣಿಮನೆಗಳ ರೀತಿ


ನಕ್ಷೆ: ೧೧ ಅ. ತಿರುನೆಲ್‌ವೇಲಿಯ ಒಂದು ಗೃಹ ನಕ್ಷೆ




ನಕ್ಷೆ: ೧೧ ಆ. ಶೆಂಕೋಟ್ಟೈ ಗೃಹ ನಕ್ಷೆ



ನಕ್ಷೆ: ೧೧ ಈ. ಮತ್ತೂರು ಗೃಹ ನಕ್ಷೆ




ನಕ್ಷೆ: ೧೧ ಇ. ಎರಚ್ಚಕೊಳಂ ಗೃಹ ನಕ್ಷೆ



ಗಮನಿಸಿ: ಅ) ಪಕ್ಕಕ್ಕೆ ವಿಭಜನೆಯ ಕಾರಣ ಹಿಂದಕ್ಕೆ ವಿಸ್ತರಣ ಆ)ಅಗಲಕ್ಕಿಂತ ಉದ್ದವಾಗಿರುವುದು ಇ)ತೊಟ್ಟಿ ಇರುವುದು ಈ)ಮುಂಭಾಗದಲ್ಲಿ ಮಹಡಿ - ಇವುಗಳ ಸಮಾನಾಂಶಗಳು


11 'ದಕ್ಷಿಣ' ಮತ್ತು ಮತ್ತೂರಿನ ಟೆಲಿಸ್ಕೋಪಿಕ್ ಮನೆಗಳ ರಚನೆಯಲ್ಲಿ ಕಾಣುವ ಸಾಮ್ಯ



ನಕ್ಷೆ: 12 *ಅ. ಅಗ್ರಹಾರದ ೪ ಶತಮಾನಗಳಿಗೂ ಹಳತಾದ ತೊಟ್ಟಿಮನೆಯೊಂದರ ನಕ್ಷೆ*

ಗಮನಿಸಿ: ಅ) ೭ ಸಂಸಾರಗಳಿಗಾಗಿ ಮನೆ ಒಡೆದ ರೀತಿ ಆ) ಕೊಟ್ಟಿಗೆಯೂ ಪ್ರತ್ಯೇಕ ತೊಟ್ಟಿಯೇ. ಈಗ ಅದರಲ್ಲಿಯೂ ೭ ಬಚ್ಚಲು ವ್ಯವಸ್ಥೆ ಆಗಿದೆ. ಈ) ಮನೆ ಕಟ್ಟಲು ಹೆಚ್ಚಾಗಿ ತೆಂಗು, ಅಡಿಕೆ ಬಳಕೆಯಾಗಿದೆ ಉ) ಈಗಲೂ ಸುಸ್ಥಿತಿಯಲ್ಲಿದೆ.

12. ಮನೆಯ ಭಾಗಗಳು



1 ತುಳಸಿ ಕಟ್ಟೆ

2 ತೊಟ್ಟಿ

3 ೧೬ ಕಂಬಗಳು


4 ಮನೆಗಳ ಬಾಗಿಲುಗಳು

5 ಮತ್ತೆ ವಿಭಾಗವಾದ ಮನೆಗಳು

ಹೊರಗೋಡೆಗಳು ಸಮಾಂತರವಾಗಿ ಇದ್ದು,
ನಡುವೆ ಮರಳು ತುಂಬಿದೆ

ನಕ್ಷೆ: 12 ಆ


ರುದ್ರಪಟ್ಟಣದ ೩೦೦ ವರ್ಷ ಹಳತಾದ ತೊಟ್ಟಿ ಮನೆಯೊಂದರ ನಕ್ಷೆ



ಗಮನಿಸಿ ಅ. ಪೂರಾ ಕೊಟ್ಟಿಗೆ ಇದ್ದ ಜಾಗದಲ್ಲಿ ಕೋಣೆ ಹೊಸದಾಗಿ ಬಂದಿದೆ
ಆ. ಬಾಗಿಲು ಓಣಿಗೆ ಮುಖ ಮಾಡಿದೆ

ಕೌಶಿಕದ ಗುಡಾರಗಟ್ಟು ಮನೆಯ ನಕ್ಷೆ

ನಕ್ಷೆ: 12 ಇ



ಲಿಂಗದಹಳ್ಳಿಯ ಕೌಳಿಗೆ ಮನೆಯ ನಕ್ಷೆ

ನಕ್ಷೆ: 12 ಈ

ಅನುಬಂಧ - ೨

ಪಟ್ಟಿಗಳು

ಪಟ್ಟಿ ೧. ಬ್ರಾಹ್ಮಣ ಉಪವಿಭಾಗಗಳು

ಕ್ರಮ ಸಂಖ್ಯೆ	ಅ. ವಿಂಧ್ಯೋತ್ತರ ಪಂಚಗೌಡ ಭೇದಗಳು	ಉಪಜಾತಿಗಳ ಸಂಖ್ಯೆ
೧	ಸಾರಸ್ವತ ಬ್ರಾಹ್ಮಣರು: (ಪಂಜಾಬಿನ ಸರಸ್ವತೀ ನದೀ ಬಯಲು)	೪೦೦
೨	ಗೌಡ ಅಥವಾ ಗೌರ್ ಬ್ರಾಹ್ಮಣರು: (ಬಂಗಾಳವೂ ಸೇರಿದಂತೆ ಉತ್ತರದ ಬಹುಭಾಗ)	೧೭
೩	ಕನ್ಯಾಕುಬ್ಜ ಅಥವಾ ಕನೂಜಿಯಾ ಬ್ರಾಹ್ಮಣರು: (ಕನ್ಯಾಕುಬ್ಜ ಪ್ರಾಂತ; ನವಕನೂಜ್)	೨೦೦
೪	ಮಿಥಿಲಾ ಬ್ರಾಹ್ಮಣರು: (ನವಬಿಹಾರ್; ತಿರ್ಹುಟ್; ಜನಕನ ರಾಜ್ಯ)	೨೦
೫	ಉತ್ಕಲ ಬ್ರಾಹ್ಮಣರು: (ನವಒರಿಸ್ಸ ಮತ್ತು ಗಂಜಾಂ ಜಿಲ್ಲೆಗಳು)	೨೫

ಕ್ರಮ ಸಂಖ್ಯೆ	ಆ. ವಿಂಧ್ಯದಕ್ಷಿಣ ಪಂಚದ್ರಾವಿಡ ಭೇದಗಳು	ಉಪಜಾತಿಗಳ ಸಂಖ್ಯೆ
೧	ಮಹಾರಾಷ್ಟ್ರ ಬ್ರಾಹ್ಮಣರು: (ಬಾಂಬೆಪ್ರಾಂತ) (೧) ದೇಶಸ್ಥರು (ಪೂನಾಭಾಗ) (೨) ಕೊಂಕಣಸ್ಥ (ಬಾಂಬೆಕೊಂಕಣ) (೩) ಕಾರ್ತ್ರರ (ಸತಾರಾ ಜಿಲ್ಲೆ).	೩೪
೨	ತೆಲಿಂಗ ಅಥವಾ ಆಂಧ್ರ ಬ್ರಾಹ್ಮಣರು: (ಆಂಧ್ರದೇಶ)	೧೬
೩	ಗುರ್ಜರ ಬ್ರಾಹ್ಮಣರು: (ಗುಜರಾತು) (೧) ಖೇಡವಾಲ್ಸ್ (೨) ನಗರ್ ಬ್ರಾಹ್ಮಣರು - ಮಧ್ಯದೇಶ	೧೬೦
೪	ಕರ್ನಾಟಕ ಬ್ರಾಹ್ಮಣರು: (ಕರ್ನಾಟಕ)	೧೭
೫	ದ್ರಾವಿಡಬ್ರಾಹ್ಮಣರು ಅಥವಾ ತಮಿಳರು: (ತಮಿಳುದೇಶ)	೫

(ಆಧಾರ: ಡಾ.ವಿಲ್ಸನ್ ಅವರ ವಿವರ : Hindu religion, customs and manners, P.13)

ಡಾ.ವಿಲ್ಸನ್ ಇಪ್ಪತ್ತೈದಕ್ಕೂ ಕಡಮೆ ಇಲ್ಲದಂತೆ ಬ್ರಾಹ್ಮಣಜಾತಿಗಳನ್ನು ಉಲ್ಲೇಖಿಸಿದ್ದಾನೆ. ಅವುಗಳ ಅಸಂಖ್ಯ ಉಪಜಾತಿಗಳೂ ಇವೆ. ವೇದ, ಗೋತ್ರ, ಸೂತ್ರ, ಪ್ರವರಗಳಿಗೆ ಸಂಬಂಧಿಸಿದಂತೆ ಸಾಕಷ್ಟು ವೈವಿಧ್ಯವಿದ್ದರೂ ಅವು ಜಾತಿ ಉಪಜಾತಿಗಳನ್ನು ಸೃಷ್ಟಿಸುವುದಿಲ್ಲ. ಬದಲಿಗೆ, ಪ್ರಾದೇಶಿಕತೆ ಅಂಥ ಜಾತಿಸೃಷ್ಟಿಯಲ್ಲಿ ಪ್ರಧಾನಪಾತ್ರ ವಹಿಸಿರುವುದನ್ನು ಕಾಣಬಹುದು. ಪಟ್ಟಿಯಲ್ಲಿ ತೋರಿಸಿರುವ ಉಪಜಾತಿಗಳ ಸಂಖ್ಯೆ ಡಾ.ವಿಲ್ಸನ್ 'ಕೊನೆಯಪಕ್ಷ' ಇವೆಯೆಂದು ಹೇಳಿದಂಥವು. ಅವುಗಳ ಸಂಖ್ಯೆ ಇನ್ನೂ ದೊಡ್ಡದಿದೆ. ಇವಿಷ್ಟೇ ಅಲ್ಲದೆ, ಕಾಶ್ಮೀರೀಬ್ರಾಹ್ಮಣರು ಮತ್ತು ಅವರ ಉಪಜಾತಿಗಳು; ಕೇರಳ, ರಾಜಾಸ್ಥಾನ, ನೇಪಾಳ, ಮಧ್ಯಪ್ರದೇಶ ಮತ್ತು ಬಂಗಾಳದ ಬ್ರಾಹ್ಮಣರು ಪ್ರತ್ಯೇಕವಾಗಿ ನಿಲ್ಲುತ್ತಾರೆ.

ಪಟ್ಟಿ ೨. ಮಹಾವಲಸೆಯ ಸಂದರ್ಭದಲ್ಲಿ ಕರ್ನಾಟಕಕ್ಕೆ ಬಂದ ಸಂಕೇತಿಗಳ ಸಂಖ್ಯೆಯನ್ನು ಕುರಿತಂತೆ ದೊರೆಯುವ ದಾಖಲೆಗಳು

ಕ್ರಮ ಸಂಖ್ಯೆ	*ದಾಖಲೆ*	*ಕೌಶಿಕ*	*ಬೆಟ್ಟದಪುರ*	*ಲಿಂಗದಹಳ್ಳಿ*	*ಹಿರಿಯಂಗಳ*	*ನೀಲಗುಂದ ಶಾಂತಿಗ್ರಾಮ*
೧	ನೀಲಗುಂದ ಶಾಸನ (ಕ್ರಿ.ಶ.೧೦೮೭, ೧೧೨೩)					೩೦೦ ಕುಟುಂಬ
	ಶಾಂತಿಗ್ರಾಮ ಶಾಸನ (ಕ್ರಿ.ಶ.೧೧೨೩)					?
೨	ಮೈಸೂರು ಖಾನೇಷುಮಾರಿ ವರದಿ (ಕ್ರಿ.ಶ.೧೮೭೧)	೭೦೦ ಕುಟುಂಬ	೩೦೦ ಕುಟುಂಬ			
೩	ಮೈಸೂರು ಖಾನೇಷುಮಾರಿ ವರದಿ (ಕ್ರಿ.ಶ.೧೮೯೧)	೭೦೦ ಕುಟುಂಬ	೩೦೦ ಕುಟುಂಬ			
೪	ಅನಂತಕೃಷ್ಣ ಅಯ್ಯರ್ ಎಲ್.ಕೆ. (೧೯೨೮-೧೯೩೬)	೭೦೦ ಕುಟುಂಬ	೩೦೦ ಕುಟುಂಬ	೫೦-೬೦ ಕುಟುಂಬ	೫೦-೬೦ ಕುಟುಂಬ	
೫	ಎಂ.ಕೇಶವಯ್ಯ (ಕ್ರಿ.ಶ.೧೯೩೩) ಪು.೨೬	೭೦೦-೮೦೦ ಕುಟುಂಬ	೩೦೦ ಕುಟುಂಬ	೬೦ ಕುಟುಂಬ	೧೫೦ ಕುಟುಂಬ	
೬	ಅಣ್ಣಾಜಿ ನಾರಾಯಣಸ್ವಾಮಿ ಓಲೆಗರಿಗ್ರಂಥ, (ವಿಶ್ವೇಶ್ವರಾವಧಾನಿ ಮೈಸೂರು)	ಮೊದಲು ೭೦೦ ಕುಟುಂಬ	೩೦೦ ಕುಟುಂಬ			
೭	ಸಿ.ಎಸ್.ರಾಮಚಂದ್ರ: ಜನಗಣತಿ ವರದಿಗಳನ್ನಾಧರಿಸಿ (ಕ್ರಿ.ಶ.೧೯೮೫, ಪು.೨೭)	೩೦೦ ಕುಟುಂಬ	೨೦೦ ಕುಟುಂಬ			

ಪಟ್ಟಿ ೩. ಕರ್ನಾಟಕದ ಇತ್ತೀಚಿನ ಜನಗಣತಿಯ ವರದಿಗಳು

೧	ಮೈಸೂರು ಖಾನೇಷುಮಾರಿ ವರದಿ ಕ್ರಿ.ಶ.೧೮೯೧	ಒಟ್ಟು ಜನಸಂಖ್ಯೆ ೨೫೨೨	+ ದ್ರಾವಿಡರೆಂದು ದಾಖಲಾದವರು		
೨.	ಅರ್ಧಶತಮಾನದ ಹಿಂದೆ ಪುರೋಹಿತರ ಮೌಖಿಕ ಗಣತಿ-ಪಟ್ಟಣವಾಸಿಗಳೂ ಸೇರಿ	ಕೌಶಿಕ ಸಂಕೇತಿ ೧೫೦೦ ಕುಟುಂಬಗಳು (ಮತ್ತೂರು ಸೇರಿ)	ಬೆಟ್ಟದಪುರ ಸಂಕೇತಿ ೩೦೦ ಕುಟುಂಬಗಳು	ಲಿಂಗದಹಳ್ಳಿ ಸಂಕೇತಿ ೫೫ ಕುಟುಂಬಗಳು (ಹಿರಿಯಂಗಳ ಸೇರಿ)	
೩.	ಚಿದಂಬರ ಜೋಯಿಸರ ಗಣತಿ (ಕ್ರಿ.ಶ.೧೯೫೪ - ೧೯೬೬)			೧೯೫೪ ೪೧ ಮನೆ ೨೯೫ ಜನ	೧೯೬೬ ೪೦ ಮನೆ ೩೫೧ ಜನ
೪.	ಬೆಟ್ಟದಪುರ ಸಂಕೇತಿ ವಾಣಿ (ಪತ್ರಿಕೆ) ಕ್ರಿ.ಶ.೧೯೮೯		೧೨೦೦ ಕುಟುಂಬ +ದಾಖಲಾಗದವರು		
೫.	ಕೌಶಿಕ ಸಂಕೇತಿ ಸಂಘ (ರಿ) ಇಪ್ಪತ್ತೆಂಟನೆಯ ವಾರ್ಷಿಕ ವರದಿ (ಕ್ರಿ.ಶ.೧೯೯೦)	೨೨೫೦ ಕುಟುಂಬ +ದಾಖಲಾಗದವರು			
೬.	ಸಿ.ಎಸ್.ರಾಮಚಂದ್ರ (ಕ್ರಿ.ಶ.೧೯೯೧)	ಕ್ರಿ.ಶ.(೧೯೫೧-೧೯೬೧) ೧೦,೦೦೦	ಇತ್ತೀಚಿನ ಖಾಸಗಿ ಗಣತಿ ೨೫,೦೦೦		

ಸಮುದಾಯದ ಈಗಿನ (ಕ್ರಿ.ಶ.೧೯೦೦) ಒಟ್ಟು ಜನಸಂಖ್ಯೆ: ಸುಮಾರು ೪೦೦೦ ವಿಭಕ್ತ ಕುಟುಂಬಗಳು.

ಪಟ್ಟಿ ೪. ಸಂಕೇತಿ ಸಮುದಾಯದ ಪ್ರವರಗಳು

ಕ್ರಮ ಸಂಖ್ಯೆ	ಗೋತ್ರ	ಗೋತ್ರದ ಕವಲುಗಳು	ಪ್ರವರ	ಸೂತ್ರ	ವೇದ	ಕೌ ಸಂ.	ಬೆ ಸಂ.	ಲಿಂ ಸಂ.
೧	ಭಾರದ್ವಾಜ	ಮೊಸಳೆ, ತಬ್ಬಲಿ, ನೇರಳಿಗೆ ಇತ್ಯಾದಿ ಐದು ಕವಲುಗಳು	ಆಂಗಿರಸ ಬಾರ್ಹಸ್ಪತ್ಯ ಭಾರದ್ವಾಜ (೩)	ಆಪ	ಕೃ ಯ	✓	✓	✓
೨	ವಾಧುಲಸ (ಯಸ್ಕ)	ಪಿರಿಯಪಟ್ಟಣ, ಎಳ್ಳೇಶಪುರ ಮೊದಲಾದ ನವವಾಧುಲಸರು	ಭಾರ್ಗವ ವೈತಹವ್ಯ ಸಾವೇದಸ (೩)	ಆಪ	ಕೃ ಯ	✓	✓	✓
೩	ನಿತುಂದಿಲ(ವಿಷ್ಣುವೃದ್ಧಸ)	ಎರಡು ಕವಲುಗಳು	ಆಂಗಿರಸ ಪೌರಕುತ್ಸ ತ್ರಾಸದಸ್ಯವ (೩)	ಆಪ	ಕೃ ಯ	✓		
೪	ಆಯಾಸ್ಯ		ಆಂಗೀರಸ ಪೌರಕುತ್ಸ ತ್ರಾಸದಸ್ಯವ (೩)	ಆಪ	ಕೃ ಯ	✓		
೫	ಆಯಾಸ್ಯ ಗೌತಮ (=ಗೌತಮ)		ಆಂಗೀರಸ ಆಯಾಸ್ಯ ಗೌತಮ (೩)	ಆಪ	ಕೃ ಯ	✓		
೬	ಶತಮರ್ಷಣ		ಆಂಗೀರಸ ಪೌರಕುತ್ಸ ತ್ರಾಸದಸ್ಯವ (೩)	ಬೋ	ಕೃ ಯ		✓	
೭	ಕೌಶಿಕ (=ಅಘಮರ್ಷಣ)		ವಿಶ್ವಾಮಿತ್ರ ಅಘಮರ್ಷಣ ಕೌಶಿಕ (೩)	ಆಪ	ಕೃ ಯ		✓	✓
೮	ಕೌಶಿಕ		ಅದೇ	ಆಶ್ವ	ಋ		✓	
೯	ಕೌಶಿಕ		ಅದೇ	ದ್ರಾ	ಸಾಮ	✓	✓	
೧೦	ವತ್ಸ (=ಜಮದಗ್ನಿ)		ಭಾರ್ಗವ ಚ್ಯಾವನ ಆಪ್ನವಾನ ಔರ್ವ ಜಾಮದಗ್ನ್ಯ(೫)	ಆಪ	ಕೃ ಯ	✓		
೧೧	ಲೋಹಿತ ಕೌಶಿಕ (=ಅಷ್ಟಕ)	ದಶಕುಂಡಲ	ವಿಶ್ವಾಮಿತ್ರ ಅಷ್ಟಕ (೨)	ಆಪ	ಕೃ ಯ	✓		
೧೨	ಕೌಂಡಿನ್ಯ (=ವಸಿಷ್ಠ)	ಅನೇಕ ಕವಲುಗಳು	ವಾಸಿಷ್ಠ ಮೈತ್ರಾವರುಣ ಕೌಂಡಿನ್ಯ (೩)	ಆಪ	ಕೃ ಯ	✓	✓	✓
೧೩	ಆಶ್ವಲಾಯನ ಕೌಂಡಿನ್ಯ		ವಿಶ್ವಾಮಿತ್ರ ಆಷ್ಟಕ ಆಶ್ವಲಾಯನ (೩)	ಆಶ್ವ	ಋ	✓		
೧೪	ಆಶ್ವಲಾಯನಕೌಂಡಿನ್ಯ(=ವಸಿಷ್ಠ)		ವಾಸಿಷ್ಠ ಮೈತ್ರಾವರಣ ಕೌಂಡಿನ್ಯ (೩)	ಆಶ್ವ	ಋ	✓		
೧೫	ನೈಧ್ರುವ ಕಾಶ್ಯಪ		ಕಾಶ್ಯಪ ಆವತ್ಸಾರ ನೈಧ್ರುವ (೩)	ಆಪ	ಕೃ ಯ		✓	✓

ಪಟ್ಟಿ ೪. ಸಂಕೇತಿ ಸಮುದಾಯದ ಪ್ರವರ ಪಟ್ಟಿ (ಮುಂದುವರಿದುದು)

ಕ್ರಮ ಸಂಖ್ಯೆ	*ಗೋತ್ರ*	*ಗೋತ್ರದ ಕವಲುಗಳು*	*ಪ್ರವರ*	*ಸೂತ್ರ*	*ವೇದ*	*ಕೌ ಸಂ.*	*ಬೆ ಸಂ.*	*ಲಿಂ ಸಂ.*
೧೬	ಹರಿತಸ (=ಕುತ್ಸಸ)		ಮಾಂಧಾತ ಅಂಬರೀಷ ಯೌವನಾಶ್ವ (೩)	ಆಪ	ಕೃ ಯ	✓		
೧೭	ಸಂಕೃತಿ		ಶಾಕ್ತ್ಯ ಗೌರುವೀತ ಸಾಂಕೃತ್ಯ (೩)	ಆಪ	ಕೃ ಯ		✓	
೧೮	ಆತ್ರೇಯಸ ಗೋತ್ರ		ಆತ್ರೇಯ ಆರ್ಚನಾನಸ ಶ್ಯಾವಾಶ್ವ (೩)	ಆಪ	ಕೃ ಯ		✓	✓
೧೯	ಆತ್ರೇಯ (ಕೌಶಿಕ)		ಕೌಶಿಕ ಅಘಮರ್ಷಣ ವಿಶ್ವಾಮಿತ್ರ (೩)	ಆಶ್ವ	ಋ		✓	
೨೦	ಗಾರ್ಗ್ಯಭಾರದ್ವಾಜ (=ಆತ್ರೇಯ)		ಆಂಗೀರಸ, ಬಾರ್ಹಸ್ಪತ್ಯ, ಭಾರದ್ವಾಜ,ಗಾರ್ಗ್ಯ,ಶೈನ್ಯ (೫)	ಆಪ	ಕೃ ಯ	✓	✓	✓
೨೧	ಗಾರ್ಗ್ಯಭಾರದ್ವಾಜ (=ಗಾರ್ಗ್ಯ)		ಭಾರದ್ವಾಜ, ಗಾರ್ಗ್ಯ, ಶೈನ್ಯ (೩)	ಆಪ	ಕೃ ಯ	✓	✓	✓

ಸೂಚನೆ : ಈ ಪಟ್ಟಿಯಲ್ಲಿ ಬಳಸಿರುವ ಸಂಕೇತಗಳು: ಕೃ ಯ - ಕೃಷ್ಣಯಜುರ್ವೇದ, ಋ - ಋಗ್ವೇದ, ಸಾಮ - ಸಾಮವೇದ, ಆಪ - ಅಪಸ್ತಂಬ

ಆಶ್ವ - ಆಶ್ವಲಾಯನ, ಬೋ - ಬೋಧಾಯನ, ದ್ರಾ - ದ್ರಾಹ್ಯಾಯಣ, ಕೌಸಂ - ಕೌಶಿಕ ಸಂಕೇತಿ, ಬೆ ಸಂ - ಬೆಟ್ಟದಪುರ ಸಂಕೇತಿ, ಲಿಂ ಸಂ - ಲಿಂಗದಹಳ್ಳಿ ಸಂಕೇತಿ.

ಕರ್ನಾಟಕದ ಎಲ್ಲ ಉಪಪಂಗಡಗಳಲ್ಲಿಯೂ ಪ್ರತಿ ಗೋತ್ರದ ಹಲವು ಕವಲುಗಳಿವೆ. ಪ್ರತಿಕವಲೂ ಒಂದೊಂದು ಪ್ರತ್ಯೇಕ ದೊಡ್ಡ ಮನೆತನವನ್ನು ಸೂಚಿಸುತ್ತದೆ. ಅನೇಕ ಇಂಥ ಕವಲುಗಳು ಈಗ ಪ್ರತಿಗೋತ್ರದಲ್ಲಿಯೂ ನಷ್ಟವಾಗಿವೆ. ಪ್ರಖ್ಯಾತವಾದುವು ದಶಕುಂಡಲ ಎಂದರೆ ಕೌಂಡಿನ್ಯ ಗೋತ್ರದ ಹತ್ತು ಮನೆತನಗಳು, ನವವಾಧುಲಸ ಎಂದರೆ ಆ ಗೋತ್ರದ ಒಂಬತ್ತು ಮನೆತನಗಳು.

ದಕ್ಷಿಣದಲ್ಲಿ ಆಯಾಸ್ಯ, ಗೌತಮ, ಲೋಹಿತ, ಗಾರ್ಗ್ಯಭಾರದ್ವಾಜ ಹೊರತಾಗಿ ಉಳಿದ ಗೋತ್ರಗಳ ನಿದರ್ಶನ ದೊರೆಯಿತು. ಹೆಚ್ಚಿನದಾಗಿ ಅಲ್ಲಿ ಕಾಶ್ಯಪ ಗೋತ್ರವೂ ಇದೆ. ಗೋತ್ರ ಕವಲುಗಳು ಅಲ್ಲಿಲ್ಲ. ಪ್ರತಿಗೋತ್ರಕ್ಕೆ ಹೊಂದಿದ ನಿರ್ದಿಷ್ಟ ವೇದ ಸೂತ್ರಗಳ ಮಾಹಿತಿ ವಕ್ತೃಗಳಿಂದ ನಿಖರವಾಗಿ ದೊರೆಯದುದರಿಂದ ಮೇಲಿನ ಪಟ್ಟಿಯಲ್ಲಿ ಇದನ್ನು ಅಳವಡಿಸಿಲ್ಲ. ಅಲ್ಲಿ ಋಗ್ವೇದ, ಯಜುರ್ವೇದ, ಸಾಮವೇದ; ಆಪಸ್ತಂಬ, ಆಶ್ವಲಾಯನ ಸೂತ್ರ ಉಂಟು.

೨ - ದ್ವ್ಯಾರ್ಷೇಯ, ೩ - ತ್ರ್ಯಾರ್ಷೇಯ, ೫ - ಪಂಚಾರ್ಷೇಯ

ಪಟ್ಟಿ ೫. ವೇದಶಾಖೆಗಳು (ಸಂಕೇತಿಗಳಲ್ಲಿ ಕಂಡುಬರುವ ಶಾಖೆಗಳನ್ನು ಕೆಳಗೆರೆಎಳೆದು ಗುರುತಿಸಿದೆ)

ಕ್ರಮ ಸಂಖ್ಯೆ	ವೇದಗಳು	ಮೂಲ ಶಾಖೆಗಳ ಸಂಖ್ಯೆ	ಲಭ್ಯಶಾಖೆಗಳು				ಕಲ್ಪಸೂತ್ರಗಳು			ಉಪವೇದಗಳು
			ಸಂಹಿತೆ	ಬ್ರಾಹ್ಮಣಗಳು	ಆರಣ್ಯಕಗಳು	ಉಪನಿಷತ್ತುಗಳು	ಶ್ರೌತ	ಗೃಹ್ಯ	ಧರ್ಮ	
೧	ಋಗ್ವೇದ	೨೧	ಶಾಕಲ	ಐತರೇಯ ಕೌಷೀತಕಿ (ಸಾಂಖ್ಯಾಯನ)	ಐತರೇಯ ಸಾಂಖ್ಯಾಯನ	ಐತರೇಯ ಕೌಷೀತಕಿ, ಭಾಷ್ಕಲ	ಆಶ್ವಲಾಯನ ಸಾಂಖ್ಯಾಯನ	ಆಶ್ವಲಾಯನ ಸಾಂಖ್ಯಾಯನ	ವಾಸಿಷ್ಠ	ಆಯುರ್ವೇದ
೨	ಕೃಷ್ಣ ಯಜು-ರ್ವೇದ	೮೫	ತೈತ್ತಿರೀಯ ಮೈತ್ರಾಯಣೀಯ ಕಾಠಖ ಕಪಿಸ್ಥಲ ಶ್ವೇತಾಶ್ವತರ	ತೈತ್ತಿರೀಯ	ತೈತ್ತಿರೀಯ	ತೈತ್ತಿರೀಯ ಮಹಾನಾರಾಯಣ ಮೈತ್ರಾಯಣಿ, ಕಾಠಖ ಶ್ವೇತಾಶ್ವತರ	ಆಪಸ್ತಂಬ ಬೋಧಾಯನ ಹಿರಣ್ಯಕೇಶಿ ಭಾರದ್ವಾಜ ವೈಖಾನಸ ವಾಧುಲ ಮಾನವ ವರಾಹ	ಮಾನವ ಆಪಸ್ತಂಬ ಬೋಧಾಯನ ಹಿರಣ್ಯಕೇಶಿ ವೈಖಾನಸ ಕಠ (ಆಂಡಪಿಳ್ಳೈ ಪ್ರಯೋಗ)	ಆಪಸ್ತಂಬ ಬೋಧಾಯನ ಹಿರಣ್ಯಕೇಶಿ	ಧನುರ್ವೇದ
೩	ಶುಕ್ಲಯಜು-ರ್ವೇದ	೧೭	ಕಾಣ್ವ ಮಾಧ್ಯಂದಿನ (ವಾಜಸನೇಯ)	ಶತಪಥ	ಬೃಹದಾರಣ್ಯಕ	ಈಶಾವಾಸ್ಯ ಬೃಹದಾರಣ್ಯಕ	ಕಾತ್ಯಾಯನ (ಪಾರಸ್ಕರ)	ಕಾತ್ಯಾಯನ (ಪಾರಸ್ಕರ)		
೪	ಸಾಮವೇದ	೧೦೦೦	ಗೌತಮ ರಾಣಾಯನೀಯ ಜೈಮಿನೀಯ	ಪಂಚವಿಂಶ, ಮಂತ್ರ, ಷಡ್ವಿಂಶ ಸಾಮವಿಧಾನ, ಆರ್ಷೇಯ, ದೇವತಾಧ್ಯಾಯ, ವಂಶ, ಜೈಮಿನೀಯ		ಛಾಂದೋಗ್ಯ ಕೇನ	ಖಾದಿರ ಲಾಟ್ಯಾಯನ ದ್ರಾಹ್ಯಾಯಣ ಜೈಮಿನೀಯ	ಖಾದಿರ ಗೋಭಿಲ, ಗೌತಮ ಜೈಮಿನೀಯ ದ್ರಾಹ್ಯಾಯಣ	ಗೌತಮ	ಗಾಂಧರ್ವ ವೇದ
೫	ಅಥರ್ವಣ-ವೇದ	೯	ಪಿಪ್ಪಲಾದ, ಶೌನಕ	ಗೋಪಥ		ಪ್ರಶ್ನ, ಮುಂಡಕ, ಮಾಂಡೂಕ್ಯ	ವೈಖಾನಸ	ಕೌಶಿಕ		ಅರ್ಥಶಾಸ್ತ್ರ (ಆಸಕ್ತರು)

ಆಧಾರ : Hindu Sastras and Samskaras, V.A.K. Ayer, Fourth Edition, Bharatiya Vidya Bhavan, Bombay, 1987, pp 44-45

ಪಟ್ಟಿ ೬. ಚಿದಂಬರ ಜೋಯಿಸ (೮೨, ಬೀರೂರು) ಅವರು ಖಾಸಗಿಯಾಗಿ ದಾಖಲಿಸಿಕೊಂಡ ಜನಗಣತಿ

ಅ

ಕ್ರಮ ಸಂಖ್ಯೆ	*ಗೋತ್ರ*	*೧೯೫೪*		*೧೯೬೬*		*೧೯೯೨*	
		ಮನೆಗಳು	*ಜನರು*	*ಮನೆಗಳು*	*ಜನರು*	*ಮನೆಗಳು*	*ಜನರು*
೧	ವಾಧುಲಸ	೧೦	೭೭	೧೦	೧೦೦		
೨	ಆತ್ರೇಯ	೫	೨೮	೬	೩೬		
೩	ಕೌಂಡಿನ್ಯ	೧೦	೪೩	೯	೬೨		
೪	ಕೌಶಿಕ	೬	೫೫	೫	೭೫	೬	೬೧
೫	ಭಾರದ್ವಾಜ	೪	೩೧	೪	೪೬		
೬	ಗಾರ್ಗ್ಯಭಾರದ್ವಾಜ	೩	೬	೩	೯		
೭	ಹರಿತಸ	೨	೧೮	೨	೨೮		
೮	ನೈಧ್ರುವಕಾಶ್ಯಪ	೧	೧	೧	೧		
	ಒಟ್ಟು	೪೧	೨೫೯	೪೦	೩೫೧	೬	೭೦೦

ಆ.

ಕುಟುಂಬಗಳು	*ಕೌಶಿಕಗೋತ್ರದ ಜನಸಂಖ್ಯೆ*			*ಆತ್ರೇಯಗೋತ್ರದ ಜನಸಂಖ್ಯೆ*		
	೧೯೫೪	*೧೯೬೬*	*೧೯೯೦*	*೧೯೫೪*	*೧೯೬೬*	*೧೯೭೦*
೧	೮	೮	೧೧	೭	೭	೧೦
೨	೧೬	೨೨	೨೮	೧೦	೧೫	೧೫
೩	೧೦	೧೧	೧೩	೩	೨	೩
೪	೭	೧೦	೯	೬	-	-
೫	೧೩	೨೪	-	೨	೨	೮
೬	೧	-	-	-	೭	-
೭	-			-	೩	೫
೮				-	-	೫
ಒಟ್ಟು ಸಂಖ್ಯೆ	೫೫	೭೫	೬೧	೨೮	೩೬	೪೬

ಈ ಪಟ್ಟಿಗಳಲ್ಲಿ ೧೨ ವರ್ಷಗಳ ಅವಧಿಯಲ್ಲಿ ಒಂದು ಕುಟುಂಬ ನಷ್ಟವಾಗಿರುವುದನ್ನು ಕಾಣಬಹುದು. ನೈಧ್ರುವಕಾಶ್ಯಪಗೋತ್ರವೇ ನಷ್ಟವಾಗಿದೆ. ೪೦ ಕುಟುಂಬಗಳ ಜನಸಂಖ್ಯೆ ೧೨ ವರ್ಷಗಳ ಅವಧಿಯಲ್ಲಿ ಸುಮಾರು ೧೦೦ ಹೆಚ್ಚಿದೆ.

ಜೋಯಿಸರ ಜನಗಣತಿಯಲ್ಲಿ, ಪ್ರತಿಕುಟುಂಬದಲ್ಲಿ ಆದ ಜನಸಂಖ್ಯೆಯ ಹೆಚ್ಚಳವು ಗೋತ್ರವಾರು ದಾಖಲಾಗಿದೆ. ಸಾಮಾನ್ಯವಾಗಿ ಪ್ರತಿಕುಟುಂಬವೂ ಸದಸ್ಯರ ಸಂಖ್ಯೆಯನ್ನು ಹೆಚ್ಚಿಸಿಕೊಂಡಿದ್ದರೂ, ಕುಟುಂಬವೇ ನಾಶವಾದ ನಿದರ್ಶನವೂ ಇಲ್ಲಿದೆ. ಕೌಶಿಕಗೋತ್ರದ ಜನಸಂಖ್ಯೆ ಕ್ರಿ.ಶ.೧೯೬೬ರಲ್ಲಿ ೭೫ ಇದ್ದುದು ಕ್ರಿ.ಶ.೧೯೯೦ರ ವೇಳೆಗೆ ೬೧ಕ್ಕೆ ಇಳಿದಿದೆ.

ಪಟ್ಟಿ ೭. ಸಂಕೇತಿ ಸಮುದಾಯದ ನೆಲೆಗಳು

ಕ್ರಮ ಸಂಖ್ಯೆ	*ಗ್ರಾಮ*	*ಉಪಪಂಗಡ*	*ಸಮೀಪ ಜಲಾಶ್ರಯ*	*ಗ್ರಾಮಸ್ಥಿತಿ*	*ಮನೆದೇವರು*	*ಇತರ*
೧	ಅಂಬಾಸಮುದ್ರಂ, ತಿರುನೆ, ತನಾ	ದ.ಸಂ	ತಾಮ್ರಪರ್ಣಿ	ಸಂಕೇತಿಗಳು ಐತಿಹಾಸಿಕವಾಗಿ ತೊರೆದಿದ್ದಾರೆ, ದ		ಶಾಪತ್ತೂರ್ ಕೇಂದ್ರದ ಒಂದು ನೆಲೆ
೨	ಅಗ್ರಹಾರ, ಹಾ, ಕ	ಕೌ.ಸಂ	ಕೆರೆ, ಕಾವೇರಿ	ಮದೇ, ಭಟಮಾನ್ಯ		ಕ್ರಿ.ಶ.ಸು.೧೭೬೦ರಲ್ಲಿ
೩	ಅಗ್ಗುಂದ ಹಾ, ಕ	ಕೌ.ಸಂ		ಕಡೂರು ಕೇಂದ್ರ		ನೀಲಗುಂದದಂತೆ 'ಕುಂದ' ಸೇರಿರುವುದನ್ನು ಗಮನಿಸಿ ಈಗ ಸಂಕೇತಿಗಳಿಲ್ಲ
೪	ಅನುಗನಹಾಳು, ಹಾ, ಕ	ಕೌ.ಸಂ	ಯಗಚಿ	ಉದೇ (ಹಾಸನಸೀಮೆ)		ಸಂಕೇತಿಗಳು ಈಗ ಇಲ್ಲ
೫	ಅನುಗವಳ್ಳಿ, ಹಾ, ಕ	ಕೌ.ಸಂ	ಯಗಚಿ	ಉದೇ	ಶ್ರೀರಾಮ	--------"--------
೬	ಅರಿವಿಕೆರ, ತಿರುವ, ಕೇ	ದ.ಸಂ		ದ, ದತ್ತಿ		ತಿರುವನಂತಪುರದಿಂದ ೨೦ ಮೈಲು ದೂರ ಈಗ ಸಂಕೇತಿಗಳು ಇಲ್ಲ
೭	ಅಲೆಪ್ಪಿ, ಉಮ, ಕೇ	ದ.ಸಂ		ದ		
೮	ಆನಂದೂರು, ಹಾ, ಕ	ಕೌ.ಸಂ	ಕಾವೇರಿ	ಏಕಗೋತ್ರ ಸಂಕೇತಂ, ಮದೇ		ಸುಮಾರು ಕ್ರಿ.ಶ.೧೮೦೦
೯	ಆನೆಕನ್ನಂಬಾಡಿ, ಹಾ, ಕ	ಕೌ.ಸಂ				ಶಾಪಗ್ರಸ್ತರಾಗಿ ತೊರೆದುದು
೧೦	ಆನೆಕೆರೆ, ಹಾ, ಕ	ಕೌ.ಸಂ				--------"--------
೧೧	ಅಯ್‌ಕುಡಿ, ತಿರುನೆ, ತನಾ	ದ.ಸಂ	ಹನುಮಾನ್	ದ	ಸುಬ್ರಹ್ಮಣ್ಯಸ್ವಾಮಿ, ಕೋಮಲವಲ್ಲಿ	ಈಗಲೂ ಇರುವ ಸಂಕೇತಂ
೧೨	ಆವರಾಂಚೆರಿ, ತಿರುವ, ಕೇ	ದ.ಸಂ		ದ, ಜೋಡಿ		ಈಗ ಸಂಕೇತಿಗಳಿಲ್ಲ
೧೩	ಆಶ್ರಾಮಂ, ಕಕು, ತನಾ	ದ.ಸಂ		ದ, ದತ್ತಿ		--------"--------
೧೪	ಆಳ್ವಾರ್ ಕುರುಚಿ, ತಿರುನೆ, ತನಾ					ನೋಡಿ: ಶಾಪತ್ತೂರ್
೧೫	ಈಚೆಂದು, ಉಮ, ಕೇ	ದ.ಸಂ		ದ		ಈಗ ಸಂಕೇತಿಗಳಿಲ್ಲ

ಕ್ರಮ ಸಂಖ್ಯೆ	ಗ್ರಾಮ	ಉಪಪಂಗಡ	ಸಮೀಪ ಜಲಾಶ್ರಯ	ಗ್ರಾಮಸ್ಥಿತಿ	ಮನೆದೇವರು	ಇತರ
೧೬	ಊರ್‌ಕಾಡ್, ತಿರುನೆ, ತನಾ	ದ.ಸಂ	ತಾಮ್ರಪರ್ಣಿ	ದ	ಶಾಸ್ತಾ	ಈಗ ಸಂಕೇತಿಗಳಿಲ್ಲ
೧೭	ಎಡತೊರೆ, ಮೈ, ಕ(ಅತ್ತಿಗುಪ್ಪೆ)	ಕೌ.ಸಂ	ಕಾವೇರಿ	ಈಗ ಮುಳುಗಡೆ ಆಗಿದೆ		
೧೮	ಎರ್ನಾಕುಲಂ, ಎ, ಕೇ	ದ.ಸಂ		ದ		
೧೯	ಎರಚ್ಚಕೊಳಂ, ಕಕು, ತನಾ	ದ.ಸಂ	ನದಿ	ದ	ಶಾಸ್ತಾ	
೨೦	ಎಲತ್ತೂರ್, ತಿರುನೆ, ತನಾ	ದ.ಸಂ	ತಾಮ್ರಪರ್ಣಿ	ದ		
೨೧	ಎಲೆಚಾಗಳ್ಳಿ, ಹಾ, ಕ	ಕೌ.ಸಂ	ಹೇಮಾವತಿ	ಮದೇ		
೨೨	ಎಳ್ಳೇಶಪುರ, ಹಾ, ಕ	ಕೌ.ಸಂ	ಹೇಮಾವತಿ	ಮದೇ	ರಂಗನಾಥ	ಮಾವಿನಕೆರೆ ರಂಗ
೨೩	ಏರ್‌ವಾಡಿ, ತಿರುನೆ, ತನಾ	ದ.ಸಂ	ತಾಮ್ರಪರ್ಣಿ	ದ, ಜೋಡಿ	ಶಾಸ್ತಾ	ಈಗ ಸಂಕೇತಿಗಳಿಲ್ಲ
೨೪	ಐಚನಹಳ್ಳಿ, ಹಾ, ಕ	ಕೌ.ಸಂ	ಹೇಮಾವತಿ	ಮದೇ		ಹರಳಹಳ್ಳಿ ದತ್ತಿ
೨೫	ಒಡ್ಡರಹಳ್ಳಿ, ಹಾ, ಕ	ಕೌ.ಸಂ	ಹೇಮಾವತಿ	ಮದೇ, ಜೋಡಿ		ಪೂರ್ಣವಾಗಿ ತೊರೆದಿದ್ದಾರೆ
೨೬	ಕಟ್ಟಾಯ, ಹಾ, ಕ	ಕೌ.ಸಂ	ಹೇಮಾವತಿ	ಉದೇ		೧೯೩೦ಕ್ಕೆ ಪೂರ್ಣ ತೊರೆದಿದ್ದಾರೆ
೨೭	ಕಟ್ಟೆಪುರ, ಹಾ,ಕ	ಕೌ.ಸಂ	ಕಾವೇರಿ	ಮದೇ, ವೃತ್ತಿಗಳು		
೨೮	ಕಟ್ಟೆಹೊಸಹಳ್ಳಿ, ಹಾ, ಕ	ಕೌ.ಸಂ	ಹೇಮಾವತಿ	ಮದೇ		ಏಕಗೋತ್ರ ಸಂಕೇತಂ
೨೯	ಕಡೂರು, ಚಿ, ಕ	ಸಂ	ವೃತ್ತಿಗಳು			ನೀಲಗುಂದದನಂತರ ೧೨ನೇ ಶತಮಾನದಿಂದ ಆದ ಸಂಕೇತಿಗಳ ಮುಖ್ಯಕೇಂದ್ರ,೧೬ನೇ ಶತಮಾನದಿಂದ ಖಾಲಿ
೩೦	ಕಣಗಾಲ್, ಮೈ, ಕ	ಸಂ	ಕಾವೇರಿ			
೩೧	ಕಣ್ಣಂಪುದೂರ್, ಕ ಕು, ತನಾ	ದ.ಸಂ	ದ			ಈಗ ಸಂಕೇತಿಗಳಿಲ್ಲ
೩೨	ಕಣಿವೆ, ಕೊಡಗು, ಕ	ಬೆ.ಸಂ	ಕಾವೇರಿ			

ಕ್ರಮ ಸಂಖ್ಯೆ	ಗ್ರಾಮ	ಉಪಪಂಗಡ	ಸಮೀಪ ಜಲಾಶ್ರಯ	ಗ್ರಾಮಸ್ಥಿತಿ	ಮನೆದೇವರು	ಇತರ
೩೩	ಕರ್ತಾಳ್, ಮೈ, ಕ	ಕೌ.ಸಂ	ಕಾವೇರಿ	ಮದೇ		
೩೪	ಕನ್ನಂಬಾಡಿ, ಮಂ, ಕ	ಕೌ.ಸಂ	ಕಾವೇರಿ			
೩೫	ಕನ್ಯಾಕುಮಾರಿ, ಕಕು, ತನಾ	ದ.ಸಂ	ಸಮುದ್ರ	ದ		
೩೬	ಕರಿಮಾಣಿಕ್ಯಪುರಂ, ಕಕು, ತನಾ	ದ.ಸಂ	ದ			ಈಗ ಸಂಕೇತಿಗಳಿಲ್ಲ
೩೭	ಕಲಕ್ಕಾಡ್, ಕಕು, ತನಾ	ದ.ಸಂ		ದ		-------"--------
೩೮	ಕಾರಡೈಕುರುಚಿ, ತಿರುನೆ, ತನಾ	ದ.ಸಂ	ತಾಮ್ರಪರ್ಣಿ	ದ		ಶಾಪತ್ತೂರ್ ಕೇಂದ್ರಿತ ನೆಲೆ
೩೯	ಕಲ್ಲಹಳ್ಳಿ(ವರಾಹನಾಥ) ಮಂ, ಕ	ಕೌ.ಸಂ	ಕಾವೇರಿ	ಮುಳುಗಡೆ		
೪೦	ಕಲ್ಕೆರೆ, ಮೈ, ಕ	ಕೌ.ಸಂ	ಲಕ್ಷ್ಮಣತೀರ್ಥ			ಚಿಲಕುಂದಕ್ಕೆ ವಲಸೆ
೪೧	ಕಾಡನೂರು, ಹಾ, ಕ	ಕೌ.ಸಂ.		ಮದೇ		ಪೂರ್ಣತೊರೆದಿದ್ದಾರೆ
೪೨	ಕಾಶ್ಯಾಳ್ ಹಾ, ಕ	ಕೌ.ಸಂ		ಮದೇ		--------"--------
೪೩	ಕಾಯಂಗೊಳಂ, ದಮ, ಕೇ	ದ.ಸಂ		ದ		--------"--------
೪೪	ಕುತ್ತಾಲಂ, ತಿರುನೆ, ತನಾ	ದ.ಸಂ	ಜಲಪಾತ	ದ	ಧರ್ಮಸಂವರ್ಧಿನಿ ಅಮ್ಮಾಳ್, ಕಲ್ಯಾಣ ಸುಂದರೇಶ್ವರರ್, ಅಣ್ಣಾವಿ ಪಿಳ್ಳೈ	
೪೫	ಹೊಸಹೊಳಲು, ಮಂ.ಕ	ಕೌ.ಸಂ	ಹೇಮಾವತಿ	ರಾಜಸೇವೆ		ಈಗ ಸಂಕೇತಿಗಳಿಲ್ಲ
೪೬	ಕುಪ್ಪಳ್ಳಿ, ಮಂ, ಕ	ಕೌ.ಸಂ	ಹೇಮಾವತಿ		ರಂಗನಾಥ	
೪೭	ಕೂಣಿಯೂರ್, ದಮ,ಕೇ	ದ.ಸಂ.		ದ		ಈಗ ಸಂಕೇತಿಗಳಿಲ್ಲ

ಕ್ರಮ ಸಂಖ್ಯೆ	ಗ್ರಾಮ	ಉಪಪಂಗಡ	ಸಮೀಪ ಜಲಾಶ್ರಯ	ಗ್ರಾಮಸ್ಥಿತಿ	ಮನೆದೇವರು	ಇತರ
೪೮	ಕೃಷ್ಣಾಪುರ(ಕೋತಾಳು), ಹಾ,ಕ	ಕೌ.ಸಂ	ಕೆರೆ	ಉದೇ, ಸರ್ವಮಾನ್ಯ		
೪೯	ಕೃಷ್ಣಾಪುರಂ, ತಿರುನೆ,ತನಾ	ದ.ಸಂ	ತಾಮ್ರಪರ್ಣಿ	ದ		
೫೦	ಕೆರಳಾಪುರ, ಹಾ, ಕ	ಕೌ.ಸಂ	ಕಾವೇರಿ	ಮದೇ, ಭಟಮಾನ್ಯ		
೫೧	ಕೊಂಡಗುಳ, ಹಾ, ಕ	ಕೌ.ಸಂ	ಕೆರೆ	ಉದೇ		ಪೂರ್ಣ ತೊರೆದಿದ್ದಾರೆ
೫೨	ಕೊಟ್ಟಾರಕ್ಕರ, ಕೊ, ಕೇ	ದ.ಸಂ		ದ		ಪೂರ್ಣ ತೊರೆದಿದ್ದಾರೆ
೫೩	ಕೊಣನೂರು, ಹಾ, ಕ	ಕೌ.ಸಂ	ಕಾವೇರಿ	ಮದೇ		
೫೪	ಕೊಮಾರನ ಹಳ್ಳಿ, ಹಾ, ಕ (ಮಲ್ಲಾಪುರ)	ಕೌ.ಸಂ	ಕೆರೆ	ಉದೇ		
೫೫	ಕೊಲ್ಲಂ, ಕೊ, ಕೇ	ದ.ಸಂ		ದ		
೫೬	ಕೋಡಿಹಳ್ಳಿ, ಚಿ, ಕ	ಸಂ				ತರೀಕೆರೆಗೆ ೫ ಮೈಲಿ, ಈಗ ಸಂಕೇತಿಗಳಿಲ್ಲ
೫೭	ಕೊಳತ್ತು, ತಿರುವ, ಕೇ	ದ.ಸಂ		ದ	ಶಾಸ್ತಾ	ಈಗ ಸಂಕೇತಿಗಳಿಲ್ಲ
೫೮	ಕೋರಮಂಗಲ, ಹಾ, ಕ	ಕೌ.ಸಂ		ಉದೇ, ವೃತ್ತಿ		
೫೯	ಕೌಶಿಕ, ಹಾ, ಕ	ಕೌ.ಸಂ	ಹೇಮಾವತಿ	ಉದೇ, ಆಲದಹಳ್ಳಿ ಸಮುದ್ರವಳ್ಳಿ ಜೋಡಿ	ಲಕ್ಷ್ಮೀಕೇಶವ ಲಕ್ಷ್ಮೀನರಸಿಂಹ	ಕರ್ನಾಟಕದ ಮೊದಲ ಪ್ರಧಾನ ನೆಲೆಗಳಲ್ಲೊಂದು
೬೦	ಗದ್ದೆಹೊಸೂರು, ಹಾ, ಕ	ಕೌ.ಸಂ				
೬೧	ಗನ್ನಿಅಗ್ರಹಾರ, ಹಾ, ಕ	ಕೌ.ಸಂ				ಈಗ ಸಂಕೇತಿಗಳಿಲ್ಲ
೬೨	ಗೆಜಗನಹಳ್ಳಿ, ಹಾ, ಕ	ಕೌ.ಸಂ	ಕೆರೆ	ಮದೇ, ವೃತ್ತಿ		
೬೩	ಗೊರೂರು, ಹಾ, ಕ	ಕೌ.ಸಂ	ಹೇಮಾವತಿ	ಉದೇ, ವೃತ್ತಿ	ಲಕ್ಷ್ಮೀನರಸಿಂಹ	
೬೪	ಗೋಣಿಸೋಮನಹಳ್ಳಿ, ಹಾ, ಕ	ಕೌ.ಸಂ	ಕೆರೆ	ಉದೇ		ಈಗ ಸಂಕೇತಿಗಳಿಲ್ಲ

ಕ್ರಮ ಸಂಖ್ಯೆ	ಗ್ರಾಮ	ಉಪಪಂಗಡ	ಸಮೀಪ ಜಲಾಶ್ರಯ	ಗ್ರಾಮಸ್ಥಿತಿ	ಮನೆದೇವರು	ಇತರ
೬೫	ಚೆಂಗಾಣಿ, ಕೊ, ಕೇ	ದ.ಸಂ		ದ		ಈಗ ಸಂಕೇತಿಗಳಿಲ್ಲ
೬೬	ಚಾರಾಟಪ್ಪುದೂರ್, ತಿರುನೆ, ತನಾ	ದ.ಸಂ		ದ		ಈಗ ಸಂಕೇತಿಗಳಿಲ್ಲ
೬೭	ಚಿಕ್ಕಮಗ್ಗೆ, ಹಾ, ಕ	ಕೌ.ಸಂ	ಕಾವೇರಿ	ಮದೇ		೧೭೬೦ಕ್ಕೂ ಹಿಂದೆಯೇ ಐತಿಹಾಸಿಕವಾಗಿ ತೊರೆದರು
೬೮	ಚಿಕುಮೈನಹಳ್ಳಿ, ಹಾ, ಕ	ಕೌ.ಸಂ	ಕೆರೆ	ಉದೇ		
೬೯	ಚಿಲಕುಂದ, ಮೈ, ಕ	ಕೌ.ಸಂ	ಲಕ್ಷ್ಮಣತೀರ್ಥ	ದ.ದೇ ವೃತ್ತಿಗಳು		
೭೦	ಚೆಂಗಾಣಿ, ತಿರುನೆ, ತನಾ	ದ.ಸಂ		ದ	ಶಾಸ್ತಾ	ತಿರುನೆಲ್‌ವೇಲಿ ಹತ್ತಿರ, ಈಗ ಸಂಕೇತಿಗಳಿಲ್ಲ
೭೧	ಚೇರನ್‌ಮಹಾದೇವಿ, ತಿರುನೆ, ತನಾ	ದ.ಸಂ		ದ	ಮಹಾದೇವಿ	ಈಗ ಸಂಕೇತಿಗಳಿಲ್ಲ
೭೨	ಜನ್ನೇಗೌಡನ ಹೊಸಹಳ್ಳಿ, ಮೈ, ಕ	ಬೆ.ಸಂ	ಕಾವೇರಿ			ಪೂರ್ಣ ತೊರೆದಿದ್ದಾರೆ
೭೩	ಜ್ಞಾನಂ, ಕಕು, ತನಾ	ದ.ಸಂ		ದ		ಪೂರ್ಣ ತೊರೆದಿದ್ದಾರೆ
೭೪	ಜಾವಗಲ್, ಹಾ, ಕ	ಕೌ.ಸಂ		ಉದೇ		
೭೫	ತಂಗ್ಲಿ, ಚಿ, ಕ	ಸಂ				ಕಡೂರು ಕೇಂದ್ರಿತ ಗ್ರಾಮ. ಈಗ ಸಂಕೇತಿಗಳಿಲ್ಲ
೭೬	ತರವೈ, ತಿರುನೆ, ತನಾ	ದ.ಸಂ	ತಾಮ್ರಪರ್ಣಿ		ಶಾಸ್ತಾ	ಈಗ ಸಂಕೇತಿಗಳಿಲ್ಲ
೭೭	ತರೀಕೆರೆ, ಚಿ, ಕ	ಸಂ		ಕೊಡೆಹಳ್ಳಿವೃತ್ತಿ		ಕಡೂರು ಕೇಂದ್ರಿತ ನೆಲೆ
೭೮	ತಿಪ್ಪೂರು, (ಬೂಕನಕೆರೆ) ಮೈ, ಕ	ಕೌ.ಸಂ	ಕಾವೇರಿ	ರಾಜಸೇವೆ		ಈಗ ಸಂಕೇತಿಗಳಿಲ್ಲ
೭೯	ತಿಮ್ಮರಾಜಪುರಂ, ತನಾ	ದ.ಸಂ		ದ	ಶಾಸ್ತಾ	ಪಲಾಯಂಕೊಟ್ಟೈ ಹತ್ತಿರ, ಈಗ ಸಂಕೇತಿಗಳಿಲ್ಲ

ಕ್ರಮ ಸಂಖ್ಯೆ	ಗ್ರಾಮ	ಉಪಪಂಗಡ	ಸಮೀಪ ಜಲಾಶ್ರಯ	ಗ್ರಾಮಸ್ಥಿತಿ	ಮನೆದೇವರು	ಇತರ
೮೦	ತಿರುಚೆಂದೂರ್, ತಿರುನೆ, ತನಾ	ದ.ಸಂ		ದ		ಈಗ ಸಂಕೇತಿಗಳಿಲ್ಲ
೮೧	ತಿರುನೆಲ್‌ವೇಲಿ, ತಿರುನೆ, ತನಾ	ದ.ಸಂ	ತಾಮ್ರಪರ್ಣಿ	ದ		ಪಾರಂಪರಿಕ ಮುಖ್ಯಕೇಂದ್ರ
೮೨	ತಿರುಪ್ಪಡೈಮರುದೂರ್, ತಿರುನೆ, ತನಾ	ದ.ಸಂ	ತಾಮ್ರಪರ್ಣಿ	ದ		ಅಂಬಾಸಮುದ್ರಂ ಹತ್ತಿರ
೮೩	ತಿರುವನಂತಪುರಂ, ತಿರುವ, ಕೇ	ದ.ಸಂ	ವನಮಾಲಾ	ದ		ಪಾರಂಪರಿಕ ಮುಖ್ಯ ಕೇಂದ್ರ
೮೪	ತೆಂಕಾಸಿ, ತಿರುನೆ, ತನಾ	ದ.ಸಂ	ಚಿತ್ರಾನದಿ			
೮೫	ತೆಂಡೆಕೆರೆ, ಹಾ, ಕ	ಕೌ.ಸಂ		ಉದೇ		
೮೬	ತೇಗನಹಳ್ಳಿ, ಮಂ, ಕ	ಕೌ.ಸಂ	ಹೇಮಾವತಿ			
೮೭	ತೇರೇಕಾಲ್ ಪುದೂರ್, ತಿರುನೆ, ತನಾ	ದ.ಸಂ		ದ	ಶಾಸ್ತಾ	ಈಗ ಸಂಕೇತಿಗಳಿಲ್ಲ
೮೮	ದರುಶನಂಕೋಪ್, ಕಕು, ತನಾ	ದ.ಸಂ		ದ		
೮೯	ದೇವನಲ್ಲೂರ್, ತಿರುನೆ, ತನಾ	ದ.ಸಂ.		ದ		ಈಗ ಸಂಕೇತಿಗಳಿಲ್ಲ
೯೦	ದೇವನೂರು, ಚಿ, ಕ	ಕೌ.ಸಂ, ಬೆ.ಸಂ			ಲಕ್ಷ್ಮೀಕಾಂತ	ಕಡೂರು ಕೇಂದ್ರಿತ ನೆಲೆ
೯೧	ದೊಡ್ಡಬ್ಯಾಗತವಳ್ಳಿ, ಹಾ, ಕ	ಕೌ.ಸಂ	ಹೇಮಾವತಿ	ಮದೇ		ಈಗ ಸಂಕೇತಿಗಳಿಲ್ಲ
೯೨	ದೊಡ್ಡಮಗ್ಗೆ, ಹಾ, ಕ	ಕೌ.ಸಂ	ಕಾವೇರಿ	ಮದೇ		

ಕ್ರಮ ಸಂಖ್ಯೆ	ಗ್ರಾಮ	ಉಪಪಂಗಡ	ಸಮೀಪ ಜಲಾಶ್ರಯ	ಗ್ರಾಮಸ್ಥಿತಿ	ಮನೆದೇವರು	ಇತರ
೯೩	ನಡುಕ್ಕಾ ಉಳಯಾರ್, ತಿರುನೆ, ತನಾ	ದ.ಸಂ		ದ	ಶಾಸ್ತಾ	ಈಗ ಸಂಕೇತಿಗಳಿಲ್ಲ
೯೪	ನಾಗರಕೋಯಿಲ್, ಕಕು, ತನಾ	ದ.ಸಂ		ದ		
೯೫	ನಾಟನಹಳ್ಳಿ, ಮಂ, ಕ	ಕೌ.ಸಂ	ಹೇಮಾವತಿ			ಪೂರ್ಣತೊರೆದಿದ್ದಾರೆ
೯೬	ನಿಟ್ಟೂರು ಹಾ, ಕ	ಕೌ.ಸಂ	ಕೆರೆ	ಉದೇ, ವೃತ್ತಿ		
೯೭	ನೀಲಗುಂದ, ಬ, ಕ	ಸಂ	ತುಂಗಭದ್ರ	ಪೂರ್ಣವಾಗಿ, ಐತಿಹಾಸಿಕವಾಗಿ ತೊರೆದಿದ್ದಾರೆ		ಕರ್ನಾಟಕದಲ್ಲಿ ಮೊದಲು ನೆಲೆಸಿದ ಕೇಂದ್ರ
೯೮	ನೀಲಕುಂದ, ಹಾ, ಕ	ಕೌ.ಸಂ		ಮದೇ		ಈಗ ಸಂಕೇತಿಗಳಿಲ್ಲ
೯೯	ನೇರಲಿಗೆ, ಹಾ, ಕ	ಕೌ.ಸಂ	ಯಗಚಿ	ಉದೇ	ಕೇಶವ	
೧೦೦	ಪಂಬುಳಿ, ತಿರುನೆ, ತನಾ	ದ.ಸಂ	ತಾಮ್ರಪರ್ಣಿ	ದ		ಶೆಂಕೋಟ್ಟೈನಿಂದ ೪ ಮೈಲು
೧೦೧	ಪರವೂರ್, ಕೊ, ಕೇ	ದ.ಸಂ		ದ		ಈಗ ಸಂಕೇತಿಗಳಿಲ್ಲ
೧೦೨	ಪಾಪನ್‌ಕೊಳಂ, ತಿರುನೆ, ತನಾ	ದ.ಸಂ		ದ		ಈಗ ಸಂಕೇತಿಗಳಿಲ್ಲ
೧೦೩	ಪಾಲಹಳ್ಳಿ, ಮಂ, ಕ	ಕೌ.ಸಂ				ಈಗ ಸಂಕೇತಿಗಳಿಲ್ಲ
೧೦೪	ಪಲಾಯಂಕೊಟ್ಟೈ ತಿರುನೆ, ತನಾ	ದ.ಸಂ		ದ		ಈಗ ಸಂಕೇತಿಗಳಿಲ್ಲ
೧೦೫	ಪಾಳ್ಯ, ಹಾ, ಕ	ಕೌ.ಸಂ		ಉದೇ, ವೃತ್ತಿಗಳು		
೧೦೬	ಪುಲಿಯೂರ್, ತಿರುನೆ, ತನಾ	ದ.ಸಂ		ದ		
೧೦೭	ಪುನಲೂರ್, ಕೊ, ಕೇ	ದ.ಸಂ		ದ		ಈಗ ಸಂಕೇತಿಗಳಿಲ್ಲ
೧೦೮	ಪೂಮಗಾಮೆ, ಹಾ,ಕ	ಕೌ.ಸಂ	ಕೆರೆ	ಉದೇ, ಸರ್ವಮಾನ್ಯ		

ಕ್ರಮ ಸಂಖ್ಯೆ	ಗ್ರಾಮ	ಉಪಪಂಗಡ	ಸಮೀಪ ಜಲಾಶ್ರಯ	ಗ್ರಾಮಸ್ಥಿತಿ	ಮನೆದೇವರು	ಇತರ
೧೦೯	ಪಿರಿಯಪಟ್ಟಣ, ಮೈ,ಕ	ಕೌ.ಸಂ	ಕೆರೆ	ರಾಜಸೇವೆ		
೧೧೦	ಪೊನ್ನಾಥಪುರ, ಹಾ, ಕ	ಕೌ.ಸಂ	ಹೇಮಾವತಿ			ಈಗ ಸಂಕೇತಿಗಳಿಲ್ಲ
೧೧೧	ಬರಗೂರು, ಹಾ, ಕ	ಕೌ.ಸಂ	ಕಾವೇರಿ	ಮದೇ, ವೃತ್ತಿಗಳು		
೧೧೨	ಬಸವಪಟ್ಟಣ, ಹಾ, ಕ	ಕೌ.ಸಂ, ಬೆ.ಸಂ	ಕಾವೇರಿ	ಮದೇ, ಊರಗೌಡರ ಆಶ್ರಯ	ಲಕ್ಷ್ಮೀಕಾಂತ	೧೭೦೦ಕ್ಕೆ ನೆಲೆ
೧೧೩	ಬಸವಾನಿ, ಶಿ, ಕ	ಲಿಂ. ಸಂ		ವೃತ್ತಿಗಳು		೧೪ನೆಯ ಶತಮಾನದಲ್ಲಾದ ಮಲೆನಾಡಿನ ನೆಲೆ
೧೧೪	ಬಳ್ಳೂರು ಕಟ್ಟೆ, ಮೈ, ಕ	ಕೌ.ಸಂ	ಕಾವೇರಿ	ಕ್ರಯಮಾನ್ಯ		ಈಗ ಸಂಕೇತಿಗಳಿಲ್ಲ
೧೧೫	ಚುಂಚನಕಟ್ಟೆ, ಮೈ, ಕ	ಕೌ.ಸಂ	ಕಾವೇರಿ		ಶ್ರೀರಾಮ	ಈಗ ಸಂಕೇತಿಗಳಿಲ್ಲ
೧೧೬	ಬೀರೂರು, ಚಿ, ಕ	ಲಿಂ.ಸಂ		ತಿಮ್ಮಾಪುರ ಸರ್ವಮಾನ್ಯ		೧೧ನೆಯ ಶತಮಾನದ ಮುಖ್ಯ ಅಡಿಕೆ ವ್ಯಾಪಾರಕೇಂದ್ರ
೧೧೭	ಬೆಂಗಳೂರು, ಬೆಂ, ಕ	ಸಂ				೨೦ನೆಯ ಶತಮಾನದಲ್ಲಿ ಎಲ್ಲೆಡೆಯ ಸಂಕೇತಿಗಳು ಸೇರುತ್ತಿದ್ದಾರೆ
೧೧೮	ಬೆಟ್ಟದಪುರ, ಮೈ, ಕ	ಬೆ.ಸಂ	ಕೆರೆ, ಕಾವೇರಿ	ಹತ್ತಿರದ ಜೋಡಿ ಗ್ರಾಮಗಳು	ಮಲ್ಲಿಕಾರ್ಜುನ	೧೬ನೆಯ ಶತಮಾನದಲ್ಲಾದ ಸಂಕೇತಿ ಕೇಂದ್ರ
೧೧೯	ಬೆಲಾಳ್, ಮೈ, ಕ	ಕೌ.ಸಂ.				ಚಿಲಕುಂದಕ್ಕೆ ವಲಸೆ; ಈಗ ಸಂಕೇತಿಗಳಿಲ್ಲ
೧೨೦	ಬೆಳವಾಡಿ, ಹಾ, ಕ	ಕೌ.ಸಂ	ಕೆರೆ, ಕಾವೇರಿ	ಮದೇ, ಜೋಡಿ		ಈಗ ಸಂಕೇತಿಗಳಿಲ್ಲ
೧೨೧	ಬೇಲೂರು, ಹಾ, ಕ	ಕೌ.ಸಂ	ಯಗಚಿ		ಚೆನ್ನಕೇಶವ	ಈಗ ಸಂಕೇತಿಗಳಿಲ್ಲ
೧೨೨	ಭಗವತಿಪುರಂ, ಕೊ, ಕೇ	ದ.ಸಂ		ದ		ಈಗ ಸಂಕೇತಿಗಳಿಲ್ಲ
೧೨೩	ಮಡವನಕೊರಿ, ಮಂ, ಕ	ಕೌ.ಸಂ	ಹೇಮಾವತಿ			ಕಲ್ಲಹಳ್ಳಿ ಅಷ್ಟಗ್ರಾಮ, ಈಗ ಸಂಕೇತಿಗಳಿಲ್ಲ
೧೨೪	ಮತ್ತೂರು, ಶಿ, ಕ	ಕೌ.ಸಂ	ತುಂಗಾ	ಸರ್ವಮಾನ್ಯ	ಲಕ್ಷ್ಮೀಕೇಶವ	ಮುಖ್ಯಪಾರಂಪರಿಕ ಕೇಂದ್ರಗಳಲ್ಲಿ ಒಂದು
೧೨೫	ಮದ್ರಾಸ್, ಮ, ತನಾ	ದ.ಸಂ				ಆಧುನಿಕ ಕೇಂದ್ರ
೧೨೬	ಮಧುರೈ, ಮಧು, ತನಾ	ದ.ಸಂ	ವೈಗೈ			ಆಧುನಿಕ ನೆಲೆ

ಕ್ರಮ ಸಂಖ್ಯೆ	ಗ್ರಾಮ	ಉಪಪಂಗಡ	ಸಮೀಪ ಜಲಾಶ್ರಯ	ಗ್ರಾಮಸ್ಥಿತಿ	ಮನೆದೇವರು	ಇತರ
೧೨೭	ಮರಿತಮ್ಮನಹಳ್ಳಿ, ಹಾ,ಕ	ಕೌ.ಸಂ	ಕೆರೆ, ಕಾವೇರಿ	ಮದೇ, ಜೋಡಿ		
೧೨೮	ಮಲ್ಲಿನಾಥಪುರ, ಹಾ, ಕ	ಕೌ.ಸಂ	ಹೇಮಾವತಿ			
೧೨೯	ಮಲ್ಲರಾಜಪಟ್ಟಣ, ಹಾ, ಕ	ಕೌ.ಸಂ	ಕಾವೇರಿ			೧೮೭೦ರಲ್ಲಿ ನೆಲೆ
೧೩೦	ಮಹಾದಾನಪುರಂ, ಕಕು, ತನಾ	ದ.ಸಂ		ದ, ದತ್ತಿ		ಈಗ ಸಂಕೇತಿಗಳಿಲ್ಲ
೧೩೧	ಮಾದಾಪುರ, ಹಾ, ಕ	ಕೌ.ಸಂ	ಕಾವೇರಿ	ಮದೇ, ಏಕಗೋತ್ರ		೧೯೨೦ಕ್ಕೆ ನೆಲೆ
೧೩೨	ಮಾವಿನಕೆರೆ, ಹಾ, ಕ	ಕೌ.ಸಂ	ಹೇಮಾವತಿ	ಉದೇ	ರಂಗನಾಥ	
೧೩೩	ಮಿರ್ಲೆ, ಮೈ, ಕ	ಕೌ.ಸಂ	ಕೆರೆ, ಕಾವೇರಿ	ಮದೇ		
೧೩೪	ಮುಗಳಿಕಟ್ಟೆ, ಚಿ, ಕ	ಬೆ.ಸಂ			ನರಸಿಂಹ	ಕಡೂರು ಕೇಂದ್ರಿತ ನೆಲೆ, ಈಗ ಸಂಕೇತಿಗಳಿಲ್ಲ
೧೩೫	ಮುಗಳೂರು, ಹಾ, ಕ	ಕೌ.ಸಂ	ಕೆರೆ	ಉದೇ		
೧೩೬	ಮುದಲಪುರ, ಹಾ, ಕ	ಕೌ.ಸಂ	ಕೆರೆ,	ಉದೇ, ಸರ್ವಮಾನ್ಯ		
೧೩೭	ಮುದ್ದನಹಳ್ಳಿ, ಹಾ, ಕ	ಕೌ.ಸಂ	ಹೇಮಾವತಿ	ಉದೇ		ಸ್ಥಳಾಂತರ
೧೩೮	ಮೈಸೂರು, ಮೈ, ಕ	ಸಂ	ಕಾವೇರಿ	ರಾಜಸೇವೆ		
೧೩೯	ಮೊರಪ್ಪನಾಡು, ತಿರುನೆ, ತನಾ	ದ.ಸಂ		ದ		ಈಗ ಸಂಕೇತಿಗಳಿಲ್ಲ
೧೪೦	ಮೊಸಳೆ, ಹಾ, ಕ	ಕೌ.ಸಂ	ಕೆರೆ,ಹೇಮಾವತಿ	ಉದೇ		
೧೪೧	ಯಗಟಿ, ಚಿ, ಕ	ಬೆ.ಸಂ			ಮಲ್ಲಿಕಾರ್ಜುನ	ಈಗ ಸಂಕೇತಿಗಳಿಲ್ಲ
೧೪೨	ಯಾಚನಕುಪ್ಪೆ, ಹಾ. ಕ	ಕೌ, ಸಂ	ಕೆರೆ, ಕಾವೇರಿ	ಮದೇ		೧೭೫೦ ರಿಂದ ೧೭೬೫ರವರೆಗೆ ತಾತ್ಕಾಲಿಕ ನೆಲೆ
೧೪೩	ರಾಗಿಮರೂರು, ಮೈ, ಕ	ಬೆ.ಸಂ	ಕಾವೇರಿ	ವೃತ್ತಿಗಳು		ಈಗ ಸಂಕೇತಿಗಳಿಲ್ಲ

ಕ್ರಮ ಸಂಖ್ಯೆ	ಗ್ರಾಮ	ಉಪಪಂಗಡ	ಸಮೀಪ ಜಲಾಶ್ರಯ	ಗ್ರಾಮಸ್ಥಿತಿ	ಮನೆದೇವರು	ಇತರ
೧೪೪	ರಾಮನಾಥಪುರ, ಹಾ, ಕ	ಸಂ.	ಕಾವೇರಿ	ಮದೇ	ಸುಬ್ರಹ್ಮಣ್ಯ	
೧೪೫	ರಾಮೇನಹಳ್ಳಿ (ಹೊಲಬಗೆರೆ) ಹಾ,ಕ	ಕೌ.ಸಂ	ಯಗಚಿ	ಜೋಡಿ, ಉದೇ		ಈಗ ಸಂಕೇತಿಗಳಿಲ್ಲ
೧೪೬	ರುದ್ರಪಟ್ಟಣ, ಹಾ, ಕ	ಸಂ.	ಕಾವೇರಿ	ಮದೇ		ಕೌಶಿಕ ಸಂಕೇತಿಗಳು ೧೭೪ಂಕ್ಕೆ
೧೪೭	ಲಕ್ಕುಂಡಿ, ಧಾ, ಕ	ಲಿಂ.ಸಂ				ವೆಂಕಟಾಪುರ ಮೊದಲಾದ ೧೧ ಗ್ರಾಮಗಳ ದತ್ತಿ ಈಗ ಸಂಕೇತಿಗಳಿಲ್ಲ
೧೪೮	ಲಿಂಗದಹಳ್ಳಿ, ಚಿ, ಕ	ಲಿಂ.ಸಂ	ಕೆರೆ, ಕಲ್ಲತ್ತಿಗಿರಿ ಜಲಪಾತ	ವೃತ್ತಿಗಳು		ಮುಖ್ಯ ಪಾರಂಪರಿಕ ಕೇಂದ್ರಗಳಲ್ಲಿ ಒಂದು
೧೪೯	ವರ್ಕಲ್ಲೈ ಕೊ, ಕೇ	ದ.ಸಂ		ದ		ಈಗ ಸಂಕೇತಿಗಳಿಲ್ಲ
೧೫೦	ವಡಕ್‌ಗ್ರಾಮ, ತಿರುನೆ, ತನಾ	ದ.ಸಂ		ದ		ಈಗ ಸಂಕೇತಿಗಳಿಲ್ಲ
೧೫೧	ವಿಠಲಾಪುರ, ಮಂ, ಕ	ಕೌ.ಸಂ	ತೊರೆ	ದದೇ		ಈಗ ಸಂಕೇತಿಗಳಿಲ್ಲ
೧೫೨	ವಲನಾಡ್, ತಿರುವ, ಕೇ	ದ.ಸಂ		ದ		ಈಗ ಸಂಕೇತಿಗಳಿಲ್ಲ
೧೫೩	ವೈಕ್ಕಂ, ಕೊಚಿನ್, ಕೇ	ದ.ಸಂ		ದ		ಈಗ ಸಂಕೇತಿಗಳಿಲ್ಲ
೧೫೪	ಶಂಕರನ್ ಕೋವಿಲ್, ತಿರುನೆ, ತನಾ	ದ.ಸಂ		ದ	ಗೋಮತಿ ಅಂಬಾಳ್	ಈಗ ಸಂಕೇತಿಗಳಿಲ್ಲ
೧೫೫	ಶೃಂಗೇರಿ, ಚಿ, ಕ	ಲಿಂ.ಸಂ	ತುಂಗಾ		ಶಂಕರಪೀಠ	ಬಸವಾನಿಯನ್ನು ತೊರೆದ ಸಂಕೇತಿಗಳು ನೆಲೆಸಿದುದು
೧೫೬	ಶಾಂತಿಗ್ರಾಮ, ಹಾ, ಕ	ಕೌ.ಸಂ		ಉದೇ, ವೃತ್ತಿಗಳು		ಮೊದಲ ನೆಲೆಗಳಲ್ಲಿ ಒಂದು.
೧೫೭	ಶಾಂಬವರ್ ವಡಹರೈ, ತಿರುನೆ, ತನಾ	ದ.ಸಂ	ಹನುಮಾನ್	ದ		ಮುಖ್ಯ ಸಂಕೇತಂ
೧೫೮	ಶಾಪತ್ತೂರ್, ತಿರುನೆ, ತನಾ	ಸಂ	ರಾಮ, ಘಟನಾ	ದ		'ಶಾಪ'ದಿಂದ ೧೦೮೭ರಲ್ಲಿ ಖಾಲಿ
೧೫೯	ಶಿವಮೊಗ್ಗ, ಭದ್ರಾವತಿ, ಶಿ, ಕ	ಸಂ	ತುಂಗಭದ್ರ			

ಕ್ರಮ ಸಂಖ್ಯೆ	ಗ್ರಾಮ	ಉಪಪಂಗಡ	ಸಮೀಪ ಜಲಾಶ್ರಯ	ಗ್ರಾಮಸ್ಥಿತಿ	ಮನೆದೇವರು	ಇತರ
೧೬೦	ಶೀಗೋಳು, ಹಾ, ಕ	ಕೌ.ಸಂ	ಕೆರೆ			೧೯೩೦ಕ್ಕೆ ಖಾಲಿ
೧೬೧	ಶ್ರೀರಂಗಪಟ್ಟಣ, ಮಂ, ಕ	ಕೌ.ಸಂ	ಕಾವೇರಿ	ರಾಜಸೇವೆ		
೧೬೨	ಶ್ರೀವಿಲ್ಲಿಪುತ್ತೂರ್, ತಿರುನೆ, ತನಾ	ದ.ಸಂ		ದ		ಈಗ ಸಂಕೇತಿಗಳಿಲ್ಲ
೧೬೩	ಶ್ರೀವೈಕುಂಠ, ತಿರುನೆ, ತನಾ	ದ.ಸಂ		ದ		ಈಗ ಸಂಕೇತಿಗಳಿಲ್ಲ
೧೬೪	ಶುಚೀಂದ್ರಂ, ಕಕು, ತನಾ	ದ.ಸಂ		ದ		
೧೬೫	ಶೆಂಕೋಟ್ಟೈ, ತಿರುನೆ, ತನಾ	ಸಂ	ಹರಿಹರ	ದ		ಸಂಕೇತಿಗಳ ಮೂಲಪ್ರಾಂತ
೧೬೬	ಸಂಧಿಕಾವಲ್‌ಪೋತಿ, ತಿರುನೆ, ತನಾ	ದ.ಸಂ		ದ	ಶಾಸ್ತಾ	ಈಗ ಸಂಕೇತಿಗಳಿಲ್ಲ
೧೬೭	ಸರಗೂರು, ಹಾ, ಕ	ಕೌ.ಸಂ	ಕಾವೇರಿ			೧೮೪೦ಕ್ಕೆ ಆದ ನೆಲೆ
೧೬೮	ಸಾಲಗಾಮೆ, ಹಾ, ಕ	ಕೌ.ಸಂ	ಕೆರೆ	ಉದೇ, ಹೆಬ್ಬಾರಿಕೆ	ಕೇಶವ	
೧೬೯	ಸಾಲಿಗ್ರಾಮ, ಮೈ, ಕ	ಬೆ.ಸಂ	ಕಾವೇರಿ	ವೃತ್ತಿಗಳು		
೧೭೦	ಸೋಮನಹಳ್ಳಿ, ಹಾ, ಕ	ಕೌ. ಸಂ	ಕೆರೆ, ಕಾವೇರಿ	ಮದೇ, ಐತಿಹಾಸಿಕ ಒಕ್ಕಲುತನ		
೧೭೧	ಹಂದನಹಾಲು, ಹಾ, ಕ	ಕೌ.ಸಂ	ಕೆರೆ, ಎಗಚಿ	ಉದೇ, ಸರ್ವಮಾನ್ಯ		
೧೭೨	ಹನಸೋಗೆ, ಮೈ, ಕ	ಬೆ.ಸಂ	ಕಾವೇರಿ	ವೃತ್ತಿಗಳು		
೧೭೩	ಹನ್ಯಾಳು, ಹಾ, ಕ	ಕೌ.ಸಂ	ಕಾವೇರಿ	ಮದೇ		೧೯೪೦ಕ್ಕೆ ಖಾಲಿಯಾದ ವೇದಾಧ್ಯಯನ ಕೇಂದ್ರ
೧೭೪	ಹರವೆ, ಮೈ, ಕ	ಬೆ.ಸಂ		ಕಲ್ಲಹಳ್ಳಿ ಜೋಡಿ		
೧೭೫	ಹರಿಕೇಶವನಲ್ಲೂರ್, ತಿರುನೆ, ತನಾ	ದ.ಸಂ	ದ			ಈಗ ಸಂಕೇತಿಗಳಿಲ್ಲ
೧೭೬	ಹಳ್ಳಿಮೈಸೂರು, ಹಾ, ಕ	ಕೌ.ಸಂ	ಕೆರೆ, ಹೇಮಾವತಿ			

ಕ್ರಮ ಸಂಖ್ಯೆ	ಗ್ರಾಮ	ಉಪಪಂಗಡ	ಸಮೀಪ ಜಲಾಶ್ರಯ	ಗ್ರಾಮಸ್ಥಿತಿ	ಮನೆದೇವರು	ಇತರ
೧೭೭	ಹಾನಗಲ್ಲು, ಹಾ, ಕ	ಕೌ.ಸಂ	ಕೆರೆ, ಕಾವೇರಿ	ಏಕಗೋತ್ರ ಸಂಕೇತಂ		೧೭೪೫ಕ್ಕೆ ನೆಲೆ
೧೭೮	ಹಾಸನ, ಹಾ, ಕ	ಸಂ				ಹಾಸನ ಸೀಮೆಯ ಮುಖ್ಯ ಕೇಂದ್ರ
೧೭೯	ಹಿರೇಹಳ್ಳಿ, ಹಾ, ಕ	ಕೌ.ಸಂ	ಹೇಮಾವತಿ			
೧೮೦	ಹಿರಳ್ಳಿಕೊಪ್ಪಲು, ಹಾ, ಕ	ಕೌ.ಸಂ	ಹೇಮಾವತಿ			
೧೮೧	ಹಿರಿಯಂಗಳ, ಚಿ, ಕ	ಲಿಂ.ಸಂ	ಕೆರೆ	ಬೇಚಿರಾಕ್		ಬೀರೂರು ಸಮೀಪ
೧೮೨	ಹೆಬ್ಬಾಲೆ, ಹಾ, ಕ	ಕೌ.ಸಂ	ಹೇಮಾವತಿ	ವೃತ್ತಿಗಳು		೧೯೧೦ಕ್ಕೆ ಖಾಲಿ
೧೮೩	ಹೆಮ್ಮಿಗೆ, ಮೈ, ಕ	ಸಂ	ಕಾವೇರಿ	ಇನಾಂ		ಕೆಲವರು ಶ್ರೀವೈಷ್ಣವರಾಗಿ ಮತಾಂತರಗೊಂಡ ಜಾಗ; ಈಗ ಸಂಕೇತಿಗಳಿಲ್ಲ
೧೮೪	ಹೊಸಕೋಟೆ, ಮಂ, ಕ	ಕೌ.ಸಂ	ಹೇಮಾವತಿ	ವೃತ್ತಿ		ಮುಳುಗಡೆ
೧೮೫	ಹೊಸಹಳ್ಳಿ, ಮೈ, ಕ	ಕೌ.ಸಂ	ಕಾವೇರಿ	ಮದೇ		ಮುತ್ತುಗೋಡು, ಹತ್ತಿರ, ಈಗ ಸಂಕೇತಿಗಳಿಲ್ಲ
೧೮೬	ಹೊಸಹೊಳಲು, ಮಂ, ಕ	ಕೌ.ಸಂ	ಹೇಮಾವತಿ	ರಾಜಸೇವೆ		ಈಗ ಸಂಕೇತಿಗಳಿಲ್ಲ
೧೮೭	ಹೊಸಹಳ್ಳಿ, ಶಿ, ಕ	ಕೌ.ಸಂ	ತುಂಗಾ	ಸರ್ವಮಾನ್ಯ	ಬೇಲೂರುಕೇಶವ	ಮತ್ತೂರಿಗೆ ಹೊಂದಿಕೊಂಡ ಊರು
೧೮೮	ಹೊಳೆನರಸೀಪುರ, ಹಾ,ಕ	ಕೌ.ಸಂ	ಹೇಮಾವತಿ	ಮದೇ, ರಾಜಸೇವೆ		
೧೮೯	ಹೋಚೆಹಳ್ಳಿ, ಚಿ, ಕ	ಕೌ.ಸಂ		ಜೋಡಿ		ಕಡೂರು ಕೇಂದ್ರಿತ ನೆಲೆಗಳಲ್ಲಿ ಒಂದು

ಸೂಚನೆ : ಈ ಪಟ್ಟಿಯಲ್ಲಿ ಬಳಸಿರುವ ಸಂಕೇತಗಳ ವಿವರ

ಕ - ಕರ್ನಾಟಕ, ಕೇ - ಕೇರಳ, ತನಾ - ತಮಿಳುನಾಡು, ಮದೇ - ಮಧ್ಯದೇಶ, ಉದೇ - ಉತ್ತರದೇಶ(ಹಾಸನಸೀಮೆ), ದದೇ - ದಕ್ಷಿಣದೇಶ, ದ - ದಕ್ಷಿಣ, ಹಾ - ಹಾಸನಜಿಲ್ಲೆ, ಮೈ - ಮೈಸೂರು ಜಿಲ್ಲೆ, ಚಿ - ಚಿಕ್ಕಮಗಳೂರು ಜಿಲ್ಲೆ, ಬ - ಬಳ್ಳಾರಿ ಜಿಲ್ಲೆ, ಶಿ - ಶಿವಮೊಗ್ಗ ಜಿಲ್ಲೆ, ಮಂ - ಮಂಡ್ಯ ಜಿಲ್ಲೆ, ಬೆಂ - ಬೆಂಗಳೂರು ಜಿಲ್ಲೆ, ಕೊ - ಕೊಲ್ಲಂ ಜಿಲ್ಲೆ, ಉಮ - ಉತ್ತರ ಮಲಬಾರ್ ಜಿಲ್ಲೆ, ದಮ - ದಕ್ಷಿಣ ಮಲಬಾರ್ ಜಿಲ್ಲೆ, ಎ - ಎರ್ನಾಕುಲಂ ಜಿಲ್ಲೆ, ಮ - ಮದ್ರಾಸ್ ಜಿಲ್ಲೆ, ಮಧು - ಮಧುರೈ ಜಿಲ್ಲೆ, ತಿರುವ - ತಿರುವನಂತಪುರಂ ಜಿಲ್ಲೆ, ತಿರುನೆ - ತಿರುನೆಲ್‌ವೇಲಿ ಜಿಲ್ಲೆ, ಕಕು - ಕನ್ಯಾಕುಮಾರಿ ಜಿಲ್ಲೆ ಸಂ - ಸಂಕೇತಿ, ಕೌ.ಸಂ - ಕೌಶಿಕ ಸಂಕೇತಿ, ಬೆ.ಸಂ - ಬೆಟ್ಟದಪುರ ಸಂಕೇತಿ, ದ.ಸಂ - ದಕ್ಷಿಣ ಸಂಕೇತಿ, ಲಿಂ.ಸಂ. - ಲಿಂಗದಹಳ್ಳಿ ಸಂಕೇತಿ, ಮಧ್ಯದೇಶ - ಕಾವೇರಿ ಮತ್ತು ಹೇಮಾವತಿ ನದಿಗಳ ಮಧ್ಯಭಾಗ, ಧಾ - ಧಾರವಾಡ ಜಿಲ್ಲೆ, ಉದೇ - ಉತ್ತರದೇಶ - ಹೇಮಾವತಿ ನದಿಯ ಉತ್ತರಭಾಗ, ದದೇ - ದಕ್ಷಿಣದೇಶ - ಕಾವೇರಿ ನದಿಯ ದಕ್ಷಿಣ ಭಾಗ ದ: ದಕ್ಷಿಣ - ಕೇರಳ ಮತ್ತು ತಮಿಳುನಾಡು ರಾಜ್ಯಗಳು.

ಆದರೆ ಮಧ್ಯದೇಶದ ವಿವರದಲ್ಲಿ ನಿಖರವಾಗಿ ಆ ಭಾಗದ ಹಳ್ಳಿಗಳೇ ಸೇರಿಲ್ಲ. ಉದಾ: ಎಳ್ಳೇಶಪುರ.


ಮತ್ತೂರು, ಬಸವಾನಿ, ಲಿಂಗದಹಳ್ಳಿ ಮತ್ತು ಕುಪ್ಪಳ್ಳಿ ಕೇಂದ್ರಿತ ಊರುಗಳು ಯಾವ ವಿಭಾಗಕ್ಕೂ ಸೇರುವುದಿಲ್ಲ. ಸಂಕೇತಿ ಎಂದು ಮಾತ್ರ ಉಲ್ಲೇಖಿಸಿರುವುದು ಉಪಜಾತಿಗಳಾಗುವ ಪೂರ್ವದ ಜನರನ್ನು ಹಾಗೂ ಎಲ್ಲ ಸಂಕೇತಿಗಳೂ ಇರುವ ಆಧುನಿಕ ನೆಲೆಗಳಿಗೆ ಸಂಬಂಧಿಸಿದವರನ್ನು.

ಪಟ್ಟಿ ೮. ಆಮಂತ್ರಕ - ಆಮಂತ್ರಿತರ ವಿವರಗಳು :

ಕ್ರಮ ಸಂಖ್ಯೆ	*ಆಮಂತ್ರಕರ ಹಿಂದಿನ ನೆಲೆ*	*ಆಮಂತ್ರಕರು*	*ಕಾರಣಗಳು*	*ಆಮಂತ್ರಿತರು*
೧	ಕೌಶಿಕ	ಮುದಲಾಪುರ, ನಿತುಂದಿಲ	ನಿಮಂತ್ರಣ ಇತ್ಯಾದಿ	ಹರಿತಸ
೨	ಕೃಷ್ಣಾಪುರ	ಕೊಂಡಗುಳ, ನಿತುಂದಿಲ	ಅದೇ	ಗೋಣಿಸೋಮನಹಳ್ಳಿಯಿಂದ
		ಪೂಮಗಾಮೆ, ನಿತುಂದಿಲ	ಅದೇ	ಅನುಗನಹಾಳ್-ವಾಧುಲಸ
೩	ಪಿರಿಯಪಟ್ಟಣ	ಹಳ್ಳಿಮೈಸೂರು, ಭಾರದ್ವಾಜ	ಅದೇ	ಸೋಮನಹಳ್ಳಿ-ಆಯಾಸ್ಯ
೪	ಕೌಶಿಕ	ಮರಿತಮ್ಮನಹಳ್ಳಿ, ಭಾರದ್ವಾಜ	ಅದೇ	ಪೂಮಗಾಮೆ-ನಿತುಂದಿಲ, ಬರಗೂರು-ವಾಧುಲಸ
೫	---	ಕೆರಳಾಪುರ, ವಾಧುಲಸ-೧ ವಾಧುಲಸ-೨	ಅದೇ	ರುದ್ರಪಟ್ಟಣ-ಲೋಹಿತ ಸೋಮನಹಳ್ಳಿ-ಆಯಾಸ್ಯ
೬	ಮರಿತಮ್ಮನಹಳ್ಳಿ	ಸೋಮನಹಳ್ಳಿ	ಜೋಯಿಸಗಿರಿ	ಕೃಷ್ಣಾಪುರ-ನಿತುಂದಿಲ
೭	ಕೌಶಿಕ	ಕೃಷ್ಣಾಪುರ	ಪೌರೋಹಿತ್ಯ, ನಿಮಂತ್ರಣ, ಜೋಯಿಸಗಿರಿಗೆ ಮತ್ತು ಅಷ್ಟಾವಧಾನಸೇವೆ	ಪಿರಿಯಪಟ್ಟಣ-ಕೌಂಡಿನ್ಯ ಅನುಗವಳ್ಳಿ-ವಾಧುಲಸ ಲಿಂಗದಹಳ್ಳಿ-ಭಾರದ್ವಾಜಿ ಮತ್ತೂರು-ಕೌಶಿಕ
೮	ಪಿರಿಯಪಟ್ಟಣ	ಚಿಲಕುಂದ	ವೇದ ಕಲಿಸಲು	ಮಗ್ಗೆ-ಭಾರದ್ವಾಜಿ

ಇತರ ಸಾಂಸ್ಕೃತಿಕ ಕಾರಣಗಳಿಗಾಗಿಯೂ ಮರುವಲಸೆಗಳು ನಡೆದಿರುವುದನ್ನು ಇಲ್ಲಿ ಗುರುತಿಸಬಹುದು.

ಪಟ್ಟಿ ೯. ಒಂಬತ್ತು ಶತಮಾನಗಳ ಅವಧಿಯಲ್ಲಿ ಗೋತ್ರವಲಸೆಯೊಂದರ ನಿದರ್ಶನ (ಭಾರದ್ವಾಜಗೋತ್ರ)




ಪಟ್ಟಿ ೧೦. ಕಡೂರು ಕೇಂದ್ರಿತ ನೆಲೆಗಳು

ಕ್ರಮ ಸಂಖ್ಯೆ	*ನೆಲೆಗಳು*	*ನೆಲೆಸಿದ ಕಾಲ*	*ಆಧಾರ*	*ಗೆ.ವಲಸೆ*
೧	ತಂಗ್ಲಿ (ಕಡೂರಿನ ಆಗ್ನೇಯಕ್ಕೆ ೧೦ ಕಿ.ಮೀ. ದೂರದಲ್ಲಿ)	ಕ್ರಿ.ಶ.೧೨೦೦	ಗೋಪಾಲಕೃಷ್ಣ ಜಿ. ಮತ್ತೂರು-ಪಹಣಿ, ವಂಶಚರಿತ್ರೆ	ಮತ್ತೂರು; ೧೬ನೆಯ ಶತಮಾನದಿಂದ
೨	ತರೀಕೆರೆ (ಮತ್ತು ಕೋಡೆಹಳ್ಳಿ)	ಕ್ರಿ.ಶ.೧೧೫೮	ಹಳೆಯೂರ್ ದಾಖಲೆ	ಮತ್ತೂರು
೩	ಅಮರಾವತಿಪುರಂ	ಕ್ರಿ.ಶ.೧೧೬೬-೧೧೯೭	ಗೋಪಾಲಕೃಷ್ಣ ಜಿ.-ಮತ್ತೂರು - ಪಹಣಿ	?
೪	ಹಿರೇನಲ್ಲೂರು (ಕಡೂರಿನ ಈಶಾನ್ಯಕ್ಕೆ ೧೩ ಕಿ.ಮೀ)	ಕ್ರಿ.ಶ.೧೨೧೫	ವಂಶಚರಿತ್ರೆ	?
೫	ಬಗ್ಗವಳ್ಳಿ (ತರೀಕೆರೆಯ ಪೂರ್ವಕ್ಕೆ ೨೪ ಕಿ.ಮೀ.ದೂರದಲ್ಲಿ)	ಕ್ರಿ.ಶ.೧೨೪೯	ವಂಶಚರಿತ್ರೆ	?
೬	ಕಡೂರು (ನಾರಣಪುರ ಅಗ್ರಹಾರ)	ಕ್ರಿ.ಶ.೧೪ನೆಯ ಶತಮಾನ	ವಂಶಚರಿತ್ರೆ, ಗೋಪಾಲಕೃಷ್ಣ ಜಿ.-ಮತ್ತೂರು - ಪಹಣಿ	?
೭	ಹಿರಿಯಂಗಳ (ಕಡೂರಿಗೆ ೫ಕಿ.ಮೀ. ವಾಯವ್ಯಕ್ಕೆ)	–	–	ಬೀರೂರು, ಲಿಂಗದಹಳ್ಳಿ
೮	ಹೋಚೆಹಳ್ಳಿ ಜೋಡಿಗ್ರಾಮ	–	–	ಈಗಲೂ ಅಲ್ಲಿ ನೆಲೆ ಮುಂದುವರಿದಿದೆ

ಸೂಚನೆ : ಈ ನೆಲೆಗಳ ಬಗೆಗಿನ ಹೆಚ್ಚಿನ ವಿವರಗಳಿಗೆ ನೋಡಿ: ಚಿಕ್ಕಮಗಳೂರು ಗೆಜೆಟಿಯರ್‌ನ ಪುಟಗಳು: ೫೫೭, ೫೬೩, ೫೮೯, ೫೯೫, ೬೩೦, ೬೩೧

ಪಟ್ಟಿ ೧೧. ಕಳೆದ ಒಂಬತ್ತು ಶತಮಾನಗಳಲ್ಲಿ ಸಂಕೇತಿಗಳ ವಲಸೆ : ಪ್ರಧಾನ ಕೇಂದ್ರಗಳು



ಸೂಚನೆ : ಈ ಪಟ್ಟಿಯು, ಸಂಕೇತಿಗಳ ಸಮಗ್ರ ವಲಸೆಯ ಪ್ರಧಾನಹಂತಗಳ ಸೂಚಿಯಾಗಿದೆ. ವಿಜಯನಗರದ ಅರಸರ ದತ್ತಿಗಳನ್ನನುಸರಿಸಿ ಆದ, ಕಡೂರು ಕೇಂದ್ರದ ಹೊರವಲಸೆಗಳನ್ನೂ ಇಲ್ಲಿ ಗಮನಿಸಬಹುದು.

ಪಟ್ಟಿ ೧೨. ಬೆಟ್ಟದಪುರದಿಂದ ಆದ ಹೊರವಲಸೆಗಳ ನಿದರ್ಶನಗಳು

ಕ್ರಮ ಸಂಖ್ಯೆ	*ನೆಲೆ*	*ಕಾಲ*	*ಆಧಾರ*	*ಫಲ ಮತ್ತು ಅನುಭವಿಗಳು*
೧	ಅ)ಹರವೆ (ಕಲ್ಲಹಳ್ಳಿ ಜೋಡಿ) ಶಾನುಭೋಗಿಕೆಯೂ ಇತ್ತು ಆ)ಯಗಟಿಯಿಂದ	ಕ್ರಿ.ಶ.೧೬೨೦	ವಂಶಚರಿತ್ರೆ	ಬೆಟ್ಟದಪುರದ ದಿಡ್ಡೆ ಉಪಾಧ್ಯಾಯ ಶ್ರೀನಿವಾಸಯ್ಯ
೨	ಹನಸೋಗೆ	ಕ್ರಿ.ಶ.೧೬೩೮	೧೮ (IV ಯೆ ೧೯) ಯಡತೊರೆ	ಸೀಗೇಕೋರೆ ಕಾವಲ್ ಚೆನ್ನಪ್ಪಯ್ಯ
೩	ರಾಗಿಮರೂರು	--	ಇಸಿ ರಾಗಿಮರೂರು ೧೦೨ (ರಿ ೧೯೨೪-೩) ವಿ.ಎನ್.ಸಾಲಿಗ್ರಾಂ (ರಾಮನಾಥಪುರ)	ವಿ.ಎನ್.ಸಾಲಿಗ್ರಾಂ
೪	ರುದ್ರಪಟ್ಟಣ	ಕ್ರಿ.ಶ.೧೭೦೦ಕ್ಕೂ ಹಿಂದೆ	ರುದ್ರಪಟ್ಟಣಕ್ಕೆ ಬಂದ ಪೂಮಗಾಮೆ ದೀಕ್ಷಿತರ ವಂಶಚರಿತ್ರೆ	–
೫	ಪಿರಿಯಪಟ್ಟಣ (ತಾವರೆಕೆರೆ ಉಂಬಳಿ)	ಕ್ರಿ.ಶ.೧೮೨೦	ಮುಮ್ಮಡಿ ಕೃಷ್ಣರಾಜ ಒಡೆಯರಿಂದ	ಚಿಟಿಕೆ ನಶ್ಯದ ತೋಟ
೬	ಕಣಗಾಲ್	ಕ್ರಿ.ಶ.೧೮೩೩	ಇಸಿ ಕಣಗಾಲ ೧೭ (IV ಹು ೧೧೯) ದಾನ ಶಾಸನ	ಹರವೆಯಿಂದ ಅಡುಗೂರಿಗೆ ವ್ಯವಸಾಯಕ್ಕೆ, ಕಣಗಾಲ್‌ಗೆ ಶಾನುಭೋಗಿಕೆಗೆ

ಸೂಚನೆ: ಇವೆಲ್ಲವೂ ಸ್ಪಷ್ಟಪಡಿಸುವಂತೆ, ಬೆಟ್ಟದಪುರದಿಂದ ಆದ ಹೊರವಲಸೆಗಳು ಹದಿನೇಳನೆಯ ಶತಮಾನ ಮತ್ತು ಅನಂತರವೇ ಆಗಿವೆ. ಈ ಉಪಪಂಗಡವು ಬಹುಪಾಲು ಅಷ್ಟಗ್ರಾಮಗಳ ಮಿತಿಯಲ್ಲಿಯೇ ಇದ್ದುದಕ್ಕೆ ಜನಸಂಖ್ಯೆಯ ಮಿತಿಯೂ ಒಂದು ಕಾರಣ. ಇತರರಿಗಿಂತ ಬೇಗ ನಗರೀಕರಣಕ್ಕೆ ಒಳಗಾದ ಈ ಉಪಪಂಗಡದ ಪಾರಂಪರಿಕ ಮಾಹಿತಿ ಬಹಳಷ್ಟು ನಷ್ಟವಾಗಿರುವುದರಿಂದ ಹೆಚ್ಚಿನ ವಿವರಗಳು ದೊರೆಯುತ್ತಿಲ್ಲ.

ಪಟ್ಟಿ ೧೩. ಸಂಕೇತಿಗಳು ಬಳಸಿರುವ ಮರಮುಟ್ಟುಗಳ ಪ್ರಾದೇಶಿಕ ವ್ಯತ್ಯಾಸ

ಕ್ರಮ ಸಂಖ್ಯೆ	*ಮನೆಯ ಭಾಗ*	*ಮಧ್ಯದೇಶ ಮತ್ತು ದಕ್ಷಿಣ*	*ಮತ್ತೂರು*	*ಕೌಶಿಕ ಅಪ್ಪಗ್ರಾಮ*	*ಬೆಟ್ಟದಪುರ*	*ಲಿಂಗದಹಳ್ಳಿ*
೧	ಕದ	ಅತ್ತಿ	ಹೊನ್ನೆ ಇತ್ಯಾದಿ	ಗರಿಗೆ	ಅತ್ತಿ	ಹಲಸು, ಅತ್ತಿ ಹೆಚ್ಚು
೨	ನಿಲವು	ಬೀಟೆ, ಗೊಬ್ಬಳಿ, ತೇಗ, ಹಲಸು, ಬೇವು	ಒಳ್ಳೆಯ ನಾಟಾಗಳು	ನಂದಿ	ಬೇವು, ಹೊನ್ನೆ, ಬೀಟೆ ನಂದಿ, ಹಿಪ್ಪೆ	ಮಾವು, ನೇರಳೆ, ಹಲಸು
೩	ಕಂಬ	ಗೊಬ್ಬಳಿ, ಬಿದಿರು	ಒಳ್ಳೆಯ ನಾಟಾಗಳು	ಗೊಬ್ಬಳಿ, ಬಿದಿರು, ನಾಟಾಗಳು	ಬಿದಿರು,ಕಿತ್ತಳೆ, ಹೊನ್ನೆ, ಚಕೋತ	ನೇರಳೆ, ಬಿಲ್ವಾರ, (ಬಿದಿರು ಇಲ್ಲ)
೪	ತೊಲೆ	ತೇಗ, ಬೇವು, ತೆಂಗು, ಹಿಪ್ಪೆ	ಒಳ್ಳೆಯ ನಾಟಾಗಳು	ಸಾಗುವಾನಿ, ನಂದಿ, ಹೊನ್ನೆ	ನೇರಳೆ, ಹೊನ್ನೆ, ಬೇವು, ತೆಂಗು	ನೇರಳೆ, ತೆಂಗು
೫	ಬಡವು	ಬಿದಿರು, ಅಡಿಕೆ, ಪರೋಡು (ಕೆಟ್ಟಹಲಗೆ)	ಬಿದಿರು, ಅಡಿಕೆ ಇತ್ಯಾದಿ	ಅಡಿಕೆ	ಅಡಿಕೆ,ಬಿದಿರು	ಬಿದಿರು, ಹಲಗೆಗಳು
೬	ಕಿಟಕಿಗಳು	ಬೇವು, ಹಲಸು	ನಾಟಾಗಳು	ಬೇವು, ನಾಟಾಗಳು	ಹಲಸು, ಬೇವು, ನಾಟಾಗಳು	ಬಿದಿರು, ಅಡಿಕೆ
೭	ಇತರ		ಅಡಿಕೆ, ತೆಂಗು ಕೊಟ್ಟಿಗೆಗೆ ಮಾತ್ರ, ಕಿಟಕಿ ಸರಗಳಿಗೆ ಅಡಿಕೆ	ಹಲಗೆಸೇವೆ ಉಂಟು ಮಾವು, ಅಡಿಕೆ, ತೆಂಗು ವಿಶೇಷ	ಮಾವು, ತೇಗ, ಅಡಿಕೆ ತೆಂಗು, ಬಿದಿರಿನಲ್ಲಿ ಪೂರಾ ಮನೆಗಳು	ಅಡಿಕೆ,ತೆಂಗು, ಹೆಚ್ಚಾಗಿ ಇಲ್ಲ. ಸಾಗುವಾನಿ ಹೆಚ್ಚು

ಸೂಚನೆ: *ಮರಮುಟ್ಟುಗಳ ಬಳಕೆಯಲ್ಲಿನ ಈ ವ್ಯತ್ಯಾಸಕ್ಕೆ ಅವುಗಳ ಲಭ್ಯತೆ, ಹವಾಮಾನ, ನಿಪುಣ ಕೆಲಸಗಾರರಿರುವುದು ಮತ್ತು ಆರ್ಥಿಕತೆ ಇವುಗಳು ಒಂದೊಂದಾಗಿ ಇಲ್ಲವೆ ಎಲ್ಲವೂ ಕಾರಣವಾಗಿವೆ.*

ಪಟ್ಟಿ ೧೪. ಸಂಕೇತಿಗಳು ವಿಶೇಷವಾಗಿ ಬಳಸುವ ಧಾರ್ಮಿಕ ಗ್ರಂಥಗಳು

ಕ್ರಮ ಸಂಖ್ಯೆ	*ಧಾರ್ಮಿಕ ಗ್ರಂಥಗಳು*	*ಸಂಕೇತಿ ವಿಶೇಷ*
೧	**ವೇದಾಂಗ (ವೇದಗಳ ಜೊತೆಗೆ)**	ವೇದಕಲಿಕೆಗೆ ಪೂರಕವಾದ ಇವು ಸಾರ್ವತ್ರಿಕವಾದವು.
	ಶಿಕ್ಷಾ, ವ್ಯಾಕರಣ (ಹೆಚ್ಚು), ನಿರುಕ್ತ,	
	ಛಂದಸ್ಸು, ಜ್ಯೋತಿಷ (ಹೆಚ್ಚು), ಕಲ್ಪ	
೨	**ದರ್ಶನಗಳು**	
	ಕಪಿಲ - ಸಾಂಖ್ಯ	
	ಪತಂಜಲಿ - ಯೋಗ	
	ಗೌತಮ - ನ್ಯಾಯ	
	ಕಣಾದ - ವೈಶೇಷಿಕ	ನ್ಯಾಯದ ಭಾಗ
	ಜೈಮಿನಿ - ಪೂರ್ವ ಮೀಮಾಂಸಾ	
	ಬಾದರಾಯಣ - ಉತ್ತರ ಮೀಮಾಂಸಾ	ಮುಖ್ಯವಾಗಿ ಬ್ರಹ್ಮಸೂತ್ರಗಳು ಮತ್ತು ದಶೋಪನಿಷತ್ತಿಗೆ ಶಾಂಕರಭಾಷ್ಯಗಳು (ಉತ್ತರ ಮೀಮಾಂಸಾ)
೩	**ಇತಿಹಾಸ ಮಹಾಕಾವ್ಯಗಳು**	
	ರಾಮಾಯಣ.	ನಿತ್ಯಪಾರಾಯಣ
	ಮಹಾಭಾರತ	
	ಭಗವದ್ಗೀತಾ	ಪಾರಾಯಣ
	ಭಗವದ್ಗೀತಾ ಶಾಂಕರಭಾಷ್ಯ.	ಶಂಕರಜಯಂತಿ ಮೊದಲಾದ ವೇಳೆ ವಿಶೇಷ ಪಾರಾಯಣ
೪	**ಮಹಾಪುರಾಣಗಳು**	
	ಭಾಗವತಪುರಾಣ.	ಕೆಲವರು ನಿತ್ಯಪಾರಾಯಣ. ಸಪ್ತಾಹಾಚರಣೆ - ಐಚ್ಛಿಕ, ಅಪರೂಪ.
	ಗರುಡಪುರಾಣ.	ಸಾವಿನ ಮನೆಯಲ್ಲಿ ಪ್ರೇತಖಂಡ ಪಾರಾಯಣ
	ಮಾರ್ಕಂಡೇಯಪುರಾಣ	ಐಚ್ಛಿಕಸಂದರ್ಭ
೫	**ಉಪಪುರಾಣಗಳು**	
	ಗಾಣಾಪತ್ಯ ಉಪಪುರಾಣ.	ವ್ಯಾಧಿ ಇರುವ ಕೆಲವರು ಪಾರಾಯಣ
	ಶಾಕ್ತ ಉಪಪುರಾಣ, ದೇವೀಭಾಗವತ.	ಐಚ್ಛಿಕ ಪಾರಾಯಣ
	ಚಂಡೀಪುರಾಣ (ಮಾರ್ಕಂಡೇಯ ಪುರಾಣಭಾಗ).	ನವರಾತ್ರಿಯಲ್ಲಿ ಕೆಲವರು ಪಾರಾಯಣ
	ಮಿಶ್ರವರ್ಗ ಉಪಪುರಾಣ: ಬ್ರಹ್ಮವೈವರ್ತ.	ಪುರಾಣ ಹೇಳುವುದುಂಟು
	ವೈಷ್ಣವ ಉಪಪುರಾಣ.	ಇಲ್ಲ
೬	**ಸ್ಮೃತಿಗಳು (ಧರ್ಮಶಾಸ್ತ್ರ)**	
	ಪರಾಶರಸ್ಮೃತಿ	ವಿಶೇಷ
	ಮನು, ಯಾಜ್ಞವಲ್ಕ್ಯ ಸ್ಮೃತಿಗಳು	ಇಲ್ಲವೆಂದೇ ಕೆಲವರ ಅಭಿಮತ

ಪಟ್ಟಿ ೧೪. ಸಂಕೇತಿಗಳು ವಿಶೇಷವಾಗಿ ಬಳಸುವ ಧಾರ್ಮಿಕ ಗ್ರಂಥಗಳು (ಮುಂದುವರಿದುದು)

ಕ್ರಮ ಸಂಖ್ಯೆ	*ಧಾರ್ಮಿಕ ಗ್ರಂಥಗಳು*	*ಸಂಕೇತಿ ವಿಶೇಷ*
೭	**ನಿಬಂಧಗಳು** **ವಾರಾಣಸಿ ಸಂಪ್ರದಾಯ** ನಿರ್ಣಯಸಿಂಧು (ಕಮಲಾಕರ ಕ್ರಿ.ಶ.೧೬೧೨) **ದಕ್ಷಿಣಭಾರತದ ಸಂಪ್ರದಾಯ** ಮಾಧವಾಚಾರ್ಯ - ವಿದ್ಯಾಮಾಧವೀಯ ವೈದ್ಯನಾಥೀಯ **ಆಶೌಚಶತಕ** ವ್ರತಚೂಡಾಮಣಿ (ಲೇಖಕ: ಪುಟ್ಟಪ್ಪ ಎಂಬ ಒಬ್ಬ ಸಂಕೇತಿ)	 ಹಬ್ಬ ಹರಿದಿನಗಳಿಗೆ ಆಧಾರ ('ಧರ್ಮಸಿಂಧು' ಗ್ರಂಥದ ಸಾರ) ಕೆಲವೆಡೆಯ ಸಂಕೇತಿಗಳು ಇದನ್ನು ಗಣಿಸುವುದಿಲ್ಲ ಮುಹೂರ್ತನಿರ್ಣಯಕ್ಕೆ ಶ್ರಾದ್ಧಕಾಂಡ ಮತ್ತು ಪ್ರಾಯಶ್ಚಿತ್ತಕ್ಕೆ ಆಧಾರ. ಎಲ್ಲ ಸಂಕೇತಿಗಳಿಗೂ ಬಹುಮುಖ್ಯ ಆಶೌಚಕ್ಕೆ (ಅಘನಿರ್ಣಯವೂ ಬಳಕೆಯಾಗುತ್ತದೆ. ಇದು ವೈದ್ಯನಾಥೀಯವನ್ನಾಧರಿಸಿದುದು). ಮೊದಲು ಪುರಾಣಗಳನ್ನಾಧರಿಸಿ ಕನ್ನಡದಲ್ಲಿ ಸಂಗ್ರಹಿಸಿದ್ದು ಸಂಕೇತಿಗಳು
೮	**ಮಾಸ ಮಾಹಾತ್ಮ್ಯಗಳು** ಮಾಘ, ವೈಶಾಖ, ಕಾರ್ತಿಕ, ಆಷಾಢಮಾಹಾತ್ಮ್ಯಗಳು	 ಆಯಾ ತಿಂಗಳಿನಲ್ಲಿ ಆಯಾ ಪುರಾಣಗಳನ್ನು ಪುಣ್ಯಸ್ನಾನಾನಂತರ ಜಲಾಶಯಗಳ ಬಳಿಯೇ ವಾಚಿಸುವರು.

ಪಟ್ಟಿ ೧೫. ಷೋಡಶ ಸಂಸ್ಕಾರಾಚರಣೆಗಳ ಪ್ರಾದೇಶಿಕ ಭಿನ್ನತೆಯ ಕೆಲವು ನಿದರ್ಶನಗಳು

ಕ್ರಮ ಸಂಖ್ಯೆ	*ಮಧ್ಯದೇಶ*	*ಮತ್ತೂರು*	*ಲಿಂಗದಹಳ್ಳಿ*	*ಬೆಟ್ಟದಪುರ*	*ದಕ್ಷಿಣ*
೧	ವಿವಾಹಕ್ಕೆ ರಾತ್ರಿ ಮುಹೂರ್ತ ಇಲ್ಲ	ಉಂಟು	ಉಂಟು	ಇಲ್ಲ	ಇಲ್ಲ
೨	ವರಪೂಜೆಗಾಗಿ ವರನನ್ನು ಹಾರಹಾಕಿ ಸ್ವಾಗತಿಸುವವನು ವಧುವಿನ ತಂದೆ	ಹೌದು	ಹೌದು	ಹೌದು	ವಧುವಿನ ಸೋದರ
೩	ಸಂಬಂಧಮಾಲಿಕೆಯ ವೇಳೆ ಪರದೆ ಉಂಟು	ಉಂಟು		ಇಲ್ಲ	ಇಲ್ಲ
	ಆಗ ಮಾಲೆಯ ವಿನಿಮಯ ಒಮ್ಮೆ ಮಾತ್ರ (ಅಲ್ಲಿ ಕರ್ನಾಟಕರಲ್ಲಿಯೂ ಅದು ಒಮ್ಮೆ ಮಾತ್ರ)	ಅದು ಮೂರು ಬಾರಿ (ಅಲ್ಲಿನ ಕರ್ನಾಟಕ ಬ್ರಾಹ್ಮಣರಲ್ಲಿಯೂ ಅದು ಮೂರು ಬಾರಿ)	ಮೂರು ಬಾರಿ	ಒಮ್ಮೆ ಮಾತ್ರ	ಮೂರು ಬಾರಿ
	ವಧುವರರ ಸುತ್ತ ನರ್ತನ ಇಲ್ಲ	ಇಲ್ಲ	ಇಲ್ಲ	ಇಲ್ಲ	ವಧುವರರ ಸುತ್ತ ನೀರು, ಹಾಲು, ದೀಪ ಮತ್ತು ಅರಿಶಿನ ಅನ್ನವನ್ನು ಹಿಡಿದ ಐವರು ಮುತ್ತೈದೆಯರು ಹಾಡು ಹೇಳಿಕೊಂಡು ಮೂರು ಬಾರಿ ಸುತ್ತುತ್ತಾರೆ (ಪಚ್ಚಪಡಿ ಚುತ್ತರದು). ಇದರ ಉದ್ದೇಶ ದೃಷ್ಟಿ ಪರಿಹಾರ
೪	ಲಾಜಾ ಹೋಮದಲ್ಲಿ ವಧುವಿನ ಸೋದರನಿಗೆ ಉಂಗುರದ ಉಡುಗೊರೆ ಇಲ್ಲ ಬಳುವಳಿ ಉಂಟು	ಇಲ್ಲ	ಇಲ್ಲ	ಇಲ್ಲ	ಉಂಟು

ಪಟ್ಟಿ ೧೫. ಷೋಡಶ ಸಂಸ್ಕಾರಾಚರಣೆಗಳ ಪ್ರಾದೇಶಿಕ ಭಿನ್ನತೆಯ ಕೆಲವು ನಿದರ್ಶನಗಳು (ಮುಂದುವರಿದುದು)

ಕ್ರಮ ಸಂಖ್ಯೆ	*ಮಧ್ಯದೇಶ*	*ಮತ್ತೂರು*	*ಲಿಂಗದಹಳ್ಳಿ*	*ಬೆಟ್ಟದಪುರ*	*ದಕ್ಷಿಣ*
೫	ನಾತ್ನಾಡ್ ಕೋಲೂ ಪಾಡೀಉಡರದ್ (ಉಂಟು)	ಉಂಟು	ಉಂಟು	ಉಂಟು	ಇಲ್ಲ
೬	ಕಣ್‌ಕಣ್ಣೆ (ಉಂಟು)	ಉಂಟು	ಉಂಟು	ಉಂಟು	ಇಲ್ಲ
೭	ಕೋಡಂಗಿ ಸಭೆ (ಉಂಟು)	ಉಂಟು	ಇಲ್ಲ	ಉಂಟು	ಇಲ್ಲ
೮	ಬಾಸಿಂಗು ಪಾಡೀಉಡರದ್ (ಉಂಟು)	ಇಲ್ಲ	ಇಲ್ಲ	ಇಲ್ಲ	ವರನ ಸೋದರಿಯರು ಬಾಸಿಂಗ ಕಟ್ಟುತ್ತಾರೆ. ಅವರೇ ತೆಗೆಯುತ್ತಾರೆ.
೯	ವಧುವಿನ ಗೃಹಪ್ರವೇಶದ ವೇಳೆ 'ಪಡೀ ಒದೆಯುವುದು' ಉಂಟು	ಉಂಟು	ಉಂಟು	ಉಂಟು	ಇಲ್ಲ
೧೦	ಸಂಸಾರ ಹೂಡಿಸುವುದು ಗೌಣ	ಹೂಡಿಸುವುದು ಇಲ್ಲ	ಇಲ್ಲ	ಇಲ್ಲ	ಇಲ್ಲ
೧೧	ವಿವಾಹದ ವೇಳೆ ವರನ ಎರಡು ಕಡೆಯ ಯಾನಕ್ಕೂ ಬುತ್ತಿ ಇದೆ	ಒಂದೇ ಕಡೆಗೆ	ಒಂದೇ ಕಡೆಗೆ	ಒಂದೇ ಕಡೆಗೆ	ಎರಡು ಕಡೆಯ ಯಾನಕ್ಕೂ ಇದೆ
೧೨	ಪ್ರಸ್ತಕ್ಕೆ ಶಯನವನ್ನು ಸಿದ್ಧಪಡಿಸುವವನು ವಧುವಿನ ಸೋದರ	ಹೌದು	ಹೌದು	ಹೌದು	ವರನ ಸೋದರಿ ಅಥವಾ ವಧುವಿನ ಸೋದರ
೧೩	**ಇತರ ಕೆಲವು ಸಾಮಾನ್ಯ ಸಂಗತಿಗಳು :** ಅಂಕುರಾರ್ಪಣ : ಎಲೆ ಅಡಿಕೆಯ ಮೂಲಕ ಸಾಂಕೇತಿಕವಾಗಿ ನಡೆಯುತ್ತದೆ	ಹೌದು	ಹೌದು	ಹೌದು	ನಿಜವಾಗಿ ಮೊಳಕೆ ಪೈರು ಬೆಳೆಸುತ್ತಾರೆ

ಪಟ್ಟಿ ೧೫. ಷೋಡಶ ಸಂಸ್ಕಾರಾಚರಣೆಗಳ ಪ್ರಾದೇಶಿಕ ಭಿನ್ನತೆಯ ಕೆಲವು ನಿದರ್ಶನಗಳು (ಮುಂದುವರಿದುದು)

ಕ್ರಮ ಸಂಖ್ಯೆ	*ಮಧ್ಯದೇಶ*	*ಮತ್ತೂರು*	*ಲಿಂಗದಹಳ್ಳಿ*	*ಬೆಟ್ಟದಪುರ*	*ದಕ್ಷಿಣ*
೧೪	ಅಕ್ಷರಾಭ್ಯಾಸದ ಸಂದರ್ಭದಲ್ಲಿ ಚಂದ್ರಲೇಪನ ಮತ್ತು ಹಣೆಗೆ ನಾಣ್ಯಧಾರಣೆ (ಉಂಟು)	ಉಂಟು	ಉಂಟು	ಉಂಟು	ಇಲ್ಲ
೧೫	ಆರತಿಗಳು ವ್ಯಾಪಕವಾಗಿವೆ ಮತ್ತು ವಿಜೃಂಭಣೆಯಿಂದ ನಡೆಯುತ್ತವೆ	ಮಿತ: ಹೆರಿಗೆಗೆಂದು ೯ನೆಯ ತಿಂಗಳು ಮಗಳನ್ನು ಕರೆ ತಂದಾಗಲೂ ಮಗಳಿಗೆ ಬಳೆತೊಡಿಸಿ ಆರತಿ ನಡೆಯುವುದಿಲ್ಲ. ಅದು ಸಾಧಾರಣ ಆರತಿ	ಸಾಧಾರಣ ಆರತಿ	ವ್ಯಾಪಕವಾಗಿ ನಡೆಯುತ್ತದೆ	ಅದು ವಿವಾಹ, ಉಪಾಕರ್ಮ, ಹುಟ್ಟುಹಬ್ಬ ಮತ್ತು ಶ್ರೀಮಂತಕ್ಕೆ ಮಿತವಾದುದು
೧೬	ಸಭಾಪೂಜೆ ವಿಶೇಷವಾಗಿ ನಡೆಯುತ್ತದೆ	ಅಷ್ಟು ವಿಜೃಂಭಣೆಯ ದಲ್ಲ	ಅಷ್ಟು ವಿಜೃಂಭಣೆಯದಲ್ಲ	ವಿಜೃಂಭಣೆ ಉಂಟು	ಅದು ವಿವಾಹ ಮೊದಲಾದ ಮುಖ್ಯ ಸಮಾರಂಭಗಳಲ್ಲೂ ಗೌಣ
೧೭	ಸಭಾಪೂಜೆ ಅಂಗವಾಗಿ ತಾಂಬೂಲಗಳು ಹೆಚ್ಚು	ಬೃಹಸ್ಪತಿ ತಾಂಬೂಲ (ಪುರೋಹಿತನಿಗೆ), ಗ್ರಾಮದ ಮುಖ್ಯದೇವತೆ, ಕುಲದೇವತೆ, ಗ್ರಾಮ ತಾಂಬೂಲ (ಮುಖಂಡರಿಗೆ,) ಇತರ ದೇವಾಲಯಗಳಿಗೆ, ಧರ್ಮಗುರುವಿಗೆ (ಗುರುಚರಣ ತಾಂಬೂಲ). ಈಚೆಗೆ ಅನ್ಯ ಪ್ರಭಾವದಿಂದ: ವಿದ್ವತ್‌ತಾಂಬೂಲ,	ಮಿತವಾದುದು. ದೇವರ ತಾಂಬೂಲ; ಪುರೋಹಿತ; ಭಾವ, ಅಳಿಯ, ಬೀಗರಿಗೆ ವಿಶೇಷವಿಲ್ಲ. ಗ್ರಾಮದ ಪ್ರಧಾನ ದೇವತೆ, ಕುಲಸ್ವಾಮಿ, ಗ್ರಾಮದ ಇತರ ದೇವತೆಗಳಿಗೆ, ಅತಿಥಿಗ್ರಾಮಗಳಿಗೆ, ಗುರುಗಳಿಗೆ (ಚರಣತಾಂಬೂಲ). ಜ್ಯೇಷ್ಠಾಸನ, ಪಾದಪೂಜೆ, ವಿದ್ವತ್‌ತಾಂಬೂಲ ಇಲ್ಲ	ಅಳಿಯಪೂಜೆ ಎಲ್ಲರಿಗಿಂತ ವಿಶೇಷವಾದುದು	ಸಭಾಪೂಜೆ ಕಡಮೆ. ಗ್ರಾಮ ಸಂಭಾವನೆ ಉಂಟು.ಮಾವ, ಅಳಿಯ, ಗುರುವಿಗೆ ಮಾತ್ರ ಪೂಜೆ

ಪಟ್ಟಿ ೧೫. ಷೋಡಶ ಸಂಸ್ಕಾರಾಚರಣೆಗಳ ಪ್ರಾದೇಶಿಕ ಭಿನ್ನತೆಯ ಕೆಲವು ನಿದರ್ಶನಗಳು (ಮುಂದುವರಿದುದು)

ಕ್ರಮ ಸಂಖ್ಯೆ	*ಮಧ್ಯದೇಶ*	*ಮತ್ತೂರು*	*ಲಿಂಗದಹಳ್ಳಿ*	*ಬೆಟ್ಟದಪುರ*	*ದಕ್ಷಿಣ*
		ಆಶೀರ್ವಾದದ ವೇಳೆ ಅಳಿಯ ಪೂಜೆ, ಉಡುಗೊರೆ, ಜ್ಯೇಷ್ಠಾಸನ.			
೧೮	ಕೋಲುಕಟ್ಟರದ್ (ಶುಭಾಶಯಭೋಜನ)ಉಂಟು	ಇಲ್ಲ	ಇಲ್ಲ	ಇಲ್ಲ	ಇಲ್ಲ
೧೯	ಸಾವಿನ ಮನೆಯಲ್ಲಿ ೧೧ ದಿನ ಅಡುಗೆ ಮಾಡುವುದಿಲ್ಲ	ಸತ್ತದಿನ ಮಾತ್ರ ಅಡುಗೆ ಮಾಡುವುದಿಲ್ಲ	ಸತ್ತದಿನ ಮಾತ್ರ ಅಡುಗೆ ಮಾಡುವುದಿಲ್ಲ	ಸತ್ತದಿನ ಮಾತ್ರ ಅಡುಗೆ ಮಾಡುವುದಿಲ್ಲ	ಸತ್ತದಿನ ಮಾತ್ರ ಅಡುಗೆ ಮಾಡುವುದಿಲ್ಲ
೨೦	ಗಂಡನನ್ನು ಕಳೆದುಕೊಂಡವಳು 'ದಹನ'ವಾದ ಒಂದು, ಎರಡು, ಹತ್ತನೆಯ ದಿನ ಶ್ಮಶಾನಕ್ಕೆ ಹೋಗುತ್ತಾಳೆ	ಹತ್ತನೆಯ ದಿನ ಮಾತ್ರ ಹೋಗುತ್ತಾಳೆ	ಹತ್ತನೆಯ ದಿನ ಮಾತ್ರ ಹೋಗುತ್ತಾಳೆ	ಹತ್ತನೆಯ ದಿನ ಮಾತ್ರ ಹೋಗುತ್ತಾಳೆ	ಹತ್ತನೆಯ ದಿನ ಮಾತ್ರ ಹೋಗುತ್ತಾಳೆ
೨೧	ಸತ್ತವರಿಗಾಗಿ ಗಿಡನೆಡುವ ಪದ್ಧತಿ ಇಲ್ಲ	ಇಲ್ಲ	ಅಂತ್ಯಸಂಸ್ಕಾರವಾದ ಕಡೆ ಇಲ್ಲವೆ, ತನ್ನ ಜಮೀನಿನ ಬೇರೆಯ ಕಡೆ ೧೫ನೆಯ ದಿನ ಗಿಡವೊಂದನ್ನು ನೆಡುತ್ತಾರೆ.	ಇಲ್ಲ	ಇಲ್ಲ
೨೨	ತಿಂಡಿವಯ್ಯರದ್ ಉಂಟು	ಉಂಟು	ಇಲ್ಲ	ಇಲ್ಲ	ಉಂಟು
೨೩	ಮಾಘ ಮಾಸದಲ್ಲಿ ಶುಭಸಂಸ್ಕಾರಗಳು ಇಲ್ಲ, ಆಷಾಢದಲ್ಲಿ ಉಂಟು	ಮಾಘಾದಿ ಪಂಚಕದಲ್ಲೇ ಎಲ್ಲವೂ ಹಿಂದೆ ನಡೆಯುತ್ತಿದ್ದವು	ಮಾಘಾದಿ ಪಂಚಕದಲ್ಲೇ ಎಲ್ಲವೂ ಹಿಂದೆ ನಡೆಯುತ್ತಿದ್ದವು	ಮಾಘಾದಿ ಪಂಚಕದಲ್ಲೇ ಎಲ್ಲವೂ ಹಿಂದೆ ನಡೆಯುತ್ತಿದ್ದವು	ಮಾಘಾದಿ ಪಂಚಕದಲ್ಲೇ ಎಲ್ಲವೂ ಹಿಂದೆ ನಡೆಯುತ್ತಿದ್ದವು

ಪಟ್ಟಿ ೧೬. ಗೋತ್ರ / ಮನೆದೇವರು / ಒಕ್ಕಲ ನೆಲೆಗಳು

ಕ್ರಮ ಸಂಖ್ಯೆ	ಗೋತ್ರ	ಮನೆದೇವರು	ಭಕ್ತರು ನೆಲೆಸಿದ ಸ್ಥಳಗಳು
೧	ಭಾರದ್ವಾಜ	ಲಕ್ಷ್ಮೀಕೇಶವ (ಕೌಶಿಕ)	ಪೂಮಗಾಮೆ, ಹಳ್ಳಿಮೈಸೂರು, ಸೋಮನಹಳ್ಳಿ, ಸರಗೂರು, ಚಾಹಳ್ಳಿ, ಮಲ್ಲರಾಜಪಟ್ಟಣ, ಕೊಣನೂರು, ರುದ್ರಪಟ್ಟಣ, ಐಚನಹಳ್ಳಿ, ಕಟ್ಟೆಪುರ, ಅಗ್ರಹಾರ, ಮಗ್ಗೆ, ಬಸವಪಟ್ಟಣ.
		ಕೇಶವ (ನೇರ್ಲಿಗೆ)	ಕೌಶಿಕ, ಬೆಟ್ಟದಪುರ
		ಚೆನ್ನಕೇಶವ (ಬೇಲೂರು)	ಹನಸೋಗೆ
		ಶ್ರೀರಾಮ (ಅನುಗನಹಳ್ಳಿ)	ಕೃಷ್ಣಾಪುರ
		ಸುಬ್ರಹ್ಮಣ್ಯ (ಕುಕ್ಕೆ)	ಬಸವಪಟ್ಟಣ, ಕೆರಳಾಪುರ, ರುದ್ರಪಟ್ಟಣ, ಹಾನಗಲ್
		ಸುಬ್ರಹ್ಮಣ್ಯ (ರಾಮನಾಥಪುರ)	ಮರಿತಮ್ಮನಹಳ್ಳಿ
		ಲಕ್ಷ್ಮೀಕಾಂತ (ದೇವನೂರು)	ಚಿಕುಮೈನಹಳ್ಳಿ, ಕೊಣನೂರು, ರುದ್ರಪಟ್ಟಣ, ಮತ್ತೂರು, ಸಾಲಿಗ್ರಾಮ
		ವೆಂಕಟೇಶ್ವರ (ತಿರುಪತಿ)	ಮೊಸಳೆ, ಮತ್ತೂರು
		ಲಕ್ಷ್ಮೀನರಸಿಂಹ (ಕೌಶಿಕ)	ತೇಗನಹಳ್ಳಿ, ಕಟ್ಟೆಹೊಸಹಳ್ಳಿ, ಐಚನಹಳ್ಳಿ, ಬಸವಪಟ್ಟಣ, ಎಳ್ಳೇಶಪುರ (ತಬ್ಬಲಿ ಭಾರದ್ವಾಜಿಗಳಿಗೆ)
೨	ವಾಧುಲಸ	ಸುಬ್ರಹ್ಮಣ್ಯ (ಕುಕ್ಕೆ)	ಬಸವಪಟ್ಟಣ, ಪೂಮಗಾಮೆ, ಕೃಷ್ಣಾಪುರ
		ಲಕ್ಷ್ಮೀಕಾಂತ (ದೇವನೂರು)	ಚಿಕುಮೈನಹಳ್ಳಿ
		ವೆಂಕಟೇಶ್ವರ (ತಿರುಪತಿ)	ಮತ್ತೂರು, ಕೆರಳಾಪುರ, ಬಸವಪಟ್ಟಣ, ಅಗ್ರಹಾರ, ಮಗ್ಗೆ, ಬರಗೂರು, ರುದ್ರಪಟ್ಟಣ, ಸಾಲಿಗ್ರಾಮ, ಕೊಣನೂರು, ಸರಗೂರು
		ಲಕ್ಷ್ಮೀನರಸಿಂಹ (ಮುಗಳಿಕಟ್ಟೆ)	ಹರವೆ, ಬೆಟ್ಟದಪುರ
		ವೆಂಕಟರಮಣ ಅಥವಾ ರಂಗನಾಥ (ಮಾವಿನಕೆರೆ)	ಬಸವಪಟ್ಟಣ, ಎಳ್ಳೇಶಪುರ, ಅಗ್ರಹಾರ
		ನಂಜುಂಡೇಶ್ವರ (ನಂಜನಗೂಡು)	ಭದ್ರಾವತಿ
೩	ನಿತುಂದಿಲ	ಕೇಶವ (ಸಾಲಗಾಮೆ)	ಮುದಲಾಪುರ
		ಚೆನ್ನಕೇಶವ (ಬೇಲೂರು)	ಕೌಶಿಕ, ಹಂದನಹಾಲು, ಸರಗೂರು, ಮುದಲಾಪುರ, ಕೊಣನೂರು, ರುದ್ರಪಟ್ಟಣ, ಅಗ್ರಹಾರ, ಶೀಗೋಳು, ಮತ್ತೂರು, ಬಸವಪಟ್ಟಣ

ಪಟ್ಟಿ ೧೬. ಗೋತ್ರ / ಮನೆದೇವರು / ಒಕ್ಕಲ ನೆಲೆಗಳು (ಮುಂದುವರಿದುದು)

ಕ್ರಮ ಸಂಖ್ಯೆ	*ಗೋತ್ರ*	*ಮನೆದೇವರು*	*ಭಕ್ತರು ನೆಲೆಸಿದ ಸ್ಥಳಗಳು*
		ಶ್ರೀರಾಮ (ಅನುಗನಹಳ್ಳಿ)	ಮಗ್ಗೆ
		ಸುಬ್ರಹ್ಮಣ್ಯ (ಕುಕ್ಕೆ)	ಮತ್ತೂರು, ಮಾದಾಪುರ, ಕಟ್ಟೆಪುರ
		ಲಕ್ಷ್ಮೀಕಾಂತ (ದೇವನೂರು)	ಕೃಷ್ಣಾಪುರ
		ವೆಂಕಟೇಶ್ವರ (ತಿರುಪತಿ)	ಕೌಶಿಕ, ಸೋಮನಹಳ್ಳಿ, ಕೃಷ್ಣಾಪುರ, ಕೊಂಡಗುಳ - ಅಗ್ರಹಾರ (ಮಾಲೆಕಲ್)
		ನರಸಿಂಹ (ಗೊರೂರು)	ಪೂಮಗಾಮೆ
೪	ಆಯಾಸ್ಯ	ಸುಬ್ರಹ್ಮಣ್ಯ (ಕುಕ್ಕೆ)	ಸೋಮನಹಳ್ಳಿ, ಕೆರಳಾಪುರ, ದೊಡ್ಡಬ್ಯಾಗತವಳ್ಳಿ, ಕೊಣನೂರು, ಚಾಹಳ್ಳಿ, ಕಣಗಾಲ್, ಪಿರಿಯಪಟ್ಟಣ, ಬಸವಪಟ್ಟಣ, ಕಟ್ಟೆಪುರ
		ಸುಬ್ರಹ್ಮಣ್ಯ (ರಾಮನಾಥಪುರ)	ಐಚನಹಳ್ಳಿ, ಅಗ್ರಹಾರ, ಆನಂದೂರು
೫	ಆಯಾಸ್ಯ ಗೌತಮ	ಸುಬ್ರಹ್ಮಣ್ಯ (ಕುಕ್ಕೆ)	ರಾಮೇನಹಳ್ಳಿ
೬	ಶಠಮರ್ಷಣ	ವೆಂಕಟೇಶ್ವರ (ತಿರುಪತಿ)	ಬೆಟ್ಟದಪುರ
೭	ಕೌಶಿಕ (ಯಜುರ್ವೇದ)	ವೆಂಕಟೇಶ್ವರ (ತಿರುಪತಿ)	ಬಸವಪಟ್ಟಣ, ಕಣಗಾಲ್, ಹರವೆ, ಬೆಟ್ಟದಪುರ
		ಮಲ್ಲಿಕಾರ್ಜುನ (ಬೆಟ್ಟದಪುರ)	ಭದ್ರಾವತಿ, ಬೆಂಗಳೂರು
೮	ಕೌಶಿಕ (ಋಗ್ವೇದ)	ವೆಂಕಟೇಶ್ವರ (ತಿರುಪತಿ)	ಬೆಟ್ಟದಪುರ
೯	ಕೌಶಿಕ(ಸಾಮವೇದ)	ಚೆನ್ನಕೇಶವ (ಬೇಲೂರು)	ಕೃಷ್ಣಾಪುರ, ಬೆಟ್ಟದಪುರ
		ವೆಂಕಟೇಶ್ವರ (ತಿರುಪತಿ)	ಸಾಲಿಗ್ರಾಮ
೧೦	ಹರಿತಸ	ಲಕ್ಷ್ಮೀಕೇಶವ (ಕೌಶಿಕ)	ಕೊಣನೂರು, ಅಗ್ರಹಾರ
೧೧	ವತ್ಸ	ಲಕ್ಷ್ಮೀಕೇಶವ (ಕೌಶಿಕ)	ಕೌಶಿಕ, ಮತ್ತೂರು, ಬಸವಪಟ್ಟಣ
		ಸುಬ್ರಹ್ಮಣ್ಯ (ಕುಕ್ಕೆ)	ಕೌಶಿಕ
		ಲಕ್ಷ್ಮೀಕಾಂತ (ದೇವನೂರು)	ಹಿರಿಗನಹಳ್ಳಿ, ಕೌಶಿಕ, ಅಗ್ರಹಾರ
		ವೆಂಕಟೇಶ್ವರ (ತಿರುಪತಿ)	ರುದ್ರಪಟ್ಟಣ, ಪಿರಿಯಪಟ್ಟಣ
೧೨	ಲೋಹಿತಕೌಶಿಕ	ಲಕ್ಷ್ಮೀಕೇಶವ (ಕೌಶಿಕ)	ಕೆರಳಾಪುರ, ಕಟ್ಟೆಪುರ, ಕೌಶಿಕ, ಮತ್ತೂರು, ಹಂದನಹಾಲು
		ವೆಂಕಟೇಶ್ವರ (ತಿರುಪತಿ)	ಕಣಗಾಲ್, ಮತ್ತೂರು

ಪಟ್ಟಿ ೧೬. ಗೋತ್ರ / ಮನೆದೇವರು / ಒಕ್ಕಲ ನೆಲೆಗಳು (ಮುಂದುವರಿದುದು)

ಕ್ರಮ ಸಂಖ್ಯೆ	*ಗೋತ್ರ*	*ಮನೆದೇವರು*	*ಭಕ್ತರು ನೆಲೆಸಿದ ಸ್ಥಳಗಳು*
		ರಂಗನಾಥ ಅಥವಾ ವೆಂಕಟರಮಣ (ಮಾವಿನಕೆರೆ)	ಚಾಹಳ್ಳಿ, ಹೊಸಕೋಟೆ
		ರಂಗನಾಥ (ಹೇಮಗಿರಿ)	ಕುಪ್ಪಳ್ಳಿ
೧೩	ಕೌಂಡಿನ್ಯ	ಲಕ್ಷ್ಮೀಕಾಂತ (ದೇವನೂರು)	ಬೆಟ್ಟದಪುರ
		ವೆಂಕಟೇಶ್ವರ (ತಿರುಪತಿ)	ಪಿರಿಯಪಟ್ಟಣ, ಕೃಷ್ಣಾಪುರ, ವೊಸಳೆ, ನಿಟ್ಟೂರು, ಅಗ್ರಹಾರ, ಮತ್ತೂರು, ಸೋಮನಹಳ್ಳಿ
		ರಂಗನಾಥ ಅಥವಾ ವೆಂಕಟರಮಣ (ಮಾವಿನಕೆರೆ)	ಚಾಹಳ್ಳಿ, ಐಚನಹಳ್ಳಿ, ಮಲ್ಲರಾಜಪಟ್ಟಣ
೧೪	ಆಶ್ವಲಾಯನ ಕೌಂಡಿನ್ಯ	ವೆಂಕಟೇಶ್ವರ (ತಿರುಪತಿ)	ಸೋಮನಹಳ್ಳಿ, ಅಗ್ರಹಾರ, ಕೊಣನೂರು
		ರಂಗನಾಥ ಅಥವಾ ವೆಂಕಟರಮಣ (ಮಾವಿನಕೆರೆ)	ಬಸವಪಟ್ಟಣ, ಸರಗೂರು
೧೫	ನೈಧ್ರುವ ಕಾಶ್ಯಪ	ವೆಂಕಟೇಶ್ವರ (ತಿರುಪತಿ)	ಬೆಟ್ಟದಪುರ
೧೬	ಸಂಕೃತಿ	ವೆಂಕಟೇಶ್ವರ (ತಿರುಪತಿ)	ಹನಸೋಗೆ, ಬೆಟ್ಟದಪುರ, ಲಿಂಗದಹಳ್ಳಿ
		ಮಲ್ಲಿಕಾರ್ಜುನ (ಯಗಟಿ)	ಸಾಲಿಗ್ರಾಮ
೧೭	ಆತ್ರೇಯ	ವೆಂಕಟೇಶ್ವರ (ತಿರುಪತಿ)	ಕಣಗಾಲ್, ಹನಸೋಗೆ, ಲಿಂಗದಹಳ್ಳಿ
		ಮಲ್ಲಿಕಾರ್ಜುನ (ಯಗಟಿ)	ಸಾಲಿಗ್ರಾಮ
		ಲಕ್ಷ್ಮೀನರಸಿಂಹ (ಮುಗಳಿಕಟ್ಟೆ)	ಬೆಟ್ಟದಪುರ, ಲಿಂಗದಹಳ್ಳಿ
೧೮	ಗಾರ್ಗ್ಯಭಾರದ್ವಾಜ	ಶ್ರೀರಾಮ (ಅನುಗನಹಳ್ಳಿ)	ಕೃಷ್ಣಾಪುರ, ಕೌಶಿಕ
		ಶ್ರೀರಾಮ (ಚುಂಚನಕಟ್ಟೆ)	ಬೆಟ್ಟದಪುರ
		ವೆಂಕಟೇಶ್ವರ (ತಿರುಪತಿ)	ಮಗ್ಗೆ, ಬರಗೂರು
		ನರಸಿಂಹ (ಮೇಲುಕೋಟೆ)	ಕೌಶಿಕ

ಟಿಪ್ಪಣಿ : **ದಕ್ಷಿಣದ ಸಂಕೇತಿಗಳ ಮನೆದೇವರುಗಳು:** ೧) ಶಾಸ್ತಾ: ತೇರೇಕಾಲ್‌ಪುದೂರ್, ಎರಚ್ಚಕೊಳಂ, ತಿಮ್ಮರಾಜಪುರಂ (ಪಲಾಯಂಕೊಟ್ಟೈಬಳಿ), ತರವ್ವೆ, ನಡುಕ್ಕಾಉಳಯಾರ್, ಸಂಧಿಕಾವಲ್‌ಪೋತಿ, ಪುಲಿಯೂರ್, ಊರ್‌ಕಾಡ್ (ಅಂಬಾಸಮುದ್ರಂ ಬಳಿ), ಕೊಳತ್ತು (ತಿರುವನಂತಪುರದ ಬಳಿ) ಇತ್ಯಾದಿ ಎಡೆಯ ಶಾಸ್ತಾ ಮನೆದೇವರುಗಳು. ೨) ಅಯ್‌ಕುಡಿ ಸುಬ್ರಹ್ಮಣ್ಯಸ್ವಾಮಿ (ಸಂಕೇತಿಸ್ಥಾಪನೆ), ೩) ಧರ್ಮಸಂವರ್ಧಿನಿ ಅಮ್ಮಾಳ್, ಕಲ್ಯಾಣಸುಂದರೇಶ್ವರರ್, ಅಣ್ಣಾವಿಪಿಳ್ಳೈ - ಕುತ್ತಾಲಂ. ೪) ಗೋಮತಿ ಅಂಬಾಳ್ (ಶಂಕರನ್ ಕೋವಿಲ್) ೫) ಕೋಮಲವಲ್ಲೀ (ಅಯ್‌ಕುಡಿ) - ಹೀಗೆ ದಕ್ಷಿಣದ ಸಂಕೇತಿಗಳ ಮನೆದೇವರುಗಳು ವಿಸ್ತಾರವಾದ ಪ್ರದೇಶಗಳಲ್ಲಿ ಹರಡಿವೆ. ಆದರೆ ದಕ್ಷಿಣದ 'ಸಂಕೇತಂ' ವ್ಯವಸ್ಥೆ ಕ್ಷಯಿಸಿ ತೀವ್ರ ನಗರೀಕರಣವಾಗಿರುವುದರಿಂದ ಕರ್ನಾಟಕದ ಬಗೆಗೆ ವಿವರಪೂರ್ಣ ಪಟ್ಟಿಯನ್ನೊದಗಿಸಿದಂತೆ ಈ ಬಗೆಗೆ ಸಾಧ್ಯವಾಗಿಲ್ಲ.

ಪಟ್ಟಿ ೧೭. ಹಬ್ಬಗಳು : ವ್ಯಾಪ್ತಿ (ಕರ್ನಾಟಕ ಮತ್ತು ದಕ್ಷಿಣದಲ್ಲಿರುವ ಪರ್ವಾಚರಣೆಗಳ ಸಾಮ್ಯ, ವೈಷಮ್ಯಗಳು)

ಕ್ರಮ ಸಂಖ್ಯೆ	*ಮಾಸ*	*ಋತು*	*ಅಯನ*	*ಹಬ್ಬಗಳು*	*ವ್ರತಗಳು*
೧.	ಚೈತ್ರ	ವಸಂತ	ಉ	ಯುಗಾದಿ✓, ರಾಮೋತ್ಸವ^{x}, ವಸಂತೋತ್ಸವ^{x}, ಚಿತ್ರಾಪೂರ್ಣಿಮಾ✓, ಶಿವಸನ್ನಿಧಿಯಲ್ಲಿ ಸ್ನಾನ	ಸೌಭಾಗ್ಯಗೌರಿ^{x}, ಶಕ್ತಿಗಣಪತಿ ವ್ರತ^{x}
೨.	ವೈಶಾಖ	ವಸಂತ	ತ್ತ	ಅಕ್ಷತದಿಗೆ^{x}, ಶಂಕರ ಜಯಂತಿ^{x}, ನೃಸಿಂಹ ಜಯಂತಿ^{x}, ವ್ಯಾಸಪೂರ್ಣಿಮಾ^{x}	ತೀರ್ಥಸ್ನಾನ^{x}
೩.	ಜ್ಯೇಷ್ಠ	ಗ್ರೀಷ್ಮ	ರಾ	ದಶಪಾಪಹರದಶಮಿ^{x}	ಚಾತುರ್ಮಾಸ್ಯ ವ್ರತಾರಂಭ^{x}
೪.	ಆಷಾಢ	ಬೇಸಿಗೆ	ಯ ನ	ಪ್ರಥಮ ಏಕಾದಶಿ^{x}, ವ್ಯಾಸಪೂರ್ಣಿಮಾ^{x}, ತೀರ್ಥಸ್ನಾನ✓	(ಚಾತುರ್ಮಾಸ್ಯ), ಆಷಾಢ ಶುಕ್ರವಾರ ಲಕ್ಷ್ಮಿ^{x}, ಭೀಮೇಶ್ವರ ವ್ರತ^{x} ಚಾತುರ್ಮಾಸ್ಯದ ಶಾಕವ್ರತಾರಂಭ^{x}
೫.	ಶ್ರಾವಣ	ವರ್ಷಋತು	ದ	ಋಗುಪಾಕರ್ಮ✓, ಶ್ರಾವಣಶನಿವಾರ^{x}, ಯಜುರುಪಾಕರ್ಮ✓, ಗೋಕುಲಾಷ್ಟಮಿ✓	ಚಾತುರ್ಮಾಸ್ಯ^{x}, ಮಂಗಳಗೌರಿ^{x}, ದೂರ್ವಾಗಣಪತಿ^{x}, ವರಮಹಾಲಕ್ಷ್ಮಿ✓, ಅಮಾಸೋಮವಾರ^{x}
೬.	ಭಾದ್ರಪದ	ಮಳೆಗಾಲ	ಕ್ಷಿ	ಸ್ವರ್ಣಗೌರಿ^{x}, ಸಾಮಗೋಪಾಕರ್ಮ✓, ವಿನಾಯಕ✓, ವಾಮನಜಯಂತಿ^{x} (ಶ್ರಾವಣದ್ವಾದಶಿ), ಅನಂತ✓, ಮಹಾಲಯ✓	ಚಾತುರ್ಮಾಸ್ಯ^{x}, ಋಷಿಪಂಚಮಿ✓ ಮತ್ತು ನೋಹಿಗಳು^{x}, ಚಿಲುಕಪದ್ಮವ್ರತ^{x}, ಸೂರ್ಯ^{x}, ಗರುಡ^{x}, ಲಿಂಗಪದ್ಮ^{x} ರಂಗೋಲಿಗಳು
೭.	ಆಶ್ವಯುಜ	ಶರದೃತು	ಣಾ	ಶರನ್ನವರಾತ್ರಿ✓ (ಸರಸ್ವತಿ), ದೀಪಾವಳಿ✓, ತುಲಾಸಂಕ್ರಮಣ^{x}	ಗುರುವಾರ ಏಕಾದಶಿ ರಂಗವಲ್ಲಿ^{x}, ವೈಕುಂಠ ಚತುರ್ದಶಿ ರಂಗವಲ್ಲಿಗಳು^{x}, ವೀಳ್ಯಗಳು^{x}, ಮೌನಗೌರಿ^{x}, ಮಾಘಗೌರಿ^{x}, ಶುಕ್ರವಾರಗೌರಿ^{x}, ಭಾನುವಾರ ಗೌರಿ^{x} ಇತ್ಯಾದಿ
೮.	ಕಾರ್ತಿಕ	ಶರತ್‌ಕಾಲ	ಯ ನ	ಬಲೀಂದ್ರಪೂಜೆ^{x}, ಸೋದರಬಿದಿಗೆ✓, ಉತ್ಥಾನದ್ವಾದಶಿ✓, ವೈಕುಂಠ ಚತುರ್ದಶಿ^{x}, ವ್ಯಾಸಪೂರ್ಣಿಮ^{x}, ನವಾಗ್ರಯಣೇಷ್ಟಿ^{x}, ತೀರ್ಥಸ್ನಾನ✓, ಮಕ್ಕಳಹಬ್ಬ (ಕಿರುದೀವಳಿಗೆ)^{x}	ಗೋಪದ್ಮ^{x} (ಆಷಾಢ ಶುದ್ಧ ಏಕಾದಶಿಯಿಂದ ಕಾರ್ತಿಕಶುದ್ಧ ಏಕಾದಶಿಯವರೆಗೆ ಚಾತುರ್ಮಾಸ್ಯ)

ಪಟ್ಟಿ ೧೭. ಹಬ್ಬಗಳು : ವ್ಯಾಪ್ತಿ (ಕರ್ನಾಟಕ ಮತ್ತು ದಕ್ಷಿಣದಲ್ಲಿರುವ ಪರ್ವಾಚರಣೆಗಳ ಸಾಮ್ಯ, ವೈಷಮ್ಯಗಳು) (ಮುಂದುವರಿದುದು)

ಕ್ರಮ ಸಂಖ್ಯೆ	ಮಾಸ	ಋತು	ಅಯನ	ಹಬ್ಬಗಳು	ವ್ರತಗಳು
೯.	ಮಾರ್ಗಶಿರ	ಹೇಮಂತಋತು	ದಕ್ಷಿಣಾಯನ	ನಾಗರಪಂಚಮಿ^{x}, ಸುಬ್ಬರಾಯನ ಷಷ್ಠಿ^{x}, ದತ್ತಜಯಂತಿ^{x}, ಧನುರ್ಮಾಸ✓	ಮಾರ್ಗಶೀರ್ಷ ಲಕ್ಷ್ಮೀವ್ರತ^{x}
೧೦.	ಪುಷ್ಯ	ಹಿಮಗಾಲ	ದಕ್ಷಿಣಾಯನ	ತುಳವ ಷಷ್ಠಿ^{x}, ವೈಕುಂಠ ಏಕಾದಶಿ✓, ಮುಕ್ಕೋಟಿ ದ್ವಾದಶಿ^{x}, ತ್ಯಾಗರಾಜ ಆರಾಧನೆ^{x}, ಸಂಕ್ರಾಂತಿ✓, ಸ್ವರ್ಗದ ಬಾಗಿಲು ತೆಗೆಯುವುದು✓	ಸಂಕ್ರಾಂತಿನೋಹಿ ವ್ರತಗಳು^{x}
೧೧.	ಮಾಘ	ಶಿಶಿರಋತು	ಉತ್ತರಾಯನ	ರಥಸಪ್ತಮಿ✓, ಮಹಾಶಿವರಾತ್ರಿ✓, ತೀರ್ಥಸ್ನಾನ✓	
೧೨.	ಫಾಲ್ಗುಣ	ಮರ ಚಿಗುರುವಕಾಲ	ಉತ್ತರಾಯನ	ವಸಂತೋತ್ಸವಾರಂಭ^{x}	

ಸೂಚನೆ : ಈ ಪಟ್ಟಿಯಿಂದ ಸ್ಪಷ್ಟವಾಗುವುದೆಂದರೆ ಸಾಮಾನ್ಯವಾಗಿ ದಕ್ಷಿಣದಲ್ಲಿ ವ್ರತಗಳು ರೂಢಿಯಲ್ಲಿಲ್ಲ ಎಂಬುದು. ಇಲ್ಲಿ ಉಲ್ಲೇಖಿಸಿರುವುವೆಲ್ಲ ಕರ್ನಾಟಕದಲ್ಲಿ ಆಚರಣೆಯಲ್ಲಿ ಇರತಕ್ಕವು. ಅವುಗಳ ಪೈಕಿ ದಕ್ಷಿಣದಲ್ಲಿ ಆಚರಣೆಯಲ್ಲಿರುವುವನ್ನು ✓ ಚಿಹ್ನೆಯಿಂದಲೂ, ಅಲ್ಲಿ ಆಚರಣೆಯಿಲ್ಲದುವನ್ನು ^{x} ಚಿಹ್ನೆಯಿಂದಲೂ ಗುರುತಿಸಿದೆ. ಈ ಪಟ್ಟಿಯಲ್ಲಿ ಪ್ರತಿ ತಿಂಗಳು, ಋತು, ಅಯನಗಳಲ್ಲಿ ನಡೆಯುವ ಹಬ್ಬ, ವ್ರತಗಳ ಪ್ರಮಾಣ, ಪ್ರಕಾರಗಳ ರೀತಿಯನ್ನು ಗಮನಿಸಬಹುದು. ಇವುಗಳಲ್ಲಿ ಒತ್ತುಕೊಟ್ಟವು ಕರ್ನಾಟಕದಲ್ಲಿಯೂ ತೆಳು ಆಚರಣೆಯಲ್ಲಿರತಕ್ಕವು.

ಪಟ್ಟಿ ೧೮. ದಕ್ಷಿಣದ ಸಂಕೇತಿಗಳು ಆಚರಿಸುವ ಹಬ್ಬಗಳು

ಕ್ರಮ ಸಂಖ್ಯೆ	*ಹಬ್ಬ*	*ರೀತಿ*	*ವ್ಯಾಪ್ತಿ*	*ವಿವರ*
೧	ಚಿತ್ತಿರೈ : (ಮೊದಲ ತೇದಿ) ತಮಿಳು ಹೊಸವರ್ಷ ಯುಗಾದಿ	ಸರಳ ಆಚರಣೆ	ಬೆಳಗ್ಗೆ ಎಂದಿನ ಪೂಜೆ	ರಾತ್ರಿಯೇ ಕನ್ನಡಿಯೊಂದನ್ನು ಹಣ್ಣುಗಳಿಂದ ಅಲಂಕರಿಸುವುದು, ಬೆಳಗ್ಗೆ ಎದ್ದಕೂಡಲೆ ನೋಡಿದರೆ ಮಂಗಳಕರ ಎಂಬುದು ನಂಬಿಕೆ. ಕೇರಳದ ಅಳವಡಿಕೆಯಾದ ಈ ಆಚರಣೆ ಕೇರಳಗಡಿಭಾಗಗಳ ರೂಢಿಯಲ್ಲಿ ಸೇರಿದೆ.
	ವಿಶು: ಚಿತ್ರಾ ಪೂರ್ಣಿಮಿ	-----	ಎಲ್ಲ ಬ್ರಾಹ್ಮಣರೂ ಸೇರಿ ಪೂರ್ಣಿಮಾ ಪೂಜೆ ಮಾಡುವುದು	ಅಕ್ಕಿದೋಸೆ ಅಂದಿನ ವಿಶೇಷ
೨	ಆಡಿಮಾಸ: ೧೮ನೆಯ ದಿನ ಆಡಿಪಂಡಿಗೈ	ಸಂಭ್ರಮ	ಸಾರ್ವತ್ರಿಕ	ಚಿತ್ರಾನ್ನ ಮಾಡಿಕೊಂಡುಹೋಗಿ ನದಿಯ ತೀರದಲ್ಲಿ ಊಟಮಾಡಿ ಬರುವುದು.
೩	ಆವಣಿ: ವರಮಹಾಲಕ್ಷ್ಮಿ ಪೂಜೆ	ಸರಳ	ಕೆಲವರ ಮನೆಯಲ್ಲಿ ಮಾತ್ರ	ಪರಂಪರೆಯಾಗಿ ಬಂದವರಲ್ಲಿ ಆಚರಣೆ ಇದೆ. ಅಡುಗೆ ವೈಭವದ್ದು
	ಗಣಪತಿ ಹಬ್ಬ (ಗೌರಿ ಇಲ್ಲ)	ಸರಳ	ನಮ್ಮ	ಸ್ವತಃ ಪ್ರತಿಮೆಮಾಡಿ ಪೂಜೆ, ನೀರಿಗೆ ಬಿಡುವ ಕ್ರಮ ತಮಿಳುನಾಡಿನಲ್ಲಿ ಇದ್ದರೂ, ಕೇರಳದ ಪ್ರಭಾವದಿಂದಾಗಿ, ಸಂಕೇತಿಗಳಲ್ಲಿಲ್ಲ. ಒಂದೇ ದಿನದ ಆಚರಣೆ; 'ಮಂಗಳಾರತಿ' ಇಲ್ಲ. (ತಮಿಳುನಾಡಿನಲ್ಲಿ ಕೆಲವೆಡೆ ಗೌರಿಯನ್ನು ಹೆಂಗಸರು ನದೀತೀರದಲ್ಲಿ ಆಚರಿಸುತ್ತಾರೆ. ಬ್ರಹ್ಮಚಾರಿ ಮನೆಯಲ್ಲಿದ್ದರೆ ಮಾತ್ರ ಗಣಪತಿಯನ್ನೂ ಇಡುತ್ತಾರೆ.)
	ಅನಂತ ಚತುರ್ದಶಿ	---	ಕೆಲವರಿಗೆ ಮಾತ್ರ	---
೪	ಪೆರಟ್ಟಾಶಿ: ನವರಾತ್ರಿ	ಬೊಂಬೆ ವೈಭವ	ಹತ್ತು ದಿನವೂ ಬೊಂಬೆಬಾಗಿನ	ಸರಸ್ವತಿ ಹಬ್ಬಕ್ಕೆ ಪುಸ್ತಕಗಳನ್ನು ಜೋಡಿಸಿ ಸೀರೆ ಉಡಿಸುವ ಕ್ರಮವಿದೆ; ಆಯುಧಪೂಜೆ ಇದೆ, ಕನ್ನಿಕಾಪೂಜೆ ಇಲ್ಲ (ಇದ್ದಾಗ ತೀರ ಅಪರೂಪ). (ಮೃಚ್ಛಕಟಿಕವನ್ನು ಮಾಡಿ

ಪಟ್ಟಿ ೧೮ : ದಕ್ಷಿಣದ ಸಂಕೇತಿಗಳು ಆಚರಿಸುವ ಹಬ್ಬಗಳು (ಮುಂದುವರಿದುದು)

ಕ್ರಮ ಸಂಖ್ಯೆ	*ಹಬ್ಬ*	*ರೀತಿ*	*ವ್ಯಾಪ್ತಿ*	*ವಿವರ*
				ನದಿಯಲ್ಲಿ ಬಿಡುವುದು ಕೇರಳ ಭಾಗದಲ್ಲಿದೆ)
೫	ಭಾದ್ರಪದ ಶನಿವಾರ ಅಥವಾ ಶ್ರವಣನಕ್ಷತ್ರ	---	---	ಕುಲದೈವ ಅಲ್ಲದಿದ್ದರೂ ವೆಂಕಟಾಚಲಪತಿಪೂಜೆ ಕೇರಳ ಭಾಗದಲ್ಲಿದೆ.
೬	ಆರ್ಪಿಶಿ : ದೀಪಾವಳಿ	ಸರಳ	(ಕೆಲವರು ಆರ್ಪಿಶಿ ವಿಶು ಕೂಡ)	ಅಭ್ಯಂಗಸ್ನಾನ ಉಂಟು, ಹೊಸಬಟ್ಟೆ ರೂಢಿ ಇಲ್ಲ, ಬಲೀಂದ್ರಪೂಜೆ ಇಲ್ಲ, ಬೆನಕನನ್ನೊಡ್ಡುವುದಿಲ್ಲ.
೭	ಕಾರ್ತಿಕೈ: ತಿರುಕ್ಕಾರ್ತಿಕೈ	ಮೊದಲ ಎರಡು ದಿನ	---	ಕಾರ್ತಿಕೈ ಮತ್ತು ರೋಹಿಣಿಯಲ್ಲಿ ಸಂಜೆ ಜಗುಲಿಯಲ್ಲಿ ದೀಪಗಳನ್ನಿಡುವುದು, ನಿತ್ಯಪೂಜೆ ಮಾಡುವುದು, ರೋಹಿಣಿಯ ದಿನ ಜಗುಲಿಯ ಎಲ್ಲ ದೀಪಗಳನ್ನೂ ಒಳಕ್ಕೆ ಸ್ಥಳಾಂತರಿಸುವುದು. 'ಆನೆದೀಪ' ಹೊತ್ತಿಸುವುದು. ಸೋದರನು ಸೋದರಿಗೆ ಎಳನೀರು, ಮಂಗಳದ್ರವ್ಯವನ್ನು ಕೊಡುತ್ತಾನೆ (ಈಗ ಧನರೂಪದಲ್ಲಿ). (ಗೌರಿಹಬ್ಬವೂ ಇಲ್ಲ, ಮಂಗಳ ದ್ರವ್ಯ ಕೊಡುವುದೂ ಇಲ್ಲ) ಆಕೆ ಅರಳು, ಹುರುಳಿ, ಸಕ್ಕರೆಬೆರೆಸಿ, ಆನೆದೀಪಕ್ಕೆ ಪೂಜಿಸಿ, ಸೋದರನ ಒಳಿತಿಗಾಗಿ ಪ್ರಾರ್ಥಿಸುತ್ತಾಳೆ.
೮	ಮಾರ್ಗಳಿ: ವೈಕುಂಠ ಏಕಾದಶಿ	---	---	ಗೋಧಿದೋಸೆ (ಕರ್ನಾಟಕದಲ್ಲಿ ಮುಕ್ಕೋಟಿ ದ್ವಾದಶಿಯಲ್ಲಿ ಅನೇಕ ಬೇಳೆ ಬೆರೆಸಿದ ದೋಸೆ ಮಾಡುತ್ತಾರೆ).
೯	ತೈ: (ಪೊಂಗಲ್ ಆಚರಣೆ ಇಲ್ಲ)	ಸರಳ	(ಊಟವೂ ಸರಳ) ಸ್ವೀಕರಣ	ಬೇರೆಯವರೆಲ್ಲಾ ಆಚರಿಸುವುದರಿಂದ ಅದರ ಸರಳ ಸ್ವೀಕರಣವಾಗಿದೆ. ಮಕರ ಸಂಕ್ರಾಂತಿ ದಿನವೇ ತೈಪೊಂಗಲ್ ನಡೆಯುತ್ತದೆ.
೧೦	ಮಾಶಿ: ಶಿವರಾತ್ರಿ	ಸರಳ		ಜಾಗರಣೆ, ನಾಲ್ಕುಯಾಮ ರುದ್ರಾಭಿಷೇಕ

ಪಟ್ಟಿ ೧೮ : ದಕ್ಷಿಣದ ಸಂಕೇತಿಗಳು ಆಚರಿಸುವ ಹಬ್ಬಗಳು (ಮುಂದುವರಿದುದು)

ಕ್ರಮ ಸಂಖ್ಯೆ	ಹಬ್ಬ	ರೀತಿ	ವ್ಯಾಪ್ತಿ	ವಿವರ
	ಮಾಶಿ: ಕೊನೆಯ ದಿನ			ಮಾಂಗಲ್ಯದಾರ ಬದಲಿಸುವುದು: ಮಾಶಿ, ಪಂಗುನಿ ಸೇರುವ ಸಮಯದಲ್ಲಿ ಪೂಜೆ, 'ಅಡೆ' ಎಂಬ ಸಿಹಿ ಮಾಡಿ ನೈವೇದ್ಯ. ಮಾಂಗಲ್ಯದಾರ ಬದಲಿಸುವುದು. ಚಿಕ್ಕ ಹುಡುಗಿಯರೂ ಕಟ್ಟಿಕೊಳ್ಳುತ್ತಾರೆ.
೧೧	ಪಂಗುನಿ:	-	-	ಮೊದಲದಿನ ಅಡೈಸಿಹಿ, ಕಾರಡಯಾನ್‌ನೋಂಬು (ಸತ್ಯವಾನ್ ಸಾವಿತ್ರಿ ಪೂಜಾ)

ಪಟ್ಟಿ ೧೯. ಸಂಕೇತಿಗಳ ಹಬ್ಬಗಳು: ಪ್ರಾದೇಶಿಕ ಭಿನ್ನತೆಯ ಕೆಲವು ನಿದರ್ಶನಗಳು

ಕ್ರಮ ಸಂಖ್ಯೆ	*ಹಬ್ಬ*	*ಮಧ್ಯದೇಶ*	*ಹಾಸನಸೀಮೆ*	*ಮತ್ತೂರು*	*ಲಿಂಗದಹಳ್ಳಿ*	*ಬೆಟ್ಟದಪುರ*	*ದಕ್ಷಿಣ*
೧	ಯುಗಾದಿ	ಅ) ಬೇವು ಮತ್ತು ಬೆಲ್ಲದ ಮಿಶ್ರಣ	ಬೇವು, ಬೆಲ್ಲ, ತೆಂಗಿನ ತುರಿಯ ಮಿಶ್ರಣ (ಕೌಶಿಕ) ಬೇವಿನ ಸೊಪ್ಪನ್ನು ಒಣಗಿಸಿ ಹುರಿಗಡಲೆ, ಶುಂಠಿ, ಸಕ್ಕರೆ ಯೊಡನೆ ಇಡಿದು, ಬಂಧು ಗಳಿಗೆಲ್ಲ ಹಂಚುವುದು (ಕೃಷ್ಣಾಪುರ)	ಬೇವು, ಬೆಲ್ಲ, ಜೀರಿಗೆ, ಏಲಕ್ಕಿ, ಇಂಗು, ಮೆಣಸು, ತುಪ್ಪದ ಮಿಶ್ರಣ	ಬೇವು, ಬೆಲ್ಲ	ಬೇವು, ಬೆಲ್ಲ, ತೆಂಗಿನ ತುರಿಯ ಮಿಶ್ರಣ	ಬೇವು, ಬೆಲ್ಲ
		ಆ) ವಿಶೇಷವಾಗಿ ಯುಗಾದಿಯ ಮರುದಿನ, ವರ್ಷ ತೊಡಕು ವಿಶೇಷ	ಹೌದು	ಹೌದು	ಹೌದು	ಎಲ್ಲ ಹಬ್ಬಗಳ ಮರುದಿನ ಉಂಟು	ಇಲ್ಲ
೨	ದೀಪಾವಳಿ	ಗೇರುಎಣ್ಣೆಯ ರಕ್ಷೆ ಇಲ್ಲ	ಇಲ್ಲ	ಉಂಟು	ಉಂಟು	ಇಲ್ಲ	ಇಲ್ಲ
೩	ಸೋದರಬಿದಿಗೆ	ದೀಪಾವಳಿಯ ಸಂದರ್ಭದಲ್ಲಿ	ಯುಗಾದಿ ಮತ್ತು ದೀಪಾವಳಿಯ ಸಂದರ್ಭ ಗಳಲ್ಲಿ	ಯುಗಾದಿಯಲ್ಲಿ	ಇಲ್ಲ	ಇಲ್ಲ	ಭಿನ್ನರೂಪದಲ್ಲಿ ದೀಪಾವಳಿಗೆ ಹೊಂದಿಕೊಂಡಂತೆ
೪	ತೀರ್ಥಸ್ನಾನ	ಅಕ್ಷತದಿಗೆಯ ಗೋಗರ್ಭಸ್ನಾನ ವಿಶೇಷ	ತುಲಾ ಸಂಕ್ರಮಣವು ಗಂಗೆಪೂಜೆ ಹಬ್ಬವಾಗಿ	ಮಂಟಪದೀಪೋತ್ಸವ ವಿಶೇಷ	ದಕ್ಷಿಣಾಯನ ಪುಣ್ಯಕಾಲವು ಭಾಗೀರಥೀ ಹಬ್ಬವಾಗಿ	ಧನುಸ್ಸಂಕ್ರಮಣವು ಗಂಗೆ ಹಬ್ಬವಾಗಿ	ಆಡಿ ಅಮಾವಾಸ್ಯೆ, ತೈಅಮಾವಾಸ್ಯೆಗಳಲ್ಲಿ ಸಮುದ್ರಸ್ನಾನ ವಿಶೇಷ
೫	ನಾಗರಪಂಚಮಿ	ಮಾರ್ಗಶಿರದಲ್ಲಿ ಮಾತ್ರ	ಬ್ರಹ್ಮಚಾರಿಯನ್ನು ಊಟಕ್ಕೆ ಕರೆಯುವ ಸಂಪ್ರ ದಾಯ ಇಲ್ಲ; ತನಿಎರೆಯು ವುದು ಈಗಲೇ ಮುಖ್ಯ	ಪ್ರತಿಮೆಗೇ ತನಿ ಎರೆ ಯುವುದು	ಹುತ್ತಕ್ಕೆ ಸಾಧ್ಯವಿಲ್ಲದಾಗ ಹಾಲಿನಲ್ಲಿ ತೊಳೆದ ಅಕ್ಕಿಯ ಹಿಟ್ಟು ಕದಡಿ, ಬೆಣ್ಣೆ, ಬಾಳೆ ಹಣ್ಣುಗಳೊಡನೆ ಪ್ರತಿಮೆಗೆ ತನಿ	ರೂಢಿ ಉಂಟು	ರೂಢಿ ಇಲ್ಲ
೬	ಸುಬ್ಬರಾಯ ಷಷ್ಠಿ	ಮಾರ್ಗಶಿರದಲ್ಲಿ ಮಾತ್ರ	ಷಷ್ಠಿಯಲ್ಲಿಯೂ ನಾಗ ಪ್ರತಿಷ್ಠೆ ಮಾಡಿದವರು	ಇಲ್ಲ	ಬ್ರಹ್ಮಚಾರಿಗೆ ಊಟ (ಕಡ್ಲೆಬೇಳೆ ಆಂಬೊಡೆ, ಮಜ್ಜಿಗೆ ಹುಳಿ, ಸಿಹಿ)	ಕೆಲವರು ಈಗ ಆಚರಿಸುತ್ತಿದ್ದಾರೆ	ರೂಢಿ ಇಲ್ಲ

ಪಟ್ಟಿ ೧೯ : ಸಂಕೇತಿಗಳ ಹಬ್ಬಗಳು: ಪ್ರಾದೇಶಿಕ ಭಿನ್ನತೆಯ ಕೆಲವು ನಿದರ್ಶನಗಳು (ಮುಂದುವರಿದುದು)

ಕ್ರಮ ಸಂಖ್ಯೆ	*ಹಬ್ಬ*	*ಮಧ್ಯದೇಶ*	*ಹಾಸನಸೀಮೆ*	*ಮತ್ತೂರು*	*ಲಿಂಗದಹಳ್ಳಿ*	*ಬೆಟ್ಟದಪುರ*	*ದಕ್ಷಿಣ*
		ಹರಕೆ ಮಾಡಿಕೊಂಡವರು ಮಾತ್ರ ಶ್ರಾವಣದಲ್ಲಿಯೂ ತನಿಎರೆಯುತ್ತಾರೆ	ಮಾತ್ರ ಬ್ರಹ್ಮಚಾರಿಗೆ ವಡೆ ಪಾಯಸದ ಊಟಹಾಕಿ, ದಕ್ಷಿಣೆ ಕೊಡುತ್ತಾರೆ. ಆಗಿನದು ಸರಳ ತನಿ ...ಪದ್ಧತಿ ಇಲ್ಲ	ಒಕ್ಕಲಿನವರು ಮಾತ್ರ ತುಳಷಷ್ಠಿಯಲ್ಲಿ ತನಿಯೆರೆಯುತ್ತಾರೆ	ಪಂಚೆ, ದಕ್ಷಿಣೆ, ಉಡುಗೊರೆ ರೂಢಿ ಇಲ್ಲ	ರೂಢಿ ಇಲ್ಲ	ರೂಢಿ ಇಲ್ಲ
೭	ರಾಮೋತ್ಸವ	ವೈಭವದ ಆಚರಣೆ	ವೈಭವ	ವೈಭವ	ವೈಭವ	ಆಚರಣೆ ಇಲ್ಲ	ಆಚರಣೆ ಇಲ್ಲ
೮	ಶ್ರಾವಣ ಶನಿವಾರ ಪಡಿ ಬೇಡುವುದು	ಸುಬ್ರಹ್ಮಣ್ಯನ ಒಕ್ಕಲು ಹೊರತು ಎಲ್ಲರೂ ಬೇಡುತ್ತಾರೆ. ಅಂದು ಅಭ್ಯಂಗಸ್ನಾನ, ನಾಮಧಾರಣೆ, ಕುಲ ಸ್ವಾಮಿಯ ಹೆಸರಲ್ಲಿ ಮನೆಮನೆಗೆ ಹೋಗಿ ಪಡಿಬೇಡುವುದು. ತಂದ ಅಕ್ಕಿಯಲ್ಲಿ ಅನ್ನಮಾಡಿ ನೈವೇದ್ಯ ಮಾಡುವರು.	ರೂಢಿ ಇಲ್ಲ. ಕೆಲವೆಡೆ ತಿಮ್ಮಪ್ಪನ ಒಕ್ಕಲು ಮಾತ್ರ ಆಚರಿಸುತ್ತಾರೆ	ತಿಮ್ಮಪ್ಪನ ಒಕ್ಕಲು ಮಾತ್ರ	ತಿಮ್ಮಪ್ಪನ ಒಕ್ಕಲು ಮಾತ್ರ	ಶ್ರಾವಣಮಾಸದಲ್ಲಿ ಆಚರಣೆ ಉಂಟು	ಕೆಲವೆಡೆ ಮಾತ್ರ ಕೇವಲ ಚಿಕ್ಕಹುಡುಗಿಯರು ಆಡಿಮಾಸದ ಮಂಗಳ ವಾರಗಳಲ್ಲಿ ಅಕ್ಕಿಯನ್ನು ಪಡಿಬೇಡಿ ತಂದು ನೈವೇದ್ಯ ಮಾಡಿ ಒಳ್ಳೆಯ ಗಂಡ ಸಿಗಲೆಂದು ಊಟ ಮಾಡುತ್ತಾರೆ.

ಪಟ್ಟಿ ೨೦. ಕರ್ನಾಟಕದ ಸಂಕೇತಿಗಳು ಆಚರಿಸುವ ಹಬ್ಬಗಳ ವರ್ಗೀಕರಣ (ಒಂದು ಸಾಧ್ಯತೆ)

೧	ಕಾಲಮಾನ ಆಚರಣೆ	:	ಪ್ರಥಮ ಏಕಾದಶಿ, ಚಾತುರ್ಮಾಸ್ಯವ್ರತ, ವಸಂತೋತ್ಸವ, ಯುಗಾದಿಹಬ್ಬ
೨	ಪಿತೃಪೂಜೆ	:	ಪಿತೃಪಕ್ಷ, ಮಹಾಲಯ ಅಮಾವಾಸ್ಯೆ
೩	ತೀರ್ಥಸ್ನಾನಗಳು	:	ನಿತ್ಯ ಪುಣ್ಯನದೀ ಸ್ನಾನ, ಪುಣ್ಯಕ್ಷೇತ್ರ ಸ್ನಾನ, ಪರ್ವಕಾಲ ಸ್ನಾನ, ಗಂಗೆಹಬ್ಬಗಳು.
೪	ಸೂರ್ಯಸಂಬಂಧೀ ಆಚರಣೆಗಳು	:	ರಥಸಪ್ತಮಿ, ಮಕರಸಂಕ್ರಾಂತಿ
೫	ಶಿವಸಂಬಂಧೀ ಆಚರಣೆಗಳು	:	ಮಹಾಶಿವರಾತ್ರಿ, ಮಾಸಶಿವರಾತ್ರಿ
೬	ವಿಷ್ಣುಸಂಬಂಧೀ ಆಚರಣೆಗಳು	:	ಶ್ರೀರಾಮನವಮಿ, ಗೋಕುಲಾಷ್ಟಮಿ, ನೃಸಿಂಹ ಜಯಂತಿ, ವಾಮನ ಜಯಂತಿ, ಈಚೆಗೆ ದತ್ತಾತ್ರೇಯ ಜಯಂತಿ, ಅನಂತವ್ರತ
೭	ಶಕ್ತಿದೇವತೆಗಳ ಪೂಜೆಗಳು	:	ಸರಸ್ವತೀ ಪೂಜೆ, ಗೌರೀ ಪೂಜೆ, ಲಕ್ಷ್ಮೀಪೂಜೆ, ದುರ್ಗೀಪೂಜೆ (ಗೌಣವಾಗಿ)
೮	ಗಣಪತೀ ಪೂಜೆಗಳು	:	ಭಾದ್ರಪದ ಶುಕ್ಲಚೌತಿ, ಸಂಕಷ್ಟಹರ ಗಣಪತಿ, ದೂರ್ವಾ ಗಣಪತಿ
೯	ದೀಪಾವಳಿ ಆಚರಣೆಗಳು	:	ನರಕ ಚತುರ್ದಶಿ, ಅಮಾವಾಸ್ಯೆ, ಬಲಿಪಾಡ್ಯಮಿ, ಸೋದರಬಿದಿಗೆ
೧೦	ಋಷಿ ಪೂಜೆ	:	ವ್ಯಾಸಪೂರ್ಣಿಮಾ, ಶಂಕರ ಜಯಂತಿ
೧೧	ವೃಕ್ಷ ಪೂಜೆ	:	ಭೂಮಿ ಹುಣ್ಣಿಮೆ, ಕಾರ್ತಿಕ ವನಭೋಜನ, ಅಶ್ವತ್ಥ ಪ್ರದಕ್ಷಿಣೆ, ತುಳಸೀಪೂಜೆ
೧೨	ಪ್ರಾಣಿ ಪೂಜೆ	:	ಗೋವು (ದೀಪಾವಳಿ ಇತ್ಯಾದಿ), ಸರ್ಪ (ನಾಗರಪಂಚಮಿ, ಸುಬ್ಬರಾಯನಷಷ್ಠಿ)

ಸೂಚನೆ : ಯುಗಾದಿ, ಸಂಕ್ರಾಂತಿಯಂಥ ನೈಮಿತ್ತಿಕಗಳಿಗೆ; ಪ್ರಥಮ ಏಕಾದಶಿ, ಶಿವರಾತ್ರಿಯಂಥ ನಿತ್ಯಕರ್ಮಗಳಿಗೆ; ಗೌರಿ, ಗಣಪತಿ, ಅನಂತ ಇ. ವ್ರತಗಳಿಗೆ ಹಬ್ಬದ ಸ್ಥಾನಮಾನ ಬಂದಿದೆ.

ಪಟ್ಟಿ ೨೧. ಸಂಕೇತಿ ಜನರ ಭಾಷೆಯಲ್ಲಿ ಕಂಡುಬರುವ ಭಿನ್ನರೂಪದ ಪ್ರಾದೇಶಿಕ ಪದಗಳು

ಕ್ರಮ ಸಂಖ್ಯೆ	ರೂಪ	ಮಧ್ಯದೇಶ	ಮತ್ತೂರು	ಹಾಸನಸೀಮೆ	ಬೆಟ್ಟದಪುರ	ಲಿಂಗದಹಳ್ಳಿ	ಕನ್ನಡ	ತಮಿಳು
ಅ	೧.ಬಹುವಚನ	ಜನಂಗ	ಜನಂಗ (ಜನಾಕ)	ಜನ್ನ$_s$, ಜನಂಗ,	ಜನಂಗೆ	ಜನಂಗೊ	ಜನಗಳು	ಜನಂಗಳ್
	೨.	ಮರಂಗ	ಮರಂಗ	ಮರಂಗ	ಖಂಡಮರಂಗ	ಮರಂಗೊ	ಮರಗಳು	ಮರಂಗಳ್
	೩.	ನಿಂಗ	ನಿಂಗ	ನಿಂಗ	ನಿಂಗೆ	ನಿಂಗೊ	ನೀವು	ನೀಂಗ
	೪.	ನಂಗ	ನಂಗ	ನಂಗ	ನಂಗೆ	ನಂಗೊ	ನಾವು	ನಾಂಗ
	೫.	ಪಶ್ಯಾ (ಪಶ್ಯಾಕ್ಕಾ), ಮಕ್ಕ	ಪಶ್ಯಾಕಾ, ಮಕ್ಕ	ಪಶ್ಯ$_s$	ಪೈಜೇ, ಪೈಜೇಕಳೆಲ್ಲ	ಪೈಜೆಂಗೊ	ಮಕ್ಕಳು	ಮಕ್ಕಳ್
ಆ	೬.ಸಕಾರ ಸೇರ್ಪಡೆ	ನೆಂಟಸ್ತನು	ನೆಂಟಸ್ತನೊ	ನೆಂಟಸ್ತನು	ನೆಂಟಸ್ತನೊ	ನೆಂಟಸ್ತನೊ	ನೆಂಟಸ್ತನ	ಉರುವ್‌ಗಳ್
ಇ	೭.ವಿಧಿ	ಓದ್‌ಹ್‌ಡ್ ಓದಣು	ಓದ್‌ಗ್‌ಡ್ ಓದಾಣು	ಓದ್‌ಘುಡ್ ಓದಣು	ಓದ್‌ಗ್‌ಡು ಓದಾಣು	ಓದ್‌ಗ್‌ಡು ಓದಾಣು	ಓದಲಿ ಓದಬೇಕು	ಪಡಿಕಿಟ್ಟಂ ಪಡಿಕ್ಕಣುಂ
ಈ	೮.ನಿಷೇಧಾರ್ಥ	ಅವು ಪಣ್ಣ ಅವು ಪಣ್ಣಲ್ಲ	ಅವು ಪಣ್ಣ	ಪಣ್ಣಲ್ಲ	ಅವು ಪಣ್ಣರ್‌ಲ	ಪಣ್ರುಲ್ಲೆ	ಅವನು ಮಾಡ	ಅವನ್ ಪಣ್ಣಮಾಟ್ಟಾನ್
	೯.	ವರ , ವರಲ್ಲ	ವರ , ವರಲ್ಲ	ವರಲ್ಲ	ವರ್‌ದಿಲ್ಲ , ವರ್‌ಲ್ಲಾ	ವರುರ್ಲೆ	ಬರುವುದಿಲ್ಲ	ವರಮಾಟ್ಟಾನ್
ಉ	೧೦.ಕನ್ನಡದಿಂದ ಬಂದ ಪದಗಳು	ಮಣ, ಕತ್ತ, ಅತ್ತ ಜ್ವರು, ಮರು, ಸರು, ಉಡ್‌ಪೂ, ಹೆಗಲ್$_s$, ಚೊಂಬ್$_s$ ತುಟಿ, ಕುಣಿ	ಮಣ, ಕತ್ತ, ಅತ್ತ ಜ್ವರೊ, ಮರೊ, ಸರೊ, ಉಡಿ (೯) ಪೂ, ಹೆಗಲ್$_s$ ಚೊಂಬ್$_s$, ತುಟಿ (ಸ್ವಾಟಾ), ಕುಣಿ	ಮಣ, ಕತ್ತ, ಅತ್ತ ಜ್ವರು, ಮರು, ಸರು, ಬಿಡ್‌ಪೂ, (ಉಡ್‌ಪೂ), ಹೆಗಲ್, ಚೊಂಬು ತುಟಿ, ಕುಣಿ	ಮಣೆ, ಕತ್ತೆ, ಅತ್ತೆ, ಜ್ವರೊ ಮರೊ, ಸರೊ ಉಡಿಪೂ, ಹೆಗಲಿ, ಚೊಂಬು, ತುಟಿ, ಕುಣಿ	ಮಣೆ, ಕತ್ತೆ, ಅತ್ತೆ, ಜ್ವರೊ, ಮರೊ, ಸರೊ, ಉಡಿಪೂ, ಹೆಗಲ್$_s$, ಚೊಂಬು ತುಟಿ, ಕುಣಿ	ಮಣೆ, ಕತ್ತೆ, ಅತ್ತೆ, ಜ್ವರ, ಮರ, ಸರ, ಬಿಡಿಹೂ, ಹೆಗಲು, ಚೊಂಬು, ತುಟಿ, ಕುಣಿ,	ಪಲಹಾಯ್, ಕಳ್‌ದೈ, ಮಾಮಿಯಾರ್, (ಅತ್ತೆ), ಕಾಚಲ್, ಮರಂ, ಮಾಲೆ, ಮುದವ್, ಚೊಂಬು, ಒದರ್, ಕುದಿ,
ಊ	೧೧.ಕಾಲ,ವಚನ ೧೨.	ವರಂದ್ ವರಡ (ವರಂಡ)	ವರಂದಿ ವರಡ	ವರಂದಿ ವರಡ	ವಾರಾಂದಿ ವಾರಾನೆ	ವ್‌ರ್‌ಂದಿ ವಾರ್‌ಂದ್‌ನ್ನೆ	ಬರುತ್ತಾನೆ, ಳೆ, ಬರುತ್ತಾರೆ,	ವರಾನ್, (ವರವಾ) ವರಾರ್, ವರುವಾಳ್,

ಪಟ್ಟಿ ೨೧. ಸಂಕೇತಿ ಜನರ ಭಾಷೆಯಲ್ಲಿ ಕಂಡುಬರುವ ಭಿನ್ನರೂಪದ ಪ್ರಾದೇಶಿಕ ಪದಗಳು (ಮುಂದುವರಿದುದು)

ಕ್ರಮ ಸಂಖ್ಯೆ	ರೂಪ	ಮಧ್ಯದೇಶ	ಮತ್ತೂರು	ಹಾಸನಸೀಮೆ	ಬೆಟ್ಟದಪುರ	ಲಿಂಗದಹಳ್ಳಿ	ಕನ್ನಡ	ತಮಿಳು
	೧೩.	ವರನ್ನ	ವರನ	ವರನ್ನ	ವಾರಾನೆ	ವಾರ್ಂದ್ನ್ನೆ	ಬರುತ್ತವೆ,	ವರದ್, ವರದ್‌ಹ್‌ಳ್,
	೧೪.	ವರಣಿ	ವರಾಣೆ	ವರಣಿ	ವರಾಣೆ	ವಾರ್ಂದೆ	ಬರುತ್ತೇನೆ,	ವರ್ರೇನ್,
	೧೫.	ವರಣು	ವರಾಣು	ವರಣು	ವಾರಾಣು	ವರಾಣು	ಬರುತ್ತೇವೆ	ವರುವೋಂ
	೧೬.	ವಂದ್	ವಂದಿ	ವಂದಿ	ವಂದಿ	ವಂದಿ	ಬಂದನು	ವಂದಾನ್
	೧೭.	ವಂದ	ವಂದ	ವಂನ್ನ	ವಂದೀನೆ	ವಂದನ್ನೆ	ಬಂದರು	ವಂದಾರ್‌ಗಳ್
	೧೮.	ವರಂದೋ	ವರಂದ್ಯೋ	ವರಂದೋ	ವಾರಾಂದೊ	ವಾರ್‌ನ್ದ್ಯೋ	ಬರುತ್ತಾನೋ	ವರಾನೋ
	೧೯.	ವರಡಾಳೋ	ವರ್(ಡ್)ಳೋ	ವರ (೦)ಡಾಳೋ	ವಾರಾನ್ಯೋ	ವರಾನ್ಯೋ	ಬರುತ್ತಾರೋ	ವರ್‌ವಾರೋ
	೨೦.	ವರಡಾ	ವರಡಾ	ವರ್ಣ್ಣಡಾ	ವಾರಾಂಡ್ಯಾ	ವಾರ್‌ನ್ದ್ಯಾ	ಬರುತ್ತೀಯಾ	ವರಿಯಾ
	೨೧.	ವರಡ್‌ಹೀಳಾ	ವರಡ್‌ಗಿಳಾ	ವರಂಡ್‌ಘ್ಳಳಾ	ವಾರಾಂಡ್‌ಗಿಳಾ	ವಾರ್ಂದಿಗಿಳಾ	ಬರುತ್ತೀರಾ	ವರ್ರಿಂಗಳಾ
	೨೨.	ವರಂದಾ	ವರಂದಾ	ವರಂದಾ	ವಾರಾಂದಾ	ವಾರ್‌ನ್ದೊ	ಬರುವುದೆ	ವರುಮಾ
	೨೩.	ವರಣು	ವರಾಣು	ವರಣು	ವಾರಾಣು	ವಾರಾಣು	ಬರಬೇಕು	ವರಣಂ
ಉ	೨೪.ಸಂಯುಕ್ತ ಕ್ರಿಯೆ	ಕಂಡ್‌ಹಣಿ	ಕಂಡ್‌ಗಣಿ ಪಾರ್ತ್‌ಕಾಣೆ	ಕಂಡ್‌ಹಣಿ ಪಾತ್‌ಕಣಿ	ಪಾತ್‌ಕೋಣೆ	ಕಂಡ್‌ಕಾಣೆ	ಕಂಡುಕೊಳ್ಳುವೆನು	ಪಾರ್ತ್‌ಕ್‌ರೇನ್
	೨೫.	ಸಾಪಟ್‌ಕಣಿ	ಸಾ (ಟ್)ಕಾಣಿ	ಸಾಪ್‌ಟ್‌ಕಣಿ	ಸಾಪಾಟ್‌ಕೋಣೆ	ತಿಂಡ್‌ಗಾಣಿ	ತಿಂದುಕೊಳ್ಳುವೆನು	ಸಾವಟ್‌ಕರೇನ್
	೨೬.	ವರರ್‌ಪೊ	ವರರ್‌ಪೊ	ವರರ್‌ಪೊ	ವರ್‌ಪೊ	ವರುರ್‌ಪೊ	ಬರುವಾಗ	ವರವೋದ್
ಊ	೨೭.ಬಳಗ	ತಾಯಾ	ತಾಯಾ	ತಾಯಾ	ತಾಯಾ	ತಾಯಾ	ತಾಯಿ	ಅಮ್ಮಾ
	೨೮.	ತೋಪ್‌ನಾ	ತೋಪ್‌ನಾ	ತೋಪ್‌ನಾ	ತೋಪ್‌ನಾ	ಅಪ್ಪ	ತಂದೆ	ತೋಪ್ಪನಾರ್ ತಹಪ್ಪನಾರ್, ಅಪ್ಪ
	೨೯.	ಪುಳ್ಳ	ಪುಳ್ಳ	ಪುಳ್ಳ	ಪುಳ್ಳೆ	ಪುಳ್ಳೆ	ಮಗ	ಪುಳ್ಳೈ,
	೩೦.	ಪೊಣ್ಣು	ಪೊಣ್ಣು	ಪೊಣ್ಣು	ಪೊಣ್ಣು	ಪೊಣ್ಣು	ಮಗಳು	ಪೊಣ್ಣು
	೩೧.	ತಂಗ್ಯ, ತಂಗಚ್ಚಿ,	ತಂಗ್ಯ, ತಾಚಿ	ತಂಗ್ಯ	ತಂಗ್ಯಾನ್‌ವೆ	ತಂಗಿ	ತಂಗಿ	ತಂಗೈ
ಎ	೩೨.ಗೃಹಸಂಬಂಧ	ಹಾ	ಹಾ	ಹಾ	ಹಾ	ಹಾ	ಮನೆ	ಅಹಂ
	೩೩.	ವಾಶ್‌ಲ್ (ಕದು)	ವಾಶ್‌ಲ್	ವಾಶ್‌ಲ್	ವಾದ್‌ಲಿ (ಕದು)	ವಾದ್‌ಲಿ	ಬಾಗಿಲು	ವಾಸಲ್
	೩೪.	ಪಡ್‌ಕ್‌ಲ	ಪರ್ಡ್‌ಕ್‌ಲ	ಪಡ್‌ಕ್‌ಲ	ಪಡ್‌ಕ್‌ಲೆ	ಪಡ್‌ಕ್‌ಲೆ	ಹಿತ್ತಿಲು	ಕೊಟ್ಟಲ್, ಕೊಲ್ಲೈ

ಪಟ್ಟಿ ೨೧. ಸಂಕೇತಿ ಜನರ ಭಾಷೆಯಲ್ಲಿ ಕಂಡುಬರುವ ಭಿನ್ನರೂಪದ ಪ್ರಾದೇಶಿಕ ಪದಗಳು (ಮುಂದುವರಿದುದು)

ಕ್ರಮ ಸಂಖ್ಯೆ	*ರೂಪ*	*ಮಧ್ಯದೇಶ*	*ಮತ್ತೂರು*	*ಹಾಸನಸೀಮೆ*	*ಬೆಟ್ಟದಪುರ*	*ಲಿಂಗದಹಳ್ಳಿ*	*ಕನ್ನಡ*	*ತಮಿಳು*
ಏ	೩೫.ಪ್ರಾಣಿ	ಪೂನ	ಪೂನ	ಪೂನ	ಪೂನೆ	ಪೂನೆ	ಬೆಕ್ಕು	ಪೂನ್ನೈ
	೩೬.	ಆನ	ಆನ	ಆನ	ಆನೆ	ಆನೆ	ಆನೆ	ಆನ್ನೈ
	೩೭.	ಆಡ್$_s$	ಆಡಿ	ಆಡ್	ಆಡ್$_s$	ಆಡ್$_s$	ಆಡು	ಆಡ್$_s$
ಐ	೩೮. ಉದ್ಯೋಗ	ಪಯಿರ್	ಪೈರ್	ಪೈರ್	ಪಯಿರ್	ಪಯಿರ್	ಪೈರು	ಪೈರ್
	೩೯.	ಒಳ	ವಳ	ವಳ	ಒಳಚಲ್	ಬೆಳೆ	ಬೆಳೆ	ವಳೈ
	೪೦.	ಮೊಳು	ಮೊಳೊ	ಮೊಳು	ಮೊಳೊ	ಮೊಳ	ಮೊಳ	ಮೊಳಂ
ಒ	೪೧.ಸರ್ವನಾಮ	ನಾ	ನಾ	ನಾ	ನಾ	ನಾನಿ	ನಾನು	ನಾ ನ್
	೪೨.	ನೀ	ನೀ	ನೀ	ನೀ	ನೀನಿ	ನೀನು	ನೀ
	೪೩.	ತಾ	ತಾ	ಅದ್	ತಾ	ತಾ	ತಾನು	ತಾ
	೪೪.	ಅದ್$_s$	ಅದಿ	ಅದ್$_s$	ಅದಿ	ಅದಿ	ಅವನು	ಅದ್$_s$
ಓ	೪೫.ಸಂಖ್ಯೆ	ಒಂಡು	ಒಂಡು	ಒಂಡು	ಒಂಡು	ಒಂಡು	ಒಂದು	ಒನ್ನು
	೪೬.	ರಂಡ್	ರಂಡ್	ರಂಡಿ	ರೆಂಡಿ	ರಂಡಿ	ಎರಡು	ರಂಡ್
	೪೭.	ಮೂಡು	ಮೂಡು (ಮೂಡಿ)	ಮೂಡು	ಮೂಡು	ಮೂಡು	ಮೂರು	ಮೂಣ್ಣು
	೪೮.	ಪತ್ತ್	ಪತ್ತ್	ಪತ್ತಿ	ಪತ್ತಿ	ಪತ್ತಿ	ಹತ್ತು	ಪತ್ತ್
	೪೯.	ಇರ್‌ಹಿದ್	ಇರ್‌ವಿದ್	ಇರವಿದಿ	ಇರ್(ಬ್)ದಿ	ಇರ್‌ಬಿದಿ	ಇಪ್ಪತ್ತು	ಇರವದ್
ಔ	೫೦.ಕ್ರಿಯಾವಾಚಕ	ವಾ	ವಾ	ವಾ	ವಾ	ವಾ	ಬಾ	ವಾ
	೫೧.	ಪೋ	ಪೋ	ಪೋ	ಪೋ	ಪೋ	ಹೋಗು	ಪೋ
	೫೨.	ಪಣ್ಣ್	ಪಣ್ಣಿ	ಪಣ್ಣಿ	ಪಣ್ಣಿ	ಪಣ್ಣಿ	ಮಾಡು	ಪಣ್ಣ್ (ಚೆಯ್)

ಪಟ್ಟಿ ೨೨. ಸಂಕೇತಿ ಭಾಷೆಯ ಮತ್ತು ಇತರ ದ್ರಾವಿಡ ಭಾಷೆಗಳ ಪದಗಳ ಭಿನ್ನರೂಪಗಳು

ಕ್ರಮ ಸಂಖ್ಯೆ	*ರೂಪು*	*ಕನ್ನಡ*	*ತಮಿಳು*	*ಸಂಕೇತಿ*	*ಮಲೆಯಾಳಂ*	*ತೆಲುಗು*	*ತುಳು*
೧.	ಸಂಖ್ಯೆ	ಒಂದು ಎರಡು ಮೂರು ಹತ್ತು	ಒನ್ರು ಇರಂಡು ಮೂನ್ರು ಪತ್ತು	ಒಂಡು, ಒಣ್ಣು ರಂಡ್, ರೆಂಡ್ ಮೂಡು ಪತ್ತ್	ಒನ್ನು ರೆಂಡ್ ಮೂನ್ನು ಪತ್ತು	ಒಕಟಿ ರೆಂಡು ಮೂಡು ಪದಿ	ಒಣ್ಜಿ ರಡ್ಡು ಮೂಜಿ ಪತ್ತು
೨.	ವಿಭಕ್ತಿ	ಮರಂ ಮರ ಮರನಂ ಮರದಿಂ ಮರಕೆ ಮರತ್ತಣಿಂ ಮರದ ಮರದೊಳ್ ಮರವೇ	ಮರಮ್, ಮರತ್ತೆ, ಮರತ್ತಿನ್ನೈ, (ಸಂ:ಮರತ್ತೈ) ಮರತ್ತಿನಾಲ್, ಮರತ್ತಿ- ನಾನ್, ಮರತ್ತಾಲ್ (ಸಂ: ಮರತ್ತಿಲಿರಿಂದ್) ಮರತ್ತಿಱ್ಕು (ಸಂ:ಮರತ್ಕ್ಕ್) ಮರತ್ತಿನ್, (ಸಂ-ಮರ ತ್ತಾಲ್) ಮರತ್ತಿನದು, ಮರತ್ತಿನ (ಸಂ-ಮರತ್ತೋಡು) ಮರತ್ತಿಲ್(ಸಂ-ಮರತ್ತಿಲೆ) ಮರಮೇ	ಮರು, ಮರ್ತ, ಮರತಣ್ಣು, ಮರತಣ್ಣು ಮರತ್ಕ್ಕ್ ಮರತಣ್ಣು ಮರತ್ತೆ ಮರತುಳ್ಳೆ ಮರಮೇ	ಮರಮ್, ಮರತ್ತೆ ಮರತ್ತಿನೆ, ಮರತ್ತಾಲ್ ಮರತ್ತಿನ್ನು ಮರತ್ತಿಲ್ನಿನ್ನು ಮರತ್ತಿನ್ರೆ ಮರತ್ತಿನುಡೆ ಮರತ್ತಿಲ್ ಮರಮೇ		
೩.	ಉತ್ತಮಪುರುಷ ಸರ್ವನಾಮ	ಆನ್ (ಎನ್) ನಾನ್ (ನನ್) ನಾ, ನಾನು	ಯಾನ್ ನಾನ್	ನ್ನಾ	ಞಾನ್	ನೇ, ನೇನು	
೪.	ಮಧ್ಯಮಪುರುಷ ಸರ್ವನಾಮ	ನೀನ್, (ನಿನ್) ನೀ (ನೀನು)	ನೀ ನೀಮ್	 ನೀ	 ನೀ	 ನೀ	
೫.	ಪ್ರಥಮಪುರುಷ ಸರ್ವನಾಮ	ಅವನ್ ಅವಳ್ ಅದು	ಅವನ್ ಅವಳ್ ಅದು	ಅವು ಅವೆ ಅದ್ಽ	ಅವನ್ ಅವಳ್ ಅದು	ವಾಡು ಅದಿ ಅದಿ	

ಸೂಚನೆ : ಸಂಕೇತ - 'ಸಂ' : ತಮಿಳುನಾಡಿನ ಸಂಕೇತಿಗಳು ಬಳಸುವ ತಮಿಳಿನ ರೂಪು

ಪಟ್ಟಿ ೨೩. ಸಂಕೇತಿ ಸಮುದಾಯದಲ್ಲಿ ಬಳಕೆಯಲ್ಲಿರುವ ಜನಪದಕತೆಗಳ ವರ್ಗೀಕರಣ ಮತ್ತು ಕತೆಗಳ ಸಂಖ್ಯೆ

೧. ಪ್ರಾಣಿಕತೆಗಳು ವರ್ಗ ೧-೨೯೯ (animal tales)	ಸಾಕುಪ್ರಾಣಿಗಳು ೨೦೦-೨೧೯:೩ ಗೋವು, ಬೆಕ್ಕು, ನಾಯಿ (domestic animals)	ಕಾಡುಪ್ರಾಣಿಗಳು ಮತ್ತು ಸಾಕುಪ್ರಾಣಿಗಳು ೧೦೦-೧೪೯:೧. ನರಿ, ಕಾಗೆ; (Wild animals and domestic animals)				ಒಟ್ಟು ೪
೨. ಸಾಮಾನ್ಯ ಜನಪದ ಕತೆಗಳು (ordinary folktales) ವರ್ಗ: ೩೦೦೦-೧೧೯೯	ಧಾರ್ಮಿಕ ಕತೆಗಳು (religious stories) ೭೫೦-೮೪೯ ಬಿ: ೧೫	ರಮ್ಯ (novel) ೮೫೦-೯೯೯ ಸಿ:೪	ಅದ್ಭುತ (romantic tales) ೮೫೦-೯೯೯ ಸಿ:೧			೨೦
೩. ತಮಾಷೆ ಮತ್ತು ವಿನೋದ ವೃತ್ತಾಂತಗಳು (Jokes and anecdotes) ೧೨೦೦-೧೯೯೯	ಗಂಡನ್ನು ಕುರಿತ ಕತೆಗಳು (Stories about a man or boy) ೧೫೨೫-೧೮೭೪:೧೮	ಹೆಣ್ಣನ್ನು ಕುರಿತ ಕತೆಗಳು (Stories about woman or girl) ೧೪೪೦-೧೫೨೪ : ೫	ದಂಪತಿಗಳನ್ನು ಕುರಿತ ಕತೆಗಳು (Stories about married couples) ೧೩೫೦-೧೪೩೯:೪	ಸುಳ್ಳಿನ ಕತೆಗಳು (tales of lying) ೧೮೭೫-೧೯೯೯:೫	ಮೂರ್ಖರ ಕತೆಗಳು (numskull stories)	೩೬ ೪
೪. ವರ್ಗೀಕರಿಸದ ಕತೆಗಳು (unclassified tales) ೨೪೦೦-೨೪೯೯	ವಿವರಣಾತ್ಮಕ ಕತೆಗಳು ೨	ಒಗಟಿನ ಕತೆಗಳು ೨				೪

ಸೂಚನೆ : ಈ ಅಧ್ಯಯನಕ್ಕಾಗಿ ಬಳಸಿರುವ ೬೪ ಕತೆಗಳ ವರ್ಗವಾರು ಪ್ರಮಾಣ ಇದು. ಸ್ಟಿತ್ ಥಾಂಸನ್ ಅವರ type index ವರ್ಗ ಸೂಚಿಯ ಆಧಾರದಿಂದ ಈ ವರ್ಗೀಕರಣ ಮಾಡಿಕೊಂಡಿದೆ (types of folktale - ೧೯೬೧).

ಪಟ್ಟಿ ೨೪ : ಸಂಕೇತಿ ಸಮುದಾಯದಲ್ಲಿ ಬಳಕೆಯಲ್ಲಿರುವ ಜನಪದ ಕತೆಗಳ ವರ್ಗಪ್ರಮಾಣ

ತಮಾಷೆಯ ಕತೆಗಳು		***ಬುದ್ಧಿವಂತಿಕೆಯ ಕತೆಗಳು***	
೩೬	ಶೇಕಡ ೫೬	೨೫	ಶೇಕಡ ೩೯
ವಿವರಣಾತ್ಮಕ	ನೀತಿಯುಕ್ತ	ಸರಳ	ಸಂಕೀರ್ಣ
೧೧ : ಶೇಕಡ ೧೭	೨೫ : ಶೇಕಡ ೩೯	೬೩ : ಶೇಕಡ ೯೮	೧ : ಶೇಕಡ ೧.೫
ಒಗಟುಗತೆ	ಅದ್ಭುತ ಕತೆ	ಅಡಗತೆ : ರೀತಿ	ಅಡಗತೆ : ಶೈಲಿ
೪ : ಶೇಕಡ ೬	೧ : ಶೇಕಡ ೧.೫	೧೬ : ಶೇಕಡ ೨೫	೨ : ಶೇಕಡ ೩

ಅ) ಸಮುದಾಯವು ಐತಿಹ್ಯ ಮತ್ತು ಕತೆಗಳನ್ನು ಒಂದೇ ಉದ್ದೇಶಕ್ಕೆ ಒಂದೇ ರೀತಿಯಲ್ಲಿ ಬಳಸಿಕೊಂಡಿದೆ.

ಆ) ಇಲ್ಲಿನ ಧಾರ್ಮಿಕ ಕತೆಗಳು ಹಾಗೂ ಬಹುತೇಕ ರಮ್ಯಕತೆಗಳು ಸರಳಕತೆಗಳ ವರ್ಗಕ್ಕೆ ಸೇರುತ್ತವೆ: ಸ್ಟಿತ್ ಥಾಂಸನ್‌ರವರ ಅಭಿಪ್ರಾಯದಂತೆ ಸಂಕೀರ್ಣ ಕತೆಗಳ ಗುಂಪಿಗಲ್ಲ.

ಇ) ಗಾದೆ, ಒಗಟುಗಳ ಹಿನ್ನೆಲೆಯ ವಿವರಣಾತ್ಮಕ ಕತೆಗಳು ಇಲ್ಲಿವೆ.

ಈ) ಹರಿಕತೆಗಳಲ್ಲಿ ಬಳಸಬಹುದಾದ ಅಡಗತೆಗಳು ಬಹುಸಂಖ್ಯೆಯಲ್ಲಿವೆ.

ಅನುಬಂಧ - ೩

ಉದ್ಧೃತಿಗಳು

[ಶ್ರೀ ನಾಚಾರಮ್ಮನ ಜೀವನ ಚರಿತ್ರೆ (ಆಕೆಯ ಪ್ರವಾಸ) ಪು.೧-೪]

1. ಮೇಜರ್ ಲಿಂಡ್ಸೆ, ಮೈಸೂರು ಖಾನೇಷುಮಾರಿ ವರದಿ, ಭಾಗ -104, ಉಪವಿಭಾಗ -25, 1871, ಪು.51, 56.

ಇವರು ಮದ್ರಾಸಾಧಿಪತ್ಯದಲ್ಲಿರುವ ಮಧುರಾಜಿಲ್ಲೆಯಿಂದ ಹೊರಟುಬಂದಿರುವ ಸ್ಮಾರ್ತ ಬ್ರಾಹ್ಮಣರು. ಇವರು ಮಾತನಾಡುವ ಭಾಷೆ ತಮಿಳು. ಆದರೆ ಇದು ತೀರಾ ಅಶುದ್ಧವಾಗಿದೆ. ಇವರು ಮುಖ್ಯವಾಗಿ ಅಷ್ಟಗ್ರಾಮಭಾಗಗಳಲ್ಲಿ ನೆಲೆಸಿರುವರು; ಇತರ ಕಡೆಗಳಲ್ಲಿಯೂ ವಾಸಿಸುವರು. ಆದರೆ ಅಂಥವರ ಸಂಖ್ಯೆ ಅತ್ಯಲ್ಪ. ಇವರಲ್ಲಿ ಬಹು ಜನಗಳು ವೈದಿಕರು; ವೇದಶಾಸ್ತ್ರಗಳಲ್ಲಿ ನಿಪುಣರು. ಇವರಲ್ಲಿ ಹೆಂಗಸರು ವಿಲಕ್ಷಣವಾದ ರೀತಿಯಲ್ಲಿ ಸೀರೆಯನ್ನುಡುವರು. ಎಂದರೆ, ಕರ್ನಾಟಕ ದೇಶದ ಸ್ತ್ರೀಯರಂತೆ ಜೋಲಾಡುವಂತೆಯೂ, ಸಡಿಲವಾಗಿಯೂ ಉಡದೆ ಮೈಸುತ್ತ ಸುತ್ತುವರು. ಇದಕ್ಕೆ ಸಾಧ್ವೀಮಣಿಯಾದ ನಾಚಾರಮ್ಮನ ಮಾತೇ ಆಧಾರವೆಂದು ಅವರಲ್ಲಿ ಬಳಕೆಯಾದ ಒಂದು ಕಥೆಯಿದೆ. ಇವರಲ್ಲಿ ಕೌಶಿಕ ಸಂಕೇತಿಗಳೆಂದೂ ಬೆಟ್ಟದಪುರದ ಸಂಕೇತಿಗಳೆಂದೂ ಎರಡು ಪಂಗಡಗಳಿವೆ. ಈ ಎರಡು ಪಂಗಡದವರೂ ಒಟ್ಟಿಗೆ ಕುಳಿತು ಊಟಮಾಡುವರು; ಪರಸ್ಪರ ಮದುವೆ ಮುಂತಾದ ಸಂಪ್ರದಾಯವಿಲ್ಲ.

2. ರೈಸ್. ಬಿ.ಎಲ್., ಮೈಸೂರು ಗೆಜೆಟಿಯರ್, ಭಾಗ - 1, 1876.

"ನಾಚಾರಮ್ಮನ ವಿಚಾರವಾಗಿ ನನಗೆ ಹೇಳಲ್ಪಟ್ಟ ಚರಿತ್ರೆಯೇನೆಂದರೆ, ಇವಳು ಒಬ್ಬ ಬ್ರಾಹ್ಮಣನ ಪತ್ನಿ. ಈ ದಂಪತಿಗಳಿಗೆ ಒಬ್ಬನೇ ಮಗ. ಇವರು ಬಹಳ ದರಿದ್ರರು. ಆದಕಾರಣ ಇವರು ಜ್ಯೋತಿಷ್ಮತೀ ತೈಲವನ್ನು ಪಾನಮಾಡಲು ನಿಶ್ಚಯಿಸಿದರು. ಈ ತೈಲವನ್ನು (ಗಂಗೊಂಡೆಎಣ್ಣೆ) ಪಾನಮಾಡಿದರೆ ಮೂರುಜನರಲ್ಲಿ ಯಾರಾದರೊಬ್ಬರು ಮೃತರಾಗುವರೆಂದೂ, ಮತ್ತೊಬ್ಬರಿಗೆ ಹುಚ್ಚುಹಿಡಿಯುವುದೆಂದೂ, ಇನ್ನೊಬ್ಬರು ಅಸಾಧಾರಣವಾದ ಬುದ್ಧಿವಂತರಾಗುವರೆಂದೂ ಇದರ ಪ್ರಭಾವವು ಗ್ರಂಥಗಳಲ್ಲಿ ಹೇಳಲ್ಪಟ್ಟಿದೆ. ಅದರ ಮಹಿಮೆಯನ್ನು ನಂಬಿ ಮಗನು ಬುದ್ಧಿವಂತನಾಗಿ ದ್ರವ್ಯಸಂಪಾದನೆಗೆ ಅರ್ಹನಾಗಲೆಂಬ ಉದ್ದೇಶದಿಂದ ಮೂವರೂ ತೈಲಪಾನ ಮಾಡಿದರು. ಅದರ ಫಲವು ಇವರಿಷ್ಟಕ್ಕೆ ವಿರೋಧವಾಗಿಯೇ ಪರಿಣಮಿಸಿತು. ತಂದೆ, ತಾಯಿ, ಮಗ ಈ ಮೂವರಲ್ಲಿ ಸತ್ತವನೇ ಮಗ. ತಂದೆಗೇ ಹುಚ್ಚು ಹಿಡಿಯಿತು, ತಾಯಿಯೇ ಬುದ್ಧಿಮತಿಯಾದಳು. ತನ್ನ ಬುದ್ಧಿಶಕ್ತಿಯಿಂದ ಆಕೆಯು ಇತರ ವಿದ್ವಾಂಸರನ್ನೆಲ್ಲಾ ವಾದದಲ್ಲಿ ಸೋಲಿಸಿದಳು. ಈಕೆಯ ಪಾಂಡಿತ್ಯವನ್ನು ನೋಡಿ ಹೆದರಿ ವಾದದಲ್ಲಿ ಸೋತುಹೋದ ಬ್ರಾಹ್ಮಣರು ಕೋಪಗೊಂಡರು. ಅವರೆಲ್ಲರೂ ಸಭೆಸೇರಿ ಆ ಸಭೆಯಲ್ಲಿ ಆಕೆಯನ್ನು ಅಪಮಾನಗೊಳಿಸಿದರು. ಅಪಮಾನ ಹೊಂದಿದ ಆಕೆಯು ಅವರನ್ನು ಒಂದು ಮುಹೂರ್ತಕಾಲದೊಳಗಾಗಿ ಆ ಸ್ಥಲವನ್ನು ಬಿಟ್ಟು ಬೇರೆಕಡೆ ಹೊರಟುಹೋಗದಿದ್ದರೆ ಅಬ್ರಾಹ್ಮಣರಾಗುವಿರಿ ಎಂದು ಶಪಿಸಿದಳು. ಎಲ್ಲರೂ ಭೀತರಾಗಿ ಗಾಬರಿಯಿಂದ ದಿಕ್ಕಾಪಾಲಾಗಿ ಓಡಿಬಿಟ್ಟರು. ಈ ಪಂಗಡದಲ್ಲಿ ನಾಚಾರಮ್ಮನು ಒಂದು ಪೂಜ್ಯವಸ್ತು."

3. ಮೈಸೂರು ಖಾನೇಷುಮಾರಿ ವರದಿ, 1891, ಪು.236.

ಥರ್ಸ್ಟನ್ ಇ ಅಂಡ್ ರಂಗಾಚಾರಿ ಕೆ. ಕ್ಯಾಸ್ಟ್ಸ್ ಅಂಡ್ ಟ್ರೈಬ್ಸ್ ಆಫ್ ಸದರನ್ ಇಂಡಿಯ (7 ಸಂಪುಟಗಳು), 1909 - ಇದರಲ್ಲಿ ಉದ್ಧೃತ.

ಸಂಕೇತಿಗಳು ಮೈಸೂರುದೇಶದಲ್ಲಿ ಮಾತ್ರ ನೆಲೆಸಿರುವರು. ಅವರು ಮಾತನಾಡುವುದು ಕನ್ನಡ ಮಿಶ್ರವಾದ ಕೇವಲ ಗ್ರಾಮ್ಯತಮಿಳು. 1891ನೇ ಇಸವಿಯ ಮೈಸೂರಿನ ಖಾನೇಷುಮಾರಿ ರಿಪೋರ್ಟಿನಲ್ಲಿ ಈ ರೀತಿಯಾಗಿ ಬರೆಯಲ್ಪಟ್ಟಿದೆ. "ಈ ಪಂಗಡದಲ್ಲಿ ಸ್ತ್ರೀಪುರುಷರೆಲ್ಲ ಸೇರಿ ಸುಮಾರು 2522 ಜನರಿದ್ದಾರೆ. ಇವರು ವಿಶೇಷವಾಗಿ ಮೈಸೂರು ಮತ್ತು ಹಾಸನ ಡಿಸ್ಟ್ರಿಕ್ಟುಗಳಲ್ಲಿ ವಾಸಮಾಡುವರು. ಕಡೂರು ಮತ್ತು ಶಿವಮೊಗ್ಗಾ ಡಿಸ್ಟ್ರಿಕ್ಟುಗಳಲ್ಲಿಯೂ ಕೆಲವರು ನೆಲೆಸಿದ್ದಾರೆ. ಇವರ ಭಾಷೆಯಿಂದ ಇವರ ಪಂಗಡವನ್ನು ನಿರ್ಧರಿಸುವುದಾದರೆ ಸಂಕೇತಿಗಳು ತಮಿಳರು. ಇವರು ಮಾತನಾಡುವ ತಮಿಳು ಕರ್ಣಾಟಕದ ಗಡಿನಾಡಿನಲ್ಲಿ ಕಂಡುಬರುವ ತಮಿಳಿಗಿಂತಲೂ ಹೆಚ್ಚಾಗಿ ಕನ್ನಡದ ಸಂಬಂಧವನ್ನು ಹೊಂದಿದೆ. ಇವರು ಪಕ್ಕದಲ್ಲಿರುವ ತಮಿಳುದೇಶದಿಂದ ಮೈಸೂರುದೇಶಕ್ಕೆ ಬಹುವರ್ಷಗಳ ಹಿಂದೆಯೇ ನೆಲಸಲು ಬಂದಿರುವರೆಂದು ಕಾಣುತ್ತದೆ. ಸುಮಾರು ಐದುನೂರು ವರ್ಷಗಳಹಿಂದೆ ಕಾಂಚೀಪುರದ ಸುತ್ತಮುತ್ತಲ ಪ್ರದೇಶದಿಂದ ಒಂದು ಸಾವಿರದಷ್ಟು ಒಕ್ಕಲುತನದವರು, ಆ ಕಾಲದ ರಾಜಕೀಯ ಕಾರಣಗಳಿಂದ ಹೊರಟುಬಂದರೆಂದು ತಿಳಿಯಲಾಗಿದೆ. ಅವರೆಲ್ಲರೂ ಒಟ್ಟಾಗಿ ಮೈಸೂರು ದೇಶಕ್ಕೆ ಒಂದೇಸಲ ಬರಲಿಲ್ಲ. ಎರಡು ಗುಂಪಾಗಿ ಬಂದರು. ದಾರಿಯಲ್ಲಿ ಕಳ್ಳಕಾಕರ ಕೈಗೆ ಸಿಕ್ಕಿಬಿದ್ದು ಬಹುಕಷ್ಟಪಟ್ಟಿರಬಹುದೆಂದು ತೋರುತ್ತದೆ. ಆದರೂ ಏಳುನೂರು ಒಕ್ಕಲುತನಗಳನ್ನೊಳಗೊಂಡ ದೊಡ್ಡಗುಂಪು ಮುಂದುವರಿಯಿತು; ಮತ್ತು ಹಾಸನದ ಸಮೀಪದಲ್ಲಿರುವ ಕೌಶಿಕವೆಂಬ ಗ್ರಾಮದಲ್ಲಿ ನೆಲಸಿತು. ಅಂದಿನಿಂದ ಅವರನ್ನು ಕೌಶಿಕ ಸಂಕೇತಿಗಳೆಂದು ಕರೆಯುವರು. ಇದಾದ ಹನ್ನೆರಡು ವರ್ಷಗಳಮೇಲೆ ಮುನ್ನೂರು ಒಕ್ಕಲುತನಗಳನ್ನೊಳಗೊಂಡ ಮತ್ತೊಂದು ಗುಂಪು ಹುಣಸೂರು ತಾಲ್ಲೂಕಿನಲ್ಲಿರುವ ಬೆಟ್ಟದಪುರವೆಂಬ ಗ್ರಾಮದಲ್ಲಿ ನೆಲಸಿತು. ಅಂದಿನಿಂದ ಅವರು ಬೆಟ್ಟದಪುರದ ಸಂಕೇತಿಗಳಾದರು. ಇವರಿಬ್ಬರ ಆಚಾರಸಂಪ್ರದಾಯಗಳೆಲ್ಲಾ ಒಂದೇ. ಕೌಶಿಕ ಸಂಕೇತಿಗಳು ಬೆಟ್ಟದಪುರದ ಸಂಕೇತಿಗಳಿಂದ ಅಪರೂಪವಾಗಿ ಕನ್ಯೆಯನ್ನು ತಂದು ಮದುವೆಯಾಗುವುದುಂಟು. ಮದುವೆಯಾದಮೇಲೆ ಆ ಕನ್ಯೆಗೆ ಅವಳ ತಂದೆತಾಯಿಗಳ ಸಂಬಂಧವೂ ತಪ್ಪಿಹೋಗುತ್ತದೆ. ಅವಳು ತಂದೆತಾಯಿಗಳ ಮನೆಯಲ್ಲಿ ಊಟಮಾಡುವುದು ಕೂಡ ಸಮ್ಮತವಲ್ಲ. ಸಂಕೇತಿಗಳು ಶಕ್ತರೂ, ಆಚಾರಶೀಲರೂ, ಸತತೋದ್ಯಮಿಗಳೂ ಆದ ಬ್ರಾಹ್ಮಣರು. ಜ್ಞಾನಕ್ಕಾಗಿ ವೇದಶಾಸ್ತ್ರಗಳ ಅಭ್ಯಾಸವನ್ನೂ, ಐಹಿಕ ಸುಖಕ್ಕಾಗಿ ಭೂವ್ಯವಸಾಯವನ್ನೂ, ಮಾಡುವುದರಿಂದ ಇವರು ಆದರ್ಶಪ್ರಾಯರಾಗಿದ್ದಾರೆ.

4. ಅನಂತಕೃಷ್ಣಅಯ್ಯರ್ ಎಲ್.ಕೆ. ಮತ್ತು ನಂಜುಂಡಯ್ಯ ಎಚ್.ವಿ., ದ ಮೈಸೂರ್ ಟ್ರೈಬ್ಸ್ ಅಂಡ್ ಕ್ಯಾಸ್ಟ್ಸ್, ಭಾಗ-4, 1928, ಪು.36.

"ಸಂಕೇತಿಗಳು ಮಧುರಾ ಡಿಸ್ಟ್ರಿಕ್ಟಿನಿಂದ ಮೈಸೂರು ದೇಶಕ್ಕೆ ಬಂದಿರುವ ಸ್ಮಾರ್ತ ಬ್ರಾಹ್ಮಣರು. ಅವರ ಮಾತೃಭಾಷೆ ತಮಿಳು. ಬಹುಕಾಲದಿಂದಲೂ ಕನ್ನಡ ದೇಶವಾದ ಮೈಸೂರಿನಲ್ಲಿ ಅವರು ನೆಲಸಿರುವುದರಿಂದ ಅವರ ಭಾಷೆಯು ಕನ್ನಡ ಮುಂತಾದ ಇತರ ಭಾಷೆಗಳ ಸಂಪರ್ಕದಿಂದ ತೀರ ಕೆಟ್ಟು ಅದೇ ಒಂದು ಭಾಷೆಯಾಗಿದೆ. ಅವರಲ್ಲಿ ಕೌಶಿಕ ಸಂಕೇತಿಗಳೆಂದೂ ಬೆಟ್ಟದಪುರದ ಸಂಕೇತಿಗಳೆಂದೂ ಎರಡು ಪಂಗಡಗಳಿವೆ. ಅವರಿಗೆ ಈ ರೀತಿಯಾಗಿ ಹೆಸರು ಬರಲು ಅವರು ಮೈಸೂರು ಮತ್ತು ಹಾಸನದ ಡಿಸ್ಟ್ರಿಕ್ಟುಗಳಲ್ಲಿ ಮಟ್ಟಮೊದಲು ನೆಲಸಿದ ಊರುಗಳೇ ಕಾರಣವಾಗಿವೆ. ತಮ್ಮಲ್ಲಿಯೇ ಯಾವುದೋ ಒಂದು ವಿಧವಾದ ಕಟ್ಟುಪಡೆಗಳನ್ನು ಮಾಡಿಕೊಂಡು ಮೊದಲು ಬಂದವರು ಕೌಶಿಕಸಂಕೇತಿಗಳು. ಇವರು ಇತರ ಸಂಕೇತಿಗಳೊಂದಿಗೆ ಮದುವೆ ಮುಂತಾದ ಸಂಬಂಧವನ್ನು ಮಾಡುವುದಿಲ್ಲ. ಆಗಾಗ್ಗೆ ಬೆಟ್ಟದಪುರದವರಿಂದ ಹೆಣ್ಣುತರುವುದುಂಟು. ಅಂಥ ಸಂದರ್ಭಗಳಲ್ಲಿ ಕನ್ಯೆಯು ತನ್ನ ತಾಯಿತಂದೆಗಳ ಮತ್ತು ಇತರ ನೆಂಟರಿಷ್ಟರ ಸಂಬಂಧವನ್ನು ಸಂಪೂರ್ಣವಾಗಿ ಬಿಡಬೇಕಾಗುವುದು. ಅಷ್ಟಗ್ರಾಮಭಾಗಗಳಲ್ಲಿ ಇವರು ಮುಖ್ಯವಾಗಿ ವಾಸಿಸುವರು. ಇವರ ಹೆಂಗಸರು ಒಂದು ವಿಲಕ್ಷಣವಾದ ರೀತಿಯಲ್ಲಿ ಸೀರೆಯುಡುವರು. ಸಂಕೇತಿಗಳು ತಮ್ಮ ಸ್ವಸ್ಥಾನವನ್ನು ಬಿಟ್ಟು ಸ್ಥಲಾಂತರವಾಸಕ್ಕೆ ಕಾರಣಭೂತಳಾದ ಸಾಧ್ವೀಮಣಿಯಾದ

ನಾಚಾರಮ್ಮನೆಂಬ ಒಬ್ಬ ಮಹಾತ್ಮಳನ್ನು ಗೌರವಿಸುವರು. ಸಂಕೇತ ಎಂದರೆ ತಮ್ಮಲ್ಲಿ ಎಲ್ಲರಿಂದಲೂ ಆಚರಿಸಲ್ಪಡಬೇಕಾದ ಒಂದು ಒಪ್ಪಂದವೇನೆಂದರೆ ಎಲ್ಲಾ ಸಂದರ್ಭಗಳಲ್ಲಿಯೂ ತಾವು ಒಟ್ಟಾಗಿಯೇ ಇರಬೇಕೆಂದೂ ಸ್ವಸ್ಥಾನಕ್ಕೆ ಪುನಃ ಹೋಗಕೂಡದೆಂದೂ ಕಟ್ಟುಮಾಡಿಕೊಂಡಿದ್ದರೆಂದು ಕಾಣಬರುತ್ತದೆ. ಮುಖ್ಯವಾಗಿ ಇವರು ತೋಟದ ವ್ಯವಸಾಯಗಾರರು, ಶ್ರಮಜೀವಿಗಳು. ಇತ್ತೀಚೆಗೆ ಇವರಲ್ಲಿ ಸುಪ್ರಸಿದ್ಧರಾದ ಸರ್ಕಾರಿ ನೌಕರರಿರುವರು. ಇವರಲ್ಲಿನ್ನೂ ಎರಡು ಪಂಗಡಗಳಿವೆ. ಕಡೂರು ಡಿಸ್ಟ್ರಿಕ್ಟಿನಲ್ಲಿರುವ ಸುಮಾರು ಐವತ್ತು ಅರವತ್ತು ಮನೆಯವರನ್ನು ಮಲೆನಾಡು ಸಂಕೇತಿಗಳೆಂದೂ, ಹಾಸನದ ಡಿಸ್ಟ್ರಿಕ್ಟಿನಲ್ಲಿರುವ ಸುಮಾರು ಅಷ್ಟೇ ಮನೆಯವರನ್ನು ಹಿರಿಯಂಗಳ ಸಂಕೇತಿಗಳೆಂದೂ ಕರೆಯುವರು. ಪರಸ್ಪರ ಮದುವೆ ಮುಂತಾದ ಸಂಬಂಧಗಳು ಇವರಲ್ಲಿಲ್ಲವೇ ಇಲ್ಲ. ಇತ್ತೀಚೆಗೆ ಅಲ್ಲಲ್ಲಿ ಒಂದೊಂದು ಸಂಬಂಧಗಳು ನಡೆದಿವೆ.

[ಶ್ರೀ ನಾಚಾರಮ್ಮನ ಜೀವನ ಚರಿತ್ರೆ (ಆಕೆಯ ಪ್ರವಾಸ) ಎಂಬ ಗ್ರಂಥದ ಇಂಗ್ಲಿಷ್ ಆವೃತ್ತಿಯಲ್ಲಿ ಮಾತ್ರ ಇರುವ ಭಾಗವನ್ನು ಅನುವಾದಿಸಿ ಇಲ್ಲಿ ಕೊಟ್ಟಿದೆ]

ಅಥೆನಿಯಂ ಮತ್ತು ದೈನಿಕದಿಂದ ಒಂದು ಉದ್ಧರಣ: ಮಾರ್ಚ್ ೪, ೧೮೮೫

ಬಕ್ಷಿ ತಿಪ್ಪಯ್ಯ ೧೭೪೬-೧೮೩೨: ಶ್ರೀ ರಾಮಸ್ವಾಮಿ ಅಯ್ಯ ಅವರು ಮೈಸೂರು ಸಂಸ್ಥಾನದ ಅತಿ ಹಳೆಯ ಮತ್ತು ಗೌರವಾನ್ವಿತ ಕುಟುಂಬಗಳಲ್ಲೊಂದರ ಸದಸ್ಯರು. ಅವರು, ೧೬೯೯ರಷ್ಟು ಹಿಂದೆಯೇ (ಮೈಸೂರು ಸಂಸ್ಥಾನದ ಎಡತೊರೆಯಲ್ಲಿನ) ತಿಪ್ಪೂರಿನ ಪ್ರಾಚೀನ ಪಾಳೆಯಗಾರನಾದ ವೀರಭದ್ರರಾಜ ಅರಸುವಿನ ಮಂತ್ರಿಯಾಗಿದ್ದ ತಿಮ್ಮಪ್ಪಯ್ಯನವರ ವಂಶಸ್ಥರು. ಇವರ ಮೊಮ್ಮಗನೊಬ್ಬನು ಇವರ ಹೆಸರಿನವನೇ ಆಗಿದ್ದು ಹೈದರ್‌ಅಲಿಯ ಆಳ್ವಿಕೆಯ ಕಾಲದಲ್ಲಿ ಶ್ರೀರಂಗಪಟ್ಟಣದ ಖಿಲ್ಲೆಯಲ್ಲಿ ಶಿರಸ್ತೇದಾರನಾಗಿ ಸೇವೆಸಲ್ಲಿಸಿದನು. ಮತ್ತೆ, ೨ನೇ ತಿಮ್ಮಪ್ಪಯ್ಯನ ಮಗನಾದ ತಿಪ್ಪಯ್ಯ ಎಂಬುವವನಿಗೆ, ಖ್ಯಾತ ಅರಸು ಟಿಪ್ಪುಸುಲ್ತಾನನು, ೧೭೯೨ರಲ್ಲಿ, ಆತನ ಮೌಲಿಕ ಸೇವೆಯನ್ನು ಪರಿಗಣಿಸಿ, ಜಹಗೀರೊಂದನ್ನು ದತ್ತ ಮಾಡಿದನು. ಶ್ರೀರಂಗಪಟ್ಟಣದ ಪತನದನಂತರ (೧೭೯೯) ಮತ್ತು ಮಹಾರಾಜರಾಗಿ ಕೃಷ್ಣರಾಜ ಒಡೆಯರ್ ಅವರು ಪಟ್ಟಾಭಿಷಿಕ್ತರಾದನಂತರ, ಈ ತಿಪ್ಪಯ್ಯನು ಮೈಸೂರಿನ ಖಿಲ್ಲೇದಾರನಾಗಿ ನೇಮಕವಾದನು. ಈ ಹುದ್ದೆಯಲ್ಲಿದ್ದುಕೊಂಡು ತಿಪ್ಪಯ್ಯನು ಅನೇಕ ಉತ್ತಮ ಕಾರ್ಯಗಳನ್ನು ಮಾಡಿದನು. ಅವುಗಳಲ್ಲಿ ಮುಖ್ಯವಾದುದು "ಕಾರಂಜಿ ಕೆರೆ"ಯ ನಿರ್ಮಾಣವೆನ್ನಬಹುದು. ಅದರಿಂದಲೇ, ಕೋಟೆಗೂ, ಊರಿಗೂ ಒಳ್ಳೆಯ ಕುಡಿಯುವ ನೀರಿನ ಸರಬರಾಯಿ ಆಗುತ್ತಿತ್ತು. ತಿಪ್ಪಯ್ಯನ ಈ ಕಾರ್ಯಕ್ಕಾಗಿ, ದಿವಾನ್ ಪೂರ್ಣಯ್ಯನು ಆತನಿಗೆ ಆ ಕೆರೆಯ ಅಚ್ಚುಕಟ್ಟಿನ ಇಡೀ ಜಮೀನನ್ನು ಕಾಣಿಕೆಯಾಗಿ ಕೊಟ್ಟನು. ಅದಕ್ಕೆ "ತಿಪ್ಪಯ್ಯನ ವನ" ಎಂದೇ ಹೆಸರಾಯಿತು (ತಿಪ್ಪಯ್ಯ ಗಾರ್ಡನ್). ಕೆಲಕಾಲದವರೆಗೆ ಆಗಿನ ಮಹಾರಾಜರ ಶಿಕ್ಷಣಕ್ಕಾಗಿ ತಿಪ್ಪಯ್ಯನು ವಿಶೇಷವಾಗಿ ನಿಯುಕ್ತನಾಗಿದ್ದನು. ಕೆಲಕಾಲದನಂತರ ಪೂರ್ಣಯ್ಯನು ರೀಜೆಂಟ್ ಆಗಿ ನಿಯುಕ್ತನಾದಾಗ, ತಿಪ್ಪಯ್ಯನು ಎಂಜಿನಿಯರಿಂಗ್ ಇಲಾಖೆಯ ಬಕ್ಷಿಯಾಗಿ ನೇಮಕವಾದನು. ಈ ಅವಧಿಯಲ್ಲಿಯೇ ತಿಪ್ಪೂರಿನಿಂದ ಮೈಸೂರಿಗೆ ಒಂದು ದೊಡ್ಡ ಕಾಲುವೆ ತೋಡಲ್ಪಟ್ಟಿತು. ಮೈಸೂರಿಗೆ ಕೇವಲ ಎರಡು ಮೈಲು ಅಂತರಕ್ಕೆ ಕಾವೇರಿ ನೀರು ಸರಬರಾಜಾಗುವಂತಾಯಿತು. ಇದು ಆದದ್ದು ೧೮೦೭-೮ರಲ್ಲಿ. ಅನಂತರ ಮತ್ತೆ ೧೮೧೧ರಲ್ಲಿ (ಈ ವೇಳೆಗೆ ಮಹಾರಾಜರು ಅಧಿಕಾರವನ್ನು ನೇರವಾಗಿ ಚಲಾಯಿಸತೊಡಗಿದ್ದರು), ತಿಪ್ಪಯ್ಯನು ಅರಕಲಗೂಡು ತಾಲ್ಲೂಕಿನಲ್ಲಿ 'ಕೃಷ್ಣರಾಜ ಕಟ್ಟೆ' ಎಂಬ ದೊಡ್ಡ ಅಣೆಕಟ್ಟೆಯೊಂದನ್ನು ಕಟ್ಟಿಸಿದನು. ಇದು, ಮತ್ತು ಲಕ್ಷ್ಮಣತೀರ್ಥ ಕಟ್ಟೆ - ಎರಡೂ ಇಂದಿಗೂ ಉಳಿದಿವೆ. ಇವು ಸಾರ್ವಜನಿಕ ಪ್ರಯೋಜನದ ದೊಡ್ಡ ಯೋಜನೆಗಳಾದಂತೆಯೇ, ಮೈಸೂರು ಸಂಸ್ಥಾನದ ಆದಾಯದ ದೊಡ್ಡ ಆಕರಗಳೂ ಆಗಿದ್ದವು. ಮುಂದೆ, ತಿಪ್ಪಯ್ಯನು "ಅಂಚೆ-ಅಮೃತ-ಮಹಲ್‌ಬಕ್ಷಿ" ಯಾಗಿ ನಿಯುಕ್ತನಾದನು (ಅಂಚೆ ಮತ್ತು ಪಶು ಇಲಾಖೆಯ ಮುಖ್ಯಸ್ಥ). ಮತ್ತು, ಈ ಅಧಿಕಾರಾವಧಿಯಲ್ಲಿ ತಿಪ್ಪಯ್ಯನು ಅನೇಕ ಮುಖ್ಯ ಸಾರ್ವಜನಿಕ ಕಾರ್ಯಗಳನ್ನು ಪೂರೈಸಿದನು. ಉದಾಹರಣೆಗೆ ಮೈಸೂರು ಮಹಾರಾಜರ ಹುಟ್ಟೂರಾದ ಅರಿಕುಠಾರವನ್ನು ಚಾಮರಾಜನಗರವೆಂಬ ಪಟ್ಟಣವಾಗಿ ಪರಿವರ್ತಿಸಿದ್ದು, ಚಾಮುಂಡಿಬೆಟ್ಟದ ಗೋಪುರ ನಿರ್ಮಾಣ, ಮೈಸೂರಿನ ಪ್ರಸನ್ನಕೃಷ್ಣಸ್ವಾಮಿ ದೇವಾಲಯದ ನಿರ್ಮಾಣ, ಮೇಲುಕೋಟೆಯ ಅರಮನೆಯ ನಿರ್ಮಾಣ ಮುಖ್ಯವಾದವು.

ವಾಸ್ತವವಾಗಿ, ೧೭೯೯ರಲ್ಲಿ ಶ್ರೀರಂಗಪಟ್ಟಣದ ಪತನಾನಂತರ ಬ್ರಿಟಿಷರು ೧೮೩೧ರಲ್ಲಿ ಅಧೀನಪಡಿಸಿಕೊಳ್ಳುವವರೆಗೆ ಮೈಸೂರು ಸಂಸ್ಥಾನದಲ್ಲಿ ಕಾರ್ಯರೂಪಕ್ಕೆ ಬಂದ ಪ್ರಮುಖವಾದ ಬಹುತೇಕ ಎಲ್ಲ ಸಾರ್ವಜನಿಕ ಕೆಲಸಗಳೂ, ತಿಪ್ಪಯ್ಯನ ಚಾಣಾಕ್ಷಮತಿ ಮತ್ತು ಶ್ರಮಸಾಧ್ಯತೆಯಿಂದಲೇ ಆದವು. ಅದಕ್ಕಾಗಿಯೇ ಆಗಿನ ಮಹಾರಾಜರಿಗೆ ತಿಪ್ಪಯ್ಯನವರ ಬಗೆಗೆ ಬಹು ಗೌರವವಿತ್ತು. ಮದರಾಸಿನ ಗವರ್ನರುಗಳಲ್ಲೇ ಪ್ರಾಯಶಃ ಅತಿ ಖ್ಯಾತನಾದ ಥಾಮಸ್ ಮನ್ರೋ ಎಂಬ ಅತಿಗಣ್ಯ ಬ್ರಿಟಿಷ್ ಅಧಿಕಾರಿಯೂ ತಿಪ್ಪಯ್ಯನವರ ಬಗೆಗೆ ಇಂಥದೇ ಭಾವನೆಯನ್ನಿಟ್ಟುಕೊಂಡಿದ್ದನು.

ತಿಪ್ಪಯ್ಯನು ೮೬ರ ಪಕ್ವ ಹರೆಯದಲ್ಲಿ ೧೮೩೨ರಲ್ಲಿ ಮೃತನಾದನು. ಅವನಿಗೆ ಮೂವರು ಗಂಡುಮೊಮ್ಮಕ್ಕಳು ಇಬ್ಬರು ಹೆಣ್ಣುಮೊಮ್ಮಕ್ಕಳಿದ್ದರು. ಅವರೆಲ್ಲ ಅದಾಗಲೇ ಗತಿಸಿದ್ದ, ತಿಪ್ಪಯ್ಯನ ಏಕಮಾತ್ರ ಪುತ್ರ ತಿಮ್ಮಪ್ಪಯ್ಯನ ಮಕ್ಕಳು. ಇವರಲ್ಲಿ ಜ್ಯೇಷ್ಠನಾದ ೨ನೇ ತಿಪ್ಪಯ್ಯನು ಹುಟ್ಟಿದ್ದು ೧೭೯೫ರಲ್ಲಿ. ೧೮೧೩ರಲ್ಲಿ ಅವನು ಖಿಲ್ಲೆಯ ಶಿರಸ್ತೇದಾರನಾಗಿ ನೇಮಿಸಲ್ಪಟ್ಟನು. ಅನೇಕ ವರ್ಷಗಳನಂತರ ಅವನೂ ಅರಮನೆಯ ಮುಸಾಯಿಬ್ ಆಗಿ ಸೇವೆಸಲ್ಲಿಸಿದನು. ಅವನು ೧೮೩೭ರಲ್ಲಿ ೪ ಗಂಡು ಮತ್ತು ೩ ಹೆಣ್ಣುಮಕ್ಕಳನ್ನು ಬಿಟ್ಟು ಮೃತನಾದನು.

ತಿಪ್ಪಯ್ಯನ ೨ನೇ ಮೊಮ್ಮಗನಾದ ಶ್ರೀನಿವಾಸರಾವ್ ಹುಟ್ಟಿದ್ದು ೧೭೯೯ರಲ್ಲಿ. ಆಗಿನ ಮಹಾರಾಜರವರೊಡನೆ ತನ್ನ ೧೨ನೆಯ ವಯಸ್ಸಿನಿಂದಲೇ ಒಡನಾಟವಿಟ್ಟುಕೊಂಡಿದ್ದನು. ಮಹಾರಾಜರ ಯೌವನದ ಸ್ಥಿರ ಸಂಗಾತಿಯಾಗಿದ್ದಾತ ಅವನು. ತಿಪ್ಪಯ್ಯನ ಮಗ ತಿಮ್ಮಪ್ಪಯ್ಯನ ಮರಣಾನಂತರ ಶ್ರೀನಿವಾಸರಾವ್ ಬಾರ್‌ಚಟ್ಟೆರಿಯ ಶಿರಸ್ತೇದಾರನಾಗಿ ನೇಮಕನಾದನು. ಕೆಲವರ್ಷಗಳಲ್ಲಿಯೇ ಆತನು ಅಂಚೆ-ಅಮೃತ-ಮಹಲ್‌ನ ೨ನೆ ಬಕ್ಷಿಯಾಗಿ ನೇಮಕವಾದನು. ಆತನ ಅಜ್ಜ ತಿಪ್ಪಯ್ಯನು ಅಲ್ಲಿ ಮೊದಲ ಬಕ್ಷಿಯಾಗಿಯೂ, ಸೋದರ ಸುಬ್ಬರಾವ್ ೩ನೆ ಬಕ್ಷಿಯಾಗಿಯೂ ಇದ್ದರು. ೧೮೩೧ರಲ್ಲಿ ಸಂಸ್ಥಾನವು ಬ್ರಿಟಿಷರ ಅಧೀನವಾಗುವವರೆಗೂ ಶ್ರೀನಿವಾಸರಾವ್ ಅದೇ ಹುದ್ದೆಯಲ್ಲೇ ಮುಂದುವರಿದನು. ಅನಂತರ ಅಂಚೆ ಇಲಾಖೆಯನ್ನು ಬ್ರಿಟಿಷರು ವಹಿಸಿಕೊಂಡರು; ಅದರಿಂದಾಗಿ ಶ್ರೀನಿವಾಸರಾವ್ ಅಮೃತಮಹಲ್ ಬಕ್ಷಿಯಾಗಷ್ಟೇ ಉಳಿದನು. ಆಗಲೇ, ಕಮಿಷನರ್ ಅವರ ಕೋರಿಕೆಯಂತೆ, ಸುಬ್ಬರಾವ್ (ತಿಪ್ಪಯ್ಯನ ಮೊಮ್ಮಗ) ಅಂಚೆಬಕ್ಷಿಯಾಗಿ ಹೊಣೆಹೊರಲು ಬೆಂಗಳೂರಿಗೆ ಕಳಿಸಲ್ಪಟ್ಟನು. ಮಹಾರಾಜರು ಬ್ರಿಟಿಷರಿಗೆ ಅಮೃತಮಹಲ್ ಇಲಾಖೆಯನ್ನು ವಹಿಸಿಕೊಟ್ಟನಂತರ, ಕೆಲಕಾಲ, ಗೌರವಾನ್ವಿತ ಎಚ್.ಬಿ.ಡೆವೆರೆಕ್ಸ್‌ನ ಗೈರುಹಾಜರಿಯಲ್ಲಿ ಶ್ರೀನಿವಾಸರಾಯನೇ ಅಸಿಸ್ಟೆಂಟ್ ಕಮಿಷನರಾಗಿ ಹೊಣೆನಿರ್ವಹಿಸಿದನು. ಅನಂತರ ೧೮೪೬ರಲ್ಲಿ ಮೈಸೂರಿನ ಕಮಿಷನರ್ ಆಗಿದ್ದ ಸರ್ ಮಾರ್ಕ್ ಕಬ್ಬನ್‌ರಿಂದ ಮಂಜಿರಾಬಾದ್‌ನ ಜಿಲ್ಲಾ ಮುನ್ಸಿಫ್ ಆಗಿ ನೇಮಕವಾದನು. ಕಬ್ಬನ್‌ಗೆ ತಿಪ್ಪಯ್ಯನ ವಂಶದ ಬಗೆಗೆ ಬಹುದೊಡ್ಡ ಗೌರವವಿತ್ತು. ಈ ಹುದ್ದೆಯಲ್ಲಿ ಶ್ರೀನಿವಾಸರಾವ್ ಕ್ರಿ.ಶ.೧೮೪೭ರ ವರೆಗೆ ಮುಂದುವರಿದನು. ಅನಂತರ ಮೈಸೂರು ನಗರದ ಮುನ್ಸಿಫ್ ಆಗಿ ನಿಯುಕ್ತನಾದನು. ೧೮೪೮ರಲ್ಲಿ ಚಿತ್ರದುರ್ಗದ ಮುಖ್ಯ ಸಡ್ಡರ್ ಮುನ್ಸಿಫ್ ಆಗಿ ನೇಮಕವಾಗುವವರೆಗೆ ಅಲ್ಲೇ ಇದ್ದನು. ಆತನು ಈ ಹುದ್ದೆಯಲ್ಲಿರುವಾಗಲೇ ಐವರು ಗಂಡು ಮತ್ತು ಹೆಣ್ಣುಮಕ್ಕಳನ್ನು ಬಿಟ್ಟು ಮೃತನಾದನು. ನಂಜನಗೂಡಿನ ದೇವಾಲಯದ ಗೋಪುರವನ್ನು ಕಟ್ಟಿಸಿದ್ದೂ ಅವನೇ.

ಜೇಮ್ಸ್ ಸ್ಟುವರ್ಟ್ ಮಿಲ್‌ನ ಇಂಡಿಯಾದ ಚರಿತ್ರೆ; ಶ್ರೀರಂಗಪಟ್ಟಣದ ವಶ

". . . . . ಮತ್ತು, ಶ್ರೀರಂಗಪಟ್ಟಣವನ್ನು ಸ್ವಾಧೀನಮಾಡಿಕೊಳ್ಳುವ ಜವಾಬ್ದಾರಿ ಮೇಜರ್ ಜನರಲ್ ಬೇರ್ಡನ ಮೇಲಿತ್ತು. ಆತನು ಆ ಅಪಾಯಕಾರಿ ಕಾರ್ಯಕ್ಕೆ ಪ್ರವೃತ್ತನಾಗಿದ್ದನು. . . . ಮೇಜರ್ ಅಲೆನ್ ಟಿಪ್ಪುವಿನ ಮಕ್ಕಳನ್ನು ಜನರಲ್ ಬೇರ್ಡನ ಬಳಿಗೆ ತಂದನು. ಮೂರು ವರ್ಷಗಳವರೆಗೆ ಅದೇ ಜಾಗದಲ್ಲಿ ಬಂಧನದಲ್ಲಿದ್ದು ಟಿಪ್ಪುವಿನ ಕ್ರೌರ್ಯವನ್ನನುಭವಿಸಿದ ಹಲವು ಬ್ರಿಟಿಷ್ ಅಧಿಕಾರಿಗಳಲ್ಲಿ ಜನರಲ್ ಬೇರ್ಡನೂ ಒಬ್ಬನಾಗಿದ್ದನು. ಇಂದು ಅದೇ ಜಾಗದಲ್ಲಿ ವಿಜಯಶೀಲನಾಗಿ ನಿಂತಿದ್ದನು. ಆ ವೇಳೆಯಲ್ಲೇ, ಯುದ್ಧಬಂದಿಗಳಾಗಿದ್ದ ಎಲ್ಲ ಬ್ರಿಟಿಷರನ್ನೂ ಟಿಪ್ಪು ಕೊಂದಿದ್ದನೆಂಬ ಕಾಳ್ಗಿಚ್ಚಿನಂಥ ವಾರ್ತೆ ಅವನಿಗೆ ಬಂದಿತ್ತು. ಆದರೆ ಮೇಜರ್ ಅಲೆನ್ ಹೇಳುತ್ತಾನೆ 'ಮೇಜರ್ ಬೇರ್ಡನು ಯುದ್ಧದಲ್ಲಿ ಮಾಡಿದ ಸಾಹಸಕ್ಕಿಂತಲೂ, ಟಿಪ್ಪುವಿನ ಮಕ್ಕಳ ಬಗೆಗೆ

ಈಗಲೂ ತೋರಿದ ಅನುಕಂಪವು ಅನುಪಮವಾದುದು. ಟಿಪ್ಪುವಿನ ಮಕ್ಕಳನ್ನು ಗೌರವದಿಂದ ಸ್ವೀಕರಿಸಿದನು.'"

ಅದೇ ದಿನ ಅದೇ ವೇಳೆಯಲ್ಲಿ ನಡೆದ ಮುಖ್ಯ ಘಟನೆಯೊಂದು ನಮಗೆ ಯಥಾವತ್ತಾಗಿ ದೊರೆತಿದೆ. ಆ ಘಟನೆಯನ್ನು ಹೇಳಲು ನಾನು ಪ್ರೇರಿತನಾಗಿದ್ದೇನೆ.

ಟಿಪ್ಪುವಿನ ಆಡಳಿತದಲ್ಲಿ ಕೆಲಕಾಲ ತಿಪ್ಪಯ್ಯನು ಜೈಲು ಅಧಿಕಾರಿಯಾಗಿದ್ದನು. ಆ ಮುನ್ನಿನ ಮೈಸೂರು ಯುದ್ಧದಲ್ಲಿ ಕೆಲವು ಬ್ರಿಟಿಷ್ ಅಧಿಕಾರಿಗಳು ಸೆರೆಹಿಡಿಯಲ್ಪಟ್ಟು ಶ್ರೀರಂಗಪಟ್ಟಣಕ್ಕೆ ತರಲ್ಪಟ್ಟಿದ್ದರು. ಈಗಾಗಲೇ ಉಲ್ಲೇಖಿಸಿದ ಜನರಲ್ ಬೇರ್ಡ್ ಅವರಲ್ಲೊಬ್ಬ. ಸಹಜವಾಗಿಯೇ ಜನರಲ್ಲನು ಅವನ ಜೇಲರನನ್ನು ನೋಡಬಯಸಿದನು. ತಿಪ್ಪಯ್ಯನನ್ನು ಆತನ ಮುಂದೆ ತಂದುನಿಲ್ಲಿಸಿದರು. ವಾಸ್ತವವಾಗಿ ಜನರಲ್ಲನು ಒಂದು ಒಪ್ಪಂದದಂತೆ ಕೆಲವರ್ಷಗಳ ಹಿಂದೆಯೇ ಬಿಡುಗಡೆಗೊಳಿಸಲ್ಪಟ್ಟಿದ್ದನು. ಈಗ ಜನರಲ್ಲನು ತಿಪ್ಪಯ್ಯನನ್ನು ಹಾಸ್ಯಪೂರ್ಣವಾಗಿ ಕೇಳಿದನು, "ನನ್ನನ್ನು ನಿಷ್ಕರುಣೆಯಿಂದ ದುಡಿಯುವಂತೆ ಮಾಡಿದ್ದಿಯಲ್ಲಾ! ಈಗೇನು ಹೇಳುವೆ?" ಹಾಗೆ ಹೇಳುವಾಗ ಸನ್ನೆಗಳ ಮೂಲಕವೂ, ತನ್ನ ತಲೆಯನ್ನು ತೋರಿಸುತ್ತ "ನೀನು, ನಾನು ತಲೆಯಮೇಲೆ ಮಣ್ಣುಹೊರುವಂತೆ ಮಾಡಲಿಲ್ಲವೆ?" ಎಂದನು. ತಿಪ್ಪಯ್ಯನು ಅದಕ್ಕೆ ಸಹಜನಿಷ್ಕಳಂಕನಾಗಿ ಹೇಳಿದನು, "ಹೌದು, ನಾನು ಹಾಗೆ ಮಾಡಿದೆ. ನನ್ನ ಯಜಮಾನನಾದ ಸುಲ್ತಾನನ ಅಪ್ಪಣೆಯಂತೆ ನಡೆದುಕೊಂಡದ್ದು ನಿಜ. ಈಗ ನೀವು ಒಡೆಯರಾಗಿ ಆಜ್ಞೆಮಾಡಿದರೆ ನಿಮ್ಮ ಬಂದಿಗಳಿಂದಲೂ ಹಾಗೆಯೇ ದುಡಿಸುವೆನು." ಜನರಲ್ಲನು ತನ್ನ ಎಂದಿನ ಸಾವಧಾನದಿಂದ ಸಂತಸಪಟ್ಟನು. ತಿಪ್ಪಯ್ಯನ ಅಚಲನಿಷ್ಠೆ, ನಿರ್ಭೀತಿ, ಎದ್ದುಕಾಣುವ ಧೈರ್ಯ, ನೇರನಡತೆಗಾಗಿ ಅವನನ್ನು ಮೆಚ್ಚಿದನು. ತಿಪ್ಪಯ್ಯನನ್ನು ಆಳರಸನು ಅಂತರಂಗಕ್ಕೆ ತೆಗೆದುಕೊಳ್ಳಲು ಕಾರಣವಾದ ಹಲವು ಘಟನೆಗಳಲ್ಲಿ ಇದೂ ಒಂದೆಂದು ಜನಜನಿತವಾಗಿದೆ. ಮೈಸೂರು ಒಡೆಯರು ಸಿಂಹಾಸನಾಧೀಶರಾದಾಗ, ತಿಪ್ಪಯ್ಯನು ಮತ್ತೆ ವಿಶ್ವಾಸ ಮತ್ತು ಗೌರವಾರ್ಹವಾದ ಹೊಣೆಗಾರಿಕೆಯ ಸ್ಥಾನಕ್ಕೆ ನೇಮಕಗೊಂಡನು. ಅನಂತರ ಅವನು ಮುಮ್ಮಡಿ ಕೃಷ್ಣರಾಜ ಒಡೆಯರ ಶಿಕ್ಷಣಕ್ಕೆ ನಿಯುಕ್ತನಾದನು. . .

ರಾಮೈಯ್ಯನ್ ದಳವಾ (ಮರಣ ಕ್ರಿ.ಶ. ೧೭೫೬)

ತಿರುವಾಂಕೂರು ಸಂಸ್ಥಾನದ ಪ್ರಚಾರಾಧಿಕಾರಿ ಆರ್. ಪದ್ಮನಾಭ ಅಯ್ಯರ್ ಅವರು ಒದಗಿಸಿಕೊಟ್ಟ ದಾಖಲೆ.

ದೈವವು ಅಮಾನುಷ ಶಕ್ತಿವ್ಯಕ್ತಿಯನ್ನು ಹುಡುಕಿ ಮುಂದಕ್ಕೆ ತರಬೇಕಾದರೆ ಅರಮನೆಗಳಿಂದಲ್ಲ, ಗುಡಿಸಲುಗಳಿಂದಲೇ ತನ್ನ ವಿಲಾಸಮಹಿಮೆಗೆ ತಕ್ಕ ಉಪಕರಣಗಳನ್ನು ಹೊಂದಿಸುತ್ತದೆ. ಸ್ತ್ರೀಪುರುಷರಾಗಲಿ ಯಾರೇ ಆಗಲಿ ಮಹಾತ್ಮರು ರಿಕ್ತದೆಶೆಯವರಲ್ಲಿಯೇ ಜನಿಸಿ ಒಂದಾನೊಂದು ಕಾಲದಲ್ಲಿ ಮೇಲಕ್ಕೆಬಂದು ವೀರಭಟರಾಗಿಯೂ, ಅಮಾತ್ಯರಾಗಿಯೂ, ಮಹಾಕವಿಗಳಾಗಿಯೂ ಪರಿಣಮಿಸುವರು. ಹೀಗೆ ನಗಣ್ಯ ಕುಟುಂಬವೊಂದರಿಂದ ಬಂದ ರಾಮೈಯ್ಯನ್ ಎಂಬ ಬ್ರಾಹ್ಮಣ ಬಾಲಕನೊಬ್ಬನು ತಿರುವಾಂಕೂರು ಸಂಸ್ಥಾನದ ಮೂವರು ಸಂಸ್ಥಾಪಕರಲ್ಲಿ ಒಬ್ಬನಾಗಿ ಬೆಳಗಿದನು. ಇನ್ನಿಬ್ಬರೆಂದರೆ ರಾಜಾ ಮಾರ್ತಾಂಡ ವರ್ಮ ಮತ್ತು ಜನರಲ್ ಯುಸ್ಟೆಷಿಯೊ ಡಿಲ್ಯಾನಿ.

ರಾಮೈಯ್ಯನ್ ತಿರುವಾಂಕೂರಿಗೆ ಹೇಗೆ ಬಂದ ಮತ್ತು ಹೇಗೆ ಅಪ್ರಜ್ಞಾಪೂರ್ವಕವಾಗಿ ರಾಜಾ ಮಾರ್ತಾಂಡವರ್ಮನನ್ನು ಆಕರ್ಷಿಸಿದ ಎಂಬುದನ್ನು ಹೇಳುವ ಅನೇಕ ಕಥೆಗಳಿವೆ. ಈ ಕೆಳಗಿನದು ವಸ್ತುನಿಷ್ಠವಾಗಿದೆಯೆಂದು ತೆಗೆದುಕೊಳ್ಳಬಹುದು:

ತಂದೆತಾಯಿಗಳು, ಮೂವರು ಸೋದರರು ಮತ್ತು ಒಬ್ಬ ಸೋದರಿ ಇದ್ದ ರಾಮೈಯ್ಯನ ಕುಟುಂಬ ಅತಿ ಕಷ್ಟಕಾರ್ಪಣ್ಯಗಳಿಗೊಳಗಾಗಿ, ತಿರುನೆಲ್‌ವೇಲಿಜಿಲ್ಲೆಯ ತಮ್ಮ ಮೂಲಸ್ಥಳದಿಂದ ಸುಮಾರು ೧೭೧೮-೧೭೩೧ರ ನಡುವೆ ಯಾವಾಗಲೋ ತಿರುವಾಂಕೂರು ಸಂಸ್ಥಾನದ ಶೆಂಕೋಟ್ಟೈಗೆ ಬಂದು ತಮ್ಮ ಸೋದರಮಾವ ಸುಬ್ರಹ್ಮಣ್ಯಶಾಸ್ತ್ರಿಗಳಲ್ಲಿ ತಂಗಿದರೆಂದು ಕಾಣುತ್ತದೆ. ಶಾಸ್ತ್ರಿಗಳು ಶ್ರೇಷ್ಠ ಸಂಸ್ಕೃತ ವಿದ್ವಾಂಸರಾಗಿದ್ದರು. ಒಮ್ಮೆ ತಿರುವಾಂಕೂರು ಪ್ರಭುಗಳಿಂದ ಆಸ್ಥಾನಕ್ಕೆ ಆಹ್ವಾನ ಬಂದಿದ್ದಾಗ, ತರುಣ

ರಾಮೈಯ್ಯನನ್ನು ಅವರು ತಮ್ಮೊಂದಿಗೆ ಕರೆದೊಯ್ದಿದ್ದರು. ಒಂದು ಸಂಜೆ ಹೀಗಾಯಿತು. ಶಾಸ್ತ್ರಿಗಳೂ ಅವರ ಸೋದರಳಿಯನೂ ರಾಜನಬಳಿಗೆ ಹೋಗಿದ್ದರು. ರಾಜನು ತನ್ನ ಸಂಜೆಯ ಪ್ರಾರ್ಥನೆಯಲ್ಲಿ ಮಗ್ನನಾಗಿದ್ದನು. ಸ್ವಲ್ಪಹೊತ್ತಿನಲ್ಲಿಯೇ, ರಾಜನ ಮುಂದಿದ್ದ ದೀಪದಬತ್ತಿ ಕರಿತುಕೊಂಡುಬಂದುದರಿಂದ ದೀಪವು ಮಂಕಾಗುತ್ತಾ ಬಂದಿತು. ಸಮಯಪ್ರಜ್ಞೆಯ ಬಾಲಕ ರಾಮೈಯ್ಯನ್ ಮೆಲ್ಲಗೆ ಮುಂದೆಹೋಗಿ ಬತ್ತಿಯನ್ನು ಸರಿಪಡಿಸಿದನು. ಬಹು ಮುನ್ನೆಚ್ಚರಿಕೆ ವಹಿಸಿ ಮೊದಲು ಬೇರೊಂದು ಬತ್ತಿಯನ್ನು ಹತ್ತಿಸಿದನು. ಅದನ್ನು ತನ್ನ ಎಡಗೈಲಿ ಹಿಡಿದು, ಬಲಗೈಲಿ ದೀಪದಬತ್ತಿಯನ್ನು ಸರಿಪಡಿಸಿದನು, ಅನಂತರ ಎಡಗೈನ ಬತ್ತಿಯನ್ನು ಆರಿಸಿ ತನ್ನ ಜಾಗಕ್ಕೆ ಸಾವಧಾನವಾಗಿ ಬಂದು ಕುಳಿತನು. ರಾಜನು ಇದೆಲ್ಲವನ್ನೂ ಅರೆಗಣ್ಣಿನಿಂದ ಗಮನಿಸುತ್ತಲೇ ಇದ್ದನು. ಬಾಲಕನ ಎಚ್ಚರಿಕೆ, ಜಾಣತನ ಅವನನ್ನು ಆಕರ್ಷಿಸಿದವು. ಅವನು ಶಾಸ್ತ್ರಿಗಳನ್ನು, ಆ ಬಾಲಕನನ್ನು ತನ್ನ ಸೇವೆಯಲ್ಲಿ ಬಿಡುವಂತೆ ಕೋರಿದನು. ಶಾಸ್ತ್ರಿಗಳು ಸಂತೋಷದಿಂದಲೇ ಹಾಗೆ ಮಾಡಿದರು. ರಾಮೈಯ್ಯನ್ ಒಬ್ಬ ಸಣ್ಣ ಗುಮಾಸ್ತನಾಗಿ ಅರಮನೆಯ ಸೇವೆಗೆ ಪ್ರವೇಶಿಸಿದನು.

ಆದರೆ, ರಾಮೈಯ್ಯನ ಜಾಣ್ಮೆ, ತೀಕ್ಷ್ಣಮತಿಯಲ್ಲಿ ರಾಜನು ಇಟ್ಟ ವಿಶ್ವಾಸವು ದೃಢವಾಗುವಂತೆಮಾಡಲು ಒಂದು ಪ್ರಸಂಗ ಕಾರಣವಾಯಿತು. ಮಹಾರಾಜನು ಕರ್ನಾಟಕದ ನವಾಬನಿಗೆ ಬರೆದಿದ್ದ ರಾಜತಾಂತ್ರಿಕ ಪತ್ರವೊಂದರ ಬಗೆಗಿನ ನಿರ್ಭೀತ ಟೀಕೆಯೇ ಅದು. ಅವನೇ ಪತ್ರವನ್ನು ಬರೆಯುವಂತೆ ಆದೇಶಿಸಿದಾಗ ರಾಮೈಯ್ಯನು ಅದನ್ನು ಎಷ್ಟು ತೃಪ್ತಿಕರವಾಗಿ ಮಾಡಿದನೆಂದರೆ, ಆತನು ರಾಜನ ಬಹುದೊಡ್ಡ ಕೃಪೆಗೆ ಪಾತ್ರನಾದನು. ಆತನ ಅಂತರಂಗದ ರಹಸ್ಯಗಳನ್ನೂ ರಾಜನು ರಾಮೈಯ್ಯನಲ್ಲಿ ಚರ್ಚಿಸತೊಡಗಿದನು.

ರಾಮೈಯ್ಯನ ರಾಜತಾಂತ್ರಿಕ ಅನುಸಂಧಾನ ಸಾಮರ್ಥ್ಯವು ಗಂಭೀರ ಪರೀಕ್ಷೆಗೊಳಗಾದ ಸಂದರ್ಭವೊಂದು ಬಂತು. ಅದು ಆದದ್ದು ಅಳಗಪ್ಪ ಮೊದಲಿಯಾರ್ ಎಂಬುವವನ ನೇತೃತ್ವದಲ್ಲಿ ಪಾಂಡ್ಯಸೇನೆ ತಿರುವಾಂಕೂರಿಗೆ ಮುತ್ತಿಗೆ ಹಾಕಿದಾಗ. ಮೊದಲಿಯಾರನು, ಮಾರ್ತಾಂಡವರ್ಮನ ಪೂರ್ವಾಧಿಕಾರಿಯ ಮಕ್ಕಳಾದ ಪಪ್ಪುತಂಪಿ ಮತ್ತು ರಾಮನ್‌ತಂಪಿಯ ಸಿಂಹಾಸನದ ಮೇಲಿನ ಹಕ್ಕುಗಳನ್ನು ಎತ್ತಿಹಿಡಿದಿದ್ದನು. ತಂಪಿ-ಸೋದರರು ತಮ್ಮ ಹಕ್ಕುಗಳ ಬಗೆಗೆ ಪಾಂಡ್ಯ ರಾಜನನ್ನು ದಾರಿತಪ್ಪಿಸಿದ್ದರು. ತಿರುವಾಂಕೂರು ಸಿಂಹಾಸನವು ಮಾತೃವಂಶೀಯವಾಗಿ ಮುಂದುವರಿಯುವಂಥದಾದರೂ ತಪ್ಪು ಅಭಿಪ್ರಾಯ ಉಂಟುಮಾಡಿ ಪಾಂಡ್ಯರಾಜನ ನೆರವು ಕೇಳಿದ್ದರು. ಮಾರ್ತಾಂಡವರ್ಮನನ್ನು ಅಧಿಕಾರದಿಂದ ಕಿತ್ತೊಗೆಯುವುದು ಅವರ ಉದ್ದೇಶವಾಗಿತ್ತು. ಪಾಂಡ್ಯಸೇನೆ ಉದಯಗಿರಿಗೆ ಬಂದು ಪುಲಿಯಕುರುಚಿಯಲ್ಲಿ ತಂಗಿತು. ಅಳಗಪ್ಪ ಮೊದಲಿಯಾರನು ತಿರುವಾಂಕೂರು ಆಸ್ಥಾನಕ್ಕೆ ದೂತರನ್ನು ಕಳಿಸಿ ಮಾರ್ತಾಂಡವರ್ಮನ ವಿವರಣೆಗಾಗಿ ಆಗ್ರಹಪಡಿಸಿದನು. ಆಗ, ಪಶ್ಚಿಮ ಕರಾವಳಿಯಲ್ಲಿ ರೂಢಿಯಲ್ಲಿದ್ದ ಆನುವಂಶೀಯ ಪದ್ಧತಿಯ ವಿವರಣೆನೀಡಲು ರಾಮೈಯ್ಯನ ನೇತೃತ್ವದಲ್ಲಿ ನಿಯೋಗವೊಂದನ್ನು ಕಳಿಸಲಾಯಿತು. ರಾಮೈಯ್ಯನ ವಿವರಣೆಯಿಂದ ಮೊದಲಿಯಾರನು ಎಷ್ಟು ಪ್ರಭಾವಿತನಾದನೆಂದರೆ, ಅವನು ತಂಪಿ-ಸೋದರರಿಗೆ ಕೊಟ್ಟಿದ್ದ ತನ್ನ ನೆರವನ್ನು ಹಿಂತೆಗೆದುಕೊಂಡುದು ಮಾತ್ರವಲ್ಲ, ಅವರ ಪುಂಡಾಟವನ್ನು ಅಡಗಿಸಲು ಮಾರ್ತಾಂಡವರ್ಮನಿಗೆ ಅನುಕೂಲವಾಗುವಂತೆ, ತನ್ನ ಅರ್ಧ ಸೇನೆಯನ್ನೂ ಬಿಟ್ಟುಹೋದನು. ಸಂಗತಿಗಳು ತೆಗೆದುಕೊಂಡ ಈ ತಿರುವಿನಿಂದಾಗಿ ಭೀತರಾದ ತಂಪಿ-ಸಹೋದರರು, ತಮ್ಮ ಗೂಡುಗಳನ್ನು ಹೊಕ್ಕರು ಮತ್ತು ಬಹುಕಾಲದವರೆಗೆ ತಲೆಎತ್ತಲಿಲ್ಲ.

ಇದು ಆದದ್ದು ೧೭೩೦ರಲ್ಲಿ. ೧೭೩೭ರಲ್ಲಿ ರಾಮೈಯ್ಯನ್ 'ದಳವಾ' ಅಥವಾ 'ದಿವಾನ್' ಮತ್ತು ಸೇನಾಮುಖ್ಯಸ್ಥನಾಗಿ ನೇಮಕಗೊಂಡನು. ಇಲ್ಲಿಂದಮುಂದೆ ತಿರುವಾಂಕೂರು ಸಂಸ್ಥಾನವನ್ನು ವಿಸ್ತರಿಸುವುದರಲ್ಲಿ ರಾಮೈಯ್ಯನ್ ಬಹು ಪ್ರಖರಪಾತ್ರ ನಿರ್ವಹಿಸಿದ್ದನು. ನೆರೆ ಹೊರೆಯ ಸಣ್ಣಪುಟ್ಟ ಪಾಳೆಯಗಾರನನ್ನೂ ರಾಜರನ್ನೂ ಸೋಲಿಸಿದನು. ಕ್ವಿಲಾನ್, ಕಾಯಂಕುಳಂ, ಚಂಪಕಸೆರಿ ಮೊದಲಾದ ಪ್ರಾಚೀನ ರಾಜ್ಯಗಳೆಲ್ಲವೂ ಒಂದಾದಮೇಲೊಂದರಂತೆ ರಾಮೈಯ್ಯನ ಸೇನೆಗೆ ಮಣಿದವು. ಈ ವಿಸ್ತರಣ ಕಾರ್ಯದಲ್ಲಿ ರಾಮೈಯ್ಯನು ಬಿಗುವಾಗಿ ವರ್ತಿಸಿದನೆಂದೂ ಹೇಳುವುದಿದೆ. ಅವನು ನಿಷ್ಕರುಣಿಯಾಗಿದ್ದನು. ಆತನ ಕಾರ್ಯಯೋಜನೆಯು ನಿಖರವಾಗಿದ್ದುದಕ್ಕೆ ಆಗಿನ ಕಾಲಸನ್ನಿವೇಶದ ಆವಶ್ಯಕತೆಯ ಕರೆಯೇ ಕಾರಣವಾಗಿತ್ತು. ಅವನು ತನ್ನ ಪ್ರಭುವನ್ನು ಪ್ರಮಾದದ ಗಡಿಯವರೆಗೆ ಪ್ರೀತಿಸುತ್ತಿದ್ದನು. ಅವನ ರಾಜನಿಷ್ಠೆಗೆ ಎಲ್ಲೆ ಇರಲಿಲ್ಲ. ರಾಜನ ಹಿತಕ್ಕಾಗಿ ಏನನ್ನೂ ಮಾಡಲು ಮತ್ತು ಯಾವುದೇ ಗಂಡಾಂತರವನ್ನೆದುರಿಸಲು ಅವನು ಸಿದ್ಧನಾಗಿದ್ದನು.

ರಾಮೈಯ್ಯನ್ ರಣರಂಗದಲ್ಲಿ ಚತುರನಾಗಿದ್ದುದು ಮಾತ್ರವಲ್ಲ. ಯುದ್ಧಾನಂತರದ ಶಾಂತಿಸಮಯದಲ್ಲಿನ ನಿರ್ವಹಣೆಯಲ್ಲಿಯೂ ಅದ್ಭುತ ಜಾಣ್ಮೆಯನ್ನು ಪ್ರದರ್ಶಿಸಿದನು. ಅವನು ಕರದ ಆಕರಗಳನ್ನು ಬಲಿಷ್ಠಗೊಳಿಸಿದನು ಮತ್ತು ಹೆಚ್ಚಿಸಿದನು. ವೆಚ್ಚದ ಬಾಬುಗಳನ್ನು ನಿಯಂತ್ರಿಸಿದನು. ಹಲವು ರಸ್ತೆಗಳು ಮತ್ತು ಸಾರ್ವಜನಿಕ ಕಟ್ಟಡಗಳನ್ನು ಕಟ್ಟಲೂ ಅವನೇ ಕಾರಣನಾಗಿದ್ದನು. ಅವನು ತಿರುವನಂತಪುರದಲ್ಲಿ ಕಲ್ಲಿನಕೋಟೆ ಕಟ್ಟಿಸತೊಡಗಿದನು; ಆದರೆ ಅದು ಮುಗಿಯುವುದರಲ್ಲಿ ಸತ್ತನು.

ರಾಮೈಯ್ಯನ ಖಾಸಗಿ ಸಂಗತಿಗಳು ಬಹಳಷ್ಟು ತಿಳಿದಿಲ್ಲ. ರಾಜಕಾರ್ಯದಲ್ಲಿ ಅವನು ಎಷ್ಟು ಮಗ್ನನಾಗಿದ್ದನೆಂದರೆ, ತನ್ನದೊಂದು ಸಂಸಾರವನ್ನು ಕಟ್ಟಿಕೊಂಡು ಸುಖಪಡಲು ಅವನಿಗೆ ವ್ಯವಧಾನವಿರಲಿಲ್ಲ. ಅವನಿಗೆ ವಿವಾಹವಾಗಿತ್ತೆಂದು ಹೇಳಲಾಗುತ್ತದೆ; ಆದರೆ ಸಂತಾನವಿರಲಿಲ್ಲ. ಮನಸ್ಸು ಮಾಡಿದ್ದರೆ ಸಂಪತ್ತು ಶೇಖರಿಸಲು ಯಾರಿಗೂ ದೊರೆಯದಷ್ಟು ಅವಕಾಶ ಅವನಿಗೆ ದೊರೆತಿತ್ತು; ಆದರೆ ಅವನು ಅದನ್ನು ಮಾಡಲಿಲ್ಲ. ರಾಮೈಯ್ಯ ಎಷ್ಟು ನಿಸ್ವಾರ್ಥಿಯಾಗಿದ್ದನೆಂದರೆ, ತನ್ನ ಪ್ರಭುವಿಗೂ ರಾಜ್ಯಕ್ಕೂ ಸೇರಿದ ಸ್ವತ್ತನ್ನು ತನ್ನದಾಗಿಸಿಕೊಳ್ಳುವ ಕನಸೂ ಅವನಿಗೆ ಬರುತ್ತಿರಲಿಲ್ಲ.

೧೭೫೬ರಲ್ಲಿ ರಾಮೈಯ್ಯನ್ ರೋಗಗ್ರಸ್ತನಾದ. ಎಷ್ಟೇ ದೊಡ್ಡ ವೈದ್ಯಕೀಯ ಉಪಚಾರಮಾಡಿದರೂ ಅವನು ಉಳಿಯುವಂತಿರಲಿಲ್ಲ. ಮಹಾರಾಜನು ಅತೀವ ದುಃಖಿತನಾದನು; ಮತ್ತು, ಅವನ ಜ್ಞಾಪಕವು ಸದಾ ಉಳಿಯುವಂತೆ ಏನು ಮಾಡಲೆಂದು ರಾಮೈಯ್ಯನಿಂದಲೇ ಖಚಿತಪಡಿಸಿಕೊಳ್ಳಬಯಸಿದನು. ರಾಮೈಯ್ಯ ತನ್ನ ವ್ಯಕ್ತಿತ್ವಕ್ಕೆ ಅನುಗುಣವಾಗಿ ಹೀಗೆ ಹೇಳಿದನು "ಯಾವುದೇ ಉದ್ದಿಷ್ಟ ಗೌರವಕ್ಕೆ ನನ್ನ ವೈಯಕ್ತಿಕ ಹಕ್ಕನ್ನು ನಿರಾಕರಿಸುತ್ತೇನೆ. ನನ್ನ ರಾಜಪ್ರಭುವಿನ ಕೈಗಳಲ್ಲಿ ನಾನೊಂದು ಸಾಧನಮಾತ್ರವಾಗಿದ್ದೆ. ನನ್ನ ಗುರಿಗಳನ್ನೆಲ್ಲಾ ನಾನು ಸಾಧಿಸಿದ್ದೇನಾದರೂ ನನಗೆ ಒಂದೇ ದುಃಖವಿದೆ; ಅದೆಂದರೆ ಕೊಚಿನ್‌ರಾಜ್ಯವನ್ನು ಗೆದ್ದು ವಶಪಡಿಸಿಕೊಳ್ಳಲು ನನಗೆ ಅಪ್ಪಣೆ ದೊರೆಯಲಿಲ್ಲ."

ಈ ವ್ಯಕ್ತಿಚಿತ್ರವು, ದಿವಂಗತ ಮಹಾರಾಜ ವಿಶಾಖಮ್ ತಿರುನಾಳ್‌ರ ಗೌರವಾರ್ಹ ಮಾತುಗಳನ್ನು ಉಲ್ಲೇಖಿಸಿದಲ್ಲದೆ ಉಚಿತವಾಗಿ ಪೂರ್ಣವಾಗುವುದಿಲ್ಲ. "ಫ್ರಾನ್ಸಿನ ೪ನೆ ಹೆನ್ರಿಯನ್ನು ಸುಲ್ಲಿಯು, ರಾಮೈಯ್ಯನು ಮಾರ್ತಾಂಡವರ್ಮನಿಗೆ ಸಲ್ಲಿಸಿದ ಸೇವೆಗಿಂತಲೂ ಹೆಚ್ಚು ಸಾಮರ್ಥ್ಯ ಮತ್ತು ನಿಷ್ಠೆಯಿಂದ ಸೇವಿಸಲಿಲ್ಲ. ರಾಮೈಯ್ಯನ್‌ನು ಅವನ ಪ್ರಭುವಿನ ಶತ್ರುಗಳಿಗೆ ನಿರ್ದಯನೂ, ಒಡಂಬಡದವನೂ ಮತ್ತು ಆಗಾಗ ಅಸಮಾಧಾನಕ್ಕೆಡೆಗೊಡದಂತೆ ಎಚ್ಚರವಹಿಸಿದವನೂ ಆಗಿದ್ದನು. ಆದರೆ, ಅವನ ಆತ್ಮ, ಪೂರ್ಣವಾಗಿ ತನ್ನ ಪ್ರಭುವಿನ ಆತ್ಮದಲ್ಲಿ ಒಂದಾಗಿತ್ತು. ಅವನು ಮಂತ್ರಾಲೋಚನೆಯ ಕೊಠಡಿಯಲ್ಲಿ ಎಷ್ಟು ನಿರ್ಭೀತನೋ, ರಣರಂಗದಲ್ಲೂ ಹಾಗೆಯೇ ನಿರ್ಭೀತನಾಗಿರುತ್ತಿದ್ದನು."

ಅಪೆಂಡಿಕ್ಸ್ 'ಸಿ' ಯ ಎಲ್ಲ ಮೂರು ವಿಭಾಗಗಳ, 'ಯಾರು, ಯಾರು' ಎಂಬ ಗಣ್ಯವ್ಯಕ್ತಿ ಪರಿಚಯದಲ್ಲೂ ರಾಮೈಯ್ಯನ ಬಗೆಗಿನ ಮಾಹಿತಿ ಇದೆ.

ಅನುಬಂಧ - ೪

ಶಬ್ದ ಸೂಚಿ

ಅನುಬಂಧ - ೫

ವಿಶೇಷ ಶಬ್ದಾರ್ಥ

ಅಗತೆ : ಅಗೆತ

ಅಘಮರ್ಷಣ : ತಮ್ಮ ಪಾಪಗಳೆಲ್ಲಾ ತೊಳೆದುಹೋಗಿ ಮತ್ತೆ ಪರಿಶುದ್ಧರಾಗಬೇಕೆಂದು ಈ ಮಂತ್ರವನ್ನು ಸ್ನಾನದ ವೇಳೆ ಪಠಿಸುತ್ತಾರೆ. ಮಹಾನಾರಾಯಣೋಪನಿಷತ್ತಿನಲ್ಲಿ ಈ ಮಂತ್ರ ಬರುತ್ತದೆ.

ಅರ್ಘ್ಯ : ಪತ್ರ, ಪುಷ್ಪ, ಫಲ, ಜಲದ ಮೂಲಕ ಪೂಜೆ, ಆರಾಧನೆಗಳು ನಡೆಯುತ್ತವೆ. ಮಂತ್ರವನ್ನು ಪಠಿಸಿ ಜಲವನ್ನು ಅರ್ಪಿಸುವ ಕೆಲವು ಸಂದರ್ಭಗಳಿಗೆ 'ಅರ್ಘ್ಯ' ಎನ್ನುತ್ತಾರೆ. ದೇವ, ಋಷಿ, ಪಿತೃಗಳಿಗೂ ಅರ್ಘ್ಯಗಳು ಸಲ್ಲುತ್ತವೆ. ತ್ರಿಕಾಲ ಸಂಧ್ಯಾವಂದನೆಯ ವೇಳೆಯೂ ಅರ್ಘ್ಯ ಪ್ರದಾನವಾಗುತ್ತದೆ.

ಅನುಷ್ಠಾನ : ವ್ಯಕ್ತಿಯ ಐಹಿಕ, ಪಾರಮಾರ್ಥಿಕ ಉದ್ಧಾರಕ್ಕಾಗಿ ಬೇಕಾದಷ್ಟು ಶಾಸ್ತ್ರ ನಿರ್ದೇಶನಗಳಿವೆ. ಪಂಡಿತರಾದರೆ ಸಾಲದು. ತತ್ತ್ವಗಳನ್ನು ಕರ್ಮಗಳ ಮೂಲಕ ನಿತ್ಯವೂ ನಿರಂತರ ತಪಸ್ಸಿನಂತೆ ಕಾರ್ಯರೂಪಕ್ಕೆ ತರಬೇಕು. ಅದು ಅನುಷ್ಠಾನ.

ಅಪರಕರ್ಮ : ವ್ಯಕ್ತಿಯು ಮೃತನಾದನಂತರ ಅವನಿಗಾಗಿ ವಾರಸುದಾರರು ಮಾಡುವ ಕರ್ಮಗಳು

ಅಪೌರುಷೇಯ : ಮನುಷ್ಯಸೃಷ್ಟಿ ಅಲ್ಲದ್ದು. ವೇದವು ಬ್ರಹ್ಮನ ಮುಖದಿಂದ ಬಂದುದರಿಂದ ಅದು ಅಪೌರುಷೇಯ

ಅಭ್ಯಂಗಸ್ನಾನ : ಮೈಗೆಲ್ಲಾ ಎಣ್ಣೆ ಹಚ್ಚಿಕೊಂಡು, ಕೊಂಚಕಾಲ ನೆನೆದು, ಬಿಸಿನೀರಿನಿಂದ ಸ್ನಾನಮಾಡುವುದು. ಆದರೆ ಅದಕ್ಕೂ ವಾರನಿರ್ದಿಷ್ಟತೆ, ಸಮಯನಿರ್ದಿಷ್ಟತೆ, ಕ್ರಮಬದ್ಧತೆ ಇದೆ.

ಅಭಿಘಾರ : ಶುಭಸಮಾರಂಭಗಳಿಗೆ ಸಂಬಂಧಿಸಿದ ಭೋಜನಕೂಟದಲ್ಲಿ ಇದು ನಡೆಯುತ್ತದೆ. ಭೋಕ್ತೃಗಳು ಎಲೆತೊಳೆದುಕೊಂಡನಂತರ, ಮನೆಯ ಒಡತಿ (ಇಲ್ಲವೆ 'ಮನೆಯ ಹೆಣ್ಣುಮಕ್ಕಳು') ಪಾತ್ರಾಭಿಘಾರ ಮಾಡುತ್ತಾರೆ. ಒಂದು ಒಳ್ಳೆಯ ಪಾತ್ರೆಯಲ್ಲಿ ಹಾಲು ಮತ್ತು ನೀರಿನ ಮಿಶ್ರಣವನ್ನಿಟ್ಟುಕೊಂಡು ಹೂವಿನಿಂದ ಅದನ್ನು ಎಲ್ಲ ಎಲೆಗಳಿಗೂ ತೊಳೆಯುವುದು ಅದರ ರೀತಿ. ಆ ಪಾತ್ರೆಗೂ ಹೂವಿನಿಂದ ಅಲಂಕರಿಸಿರುತ್ತದೆ. ಅನ್ನ ಮತ್ತು ತೊವ್ವೆ ಬಡಿಸಿದನಂತರ ಅನ್ನದ ಮೇಲೆ ತುಪ್ಪವನ್ನು ಬಡಿಸುತ್ತಾರೆ. ಅದು ಅಭಿಘಾರ. ನಿತ್ಯದಲ್ಲೂ ಅಭಿಘಾರ ಉಂಟು. ಇವೆಲ್ಲವೂ ದಿಕ್ಕುಶುದ್ಧಿಯಾಗೇ ನಡೆಯುತ್ತವೆ.

ಅರಿ : ಕೊಯ್ಲು ಮಾಡಿ ಗದ್ದೆಯಲ್ಲಿ ಅಲ್ಲಲ್ಲೇ ಬಿಟ್ಟುಕೊಂಡುಬಂದ ಬತ್ತದ ಪಯಿರಿನ ತೆಕ್ಕೆಗಳು

ಅರಂಗ್ : ಅಡುಗೆಮನೆಗೆ ಹೊಂದಿಕೊಂಡ ಭಾಗ. ಅದು ಅಡುಗೆಮನೆಯ ಒಂದು ಭಾಗವೋ, ನೆಟ್ಟರಂಗಿನ ಒಂದು ಭಾಗವೋ ಆಗಿರಬಹುದು. ಗೋಡೆಯಿಂದ ಪ್ರತ್ಯೇಕಗೊಂಡಿರಬಹುದು, ಇಲ್ಲದಿರಬಹುದು. ಊಟಕ್ಕೋ, ಮಲಗಲೋ ಅದು ಬಳಕೆಯಾಗುತ್ತದೆ.

ಅಷ್ಟಗ್ರಾಮ-ಪಂಚಗ್ರಾಮ : ಸಾಮಾಜಿಕ ಮತ್ತು ಧಾರ್ಮಿಕ ಚಟುವಟಿಕೆಗಳಿಗೆ ಪರಸ್ಪರ ಸಹಕರಿಸುವ ಸಮೀಪಸ್ಥ ಗ್ರಾಮಸಮೂಹ.

ಅಷ್ಟಾವಧಾನ : ಮಹಾಮಂಗಳಾರತಿಯನಂತರ ದೇವರಿಗೆ ನಾಲ್ಕುವೇದ, ಪುರಾಣ, ಉಪನಿಷತ್ತು, ಸಂಗೀತ, ಪಂಚಾಂಗ-ಶ್ರವಣದ ಮೂಲಕ ಮಾಡುವ ಸೇವೆ.

ಅಂಧಕ : ಅರಕಲಗೂಡು ತಾಲ್ಲೂಕು ಬೆಳವಾಡಿ ಎಂಬ ಗ್ರಾಮದಲ್ಲಿ ಸೂರ್ಯನಾರಾಯಣಾವಧಾನಿ ಎಂಬ ವೈದಿಕರಿದ್ದರು. ನಿತ್ಯವೂ ಶಿಷ್ಯರೊಡನೆ ರಾಮನಾಥಪುರದ ಗೋಗರ್ಭಕ್ಕೆ ಬಂದು ಸ್ನಾನಾಹ್ನಿಕ ತೀರಿಸಿಕೊಂಡು ಹೋಗುವುದು ಅವರ ವಾಡಿಕೆ. ಪ್ರಚಂಡ ಸೂರ್ಯಾರಾಧನೆಯಿಂದ ಅವರಿಗೆ ಹಲವು ಅತೀಂದ್ರಿಯ ಶಕ್ತಿಗಳು ಸಿದ್ಧಿಸಿದ್ದವು. ಹುಟ್ಟುಕುರುಡರಾದ ಅವರನ್ನು ಜನರು ಗೌರವದಿಂದಲೇ 'ಅಂಧಕರು' ಎಂದು ಉಲ್ಲೇಖಿಸುತ್ತಿದ್ದರು.

ಆಗಮದೀಕ್ಷಿತ : ದೀಕ್ಷೆ ಎಂದರೆ ಸಂಕಲ್ಪದ ಮೂಲಕ ಉದ್ದಿಷ್ಟ ಕರ್ಮಕ್ಕಾಗಿ ಕೆಲವು ನಿಯಮಗಳಿಗೆ ಬದ್ಧನಾಗುವುದು. ಇದು ಅನೇಕ ಕರ್ಮಗಳ ಸಂದರ್ಭಗಳಲ್ಲಿ ಆಗುತ್ತದೆ. ಆದರೆ ಯಾಗಕ್ಕಾಗಿ ದೀಕ್ಷೆ ತೆಗೆದುಕೊಂಡು ಅದನ್ನು ನಿರ್ವಹಿಸಿದವನಿಗೂ, ಅವನ ಮುಂದಿನ ಮೂರು ಪೀಳಿಗೆಯವರಿಗೂ 'ದೀಕ್ಷಿತ' ಎಂಬ ಉಪಾಧಿ ಸಲ್ಲುತ್ತದೆ.

ಆಗ್ರಯಣೇಷ್ಟಿ : ಹೊಸಬತ್ತದ 'ಮೊದಲ ಅನ್ನ'ಕ್ಕೆ ಸಂಬಂಧಿಸಿದ ವೈದಿಕ ವಿಧಿ.

ಆಚಮನ : ಶಾಸ್ತ್ರವಿಹಿತವಾಗಿ ಆಚಮನದಿಂದಲೇ ಶುದ್ಧಿಯಾಗುವ ಕೆಲವು ಸಂದರ್ಭಗಳು ಇರುತ್ತವೆ. ಆಚಮನ ವಿಧಿಯನ್ನು ಶಾಸ್ತ್ರದಲ್ಲಿ ಹೇಳಿದೆ.

ಆತುರ ಸಂನ್ಯಾಸ : ಮರಣದ ಸೂಚನೆ ದೊರೆತಾಗ ಹೆಚ್ಚು ವಿಧಿ ಇಲ್ಲದೆ ಸ್ವೀಕರಿಸುವ ಸಂನ್ಯಾಸ.

ಆಶೌಚ : ಜನನ ಮರಣ ನಿಮಿತ್ತವಾದ ಮೈಲಿಗೆ.

ಆಹಿತಾಗ್ನಿ : ಆಧಾನಪೂರ್ವಕ ಸಂಸ್ಕೃತವಾದ ಅಗ್ನಿ (ಅದನ್ನು ಉಳ್ಳವನು ಹಾಗೂ ಉಪಾಸಿಸುವವನು ಕೂಡ).

ಇಷ್ಟದೇವತೆ : ತಾನು ವಿಶೇಷವಾಗಿ ಇಷ್ಟಪಟ್ಟು ಭಕ್ತಿ ಮಾಡುವ ದೇವರು.

ಇಷ್ಟಿ : ಯಾಗ.

ಉದ್ವಾಸನೆ : ಪೂಜೆ ಮತ್ತು ವ್ರತಗಳ ಅನಂತರ ಆವಾಹಿತರಾದ ದೇವತೆಗಳನ್ನು ಸ್ವಸ್ಥಾನಕ್ಕೆ ಕಳಿಸುವುದು.

ಉಪದೇಶ : ಮುಂದೆ ಆಚರಿಸುವುದಕ್ಕಾಗಿ ಶ್ರದ್ಧಾವಂತರಿಗೆ ಮಂತ್ರವನ್ನು ರಹಸ್ಯವಾಗಿ ಶ್ರವಣ ಮಾಡಿಸುವುದು.

ಉಪಸ್ಥಾನ ಮಂತ್ರ : ಸಂಧ್ಯಾವಂದನೆಯ ಕೊನೆಯಲ್ಲಿ ನಿಂತುಕೊಂಡು ದಿಗ್ದೇವತೆಗಳಿಗೆ ಮಾಡುವ ನಮಸ್ಕಾರ.

ಊಂಜಲ್ : ಉಯ್ಯಾಲೆ.

ಋತ್ವಿಕ : ವೇದೋಕ್ತ ಕರ್ಮಗಳನ್ನು ನೆರವೇರಿಸಲು ಸಮರ್ಥನಾದ ವೈದಿಕ.

ಋಷಿಪಂಚಮಿ : ರಜಸ್ವಲೆಯಾದ ಕಾಲದಲ್ಲಿ ಮಾಡಿದ ಪಾಪಗಳ ಪರಿಹಾರಕ್ಕಾಗಿ ಮುಟ್ಟುನಿಂತನಂತರ ಮಾಡುವ, ಋಷಿಪೂಜೆಯನ್ನೊಳಗೊಂಡ ಒಂದು ವಿಧಿ.

ಎಳ್ಳೆಸರು : ಗರ್ಭಿಣಿಗೆ ತಾಯಿಯ ಮನೆಯಲ್ಲಿ ಆರತಿ ಮಾಡುವಾಗ ಹುರಿಗಾಳಿನ ಜೊತೆಗೆ ಎಳ್ಳೆಸರೂ

ಮಾಡುತ್ತಾರೆ. ಎಳ್ಳೆಸರು ತಯಾರಿಸಲು ಯಾವ ಕಾಳೂ ಬಳಸುವುದಿಲ್ಲ. ಹೆಸರುಬೇಳೆ, ಎಳ್ಳು, ಕೊಬ್ಬರಿ, ಕಡಲೆ, ಕಡಲೆಬೀಜ ಸೇರಿಸಿ ಕಾರ ಹಾಕಿ ಒಣಗಿಸಿ ಇಟ್ಟಿರುತ್ತಾರೆ. ಆರತಿಗೆ ಬಂದವರಿಗೆಲ್ಲ ಹುರಿಗಾಳು ಹಂಚುತ್ತಾರೆ. ಆದರೆ ಬಸರಿಗೆ ಮಡಿಲು ತುಂಬಲು ಮಾತ್ರ ಎಳ್ಳೆಸರು ಬಳಸುತ್ತಾರೆ.

ಔಪಾಸನೆ : ಗೃಹಸ್ಥನು ಬೆಳಗ್ಗೆ ಮತ್ತು ಸಾಯಂಕಾಲ ನಡೆಸಬೇಕಾದ ವಿಶೇಷ ಹೋಮ.

ಕಡಲೆಬೆಲ್ಲ : ಯಾವುದೇ ಶುಭ ಸಮಾರಂಭಕ್ಕೆ ಹೋದಾಗಲೂ ಮುತ್ತೈದೆಯರು ಕಡಲೆ, ಬೆಲ್ಲ, ಕೊಬ್ಬರಿ, ಎಲೆ, ಅಡಿಕೆ, ಹೂ, ಹಣ್ಣು, ಕಣ(ರವಿಕೆಬಟ್ಟೆ) ಇಟ್ಟು ಕರ್ತೃವಾದ ಸುಮಂಗಲೆಗೆ ಶುಭ ಹಾರೈಸಿ ಕೊಡುತ್ತಾರೆ.

ಕಣ್‌ಕಣ್ಣೆ (ಕಣ್‌ಕಣ್ಣ) : ವಧುವರರು ಪರಸ್ಪರರ ಕಣ್ಣಿಗೆ ಎಣ್ಣೆ ಹಚ್ಚುವ ಶಾಸ್ತ್ರ. ಬಾಲ್ಯವಿವಾಹದ ಎಂಟು ದಿನದ ವಿವಾಹದ - ಆಚರಣೆಗಳಲ್ಲೊಂದು. ದೇವರ ಸಂತರ್ಪಣೆ, ಧಾರೆ, ನಾಗೋಲಿ, ಕಣ್‌ಕಣ್ಣೆ (ಕಣ್ಣ್‌ಕ್ಕ್ ಅಣ್ಣ), ವೆಳಕಲಾಮಾ (ಕೋಡಂಗಿ ಸಭೆ), ಉರುಟಣೆ, ಉಯ್ಯಾಲೆ, ಬೀಗರ ಔತಣ - ಇದು ಎಂಟು ದಿನದ ವಿವಾಹದ ವಿವರ.

ಕದಲಿಪಂಚಕ : ಬಾಳೆಎಲೆ, ದಿಂಡು, ಮೋತೆ, ಬಾಳೆಕಾಯಿ ಮತ್ತು ಬಾಳೆಹಣ್ಣು ಅದರಲ್ಲಿ ಸೇರುತ್ತವೆ.

ಕರ್ಮ : ವೇದವು ವಿಧಿಸಿದ ಬ್ರಾಹ್ಮಣನ ಕರ್ತವ್ಯಗಳು.

ನಿತ್ಯಕರ್ಮ : ಸಂಧ್ಯಾವಂದನೆ, ಪಂಚಮಹಾಯಜ್ಞ ಇತ್ಯಾದಿ.

ನೈಮಿತ್ತಿಕ : ಕಾರಣವನ್ನಾಶ್ರಯಿಸಿ ಮಾಡುವ ಸ್ನಾನ, ದಾನ ಇತ್ಯಾದಿ. ಉದಾ: ಗ್ರಹಣಸ್ನಾನ. ಪಾಪಪರಿಹಾರಕ್ಕೆ ಮಾಡುವ ಸ್ನಾನ; ರಜಸ್ವಲಾದಿ ಸ್ಪರ್ಶಗಳಿಗೆ ಮಾಡಿಕೊಳ್ಳುವ ಪ್ರಾಯಶ್ಚಿತ್ತ.

ಕಾಮ್ಯ : ಇಷ್ಟಾರ್ಥಕ್ಕಾಗಿ ಮಾಡುವುದು.
('ಕರ್ಮ' ಶಬ್ದವನ್ನು ಕೆಲವೊಮ್ಮೆ ಅಪರಕರ್ಮ ಎಂಬ ಸಂಕೋಚಾರ್ಥದಲ್ಲೂ ಬಳಸುವುದುಂಟು.)

ಕ್ಷೇತ್ರವಿಧಿ : ತೀರ್ಥಕ್ಷೇತ್ರಗಳಲ್ಲಿ ಆಚರಿಸಬೇಕಾದ ಕರ್ಮಗಳ ವಿವರ.

ಗಾಳಿಮರ : ಬಿರುಗಾಳಿ ಬೀಸಿ ತೋಟದ ಸಸಿಗಳು ಉರುಳುವುದನ್ನು ತಪ್ಪಿಸಲು ಬೇಲಿಯಲ್ಲಿ ಸೊಂಪಾದ ಮತ್ತು ಗಟ್ಟಿಯಾದ ಮರಗಳನ್ನು ಬೆಳೆಸಿ ಗಾಳಿಯಿಂದ ರಕ್ಷಣೆ ಒದಗಿಸುತ್ತಾರೆ. ಅದು 'ಗಾಳಿಮರ.'

ಗುರುದಕ್ಷಿಣೆ : ಶಿಷ್ಯರು ಮಠಕ್ಕೆ ಪ್ರತಿವರ್ಷವೂ ಸಲ್ಲಿಸುವ ಕಾಣಿಕೆ.

ಗೃಹ್ಯಸೂತ್ರ : ಗೃಹಸ್ಥರು ಮಾಡಬೇಕಾದ ಕರ್ಮ ಹಾಗೂ ಕರ್ಮವಿಧಾನವನ್ನು ನಿರೂಪಿಸುವ ಶಾಸ್ತ್ರ.

ಗಂಗಾಸಂತರ್ಪಣೆ : ಕಾಶೀಯಾತ್ರೆಯನಂತರ, ಅಲ್ಲಿಂದ ತಂದ ಗಂಗೆಯನ್ನು ಪೂಜಿಸಿ ಅನ್ನ ಸಂತರ್ಪಣೆ ಮಾಡುವುದು.

ಘನಪಾಠಿ : ವೇದವನ್ನು ನೇರವಾಗಿ ಕ್ರಮವಾಗಿ ಪಠಿಸುವುದು ಒಂದು ಸರಳ ಕ್ರಮ. ಆದರೆ ನಿರ್ದಿಷ್ಟ ಗಣಿತದಂತೆ ಪದಗಳನ್ನು ಹಿಂದುಮುಂದೆ ಮಾಡಿ ಆವರ್ತಿಸುವ ಕ್ರಮವಿದೆ. ಜಟಾಪಾಠ, ಘನಪಾಠ ಅಂಥ ಆವರ್ತನ ರೀತಿಗಳು. ಹಾಗೆ ಪಠಿಸುವವರು 'ಜಟಾಪಾಠಿ', 'ಘನಪಾಠಿ' ಎನಿಸಿಕೊಳ್ಳುತ್ತಾರೆ.

ಚಾತುರ್ಮಾಸ್ಯ ಯಜ್ಞ : ನಾಲ್ಕು ತಿಂಗಳಲ್ಲಿ ನಡೆಯಬೇಕಾದ ಯಜ್ಞ. ಅಗ್ನಿಹೋತ್ರ, ದರ್ಶಪೂರ್ಣಮಾಸ, ಪಶುಯಾಗ, ಸೋಮಯಾಗ ಇವುಗಳ ಸಾಲಿನಲ್ಲಿ ಚಾತುರ್ಮಾಸ್ಯ ಯಜ್ಞ ಒಂದು.

ಚಿಗಳಿ ಆರತಿ	:	ಆರತಿ ಎಂದರೆ, ದೃಷ್ಟಿದೋಷ ಮತ್ತಿತರ ಅತಿಮಾನುಷ ದೋಷಗಳ ನಿವಾರಣೆಗಾಗಿ ಮಾಡುವ ಕೈಕರಣ. ಒಂದು ತಟ್ಟೆಯಲ್ಲಿ ಸುಣ್ಣ, ಅರಿಶಿನದ ನೀರು ಇಟ್ಟುಕೊಂಡು ಇಬ್ಬರು ಹಿರಿಯ ಮುತ್ತೈದೆಯರು ಅದನ್ನು ವ್ಯಕ್ತಿಯ (ವಟು, ವರ, ವಧು) ಮುಂದೆ ನಿವಾಳಿಸುತ್ತಾರೆ. ಆಗ ಆಶೀರ್ವಾದದ ಹಾಡುಗಳನ್ನೂ ಹೇಳುತ್ತಾರೆ. ಉದ್ದಿಷ್ಟವ್ಯಕ್ತಿಯು ಆರತಿಗೆ ದಕ್ಷಿಣೆಯನ್ನೂ ಹಾಕುತ್ತಾನೆ. ಆರತಿ ಎತ್ತಿದವರು ಆ ನೀರನ್ನು ಹೊರಗೆಚೆಲ್ಲಿ ದಕ್ಷಿಣೆಯನ್ನಿಟ್ಟುಕೊಳ್ಳುತ್ತಾರೆ. ಆರತಿಯನ್ನು ಮಾಡುವ ಸಂದರ್ಭಗಳು - ಸಂಸ್ಕಾರಗಳು, ಹಬ್ಬಗಳು, ಪೂಜೆಗಳು, ಇತರ ಹರ್ಷದ ಸನ್ನಿವೇಶಗಳು - ಹೀಗೆ ವೈವಿಧ್ಯಪೂರ್ಣವಾಗಿವೆ. ತೊಟ್ಟಿಲಿಡುವಶಾಸ್ತ್ರ, ಮಗು ಹೊಸಿಲುದಾಟಿದ್ದು ಇತ್ಯಾದಿ ಸಂದರ್ಭಗಳಲ್ಲಿಯೂ ಆರತಿಗಳು ನಡೆಯುತ್ತವೆ. ಆಗ ಬಂಧುಮಿತ್ರರನ್ನು ಕರೆದು ಅವರಿಗೆ ಬಾಗಿನಗಳನ್ನೂ ಕೊಡುತ್ತಾರೆ. ಅದು ತೆಂಗಿನಕಾಯಿ, ಚಿಗುಳಿ, ಚಕ್ಕುಲಿ ಇತ್ಯಾದಿಯಾಗಿ ಸಂದರ್ಭ ನಿರ್ದಿಷ್ಟವಾಗಿರುತ್ತದೆ. ಅದನ್ನನುಸರಿಸಿ 'ತೋಂಗಾ ಆರತಿ' 'ಚಿಗುಳಿ ಆರತಿ' 'ಚಕ್ಕುಲಿ ಆರತಿ' ಎನ್ನುತ್ತಾರೆ. ಹೆಣ್ಣುಮಕ್ಕಳು ಮೈ ನೆರೆದಾಗ ಚಿಗುಳಿ ಬಾಗಿನ ಮಾಡಿ ಆರತಿ ಮಾಡುತ್ತಾರೆ.
ಜಟಾಪಾಠಿ	:	ನೋಡಿ : ಘನಪಾಠಿ.
ಜ್ಞಾತಿ	:	ಒಂದು ಗೋತ್ರದ ಎಲ್ಲರೂ ಪರಸ್ಪರ ಜ್ಞಾತಿಗಳು.
ತರ್ಪಣ	:	ದೇವತೆಗಳ, ಪಿತೃಗಳ, ಋಷಿಗಳ ತೃಪ್ತ್ಯರ್ಥವಾಗಿ ಮಂತ್ರಪೂರ್ವಕವಾಗಿ ಉದಕ ಅರ್ಪಿಸುವುದು.
ತೀರ್ಥಶ್ರಾದ್ಧ	:	ಕಾಶಿ, ರಾಮೇಶ್ವರ, ಗಯಾ, ಗೋಕರ್ಣ ಮೊದಲಾದ ತೀರ್ಥಕ್ಷೇತ್ರಗಳಲ್ಲಿ ಪಿತೃ ತೃಪ್ತ್ಯರ್ಥವಾಗಿ ಮಾಡುವ ವಿಶೇಷ ಶ್ರಾದ್ಧ.
ತೀರ್ಥಸ್ನಾನ	:	ತೀರ್ಥಕ್ಷೇತ್ರಗಳಲ್ಲಿ ಪುರಾಣಪ್ರಸಿದ್ಧವಾದ ಜಲಾಶಯಗಳಲ್ಲಿ ಮಾಡುವ ಸ್ನಾನ.
ತೃಣಜಲ ಸಮೃದ್ಧಿ	:	ಅನ್ನಪಾನಾದಿಗಳಿಗೆ, ಅನುಷ್ಠಾನಕ್ಕೆ ಮತ್ತು ವ್ಯವಸಾಯಕ್ಕೆ ಬೇಕಾದ ನೀರು ಮತ್ತು ಗೋವುಗಳಿಗೆ ಬೇಕಾದ ಹುಲ್ಲು ಚೆನ್ನಾಗಿ ಸಿಗುವುದು.
ತೃಪ್ತಿಪ್ರಶ್ನೆ	:	ಶ್ರಾದ್ಧಭೋಜನದ ಕೊನೆಯಲ್ಲಿ, 'ಭೋಜನದಿಂದ ತೃಪ್ತಿಯಾಯಿತೆ?' ಎಂದು 'ಬ್ರಾಹ್ಮಣ'ರಲ್ಲಿ ನಿವೇದಿಸಿಕೊಳ್ಳುವ ಪ್ರಶ್ನೆ.
ತೊಟ್ಟಿಲು ಗೌರಮ್ಮ	:	ದೇವಸ್ಥಾನ ಅಥವಾ ಜಲಾಶಯ ತೀರದಲ್ಲಿ ಸುಮಂಗಲೆಯರು ಸಾಮೂಹಿಕವಾಗಿ ಗೌರಿಪೂಜೆ ಆಚರಿಸಿದ ಅನಂತರ ಅಂದು ಸಂಜೆ ತೊಟ್ಟಿಲಿನಲ್ಲಿ ಗೌರಮ್ಮನ ಉತ್ಸವ ಊರ ತುಂಬ ಹೊರಡುತ್ತದೆ. ಇದು 'ತೊಟ್ಟಿಲು ಗೌರಮ್ಮ'.
ತಿಂಗಳ ಕಾಂಬೋಲಿ	:	ಉಪನಯನ, ವಿವಾಹ ಆದ ಒಂದು ತಿಂಗಳಲ್ಲಿ ವಟು/ವಧುವರರಿಗೆ ಆರತಿ ಮಾಡಿ ಅನ್ನಸಮಾರಾಧನೆ ನಡೆಸುವುದು.
ತ್ರಿಪಿಂಡ-ಷಟ್ಪಿಂಡ	:	ಮಾತೃಶ್ರಾದ್ಧದಲ್ಲಿ ಎಲ್ಲರೂ ಆರು ಪಿಂಡಗಳನ್ನೇ ನೀಡಿದರೂ ಪಿತೃಶ್ರಾದ್ಧದಲ್ಲಿ ಕೆಲವರು ಮೂರು, ಕೆಲವರು ಆರು ಪಿಂಡ ಇಡುವ ಪದ್ಧತಿ ಬಂದಿದೆ.
ತ್ರೇತಾಗ್ನಿ	:	ದಕ್ಷಿಣಾಗ್ನಿ, ಗಾರ್ಹಪತ್ಯಾಗ್ನಿ, ಆಹವನೀಯಾಗ್ನಿ ಈ ಮೂರನ್ನು ಬ್ರಾಹ್ಮಣ ಗೃಹಸ್ಥನು ಉಪಾಸಿಸಬೇಕು. ಇದು ಒಟ್ಟಾಗಿ 'ತ್ರೇತಾಗ್ನಿ'

ದಿಕ್ಕುಶುದ್ಧಿ : ಪೂರ್ವ ಮತ್ತು ಉತ್ತರ ದಿಕ್ಕುಗಳು ದೇವತೆಗಳ ವಿಶೇಷ ಆವಾಸ ಸ್ಥಾನಗಳು. ಹಾಗಾಗಿ, ಆ ದಿಕ್ಕುಗಳಿಗೆ ಮುಖ ಮಾಡಿಯೇ ಎಲ್ಲ ಕರ್ಮಗಳು ನಡೆಯುತ್ತವೆ. ಅಪರಕರ್ಮಗಳಲ್ಲಿ ಮಾತ್ರ ಯಮನದಿಕ್ಕಾದ ದಕ್ಷಿಣಕ್ಕೆ ಮುಖಮಾಡಿ ಕರ್ಮಗಳನ್ನು ಮಾಡುವ ಸಂದರ್ಭಗಳಿರುತ್ತವೆ.

ದಿಗ್ಬಲಿ : ಎಲ್ಲ ದಿಕ್ಕುಗಳಲ್ಲೂ ದೇವತೆಗಳನ್ನುದ್ದೇಶಿಸಿ ಕೊಡುವ ಅನ್ನಬಲಿ. ಉದಾ: ನವಾಗಾರ ಪ್ರವೇಶದ ಸಂದರ್ಭ, ವೃಷೋತ್ಸರ್ಗದ ಸಂದರ್ಭ.

ದಿಗ್ವಂದನೆ : ಸಂಧ್ಯಾವಂದನೆಯ ಕೊನೆಯಲ್ಲಿ ದಿಗ್ದೇವತೆಗಳಿಗೆ ಮಾಡುವ ನಮಸ್ಕಾರ.

ಧರ್ಮಪ್ರಜಾಸಂಪತ್ತಿ : ವಂಶವಿಹಿತವಾದ ಧರ್ಮಕರ್ಮಗಳನ್ನು ಆಚರಿಸಲು ಅರ್ಹರಾದ ಮಕ್ಕಳನ್ನು ಪಡೆಯುವುದು.

ನಾತಿಪಿಚಾರ್ : ಬಸುರಿ ಹುಡುಗಿಗೆ ಮೊದಲು ತವರಿನಲ್ಲೂ ಅನಂತರ ಗಂಡನ ಮನೆಯಲ್ಲಿಯೂ ನಡೆಯುವ ಬಳೆತೊಡಿಸುವ ಶಾಸ್ತ್ರ ಇತ್ಯಾದಿಗಳನ್ನು ಇದು ಒಳಗೊಳ್ಳುತ್ತದೆ. ಈ ಪದವು ತಮಿಳರಲ್ಲಿ ಬಳಕೆಯಲ್ಲಿಲ್ಲ.

ನೆಟ್ಟರಂಗ್ : ಬಾಗಿಲು ಎದುರಿಗೆ ನೇರವಾಗಿ ಇರುವ ಹಜಾರದ ಭಾಗಕ್ಕೆ ನೆಟ್ಟರಂಗ್ ಎನ್ನುತ್ತಾರೆ. ಅಲ್ಲಿ ಸಾರಿಸಿ ರಂಗೋಲಿ ಹಾಕಿ ಮಣೆ ಹಾಸಿ ದೀಪವನ್ನು ಹಚ್ಚಿಟ್ಟಿರುತ್ತಾರೆ. ಕೆಲವರು ಶುಕ್ರವಾರಗಳಂದು ಮಾತ್ರ ಹಾಗೆ ಮಾಡುತ್ತಾರೆ. ಕೆಲವರು ಈ ಕ್ರಮವನ್ನೇ ಪಾಲಿಸುವುದಿಲ್ಲ.

ನೆತ್ತೀಕಿಡರದ್ : (ಹಣೆಗೆ ಇಡುವುದು, ಹಣೆಗೆ ಕುಂಕುಮ ಇಡುವುದು). ಯಾವುದೇ ಸಮಾರಂಭ ಮುಗಿದ ಮೇಲೆ ಕರ್ತೃಗಳು ಸುವಾಸಿನಿಯರನ್ನು ಬರಿಗೈಲಿ ಕಳಿಸುವುದಿಲ್ಲ. ಎಲೆ, ಅಡಿಕೆ, ತೆಂಗಿನಕಾಯಿ, ಬೆಲ್ಲದ ಅಚ್ಚು, ಅರಿಶಿನ, ಕುಂಕುಮ ಮತ್ತು ಜೊತೆಗೆ ಭಕ್ಷ್ಯ ಇಟ್ಟು ಕಳಿಸಿಕೊಡುತ್ತಾರೆ. ಉಭಯತ್ರರಿಗೂ ಒಳಿತಾಗಲಿ ಎಂಬುದು ಆಶಯ.

ನೈಷ್ಠಿಕ ಬ್ರಹ್ಮಚರ್ಯ : ಬ್ರಹ್ಮಚಾರಿಯಾಗಿ ಯಾವಜ್ಜೀವವೂ ಗುರುಕುಲದಲ್ಲಿರುವುದು.

ಪರ್ವಸ್ನಾನ : ಅಮಾವಾಸ್ಯೆ, ಪೂರ್ಣಿಮೆ, ಸಂಕ್ರಮಣ, ಅರ್ಧೋದಯ ಪುಣ್ಯಕಾಲ, ಮಹೋದಯ ಪುಣ್ಯಕಾಲ ಇತ್ಯಾದಿ ಅವಕಾಶಗಳಲ್ಲಿ ಮಾಡುವ ವಿಶೇಷ ಪುಣ್ಯಸ್ನಾನ.

ಪಾಡಿ ಉಡರದ್ : ಎಲ್ಲ ಶುಭಸಂಸ್ಕಾರಗಳಲ್ಲಿ ಪ್ರಧಾನವಾಗಿ ಗೃಹಿಣಿಯ ತವರಿನವರು ಮಗಳಿಗೆ ನಡೆಸಬೇಕಾದುದು. ಮೆರವಣಿಗೆಯಲ್ಲಿ ಗೃಹಿಣಿಯ ಸೋದರರು ವರ/ವಟು/ವಧುವನ್ನು ಕರೆದುಕೊಂಡು ತಮ್ಮ ಮನೆಗೆ (ಹೊರ ಊರಿನಲ್ಲಿ ವಾಸಿಸುವ ಸೋದರರಾದರೆ ಸೋದರಿಯ ಊರಿನಲ್ಲೇ ಇನ್ನಾವುದಾದರೂ ಒಂದು ಆಪ್ತರ ಮನೆಗೆ) ಹೋಗಿ ಹಾಲು ಕುಡಿದ ಬಳಿಕ ಸೋದರಿಗೆ ಬಳುವಳಿ ಕೊಟ್ಟು ಮೆರವಣಿಗೆಯಲ್ಲಿಯೇ ಸೋದರಿಯ ಮನೆಗೆ ಎಲ್ಲರನ್ನೂ ಕಳಿಸಿಕೊಡುವುದು. ಸೋದರಿ ತನ್ನ ಮನೆಯ ಬಾಗಿಲಲ್ಲಿ ಸೋದರರಿಗೆ ಕಾಲು ತೊಳೆದು ಬಳುವಳಿ ನೀಡುವಳು. ವಿವಾಹದಲ್ಲಿ ಮಾತ್ರ ವಿವಿಧ ರೀತಿಯ ಪಾಡಿಬಿಡುವ ಕ್ರಿಯೆಗಳಿರುತ್ತವೆ.

ಪಾಣಿ ಸೂಡು : ಶಾನುಭೋಗರ ಕಡತ.

ಪಾಲ್ನೈಯಿ ಅಟ್ಟರದ್ : ಧಾರೆ ಎರೆದಾದ ಕೊನೆಯಲ್ಲಿ ಇದು ನಡೆಯುತ್ತದೆ. ಅದರ ನಿರ್ದಿಷ್ಟ ಸಂದರ್ಭವೊಂದು - ಬಾಲ್ಯವಿವಾಹದ ಸಂದರ್ಭದ ಆತ್ಮೀಕರಣದ ಆವಶ್ಯಕತೆಗಾಗಿ ನಡೆಯುತ್ತದೆ. ಒಂದು ತಟ್ಟೆಯಲ್ಲಿ

ಹಣ್ಣು, ಹಾಲು ಇಟ್ಟಿರುತ್ತದೆ. ವಧುವರರು ಅದನ್ನು ಪರಸ್ಪರರಿಗೆ ಉಣಿಸುತ್ತಾರೆ. ಆಪೋಶನಕ್ಕಾಗಿ ಇಬ್ಬರಿಗೂ ಹಾಲುತುಪ್ಪವನ್ನು ಕೈಗೆ ಬಿಟ್ಟುಕೊಡುವವಳು ವಧುವಿನ ತಾಯಿಯೇ.

ಪಿಳ್ಳೆ : ತೋಟಗಳು ತನುವಾಗಿರಬೇಕು, ಆದರೆ ತೇವ ಹೆಚ್ಚಬಾರದು. ಹೆಚ್ಚಾದ ನೀರು ಕಡೆದು ಹೋಗುವಂತೆ ತೋಡಿದ ಸಣ್ಣ ಕಾಲುವೆಗೆ 'ಪಿಳ್ಳೆ' ಎನ್ನುತ್ತಾರೆ. ತೋಟದಲ್ಲಿ ಅಂಥ ಹಲವು ಪಿಳ್ಳೆಗಳಿರುತ್ತವೆ.

ಪುಣ್ಯಾಹ : ಸ್ಥಳಶುದ್ಧಿ, ದೇಹಶುದ್ಧಿ ಮತ್ತು ಅಭ್ಯುದಯಕ್ಕಾಗಿ ಜಲವನ್ನು ಅಭಿಮಂತ್ರಿಸಿ ಪ್ರೋಕ್ಷಿಸುವುದು.

ಪಂಚಗ್ರಾಮ : ನೋಡಿ : ಅಷ್ಟಗ್ರಾಮ.

ಪಂಚಮಹಾಯಜ್ಞ : ಬ್ರಹ್ಮಯಜ್ಞ (ಅಧ್ಯಾಪನ), ದೇವಯಜ್ಞ (ಹೋಮಹವನಾದಿ), ಪಿತೃಯಜ್ಞ (ತರ್ಪಣ), ಭೂತಯಜ್ಞ (ಅನ್ನಬಲಿ), ಮನುಷ್ಯ ಯಜ್ಞ (ಅತಿಥಿ ಸೇವೆ).

ಪ್ರಪತ್ತಿಮಾರ್ಗ : ತನ್ನ ರಕ್ಷಣೆಯ ಭಾರವನ್ನೆಲ್ಲಾ ದೇವರಿಗೆ ಅರ್ಪಿಸಿ ಶರಣಾಗತನಾಗುವುದು.

ಪ್ರಯೋಗ : ಸಂಸ್ಕಾರಗಳನ್ನು ನಡೆಸುವ ವಿಧಾನ.

ಪ್ರವರ : ತನ್ನ ವಂಶಮೂಲವಾದ ಋಷಿಗಳ ಹೆಸರುಗಳನ್ನೂ, ತಾನು ಅಧ್ಯಯನ ಮಾಡುವ ವೇದಶಾಖೆಗಳನ್ನೂ, ಅನುಸರಿಸುವ ಸೂತ್ರವನ್ನೂ ನಿರೂಪಿಸುವುದು.

ಪ್ರಾಣಾಯಾಮ : ಮಂತ್ರಪೂರ್ವಕವಾಗಿ ಪೂರಕ - ಕುಂಭಕ-ರೇಚಕಗಳನ್ನೊಳಗೊಂಡ ಉಸಿರಾಟದ ವಿಧಾನ. ಅದು ತ್ರಿಕಾಲ ಸಂಧ್ಯಾವಂದನೆಯ ಒಂದು ಭಾಗವಾಗಿದೆ. ಪ್ರತಿಯೊಂದು ಧಾರ್ಮಿಕ ಕ್ರಿಯೆಯ ಸಂಕಲ್ಪದ ಮೊದಲು ಪ್ರಾಣಾಯಾಮ ಇರುತ್ತದೆ.

ಪ್ರೋಕ್ಷಣೆ : ತೊಳೆಯುವುದು (ಚುಮುಕಿಸುವುದು).

ಫಲಧಾರೆ : ಕಾರ್ತಿಕದ 'ಮಕ್ಕಳ ಹುಣ್ಣಿಮೆ' ಹಾಗೂ ಸಂಕ್ರಾಂತಿ ಹಬ್ಬದ ಸಮಯದಲ್ಲಿ ಮಕ್ಕಳಿಗೆ ಆರತಿ ಮಾಡುತ್ತಾರೆ. ಪುಟ್ಟ ಮಗುವಾದರೆ ಮಕ್ಕಳಿಗೆ 'ಫಲಧಾರೆ' ಎರೆಯುತ್ತಾರೆ. ಕಡಲೆ, ಎಗಚಿಹಣ್ಣು ಮತ್ತು ನಾಣ್ಯಗಳನ್ನು ಬೆರೆಸಿ ಬಟ್ಟಲಿನಲ್ಲಿ ತುಂಬಿಕೊಂಡು ಮಗುವಿನ ತಲೆಯ ಮೇಲೆ ಧಾರೆಯಾಗಿ ಸುರಿದು ಕೆಳಗೆ ಬೀಳುವಾಗ ಕೈಲಿ ಆತುಕೊಳ್ಳುತ್ತಾರೆ. ಹೀಗೆ ಮೂರು ಸಲ ನಡೆಯುತ್ತದೆ. ಆ ನಾಣ್ಯಗಳನ್ನು ಅಲ್ಲಿ ನೆರೆದ ಪುಟ್ಟ ಮಕ್ಕಳಿಗೆ ಹಂಚುತ್ತಾರೆ. (ನಾಣ್ಯದ ಜೊತೆಗೆ ಎಲಚಿಹಣ್ಣು, ಕಬ್ಬಿನ ಚೂರುಗಳನ್ನೂ ಸೇರಿಸಿ 'ಫಲಧಾರೆ' ಎರೆಯುವುದೂ ಉಂಟು.)

ಬಲಿಹರಣ : ಬಲಿ, ವಿಭೀಷಣ ಮೊದಲಾದ ಶಿವಭಕ್ತರನ್ನೂ, ನಾರದ ಮೊದಲಾದ ವಿಷ್ಣುಭಕ್ತರನ್ನೂ ಉದ್ದೇಶಿಸಿ ಪೂಜೆಯ ಅಂತ್ಯದಲ್ಲಿ ನೀಡುವ ಅನ್ನ ಬಲಿ.

ಬೇಚಿರಾಕ್ ಗ್ರಾಮ : ಪ್ಲೇಗು, ಪ್ರವಾಹ, ಕ್ಷಾಮ ಮೊದಲಾದ ನಾನಾ ಕಾರಣಗಳಿಂದ ಒಂದು ಹಳ್ಳಿಯ ಎಲ್ಲ ಜನರೂ ತೊರೆದು ಹೋಗಿರುವ ಪಾಳು ನೆಲೆ.

ಬೇರಿನ್ : ಹೊಗೆಸೊಪ್ಪು ಬೇಯಿಸಲು ಕಟ್ಟಿದ ಶಾಖದ ಮನೆ.

ಬ್ರಹ್ಮಕ್ಷತ್ರಿಯ : ಬ್ರಾಹ್ಮಣನಾಗಿದ್ದೂ ಬ್ರಾಹ್ಮಣ್ಯದ ಜೊತೆಗೆ ಅಥವಾ ಅದನ್ನು ಮೀರಿ ಕ್ಷಾತ್ರವನ್ನು ತೊಡುವವನು.

ಬ್ರಹ್ಮಚರ್ಯ	:	ಉಪನೀತನಾದ ವಟುವು ಕೈಗೊಳ್ಳುವ ವ್ರತ, ನಿಯಮ. ಇದು ಆಹಾರ ವಿಹಾರಗಳ ನಿರ್ಬಂಧವನ್ನು ಒಳಗೊಂಡಿರುತ್ತದೆ. ಅಷ್ಟಾಂಗ ಮೈಥುನ ತ್ಯಾಗವನ್ನು ಒಳಗೊಂಡಿರುತ್ತದೆ.
ಬ್ರಹ್ಮಹತ್ಯೆ	:	ಶಿಶು, ಗೋವು ಹಾಗೂ ಬ್ರಾಹ್ಮಣರನ್ನು ಕೊಂದರೆ ವಿಶೇಷ ಪಾಪವೆಂದು ಶಾಸ್ತ್ರಗಳು ಹೇಳುತ್ತವೆ. ಬ್ರಾಹ್ಮಣನನ್ನು ಕೊಂದರೆ ಅದನ್ನು 'ಬ್ರಹ್ಮಹತ್ಯೆ' ಎನ್ನುತ್ತಾರೆ.
ಮಡೆ ಹೊರಳುವುದು	:	ದೇವರ ಸೇವೆಯ ವಿಧಗಳಲ್ಲಿ ಉರುಳು ಸೇವೆಯೂ ಒಂದು ('ಮಡೆ'). ಹರಕೆಗಾಗಿಯೂ ಅದನ್ನು ನೆರವೇರಿಸುತ್ತಾರೆ. ದೇವರ ಮುಂದೆ ಮಡಿಬಟ್ಟೆಯಲ್ಲಿ ನಡೆಸುವ ಉರುಳು ಸೇವೆಯಂತೆಯೇ ಊಟ ಮಾಡಿದವರ ಎಂಜಲು ಎಲೆಗಳ ಮೇಲೆ (ವಿಶೇಷ ಹರಕೆಯಂತೆ) ಉರುಳುಸೇವೆ ಮಾಡುವುದೂ ಇದೆ. ಅವನ್ನು 'ಎಂಜಲು ಮಡೆ' ಎನ್ನುತ್ತಾರೆ.
ಮೀಸಲು	:	'ಹೂವೀಳ್ಯ'ದಲ್ಲಿ ಆಹ್ವಾನಿತ ಮುತ್ತೈದೆಯರು ಉಪವಾಸವಿದ್ದು ನೇಮದಿಂದ ಬಂದಿರುತ್ತಾರೆ. ಕರ್ತೃವು ಅವರೆಲ್ಲರಿಗೂ ಎಡೆ ಬಡಿಸಿ ಫಲಾಹಾರ ಮಾಡಿಸಿದನಂತರ ತಾನು ಫಲಾಹಾರ ಮಾಡುತ್ತಾಳೆ. ಅದಕ್ಕೆ ಮೊದಲು ಅವಳಿಗೆ ಮಡಿಲು ತುಂಬುತ್ತಾರೆ. ಮೀಸಲು - ಎಂದರೆ ಸೀರೆ ಮೀಸಲಿನಲ್ಲಿ - ಸೀರೆಗಳನ್ನು ದೇವರ ಮುಂದೆ ಇಟ್ಟು ಪೂಜಿಸುತ್ತಾರೆ. ಪೂರ್ವಾಂಗವಾಗಿ ಕರ್ತೃವೂ, ಆಹ್ವಾನಿತ ಮುತ್ತೈದೆಯರೂ ಅಭ್ಯಂಗ ಸ್ನಾನಮಾಡಿಕೊಂಡು ನೇಮದಿಂದ ಬಂದಿರುತ್ತಾರೆ.
ಮೇಧಾವಿ	:	ಹೋಮಹವನಗಳಲ್ಲಿ ಅಗ್ನಿಗೆ ಅರ್ಪಿಸಿದ ಹವಿಸ್ಸಿನ ಭಸ್ಮವನ್ನು ರಕ್ಷೆಯಾಗಿ ಹಣೆಗೆ ಹಚ್ಚಿಕೊಳ್ಳುತ್ತಾರೆ (ಮೂಗು ಮತ್ತು ಹಣೆಯ ನಡುವೆ). ಅಭ್ಯಂಗ ಸ್ನಾನವು ಕೇವಲ ಲೌಕಿಕ ಕ್ರಿಯೆಯಾಗಿ ಪರಿಗಣಿತವಾಗಿಲ್ಲ. ಸ್ನಾನಾಂತದಲ್ಲಿ, ನೀರು ಕಾಯಿಸಿದ ಹಂಡೆಯ ತಳದ ಅಗ್ನಿಗೆ ನಮಸ್ಕರಿಸಿ ಹಂಡೆಗೆ ಹತ್ತಿದ ಕಪ್ಪನ್ನು ಮೇಧಾವಿಯಂತೆ ಧರಿಸುವುದರಲ್ಲಿ ಅದು ವ್ಯಕ್ತವಾಗುತ್ತದೆ.
ಯುಗಚ್ಛಿದ್ರ ಪ್ರತಿಷ್ಠಾಪನೆ	:	ಅಪಾಲೆಯಂತೆ ಸೂರ್ಯನ ವರ್ಚಸ್ಸನ್ನು ಪಡೆಯಲು ಯುಗಚ್ಛಿದ್ರದಲ್ಲಿ ಜಲಧಾರೆ.
ರಾಕ್ಷೋಘ್ನಹೋಮ	:	ನವಾಗಾರ ಪ್ರವೇಶಕ್ಕೆ ಮೊದಲು ಅಲ್ಲಿ ಇರಬಹುದಾದ ರಾಕ್ಷಸರ ನಾಶಕ್ಕಾಗಿ ಮಾಡುವ ಹೋಮ.
ಲಕ್ಷಮರದ ಆಗ್ರ	:	ಕೌಶಿಕ ಗ್ರಾಮದ ದೊಡ್ಡ ಕೆರೆಯ ಕೆಳಗೆ ಲಕ್ಷ ಅಡಿಕೆ ಸಸಿಗಳನ್ನು ಬೆಳೆಸಿ ತೋಟಗಳನ್ನು ಬೆಳೆಸುವ ಮೂಲಕ ಸಂಕೇತಿ ಸಮುದಾಯ ದೊಡ್ಡ ಸಾಧನೆ ಮಾಡಿತು. ಅದು 'ಲಕ್ಷಮರದ ಆಗ್ರ' ಎಂದು ಪ್ರಶಸ್ತಿ ರೂಪದಲ್ಲಿ ಖ್ಯಾತವಾಯಿತು.
ವಾಕ್ಯಾರ್ಥ	:	ವೇದಶಾಸ್ತ್ರಗಳ ವಾಕ್ಯಗಳ ಅರ್ಥವನ್ನು ಕುರಿತ ಜಿಜ್ಞಾಸೆ.
ವಾಮೆ	:	ಮತ್ತೂರಿನಲ್ಲಿ ಬಳಕೆಯಲ್ಲಿರುವ ನಿಷೇಧ ಸೂಚಕ ಪದ. ಈ ನಿಷೇಧವನ್ನು ಪಾಲಿಸದಿದ್ದರೆ ಮುಂದೆ ಒದಗುವ ಅಪಾಯದ ಶಂಕೆಯೂ ಅದರಲ್ಲಿದೆ. ಉದಾ: ಊಟಕ್ಕೆ ಉಪ್ಪಿನಕಾಯಿ ಬಡಿಸದೆ ಏನನ್ನೂ ಬಡಿಸುವಂತಿಲ್ಲ.
ವೃಕ್ಷಪೂಜೆ	:	ಅರಳಿ, ನಲ್ಲಿ, ಶಮಿ ಇತ್ಯಾದಿ ವಿಶೇಷ ವೃಕ್ಷಗಳಿಗೆ ಮಾಡುವ ಪೂಜೆ.
ವೈದಿಕ	:	ವೇದಾಧ್ಯಯನಸಂಪನ್ನನಾದ ಬ್ರಾಹ್ಮಣ.
ವೈಶ್ವದೇವ	:	ಇದು ಭೂತಯಜ್ಞ; ಪಂಚಮಹಾಯಜ್ಞಗಳಲ್ಲಿ ಒಂದು.

ಶಮಾದಿ ಷಡ್ಗುಣ	:	ಶಮಾ (ಅಂತರಿಂದ್ರಿಯ ನಿಗ್ರಹ), ದಮ (ಬಹಿರಿಂದ್ರಿಯ ನಿಗ್ರಹ), ಉಪರತಿ (ಸಮಸ್ತದಲ್ಲೂ ವಿರಕ್ತಿ), ತಿತಿಕ್ಷಾ (ಶೀತೋಷ್ಣಾದಿ ದ್ವಂದ್ವದಲ್ಲಿ ಸಹನೆ), ಸಮಾಧಾನ (ಬ್ರಹ್ಮನಲ್ಲೇ ಮನ ಇಡುವುದು), ಶ್ರದ್ಧಾ (ವೇದಾಂತವಾಕ್ಯ ಮತ್ತು ಗುರುವಾಕ್ಯದಲ್ಲಿ ವಿಶ್ವಾಸ ಇಡುವುದು).
ಶುಭಸ್ವೀಕಾರ	:	ತಂದೆತಾಯಿಗಳಿಗೆ ಸಂಸ್ಕಾರ ಮಾಡಿದ ವರ್ಷಾಂತ್ಯದಲ್ಲಿ ಪ್ರಥಮಾಬ್ದಿಕ ಶ್ರಾದ್ಧವನ್ನು ಮಾಡಿದ ಅನಂತರ ಶುಭಕಾರ್ಯಗಳಿಗೆ ಅಧಿಕಾರ ಪಡೆಯುವುದು.
ಶೇಷಹವನ	:	ವಿವಾಹಾಂಗವಾಗಿ ಪ್ರಧಾನ ಹೋಮದ ಅನಂತರ ನವದಂಪತಿಗಳು ಮಾಡುವ ಹೋಮ.
ಶ್ರೋತ್ರಿಯ	:	ವೇದಶಾಸ್ತ್ರಗಳನ್ನು ಬಲ್ಲವನು.
ಸಭೆ	:	ವೈದಿಕ ಸಮಾರಂಭಗಳಲ್ಲಿ ನಡೆಯುವ ವೈದಿಕ ಲೌಕಿಕರ ಸಮಾವೇಶ.
ಸಮುದ್ರಯಾನ	:	ಸ್ಮೃತಿಗಳು ಬ್ರಾಹ್ಮಣನಿಗೆ ಸಮುದ್ರಯಾನವನ್ನು ನಿಷೇಧಿಸಿವೆ.
ಸಲಾಮರ	:	ಇಡೀ ಮರದ ನೇರವಾದ ಬಲಿತ ದಿಮ್ಮಿ (ಸಲೆ = ಚೆನ್ನಾದುದು?)
ಸರ್ವಶಿಷ್ಟ (ಸರ್ವಶ್ರೇಷ್ಠ)	:	ಎಲ್ಲರಿಗಿಂತ ಮಿಗಿಲಾದ ಆಚಾರ, ಪಾಂಡಿತ್ಯ, ಸಭ್ಯತೆ ಉಳ್ಳವರು. ಮರಿತಮ್ಮನಹಳ್ಳಿಯಲ್ಲಿ ಇದ್ದ ವೈದಿಕರೊಬ್ಬರ ಅನುಷ್ಠಾನದಿಂದ ಪ್ರಭಾವಿತರಾಗಿ ಸಾಮಾಜಿಕರು ಹಾಗೆ ಕರೆಯುತ್ತಿದ್ದರು.
ಸೋಮಸೂತ್ರ	:	ಮಳೆ ಬಾರದಾಗ ಮಳೆ ಬರಲೆಂದು ಸೋಮಸೂತ್ರ ಕಟ್ಟುತ್ತಾರೆ. ಅದಕ್ಕಾಗಿ ಈಶ್ವರನಿಗೆ ಅಭಿಷೇಕ ಮಾಡಿ ಲಿಂಗ ಮುಳುಗುವಂತೆ ಜಲಾಭಿಷೇಕ ನಡೆಯುತ್ತದೆ.
ಸಂಕಲಿಕೆ ಸೀರೆ	:	ವಧುವಿಗೆ ತಾಯಿಯ ಮನೆಯವರು 'ಧಾರೆ ಸೀರೆ' ತಂದರೆ ಗಂಡನ ಮನೆಯವರು ಮಾಂಗಲ್ಯ ಕಟ್ಟುವಾಗ ವಧು ಉಡಬೇಕಾದ ಸೀರೆ ತರುತ್ತಾರೆ. ಅದು ಸಂಕಲಿಕೆ ಸೀರೆ; ಅರಿಶಿನ ಬಣ್ಣದ್ದು. ಅದು ನೂಲಿನ ಸೀರೆ, ಬೇಗ ಅದು ಹರಿದುಹೋಗಬೇಕೆಂಬುದು ಉದ್ದೇಶ. ಅದನ್ನು ದ್ರಾವಿಡ ಮಾದರಿಯಲ್ಲಿ ಉಡುತ್ತಾರೆ. ಅಂದು ಮುಂದಿನ ಎಲ್ಲ ಶಾಸ್ತ್ರಗಳ ವೇಳೆಯೂ ವಧುವು ಅದೇ ಸೀರೆ ಉಟ್ಟಿರುತ್ತಾಳೆ.
ಸಂಕಲ್ಪ	:	ತಾನು ಮಾಡಬೇಕೆಂದಿರುವ ಕರ್ಮವನ್ನೂ, ಉದ್ದೇಶವನ್ನೂ ವೈದಿಕ ಕರ್ಮದ ಪ್ರಾರಂಭದಲ್ಲಿ ನಿರೂಪಿಸುವ ವಿಧಿ.
ಸಂಧ್ಯಾವಂದನೆ	:	ತ್ರಿಕಾಲಗಳಲ್ಲಿಯೂ ಮಾಡುವ ದೇವತಾ ವಂದನೆ.
ಹರ್ವಾಲೆ ಹ್ಞಾ	:	'ಹರಿಒಲೆ' ಎಂಬುದು 'ಹರ್ವಾಲೆ' ಆಗಿದೆ; (ಹರಿಒಲೆ) 'ಮನೆ' ಯು 'ಹ್ಞಾ' ಆಗಿದೆ.
ಹವ್ಯಕವ್ಯ	:	ದೇವತೆಗಳಿಗೆ ಮತ್ತು ಪಿತೃಗಳಿಗೆ ನೀಡುವ ಆಹುತಿ.

ಗ್ರಂಥದ ಬಗೆಗೆ

೧

ಈ ನಿಬಂಧದಲ್ಲಿ ಸಂಕೇತಿ ಸಮುದಾಯವನ್ನು ಕುರಿತು ಆಳವಾದ, ಶಾಸ್ತ್ರೀಯವಾದ ಹಾಗೂ ಸಮಗ್ರವಾದ ಅಧ್ಯಯನವನ್ನು ಮಾಡಲಾಗಿದೆ. ಕರ್ನಾಟಕವನ್ನು ಮೂಲವಾಗಿಟ್ಟುಕೊಂಡು ಸಂಕೇತಿಗಳನ್ನು ಕುರಿತ ಅಧ್ಯಯನವನ್ನು ಇಲ್ಲಿ ಮಾಡಲಾಗಿದೆ. ಸಂಕೇತಿಗಳನ್ನು ಕುರಿತು ಹಿಂದೆ ಪ್ರಕಟವಾದ ಹೆಚ್ಚಿನ ಎಲ್ಲಾ ಗ್ರಂಥಗಳನ್ನೂ ಲೇಖನಗಳನ್ನೂ ಮೌಖಿಕ ಸಂಪ್ರದಾಯಗಳನ್ನೂ ವಿವಿಧ ಮೂಲಗಳಿಂದ ದೊರೆತ ಅನೇಕ ಮಾಹಿತಿಗಳನ್ನೂ ಈ ಅಧ್ಯಯನದಲ್ಲಿ ಬಳಸಿಕೊಳ್ಳಲಾಗಿದೆ.

ಉಪಸಮುದಾಯವೊಂದರ ಅಧ್ಯಯನಕ್ಕೆ ಈ ನಿಬಂಧ ಉತ್ತಮ ಮಾದರಿಯಾಗಬಲ್ಲುದು. ದೊರೆಯಬಹುದಾದ ಎಲ್ಲಾ ಮೂಲಗಳಿಂದ ಮಾಹಿತಿಗಳನ್ನು ಕಲೆ ಹಾಕಿರುವುದು ಮತ್ತು ಶಾಸ್ತ್ರೀಯವಾದ ವ್ಯಾಪಕವಾದ ವೈವಿಧ್ಯಪೂರ್ಣವಾದ ಕ್ಷೇತ್ರಕಾರ್ಯ ನಡೆಸಿರುವುದು ಸಂಶೋಧಕರ ಪ್ರಾಮಾಣಿಕ ಶ್ರದ್ಧೆ, ಶ್ರಮ ಹಾಗೂ ಆಸಕ್ತಿಗೆ ಉತ್ತಮ ನಿದರ್ಶನವಾಗಿದೆ.

ತಮ್ಮದೇ ಆದ ಭಾಷೆ, ವೃತ್ತಿ ಮತ್ತು ಸಾಹಿತ್ಯವನ್ನು ಹೊಂದಿದ ಸಂಕೇತಿಗಳ ವಿಶಿಷ್ಟ ಜೀವನ ವಿಧಾನ ಮತ್ತು ಸಂಸ್ಕೃತಿಗಳು ತೀವ್ರವಾಗಿ ಸಾಮಾನ್ಯೀಕರಣಕ್ಕೆ ಒಳಗಾಗಿ ಅವರ ಪಾರಂಪರಿಕ ಬದುಕು ತನ್ನ ವ್ಯಾಪಕತೆಯನ್ನೂ ತೀವ್ರತೆಯನ್ನೂ ಅತಿ ಬೇಗನೇ ಕಳೆದುಕೊಳ್ಳುತ್ತಿರುವ ಸಂಧಿಕಾಲದಲ್ಲಿ ಈ ಸಂಶೋಧನೆ ನಡೆದಿರುವುದು ಸಕಾಲಿಕವೂ ಪ್ರಯೋಜನಕಾರಿಯೂ ಆಗಿದೆ. ಇದು ಕನ್ನಡದಲ್ಲಿ ಬ್ರಾಹ್ಮಣರ ಉಪಸಮುದಾಯವೊಂದನ್ನು ಕುರಿತು ನಡೆಸಿದ ಮೊದಲ ಅಧ್ಯಯನವಾಗಿದೆ. ಮಾನವ ಸಮಾಜದ ಒಟ್ಟು ಜೀವನ ಹಾಗೂ ಸಂಸ್ಕೃತಿಯನ್ನು ಗುರುತಿಸುವ ದೃಷ್ಟಿಯಿಂದ ವಿವಿಧ ಸಮಾಜಗಳನ್ನು ಕುರಿತ ಪ್ರತ್ಯೇಕ ಅಧ್ಯಯನಗಳು ಅವಶ್ಯವಾಗಿವೆ.

ಸಂಗ್ರಹಿಸಿದ ಮಾಹಿತಿಗಳನ್ನು ವ್ಯವಸ್ಥಿತವಾಗಿ ಸಂಶೋಧನಾ ಶಾಸ್ತ್ರಕ್ಕನುಗುಣವಾಗಿ ಉತ್ತಮರೀತಿಯಲ್ಲಿ ಆಧಾರಸಹಿತ ವಿಶ್ಲೇಷಿಸಲಾಗಿದೆ. ವಿವಿಧ ಅಭಿಪ್ರಾಯಗಳ ಮಂಡನೆ, ಖಂಡನೆ ಮುಂತಾದುವು ಆಧಾರಸಹಿತವೂ ಸಮರ್ಥನೀಯವೂ ಆಗಿವೆ. ಸಂಶೋಧನೆಯಲ್ಲಿ ಸಂಶೋಧಕರಿಗಿರುವ ತೀವ್ರ ಕಾಳಜಿ ಈ ನಿಬಂಧದಲ್ಲಿ ಎದ್ದು ಕಾಣುತ್ತದೆ. ನಿಬಂಧದ ಭಾಷೆಯೂ ಚೆನ್ನಾಗಿದೆ. ಸಂಕೇತಿಗಳ ಸಾಂಸ್ಕೃತಿಕ ವೈಶಿಷ್ಟ್ಯವನ್ನು ಗುರುತಿಸುವುದೇ ಈ ನಿಬಂಧದ ಪ್ರಧಾನ ಆಶಯವಾಗಿರುವುದನ್ನು ಗಮನಿಸಬಹುದಾಗಿದೆ. ಕೆಲವೊಂದು ಅಂಶಗಳು ಮೊದಲ ಬಾರಿಗೆ ಈ ನಿಬಂಧದಲ್ಲಿ ನಿರೂಪಿತವಾಗಿರುವುದು ಗಮನಾರ್ಹವಾಗಿದೆ. ಅನುಬಂಧದಲ್ಲಿ ನೀಡಿದ ಮಾಹಿತಿಗಳನ್ನು, ವಿವರಗಳನ್ನು, ಫೋಟೋ, ನಕ್ಷೆ ಹಾಗೂ ವಿವಿಧ ಪಟ್ಟಿಗಳನ್ನು ಅವಲೋಕಿಸಿದಾಗ ಸಂಶೋಧಕರು ಈ ನಿಬಂಧ ರಚನೆಗಾಗಿ ನಡೆಸಿದ ಪ್ರಾಮಾಣಿಕ ಪ್ರಯತ್ನದ ಅರಿವಾಗುತ್ತದೆ.

ಡಾ. ಎ. ಶ್ರೀಕೃಷ್ಣಭಟ್
ಕನ್ನಡ ವಿಭಾಗದ ಮುಖ್ಯಸ್ಥರು
ಮದರಾಸು ವಿಶ್ವವಿದ್ಯಾಲಯ

೨

'Sanketigalu ondu adhyayana' by Pranatartiharan is a total study in this respect. I have gone through the thesis. Sri Pranatartiharan has studied and presented in the thesis their religion, culture, language and their folklore in detail. For all these it requires field work and from his work it is clear that he has done lot of field work for collecting the materials. Also he has referred a lot of books for the collation of this work. The thesis is excellently presented with some hand drawn diagrams and lot of photographs at appropriate places. The work is a very good contribution to the Kannada literature in general and to the researchers in the area of language literature and culture in particular. The methodology he has adopted is proper. His style is simple and direct.

Dr. M. Rama
Professor in Kannada and Linguistics
University of Kerala

೩

ಕೈಗಾರಿಕೀಕರಣ, ನಗರೀಕರಣದಿಂದಾಗಿ ಆಗುತ್ತಿರುವ ಸಾಮಾಜಿಕ ಸ್ಥಿತ್ಯಂತರದ ಈ ಸಂಧಿಕಾಲದಲ್ಲಿ ಇದೇ ಮೊದಲ ಬಾರಿಗೆ ಸಂಕೇತಿಗಳನ್ನು ಕುರಿತ ಒಂದು ವ್ಯಾಪಕ ಅಧ್ಯಯನ ತೀರ ಅಗತ್ಯದ ಕಾರ್ಯವಾಗಿತ್ತು. ಈ ಕಾರ್ಯವನ್ನು ಬಹು ಶ್ರದ್ಧಾಸಕ್ತಿಗಳಿಂದ ಯಶಸ್ವಿಯಾಗಿ ನಿರ್ವಹಿಸಿರುವ ಒಂದು ನಿದರ್ಶನವೆಂದರೆ ಶ್ರೀ ಬಿ. ಎಸ್. ಪ್ರಣತಾರ್ತಿಹರನ್ ಅವರ ಪ್ರಕೃತ ನಿಬಂಧ.

ಈ ಪಿಎಚ್.ಡಿ. ನಿಬಂಧ ಸಂಕೇತಿಗಳ ಜೀವನ ಮತ್ತು ಸಂಸ್ಕೃತಿಯನ್ನು ಸಮಗ್ರ ಹಿನ್ನೆಲೆಯಲ್ಲಿ ಅಭ್ಯಸಿಸಿದ ಒಂದು ವೈಜ್ಞಾನಿಕ ದೃಷ್ಟಿಯ ಜಾನಪದೀಯ ಸಂಶೋಧನೆಯಾಗಿದೆ. ಕೇರಳ, ತಮಿಳುನಾಡು ಮತ್ತು ಕರ್ನಾಟಕದ ಕೆಲವೆಡೆ ನೆಲೆಸಿರುವ ಸಂಕೇತಿಗಳು ತಮ್ಮ ಮೂಲ ಸಂಸ್ಕೃತಿಯನ್ನು ಉಳಿಸಿಕೊಂಡೇ ಸದ್ಯ ತಾವು ನೆಲೆಸಿರುವ ಆಯಾ ಪ್ರದೇಶದ ಭಾಷೆ, ಸಂಸ್ಕೃತಿ ಮತ್ತು ಧರ್ಮವನ್ನು ಅಳವಡಿಸಿಕೊಂಡು ಹೇಗೆ ಬದುಕು ನಡೆಸುತ್ತಿದ್ದಾರೆಂಬುದನ್ನು ತಿಳಿಯಲು ಈ ಅಧ್ಯಯನ ಸಹಾಯಕವಾಗಿದೆ.

ಮುಖ್ಯವಾಗಿ ಕರ್ನಾಟಕದ ಸಂಕೇತಿಗಳನ್ನೂ ಗಮನದಲ್ಲಿಟ್ಟುಕೊಂಡು ಹೀಗೆ ಎರಡು ಸಂಪುಟಗಳಲ್ಲಿ ಸಿದ್ಧಪಡಿಸಿರುವ ಈ ನಿಬಂಧವನ್ನು ಆಮೂಲಾಗ್ರವಾಗಿ ಓದಿ ನನಗೆ ಸಮಾಧಾನವೂ ಸಂತೋಷವೂ ಆಗಿದೆ. ಒಂದು ಸಮುದಾಯವಾಗಿ ಸಂಕೇತಿಗಳನ್ನು, ಅವರ ಬದುಕು ಮತ್ತು ಸಂಸ್ಕೃತಿಯನ್ನು ಅವರದೇ 'ಲೋಕದೃಷ್ಟಿ'ಯಿಂದ (world view) ವಿವೇಚಿಸಿ ಬಹು ನಿರ್ಣಾಯಕವಾದ ತೀರ್ಮಾನಗಳಿಗೆ ಇಲ್ಲಿ ಬರಲಾಗಿದೆ. ಇಲ್ಲಿ ಅನುಸರಿಸಿರುವ ವೈಧಾನಿಕತೆಯಂತೂ (methodology) ಉಪಸಂಸ್ಕೃತಿಯೊಂದರ (sub-culture) ಅಧ್ಯಯನಕ್ಕೆ ತಕ್ಕುದಾಗಿದೆ. ಸಂಶೋಧಕರು ಇಲ್ಲಿ ತಮಗೆ ದೊರಕಬಹುದಾದ ಎಲ್ಲ ಮೂಲಗಳಿಂದಲೂ ಮಾಹಿತಿಗಳನ್ನು ದೊರಕಿಸಿಕೊಂಡು ವೈಜ್ಞಾನಿಕ ರೀತಿಯಲ್ಲಿ ವಿಷಯವನ್ನು ಗ್ರಹಿಸಿ ಗಂಭೀರವೂ ಶಾಸ್ತ್ರೀಯವೂ ಆದ ಚೌಕಟ್ಟಿನಲ್ಲಿ ಮಂಡಿಸಿ ಯಾವ ಪೂರ್ವಗ್ರಹಕ್ಕೂ ಗುರಿಯಾಗದೆ ಅರ್ಥಪೂರ್ಣ ರೀತಿಯಲ್ಲಿ ವಿಚಾರಗಳನ್ನು ಪ್ರತಿಪಾದಿಸಿರುವುದು ಸಂಶೋಧಕರ ವೈಜ್ಞಾನಿಕ ದೃಷ್ಟಿಗೆ ಉತ್ತಮ ನಿದರ್ಶನವಾಗಿದೆ. ವಿಷಯ ಪ್ರತಿಪಾದನೆಗೆ ಅಗತ್ಯ ಎನಿಸಿದೆಡೆಗಳಲ್ಲಿ ಟಿಪ್ಪಣಿಗಳು, ರೇಖಾಚಿತ್ರಗಳು, ಛಾಯಾಚಿತ್ರಗಳನ್ನು

ಒದಗಿಸಿರುವುದು ಗಮನಾರ್ಹ. ಎಲ್ಲಕ್ಕಿಂತ ಹೆಚ್ಚಾಗಿ ವಿವಿಧ ವಿದ್ವಾಂಸರ ಅಭಿಪ್ರಾಯಗಳ ಮಂಡನೆ, ಖಂಡನೆಗಳನ್ನು ಆಧಾರಸಹಿತವಾಗಿ ವಸ್ತುನಿಷ್ಠವಾಗಿ ಸಾದರಪಡಿಸಿರುವುದು ಈ ನಿಬಂಧದ ಹೆಚ್ಚುಗಾರಿಕೆಯಾಗಿದೆ. ಒಟ್ಟಿನಲ್ಲಿ ಉತ್ತಮ ಸಂಶೋಧಕನ ಎಲ್ಲ ಉತ್ತಮ ಗುಣಗಳನ್ನು ಮೈಗೂಡಿಸಿಕೊಂಡಿರುವ ಈ ನಿಬಂಧಕಾರರು ಮುಂದೆ ನಡೆಯಲಿರುವ ಈ ಬಗೆಯ ಸಂಶೋಧನೆಗೆ ಉತ್ತಮ ಮೇಲ್ಪಂಕ್ತಿ ಹಾಕಿಕೊಟ್ಟಿದ್ದಾರೆ. ಈ ದೃಷ್ಟಿಯಿಂದ ಪ್ರಕೃತ ನಿಬಂಧ ಕನ್ನಡ ಸಾಹಿತ್ಯ ಕ್ಷೇತ್ರಕ್ಕೆ ಸಂದ ಉತ್ತಮ ಕೊಡುಗೆಯಾಗಿದ್ದು ಕರ್ನಾಟಕದ ಉಪ-ಸಂಸ್ಕೃತಿ ಅಧ್ಯಯನದ ಅತ್ಯುತ್ತಮ ಮಾದರಿಯಾಗಿದೆ.

ಡಾ. ಅಂಬಳಿಕೆ ಹಿರಿಯಣ್ಣ
ರೀಡರ್, ಜಾನಪದ
ಕನ್ನಡ ಅಧ್ಯಯನ ಸಂಸ್ಥೆ
ಮಾನಸಗಂಗೋತ್ರಿ, ಮೈಸೂರು

ಳ

. . . ಮೊನ್ನೆ ಅಕಸ್ಮಾತ್ ನಿಮ್ಮ ವಿದ್ವತ್ಪೂರ್ಣ ನಿಬಂಧದ ಪ್ರಥಮಭಾಗ ಸಿಕ್ಕಿದಾಗ ಅತ್ಯಂತ ಕ್ಷುದ್ಬಾಧೆಗೊಳಗಾದವ ಬಕಬಕನೆ ತಿನ್ನುವಂತೆ ಓದಿದೆ. . . ನಿಮ್ಮ ನಿಬಂಧ ತುಂಬಾ ಚೆನ್ನಾಗಿದೆ. ಆ ವಿಷಯ ಸಂಗ್ರಹಣೆಯ ಹಿಂದಿರುವ ಶ್ರಮ ಸಾರ್ಥಕವಾಗಿದೆ.

ಡಾ. ಎ. ಜಿ. ಸುಬ್ಬರಾವ್
20-9-1993

ಙ

ನಾನು ಕೊಳ್ಳೇಗಾಲದ ಮಹದೇಶ್ವರ ಕಾಲೇಜಿನಲ್ಲಿ ಕನ್ನಡ ವಿಭಾಗದ ಮುಖ್ಯಸ್ಥನಾಗಿದ್ದಾಗ ಡಾ. ಬಿ.ಎಸ್. ಪ್ರಣತಾರ್ತಿಹರನ್ ಅವರು, ಕನ್ನಡ ಅಧ್ಯಾಪಕರಾಗಿ ಬಂದರು. ಬಹಳ ಶ್ರದ್ಧೆಯಿಂದ ಪಾಠ ಪ್ರವಚನ ಮಾಡಿ ವಿದ್ಯಾರ್ಥಿಗಳ ಗಮನ ಸೆಳೆದರು. ಸ್ನೇಹ ಪ್ರೀತಿಯಲ್ಲಿ ಅಧ್ಯಾಪಕರಿಗೆ ಹತ್ತಿರ ಆದರು. ಅವರ ಸಾಹಿತ್ಯಪ್ರೀತಿ ಕಂಡು ಅವರ ಬರಹಗಳನ್ನು ಕುರಿತು ವಿಚಾರಿಸುತ್ತಿದ್ದಾಗ ಪಿಹೆಚ್.ಡಿಗಾಗಿ ಸಂಕೇತಿ ಸಮುದಾಯದ ಅಧ್ಯಯನದಲ್ಲಿ ತೊಡಗಿ ಕರ್ನಾಟಕ, ಕೇರಳ, ತಮಿಳುನಾಡುಗಳಲ್ಲಿ ಸಂಚರಿಸಿ ಬಹು ಪರಿಶ್ರಮದಿಂದ ಹಲವಾರು ವರ್ಷಗಳ ಅವಧಿಯಲ್ಲಿ ಅಪಾರ ಸಾಮಗ್ರಿ ಕಲೆಹಾಕಿದ್ದು ಗಮನಕ್ಕೆ ಬಂದಿತು. ಸಂಶೋಧನಾ ಗ್ರಂಥ ರಚನೆಯನ್ನು ಚುರುಕುಗೊಳಿಸಿ ಎಂದು ಪ್ರೋತ್ಸಾಹಿಸಿದೆ. ಅವರು ಕಲೆ ಹಾಕಿದ ಸಾಮಗ್ರಿ ಕಂಡು ನಿಬ್ಬೆರಗಾದೆ.

ಸಂಕೇತಿ ಸಮುದಾಯದ ಯಾವುದೇ ಒಂದು ಮುಖದ ಅಧ್ಯಯನವನ್ನು ಗುರಿಯಾಗಿಟ್ಟುಕೊಳ್ಳದೆ ಸರ್ವತೋಮುಖ ಅಧ್ಯಯನ ನಡೆಸಿದ್ದರು. ಸಾಂಸ್ಕೃತಿಕ ಅಧ್ಯಯನಕ್ಕೆ ಬೇಕಾದ ಎಲ್ಲ ಸಾಮಗ್ರಿ ಸಂಗ್ರಹಿಸಿದ್ದರು. ಐತಿಹಾಸಿಕ, ಸಾಮಾಜಿಕ, ಧಾರ್ಮಿಕ, ಸಾಹಿತ್ಯಿಕ, ಜಾನಪದೀಯ ಎಂಬ ಪಂಚಮುಖೀ ಸ್ವರೂಪದಲ್ಲಿ ಗ್ರಂಥವನ್ನು ರೂಪಿಸಿ ಎಂದಾಗ ಅವರ ಮಾರ್ಗದರ್ಶಕ ಗುರುಗಳಾದ ಅಂಬಳಿಕೆ ಹಿರಿಯಣ್ಣನವರ ನೇತೃತ್ವದಲ್ಲಿ ಕೆಲವೇ ತಿಂಗಳುಗಳಲ್ಲಿ ಸಂಶೋಧನಾ ಗ್ರಂಥವನ್ನು ಸಿದ್ಧಗೊಳಿಸಿದರು. ಹಲವಾರು ವರ್ಷ ಸಂಗ್ರಹಿಸಿದ ಮಾಹಿತಿಯನ್ನೆಲ್ಲ ಒಪ್ಪ ಓರಣವಾಗಿ ಅನುಬಂಧದಲ್ಲಿ ಕೊಡಿ; ಮುಂದೆ ಈ ಕ್ಷೇತ್ರದಲ್ಲಿ ಕೆಲಸ ಮಾಡುವವರಿಗೆ ನೆರವಾಗುತ್ತದೆ ಎಂದೆ. ೧೯೦ ಪುಟಗಳ ಆಕರ ಮಾಹಿತಿಗಳನ್ನು ಅದರಂತೆಯೇ ನೀಡಿದ್ದಾರೆ. ಸಂಕೇತಿಗಳ ನೆಲೆಗಳ ನಕ್ಷೆಗಳು, ಹಬ್ಬಗಳು, ಕುಲಗೋತ್ರಗಳು, ಒಕ್ಕಲು ನೆಲೆಗಳು, ಧಾರ್ಮಿಕ ಗ್ರಂಥಗಳು, ಮನೆದೇವರುಗಳು, ಪಾರಿಭಾಷಿಕ ಪದಸೂಚಿ, ಟಿಪ್ಪಣಿಗಳು, ಆಯ್ದ ವಕ್ತೃಗಳು, ಗ್ರಂಥಲೇಖನಗಳ ಪಟ್ಟಿ ಮತ್ತು ನೂರಾರು ಚಿತ್ರಗಳ ಆಲ್ಬಂ ಇತ್ಯಾದಿಗಳನ್ನು ಜನಗಣತಿ ಮಾದರಿಯಲ್ಲಿ ವೈವಿಧ್ಯಮಯವಾಗಿ

ಹಾಗೂ ಅಗಾಧವಾಗಿ ನೀಡಿದ್ದಾರೆ. ಈ ಪ್ರಬಂಧದ ವಿಶೇಷ ಇದು ಎಂದರೆ ತಪ್ಪಾಗದು.

ಬ್ರಾಹ್ಮಣರ ಉಪಪಂಗಡಗಳಲ್ಲಿ ಒಂದಾದ ಸಂಕೇತಿ ಸಮುದಾಯವನ್ನು ಕುರಿತ ಇಷ್ಟೊಂದು ವೈವಿಧ್ಯಮಯವಾದ ಅಧ್ಯಯನ ಗ್ರಂಥ ಇನ್ನೊಂದಿಲ್ಲ ಎಂದರೆ ತಪ್ಪಾಗದು. ಈ ದೃಷ್ಟಿಯಿಂದ ಸಂಕೇತಿಗಳು ವಿಶೇಷವಾಗಿ ನೆಲೆಸಿರುವ ಕೇರಳ, ತಮಿಳುನಾಡಿನ ಬಾಂಧವರಿಗೆ ತಿಳಿಯಲು ಈ ಗ್ರಂಥ ಮಲೆಯಾಳಂ ಮತ್ತು ತಮಿಳು ಭಾಷೆಗಳಿಗೆ ಅನುವಾದ ಆಗುವುದು ಅಗತ್ಯವಾಗಿದೆ. ಅಷ್ಟೇ ಅಲ್ಲ, ತುರ್ತಾಗಿ ಇಂಗ್ಲಿಷಿಗೆ ಅನುವಾದ ಆಗುವುದು ಅಗತ್ಯ. ಏಕೆಂದರೆ ಕನ್ನಡನಾಡಿನಲ್ಲಿ ನಡೆದಿರುವ ಈ ಶೋಧನೆಯ ವಿಚಾರಗಳು ಜಗತ್ತಿನ ಇತರ ಭಾಗದಲ್ಲಿರುವವರಿಗೂ ತಿಳಿಯಬೇಕಾಗಿದೆ.

ಇನ್ನೊಂದು ವೈಶಿಷ್ಟ್ಯವೆಂದರೆ ಅಪಾರ ಗ್ರಂಥಲೇಖನ ಅಧ್ಯಯನದ ಜೊತೆಗೆ ಜನಸಂಪರ್ಕದಿಂದ ಕ್ಷೇತ್ರಕಾರ್ಯ ನಡೆಸಿರುವುದು. ಇದರ ಫಲವಾಗಿ ಪುಟಪುಟದಲ್ಲೂ ಸಂಕೇತಿ ಸಮುದಾಯದ ಸತ್ಯದರ್ಶನ ಆಗುತ್ತದೆ. ಸಂಕೇತಿ ಜನರ ಬದುಕಿನ ವಾಸ್ತವ ನೋಟ ಸಿಗುತ್ತದೆ. ಲೇಖಕರು ತೌಲನಿಕ ಅಧ್ಯಯನ ಮಾಡದೆ ಕೇವಲ ಸಂಕೇತಿ ಸಮುದಾಯದ ಸಮಗ್ರ ಚಿತ್ರಣ ನೀಡುವಲ್ಲಿ ಲಕ್ಷ್ಯವಿರಿಸಿರುವುದರಿಂದ ಸಂಕೇತಿ ಜನರ ಸೂಕ್ಷ್ಮ ನೋಟಗಳು ಇಲ್ಲಿವೆ.

ಇಂದು ಕನ್ನಡದಲ್ಲಿ ನೂರಾರು ಪ್ರಬಂಧಗಳು ಪ್ರಕಟವಾಗುತ್ತಿವೆ. ಅವುಗಳಲ್ಲಿ ಸಮುದಾಯಗಳ ಬಗ್ಗೆ ಕ್ಷೇತ್ರಕಾರ್ಯವನ್ನಾಧರಿಸಿ ಮಾಡಿದ ಸಮಗ್ರ ಅಧ್ಯಯನದ ಗ್ರಂಥಗಳು ವಿರಳ. ಆ ಪೈಕಿ ಒಂದಾದ ಈ ಗ್ರಂಥವು ಸಮುದಾಯವೊಂದರ ಅಧ್ಯಯನಕ್ಕೆ, ಅದರಲ್ಲೂ ಬ್ರಾಹ್ಮಣರ ಉಪಪಂಗಡಗಳ ಅಧ್ಯಯನಕ್ಕೆ ಮಾದರಿಯಾದ ಗ್ರಂಥವಾಗಿದೆ.

ಡಾ.ಚಿದಾನಂದ ಮೂರ್ತಿ ಅವರು ಸಾಂಸ್ಕೃತಿಕ ಅಧ್ಯಯನದ ಮಾದರಿಯ ಮಹಾಪ್ರಬಂಧವನ್ನು ಮೊದಲ ಬಾರಿಗೆ ಕನ್ನಡದಲ್ಲಿ ರಚಿಸಿ ಆ ಬಗೆಯ ಪ್ರಬಂಧ ರಚಕರಿಗೆ ಮಾದರಿಯಾದರು. ಅಂತೆಯೇ ಡಾ.ಬಿ.ಎಸ್. ಪ್ರಣತಾರ್ತಿಹರನ್ ಅವರು ಬ್ರಾಹ್ಮಣ ಉಪಪಂಗಡವೊಂದರ ಸಮಗ್ರ ಸಮುದಾಯ ಅಧ್ಯಯನದ ಮಾದರಿ ಗ್ರಂಥ ರಚಿಸಿ ಉಳಿದ ಮುಂಬರುವ ಸಂಶೋಧಕರಿಗೆ ಮಾರ್ಗದರ್ಶಕರೆನಿಸಿದ್ದಾರೆ. ಅವರಿಗೆ ನನ್ನ ಅಭಿನಂದನೆಗಳು.

ಪ್ರೊ. ಜಿ. ಅಶ್ವತ್ಥನಾರಾಯಣ

೬

ಇದು ಸಮಗ್ರ ಸಂಕೇತಿಗಳ ಸಮಗ್ರ ಬದುಕಿನ ಬಗೆಗೆ ಬಂದಿರುವ ಆಶಯಾತ್ಮಕ ನಿಬಂಧ. ಇದರ ಮೂಲದಲ್ಲಿ ಒಂದೊಂದು ಸಣ್ಣ ಅಂಶದ ಬಗೆಗೂ ವಿಸ್ತಾರವಾದ ಕ್ಷೇತ್ರಕಾರ್ಯ, ಅಪಾರ ಮಾಹಿತಿಯ ಸಂಗ್ರಹ, ಆಳವಾದ ತರ್ಕಬದ್ಧ ಚಿಂತನೆಯ ಕೃಷಿ ನಡೆದಿರುವುದರ ಲಕ್ಷಣವಿದೆ; ಇದರ ಹಿಂದೆ ಪ್ರಾಮಾಣಿಕತೆ ಇದೆ, ಪರಿಶ್ರಮವಿದೆ; ಸಮಗ್ರತೆಯ ಅಪೇಕ್ಷೆ ಕೆಲಸ ಮಾಡಿದೆ. ನಿಬಂಧಕ್ಕೆ ಒಂದು ಉದ್ದಿಷ್ಟ ಚೌಕಟ್ಟು ಇದೆ; ಅದಕ್ಕೆ ಅನುಗುಣವಾಗಿ ವಿಸ್ತಾರವೂ ವೈವಿಧ್ಯಪೂರ್ಣವೂ ಸಂಕೀರ್ಣವೂ ಆದ ವಸ್ತು ವಿಷಯವನ್ನು ನಿರ್ವಹಿಸಿರುವುದು ಕಾಣುತ್ತದೆ; ಅದರಲ್ಲಿಯೇ ಒಂದು ಸಿದ್ಧಿ ಇದೆ. ನಿಬಂಧದ ಗಾತ್ರಮಿತಿಯು ಅದರ ಸ್ವರೂಪವನ್ನು ನಿರ್ದೇಶಿಸಿರುವುದು ಸಹಜವಾಗಿದೆ; ಅದರಿಂದಾಗಿ ವಿವರವಾದ ಬಹಳಷ್ಟು ಸಾಮಗ್ರಿ ಹಿನ್ನೆಲೆಯಲ್ಲಿ ಉಳಿದಿದೆ; ಮುದ್ರಿತ ಆವೃತ್ತಿಯು ಓದುಗನ ಅಗತ್ಯಕ್ಕಾಗಿ ಮತ್ತಷ್ಟು ನೇರವೂ ಸರಳವೂ ಆಗಿದೆ. ಆದರೂ, ಹೀಗೆ ನೇರವಾಗಿ ಬಳಸಿಕೊಳ್ಳಲಾಗದೆ ಹೋದ ಮಾಹಿತಿಯನ್ನು ಲೇಖಕರು ವಿಸ್ತೃತ ಸಂಶೋಧನೆಯೊಡನೆ ಆಧಾರಪಾಠ್ಯಗಳ ರೂಪದಲ್ಲಿ ಪ್ರಕಟಿಸುತ್ತಿದ್ದಾರೆ. ಇದು ಅವರ ಸಂಶೋಧನಾವೃತ್ತಿಯು ಜೀವಂತವಾಗಿರುವುದನ್ನೇ ಪ್ರಕಟಿಸುತ್ತದೆ. ಜೊತೆಗೆ ಸಂಸ್ಕೃತಿಯ ಬಗೆಗೆ ಕ್ಷೇತ್ರಕಾರ್ಯ ಮಾಡಿಯೇ ನಿಬಂಧವನ್ನು ನಿರ್ವಹಿಸಬೇಕಾದವರ ಬಹುಶ್ರಮಕ್ಕೂ ಇದು ಕನ್ನಡಿಯಾಗಿದೆ. ಸಮುದಾಯದ ನಿಕಟ ಪರಿಚಯ ಇರುವವರು ಇದರ ಚಾರಿತ್ರಿಕ ದರ್ಶನಕ್ಕೆ ಕುರುಡಾಗಬಾರದು; ಸಾರ್ವತ್ರಿಕ ವಸ್ತುವಷ್ಟನ್ನೇ ಇಷ್ಟಪಡುವವರು ಇಲ್ಲಿನ ಸಂಸ್ಕೃತಿ ಘಟಕದ ವಿಶಿಷ್ಟ ನೋಟವನ್ನು ಉಪೇಕ್ಷಿಸಬಾರದು. ಇಷ್ಟರಮೇಲೆ, ಇವುಗಳ ನಿರೀಕ್ಷೆಯಲ್ಲಿ ಕಳೆದುಹೋಗದೆ ತಮ್ಮ ಸಂಶೋಧನಾಕಾರ್ಯದಲ್ಲಿಯೇ ಇಷ್ಟಾರ್ಥ ಕಾಣುತ್ತಿರುವ ಡಾ.ಪ್ರಣತಾರ್ತಿಹರನ್ ಅವರದು ಅನುಕರಣೀಯ ಮಾದರಿಯಾಗಿದೆ.

ಡಾ. ಬಿ.ಎಸ್. ನರಹರಿ

ಸಾಮಾಜಿಕಪ್ರಜ್ಞೆಗೆ ನಮಸ್ಕಾರ

ವಿಶ್ವಕುಟುಂಬದ ಗೌರವಾನ್ವಿತ ಸದಸ್ಯ
ಡಾ. ಆರ್.ಎಸ್. ಚಂದ್ರಶೇಖರಮೂರ್ತಿ

ಚಿಕಿತ್ಸೆಯ ಬಹುಕ್ಷೇತ್ರಗಳಲ್ಲಿ ಪರಿಣತರಾದ ಮೇಧಾವೀ ವೈದ್ಯ ಡಾ.ಚಂದ್ರಶೇಖರಮೂರ್ತಿ, ಎಂ.ಡಿ., ಎಫ್.ಆರ್.ಸಿ.ಎಸ್.(ಇಂಗ್ಲೆಂಡ್), ಎಫ್.ಆರ್.ಸಿ.ಎಸ್.(ಎಡಿನ್‌ಬರೊ) ಎಫ್.ಎ.ಸಿ.ಎಸ್., ಡಿಪ್ಲೊಮೇಟ್ ಅಮೆರಿಕನ್ ಬೋರ್ಡ್ ಆಫ್ ಸರ್ಜರಿ, ಹೈ ಡೆಸರ್ಟ್ ಮೆಡಿಕಲ್ ಗ್ರೂಪ್, ಹೆರಿಟೇಜ್ ಹೆಲ್ತ್ ಕೇರ್, ಕ್ಯಾಲಿಫೋರ್ನಿಯಾ, ಯು.ಎಸ್.ಎ., ಅವರು ಹುಟ್ಟಿದ್ದು ಹಾಸನ ಜಿಲ್ಲೆಯ ಕಟ್ಟೇಪುರಗ್ರಾಮದ ಗಂಗಾಧರಶಾಸ್ತ್ರಿಗಳ ವಂಶದಲ್ಲಿ; ವೈದ್ಯರಾಗಿ ರೂಪುಗೊಂಡುದು ಮೈಸೂರಿನಲ್ಲಿ; ವಿಸ್ತೃತ ಅಧ್ಯಯನದ ಮೂಲಕ ವೃತ್ತಿನೈಪುಣ್ಯದ ಎತ್ತರಗಳನ್ನೇರಿ ತಮ್ಮ ಅಮೂಲ್ಯ ವೈದ್ಯಕೀಯ ಸೇವೆ ಸಲ್ಲಿಸಿದ್ದು ಭಾರತ, ಇಂಗ್ಲೆಂಡ್ ಮತ್ತು ಅಮೆರಿಕಾದಲ್ಲಿ! ಇದೀಗ ಅವರು ಅಮೆರಿಕದ ಘನ ಸೇನೆಯಲ್ಲಿ ಕರ್ನಲ್.

ಅದು 1978ರ ಕಾಲ; ಡಾ. ಮೂರ್ತಿ NORTH CAROLINA STATEನ SPRUCEPINE CITY ಯಲ್ಲಿ ವೈದ್ಯಕೀಯ ಸೇವೆ ಸಲ್ಲಿಸುತ್ತಿದ್ದ ಸಮಯ. ಅಮೆರಿಕದ ಅಧ್ಯಕ್ಷ ರೇಗನ್ ಆ ಪ್ರಾಂತ್ಯದ ಪ್ರವಾಸದಲ್ಲಿದ್ದರು; ಡಾ.ಮೂರ್ತಿ SURGEON ON DUTY ಆಗಿ ವಿಶ್ವದ ಅತಿಪ್ರತಿಷ್ಠಿತ ಅಧ್ಯಕ್ಷರ ವೈದ್ಯಕೀಯ ನಿರ್ವಹಣೆಗಾಗಿ ನಿಯುಕ್ತರಾದರು. ವೃತ್ತಿನೈಪುಣ್ಯಕ್ಕೆ ಮರ್ಯಾದೆಸಂದ ಸನ್ನಿವೇಶ! ಅಂಥ ಗೌರವ ಅವರಿಗೆ ಹಲವು ಬಾರಿ ಸಂದಿದೆ. 1991ರಲ್ಲಿ ಅವರು U.S. ARMY RESERVESನ ಗೌರವಾನ್ವಿತ ಸದಸ್ಯರಾಗಿದ್ದರು; SPECIAL SURGEON ಆಗಿ ಸೇವೆ ಸಲ್ಲಿಸಿದರು; CHARGE OF SURGICAL DEPARTMENT ಆಗಿಯೂ ಇದ್ದರು. NASHVILLE MEDICAL COLLEGEನಲ್ಲಿ SURGERY ಮತ್ತು ANATOMY ವಿಭಾಗಗಳ ಉಪಪ್ರಾಧ್ಯಾಪಕರಾಗಿದ್ದ ಅವರನ್ನು ಅಮೆರಿಕ ಸರ್ಕಾರ ಕೊಲ್ಲಿಯುದ್ಧಕ್ಕೆ ಕಳಿಸಿಕೊಟ್ಟಿತು. OPERATION DESERT SHIELD ಮತ್ತು OPERATION DESERT STORMಗಳಲ್ಲಿ ಸರ್ಜಿಕಲ್ ವಿಭಾಗದ ಮುಖ್ಯಸ್ಥರಾಗಿ ಆರು ತಿಂಗಳು ಸಲ್ಲಿಸಿದ ಅನುಪಮ ಸೇವೆಗಾಗಿ ಸರ್ಕಾರ ಅವರಿಗೆ ಸುವರ್ಣಪದಕ ನೀಡಿ ಗೌರವಿಸಿತು! ಕರ್ತೃತ್ವಶಾಲಿಗಳಿಗೆ ಗುರುತರಜವಾಬ್ದಾರಿಗಳೂ ಗೌರವ ಪ್ರಶಸ್ತಿಗಳೂ ಕಾದಿರುತ್ತವೆ!

ಡಾ. ಚಂದ್ರಶೇಖರಮೂರ್ತಿ (ಜ.1933) ಅವರದು ವಿದ್ವಾಂಸರ ವಂಶ. ಮುಮ್ಮಡಿ ಕೃಷ್ಣರಾಜ ಒಡೆಯರ ಕಾಲದಲ್ಲಿ ರೂಪುಗೊಂಡುದು ಹಾಸನ ಜಿಲ್ಲೆಯ ಕಟ್ಟೇಪುರ ಎಂಬ ಅಗ್ರಹಾರ. ದೇಶದ ಅತಿಶ್ರೇಷ್ಠ ವಿದ್ವಾಂಸರನ್ನು ಒಂದೆಡೆ ಸೇರಿಸಬೇಕೆಂಬ ಮಹತ್ವಾಕಾಂಕ್ಷೆಯಿಂದಲೇ ರೂಪುಗೊಂಡುದು ಅದು. ಅಲ್ಲಿನ ಪ್ರಸಿದ್ಧ ವಿದ್ವಾಂಸ ಗಂಗಾಧರಶಾಸ್ತ್ರಿಗಳ ಒಬ್ಬರೇ ಮಗ ಕೆ.ಜಿ.ಸುಬ್ರಹ್ಮಣ್ಯ ಶಾಸ್ತ್ರಿಗಳು. ಅವರಾದರೋ ಒಂದೇ ಕಾಲಕ್ಕೆ (1924) ಮೈಸೂರಿನ ಮಹಾರಾಜಾ ಕಾಲೇಜಿನಲ್ಲಿ ಓದಿ ಬಿ.ಎ., ಪದವಿಯನ್ನೂ ಮಹಾರಾಜಾ ಸಂಸ್ಕೃತ ಪಾಠಶಾಲೆಯಲ್ಲಿ ಓದಿ ಸಾಹಿತ್ಯ ವಿದ್ವಾನ್ ಪದವಿಯನ್ನೂ ಪಡೆದರು; ನವೀನಂ ರಾಮಾನುಜಾಚಾರ್ಯ ಸುವರ್ಣಪದಕದಿಂದಲೂ ಮರ್ಯಾದಿತರಾದರು. ಸಾಹಿತ್ಯ, ವೇದ, ಶಾಸ್ತ್ರಗಳಲ್ಲಿ ನೈಪುಣ್ಯ ಪಡೆದರು; ಶಾಲಾ ಕಾಲೇಜುಗಳಲ್ಲಿ ಅಧ್ಯಾಪನ ಮಾಡಿದರು; ಮನೆಯಲ್ಲಿ ಗುರುಕುಲ ನಡೆಸಿದರು; ಪುರಾಣ ಪ್ರವಚನಗಳ ಚಕ್ರವರ್ತಿಯಾದರು; ಶಂಕರರ ಮತ್ತು ಅವರ ತತ್ತ್ವಜ್ಞಾನದ ಬಗೆಗಿನ ಅಧಿಕಾರವಾಣಿ ಎನಿಸಿದರು. ಅವರು ಕೈ ಹಿಡಿದದ್ದು ಅಗ್ರಹಾರದ ವೇದಪಾರಂಗತ ಸುಬ್ರಹ್ಮಣ್ಯಾವಧಾನಿಗಳ ಮಗಳು ಗಂಗಮ್ಮನವರನ್ನು. ಈ ದಂಪತಿಗಳ ಏಳು ಗಂಡು ಮಕ್ಕಳಲ್ಲಿ ಮೂರನೆಯವರಾಗಿ ಹುಟ್ಟಿದವರು ಡಾ.ಮೂರ್ತಿ ಅವರು.

ಡಾ.ಮೂರ್ತಿಯವರ ಸಾಧನಾಯುಗದ ಕಥೆಯೂ ಸ್ಫೂರ್ತಿದಾಯಕವಾದದ್ದು; ಹಾಸನದ ಅರಳೇಪೇಟೆ ಪ್ರಾಥಮಿಕ ಶಾಲೆಯಿಂದ ಬಂದು ಬಸವಪಟ್ಟಣದ ಮಾಧ್ಯಮಿಕ ಶಾಲೆಯಲ್ಲಿ ಸೀತಾರಾಮಯ್ಯ ಎಂಬ ಅಧ್ಯಾಪಕರ ಗರಡಿಗೆ ಸೇರಿದಾಗಲೇ ಅವರ ಪ್ರತಿಭೆಯ ಕಣ್ಣು ಕುಡಿಯೊಡೆದಿತ್ತು. ಆ ಕಾಲಕ್ಕೆ ಅವರ ತಂದೆಯವರ ಗುರುಕುಲದ ವಿದ್ಯಾರ್ಥಿಯಾಗಿದ್ದವರು ಪಿ.ವಿ.ಶ್ರೀಕಂಠಯ್ಯನವರು; ಅವರು ಕೊಣನೂರಿನ ಮಾಧ್ಯಮಿಕ ಶಾಲೆಯ ಮುಖ್ಯೋಪಾಧ್ಯಾಯರಾಗಿದ್ದವರು. ತಮ್ಮ ಗುರುಗಳಾದ ಸುಬ್ರಹ್ಮಣ್ಯಶಾಸ್ತ್ರಿಗಳಿಗೆ

ಸಲ್ಲಿಸಬಹುದಾದ ಸಾರ್ಥಕ ಗುರುದಕ್ಷಿಣೆ ಎಂದರೆ ಜಾಣಬಾಲಕ ಚಂದ್ರಶೇಖರನನ್ನು ತಮ್ಮ ಗರಡಿಯಲ್ಲಿ ಪಳಗಿಸುವುದು ಎಂದು ಅವರಿಗೆ ತೋರಿತು. ಗುರುಗಳನ್ನು ಕಾಡಿ ಬೇಡಿ ಆ ಬಾಲಕನನ್ನು ತಮ್ಮ ಶಾಲೆಗೆ ಸೆಳೆದುಕೊಂಡರು. ಅಲ್ಲಿಂದ ಮುಂದಿನದು ತಡೆಯಿಲ್ಲದ ಓಟ: ಮೈಸೂರಿನ ಬನುಮಯ್ಯ ಪ್ರೌಢಶಾಲೆ; ಹಾಸನದಲ್ಲಿ ಇಂಟರ್, ರಾಜ್ಯಕ್ಕೆ ಒಂಬತ್ತನೆಯ ರ್‍ಯಾಂಕ್; ಮೈಸೂರು ಮೆಡಿಕಲ್ ಕಾಲೇಜಿನಲ್ಲಿ ಓದು, 1956ಕ್ಕೆ ವೈದ್ಯ ಪದವಿ. ಆಗ ಚಂದ್ರಶೇಖರ್‌ಗೆ 23 ವರ್ಷ ವಯಸ್ಸು. ಆಗಲೇ ಮಂಗಳೂರಿನ ಕಸ್ತೂರ್‌ಬಾ ಮೆಡಿಕಲ್ ಕಾಲೇಜಿನಲ್ಲಿ ಪೆಥಾಲಜಿ ಅಧ್ಯಾಪನ; ಮೈಸೂರು ಮೆಡಿಕಲ್ ಕಾಲೇಜಿನಲ್ಲಿ ಮೂರು ವರ್ಷ ಅನಾಟಮಿ ಅಧ್ಯಾಪನ; 1960ರಲ್ಲಿ ಲಂಡನ್‌ಗೆ ಪಯಣ, ಮೂರು ವರ್ಷಗಳ ಅಧ್ಯಯನ, ಅನುಭವ, ಎರಡು F R C S ಪದವಿಗಳೊಂದಿಗೆ ಭಾರತಕ್ಕೆ ಮರುಯಾನ; ಇಡೀ ಮೈಸೂರು ರಾಜ್ಯದಲ್ಲಿನ 'YOUNGEST FRCS SPECIALIST' ಎಂಬ ಹೊಗಳಿಕೆಗೆ ಭಾಜನ; ಹುಬ್ಬಿ ಮೆಡಿಕಲ್ ಕಾಲೇಜಿನಲ್ಲಿ ಅನಾಟಮಿ ಮತ್ತು ಸರ್ಜರಿ ಎರಡೂ ವಿಭಾಗಗಳಿಗೆ ಉಪಪ್ರಾಧ್ಯಾಪಕರಾಗಿ ಆಯ್ಕೆ; ಹೀಗೆ ಎರಡು FACULTYಗಳಿಗೆ ಆಯ್ಕೆಯಾದ ಮೊದಲ ಮತ್ತು ಕೊನೆಯ ಪ್ರಾಧ್ಯಾಪಕ ಎಂಬ ದಾಖಲೆಯ ಸ್ಥಾಪನೆ! ಅಲ್ಲಿಂದ ಮುಂದೆ ವಿಕ್ಟೋರಿಯಾ ಆಸ್ಪತ್ರೆ, ಬೆಂಗಳೂರು ಮೆಡಿಕಲ್ ಕಾಲೇಜು, ಮತ್ತೆ ಹುಬ್ಬಿ; ತಡೆಯಿಲ್ಲದ ಉನ್ನತಿಯನ್ನರಸಿ ಇಂಗ್ಲೆಂಡಿಗೆ, ಯುರಾಲಜಿ ಮತ್ತು ಆರ್ತೋಪೀಡಿಕ್ ನೈಪುಣ್ಯ ಸಾಧನೆ; ಯು.ಪಿ.ಎಸ್.ಸಿ. ಮೂಲಕ ಸರ್ಜಿಕಲ್ ಸ್ಪೆಷಲಿಸ್ಟ್, ಡಿವಿಷನಲ್ ಮೆಡಿಕಲ್ ಆಫೀಸರ್, ಕೇಂದ್ರೀಯ ರೈಲ್ವೆ ಆಸ್ಪತ್ರೆಯ ಮುಖ್ಯಸ್ಥರಾಗಿ ಆಯ್ಕೆಯಾದಾಗ ಭಾರತದಲ್ಲೇ ಇದ್ದು ಅಧ್ಯಾಪನ ಮಾಡಬೇಕೆಂಬ ಕನಸನ್ನು ನನಸಾಗಿಸಿಕೊಳ್ಳಲು ಮರುಯಾನ; ಅಹಮದಾಬಾದ್‌ನಲ್ಲಿ ನಡೆದ OFFICERS' TRAINING ಸಮಯದಲ್ಲಿ BEST STUDENT GOLD MEDAL ಪ್ರಾಪ್ತಿ. ಆದರೇನು? ಆಕಾಶ ಹಿಡಿಯ ಹೊರಟ ಪ್ರತಿಭಾವಂತನಿಗೆ ಜುಗುಪ್ಸೆ ತಂದ ಅಸೂಯೆ, ಆಲಸ್ಯ, ತೊಡರುಗಾಲುಗಳ ಸರಣಿ "ಅಮೆರಿಕೆಗೆ ಹೋದರೆ ಆದೀತು" ಎಂದು ಯೋಚಿಸುವಂತೆ ಮಾಡಿತು.

ಅಮೆರಿಕೆಯ ನೆಲದಲ್ಲಿ ಕಾಲಿಟ್ಟಾಗ ಡಾ. ಚಂದ್ರಶೇಖರಮೂರ್ತಿ ಅವರಿಗೆ ವಯಸ್ಸು ನಲವತ್ತು. ಅವರ ಆವರೆಗಿನ ಅಧ್ಯಯನ, ಸ್ನಾತಕೋತ್ತರ ಅಧ್ಯಾಪನ, ನಡೆಸಿದ್ದ ಶಸ್ತ್ರಚಿಕಿತ್ಸೆಗಳ ವರದಿ ಯಾವುದೂ ನೆರವಿಗೆ ಬರಲಿಲ್ಲ - ಅಮೆರಿಕದ ನೆಲದಲ್ಲಿ. ಮೊದಲಿನಿಂದ ಸಾಮಾನ್ಯ ವಿದ್ಯಾರ್ಥಿಯಂತೆ ಆರು ವರ್ಷ ಅಧ್ಯಯನ ಮಾಡಿದರು; ಶೇ.99 ಅಂಕಗಳಿಸಿದರು; ಇಡೀ ಅಮೇರಿಕೆಯಲ್ಲಿ ಮೊದಲ ಸ್ಥಾನ ಅವರದಾಗಿತ್ತು. ಭಾರತೀಯನಾದ ಅವರ ಬಗೆಗಿನ ತಾರತಮ್ಯವೂ ಮಾಯವಾಗಿತ್ತು. ಥೊರಾಸಿಕ್, ಕಾರ್ಡಿಯಾಕ್, ವಾಸ್ಕ್ಯುಲಾರ್ ಎಲ್ಲದರ GENERAL SURGEON ಆಗಿ ಅವರು ಬೆಳೆದಿದ್ದರು. FLORIDA, CAMPA CITYಯ ಮೆಡಿಕಲ್ ಕಾಲೇಜಿನಲ್ಲಿ ASSISTANT Prof. of SURGERY; CHIEF OF SURGERY RESIDENTIAL PROGRAMME; VETERANS' ADMINISTRATION HOSPITALನಲ್ಲಿ CHIEF SURGEON, HOD.OF SURGERY; ಲಾಸ್ ಏಂಜಲೀಸ್ ಆಸ್ಪತ್ರೆಯಲ್ಲಿ ಜನರಲ್ ಸರ್ಜರಿ, ಥೊರಾಸಿಕ್ ಮತ್ತು ವಾಸ್ಕ್ಯುಲಾರ್ ಸರ್ಜರಿಯ ವಿವಿಧ ವಿಭಾಗಗಳ SURGEON ಹೀಗೆ ಅವರ ಸೇವೆ ತಡೆಯಿಲ್ಲದೆ ಸಾಗಿತು; ಅಮೆರಿಕ ಅವರನ್ನು ಗುರುತಿಸಿತು.

ಮೈಸೂರಿನಲ್ಲಿ 1947-48ರ ಸಮಯದಲ್ಲಿ ನಡೆದ ಸ್ವರಾಜ್ಯದ ಆಂದೋಲನದಲ್ಲಿ ಭಾಗಿಯಾಗಿದ್ದ ಚಂದ್ರಶೇಖರಮೂರ್ತಿಯವರು ರಾಮಸ್ವಾಮಿ ಅಯ್ಯರ್‌ರ ಮರಣಕ್ಕೆ ಸಾಕ್ಷಿಯಾಗಿ ಅಲ್ಲಿಯೇ ಸತ್ಯಾಗ್ರಹದಲ್ಲಿ ತೊಡಗಿದ್ದವರು. ಅವರಿಗೆ ಅಧ್ಯಯನ, ಅಧ್ಯಾಪನ ಮತ್ತು ಅರ್ಪಣಾಭಾವಗಳ ಪ್ರೇರಣೆ ದೊರೆತದ್ದು ತಂದೆ ಕೆ.ಜಿ. ಸುಬ್ರಹ್ಮಣ್ಯಶಾಸ್ತ್ರಿಗಳಿಂದ. ಅವರ ಅರ್ಧಶತಮಾನದ ಗೆಳೆಯ ಮೈಸೂರು ಮೆಡಿಕಲ್ ಕಾಲೇಜಿನ ನಿವೃತ್ತ ಪ್ರಾಧ್ಯಾಪಕ ಡಾ.ಜಿ.ಸುಬ್ರಹ್ಮಣ್ಯಂ ಹೇಳುವಂತೆ ಆ ಕಾಲೇಜಿನ ಅನಾಟಮಿ ವಿಭಾಗಕ್ಕೆ ಜೀವಕಳೆ ಬಂದದ್ದೇ ಚಂದ್ರಶೇಖರಮೂರ್ತಿ ಅವರಿಂದ; ಯಾವ ಶಸ್ತ್ರಚಿಕಿತ್ಸೆಯೂ - ಅದು ಅವರಿಗೆ ಸಂಬಂಧಿಸದ ಕ್ಷೇತ್ರದ್ದಾದರೂ - ಮೂರ್ತಿಯವರಿಗೆ ಒಂದು ಸವಾಲಾಗಿರಲಿಲ್ಲ; ಅವರೊಬ್ಬ ಬಹುಮುಖ ಪ್ರತಿಭೆಯಾಗಿಯೇ ಮೊದಲಿನಿಂದಲೂ ಬೆಳೆದು ಬಂದವರು. ಚಂದ್ರಶೇಖರಮೂರ್ತಿಯವರು ತಮ್ಮ ಇಪ್ಪತ್ನಾಲ್ಕನೆಯ ವಯಸ್ಸಿನಲ್ಲಿ ವಿವಾಹವಾದದ್ದು ಸ್ವಾತಂತ್ರ್ಯ ಹೋರಾಟಗಾರರೂ ಸಮಾಜಸೇವಕರೂ ಆದ ಕೊಣನೂರು ಕೇಶವಮೂರ್ತಿಗಳ ಮಗಳು ಕೆ.ಕೆ. ವಿಜಯಲಕ್ಷ್ಮಿ ಅವರನ್ನು. ಅವರೇ ಕೃತಜ್ಞತೆಯಿಂದ ನೆನೆಯುವಂತೆ ಅವರ ಎಲ್ಲ ಸಾಧನೆಗಳ ಹಿಂದೆ ವಿಜಯಲಕ್ಷ್ಮಿ ಅವರ ತ್ಯಾಗ ಮತ್ತು ಸಹಕಾರ ಇದ್ದೇ ಇದೆ. ಕಲ್ಲು ಶಿಲ್ಪವಾಗಲು ಉಳಿಯ ಏಟು ಒಂದೇ ಸಾಲದು, ಸೌಂದರ್ಯಕ್ಕೆ ಮುದ್ರೆಯೊತ್ತುವ ಕಣ್ಣುಗಳೂ ಬೇಕು. ಅದೆಲ್ಲವನ್ನೂ ಪಡೆದ ಅದೃಷ್ಟಶಾಲಿ ಡಾ.ಚಂದ್ರಶೇಖರಮೂರ್ತಿ!

- ಬಸು

ಡಾ|| ಚಂದ್ರಶೇಖರಮೂರ್ತಿ ಅವರ ವಂಶವೃಕ್ಷ

ಕಟ್ಟೇಪುರ ಗಂಗಾಧರಶಾಸ್ತ್ರೀ

ಕೆ.ಜಿ.ಸುಬ್ರಹ್ಮಣ್ಯಶಾಸ್ತ್ರೀ + ಗಂಗಮ್ಮ (ಅಗ್ರಹಾರ ಸುಬ್ರಹ್ಮಣ್ಯಾವಧಾನೀ ಅವರ ಮಗಳು)

(1901-1992) 1907-1997)

- ಕೆ.ಎಸ್.ಶಾಮಣ್ಣ +ಕೆ.ಎಸ್.ಲೀಲಾವತಿ
- ಆರ್.ಎಸ್.ಕೇಶವಮೂರ್ತಿ (ಆರ್.ಎಸ್.ರಾಜಣ್ಣ) +ಎಸ್.ವಿ.ನಾಗರತ್ನ
- ಡಾ.ಆರ್.ಎಸ್.ಚಂದ್ರಶೇಖರಮೂರ್ತಿ +ಕೆ.ಕೆ.ವಿಜಯಲಕ್ಷ್ಮಿ
  - ಡಾ.ಮೀರಾ (ಮೀನಾಕ್ಷಿ), ಎಂ.ಬಿ.ಬಿ.ಎಸ್, ಕಂಪ್ಯೂಟರ್ ಸೈನ್ಸ್ ಕನ್ಸಲ್ಟೆಂಟ್, (ಮೆಡಿಕಲ್ ಫೀಲ್ಡ್) ಜ: 1958
    + ರಾಮಮೂರ್ತಿ, ಎಲೆಕ್ಟ್ರಿಕಲ್ ಮತ್ತು ಕಂಪ್ಯೂಟರ್ ಎಂಜಿನಿಯರ್; ಮೆನೇಜರ್, ರಿಸರ್ಚ್ ಅಂಡ್ ಡೆವಲಪ್‌ಮೆಂಟ್ ವಿಂಗ್, BELL LABS, ATNT Co.
  - ಡಾ. ರಘು, ನೇತ್ರ ಪರಿಣತ, ಜ: 1964
  - ಅಪರ್ಣ, M.Public Health, ಅಧಿಕಾರಿ, ಫ್ರೆಂಚ್ ಫಾರ್ಮಸುಟಿಕಲ್ ಕಂಪನಿ.
- ಆರ್.ಎಸ್.ರಾಮನಾಥ +ಸುವರ್ಣಲಕ್ಷ್ಮಿ
- ಎ.ಕೆ.ಸುಂದರೇಶನ್ (ಸೋದರಮಾವ ಎ.ಎಸ್.ಕೃಷ್ಣಪ್ಪ ಅವರಿಗೆ ದತ್ತು, ಅಗ್ರಹಾರ) + ರಾಧಾ
- ಆರ್.ಎಸ್.ಶ್ರೀಧರ +ವೇದವತಿ
- ಡಾ.ಆರ್.ಎಸ್.ಕೃಷ್ಣಮೂರ್ತಿ +ರೋಸಲಿನ್

ಸಮುದಾಯ ಅಧ್ಯಯನ ಕೇಂದ್ರ

ಪುಸ್ತಕ ಪೋಷಕರ ವಿವರ

ಮಹಾಸಂಪುಟ ಪ್ರಾಯೋಜಕರು

ಶ್ರೀಮತಿ ಕೆ. ಕೆ. ವಿಜಯಲಕ್ಷ್ಮಿ, ಡಾ. ಆರ್. ಎಸ್. ಚಂದ್ರಶೇಖರಮೂರ್ತಿ, ಯು.ಎಸ್.ಎ.

ಮಹಾದಾನಿಗಳು

ಶ್ರೀಮತಿ ಪಾರ್ವತಮ್ಮ, ವಿದ್ವಾನ್ ಬಿ.ಎಸ್. ಸುಬ್ಬರಾಯಶಾಸ್ತ್ರೀ, ಬಸವಪಟ್ಟಣ.

ಮಹಾಪೋಷಕರು

ಶ್ರೀಮತಿ ಬಿ.ವಿ. ಸೀತಾ, ಶ್ರೀ ಬಿ.ಎನ್.ವಿ. ಸುಬ್ರಹ್ಮಣ್ಯಂ; ಶ್ರೀಮತಿ ಕಮಲಮ್ಮ, ಶ್ರೀ ಕೆ. ನಾಗರಾಜ್; ಶ್ರೀಮತಿ ಜಯಲಕ್ಷ್ಮೀ, ಶ್ರೀ ಕೆ. ಸುಬ್ಬರಾಯನ್- ಬೆಂಗಳೂರು; ಶ್ರೀಮತಿ ಸಾವಿತ್ರಮ್ಮ, ಶ್ರೀ ವೈ.ಎನ್. ನರಸಿಂಗರಾವ್; ಶ್ರೀಮತಿ ಎಂ.ವಿ. ವೆಂಕಟಲಕ್ಷ್ಮಿ, ಶ್ರೀ ಎಂ.ಎಸ್. ರಾಮರಾವ್; ಶ್ರೀಮತಿ ಲಕ್ಷ್ಮೀ, ಶ್ರೀ ಎಚ್.ಕೆ. ವೆಂಕಟರಾಮಯ್ಯ - ಮೈಸೂರು; ಶ್ರೀಮತಿ ಶಾರದಾಬಾಯಿ, ಶ್ರೀ ಹರಿ ಆಚಾರ್ಯ-ಮಂಡ್ಯ.

ಪೋಷಕರು

ಶ್ರೀಮತಿ ಶಾಂತಾ, ಶ್ರೀ ಕೆ. ಲಕ್ಷ್ಮಣರಾವ್; ಶ್ರೀಮತಿ ಲಕ್ಷ್ಮೀಕಿರಣ, ಶ್ರೀ ಜಿ.ಆನಂದಕುಮಾರ್; ಶ್ರೀಮತಿ ಕೆ.ಎನ್. ಸುಶೀಲಮ್ಮ, ಶ್ರೀ ಆರ್.ಎಸ್. ವಾಸುದೇವಮೂರ್ತಿ; ಶ್ರೀಮತಿ ಎಂ.ಎಸ್. ರುಕ್ಮಿಣಿ, ಶ್ರೀ ಎಚ್.ಆರ್. ಸೂರ್ಯನಾರಾಯಣ - ಮೈಸೂರು; ಶ್ರೀಮತಿ ಎಂ.ಗಾಯತ್ರಿ, ಶ್ರೀ ದೇವರಾಜು; ಶ್ರೀಮತಿ ಸಾವಿತ್ರಮ್ಮ, ಶ್ರೀ ಎಸ್.ಸತ್ಯನಾರಾಯಣರಾವ್-ಮಂಡ್ಯ; ಶ್ರೀಮತಿ ಲಲಿತಮ್ಮ, ಶ್ರೀ ಎಚ್.ಕೆ.ಸುಬ್ಬಣ್ಣ-ಹಾಸನ.

ದಾನಿಗಳು

ಶ್ರೀಮತಿ ಪ್ರಭಾಮೂರ್ತಿ, ಶ್ರೀ ಬಿ.ಕೆ. ಕೇಶವಮೂರ್ತಿ; ಶ್ರೀ ಬಿ.ಕೆ. ರಾಮಚಂದ್ರ-ಬಸವಪಟ್ಟಣ; ಶ್ರೀಮತಿ ಸರೋಜ, ಶ್ರೀ ಎಚ್.ಆರ್. ಹಿರಿಯಣ್ಣ; ಶ್ರೀಮತಿ ಸುಬ್ಬಲಕ್ಷ್ಮಿ, ಶ್ರೀ ನಾಗೇಶ್; ಶ್ರೀಮತಿ ಕೆ.ಎಸ್.ಲೀಲಾವತಿ, ಶ್ರೀ ಕೆ.ಎಸ್. ಶಾಮಣ್ಣ; ಶ್ರೀಮತಿ ಲಕ್ಷ್ಮಿ, ಶ್ರೀ ಎಚ್.ಕೆ. ಸತ್ಯನಾರಾಯಣ; ಶ್ರೀಮತಿ ಎಚ್.ಎಮ್. ಪೂರ್ಣಿಮಾ, ಶ್ರೀ ಐ.ಎನ್. ವೆಂಕಟಸುಬ್ಬರಾವ್; ಶ್ರೀಮತಿ ಪಾರ್ವತಿ, ಶ್ರೀ ಪಿ.ಆರ್. ಹರಿಹರನ್; ಶ್ರೀಮತಿ ರಾಧಾ, ಶ್ರೀ ಆರ್.ಎಸ್. ಅನಂತನಾರಾಯಣ; ಶ್ರೀಮತಿ ಶಶಿಕಲಾ, ಶ್ರೀ ವೆಂಕಟೇಶಮೂರ್ತಿ-ಮೈಸೂರು; ಶ್ರೀಮತಿ ಲೀಲಾವತಿ, ಶ್ರೀ ಜಿ.ಕೆ. ನರಸಿಂಹಮೂರ್ತಿ-ಮಂಡ್ಯ; ಶ್ರೀಮತಿ ನಿರ್ಮಲಾ, ಶ್ರೀ ಎ.ವಿ. ಪ್ರಸನ್ನ-ಬೆಂಗಳೂರು; ಶ್ರೀ ರಾಮಶೇಷ-ಮಾದಾಪುರ; ಶ್ರೀ ನಾಗರಾಜ-ಪಿರಿಯಪಟ್ಟಣ; ಶ್ರೀಮತಿ ಲಲಿತಮ್ಮ, ಶ್ರೀ ಕೇಶವಮೂರ್ತಿ-ಕೊಣನೂರು.

ಸಮುದಾಯ ಅಧ್ಯಯನ ಕೇಂದ್ರ

ಗೌರವಾಧ್ಯಕ್ಷರು

ಬಿ. ಎನ್. ವಿ. ಸುಬ್ರಹ್ಮಣ್ಯಂ

ಅಧ್ಯಕ್ಷರು

ಆರ್. ವಿ. ಶ್ರೀನಿವಾಸಯ್ಯ

ಕಾರ್ಯದರ್ಶಿ

ಡಾ. ಪ್ರಣತಾರ್ತಿಹರನ್

ಖಜಾಂಚಿ

ಎಚ್. ಎನ್. ರಘುನಾಥ್

ಪುಸ್ತಕ ಸಲಹಾ ಸಮಿತಿ

ಪ್ರೊ. ಎ. ವಿ. ನರಸಿಂಹಮೂರ್ತಿ
ಪ್ರೊ. ಜಿ. ಅಶ್ವತ್ಥನಾರಾಯಣ
ಡಾ. ಎಂ. ಎಲ್. ಲಲಿತಮ್ಮ
ಎನ್. ಎಸ್. ಶಾರದಾ ಪ್ರಸಾದ್
ಡಾ. ಟಿ. ವಿ. ಸತ್ಯನಾರಾಯಣ
ವಿದ್ವಾನ್ ಎಚ್. ವಿ. ನಾಗರಾಜರಾವ್
ವಿದ್ವಾನ್ ಆನಂದತೀರ್ಥ ನಾಗಸಂಪಿಗೆ
ಡಾ. ಮೀರಾಮೂರ್ತಿ
ಡಾ. ಕೆ. ಅನಂತರಾಮು
ಕೆ. ರಾಘವೇಂದ್ರರಾವ್

ಸಂಚಾಲನ ಸಮಿತಿ

ಬಿ. ವಿ. ವೆಂಕಟನಾರಾಯಣ
ಎಸ್. ಕೆ. ಲಕ್ಷ್ಮೀನಾರಾಯಣ (ಬಾಬು)
ಕೇಶವಮೂರ್ತಿಹರವೆ
ಆರ್. ಎಸ್. ಅನಂತನಾರಾಯಣ
ಡಾ. ಎ. ಎಸ್. ಚಂದ್ರಶೇಖರ್
ಎಂ. ಕೆ. ವಿಜಯಲಕ್ಷ್ಮಿ
ಡಾ. ಬಿ. ವಿ. ಸುಧಾಮಣಿ
ಡಾ. ವಿಜಯಾಹರನ್

ಜ್ಞಾನಗಂಗೆಗೆ ದಂಡೆಗಳಿಲ್ಲ ; ಮೈಲಿಗೆಯಂತೂ ಇಲ್ಲವೇ ಇಲ್ಲ. ಅದನ್ನು ಹಿಡಿದಿಡಲು ಮಾತ್ರ ತೆರೆದ ಮನದ ಜಟಾಜೂಟಧರರು ಆಗಲೇಬೇಕು ನಾವು. ಪುನೀತರಾಗಲು ಇರುವ ಬೆಳಕಿನ ಮಾರ್ಗ ಅದು.

ನಮ್ಮನ್ನು ನಾವು ತಿಳಿದರೆ ವಿಕಾಸಶೀಲತೆಗೆ ಬಾಗಿಲು ತೆರೆದಂತೆ. ವಿಕಾಸವೆಂದರೆ ಮಾನವರಾಗುವುದು, ಉದಾತ್ತರಾಗುವುದು, ಆತ್ಮ ಗುಣಸಂಪನ್ನರಾಗುವುದು.

ನಿರ್ಗುಣಕ್ಕೆ ಅಚಲ ಶಾಂತಿ ಇದ್ದರೆ ಸಗುಣಕ್ಕೆ ವೈವಿಧ್ಯದ ಕಾಂತಿ ಉಂಟು. ಜಗತ್ತು ಸಂಜೀವನವೆನಿಸಿರುವುದು ಚೇತನಾಚೇತನದ ಈ ಬಹುಕಿರಣದಿಂದ. ಈ ಬಹುತ್ವದ ಗರ್ಭದಲ್ಲಿ ಏಕಾತ್ಮತೆಯ ಅಗ್ನಿಯು ಪ್ರಖರವಾದರೆ ಸಾರ್ಥಕ್ಯ.

'ಸಂಕೇತಿ' ಎಂಬುದು ಇಲ್ಲಿ ಅಧ್ಯಯನ ಘಟಕ. ಸಮಗ್ರತೆಯಲ್ಲಿ ಅದು ಮಾನವೀಯತೆಯ ಅನುಸಂಧಾನ. 'ಸಂಕೇತಿ ಅಧ್ಯಯನ'ದ ಸಂಪುಟ ಸರಣಿಯು ವಿವೇಕಾನುಸಂಧಾನದ ಮುಕ್ತಪಥವಾಗಿ ಬರುತ್ತಿದೆ. ಅದರ ನಡಿಗೆಯಲ್ಲಿ ವಾಸ್ತವದ ವಿವರವಿದೆ. ಅಂತರಂಗದಲ್ಲಿ ಆದರ್ಶದ ಹುಡುಕಾಟವಿದೆ.

ಒಂದು ಪುಟ್ಟ ಸಮುದಾಯದ ದೀರ್ಘಕಾಲೀನ ತುಡಿತಗಳನ್ನು ಮಾಧ್ಯಮವಾಗಿ ಮಾಡಿಕೊಂಡು ವಿಶ್ವಪಥವನ್ನು ಹುಡುಕಿಕೊಳ್ಳುವ ಸಾಧನವಾಗಿ ಈ ಸಂಪುಟಸರಣಿ ಪ್ರಕಾಶಗೊಳ್ಳುತ್ತಿದೆ.

ಪ್ರಣತಾರ್ತಿಹರನ್
ಪ್ರಧಾನ ಸಂಪಾದಕ

ಸಮುದಾಯ ಅಧ್ಯಯನ ಕೇಂದ್ರ
ಮೈಸೂರು